ವ್ಯಕ್ತಿಚಿತ್ರ ಸಂಪುಟ

ಭಾಗ ೨

ವಿ.ಸೀ.

ವಿ.ಸೀ. ಸಂಪದ (ವಿ.ಸೀ. ಸಂಸ್ಮರಣ ವೇದಿಕೆ)
ರಾಜೀವನಗರ (ಬನಶಂಕರಿ 3ನೇ ಸ್ಟೇಜ್), ಬೆಂಗಳೂರು–560 085

VYAKTICHITRA SAMPUTA (Part–II) – Collection of Pen-portraits of eminent persons by V. Si. (V. Sitaramiah, 1899–1983). Published by 'V. Si. Sampada', 'V. Si. Samsmarana Vedike', No. 25, 'Vasundhara', 'C' Cross, Rajivnagar, 7th Main BSK III Stage, IV Phase, 7th Block, Bangalore–560 085.
No. of Pages : vi + 8 + 333

Price : **Rs.110/–**

First Edition : 1996 – © Reserved.

ಬೆಲೆ : **ನೂರ ಹತ್ತು ರೂಪಾಯಿಗಳು**

ವಿ.ಸೀ. ಸಂಪದ (ವಿ.ಸೀ. ಸಂಸ್ಮರಣ ವೇದಿಕೆ)
ನಂ. 25, 'ವಸುಂಧರಾ' 'ಸಿ' ಕ್ರಾಸ್, ರಾಜೀವನಗರ, 7ನೇ ಮೆಯಿನ್
ಬನಶಂಕರಿ 3ನೇ ಸ್ಟೇಜ್, 4ನೇ ಫೇಸ್, 7ನೇ ಬ್ಲಾಕ್
ಬೆಂಗಳೂರು–85.

ಅಧ್ಯಕ್ಷರು	:	ಡಾ॥ ಎಚ್. ಕೆ. ರಂಗನಾಥ್
ಉಪಾಧ್ಯಕ್ಷರು	:	ಎಂ. ಮಲ್ಲಿಕಾರ್ಜುನಯ್ಯ
		ಕೆ. ಎಸ್. ಕಲ್ಲಾಪುರ
ಕಾರ್ಯದರ್ಶಿ	:	ಎಂ. ವಿ. ಸತ್ಯನಾರಾಯಣ
ಕೋಶಾಧಿಕಾರಿ	:	ಕೆ. ಬಿ. ಷಣ್ಮುಖಪ್ಪ
ಸದಸ್ಯರು	:	ಮತ್ತೂರು ಕೃಷ್ಣಮೂರ್ತಿ
		ವಿ. ಎಸ್. ಕೃಷ್ಣಮೂರ್ತಿ
		ಎಚ್. ವಿ. ವೆಂಕಟಸುಬ್ಬಯ್ಯ
		ಅ. ಬಾ. ಶೆಟ್ಟಿ ಪೊಳಲಿ (ಮಣಿಪಾಲ)
		ಡಾ. ನರಹಳ್ಳಿ ಬಾಲಸುಬ್ರಹ್ಮಣ್ಯ
		ಎಸ್. ಸತ್ಯನಾರಾಯಣ
		ಶ್ರೀಮತಿ ಮೀನಾ ವಾಂಗೀಕರ್
		ಶ್ರೀಮತಿ ಅಂದನೂರು ಶೋಭ
		ಮುನಿಧರ್ಮಯ್ಯ
		ಎಂ. ವಿ. ವಿ. ಮೂರ್ತಿ

ಮುದ್ರಕರು:
ನೇತ್ರಾ ಪ್ರಿಂಟರ್ಸ್
೧೦, ೫ನೇ ಅಡ್ಡರಸ್ತೆ, ಸಮೀರಪುರ
ಚಾಮರಾಜಪೇಟೆ, ಬೆಂಗಳೂರು–೫೬೦ ೦೧೮

ವ್ಯಕ್ತಿಚಿತ್ರ ಸಂಪುಟ : ಭಾಗ ೧

ಪರಿವಿಡಿ

ಪ್ರಸ್ತಾವನೆ : ವಿದ್ಯಾಲಂಕಾರ ಪ್ರೊ. ಎಸ್. ಕೆ. ರಾಮಚಂದ್ರರಾವ್
ಎರಡು ಮಾತು : ಡಾ. ಎಚ್. ಕೆ. ರಂಗನಾಥ್
ಅರಿಕೆ : ಎಂ. ವಿ. ವೆಂಕಟೇಶಮೂರ್ತಿ
ಮುನ್ನುಡಿ : ವಿ. ಸೀ.

೧.	ಎಂ. ವೆಂಕಟಕೃಷ್ಣಯ್ಯ (ತಾತಯ್ಯ)	...	೧
೨.	ವೀಣೆ ಶೇಷಣ್ಣ	....	೨೦
೩.	ಸರ್ ಎಂ. ವಿಶ್ವೇಶ್ವರಯ್ಯ	....	೩೦
೪.	ಕೆ. ವಾಸುದೇವಾಚಾರ್ಯ	....	೫೦
೫.	ಬಿಡಾರಂ ಕೃಷ್ಣಪ್ಪ	....	೫೬
೬.	ಎ. ವಿ. ವರದಾಚಾರ್ಯ	....	೭೦
೭.	ಪ್ರೊ. ಎಂ. ಹಿರಿಯಣ್ಣ	....	೯೭
೮.	ಬೆಳ್ಳಾವೆ ವೆಂಕಟನಾರಾಯಣಪ್ಪ	....	೧೨೨
೯.	ಪಂಜೆ ಮಂಗೇಶರಾವ್	....	೧೪೫
೧೦.	ಮೊಳಹಳ್ಳಿ ಶಿವರಾವ್	....	೧೬೧
೧೧.	ಮಂಜೇಶ್ವರ ಗೋವಿಂದ ಪೈ	....	೧೬೮
೧೨.	ಸರ್ ಮಿರ್ಜಾ ಮಹಮ್ಮದ್ ಇಸ್ಮೈಲ್	....	೧೭೫
೧೩.	ಬಿ. ಎಂ. ಶ್ರೀಕಂಠಯ್ಯ	....	೧೮೯
೧೪.	ಟಿ. ಪಿ. ಕೈಲಾಸಂ	....	೨೦೪
೧೫.	ಪರಮಯ್ಯ ಹಾಸ್ಯಗಾರ	....	೨೩೨
೧೬.	ಎನ್. ಎಸ್. ಸುಬ್ಬರಾವ್	....	೨೪೫
೧೭.	ಟಿ. ಎಸ್. ವೆಂಕಣ್ಣಯ್ಯ	....	೨೬೪
೧೮.	ಕೆ. ವೆಂಕಟಪ್ಪ	....	೨೭೮
೧೯.	ಡಿ. ವಿ. ಗುಂಡಪ್ಪ	....	೨೯೦
೨೦.	ಸಂ. ಗೊ. ಬಿಂದೂರಾವ್	....	೩೦೮
೨೧.	ಡಾ. ಸಿ. ವಿ. ರಾಮನ್	....	೩೧೬
೨೨.	ಗುಬ್ಬಿ ವೀರಣ್ಣ	....	೩೩೫
೨೩.	ಪಿ. ಕೋದಂಡರಾವ್	....	೩೪೬

ವ್ಯಕ್ತಿಚಿತ್ರ ಸಂಪುಟ : ಭಾಗ ೨

ಪರಿವಿಡಿ

೧.	ಎ. ಆರ್. ಕೃಷ್ಣಶಾಸ್ತ್ರಿ	....	೧
೨.	ಡಾ. ಎ. ಎನ್. ನರಸಿಂಹಯ್ಯ	....	೧೮
೩.	ಮಾಸ್ತಿ ವೆಂಕಟೇಶ ಅಯ್ಯಂಗಾರ್	....	೩೧
೪.	ಎಂ. ಆರ್. ಶ್ರೀನಿವಾಸಮೂರ್ತಿ	....	೪೧
೫.	ಬಿ. ವೆಂಕೋಬರಾವ್	....	೫೬
೬.	ಪಂಡಿತ ರಾಳ್ಳಪಲ್ಲಿ ಅನಂತಕೃಷ್ಣಶರ್ಮ	....	೬೫
೭.	ಎನ್. ಕೆ. ದೀಕ್ಷಿತ್	....	೮೩
೮.	ದ. ರಾ. ಬೇಂದ್ರೆ	....	೯೨
೯.	ಶಂ. ಬಾ. ಜೋಶಿ	....	೯೮
೧೦.	ಆರ್. ನಾಗೇಂದ್ರರಾವ್	....	೧೧೪
೧೧.	ಪಡುಕೋಣೆ ದಂಪತಿಗಳು	....	೧೨೮
೧೨.	ಎಚ್. ವಿ. ಭಾಷ್ಯಂ	....	೧೪೧
೧೩.	ದೇವುಡು ನರಸಿಂಹಶಾಸ್ತ್ರಿ	....	೧೪೯
೧೪.	ಎಚ್. ಯೋಗನರಸಿಂಹಂ	...	೧೫೩
೧೫.	ಕೆ. ಸಂಪದ್ಗಿರಿರಾವ್	...	೧೬೧
೧೬.	ಡಾ. ತೋನ್ಸೆ ಮಾಧವ ಅನಂತ ಪೈ	....	೧೭೫
೧೭.	ಪ್ರೊ. ಕೆ. ವಿ. ಅಯ್ಯರ್	....	೧೮೬
೧೮.	ಡಾ. ಡಿ. ಸಿ. ಪಾವಟೆ	....	೨೦೨
೧೯.	ಪಾನ್ಯಂ ಶ್ರೀನಿವಾಸರಾವ್	....	೨೧೬
೨೦.	ಎಸ್. ವಿ. ಶ್ರೀನಿವಾಸರಾವ್	....	೨೧೯
೨೧.	ಕೋಟ ಶಿವರಾಮ ಕಾರಂತ	....	೨೩೪
೨೨.	ಮೋಟಗಾ(ಗ)ನಹಳ್ಳಿ ಸುಬ್ರಹ್ಮಣ್ಯಶಾಸ್ತ್ರಿ	....	೨೪೮
೨೩.	ಕೆ. ವಿ. ಪುಟ್ಟಪ್ಪ	....	೨೭೨
೨೪.	ನಿಟ್ಟೂರು ಶ್ರೀನಿವಾಸರಾವ್	....	೨೮೮
೨೫.	ಎಸ್. ಎನ್. ಮೂಡಬಿದ್ರಿ	....	೩೦೫
೨೬.	ಆರ್. ಎಸ್. ಹೆಗಡೆ	....	೩೧೬

ವ್ಯಕ್ತಿಚಿತ್ರ ಸಂಪುಟ

ಭಾಗ ೨

ಎ. ಆರ್. ಕೃಷ್ಣಶಾಸ್ತ್ರಿ

ಡಾ. ಎ. ಎನ್. ನರಸಿಂಹಯ್ಯ

ಮಾಸ್ತಿ ವೆಂಕಟೇಶ ಅಯ್ಯಂಗಾರ್

ಎಂ. ಆರ್. ಶ್ರೀನಿವಾಸಮೂರ್ತಿ

ಬಿ. ವೆಂಕೋಬರಾವ್

ಪಂಡಿತ ರಾಳಪಲ್ಲಿ ಅನಂತಕೃಷ್ಣಶರ್ಮ

ಎನ್. ಕೆ. ದೀಕ್ಷಿತ್

ದ. ರಾ. ಬೇಂದ್ರೆ

ಶಂ. ಬಾ. ಜೋಶಿ

ಆರ್. ನಾಗೇಂದ್ರರಾವ್

ಪಡುಕೋಣೆ ದಂಪತಿಗಳು

ಎಚ್. ವಿ. ಭಾಷ್ಯಂ

ದೇವುಡು ನರಸಿಂಹಶಾಸ್ತ್ರಿ

ಎಚ್. ಯೋಗನರಸಿಂಹಂ

ಕೆ. ಸಂಪದ್ಗಿರಿರಾವ್

ಡಾ. ತೋನ್ಸೆ ಮಾಧವ ಅನಂತ ಪೈ



ಪ್ರೊ. ಕೆ. ವಿ. ಅಯ್ಯರ್

ಡಾ. ಡಿ. ಸಿ. ಪಾವಟೆ

ಪಾನ್ಯಂ ಶ್ರೀನಿವಾಸರಾವ್

ಎಸ್. ವಿ. ಶ್ರೀನಿವಾಸರಾವ್



ಕೋಟ ಶಿವರಾಮ ಕಾರಂತ

ಮೋಟಗಾ(ಗ)ನಹಳ್ಳಿ ಸುಬ್ರಹ್ಮಣ್ಯಶಾಸ್ತ್ರಿ



ಕೆ. ವಿ. ಪುಟ್ಟಪ್ಪ

ನಿಟ್ಟೂರು ಶ್ರೀನಿವಾಸರಾವ್

ಎಸ್. ಎನ್. ಮೂಡಬಿದಿ

ಆರ್. ಎಸ್. ಹೆಗಡೆ

ಎ. ಆರ್. ಕೃಷ್ಣಶಾಸ್ತ್ರಿ

ಅಂಬಳೆ ರಾಮಕೃಷ್ಣಶಾಸ್ತ್ರಿಗಳು ಎ. ಆರ್. ಕೃಷ್ಣಶಾಸ್ತ್ರಿಗಳ ತಂದೆ. ಅವರು ಮೈಸೂರಿನ ಮಹಾರಾಜರವರ ಸಂಸ್ಕೃತ ಮಹಾಪಾಠಶಾಲೆಯಲ್ಲಿ ವ್ಯಾಕರಣದ ಮಹಾ ವಿದ್ವಾಂಸರು. ಸಣ್ಣ ವಯಸ್ಸಿನಲ್ಲಿಯೇ ತಾಯಿಯನ್ನು ಕಳೆದುಕೊಂಡ ಕೃಷ್ಣಶಾಸ್ತ್ರಿಗಳಿಗೆ ತಂದೆಯೇ ತಾಯಿಯೂ ಆಗಿ ಗಂಡು ಪ್ರೀತಿಯಲ್ಲಿ ಬೆಳೆದರು. ಇವರಿಗೆ ಒಬ್ಬ ತಮ್ಮ ; ಶ್ರೀಕಂಠಶಾಸ್ತ್ರಿಗಳೆಂಬವರು. ಅದೇ ಮಹಾಪಾಠಶಾಲೆಯಲ್ಲಿ ಅವರು ಆಮೇಲೆ ಮುಖ್ಯ ಗುಮಾಸ್ತರಾಗಿ ಕೆಲಸ ಮಾಡಿದರು. ಅಂಬಳೆ ಚಿಕ್ಕಮಗಳೂರಿನ ಹತ್ತಿರದ ಚೆಲುವಾದ ಹಳ್ಳಿ. ಚಿಕ್ಕಮಗಳೂರು–ಹಾಸನ ರಸ್ತೆಯಲ್ಲಿ ಹಿರೇ ಮಗಳೂರು ದಾಟಿದ ಮೇಲೆ ಬಲಕ್ಕೆ ಒಳದಾರಿಯಲ್ಲಿ ಹೋದರೆ ಸಿಕ್ಕುತ್ತದೆ. ಚಿಕ್ಕಮಗಳೂರಲ್ಲಿ ಶಾಸ್ತ್ರಿಗಳ ಷಡ್ಡಕರು ನಾನಲ್ಲಿದ್ದಾಗ ಕೂಡ ಶಾನುಭೋಗರಾಗಿದ್ದರು. ಈ ಪ್ರದೇಶ–ವಿಶೇಷವಾಗಿ ಮೈಸೂರು, ಹಾಸನ, ಚಿಕ್ಕಮಗಳೂರು ಪ್ರದೇಶ–ಹಳೆಯ ಕಾಲದಿಂದ ನಮ್ಮ ಕಡೆ ತಿರುಳು ಕನ್ನಡ ನಾಡು. ಇವರೂ ಹೊಯ್ಸಳ ಕರ್ನಾಟಕರು. ಹೊಸ ಕನ್ನಡ ತಲೆಯೆತ್ತಿದ ಕಾಲದಲ್ಲಿ ತೆಲುಗರೂ ತಮಿಳರೂ–ಎಂದರೆ ಮನೆಯಲ್ಲಿ ಆ ಮಾತನಾಡುತ್ತಿದ್ದವರು–ಕನ್ನಡಕ್ಕಾಗಿ ಹೆಚ್ಚಾಗಿ ಕೆಲಸ ಮಾಡಿ ಹೊಸ ಕನ್ನಡಕ್ಕೆ ಬುನಾದಿ ಹಾಕಿದರು. ಈಚಿನ ಕಾಲದಲ್ಲಿ ಹೊಸ ಕನ್ನಡಕ್ಕೆ ಮೊದಲು ಕೆಲಸ ಮಾಡಿದ ಒಂದು ದೊಡ್ಡ ಜನವರ್ಗ ಹೊಯ್ಸಳ ಕರ್ನಾಟಕರದು. ಮೊದಲ ಮಹಾವಿದ್ವಾಂಸರೂ ವಿದ್ವದ್ರಸಿಕರೂ ಆದ ಚಾಮರಾಜ ನಗರದ ರಾಮಾಶಾಸ್ತ್ರಿಗಳು ಆ ವರ್ಗದವರು. ತೀ. ನಂ. ಶ್ರೀ., ಎ. ಎನ್. ಮೂರ್ತಿರಾವ್, ಎಸ್. ಜಿ. ಶಾಸ್ತ್ರಿ, ಎಲ್. ಗುಂಡಪ್ಪ, ಕೆ. ಎಸ್. ನರಸಿಂಹಸ್ವಾಮಿ, ಎ. ಕೆ. ಪುಟ್ಟರಾಮು, ಪ್ರೊ. ಜಿ. ವೆಂಕಟಸುಬ್ಬಯ್ಯ, ಆನಂದ, ಹೊಯ್ಸಳ –ಇವರೆಲ್ಲ ಹೊಯ್ಸಳ ಕರ್ನಾಟಕರೇ. ಈ ಭಾಗದ ಜನಕ್ಕೆ ಕನ್ನಡ ತಮ್ಮದೆಂಬ ಅತಿಶಯ ಪ್ರೀತಿ. ಇತರರೊಡನೆ ಬೆರೆಯದೆ ಒಂದು ಬಗೆಯ ಬಿಗುಮಾನದಲ್ಲಿದ್ದರೂ ಅವರು ಮನಸ್ಸು ಮಾಡಿ ಸ್ನೇಹ ಬೆಳಸಿದಾಗ, ಆತಿಥ್ಯ ನಡಸಿದಾಗ ತುಂಬ ಸ್ನಿಗ್ಧವಾಗಿ –ಅವರಲ್ಲಿ ಹೆಚ್ಚು ಬಳಕೆಯಾದ ಒಂದು ಪದ 'ಬಹು ಅಕ್ಕರಾಸ್ಥೆಯಿಂದ' –ನಡೆದುಕೊಳ್ಳುವ ಜನ. ಕೃಷ್ಣಶಾಸ್ತ್ರಿಗಳಿಗೆ ಈ ಎಲ್ಲಾ ಲಕ್ಷಣಗಳೂ ಸಲ್ಲುತ್ತವೆ. ಈ ಗುಣಗಳ ಪ್ರಾಚುರ್ಯ ಅವರ ನಡವಳಿಕೆಯಲ್ಲಿಯೂ ಅವರ ಬರವಣಿಗೆಯಲ್ಲಿಯೂ ಕಾಣುತ್ತಿತ್ತು.

ಮನೆಯಲ್ಲಿ ಸಂಸ್ಕೃತಪಾಠ, ತರ್ಕ ವ್ಯಾಕರಣ, ವಾದವಿವಾದಗಳು ಅವರಿಗೆ ಬಹು ಸಣ್ಣ ವಯಸ್ಸಿನಿಂದಲೂ ಕೇಳಿ ಬಳಕೆಯಾಗಿತ್ತು. ಸಂಸ್ಕೃತ ಕಾಲೆಜಿನ ಮಹಾ ವಿದ್ವಾಂಸರು ತಂದೆಯಾಗಿರುವಾಗ ಮೈಸೂರಿನ ದೇವಾಜಮ್ಮನ್ನಿ ಅಗ್ರಹಾರದಲ್ಲಿದ್ದ ಅವರ ಮನೆಗೆ ಹಲವಾರು ವಿದ್ವಾಂಸರು ಬರುತ್ತಿದ್ದರು. ಸುತ್ತಲೂ ಬ್ರಾಹ್ಮಣ ಮನೆತನಗಳದೇ ಸಂಪರ್ಕ. ತಂದೆಯಿಂದ ವ್ಯಾಕರಣ ಪ್ರಕ್ರಿಯೆಗಳನ್ನು ಕಲಿತಿದ್ದರಾಗಿ ಅವರಿಗೆ ಶಾಲೆಕಾಲೆಜುಗಳಲ್ಲಿ

ಸಂಸ್ಕೃತದ ವ್ಯಾಕರಣ ಕಷ್ಟವಾಗಲಿಲ್ಲ. ಕಾಲೇಜಿನಲ್ಲಿ ಬಿ. ಎಂ. ಶ್ರೀ. ಯ್ಯರ್ಕಿ ನಿರ್ದೇಶನ ದೊರೆತದ್ದರಿಂದ ಕನ್ನಡಕ್ಕೆ ಹೆಚ್ಚು ಒಲಿಯಬೇಕು. ಅವರು ಎಂ. ಎ. ಪರೀಕ್ಷೆಗೆ ತಿಳಿದುಕೊಂಡು ಓದಿದವು ಸಂಸ್ಕೃತ ಕನ್ನಡ ಎರಡನ್ನೂ. ಎರಡರಲ್ಲಿ ಯಾವುದಾದರೂ ಪಾಠ ಹೇಳಲು ಶಕ್ತರಾಗಿದ್ದರು. ಪದಗಳ ನಿಷ್ಪತ್ತಿ ಮತ್ತು ಅಕ್ಷರ ಯೋಜನೆಗಳ ವಿಷಯದಲ್ಲಿ ಅವರಿಗೆ ಯಾವ ಕಷ್ಟವೂ ಇರಲಿಲ್ಲವಾಗಿ, ಸಂಸ್ಕೃತ ತಿಳಿಯದ ಬಡಪಾಯಿ ಲೇಖಕರು– ಆ ಸಂಖ್ಯೆ ಆಗಲೂ ಹೆಚ್ಚೇ –ಅವರಿಗೆ ಒಳಗಾಗಿ ನಡೆಯಬೇಕಿತ್ತು. ಅವರ ಜೊತೆಯಲ್ಲಿ ಹೈಸ್ಕೂಲು ಕಾಲೇಜುಗಳಲ್ಲಿ ಓದಿದವರು ಡಾ. ಮಾಸ್ತಿ ವೆಂಕಟೇಶ ಅಯ್ಯಂಗಾರ್, ನರಸಿಂಹಮೂರ್ತಿ, ಜೋಯ್ಸರ್ ಮುಂತಾದವರು. ಅವರೆಲ್ಲರಿಗೆ ಕನ್ನಡದ ಒಂದು ಉತ್ಸಾಹ ಹುಟ್ಟಿತ್ತು. ಆ ಕಾಲದಲ್ಲಿ ಹೊಸತಾಗಿ ಪ್ರಚಾರಕ್ಕೆ ಬಂದಿದ್ದ, ವೆಂಕಟಾಚಾರ್ಯರು ಭಾಷಾಂತರ ಮಾಡಿದ ಬಂಕಿಮಚಂದ್ರರ ಕಾದಂಬರಿಗಳು, ಹೊಯ್ಸಳ ಕರ್ನಾಟಕರೇ ಆದ ಎಂ. ಎಸ್. ಪುಟ್ಟಣ್ಣನವರು ಬರೆದ ಮುದ್ದಾದ ಕನ್ನಡ ಕಥೆಗಳು ಇವರ ಮನಸ್ಸನ್ನು ಕನ್ನಡದ ಪ್ರೀತಿಗೆ ತಿರುಗಿಸಿದವು. ವೆಂಕಣ್ಣಯ್ಯನವರು, ಡಾ. ಎ. ಎನ್. ನರಸಿಂಹಯ್ಯನವರು ಅವರ ಜೊತೆಯಲ್ಲಿಯೂ ಕಾಲೇಜಲ್ಲಿಯೂ ಅನಂತರವೂ ಹತ್ತಿರದ ಸ್ನೇಹಿತರು. ಅವರಿಬ್ಬರಿಗೂ ಬಂಗಾಳಿಯ ಪ್ರವೇಶವಿತ್ತು. ಸಾಹಿತ್ಯ, ಸಮಾಜ ಮುಂತಾದ ರವೀಂದ್ರನಾಥ ಟಾಗೋರರ ಪ್ರಬಂಧಗಳನ್ನು ನರಸಿಂಹಯ್ಯನವರು ಬಂಗಾಳಿಯಿಂದ ಭಾಷಾಂತರ ಮಾಡಿದ್ದಾರೆ. ವೆಂಕಣ್ಣಯ್ಯನವರು ಆಮೇಲೆ 'ಪ್ರಾಚೀನ ಸಾಹಿತ್ಯ' ಮುಂತಾದವನ್ನು ಕನ್ನಡಿಸಿದರು. ಶಾಸ್ತ್ರಿಗಳೂ ವೆಂಕಣ್ಣಯ್ಯನವರೂ ಸೇರಿ ಶ್ರೀರಾಮಕೃಷ್ಣಮಠದ ಭಕ್ತಿಪ್ರೀತಿಗಳನ್ನು ಪಡೆದು, ಶ್ರೀ ರಾಮಕೃಷ್ಣ ಪರಮಹಂಸರ ಒಂದು ಸಣ್ಣ ಚರಿತ್ರೆಯನ್ನು ಒಬ್ಬೊಬ್ಬರು ಒಂದೊಂದು ಭಾಗವಾಗಿ ಬರೆದು ಪ್ರಕಟಿಸಿದರು. ಅದು ಬಹು ಚೆಲುವಾದ ಪುಸ್ತಕ. ಆಮೇಲೆ ಶಾಸ್ತ್ರಿಗಳು 'ರಾಮಕೃಷ್ಣ ಲೀಲಾಪ್ರಸಂಗ', 'ನಾಗಮಹಾಶಯ'ನ ಜೀವನ ಕಥೆ ಮುಂತಾದುವೆಲ್ಲವನ್ನೂ ಬರೆದರು. ಅವರಿಗೆ ಅತಿಶಯವಾದ ಕೀರ್ತಿ ತಂದದ್ದು ಬಂಕಿಮ ಚಂದ್ರರನ್ನು ಕುರಿತ ಈಚಿನ ಗ್ರಂಥ. ಇದಕ್ಕೆ ಅವರು ಮೊದಲಿಂದ ಅಭ್ಯಾಸ ಮಾಡಿದ ಬಂಗಾಳಿ ನೆರವಾಯಿತು. ಸ್ವಲ್ಪಮಟ್ಟಿಗೆ ಅವರು ತಮಿಳನ್ನು ಓದಿಕೊಂಡರು. ಹೀಗಾಗಿ ಅವರು ಕನ್ನಡಕ್ಕಾಗಿ ಮಾಡಿದ ಕೆಲಸಕ್ಕಾಗಿ ಬಹು ಸಾರವತ್ತಾದ ತಳಪಾಯ ಬಿದ್ದು ಅವರ ಉತ್ಸಾಹವನ್ನು ಪೋಷಿಸಿತು.

ಮೊದಲಿಂದ ಗರಡಿ ಸಾಮು ಮಾಡುತ್ತಿದ್ದವರು. ಕುಸ್ತಿ ಪಟ್ಟುಗಳಲ್ಲಿ ವರಸೆಗಳಲ್ಲಿ ಅವರ ತಿಳಿವಳಿಕೆ ವಿಶೇಷವಾದ್ದೇ. ಒಂದು ಕಡೆ ತರ್ಕ ವ್ಯಾಕರಣದ ಪಟ್ಟು, ಇನ್ನೊಂದು ಕಡೆ ಕುಸ್ತಿಯ ಪಟ್ಟು – ಎರಡೂ ಅವರ ವಾದಗಳಲ್ಲಿ ನೆರವಾದ ಮೈ ಮನಸ್ಸುಗಳ ಸಾಧನಗಳು. ಹೀಗಾಗಿ ಅವರು ಎಂಥ ದಕ್ಷ ಪ್ರತಿವಾದಿಗಳಿಗೂ ಬೆನ್ನು ಕೊಟ್ಟವರಲ್ಲ, ಸೋತವರಲ್ಲ. ಜೊತೆಗೆ ಮೂಲಭೂತವಾದ ಒಂದು ಜಿಗಟು, ಹಟ ಅವರನ್ನು ಹಿಡಿದ ಕೆಲಸದಲ್ಲಿ ನಿಲ್ಲಿಸಿದವು, ಗೆಲ್ಲಿಸಿದವು.

ನಾನು ಅವರನ್ನು ಕಾಣುವ ಕಾಲಕ್ಕೆ– ಎಂದರೆ ಸುಮಾರು ೧೯೧೯–೨೦ಕ್ಕೆ– ಅವರ ಶೀಲ, ಸ್ವಭಾವ, ಶಕ್ತಿ ಖಚಿತವಾಗಿ ರೂಪಗೊಂಡಿದ್ದವು. ನನಗೆ ಆಶ್ರಯ ಕೊಟ್ಟು ನನ್ನ ವಿದ್ಯಾಭ್ಯಾಸಕ್ಕೆ ನೆರವಾದ ಚೌಬೀನೆ ನೀಲಕಂಠರಾಯರ ಮನೆಗೆ ಬರುತ್ತಿದ್ದರಾಗಿ

ವೆಂಕಣ್ಣಯ್ಯನವರ ಮೂಲಕ ಇವರ ಮತ್ತು ನರಸಿಂಹಯ್ಯನವರ ಪರಿಚಯ ಆಯಿತು. ನರಸಿಂಹಯ್ಯನವರ ಮಾವಂದಿರಾದ ಜಿ. ರಂಗಣ್ಣ ಎಂಬುವರು ಬೆಂಗಳೂರಿನ R.B.A.N.M. ಪಾಠಶಾಲೆಯಲ್ಲಿ ಮುಖ್ಯೋಪಾಧ್ಯಾಯರಾಗಿಯೊ ಏನೊ ಇರುವಾಗ ವೆಂಕಣ್ಣಯ್ಯನವರೂ ಕೃಷ್ಣಶಾಸ್ತ್ರಿಗಳೂ ನರಸಿಂಹಯ್ಯನವರೂ ಅಲ್ಲಿ ಸೇರುತ್ತಿದ್ದುದು ಉಂಟಂತೆ. ರಂಗಣ್ಣನವರು ಆಮೇಲೆ ಮೈಸೂರಿಗೆ ಬನುಮಯ್ಯ ಹೈಸ್ಕೂಲಿಗೆ ಹೆಡ್-ಮಾಸ್ತರಾಗಿ ಬಂದರು. ಆಗ ಮೈಸೂರಲ್ಲಿ ನಾವು ಮೂರು-ನಾಲ್ಕು ಜನ ಇನ್ನೂ ಒಂದು ವಿಶೇಷ ಬಗೆಯ ಮೈತ್ರಿಯಿಂದ ಬೆಳೆಯಲು ಅವಕಾಶವಾಯಿತು.

ಮುಂದಿನ ಇನ್ನೆರಡು ವರ್ಷಗಳಲ್ಲಿ ಟ್ರೈನಿಂಗ್ ಕಾಲೆಜಿಗೆ ಉಪಾಧ್ಯಾಯರ ತರ ಬೇತಿಗಾಗಿ ಎಂ. ಆರ್. ಶ್ರೀನಿವಾಸಮೂರ್ತಿ ಬಂದರು. ವೆಂಕಣ್ಣಯ್ಯನವರೂ ಕೃಷ್ಣಶಾಸ್ತ್ರಿಗಳೂ ಆಪ್ತಸ್ನೇಹಿತರು. ಕೃಷ್ಣಶಾಸ್ತ್ರಿಗಳೂ ಶ್ರೀನಿವಾಸಮೂರ್ತಿಗಳೂ ಹಾಗೆಯೇ. ವೆಂಕಣ್ಣಯ್ಯ, ಶಾಸ್ತ್ರಿ, ಮೂರ್ತಿ ಹೀಗೆ ಒಂದಾಗಿ ನಡೆದರು. ೧೯೨೩ರಿಂದ ಆಚೆಗೆ ನಾನು ಬೊಂಬಾಯಿ ಕಥೆ ಮುಗಿಸಿಕೊಂಡು ಮೈಸೂರಿಗೆ ಪುನಃ ಹೋದಾಗ ಈ ಸ್ನೇಹ ಮಂಡಲಿಗೆ ಹತ್ತಿರದಲ್ಲಿ ಸೇರಿಕೊಂಡೆ. ೧೯೨೭ರವರೆಗೂ ವೆಂಕಣ್ಣಯ್ಯನವರು ಬೆಂಗಳೂರಲ್ಲಿ ಇದ್ದರು. ಓರಿಯೆಂಟಲ್ ಲೈಬ್ರರಿಯಲ್ಲಿ ಕೃಷ್ಣಶಾಸ್ತ್ರಿಗಳಿದ್ದರು. ಕನ್ನಡ ಶಾಖೆಯ ಪುಸ್ತಕ, ವಾಸ್ತುಶಿಲ್ಪ ಮತ್ತು ಪ್ರಾಚ್ಯಸಂಶೋಧನಾ ಇಲಾಖೆಗೆ ಸಂಬಂಧಿಸಿದಂತೆ ಅಧಿಕಾರಿಯಾಗಿ ಆರ್. ಶಾಮಶಾಸ್ತ್ರಿಗಳಿಗೆ ಒಬ್ಬರಿಗೆ ಮಾತ್ರ ಅಧಿಕಾರವಿದ್ದುದರಿಂದ ಬಿ. ವೆಂಕೋಬರಾಯರು ವಾಸ್ತುಶಿಲ್ಪದ ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದರು. ಈ ನಮ್ಮಲ್ಲಿ ಗುರುತು ಪರಿಚಯಗಳಾಗಿ ೧೯೨೩ರಿಂದ ಆಚೆಗೆ ಬಹು ವರ್ಷ ಕಾಲ ಬೆಳೆದ ಒಂದು ಸ್ನೇಹ ಸೌಹಾರ್ದಗಳ ಮಂಡಲಕ್ಕೆ ಇದು ನೆಲೆಗಟ್ಟು ಕಟ್ಟಿತು. ಲೈಬ್ರರಿಯಲ್ಲಿ ಕನ್ನಡ ಪುಸ್ತಕಗಳ ಪ್ರಕಟನೆ, ಕೌಟಲ್ಯನ ಅರ್ಥಶಾಸ್ತ್ರದ ಕರಡಚ್ಚನ್ನು ತಿದ್ದಿಕೊಡುವುದು, ಲೈಬ್ರರಿ ಪುಸ್ತಕಗಳ ಮಾರಾಟ, ತೂಕ, ಅಂಚೆ ರವಾನೆ- ಮುಂತಾದ ಅಂಗಡಿ ಕೆಲಸ ಕೃಷ್ಣಶಾಸ್ತ್ರಿಗಳ ಪಾಲಿಗೆ ಬಿದ್ದು ನೋಡಿದವರಿಗೆ ಅಯ್ಯೋ ಎನ್ನಿಸುತ್ತಿತ್ತು. ಆ ಕಾಲದಲ್ಲಿ ಕೃಷ್ಣಶಾಸ್ತ್ರಿಯವರು ಮಾಡಿದ ಎರಡು-ಮೂರು ಕೆಲಸಗಳಲ್ಲಿ ಒಂದು: 'ಪ್ರಬುದ್ಧ ಕರ್ಣಾಟಕ'ದ ಸಂಪಾದಕತ್ವ, ಪ್ರಕಟನೆ. ಎರಡನೆಯದು: 'ಕನ್ನಡ ಕೈಪಿಡಿ'ಗೆ ಸಂಬಂಧಿಸಿದಂತೆ ಅಲಂಕಾರಶಾಸ್ತ್ರವನ್ನು ಕುರಿತ ಬರವಣಿಗೆ. ಮೂರು: ನಾರಾಯಣಶಾಸ್ತ್ರಿಗಳಲ್ಲಿ ಬ್ರಹ್ಮಸೂತ್ರ ಭಾಷ್ಯಗಳ ವ್ಯಾಸಂಗ. ೧೯೨೭ರ ಕೊನೆಯ ಸುಮಾರಿಗೆ ವೆಂಕಣ್ಣಯ್ಯನವರು ಮೈಸೂರಿಗೆ ಪ್ರೊಫೆಸರ್ ಆಗಿ ಬರುವವರೆಗೂ ಶಾಸ್ತ್ರಿಗಳೂ ನಾನೂ ಬಹಳ ಹತ್ತಿರದಲ್ಲಿದ್ದೆವು. ಆಗ ಕನ್ನಡಕ್ಕೆ ಇದ್ದದ್ದು ಒಂದೇ ಪ್ರೊಫೆಸರ್ ಪದವಿ, ಒಂದೇ ಅಸಿಸ್ಟೆಂಟ್ ಪ್ರೊಫೆಸರ್ ಹುದ್ದೆ. ಅನಂತರ ಕೃಷ್ಣಶಾಸ್ತ್ರಿಗಳು ಬೆಂಗಳೂರಿನ ಸೆಂಟ್ರಲ್ ಕಾಲೆಜಿಗೆ ಅಸಿಸ್ಟೆಂಟ್ ಪ್ರೊಫೆಸರಾಗಿ ವರ್ಗವಾದರು. ವೆಂಕಣ್ಣಯ್ಯ ಒಬ್ಬರೇ ಇದ್ದುದರಿಂದ ನಾಲ್ಕೈದು ತಿಂಗಳು ಕಾಲ ನಾನೂ ಅವರೂ ಜೊತೆಯಲ್ಲಿದ್ದೆವು. ಆಮೇಲೆ ವೆಂಕೋಬರಾಯರಿಗೆ ಬೆಂಗಳೂರಿಗೆ ವರ್ಗವಾಯಿತು. ಡಿ. ಸುಬ್ಬಯ್ಯ ರಸ್ತೆಯಲ್ಲಿ ಅವರು ವಾಸವಾಗಿದ್ದ ಮನೆಯನ್ನು ಬಾಡಿಗೆಗೆ ತೆಗೆದುಕೊಂಡು ವೆಂಕಣ್ಣಯ್ಯನವರು ಮನೆಯವರನ್ನು ಕರಸಿಕೊಂಡು ಆ ಮನೆಗೆ ಹೋದರು. ಇದನ್ನು

ಹೇಳುತ್ತಿರುವ ಕಾರಣ ಇಷ್ಟೇ: ಆ ಗುಂಪಿನ ಜನ ನಾವು ಹೇಗೆ ಹತ್ತಿರದಲ್ಲಿದ್ದೆವು, ಒಬ್ಬರ ಪ್ರೀತಿಯನ್ನು ಇನ್ನೊಬ್ಬರು ಪಡೆಯಲು ಇದರಿಂದಾಗಿ ಹೇಗೆ ಅವಕಾಶವಾಯಿತು ಎಂದು ತಿಳಿಸುವುದಕ್ಕೆ. ಮಾನವೀಯವಾಗಿದ್ದ ಸಂಬಂಧಗಳು ಸಾಹಿತ್ಯಕ್ಕೆ ಸಂಬಂಧಪಟ್ಟಂತೆಯೂ ಹಬ್ಬಲು ಇದು ಅವಕಾಶ ಕೊಟ್ಟಿತು.

ದಿನಾ ಬೆಳಿಗ್ಗೆ ಸ್ನಾನಮಾಡಿಕೊಂಡು ಮಡಿಯಲ್ಲಿ ಬ್ರಹ್ಮಸೂತ್ರಭಾಷ್ಯದ ಪುಸ್ತಕವನ್ನು ಕಂಕುಳಲ್ಲಿ ಇಟ್ಟುಕೊಂಡು ಶ್ರೀರಾಮದೇವರ ದೇವಸ್ಥಾನದಿಂದ ಮನೆಗೆ ಹೋಗುವಾಗಲೂ ಅಥವಾ ಮನೆಯಿಂದ ಪಾಠಕ್ಕೆ ಹೋಗುವಾಗಲೂ ಒಂದು ಸಲವಾದರೂ ನಮ್ಮ ಮನೆಯ ಮುಂದೆ ಹಾದು ಹೋಗಿ, ನನ್ನೊಡನೆ ಸ್ವಲ್ಪ ಹೊತ್ತಿರುವುದು ಶಾಸ್ತ್ರಿಗಳಿಗೆ ಪದ್ಧತಿಯಾಗಿತ್ತು. (ಅವರಿಗೆ ಪಾಠ ಹೇಳುತ್ತಿದ್ದ ಪಾಲಘಾಟ್ ನಾರಾಯಣ ಶಾಸ್ತ್ರಿಗಳು ನಮ್ಮ ಚೌಬೀನೆ ನೀಲಕಂಠರಾಯರ ಮನೆಗೆ ವಾರಕ್ಕೆ ಬರುತ್ತಿದ್ದರು ಎಂಬುದನ್ನು ಹೇಳಿದರೆ ಯಾವ ಅಲಾಘವನ್ನೂ ತೋರಿಸಿದಂತಲ್ಲ. ಆದರೆ ನನಗೆ ಅವರ ಪರಿಚಯವಾಗಲು ಅವಕಾಶ ಕೊಟ್ಟಿತು. ನನಗೂ ಅವರು ಸಾಂಖ್ಯಕಾರಿಕೆಯ ಪರಿಚಯ ಮಾಡಿಕೊಟ್ಟಿದ್ದರು. ಅವರು ನಿಷ್ಠರಾದ ವೇದಾಂತ ಬೋಧಕರು. ಬದುಕಿನಲ್ಲಿ, ಪಾಠಕ್ರಮದಲ್ಲಿ ತುಂಬಾ ಕಟ್ಟುನಿಟ್ಟು.) ಬೆಳಗಿನ ಪಾಠ ಮುಗಿದ ಮೇಲೆ ನಮ್ಮ ಮನೆಗೆ ಬಂದ ದಿನ ಅವರ ಮನೆಯವರೆಗೂ ಅಷ್ಟು ದೂರ ಹೋಗಿ ಬರುವುದು ನನ್ನ ವಾಡಿಕೆ. ಸಂಜೆ ಪುನಃ ಜೊತೆಯಲ್ಲಿ ಸುತ್ತಾಡಲು ಹೋಗುತ್ತಿದ್ದೆವು. ವಾಕ್ ಹೋಗುವ ಮುಂಚೆ ಸುಮಾರು ಆ ಹೊಸತರಲ್ಲಿ ತೆರೆದಿದ್ದ ಬೊಂಬಾಯಿ ಆನಂದ ಭವನದ ಹೊಟೇಲಿಗೆ ಹೋಗಿ ದಿನಾ ಒಂದು ಬಗೆಯ ಉತ್ತರ ದೇಶದ ಸಿಹಿತಿಂಡಿಯನ್ನು ತೆಗೆದುಕೊಂಡು – ಕರ್ನಾಟಕರು ನಾವು, ಸಿಹಿ ತಿಂಡಿಗೆ ಎತ್ತಿದ ಕೈಯಲ್ಲ – ಕಾರಕ್ಕೆ ಪಳಗಿದ ಬಾಯಲ್ಲಿ ಬಾಸುಂದಿ (ರಾಬಡಿ), ಜಾಂಗೀರ್, ಘೇಡ ಇತ್ಯಾದಿಗಳು, ಜಾಮೂನ್, ಯಾವ ಯಾವುದೊ ಬರ್ಫಿ, ಜೊತೆಗೆ ಒಂದು ಪ್ಲೇಟ್ ಪೂರಿ ತಿಂದು, ಕಾಫಿ ಕುಡಿದು ಹಾರ್ಡಿಂಗ್ ಸರ್ಕಲ್, ಕಾರಂಜಿ ಕೆರೆ ಏರಿಯ ಮೇಲೆ ನಡಿಗೆ (Walk) ಹೋಗುವ ಪದ್ಧತಿ. ಅವರು ಮುಂಚೆ ಮನೆಗೆ ಹೋಗುತ್ತಿದ್ದುದರಿಂದ ಅಪರೂಪವಾಗಿ ಬೂಲ್‌ವಾ ಕೊನೆಯ ತನಕವಾದರೂ ನನ್ನ ಜೊತೆಯಲ್ಲಿ ಬರುತ್ತಿದ್ದರು. ಇಲ್ಲವಾದರೆ ಕೆರೆಯ ಕೊನೆಯವರೆಗೂ ಬಂದು ಬೈಸಿಕಲ್ ಹತ್ತಿ ಹಿಂದಕ್ಕೆ ಹೋಗುತ್ತಿದ್ದರು. ಆನಂದ ಭವನ್ ಪ್ರಸಂಗ ಬಹು ವಿಚಿತ್ರವಾದುದು. ಸಿಹಿ ಕಂಡರೆ ಶಾಸ್ತ್ರಿಗಳಿಗೆ ಪ್ರೀತಿ. ನನಗಿಲ್ಲವೆಂದಲ್ಲ; ನನಗಿಂತ ಹೆಚ್ಚಿನ ಪ್ರೀತಿ ಅವರಿಗೆ. ೨೦–೩೦ ಬಗೆಯ ಸಿಹಿತಿಂಡಿಗಳ ಹೆಸರು ನಮಗೆ ಗೊತ್ತಿರಲಿಲ್ಲ. ಅವುಗಳ ಬೇರೆ ಬೇರೆ ರುಚಿಯ ಪರಿಚಯ ಮಾಡಿಕೊಳ್ಳಬೇಕೆಂದು ಬದರಿಪ್ರಸಾದ್ ಎಂದೊ ರೇವತಿಪ್ರಸಾದ್ ಎಂದೊ ಅಂಗಡಿಯ ಮೇಲೆ ಕುಳಿತುಕೊಳ್ಳುವ ಯಾಜಮಾನನನ್ನು 'ಏ ದೇ, ಓ ದೇ', –ಇದು ಸರಿಯಾದ ಹಿಂದಿಯೊ ಅಲ್ಲವೊ ನನಗೇನು ಗೊತ್ತು? ಆಗಲೂ ಇಲ್ಲ, ಈಗಲೂ ಪೂಜ್ಯ! –ಎಂದು ಕೇಳಿ ಒಂದೊಂದನ್ನೂ ತೆಗೆದುಕೊಳ್ಳುವುದು ರೂಢಿ. ಇನ್ನೇನು ತೆಗೆದುಕೊಳ್ಳಲೂ ಧೈರ್ಯ ಸಾಲದೆ ಆ ಅಂಗಡಿಯಲ್ಲಿ ಬಿಸಿಬಿಸಿಯಾಗಿ ಹಾಕಿಕೊಡುತ್ತಿದ್ದ ಪೂರಿ ತಿಂದು ಹೋಗುತ್ತಿದ್ದೆವು. ಉತ್ತರದ ಕಡೆಯವರು ಮಾಡುವ ಪೂರಿಯ ಹದವೇ ರುಚಿಯೇ

ಬೇರೆಯಾದ್ದರಿಂದ ಅದೂ ವಿದೇಶಿಯೇ, ಭಿನ್ನ ಪ್ರಾಂತೀಯವೇ ಎನ್ನಬೇಕೇನೊ. ಬಹುತರ ಈ ಕ್ರಮ ಮೂರು-ನಾಲ್ಕು ವರ್ಷಗಳು ನಡೆಯಿತು. ಅಪರೂಪವಾಗಿ 'ಪೋಸ್ಟ್ ದ ಪೊಲೀಸ'ನ್ನು ದಾಟಿ ನೇರ ಪ್ರತಾಪಕುಮಾರಿ ಅರಮನೆಯ ಕಡೆಯ ಬಲಕ್ಕೆ ಉತ್ತನ ಹಳ್ಳಿಯ ಕಡೆಗೆ ಹೋಗುತ್ತಿದ್ದೆವು ಹೆಚ್ಚಾಗಿ. ಶಾಸ್ತ್ರಿಗಳಿಗೆ ಸ್ವಲ್ಪ ಸಿನೆಮಾ ಚಪಲವೂ ಇತ್ತು. ಆ ಮುಂಚೆ ನಾನು ಸಿನೆಮಾ ಎಂದರೆ ಮೂಗು ಮುರಿಯುತ್ತಿದ್ದೆ. ಕೈಯಲ್ಲಿ ಕಾಸಿರಲಿಲ್ಲದಿರುತ್ತಿದ್ದುದೊಂದು ಕಾರಣ. ಇತರ ಕಾರಣಗಳನ್ನು ಹೇಗೆ ಹೇಳಲಿ?* ಶಾಸ್ತ್ರಿಗಳ ಜೊತೆಯಲ್ಲಿ 'ಸೀರಿಯಲ್'ಗಳು ಎಂದು ಭಾಗಭಾಗವಾಗಿ ತೊಡಗುತ್ತಿದ್ದ 'ಪರ್ಲ್‌ವೈಟ್', ಜಿಗೊಮಾರ್, ಪೋರ್ಟಿಯಾ ಮುಂತಾದ ಒಂದು ಉತ್ಕಟ ಸನ್ನಿವೇಶಕ್ಕೆ ಪ್ರತಿದಿನವೂ ಕತೆಯನ್ನು ತಂದು ನಿಲ್ಲಿಸಿ ನಾಲಿಗೆ ಹಲ್ಲು ಕೆಣಕಿ, ರುಚಿ ಮಸೆಯುವಂತೆ ಆ ಚಿತ್ರಗಳು ಮಾಡಿ, ಮುಂದಿನ ಭಾಗ ತೊಡಗುವ ದಿನಕ್ಕೆ ನಾವು ನಿರೀಕ್ಷಿಸುವಂತೆ ಮಾಡುತ್ತಿದ್ದವು.

ಒಂದು ಬೆಳಿಗ್ಗೆ ಹೀಗಾಯಿತು: ೧೦-೧೧ರ ಗಂಟೆಯಲ್ಲಿ ನಾನೂ ಶಾಸ್ತ್ರಿಗಳೂ ವೆಂಕೋಬರಾಯರೂ ಮೂರ್ತಿಗಳೂ -ಬೇರೆ ಯಾರೊ ಇನ್ನೊಬ್ಬರು, ಮರೆತಿದೆ- ರಸ್ತೆಯ ಅಗಲಕ್ಕೂ ಅದೂ ಇದೂ ಹರಟುತ್ತ ಲೋಕವನ್ನು ಮರೆತು ಬರುತ್ತಿದ್ದೆವು. ಹಿಂದಿನಿಂದ ತಮ್ಮ ಐರಾವತ ಕಾರಲ್ಲಿ ಬಂದ ಎನ್. ಎಸ್. ಸುಬ್ಬರಾಯರು ಒಂದು ಸಲ ಮೆಲ್ಲಗೆ ಹಾರನ್ ಮಾಡಿ ನೋಡಿದರು. ಅವರದು ಹಾವಿನ ಕಣ್ಣು. ನಮ್ಮ ಸಾಲು ಕಟ್ಟು ಬಿಡದೆ ಇರಲು ನಮ್ಮನ್ನು ಗುರುತಿಸಿ ಕಾರಿಂದ ಇಳಿದು ಬಂದು 'ಏನು ರಂಪಪ್ಪ ನಿಮ್ಮದು? ರಸ್ತೆಯ ಅಗಲಕ್ಕೂ ಹರಡಿಕೊಂಡು ಹಾದು ಹೋಗುವವರಿಗೆ ಹೀಗೆ ಅಡ್ಡಿ ಮಾಡಿದರೆ ಆಯಿತು! ಏನು ಅಷ್ಟು ಕೋಲಾಹಲ?' ಎಂದವರೇ ಕಾರನ್ನು ಮುಂದೆ ನಡಸಿಕೊಂಡು ಹೋಗಿ ಕಾದಿರಲು ಸಾರಥಿ ನಂಜಯ್ಯನಿಗೆ ಹೇಳಿ ತಾವೂ ನಮ್ಮ ಜೊತೆ ಹನುಮಂತರಾಯನ ದೇವಾಲಯದವರೆಗೂ ನಡೆದುಕೊಂಡು ಬಂದರು. ಆ ಕಾಲ ಇನ್ನೆಲ್ಲಿ?

ಸಂಜೆ ತಿರುಗಾಡಲು ಹೋದಾಗ ಬರದ ಪ್ರಸಂಗವಿಲ್ಲ, ಆಡದ ಮಾತಿಲ್ಲ! ಗೊಡ್ಡು ಹರಟೆಯಿಂದ ಹಿಡಿದು ಸಾಹಿತ್ಯ, ಶಾಸ್ತ್ರ, ವೇದಾಂತ, ಹೊಸ ಕಾಲದ ವಿಜ್ಞಾನ, ಕನ್ನಡದ ಅಭಿವೃದ್ಧಿಯ ವಿಚಾರಗಳು, ಆವರೆಗೆ ನಡೆದಿದ್ದ ಕೆಲಸದ ಗುಣಾವಗುಣ ವಿಮರ್ಶೆ, ಸುಮಾರು ಎಲ್ಲ ಲೇಖಕರ ಸ್ವರೂಪ ಶಕ್ತಿ ಧಾರಾಳವಾಗಿ ಬರುತ್ತಿದ್ದವು. ಒಂದು ದಿನವೂ ಒಂದು ಕೊಳೆಯ ಮಾತಾಗಲಿ ಅಥವಾ ಕೆಡುಕತನದ ಮಾತಾಗಲಿ ಅವರ ಬಾಯಲ್ಲಿ ಬಂದುದು ನಾನು ಕೇಳಿಲ್ಲ. ಅಪರೂಪವಾಗಿ ಒಂದು ಮಾತು ಬಂದಾಗಲೂ ಎಷ್ಟು

---

* ಥೀಡಾಬಾರಾ ಎಂಬಾಕೆ, ಅವರ ಅರೆಬತ್ತಲು ಹಸಿಯ ಕಾಮದ ಚಿತ್ರಗಳು, ಚಾರ್ಲಿ ಚಾಪ್ಲಿನ್, ಹೆರಲ್ಡ್ ಲಾಯ್ಡ್, ಬಸ್ಟರ್ ಕೀಟನ್, ಕಾರಸ್ ಡೇನ್ ಮುಂತಾದ ನಗೆನಟರ ಮೂಕೀ ಚಿತ್ರಗಳು ಎಷ್ಟು ಚೆನ್ನ. ಬಹುಶಃ ಅವರ ಜೊತೆಯಲ್ಲಿ ಮೊದಮೊದಲು ಈ ನಟರ ಪಿಡಿಂಬನೆಗಳನ್ನು ನೋಡಿ ಆನಂದಿಸಿದ್ದು ಒಂದು ಅನುಭವ. ನನಗೆ ಟೊಮಾಟೊ ಬಳಕೆ ಮಾಡಿಸಿದವರೂ ಶಾಸ್ತ್ರಿಗಳೇ.

ಸಂಕೋಚದಿಂದ ಸೇರಿಕೊಳ್ಳುತ್ತಿತ್ತೊ ಹೇಗೆ ಹೇಳಲಿ? ಒಳ್ಳೆಯ ಮನೆತನದಲ್ಲಿ ಹುಟ್ಟಿ ಹಿರಿಯರ ಪೋಷಣೆಯಲ್ಲಿ ಬೆಳೆದು ವಿದ್ಯಾವ್ಯಾಸಂಗ ಮಾಡಿ ವಿದ್ವಾಂಸರಾಗಿರುವವರ ಬಾಯಲ್ಲಿ ಸ್ಟ್ಯಾ ಮಾತು ಹೇಗೆ ತಾನೆ ಬಂದೀತು? ತಾಯಿಲ್ಲದ ಮಗುವನ್ನು ಹಿರಿಯರಾದ ತಂದೆ ದೊಡ್ಡವರಾಗಿ ಮಾಡಿದರು. ಅವರ ಬರವಣಿಗೆಯಲ್ಲಿ ಆಗಾಗ ಚುಚ್ಚೊ ಲೇವಡಿಯೊ ಇದ್ದೀತು. ಅವರು ತುಂಬಾ ಮೊನೆಯುಳ್ಳ ಟೀಕೆಗಳನ್ನೂ ಲೇವಡಿಗಳನ್ನೂ ಮಾಡುತ್ತಿದ್ದರು. ಆದರೆ ಸಾಮಾನ್ಯವಾಗಿ ಇನ್ನೊಬ್ಬರ ಲೇವಡಿಯನ್ನು ಸಹಿಸುತ್ತಿರಲಿಲ್ಲ, ಸ್ವಲ್ಪ ಆಕ್ಷೇಪಣೆಗೆ ಕೂಡ ಅವರು ಅವಕಾಶ ಕೊಡುತ್ತಿರಲಿಲ್ಲ. ಒಂದು ಉದಾಹರಣೆ ಕೊಡುತ್ತೇನೆ. ಒಮ್ಮೆ ಅವರೂ ನಾನೂ ವೆಂಕೋಬರಾಯರೂ ಚಾಮರಾಜ ಒಡೆಯರ ಪ್ರತಿಮೆ ಇರುವ ಅರಮನೆಯ ಮುಂದಿನ ವರ್ತುಲಕ್ಕೆ ಇನ್ನೇನು ಕಾಲಿಡಬೇಕು ಎಂದು ಹೋಗುತ್ತಿರುವಾಗ ಎದುರುಗಡೆಯಿಂದ ನನಗೆ ಗುರುತಾದವರೊಬ್ಬರು ಬಂದು ಲಘುವಾಗಿ 'ಏನು ತ್ರಿಮೂರ್ತಿಗಳು ಹೊರಟುಬಿಟ್ಟಿರಿ?' ಎಂದರು. ಉಳಿದಿಬ್ಬರಿಗೂ –ಇವರಿಂಥವರು ಎಂಬ ದೂರದ ಗುರುತಿದ್ದರು ಕೂಡ –ಬಳಕೆ, ಸ್ನೇಹ ಹೆಚ್ಚಿಗೆ ಇರಲಿಲ್ಲ, ಆ ಮಾತಾಡಿದವರ ಸ್ವಭಾವ ಹಾಗೆ ಮಾತನಾಡುವುದು. ನಾಲಗೆ ಸ್ವಲ್ಪ ನಿಡಿದು, ಸಡಿಲ. ಕಾಲೇಜಲ್ಲಿ ಅವರದು ಬೇಷ್ ಬಹಳ. ಶಾಸ್ತ್ರಿಗಳಿಗೆ ಅದು ಚುಡಾಯಿಸಿತು. 'ನೀವು ಯಾರ್ರೀ, ಹೀಗೆ ಮಾತನಾಡುವವರು? ನಿಮಗೆ ನಿಮ್ಮ ಸ್ನೇಹಿತರ ಪರಿಚಯ ಇರಬಹುದು; ಉಳಿದ ಇಬ್ಬರನ್ನೂ ಸೇರಿಸಿಕೊಂಡು ತ್ರಿಮೂರ್ತಿಗಳು ಎನ್ನುವ ಅವಿವೇಕದ ಸದರ ನಿಮಗೇಕೆ? ನಿಮ್ಮ ಕಣ್ಣಿಗೆ ನಾವು ತ್ರಿಶೂಲದ ಹಾಗೆ ಕಾಣುತ್ತೇವೆಯೆ?' –ಎಂದರು. ಗ್ರಹಚಾರ, ಅವರು ಶ್ರೀವೈಷ್ಣವರು! ಮೂರು ನಾಮ ಅನ್ನಲಿಲ್ಲ. ಇನ್ನು ಮುಂದೆ ಅಂತಹ ಅವಿವೇಕವನ್ನು ಅವರು ಮಾಡಲೆ ಇಲ್ಲ. ತ್ರಿಶೂಲದ ಮೊನೆ ತಾಕಿರಬೇಕು! ಅವರು ಮುಂದಿನ ಕಾಲದಲ್ಲಿ ಬೆಂಗಳೂರು ಸೆಕ್ರೆಟೇರಿಯಟ್ಟಲ್ಲಿ ಒಂದು ದೊಡ್ಡ ಹುದ್ದೆಗೆ ಸೇರಿಕೊಂಡರು. ಆತ ತೀರಿಕೊಳ್ಳುವವರೆಗೂ ನಮ್ಮ ಮೂವರಲ್ಲಿ ಯಾರನ್ನೂ –ಅಷ್ಟೇ ಏಕೆ, ಕನ್ನಡ ಪಂಥದ ಯಾರನ್ನೂ –ಕ್ಷಮಿಸಿದರೆನ್ನುವ ಹಾಗೆ ಕಾಣಲಿಲ್ಲ.

ಆಫೀಸಲ್ಲಿ ಅವರೆದುರಿಗೆ ವಿದ್ವಾನ್ ಶಾಮಾಚಾರ್ಯರು –ಮೈಸೂರು ಸರ್ಕಾರದಲ್ಲಿ ರೆವೆನ್ಯೂ ಕಮೀಷನರ್ ಆಗಿ, ಆಮೇಲೆ ದೆಹಲಿಯಲ್ಲಿ ದೊಡ್ಡ ಉದ್ಯೋಗದಲ್ಲಿದ್ದ ವೇದ ವ್ಯಾಸಾಚಾರ್ಯರ ತೀರ್ಥರೂಪರು– ಕುಳಿತುಕೊಳ್ಳುತ್ತಿದ್ದರು. ಆಗ ಈಗ ಪ್ರಯೋಗವೊ ಶಬ್ದರೂಪವೊ ವಾಕ್ಯಗಳ ಸರಿಯಾದ ರೂಪವೊ ಕುರಿತು ಕೊಳ್ ಕೊಡುಗೆ ಆಗುತ್ತಿದ್ದವು. ಶಾಲು ಹೊದೆದು ಕುಳಿತ ಅವರ, ತಲೆಗೆ ರುಮಾಲು ಕಟ್ಟಿ ಒಂದು ಕರಿಯ ರೇಷ್ಮೆ ದಾರದ ತೂಗಿನಲ್ಲಿ ಕೊರಳ ಸುತ್ತಲಿಂದ ಒಂದು ಜೇಬಿಗೆ ಸೇರುತ್ತಿದ್ದ ಗಡಿಯಾರ ಕಟ್ಟಿ ಕೋಟಿನ ಕೊರಳಪಟ್ಟಿ ತೆಗೆದು ಷರಟಿನ ಮೇಲುಭಾಗ ಕಾಣುತ್ತಿದ್ದ ಶಾಸ್ತ್ರಿಗಳ ಚಿತ್ರ ಕಣ್ಣಿಗೆ ಕಟ್ಟಿದಂತಿದೆ. ಆ ವಿದ್ವಾಂಸರ ಮುಂದೆ ಅಂಚೆ ಪದಾರ್ಥಗಳನ್ನು ತೂಗುವ ತಕ್ಕಡಿ, ತೂಕದ ಹಿತ್ತಾಳೆ ಬಿಲ್ಲೆಗಳು, ಅರಗು, ರಟ್ಟಿನ ಕಾಗದ, ಹುರಿ, ಗೋಂದು! ಎಂಥವರಿಗೆ ಎಂಥ ಗತಿ ಬಂತು? ಇಂಗ್ಲಿಷಲ್ಲಿ ಹೇಳುವುದುಂಟು: ಕ್ಷೌರಕತ್ತಿಯನ್ನು ಸೌದೆ ಸೀಳಲು ಉಪಯೋಗಿಸಿದಂತೆ ಈ ಅವಯೋಗ!

ಈ ನಮ್ಮವೆ 'ನಾಟ್ಯಶಾಸ್ತ್ರ'ದಿಂದ ಹಿಡಿದು 'ರಸಗಂಗಾಧರ'ದವರೆಗೂ ವಿಶಾವಧಾನದಿಂದ ಅಲಂಕಾರಶಾಸ್ತ್ರದ ಬೇರೆ ಬೇರೆ ಘಟ್ಟಗಳೂ ಪ್ರಕರಣಗಳೂ ತೆಗೆದು ಮಾಡಿಕೊಳ್ಳುತ್ತಿದ್ದ ಅವರ ನೋಟ್ಸ್ ರೀತಿ, 'ಕನ್ನಡ ಕೈಪಿಡಿ'ಗೆ ಅವರು ಬರೆದ ಅಲಂಕಾರಶಾಸ್ತ್ರದ ಭಾಗ ನೋಡಿದವರಿಗೆ ಗೊತ್ತಾಗುತ್ತದೆ. ಎಷ್ಟು ಸಾರವತ್ತಾಗಿ, ಸೂಕ್ಷ್ಮವಾಗಿ, ವಿಷಯದ ಸ್ವರೂಪದಲ್ಲಿ ಒಂದು ಮುಖ್ಯಾಂಶವನ್ನೂ ತಿಳಿಸದೆ ಅವರು ಬಿಟ್ಟಿಲ್ಲ ಎಂಬುದು ಅಲ್ಲಿ ಕಾಣುತ್ತದೆ. ಅದಕ್ಕಾಗಿ ಅವರು ಮಾಡಿದ ಅತಿಶಯದ ಟಿಪ್ಪಣಿ ಉದ್ಧೃತಿಗಳು ಮುಂದೆ ಅವರು ಬರೆದ 'ಸಂಸ್ಕೃತ ನಾಟಕ'ಕ್ಕೆ ಸುಲಭ ನೆರವು ಆಯಿತು. ಮಾಡಿದ ನೋಟ್ಸ್ ೬೦೦–೮೦೦ ಪುಟಗಳ ಒಟ್ಟು ಗಟ್ಟಿ ಗ್ರಂಥವನ್ನು ಬರೆಯುವುದಕ್ಕೆ ಸಾಕಾಗುತ್ತಿತ್ತು. ಈಗ ಆ ನೋಟ್ಸ್ ಏನಾಯಿತೊ? ಆಗಲೂ ಪ್ರಬುದ್ಧ ಕರ್ಣಾಟಕಕ್ಕೆ ಲೇಖನಗಳನ್ನು ಬರಸುವುದು ಎಷ್ಟು ಕಷ್ಟದ ಕೆಲಸವಾಗಿತ್ತು ಎಂಬುದು ಅವರ ಕೆಲಸದಿಂದ ಗೊತ್ತಾಗುತ್ತಿತ್ತು. ಅವರು ಮನಸ್ಸು ಮಾಡಿದ್ದರೆ ಪ್ರತಿ ಸಂಚಿಕೆಯನ್ನೂ ತಮ್ಮ ಬರಹಗಳಿಂದಲೇ ತುಂಬುವ ಶಕ್ತಿ ವೈವಿಧ್ಯ ಅವರಿಗಿತ್ತು. ಆದರೆ ಪ್ರಬುದ್ಧ ಕರ್ಣಾಟಕದಂಥ ಪತ್ರಿಕೆಗೆ ಹತ್ತಾರು ಜನರನ್ನು ಪ್ರಚೋದಿಸಿ, ಅವರಿಗೆ ಸ್ಫೂರ್ತಿ ಅವಕಾಶ ಕೊಟ್ಟು ಅವರಿಗೆ ಕನ್ನಡದಲ್ಲಿ ಅಭಿರುಚಿ ಉಂಟಾಗುವಂತೆಯೂ ಅವರು ಕನ್ನಡಕ್ಕೆ ಪ್ರೀತಿಯಿಂದ ಭಕ್ತರಾಗಿ ನಿಲ್ಲಬೇಕು ಎಂಬುದಾಗಿದ್ದುದರಿಂದಲೂ, ಯಾರು ಯಾರಿಗೆ ಕನ್ನಡದಲ್ಲಿ ಪ್ರೀತಿ ಇತ್ತೊ ಅಥವಾ ಯಾರಲ್ಲಿ ಕನ್ನಡ ಪ್ರೀತಿ ಉಂಟುಮಾಡಬೇಕು ಎಂದು ಇವರ ಮನಸ್ಸಿತ್ತೊ ಅಂಥವರನ್ನೆಲ್ಲ ಪೀಡಿಸಿದರು, ಕಾಡಿದರು, ಅವರಿಂದ ಬರಸಿದರು. ಮೊದಮೊದಲು ಕ್ರೌನ್ ಎಲೆಕ್ಟ್ರಿಕ್ ಪ್ರೆಸ್ಸಲ್ಲಿಯೂ ಬ್ಲಾಕುಗಳನ್ನು ವೆಸ್ಲಿ ಪ್ರೆಸ್ಸಲ್ಲಿಯೂ ಮಾಡಿಸಲು ಬೈಸಿಕಲ್ ಮೇಲೆ ತಿರುಗುತ್ತಿದ್ದರು. ಒಂದೊಂದು ಪ್ರೆಸ್ಸಲ್ಲಿ ಒಂದೊಂದು ವಿಶೇಷ. ಆಗ ಎಂಟು ಪೇಜ್ ಫಾರಂ. ಬೆಂಗಳೂರಲ್ಲಿ ನಾಲ್ಕು ಪೇಜು ಕೊಡುವ ಅಚ್ಚಿನ ಮನೆಗಳೂ ಇದ್ದವು. ವೆಸ್ಲಿ ಪ್ರೆಸ್ಸಲ್ಲಿ ನಮ್ಮ ದೇವತಾವಿಗ್ರಹಗಳೂ ನಾಲ್ಕು ಕೈ, ನಾಲ್ಕು ತಲೆ ಇರುವ ಇನ್ನಾವುದಾದರೂ ಮೂರ್ತಿಗಳೂ– ಅವು ಶಿಲ್ಪಕಲೆಯಲ್ಲಿ ಎಷ್ಟೇ ಉತ್ತಮವಾಗಿರಲಿ– ಮಾಡಲು ಒಪ್ಪುತ್ತಿರಲಿಲ್ಲ. ಇನ್ನೊಂದರಲ್ಲಿ ಚಿತ್ರಗಾರ ಕೆ. ವೆಂಕಟಪ್ಪನವರಿಗೆ ಯಾವುದೊ ಮುದ್ರೆ ಅಚ್ಚು ಮಾಡಲು ವಹಿಸಿ ಅವರು ಅದಕ್ಕೆ ೫೦೦ ರೂ. ಬಿಲ್ ಕಳಿಸಿದ್ದರಿಂದ ನಾವು ಅವರ ಸ್ನೇಹಿತರಾದ್ದರಿಂದ ನಮ್ಮ ಮೇಲೆ ದಯೆ ಇರಿಸಿ, ಅಂಥವನ್ನು ಕಲಾಕೃತಿಗಳೆಂದು ಎಣಿಸಿ ಮಾಡಿಕೊಡಬೇಕೆಂದು ಸ್ವಲ್ಪ ಕಾಲ ಅವರು ಕಷ್ಟಪಟ್ಟು ಮಾಡಿಸಬೇಕಾಯಿತು. ಇನ್ನೊಂದು ಪ್ರೆಸ್ ಬ–ಸ–ವ ಎಂಬ ಮೂರು ಅಕ್ಷರ ಒಟ್ಟಿಗೆ ನಮ್ಮ ಪ್ರೆಸ್ಸಲ್ಲಿ ಬರಕೂಡದು ಎಂದು ಹಟಮಾಡಲು ಒಂದು ವರ್ಷ ಕಾಲ ಸ್ವಲ್ಪ ಕಷ್ಟವೇ ಆಯಿತು. ಹರ್ಡೀಕರ್ ಮಂಜಪ್ಪನವರ ಗ್ರಂಥಗಳ, ಕಾವ್ಯಗಳ ಅವಲೋಕನದನಂತರ ಎಂ. ಆರ್. ಶ್ರೀ. ಯವರ ಬಸವೇಶ್ವರನನ್ನು ಕುರಿತು ಲೇಖನಗಳು ಬರತೊಡಗಿದಾಗ ಅದನ್ನು ಬಿಟ್ಟು ಹೇಗೆ ಬರವಣಿಗೆ ಶಕ್ಯವಾದೀತು! ಅಚ್ಚುಕೂಟಗಳಲ್ಲಿ ಕೆಲಸ ತಡವಾಗುವುದರ ಜೊತೆಗೆ ಇಂಥ ಒಂದು ಗಾಸಿಯೂ ಶಾಸ್ತ್ರಿಗಳಿಗೆ ದೊಡ್ಡ ಕ್ಲೇಶವಾಗುತ್ತಿತ್ತು. ಒಂದು ಸಂಚಿಕೆ ಮುಗಿಯಿತು; ಅದನ್ನು ಒಂದು ಚೀಲದಲ್ಲಿ ಹಾಕಿಕೊಂಡು ತಾವೇ ಸ್ನೇಹಿತರ ಮತ್ತು ಗುರುತಿದ್ದವರ ಮನೆಗೆಲ್ಲ ಹೋಗಿ ಅಚ್ಚಾದ ದಿವಸವೊ ಮರುದಿವಸವೊ ಹಂಚಿ

ಬರುತ್ತಿದ್ದರು. ನೂರುಗಟ್ಟಲೆ ಪುಟಗಳ ಅಚ್ಚಿನ ಅವಕಾಶ, ನೂರಾರು ಮಂದಿ ಬರಹಗಾರರ ಸಂಪತ್ತಿ ಪ್ರಬುದ್ಧ ಕರ್ನಾಟಕಕ್ಕೆ ಇರುವ ಈ ಕಾಲದಲ್ಲಿ ೫೦–೬೦ ಪುಟಗಳ ಪತ್ರಿಕೆಯನ್ನು ಹೊರಕ್ಕೆ ತರುವ ಸಾಹಸ ಕೆಲಸ ಏನು ಮಹಾ ಕಷ್ಟ ಎನ್ನಿಸಬಹುದು. ಆಗಿನ ಕಾಲದ ಬರವಣಿಗೆಯ ಪ್ರಪಂಚ, ಪ್ರಕಟನೆಯ ತೊಂದರೆ ಬಲ್ಲವರು ಬಲ್ಲರು.

ಪ್ರಬುದ್ಧ ಕರ್ನಾಟಕ ಆರಂಭ ಮಾಡಿದಾಗ ಶಾಸ್ತ್ರಿಗಳ ಮನಸ್ಸಿನಲ್ಲಿ ಇದ್ದ ಭಾವನೆ ಒಂದು: ಮುಖ್ಯವಾಗಿ ಪತ್ರಿಕೆ ವಿದ್ಯಾರ್ಥಿಗಳ ಸೃಜನಶೀಲತೆಯನ್ನೂ ವಿಮರ್ಶಕ ಬುದ್ಧಿಯನ್ನೂ ಬೆಳಸಬೇಕೆಂಬುದು. ವಿದ್ಯಾರ್ಥಿಗಳು ಬರೆಯಬಲ್ಲ ಸಣ್ಣ ಕತೆ, ಪದ್ಯ ಮುಂತಾದವುಗಳ ಜೊತೆಗೆ ತರಗತಿಗಳಲ್ಲಿ ಹೇಗಿದ್ದರೂ ಯಾವುದಾದರೊಂದು ವಿಷಯವನ್ನು ಕುರಿತು ಅವರು ಪ್ರಬಂಧಗಳನ್ನು ಬರೆಯುತ್ತಾರೆ; ಅಂಥವುಗಳಲ್ಲಿ ಉತ್ತಮವೆಂದು ಕಂಡುಬಂದ ಲೇಖನಗಳನ್ನು ಅಗತ್ಯ ಮಾರ್ಪಾಡಿನೊಡನೆ ಒಂದೆರಡನ್ನು ಮಾಡಿದರೆ ಹತ್ತಿಪ್ಪತ್ತು ಪುಟಗಳ ಬರವಣಿಗೆ ಸಿಕ್ಕುತ್ತದೆ; ಅವರಿಂದಲೇ ಕಾವ್ಯಾವಲೋಕನ ಮಾಡಿಸುವುದು; ಉಳಿದ ಏನನ್ನು ಬರೆಯುವುದಕ್ಕೂ ತಾವೇ ಇದ್ದಾರಲ್ಲವೆ? ೩೨–೪೦ ಪುಟಗಳನ್ನು ಒಟ್ಟು ಪ್ರಕಟಿಸುವುದು ಕಷ್ಟವಾಗಬಾರದು, ಎಂಬುದು. ಹೊರಗಿನ ಸ್ನೇಹಿತರಾದ ಮಾನ್ಯ ವಿದ್ವಾಂಸರಿಂದ ಬರಸುವ ಮತ್ತು ಅವರು ಕೊಟ್ಟ ಭಾಷಣಗಳನ್ನು ಸಂಗ್ರಹಿಸುವ ಇನ್ನೊಂದು ಕಾರ್ಯವೂ ನೆರವು ಕೊಟ್ಟೀತು ಎಂಬುದಿತ್ತು. ಪತ್ರಿಕೆ ತೊಡಗಿದ ಕಾಲದಿಂದಲೇ ಶ್ರೀಗಳಾದ ಸಿ. ಕೆ. ವೆಂಕಟರಾಮಯ್ಯ, ಎಸ್. ವಿ. ರಂಗಣ್ಣ, ಎಂಜಿನಿಯರ್ ನೀಲಕಂಠಯ್ಯ, ಡಾ. ಪಿ. ಕೃಷ್ಣರಾಯರು ಮುಂತಾದವರ ಬರವಣಿಗೆ ಚೆನ್ನಾಗಿ ಕಂಡು, ಯಾವ ಪತ್ರಿಕೆಗೂ ಹೆಸರು ತರುವ ಲೇಖನಗಳು ಅವು ಎಂದುಕೊಂಡು ಅವರು ಅಚ್ಚು ಮಾಡಿಸಿದರು. ಆ ಕಾಲದಲ್ಲಿ –ಏಕೆ? ಅವರು ಇರುವಷ್ಟು ಕಾಲವೂ– ಪ್ರಬುದ್ಧ ಕರ್ನಾಟಕದಲ್ಲಿ ಹೊರಗಿನವರ ಒಂದು ಲೇಖನ ಬರುವುದೆಂದರೆ ಕಷ್ಟ, ಸಾಮಾನ್ಯ ಬರವಣಿಗೆಗೆ ಪ್ರವೇಶ ಸುಲಭಸಾಧ್ಯವಿಲ್ಲ ಎಂಬ ಮಾನ ಬಂದಿತು. ಅದನ್ನು ಸರ್ವಥಾ ಉಳಿಸಲು ಬಲಪಡಿಸಲು ಶಾಸ್ತ್ರಿಗಳು ನಿಷ್ಠರಾಗಿದ್ದರು. ಎಂಥವರ ಬರವಣಿಗೆ ಆದರೂ ತಮ್ಮ ಮನಸ್ಸಿಗೆ ಒಪ್ಪದುದನ್ನು ಹಾಕಲು ಅವರು ಒಪ್ಪುತ್ತಿರಲಿಲ್ಲ. ಇಂಥದು ತಕ್ಕುದಲ್ಲ –ಮಾತಿನಲ್ಲಿ, ವರ್ಣನೆಯಲ್ಲಿ –ಎಂದು ಕಂಡುಬಂದರೆ ಎಂಥ ದೊಡ್ಡವರ ಬರವಣಿಗೆಯನ್ನಾದರೂ ಅವರು ತಡೆದದ್ದುಂಟು. ಹೀಗಾಗಿ ಸುಮಾರು ೧೯೨೦–೨೧ರಿಂದ ಪ್ರಬುದ್ಧ ಕರ್ನಾಟಕಕ್ಕೆ ಒಂದು ಗಣ್ಯ ಸಾಧನೆ ದೊರಕಿಸಲು ಅವರು ಪಟ್ಟ ಶ್ರಮ ಅತಿಶಯವಾದ್ದು. ಬರೆಯಲು ಪ್ರೋತ್ಸಾಹಿಸುವುದು; ಬರೆಯಲು ಸುಲಭವಾಗಿ ಒಪ್ಪದವರನ್ನು ಒಪ್ಪಿಸುವುದು; ಅದನ್ನು ಸಂಪಾದಿಸಿ ಅಚ್ಚಿನ ಮನೆಗೆ ತೆಗೆದುಕೊಂಡು ಹೋಗುವುದು; ಅಲ್ಲಿ ಎರಡು ಮೂರು ಬಾರಿ ಕರಡು ತಿದ್ದಿ ಅಚ್ಚುಮಾಡಿಸುವುದು; ಅದಕ್ಕೆ ಇಂಥಾ ರಕ್ಷಾಕವಚವೇ ಆಗಬೇಕೆಂದು ಅದನ್ನು ಸಾಧಿಸಲು ಪ್ರಯಾಸಪಡುವುದು; ಅಚ್ಚಾದ ಪತ್ರಿಕೆಯನ್ನು ತಾವೇ ಹಂಚಬಹುದಾದ ಎಲ್ಲ ಗ್ರಾಹಕರಿಗೂ ಹಂಚುವುದು– ಈ ಕೆಲಸ ಸಾಮಾನ್ಯವಲ್ಲ. ಕಾಲೇಜಲ್ಲಿ ಅವರು ಮಾಡುತ್ತಿದ್ದ ಹತ್ತು ಪಡಿ ಕೆಲಸ ಇದಕ್ಕೆ ಬೀಳುತ್ತಿತ್ತು. ಹೊಸ ಕನ್ನಡ ಶೈಲಿ, ದೃಷ್ಟಿ, ಅಚ್ಚುಕಟ್ಟು, ಸೌಷ್ಠವ, ಶುದ್ಧಿ, ನೋಟ, ಮೌಲ್ಯ ಸಾಧನೆ –ಇವು ಬಹುಮಟ್ಟಿಗೆ ಶಾಸ್ತ್ರಿಗಳ ಕೊಡುಗೆ ಕನ್ನಡಕ್ಕೆ –ಈ ಕಡೆಯಲ್ಲಿ ಎನ್ನಬಹುದು.

ತಾವು ಇಂತಹ ಪ್ರಯತ್ನದಲ್ಲಿ ತೊಡಗಲಿದ್ದೇನೆ ಎಂದಾಗ ಎಸ್. ಎಸ್. ಸುಬ್ಬರಾಯರೇ ಇದು ಅಸಾಧ್ಯ ಕೆಲಸ, ಹಲವರು ಈಗಾಗಲೇ ಕೈಕಚ್ಚಿಸಿಕೊಂಡಿದ್ದಾರೆ ಎಂಬ ನಿರುತ್ಸಾಹದ ಮಾತುಗಳನ್ನು ಆಡಿದರಂತೆ. ಅದು ಶಾಸ್ತ್ರಿಗಳ ಉತ್ಸಾಹವನ್ನು ಕಡಮೆ ಮಾಡಲಿಲ್ಲ. ಆಮೇಲೆ ಅವರು ವಿದ್ಯಾ ಇಲಾಖೆಯ ಮುಖ್ಯಾಧಿಕಾರಿಗಳಾಗಿ ಬಂದಾಗ ಪತ್ರಿಕೆಗೆ ಅನುಕೂಲವನ್ನು ಕಲ್ಪಿಸಿಕೊಟ್ಟರು. ಕನ್ನಡ ಪುಸ್ತಕಗಳ / ಲೇಖನದ ಉತ್ತೇಜನ ಎಂದು ಸೂಕ್ತವಾದ ಸಮಿತಿ ಒಂದು ಸಲಹೆ ಕೊಟ್ಟರೆ ಅಂಥದರ ೨೬೦ ಪ್ರತಿಗಳನ್ನು ಸುಮಾರು ವಿದ್ಯಾ ಇಲಾಖೆಯವರು ಕೊಂಡು, ಅದನ್ನು ದೇಶದ ಹೈಸ್ಕೂಲು, ಕಾಲೇಜುಗಳಿಗೆ ಹಂಚಿಕೆ ಕಲ್ಪಿಸುವ ಏರ್ಪಾಡದು. ಹಂಚುವವರು ಸರಿಯಾಗಿ ಹಂಚುತ್ತಿದ್ದರೊ ಇಲ್ಲವೊ: ಪ್ರಕಟನಕಾರರಿಗಂತೂ ಇದರಿಂದ ದೊಡ್ಡ ನೆರವು ದೊರೆಯಿತು. ಅಚ್ಚಿನ ವೆಚ್ಚದ ಒಂದು ಗಟ್ಟಿ ಭಾಗ ದೊರಕುವಂತಾಗಿ ನೆಮ್ಮದಿಯಲ್ಲಿ ಪ್ರಕಟನೆಯನ್ನು ಮುಂದುವರಿಸಲು ಸಾಧ್ಯವಾಯಿತು. ಅಂತಹ ಪತ್ರಿಕೆ ಬಹುಮುಖಿವಾಗಿ ಬೆಳೆಯುವಾಗ್ಗೆ ದೇಶದ ಪ್ರಖ್ಯಾತರಾದ ಮೇಧಾವಿಗಳನ್ನು ಆ ಕಾರ್ಯಕ್ಕೆ ಒಲಿಸುವ ಕ್ರಮ ಬಹು ದೊಡ್ಡದಾಯಿತು. ಶಾಸ್ತ್ರಿಗಳು ಹಿಡಿದವರನ್ನು ಬಿಡಲಿಲ್ಲ; ಒಲಿಯದವರನ್ನೂ ಒಲಿಸಿದರು. ಒಮ್ಮೆ ಕನ್ನಡದಲ್ಲಿ ಬರೆದವರಿಗೆ ಅದು ಬೇತಾಳವಾಯಿತು. ಅದರ ಮೋಹನ ಒಂದು ದೌರ್ಬಲ್ಯವಾಗುವ ಮಟ್ಟಿಗೆ ಬರವಣಿಗೆ ಅವರನ್ನು ಕನ್ನಡಕ್ಕೆ ಎಳೆಯಿತು. ಬಹುಮಟ್ಟಿಗೆ ಈ ಕಡೆಯಲ್ಲಿ ಪ್ರಸಿದ್ಧರಾದ ಎಲ್ಲ ಗಣ್ಯ ಬರಹಗಾರರೂ ಇವರ ಪ್ರೋತ್ಸಾಹಕ್ಕೆ 'ಕುದುರಿಕೊಂಡವರೇ'. ಡಿ. ವಿ. ಗುಂಡಪ್ಪ, ಮಾಸ್ತಿ ವೆಂಕಟೇಶ ಅಯ್ಯಂಗಾರ್ ಇವರಿಬ್ಬರ ಮತ್ತು ಎಂ. ಆರ್. ಶ್ರೀನಿವಾಸಮೂರ್ತಿಯವರ ಬರವಣಿಗೆಗಳಂತೂ ಪ್ರಬುದ್ಧ ಕರ್ನಾಟಕಕ್ಕೆ ಪ್ರಮಾಣ ಕೃತಿಗಳನ್ನು ಒದಗಿಸಿದವು. ಮುಂದಿನ ಕಾಲದಲ್ಲಿ ಎ. ವೆಂಕಟಸುಬ್ಬಯ್ಯನವರ 'ಕೆಲವು ಕನ್ನಡ ಕವಿಗಳ ಜೀವನ ಕಾಲ ವಿಚಾರ' ಎಂಬ ಬರವಣಿಗೆ ಚರಿತ್ರೆಯ ಸಂಶೋಧನಗಳ ಒಂದು ವಿಧಾನವನ್ನೇ ಹೊಸತಾಗಿ ಈಚಿನ ಕಾಲದವರಿಗೆ ಪರಿಚಯ ಮಾಡಿಕೊಟ್ಟಿತು. ಯಾವುದಾದರೊಂದು ವಿಷಯವನ್ನು ಕುರಿತು ಅದರ ಕಾಲನಿರ್ಣಯಕ್ಕೆ ಯಾವ ಯಾವ ಸಂಗತಿಗಳು ಪುರಾವೆಯಾಗುತ್ತವೆ? ಅವುಗಳ ಬೆಲೆ ಎಷ್ಟು? ವಿಚಾರದ ಮಾರ್ಗಗಳು ಯಾವುವು? ನಿರ್ಣಾಯಕ ಪ್ರಮಾಣ ಯಾವುದು? –ಎಂಬ ದೃಷ್ಟಿ, ರೀತಿ, ವಿಚಕ್ಷಣೆ ನಮ್ಮ ಕಡೆ ಈ ಲೇಖನಗಳಲ್ಲಿ ಕನ್ನಡ ವಿದ್ವಾಂಸರಿಗೆ ದೊಡ್ಡ ಅನ್ವೇಷಣೆಯ ಮಾರ್ಗವನ್ನು– ರಾ. ನರಸಿಂಹಾಚಾರ್ಯರ ಕಾಲದಿಂದೀಚೆಗೆ ಇನ್ನಷ್ಟು ವಿಶೇಷತೆಯಲ್ಲಿ– ತೀರ್ಮಾನ ಹೇಗೂ ಆಗಲಿ– ತೋರಿಸಿಕೊಟ್ಟಿತು. ಕಾಲಕ್ರಮದಲ್ಲಿ ಇಲ್ಲಿನ ಕಾವ್ಯಾವಲೋಕನ ಹೊಸ ವಿಮರ್ಶನ ಸಂಪ್ರದಾಯ ಒಂದನ್ನು ರೂಪಿಸಲು ದುಡಿಯಿತು. ಸಂಸರ ನಾಟಕಗಳನ್ನೂ ಗಳಿಸಿ ಕೊಟ್ಟಿತು. ಶಾಸ್ತ್ರಿಗಳು ಸಂಪಾದಿಸುತ್ತಿದ್ದ ವಸ್ತುಕೋಶ ಭಾಷಾಸಾಹಿತ್ಯಗಳಿಗೆ ಸಂಬಂಧಿಸಿದ ಎಲ್ಲ ಮುಖ್ಯ ವಿಷಯಗಳನ್ನೂ ಅಡಕವಾಗಿ ಸಂಗ್ರಹಿಸಿ, ಸಂಸ್ಕೃತ, ಇಂಗ್ಲಿಷ್ ಮುಂತಾದ ಆಕರಗಳಿಂದ ಕೂಡಿಸಿ, ಪತ್ರಿಕೆಯ ಸಂಪತ್ತನ್ನು ಹೆಚ್ಚಿಸಿತು. ಆಗೀಗ ಸ್ಪರ್ಧೆಗಳನ್ನು ಏರ್ಪಡಿಸುವುದು, ವಿದ್ಯಾರ್ಥಿ ಸಮ್ಮೇಳನಗಳನ್ನು ನಡಸುವುದು, ಅಂಥ ಸಮ್ಮೇಳನಗಳ

ವರದಿಯಲ್ಲಿ ವಿದ್ವಾಂಸರು ಆಡಿದ ಮುಖ್ಯ ಮಾತುಗಳನ್ನು ಅಡಕವಾಗಿಯೂ ಪೂರ್ತಿಯಾಗಿಯೂ ಅಚ್ಚುಮಾಡುವುದು ಪದ್ಧತಿಯಾಯಿತು. ಕಾಲಕ್ರಮದಲ್ಲಿ ದೇಶಿ, ವಿದೇಶಿ ಪತ್ರಿಕೆಗಳಲ್ಲಿ ಭಾಷೆಗೂ ಸಾಹಿತ್ಯಕ್ಕೂ ಕಲೆಗೂ ಇದಕ್ಕೆ ಸಂಬಂಧಿಸಿದ ಪಟ್ಟಿಕೆಯನ್ನೂ ಕೊಡುವುದು, ಅದರ ಸಾರವನ್ನು ಅಲ್ಲಿನ ಮಾತುಗಳಿಂದಲೇ ದೊರಕಿಸುವುದು ಅವರು ಕೈಕೊಂಡ ಕೆಲಸವಾಯಿತು. ಇದಕ್ಕೆಲ್ಲ ಅವರು ಎಷ್ಟು ಕಾಲವನ್ನು ವ್ಯಯಮಾಡಬೇಕಾಯಿತು ಎಂಬುದನ್ನು ಊಹಿಸಿದರೆ, ಮನೆಯ ಕೆಲಸಕಾರ್ಯಗಳಿಗೆ ಎಷ್ಟು ಕಾಲ ವ್ಯಯ ಮಾಡುತ್ತಿದ್ದರೊ ಯಾರೂ ಊಹಿಸಬಹುದು.

ವಿಶ್ವವಿದ್ಯಾನಿಲಯದ ಗ್ರಂಥಮಾಲೆಗೆ ಅವರು 'ಸಂಸ್ಕೃತ ನಾಟಕ' ಎಂಬ ಒಂದು ಪುಸ್ತಕವನ್ನು ಬರೆದುಕೊಟ್ಟರು. ಅದಕ್ಕೆ ಅವರು ಪಟ್ಟ ಶ್ರಮ ಅಸಾಧಾರಣವಾದುದು. ಅವರೆಗೆ ಆ ವಿಷಯದ ಸಂಬಂಧದಲ್ಲಿ ಯಾವ ಯಾವ ಮುಖ್ಯ ಗ್ರಂಥಗಳು ಇತಿಹಾಸ ದೃಷ್ಟಿಯಿಂದಲೂ ವಿಮರ್ಶೆಯ ದೃಷ್ಟಿಯಿಂದಲೂ ಕೀರ್ತಿ ಪಡೆದಿದ್ದವೊ ಅವುಗಳನ್ನೆಲ್ಲ ಮತ್ತೊಂದು ಸಲ ಓದಿದರು. ಅನೇಕ ಸ್ಮಾರಕ ಗ್ರಂಥಗಳನ್ನು ಪತ್ರಿಕೆಗಳಲ್ಲಿನ ಲೇಖನಗಳನ್ನು ಓದಿದರು. ಮುಖ್ಯವಾದ ಎಲ್ಲ ನಾಟಕಗಳನ್ನೂ ಮೂಲದಲ್ಲಿ ಪುನಃ ಓದಿ ಟಿಪ್ಪಣಿಗಳನ್ನು ಮಾಡಿಕೊಂಡರು. ಹತ್ತು ಪುಟಗಳಲ್ಲಿ ಇರುವುದನ್ನು ಒಂದು ಪುಟದಲ್ಲಿ ಸಂಗ್ರಹಿಸುವ, ಒಂದು ಪುಟದ ಸಾರವನ್ನು ಒಂದು ವಾಕ್ಯಕ್ಕೆ ಭಟ್ಟಿ ಇಳಿಸುವ ಶಾಸ್ತ್ರಿಗಳ ಶಕ್ತಿ ಅದ್ಭುತವಾದುದು. ಮ್ಯಾಥ್ಯು ಆರ್ನಲ್ಡ್ ಯೂಬರ್ಟ್ ಎಂಬವನ ವಿಷಯವಾಗಿ ಇಂಥ ಒಂದು ಮಾತು ಹೇಳುತ್ತಾನೆ. ಸಾಂಬೂವ್ (Sainte Beuve) ಗದ್ಯವನ್ನು ಓದುವುದಕ್ಕಾದರೂ ಫ್ರೆಂಚ್ ಕಲಿಯಬೇಕು ಎಂಬ ಮಾತು ಅಂಥ ಇನ್ನೊಂದು. ಅವನಾಡುವಂಥ ಮೇಧಾವಿತೆ ಶಾಸ್ತ್ರಿಗಳದು. ಎಲ್ಲಿಯೇ ಆಗಲಿ, ಖಚಿತವಾದ, ಸಂದೇಹಕ್ಕೆ ಎಡೆಗೊಡದ ಬರವಣಿಗೆ ಅವರದು. ಅವರ ಅಭಿಪ್ರಾಯಗಳು ಸಾಧಾರಣವಾದುವಾಗಿರಬಹುದು; ಆದರೆ ದೃಷ್ಟಿಯ ಮತ್ತು ಉಕ್ತಿಯ ಮೊನೆ, ಅವರ ಶೈಲಿ ಅಸಾಧಾರಣವಾದ ಒಂದು ಕ್ರಾಂತಿಯನ್ನೂ ವಿಶದತೆಯನ್ನೂ ಕನ್ನಡ ಗದ್ಯಕ್ಕೆ ಕೊಟ್ಟಿತು. ಇಂಗ್ಲಿಷಲ್ಲಿ ಕೂಡ ಅಂಥ ಒಂದು ಗ್ರಂಥ ಅಷ್ಟು ಸಣ್ಣ ಅವಕಾಶದಲ್ಲಿ ಈವರೆಗೂ ಬಂದಿಲ್ಲವೆನ್ನುವಷ್ಟು ಹಿರಿಮೆ ಅವರ 'ಸಂಸ್ಕೃತ ನಾಟಕ'ಕ್ಕಿದೆ.... ಅಲಂಕಾರಶಾಸ್ತ್ರದ ವಿಷಯದಲ್ಲಿಯೂ ಸಂಸ್ಕೃತ ನಾಟಕಗಳನ್ನು ಕುರಿತಾಗಿಯೂ ಅವರು ಮಾಡಿಕೊಂಡ ಟಿಪ್ಪಣಿಗಳನ್ನು ಸಂಗ್ರಹಿಸಿ ಒಂದು ಕಡೆ ಇಟ್ಟರಾದೀತು. ಅದು ದೊರೆಯುತ್ತದೊ ಇಲ್ಲವೊ ಕಾಣೆ. ಈಚಿನ ಕಾಲದಲ್ಲಿ ಅವರು ಬರೆದ 'ಬಂಕಿಮಚಂದ್ರ', 'ವಚನಭಾರತ', 'ಕಥಾಮೃತ' ಮುಂತಾದುವನ್ನು ಕುರಿತು ಇಲ್ಲಿ ಹೆಚ್ಚಾಗಿ ಹೇಳಬೇಕಾಗಿಲ್ಲ. ಅಂಥ ಬರವಣಿಗೆ ಕನ್ನಡದಲ್ಲಿ ಬೇರೆ ಇಲ್ಲ. ತಿಳಿಯಾದ ಅವರ ಅಚ್ಚಕನ್ನಡ ಗದ್ಯಶೈಲಿ ಆ ಗ್ರಂಥಗಳಿಗೆ ಶಾಶ್ವತ ಗುಣವನ್ನೂ ಕೀರ್ತಿಯನ್ನೂ ತಂದಿದೆ. ಮಕ್ಕಳಿಗೆ ತಿಳಿಸಬೇಕೆಂದು ಮಹಾಭಾರತಕಥೆಯನ್ನು 'ನಿರ್ಮಲ– ಭಾರತಿ' ಎಂಬ ಪುಸ್ತಕವನ್ನು ಬರೆದು – ಸಾಮಾನ್ಯ ಮಟ್ಟದ ಹೆಣ್ಣುಮಕ್ಕಳಿಗೆ ಎಂದಿದ್ದಾರೆ –ಚೊಕ್ಕವಾದ ಶೈಲಿಯಲ್ಲಿ ರಚಿಸಿಕೊಟ್ಟುದು ಇನ್ನೊಂದು ದೊಡ್ಡ ಸಾಧನೆ. ತೋರಿದಾಗ 'ಶ್ರೀಪತಿ' ಎಂಬ ಹೆಸರಲ್ಲಿ ಅವರು ಕೆಲವು ಸಣ್ಣಕತೆಗಳನ್ನು ಬರೆದರು. ತಾವು ಕಂಡ ಜೀವನದ ಕೆಲವು

ಚಿತ್ರಗಳನ್ನು ಕಣ್ಣಿಗೆ ಕಟ್ಟುವಂತೆ ಅವುಗಳಲ್ಲಿ ಕಾಣಿಸುತ್ತಾರೆ. ಅಲ್ಲಿನ ನಗೆ, ಸೋಪು– ಕೆಲವೇಳೆ ನಂಜು ಕೂಡ– ಅವರೊಬ್ಬರೇ ಕಾಣಿಸಬಲ್ಲಂಥವು. ಕನ್ನಡ ಸಣ್ಣ ಕಥೆಗಳ ಕಾಲಲ್ಲಿ 'ಶ್ರೀಪತಿ'ಯ ಕೊಡುಗೆ ವಿಶಿಷ್ಟವಾಗಿ ನಿಲ್ಲುತ್ತದೆನ್ನಿಸುತ್ತದೆ.

ಅವರು ತುಂಬಾ ಸ್ನೇಹಪರರು. ಕೆಲವೇಳೆ ಕಠಿಣವಾಗಿ ಮಾತನಾಡುತ್ತಾರೆಂದು ಅವರಿಗೆ ಅಪಖ್ಯಾತಿ ಇತ್ತು. ಸ್ವಭಾವನಲ್ಲಿ ಮತ್ತು ಮನಸ್ಸಿನ ಒಂದು ನಿಶ್ಚಯದಲ್ಲಿ ಅವರ ಮಾತು ಹಾಗಾಗುತ್ತಿತ್ತು. ಅವರು ನಿಷ್ಠುರ. ಯಾವುದನ್ನೂ ಸ್ಪಷ್ಟವಾಗಿ ಹೇಳದ ಹೊರತೂ ಪ್ರಾಮಾಣಿಕತನಕ್ಕೆ ಕುಂದು ಎಂದು ನುಡಿದವರು. ಅವರ ಮನಸ್ಸು ಇಂಥದು ಎಂದು ಇತರರಿಗೆ ತಿಳಿಯಬೇಕು. ತಮ್ಮ ನಿಲುವಿನಲ್ಲಿ ಯಾವ ಅಸ್ಪುಟತೆಯೂ ಯಾರಿಗೂ ಕಾಣಬಾರದೆಂದು ಒಂದು ವ್ರತವೆಂಬಂತೆ ಸಾಧಿಸಿದರು. ವಿದ್ಯಾರ್ಥಿಗಳು ಹಲವರಿಗೆ ನೆರವು ಕೊಡುತ್ತಿದ್ದರು. ಸಮಯಾಸಮಯಗಳಲ್ಲಿ ಸ್ನೇಹಿತರಿಗೂ ಸಹಾಯವಾಗಿರುತ್ತಿದ್ದರು. ಇಂಥ ಸಂದರ್ಭಗಳಲ್ಲೆಲ್ಲ ತಮ್ಮ ಮಿತಿಯನ್ನು ಅರಿತು ಬೆಳೆಯುತ್ತಿದ್ದುದು ರೂಢಿ. ಯಾರಾದರೂ ಅತಿಯಾಗಿ ಬೇಡಲು ಹೋದರೆ ತೋರಿದುದನ್ನು ಕೊಟ್ಟು ಇದಕ್ಕಿಂತ ಹೆಚ್ಚಾಗಿ ಈಗಾಗಲಿ, ಮುಂದಾಗಲಿ ತಮ್ಮಿಂದ ನಿರೀಕ್ಷಿಸಬಾರದೆಂದು ಹೇಳಿ ಅಪಕೀರ್ತಿಗೆ ಈಡಾದ್ದುಂಟು.

ಅವರು ಮೈಸೂರಿನಲ್ಲಿದ್ದ ಆ ಕಾಲದಲ್ಲಿ ನಡೆದ ಒಂದು ಸಾಹಿತ್ಯಕ ಸಂಗತಿಯನ್ನು ಕುರಿತು ಮಾತ್ರ ಹೇಳುತ್ತೇನೆ. ಕೈಲಾಸಂ ಅವರ 'ಟೊಳ್ಳುಗಟ್ಟಿ' ಪ್ರಕಟವಾಗಿ, ಅದು ಅವಲೋಕನಕ್ಕಾಗಿ 'ಪ್ರಬುದ್ಧ ಕರ್ಣಾಟಕ'ಕ್ಕೆ ಬಂತು. ಇವರಿಗೆ ಕೈಲಾಸಂ ಪ್ರತಿಭೆಯನ್ನು ಕುರಿತು ತುಂಬಾ ಮೆಚ್ಚಿಕೆ, ಪ್ರೀತಿ, ಗೌರವ. ಅವರಿಂದ ಒಂದು ಹೊಸ ಮಾರ್ಗವೇ ಕನ್ನಡ ನಾಟಕ ಪ್ರಪಂಚಕ್ಕೆ ಬಂದಿತು, 'ಹಾಸ್ಯ ಸಂಮಿತ' ಎಂಬ ಒಂದು ಹೊಸ ಸಂಮಿತ ಗೋಚರಿಸಿತು ಎಂದು ಅದನ್ನು ಹೊಗಳಿದರು. ಅಂಥವರು ಕೈಲಾಸಂ ಅನ್ನು ಟೀಕಿಸಿ ಅಲ್ಲಗಳೆದರು ಎಂಬಂತೆ ಮಾತು ಬೆಳೆಯಿತು. ಅವರು ಎತ್ತಿದ ಪ್ರಶ್ನೆಗಳು ಮುಖ್ಯವಾಗಿ ಎರಡು. (೧) ಜನ ಮಾತನಾಡುವಂತೆ ಬರೆಯುವುದು ಶಕ್ಯವೆ, ಸರಿಯೆ? (೨) ನಿರೂಪಣೆಯಲ್ಲಿ, ಸಂಭಾಷಣೆಯಲ್ಲಿ ಇಂಗ್ಲಿಷನ್ನು ಅತಿಯಾಗಿ ಸೇರಿಸಿ ಪ್ರತಿವಾಕ್ಯದಲ್ಲಿಯೂ ಇಂಗ್ಲಿಷ್ ಮಾತುಗಳಿಗೂ ಕನ್ನಡದವಕ್ಕೂ ಶ್ಲೇಷಾರ್ಥ ಮೂಡಿಸಿ ಮಾತನ್ನು ಪೋಣಿಸುವ ವಿಧಾನ ಅಷ್ಟೇನೂ ಪಥ್ಯವಲ್ಲ ಎಂಬುದು. ಬರೆಯುವ ಉರುಬಿನಲ್ಲಿ ಸ್ವಲ್ಪ ಚುರುಕಾಗಿಯೇ ಬರೆದರು. ಕನ್ನಡದಲ್ಲಿ ಪ್ರಾಂತಭಾಷೆಗಳಿವೆ; ಮೈಸೂರು ದೇಶದಲ್ಲಿಯೇ ಹತ್ತಾರು ಜನವರ್ಗಗಳವರು ಹತ್ತಾರು ರೀತಿಯಲ್ಲಿ ಮಾತನಾಡುತ್ತಾರೆ. ಈ ಒಂದು ಸಮಸ್ಯೆ ಇನ್ನೂ ಜಟಿಲವಾಗಿದೆ. ಯಾವುದೊ ಒಂದು ಮಧ್ಯಮ ವರ್ಗದ ಮೇಲಟ್ಟದವರ ಮನೆಗಳಲ್ಲಿ ಹಾಸನ, ಮೈಸೂರು, ಶಿವಮೊಗ್ಗ ಪ್ರಾಂತಗಳ, ಬಬ್ಬೂರು ಕಮ್ಮೆ –ಹೊಯ್ಸಳ ಕರ್ನಾಟಕ ಬ್ರಾಹ್ಮಣ ಪಂಗಡಗಳವರ ಒಂದು ಬಗೆಯ ಮಾತನ್ನು ಕೈಲಾಸಂ ಬಳಸುವಂತಿದ್ದರೂ ಅದನ್ನು ಜನ ಉಚ್ಚರಿಸುವಂತೆ ನೂರಕ್ಕೆ ನೂರಂಶ ಉಚ್ಚರಿಸಲು ಸಾಧ್ಯವೆ? ಶಕ್ಯವಾದೀತೆ? ಆದಾಗ ಅದು ಇತರರಿಗೆ ಓದಲು ತೊಡಕುಂಟುಮಾಡುವುದರ ಜೊತೆಗೆ ಸುಲಭವಾಗಿ ಇತರರಿಗೆ ಅರ್ಥವಾದೀತೆ ಎಂಬುದೂ ಕೆಲವರೆತ್ತಿದ ಪ್ರಶ್ನೆ. ನಾಟಕದ ಭಾಷೆ ಬರವಣಿಗೆಯಾದಾಗ ಆಡುವ

ಮಾತಾಗಬೇಕೊ– ಎಲ್ಲ ಪ್ರದೇಶಗಳವರಿಗೆ ಓದಲೂ ಅರ್ಥಮಾಡಿಕೊಳ್ಳಲೂ ಸುಲಭವಾದ್ದಾಗಬೇಕೊ –ಎಂಬ ವಿಚಾರ ಮೊದಲಿಂದ ನಡೆದೇ ಇದೆ. ಒಂದು ವಿಶೇಷ ಇದು; ಕೈಲಾಸಂ ತಮಿಳರು. ಅವರಿಗೆ ಇಷ್ಟು ಸಹಜವಾಗಿ ಒಂದು ಮಟ್ಟದ ಮನೆತನಗಳ ಕನ್ನಡ ಫಲಿಸಿದ್ದು ಅತೀವ ವಿಚಿತ್ರ ಸಂಗತಿ. ಅವರಿಗೆ ಕನ್ನಡ ಬರೆಯುವುದಕ್ಕೆ ಬರುತ್ತಿರಲಿಲ್ಲ; ಯಾರಿಗಾದರೂ ಹೇಳಿ ಬರೆಯಿಸಬೇಕು. ಅವರು ಅದನ್ನು ಬರೆದು ಪುನಃ ಓದಿ, ಅದು ಸರಿಯಾಗಿಲ್ಲ ಎಂದು ಇಪ್ಪತ್ತು ಸಲ ತಿದ್ದಿಸಿ, ಒತ್ತಕ್ಷರಕ್ಕೆ ನಾಲ್ಕು ಒತ್ತು 'ಯ' ಒತ್ತು, 'ನ' ಒತ್ತು ಹಾಕಿ ಅಚ್ಚುಮಾಡಿಸಬೇಕು. ಓದುವವರಿಗೆ ಇದು ತೊಡಕು; ಅಚ್ಚು ಮಾಡುವವರಿಗೆ ಆಮೇಲೆ ತೊಡಕು. ಅಚ್ಚುಮಾಡಿಯಾದ ಮೇಲೆ ಪುಸ್ತಕವನ್ನು ನೋಡಲು ತೊಡಕು. ಇಂಥದನ್ನು ಹೇಳಿ "ಸಾಕೋದ್ನರಿತಾತ ಸಾವಿರಜನಕ್ತಾತ" ಎಂಬ ಸುಮಾರಿನ ವಾಕ್ಯ ಉಪನಿಷತ್ತಿನ ಭೃಗುವಾರುಣಿಯಂತಿದೆ; ಅದಾದರೂ ಅರ್ಥವಾದೀತು, ಇದು ಕಷ್ಟ" ಎಂದು ಬರೆದರು. ಇಂಗ್ಲಿಷ್ ಪದಗಳಿಗೆ 'ಉ'ಕಾರ ಪ್ರತ್ಯಯ ಹಚ್ಚಿ ಕನ್ನಡ ಮಾಡಿಕೊಂಡು 'What do you meanಉ?' ಎಂಬ ಅತಿಸಾಮಾನ್ಯ ವಾಕ್ಯದಲ್ಲಿಯೂ ಇಂಗ್ಲಿಷ್ ಬಾರದವರಿಗೆ 'ಮೀನಂತೆ ಮೀನು, ಯೂ ಮೊಸಳೆ' ಎಂಬ ಕನ್ನಡ–ಇಂಗ್ಲಿಷ್ 'ಮೀನಿನ' ಅರ್ಥದ ಬೆರಕೆ ಹಚ್ಚಿದರು. ಅಲ್ಲಿಂದ ಮುಂದೆ ಪ್ರತಿರೋಧದ 'ಯೂ ಮೊಸಳೆ' ಎಂಬ ಅಚ್ಚ ಕನ್ನಡದಂಥ 'ಯು'ಗೆ ಸೇರಿಸಿದ ಮಾತು ಎಂಬುದರ ಕಷ್ಟವನ್ನು ಕುರಿತು ತಕ್ಷಣಕ್ಕೊಂದೇ ಅಲ್ಲ, ನಾಳೆಗೆ ಭಾಷೆ ಬೆಳೆಯುವಾಗ, ಬೆರೆಯುವಾಗ ಇಂಗ್ಲಿಷ್ ಬೆರಸಿ ಬೆಳಸಿ ಮಾತನಾಡುವ ಸಂಪ್ರದಾಯ ನಿಂತುಹೋದಾಗ, ಇಂಗ್ಲಿಷೇ ಅರ್ಥವಾಗದಾದಾಗ ಏನೇನು ಕಷ್ಟಗಳಿಗೆ ಇಟ್ಟುಕೊಂಡೀತು ಎಂಬುದನ್ನು ತಮ್ಮ ಶೈಲಿಯಲ್ಲಿ ಅರಿಕೆ ಮಾಡಿದರು. ಬಹುದಿನಗಳನಂತರ ಶಾಸ್ತ್ರಿಗಳ ಸಾಧನೆಯನ್ನು ಕೈಲಾಸಂ ಅವರೇ ಬಾಯಿ ತುಂಬ ನನ್ನ ಮುಂದೆ ಮಾತಾಡಿ ಹಿಗ್ಗಿದುದುಂಟು. ಇದು ಸಾಹಿತ್ಯಕ್ಕೆ ನೇರವಾಗಿ ಸೇರಿದ ವಿಷಯ. ಆದರೂ ಶಾಸ್ತ್ರಿಗಳು ಕೈಲಾಸಂ ಬರವಣಿಗೆಗೇ ವಿರುದ್ಧರಾದರೆಂಬಂತೆ ಮಾತೆದ್ದು ಸ್ವಲ್ಪ ಕೋಲಾಹಲ ಉಂಟಾಯಿತು. ಅವರು ಬಳಸಿದ ಕೆಲವು ಮಾತುಗಳನ್ನು ಹಾಗೆನೆಸಿ ಬರವಣಿಗೆ ಬಂದಿತು. 'ಕಾಫೀ ಬಟ್ಟಲು ನೋಡಬೇಡ ನನ್ರಾಜ, ಒಳಗಿರೋ ಕಾಫೀ ಕುಡಿದು ನೋಡು' ಎನ್ನುವಂಥವು ಮಾತುಗಳು. ಆಗ ಈಗ ಮಾತನಾಡುವಾಗ ಶಾಸ್ತ್ರಿಗಳು ಉಪಯೋಗಿಸಿದ ಮಾತುಗಳು ಚುಚ್ಚುವಂತಾದವೆಂದು ನಾನು ಹೇಳಿದ್ದು ಅವರಿಗೆ ಅಷ್ಟು ಸಮಾಧಾನಕರವಾಗಿ ತೋರಲಿಲ್ಲ. ನಾನು ಬೆಂಗಳೂರವರ ಕಡೆ ಎಂಬಂತೆಯೂ ಅವರಿಗೆ ಭಾಸವಾಗಿ ನಮ್ಮ ನಮ್ಮಲ್ಲಿ ಒಂದು ಒಳಭಾವ ಬೆಳೆಯಿತು.

ಇನ್ನೊಂದು ಸಲ ಸುಮಾರು ೧೯೨೯ರಲ್ಲಿ 'ಸ್ವರಾಜ್ಯ'ವೆಂದು ಮದ್ರಾಸಲ್ಲಿ ಪ್ರಕಾಶಂ ಪ್ರಕಟಿಸುತ್ತಿದ್ದ ಪತ್ರಿಕೆಯಲ್ಲಿ ಒಂದು ಲೇಖನ ಬಂದಿತು. ಅದರ ಸಂಪಾದಕರ ಮಂಡಲಿಯಲ್ಲಿ ಇಲ್ಲಿನ ಪ್ರತಿನಿಧಿ ಭಾಸ್ಕರನ್ ಮತ್ತು ಇತರ ಇಲ್ಲಿನ ಒಬ್ಬರಿಬ್ಬರು ನನಗೆ ಬೇಕಾದವರು ಇದ್ದರು. ಕನ್ನಡದ ಲೇಖಕರಲ್ಲಿ ಕೆಲವರನ್ನು ಆರಿಸಿಕೊಂಡು ಅದು ಡಾ. ಜ್ಹಾನ್‌ಸನ್ ಅವರ ಮಂಡಲಿಯಂತೆ ಇದೆಯೆಂದು ವರ್ಣನೆಮಾಡಿ ಗುಂಡಪ್ಪನವರು, ವೆಂಕಣ್ಣಯ್ಯ, ಕೃಷ್ಣಶಾಸ್ತ್ರಿ ಮುಂತಾದವರನ್ನು ಒಬ್ಬೊಬ್ಬರಿಗೆ ಹೋಲಿಸಿ, ಎಂ. ಆರ್.

ಶ್ರೀನಿವಾಸಮೂರ್ತಿ ಅವರನ್ನೂ ನನ್ನನ್ನೂ Camp Followers ಎಂಬಂತೆ ವರ್ಣನೆ ಇತ್ತು. ಅದು ಈ ಗುಂಪಿನವರಿಗೆ ಪ್ರಿಯವಾದ ಹಾಗೆ ಕಾಣಲಿಲ್ಲ. ನನಗೆ ಅವರು ಗೆಳೆಯರಾದ್ದರಿಂದ ಆ ಬರವಣಿಗೆಯ ಹಿಂದೆ ನಾನೂ ಇದ್ದೆನೆಂಬ ಭಾವನೆ ಇವರಿಗೆ ಬಂತು. ತಮ್ಮ ಪಕ್ಷದ ನಾನು ಇಂಥುದಕ್ಕೆ ಏಕೆ ಸೇರಿಕೊಂಡೆ ಎಂಬ ಭಾವನೆ ಒಳಗೆ ಬೆಳೆದು ವಿಷಮಿಸಿತು. ನನ್ನ ದುರದೃಷ್ಟ. ಕೆಲವು ದಿನಗಳಾದ ಮೇಲೆ ಈ ಬರವಣಿಗೆಗೆ ಯಾರು ಯಾರು ಸೇರಿದ್ದರೆಂದು ನನಗೆ ಗೊತ್ತಾಯಿತು. ಆದರೆ ಒಂದು ಸಲ ಮನೆ ಮಾಡಿಕೊಂಡ ಶಾಸ್ತ್ರಿಗಳ ಭಾವನೆ ಪೂರ್ತಿ ಮಾಯವಾಗಲಿಲ್ಲ.

ಶಾಸ್ತ್ರಿಗಳು ಏನು ಬರೆದರೂ ಒಂದು ಬಗೆಯ ರಂಗಿರುತ್ತಿತ್ತು. ಸ್ಪಷ್ಟವಾಗಿ ಒಂದು ಚಿತ್ರ ಕಾಣಿಸುವಂತೆ ಕೆಲವು ವಾಕ್ಯಗಳು ಬರವಣಿಗೆಗೆ ಪೋಷಕವಾಗಿ ಇರುತ್ತಿದ್ದವು. ಅವನ್ನು ಚೆನ್ನಾಗಿರುತ್ತವೆಯೆಂದು ಇತರರು ಬರೆದ ಕಾವ್ಯಾವಲೋಕನಗಳಿಗೂ ಸೇರಿಸಿ ಕೆಲವೇಳೆ ಅಚ್ಚುಮಾಡುತ್ತಿದ್ದರು. ಇದರಿಂದ ಗ್ರಂಥಕಾರರಿಗೂ ಅವಲೋಕನಕಾರರಿಗೂ ತೃಪ್ತಿಯಾಗದಿರಬಹುದು ಎಂಬುದು ಅವರ ಮನಸ್ಸಿಗೆ ಬರುತ್ತಿರಲಿಲ್ಲ. 'ಅಶ್ವತ್ಥಾಮನ್' ಅಚ್ಚಾದಾಗ, ಆ ನಾಟಕ ಆಡಿದಾಗ ಇನ್ನೊಂದು ಕೋಲಾಹಲ ಆಯಿತು. ಪ್ರಬುದ್ಧ ಕರ್ಣಾಟಕದಲ್ಲಿ ಶಾಸ್ತ್ರಿಗಳು ಒಂದು ಟೀಕೆಗೆ ಉತ್ತರ ಕೊಡುತ್ತ 'ಶ್ರೀ'ಯವರ ಹಿರಿಮೆಯನ್ನು ಸ್ಥಾಪಿಸುವುದರಲ್ಲಿ ಟೀಕೆ ಎತ್ತಿದ ವರ್ಗವನ್ನು 'ವೆಂಕ, ಸೀನ, ನಾಣ' ಎಂಬ ಮಾತುಗಳನ್ನು ಬಳಸಿದರು. ಇಂಗ್ಲಿಷಲ್ಲಿ Tom, Dick and Harry ಎಂಬುದಕ್ಕೆ ಸುಮಾರು ಕನ್ನಡದಲ್ಲಿ ಈ ಮಾತುಗಳು ಸಮವಾಗುತ್ತವೆ. ಈ ಜನ ಅಷ್ಟು ಗಣ್ಯರಲ್ಲ; ಯಃಕಶ್ಚಿತ್ ಎಂಬ ಆಪಾದನೆ ಮಾಡಿದರೆಂದು ಚರ್ಚೆ ವಿರಸಕ್ಕೆ ಇಟ್ಟುಕೊಂಡಿತು. ಬಿ. ಬಿ. ಡಿ. ಪ್ರೆಸ್ಸಲ್ಲಿ ಅಚ್ಚಿಗೆ ಅಪ್ಪಣೆ ಕೊಟ್ಟು ಶಾಸ್ತ್ರಿಗಳೂ ಎಂ. ಆರ್. ಶ್ರೀ. ಅವರೂ ನಮ್ಮ ಮನೆಗೆ ಅಂದು ದಯಮಾಡಿಸಿದ್ದರು. ಮೂರ್ತಿಗಳು ಅದನ್ನು ಮೆಚ್ಚಿಕೊಂಡು ಶಹಬಾಸ್ ಎಂದು ಮಾತನಾಡಿದರು. 'ಏನು ಮಾಡಿದಿರಿ?' ಎಂದೆ ನಾನು, 'ಈ ಮಾತುಗಳು ಕಿವಿಗೆ ಬಿದ್ದಕೂಡಲೆ. ಯಾಕೆ ಅದನ್ನು ಅಷ್ಟು ಮೊನಚಾಗಿ ಮಾಡಿದಿರಿ? - ಎಂಬಂತೆ ನಾನು ಮಾತನಾಡಿದೆ. ಬರೆದಿದ್ದವರಿಗೆ ಅಪ್ರಿಯವಾಯಿತು. ನಮಗೆ ಒಲಿಯದ ಇನ್ನೊಂದು ಗುಂಪಿನವರನ್ನು ಹೀಯಾಳಿಸದೆ ಅವರಿಗೆ ಅನುಕೂಲವಾದ ಮಾತನ್ನು ಆಡಿದೆ ಎಂಬುದು ಅಪಾರ್ಥಕ್ಕೆ ಸಂದಿತು; –ತಮ್ಮ ಕಡೆ ನಾನಿಲ್ಲ ಎಂಬಂತೆ. ಆದರೆ ಆಳದಲ್ಲಿ ನನ್ನ ಮೇಲಿನ ಪ್ರೀತಿಗೆ ಅದು ಕುಂದುಂಟು ಮಾಡಲಿಲ್ಲ ಎಂದುಕೊಂಡಿದ್ದೇನೆ.

ಬೆಂಗಳೂರು ಇಂಟರ್‌ಮೀಡಿಯಟ್ ಕಾಲೇಜಲ್ಲಿ ಒಂದು ದೊಡ್ಡ ಚರ್ಚೆ ಏರ್ಪಡಿಸಲಾಗಿತ್ತು. ಅಲ್ಲಿ ಕನ್ನಡ ಪಾಠ ಹೇಳುತ್ತಿದ್ದವನು ನಾನು. ಆರಿಸಿದ್ದ ವಿಷಯ– 'ಹೊಸಕನ್ನಡ ಸಾಹಿತ್ಯ ಲಕ್ಷಣಗಳನ್ನು ನೋಡಿದರೆ ಅದರಿಂದ ಒಳ್ಳೆಯದಾಗುವುದಕ್ಕಿಂತ ಕೇಡೇ ಹೆಚ್ಚಾಗಿದೆ' ಎಂಬ ಸುಮಾರಿನದು; ಅದು ಸಂಪ್ರದಾಯ ವಿರೋಧಿ ಎಂದು. ಎನ್. ಎಸ್. ಸುಬ್ಬರಾಯರು ಅಧ್ಯಕ್ಷರು. ಪಕ್ಷ ಪ್ರತಿಪಕ್ಷಗಳವರು ಎರಡೂ ಕಡೆ ಘಟಾನುಘಟಿಗಳು. ನಾನು ಆ ವಿಷಯ ಬೇಡವೆಂದಿದ್ದೆ. ಆದರೆ ಕಾಲೇಜಿನ ಕೆಲವರು– ಅದರಲ್ಲಿ ಮುಖ್ಯವಾಗಿ ಒಬ್ಬರು– ಸೂಚಿಸಿದ್ದ ನಾಲ್ಕು ವಿಷಯಗಳಲ್ಲಿ ಇದನ್ನು ಆರಿಸಿದ್ದರು.

ಒಂದು ಕಡೆ 'ಶ್ರೀ'ಯವರು ಅನುಕೂಲ ಪಕ್ಷದ ನಾಯಕರು. ಎದುರು ಪಕ್ಷಕ್ಕೆ ವೆಂಕಣ್ಣಯ್ಯನವರನ್ನು ನಾಯಕರನ್ನಾಗಿ ಹಾಕಿದರು. ಆ ಕಡೆಗೆ ಟಿ. ಟಿ. ಶರ್ಮ, ದೇವುಡು ಮುಂತಾದವರಿದ್ದರು. ಇದು ಪುನಃ ನನಗೆ ಗ್ರಹಚಾರವಾಯಿತು. ಎಲ್ಲೆಲ್ಲಿಗೆ ಎಳೆಯುತ್ತದೊ ಅಪಾರ್ಥವಾಗುತ್ತದೆಯೊ ಎಂದು ಹಿಂದಿನ ಸಂಜೆ 'ಶ್ರೀ'ಯವರ ಮನೆಗೆ ಹೋಗಿ ಸ್ಥಿತಿಯನ್ನು ನಿವೇದಿಸಿದೆ. 'ಏನಾಗುತ್ತಪ್ಪ, ಆಗಲಿ. ಇಂಥ ಚರ್ಚೆ ಆಗಬೇಕಾದ್ದು ತಾನೆ? ನನ್ನನ್ನು ಅವರು ತಿಂದುಹಾಕುತ್ತಾರೆಯೆ?' ಎಂದುಬಿಟ್ಟರು. ಅಂದು ಬಹು ದೊಡ್ಡ ಸಭೆ. ಈಗಿನಂತೆ ಅಂಗಳದಲ್ಲಿ ಕಟ್ಟೆ ಕಟ್ಟಿರಲಿಲ್ಲ. ಎಲ್ಲವೂ ತೆರವಾಗಿತ್ತು. ಕಾಲೇಜಿನ ಪ್ರತಿನಿಧಿಯಾಗಿ ನಾನು ಸಭೆ ಆರಂಭವಾಗುವ ಮುಂಚೆ ಚರ್ಚೆಯ ವಿಷಯ, ಸನ್ನಿವೇಶ ಮುಖ್ಯವಾದವು; ಭಾಗವಹಿಸುವವರು ಹಿರಿಯ ಮಂದಿ; ಇವೊತ್ತಿನ ಚರ್ಚೆ ಕನ್ನಡಿಗರಿಗೂ ವಿದ್ಯಾರ್ಥಿಗಳಿಗೂ ಮಾರ್ಗದರ್ಶಕವಾಗಿ ಒಂದು ಪ್ರಮಾಣ ಸ್ಥಾಪಿತವಾಗುವಂತೆ ಆಗುತ್ತದೆ ಎಂದು ಮುಂತಾಗಿ ಹೇಳಿ, ಚರ್ಚೆಯ ನಾಯಕರಿಗೆ ಸ್ವಾಗತ ಕೋರಿ, ಅಧ್ಯಕ್ಷರಾಗಲು ಸಮ್ಮತಿಸಿದ್ದಕ್ಕಾಗಿ ಕಾಲೇಜಿನ ಪರವಾಗಿ ಕೃತಜ್ಞತೆಯನ್ನು ತಿಳಿಸಿ ಮುಗಿಸಿದೆ. ಆವೊತ್ತಿನ ಚರ್ಚೆ ವಿಚಿತ್ರವಾಗಿತ್ತು. ವಾದದಲ್ಲಿ ವಿರಸ ಬೆಳೆಯಿತು. ಎಷ್ಟು ಚೆನ್ನಾಗಿ ಆಗಬಹುದು ಎಂದು ಎಲ್ಲರೂ ಬಯಸಿದ್ದರೊ ನಿರೀಕ್ಷಿಸಿದ್ದರೊ ಅಷ್ಟು ಸರಿಯಾಗಿ ತೃಪ್ತಿಕರವಾಗಿ ಆಗಲಿಲ್ಲ. ಸುಬ್ಬರಾಯರು ಇಷ್ಟು ದೊಡ್ಡ ಕನ್ನಡದ ಹುರಿಯಾಳುಗಳು, ತಲೆಯಾಳುಗಳು, ಸಣ್ಣ ಮಕ್ಕಳಂತೆ ಕಚ್ಚಾಡುವುದು ತಮಗೆ ಸರಿಯಾಗಿ ಕಾಣಲಿಲ್ಲವೆಂಬ ಮಟ್ಟಿಗೆ ನುಡಿದು ಆ ದಿನದ ಕಾರ್ಯಕ್ರಮ ಮುಗಿಸಿದರು. ಇಂಥ ಚರ್ಚೆಯನ್ನು ಏರ್ಪಡಿಸಿ ಇವರನ್ನು ಈ ಕಡೆ ಹಾಕಿದ್ದಕ್ಕೆ ನನ್ನ ಕೈವಾಡವೇ ಬಲವಾಗಿದ್ದಿರಬೇಕು ಎಂಬ ಭಾವನೆ ಬೆಳೆಯಿತು. ಶಾಸ್ತ್ರಿಗಳ ಮನಸ್ಸಿಗೆ ಇದು ಸುಖ ತರಲಿಲ್ಲ. ಸೆಂಟ್ರಲ್ ಕಾಲೇಜಲ್ಲಿ ಅವರೂ ಇಂಟರ್ ಮೀಡಿಯಟ್ ಕಾಲೇಜಲ್ಲಿ ನಾನೂ ಕನ್ನಡದ ಮುಖ್ಯ ಪ್ರತಿನಿಧಿಗಳು.

ಶಾಸ್ತ್ರಿಗಳು ದೊಡ್ಡವರು– ವಯಸ್ಸಿನಲ್ಲಿ, ವಿದ್ಯೆಯಲ್ಲಿ, ಪದವಿಯಲ್ಲಿ. ಇದು ನನ್ನ ಲೌಕಿಕ ಮೇಲ್ಪಾಡಿಗೇ ಒಂದು ಊನ ತಂದಿತು. ಮುಂದೆ ಕನ್ನಡ ಸಾಹಿತ್ಯ ಪರಿಷತ್ತಿನ ಹೆಸರು ಮಾರ್ಪಾಡಾದಾಗಲೂ ಒಂದು ಗೊಂದಲವೆದ್ದಿತು. 'ಕರ್ಣಾಟಕ'ವೆ? 'ಕರ್ನಾಟಕ'ವೆ? –ಎಂಬುದು. 'ಶ್ರೀ'ಯವರು 'ನ' ಪರ; ಶಾಸ್ತ್ರಿಗಳು ವ್ಯಾಕರಣ ಸಂಪ್ರದಾಯದ 'ಣ' ಪಕ್ಷ. 'ಣ'ವನ್ನು 'ನ' ಮಾಡಿದ್ದು ಅವರಿಗೆ ತೃಪ್ತಿಯಾಗಲಿಲ್ಲ. ಅವರಂತೆ ಕನ್ನಡದ ಹಲವು ಹಿರಿಯರಿಗೆ ತೃಪ್ತಿಯಾಗಲಿಲ್ಲ. ನಾಲ್ಕಾರು ತಿಂಗಳು ಈ ವಿವಾದ ಬೆಳೆಯಿತು. ಗುರುಗಳಾದ 'ಶ್ರೀ'ಯವರ ಪರವಾಗಿ ಶಾಸ್ತ್ರಿಗಳು ನಿಂತುಕೊಂಡರೂ ಅಂತಸ್ಸುಖವಿರಲಿಲ್ಲ. ನಾನು ಈ ವಾದದಲ್ಲಿ ಎರಡೂ ಪಕ್ಷಕ್ಕೂ ಸೇರದವನು. ಅದು ಅನಿವಾರ್ಯವಾಗಿತ್ತು. ಇಂಥಲ್ಲೆಲ್ಲ ನನ್ನ ಮನಸ್ಸು ಅವರ ಜೊತೆಗೆ ನಿಲ್ಲದುದಕ್ಕಾಗಿ ಶಾಸ್ತ್ರಿಗಳ ಮನಸ್ಸು ಅಸುಖಗೊಂಡಿತ್ತು. ಹೀಗಾಗಿ ಯಾವ ಸ್ನೇಹ ಬಹುದೊಡ್ಡ, ನೋವರಿಯದ ಸಂತೋಷವಾಗಿ ನಡೆದುಕೊಂಡು ಬಂದಿತ್ತೊ ಅದು ಉಗುರು ಬೆಚ್ಚಗಾಗಿ ತಂಪಾಗುವಂತಾಯಿತು. ಇದು ಎರಡೂ ಕಡೆ ಸುಖ ಸಂತೋಷ ತರಲಿಲ್ಲ.

ಉಡುಪಿ ಉಪಚಾರಗಳಲ್ಲಿ ಸಂತೋಷಕೂಟಗಳಲ್ಲಿ ಅವರ ಏರ್ಪಾಡುಗಳ ವಿಚಕ್ಷಣೆ

ತುಂಬಾ ವಿಶೇಷವಾದ್ದು. ಅವರ ಕೋಣೆಗೆ ಹೋದ ಸ್ನೇಹಿತರಿಗೆ ಪಕ್ಕದ ನಾರಾಯಣನ ಹೊಟೇಲಿಂದ ಉಪಚಾರ ನಡೆಯುವುದರ ಜೊತೆಗೆ ಅವರ ಮೇಜಿನ ಡ್ರಾದಲ್ಲಿ ಯಾವಾಗಲೂ ಇರುತ್ತಿದ್ದ ಹಣ್ಣೂ ಹಂಪಲವೂ ಇಲ್ಲ ಇನ್ನಾವುದೂ ತಿಂಡಿಯೂ ದೊರಕುತ್ತಿತ್ತು. ಸಿಹಿ ತಿಂಡಿಯಲ್ಲಿ ಅವರಿಗೆ ಬಹು ಪ್ರೀತಿ ಎಂದಿದ್ದೇನೆ; ಬಹುಮಟ್ಟಿಗೆ ಹಾಬೂಲು ದಾಳಿಂಬೆ, ರಾಜಬಾಳೆ, ಚಂದ್ರಬಾಳೆ ತರಿಸಿ ಅವನ್ನು ಹೋಳುಮಾಡಿಕೊಡುತ್ತಿದ್ದ ರೀತಿ ಅವರಿಗೇ ಬಂದುದು. ನನಗೆ ಆ ಎರಡೂ ಬಗೆಯ ಬಾಳೆಯ ಪರಿಚಯವಾದುದೂ ಅವರೊಡನೆಯೇ. ಈ ಬಣ್ಣದ್ದು ಏನು ಬಾಳೆ ಎಂಬ ಯಾವುದೋ ಪೂರ್ವಗ್ರಹ ನಾನು ತಿಳಿದ ಬಾಳೆಗಳಲ್ಲದ ಇತರ ಬಾಳೆಗಳನ್ನು ಕಂಡರೆ. ಅವುಗಳಾಗಲಿ 'ಬನಾನಾ' ಬಾಳೆಯಾಗಲಿ ನನಗೆ ದೃಷ್ಟಿರಾಹುವಾಗಿದ್ದವು. 'ಬನಾನಾ' ಉದ್ದ– ನನ್ನ ಕಣ್ಣಿಗೆ ಪೀಡೆ. ಅದರಿಂದ ಮಲೆಯಾಳದವರೂ ಇತರರೂ ಮಾಡುತ್ತಿದ್ದ ಸಿಹಿಗಳಾಗಲಿ ಉಪ್ಪೇರಿಯಾಗಲಿ ಸ್ವಲ್ಪ ಮಟ್ಟಿಗೆ ಗ್ರಾಹ್ಯವಾದದ್ದು. ಶಾಸ್ತ್ರಿಯವರ ಸಾಹಚರ್ಯದಲ್ಲಿ ಕರ್ನಾಟಕ ಸಂಘದ ಉತ್ಸವಗಳಲ್ಲಿ ಅವರು ಏರ್ಪಡಿಸುತ್ತಿದ್ದ ಸಂತೋಷಕೂಟಗಳಲ್ಲಿ ಪ್ರತಿಯೊಂದರಲ್ಲಿಯೂ ಯಾವುದಾದರೊಂದು ವಿಶೇಷ ಪದಾರ್ಥವಿರುತ್ತಿತ್ತು. ಅದನ್ನು ಗೆಳೆಯರಿಗೆಲ್ಲ ಹಂಚಿ ಸಂತೋಷವುಂಟುಮಾಡುತ್ತಿದ್ದರು. ಕೆಲಸಕ್ಕೆ ಒದಗಿದವರು ಇವರಿಗೆ ಇಷ್ಟ ಬಂದ ಪದಾರ್ಥವನ್ನು ಒದಗಿಸಲಾರದೆ ತಾವೇ ಪೇಟೆಗೆ ಹೋಗಿ ಅವನ್ನು ಕೊಂಡು ತಂದು– ಅಥವಾ ತರಿಸಿ– ಕೊಡುವುದು ಅವರ ವಾಡಿಕೆ.

ಮೈಸೂರು ಮಹಾರಾಜ ಕಾಲೇಜಿನ ಎರಡು ಉತ್ಸವಗಳನ್ನು ಅವರು ಬಹು ಅದ್ಧೂರಿಯಿಂದ ಮಾಡಿದರು. ಒಂದು: ಸಂಘದ ಕೋಶಾಧ್ಯಕ್ಷರಾಗಿದ್ದ ತೀನಂಶ್ರೀ ಅವರು ಬೆಂಗಳೂರಿಗೆ ವರ್ಗವಾದಾಗ ಏರ್ಪಡಿಸಿದ್ದ ಬೀಳ್ಕೊಡಿಗೆಯ ಉತ್ಸವ, ಭಾಷಣಗಳು, ತಿಂಡಿತೀರ್ಥ, ಮರ್ಯಾದೆ, ಅವರಿಗೆ ಅರ್ಪಿಸಿದ ಪೆನ್ನು, ಹಣ್ಣು ಬಹುಮಾನಗಳ ತಟ್ಟೆ, ಅವುಗಳ ಅಚ್ಚುಕಟ್ಟು - ಆ ಕಾಲದಲ್ಲಿ ಇತರರಿಗೆ ಅಲಭ್ಯವಾದ್ದು. ಕರ್ನಾಟಕ ಸಂಘದ, ಪ್ರಬುದ್ಧ ಕರ್ನಾಟಕದ ಬೆಳ್ಳಿಹಬ್ಬದ ಉತ್ಸವಕ್ಕಾಗಿ ಮಾಡಿದ ವಿರ್ಪಾಟು ನೋಡಿದವರೆಲ್ಲರ ಮನಸ್ಸಿಗೆ ರಂಜನೆಯನ್ನೂ ಶಾಶ್ವತವಾದ ಒಂದು ಸ್ಮೃತಿಯನ್ನೂ ಉಳಿಸಿಕೊಟ್ಟ ಸಂದರ್ಭ. ಆ ಸಂಬಂಧದಲ್ಲಿ ಅವರು ಸ್ವಂತ ಖರ್ಚಿನಿಂದ ಕೊಟ್ಟ ಭೋಜನ ಕೂಡ ೨೫೦-೩೦೦ ಜನಗಳಿಗೆ ಪೂರ್ಣ ತೃಪ್ತಿಯನ್ನು ತಂದುಕೊಟ್ಟ ಸಮಾರಂಭ. ಅವರಿಗೆ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಬಂದು, ಪ್ರಶಸ್ತಿಯನ್ನು ತೆಗೆದುಕೊಳ್ಳಲು ದೆಹಲಿಗೆ ಹೋಗಲಾಗದಿರಲು, ಅಕಾಡೆಮಿಯ ಕಾರ್ಯದರ್ಶಿಗಳಾದ ಡಾ. ಕೆ. ಎಂ. ಜಾರ್ಜ್ ಬೆಂಗಳೂರಿಗೆ ಬಂದು ಬಹುಮಾನ ಅರ್ಪಿಸುವ ಸಣ್ಣ ಉತ್ಸವವೊಂದನ್ನು ನಡಸಿಕೊಟ್ಟರು. ಬಸವನಗುಡಿಯಲ್ಲಿರುವ ಶಾಸ್ತ್ರಿಗಳ ಮನೆಯಲ್ಲಿಯೇ ಉತ್ಸವ ನಡೆಯಿತು. ಆಗ ಬಂದಂಥ ಎಲ್ಲರಿಗೂ ಸಿಹಿಯನ್ನೂ ತಿಂಡಿತೀರ್ಥ ಹಣ್ಣುಗಳನ್ನೂ ಶಾಸ್ತ್ರಿಗಳೇ ಹಂಚಿ ಆ ಸಂತೋಷ ಬೆಂಗಳೂರಿನಲ್ಲಿ ಆ ದಿನ ಸೇರಿದ್ದ ಎಲ್ಲ ಸಾಹಿತಿಗಳಿಗೂ ಮಿತ್ರರಿಗೂ ಬಹುಮಾನ ಬರುವಂತೆ ಮಾಡಿದರು. ಬಹುಕಾಲ ತಮ್ಮ ಪ್ರೆಸ್ ಸಂಪರ್ಕವನ್ನೂ ಅಚ್ಚಿನ ಕಾರ್ಯಗಳೆಲ್ಲವನ್ನೂ ಅತಿಶಯ ವಿಚಕ್ಷಣೆಯಿಂದ, ಶ್ರದ್ಧೆಯಿಂದ ಮಾಡುತ್ತಿದ್ದ ತಮ್ಮ ಪ್ರೋತ್ಸಾಹಕ ಬಿ. ಬಿ. ಡಿ. ಪ್ರೆಸ್ಸಿನ

ಪಿ. ನರಸಿಂಹ ಮಲ್ಯ ಅವರಿಗೆ ಸ್ಯಾಮಸಲ್ ಹೈಸ್ಕೂಲಲ್ಲಿ ಒಂದು ಸಂತೋಷಕೂಟ ಏರ್ಪಡಿಸಿದರು. 'ವಚನಭಾರತ'ವೊ ಇನ್ನಾವುದೊ ಪುಸ್ತಕವೊ ಅವರು ತಯಾರು ಮಾಡಿದುದು, ಅಚ್ಚಿನ ಒರಗಾ ಒಪ್ಪಕ್ಕಾಗಿ ಅವಿಲಭಾರತ ಪ್ರಾಶಸ್ತ್ಯವನ್ನು ಪಡೆದಿತ್ತು. ಆ ದಿನ ದೃಷ್ಟಿರೀತಿಗಳಲ್ಲಿ ಸುಮಾರು ಒಂದು ಬಗೆಯ ಶ್ರದ್ಧಾಳುಗಳೂ ಪ್ರಾಮಾಣಿಕರೂ ಆದ ಇಬ್ಬರ ಮೈತ್ರಿಯ ಒನಪನ್ನು ನೋಡಬಹುದಿತ್ತು. ಅವೊತ್ತು ಅಲ್ಲಿಗೆ ದಯಮಾಡಿದ್ದ ವಿದ್ವದ್‌ವರ್ಗ, ಗೌರವ ಭಕ್ತಿಗಳ ಸಮರ್ಪಣ, ಹಾರ್ದಿಕವಾದ ಯಾವ ಸಾಹಿತಿಯ ಪ್ರಶಂಸೆಗೂ ಹಿರಿಮೆಯನ್ನು ತರುವಂಥದು.

ಕಡೆಯವರೆಗೂ ಶಾಸ್ತ್ರಿಗಳ ಮನಸ್ಸು, ಲೇಖನಿ ತಿಳಿಯಾಗಿ ಇದ್ದಿತಾದರೂ ಕಡೆಯ ನಾಲ್ಕೈದು ವರ್ಷಕಾಲ ದೇಹದ ಮತ್ತು ಮನಸ್ಸಿನ ಯಾವುದೊ ಕೊರಗು, ನೋವು, ಶೈಥಿಲ್ಯ ಅವರನ್ನು ಬಹುವಾಗಿ ಕಾಡಿತು; ಕೊರಗುವಂತೆ ಮಾಡಿತು. ಇತರರಿಗೆ ಸಂಜೀವನ ಸದೃಶರಾಗಿದ್ದ ಅವರ ಮನಸ್ಸಿಗೆ ಈ ಕೊರಗು, ಜಂಜಡ ಬಂಬುದು ಅವರ ಸ್ನೇಹಿತರಾದ ನಮಗೆಲ್ಲ ತುಂಬಾ ವ್ಯಥೆ. ಬಹುವಾಗಿ ಅವರನ್ನು ವ್ಯಥಿತರನ್ನಾಗಿ ಮಾಡಿದ ಒಂದು ಸಂಗತಿ ತಮ್ಮ ತರುವಾಯ ತಮ್ಮ ಹೆಸರನ್ನೂ ಕೆಲಸವನ್ನೂ ಮುಂದುವರಿಸುವ ಒಬ್ಬ ಮಗ ಉಳಿಯದೆ ಹೋದನೆಂಬುದು. ಹುಟ್ಟಿದ ಒಂದು ಗಂಡು ಮಗು ಸಣ್ಣ ವಯಸ್ಸಿನಲ್ಲಿಯೇ ತೀರಿಕೊಂಡುದು ಅವರಿಗೆ ಬಹುದೊಡ್ಡ ಪೆಟ್ಟು. ಸಾಮಾನ್ಯವಾಗಿ ಜನ ಬಯಸುವ ಎಲ್ಲ ಸ್ಥಾನಮಾನ, ಕೀರ್ತಿ ಅವರಿಗೆ ದೊರೆತು ಕನ್ನಡ ಸಾರಸ್ವತ ಪ್ರಪಂಚದಲ್ಲಿ ಕೃಷ್ಣಶಾಸ್ತ್ರಿಗಳೆಂದರೆ ಪ್ರಮಾಣಪುರುಷರು, ಒಬ್ಬ ಸೀಮಾಪುರುಷರು ಎಂಬ ಮಟ್ಟಿಗೆ ಅವರ ಕೀರ್ತಿ ಏರಿತು. ಪ್ರೊಫೆಸರ್, ಡಾಕ್ಟರ್ ಎಂಬ ಗೌರವದ ಗಳಿಕೆ ದೊರಕಿತು. ಸಾಹಿತ್ಯ ಅಕಾಡೆಮಿ ಬಹುಮಾನ ಬಂತು. ಅವರ ಮಾತಿಗೆ ಎಂಥ ಗುಂಪಿನಲ್ಲಿಯೂ ಬೆಲೆಯೇ. ಅವರಿಂದ ಒಂದು ಒಳ್ಳೆಯ ಮಾತು ಕೇಳಬೇಕು, ಅವರ ಲೇಖನಿಯಿಂದ ತಮ್ಮ ಪರವಾದ ಒಂದು ಮೆಚ್ಚಿಕೆಯ ಮಾತೊ ಅನುಕೂಲ ವಿಮರ್ಶೆಯೊ ಬಂದ ದಿನ ತಮಗೆ ಒಂದು ಸ್ವರ್ಣಕಲಶವಿಟ್ಟಂತೆ ಎಂದು ಭಾವಿಸಿದ್ದ ಜನರೂ ಉಂಟು. ಶಾಸ್ತ್ರಿಗಳ ಅಭಿಪ್ರಾಯ ಏನು?– ಎಂದು ಕೇಳಿ ಅದಕ್ಕೆ ಪುರಸ್ಕಾರ ಕೊಟ್ಟು, ಪುನಃ ತಮ್ಮ ಬರವಣಿಗೆಯನ್ನು ಅವರ ಮಾತಿನ ದೃಷ್ಟಿಯಿಂದ ಪರಿಶೀಲಿಸಿದವರುಂಟು.

ಒಬ್ಬ ವ್ಯಕ್ತಿ ಸಾಹಿತಿಯಾಗಿ, ಸಾಹಿತ್ಯ ಪ್ರೋತ್ಸಾಹಕನಾಗಿ, ಹಲವು ಬಗೆಯ ಉತ್ತಮ–ಮೇಲ್ತರದ–ಅಭಿರುಚಿಯಿಂದ ಪುಸ್ತಕಗಳನ್ನು ಪ್ರಕಟನೆ ಮಾಡಿ, ಸಾಹಿತ್ಯದಲ್ಲಿಯೂ ವಿಮರ್ಶೆಯಲ್ಲಿಯೂ ಒಂದು ಹೊಸ ಸಂಪ್ರದಾಯವನ್ನು ನಿರ್ಮಾಣ ಮಾಡಿದ ಮಹಾಶಯರು ಶಾಸ್ತ್ರಿಗಳು. ಜೊತೆಹಕ್ಕಿಗಳಾಗಿ ಅವರೂ ವೆಂಕಣ್ಣಯ್ಯನವರೂ, ಅವರೂ ಶ್ರೀನಿವಾಸಮೂರ್ತಿಗಳೂ ನಡೆದುಕೊಂಡ ರೀತಿ ಉತ್ತಮ ಸ್ನೇಹ ಚರ್ಯೆಗೆ ನಿದರ್ಶನ. ಕನ್ನಡ ವ್ಯಾಸಂಗದಲ್ಲಿ ತೊಡಗಿದವರಿಗೆ ಯಾವ ಬಗೆಯ ಸ್ವೀಕಾರ ಪುರಸ್ಕಾರ ಬರಬಹುದೊ ಅದೆಲ್ಲ ಅವರಿಗೆ ದೊರಕಿತು. ಮೈಸೂರು ಜಿಲ್ಲಾ ಕಚೇರಿಯಲ್ಲಿ ಗುಮಾಸ್ತರಾಗಿ ಕೆಲಸ ಮಾಡಿದ್ದುಂಟು. ಓರಿಯೆಂಟಲ್ ಲೈಬ್ರರಿಯಲ್ಲಿ ಹಿಂದೆ ವರ್ಣಿಸಿದಂತೆ ಪುಸ್ತಕವ್ಯಾಪಾರಿಗಳಾಗಿ ದುಡಿದರು. ಆದರೆ ಒಂದು ಸಣ್ಣ ಮೆಚ್ಚಿನ ಪದವಿಯಿಂದ ಕನ್ನಡ ಪ್ರಾಧ್ಯಾಪಕರಾಗಿದ್ದು

ಉನ್ನತಿಗೆ ಬೆಳೆದು ನಿಂತರು. ಅವರಿಗೂ ಕನ್ನಡ ಸಾಹಿತ್ಯ ಪ್ರಪಂಚಕ್ಕೂ ಕೀರ್ತಿ ತಂದು ಬಹುಕಾಲ ಬೆಲೆಯುಳ್ಳವಾಗಿ ನಿಲ್ಲುವ ಗ್ರಂಥಗಳನ್ನು ರಚಿಸಿದರು. ಶುದ್ಧವಾದ, ಖಚಿತವಾದ, ತಿಳಿಯಾದ ಒಂದು ಗದ್ಯಶೈಲಿಗೆ ಮಾರ್ಗದರ್ಶಕರಾದರು. ವಿಮರ್ಶೆಯ ಒಂದು ಹೊಸ ಮಾರ್ಗದಿಂದ ಕನ್ನಡ ವಿದ್ವತ್ ಸಾಧನೆಗೆ ಮುಡಿಯಾದಂತಹ ಒಂದು ಉನ್ನತಿಯನ್ನು ತಂದುಕೊಟ್ಟರು. ಹೈದರಾಬಾದ್ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿ ಅಖಿಲ ಕನ್ನಡನಾಡಿನ ಮಾನ್ಯತೆಯನ್ನು ತಮ್ಮ ಧೀರತೆಯಿಂದ ಸಂಪಾದಿಸಿದರು. ಅಖಿಲಭಾರತ ಮಾನ್ಯತೆಯನ್ನು ಸಾರುವ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪಡೆದರು. ಅವರ ಪರಿಚಯವಿದ್ದ ಎಲ್ಲರಿಗೂ ಮಾನ್ಯರಾದರು. ಇದು ಕೃತಾರ್ಥ ಜೀವನ.

ಗದಾಯುದ್ಧ ಕಾವ್ಯದಲ್ಲಿ ದುರ್ಯೋಧನನು ಅಭಿಮನ್ಯುವನ್ನು ಕುರಿತು ಒಂದು ಮಾತು ಹೇಳುತ್ತಾನೆ.

ಅಸಮಬಲ ಭವದ್ ವಿಕ್ರಮ
ಮಸಂಭವಂ ಪೆಱರ್ಗೆ ನಿನ್ನನಾನಿನಿತಂ ಪ್ರಾ
ರ್ಥಿಸುವೆನಭಿಮನ್ಯು ನಿಜಸಾ
ಹಸೈಕದೇಶಾನುಮರಣಮೆಮಗಕ್ಕಿ ಗಡಾ

ಎಂಬಲ್ಲಿನ ಅಸಮಬಲತೆ ಅವರದು. ಅವರ ಸಾಹಸದ ಏಕದೇಶವಾದ ಒಂದು ಕೀರ್ತಿ ಹಿರಿಮೆಗಳ ಸೆಲೆ ಹಾಯುವಷ್ಟು ಇನ್ನೊಬ್ಬ ಕನ್ನಡ ಸೇವಕನ ಜೀವನಕ್ಕೆ ಹಾಯಬಲ್ಲದಾದರೆ ಅಂಥ ಬದುಕನ್ನು, ಸಾಧನೆಯನ್ನು ಬಯಸುವುದು ಪುಣ್ಯವಾಗಬೇಕು.

ನನ್ನನ್ನು ಕನ್ನಡದ ಕೈಂಕರ್ಯಕ್ಕೆ ಎಳೆದು ದೊಡ್ಡ ಒಂದು ಸ್ನೇಹವರ್ಗವನ್ನು ದಾನ ಮಾಡಿದ ಮಹಾತ್ಮರು ಅವರೆಂದು ಹೇಳಿ ಇದನ್ನು ಮುಗಿಸುತ್ತಿದ್ದೇನೆ.

ಡಾ. ಎ. ಎನ್. ನರಸಿಂಹಯ್ಯ

ಕಾಲೇಜಲ್ಲಿ ಓದುತ್ತಿದ್ದ ದಿವಸಗಳಲ್ಲಿಯೇ ನನಗೆ ಪರಿಚಯವಾದವರಲ್ಲಿ ಶ್ರೀ ಎ. ಎನ್. ನರಸಿಂಹಯ್ಯ ಒಬ್ಬರು. ಎ. ಎಂದರೆ ಅಗರದವರಾದುದರಿಂದ. ಬೆಂಗಳೂರು ಕೋಳ್ಗಾಲದ ಹತ್ತಿರವಿರುವ ಯಾವುದೋ ಅಗರ ಗ್ರಾಮಕ್ಕೆ ಸೇರಿದ್ದು ಅವರ ಸಂಸಾರ. ಅವರ ತಮ್ಮಂದಿರೊಬ್ಬರು ಈಚೀಚಿನವರೆಗೂ ಅಲ್ಲಿದ್ದರಂತೆ. ಇನ್ನೊಬ್ಬರು ತಮ್ಮಂದಿರು 'ಸಂಸ'ರೆಂದು ಪ್ರಖ್ಯಾತರಾದ ಕನ್ನಡ ನಾಟಕಕಾರ ಎ. ಎನ್. ಸ್ವಾಮಿ ವೆಂಕಟಾದ್ರಿ ಅವರು. ಒಡಮ, ಬೃಹಚ್ಚರಣ ಮುಂತಾದ ವರ್ಗಗಳವರಂತೆ ಇರುವ, ಮೊದಲು ತಮಿಳು ಮಾತನಾಡುತ್ತಿದ್ದ ಬೃಹಚ್ಚರಣ ವರ್ಗಕ್ಕೆ ಸೇರಿದವರು: ಹೆಚ್ಚು ಕಾಲ ಇಲ್ಲಿದ್ದು ಕನ್ನಡಿಗರಾಗಿದ್ದಾರೆ. ಎತ್ತರದಲ್ಲಿ ಅವರು ನಮ್ಮ ಗುಂಪಿನಲ್ಲಿಲ್ಲ ನೇರತೆಗೆ ಪ್ರಸಿದ್ಧರಾದವರು. ಇವರಿಗಿಂತಲೂ ವೆಂಕಣ್ಣಯ್ಯನವರು ಎತ್ತರವಾಗಿದ್ದರೂ ಅವರು ಸ್ವಲ್ಪ ಬಾಗುತ್ತಿದ್ದುದರಿಂದ ಇವರ ಎತ್ತರ ಹೊಡೆಯುವಂತೆ ಇರುತ್ತಿತ್ತು. ಗರಡಿಯ ಸಾಧನೆ ಮಾಡಿದ್ದವರು. ಈಚಿನವರೆಗೂ ಭಾರವಾದ ಗದೆಯನ್ನು ಬಳಸಿ ತಿರುಗಿಸುತ್ತಿದ್ದ ಅವರ ಮೈಶಕ್ತಿ ಅಸಾಧಾರಣವಾದ್ದು. ಅವರ ನಿಲವು ಹಿಂದೆ ಒಂದು ಸಲ ಕೈಲಾಸಂ ತನ್ನೆದುರಿಗೆ ನಿಂತ ಅಮೆಚ್ಯೂರ್ ಡ್ರಮಾಟಿಕ್ ಅಸೋಸಿಯೇಷನ್ನಿನ ಕಾರ್ಯದರ್ಶಿ ಬಿ. ಶ್ರೀನಿವಾಸ ಅಯ್ಯಂಗಾರ್ಯರನ್ನು ಕುರಿತು ತನಗೂ ಅವರಿಗೂ ಹೋಲಿಸಿಕೊಂಡು 'The long and the short'ಎಂದಂತೆ. ನನ್ನೆದುರಿಗೆ ನಿಂತ ಅವರ ಎದುರಿಗೆ short ನಾನು, long ಅವರು. ಅವರ ಭುಜದ ಎತ್ತರಕ್ಕೆ ನನ್ನ ತಲೆ ಬರುತ್ತದೆಯೊ ಇಲ್ಲವೊ ಕಾಣೆ. ಅಷ್ಟೇ ಗಟ್ಟಿಯಾದ ದೇಹ. ಎಷ್ಟು ಅಗಲವಾದ ಧೋತ್ರ ನೆಯ್ದರೂ ಅವರಿಗಾಗಲಿ, ನಮ್ಮ ಬೆಳ್ಳಾವೆ ವೆಂಕಟನಾರಾಯಣಪ್ಪನವರಿಗಾಗಲಿ, ವೆಂಕಣ್ಣಯ್ಯನವರಿಗಾಗಲಿ ಕಾಲಹರಡಿನವರೆಗೆ ಮುಟ್ಟಲಾರದು. ಎಲ್ಲ ರೀತಿಯಲ್ಲಿಯೂ ಅವರ ಎತ್ತರಗಳು ಅಷ್ಟು ಉನ್ನತ; ಪ್ರಶಸ್ತ. ಗೊಮ್ಮಟನ ವಿಗ್ರಹದಂತೆ ಖಚಿತವಾದ ಮೈಕಟ್ಟು, ಮುಖರಚನೆ. ಜಿನನ ದಿಗಂಬರತೆ ಅವರಿಗೆ ಶಕ್ಯವಾಗದ್ದು ಸಂಸ್ಕೃತಿಯ ಅನ್ಯಾಯ, ಅದರೆ ಅಗತ್ಯ, ಸಭ್ಯ. ಕಣ್ಣಲ್ಲಿ ಮೊದಲಿಂದಲೂ ಸ್ವಲ್ಪ ಕೆಂಪು ,ಸಣ್ಣಗೆ ಸುಳಿಯುತ್ತಿರುವುದು. ಅವರ ಧ್ವನಿ ಕೂಡ ಆ ಆಕೃತಿಗೆ, ಮೈಕಟ್ಟಿಗೆ ತಕ್ಕಂಥದು. ಅವರು ಅಸಮಾಧಾನದಲ್ಲಿ ನುಡಿದರೆ ಯಾರಿಗೂ ಭಯ ಬರಬೇಕು. ಪರುಷವೆಂದಲ್ಲ; ಕರ್ಕಶವೆಂದಲ್ಲ; 'ದುಂದುಭಿಗಭೀರ' ಎಂಬಂತೆ; ಸ್ವಲ್ಪ ಗಡುಸೇನೊ. ಅವರ ತಲೆಯ ಮೇಲೆ ರುಮಾಲಿದ್ದರೆ ಆ ಮಹೋನ್ನತಿಯ ಪತಾಕೆಯನ್ನು ನೋಡಿ ನಾವು ಮನಸ್ಸಿನಲ್ಲಿಯೇ ಕಾಣಿಕೆ ಸಲ್ಲಿಸಿಕೊಳ್ಳುತ್ತಿದ್ದೆವು, ಹುಡುಗರಾಗಿದ್ದಾಗ. ಇಂಗ್ಲಂಡಲ್ಲಿ ಅವರಿಗೆ ಮುಚ್ಚುಕೊರಲಿನ ಕೋಟು ಹೊಲಿಯಬೇಕಾದಾಗ ಕಾಪ್ಸ್ ಕೋಟು ಎನ್ನಬೇಕಾಯಿತಂತೆ! ಅವರು ಬೇಗ ನನ್ನನ್ನು ಸೌಜನ್ಯದಿಂದ ಮೈತ್ರಿಯಿಂದ ಕಂಡರಾದುದರಿಂದ ಅದು ನನ್ನ ರಕ್ಷೆಯಾಯಿತು.

ಸ್ನೇಹಬಂಧದಲ್ಲಿ ಇನ್ನಷ್ಟು ನನಗೂ ಅವರಿಗೂ ಸಾಮೀಪ್ಯ ಸಿಕ್ಕಿತು. ಬೆಂಗಳೂರಿನ ಆರ್ಕಾಟ್ ನಾರಾಯಣಾಸ್ವಾಮಿ ಮೊದಲಿಯಾರ್ ಹೈಸ್ಕೂಲಿನಲ್ಲಿ ಮುಖ್ಯೋಪಾಧ್ಯಾಯರಾಗಿದ್ದು, ಅಲ್ಲಿಂದ ಮೈಸೂರು ಒನುಮಯ್ಯ ಹೈಸ್ಕೂಲಿಗೆ ಮುಖ್ಯೋಪಾಧ್ಯಾಯರಾಗಿದ್ದ ಜಿ. ರಂಗಣ್ಣನವರು ಅವರ ಮಾವಂದಿರು. ರಂಗಣ್ಣನವರು ದೈವಭಕ್ತಿಗೂ ಆತಿಥ್ಯಕ್ಕೂ ದಾನಕ್ಕೂ ಯಥೇಚ್ಛವಾಗಿ ಊಟೋಪಚಾರವನ್ನು ಮಾಡಿಸುವುದಕ್ಕೂ ಪ್ರಖ್ಯಾತರಾದವರು. ಎಂದೇ ಆಗಲಿ ಅವರು ಗಟ್ಟಿಯಾಗಿ ಮಾತನಾಡಿದುದನ್ನು ನಾನು ಕೇಳಿಲ್ಲ. ಒಳ್ಳೆಯ ಉಪಾಧ್ಯಾಯರೂ ದಕ್ಷ ಮೇಲಧಿಕಾರಿಗಳೂ ಆಗಿದ್ದುದರ ಜೊತೆಗೆ ಅವರು ಒಳ್ಳೆಯ ಜೋಯಿಸರಾಗಿದ್ದರು. ಅವರ ಮಕ್ಕಳು ಇಂಗ್ಲಿಷ್ ಎಂ.ಎ. ಪಾಸುಮಾಡಿ ಕನ್ನಡ ವಿಷಯದಲ್ಲಿ ಶ್ರದ್ಧಾಳುಗಳಾಗಿ, ಮೈಸೂರಿನ ವಯಸ್ಕರ ವಿದ್ಯಾಶಿಕ್ಷಣ ಪ್ರಚಾರದ ಆರಂಭಕಾಲದಲ್ಲಿ ನನ್ನ ಇತರ ಗೆಳೆಯರೊಡನೆ ದುಡಿದ ಜಿ. ರಂಗಸ್ವಾಮಿ. ನಮ್ಮ ವಿದ್ಯಾ ಇಲಾಖೆಯಲ್ಲಿ ಅವರೂ ಮುಖ್ಯೋಪಾಧ್ಯಾಯರಾಗಿ, ಡಿಸ್ಟ್ರಿಕ್ಟ್ ಎಜುಕೇಷನ್ ಆಫೀಸರಾಗಿ (D. E. O) ಹೆಸರು ಪಡೆದಿದ್ದವರು. ತುಂಬಾ ಆಚಾರವಂತರು. ಆದರೂ ಮನಸ್ಸಿನ ವಿಶಾಲತೆಯಲ್ಲಿ, ಮೃದುತೆಯಲ್ಲಿ ತಂದೆಯ ಹಾಗೇ. ಇನ್ನೂ ಅದನ್ನು ಮುಂದುವರಿಸುವ ಸ್ವಭಾವದವರು. ಇಬ್ಬರು ಹೆಣ್ಣುಮಕ್ಕಳಲ್ಲಿ ದೊಡ್ಡವರನ್ನು ನರಸಿಂಹಯ್ಯನವರಿಗೆ, ಚಿಕ್ಕವರನ್ನು ನನ್ನ ವಿಶ್ವವಿದ್ಯಾನಿಲಯದ ಇಂಗ್ಲಿಷ್ ಇಲಾಖೆಯಲ್ಲಿ ಉಪನ್ಯಾಸಕರಾಗಿ ನನಗೆ ಬಹು ಆಪ್ತರಾದ ಇನ್ನೊಬ್ಬ ಸ್ನೇಹಿತರು ಎಸ್. ಮಂಜನಾಥ ಅವರಿಗೆ ಕೊಟ್ಟಿದ್ದರು. ಇವರ ಉಪಕಾರ, ಉಪಚಾರ ನನ್ನ ನೆನಪಿನಲ್ಲಿ ಆಳವಾಗಿ ಸವಿಯಾಗಿ ಪೋಷಕವಾಗಿ ಉಳಿದಿದೆ. ಎಂದರೆ, ನರಸಿಂಹಯ್ಯನವರ ಸಂಬಂಧದಲ್ಲಿ ಅವರ ಸ್ವಂತ ಗುಣಯೋಗ್ಯತೆಗಳ ಜೊತೆಗೆ ಈ ನೆನಪುಗಳೂ ಸ್ನೇಹಬಾಂಧವ್ಯಗಳೂ ಕೂಡಿಕೊಂಡು ಮೇಲೋಗರವಾಗುತ್ತದೆ. ನರಸಿಂಹಯ್ಯನವರು ಮೈಸೂರಿನ ಟ್ರೈನಿಂಗ್ ಕಾಲೇಜಲ್ಲಿ ಉಪನ್ಯಾಸಕರಾಗಿದ್ದರು. ವಿದ್ಯಾ ಇಲಾಖೆಯ Text Book Committeeಯ ಕಾರ್ಯದರ್ಶಿಗಳಾಗಿಯೂ ಬಹುಕಾಲ ಕೆಲಸ ಮಾಡಿದರು.* ಕಡೆಯ ಕಾಲದಲ್ಲಿ ವಿಶ್ವವಿದ್ಯಾನಿಲಯಕ್ಕೆ ಪುಸ್ತಕ ಭಂಡಾರದ ಮುಖ್ಯಾಧಿಕಾರಿಯಾಗಿ, ಅದರೊಡನೆ ಸಲ್ಲುತ್ತಿದ್ದ ಹೆಚ್ಚು ಜನಕ್ಕೆ ತಿಳಿಯದ ಅಸಿಸ್ಟೆಂಟ್ ರಿಜಿಸ್ಟ್ರಾರ್ ಆಗಿ, ಎನ್. ಎಸ್. ಸುಬ್ಬರಾಯರ ಕಾಲದಲ್ಲಿ ಕೆಲಸ ಮಾಡಿದವರು. ಡಿ.ಪಿ.ಐ. (Director of Public Instruction) ಮತ್ತು ವೈಸ್‌ಛಾನ್ಸೆಲರ್ ಎರಡೂ ಆಗಿದ್ದ ಇಬ್ಬರು ಪರಸ್ಪರ ವಿದ್ಯಶರಾದ ಅಧಿಕಾರಿಗಳಿಗೆ–ಎನ್. ಎಸ್. ಸುಬ್ಬರಾಯರು ಮತ್ತು ಸುಲ್ತಾನ್ ಮೊಹಿಯುದ್ದೀನ್– ಬೇಕಾದವರಾಗಿ, ಇಬ್ಬರಿಂದಲೂ ಪ್ರೀತಿವಿಶ್ವಾಸ ಸಂಪಾದಿಸಿದವರು. ಕೆಲಸದಲ್ಲಿ ದಕ್ಷತೆ ಇಲ್ಲದಿದ್ದರೆ ಇದು ಶಕ್ಯವಾಗುತ್ತಿರಲಿಲ್ಲ.

ಲೈಬ್ರರಿಗೆ ಬರುವ ಮುಂಚೆ ಅವರಿಗೆ ವಿಲಾಯತಿಗೆ ಹೋಗುವ ಅವಕಾಶ ದೊರೆಯಿತು. ಅವರು ಲಂಡನ್ ಸ್ಕೂಲ್ ಆಫ್ ಓರಿಯಂಟಲ್ ಸ್ಟಡೀಸಲ್ಲಿ ಕನ್ನಡ ಭಾಷೆಯ ವ್ಯಾಸಂಗ ಮಾಡುವ ಅವಕಾಶವನ್ನು ಪಡೆದವರು. ಪ್ರೊಫೆಸರ್ ಆರ್. ಎಲ್.

---

* ಅವರು ಈ ಕಮಿಟಿಯ ಸೆಕ್ರೆಟರಿ ಆಗಿದ್ದಾಗ ಒಂದೆರಡು ಕೆಲಸಗಳನ್ನು ನನಗೆ ವಹಿಸಿದ್ದರು.

ಟರ್ನರ್ ತೀರಿ ಇವೊತ್ತಿಗೂ ದೊಡ್ಡದು.* ಅವರು ಸೂರಾರು ಜನ ಪ್ರಾಚ್ಯವಿದ್ಯಾವ್ಯಾಸಂಗ ಮಾಡಿದವರಿಗೆ ಪ್ರೀತಿಯ ಗುರುಗಳಾಗಿದ್ದರಂತೆ. ಇಲ್ಲಿಂದ ಹೋದ ಇತ್ತ ನರಸಿಂಹಯ್ಯನವರಿಗೂ ಅತ್ತ ಅದ್ಯ ರಂಗಾಚಾರ್ಯರಿಗೂ (ಆಗ ಆರ್. ವಿ. ಜಾಗಿರದಾರ್) ಇಬ್ಬರಿಗೂ ವಿಶ್ವಾಸ ತೋರಿದ ಪ್ರಾಚಾರ್ಯರು. ನೇಪಾಳ ಭಾಷೆಯ ಒಂದು ಬೃಹತ್ ಶಬ್ದಾರ್ಥಕೋಶವನ್ನು ಬರೆದಿದ್ದಾರೆ. ವ್ಯಾಕರಣ, ಭಾಷಾಶಾಸ್ತ್ರದಲ್ಲಿ ನಿಷ್ಣಾತರು. Some Observations in Sanskrit Grammar ಎಂಬ ಬಹು ಬೆಲೆಯುಳ್ಳ ಪುಸ್ತಕವನ್ನು ಬರೆದ ಸಿದ್ಧೇಶ್ವರವರ್ಮರ ಗುರುಗಳು. ಇಂಥ ವಿದ್ವಾಶ್ರಯದಲ್ಲಿ ನರಸಿಂಹಯ್ಯನವರು ವ್ಯಾಸಂಗ ಮಾಡುವ ಅವಕಾಶ ಪಡೆದು ದಕ್ಷಿಣ ದೇಶದವರು ಮಾತ್ರ ಸ್ಪಷ್ಟವಾಗಿ, ನಿಷ್ಕೃಷ್ಟವಾಗಿ ಉಚ್ಚಾರ ಮಾಡಬಲ್ಲಂತೆ ವೇದದ ಮಂತ್ರಭಾಗಗಳನ್ನೂ ಗದ್ಯಪದ್ಯಗಳನ್ನೂ ಓದಿ, ವಾಚೋವಿಧೇಯವಾಗಿದ್ದುದನ್ನು ಚೆನ್ನಾಗಿ ನುಡಿದು, ಅವರಿಗೆ ಪ್ರಿಯರಾದರು. ಅದು ಗುರು-ಶಿಷ್ಯ ಸಂಬಂಧ. ಕನ್ನಡಕ್ಕೆ ಆ ಸಂಬಂಧ, ಆ ಅವಕಾಶ ಒದಗಿಸಿದುದು ದೊಡ್ಡ ದಾನ. ಎಂಟನೆಯ ಶತಮಾನದವರೆಗೂ ಶಾಸನಾದಿಗಳಲ್ಲಿ ದೊರಕುವ ಕನ್ನಡದ ಗದ್ಯಪದ್ಯ ರಚನಾಸ್ವರೂಪ ಎಂಬ ವಿಷಯವನ್ನು ಆರಿಸಿಕೊಂಡು ಮೊಟ್ಟಮೊದಲ ಬಾರಿಗೆ ನಮ್ಮ ಭಾಷೆಯ ಮತ್ತು ವ್ಯಾಕರಣದ ಸಂಪೂರ್ಣ ಲಕ್ಷಣ ಸ್ವರೂಪವನ್ನು ಅಭ್ಯಾಸ ಮಾಡಿ, ಯಾವುದನ್ನು ಇಂದು Descriptive Grammar – ವಿವರಣಾತ್ಮಕ ವ್ಯಾಕರಣ–ಎನ್ನುತ್ತೇವೆಯೊ ಅದಕ್ಕೆ ತಳಹದಿ ಹಾಕಿದರು. ಮಾತುಗಳ ಪಟ್ಟಿ, ಶಬ್ದರಚನೆ, ಪದದ ಮೂಲಾಂಶ, ಉಪಸರ್ಗ ಪ್ರತ್ಯಯಗಳು, ಶಬ್ದದ ಅರ್ಥ, ಧ್ವನಿ, ಅಕ್ಷರಗಳಲ್ಲಿ ಮಾರ್ಪಾಡು, ಅವು ಉಂಟಾದ ಕಾಲವನ್ನು ತೋರಿಸುವ ಪೌರ್ವಾಪರ್ಯ, ಇವೆಲ್ಲಾ ವ್ಯಾಕರಣ ಪ್ರಕ್ರಿಯೆ, ವಾಕ್ಯ ರಚನೆಯಲ್ಲಿ ಅನ್ವಯಕ್ರಮ (syntax), ಶಬ್ದ ಮತ್ತು ಅರ್ಥಗಳ ವಿನ್ಯಾಸ – ಇವನ್ನು ಕುರಿತಂತೆ ಪ್ರೌಢ ಪ್ರಬಂಧವನ್ನು ರಚಿಸಿ ಅಲ್ಲಿಂದ ಡಾಕ್ಟರೇಟ್ ಪದವಿ ಪಡೆದು ಬಂದರು† ಇವರ ಪ್ರಬಂಧದಲ್ಲಿರುವ ವಸ್ತುಸಂಗ್ರಹ, ದೃಷ್ಟಿಪ್ರಖರತೆ, ಪರಿಶೀಲನೆಯ ಕಟ್ಟುನಿಟ್ಟು ಟರ್ನರ್ ಅಂಥವರು ಎಂಥ ಉತ್ತಮ ವ್ಯಾಸಂಗ ನಿರ್ದೇಶಕರಾಗಿದ್ದರು ಎಂಬುದನ್ನು ತಿಳಿಸುತ್ತದೆ. ಮುಂದಿನ ಕಾಲದ ಶಬ್ದಾವತಾರವನ್ನು ಹಾಗೆಯೇ ಮುಂದುವರಿಸಿ ನರಸಿಂಹಯ್ಯನವರು ಕೊಟ್ಟಿದ್ದಿದ್ದರೆ ಇವೊತ್ತು Comparative Philology, Linguistics ಎಂಬ ಯಾವಯಾವುದನ್ನು ಬೆಳೆಸಲು ಯತ್ನಿಸುತ್ತಿದ್ದೇವೊ ಅದಕ್ಕೆಲ್ಲ ಕಡಮೆಯೆಂದರೆ ಗ್ರೀಕ್ಸ್ಕೃತ, ಶಾಸನಸ್ಕೃತ ಸಾಹಿತ್ಯದಲ್ಲಿ ದೃಢವಾದ ತಳಹದಿ ಒದಗಿರುತ್ತಿತ್ತು. ಅದು ನಡೆಯಲಿಲ್ಲ. ಆಡುವ ಮಾತು ಮೂಲವಾದ್ದರಿಂದ ಆ ಬಗೆಗೆ ಸಾಗಿ ಶಾಸ್ತ್ರಲಕ್ಷಣಗಳನ್ನೂ ರೂಪಾಂತರಗಳನ್ನೂ ಹೆಚ್ಚು ವಿಚಕ್ಷಣೆಯಿಂದ ನೇರವಾಗಿ ಕನ್ನಡಕ್ಕೇ ಮಾಡಬಹುದಾಗಿತ್ತು.

---

* ೧೯೫೬ರಲ್ಲಿ ಆಕಾಶವಾಣಿ ಸಾಹಿತ್ಯ ಸಮಾರೋಪ ಸಮಯದಲ್ಲಿ ನಿಹರು ತಮ್ಮ ಮನೆಯ ಕೈತೋಟದಲ್ಲಿ ಕೊಟ್ಟ ಆತಿಥ್ಯಕ್ಕೆ ಅವರು ದಯಮಾಡಿಸಿದ್ದರು.

† ಆ ಕಾರ್ಯವನ್ನು ಮುಂದುವರಿಸಿಯೇ ಇಂದು ಇಪ್ಪತ್ತೈದು ಶತಮಾನಗಳ ಅಂಥ ಶಬ್ದಶಾಸ್ತ್ರದ ಅಭ್ಯಾಸವನ್ನು ಡಾ. ಜಿ. ಎಸ್. ಗಾಯಿ ಮುಂದುವರಿಸಿರುವುದು. ಈ ಕೆಲಸ ನಡೆಯುತ್ತಿದೆ.

ಅವರಿಗೆ ತಮಿಳು ಗೊತ್ತಿದ್ದುದರಿಂದಲೂ ತಮಿಳು ಭಾಷೆಯ ವ್ಯಾಸಂಗವನ್ನು ಕನ್ನಡ ಭಾಷೆಯ ಮೂಲ ರೂಪಗಳ ಜೊತೆಗೆ ಇಂಗ್ಲಂಡಲ್ಲಿ ಮಾಡಲು ಶಕ್ಯವಾದುದರಿಂದಲೂ ತಮಿಳು ವ್ಯಾಕರಣವನ್ನು ಅವರು ಅಭ್ಯಾಸಮಾಡಿದ್ದಾರೆ. ಅವರು ಬರೆಯುವುದು ಕಡಮೆ. ಅವರಿಂದ ಯಾವುದನ್ನಾದರೂ ಕುರಿತು ಮಾತನಾಡಿಸುವುದೂ ಬರೆಸುವುದೂ ಅಶ್ವಮೇಧ, ರಾಜಸೂಯ ಎರಡನ್ನೂ ಮಾಡಿಸಿದಂತೆ. ಎರಡು-ಮೂರು ವರ್ಷ ಪ್ರಯತ್ನಪಟ್ಟು ತಮಿಳಿನ ವ್ಯಾಕರಣವನ್ನು ಕುರಿತು ನಮಗೆ ಅಷ್ಟು ತಿಳಿವಳಿಕೆ ಕೊಡಿ ಎಂದೊಪ್ಪಿಸಿ, ಪ್ರವೇಶಕವಾಗಿ ಒಂದು ಲೇಖನವನ್ನು ಪ್ರಬುದ್ಧ ಕರ್ಣಾಟಕಕ್ಕೆ ನಾನು ದೊರಕಿಸಿಕೊಳ್ಳಲು ಶಕ್ಯವಾಯಿತು. ಪೇರಗತ್ತಿಯಂ, ತೊಲ್ಕಾಪ್ಪಿಯಂ ಮತ್ತು ವೀರಚೋಳಿಯಂಗಳ ವಿಷಯವನ್ನು ಕುರಿತು ಬರೆಯುತ್ತೇನೆಂದು ಅಲ್ಲಿ ಪ್ರತಿಜ್ಞೆ ಇದೆ. ಈ ಮೂವತ್ತು ವರ್ಷಗಳಲ್ಲಿ ಅದು ನೆರವೇರಿಲ್ಲ. ಅದಕ್ಕೆ ಅವರ ಸ್ವಭಾವ ಪ್ರವೃತ್ತಿಗಳಲ್ಲಿನ ಹಿಮ್ಮೆಟ್ಟು ಎಷ್ಟು ಕಾರಣವೊ ಬಹುಶಃ ಇತರರು ಆ ಬಗೆಗೆ ಅವರಿಂದ ಅದನ್ನು ಬರೆಸಿಕೊಳ್ಳಲಾಗದುದೂ ಅಷ್ಟೇ ಕಾರಣವಾಗಿರಬಲ್ಲದು. ಕೆಲವು ಸ್ವಭಾವಗಳನ್ನು ನಾವು ಅನುಸರಿಸಿ ಕೆಲಸ ಮಾಡಿಸಿಕೊಳ್ಳಬೇಕಾಗುತ್ತದೆ. ಅವರು ಒರಿಜಿನಲ್ಸ್. ಅವರನ್ನು ಇತರರು ಹೋಲಬೇಕೇ ಹೊರತು ಅವರು ಯಾರನ್ನೂ ಹೋಲುವುದಿಲ್ಲ. ಅದಕ್ಕೆ ತಾಳ್ಮೆ ಬೇಕು; ವಿಶ್ವಾಸ ಬೇಕು. ಒಲಿಸಿಕೊಂಡ ಹೊರತು ಅಲ್ಲಿ ಪ್ರಯೋಜನ ದೊರಕುವುದಿಲ್ಲ. ದೈವಸೃಷ್ಟಿಯಲ್ಲಿ ಅಂಥ ಗ್ರಂಥಿಗಳಿವೆ. ಒಲಿಸಿಕೊಳ್ಳುವ ಆವರಣ ಆಮೇಲೆ ಮೈಸೂರಲ್ಲಿ ಹುಟ್ಟಿಕೊಳ್ಳಲಿಲ್ಲ. ಅವರಿಗೆ ಅಪ್ರಿಯವಾದ ಆವರಣ ಬೆಳೆದುದು ದ್ರವ ಘನಿಸಿ ಪಾಷಾಣವಾಯಿತು. ಫಲಪರಿಣಾಮ: ನಮಗೆ ತಮಿಳಿನ ವ್ಯಾಕರಣಗಳ ರೀತಿ ವಿಧಾನ ಇನ್ನೂವರೆಗೂ ಬರೆದು ಸಿಕ್ಕದ್ದು.

ಈ ನಡುವೆ 'ಶ್ರೀ' ಅವರಿಂದ ಈ ಕಾರ್ಯವಾಗುತ್ತದೆಂದು ನಂಬಿ ಮೂರು-ನಾಲ್ಕು ವರ್ಷ ಯತ್ನಿಸಿದೆ. ಅವರು ಮಾಡಿದ್ದಿದ್ದರೆ ಆ ಬಗೆಗೆ ಸಾರಭೂತವಾದ ಸೃಷ್ಟಿಚೈತನ್ಯವುಳ್ಳ ಒಂದು ಬೆಳಸು ದೊರಕುತ್ತಿತ್ತು. ಇನ್ನೇನು ಖಂಡಿತವಾಗಿ ಎಂಟು-ಹತ್ತು ದಿನಗಳಲ್ಲಿ ಈ ಕೆಲಸ ಮಾಡುತ್ತೇನೆ ಎಂದು ತಮಿಳಿನ ಮೂರು- ಕನ್ನಡದ ಮೂರು ವ್ಯಾಕರಣಗ್ರಂಥಗಳನ್ನೂ ಕಾಗದ ಪೆನ್ಸಿಲ್‌ಗಳನ್ನೂ ಎದುರಿಗೇ ಇಟ್ಟುಕೊಂಡಿದ್ದವರು, ನಾಡಿನ ದುರ್ದೆಸೆಯಿಂದ ಯಾರೊ ಏನೊ ಕೊಂಕು ಮಾತಾಡಿದುದರಿಂದ ಆ ಕೆಲಸಕ್ಕೆ ವಿಮುಖರಾದರು. ಇತ್ತೀಚೆಗೆ ನಮ್ಮ ಕೆ. ವಿ. ರಾಘವಾಚಾರ್ಯರು ಈ ಕೆಲಸ ಮಾಡಿಕೊಡುತ್ತಾರೆಂದು ಕಾದು ಕಾದು ನಿರೀಕ್ಷಿಸಿ ಅವರೂ ಅದನ್ನು ಮುಂದೆ ತಳ್ಳಿದರು. ಈಗಂತೂ ನಮ್ಮ ದುರ್ದೈವದಿಂದ ಅವರು ನಮ್ಮ ಪಾಲಿಗೆ ಇಲ್ಲವಾಗಿದ್ದಾರೆ. ನಷ್ಟ ಕನ್ನಡದ್ದು. ಕನ್ನಡದ ಸಹಜವಾದ ಬೆಳವಣಿಗೆಗೆ ಇವರು ನೆರವಾಗಬಹುದಾಗಿದ್ದರೆ ಸೋದರ ಭಾಷೆಯ ವ್ಯಾಕರಣ ಸಂಪತ್ತು, ಜಾಯಮಾನ, ಸೂತ್ರನೀತಿ, ಪ್ರಯೋಗ ಭಾಗ ದೊರೆಯುವಂತಾಗುತ್ತಿತ್ತು. ಇದು ದೊರಕಿದ್ದಿದ್ದರೆ ಭಾಷಾ ವ್ಯಾಸಂಗದಲ್ಲಿ ಬೇಗ ಮುಂದಿನ ಹೆಜ್ಜೆಯನ್ನಿಡುವುದು ಹೆಚ್ಚು ಸುಲಭವಾಗುತ್ತಿತ್ತು ಎಂಬ ಕಾರಣದಿಂದ ಈ ಮಾತನ್ನಾಡಿದೆ. ಕನ್ನಡ ಭಾಷೆಯ ನೆಲಸಿನ ಇನ್ನೊಂದು ಪರಿಚಯ ಆಗ ಆಗುತ್ತಿತ್ತು.

ಮೈಸೂರು ಯೂನಿವರ್ಸಿಟಿ ಲೈಬ್ರರಿಯ ಮೇಲಧಿಕಾರಿಯಾಗಿ ಅವರು ಎಸ್. ನರಸಿಂಹಮೂರ್ತಿಗಳ ತರುವಾಯದ ಕಾಲದಲ್ಲಿ ಬಂದರು. ಮೊದಲಿಂದ ಆ ಪುಸ್ತಕ ಭಂಡಾರದಲ್ಲಿ ಇರುತ್ತಿದ್ದ ತೆರೆದ ಪುಸ್ತಕ ಬೀರುಗಳ ಸೌಕರ್ಯವನ್ನು ನಡಸಿದರು. ಪುಸ್ತಕಗಳು ಎಲ್ಲರಿಗೂ ದೊರಕುವಂತೆಯೂ ಯಾರೂ ಅವನ್ನು ಕಿಡಿಸದಂತೆ, ಕದಿಯದಂತೆ ಬೀರುಮನೆ ಕೊಠಡಿಗಳಲ್ಲಿ ಮತ್ತು ಮೇಲುಗಡೆ ಮಹಡಿಯಲ್ಲಿ ಮೇಲ್ವಿಚಾರಣೆ, ಕಣ್ಗಾವಲು ನಡೆಯುವಂತೆಯೂ ವ್ಯವಸ್ಥೆ ಮಾಡಿದರು. ನರಸಿಂಹಮೂರ್ತಿಗಳು 'ಕರಂ ಸಾದು'; ಇವರದು ವಜ್ರನಿಷ್ಠೆ, ಯಮನ ಅಂಕೆ....ಮೊದಲಿನಿಂದ ನಾನು ಮೈಸೂರಲ್ಲಿರುವಾಗಲೆಲ್ಲ ಆ ಪುಸ್ತಕ ಭಂಡಾರದಿಂದ ದೊರೆಯಬಹುದಾದ ಎಲ್ಲ ಸೌಕರ್ಯಗಳನ್ನೂ ಮೂರ್ತಿಯವರು ಹಿರಿಯರಾಗಿ ಹೇಗೆ ನಡಸಿಕೊಟ್ಟರೊ ಗೆಳೆಯರಾಗಿ ಇವರೂ ನನಗೆ ನಡಸಿಕೊಟ್ಟರು. ಈ ಉಪಕಾರ ತುಂಬಾ ಅತಿಶಯವಾದ್ದು. ಇರುವ ಪುಸ್ತಕಗಳ ಓದಿಗೆ ಅವಕಾಶ ಮಾಡಿಕೊಡುವುದರ ಜೊತೆಗೆ ಹೊಸದಾಗಿ ಬೇಕಾದ ಪುಸ್ತಕಗಳಿಗೆ ನೆರವನ್ನೊದಗಿಸಿಕೊಂಡು ತರಿಸಿಕೊಡುತ್ತಿದ್ದರು, ಅಥವಾ ಬೇರೆ ಪುಸ್ತಕ ಭಂಡಾರಗಳಿಂದ ತರಿಸಿಕೊಡಬಲ್ಲವರಾಗಿದ್ದರು. ಈ ಪದ್ಧತಿ ಯೂರೋಪಿನಲ್ಲಿದೆ. ಈಗಲೂ ದೊಡ್ಡ ಭಂಡಾರಗಳ ಅಧಿಕಾರಿಗಳು ತಮ್ಮಲ್ಲಿ ಇಲ್ಲದ ಪುಸ್ತಕಗಳನ್ನು ತಮ್ಮ ನಾಡಿನ ಬೇರೆ ಭಂಡಾರಗಳಲ್ಲಿವೆ, ಬೇರೆ ದೇಶಗಳ ಇಂಥಿಂಥ ದೊಡ್ಡ ಲೈಬ್ರರಿಗಳಲ್ಲಿ ಮಾತ್ರ ಇವೆ ಎಂದು ತಿಳಿಸಿ, ಬೇಕಾದವರಿಗೆ ಅಲ್ಲಿಂದ ಎರವಲು ತರಿಸಿಕೊಡುವ ಏರ್ಪಾಡು ಮಾಡುತ್ತಾರೆ. ಆ ಪುಸ್ತಕಗಳಲ್ಲಿರುವ ತಮಗೆ ಬೇಕಾದ ಭಾಗಗಳನ್ನು ಬೆರಳಚ್ಚು ಮಾಡಿಸಿಯೊ ಫೋಟೊಸ್ಟಾಟ್ ಮಾಡಿಸಿಯೊ –ತಾವೇ ಇಂದು ಮೈಕ್ರೋಫಿಲ್ಮ್ ಮಾಡಿಟ್ಟುಕೊಳ್ಳುತ್ತಾರೆ ಕೂಡ –ತರಿಸಿಕೊಡುವ ಏರ್ಪಾಡುಮಾಡುತ್ತಾರೆ. ನಮ್ಮದು ಬಡದೇಶ. ಇಂಥ ಮಂದಿರಗಳಿಗೆ ಹಣದ ಮತ್ತು ಜನದ ಒದಗಣೆ ಕಡಮೆ; ಅಂಥದೆಲ್ಲವನ್ನೂ ಮಾಡುವುದಕ್ಕಾಗುವುದಿಲ್ಲ. ಆದರೂ ಭಂಡಾರದ ಮೇಲಧಿಕಾರಿ ಸುಮುಖರಾಗಿ, ಸುಲಭ ಮೈತ್ರಿಯುತರಾಗಿದ್ದರೆ ಇಂಥ ಕೆಲಸ ಶ್ರದ್ಧಾಳು ವಿದ್ಯಾರ್ಥಿಗಳಿಗೆ ಉಪಯುಕ್ತವಾಗಬಲ್ಲದು. ಪ್ರತಿಯೊಂದು ಜ್ಞಾನ ವಿಜ್ಞಾನದ ಭಾಗ, ಶಾಖೆಗೂ ಒಬ್ಬ ತಜ್ಞರನ್ನು ನೇಮಿಸಿ, ಆ ಭಾಗಕ್ಕೆ ಸಂಬಂಧಿಸಿದ ನಿಯತಕಾಲಿಕೆಗಳನ್ನೆಲ್ಲ ಅಲ್ಲಿಯೇ ಸಂಗ್ರಹಿಸಿ, ಅಲ್ಲಿ ತಿಂಗಳು ತಿಂಗಳಿಗೆ ಅಥವಾ ತ್ರೈಮಾಸಿಕವಾಗಿ ಬಂದ ಬರಹಗಳ ಪಟ್ಟಿಯನ್ನೂ ಅದರ ಸಂಗ್ರಹಸೂಚಿಕೆಗಳನ್ನೂ ಬರಸಿ, ವಿದ್ಯಾರ್ಥಿಗಳಿಗೆ ನೆರವಾಗುವ ವೈಖರಿ ನಮ್ಮಲ್ಲಿಯೂ ವಿಚಕ್ಷಣೆಯಿಂದ ಬೆಳೆಯಬೇಕು. ಇಂಥ ಪುಸ್ತಕದಿಂದ ನೀವು ಯಾವ ಭಾಗಕ್ಕೆ ಸಂಬಂಧಿಸಿದ ತಿಳಿವಳಿಕೆ ನಿರೀಕ್ಷಿಸುತ್ತಿದ್ದೀರಿ ಎಂದು ಕೇಳಿ, ಇದರಲ್ಲಿ ಆ ಭಾಗ ಇಲ್ಲ; ಇನ್ನೊಂದರಲ್ಲಿ, ಮತ್ತೊಂದರಲ್ಲಿ ಈ ವಿಷಯದ ಪರಿಚಯ ಚೆನ್ನಾಗಿ ದೊರೆಯುತ್ತದೆ ಎಂದು ತಿಳಿವಳಿಕೆ ಕೊಟ್ಟು ನಿರ್ದೇಶಿಸುವ ತಜ್ಞರು ಆಯಾ ಶಾಖೆಯ ಉಪನಿರ್ದೇಶಕರಾಗಿ ನಿಯಮಿತರಾದರೆ ವ್ಯಾಸಂಗಕ್ಕೆ ಉಪಕಾರ. ಇಂಥವೆಲ್ಲ ನಾಳೆ ನಮ್ಮ ದೇಶಕ್ಕೆ ಉಂಟುಮಾಡಿಕೊಡುವ ಪುಣ್ಯ ವಿದ್ಯಾ ಇಲಾಖೆಗಳ, ವಿಶ್ವವಿದ್ಯಾನಿಲಯಗಳ, ಖಾಸಗಿ ಭಂಡಾರಗಳದಾಗಬೇಕು. ಅದು ಹೇಗೇ ಇರಲಿ, ನರಸಿಂಹಯ್ಯನವರು ಅಧಿಕಾರದಲ್ಲಿ ನಡೆಯುವವರೆಗೂ ನನಗೆ ಆ ಭಂಡಾರದ ಧಾರಾಳ ಪ್ರಯೋಜನ ದೊರೆಯಿತು. ಪುನಃ

ನಾನು ೧೯೪೩ ರಿಂದ ೧೯೪೮ರವರೆಗೂ ಮೈಸೂರಲ್ಲಿದ್ದಾಗ ನನ್ನ ಗೆಳೆಯರೂ ಸತೀರ್ಥ್ಯರೂ ಆದ ಶ್ರೀ ಜಿ. ಹನುಮಂತರಾಯರು ಭಂಡಾರದ ವ್ಯವಸ್ಥೆಯನ್ನು ನೋಡಿಕೊಳ್ಳುತ್ತಿದ್ದರು. ಅವರ ಔದಾರ್ಯವೂ ಸ್ನೇಹಪರತೆಯೂ ನನಗೆ ಇದೇ ಬಗೆಯ ಉಪಕಾರವನ್ನು ದೊರಕಿಸಿತು. ಅವರ ಕಾಲದಲ್ಲಿ ನಿಯತಕಾಲಿಕೆಗಳ ಸಂಖ್ಯೆ, ಅವುಗಳ ಪ್ರಕಾಶನ, ಪ್ರಯೋಜನಗಳ ವ್ಯವಸ್ಥೆ ಇನ್ನಷ್ಟು ಅಚ್ಚುಕಟ್ಟಿಗೆ ಬಂದು, ಅದಕ್ಕೇ ಒಂದು ಪ್ರತ್ಯೇಕವಾದ ಕಟ್ಟಡ ಭಾಗ ದೊರಕುವಂತಾಯಿತು. ಅವುಗಳ ವ್ಯವಸ್ಥೆಗೆ ಪ್ರೊ. ಬಿ. ಎಸ್. ಕೇಶವನ್ ನೆರವಿತ್ತರು. ನರಸಿಂಹಯ್ಯನವರ ಜೊತೆಗೆ ಈ ಪುಸ್ತಕ ಋಣದ ನೆನಪು ಬೆರೆತುಕೊಂಡಿದೆಯಾಗಿ ಈ ಸಂಗತಿಯನ್ನು ತಿಳಿಸಿದೆ.

ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ವ್ಯಾಸಂಗದ ವಿಭಾಗದಲ್ಲಿ ಕೆಲವು ಕಾಲ ಅವರು ಭಾಷಾ ವಿಜ್ಞಾನದ ಭಾಗಕ್ಕೆ ಗೌರವ ಪ್ರಾಧ್ಯಾಪಕರಾಗಿಯೂ ಕೆಲಸ ಮಾಡಿದರು. ಅಲ್ಲಿನ ಆವರಣ ಅವರಿಗೆ ಏಕೊ ಹೇಗೊ ಅಷ್ಟು ಹಿತವಾಗಿ ಮುಂದುವರಿಯಲಿಲ್ಲವಾಗಿ, ಆ ಸಂಬಂಧ ಎರಡೂ ಕಡೆಯವರಿಗೂ ಸಿಹಿಯಾಗದೆ ಬಹುಶಃ ನರಸಿಂಹಯ್ಯನವರನ್ನು ಕಹಿ ಮಾಡಿತೇನೊ. ಇಂಥುದರಿಂದೆಲ್ಲ ಬಿಡಿಸಿಕೊಂಡು ಅವರು ನಿವೃತ್ತರಾದಾಗ ಅವರಿಗೆ ಒಂಟಿತನ ಬಂತು. ಸ್ವಂತ ವ್ಯಾಸಂಗದ ವಿಸ್ತರಣಕ್ಕೂ ಬೋಧನೆ ನಿರ್ದೇಶನಗಳಿಗೂ ಅವರ ವಿದ್ವತ್ತೆಯ ಪ್ರಯೋಜಕತೆಗೂ ಅವಕಾಶ ದೊರೆಯದಂತೆ ಮಾಡಿತು. ಆದರೆ ಆ ಕಾಲದಲ್ಲಿ ಕನ್ನಡ ಭಾಷೆ ನುಡಿಯಾಗಿ ಜನ ನಾಡಿನ ಬೇರೆ ಬೇರೆ ಕಡೆ ಆಡುವಂತೆ ಸಂಗ್ರಹಿಸಿ, ಅದಕ್ಕೆ ಸಂಬಂಧಪಟ್ಟಂತೆ ನುಡಿಕ್ಷೇತ್ರಗಳ ವ್ಯಾಸಂಗ (Field Study) ನಡೆಯಲು ಏರ್ಪಾಡಾಯಿತು. ಕೆಲವು ವಿದ್ಯಾರ್ಥಿಗಳಿಗೆ ಸರ್ಕಾರ ವೇತನ ಕೊಟ್ಟು ಅದನ್ನು ನಡಸಲು ಅವಕಾಶ ಮಾಡಿಕೊಟ್ಟಿತು. ಅವರು ನಿರ್ದೇಶಿಸುತ್ತಿದ್ದ ಮಾರ್ಗವೂ ಇಲ್ಲಿನ ಆವರಣದಲ್ಲಿ ಬೆಳೆದಿದ್ದ ವಿದ್ಯಾರ್ಥಿಗಳಿಗೂ ಸಹಅಧ್ಯಾಪಕರ ಮನಸ್ಸುಗಳಿಗೂ ಹೊಂದಿಕೆ ಇಲ್ಲದೆ ಹೋಗಿ, ಅಭ್ಯಾಸ ಆಗ್ಗೆ ಅಲ್ಲಿಗೇ ನಿಂತು ಅಂಥ ಕೆಲಸಕ್ಕೆ ಇನ್ನಿಪ್ಪತ್ತು ವರ್ಷ ಕಾಯಬೇಕಾಯಿತು. ಈ ಪ್ರಾದೇಶಿಕ ನುಡಿಗಳ ಲಕ್ಷಣ ವಿಶ್ಲೇಷಣೆಗಳ ಸಂಗ್ರಹಕ್ಕೆ ಈಗಲೂ ಬಹುಶಃ ಕನ್ನಡದ ಉಪಭಾಷೆಗಳ ವ್ಯಾಸಂಗ ಕನ್ನಡ ಮಾತಾಡುವ ಪ್ರದೇಶಗಳಲ್ಲಿ ಬಳಕೆಯಾಗಿರುವ ಶಬ್ದರೂಪ, ಪ್ರಯೋಗ, ಸ್ವರಘಾತ, ನುಡಿಗಟ್ಟಿನ ವ್ಯಾಸಂಗ ಪೂರ್ತಿಯಾಗಿ ನಡೆದಿಲ್ಲವೆನ್ನಿಸಿದೆ. ಇಷ್ಟರಲ್ಲಿ Linguistics ಎಂಬ ಶಾಸ್ತ್ರಮರ್ಯಾದೆ, ರೀತಿ ಹೊಸದಾಗಿ ಬಂದು ಆ ಕೆಲಸಕ್ಕೆ ಮುಂದುವರಿಕೆ ಇಲ್ಲದಂತೆಯೂ ಆಯಿತೇನೊ. ಅಮೆರಿಕದ ನೆರವಿಂದ ಪುಣೆಯಲ್ಲಿ ಭಾಷಾವ್ಯಾಸಂಗ ಶಾಖೆ ತೆರೆದು ಅನುಕೂಲ್ಯ ಆಕರ್ಷಣೆ ದೊರೆತು ಭಾಷಾಜ್ಞಾನ ಬೆಳೆಯಿತು. ಇಂಗ್ಲಿಷ್, ಅಮೆರಿಕನ್, ಯೂರೋಪಿಯನ್ ಪದ್ಧತಿಗಳ ತಾರತಮ್ಯ ವಿವೇಚನೆಗಳ ಜೊತೆಗೆ ಈ ವ್ಯಾಸಂಗ ನಾಳೆಗೆ ನಡೆಯಬೇಕಿದೆ.*

---

* ಈ ಬಗೆಗೆ T.L.S. ಅವರು ಸುಮಾರು ೧೯೭೨ರಲ್ಲಿ ಎರಡು Supplements ಹೊರಡಿಸಿದರು. ಅಲ್ಲಿ Linguistics ಶಾಸ್ತ್ರದ ಯೂರೋಪ್ ಅಮೆರಿಕಾದಲ್ಲಿನ ವ್ಯಾಪಕತೆ ಪ್ರಮಾಣೀಕೃತವಾಗುತ್ತದೆ.

ನರಸಿಂಹಯ್ಯನವರು ವಿದ್ಯಾಭ್ಯಾಸದ ಇಲಾಖೆಯಲ್ಲಿ ಪಠ್ಯಪುಸ್ತಕಗಳ ಶಾಖೆಯ ಕಾರ್ಯದರ್ಶಿಯಾಗಿದ್ದರೆಂದು ಹೇಳಿದೆ. ಆಗ ಕೆಲ ಪುಸ್ತಕಗಳ ಭಾಷಾಂತರಗಳನ್ನು ಬೇರೆ ಬೇರೆ ಜನರಿಂದ ಮಾಡಿಸುವ ವಾಡಿಕೆಯಿತ್ತು. ಲಾಂಗ್‌ಮನ್ಸ್ ಗ್ರೀನ್ ಕಂಪನಿಯವರ ಒಂದೆರಡು ಪುಸ್ತಕಗಳನ್ನು ಅವರು ನನಗೆ ಒಪ್ಪಿಸಿದರು. ಒಂದು: ಆರೋಗ್ಯಕ್ಕೆ ಸಂಬಂಧಿಸಿದ ಸಣ್ಣ ಪುಸ್ತಕ. ಪ್ರತಿ ಪುಟದಲ್ಲಿಯೂ ಒಂದು ಚಿತ್ರ, ಆಕರ್ಷಕವಾದ್ದು, ಆರೋಗ್ಯಕ್ಕೆ ಮರ್ಯಾದೆಗಳಿಗೆ ಸಂಬಂಧಿಸಿದ್ದು. ನಾಲ್ಕೊ ಐದೊ ವಾಕ್ಯಗಳು ದಪ್ಪಕ್ಷರಗಳಲ್ಲಿ ಮುದ್ದಾಗಿ ಅಚ್ಚಾಗಿದ್ದವು. ಭಾಷಾಂತರಕ್ಕೆ ಹೆಚ್ಚು ಶ್ರಮವೂ ಆಗಲಿಲ್ಲ. ಆ ಕಾಲಕ್ಕೆ ದೊಡ್ಡದೆನ್ನಬಹುದಾದ ನೂರೈವತ್ತು ರೂಪಾಯಿಗಳ ಪ್ರತಿಫಲವನ್ನು ನನಗೆ ಕೊಡಿಸಿಕೊಟ್ಟರು. ಇನ್ನೊಂದು ಪುಸ್ತಕ 'ಗೋಲ್ಡನ್ ಕಂಪನಿ' ಎಂಬುದು ಭರತಖಂಡದ ಅನೇಕ ಚಾರಿತ್ರಿಕ ಮಹಾಪುರುಷರ ಜೀವನದ ಮತ್ತು ಹಿರಿಮೆಯ ಲಘು ಪರಿಚಯಗಳುಳ್ಳ ಪುಸ್ತಕ. ಆಗ ನಮ್ಮಲ್ಲಿ ವಿದೇಶಿ ಪುಸ್ತಕಗಳ ಕಂಪನಿಯವರು ಇಂಗ್ಲಿಷಲ್ಲಿ ಬರಸಿದ ಇಂಥ ಪುಸ್ತಕಗಳನ್ನು ಭಾಷಾಂತರ ಮಾಡಿಸಿ ಅವನ್ನು ಪಠ್ಯಪುಸ್ತಕಗಳಾಗಿ ಮಾಡಿಸುವುದು, ಪುಸ್ತಕ ಭಂಡಾರ ಸಂಗ್ರಹಕ್ಕೆ ಅವನ್ನು ಇಲಾಖೆ ಕೊಳ್ಳುವಂತೆ ಮಾಡುವುದು ರೂಢಿ. ಮಿಸ್ ರಾಬಿನ್‌ಸನ್ ಎಂಬಾಕೆ ಬರೆದ ಪುಸ್ತಕ. ಹರ್ಷ, ಅಕ್ಬರ್, ಬುದ್ಧ ಮುಂತಾದ ಮಹನೀಯರ ಚಿತ್ರಗಳು ಅಲ್ಲಿದ್ದವು. ಅದನ್ನು ಕನ್ನಡಿಸಿಕೊಟ್ಟೆ. ಸಂಬಳವಾಗಿ ಸಂಪಾದನೆಯಾಗುತ್ತಿದ್ದುದು ಅಷ್ಟೇನೂ ನೆಮ್ಮದಿಯ ಸಂಗತಿ ಎಂದೂ ಆಗಿಲ್ಲದ ನನಗೆ ಇಂಥ ಸಣ್ಣ ಪುಟ್ಟ ಕೆಲಸ ಆಗಾಗ ದೊರೆತು ಉಪಕಾರವಾಯಿತು. Pot-boilers –ತಪ್ಪಲೆಯಲ್ಲಿ ಅನ್ನ ಬೇಯಬೇಕೊ ಬೇಡವೋ –ಎನ್ನುವುದುಂಟು. ನ್ಯಾಯವಾಗಿ ಪ್ರಾಮಾಣಿಕವಾಗಿ ಮಾಡಿದ ಕೆಲಸ ತಪ್ಪಾಗಬೇಕಿಲ್ಲವಾದರೆ ಸಾಹಿತಿಗಳೆಂಬ ನಾವು ಇಂಥವನ್ನು ಕುರಿತು ಮೂಗು ಮುರಿಯುವುದು ಸಾಮಾನ್ಯವಾದ್ದರಿಂದ ಇದನ್ನು ಹೇಳುತ್ತಿದ್ದೇನೆ.

ಇನ್ನೊಂದು ಭಾಷಾಂತರ ಸ್ವಲ್ಪ ವಿಶೇಷವಾದ್ದು. ವಿದ್ವಾಂಸರೂ ತಜ್ಞರೂ ಎನ್ನಿಸಿಕೊಳ್ಳುತ್ತಿದ್ದ ಮೇಲ್ಪಟ್ಟ ಅಧಿಕಾರಿಗಳೂ ವಿಶ್ವವಿದ್ಯಾನಿಲಯದ ಪ್ರಾಚಾರ್ಯರೂ ಮೂವರು ವಿದ್ಯಾಶಿಕ್ಷಣದ ನಾನಾ ಸಮಸ್ಯೆಗಳನ್ನು ಕುರಿತು ಇಂಗ್ಲಿಷಲ್ಲಿ ಗ್ರಂಥಗಳನ್ನು ಬರೆದರು. ಅವರವು ಮೂರು ಪುಸ್ತಕಗಳು. ಬೆರಳಚ್ಚಿನಲ್ಲಿ ತಯಾರಾದವು. ಪ್ರೊ. ವಾಡಿಯಾ ಮಹಾರಾಜಾ ಕಾಲೇಜಲ್ಲಿ ನನಗೆ ದರ್ಶನದ ಪ್ರಾಧ್ಯಾಪಕರಾಗಿದ್ದರು. ಇನ್ನೊಂದು ವಿದ್ಯಾ ಇಲಾಖೆಯ ಅತ್ಯುಚ್ಚ ಅಧಿಕಾರಿಗಳಾಗಿದ್ದ ಸುಲ್ತಾನ್ ಮೊಹಿಯುದ್ದೀನ್, ಕೆ. ಶ್ರೀನರಸಿಂಹಯ್ಯನವರು ಬರೆದವು. ಅವರು ಇಂಗ್ಲಿಷಲ್ಲಿ ಬರೆದ ಪುಸ್ತಕಗಳನ್ನು ಕನ್ನಡಿಸಬೇಕೆಂದು ತೀರ್ಮಾನವಾಗಿ ಒಂದು ನನಗೆ ಬಂತು. ಮೂನ್ನೂರು ಪುಟದ ಪುಸ್ತಕಗಳು ಅವು. ಅವರು ಮೂರು-ಮೂರು ಸಾವಿರ ರೂಪಾಯಿ ಪಡೆದಿದ್ದರು. ಇಲಾಖೆಗೆ ಬೇಕಾಗಿದ್ದುದು ಆ ವಿಷಯವನ್ನು ಕುರಿತ ಕನ್ನಡ ಪುಸ್ತಕ. ನನಗೆ ೨೦೦-೨೫೦ ರೂಪಾಯಿ ಕೊಟ್ಟರು. ಬರೆದುದನ್ನು ತಿದ್ದಲು ಕೂಡ ಅವಸರ. ಪುಸ್ತಕವಾಗಿ ಅದು ಅಚ್ಚಾಯಿತೊ ಇಲ್ಲವೊ ಕಾಣೆ. ನನಗೆ ಅನ್ನಿಸಿತು: ಒಂದು ಪುಸ್ತಕ ಬರೆಯಲು ಎರಡು-ಮೂರು ಸಾವಿರ ಸರ್ಕಾರ ಕೊಡುತ್ತೇವೆಂದರೆ ದೊಡ್ಡವರೇ ಅಂಥವನ್ನು

ಬರೆಯುತ್ತೇವೆನ್ನುತ್ತಾರೆ. ಅವರಿಗೆ ಸ್ವಂತವಾಗಿ ಕನ್ನಡದಲ್ಲಿ ಬರೆಯುವುದಕ್ಕಾಗುವುದಿಲ್ಲ ಎಂಬ ಮಾತು ಮಾಯವಾಗುತ್ತದೆ. ಕನ್ನಡದಲ್ಲಿ ಬರೆದವರು ಅವರಲ್ಲ, ತಾವು ಇಂಗ್ಲಿಷಲ್ಲಿ ಬರೆದು ಅಷ್ಟೇನೂ ಖ್ಯಾತಿ ಸಂಪಾದಿಸಲಾರದ ಗ್ರಂಥಗಳು ಅವು. ನನ್ನಂಥ ಇನ್ನಾರೊ ನಿರ್ಭಾಗ್ಯರ ಕೈಯಲ್ಲಿ ಅದನ್ನು ಹರಕುಮುರುಕು ಕನ್ನಡಿಸಿಬಿಟ್ಟರೆ ಅದು ಸಾಕಾಗುತ್ತದೆ ಎಂದು ಬಹುಶಃ ಇಂಥಲ್ಲಿ ನುಡಿಯಬೇಕಾಗುತ್ತದೆ. ಇದು ಲೋಕಸ್ಥರೂಪ.

ನನಗೆ ನರಸಿಂಹಯ್ಯನವರ ಪರಿಚಯವಾದ ಕಾಲದಿಂದಲೂ ಬಂಗಾಳಿ ವ್ಯಾಸಂಗ ಮಾಡಿದ್ದವರೆಂದು ಅವರು ಹೆಸರಾಗಿದ್ದರು. ತಮ್ಮ ಪಂಗಡದ ಮಾನ್ಯರಲ್ಲೊಬ್ಬರಾದ ಎಂ. ವಿ. ಶಾಸ್ತ್ರಿಗಳು ಬಂಗಾಳಿಯಿಂದ ಕೆಲವು ಸಣ್ಣ ಕತೆಗಳನ್ನು ಬರೆದಿದ್ದಾಗ, ನರಸಿಂಹಯ್ಯನವರಿಗೆ ಆ ಭಾಷೆಯ ಪರಿಚಯ ಚೆನ್ನಾಗಿ ತಿಳಿದಿದೆ ಎಂದು ಕೃಷ್ಣಶಾಸ್ತ್ರಿಗಳಿಂದ ನನಗೆ ತಿಳಿದು ಬಂದಿತು. ಆಗ ನನಗೂ ಆ ಭಾಷೆಯನ್ನು ಕಲಿಯಬೇಕೆಂದು ತುಂಬಾ ಆಸೆ. ನಾವು ಹೈಸ್ಕೂಲಲ್ಲಿದ್ದಾಗಲೆ ವೆಂಕಟಾಚಾರ್ಯರ ಭಾಷಾಂತರಗಳನ್ನು ಓದಿ ಬಂಗಾಳಿಯನ್ನು ಕಂಡರೆ ವಿಶ್ವಾಸವುಳ್ಳವನಾಗಿದ್ದೆ. ನಮ್ಮ ಕಾಲದ ವಿದ್ಯಾರ್ಥಿಗಳೆಲ್ಲ ಹಾಗೆ. ಕನ್ನಡದ ಕಾದಂಬರಿ ಎಂದರೆ ವೆಂಕಟಾಚಾರ್ಯರ ಕಾದಂಬರಿ, ಅದು ಬಿಟ್ಟರೆ ಗಳಗನಾಥರದು. ಬಂಗಾಳಿ ಕಾದಂಬರಿಗಳಲ್ಲಿ ರೋಮಾಂಚಕಾರಿ ಸನ್ನಿವೇಶಗಳು ಹುಡುಗರ ಕಲ್ಪನೆಯನ್ನು ರಕ್ತವನ್ನು ಕುದಿಸುವಂಥವು. ಅದರ ಜೊತೆಗೆ ಗಂಡು–ಹೆಣ್ಣಿನ ಬಂಗಾಳಿ ಹೆಸರುಗಳು ಇನ್ನೂ ಕುದಿಸುವಂಥವು. ಆ ಹೆಸರುಗಳು ಇನ್ನಷ್ಟು ಚೇತೋಹಾರಿಯಾಗಿರುತ್ತಿದ್ದುದರಿಂದ ಬಂಗಾಳಿಗೆ ಹುಡುಗರಾದ ನಮ್ಮಲ್ಲಿ ಅಷ್ಟೇ ಆಕರ್ಷಣೆ ಇತ್ತು. ಸುಲಭವಾಗಿ ಅವರಿಂದ ಕಲಿಯುವುದಕ್ಕೆ ಅವಕಾಶ ಕಡಮೆಯಾಗಿದ್ದುದರಿಂದ ಬಂಗಾಳಿ ಅಕ್ಷರಗಳ ಪರಿಚಯ ಮಾಡಿಕೊಡುವಂತೆ, ಒಂದು ಪುಸ್ತಕದ ಕ್ಯಾಟಲಾಗಲ್ಲಿ ಆ ಅಕ್ಷರಗಳ ಗುರುತು, ಕಾಗುಣಿತ ಗೊತ್ತಾಗುವಂತೆ ಬರಸಿ ಕೊಡುವಂತೆ ಕೇಳಿಕೊಂಡೆ. ಅವನ್ನು ಸೇರಿಸಿ ಪದಗಳನ್ನಾಗಿ ಅರಿಯುವುದು ಸುಮಾರು ಶಕ್ಯವಾಯಿತು. ಬಂಗಾಳಿಗಳಂತೆ ಆ ಶಬ್ದಗಳನ್ನು ಉಚ್ಚಾರ ಮಾಡುವುದೂ ಬಂಗಾಳಿಗಳಲ್ಲದವರಿಗೆ ಅವರ ನಡೆನುಡಿಗಳನ್ನು ಹತ್ತಿರದಿಂದ ತಿಳಿದುಕೊಳ್ಳುವುದೂ ಎಂದಿಗೂ ಕಷ್ಟವೇ. ಅದು ಯೂರೋಪಿನ ಫ್ರೆಂಚ್ ಭಾಷೆಯ ಹಾಗೆ; ಬರೆಯುವುದು ಒಂದು ಬಗೆ; ಉಚ್ಚಾರ ಬೇರೊಂದು ಬಗೆ. ತೆಲುಗರು ಕನ್ನಡಿಗರು ಸ್ಪಷ್ಟವಾಗಿ ವರ್ಣೋಚ್ಚಾರ ಮಾಡುವ ಹಾಗೆ ಬಹುತರ ಇತರ ಭಾರತೀಯ ಪ್ರಾಂತಗಳವರು ಉಚ್ಚಾರ ಮಾಡುವುದಿಲ್ಲವೇನೊ. ನಮ್ಮಲ್ಲಿ ಸಂಸ್ಕೃತದ ೫೨ ಅಕ್ಷರಗಳಿವೆ; ಜೊತೆಗೆ ನಮ್ಮ ಱ ಳ ಇವೆ. ಹಿಂದಿನ ಕಾಲದಲ್ಲಿ ಅಕ್ಷರಾಭ್ಯಾಸ ಮಾಡುತ್ತಿದ್ದವರು 'ಳಕ್ಷರ ಇತಿ' ಎಂದು ಹೇಳುತ್ತಿದ್ದರು; ಜ್ಞ, ಶ್ರೀ ಬರಸುತ್ತಿದ್ದರು. ಆ 'ರ ಇತಿ'ಯಲ್ಲಿ ಈ ಅಕ್ಷರಗಳೂ ಸೇರಿದ್ದುವಿರಬೇಕು. ಕೆಲವು ಸ್ವರಗಳು ಉದಾ: ಎಂ.ಎ., ಎಂ.ಎಚ್., ಎ.ಟಿ., ಬ್ಯಾಂಕ್ ಮುಂತಾದಲ್ಲಿನ 'ಅ' ಉಚ್ಚಾರ ನಮಗೆ ದೊರೆಯುವಂತೆ ಸ್ವರ ಕಲ್ಪನೆ ಇಲ್ಲ; 'ಅ' 'ಒ' ಕಲಸಿಕೊಳ್ಳುತ್ತವೆ ಕೆಲವಲ್ಲಿ. ಹಾಗೆಯೇ 'F' 'Z' ನಮಗಿಲ್ಲವಾಗಿದೆ. ಬಹುತರ ಉರ್ದು ಅಲ್ಲದ ಭಾರತೀಯ ಭಾಷೆಗಳೆಲ್ಲವುಗಳ ಲಕ್ಷಣವೂ ಇದೇ ಇರಬೇಕು. ಇವೊತ್ತು ಅಂತಾರಾಷ್ಟ್ರೀಯ Phonetics – ಧ್ವನಿಶಾಸ್ತ್ರಕ್ಕೆ –ತಕ್ಕಂತೆ ಬಗೆಬಗೆಯ ಉಚ್ಚಾರಣೆಗಳನ್ನು

ಗುರುತಿಸಲು ಪಾಡುಪಡುತ್ತ, ಎಲ್ಲಕ್ಕೂ ಹತ್ತಾರು ಧ್ವನಿಗಳನ್ನು ವಿವಕ್ಷಿಸಿ, ಸಂಖ್ಯಾಶಾಸ್ತ್ರಕ್ಕೆ ಗಣಿತದ ಸಂಕೇತಗಳಿಗೆ ಮೈಯಿಕ್ಕಿರುವಾಗ ಇನ್ನಷ್ಟು ತಳಮಳಗಳೂ ಧ್ವನಿಪಲ್ಲಟಗಳೂ ವೈತಾರಗಳೂ ಉಂಟಾಗಿವೆ. ವರ್ಣಮಾಲೆಯಲ್ಲಿ ಸ್ವರ ವ್ಯಂಜನಗಳ ಗುರುತಾಗಿ ಯಾವ ಕ್ರಮವೂ ವ್ಯವಸ್ಥೆಯಾಗಿಲ್ಲ. 'ಅ' ಕೆಳಗೆ 'ಯ'ದ ' ್ ' ಒತ್ತು ಹಾಕಿ ಆ 'ಯ'ವನ್ನು ಹೊಡೆದು ಆ ಧ್ವನಿಯನ್ನು ನಿರ್ದೇಶಿಸುವುದೂ ಸ, ಜ, ಫ, ಕೆಳಗೆ ಎರಡು ಚುಕ್ಕೆಗಳನ್ನು ಹಾಕಿ ನಿರ್ದೇಶಿಸುವುದೂ ರೂಢಿಯಾಗಿದ್ದರೂ ಇದು ರೇಜಿಗೆಯ ಕೆಲಸ. ಬಂಗಾಳಿ ಅಕ್ಷರಗಳು ಕೆಲವನ್ನು ಬಿಟ್ಟು ಉಳಿದವು ಸಂಸ್ಕೃತದ ಅಕ್ಷರಗಳಂತೆಯೇ ಇರುವುದು ಅವನ್ನು ಕಲಿಯಲು ನೆರವಾಗುತ್ತವೆ. ಯಾವ ವ್ಯಂಜನವನ್ನು ಅರ್ಧವಾಗಿ ಉಚ್ಚರಿಸುತ್ತಾರೆ, ಯಾವುದನ್ನು ಪೂರ್ತಿ ಉಚ್ಚರಿಸುತ್ತಾರೆ ಎಂಬುದು ನಮಗೆ ಅರಿವಾಗುವುದು ಕಷ್ಟವೇ ಆದರೂ ಅಚ್ಚಕ್ಷರವನ್ನು ಓದುವುದು ಕಷ್ಟವಾಗಲಾರದು. ಆದುದರಿಂದ ಅವರೇ ಕೊಟ್ಟ 'ವಿಷಮವಿವಾಹ' ಎಂಬ ಒಂದು ಸಣ್ಣ ಪುಸ್ತಕವನ್ನು ಕಷ್ಟಪಟ್ಟು ಓದಿ ಅರೆಅರಕಲಾಗಿ ಓದುವ ಅಭ್ಯಾಸ ಮಾಡಿಕೊಂಡೆ. ತಪ್ಪು ನೆಪ್ಪು. ಖ, ಥ, ಕ, ಚ, ಞ, ಜ, ಞ, ಜ್ಞ ಮುಂತಾದವುಗಳ ಗುರುತಿಗೆ ಅಭ್ಯಾಸ ಬೇಕಾದರೂ ಉಳಿದುದೆಲ್ಲ ನೇರವೇ. ಸಂದೇಹ ಬಂದಾಗ ಅವರನ್ನೇ ಕೇಳಿ ಸಂದೇಹ ನಿವಾರಣೆ ಮಾಡಿಕೊಳ್ಳುತ್ತಿದ್ದೆ. ವೆಂಕಟಾಚಾರ್ಯರು ಬಂಗಾಳಿ ವಾಕ್ಯಗಳನ್ನು ಮೊದಮೊದಲು ಮೂಲ ಕ್ರಮದಲ್ಲಿಯೇ ಕನ್ನಡಿಸುತ್ತಿದ್ದರಾದ ಕಾರಣ ಮೂಲ ಗ್ರಂಥಗಳನ್ನು ಕೊಂಡು ಕನ್ನಡದ ಭಾಷಾಂತರಗಳನ್ನು ಇಟ್ಟುಕೊಂಡು ಗದ್ಯವನ್ನು ಅರ್ಥಮಾಡಿಕೊಳ್ಳಲು ಯತ್ನಿಸಲಾಯಿತು. ಅಚ್ಚಬಂಗಾಳಿ ಪದ್ಯಗಳು, ಎಂದರೆ ಅವರ ದೇಸಿ ಮತ್ತು ನುಡಿಗಟ್ಟು, ಕೆಲವು ಸರ್ವನಾಮ ಪದಗಳು, ಕ್ರಿಯಾಪದಗಳ ಕಾಲವಾಚಿ ರೂಪ ಹೊರಗಿನವರಿಗೆ ಯಾವಾಗಲೂ ತಕರಾರೇ. ಆದರೆ ಬಹುಶಃ ಅವನ್ನು ಗದ್ಯದಲ್ಲಿ ಓದಿ ಅರ್ಥಮಾಡಿಕೊಳ್ಳುವುದು ಕಷ್ಟವಾಗಬಾರದು. ಹೀಗಾಗಿ ೧೯೨೧ರಲ್ಲಿ 'ವಿಷವೃಕ್ಷ', ೧೯೨೨ರಲ್ಲಿ 'ಆನಂದಮಠ' ಗ್ರಂಥಗಳನ್ನು ಕೊಂಡು ಹೀಗೆ ಅಭ್ಯಾಸಮಾಡಿಕೊಳ್ಳಲು ಶಕ್ಯವಾಯಿತು. ಕಲ್ಕತ್ತದಲ್ಲಿ ಗುರುದಾಸ್ ಬ್ಯಾನರ್ಜಿ ಅಂಡ್ ಸನ್ಸ್ ಎಂದೊ ಏನೊ ಹೆಸರಿನ ಪುಸ್ತಕ ವ್ಯಾಪಾರಿಗಳಲ್ಲಿಗೆ– ಇಂಗ್ಲಿಷಿನಲ್ಲಿ ಕಾರ್ನ್ ಓ ಆಲಿಸ್ ಎನ್ನುವ– ಕಾರ್ನ್‌ವಾಲಿಸ್ ರಸ್ತೆಯಲ್ಲಿರುವುದು –ಹೋಗಿ 'ವಿಷವೃಕ್ಷ' ಇದೆಯೆ ಎಂದಾಗ ಅಂಗಡಿ ನಡಸುವವರಿಗೆ ನನ್ನ ಉಚ್ಚಾರ ಸರಿಯಾಗಿ ಕೇಳಿಸದೆ, ನಾನು ದೇವನಾಗರಿ ಅಕ್ಷರದಲ್ಲಿ ಅದನ್ನು ಬರೆದು ತೋರಿಸಿದಾಗ 'ಬಿಷ್‌ಬ್ರಿಕೊ' ಎಂದು ಪುಸ್ತಕವನ್ನು ತೆಗೆದುಕೊಟ್ಟ ನೆನಪುಂಟು. ಇದು ಪುಸ್ತಕದ ಅಚ್ಚಿನ ಲಿಪಿಯಾದರೆ, ಅದರ 'ಮೋಡಿ' ಅರಿಯಲು ದೈವಸಹಾಯವೇ ಅಗತ್ಯ. ಬಹುಶಃ ಎಲ್ಲ ಮೋಡಿಯೂ ಹಾಗೇ. ಟೈಪ್‌ರೈಟರ್ ಬಂದಿರುವ ಈ ಕಾಲದಲ್ಲಿ ಸಾಧಾರಣ ಮೋಡಿಯಲ್ಲದೆ ತಿಳಿಯಾಗಿ ಬರೆದರೂ ಅಚ್ಚುಮನೆಗಳಲ್ಲಿ ಮೊಳೆ ಜೋಡಿಸುವವರು ಲೇಖಿನವನ್ನು ಹಿಂದಕ್ಕೆ ಕಳಿಸುತ್ತಿರುವ ಕಾಲ ಇದು. ಹಿಂದೆ ಕನ್ನಡದ ಮೋಡಿಯನ್ನು ಅರಿತು ಮೊಳೆ ಜೋಡಿಸುವ ಸೌಕರ್ಯ ಇದ್ದಿತು. ಕಾಲಕ್ರಮದಲ್ಲಿ ಹಾಗೂ ಹೀಗೂ ನಿಧಾನವಾಗಿ ಅವರ ಗದ್ಯವನ್ನು ನೂರಕ್ಕೆ ೬೦–೭೫ ಭಾಗ ಸರಿಯಾಗಿ ಅರ್ಥಮಾಡಿಕೊಳ್ಳುವಂತೆ ಆಯಿತು. ಆದರೆ ಮೂಲತಃ ನನಗೆ ಬಂಗಾಳಿ ಅಕ್ಷರ ಪರಿಚಯ ಮಾಡಿಕೊಟ್ಟವರು ನರಸಿಂಹಯ್ಯನವರು.

ಅವರು ಟಾಗೋರರ 'ಸಾಹಿತ್ಯ' ಎಂಬ ಲೇಖನಗಳ ಮಾಲೆಯನ್ನು ಕನ್ನಡಿಸಿದರು. ಹಾಗೆಯೇ ಅವರ ಕೆಲವು ಸಣ್ಣ ಕತೆಗಳನ್ನೂ ಕನ್ನಡಕ್ಕೆ ತಂದರು. ಅಂಥ ಕೆಲಸ ಇನ್ನಷ್ಟು ಮಾಡಬಹುದಿತ್ತು. ಅವರ, ನನ್ನ ಸ್ನೇಹಿತರಾದ ವೆಂಕಣ್ಣಯ್ಯನವರು, ಕೃಷ್ಣಶಾಸ್ತ್ರಿಗಳು ಬೆಂಗಳೂರಲ್ಲಿ ನರಸಿಂಹಯ್ಯನವರಿಂದ ಬಂಗಾಳಿ ಅಭ್ಯಾಸ ಮಾಡಿ, ಇಬ್ಬರೂ ಸೇರಿ ಶ್ರೀ ರಾಮಕೃಷ್ಣ ಪರಮಹಂಸರನ್ನು ಕುರಿತ ಒಂದು ಸಣ್ಣ ಪುಸ್ತಕವನ್ನು ರಚಿಸಿದರು. ವೆಂಕಣ್ಣಯ್ಯನವರು 'ಪ್ರಾಚೀನ ಸಾಹಿತ್ಯ' ಎಂಬ ಹೆಸರಲ್ಲಿರುವ ವಿಮರ್ಶನ ನಿಬಂಧಗಳನ್ನು ಕನ್ನಡಿಸಿದರು. ಕೃಷ್ಣಶಾಸ್ತ್ರಿಗಳು 'ನಾಗಮಹಾಶಯ' ಎಂಬುದನ್ನು ಬರೆಯಲೂ ಬಂಕಿಮಚಂದ್ರರನ್ನು ಕುರಿತ ಗ್ರಂಥವನ್ನು ನಿರ್ಮಾಣ ಮಾಡಲೂ ಹೀಗೆ ದೊಡ್ಡ ನೆರವನ್ನು ಪಡೆದುಕೊಂಡರು. ಈ ಮೂವರು ಸ್ನೇಹಿತರ ಸ್ನೇಹವನ್ನು ಪಡೆದ ಸೌಭಾಗ್ಯ ನನ್ನ ಪಾಲಿಗೆ ಬಂದದ್ದು ನನ್ನ ಮನಃಶಿಕ್ಷಣಕ್ಕೆ ದೊಡ್ಡ ಅವಕಾಶ ತರುವಂತಾಯಿತು.

ಡಾ. ನರಸಿಂಹಯ್ಯನವರ ತಿಳಿವಳಿಕೆಯ ವಿಸ್ತಾರವನ್ನು ಹೊರಗಿನ ಹೆಚ್ಚು ಜನ ಹೆಚ್ಚು ಬಲ್ಲವರಲ್ಲವಾದ್ದರಿಂದ ಅವರ ಬಗೆಗೆ ಕನ್ನಡಿಗರ ಮನಸ್ಸು ಅಗಲವಾಗಿ ತೆರೆಯಲಿಲ್ಲ. ಆದರೆ ಅವರಿಗೆ ವಿದ್ಯಾಶಿಕ್ಷಣದ ವಿಚಾರದಲ್ಲಿಯೂ ಅದಕ್ಕೆ ಸಂಬಂಧಿಸಿದ ಮನಶ್ಶಾಸ್ತ್ರಸಂಬಂಧದಲ್ಲಿಯೂ ವ್ಯಾಕರಣ ನಿಘಂಟುಗಳ ವಿಷಯದಲ್ಲಿಯೂ ಇರುವ ಪರಿಶ್ರಮ ಅಸಾಧಾರಣವಾದ್ದು. ಧಾತುಗಳ ಒಂದು ಪಾಠ ಭೀಮನಿಂದಾದುದು ಎಂದು ಶಬ್ದಮಣಿದರ್ಪಣದಲ್ಲಿ ಬರುತ್ತದೆ. ಆ ಸಂಬಂಧದ ಭೀಮನಾರು ಎಂಬುದನ್ನು ಕುರಿತ ಅವರ ಲೇಖನ, ಧಾತು ಪಟ್ಟಿಕೆಗಳನ್ನು ಕುರಿತು ಬರೆದ ಲೇಖನ ಸಾರವತ್ತಾದುವು. ಹಾಗೆಯೇ ಮತ್ತು ಅವಕ್ಕಿಂತ ಹೆಚ್ಚಾಗಿ, ಪೂನಾ ಡೆಕ್ಕನ್ ರಿಸರ್ಚ್ ಇನ್‌ಸ್ಟಿಟ್ಯೂಟ್ ಅವರು ತಯಾರಿಸುತ್ತಿರುವ ಎಲ್ಲ ಭಾಷಾಪ್ರಾಂತಗಳಲ್ಲಿರುವ ಸಂಸ್ಕೃತ ನಿಘಂಟುಗಳ ಮಾಲೆಯಲ್ಲಿ ಕಾಶಕೃತ್ಸ್ನನ ಶಬ್ದಕಲಾಪಧಾತುಪಾಠ ಎಂಬ, ನಮ್ಮ ಚನ್ನವೀರ ಕವಿ ಎಂಬಾತನು ಸುಮಾರು ಹದಿನಾರನೆ ಶತಮಾನದಲ್ಲಿ ರಚಿಸಿರುವ ಗ್ರಂಥವನ್ನು, ಕಲಾಪಿ ಸಂಪ್ರದಾಯ ಧಾತುಸೂತ್ರಗಳ ಸೂಚಿಕೆಯಂಥ ಒಂದು ಗ್ರಂಥವನ್ನು ಸಂಪಾದಿಸಿ ಸಂಶೋಧಿಸಿ ಕೊಟ್ಟಿದ್ದಾರೆ. ಕಾತಂತ್ರ, ಕಲಾಪ ಮುಂತಾದ ವ್ಯಾಕರಣ ಪ್ರಖ್ಯಾತವಾದವು. ಈ ಗ್ರಂಥದಲ್ಲಿ ಕನ್ನಡಕ್ಕೆ ಸಂಬಂಧಿಸಿದ ಅನೇಕ ವಿಶೇಷಾಂಶಗಳು ನಮಗೆ ದೊರೆಯುತ್ತವೆ. ಇನ್ನೊಂದು ಗ್ರಂಥ ಕಳಲೆ ನಂಜರಾಜನು ಬರೆದುದು. ಜಯದೇವನ 'ಗೀತಗೋವಿಂದ'ದಂತಿರುವ ನಂಜನಗೂಡು ಶ್ರೀಕಂಠೇಶ್ವರನ ಪರವಾದ 'ಸಂಗೀತಗಂಗಾಧರಂ' ಮತ್ತು 'ಶಿವಪಾದರೇಣುಕಾಸಹಸ್ರಂ' ಎಂಬೆರಡು ಗ್ರಂಥಗಳನ್ನು ಪ್ರಕಟಿಸಿದರು. ಇವಲ್ಲದೆ ಪಾಳಿ ಪ್ರಾಕೃತ ಎರಡೂ ಭಾಷೆಗಳ ವ್ಯಾಕರಣಗಳನ್ನೂ ಇತರ ಗ್ರಂಥಗಳನ್ನೂ ಕನ್ನಡದಲ್ಲಿ ಬರೆದಿದ್ದಾರೆ. ಇವು ಸಾಮಾನ್ಯವಾಗಿ ಆ ಶಾಸ್ತ್ರಗಳ ತಿಳಿವಳಿಕೆ ಇಲ್ಲದವರಿಗೆ ದುಸ್ಸಾಧ್ಯವಾದ ಕೃತಿಗಳು. ತಮಿಳು–ಕನ್ನಡ, ಕನ್ನಡ–ಸಂಸ್ಕೃತ ನಡುವಣ ಭಾಷಾಪರಿಶೋಧನೆ ವಿಧಾನ ಅರಿತ ಅವರು ಏಕೊ ಏನೊ ಈ ಹತ್ತು–ಹದಿನೈದು ವರ್ಷಗಳಿಂದ ಮರೆಯಾಗಿ ಏಕಾಂತದಲ್ಲಿ ಕುಳಿತುಬಿಟ್ಟಿದ್ದಾರೆ. ಶೃಂಗಾರ ಪ್ರಪಂಚದಲ್ಲಿ ಸಾಧ್ವಿಯರನ್ನು ಕಾಡಿಸಿದ ಜನ 'ನೀವು ಯೌವನವನ್ನು ವ್ಯರ್ಥಮಾಡಿಕೊಳ್ಳುತ್ತಿದ್ದೀರಿ, ನಮ್ಮ ಪ್ರಾರ್ಥನೆಗೆ ಒಲಿಯಿರಿ' ಎಂದು ಕೇಳಿ ಬಾಯಿಬಿಟ್ಟವರೂ ಸೋತವರೂ ಅಂಥ

ಧಾಷ್ಟ್ರ್ಯದಿಂದ ಪ್ರಾಣ ಕಳೆದುಕೊಂಡವರೂ ಉಂಟು. ನರಸಿಂಹಯ್ಯನವರು ಗಂಡು. ಅವರು ಮನಸ್ಸುಮಾಡದಿದ್ದರೆ ಒಂದಕ್ಷರ ಅವರ ಬಾಯಿಂದ ಹೊರಡುವುದಿಲ್ಲ. ಅಲ್ಲಿ ಹೇಗೆ ಜನ ಅಕೃತಾರ್ಥರಾದರೂ ಇಲ್ಲಿ ನಾವೂ ಹಾಗೇ ಅಕೃತಾರ್ಥರಾಗಿಯೇ ಉಳಿಯಬೇಕಾಗಿದೆ. ತಮಗೆ ಒಲಿದವರಿಗೆ ಅಪರೂಪವಾಗಿ ಇನ್ನೂ ಜ್ಯೋತಿಷದ ಕೆಲವು ಸಲಹೆಗಳನ್ನು ಕೊಡುವುದರಲ್ಲಿ ಪರಿಸಮಾಪ್ತಿ ಪಡೆಯುತ್ತಾರೆ. ಸುಮಾರು ೧೯೨೫–೨೬ರಲ್ಲಿ ಎರಡನೆಯ ಸಂಬಂಧ ಮಾಡಿಕೊಂಡು ನೆಮ್ಮದಿಯಲ್ಲಿ ಸಂಸಾರ ನಿರ್ವಹಿಸಿಕೊಂಡು ಬಂದಿರುವವರು. ಮೊದಲ ಸಂಬಂಧದಲ್ಲಿ ಒಬ್ಬ ಮಗ, ಎರಡನೆಯ ಸಂಬಂಧದಲ್ಲಿ ಒಬ್ಬ ಮಗಳು –ಇಬ್ಬರನ್ನು ಪಡೆದರು. ಮೊದಲ ಹುಡುಗ ಶ್ರೀ ಎ. ಎನ್. ಸುಬ್ರಹ್ಮಣ್ಯಂ ನಮ್ಮ ವಿಶ್ವವಿದ್ಯಾನಿಲಯದಲ್ಲಿ ಎಂ.ಎ. ಮಾಡಿ, ಅರ್ಥಶಾಸ್ತ್ರದಲ್ಲಿ ಮುಂದುವರಿದ Monetary Theory –ಧನತಂತ್ರ ಪರಿಶೀಲನೆಯಲ್ಲಿ ಗ್ರಂಥವನ್ನು ಬರೆದು, ಡೆಪ್ಯುಟಿ ಸೆಕ್ರೆಟೆರಿಯಾಗಿ (Ministry of Finance) ಭಾರತ ಸರ್ಕಾರದ ದೊಡ್ಡ ಹುದ್ದೆಯಲ್ಲಿದ್ದು, ಅಮೆರಿಕ, ಜಪಾನ್, ಈಜಿಪ್ಟ್ ಮುಂತಾದ ಕಡೆಗಳಲ್ಲಿ ಕಾನ್ಸಲ್ ಜನರಲ್ ಆಗಿಯೂ ಇದ್ದು ಈಗ ದೆಹಲಿಯಲ್ಲಿಯೇ ಇದ್ದಾರೆ. ವೃದ್ಧಾಪ್ಯದ ಕಾಲದಲ್ಲಿ ಅಷ್ಟೇನೂ ಹಿತವಾಗದ ಒಂದು ಸಂಬಂಧವನ್ನು ಆ ಮಗಳ ದಾಂಪತ್ಯಕ್ಕೆ ಮಾಡಿಕೊಂಡು ಕೆಲವು ವರ್ಷಗಳ ಹಿಂದೆ ಆ ಮಗಳನ್ನು ಕಳೆದುಕೊಂಡರು. ಈ ವಯಸ್ಸಿನಲ್ಲಿ ತಂದೆತಾಯಿಗಳಿಗೆ ಅದು ತುಂಬಲಾರದ ಪೆಟ್ಟಾಯಿತು. ಈ ಸಂಗತಿ ತಿಳಿದವರಾರಿಗೂ ಅವರಿಗೆ ಸಮಾಧಾನ ಹೇಳುವ ಶಕ್ತಿ ಕೂಡ ಇಲ್ಲವಾಗಿದೆ. ಆದರೆ ಇಂಥ ಸಂದರ್ಭಗಳಿಗೆ ದುರ್ಬಲರಾಗುವ ಚಿತ್ತವೃತ್ತಿ ನರಸಿಂಹಯ್ಯನವರದಲ್ಲ. ಮಡದಿಯ ವ್ಯಥೆಯನ್ನು ನೋಡುವುದು ಎಂಥವರಿಗೂ ಕಷ್ಟವಾಗುತ್ತದೆ. ಹೆತ್ತ ಕರುಳು. ಇದು ಲೋಕ ಪರಿಸ್ಥಿತಿ. ಮಾನವ ಜೀವನಕ್ಕೇ ಒದಗುವ ಆಧಿವ್ಯಾಧಿ ಜರಾಮೃತ್ಯುಗಳ ಪ್ರಪಂಚ. ಒಂದು ಸನ್ನಿಪಾತ. ವಿಧಿ ಕೊಟ್ಟಾಗ ಸಂತೋಷಪಡುತ್ತೇವೆ. ಅದರ ಇಚ್ಛೆಗೆ ಒಳಪಟ್ಟು ಅದು ಕೊಂಡುಹೋದಾಗ ತಾಳಿಕೊಳ್ಳುವುದು ಮಾತ್ರ ಕಷ್ಟವಾಗುತ್ತದೆ. ಲೋಕ ಮಾಯೆ. ಇಂಥ ಸಮಯದಲ್ಲಿ ಸಮಾಧಾನ ಬರಿಸಿಕೊಂಡು ತಾಳಿಕೊಳ್ಳುವುದು ಮಾತ್ರ ಮನುಷ್ಯನಾದವನ ಪಾಲಿಗೆ ಬರಬೇಕಾದುದು.

ಮೊದಲಿನಿಂದ ದೃಢಕಾಯರಾಗಿ ಆರಡಿ ನಿಂತ ನಿಲವು, ಕಾಯದ ನಿಮಿರು ಅವರದೆಂದೆ: ನರಪೇತಲಾದ ನಮ್ಮಂಥವರು ಅವರನ್ನು ಕಂಡು ದಿನವೂ ಗೌರವ ಸಲ್ಲಿಸುವುದೂ ಅವರು ದಿನಾ ತಿರುಗಿಸುತ್ತಿದ್ದ ಗದೆಯನ್ನು ನೋಡಿ ಭಯಪಟ್ಟುದೂ ಆ ಭಯಗೌರವಗಳ ಪ್ರತೀಕವಾಗಿ ಒಂದೆರಡು ವಿನೋದದ ಮಾತುಗಳನ್ನು ಆಡುತ್ತಿದ್ದುದೂ ನನಗೆ ನೆನಪಿದೆ. ಇರುವವರೆಗೂ ಗಟ್ಟಿಮುಟ್ಟಾಗಿದ್ದು ಶಕ್ತಿ ಕುಂದದೆ, ಬಾಗದೆ ಬಳುಕದೆ ಇರಬೇಕಾದುದು ಗಂಡಾಳಿನ ಧರ್ಮ ಎಂಬ ಸತ್ವ ಅವರದು. ಅವರು ಅದನ್ನು ನಡಸಿಕೊಂಡಿದ್ದಾರೆ. ಇನ್ನೂ ಬೇಕಾದಷ್ಟು ಶಾಸ್ತ್ರಗ್ರಂಥಗಳ ವ್ಯಾಸಂಗವನ್ನು ನಡಸಿಕೊಂಡೇ ಇದ್ದಾರೆ. ವಿದೇಶಗಳ ವಿದ್ಯಾಸಂಬಂಧದ ಪ್ರೌಢ ನಿಯತಕಾಲಿಕೆಗಳನ್ನು ಗ್ರಂಥಗಳನ್ನು ತರಿಸಿಕೊಳ್ಳುತ್ತಲೇ ಇದ್ದಾರೆ. ಅವರ ನಿಲವು, ನುಡಿ ಎಂದಿಗೂ ಅವರದೇ: ಭಯಭರಿತ ಭಕ್ತಿಭಾವೊ ಎಂಬ ರೀತಿಯದೇ. ನಾವು ಕೇಳಿಕೊಳ್ಳಬಹುದಾದ್ದು ಅವರನ್ನು: ಮಹಾರಾಯ,

ನೀವು ಈವರೆಗೂ ಯಾವ ವಿದ್ಯೆಯನ್ನು ಸಾಧಿಸಿದ್ದೀರೊ ಇದರ ಪ್ರಯೋಜನವನ್ನು ಕನ್ನಡಕ್ಕೆ ಸಾಧಿಸಿಕೊಡಿ. ಇಲ್ಲವಾದರೊ, ನೀವು ಈ ಐವತ್ತು ವರ್ಷದಲ್ಲಿ ಸಾಮಾನ್ಯರಿಗೆ ದೊರಕದಿದ್ದ ಅನುಕೂಲ ಸಂದರ್ಭಗಳನ್ನು ದೊರಕಿಸಿಕೊಂಡು ನಿಮ್ಮದಾಗಿ ಮಾಡಿಕೊಂಡ ವಿದ್ಯೆಯನ್ನು ಹೊಸತಾಗಿ ಪುನಃ ಆರಂಭಿಸಿ ಈ ಕಾಲದವರು ಮಾಡಬೇಕಾಗುತ್ತದೆ. ನಿಮ್ಮವರೆಗೂ ಬಂದಂಥ, ನಿಮ್ಮಲ್ಲಿ ಸಂಗ್ರಹವಾದ ಆ ತಿಳಿವಳಿಕೆಯನ್ನು ಸಂಗ್ರಹವಾಗಿಯಾದರೂ ತೀರ್ಮಾನದ ಪ್ರಮಾಣಬದ್ಧರೂಪದಲ್ಲಿ ಮಾಡಿಕೊಡಿ; ಹೊಸತಾಗಿ ವಿಷಯದಲ್ಲಿ ತೊಡಗುವವರಿಗೆ ಕಷ್ಟ ತಪ್ಪುತ್ತದೆ. ಮುಂದಿನ ಹೆಜ್ಜೆ ಇಡುವುದಕ್ಕೆ ನೆರವಾಗುತ್ತದೆ ಎಂದು ಮಾತ್ರ ಅವರನ್ನು ಕೇಳಬಹುದು. ಕೇಳುವುದು ನಮ್ಮ ಪಾಲಿಗೆ ಬಂದ ಕೆಲಸ; ಓಲು ಒಲವು ಒಪ್ಪಿಗೆ ಅವರದಾಗಬೇಕು. ಅವರಲ್ಲಿಗೆ ಹೋಗಿ ಅವರನ್ನು ಅನುಸರಿಸಿ ಈ ಕೆಲಸ ಮಾಡಿಸಿಕೊಳ್ಳುವ ಮಂದಿ ಇಂದು ಕಡಮೆ.* ಅಂಥ ಪ್ರವೃತ್ತಿಗಳೇ ದೇಶದಲ್ಲಿ ಕಡಮೆಯಾಗುತ್ತಿದೆ. ಪುರಸ್ಕಾರ ಬರಲಿ ಬಾರದಿರಲಿ, ನಾವು ದುಡಿದ ರಂಗದಲ್ಲಿ ಏನು ವಿಷಯವನ್ನು ನಾವು ಸಂಗ್ರಹ ಮಾಡಿದ್ದೇವೊ ಅದರ ಪರಿ, ವಿವರ, ಖಚಿತಾಂಶ, ನಿರ್ಣಯ ನಮಗೆ ಹೀಗೆ ತೋರಿದೆ ಎಂಬುದನ್ನು ಬರೆದಿಟ್ಟರೆ ಪುನಃ ಅದೇ ನೆಲವನ್ನು ತುಳಿವುದು, ಅದೇ ಹೊಲವನ್ನು ಹರಗಿ ಬೇಸಾಯ ಮಾಡುವುದು ಅನಗತ್ಯವಾಗುತ್ತದೆ. ಶ್ರಮ, ಕಾಲನಷ್ಟ ಎರಡೂ ತಪ್ಪುತ್ತದೆ. ನಿಮ್ಮ ಬೆಳಸು ಕನ್ನಡಿಗರ ಸಂಪತ್ತಾಗಿ ಶಾಶ್ವತವಾಗಿ ಉಳಿಯುತ್ತದೆ. ನಮ್ಮವರೆಗೂ ವ್ಯಾಸಂಗ, ಅಭ್ಯಾಸ ಇಲ್ಲಿಯವರೆಗೆ ಬಂದಿತ್ತು; ನಾವು ಅರಿತು ಸೇರಿಸಿದ್ದು, ಸ್ಪಷ್ಟಗೊಳಿಸಿದ್ದು ಈ ಸಂಗತಿ ಎಂದು ತಿಳಿಸುವುದು ನಮ್ಮ ಬದುಕಿಗೆ, ಕಾರ್ಯಕ್ಕೆ ಒಂದು ಸ್ಥಾನವನ್ನು, ನೆಲೆಯನ್ನು ನಿಲ್ಲಿಸಿದ ಹಾಗಾಗುತ್ತದೆ. ಇದು ಒಂದು ಬಗೆಯ ಆತ್ಮಶ್ರದ್ಧೆ; ಸ್ವಂತ ಸಮರ್ಥನೆಗಾಗಿ ನಮ್ಮ ಪರವಾಗಿ ನಾವು ಸಲ್ಲಿಸಿಕೊಳ್ಳಬಹುದಾದ ಒಂದು ಹೊಣೆಗಾರಿಕೆ. ಇಲ್ಲದಿದ್ದರೆ ಅಂಥ ಕಾರ್ಯಗಳಿಗೆ ಹತ್ತಾರು ವರ್ಷ ಕಾಲ ನಾವು ಪುನಃಪುನಃ ಏಕೆ ದುಡಿಯಬೇಕು? ಅದನ್ನು ಉಳಿಸೆವಾದರೆ ನಮ್ಮ ಶ್ರದ್ಧೆವಿಶ್ವಾಸಗಳಿಗೆ ನಾವೇ ಆಸ್ಥೆತೋರಿಸದಂತಾಗುತ್ತದೆ. ಇದು ಕಂಡ ಹಲವಾರು ಜನಕ್ಕೆ ನಾನು ನಿವೇದಿಸಿಕೊಳ್ಳುವ ಪ್ರಾರ್ಥನೆ. ಯಾವುದೇ ಕಾರಣದಿಂದಾಗಲಿ, ಆಲಸ್ಯದಿಂದಾಗಲಿ ಈ ಕಾರ್ಯದಿಂದ ನಾವು ಹಿಮ್ಮೆಟ್ಟುವುದು ಸರಿಯಲ್ಲ; ಅದರಿಂದ ವಿದ್ಯಾಸೇವೆಯಾಗದು, ನಾಡಸೇವೆಯಾಗದು. ನಾವು ಬದುಕಿದುದು ವ್ಯರ್ಥವಾಗಲಿಲ್ಲವೆಂದು ನಾವೇ ಕಂಡುಕೊಂಡಂತಾಗುತ್ತದೆ. ಈಗಲೂ ಮನಸ್ಸು ಮಾಡಿ ಡಾ. ನರಸಿಂಹಯ್ಯನವರು ತಾವು ಬೇಸಾಯ ಮಾಡಿದ ಕ್ರಿಯಾರಂಗದಲ್ಲಿ ತಾವು ಕಂಡುಂಡುದನ್ನು ಬರೆದು ಪ್ರಕಟಿಸುತ್ತಾರೆಂದು ನಂಬಿದ್ದೇನೆ. ನರಿಯ ಕೂಗು ಗಿರಿಯನ್ನು ಮುಟ್ಟಬೇಕು ಮಾತ್ರ.

ಹಲವೇಳೆ ತಮ್ಮ ಸಂಸರನ್ನು ನೆಲೆಗೊಳಿಸಲು ಯತ್ನಿಸಿದರು. ಅವರ ಸ್ವತಂತ್ರಭಾವ, ಕೃತಿಗಳು ಹಣ ಸ್ಥಾನ ಲೋಕಪೂಜ್ಯತೆ ತಾರದಿರಲು ಎಲ್ಲರನ್ನೂ ಸಂಶಯದೃಷ್ಟಿಯಿಂದ

---

* ಅವರು ಅಂಥ ಕೆಲಸವನ್ನು ಮಾಡಿಯೂ ಈಗಲೂ ಮಾಡುತ್ತಲೂ ಇದ್ದಾರೆಂದು ಈಚೆಗೆ ತಿಳಿಯಿತು. 'ಪಾಳೀ ವ್ಯಾಕರಣ', 'ಸಂಸ್ಕೃತ ಶಾಸನಗಳಲ್ಲಿ ವ್ಯಾಕರಣ' ಮುಂತಾದುವನ್ನು ಬರೆದಿಟ್ಟಿದ್ದಾರೆ.

ನೋಡಿತು. ಕನ್ನಡಸಾಹಿತ್ಯವನ್ನೂ ನುಡಿಯನ್ನೂ ಅತಿಶಯವಾಗಿ ವ್ಯಾಸಂಗಮಾಡಿದ್ದರು ಸಂಸರು. ಮೊದಲು ಕಾನನ್‌ಡಾಯಲ್ ತರಹದ ಪುಸ್ತಕಗಳನ್ನು ಇಂಗ್ಲಿಷಲ್ಲಿ ಬರೆದರು. ಸಂಸಪದಗಳೆಂಬ ಖಂಡಕವಿತೆಗಳ ವಿದ್ವತ್‌ಕೃತಿಯ ಜೊತೆಗೆ 'ನರಕದುರ್ಗೋಧನೀಯಂ' ಎಂಬ ಹಳಗನ್ನಡ ಕೃತಿಯನ್ನೂ ಬರೆದಿದ್ದರು. ತಮ್ಮ ಬದುಕನ್ನು ನಾಶಪಡಿಸಿಕೊಂಡಂತೆಯೇ ಹಲವು ಕೃತಿಗಳನ್ನೂ ಸುಟ್ಟುಬಿಟ್ಟರು. ತುಂಬಾ ನೆಚ್ಚಿಂದ ಸಾಹಿತ್ಯಕ್ಷೇತ್ರದಲ್ಲಿ ಬೆರೆದವರೊಡನೆ ಹೇಗೆ ಅವರು ಒಂದು persecution complex ಬೆಳಸಿದರು, ಎಲ್ಲರೂ ತನ್ನಂಥ ಅಮರನ ಕೀರ್ತಿಯಲ್ಲಿ ಭಾಗಪಡೆಯುವುದಕ್ಕೆ ಮಾತ್ರ ತನಗೆ ನೆರವು ಕೆಳೆತೋರಿಸುತ್ತಿದ್ದಾರೆ, ತನ್ನನ್ನು ಪ್ರೋತ್ಸಾಹಿಸಿದಂತೆ ಮಾಡಿ ಸ್ವಂತ ಯೋಗ್ಯತೆಯನ್ನು ಹೆಚ್ಚಿಸಿಕೊಳ್ಳುತ್ತಿದ್ದಾರೆ ಮಾತ್ರ ಎಂದುಕೊಂಡು, ಎಲ್ಲರನ್ನೂ ಅಗಡು ಮಾಡಿಕೊಂಡರು. ತಾನು ನೆಲೆ ನಿಂತು ತನಗೂ ತಾಯಿಗೂ ಅನ್ನ ಕಾಣಿಸಲು ಶಕ್ಯತೆ ಇಲ್ಲದಿದ್ದಾಗ, ತಾವಿಬ್ಬರೂ ಉಳಿದಿದ್ದ ಅಣ್ಣನನ್ನು ಬೇಸರಗೊಳಿಸಿ ಅವರನ್ನು ಅಡಿ ಹೊರಗೆ ಬಂದರು. ಬಹುಬಗೆಯಾಗಿ ನರಸಿಂಹಯ್ಯನವರು ಅವರಿಗೆ ನೆರವಾಗಲು ಯತ್ನಿಸಿದುದನ್ನು ನಾನು ಬಲ್ಲೆನಾದರೂ ಅಣ್ಣತಮ್ಮಂದಿರ ಬಾಂಧವ್ಯ ಕಡೆಯ ಹತ್ತು ವರ್ಷಗಳಲ್ಲಿ ಕಾಣದಿದ್ದುದು ದುರ್ದೈವ. ನರಸಿಂಹಯ್ಯನವರಿಗೂ ತಮ್ಮನ ಯೋಗ್ಯತೆಯಲ್ಲಿ ನಾಟಕ, ಕವಿತೆಗಳಂಥ ಗ್ರಂಥರಚನೆಗಳಲ್ಲಿ ಅತೀವ ವಿಶ್ವಾಸ, ಮಾನ್ಯತೆ ಇದ್ದವು ಎಂಬುದನ್ನು ನಾನು ಬಲ್ಲೆನಾಗಿ, ಆ ಬಗೆಗೆ ಬಂದಿರುವ ಒಂದೆರಡು ಆಕ್ಷೇಪಣೆಗಳಿಗೆ ಆಧಾರವಿಲ್ಲ, ಬುಡವಿಲ್ಲ ಎಂದು ಹೇಳಬಯಸುತ್ತೇನೆ.

ಅವರು ನಿಷ್ಠರು, ಶುಚಿಯಾಗಿರುವವರು, ಇತರ ಹವ್ಯಾಸಗಳಿಗೆ ಮನಸ್ಸುಕೊಡದವರು, ಆಸ್ತಿಕರು. ಎಲ್ಲ ಕಾಲದಲ್ಲಿಯೂ ಪೂಜೆ, ಆರಾಧನೆ, ಪಾರಾಯಣ, ಮಂತ್ರಸಾಧನೆ ಮಾಡಿಕೊಳ್ಳುವವರು. ಆ ಕಾಲದ ಜನ ಈಗಿಲ್ಲ. ಆಸ್ತಿಕತೆಯ ಕಡೆಗೇ ಆಧುನಿಕ ಮನಸ್ಸು ಬಹುಮಟ್ಟಿಗೆ ವಿಮುಖವಾಗಿದೆ. ಇಂದು ಬಹುಮಂದಿಗೆ ಆ ಕಡೆ ಗಮನವಿಲ್ಲ. ಅಗ್ಗವಾದ ಮಾತಾಗಿ, ಕಡೆಗೆ ಒಂದು ಫ್ಯಾಷನ್ನಾಗಿ ಆ ಬಗೆಯ ವಾದಕ್ಕೆ ನಡವಳಿಕೆಗೆ ಕಿರಿಯರನ್ನು ಕಾಲ ಎಳೆದಿಟ್ಟಿದೆ. ಡಾ. ನರಸಿಂಹಯ್ಯನವರಂಥವರ ವಿಶ್ವಾಸ ಪ್ರಾಮಾಣಿಕವಾದುದು. ಸಂಪ್ರದಾಯವೆಂದರೆ ಯಾವುದೊ ಒಂದು ಲಘುದೃಷ್ಟಿ ಇರುವ ಕಾಲದಲ್ಲಿ ಅದಕ್ಕಿಂತ ಉತ್ತಮವಾದ ಬಾಳನ್ನು ಬಾಳದ ಜನ, ಬಾಳಲೊಲ್ಲದ ಜನ ಅದನ್ನು ತೆಗಳುವುದೊ ನಿರಸನ ಮಾಡುವುದೊ ಯುಕ್ತವಾಗದು. ಇವರಂಥವರ ಯುಗ ಮುಗಿದಿದೆ. ಹೊಸ ಕಾಲ ಹೊಸತಾಗಿ ತನ್ನ ಧರ್ಮವನ್ನು ತಾನು ಕಂಡುಕೊಳ್ಳಬೇಕು. ಹಿಂದಿಗಿಂತ ತಾನು ಮೇಲೆಂದು ತಾನು ಸ್ಥಾಪಿಸಿಕೊಳ್ಳಬೇಕು. ಯಾವ ಶಕ್ತಿ ಅದನ್ನು ಆಗು ಮಾಡೀತೊ – ಸದ್ಯಃ ಹೇಳುವ ಹಾಗಿಲ್ಲ. ನೂರು ಕೂಗುಗಳು, ಆರಾಧನೆಗಳು, ಅವುಗಳ ನಡುವೆ ಕಾದಾಟ ಇಂದಿನ ಜೀವನರಂಗದಲ್ಲಿ. ಆದ್ದರಿಂದ ಇನ್ನೂ ಸ್ವಲ್ಪ ಕಾಲ ಇದಕ್ಕೆ ಬೇಕಾದೀತೆನ್ನಿಸುತ್ತದೆ.

ಮಾಸ್ತಿ ವೆಂಕಟೇಶ ಅಯ್ಯಂಗಾರ್

ನಾವು ಲೋವರ್ ಸೆಕೆಂಡರಿಯಲ್ಲಿ ಓದುತ್ತಿದ್ದ ಸುಮಾರು ೧೯೧೨–೧೩ನೆಯ ವರ್ಷದ ಹೊತ್ತಿಗೆ, ನಮ್ಮ ಪೇಟೆಯ ನಾಲ್ಕನೆಯ ರಸ್ತೆಯ ಒಬ್ಬ ಗೆಳೆಯರ ಮನೆಗೆ ಮೂರು–ನಾಲ್ಕು ಮಂದಿ ಸ್ನೇಹಿತರು ಬಂದು ಹೋಗುತ್ತಿದ್ದರು. ಅವರೆಲ್ಲ ಮೈಸೂರು ಸಿವಿಲ್ ಸರ್ವಿಸಿನಲ್ಲಿ ಉತ್ತಮ ದರ್ಜೆಯಲ್ಲಿ ತೇರ್ಗಡೆ ಹೊಂದಿ ಹೊಸತಾಗಿ ಅಸಿಸ್ಟೆಂಟ್ ಕಮಿಷನರುಗಳಾಗಿದ್ದವರು. ನುಣುಪಾದ ಸರ್ಜ್, ವಿಹ್ಫ್‌ಕಾರ್ಡ್ ಸೂಟುಗಳನ್ನೊ ಟೆನ್ನಿಸ್ ಫ್ಲಾನಲ್ ಷರಾಯಿಗಳನ್ನೊ ತೊಟ್ಟು, ಜರತಾರಿ ರುಮಾಲು ಹಾಕಿಕೊಳ್ಳುತ್ತಿದ್ದ ಗೆಲುಮುಖದ ತರುಣರು. ಆ ಎಲ್ಲರೂ ಒಳ್ಳೆಯ ಉದ್ಯೋಗದಲ್ಲಿದ್ದು ನಿವೃತ್ತರಾಗಿ ಇಂದಿಗೂ ಅವರವರ ರೀತಿ ಕೀರ್ತಿವಂತರಾಗಿರುವವರೇ. ಅವರಲ್ಲಿ ಮಾಸ್ತಿಯವರೊಬ್ಬರು. ಇಂಗ್ಲಿಷ್ ಸಾಹಿತ್ಯದಲ್ಲಿ ಫಸ್ಟ್‌ಕ್ಲಾಸಲ್ಲಿ ಎಂ. ಎ. ಆಗಿ ತೇರ್ಗಡೆ ಹೊಂದಿ, ಎಂ. ಸಿ. ಎಸ್. ಅಲ್ಲಿ ಪದವೀಧರರಾಗಿದ್ದವರು. ನನಗೆ ಅವರ ಕೃತಿ ಪರಿಚಯವಾದುದು ಸುಮಾರು ೧೯೧೫ರಲ್ಲಿ: "ಇಂಡಿಯನ್ ರೆವ್ಯೂ" ಪತ್ರಿಕೆಯಲ್ಲಿ 'The Home Life of a Kannada Poet' ಎಂಬ ರಾಮಾಶ್ವಮೇಧದ ಮುದ್ದಣ್ಣ– ಮನೋರಮೆಯರ ರಸಿಕ ದಾಂಪತ್ಯವನ್ನು ಕುರಿತ ಲೇಖನದಲ್ಲಿ. ಕನ್ನಡ ಕವಿಯೊಬ್ಬನನ್ನು ಕುರಿತು ಇಂಗ್ಲಿಷಿನಲ್ಲಿ ಬರೆದ ಲೇಖನ ಅದೇ ನನಗೆ ಮೊದಲ ಅನುಭವ.

ಅಲ್ಲಿಂದೀಚೆಗೆ ೧೯೨೨–೨೩ರಲ್ಲಿ ನಾನು ಬೆಂಗಳೂರಿಗೆ ಬಂದಾಗ, ಬಹುತರ ೧೯೨೩ರಲ್ಲಿ, ಅವರ ಮನೆಗೆ ಗೆಳೆಯ ವೆಂಕಣ್ಣಯ್ಯನವರ ಜೊತೆಯಲ್ಲಿ ಹೋದೆ; ಸೆಂಟ್ರಲ್ ಕಾಲೆಜಿನ ಕರ್ನಾಟಕ ಸಂಘದ ವಾರ್ಷಿಕೋತ್ಸವ ಸಮಯದಲ್ಲಿಯೊ ಅಥವಾ ಸ್ವಲ್ಪ ಆ ಮುಂಚೆಯೊ. ಅದು ನಮ್ಮ ಮೊದಲ ಭೇಟಿ. ಆಗ ಅವರು ಸರಕಾರದ ಸ್ಥಳೀಯ ಆಡಳಿತ ಇಲಾಖೆಯ ಉಪಕಾರ್ಯದರ್ಶಿ ಆಗಿದ್ದರು. ಅಂದಿನಿಂದ ಈವರೆಗೂ ಅವರ ಆದರದ ಸವಿಯನ್ನು ಅರಿತ ನಾನು ಅವರಿಗೆ ಎಪ್ಪತ್ತೈದು ಆಗುವ ಈ ಸಮಯದಲ್ಲಿ ಅವರನ್ನು ಕುರಿತು ಎರಡು ಮಾತು ನುಡಿವ ಸಂತೋಷವನ್ನು ಒಂದು ಭಾಗ್ಯವೆಂದುಕೊಂಡಿದ್ದೇನೆ. ಅವರ ಕೃತಿ ದೊಡ್ಡದು; ಅವರ ಬದುಕು ಅದಕ್ಕಿಂತ ದೊಡ್ಡದು. ಈ ಕಾಲದಲ್ಲಿ ಬದುಕಬೇಕಾಗಿ ಬಂದ ಜೀವಿಗೆ ಯಾವ ಒಳ ಹೊರ ಸಂಸ್ಕೃತಿ ಪ್ರಭಾವಗಳು ತಟ್ಟುವುವೊ ಅವೆಲ್ಲ ತಟ್ಟಿ, ಬಡಿದು ಅವರ ಬಾಳ ಹದವನ್ನು ರೂಪಿಸಿವೆ. ಬಹುಮುಖವಾದ ಅವರ ಅನುಭವ ಅವರ ಕೃತಿಗಳಿಗೆ ವಿಷಯವನ್ನೂ ವಿಲಾಸವನ್ನೂ ಸಾಕಲ್ಯವನ್ನೂ ತಂದುಕೊಟ್ಟಿರುವಷ್ಟು ಆ ತಲೆಮಾರಿನ ಇನ್ನಾರ ಕೃತಿಗಳಲ್ಲಿಯೂ ಕಾಣಸದು. ಸುಸಂಸ್ಕೃತವಾದ ಮಧುರವಾದ ಮನೋವೃತ್ತಿ ನಡವಳಿಕೆ ಅವರವು.

ಅವರು ಬರೆಯ ತೊಡಗಿದ ಕಾಲ ಹಳೆಯ ಮೈಸೂರಲ್ಲಿ ಸೂಕ್ಷ್ಮವಾದ್ದು. ಇಂಗ್ಲಿಷ್ ಓದಿದವರು ಕನ್ನಡವನ್ನು ಓದುವುದು, ಕನ್ನಡದಲ್ಲಿ ಮಾತಾಡುವುದೇ ಹೀನಾಯವೆಂದು

ತಿಳಿದಿದ್ದ ಕಾಲ. ಅವರಲ್ಲಿ ಈ ಪಕ್ಷಪಾತವಿದೆಯೆಂದು ಕಂಡರೆ ಮೇಲಿನ ಅಧಿಕಾರಿಗಳ ವ್ಯಂಗ್ಯ, ಅಣಕ ಅಂಥವರಿಗೆ ಬೀರಿ ಕೀಳ್ಮೆ ತರುತ್ತಿತ್ತು. ಕನ್ನಡಕ್ಕೆ ಒಂದು ಆಚಾರ್ಯ ಪದವಿಯನ್ನು ಪಡೆದುಕೊಂಡಿದ್ದ 'ಶ್ರೀ'ಯವರೇ ಸುಮಾರು ೧೯೨೬ರ ವರೆಗೂ ಸಾರ್ವಜನಿಕ ವೇದಿಕೆಗಳ ಮೇಲಾಗಲಿ ಕಾಲೆಜಿನಲ್ಲಿಯಾಗಲಿ ಕನ್ನಡದಲ್ಲಿ ಭಾಷಣ ಮಾಡುತ್ತಿರಲಿಲ್ಲ. ಮಾಸ್ತಿಯವರ ಮೇಲಧಿಕಾರಿಗಳೊಬ್ಬರು, ಈಚೀಚೆಗೆ ಕೂಡ, 'ನಿಮಗೆ ಸಿವಿಲ್ ಸರ್ವಿಸ್ ಅಧಿಕಾರ ಹೆಚ್ಚು ಪ್ರಿಯವೊ ಕನ್ನಡದ ಕೆಲಸ ಹೆಚ್ಚು ಪ್ರಿಯವೊ ಎಂದು ಮಾಸ್ತಿಯವರನ್ನು ಕೇಳಿದರೆ ಮಾಸ್ತಿಯವರು ಕನ್ನಡಕ್ಕೆ ಮೊದಲ ಸ್ಥಾನ ಕೊಡುವರು' ಎಂದು ಕಟಕಿ ನುಡಿದರಂತೆ. ಅವರಿಗೆ ಆಗದವರು ಅವರ ಅಧಿಕಾರ ಪ್ರಪಂಚದಲ್ಲಿಯೂ ಈ ಕಾರಣದಿಂದ ಅನ್ಯಾಯ ಮಾಡಿರುವುದುಂಟೆಂದು ಕೇಳಿದ್ದೇನೆ. ಇಂಥ ಕಾಲದಲ್ಲಿ ಸಿವಿಲ್ ಸರ್ವಿಸ್‌ನಲ್ಲಿದ್ದ ಮಾಸ್ತಿಯವರು ಸಣ್ಣಕತೆಯನ್ನೂ ಕವಿತೆಗಳನ್ನೂ ಬರೆಯತೊಡಗಿದುದು ಸಾಹಸವೇ, ಅದ್ಭುತವೇ ಆಯಿತು. ಅವರು 'ಶ್ರೀನಿವಾಸ' ಎಂಬ ಹೆಸರಲ್ಲಿ ಬರೆದುದು ಒಂದು ಬಗೆಯಲ್ಲಿ ಉಪಕಾರವಾಯಿತು. ಸರ್ಕಾರದ ಅಧಿಕಾರಿಯಾಗಿದ್ದವರು ಅದನ್ನು ಬರೆಯುವರೆಂಬ ಶಂಕೆ ಪಕ್ಷಪಾತ ಆ ಬರವಣಿಗೆಯ ಮೇಲೆ ಕವಿಯುವ ಹಾಗಿರಲಿಲ್ಲ. 'ಕತೆ' ಎಂದು ಬರೆದು ಅದು ಕತ್ತೆಯ ತೇಲಿಸಿದ ರೂಪವಿರಬೇಕಲ್ಲ? –ಎಂದು ಅವರನ್ನು ಸಿಕ್ಕಿಸಿಕೊಂಡ ಅಣಕಕ್ಕೆ ಒಂದು ಮೋಜೇ ಇತ್ತು. ಅವರು ಅನುಭವಿಸಬೇಕಾಗಿ ಬಂದ ಕುಚೋದ್ಯಗಳನ್ನೂ ಎಡರುತೊಡರುಗಳನ್ನೂ ಕಾಣಿಸಲು ಮಾತ್ರ ಈ ಸಂಗತಿಯನ್ನು ತಿಳಿಸಿದೆ.

ನಾನು ಅವರನ್ನು ಕಾಣುವಾಗ್ಗೆ ಅವರ ಸಣ್ಣ ಕತೆಗಳ ಎರಡು ಸಂಕಲನಗಳು ಬಂದಿದ್ದವು. ಎರಡನೆಯದನ್ನು ನಾನು ಪ್ರಬುದ್ಧ ಕರ್ಣಾಟಕದಲ್ಲಿ ಅವಲೋಕಿಸಿದ್ದೆ. ಹಲವು ಒಳ್ಳೆಯ ಕತೆಗಳು ಆಗಲೇ ಬಂದಿದ್ದರೂ ಇತರರ ಪಕ್ಷಪಾತಕ್ಕೆ ಈಡಾದ 'ಇಂದಿರೆಯೊ ಅಲ್ಲವೊ' ಎಂಬ ಮನೋವಿಶ್ಲೇಷಕ ಚಿತ್ರಣಕ್ಕಿಂತ ನನಗೆ ಹಲವು ಪದರಗಳ ದೃಷ್ಟಿ ಹಾಯಿಸಿದಂತಿದ್ದ ''ಬೀದಿಯಲ್ಲಿ ಹೋಗುವ ನಾರಿ'' ಹೆಚ್ಚು ಸಮರ್ಪಕವೆಂದು ತೋರಿತ್ತು. ಆಗ ಒಂದೆರಡು ಟೀಕೆಗಳು ಎದ್ದವು. ಕತೆ ಆರಂಭವಾಗುವ '' ಆ ನಾರಿ''ಯ ನಾಟಕೀಯತೆಯೇ ವಿಶಿಷ್ಟ; ಜೊತೆಗೆ, ಇಂಗ್ಲಿಷ್ ಓದಿದವರಿಗೆ ಹೊಸತಲ್ಲದಿದ್ದರೂ ನಮ್ಮ ನಾಡಿನ ಹೊಸತಾದ, ಅಡಕಿಲು ಹೆಸರು 'ಮಯಿಳೂರು' ಮೈಸೂರು–ಬೆಂಗಳೂರಿನ ಸೇರುವೆ ಮಾತು– Thackeray ಯ Camford-Oxbridge ಅಂಥ ಪದಗಳ ರೂಪಸಾದೃಶ್ಯದ್ದು– ಆವರೆಗೆ ಇನ್ನಾರಿಗೂ ಹೊಳೆದಿರಲಿಲ್ಲ. ಹೊಳೆದಿದ್ದರೆ ಸಾಹಿತ್ಯಕ್ಕೆ ಬಂದಿರಲಿಲ್ಲ. ಅದಕ್ಕೆ ಕತೆಯಲ್ಲಿ ಕೊಡುವ ಕಾರಣವೂ ಅಷ್ಟೇ ನವುರಿನದು. ಆ ನಾರಿ ಬೆಂಗಳೂರವಳೆಂದರೆ ಮೈಸೂರವರು, ಮೈಸೂರವಳೆಂದರೆ ಬೆಂಗಳೂರವರು ಅಸಮಾಧಾನಪಟ್ಟಾರೆಂದು ನಡುಕಲ ಸ್ಥಾನಮಾನವನ್ನು ಊರಿಗೆ ಹಾಕಿದ ಸ್ವಾರಸ್ಯ ಮನಸ್ಸಿಗೆ ತುಂಬಾ ಸೊಗಸಿತು. ಅವರ 'ಬಿನ್ನಹ' 'ಅರುಣ' ಎರಡೂ ಆವರೆಗೆ ಪ್ರಕಟವಾಗಿದ್ದವು. 'ಅರುಣ'ದಲ್ಲಿ ಸರಳ ರಗಳೆಯನ್ನು ನಮ್ಮ ಕಡೆ ಮೊದಲ ಬಾರಿಗೆ ಬಳಸಿ ಕಥೆಯನ್ನು ರಚಿಸಿದ್ದರು. ಆ ಕಥೆಯ ಹಾರ್ದತೆ, ರಂಜಕತೆ ನನ್ನ ಮನಸ್ಸಿಗೆ ತುಂಬಾ ಸಂತೋಷವನ್ನು

ತಂದಿತ್ತು. ಅಲ್ಲಿಂದೀಚೆಗೆ ಎಷ್ಟೋ ಸಣ್ಣ ಕತೆಗಳ ಸಂಕಲನವನ್ನೂ ಕಪಿತೆ, ನಾಟಕ, ವಿಮರ್ಶೆ, ಜೀವನಕಥೆ, ಪ್ರಸಂಗ, ಶಾಸ್ತ್ರ, ದರ್ಶನ, ಚಿಂತನಮಂಥನಗಳನ್ನೂ ಅವರು ಪ್ರಕಟಿಸಿದ್ದಾರೆ. ಎಲ್ಲದರಲ್ಲಿಯೂ ಅವರ ಸಜ್ಜನಿಕೆ, ಮೃದುತೆ, ಹೃದಯ ಸ್ಪ್ರಕ್ಕಾದ ರೀತಿ, ಸರಸವಿನೋದ, ಕ್ರಮವಾಗಿ ಊರುತ್ತಿರುವ ಆಳ, ವಿವೇಕ, ಲೋಕ ಜೀವನದ ತುಂಬು ಅನುಭವ– ಅವು ವಿಶೇಷವಾಗುತ್ತದೆ. ಮೊದ ಮೊದಲಲ್ಲಿ ಕತೆ, ಕವನ, ನಾಟಕಗಳಲ್ಲಿ ಸುಳಿಯುತ್ತಿದ್ದ ತಿಳಿಹಾಸ್ಯ ನಮ್ಮ ಸಾಹಿತ್ಯಕ್ಕೆ ಹೊಸ ಬಗೆಯ ಕೊಡುಗೆ. ಅದು ಈಚೆಗೆ ಮಾಯವಾಗಿರುವುದು ಮೃದುಹಾಸ್ಯದ ಬರವಿರುವ ನಮಗೆ ಒಂದು ನಷ್ಟವೇ ಆಗಿದೆ.

ಅವರಿಗೆ ಸಣ್ಣಕತೆಯ ಶ್ರೀನಿವಾಸರೆಂಬ ಕೀರ್ತಿ ಬೆಳೆದು ಅವರ ಇತರ ಸಾಹಿತ್ಯ ಕೃತಿಗಳಿಗೆ ಅನ್ಯಾಯವಾಗಿದೆಯೆಂದು ನನ್ನ ಅಭಿಪ್ರಾಯ. ಸಣ್ಣ ಕತೆಯಲ್ಲಿ ಅವರ ಸಣ್ಣ ಕತೆಗಳ ಗುಣ ಅಲ್ಪವೆಂಬುದಲ್ಲ ಕಾರಣ; ಸಾಹಿತ್ಯಗುಣದಲ್ಲಿ ಅವನ್ನು ಮೀರಿಸಿದ ಕತೆಗಳು ಹೆಚ್ಚಿಲ್ಲ. ಇಲ್ಲವೆಂದರೆ ಇತರರು ಆಕ್ರೋಶಪಟ್ಟಾರೆಂದು ಹಾಗೆ ಹೇಳುತ್ತಿದ್ದೇನೆ ಮಾತ್ರ. ಆ ಪ್ರಪಂಚದ ವಿಸ್ತಾರ, ವಿವಿಧತೆ, ಆ ತಂತ್ರಜ್ಞತೆ, ಚಳಕ, ಕತೆಗಾರಿಕೆಯ ಸಹಜತೆ, ನೇರ ಅತ್ಯಂತ ಸುಂದರವಾದವು. ಸೌಂದರ್ಯಕ್ಕೆ ಅಸಹನೆ ಪಡುವ, ಕೊಳೆ ದುರ್ಭಗತೆಗಳಿಗೆ, ಕೇವಲ ಕೃತಕತೆಗಳಿಗೆ, ಚೇಷ್ಟೆಗೆ ಒಲಿಯುತ್ತಿರುವ ಕಾಲದಲ್ಲಿ ಅವುಗಳ ಬೆಲೆ ಕುಂದಿರುವುದೂ ಅವಜ್ಞೆಗೀಡಾಗಿರುವುದೂ ಅವರ ದೋಷವೆಂದು ಹೇಗೆ ಹೇಳಲಿ?

ಅಲ್ಲದೆಯೊ: ಅವರ ಭಾಷೆ ತೀರ ಸುಲಭ, ಸರಳ. ಕಷ್ಟ ಪದಗಳನ್ನೂ ಉಚ್ಚಾರಣೆಗೆ ಕ್ಲೇಶತರುವಂಥದನ್ನೂ ಅವರು ಎಂದಿಗೂ ಬಳಸುವುದಿಲ್ಲ. ವಾಕ್ಯಗಳು ಚಿಕ್ಕವು. ಎಲ್ಲರಿಗೂ ಅರ್ಥವಾಗುತ್ತದೆ. ಇದು ಯಾವ ಮಹಾಗುಣ? –ಅರ್ಥಕ್ಕೇಕೆ ಕುದಿಯುತ್ತೀರಿ? ಎಂದು ಕೇಳುವ ಕಾಲ ಇದು. ನಿರೂಪಣೆಯನ್ನು ಗಾಸಿಪಡಿಸದೆ, ತಾವು ಗಾಸಿಪಡದೆ ನಡೆಸಿ ಕಥೆ ಕೃತಾರ್ಥವಾಗುತ್ತದೆ. ಈ ಪ್ರಸಾದ ಗುಣ, ವಿಶದತೆ ಅವರ ಮೇಲೆ ಸಲ್ಲದ ಅಪವಾದವನ್ನು ತಂದಿದೆ. ಅದರ ಆಳ ಅಷ್ಟಕ್ಕಷ್ಟೇ ಎಂದವರಿದ್ದಾರೆ. ಹೃಷೀಕೇಶದಿಂದಾಚೆಗೆ ಲಕ್ಷ್ಮಣಜೂಲದಲ್ಲಿ ಸೇತುವೆಯ ಮೇಲಿಂದ ಗಂಗೆಯೊಳಕ್ಕೆ ಹಿಂದಿನ ಕಾಲದ ಒಂದು ಬೆಳ್ಳಿ ದೊಡ್ಡಾಣೆಯನ್ನು ಎಸೆದರೆ ೩೦–೪೦ ಅಡಿ ನೀರಿನ ಆಳದ ತಳದ ತಾಯ್ಮಳಲಲ್ಲಿ– ಅಥವಾ ಅಡಿನೆಲಸಿನ ಸಣ್ಣ ಉಂಡೆ ಕಲ್ಲುಗಳ ನಡುವೆಗೆ– ಆ ನಾಣ್ಯ ಇಳಿದು ಹೋಗಿ ಸೇರಿಕೊಂಡದ್ದು ಕಾಣಿಸುತ್ತಿತ್ತು. ಗಂಗಾಸಲಿಲದಂತೆ ಮಾಸ್ತಿಯವರ ಶೈಲಿಗೆ ಒದಗುವ ಮಾತು: ನಿರ್ಮಲ, ಸ್ಫಟಿಕೋದಕ. ಹೆಚ್ಚು ಕ್ಲಿಷ್ಟವಾಗಿ ಗೌಡೀ– ಇನ್ನೊಂದರ್ಥದಲ್ಲಿ ಆರಭಟೀ –ಪ್ರಯೋಗಗಳನ್ನು ಸಾಮಾನ್ಯರ ಮೇಲೆ ಎಂದೂ ಅವರು ಹೇರರು. ಆನೆ– ಗೇಂಡಗಳಂಥ, ಸುವರ್ಣಗೆಡ್ಡೆಗಳಂಥ ಗಂಟುಮಾತುಗಳನ್ನು ಬಳಸಿ, ಉಸಿರು ಕಟ್ಟುವಷ್ಟು ದೊಡ್ಡವಾದ ವಾಕ್ಯರಚನೆ ಮಾಡಿದ್ದಿದ್ದರೆ ಅವರ ದರ್ಶನ ಹೆಚ್ಚು ಪ್ರಗಾಢವೆನ್ನಿಸುತ್ತಿತ್ತೇನೊ. ಈಗ ಆ ಮಾತು ಬಡಕಲಾಗಿ ಹಲವರಿಗೆ ಕಾಣುತ್ತದೆ.

ಆ ಕಾಲದಲ್ಲಿ ಇನ್ನೊಂದು ಅಗತ್ಯವಿತ್ತು. ಕಾವ್ಯವೆಂದರೆ ಚಂಪೂ, ಅದರ ರೀತಿ ಪ್ರೌಢ, 'ರಸಭರಿತ', ಶ್ಲೇಷಭೂಯಿಷ್ಠ, ವಿರೋಧಾಭಾಸಾದಿಗಳ ಬೀಡು. ಕಬ್ಬಿಣದ ಸರಪಳಿಗಳಂತೆ ಹೊಸೆಯುತ್ತಿದ್ದ ಗದ್ಯಪದ್ಯ ಕೃತಿಗಳಿಗೆ ಬೇಸತ್ತಿತ್ತು ಹೊಸಕಾಲದ ಒಂದು

ದುಬಿ. ಗದ್ಯವನ್ನೂ ಪದ್ಯವನ್ನೂ ಆ ಕೋಳಸರಿಗೆಗಳಿಂದ ಬಿಡಿಸುವ ಉಪಕಾರಕ್ಕೆ ಜನತೆ ಆಸೆಪಡುತ್ತ ಕಾದಿತ್ತು. ಅಲಂಕಾರಗಳ ಹೊರೆಯಿಂದ ಅದನ್ನು ಬಿಡಿಸಿದರೆ ಸಾಕೆಂದು ಹಲವರು ನೇರವಾದ, ಸರಳವಾದ ಗದ್ಯ ಪದ್ಯ ಬರವಣಿಗೆಗೆ ತೊಡಗಿದರು. ಆ ಕಾಲದಲ್ಲಿದ್ದ ಒಂದು ಪ್ರೌಢಿಯ ಗಣನೆಯಿಂದ ಆಗ –ಈಚಿನ ಇನ್ನೊಂದು ಬಗೆ ಅನ್ಯಾಪದೇಶ ಪ್ರತಿಷ್ಠೆಯ ಕಾರಣದಿಂದ ಈಗ –ಈ ಬಡವು ರಚನೆಗೆ ಅಪಖ್ಯಾತಿ ಬಂದುದು ಕಾಲಧರ್ಮ; ಆದರೆ ಇದು ಖಂಡಿತ ಕಾಲಹತವಲ್ಲ, ಸರಳತೆ, ವಿಶಾಲತೆ ಇಂಥಲ್ಲಿ ಶಕ್ತಿಸ್ಥಾನ. ಅಲಂಕಾರದ ಚಿಕ್ಕಣತೆ ಕುಸುರಿ ಶಕ್ತಿಕ್ಷಯದ Decadence ಲಕ್ಷಣವಾಗಬಲ್ಲದು.

ಅವರ ಕತೆಗಳಲ್ಲಿ ವರ್ಣನೆ, ಕತೆಗಾರಿಕೆ ಎರಡೂ ರಮಣೀಯವಾಗಿ ಸೇರಿಕೊಂಡಿರುತ್ತವೆ. ರಂಗಪ್ಪನ ಪ್ರಸಂಗಗಳು ಲಘು ಚಿತ್ರಗಳಾದರೆ, ರಂಗಸಾಮಿಯ ಅವಿವೇಕ, ಮಂಗಮ್ಮನ ಕಥೆ, ವೆಂಕಟಶಾಮಿಯ ಪ್ರಣಯ ಒಯ್ಯಾರವಿಲ್ಲದೆ ನಡೆಯುವ ಕತೆಗಳು. ಹಳೆಯ ಕತೆಗಳ ಹಾಳತ ಒಂದು ಬಗೆಯದಾದರೆ, 'ಹೇಮಕೂಟದಿಂದ ಹಿಂತಿರುಗಿ ಬಂದ ಮೇಲೆ' ರಚಿಸುವ ವನಶೋಭಾ ವಿಲಾಸವೂ, ಮಖಿಮಲ್ಲು ಹಸರವೂ ಮೋಹಕವಾದವು. ಒಮ್ಮೆ ಪ್ರಬುದ್ಧ ಕರ್ಣಾಟಕಕ್ಕೆ ಆಯುವಾಗ, 'ಕೃಷ್ಣಮೂರ್ತಿಯ ಹೆಂಡತಿ'ಯ ಕಥೆಯನ್ನು ಮೊದಲು ಪ್ರಕಟಿಸುವುದೊ 'ಮಸುಮತ್ತಿ' ಯನ್ನೊ ಎಂದು ಚರ್ಚೆ ಏಳಲು, ಮೊದಲು 'ಮಸುಮತ್ತಿ'ಯನ್ನೂ ಆಮೇಲೆ 'ಕೃಷ್ಣಮೂರ್ತಿಯ ಹೆಂಡತಿ'ಕಥೆಯನ್ನೂ ಪ್ರಕಟಿಸಲಾಯಿತೆಂದು ನನ್ನ ನೆನಪು. ಎರಡು ಗುಣಗಳ ತಾರತಮ್ಯವಲ್ಲ ಗಣನೆಗೆ ಬಂದುದು: ಒಂದರದು ನುಣಪು; ಇನ್ನೊಂದರದು ದುಃಖಭರತೆ. ಅಳಲಲ್ಲಿ ಅದ್ದಲು ಅವರು ಇಷ್ಟಪಡರಾದರೂ ಅಳುವಿನ ಪ್ರಸಂಗ ಬಂದಾಗ ಆ ವೇದನೆಯ ಮೊನೆ, ದಾರುಣತೆ ದುಸ್ಸಹವಾಗಬಲ್ಲವು. ಭೂತದ ಕತೆ, ಕಳ್ಳರ ಕತೆ, ಹಾವುಗಳ ಕತೆ ಎಂದಿಗೂ ಜನದ ಮನಸ್ಸನ್ನು ಬಂದಿ ಹಿಡಿಯುತ್ತವೆಯಲ್ಲವೆ? ಅವರು ಬರೆಯುವುದಕ್ಕಿಂತ ಚೆನ್ನಾಗಿ ಕತೆ ಹೇಳಬಲ್ಲರು. 'ಮಲೆನಾಡಿನ ಪಿಶಾಚ' ಕತೆಯನ್ನು ಮಡಿಕೇರಿ ಸಾಹಿತ್ಯ ಸಮ್ಮೇಳನದ ಕಾಲದಲ್ಲಿ ಹೇಳಿದಾಗಿನ ಒಂದು ಪಾದಭಾಗದ ಆವರಣಕಲ್ಪನೆ ಬರೆದಿರುವ ಕತೆಗೆ ಬಂದಿಲ್ಲ. ಆ ರಾತ್ರಿ ಶ್ರೀಯವರು, ವೆಂಕಣ್ಣಯ್ಯ, ಬೆಳ್ಳಾವೆಯವರು ನಡುರಾತ್ರಿ ಹನ್ನೆರಡು ಗಂಟೆ, ಒಂದು ಗಂಟೆಯಲ್ಲಿ ಅದನ್ನು ಕೇಳುತ್ತ ಬಂದಿಗಳಾಗಿ ಕೂತುಕೊಂಡಿದ್ದ ಚಿತ್ರ ನನ್ನ ಕಣ್ಣ ಮುಂದಿದೆ. ಕಲೆಯ ಗುಣವನ್ನು ಕೆಡಿಸದೆ, ಹದವನ್ನು ಮೀರದೆ ಆ ಕತೆಗಳಲ್ಲಿ ಕ್ರಿಯಾ ಸಾಧನೆಯಾಗುತ್ತದೆ. ಗೌತಮಿಯ ಕಥೆ, ಗಯತೆಯವರ ಕೊನೆಯ ದಿನಗಳು, ಜೈನ ಪಂಡಿತನೊಬ್ಬನ ಕತೆಯ ವಿಲಾಸ ಮತ್ತೊಂದು ಓಜೆಯ ನೆಲಸುಳ್ಳವು; ವಿಧಾನ ಹೆಚ್ಚು ಗಂಭೀರ. ಸಾರಿಪುತ್ರನ ಕಥೆಯಲ್ಲಿನ ಸಾಹಸ ಅವರಿಗೆ ಮಾತ್ರ ದಕ್ಕುವಂಥದು; ಸಂನ್ಯಾಸಿಯಾಗಿ ಬುದ್ಧನ ಬಲಗೈಯಾಗಿದ್ದ ಆತ ತನ್ನ ಊರಿಗೆ ಹಿಂತಿರುಗಿ ಪೂರ್ವಾಶ್ರಮದ ಹೆಂಡತಿಯನ್ನು ಕಾಣುವ ದೃಶ್ಯ ಮರೆಯಲಾಗದ್ದು, ಬುದ್ಧನು ಯಶೋಧರೆಗೆ ಕೊಟ್ಟ ದರ್ಶನದ ವೈಖರಿ ಒಂದಾದರೆ ಇದು ಬೇರೆ ರಸದ್ದು. ಇದಕ್ಕೆ ಮೊದಲೇ "ಸುಬ್ಬಣ್ಣ"ದಲ್ಲಿ ಆ ಬಗೆಯ ಯತ್ನ –ಪ್ರಯೋಗ ಸಿದ್ಧವಾಗಿತ್ತಾದರೂ ಅಂತಹ ಸನ್ನಿವೇಶವನ್ನು ಕಲ್ಪಿಸುವುದೂ ರೂಪಿಸುವುದೂ ಎಂಥ ಯಾರಿಗೂ ಎದೆಗಾರಿಕೆಯ ಕೆಲಸವೇ. ಸಾರಿ

ಪುತ್ರನ ಕಥೆಯಲ್ಲಿ ಒಳದೃಶ್ಯವಾಗಿ ಮೊದಮೊದಲಿಗೇ ಬರುವ ಬುದ್ಧ-ಬ್ರಾಹ್ಮಣ ಸಂವಾದದ ತುಣುಕು ಆ ಬುರುಕಿನಲ್ಲಿ, ಸಾರವತ್ತತೆಯಲ್ಲಿ ಬೇರೆಲ್ಲಿಯೂ ಕಾಣದಂಥದು. ಇಷ್ಟನ್ನು ಹೇಳಿದುದು ಅವರ ಕಥೆಗಾರಿಕೆಯಲ್ಲಿ ಎಷ್ಟು ವಿಸ್ತಾರವಿದೆಯೆಂದು ಕಾಣಿಸಲು. ನಿಜಗಲ್ಲಿನ ರಾಣಿಯ ಕತೆಗಾರಿಕೆಯಂತೂ ನಾಗರಹಾವಿನ ವಿಷದಂತೆ ಏರುತ್ತದೆ. ಒಂದು ಗುಣವಾಚಿಗೆ, ಕ್ರಿಯಾ ವಿಶೇಷಣಕ್ಕೆ ಆಕ್ರೋಶ ಪಡುವಂತೆ ಧಾವಿಸುತ್ತದೆ –ಕತೆಗಾರಿಕೆ ತನ್ನ ಕೈವಲ್ಯದಲ್ಲಿ. ನಿಜವಾದ ಕವಿತೆ ಭಾಷಾಂತರಕ್ಕೆ ಸಿಕ್ಕದೆನ್ನುತ್ತಾರೆ; ಮಾಸ್ತಿಯವರ ಕಥೆಗಳ ಜೀವರಸ ಕೂಡ ಅಂಥದೇ. ಅವರೇ ಇಂಗ್ಲಿಷಿಸಿದರೂ ಅವುಗಳ ಉಸಿರೋಟ, ಜೀವ ಅನಾಮತ್ತಾಗಿ ಸಿಕ್ಕವು. ಒಂದು ನುಡಿಗಟ್ಟಿಗೆ ಹುಟ್ಟಿದ ಸತ್ವ ಬೇರೊಂದಕ್ಕೆ ತನ್ನ ಹೃನ್ಮರ್ಮವನ್ನು ಎಂದಿಗೂ ಪೂರ್ತಿಯಾಗಿ ಬಿಟ್ಟು ಕೊಡಲಾರದೇನೊ!

"ಸುಬ್ಬಣ್ಣ"ಕ್ಕೆ ಕನ್ನಡ ಕಥಾ ಪ್ರಪಂಚದಲ್ಲಿ ಹಿರಿಯ ಸ್ಥಾನವುಂಟು. ಅದು ಸಣ್ಣ ಕತೆಯಲ್ಲ. ಕಾದಂಬರಿಯೆನ್ನಲು ಕೆಲವರು ಒಪ್ಪರು. ಬಹುಶಃ ನಿಡುಗತೆ. ಹೆಸರನ್ನು ಕಟ್ಟಿ ಕೊಂಡೇನು ಎಂದೀರಿ. Columba, Carmen ಮುಂತಾದ ಫ್ರೆಂಚ್ ಕಾದಂಬರಿಗಳನ್ನು ಓದಿದವರಿಗೆ ಈ ಬಗ್ಗೆ ಪೇಚಾಟಗಳು ಬಾರವು. ತರಗತಿಗಳಲ್ಲಿ ಸುಬ್ಬಣ್ಣದ ಪ್ರತಿ ಮಾತನ್ನೂ ಓದಿ ಉತ್ಸಾಹ ಜಳ್ಳೊಡೆಯದಂತೆ ಪಾಠ ಹೇಳಿಯಾಗಿದೆ. ಮಾತುಗಳ ಸಂಪತ್ತಿ ರೂಢಿಸುವ ಪ್ರಯೋಜನ, ಸನ್ನಿವೇಶವನ್ನು ರೂಪಿಸುವ ಅವುಗಳ ಶಕ್ತಿ, ಒಟ್ಟು ಓಟ ರಂಗುಗಳಿಗೆ ಅವು ಎರೆಯುವ ರಸ ಅದ್ಭುತವಾದವು. ಕಸುಗಾಯಿ ಹುಳಿಗಾಯಿ ಅಂತಿದ್ದ ಸುಬ್ಬಣ್ಣನ ಜೀವ ಸಿಹಿ ಹಣ್ಣಾಗಿ, ತಾನಾಗಿ ಕಾವು ಕಳಚಿ ಬಿದ್ದ ಪರಿಣಾಮಸಾಧನೆ ಅದರಲ್ಲಿದೆ. ಒಂದೆರಡು ಚಿಕ್ಕ ಘಟನೆಗಳನ್ನು ಹಾಗೆ ಹೀಗೆ ಟೀಕೆ ಮಾಡಿದವರಿರುವರಾದರೂ ಒಟ್ಟು ಕ್ರಿಯೆ ಕನ್ನಡ ಸಾಹಿತ್ಯಕ್ಕೆ ಒಂದು ರಸಗಾಣಿಕೆಯನ್ನು ಕೊಟ್ಟಿದೆ. "ಚೋಮನ ದುಡಿ" 'ಬೆಟ್ಟದ ಜೀವ'ಗಳು ಮಾತ್ರ ಆ ಪ್ರಕಾರದ ನಿಷ್ಠೆಯ ಕೃತಿಗಳು. ಅಲ್ಲಿನ ಕೃತಿಯಲ್ಲಿರುವದು ಕುಂಚ ಕುಶಲತೆ; ಇದು ರೇಖಿನ ಚಿತ್ರ; ಹತ್ತಿರ ಹತ್ತಿರ ಕಂಡರಣೆಯ ಅಥವಾ ಹಾಳತವಾದ ಕಟ್ಟಡ ಶಿಲ್ಪ.

ಅವರ ಎರಡು ಕಾದಂಬರಿಗಳು ಚೆನ್ನ ಬಸವನಾಯಕ, ಚಿಕ್ಕ ವೀರರಾಜೇಂದ್ರ. ಕತೆಗಾರಿಕೆಯಲ್ಲಿ ಅವುಗಳ ತೂಕ ಅಲ್ಪವಾದ್ದಲ್ಲ. ಬಿದನೂರಿನ ಕಡೆಯ ದಿನಗಳ ಕತೆ ಒಂದು; ಕೊಡಗಿನ ಕಡೆಯ ರಾಜನದು ಇನ್ನೊಂದು. ಒಂದರಲ್ಲಿಯ ಮಲ್ಲಿಗೆಯ ಒಳಗತೆ, ಮಠದ ಅಯ್ಯ, ರಾಮಾಶಾಸ್ತ್ರಿ, ನೇಮಯ್ಯನವರದು ಒಂದು ಹದದ ಸಾಮರಸ್ಯದ್ದು. ವೀರಮ್ಮಾಜಿ ಚೆಲುವಾಂಬೆಯರ ಚಿತ್ರ ತುಂಬಾ ಸಂಪುಷ್ಟವಾಗುತ್ತದೆ. ಆ ಪುಸ್ತಕದ ಸಂಬಂಧದಲ್ಲಿ ಒಂದು ಲೌಕಿಕ ವಿರಸ ಬೆಳೆಯಿತು. ಅವರಿಗಾಗಲಿ, ಕತೆಗಳ ಮೂಲರಸಕ್ಕಾಗಲಿ ಸಲ್ಲದ ಆರೋಪ ಹೊತ್ತು ಅದಕ್ಕೆ ಅಪಕೀರ್ತಿ ಉಂಟಾದ್ದು ಸಾಹಿತ್ಯ ಪ್ರಪಂಚಕ್ಕೇ ನಡೆದ ಒಂದು ಅಪಚಾರ. ಚಿಕವೀರರಾಜ ತನ್ನ ಚಂದ್ರಾಯುಧವನ್ನು ಎರಡೂ ಕಡೆ ಹಿಡಿದು ಊರಿ ತೊಟ್ಟಿಲಲ್ಲಿದ್ದ ಮಗುವಿನ ಕೊರಲನ್ನು ಕತ್ತರಿಸಿ ಬೇರ್ಪಡಿಸುವ ಕೊಲೆಯ ದೃಶ್ಯ ಕಠೋರವಾದ್ದು. ಇಷ್ಟು ಮಾತುಗಳು ಕೂಡ ಅಲ್ಲಿಲ್ಲ. ಹಾಗೇ ಒಂದರಲ್ಲಿ ಕಾಪಾಲಿಕನದು; ಇನ್ನೊಂದರಲ್ಲಿ ಮಲೆಯಾಳಿಯದು –ದೃಶ್ಯಗಳು.

ಕತೆಗಾರಿಕೆಯೆನ್ನುವಾಗ ಅವರ ಐದು ಕತೆಗಳೂ ಎಲ್ಲಿಗೆ ಬರಬೇಕು; ಮಲ್ಲಮ್ಮನದು, ಸೀಲಗಾರ ಮಾದನದು, ಮೂಕನ ಮಕ್ಕಳದು, ಗೌಡರ ಮಲ್ಲಿಯದು, ರಾಮನವಮಿಯದು, ಮದಲಿಂಗ, ಲೇಪಾಕ್ಷಿಗಳದು. ಒಂದೊಂದರಲ್ಲೂ ಒಂದೊಂದು ಮೃದುವಿಲಾಸ, ಭಾವಸಂಪತ್ತಿ ಇವೆ. ಆದರೆ 'ನವರಾತ್ರಿ' ಕಥೆಗಳಲ್ಲಿ ಹೆಚ್ಚು ಗುಣ, ಕಾಂತಿ ಇವೆ. ಹತ್ತು ದಿನಗಳು ಸಾಹಿತ್ಯ ಗೆಳೆಯರೆಂಬವರು –ಅವರನ್ನು ಗುರುತಿಸಬಹುದು, ನಿಜವಾದ ಹೆಸರುಗಳ ಕೂಳಿಗಳು ಅಲ್ಲಿ ಇವೆ –ಒಂದೊಂದು ದಿನ ಒಬ್ಬೊಬ್ಬರಂತೆ ಒಂದೊಂದು ಒಕ್ಕಣಿಸಿವೆ. ಅವರವರ ಅಭಿರುಚಿ, ಜೀವಗುಣವನ್ನೇ ವಿಶೇಷವಾಗಿ ಪ್ರತಿಪಾದಿಸುವಂತಿರುವ ಕತೆಗಳನ್ನು ಹೇಳಿದಂತೆ ಕಲ್ಪಿಸಿ, ಅವರವೇ ಗುಣ, ಸ್ವರೂಪ, ಕೃತಿತ್ವ, ಕಥೆ, ಕಡೆಗೆ ಕಥೆಯ ವಿಮರ್ಶೆ, ತೂಲನಗಳನ್ನು ಸೇರಿಸಿ, ಚಾಸರನ ಕ್ಯಾಂಟರ್‌ಬರಿ ಕಥೆಗಳಂತೆ ಬರೆದಿರುವುದು ಬಹುದೊಡ್ಡ ಕೆಲಸ. ಈ ಕೃತಿಗಳ ಹಿರಿಮೆಯನ್ನು ನಾಡು ಗುರುತಿಸಿ ಮೆಚ್ಚಲಿಲ್ಲ. ರುಚಿಯ ಚರಿತ್ರೆಯಲ್ಲಿ ವಿಚಿತ್ರಗಳಿಗೆ, ವಿಕಾರಗಳಿಗೆ ರಾಯಮಾನ ದೊರಕುವಷ್ಟು ಕೃತಿವಿಶೇಷಗಳಿಗೆ ದೊರೆಯಲಾಗದ್ದು ಸೋಜಿಗ. ಒಂದು ರೀತಿ ನೋಡಿದರೆ ಅವು ತೂಕದಲ್ಲಿ ಯಾವ ಇತಿಹಾಸ ಕಾವ್ಯಕ್ಕೂ ಕಡಮೆಯಿಲ್ಲ. ಅಗಡಿಯ ಸಾಧುಗಳು, ಸೋಜಿಗದ ಹೊಳಲು, ರುರು –ಪ್ರಮದ್ವರೆ, ಜೋನ್ ಆಫ್ ಆರ್ಕ್, ಅಪರಂಜಿ ಅರಿಗ –ಮುಂತಾದವು ಭಾರತದ ಇನ್ನೊಂದು ಭಾಷಾಪ್ರಾಂತದ ಕೃತಿಗಳಲ್ಲಿ ಕಾಣದವು. ವಿಮರ್ಶೆ, ನಿರ್ಮಾಣ ಕೃತಿ, ಜೀವನ ಚಿತ್ರಗಳು ಇಲ್ಲಿ ಬೆರೆಮಂತೆ ಬೇರೆಲ್ಲಿಯೂ ಸೀಕರಣಗೊಂಡಿಲ್ಲ. ಬಹುತರ ಗೋಕಾಕರ 'ಬಾಳ ದೇಗುಲ'ದಲ್ಲಿ ಕಾಣುವ ಚಿತ್ರ ಶಾಲೆಯೊಂದು ಇದಕ್ಕೆ ಸದೃಶವಾದ್ದು. ಆದರೆ ಇವು ಸರಸವಾದ ಕತೆಗಳು. ಅಲ್ಲಿನ ಚಿತ್ರಗಳು ಕಥೆಗಳಲ್ಲ; ಬೆಲೆಗಳು, ಸಾಧಕರ ಸಿದ್ಧರ ಗಣನೆ; ತೂಲನೆ. ಇವೆರಡಕ್ಕೂ ನಾಡು ಸೌಹಾರ್ದವನ್ನು ತೋರಿಸಿದ್ದಿದ್ದರೆ ಈ ಕಾಲದಲ್ಲಿ ಬಂದ ಕೃತಿಗಳಲ್ಲಿ ಇನ್ನೆರಡು ಹೆಚ್ಚಿನವಕ್ಕೆ ತೋರಿಸಿದಂತಾಗುತ್ತಿತ್ತು. ಒಲವನ್ನು ಪೀಡಿಸಬಲ್ಲವರು ಯಾರು? ಆದೀತೊ? We do it wrong, being so majestical, to offer it the show of violence –ಎಂದ ಹಾಗೆ ಅಲ್ಲಿ ಒತ್ತಂಬ, ಪೀಡನೆ.

ಕತೆಗಾರಿಕೆಯಲ್ಲಿ ಪ್ರಸಿದ್ಧಿ, ನಿಷ್ಣಾತತೆ ಪಡೆದುದು ಅವರ ಇತರ ಪ್ರಕಾರಗಳಿಗೆ ಉಪೇಕ್ಷೆ ತಂದಿತೆಂದು ಹೇಳಿದೆ. ಬೇರೊಬ್ಬರ ಕವಿತೆಗಳಲ್ಲಿ ಕಾಣದ ಸರಸತೆ, ಮೃದು ವಿಲಾಸ, ಹೃದಯ ನಿವೇದನೆ, ಭಾವಗೀತೆಯ ಹೃತ್‌ಸಂಪತ್ತಿ, ಆಳ, ನವುರು ಅವರ ಹಲವು ಭಾವಗೀತಗಳಲ್ಲಿಯೂ ಹಾಡುಗಳಲ್ಲಿಯೂ ಇವೆ. ಓದುವ ರೀತಿ ತಿಳಿಯದೆ– ಎಲ್ಲ ಕೃತಿಗಳಿಗೂ ಅವುಗಳದೇ ನಡೆ ಒಂದಿರುತ್ತದೆ –ಅದಕ್ಕೆ ಬೇಸರುತ್ತಾರಾದೀತು. ತೆಂಗಾಳಿ, ನಿರೀಕ್ಷೆ, ತಿರುಪಾಣಿ ಶಾಂತಾ ಕಾಕನಕೋಟೆಗಳಲ್ಲಿನ ಕೆಲವು ಹಾಡುಗಳು; ಏನು ಮಾಯೆ ಏನು ಮೋಹ, ರಾಣಿಯ ಮನೆ ಮುಂತಾದ ಕವಿತೆಗಳು ತುಂಬಾ ಹೃದ್ಯವಾದವು. 'ತಾವರೆ'ಯಲ್ಲಿ, 'ಚಿಲುವಿ'ನಲ್ಲಿರುವ ಕೆಲವು ಹಾಗೆಯೇ. ಅರಳಿದ ತಾವರೆಯ ವೈಭವಕ್ಕೆ ಸಲ್ಲುವ ಕೀರ್ತಿ ಒಂದು ಕಡೆಯಾದರೆ ವಿಷ್ಣುಕ್ರಾಂತಿಯ ಕಿರು ರಮಣೀಯತೆಗೇಕೆ ಕುಂದು ಬರಬೇಕು? ಎಣೆಕೆಗೆ ಅದು ಬರಬೇಡವೆ? ಚಿಲು ಸೃಷ್ಟಿಯಲ್ಲಿ ಸಣ್ಣದಕ್ಕೂ ಸ್ಥಾನವಿಲ್ಲವೆ?– ಎನ್ನುತ್ತಾರೆ. ಬಾಳಿಗೆ ಋಣಿಯಾಗಿ ಹರ್ಷದಿಂದ ನಾಡಜನ ಇಟ್ಟುಕೊಂಡ

ತಮ್ಮ ಊರುಗಳ ಹೆಸರನ್ನು ಎಣಿಸುತ್ತ, ಆ ಹೆಸರುಗಳ ಹಿಂದಿನ ಸೊಬಗನ್ನು ಕಾಣಿಸುವ ಹುಣಿಲಾಸ ಮೋಹಕವಾದ್ದು.

ಸರಳ ರಗಳೆ ಕನ್ನಡಕ್ಕೆ ಹೊಸತಾಗಿ ಬಂದ ಸೊತ್ತು. ಇವರದು ತುಂಬಾ ಸರಳ, ತುಂಬಾ ರಗಳೆ, ಸಾಲುಗಳು ಹಿಂಜಿ ಎಳೆ ಬಿಟ್ಟುಕೊಳ್ಳುತ್ತವೆ ಎನ್ನುತ್ತಾರೆ. ಗಟ್ಟಿ ಕಾಫೀ, ಬೀರ್, ವ್ಹಿಸ್ಕಿ ಕುಡಿವವರಿಗೆ, ಅವು ಮಾತ್ರ ಪಾನಗಳು ಎಂದುಕೊಂಡವರಿಗೆ ತಿಳಿನೀರು, ಎಳನೀರು, ಕಡೆಗೆ ಹಾಲು ಸಪ್ಪೆಯಾಗುತ್ತವೆ. ಅವು ಕೆಲವೆಡೆ ಒಡಕಲಂತೆ ಕಂಡರೂ ಸುಲಭ ಕನ್ನಡದಲ್ಲಿ, ಅಬ್ಬರ ಬಿಟ್ಟು ಬರೆದ ಈ ಪದ್ಯಗಳನ್ನು ವಿಶ್ವಾಸದಿಂದ ಓದಿದರೆ ಅವುಗಳ ಫಲ ಪರಿಣಾಮ ಸಾಮಾನ್ಯವಲ್ಲದ್ದೆಂಬುದು ಗೊತ್ತಾದೀತು. ಸರಳ ರಗಳೆಯಲ್ಲಿ ಯಶೋಧರಾ ನಾಟಕಕ್ಕೆ ಬಳಸಿ, ಅಲ್ಲಿನ ಕಥಾನಕವನ್ನೂ ಸನ್ನಿವೇಶವನ್ನೂ ದರ್ಶನವನ್ನೂ ಗಾಢವಾಗಿ ಮಾಡಲು ಅದು ದುಡಿದಿದೆ; ಹಲವಾರು ರಸ ಪ್ರಕರಣಗಳನ್ನು ಒದಗಿಸಿದೆ. ಕಾಕನ ಹಾಡು ನನಗಂತೂ ಏರಿಯಲ್ ಶಕ್ತಿಯ ವನಗೀತೆಯಂತೆ ಕೇಳಿಸಿದೆ. ಇದು ಅತಿಯೆನ್ನುವವರಿಗೆ ತಮ್ಮದಾವುದೂ ಎಂದಿಗೂ ದೊಡ್ಡದಲ್ಲ; ದೊಡ್ಡದಾಗಲಾರದು ಎಂಬ ಹೀನಭಾವವಿರುತ್ತದೆ. ಷೇಕ್ಸ್‌ಪಿಯರ್ ಸರ್ವಥಾ ಮೇಲೇ ಆಗಬೇಕು, ಅಂಥ ಹೋಲಿಕೆಗಳು ಕೂಡ ಸಲ್ಲ ಎಂಬ ಭ್ರಾಂತಿಗಳೂ ಭೂತಗಳೂ ಅವರನ್ನು ಕಾಡಿಸುತ್ತವಾದೀತು. "ಮರಣದಲಿ ಜೀವನದ ಮೊಳೆಯಿಹುದ ತೋರು! ಪರಮಾತ್ಮನುಂಟು ಸುಖದೊಳುಂ ಎಂದು ಸಾರು" ಎಂಬ ರೂಪಣ ಯಾವ ಕವಿತೆಗಾದರೂ ಸಫಲತೆಯನ್ನು ತಂದೀತು. ಹೀಗೆ ವಿಷಯ, ಸ್ಫೂರ್ತಿ, ರೀತಿ, ವಿಲಾಸ ಅನೇಕ. ಈ ಕವಿ ಹೃದಯದ ಪಕ್ಷಪಾತ ಎಷ್ಟು ವೈಣಿಕ, ಸಂಸ್ಕಾರಗೊಂಡುದು ಎಂದು ತೋರಿಸಲು ನೆರವಾಗುತ್ತದೆ. ಪ್ರೀತಿಯಿಂದ ಆಯ್ದರೆ ೩೦–೪೦ಕ್ಕೆ ಮೀರಿದ ಹಾಡುಗಳು ನಮ್ಮ ಕಾಲದ ಉತ್ತಮ ಭಾವಗೀತಗಳ ಪೋಣಿಕೆಗೆ ಸಿಕ್ಕುತ್ತವೆ. 'ಮಲಾರ'ದ ಚೌದಶಪದಿಗಳ ಸೊಗಸನ್ನು ಬಲ್ಲವರು ಬಲ್ಲರು. ಅವುಗಳೇ ಮೊದಲ ಬಾರಿಗೆ ಸಂಕಲನವಾಗಿ ಪ್ರಕಟವಾದ ಒಂದು ಸಾನೆಟ್ ಮಲಾರ; ಬಗೆ ಬಗೆಯ ರಂಗು, ರಚನೆ, ಅರ್ಥವಂತಿಕೆಗಳುಳ್ಳ ಆ ಸಾನೆಟ್ಟುಗಳು ಅವರ ಬದುಕಿನ ಒಂದು ಕಾಲದ ಕಾಣ್ಕೆ, ಬುದ್ಧಿ ಭಾವರಚನೆ, ಮಾತು ಕೂಡಿರುವ ರೂಪಣ ಕ್ರಿಯೆ. ಒಂದು ಮನಸ್ಸಲ್ಲಿ ನುಡಿದುದು ಕಠಿಣವಾಗಬಲ್ಲದು ಎಂಬ ಚಿಂತೆ ಬಂದು, ತಾವೇಕೆ ಹಾಗೆ ನುಡಿದರು ಎಂಬುದನ್ನು ತಿಳಿಸಿ, ಸಮಾಧಾನದ ಮಾತನ್ನು ನುಡಿಯುವ ಮನಸ್ಸಿನ ಇನ್ನೊಂದು ಮುಖವನ್ನೂ ಕಾಣಿಸುವ ಅವರ ರೀತಿ ಭವ್ಯವಾದ್ದು. ಹೊಸಕನ್ನಡ ಕೃತಿಯ ವಿಮರ್ಶಕರನ್ನು ಕುರಿತ ಎರಡು, ಹರಿಕಥೆ ಮಾಡುವ ಸೋದರಿಯನ್ನು ಕುರಿತ ಎರಡು ಕವಿತೆ ಇದಕ್ಕೆ ನಿದರ್ಶನವಾಗುತ್ತವೆ.

ಗದ್ಯ ನಾಟಕಗಳಲ್ಲಿ ಶಿವಾಜಿ, ತಾಳಿಕೋಟೆ, ಕಾಕನಕೋಟೆ ಚಾರಿತ್ರಿಕವಾದರೆ ಶಾಂತಾ, ಸಾವಿತ್ರಿ, ತಿರುಪಾಣಿ ಪುರಾಣಗಳಿಗೆ, ಭಕ್ತ ಪ್ರಪಂಚಕ್ಕೆ ಸಂಬಂಧಿಸಿದವು. ಈಚಿನ ಪುರಂದರ, ಕನಕ ನಾಟಕಗಳೂ ಹಾಗೆಯೇ. ಭಟ್ಟರ ಮಗಳು ಇನ್ನೂ ಈಚಿನದು, ಕೃತಿಕಾರನ ಮನಸ್ಸು ಹೇಗೆ ಅರಳುತ್ತದೆ ಎಂಬುದರ ಒಂದು ಪ್ರಾಮಾಣಿಕ ಚಿತ್ರ: ಮಂಜುಳಾದ ಜಾಣ್ಮೆ ಬಾಳನ್ನು ಉಳಿಸುವಂಥದು. ಅವರ ಬೆಲೆ ಕಲ್ಪನೆ, ದೃಷ್ಟಿ ರೀತಿ ಒಂದು

ಮನಸ್ಸು ಲೋಕಕ್ಕೂ ಜೀವಕ್ಕೂ ಮೌಲ್ಯಗಳಿಗೂ ತೆತ್ತುಕೊಂಡ ಪ್ರಕಾರಗಳು ಅವು. ಸುಲಭವಾಗಿ ದುರ್ಭರ ದುರಂತ ಪರಿಣಾಮಕ್ಕೆ ನಡೆಸಬಲ್ಲ ಒಳ ಅಲ್ಲಿನವು: ಯಾವುದೋ ಮಾನವೀ ಸೌಹಾರ್ದ ಅಂಥವಕ್ಕೆ ಸವಿಯಿರೆದು ಜೀವಿಗಳಿಗೆ ಸಂತೋಷ ಬರುವಂತೆ ನೆರವಾಗುತ್ತವೆ. ಜೀವನಕಥೆಗಳಾದ ರವೀಂದ್ರನಾಥ ಟಗೋರ್ –ಠಾಕೂರರ ಹಲವಾರು ಕೃತಿಗಳ ಸ್ವರೂಪ ನಿರ್ದೇಶನ, ಬೆಲೆಗಾಣ್ಕೆ ಉಳ್ಳಗ್ರಂಥ; ಶ್ರೀ ರಾಮಕೃಷ್ಣ ಆ ಜೀವಸಾರವನ್ನು ಬಟ್ಟಿಯಿಳಿಸಿ ಕಾಣಿಸುವಂಥದು. ಅಲ್ಲಿನ ಗದ್ಯದ ಅಡಿಕವೂ ತಿಳಿಯೂ ಕನ್ನಡ ಗದ್ಯಕ್ಕೇ ಒಂದು ದೊಡ್ಡ ಸಿದ್ಧಿ.

ವಿಮರ್ಶೆಯ ಸ್ವರೂಪವನ್ನೂ ಕಾರ್ಯವನ್ನೂ ತಿಳಿಸಿ ಹಲವು ಬಗೆಯ ವಿಮರ್ಶೆಯ ಪ್ರಬಂಧಗಳನ್ನು ಅವರ ವಿಮರ್ಶೆಯ ಸಂಕಲನಗಳಲ್ಲಿ ಕೊಟ್ಟಿದ್ದಾರೆ. ಅಲ್ಲಿನ ವಸ್ತು ವೈವಿಧ್ಯ ಓದುಗರಿಗೆ ಒಂದು ಶಿಕ್ಷಣ ಸಂಸ್ಕಾರವನ್ನೇ ಕೊಡಬಲ್ಲದು. ಕನ್ನಡನಾಡಿನ ಜೀವನವನ್ನು ಕುರಿತ ಕೃತಿಯಲ್ಲಿ ಜನಪದ ಗೀತೆ, ವೀರಶೈವ ವಚನ ಸಾಹಿತ್ಯ, ದಾಸಪಂಥದ ಕಾಣಿಕೆ ಇವು ಈ ನಾಡನ್ನು ಹೇಗೆ ಬೆಳಗಿ, ಇದಕ್ಕೆ ನೆಮ್ಮದಿಯನ್ನೂ ಸಂಸ್ಕಾರವನ್ನೂ ತಂದಿವೆ ಎಂಬುದನ್ನು ವಿವರಿಸಿದೆ. 'ಆದಿ ಕವಿ ವಾಲ್ಮೀಕಿ' ಕವಿಯ ಅತಿ ಮುದ್ದಾದ ಒಂದು ನಿರೂಪಣ; ಅಲ್ಲಿನ ಗದ್ಯವನ್ನಾಗಲಿ ವಿಮರ್ಶೆಯ ವಿಶದತೆಯನ್ನಾಗಲಿ, ಭರತ, ಸುಮಿತ್ರೆ, ಹನುಮಾನ್, ರಾವಣಾದಿಗಳ ಚರಿತ್ರ ಚಿತ್ರಣವನ್ನಾಗಲಿ, ಒಟ್ಟು ಕೃತಿಯ ಸನ್ನಿವೇಶಗಳ ನಿರೂಪಣೆಯನ್ನಾಗಲಿ, ಅಥವಾ ಅಲ್ಲಿ ಏಳುವ ವಾಲಿಯ ಪ್ರಸಂಗ, ಸೀತಾಪರಿತ್ಯಾಗ ಇತ್ಯಾದಿಗಳನ್ನು ಕುರಿತ ವಾದಗಳನ್ನಾಗಲಿ ನೋಡಿದರೆ, ಸಮಗ್ರ ಕೃತಿಯೊಂದರ ಸಮೀಕ್ಷೆಯ ಹಂಬಲ ಅದು ಎಂದು ಕಾಣುತ್ತದೆ. ರಾಮಾಯಣ, ಮಹಾಭಾರತದ ಪ್ರಕರಣಗಳು, ಗೀತೆ, ಷೇಕ್ಸ್‌ಪಿಯರ್, ಆಗ ಈಗ ಅವರು ಮಾಡಿರುವ, ಮಾಡಿಸಿರುವ, ಪರಿಷ್ಕರಿಸಿರುವ ಕೃತಿಗಳು, ಅವಕ್ಕೆ ಇತರರ ಕೃತಿಗಳಿಗೆ ಬರೆದಿರುವ ಮುನ್ನುಡಿಗಳು ಹಲವು ಬಗೆಯ ಸುಹೃತ್ಕಾರ್ಯ. ಏನೇ ಮಾಡಲಿ, ಎನ್ನಲಿ, ಅವರ ಕೈ ಕನ್ನಡ ಗದ್ಯದ ಎಲ್ಲ ಬಳಕೆಗೂ ಒದಗುವ ವಿಲಾಸವನ್ನು ತಂದಿದೆ. ಅವರ ಮನಸ್ಸು ಜನದ, ಲೇಖಕರ ನೆರವಿಗೆ ಸದಾ ನಿಲ್ಲುತ್ತದೆ. ಒಂದು ಹೆಜ್ಜೆ ಮುಂದೆ ಹೋಗಿ ಎಲ್ಲಿಯೇ ಆಗಲಿ ಪ್ರೀತಿಯ, ಸಹಕಾರದ ನುಡಿ ನುಡಿದಾರೇ ಹೊರತು ವಿಮರ್ಶೆಯೆಂಬ ಹೆಸರಲ್ಲಿ ಕಾಡುತನ, ಕರ್ಕಶತೆ, ಕಾರ್ಪಣ್ಯ, ಪ್ರಜ್ಞಾವಾದಗಳನ್ನು ಅವರು ಬೆಳಸರು. ತಮ್ಮ ಮೇಲೆ ಹೊತ್ತ ಕಡು ಅನ್ಯಾಯದ ಆಕ್ಷೇಪಣೆಗಳಿಗೂ ಮಾರುತ್ತರ ಕೊಡದೆ ತಡೆದುದು ಅವರ ಸಂಯಮದ ಲಕ್ಷಣವೇ ಹೊರತು ದೌರ್ಬಲ್ಯವಲ್ಲ. ಬರೆಯುವುದಕ್ಕೆ, ನುಡಿಯುವುದಕ್ಕೆ ಬಾರದೆ ಕುಳಿತ ನಡೆಯಲ್ಲ. ಅದು ವಶಿತ್ವ.

ಹೆಣ್ಣು ಜೀವಕ್ಕೆ, ತಾಯಿತನಕ್ಕೆ ಅವರು ಕೃತಿಗಳಲ್ಲಿ, ಜೀವನದಲ್ಲಿ ಸಲ್ಲಿಸಿರುವ ಪ್ರೀತಿ ಗೌರವ ಅಸಾಮಾನ್ಯವಾದ್ದು. ಕಾಲದ ಕದಡು, ಉದ್ವೇಗ, ನವರೀತಿ ವಿಧಾನಗಳ ಪಕ್ಷಪಾತ ಅಡಗಿ, ನೆರೆ ತಿಳಿದರೆ ಕಾಲ ನದಿಯನ್ನು ತಿಳಿಯಾಗಿ ಸಹಜವಾಗಿ ಕಾಣಿಸುತ್ತದೆ. ಅದು ನಿಜವಾಗಿ ಜೀವನವೆಂಬುದು ಆಗ ಕಂಡು ಬರುತ್ತದೆ.

ಬರವಣಿಗೆಯಲ್ಲಿ ಯಾವುದನ್ನು ತಿಳಿಸುವ ಮುಂಚೆಯೂ ನಾಲ್ಕೂ ನಿಟ್ಟಿನಿಂದ

ವಿಷಯವನ್ನು ನೋಡಿ ಒಟ್ಟನ್ನು ಕಾಣಿಸುವ ರೀತಿ, ಆಗಾಗ್ಗೆ ಅವರು ಬೆ ಸೂಕ್ಷ್ಮದರ್ಶಕಕ್ಕೆ ನುಡಿಯುವ ರೀತಿಗೆ ವಿಪರೀತವಾದ್ದು, ಸಭೆಯಲ್ಲಿ, ಪತ್ರಿಕೆಯ ಸೀರುವ ಕಡಿಗೂಟಿಗಳನ್ನೆ ಅವರು ಸಾಧಿಸಿರುವ ನಗೆಯ, ಸ್ನೇಹದ, ಮಾಸೂ ವ್ಯಕ್ತಿ ಅವರದೇ. ಕೊನೆಗೆ ಅವರೇ ಮಾತನಾಡುತ್ತ ತಮ್ಮ ಚಿಟ್ಟಿ ಕಥೆಗಳನ್ನೂ ಅನುಭವಗಳನ್ನೂ ಬೆರೆಸಿ ಇನ್ನೊಬ್ಬರ ಬಾಯಲ್ಲಿ ಮಾತು ತೆಗೆದುಕೊಂಡು ಪ್ರಬಲಿಸುತ್ತಾರೆ ಎನ್ನುತ್ತಾರೆ. ಅವರು ಹೇಳುವುದು ಅಷ್ಟೆ. ಜನರನ್ನು ಒಲಿಸಿಕೊಳ್ಳಬೇಕೆಂಬ, ಅವರ ಪ್ರೀತಿ ಸಂಪಾದಿಸಿಕೊಂಡು ಅವರನ್ನು ಸಂತೋಷದಲ್ಲಿ ಇರಿಸಬೇಕೆಂಬ ಬಯಕೆ ಅದಕ್ಕೆ ಕಾರಣವಾದರೆ, ಅದು ಪೂರ್ತಿ ದೋಷವಾಗಬಾರದು. ಮನೆಯಲ್ಲಿ ಹೊರಗೆ, ಪರಿಚಿತರಲ್ಲಿ, ಅನ್ಯರಲ್ಲಿ, ಬಂಧುಗಳಲ್ಲಿ, ಹೊರಗೆ ಅವರ ಸುಹೃದ್‌ವರ್ಗ ದೊಡ್ಡದು. ಸಾಹಿತ್ಯದಲ್ಲಿ ಕನ್ನಡ ನಾಡಿನ ಹೆಸರಾಗಿ ಅಖಿಲ ಭಾರತದ ಸಾಲಿನಲ್ಲಿ ಅವರ ಗಳಿಕೆಯ ಮಾನ ಹಿರಿದು.

ಎಷ್ಟೊ ಮಂದಿ ಗೆಳೆಯರ, ಕಿರಿಯರ ಹೊಸ ಕವಿತೆ, ನಾಟಕಗಳನ್ನು ಹೊಡಲು ಬಾರಿಗೆ ಓದಿಸಿ ತಮ್ಮ ಮನೆಯಲ್ಲಿ ಸಂತೋಷಕೂಟಗಳನ್ನು ಮಾಡಿಸಿ ಹೊಸ ಕೃತಿಗೆ ಸ್ವಾಗತವನ್ನೂ ಪ್ರಕಾಶವನ್ನೂ ಕೊಟ್ಟಿದ್ದಾರೆ. ಹೊರಗಿನ ಹಿರಿಯರು ಬೆಂಗಳೂರಿಗೆ ಬಂದಾಗ ಇಲ್ಲಿನವರ ಪರಿಚಯ ಅವರಿಗಾಗಲಿ, ಅವರದು ಇವರಿಗಾಗಲಿ ಎಂಬ ಉದ್ದೇಶದಿಂದ ತಮ್ಮಲ್ಲಿ ಸುಹೃದ್ ಗೋಷ್ಠಿಗಳನ್ನು ನಡಸಿದ್ದಾರೆ. ಅಂಥ ಸಂಪರ್ಕಗಳು ನಡೆದೂಡಿ ಭಾರತದ ನಾನಾ ಪ್ರಾಂತಗಳ ಜನರ ಮನಸ್ಸು ಒಂದಾಗಿ ಬೆಸೆಯಲು ಅವಕಾಶ ಉಂಟಾಗುತ್ತದೆಯಾಗಿ ಇಂಥದು ಒಂದು ದೊಡ್ಡ ರಾಷ್ಟ್ರಕ ಕಾರ್ಯವಾಗುತ್ತದೆ. ಬರೆಯುವವರು, ಕಲೆಗಾರರು, ಹೀಗೆ ಸೇರಿದರೆಯೇ ಮನಸ್ಸುಗಳು ಒಲಿದಾವು. ಪ್ರೀತಿಯಲ್ಲಿ ಕೊಂಡು ಕೊಟ್ಟು ಪರಸ್ಪರವಾಗಿ ಧಾರಾಳವನ್ನು ಬೆಳಸಿಯಾವು. ಹಿರಿಯದನ್ನು ಹಿರಿದು ಕಂಡೀತು.

ಎಷ್ಟೊ ಮಂದಿ ಕಿರಿಯರಿಗೆ ಅವರ ಒತ್ತಾಸೆಯ ಮಾತು, ನೆರವು ಪೋಷಣೆಯಾಗಿವೆ, ಧೈರ್ಯ ಸ್ಥೈರ್ಯ ಆಗಿವೆ. ಅದನ್ನು ಅವರ ಕೈ, ಮನಸ್ಸು ಮಾತ್ರ ಬಲ್ಲವು. ಯಾರೇ ಕನ್ನಡದ ಕೆಲಸ ಮಾಡಲಿ, ಯಾರಿಗೇ ಕೀರ್ತಿ ಪ್ರತಿಷ್ಠೆ ಬರಲಿ, ಅದು ಕನ್ನಡಕ್ಕೆ ಬಂದ ಕೀರ್ತಿ, ಮಾನ; ನಾವೆಲ್ಲ ಒಂದು 'ಟೀಂ' ಎಂದು ಸದಾ ಭಾವಿಸಿದವರು ಅವರು.

ಸ್ವಂತವಾಗಿ ಸರಳವಾದ, ಆಡಂಬರವಿಲ್ಲದ ಬಾಳು ಬಾಳಿರುವವರು ಅವರು. ಒಮ್ಮೊಮ್ಮೆ ಯಾವುದೊ ವಿಚಿತ್ರ ಸಂದರ್ಭಗಳಲ್ಲಿ ಆ ಮಾತು ಈ ಮಾತು, ನಡವಳಿಕೆ ಕಠಿಣವಾಯಿತೆಂದು ಆಡಿರುವವರುಂಟಾದರೂ ಅಲ್ಲಿ ಯಾವುದೊ ಮುಳ್ಳು ಮುರಿದಿತ್ತು, ಇನ್ನಾವುದೊ ಒಳ ಪ್ರಚೋದನೆ ಕಾಡಿಸಿತ್ತು ಎಂಬುದನ್ನು ಅರಿತವರು ಅದನ್ನೂ ಅರ್ಥ ಮಾಡಿಕೊಳ್ಳಬಹುದಿತ್ತು. ಮನೆಯ ಸಂಸಾರದಲ್ಲಿ, ಅವರ ತಾಯಿ, ಸಹಧರ್ಮಿಣಿ ಅವರ ಬದುಕನ್ನು ತುಂಬು ವಾತ್ಸಲ್ಯದಿಂದ, ಸ್ನಿಗ್ಧತೆಯಿಂದ ನಡಸಿಕೊಟ್ಟರು, ಮಕ್ಕಳು ಅವನ್ನು ಹೇಗೆ ಸವಿದರು– ಅದನ್ನು ಕಂಡವರೆಲ್ಲ ಬಲ್ಲರು. ಅಂಥ ಸಂಸಾರ ಒಂದು ಬಾಳ ಪುಣ್ಯ.

ಪ್ರಾಚೀನ ಸಂಪ್ರದಾಯದಂತೆ ಅವರ ಆಚಾರ, ಸಹಸಿ, ನಡೆ, ನುಡಿ ಇದ್ದರೂ ಈ ಕಾಲದ ಚಿಂತನದ ಫಲವನ್ನೂ ಅವರು ಕಂಡವರೇ. ಅದರಲ್ಲಿನ ಸಹಿ ಗಾರವನ್ನು

ಕವಿದೃಷ್ಟಿಗೆ, ಲೇಖನಕ್ಕೆ, ದೃಷ್ಟಿ ರೀತಿಗೆ ಕಂಡುಕೊಂಡಿದ್ದರೆಂಬುದನ್ನು ಅವರ ಲೇಖನಗಳಿಲ್ಲ ಕಾಣಿಸುತ್ತವೆ. ಸಾಮಾನ್ಯರು ಅರ್ಥಮಾಡಿಕೊಳ್ಳಲಾರದಷ್ಟು ಔದಾರ್ಯ, ಸಹನೆ, ಒಡಂಬಡಿಕೆ, ವಿಚಿತ್ರ ಬಾಳನ್ನು ಅರ್ಥ ಮಾಡಿಕೊಳ್ಳುವ ಅವರ ಮನಸ್ಸನ್ನು ಕಾಣಿಸುತ್ತದೆ. ಅಪರಂಜಿ ಅರಿಗರ ಕಥೆಯಾಗಲಿ, ಅವರಿಗೆ ಪ್ರಶಸ್ತಿ ತಂದ ಎರಡು ಕಥಾಗುಚ್ಛಗಳಲ್ಲಿನ ಕೆಲವು ಕಥೆಗಳಾಗಲಿ, ಕೇವಲ ಪೂರ್ವಾಚಾರವನ್ನು ಮಾತ್ರ ಶುಭವೆನ್ನುವವರಿಗೆ ಬೆರಗನ್ನು ಉಂಟು ಮಾಡಬಲ್ಲವು. ಎಲ್ಲಿಯೂ ಅಷ್ಟೇ, ಕಿರಿದರಲಿ ಪಿರಿದರ್ಥವಿಡುವ ಪೆಂಪು ಅವರದು.

ದೊಡ್ಡದಾಗಿ ಬದುಕಿ ಬಾಳಿ, ದೊಡ್ಡದರ ಪರಿಚಯ ಮಾಡಿಕೊಂಡು, ಅವರ ಸಂತೋಷಗಳನ್ನು ತಮ್ಮ ಬಳಿಗೆ ಬಂದವರಿಗೆ ದಾನಮಾಡಿ, ಒಂದು ಜೀವನವನ್ನು ಕೃತಾರ್ಥವಾಗಿ ಮಾಡಿಕೊಂಡಿರುವ ಮಾಸ್ತಿಯವರ ಬದುಕು ಒಂದು ಮಹಾಕೃತಿ. ಇಂಥಲ್ಲಿ ಬಾಳು, ಕೃತಿ ಸಮರಸ, ಸಮಸತ್ವವಾಗುತ್ತವೆ; ಫಲಿಸುತ್ತವೆ.

ಇಷ್ಟಾದರೂ ಅವರ ಒಂದು ಫೋಟೋಗ್ರಾಫ್ ಕೂಡಾ ಚೆನ್ನಾದ್ದನ್ನು ನಾನು ಕಂಡಿಲ್ಲ. ನಗೆಯಿಂದ ಅರಳಿದಾಗಲೊ ಕಣ್ಣಲ್ಲಿ ಕಳೆ, ಕರುಣೆ, ಹಾಸ್ಯ ಮಿನುಗಿ ಹಾಯುವಾಗಲೊ ಆ ಕೈ ಬೆರಳುಗಳ ಸೂಕ್ಷ್ಮ ಕಾಣುವಂತೆ ಯಾವ ಚಿತ್ರಗಳೂ ಕಾಣಿಸಿಲ್ಲ. "ನಾವೇನು ಮಾಡುವುದು? ಒಳ್ಳೆಯ ಚಿತ್ರ ತೆಗೆದುಕೊಂಡೇವೆಂದಾಗ ಹೇಗೆ ಹೇಗೊ ನಿಲ್ಲುತ್ತಾರೆ. ಅಲ್ಲಾಡುತ್ತಾರೆ. ಹಣೆಯ ತುಂಬ ಬೇಕೆಂದು ನಾಮಗಳನ್ನು ಹಾಕಿಕೊಂಡು ಬಿಡುತ್ತಾರೆ. ಚಿತ್ರ, ನಮ್ಮ ತಲೆ, ಏನು ಹಿಡಿಯುವುದು" ಎನ್ನುತ್ತಾರೆ. ಅವರ ಎಚ್ಚರ ಆ ಕಡೆಗಿಲ್ಲದಾಗ ಚಿತ್ರ ರೂಪಿಸುವುದು ತಾನೇ ಮೇಲು? ಟೀಕೆಯಲ್ಲಿನ "ಬೇಕೆಂದು" ಎಂಬ ಮಾತನ್ನು ನಾನೊಪ್ಪಲಾರೆ – ಫೋಟೊಗಾಗಿ ಮುಖವನ್ನೂ ಮೈಯನ್ನೂ ಹರಗಿಕೊಳ್ಳಿರೆಂದರೆ, ಒಪ್ಪಮಾಡಿಕೊಳ್ಳಿರೆಂದರೆ, ಅಂಥವರು ಹೇಗೆ ಒಪ್ಪಿಯಾರು? ಅವರ ಇತಿಯಲ್ಲಿ, ಮಿತಿಯಲ್ಲಿ, ಸಹಜತೆಯಲ್ಲಿ, ವಿಲಾಸದಲ್ಲಿ ಅವರನ್ನು ಕಾಣಿಸಬೇಕು, ಹೊರತು ನಿಮ್ಮ ಮುಖವನ್ನೂ ವೇಷವನ್ನೂ ತಿದ್ದಿಕೊಳ್ಳಿ ಎಂದು ಬೇಡುವುದು ಸಾಧುವಾಗದು. ಮಾನವರಲ್ಲಿ ಪ್ರೀತಿ, ಕೆಳೆಯಲ್ಲಿ ಸವಿ, ಅನುಭವದಲ್ಲಿ ಆಳ, ವಿಸ್ತಾರ, ಎಲ್ಲಕ್ಕೂ ತೆರೆದ ಮನಸ್ಸು, ಸರ್ವವನ್ನೂ ಭಗವದ್ವಿಲಾಸವೆಂದು ಒಪ್ಪುವ ರೀತಿ, ಅದಕ್ಕೆ ಅಧೀನವಾಗಿ ಬಾಳನ್ನು ಚೊಕ್ಕಗೊಳಿಸಿ ಅದರ ಸ್ವೀಕಾರಕ್ಕೆ ಯೋಗ್ಯ ಮಾಡಿಕೊಳ್ಳಬೇಕೆಂಬ ವೃತ್ತಿ ಮಾಸ್ತಿಯವರದು. ಅವರದು ಬರಿಯ ಸಾಹಿತ್ಯವಲ್ಲ; ಒಂದು ಸಮಗ್ರ ಜೀವನ. ಅದು ನೂರು ಕಾಲ ನಮಗೆ ದೊರೆವ ಭಾಗ್ಯವಾಗಿರಲಿ ಎಂದು ಮಾತ್ರ ಇಲ್ಲಿ ಹೇಳಿಕೊಳ್ಳುತ್ತೇನೆ. (೧೯೬೫)

ಎಂ. ಆರ್. ಶ್ರೀನಿವಾಸಮೂರ್ತಿ

ಎಂ. ಆರ್. ಶ್ರೀನಿವಾಸಮೂರ್ತಿ ಪರಿಚಯ, ಸ್ನೇಹ ನನಗಾಗುವ ಮುಂಚೆಯೇ ನಾನು ಹೈಸ್ಕೂಲಲ್ಲಿದ್ದಾಗ ಅವರ ಇಬ್ಬರು ತಮ್ಮಂದಿರ ಪರಿಚಯವಾಗಿತ್ತು. ಅವರ ತಂದೆಗೆ ನಾನು ಕಂಡ ಹಾಗೆ ಐದು ಜನ ಗಂಡುಮಕ್ಕಳು; ಮೂವರು ಹೆಣ್ಣುಮಕ್ಕಳು. ಅವರ ತಂದೆ ಹಿಂದಿನ ಕಾಲದ ಅಮಲ್ದಾರರಾಗಿ ವಿಶ್ರಾಂತಿ ಪಡೆದಿದ್ದರು. ಆಗಿನ ಕಾಲದ ಅಮಲ್ದಾರರೆಂದರೆ ಒಂದು ತಾಲೂಕಿನ ರಾಜರಂತೆ ಇರುತ್ತಿದ್ದವರು. ಅಮಲ್ದಾರ ಪದವಿ, ಅಧಿಕಾರ ತಾಲೂಕಿನ ಎಲ್ಲದರ ಮೇಲೆಯೂ ಇರುತ್ತಿತ್ತು. ಅವರಿಗೆ ಸಿವಿಲ್ ಮತ್ತು ಪೊಲೀಸ್ ಎರಡು ಇಲಾಖೆಗಳೂ ಸೇರುತ್ತಿದ್ದವು. ನ್ಯಾಯನಿರ್ಣಯ ಅಧಿಕಾರವೂ ಇತ್ತು. ಸರ್ಕಾರಕ್ಕೆ ಬರಬೇಕಾದ ಎಲ್ಲವನ್ನೂ ಸಂಚಯಿಸುವವರೂ ಅವರೇ. ತಾಲೂಕಿನ ಜೀವನ ವ್ಯವಸ್ಥೆ ಒಟ್ಟಿನಲ್ಲಿ ಅವರ ಕೈಯಲ್ಲಿದ್ದುದರಿಂದ ತಮ್ಮ ತಾಲೂಕಲ್ಲಿ ಯಾವ ಕಷ್ಟಕೋಟಲೆಗಳೂ ಏಳದಂತೆ, ಎದ್ದ ವ್ಯಾಜ್ಯಗಳು ಪರಿಹಾರವಾಗುವಂತೆ ನೋಡಿಕೊಳ್ಳುತ್ತಿದ್ದರು. ಅವರ ಜಮಾಬಂದಿಗಳಲ್ಲಿ ರಾಜದರ್ಪ, ರಾಜಭೋಗ ಕಾಣಬಹುದಾಗಿತ್ತು. ಅದರಲ್ಲಿಯೂ ರಾಮಚಂದ್ರರಾಯರು ಅಧಿಕಾರವನ್ನು ಬಹು ದರ್ಪದಿಂದ ನಡಸಿದ್ದವರಂತೆ. ತಮಗೆ, ಮನೆಗೆ ಬೇಕಾದ ಸಮಸ್ತ ವೈಭವವೂ ದೊರಕುತ್ತಿತ್ತು. ಮಕ್ಕಳು ಇಂಥ ಮನೆಯಲ್ಲಿ ಚೆನ್ನಾಗಿ ಬೆಳೆದರು. ಅವರೆಲ್ಲರ ನಡೆ ನುಡಿ ಈ ಸನ್ನಿವೇಶದಲ್ಲಿ ರೂಪಗೊಂಡದ್ದು. ಈ ಮನೆಯ ದೊಡ್ಡ ಮಗ ಪೋಸ್ಟ್ ಆಫೀಸಲ್ಲಿ ಯಾವುದೊ ಹುದ್ದೆಯಲ್ಲಿದ್ದು ಎಲ್ಲರಿಗೂ ಮುಂಚೆ ತೀರಿಕೊಂಡಿದ್ದರು. ಮೂರ್ತಿಯೇ ಎತ್ತರದ ಆಳು. ಅವರಿಗಿಂತ ಎತ್ತರ ಅವರಣ್ಣ. ಒಂದೆರಡು ವರ್ಷಕಾಲ ಮಾತ್ರ ಅವರನ್ನೂ ದೂರದಿಂದ ನೋಡಿದ್ದೆ. ಉಳಿದ ನಾಲ್ವರನ್ನೂ ಹತ್ತಿರದಿಂದ ಕಂಡಿದ್ದೇನೆ. ಮೂರನೆಯ ಮಕ್ಕಳು ಸುಬ್ಬರಾವ್, –'ಪಂತಲು' ಎಂದು ನಾವು ಕರೆಯುತ್ತಿದ್ದುದು. ಆತ 'ಶ್ಯಾಮು' ಎಂಬ ಒಂದು ಸಣ್ಣ ಕತೆಯನ್ನು ಬರೆದಿದ್ದ. ಮಲತಾಯ ಕಾರಣದಿಂದ ತಂದೆಯ ವಾತ್ಸಲ್ಯವಂಚಿತನಾದ ಹುಡುಗ ಆ ಶ್ಯಾಮು ಪಾತ್ರ ಎಂದು ನನ್ನ ನೆನಪು. ಹೈಸ್ಕೂಲು ದಾಟಿರಬೇಕು. ನೇಯ್ಗೆಯ ತಂತ್ರಕ್ಕೆ ಶಿಕ್ಷಣ ಪಡೆಯಬೇಕೆಂದು ಬೊಂಬಾಯಿಗೆ ಹೋಗಿ Spinning Master ಆಗಿ, ಮೈಸೂರು ಕೃಷ್ಣರಾಜೇಂದ್ರ ಬಟ್ಟೆ ಕಾರ್ಖಾನೆಯಲ್ಲಿಯೂ ರಾಯಚೂರು ಗುಲ್ಬರ್ಗಗಳಲ್ಲಿಯೂ ಕೆಲಸ ಮಾಡಿ, ತುಂಬಾ ಪ್ರೀತಿಯ ಮಡದಿ ಇದ್ದರೂ ಮಕ್ಕಳಿಲ್ಲದೆ ತೀರಿಕೊಂಡರು. ಹಾರ್ದವಾದ ನವಿರಾದ ಸಮಿಮನಸ್ಸು ಅವರದು. ಅವರು ತೀರಿಕೊಂಡ ತರುವಾಯ ಈ ಸೋದರರಲ್ಲಿ ಕಡೆಯವನಾದ ಸರ್ವೋತ್ತಮರಾವ್ ಅವರ ಮಗಳನ್ನು ಸಾಕಿಕೊಂಡು ಅವರ ಕುಟುಂಬ, ಆ ಮಗಳ ಹಿತಚಿಂತನೆಯನ್ನು ವಹಿಸಿ ಮನೆಗೆ ನೆರವಾಗಿದ್ದಾರೆ. ನಾಲ್ಕನೆಯಾತ ಮಹಾಬಲರಾವ್. 'ಕೈಸರ್ ಮೀಸೆಯವರು' ಎಂದು ನಮ್ಮ ಕಾಲದಲ್ಲಿ ಪ್ರಸಿದ್ಧರಾಗಿದ್ದ ಒಬ್ಬಿಬ್ಬರಲ್ಲಿ ಮಹಾಬಲರಾವ್ ಒಬ್ಬರು. ಗಟ್ಟಿ ಆಳು. ಆತನ ರೀತಿ, ಮಾತು ದರ್ಪದವು.

ಯಾರಿಗೂ ಏತಕ್ಕೂ ತಗ್ಗದ ಬಗ್ಗದ ಮನಸ್ಸು. ಅತನು ಕಾಲಕ್ರಮದಲ್ಲಿ ಮಂಡ್ಯದಲ್ಲಿ ಲಾಯರಾಗಿ ಅಲ್ಲಿನ ಕಾಂಗ್ರೆಸ್ ಮಂಡಲಿಯಲ್ಲಿ ಭಾಗವಹಿಸಿರುವವರು. ಕಡೆಯಾತ ಸರ್ವೋತ್ತಮರಾವ್. ಎಂ.ಎ., ಬಿ. –ಎಂ.?– ಎಲ್. ಪಾಸ್ ಮಾಡಿ, ಲಾಯರಾಗಿದ್ದು, ಬಿ.ಸಿ.ಸಿ. ಬ್ಯಾಂಕಲ್ಲಿ ಕಾರ್ಯದರ್ಶಿಯಾಗಿ ಕೆಲಸ ಮಾಡಿ, ತಮ್ಮ ಮನಸ್ಸಿಗೆ ಒಪ್ಪದೆ ಆ ಕೆಲಸ ಬಿಟ್ಟರು.

ಶ್ರೀನಿವಾಸಮೂರ್ತಿ ಎರಡನೆಯವರು. ದೊಡ್ಡ ಅಣ್ಣ ತೀರಿಕೊಂಡು ತಂದೆಯವರೂ ತೀರಿಕೊಂಡ ಮೇಲೆ ಮನೆಯ ಸಮಸ್ತ ಕಾರ್ಯಭಾರ ಈತನ ನಿರ್ವಹಣಕ್ಕೆ ಸೇರಿತು. ತನ್ನ ಸೋದರಿಯರ ಗೃಹಕೃತ್ಯಗಳಲ್ಲೂ ಆಗುಹೋಗುಗಳಲ್ಲೂ ನೆರವಾದರು. ತಾಯಿ ಇವರೊಡನೆಯೇ ಇದ್ದರು. ಆ ತಾಯಿತಂದೆಯವರಂಥವೇ ಸುಕ್ಕಿಲ್ಲದ ಮೈ, ಮನಸ್ಸು, ಮಾತು, ರೀತಿ ಇವರದು. ಮೊದಲಿಂದ ಕಡೆಯವರೆಗೂ ಒಂದೇ ರೀತಿಯಾಗಿದ್ದು ಆಕೆಯನ್ನು ಸಂತೋಷಪಡಿಸಿ, ತಾನಿರುವವರೆಗೂ ಸೇವೆಮಾಡಿದವರು ಅವರು. ಮಗ ತೀರಿಕೊಂಡದ್ದನ್ನು ತಾಯಿ ನೋಡಬೇಕಾಯಿತು.

'ಮೂರ್ತಿ' ಎಂದೇ ಗೆಳೆಯರಾದ ನಮಗೆ ಅವರ ಬಳಕೆ. ನಾನು ಎರಡನೆ ಬಾರಿ ಮೈಸೂರಿಗೆ ಹೋಗಿ ಶಾರದಾವಿಲಾಸ ಹೈಸ್ಕೂಲಲ್ಲಿ ಕೆಲಸ ಮಾಡುತ್ತಿದ್ದ ಕಾಲದಲ್ಲಿ– ಸುಮಾರು ೧೯೨೪ರ ಸಮಯದಲ್ಲಿ – ಅವರ ವಿಶ್ವಾಸಕ್ಕೆ ಪಾತ್ರನಾದೆ. ಅವರು ಮೊದಲು ಉಪಾಧ್ಯಾಯರಾಗಿ ಇದ್ದವರು. 'ಟೀಚರ್ಸ್ ಟ್ರೈನಿಂಗ್' ಎಂಬ ಒಂದು ಅಭ್ಯಾಸಕ್ಕಾಗಿ ಮೈಸೂರಿಗೆ ಬಂದಿದ್ದರು. ಅಲ್ಲಿ ಅವರಿಗೆ ಮುಖ್ಯರಾಗಿ ಇಬ್ಬರು ಸ್ನೇಹಿತರು: ಓರಿಯೆಂಟಲ್ ಲೈಬ್ರರಿಯಲ್ಲಿ ಕೆಲಸಮಾಡುತ್ತಿದ್ದ ಎ. ಆರ್. ಕೃಷ್ಣಶಾಸ್ತ್ರಿಗಳು; ಅಲ್ಲಿಯೇ ಶಿಲ್ಪಕಲಾ ಇಲಾಖೆಗೆ ಸೇರಿದ ಬಿ. ವೆಂಕೋಬರಾವ್. ಕೃಷ್ಣರಾಜೇಂದ್ರ ಮಿಲ್ಸ್‌ನಲ್ಲಿಯೊ ಶ್ರೀಗಂಧ ತೈಲದ ಕಾರ್ಖಾನೆಯಲ್ಲಿಯೊ ಕೆಲಸ ಮಾಡುತ್ತಿದ್ದ ಸುಧೀಂದ್ರದಾಸ್ ಇನ್ನೊಬ್ಬರು. ಯಾವ ಸ್ನೇಹಸಂಪರ್ಕವನ್ನು ಮೂರ್ತಿಗಳು ಬೆಳಸಿದರೂ ಅವರ ಸೌಜನ್ಯ, ಪ್ರೀತಿ ಆಪ್ತವಾಗುತ್ತಿತ್ತು, ಪ್ರಿಯವಾಗುತ್ತಿತ್ತು. ಇಷ್ಟು ಹೊತ್ತಿಗಾಗಲೇ ಎಸ್. ಜಿ. ಬಿಂದೂರಾಯರು ಅವರ ಆಪ್ತವರ್ಗಕ್ಕೆ ಸೇರಿದ್ದರು. ಕೃಷ್ಣರಾಜೇಂದ್ರ ಮಿಲ್ಲಲ್ಲಿ ಮ್ಯಾನೇಜರ್ ಆಗಿದ್ದ ಅವರು ಮನೆಯಲ್ಲಿ ಶನಿವಾರದಂದು ವಿಶೇಷವಾಗಿ ನಾರಣಪ್ಪನ ಭಾರತವನ್ನು ಓದುವ ಕ್ರಮವಿಟ್ಟುಕೊಂಡಿದ್ದರು. ಸೆಂಟ್ರಲ್ ಕಾಲೆಜ್ ಕರ್ನಾಟಕ ಸಂಘ ಅವರನ್ನು ಕರಸಿ, ಚಾಮರಾಜಪೇಟೆಯ ರಾಮೇಶ್ವರ ದೇವಸ್ಥಾನದ ಸಭಾಮಂದಿರದಲ್ಲಿ ಒಟ್ಟು ಗದುಗಿನ ಭಾರತವಾಚನ ಮಾಡಿಸಿ, ಅವರಿಂದ ಗಮಕಕ್ಕೆ ಒಂದು ಹೊಸ ಪ್ರಚಾರ ಮಾಡಿಸಿದ್ದರು. ಆ ಪ್ರಕಾರದಲ್ಲಿ ಹೊಸ ರುಚಿಯನ್ನು ಪ್ರೀತಿವಿಶ್ವಾಸವನ್ನು ಗಳಿಸಿ ಕೊಡುವುದರಲ್ಲಿ ಮೂರ್ತಿ, ಟಿ. ಎಸ್. ವೆಂಕಣ್ಣಯ್ಯ ದೊಡ್ಡ ಭಾಗವನ್ನು ವಹಿಸಿದ್ದರು. ಈ ಸಂಗತಿ ಶಾಸ್ತ್ರಿಗಳ ಮೂಲಕ ನನಗೆ ತಿಳಿದಿತ್ತು. ಶಾಸ್ತ್ರಿಗಳು, ರಾಯರು, ಮೂರ್ತಿ, ನಾನು ಮೈಸೂರಲ್ಲಿ ಇರುವಷ್ಟು ಕಾಲವೂ ಜೊತೆಗಿರುತ್ತಿದ್ದೆವು. ಸ್ನೇಹವಿಶ್ವಾಸ ಬೆಳೆದವು. ಇವರೆಲ್ಲರೂ ನಮಗಿಂತ ಎಂಟೊಂಬತ್ತು ವರ್ಷಗಳಾದರೂ ವಯಸ್ಸಲ್ಲಿ ಹಿರಿಯರು. ಒಬ್ಬೊಬ್ಬರು ಒಂದೊಂದು ವಿಧದಲ್ಲಿ ಸಾಧಕರು. ಮೂರ್ತಿ ಕಾಲದಲ್ಲಿ ಟ್ರೈನಿಂಗ್ ಸ್ಕೂಲಲ್ಲಿ ಅಧ್ಯಾಪಕರಾಗಿದ್ದವರು – ಎ. ಎನ್. ನರಸಿಂಹಯ್ಯ.

ಅವರ ಕಾರ್ಯಭಾರ ಹೆಚ್ಚಾಗಿದ್ದುದರಿಂದ ಸಾಮಾನ್ಯವಾಗಿ ಅವರನ್ನು ರಮಾಪಿಳಾಸ ಅಗ್ರಹಾರದ ಹಿಂದೆ ಎರಡನೆಯ ಸೋನಾರ್ ರಸ್ತೆಯ ಪೂರ್ವ-ಪಶ್ಚಿಮ ಸಾಲಿನ ಬೀದಿಯ ಒಂದು ಮನೆಯಲ್ಲಿ ಕಾಣುತ್ತಿದ್ದೆವು. ಅವರ ಮನೆಯ ಎದುರು ಮನೆಯಲ್ಲಿಯೇ ನಮ್ಮ ಮೊದಲ ಕನ್ನಡ ಪ್ರೊಫೆಸರ್ ಬಿ. ಕೃಷ್ಣಪ್ಪನವರು ಇದ್ದರು. ವೆಂಕೋಬರಾಯರು ತಿ. ಸುಬ್ಬಯ್ಯ ರಸ್ತೆಯಲ್ಲಿ, ಕೃಷ್ಣಶಾಸ್ತ್ರಿಗಳು ದೇವೀರಮ್ಮನ್ನ ಅಗ್ರಹಾರದಲ್ಲಿ ಇದ್ದರು. ಮೂರ್ತಿಗಳಿರುತ್ತಿದ್ದುದು ನಂಜರಾಜ ಬಹದ್ದೂರ್ ಚತ್ರದ ಬಳಿ ಪೂರ್ವಕ್ಕೆ ಶಿವರಾಂ ಪೇಟೆಯ ಒಂದು ಅಗ್ರಹಾರದಲ್ಲಿ, ೧೯೨೪-೨೫ರಿಂದ ೧೯೨೮ರ ವರೆಗೂ ನಾನು ದೇವಾಂಬಾ ಅಗ್ರಹಾರದಲ್ಲಿದ್ದೆ. ಮೈಸೂರು ದೊಡ್ಡಕೆರೆ ಈಚೆಯ ಭಾಗದಲ್ಲಿ ಪಶ್ಚಿಮ ಕಡೆ ಹೆಚ್ಚು ಸೊಲಸಿನದ್ದು ನನ್ನ ಸ್ಕೂಲಿದ್ದುದು ಲ್ಯಾನ್ಸ್‌ಡೌನ್ ಬಸ್ಟಾರಿನ ಮೇಲಂತಸ್ತಲ್ಲಿ. ಸ್ವಲ್ಪ ಹೆಚ್ಚು ಕಡಮೆ ಒಂದು ಚದರ ಮೈಲಿ ಪರಿಧಿಯೊಳಗೆ ನಾವೆಲ್ಲ ಇದ್ದಂತಾಗಿ ದಿನಾ ಸೇರಲು ಅವಕಾಶವಿತ್ತು.

ಮೂರ್ತಿ ನಾನು ಇನ್ನಷ್ಟು ಹತ್ತಿರ ಬಂದುದು ಒಂದು ಕಡೆ ಪರಿಷತ್ತಿನ ಮೂಲಕ, ಇನ್ನೊಂದು ಕಡೆ ಪರಿಷತ್ತಿನ ೧೯೨೫ರ (?) ಬೆಳಗಾಂ ಸಮ್ಮೇಳನಕ್ಕೆ ಜೊತೆಯಲ್ಲಿ ಹೋದಾಗ. ಆ ಸಮ್ಮೇಳನದಲ್ಲಿ ಬಿಸಿಗಲ್ ರಾಮರಾಯರು ಅಧ್ಯಕ್ಷರು. 'ಶ್ರೀ' ಅವರು ಕವಿಸಮ್ಮೇಳನದ ಅಧ್ಯಕ್ಷರು. ಅಯ್ಯನವರ ಕನ್ನಡ ಮಾತನ್ನು ಮೊದಲ ಬಾರಿಗೆ ನಾನು ಅಲ್ಲೇ ಕೇಳಿದ್ದು. ಅದನ್ನು ನಾನು ಈಗ ಹೇಳುತ್ತಿರುವುದು. ಪರಿಷತ್ತಿನ ಕಾರ್ಯದರ್ಶಿಯವರಾದ ಬೆಳ್ಳಾವೆ ವೆಂಕಟನಾರಾಯಣಪ್ಪನವರು ಸಮ್ಮೇಳನಕ್ಕಾಗಿ ದಯಮಾಡಿಸಿದ್ದರು. ಅವರು ಮೂರ್ತಿಗೆ ಭೌತಶಾಸ್ತ್ರದ ಗುರುಗಳು. ವ್ಯಕ್ತಿಯಾಗಿ ಅವರನ್ನು ಕಂಡರೆ ಮೂರ್ತಿಗೆ ಭಯಭಕ್ತಿ. ಅವರು ಒಂದು ಮಾತು ನುಡಿದರೆ ಇವರು ಅದನ್ನು ಸರ್ವಥಾ ನಡಸುತ್ತಿದ್ದರು. ನಾವು ಇಳ್ಳಿಂದ ಹೋಗಿ ನಮಗೆ ನಿರ್ಧರಿಸಿದ್ದ ಬೀಡಾರದಲ್ಲಿ ಊಟ ಉಪಚಾರಗಳನ್ನು ಪ್ರೊಗದಸ್ಸಾಗಿ ಮಾಡುತ್ತಿದ್ದಾಗ ವೆಂಕಟನಾರಾಯಣಪ್ಪನವರು ಸ್ವಯಂಪಾಕ ಮಾಡಿಕೊಳ್ಳುತ್ತಿದ್ದರು. ಸಮ್ಮೇಳನದ ಒಂದಿನ ದಿನ ಮಧ್ಯಾಹ್ನ ಅವರು ಬೆಂಗಳೂರಲ್ಲಿ ಊಟ ಮಾಡಿದ್ದುದು. ಆಗಿನ ಪ್ರಯಾಣ ಸುಖಸೌಕರ್ಯದ್ದಲ್ಲ, ಧಾರವಾಡ, ಬೆಳಗಾಂ ಬಾವಿಗಳು ಆಳ. ನೀರು ಸೇದುವ ಕೊಡಗಳು ದೊಡ್ಡವು. ನೀರು ಸೇದುವಾಗ ವೆಂಕಟನಾರಾಯಣಪ್ಪನವರ ಕೈ ಸೋಲುತ್ತಿದೆ ಎಂದು ಕಂಡು, ಬೇಗ ರೇಷ್ಮೆ ಮಗುಟ ಉಟ್ಟು ಅವರಿಗೆ ನಾಲ್ಕು ಕೊಡ ನೀರು ಸೇದಿಕೊಟ್ಟು, ಅಡುಗೆಯ ಸಿದ್ಧತೆಗೆ ಬೇಕಾದುದೆಲ್ಲವನ್ನೂ ಮೂರ್ತಿ ಮಾಡಿದರು. ಸಮ್ಮೇಳನ ಮುಗಿದು ಕಡೆಯ ದಿವಸದ ಹೊತ್ತಿಗೆ ನಮ್ಮಲ್ಲಿಗೆ ಬಂದು ಸೇರಿದ ಗುಂಡಪ್ಪನವರೊಡನೆ ನಾವು ಧಾರವಾಡ, ಗದಗ್, ಹೊಸಪೇಟೆ, ಹಂಪೆಗಳಿಗೆ ಹೋಗಿ ಒಂತಿರುಗಿದೆವು. ಬೆಳಗಾಂ ಸಮ್ಮೇಳನದಿಂದ ಹೊರಟು ಹಂಪೆಯ ದರ್ಶನ ಮಾಡಿಕೊಂಡು ಬಂದನಂತರ ನಾನು 'ಪಂಪಾಯಾತ್ರೆ' ಬರೆದೆ. ಮೂರ್ತಿ 'ನಾಗರಿಕ' ಬರೆದರು. ಅದು ಅವರಿಗೆ ಪ್ರಥಮ ಗ್ರಂಥರಚನೆ ಅಲ್ಪವಾದರೂ ಕನ್ನಡದಲ್ಲಿ ಒಂದು ಪುಸ್ತಕ ಬರೆದೆನೆಂಬ ಮುದ್ರಾಧಾರಣ ನನಗಾಯಿತು. ನನ್ನ ಮೊದಲ ಕನ್ನಡ ಗದ್ಯಕೃತಿ 'ಪಂಪಾಯಾತ್ರೆ'. ಅದು ನನಗೆ ಅನೇಕ ಸ್ನೇಹಿತರನ್ನು ತಂದುಕೊಟ್ಟಿದೆ. 'ನಾಗರಿಕ'ದ ಕೀರ್ತಿ ಇನ್ನೂ ಹರಿದು. ಆ

ದೃಷ್ಟಿಯೇ ಹೊಸದು. ಆಳವಾಗಿ ಧರ್ಮಶ್ರದ್ಧೆಯುಳ್ಳ ಆಧುನಿಕನೊಬ್ಬನು ನಾಸ್ತಿಕನಂತೆ ವಾದಮಾಡುತ್ತ ಧರ್ಮ, ದೇವರು, ಭಕ್ತಿ ಎಂಬ ವಿಚಾರಪ್ರಪಂಚವನ್ನು ಮಾರ್ಮಿಕವಾಗಿ, ಹೃದಯಂಗಮವಾಗಿ, ಯುವಕರ ಸ್ಫೂರ್ತಿ ಬಲಿಯುವಂತೆ ಸರಳರಗಳಿಯಲ್ಲಿ ಮೂರ್ತಿ ಮಾಡಿವ್ವಾರೆ. 'ಎಮ್ಮೊಂದಿಗರ ಶೋಕವಾರಿಯಲಿ ಸಾಗರಗಳೀಳಾಗಿ' ಎಂದೊ ಏನೊ ತೊಡಗುವ ಅವರ ಆರಂಭ ಆ ಕಾಲಕ್ಕೆ ಪೂರ್ತಿ ಹೊಸದು; ಮನಸ್ಸನ್ನು ಕಲಕುವಂಥದು. ಆ ಹೊತ್ತಿಗಾಗಲೆ ಅವರು ಭೌತಶಾಸ್ತ್ರಕ್ಕೆ ಸಂಬಂಧಿಸಿದ ಗ್ರಂಥ ಬರೆದು ವಿದ್ಯಾ ಇಲಾಖೆಯಿಂದ ಬಹುಮಾನ ಪಡೆದಿದ್ದರು. ಕಡಮೆ ಎಂದರೆ, ಕಂಠೀರವವಿಜಯ, ರಾಣಿ ವೀರಮ್ಮಾಜಿ ಕೃತಿಗಳನ್ನು ಬರೆದಿದ್ದರು. ಸ್ಕೌಟ್ ಇಲಾಖೆಗೆ ಸಂಬಂಧಿಸಿದವರಾದ್ದರಿಂದ ಆ ಸಂಗತಿಯನ್ನು ಕುರಿತು ಗದ್ಯಪದ್ಯ ರಚನೆಯನ್ನು ಮಾಡಿದ್ದರು. ದಾರಿಯುದ್ದಕ್ಕೂ ವೆಂಕಟನಾರಾಯಣಪ್ಪನವರನ್ನು ಬಿಟ್ಟು ಉಳಿದವರಿಗೆ ಮೃಷ್ಟಾನ್ನಭೋಜನ ಕೂಟ ದೊರಕಿತು. ಕನ್ನಡ ಸೇವೆಯೆಂದರೆ ಈ ಊಟೋಪಚಾರ ಉತ್ತರ ಕನ್ನಡದಲ್ಲಿ ದೊರಕಿದ ಹಾಗೆ ಬೇರೆಲ್ಲಿಯೂ ದೊರಕಲಿಲ್ಲವೆನ್ನಬೇಕು. ಆ ಜನದ ಮಾತು, ನಡತೆ ಇಲ್ಲಿನ ನಾಜೂಕಿನವರಿಗೆ ಸ್ವಲ್ಪ ಗಡುಸಾಗಿ – ಅವರು ಗಂಡು ಎನ್ನುತ್ತಾರೆ – ಕಂಡರೂ ಅವರ ಅಂತಃಕರಣ ಸರ್ವಥಾ ಉದಾರವಾದ್ದು. ಅವರ ಪ್ರೀತಿ ತುಂಬಿನಲ್ಲಿ, ಪ್ರಾಮಾಣಿಕತೆಯಲ್ಲಿ, ಹಾರ್ದತೆಯಲ್ಲಿ, ಕ್ರಿಯಾವಂತಿಕೆಯಲ್ಲಿ ಅತಿಶಯ ಸಂತೋಷವನ್ನು ಕೊಡುತ್ತಿತ್ತು. ಸ್ವಯಂಪಾಕದ ಕರ್ಮಬಂಧ ಯಜಮಾನರಿಗೆ ಗಂಟುಬಿದ್ದುದರಿಂದ ಅವರ ಶ್ರಮ ಅವರಿಗೆ. ಇವರು ಏಕೆ ಹೀಗೆ ಗಾಸಿಗೊಳ್ಳುತ್ತಾರೊ ಎಂದು ನಮಗೆ ಅಸಮಾಧಾನವಾದರೂ ಅವರವರ ಧರ್ಮಕರ್ಮ ಅವರವು. ಆ ಧರ್ಮ ಈ ಕರ್ಮಕ್ಕೆ ನೆಲೆಗಟ್ಟು ಎಂದುಕೊಂಡು ನಾವು 'ಒಣ' ಮರ್ಯಾದೆಯನ್ನು ನಿಜವಾಗಿ ಸಲ್ಲಿಸುತ್ತಿದ್ದೆವು. ಅವರ ಶೀಲ ಚರಿತ್ರ ದೊಡ್ಡವಾದ್ದರಿಂದ ಮೂರ್ತಿ ಅವರಿಗೆ ನೆರವಾಗುತ್ತಿದ್ದರು. ಆ ಸಂಬಂಧದಲ್ಲಿ ನಮ್ಮ ಮಾತು, ಟೀಕೆ, ಚಾಟು, ಚಮತ್ಕಾರ ಯಾವುದನ್ನೂ ಅವರು ಕಿವಿಯ ಮೇಲೆ ಹಾಕಿಕೊಳ್ಳುತ್ತಿರಲಿಲ್ಲ. ಕಿವಿಗೇ ಬೀಳದಿರುವುದಕ್ಕೆ ಮೂರ್ತಿಯ ಶ್ರವಣಮಾಂದ್ಯವೂ ನೆರವಾಯಿತೆನ್ನಲೆ? ಆದರೆ ಅವರ ಭಕ್ತಿ, ವಿನಯ, ಗುರುಸೇವೆ ನಿಚ್ಚಳ. ಹಂಪೆಯ ಯಾತ್ರೆಯಲ್ಲಿ ಸುಮಾರು ನಾವು ನಾಲ್ಕು ಜನ ಹೇಗೆ ಎರಡು ದಿನ ಕಾಲಕಳೆದೆವು ಎಂಬುದನ್ನು ಕಾಣಿಸಿದ್ದೇನೆ. ಅಲ್ಲಿ ಬೆಳೆದ ಸ್ನೇಹ, ಪ್ರೀತಿಯ ಕಟ್ಟು ಮೂರ್ತಿಯನ್ನು ನನ್ನನ್ನು ಇನ್ನಷ್ಟು ಹತ್ತಿರಕ್ಕೆ ತಂದವು.

ಅವರು ಯಾವುದೇ ಕೆಲಸದಲ್ಲಿರಲಿ, ಅವರ ಮನೆ – ತಂದೆಯ ಕಾಲದಲ್ಲಾಗಲಿ, ತರುವಾಯದ ಕಾಲದಲ್ಲಿಯಾಗಲಿ – ಬೇರೆ ಇದ್ದಾಗಲೂ – ನಮ್ಮ ಪೇಟೆಯ ನಾಲ್ಕನೆಯ ರಸ್ತೆಯಲ್ಲಿ ಇತ್ತು. ಆದುದರಿಂದ ಅಧಿಕಾರದ, ಉದ್ಯೋಗದ ಕಾರಣಗಳಿಂದಾಗಿ ಅವರು ತುಮಕೂರು, ಶಿವಮೊಗ್ಗಗಳಿಗೆ ಹೋಗಿದ್ದಾಗ ಬಿಟ್ಟು, ಬೆಂಗಳೂರು ಟ್ರೈನಿಂಗ್ ಸ್ಕೂಲಲ್ಲಿದ್ದು ಡಿ.ಇ.ಓ. ಆಗಿ ನಿಶ್ಶಾಂತಿಪಡೆವವರೆಗೂ ಊರಿಗೆ ಬಂದಾಗ ಅವರು ನಮ್ಮ ಪೇಟೆಯವರೇ. ಕೆಲಸದಿಂದ ನಿಶ್ಶಾಂತಿಪಡೆದ ಮೇಲಂತೂ ಒಂದು ಫರ್ಲಾಂಗ್ ದೂರವಿಲ್ಲದ ನಮ್ಮಿಬ್ಬರ ಮನೆಗಳು ಮತ್ತಷ್ಟು ಬರು-ಹೋಗುಗಳಿಗೆ ಕಾರಣವಾಯಿತು.

ನನ್ನ ಹಿರಿಯ ಮಗಳ ಮದುವೆ ಅವರ ಮನೆಯಲ್ಲಿಯೇ ಸೇರಿತು. ಇಬ್ಬರಿಗೂ ಪರಿಷತ್ತಿನ ಮತ್ತು ಸೆಂಟ್ರಲ್ ಕಾಲೇಜ್ ಕರ್ನಾಟಕ ಸಂಘದ ಇಮ್ಮಡಿ ಸ್ನೇಹಸಂಬಂಧ ಕೆಲಿತನದಲ್ಲಿ ನಮ್ಮನ್ನು ಬೆಸೆಯಲು ಕಾರಣವಾಯಿತು. ಶಾಸ್ತ್ರಿಗಳು, ವೆಂಕಣ್ಣಯ್ಯ, ಮೂರ್ತಿ, ನಾನು, ರಾಯರು ಸ್ವಲ್ಪ ಹೆಚ್ಚು ಕಡಮೆ ಹತ್ತಿರದ ಗುಂಪು. ಇದರಲ್ಲಿ ಶಾಸ್ತ್ರಿ–ವೆಂಕಣ್ಣಯ್ಯ ಮೊದಲು. ಮೂವರಲ್ಲಿ ಜೊತೆಗೆ ಮೂರ್ತಿ ಎರಡನೆಯ ನೆಲಸು. ನಾನು ಸೇರಿದೆ ನಾಲ್ಕನೆಯವನಾಗಿ. ಎಂದಿಗೂ ಕಡೆಯೇ! ಸಾಹಿತ್ಯಪ್ರಪಂಚದಲ್ಲಿ ಹೆಚ್ಚಾಗಿ ನಿಕಟವಾಗಿ ಬೆರೆಯದಿದ್ದರೂ ರಾಯರೂ ಈ ಚತುಷ್ಕದ ಜೊತೆಗೆ ತಪ್ಪದ ಐದನೆಯವರು. ನಾನು ಒಳಹೊರ ಕ್ರಿಯಾವಲಯಗಳನ್ನು ವರ್ಣಿಸುತ್ತಿದ್ದೇನೆ ಮಾತ್ರ. ನಮ್ಮ ಉದ್ದೇಶ ಒಂದು, ಕಾರ್ಯಪ್ರಪಂಚ ಒಂದು. ರಾಯರಿಗೊಬ್ಬರಿಗೆ ಒಂದು ಓವರ್‌ಲಂಡ್ ವ್ಹಿಪ್ಪೆಟ್ ಕಾರಿತ್ತು. ಅವರು ಲಾಲ್‌ಬಾಗಲ್ಲಿ ಕ್ರುಂಬಿಗಲ್ ಕೈಕೆಳಗೆ ವಾಸ್ತುಶಿಲ್ಪದ ಅಧಿಕಾರಿಯಾಗಿದ್ದರು. ಅವರನ್ನು ಲಾಲ್‌ಬಾಗಲ್ಲಿಟ್ಟಿದ್ದಾರೆ ಎಂಬುದು ಸಾಮಾನ್ಯ ವಿನೋದ. ಬಿಡುವಾಗಿದ್ದಾಗೆಲ್ಲ ನಮ್ಮ ಜೊತೆಯಲ್ಲಿರುತ್ತಿದ್ದುದರಿಂದ ಆ ಕಾರಿನ ಪ್ರಯೋಜನ ನಮಗೆ ಧಾರಾಳವಾಗಿ ದೊರೆಯುತ್ತಿತ್ತು. ಕರ್ನಾಟಕ ಸಂಘದ ಕಾರೆಂದೇ ಅದಕ್ಕೆ ಖ್ಯಾತಿ. ಆಮೇಲಿನ ಕಾಲದಲ್ಲಿ ಅವರು ಪರಿಷತ್ ಕಾರ್ಯದರ್ಶಿಯಾಗಿ, ಕನ್ನಡ ನುಡಿಯ ಸಂಪಾದಕರೂ ಆಗಬೇಕಾದಾಗ ನನ್ನ ಅವರ ಬಾಂಧವ್ಯಕ್ಕೆ ಇನ್ನೊಂದು ಮುಖ, ನೆಲಸು ತೆರೆಯಿತು. ಗುರುವಾರ ನಮ್ಮ ಇಂಟರ್ ಮೀಡಿಯಟ್ ಕಾಲೆಜಿಗೆ ನಾಲ್ಕು ಗಂಟೆಯ ಹೊತ್ತಿಗೆ ಕಾರಲ್ಲಿ ಅವರು ಬರುವುದು, ನಾವಿಬ್ಬರೂ ಸೆಕ್ರೆಟೆರಿಯೆಟ್ ಕ್ಲಬ್ ಹೊರಗೆ ಹೊಟೇಲಲ್ಲಿ ಸಿಹಿ ಖಾರ ಕಾಫಿ ಸೇವಿಸುವುದು; ಅಲ್ಲಿಂದ ಪಬ್ಲಿಕ್ ಲೈಬ್ರರಿ ಪಕ್ಕದಲ್ಲಿನ ಒಂದು ಸೀಳುದಾರಿಯಿದೆ. ಅಲ್ಲಿ ಹತ್ತು ಮಾರು ಹೋಗಿ ಕಾರು ನಿಲ್ಲಿಸಿ, ಆ ವಾರದ ಕನ್ನಡನುಡಿಯ ಸಂಪಾದಕೀಯವನ್ನು ನಾನು ಹೇಳಿ ಅವರು ಬರೆದುಕೊಳ್ಳುವುದು, ಅದನ್ನು ತಿದ್ದಿ ಮಾರನೆಯ ಬೆಳಿಗ್ಗೆ ಕೊಡುವುದು, ಅದು ಶುಕ್ರವಾರ ಅಚ್ಚಾಗಿ ಪ್ರಕಟವಾಗುವುದು, – ಮುಂತಾದ ನೆಲಸಿನ ಕ್ರಿಯಾವಂತಿಕೆ ರಾಯರದು. ಅವರ ಕಾರಿನ ಸೇವಾಸೌಕರ್ಯ ಎಲ್ಲರಿಗೂ ದೊರೆಯುತ್ತಿತ್ತು.

ಮೂರ್ತಿ ತುಮಕೂರಿನ ಜಿಲ್ಲಾ ವಿದ್ಯಾಧಿಕಾರಿಗಳಾಗಿದ್ದಾಗಲೊ ನಾರ್ಮಲ್ ಸ್ಕೂಲ್ ಮುಖ್ಯೋಪಾಧ್ಯಾಯರಾಗಿದ್ದಾಗಲೊ ನಾವೆಲ್ಲ ಅವರ ಆತಿಥ್ಯದಲ್ಲಿ ಮನೆಯಲ್ಲಿ ಬೇಕಾದಷ್ಟು ಉಪಚಾರ ಪಡೆದು, ಸಂಭಾರಗಳನ್ನು – ಉಪ್ಪಿನಕಾಯಿ ಮೊದಲುಗೊಂಡು – ಸಾಮಗ್ರಿಗಳನ್ನು, ಹಪ್ಪಳ ಸಂಡಿಗೆ ದೇವೀಲ್ ಹೊತ್ತು, ದೇವರಾಯನದುರ್ಗದ ದಾರಿಯಲ್ಲಿ ನಾಮದ ಕೊಳದ ಹತ್ತಿರ ಹೋಗಿ ಚಕ್ಕುಲಿ, ಸೇವು, ರವೆಉಂಡೆ, ಕೋಡುಬಳೆ ಸೇವಿಸಿ, ಮೇಲೆ ದುರ್ಗಕ್ಕೆ ಹೋಗುವ ಹೊತ್ತಿಗೆ ಹನ್ನೊಂದು ಗಂಟೆಯಾಗಿತ್ತು. ದೇವರ ದರ್ಶನವೇನು ಆಗುತ್ತದೆ? ಮಧ್ಯಾಹ್ನದ ಊಟ ಪರಿಷ್ಕಾರವಾಗಬೇಕು; ಅದಕ್ಕೆ ಸಜ್ಜು ಬಾಣಸಿನ ಏರ್ಪಾಡು! ನಾವೆಲ್ಲರೂ ಅಡಿಗೆಯಲ್ಲಿ ಕುಶಲರೇ ಆಗಿದ್ದರೂ ಇಬ್ಬರು ವಿಶೇಷವಾಗಿ ನಿಂತು ಅಲ್ಲಿ ಮಾಡಿದ ಅಡಿಗೆ ಬಹುಕಾಲದ ರುಚಿಯಾಗಿ ಉಳಿದಿದೆ. ಆ ಗುಂಪಿನಲ್ಲಿ ಇರುವ ನಿರ್ಭಾಗ್ಯ ನಾನೊಬ್ಬನೇ. ಬೆಟ್ಟ ಹತ್ತಿದ ಶ್ರಮದಿಂದ ಹಸಿವಾಗಿ ಉಳಿದಿದ್ದ ಕಿರುತಿಂಡಿ, ತುರಿದಿದ್ದ ತೆಂಗಿನಕಾಯಿ, ನಾಲ್ಕಾರು ಸೌತೆಕಾಯಿ ಇಷ್ಟರ ನಡುವೆ

ಮಾಯವಾದವು. ಪುನಃ ತೆಂಗು ತುರಿಯಬೇಕಾಯಿತು. ಊಟದ ಸಮಯದಲ್ಲಿ ಒಂದು ಸೀಸೆ ಉಪ್ಪಿನಕಾಯಿ, ಒಂದು ದೊಡ್ಡ ಸೀಸೆಯ ತುಂಬ ತುಪ್ಪ ನಮ್ಮ ಐವರ ಬಳಸಿನಲ್ಲಿ ತಳಗೋಚಿದವು. ಮಧ್ಯಾಹ್ನ ಬಿಸಿಲು ತಂಪಿಸಿಕೊಂಡು ಬೇಕಾದಷ್ಟು ಕಾಫೀ, ಬೋಂಡ ಸೇವಿಸಿ ದೇವರಾಯನದುರ್ಗದಿಂದ ಇಳಿದುಬಂದ ವೈಭವ ನಮಗೆ ಮಾತ್ರ ಗೊತ್ತು. ಹಿಂದಿನ ಕಾವ್ಯಗಳಲ್ಲಿ ಬರುವಂತೆ 'ಸಾವಿರ ಹೆಡೆ ಎರಡು ಸಾವಿರ ನಾಲಗೆ ಇರುವ ಆದಿಶೇಷನಿಗೂ ಅಳವಲ್ಲ' ಎಂದು ಓದಿ ಬಂದಿರುವ ನಾನು ವರ್ಣಿಸಲು ನನ್ನಳವೆ?

ಎತ್ತರದ ಸ್ಫುರದ್ರೂಪಿ ವ್ಯಕ್ತಿ ಮೂರ್ತಿ. ಮೈಚರ್ಮ ಬೆಳ್ಪು. ಆರೋಗ್ಯವಂತರೂ ಶಿಸ್ತಿನ ಜೀವನ ಮಾಡುತ್ತಿದ್ದವರೂ ಆದ್ದರಿಂದ ದೃಢಕಾಯರಾಗಿದ್ದರು. ಬೆಳ್ಪನ್ನು ರಂಜಿಸಿ ಒಂದು ಮೃದುವಾದ ಒಂದು ಬಗೆಯ ಗುಲಾಬಿ ಎನ್ನೋಣ – ಕೆಂಬಣ್ಣ ಅವರು ಉತ್ಸಾಹದಲ್ಲಿದ್ದಾಗ ಕಂಡುಬರುತ್ತಿತ್ತು. ಮುಖಭಾವ ಗಂಭೀರ. ಕೂತಿರಲಿ, ನಿಂತಿರಲಿ, ನಡೆಯುತ್ತಿರಲಿ – ಆಕೃತಿ ನೋಡುವಂಥದು. ಅಧಿಕಾರಿಯಾಗಿ ಶುಭಸಮಾರಂಭಗಳಿಗೆ ಸೂಟ್ ಧರಿಸಿ ಹೋಗುತ್ತಿದ್ದರು. ಇತರ ಸಾಮಾಜಿಕ ಸಾಹಿತ್ಯ ಸಮಾರಂಭಗಳಿಗೆ ಜರತಾರಿ ಅಥವಾ ರೇಷ್ಮೆ – ಬಹುತರ ಜರತಾರಿ – ಪಂಚೆಯನ್ನು ಉಟ್ಟುಬರುತ್ತಿದ್ದರು. ಹಲವು ಸಂದರ್ಭಗಳಲ್ಲಿ ಜರಿ ಉತ್ತರೀಯವನ್ನು ಹೊದೆಯುತ್ತಿದ್ದರು. ಒಳ್ಳೆಯ ಹೆಬ್ಬೆರಳಂಚಿನ ಜರಿಯ ರುಮಾಲನ್ನು ಮಾಟವಾಗಿ ಕಟ್ಟುತ್ತಿದ್ದರು. ಅವರ ಉಡುಗೆ ಮಾನಗಳಲ್ಲಿ ಒಮ್ಮೆ ಆಗಲಿ ಅಶಿಸ್ತಿಲ್ಲ, ಅಲಸ್ಯವಿಲ್ಲ. ಅತನನ್ನು ಕಂಡರೆ ಆ ಗಂಭೀರ ಮುಖಮುದ್ರೆ, ಅನೇಕ ವೇಳೆ ಆ ನಗೆಮುಖ, ಅಧಿಕಾರ ನಡಸಬೇಕಾಗಿರುವಾಗ ಅದಕ್ಕೆ ಬೇಕಾದ 'ಅದಬ್' ಇರುತ್ತಿದ್ದವು. ತಂದೆ ಅಮಲ್ದಾರಿಕೆ ಮಾಡಿದವರು ಎಂದೆ. ಇವರ ಅಧಿಕಾರ ಈಚಿನ ಕಾಲದ ಸೌಮ್ಯತೆಯದೇ ಆದರೂ ಬಿಗಿ ಸರಳತೆ ಎರಡೂ ಕೂಡಿದ ಒಂದು ಸಜ್ಜನತೆ ಸೌಜನ್ಯ ಅವರ ಸ್ವರೂಪಲಕ್ಷಣ.

ಎ. ವಿ. ಸ್ಕೂಲ್ (ಎಂದರೆ, ಈಗಿನ ಮಿಡಲ್ ಸ್ಕೂಲ್ ಏಳನೆ ಸ್ಟಾಂಡರ್ಡ್‌ವರೆಗೆ; ಹೈಸ್ಕೂಲು ಎಂಟು ಹತ್ತನೆಯ ತರಗತಿಯವರೆಗೆ), ಡಿಸ್ಟ್ರಿಕ್ಟ್ ನಾರ್ಮಲ್ ಸ್ಕೂಲ್ ಮತ್ತು ಉಪಾಧ್ಯಾಯರ ತರಬೇತಿಗಾಗಿ ವಿಶೇಷ ಟೀಚರ್ಸ್ ಟ್ರೈನಿಂಗ್ ಕಾಲೆಜ್, ಮೈಸೂರು– ಈ ಎಲ್ಲದರಲ್ಲಿಯೂ ಮೂರ್ತಿ ಉಪಾಧ್ಯಾಯರಾಗಿಯೊ ಮುಖ್ಯೋಪಾಧ್ಯಾಯರಾಗಿಯೊ, ಶಿಕ್ಷಕರಾಗಿಯೊ ಇದ್ದರು. ಮಿಡಲ್, ಹೈಸ್ಕೂಲ್ ಉಪಾಧ್ಯಾಯರಾಗಿದ್ದುದು ಬಹುಮಟ್ಟಿಗೆ ನನಗೂ ಅವರಿಗೂ ಪರಿಚಯ ಆಗುವುದಕ್ಕೆ ಮುಂಚೆ. ಅವರು ಶಿವಮೊಗ್ಗದಲ್ಲಿ ಹೈಸ್ಕೂಲ್ ಉಪಾಧ್ಯಾಯರಾಗುವುದಕ್ಕೆ ಮುಂಚೆ 'ಸಾವಿತ್ರಿ' ನಾಟಕ ಬರೆದಿದ್ದರು; ಸಣ್ಣಪುಟ್ಟ ಅನೇಕ ಕತೆಗಳನ್ನು ಬರೆದಿದ್ದರು. ಸ್ಕೌಟ್ ಮಾಸ್ಟರಾಗಿದ್ದರು. ಅವರ ಜೊತೆಯಲ್ಲಿ ಆಗ ಸ್ಕೌಟ್ ಮಾಸ್ಟರಾಗಿ ಮುಂದೆ ಸ್ಕೌಟ್ ಕಮೀಷನರಾದವರು ಸಿ. ಎಸ್. ಸುಬ್ಬರಾವ್. ಅವರಿಬ್ಬರೂ ದೊಡ್ಡ ಸ್ನೇಹಿತರು. ಒಮ್ಮೆ ಕ್ಲಿಲಾಸಂ ಅವರ 'ಟೊಳ್ಳುಗಟ್ಟಿ' ನಾಟಕವನ್ನು ಅಭ್ಯಾಸಮಾಡಿ ಪುಟ್ಟುವಾಗಿ ಸುಬ್ಬರಾಯರೂ ಮಾಧುವಾಗಿ ಮೂರ್ತಿಗಳೂ ಅಭಿನಯ ಮಾಡಿದ್ದರೆಂದು ಶ್ರೀ ನಿಟ್ಟೂರು ಹೇಳಿದ್ದನ್ನು ಕೇಳಿದ್ದೇನೆ. ಅಷ್ಟು ಹೊತ್ತಿಗಾಗಲೆ ವಿದ್ಯಾರ್ಥಿಗಳಲ್ಲಿ ತುಂಬ ಪ್ರೀತಿ, ಸ್ನೇಹಗಳನ್ನು ಬೆಳಸಿಕೊಂಡು ಬುದ್ಧಿವಂತರಾದ ಕೆಲವರಿಗೆ ಹೆಚ್ಚಿನ ವ್ಯಾಸಂಗಕ್ಕೆ

ರೂಪಗಾ ಕೊಟ್ಟಿದ್ದರು. ಆಮೇಲಿನ ಕಾಲಗಳಲ್ಲಿ ಬಹುಮಟ್ಟಿಗೆ ನಾನವರನ್ನು ನೋಡಿದುದು ರೇಂಜ್ ಇನ್ಸ್‌ಪೆಕ್ಟರಾಗಿ, ಡಿಸ್ಟ್ರಿಕ್ಟ್ ನಾರ್ಮಲ್ ಸ್ಕೂಲ್ ಹೆಡ್‌ಮಾಸ್ಟರಾಗಿ, ಡಿ.ಇ.ಓ. ಆಗಿ. ಅವರ ಶಿಕ್ಷಣ ಕ್ರಮ ತುಂಬಾ ಬೋಧಪ್ರದವಾಗಿರುತ್ತಿತ್ತೆಂದು ಕೇಳಿದ್ದೇನೆ. ಅವರ ಆಡಳಿತದಕ್ಷತೆ ಮತ್ತು ಅಧಿಕಾರ ಬಿಗಿಯಾಗಿದ್ದರೂ ಕಠಿಣವಲ್ಲ. ಅವರು ಮೇಲಿನ ಅಧಿಕಾರಿಯಾರಿಗೂ ತಮ್ಮ ಅಭಿಮಾನವನ್ನು ಸ್ವಾತಂತ್ರ್ಯವನ್ನು ಬಿಟ್ಟುಕೊಟ್ಟವರಲ್ಲ. ಕೆಲವೇಳೆ ಈತನ ವಿಧೇಯತೆಯ ಲಕ್ಷಣವನ್ನು ಕುರಿತು ಒಬ್ಬಿಬ್ಬರು ಮೇಲ್ಪಟ್ಟ ವಿದ್ಯಾಧಿಕಾರಿಗಳು ಇವರ ಎಳಿಗೆಗೆ ಅಡ್ಡಿಹಾಕಿದ್ದೂ ಉಂಟು. ಅಂಥವರೊಡನೆ ರಾಜಿ ಮಾಡಿಕೊಳ್ಳಲು ಇವರೆಂದಿಗೂ ಒಪ್ಪಲಿಲ್ಲ. ಅವರು ಡಿ.ಇ.ಓ. ಆಗಿದ್ದಾಗ ನಾನು ಶಿವಮೊಗ್ಗ ತುಮಕೂರುಗಳಿಗೆ ಹೋಗಿದ್ದೇನೆ. ಬೆಂಗಳೂರಲ್ಲಿ ಮಲ್ಲೇಶ್ವರದಲ್ಲಿಯ ಅವರ ಸ್ಕೂಲಲ್ಲಿಯೂ ಒಂದು ಸಲ ಉಪನ್ಯಾಸ ಮಾಡಿದ್ದೇನೆ. ಅಲ್ಲಿನ ಉಪಾಧ್ಯಾಯ ವರ್ಗವೆಲ್ಲ ಕನ್ನಡ ಸಾಹಿತ್ಯ ಬಲ್ಲವರು. ಮೂರ್ತಿಯಿಂದ ಶಿಕ್ಷಿತರಾದವರು. ಆದುದರಿಂದ ಇತರರು ಕಷ್ಟ ಎನ್ನಬಹುದಾದ ಸಾಹಿತ್ಯ ಸಂಗತಿಗಳನ್ನು ಹೆಚ್ಚು ಸುಲಭವಾಗಿ ಗ್ರಹಿಸಬಲ್ಲವರು. ಬೇರೆಯವರ ಇಂಥಾ ವಿದ್ಯಾರ್ಥಿಗಳಿಗೂ ಇವರವರಿಗೂ ಇದ್ದ ವ್ಯತ್ಯಾಸ ಅದು. ಯಾರಿಗಾಗಲಿ ಇನ್ಸ್‌ಪೆಕ್ಟರಾಗಿ ಅವರಿಗೆ ಶಿಕ್ಷೆ ಕೊಡಬೇಕೆನ್ನಿಸಿದಾಗ, ಅಥವಾ ವರ್ಗಾವಣೆ ಮಾಡುವಾಗ ತಮ್ಮ ಸ್ನೇಹಿತರಿಂದ ಕೂಡ ಸಿಫಾರ್ಸನ್ನು ಮೆಚ್ಚುತ್ತಿರಲಿಲ್ಲ. ಒಬ್ಬರ ಪರವಾಗಿ ನಾನೊಂದು ಸಲ ಸಿಫಾರ್ಸ್ ಮಾಡಹೋಗಿ ನನ್ನಲ್ಲಿಯೂ ಆಕ್ಷೇಪಣೆಯ ಮಾತಾಡಿದರು. ಅವರ ಒಂದು ವಾದ ಹೀಗಿತ್ತು: 'ಆ ಮನುಷ್ಯ ಏನು ಮಾಡುತ್ತಾನೆ, ನೀವು ಕಾಣೆರಿ. ('ಆ ಮನುಷ್ಯ' ಎಂದುದರಲ್ಲಿ ಒಂದು ಥರ ಬಿರುಸಾದ, ಆದರೆ ಕ್ರೂರ, ಅಶ್ಲೀಲ ಅಲ್ಲದ ಮಾತಾದರೂ ಗಡಸು ಇತ್ತು.) ಸರಿಯಾಗಿ ಸ್ಕೂಲ್ ಬಾಗಿಲು ಕೂಡ ತೆಗೆಯುವುದಿಲ್ಲ, ಪಾಠ ಮಾಡುವುದಿಲ್ಲ. ಏನೇನೊ ಕೆಲಸ ಮಾಡುತ್ತಿರುತ್ತಾನೆ. ಆ ಊರಲ್ಲಿ ತಳ ಊರಿ ನಿಂತಿದ್ದಾನೆ. ಇಂಥವರಿಂದ ಹುಡುಗರಿಗೆ ಯಾವ ವಿದ್ಯಾಶಿಕ್ಷಣ ದೊರೆತೀತು? ನ್ಯಾಯವಾಗಿ ಇಂಥವರನ್ನು ಕೆಲವು ದಿವಸವಾದರೂ ಹೊರಗಿಟ್ಟು ಬಿಸಿ ತೋರಿಸಿದಲ್ಲದೆ ದಾರಿಗೆ ಬರುವುದಿಲ್ಲ' ಎಂದಿದ್ದರು. ಆ ವ್ಯಕ್ತಿಯನ್ನು ಕಂಡಾಗ, 'ಏನ್ರಿ ನಿಮ್ಮ ವ್ಯಾಪಾರ? ನಾನು ಎಷ್ಟು ಸಾರಿ ನಿಮಗೆ ಹೇಳಿದ್ದೇನೆ. ನೀವು ನಮ್ಮ ಮಾತನ್ನು ನಡಸದೆ ಸಂಬಳ ತಿನ್ನುವ ಸರ್ಕಾರಿ ಕೆಲಸದಲ್ಲಿ ತಪ್ಪಾಗಿ ನಡೆಯುತ್ತಿದ್ದೀರಿ. ಹತ್ತಿರದ ನಮ್ಮ ಸ್ನೇಹಿತರಿಂದ ಸಿಫಾರ್ಸು ತಂದು ನನ್ನ ಮೇಲೆ ಪ್ರಭಾವ ಬೀರಲು ಯತ್ನಿಸಿದ್ದೀರಿ. ಇನ್ನೊಂದು ಬಾರಿ ಇಂಥದನ್ನೇನಾದರೂ ಕೈಕೊಂಡರೆ ಹುಷಾರ್' ಎಂದರು. ಆಮೇಲೆ ಒಂದೆರಡು ತಿಂಗಳ ಕಾಲದನಂತರ ಇದನ್ನು ನನಗೆ ಹೇಳಿದರು. 'ನಿಮಗೆ ಆ ಮನುಷ್ಯ ಕಂಡರೆ ಹೇಳಿ. ಈ ಬಾರಿಗೆ ಕ್ಷಮಿಸಿದ್ದೇನೆ. ಇನ್ನು ಮುಂದೆ ನೀವೂ ಇಂಥ ಸಿಫಾರ್ಸ್ ಮಾಡಬೇಡಿ. ಸರ್ಕಾರದಿಂದ ಅನ್ಯಾಯ ಆಗಿದ್ದರೆ ಹೇಳಿ. ಮೇಲಿನವರಿಗೆ ಹೇಳಿ, ಸಿಫಾರ್ಸ್ ಮಾಡಿ ಸರಿಪಡಿಸೋಣ'. ಹೀಗೆ ಮುನಿ, ಋಷಿ ಮೂರ್ತಿ. ನನ್ನ ಮೇಲೆ ಬೀಸುವ ದೊಣ್ಣೆ ಆ ದಿನ ತಪ್ಪಿತು. ದೈವಾನುಗ್ರಹ!

ವಿದ್ಯಾಶಾಲೆಯ ಇನ್ಸ್‌ಪೆಕ್ಟರಾಗಿ ತಮ್ಮ ಅನುಭವವನ್ನು ಹೆಚ್ಚು ಜನ ಬರೆದಿಲ್ಲ. ಇವರ 'ರಂಗಣ್ಣನ ಕನಸಿನ ದಿನಗಳು' ಎಂಬ ಪುಸ್ತಕದಲ್ಲಿ ಬಹುಸ್ವಾರಸ್ಯವಾಗಿ ಮೂರ್ತಿ ಅದನ್ನು

ಚಿತ್ರಿಸಿವ್ದಾರೆ. ಇದಕ್ಕೆ ಪೂರ್ವಭಾವಿಯಾಗಿ ಬಂದಿರುವ ಸುರಮ್ಯವಾದ ಅಂಥದೇ ಒಂದು ಪಂಜೆಯವರ 'ಸಬ್ ಎಸಿಸ್ಟೆಂಟನ ಸುಳ್ಳು ಡೈರಿಯಿಂದ' ಎಂಬ ಲೇಖನ. ಪ್ರತಿ ಒಂದು ಕೆಲಸದಲ್ಲಿದ್ದವರೂ ಅದಕ್ಕೆ ಸಂಬಂಧಪಟ್ಟ ಅನುಭವವನ್ನು ಹೀಗೆ ಬರೆದಿಟ್ಟರೆ ನಮ್ಮ ಸಾಹಿತ್ಯಕ್ಕೆ ಹುಲುಸು ಬರುವುದಲ್ಲದೆ ಜೀವನ ಪ್ರಕಾರಗಳ ಹತ್ತಾರು ಬಗೆಯ ಪರಿಚಯಗಳನ್ನೂ ವೈವಿಧ್ಯವನ್ನೂ ತಂದುಕೊಡುತ್ತದೆ. ಎಲ್ಲ ವೃತ್ತಿಗಳವರೂ ಹೀಗೆ ಮಾಡಿದರೆ ಬಗೆಬಗೆಯ ಜೀವನದ ವ್ಯಾಸಂಗಗಳು, ಖಚಿತ ಸಂಗತಿಗಳಿಂದ ಬಳಸುವ ಮಾತುಗಳು ಸಾಹಿತ್ಯ ಸಂಪತ್ತಿಗೆ ಸೇರುತ್ತವೆ. ನಮ್ಮ ಕಾಲ ಸಮಗ್ರವಾಗಿ ಚಿತ್ರಿತವಾಗುತ್ತವೆ.

ಅವರ ಬರವಣಿಗೆಯಲ್ಲಿ ಸುಲಭವಾಗಿ ಆಕರ್ಷಕವಾಗಿ ವಿಷಯವನ್ನು ತಿಳಿಸಬಲ್ಲ ಶಕ್ತಿ ಇದೆ. ವಿವಿಧ ವಯಸ್ಸಿನವರ ಶಿಕ್ಷಣದಲ್ಲಿ ಅನುಭವವುಳ್ಳ ಆತನಿಗೆ ಎಲ್ಲ ಮಟ್ಟದ ತಿಳಿವಳಿಕೆಯನ್ನು ಕೊಡುವ ಶಕ್ತಿಯಿತ್ತು. ಆದುದರಿಂದ ಇಲಾಖೆಯವರೂ ಸ್ಕೌಟ್ ಮಂಡಲದವರೂ ಪತ್ಯಪುಸ್ತಕಗಳನ್ನು, ಜನರಂಜನೆಯನ್ನು ತಯಾರು ಮಾಡಿಸಲು ನೆರವು ಪಡೆಯುತ್ತಿದ್ದರು. ಈ ಸಂದರ್ಭದಲ್ಲಿ ಒಂದೇ ಒಂದು ಸಂಗತಿಯನ್ನು ತಿಳಿಸಿದರೆ ಒಂದು ರಹಸ್ಯ ಹೊರಪಟ್ಟೀತು. ಬ್ರಾಹ್ಮಣ – ಅಬ್ರಾಹ್ಮಣ ಎಂಬ ಕಾರಣದಿಂದ ನಾಲ್ಕಾರು ಜನ ರಚಿಸಿದ ನಾಲ್ಕೈದು ಮಟ್ಟದ ರೀಡರುಗಳಲ್ಲಿ ಯಾವುದನ್ನಿಡಬೇಕು ಎಂಬ ಪ್ರಶ್ನೆ ಒಂದು ಸಲ ಎದ್ದಿತು. ಅದರ ಜೊತೆಗೆ ಮೈಸೂರವರಿಗೇ ಹೆಚ್ಚು ಪ್ರೋತ್ಸಾಹ ಕೊಡಬೇಕು, ಈ ಎರಡೂ ಗುಣಗಳೂ ಒಬ್ಬರಲ್ಲೇ ಸೇರಿದ್ದರೆ ಸಂತೋಷ. ಬ್ಲಾಕೀ, ಲಾಂಗ್‌ಮನ್ಸ್, ನೆಲ್ಸನ್, ಮ್ಯಾಕ್ಮಿಲನ್ ಕಂಪನಿಗಳವರು ಹೆಚ್ಚು ಸುಲಭವಾಗಿ ಇಂಥ ಪುಸ್ತಕಗಳನ್ನು ತಯಾರಿಸಬಲ್ಲವರು: ಅವರ ಕೈಯಲ್ಲಿ ಹಣವಿತ್ತು. ಪುಸ್ತಕಗಳಿಗೆ ಹೆಚ್ಚು ಚಿತ್ರಗಳನ್ನು ಒಳ್ಳೆಯ ಕಾಗದವನ್ನು ಅಚ್ಚುಕಟ್ಟನ್ನು ಒದಗಿಸಬಲ್ಲವರಾಗಿ, ಅವಕಾಶವನ್ನೆಲ್ಲ ಅವರು ತೆಗೆದುಕೊಳ್ಳುವ ಹಾಗಿದೆ ಎಂದು ಮುಂತಾದ ನಾನಾ ಕಾರಣಗಳು ಆ ಪ್ರಪಂಚದವು. ಇವು ಹೊರಕಾರಣಗಳು. ಎಲ್ಲಕ್ಕಿಂತ ಹೆಚ್ಚಾಗಿ ಬೇರೆ ಏನೇನೊ ಗಣ್ಯರಾದ ಲಿಂಗಣ್ಣಯ್ಯನವರವೆಂಬ ರೀಡರುಗಳಿಗೆ ಅಧಿಕಾರದಲ್ಲಿದ್ದವರ ಆಸೆ ಬಲಿತು ಪಕ್ಷಪಾತ ತೋರಿತ್ತು. ಆದರೆ ಮ್ಯಾಕ್ಮಿಲನ್ ಕಂಪನಿಯವರು ತಯಾರಿಸಿದ ಒಂದು ಸೆಟ್‌ಗೆ ಸಮಿತಿ ಸದಸ್ಯರ ಬಹುಮತ ತೀರ್ಮಾನ ದೊರಕಿತು. ಅದನ್ನು ಬರೆದವರಾರೆಂದು ಖಚಿತವಾಗಿ ತಿಳಿದಿರಲಿಲ್ಲ. ಅದನ್ನು ನಿರ್ಧರಿಸಬೇಕಾಗಿ ಬಂದಿತು. ಬಹುಶಃ ಒಂದು ಖಾಜಿನ್ಯಾಯ ನಡೆಯಿತು ಎನ್ನಲೆ? ಸಂಸ್ಥಾನದ ಕೆಲವು ಭಾಗಗಳಿಗೆ ಇವು, ಇನ್ನು ಕೆಲವು ಭಾಗಗಳಿಗೆ ಅವು ನಿಯಮಿತವಾದವು. ಮೇಲ್ಪಟ್ಟ ಅಧಿಕಾರಿಯೊಬ್ಬರು ಹಿಂದೆ ನನ್ನ ಪ್ರಾಚಾರ್ಯರಾಗಿದ್ದುದರಿಂದ ಏನೊ ಆಪ್ತವಾಗಿ ಮಾತಾಡುತ್ತ ಬಂದಿದ್ದರು. ಜೊತೆಗೆ ಅವರ ವಿದ್ಯಾರ್ಥಿ ಆಗಿದ್ದ ಎಂ. ಎ. ವೆಂಕಟರಾವ್ ಎಂಬ ತತ್ತ್ವಶಾಸ್ತ್ರಜ್ಞರಿದ್ದರು. (ನನ್ನ ಕಾಲದ ತರುವಾಯ ಅದೇ ಪ್ರಾಚಾರ್ಯರ ಶಿಷ್ಯರು ಅವರು. ಮಹಾರಾಣಿ ಕಾಲೇಜಲ್ಲಿ ತತ್ತ್ವಶಾಸ್ತ್ರದ ಉಪಪ್ರಾಚಾರ್ಯರು) ನನ್ನನ್ನು ಈ ಪ್ರಶ್ನೆ ಕೇಳಿದರು, 'ಈ ರೀಡರುಗಳನ್ನು ನೋಡಿದ್ದೀರಲ್ಲ? ಯಾರು ಬರೆದಿದ್ದಾರೊ ಗೊತ್ತಿಲ್ಲ. ಚೆನ್ನಾಗಿವೆ. ನಿಮ್ಮ ಗುಂಪಿನಲ್ಲೇ ಯಾರೊ ಒಬ್ಬರು ಬರೆದಿರಬೇಕು. ಯಾರಿರಬಹುದು?' ಎಂದರು. ಆ ಹೆಸರನ್ನು ಹೊರಗೆಳೆಯುವ ಸಂಚು ಅದು. ಅದು ಮೂರ್ತಿಗಳು

ಬರೆದದ್ದೆಂದು ನನಗೆ ಗೊತ್ತು. ಇವನ್ನೆಲ್ಲ ನಾವು ಇನ್ನೊಬ್ಬರಿಗೆ ಹೇಳತಕ್ಕದ್ದಲ್ಲ. ಅದರಲ್ಲೂ ಸರ್ಕಾರಿ ವಿದ್ಯಾ ಇಲಾಖೆಯಲ್ಲಿರುವವರು. ಮೇಲಿನವರ ಅಪ್ಪಣೆ ಪಡೆಯದೆ ಇಂಥದನ್ನು ಮಾಡಿದ್ದಾರೆ ಎಂಬ ಆಪಾದನೆಗೆ ಸಿಕ್ಕಿಸಬೇಕೆಂದೇ ಇವರು ನನ್ನನ್ನು ಪ್ರಶ್ನಿಸಿದ್ದು. 'ನಮ್ಮವರ್ಯಾರೂ ಅಲ್ಲ' ಎಂದು ಹೇಳಿಬಿಟ್ಟೆ. ಬಿಳಿ ಸುಳ್ಳು. ನನಗೆ ಸಂಬಂಧ ಪಡದ ವಿಷಯ. ತುಂಬ ಚೆನ್ನಾಗಿದ್ದ ನಾಲ್ಕಾರು ರೀಡರುಗಳನ್ನು ನೋಡಿದ್ದೆ. ಇಲ್ಲಿನ ಪಾಠಕ್ರಮ, ಆಯ್ದ ಪಾಠಗಳು ಸಮರ್ಪಕವಾಗಿದ್ದವು. ಯಾವ ಕಾರ್ಪಣ್ಯವೂ ಸುಳಿಯದೆ ಭಾಷೆಯ ಚತುರತೆಯನ್ನು ಉಳಿಸಿಕೊಂಡಿದ್ದವು ಈ ರೀಡರುಗಳು ಮಾತ್ರ. ಇಂಥವನ್ನು ವಿದ್ಯಾರ್ಥಿಗಳು ಓದಬೇಕು. ಭಾಷೆ, ಶೈಲಿ, ದೃಷ್ಟಿ ಎಲ್ಲ ರೀತಿಯಲ್ಲೂ ಸಮರ್ಪಕ. ಅವರು ನಮ್ಮವರೇ ಎಂಬ ಕಾರಣದಿಂದ ಒಳ್ಳೆಯ ಕೆಲಸಕ್ಕೆ ಅಡ್ಡಿ ಬರುವುದು ಸರಿಯಲ್ಲ ಎನಿಸಿತ್ತು. ಗೊತ್ತಿಲ್ಲವೆನ್ನುವುದು ಧರ್ಮ ದೃಷ್ಟಿಯಿಂದ ಸುಳ್ಳಲ್ಲವೆ ಎನ್ನಿಸಿತು. ನಾನು ಧಾರಾಳವಾಗಿ ಹೇಳಿದೆ. ಆ ಮಾತು ಹೇಳಿದ ಮೇಲೆ ಆ ಅಧಿಕಾರಿಗಳು ಥಟ್ಟನೆ ನನ್ನೊಡನೆ ಮಾತು ನಿಲ್ಲಿಸಿದರು. ಹಿಂದೆ ಲಾಲ್‌ಬಾಗಲ್ಲಿ ಹೊಟೇಲಿದ್ದ ಸ್ಥಳದಿಂದ ಪುನಃ ಉತ್ತರದ ಕಡೆಯ ಗೇಟಿನವರೆಗೆ ಹೋಗುವವರೆಗೂ ನನ್ನೊಡನೆ ಬಂದೂ ಒಂದು ಮಾತೂ ಆಡದೆ ಜೊತೆಯಲ್ಲಿದ್ದವರೊಡನೆ ಹೊರಟುಬಿಟ್ಟರು. ಮನೆಗೆ ಬಂದೊಡನೆಯೆ ಮೂರ್ತಿಗೆ ಈ ಸಂಗತಿ ತಿಳಿಸಿದೆ: ಅವರು ತೆಲುಗಲ್ಲಿ 'ಮುಂಡಾಕೊಡಕು, ಎವರೆವರ ಮಾಟಲೊ ವಿನಿ ನನ್ನು ಚಿಕ್ಕಿಸ್ತಾಮು ಅನಿವಿಂಟಾಡು. ವಾಣಿಕೂ ತೆಲಸು; ಐತೆ ಆಧಾರಮು, ಪ್ರಮಾಣಮು ಚಿಕ್ಕವು. ಬಂಗಾರುಗಾ ಮಾಟಲಾಡಿ ಮೀನುಂಚಿ ತೆಲಸ್ತಾನು ಅನುಕೊ ಉಂಡೆ ಚೂಡಂಡಿ. ಈ ಪುಸ್ತಕಾಲು ಎಷ್ಟುಲುಂದಿ. ಮಿಗಿಲನವು ಈ ಪಾಟು!' – ಎಂದು ನನಗೆ ಬೇರೆ ಪುಸ್ತಕಗಳನ್ನು ತೋರಿಸಿದರು. ನನಗೆ ಇದರ ಪರಿಚಯವಿತ್ತಾಗಿ ಅವರ ಹೇಳಿಕೆಗೆ ಕಾಯಬೇಕಿರಲಿಲ್ಲ. ಇವರಿಗೆ ಹಿಂದಿನ ಕಾಲದಲ್ಲಿ ಸುಲ್ತಾನ್ ಮೊಹಿಯುದ್ದೀನ್ ಟ್ರೈನಿಂಗ್ ಕಾಲೇಜಲ್ಲಿ ಉಪಾಧ್ಯಾಯರು, ಪಠ್ಯಪುಸ್ತಕದ ಇಲಾಖೆಯಲ್ಲಿ ಕಾರ್ಯದರ್ಶಿಯಾಗಿದ್ದ ನರಸಿಂಹಯ್ಯನವರು ಅಪ್ತಸ್ನೇಹಿತರಾಗಿದ್ದರು. ಅವರು ಆ ಕಾಲದಲ್ಲಿ ಒಂದೆರಡು ಒಳ್ಳೆಯ ಕೆಲಸ ಮಾಡಿದ್ದರಿಂದ ಅನೇಕರಿಗೆ ಇವರ ಮೇಲೆ ಅಸೂಯೆ ಇತ್ತು. ಆದರೆ ಯಾವ ಸಂದರ್ಭದಲ್ಲಿಯೂ ಅಳುಕದವರು, ಬಳುಕದವರು ಆಗಿದ್ದರು. ಇವರ ಮೇಲೆ ಎನ್.ಎಸ್. ಸುಬ್ಬರಾಯರಿಗೂ ವಿಶೇಷ ಪ್ರೀತಿ ಇತ್ತು. ಅವರೆಂದೂ ಇಂಥಾ ಪ್ರಶ್ನೆಗಳನ್ನು ಕೇಳುವವರಲ್ಲ. ಒಳ್ಳೆಯದನ್ನು ಅರಿತು ಅದಕ್ಕೆ ಪಕ್ಷಪಾತ ತೋರುವುದು ಅವರ ರೀತಿ, – ತಮಗೆ ಬೇರೆ ಕಾರಣಗಳಿಂದ ಬೇಡದವರಾಗಿದ್ದರೂ ಪ್ರೀತಿಗೆ ತಿರುಗುತ್ತಿದ್ದರು.

ಇಷ್ಟು ಹೊತ್ತಿಗೆ ಮೂರ್ತಿಗೆ ನಮ್ಮ ಪ್ರಾಚೀನ ಕಾವ್ಯಗಳ ಅಭ್ಯಾಸ, ತಿಳಿವಳಿಕೆ ತುಂಬಾ ದೊರೆತಿತ್ತು. ಪಂಪ, ರನ್ನ, ನೇಮಿಚಂದ್ರ, ನಾರಣಪ್ಪ, ಷಡಕ್ಷರ, ಹರಿಹರ ಮುಂತಾದವರ ಕಾವ್ಯಗಳು ಮುಖಸ್ಥವಾಗಿದ್ದವು. ಅವರ ಸ್ಮರಣಶಕ್ತಿ ನಮ್ಮ ಗುಂಪಿನಲ್ಲಿ ಅಸಾಧಾರಣವಾದುದು. ವಾಚೋವಿಧೇಯವಾಗಿ ಕಾವ್ಯಗಳಲ್ಲಿನ ಹತ್ತಾರು ಪದ್ಯಗಳನ್ನು ಕುರಿತು ಭಾಷಣಗಳಲ್ಲಿ ಉದಾಹರಿಸಬಲ್ಲವರಾಗಿದ್ದರು. ಇದನ್ನೆಲ್ಲ ಓದುವುದಕ್ಕೆ, ಸೈನ್ಸ್ ವಿದ್ಯಾವಿದರಾದ ಇವರಿಗೆ –ಇನ್ಸ್‌ಪೆಕ್ಟರ್, ಹೆಡ್‌ಮಾಸ್ಟರ್ ಆದ ಇವರಿಗೆ – ಸಮಯ ಎಲ್ಲಿರುತ್ತಿತ್ತೊ ಎನ್ನಿಸುತ್ತಿತ್ತು.

ಹೊಸ ಕನ್ನಡ ಗ್ರಂಥಗಳನ್ನು ಕುರಿತು ಇವರು ಕಾವ್ಯಾವಲೋಕನ ಮಾಡುವಾಗಲೂ ಧಾರಾಳವಾಗಿ, ನಿರ್ಭಯವಾಗಿ ಟೀಕೆ, ರಚನೆ ಮಾಡಿ ತಮ್ಮ ಅಭಿಪ್ರಾಯಗಳನ್ನು ತಿಳಿಸಬಲ್ಲವರಾಗಿದ್ದರು. ಹರ್ಡೇಕರ ಮಂಜಪ್ಪನವರ ಒಂದು ಪುಸ್ತಕವನ್ನು ಪ್ರಬುದ್ಧ ಕರ್ನಾಟಕದಲ್ಲಿ ಅವಲೋಕಿಸಬೇಕಾಗಿತ್ತು. ನಮ್ಮಲ್ಲಿ ಇನ್ನಾರು ಅದನ್ನು ಮಾಡಬೇಕು? ಕಡೆಗೆ ಅದು ಮೂರ್ತಿಯವರ ಪಾಲಿಗೆ ಬಂದಿತು. ಆ ಸಮಯದಿಂದ ಆರಂಭವಾದ ಅವರ ವೀರಶೈವಧರ್ಮ ಕಾವ್ಯವನ್ನು, ಹಿರಿಯರನ್ನು ಕುರಿತ ಗ್ರಂಥಗಳ ಪರಿಶೋಧನ, ಭಾಷಣ, ಲೇಖನ ಒಂದಾದ ಮೇಲೊಂದು ಬಂದವು. ಚಂಪೂ, ಷಟ್ಪದಿ ಕಾವ್ಯಗಳು ಹೇಗೆ ಅವರ ಬಾಯಿಗೆ ಬರುತ್ತಿತ್ತೊ ಹಾಗೆಯೇ ವಚನಕಾರರ – ಅದರಲ್ಲಿಯೂ ವಿಶೇಷವಾಗಿ ಬಸವೇಶ್ವರ, ಅಲ್ಲಮಪ್ರಭು, ಅಕ್ಕ, ದಾಸಿಮಯ್ಯನವರ, ಇನ್ನೂ ಅಪ್ರಸಿದ್ಧರ – ವಚನಗಳಿಲ್ಲವನ್ನೂ ಕನಸಿನಲ್ಲಿ ಕೂಡ ಹೇಳಬಲ್ಲವರಾಗಿದ್ದರು. ಅಷ್ಟು ಬಳಕೆ ಅವರಿಗೆ. ಇವರನ್ನು ಕುರಿತು 'ಭಕ್ತಿ ಭಂಡಾರಿ ಬಸವಣ್ಣ', 'ಪ್ರಭುಲಿಂಗಲೀಲೆಯ ಸಂಗ್ರಹ', 'ವಚನಧರ್ಮಸಾರ' ಮುಂತಾದವನ್ನು ಬರೆದಿದ್ದಾರೆ. ಪೀಠಿಕೆ, ಟೀಕೆ–ಟಿಪ್ಪಣಿ, ಇತಿಹಾಸ, ಶೂನ್ಯಸಿಂಹಾಸನ ಮುಂತಾದವುಗಳ ವಿಷಯ, ವೀರಶೈವಪುರಾಣಗಳು, ಸಾಹಿತ್ಯಚರಿತ್ರೆ, ವಚನಧರ್ಮಶಾಸ್ತ್ರಸಾರ ಇವು ಒಂದೊಂದರಲ್ಲಿಯೂ ಇವರು ಪಾಂಡಿತ್ಯವನ್ನು ಮೆರಸಿದರು. ಆ ಜನತೆಗೇ ತಮ್ಮ ಸಾಹಿತ್ಯಧರ್ಮಗಳ ರಹಸ್ಯವನ್ನು ಅಚ್ಚರಿಬರುವಂತೆ ರಚಿಸಿದ್ದಾರೆ. ಮೊದಮೊದಲು ಅವರು ಬರೆದ ಆ ಗ್ರಂಥಗಳೇ ಆ ವರ್ಗದವರಿಗೂ ಅಭಿಮಾನವನ್ನೂ ಸ್ಫೂರ್ತಿಯನ್ನೂ ತಂದುಕೊಟ್ಟು ಅವರನ್ನು ಆ ಕಡೆಗೆ ಎಳೆದ ಗ್ರಂಥಗಳು. ಹಾಗೆಯೇ ಅವರು ಇಂಥಿಂಥವರ ಸ್ಥಾನನಿರ್ದೇಶ ಎಂಬ ಲೇಖನಗಳನ್ನು ಬರೆದರು. ಅವನ್ನೆಲ್ಲ ಸಂಗ್ರಹಿಸಿ ಪ್ರಕಟಿಸಿದರೆ ಒಳ್ಳೆಯ ಸಂಕಲನವಾಗುತ್ತದೆ. ಮೈಸೂರು ವಿಶ್ವವಿದ್ಯಾನಿಲಯದವರಿಗಾಗಿ ಅವರು ಬರೆಯುತ್ತಿದ್ದ ವೀರಶೈವ ಕಾಲದ ಸಾಹಿತ್ಯದ ಪೂರ್ತಿ ಲೇಖನಗಳು ಸಮಗ್ರವಾಗಿ ಸಿದ್ಧವಾಗಿದ್ದವೆಂದಿದ್ದೆ. ಈಗ ಉಳಿದಿರುವ ಕೃತಿ ಅಪೂರ್ಣವಾಗಿದೆ. ವೀರವೈಷ್ಣವ ಕುಲದಲ್ಲಿ ಹುಟ್ಟಿದವರಾದರೂ ಅವರಿಗೆ ಜೈನ, ಶೈವ, ಬ್ರಾಹ್ಮಣ ಎಂಬ ಕಾರ್ಪಣ್ಯವಿರಲಿಲ್ಲ. ವಚನಗಳನ್ನು 'ಕನ್ನಡದ ಉಪನಿಷತ್ತು' ಎಂದು ಕರೆಯತೊಡಗಿದವರೂ ಬಸವಣ್ಣನನ್ನು ಅಲ್ಲಮನನ್ನು ಕುರಿತು ಜನರನ್ನು ಒಲಿಸಿ ಮೈಮರೆಯುವಂತೆ ಮಾಡಿದವರೂ ಆ ಕಾಲದಲ್ಲಿ ಅವರೊಬ್ಬರೇ. ಆ ವಾಗ್ಮಿತೆ ಅನನ್ಯಸಾಧಾರಣವಾದ್ದು. 'ಶ್ರೀ', ವೆಂಕಣ್ಣಯ್ಯ, ಮೂರ್ತಿ – ಈ ಮೂವರೇ ಹೊಸ ಕಾಲದ ಸಾಹಿತಿಗಳು ವೀರಶೈವವನ್ನು ಕುರಿತು ಆಗ ಜನತೆಗೆ ಆಧುನಿಕ ರೀತಿಯಲ್ಲಿ ನುಡಿಯುತ್ತಿದ್ದುದು. ಈ ಮೂವರ ಭಾಷಣಗಳನ್ನೆಲ್ಲ ಧ್ವನಿ ಮುದ್ರಿಸುವ ಅವಕಾಶ ಆ ಕಾಲದಲ್ಲಿದ್ದಿದ್ದರೆ ಆ ವಾಣಿ ಅಮೋಘವಾಗಿ ಇಂದಿಗೂ ಉಳಿಯುತ್ತಿತ್ತು.

೧೯೩೩ರಲ್ಲಿ ಹುಬ್ಬಳ್ಳಿಯಲ್ಲಿ ಸಾಹಿತ್ಯ ಪರಿಷತ್ ಸಮ್ಮೇಳನವಾಯಿತು. ಆಗ ಒಂದು ಸಂಜೆ ಮೂರುಸಾವಿರ ಮಠದ ಸ್ವಾಮಿಗಳಿಂದ ಆಹ್ವಾನ ಬಂತು. ನಾವು ಮೂವರೂ ಹುಬ್ಬಳ್ಳಿಯ ಹಿರಿಯರೊಬ್ಬರಾದ ಸಿದ್ಧರಾಮಪ್ಪ ಪಾವಟೆ, ಇನ್ನೂ ಒಂದಿಬ್ಬರ ಜೊತೆಗೆ ಮಠಕ್ಕೆ ಹೋದೆವು. ಕುಶಲ ಸಂಭಾಷಣೆಗಳಾದ ಮೇಲೆ ನಮಗೆ ಸ್ವಾಮಿಗಳು ಖರ್ಜೂರ,

ಸಕ್ಕರೆ, ಬಿಲ್ವಾದಿ ಪ್ರಸಾದಗಳನ್ನು ಕೊಟ್ಟು, ಮೂರ್ತಿಗಳನ್ನು ಒಳಗೆ ಕರೆದೊಯ್ದರು. ಅವರಿಗೆ ವಿಶೇಷ ಆದರವನ್ನು ತೋರಿಸಿ, 'ನಮ್ಮ ಸಮಯದವರಿಗೇ ನಿಮ್ಮಿಂದ ತುಂಬ ಉಪಕಾರವಾಗಿದೆ' ಎಂದು ತಿಳಿಸಿ, ಒಂದು ಶಿವಲಿಂಗ, ಹೆಚ್ಚಾಗಿ ದ್ರಾಕ್ಷಿ, ಖರ್ಜೂರ, ಪೇಢ, ಕೆಂಪು ಕಲ್ಲುಸಕ್ಕರೆ, ಬಿಲ್ವಪತ್ರೆ, ಒಂದು ರುದ್ರಾಕ್ಷಿ, ನನಗೆ ನೆನಪಿದ್ದಂತೆ ಒಂದು ಉತ್ತರೀಯ ಕೊಟ್ಟು ಸನ್ಮಾನ ಮಾಡಿ ಕಳಿಸಿದರು. ಅಲ್ಲಿಂದ ಹಿಂತಿರುಗಿದೆವು. 'ನೀವು ವೀರಶೈವರಾಗಿದ್ದಿದ್ದರೆ ನಿಮಗೆ ಮಠಾಧಿಪತ್ಯವೇ ಬರುತ್ತಿತ್ತೇನೊ ಮೂರ್ತಿ' ಎಂದು ಒಬ್ಬರು ನುಡಿದಾಗ, ಮೂರ್ತಿ ಅವರ ಮೇಲ್ದುಟಿಯನ್ನು ಮೇಲೆತ್ತಿ ಸಂಕುಚಿಸಿ ಅವರದೇ ಆದ ರೀತಿಯಲ್ಲಿ ತಮ್ಮ ಮೀಸೆಯನ್ನು ಕುಣಿಸಿದರು. 'ಇನ್ನೂ ನೋಡುತ್ತ ಇರಿ, ನನ್ನ ಕೆಲಸ ಇನ್ನೂ ಆರಂಭವಾಗುತ್ತಿದೆ' ಎಂದರು. ಆ ಕಾಲದಲ್ಲಿ ಸುಮಾರು ಎಲ್ಲ ವೀರಶೈವ ಸಭೆಗಳಿದುರಿಗೂ ಅವರು ಅವರ ಪುರಾತನರ, ಮುಖ್ಯವಾಗಿ ಬಸವ ಅಲ್ಲಮಾದಿಗಳ ಹಿರಿಮೆಯನ್ನು ಮೈನವಿರೇಳುವಂತೆ ಬೋಧಿಸಿದ್ದುಂಟು. ಹರಿಹರನ ರಗಳೆಗಳನ್ನೊ ಗಿರಿಜಾಕಲ್ಯಾಣವನ್ನೊ ಎತ್ತಿಕೊಂಡು ಮಾತಾಡುವಾಗ ಆ ಭರಭರಾಟೆಗಳೇ ಬೇರೆ ತೆರದವು.

ರಾತ್ರಿ ಊಟವಾದಮೇಲೆ ಸಾಮಾನ್ಯವಾಗಿ ಅವರು ನಮ್ಮ ಮನೆ ಕಡೆ ಬರುತ್ತಿದ್ದರು. ಸುಮಾರು ೧೯೩೭–೩೮ರ ಹೊತ್ತಿಗೆ ಗೆಳೆಯ ಪ್ರೊ. ಕೆ. ವಿ. ಐಯ್ಯರ್ ಒಂದು ಫಿಲ್ಕೊ ರೇಡಿಯೊ ಸೆಟ್ಟನ್ನು ತಂದು, ಮಾಳಿಗೆಯ ಮೇಲಕ್ಕೆ ಏರಿಯಲ್ ಹಾಕಿ, ನಾನು ಒಂದು ದಿನ ಮನೆಗೆ ಬರುವ ಹೊತ್ತಿಗೆ ನನ್ನ ರೂಮಿನಲ್ಲಿ ಸ್ಥಾಪಿಸಿ ಹೋಗಿದ್ದರೆಂದು ಇನ್ನೊಂದೆಡೆ ತಿಳಿಸಿದ್ದೇನೆ. ಒಂಬತ್ತು ಗಂಟೆಯಮೇಲೆ ಎಷ್ಟೊ ದಿನ ಜೊತೆಯಲ್ಲಿ ಕುಳಿತು ನಾವು ಸುದ್ದಿಯನ್ನು ಕೇಳುತ್ತಿದ್ದೆವು; ನಾನಾ ಕೇಂದ್ರಗಳಿಂದ ಬರುವ ಸಂಗೀತವನ್ನು ಕೇಳುತ್ತಿದ್ದೆವು. ಅವರಿಗೆ ನಮ್ಮ ಸಂಪ್ರದಾಯದ ಸಂಗೀತದಲ್ಲಿ ಪ್ರೀತಿ. 'ಯಾವಯಾವುದೊ ಏನೇನನ್ನೊ ಕೇಳುತ್ತ ವ್ಯರ್ಥವಾಗಿ ಕಾಲ ಕಳೆಯುತ್ತೀರಿ ನೀವು. ನಿಮ್ಮ 'ವೈತಾರ'ವೊ ನೀವೊ!' ಎಂದು ಅವರು ನನ್ನನ್ನು ಟೀಕಿಸಿದ್ದುಂಟು. ಕೆಲವು ದಿನ ಮಧ್ಯ ಯೂರೋಪಿನ ಚಿಕೊಸ್ಲೋವಾಕಿಯಾವನ್ನು ಹಿಟ್ಲರ್ ಕಬಳಿಸಿದ ಸಂದರ್ಭವನ್ನು ಕುರಿತು ಇಟಲಿ, ಆಸ್ಟ್ರಿಯಾ ಮುಂತಾದ ಪ್ರದೇಶಗಳನ್ನು ಒಳಕೊಂಡು ಬೆಳೆಯುತ್ತಿದ್ದ ಹಿಟ್ಲರನ ರಾಜಕೀಯ ವ್ಯವಹಾರಗಳನ್ನು ಕುರಿತು ಮಾತಾಡಿಕೊಳ್ಳುತ್ತಿದ್ದೆವು. ೧೯೩೯ರಲ್ಲಿ ಒಂದು ದಿನ ರಾತ್ರಿ ಹತ್ತು, ಹತ್ತೂವರೆ ಗಂಟೆಯ ಸುಮಾರು ಹೊತ್ತಿಗೆ ಬರ್ಲಿನಿಂದಲೊ ಇನ್ನೆಲ್ಲಿಂದಲೊ ಎಂದು ಕಾಣುತ್ತದೆ – ಒಂದು ದೊಡ್ಡ ಭಾಷಣ ಕೇಳತೊಡಗಿತು. ಅದರ ವಾಗ್ಮಿತೆ, ಗದ್ಯವೈಖರಿ, ವಾಕ್ಯಗಳನ್ನು ಪೋಣಿಸುತ್ತಿದ್ದ ರೀತಿ, ಹಿಂದಿದ್ದ ಮನಸ್ಸಿನ ಉತ್ಸಾಹ, ಪ್ರಚೋದನಾವೈಭವ ಕಿವಿಯನ್ನು ಆಕರ್ಷಿಸಿತು. ಜರ್ಮನ್ ಕೇಂದ್ರಗಳ ಸುದ್ದಿ ಕೇಳುವುದು ಸರಿಯಲ್ಲವೆಂದು ಸರ್ಕಾರದ ವಿಧಿಯಾಗಿತ್ತು. ನಾವಿಬ್ಬರೂ ಸರ್ಕಾರದ ನೌಕರರು. ನನ್ನ ಮನೆಯ ಹಿಂದಿನ ಮನೆ ಆ ಕಾಲದಲ್ಲಿ ಮಂತ್ರಿಯಾಗಿದ್ದ ಡಾ. ರಾಯನ್ ಅವರದು. ಯಾರಿಗೂ ಹೊರಗಿನವರಿಗೆ ಕೇಳಿಸದಿರಲೆಂದು ನನ್ನ ಮನೆಯ ಕಿಟಕಿಗಳನ್ನು ಮುಚ್ಚಿ ಅದನ್ನು ಕೇಳಿಯೇ ಕೇಳಿದೆವು, ಹನ್ನೊಂದೂ ಮುಕ್ಕಾಲರವರೆಗೂ. ಜರ್ಮನ್ ನಮಗಿಬ್ಬರಿಗೂ ತಿಳಿಯದ ಭಾಷೆ. ಅರ್ಥವಾಗದ ಭಾಷೆಯಲ್ಲಿ ಈ ಅಬ್ಬರದ ಭಾಷಣವನ್ನು ಕೇಳುವುದು ಯಾರಿಗೂ ವಿಚಿತ್ರ

ಎನಿಸೀತು. ಡಾನ್‌ಸಿಗ್‌ನ್ನು ತಮ್ಮ ವಶಕ್ಕೆ ತೆಗೆದುಕೊಂಡು ಆ ವಿಜಯದ ಉಲ್ಲಾಸವನ್ನೂ ಪ್ರಾಧಾನ್ಯವನ್ನೂ ಕುರಿತು ಹಿಟ್ಲರ್ ಭಾಷಣ ನಡೆದಿತ್ತು. ಅಂಥ ಒಂದು ಭಾಷಣದ ವಾಗ್ವೈಭವ ನನ್ನ ಜನ್ಮದಲ್ಲಿ ಕೇಳಿಲ್ಲ. ಹಿಂದೆ French Revolution ಮಹಾಕ್ರಾಂತಿ ನಡೆದಾಗ ಅದನ್ನು ಕುರಿತು ಕಾರ್ಲೈಲ್ ಬರೆದ ವರ್ಣನೆಗಳನ್ನು ಓದಿ ಉತ್ಸಾಹಗೊಂಡಿದ್ದ ನನಗೆ ಬಹುಶಃ ಆಗ ಡಾಂಟನ್, ಮಿರಾಬೊ, ರೋಬ್ಸ್‌ಪಿಯರ್ ಮುಂತಾದವರ ಭಾಷಣದ ಘೋರಣೆ, ಭಣಿತಿ ಇಂಥದಾಗಿದ್ದಿರಬೇಕೆಂದು ದೂರದಿಂದ ಕಲ್ಪಿಸಿಕೊಳ್ಳಬಹುದಾಗಿತ್ತು. ಮಾತಿನ ಮೇಲೆ ಮಾತು. ಒಂದೆರಡು ನಿಮಿಷಗಳಿಗೊಮ್ಮೆ ಒಂದು ಲಕ್ಷ ಕೊರಳು ಜರ್ಮನ್ ರಾಷ್ಟ್ರವನ್ನೂ ಜರ್ಮನ್ ಬಣದ ಹಿರಿಮೆಯನ್ನೂ ತಮ್ಮ ನಾಯಕನ ಅತಿಶಯತೆಯನ್ನೂ ಕುರಿತು 'ಹುರ್ರಾ – ಹೈಲ್ – ಫ್ಯೂರೆರ್ – ಡಾಯ್‌ಚಲಂಡ್ ಊಬರ್ ಆಲ್ಸ್!' ಇತ್ಯಾದಿ ಘೋಷಣೆ ಮಾಡುತ್ತಿದ್ದರು. ಸಂತೋಷಸೂಚಕಗಳನ್ನು ಹಲ್ಕಿರಿತಗಳನ್ನು, ಕರುಣೆ ಶೋಕ ಎರಡು ಬಿಟ್ಟು ಉಳಿದ ಎಲ್ಲ ರಸಗಳ ವ್ಯಾಪ್ತಿ ಉಳ್ಳ ಉಗ್ರಪ್ರತಿಕ್ರಿಯೆಗಳನ್ನು, ಲಕ್ಷಾಂತರ ಕಂಠಗಳು ಘೋಷಿಸುತ್ತ ಅರ್ಧನಿಮಿಷ, ಮುಕ್ಕಾಲು ನಿಮಿಷ ಒಕ್ಕೊರಲಲ್ಲಿ ಕೂಗುತ್ತಿರುವಂತಿದ್ದುದು ರಾತ್ರಿಗೆ ನಡುಕ ಉಂಟುಮಾಡುತ್ತಿತ್ತು. ನಮ್ಮ ಕಣ್ಣೆದುರಿಗೇ ಅದು ನಡೆಯುತ್ತಿದೆಯೊ ಎಂಬಂತೆ ಘೋಷ, ಭಾಷ! ಆ ಪ್ರತಿಯೊಂದು ಘೋಷಣೆಯನ್ನು ನಿರೀಕ್ಷಿಸುವಂತೆ ಕೇಳುವವರ ರಕ್ತವನ್ನು ಕುದಿಸುವ ಆ ಮಾತಿನ ವಿಧಾನ ಎಂಥವರನ್ನೂ – ತೆಳುನೆತ್ತರಿನ ನನ್ನಂಥವನನ್ನೂ – ಕೆರಳಿಸುವಂಥದು. ಪ್ಯಾರಿಸ್ಸಿನ Cloud Compellers, Heaven Compellers ಎಂದು ವರ್ಣಿತವಾಗುವ ನಾಯಕರ ಭಾಷಣಗಳನ್ನು ಕೇಳಿದ ಕೂಡಲೆ ಶ್ರೀಮಂತರು, ವಿದ್ವಾಂಸರು, ಸಾಮಾನ್ಯರು ಕೆರಳಿ, ಗುದ್ದಲಿ, ಸನಿಕೆ, ಹಾರೆ ಹಿಡಿದು, ಸಿಕ್ಕಿದ ಸಾಧನ ಆಯುಧ ತೆಗೆದುಕೊಂಡು ಕಾರ್ಯರಂಗಕ್ಕೆ, ಯುದ್ಧಕ್ಕೆ ಧಾವಿಸುತ್ತಿದ್ದರಂತೆ – ಎಂಬ ವರ್ಣನೆಯಿದೆ. ಇಂಥ ಭಾಷಣಕಾರ ಮಾತನಾಡಿದರೆ ಅದರಲ್ಲಿ ಯಾವ ಚೋದ್ಯವೂ ತೋರದು. ಆ ನಾಡಿನ ರಾಷ್ಟ್ರದ ನಾಯಕತ್ವದ ಹೆಮ್ಮೆ ಕೇಳುವ ಜನರನ್ನು ಹುಚ್ಚುಗೊಳಿಸಿದುದು, ರೊಚ್ಚಿಗೆಬ್ಬಿಸಿದುದು ಆಶ್ಚರ್ಯವಲ್ಲ. ಪೂರ್ವಪ್ರಪ್ಷ್ಯದಲ್ಲಿ ನೆಲಸಿದ್ದವರೆಲ್ಲರೂ ಆಗ ಪೋಲಂಡಿಗೆ ಸೇರಿದ್ದ ಡಾನ್‌ಸಿಗ್ ಪಟ್ಟಣವನ್ನು ದಾಳಿಯಿಟ್ಟು ತಮ್ಮ ಕೈಗೆ ತೆಗೆದುಕೊಂಡಿದ್ದರು. ಸಂದರ್ಭಗಳು ಆ ಕಾಲಕ್ಕೇ ಅತಿಶಯವಾದವು. ಅದರ ಮುಂದಿನ ನಾಲ್ಕೈದು ವರ್ಷಗಳ ವಿಭವ ಮತ್ತು ವೈಭವಗಳ ಸೂಚಿಕೆ, ಪತ್ರಿಕೆಗಳಲ್ಲಿ ಆತನ ಭಾಷಣಗಳ ಇಂಗ್ಲಿಷ್ ಸಾರಾಂಶಗಳನ್ನು ಓದುತ್ತಿದ್ದ ನಮಗೆ ಭಾಷೆ ಅರ್ಥವಾಗದಿದ್ದರೂ ಪ್ರತಿಯೊಂದೂ ಮನವರಿಕೆಯಾಗುತ್ತಿದೆ ಎನ್ನಿಸುವಂತಿತ್ತು. ಭಾಷೆ, ಮಾತು ಹೇಗೇ ಇರಲಿ, ಭಾವೋತ್ಕಟತೆಯ ಒಂದು ವಾಕ್‌ಶಿಲ್ಪ ನಿಜವಾಗಿ ಹೆಚ್ಚು ಸ್ಪಷ್ಟಾರ್ಥವನ್ನು ಕೊಡಬಲ್ಲದು ಎಂಬುದನ್ನು – ಕೇವಲ ರೀತಿಯ, ಲಯದ ವಾಗ್ವಿಜೃಂಭಣೆಯ ವಾಸ್ತುಶಿಲ್ಪವೇ ಒಂದು ಅತಿಶಯವಾಗಬಲ್ಲದೆಂಬುದನ್ನು – ಅಂದು ಕಂಡೆವು. ನಡುನಡುವೆ ನಮ್ಮ ರೋಮಾಂಚನದ ಜೊತೆಯಲ್ಲಿ 'ಏಮಂಡಿ ಇದಿ?' ಎನ್ನುತ್ತಿದ್ದರು, ಮೂರ್ತಿ. ಉತ್ತರವಾಗಿ ನಾನೇನು ಹೇಳಬಲ್ಲೆ? 'ಚೂಡಂಡಿ' ಎಂದು ಮಾತ್ರ ನನ್ನ ಉತ್ತರ. 'ವಿನುಟೂ ಉನ್ನಾರೇ!' ಎಂದು ನಾನೆಂದರೆ 'ಏಮಿ ಕಾಲಾಂತಕುಡಂಡಿ

ವೀಡು!' ಎಂದು ಅವರೆನ್ನುತ್ತಿದ್ದರು, ಆತನ ಬುದ್ಧಿಮತ್ತೆಗೆ, ಶಕ್ತಿಗೆ ಮಾರುಹೋಗಿ. ಭಾಷಣ ನಡೆಯುತ್ತಲೇ ಇತ್ತು. ನಗೆ ತರಿಸುವ ಆಣಕ, ಗೆದ್ದ ಹುಚ್ಚು, ಹೊಮ್ಮಿನ ಉದ್ರೇಕ, ಉತ್ಸಾಹ ಅಲ್ಲಿಯ ಜನರ ಪ್ರತಿಕ್ರಿಯೆಯನ್ನು ನಡಸಿತ್ತು ಆ ವಾಣಿ ವಿಶೇಷ. ಜೊತೆಯಲ್ಲಿ ನಾವಿಬ್ಬರೂ ಕುಳಿತು ಅದನ್ನು ಅನುಭವಿಸಿದ ನೆನಪು ಮರೆಯದ್ದು.

ಪರಿಷತ್ತಿನಲ್ಲಿ ಗುಂಡಪ್ಪನವರು ಉಪಾಧ್ಯಕ್ಷರಾಗಿರುವವರೆಗೂ (೧೯೩೪-೩೯) ನಾವು ಜೊತೆಯಲ್ಲಿ ದುಡಿದೆವು. ಸಂಜೆ ಆರು ಗಂಟೆಯ ಮೇಲೆ ಎಷ್ಟು ಹೊತ್ತೆಂದರೆ ಅಷ್ಟು ಹೊತ್ತು ಕಾಲ ಜೊತೆಯಲ್ಲಿರುತ್ತಿದ್ದೆವು. ವಸಂತಸಾಹಿತ್ಯೋತ್ಸವದ ಉಪನ್ಯಾಸಮಾಲೆಗಳು, ಅಲ್ಲಿನ ಪರೀಕ್ಷೆಗಳಿಗೆ ಶಿಕ್ಷಣ ಕೊಡುತ್ತಿದ್ದ ತರಗತಿಗಳ ಶಿಕ್ಷಣವಿಲಾಸ, ಹಳ್ಳಿಯಿಂದ ಬಂದ ಉಪಾಧ್ಯಾಯರಿಗೆ ಉಟೋಪಚಾರ, ವಿಶ್ರಾಂತಿ, ಆಧುನಿಕ ಜೀವನ ಪ್ರಕಾರಗಳನ್ನು ಕುರಿತು ಭಾಷಣ ಇರುತ್ತಿದ್ದವು. ಎಲ್ಲದರಲ್ಲಿಯೂ ಅವರು ವಹಿಸುತ್ತಿದ್ದ ಭಾಗ ಎಲ್ಲರಿಗೂ ತೃಪ್ತಿತರುವಂಥದಾಗಿತ್ತು. ಇಂಗ್ಲಿಷ್-ಕನ್ನಡ ನಿಘಂಟು ಸಂಪಾದಕ ಸಮಿತಿಗೆ ವಿಷಯವನ್ನು ಸಿದ್ಧಮಾಡುವ ಸಂಬಂಧದಲ್ಲಿ ಆ ನಿಘಂಟು ಕಚೇರಿಗೆ ಅವರು ಮುಖ್ಯ ಅಧಿಕಾರಿ. ಅಲ್ಲಿ ಭಿನ್ನ ಸ್ವಭಾವದ, ಪರಸ್ಪರ ವಿರುದ್ಧ ಮನೋಭಾವದ ಸಂಪಾದಕ ಮಂಡಲಿಯವರ ಮನಸ್ಸನ್ನು ಅರ್ಥಮಾಡಿಕೊಂಡು, ಹೊರಗಡೆಯಿಂದ ಅರ್ಥವಿಶೇಷ ದೊರಕುವಂತಾದರೆ ಅದನ್ನು ತರಿಸಿಕೊಂಡು, ಕರಡುಪ್ರತಿಯನ್ನು ತಾವೇ ನೇರವಾಗಿ ಪೆನ್ಸಿಲಲ್ಲಿ ಕಾರ್ಬನ್ ಹಾಳೆಗಳನ್ನಿಟ್ಟುಕೊಂಡು ಹಗಲು-ಸಂಜೆ ಬರೆದು, ಅವರು ಪಟ್ಟ ಶ್ರಮ ಅಸಾಧಾರಣವಾದುದು. ಸಂಪಾದಕ ಮಂಡಲಿಯ ಹಿರಿಯರಿಗೆ ವಿದ್ವಾಂಸರಿಗೆ ಮೂರ್ತಿ ಅವರ ಯೋಗ್ಯತೆಯಲ್ಲಿ, ಪ್ರಾಮಾಣಿಕತೆಯಲ್ಲಿ, ಕಾರ್ಯದಕ್ಷತೆಯಲ್ಲಿ, ತಾಳ್ಮೆಯಲ್ಲಿ ಬಹುವಾದ ಗೌರವ. ಅವುಗಳ ನಡುವೆ ಉಪನ್ಯಾಸಗಳೂ ಲೇಖನಗಳೂ ಕಾವ್ಯಾವಲೋಕನಗಳೂ ತಪ್ಪದೆ ಮಾಡಿಕೊಡುತ್ತಿದ್ದರು. ಯಾವ ಸಂದರ್ಭದಲ್ಲಿಯೇ ಆಗಲಿ ಇನ್ನೊಬ್ಬರ ಮನಸ್ಸಿಗೆ ಪ್ರಿಯವಾಗುವಂತೆ ಮಾತ್ರ ನುಡಿಯುತ್ತೇನೆ ಎಂದು ಮಾತ್ರ ಎಂದೂ ಬರೆದವರಲ್ಲ. ತಮಗೆ ತೋರಿದುದನ್ನು ನೇರವಾಗಿ, ಖಚಿತವಾಗಿ ಹೇಳುವಂಥವರು. ಹರಿಹರ, ರಾಘವಾಂಕ, ಸೋಮಿಚಂದ, ಷಡಕ್ಷರ ಮುಂತಾದವರ ಗುಣಗಳನ್ನು ತಿಳಿಸುವ ಪ್ರಸಂಗ ಬಿದ್ದಾಗ ಅವರದೇ ಮಾತಾದ 'ಪ್ರೌಂಢಾವಣೆ'....'ಹಾರಾತ್ಮಕವಾಗಿ' ಮುಂತಾದವನ್ನು ಬಳಸುವ ಉಕ್ತಿಗಳಂತೆ ಮಾತುಗಳನ್ನು ಬಳಸಲು ಹಿಂಜರಿಯುತ್ತಿರಲಿಲ್ಲ. ಅವರದು ವಿದ್ವತ್ತೆ ಮಾತ್ರವಲ್ಲ; ಒಂದು ಧೀವಿಲಾಸ, ವಾಣಿ; ಒಂದು ರೀತಿ; ಅದರಲ್ಲಿ ಕಾವು, ಕಳೆ, ಉತ್ಸಾಹ ಇರುತ್ತಿದ್ದವು.

ಮನೆಯಲ್ಲಿ ತಾಯಿ ಅವರನ್ನು ಪ್ರೀತಿಯಿಂದ ನೋಡಿಕೊಳ್ಳುತ್ತಿದ್ದರು. ಮೂರ್ತಿ ಕುಟುಂಬ ಕೃಷ್ಣಗಿರಿ-ಡೆಂಕಣಿಕೋಟೆ ಕಡೆಯಿಂದ ಬಂದವರು. ಅತ್ತೆಗೆ, ಗಂಡನಿಗೆ, ಮನೆಯ ಇತರ ಗಂಡು ಹೆಣ್ಣುಮಕ್ಕಳಿಗೆ, ಇತರ ಸಂಬಂಧಿಕರಿಗೆ ಅನುಕೂಲರಾಗಿ ಎಲ್ಲವನ್ನೂ ಹೊಂದಿಸಿಕೊಂಡು ಹೋಗುತ್ತಿದ್ದರು. ಅತ್ತೆಗೆ ಸೊಸೆಯಲ್ಲಿ ತುಂಬಾ ಪ್ರೀತಿ. ಆತನಿಗೆ ಊಟ ಉಪಚಾರ ನಡೆಯುತ್ತಿರುವಾಗ 'ಈ ಬೇರೆ ಕೆಲಸ ಇರಲಿ, ಹೋಗು. ಅವನ ಊಟ ನೋಡಿಕೊ' ಎಂದು ಕಳಿಸುತ್ತಿದ್ದರು. ಇವರೂ ಅಷ್ಟೇ. ತಾಯಿಯ ಪರವಾಗಿ, ತಾಯ ಸೇವೆ; ಹೆಂಡತಿ ಮಕ್ಕಳಿಗೆ ಸಲ್ಲಿಸಬೇಕಾದ ಪ್ರೀತಿವಾತ್ಸಲ್ಯ ಬೇರೆ ಆಗಿಟ್ಟು ನಡಸಿದರು:

ಸಂಸಾರದ ಯಾವ ನಿಷ್ಠುರಗಳೂ ಲೋಪಗಳೂ ಲಾಭ ನಷ್ಟಗಳೂ ಎಲ್ಲ ಬಿಟ್ಟು, ಅವರು ಸಂಜೆ ಮನೆಗೆ ಹೋಗಿ ಮಕ್ಕಳಿಗೆ ಸ್ವಯಂ ಪಾಠ ಹೇಳುತ್ತಿದ್ದರು. ಉಪಾಧ್ಯಾಯರ ಮನೆಯ ಮಕ್ಕಳಿಗೆ ತಂದೆಯವರ ಪಾಠವಾಗುವುದು ಗೌಳಿಗರ ಮನೆಯ ಮಕ್ಕಳಿಗೆ ಹಾಲು ದೊರೆಯುವಂತೆ ಅಪರೂಪ. ಅಂಥ ಅಪರೂಪದ ತಂದೆ ಅವರು. ಕಡೆಯ ಕೆಲವು ವರುಷ ಶ್ರೀಮತಿಯವರಿಗೆ ಅನಾರೋಗ್ಯ ಉಂಟಾಯಿತು. ಬೆಳಗ್ಗೆ – ಸಂಜೆ ಆಕೆಗೆ ಔಷಧಿ, ಪಥ್ಯ ತಾವೇ ಖುದ್ದಾಗಿ ನೋಡಿಕೊಳ್ಳುತ್ತಿದ್ದರು. ನಮಗೆ ಸ್ವಲ್ಪ ಅನಾರೋಗ್ಯ ಉಂಟಾದರೆ ಅವರು ತಲ್ಲಣಿಸಿಹೋಗುತ್ತಾರೆ, ಎಷ್ಟು ಉಪಚಾರ ಮಾಡಿ ನಮ್ಮನ್ನು ನೋಡಿಕೊಳ್ಳುತ್ತಾರೆ, ಅವರಿಗೆ ಕಾಯಿಲೆ ಬಂದಾಗ ನಾವು ನೋಡಿಕೊಳ್ಳದಿದ್ದರೆ ಇನ್ನಾರು ನೋಡಿಕೊಳ್ಳಬೇಕು? 'ಔಷಧಿ ಪಥ್ಯಮು ಆಮೆ ಬೇಸ್ಕೋನೇಲೇದು. ನೇನು ಪೋಯಿ ಬಲಾತ್ಕಾರಂ ಚೆಯವಲ್ಸಿಂದಿ' ಎಂದೊ ಏನೊ ಹೇಳಿ ಹೊರಟು ಹೋಗುತ್ತಿದ್ದರು. ಅವರ ಪ್ರೇಮಬಂಧನ ದೊಡ್ಡದು. ಪಂಜೆ ದಾಂಪತ್ಯದಲ್ಲಿ, ಅವರ ಮನೆಯಲ್ಲಿ ಹಿಂದೆ ಅಂಥುದನ್ನು ನೋಡಿದ್ದೆ. ಇವರದನ್ನು ಹಾಗೇ ಕಂಡು ಸಂತೋಷ ಪಡುವುದಾಯಿತು. ಇವು ನಿಜವಾದ ಸೌಭಾಗ್ಯಗಳು. ಅಡುಗೆ, ಊಟ, ಉಪಚಾರ ಈ ಎಲ್ಲದರಲ್ಲೂ ಪರಿಷ್ಕಾರವಿತ್ತು. ಸ್ನೇಹಿತರನ್ನು ಕರೆದು ಭೋಜನ ಏರ್ಪಡಿಸಿದಾಗಲೂ ಒಂದು ವಿಶೇಷ ಒಪ್ಪ, ವಿಚಕ್ಷಣೆ. -'ಈ ಸಾಮಾನು ಕಡಮೆ ಮಾಡಿ, ಇಂದು ನನ್ನ ಹೆಂಡತಿ ಹೊಸತಾಗಿ ಏನೋ ಮಾಡಿದ್ದಾಳೆ. ನನಗೇ ಏನೆಂದು ಹೇಳಿಲ್ಲ. ಅದರ ರುಚಿ ನೋಡೋಣ ಬನ್ನಿ' ಎಂದು ಹೇಳುತ್ತಿದ್ದರು. ಒಂದು ಉಪನ್ಯಾಸದಲ್ಲಿ ಅದು ತುಂಬ ಭರ್ಜರಿಯಾಗಿತ್ತೆಂದು ಹಿರಿಯರು ವರ್ಣನೆ ಮಾಡಿದಾಗ ಇವರು ಅವರಿಗೆ 'ಎದುರಿಗೆ ಯಾರಿದ್ರು ನೋಡಲಿಲ್ವೆ ಸಾರ್, ಅವಳು ಕುಳಿತಿರುವಾಗ ನನಗೆ ಹುರುಪು ಉತ್ಸಾಹ ಬರುವುದಿಲ್ಲವೆ, ಸಾರ್?' ಎಂದು ಉತ್ತರ ಕೊಟ್ಟಿದ್ದನ್ನು ಡಿ.ವಿ. ಗುಂಡಪ್ಪನವರು ಪ್ರಶಂಸಿಸಿದ್ದಾರೆ. ಅಂಥುದನ್ನು ಅವರ ಬಾಯಿಂದ ಕೇಳುವ ಸಂತೋಷವೂ ಶ್ರೀಮತಿಯವರದಾಗಿತ್ತು. ಅವರ ಮನೆಯಲ್ಲಿ ತಾಂಬೂಲದ್ರವ್ಯಗಳು ಇಡುವಾಗ ಬೆರಸಿ ಮಾಡಿದ ಅಡಿಕೆಪುಡಿಯ ಜೊತೆಗೆ ಯಾಲಕ್ಕಿ, ಲವಂಗ, ಜಾಪತ್ರೆ ಪ್ರತ್ಯೇಕವಾಗಿರುತ್ತಿತ್ತು. ಅವರು ಏನೊ ಅಡಿಗೆ ಮಾಡಿ ಸಣ್ಣ ಸಣ್ಣ ಕಡುಬಿನಂತೆ ಕರಿದಿದ್ದ ಅಥವಾ ಹುರಿದಿದ್ದ ಒಂದು ಅಡಿಕೆ ಬರುತ್ತಿತ್ತು. ಅದು ಅವರ ಮನೆಯ ಅಥವಾ ಅವರ ಸಂಪ್ರದಾಯದಲ್ಲಿತ್ತು. 'ಇದು ಹೇಗೆ ಮಾಡುತ್ತೀರಿ?' ಎಂದು ಕೇಳಿದಾಗ, 'ನಿಮಗೇನು ಹೇಳುವುದು. ನಿಮ್ಮ ಹೆಂಡತಿಯನ್ನು ಕರೆತಂದರೆ ಹೇಳಿಕೊಡಬಹುದು' ಎಂದು ಉತ್ತರ ಬಂತು! ಅವರು ಕಾಯಿಲೆ ಇದ್ದಾಗ, ಇವರು ತುಂಬ ಚಿಂತೆಯಲ್ಲಿದ್ದರು. ಹೆಂಡತಿ ಉಳಿದುಕೊಂಡರು. ಹಠಾತ್ತಾಗಿ ಸಾವು ಇವರಿಗೆ ಬಂತು. ಅದರ ಬಗ್ಗೆ ಒಂದು ಮಾತನ್ನು ನುಡಿದು ಇದನ್ನು ಮುಗಿಸುತ್ತೇನೆ.

ಬಾಗಲಕೋಟೆಗೊ ಬಿಜಾಪುರಕ್ಕೊ ನಾನು ಹೋಗಿ ಒಂದು ಸಂಜೆ ಹಿಂದಿರುಗಿ ಮನೆಗೆ ಬರುವ ಹೊತ್ತಿಗೆ ಕಾಲರಾ ತಗುಲಿ ಅವರನ್ನು ಮಾಗಡಿ ರಸ್ತೆಯಲ್ಲಿರುವ ಆಸ್ಪತ್ರೆಗೆ ಒಯ್ದಿದ್ದಾರೆ ಎಂಬ ಸುದ್ದಿ ಬಂತು. ಸುಮಾರು ಒಂಬತ್ತು ಗಂಟೆ ಹೊತ್ತಿಗೆ ಆಸ್ಪತ್ರೆಯಲ್ಲಿ ಅವರ ಜೊತೆಗಿರುತ್ತಿದ್ದ ಮಹಾಬಲರಾಯರಿಗೆ ದೂರವಾಣಿ ಮೂಲಕ 'ಈಗ ತಾನೆ ಬಂದೆ;

ಅಲ್ಲಿಗೆ ಬರಬೇಕೆಂದಿದ್ದೇನೆ – ಹೇಗಿದ್ದಾರೆ?' ಎಂದು ಕೇಳಿದೆ. 'ಈಗ ಬೇಡ. ಸ್ವಲ್ಪ ಲಘುವಾಗುತ್ತಿದೆ. ನಿದ್ರೆ ಮಾಡುತ್ತಿದ್ದಾರೆ, ಬೆಳಗ್ಗೆ ಬರುವಿರಂತೆ' ಎಂಬ ಉತ್ತರ ಬಂತು. ಬೆಳಗ್ಗೆ ಏಳುವ ಹೊತ್ತಿಗೆ ಅವರ ಕಥೆ ಮುಗಿದಿತ್ತು.... ಸುದ್ದಿ ಸ್ನೇಹಿತರೆಲ್ಲರಿಗೂ ತಿಳಿದಾಗ ಎಷ್ಟೊ ಜನ, ಎಷ್ಟೊ ಪಂಗಡಗಳವರು ಹೊರಗೆ ಸೇರಿದ್ದರು. ಒಂದು ಹೊರಬಾಗಿಲು ತೆರೆದಂತಿದ್ದ ವ್ಯಾನಿನಲ್ಲಿ ಅವರ ದೇಹ ಬಂತು. ಎಲ್ಲರಿಗೂ ದುಃಖ. ಮಹಾಬಲರಾಯ 'ತಾಯಿ ತಂದೆಯ ಪ್ರೀತಿ ಹೆಚ್ಚಲ್ಲ, ಮಡದಿಯ ಪ್ರೇಮ ಸಾಲದು. ಅಂಥ ಅಣ್ಣ ನನಗೆಲ್ಲಿ ಸಿಕ್ಕಿಯಾನು?' ಎಂದ. ದೇಹವನ್ನು ಎಲ್ಲರೂ ಕಂಡೆವು. ತಾಯಿ ಬಂದು ನೋಡಿಕೊಂಡು ಹೋದರು. ಆಮೇಲೆ ಮಡದಿ ಬಂದರು. ಕಾಲು ಬೆರಳು ಮುಟ್ಟಿ ಕಣ್ಣೆಗೊತ್ತಿಕೊಂಡು, ಎರಡು ಮಾತನಾಡಿಕೊಂಡರು – 'ಎಟ್ಲ ಪೋತಿರಿ, ಎಟ್ಲ ವಸ್ತ್ನಾರು? ನಾ ತಂಡ್ರಿ, ನಾ ದೇವುಡಾ, ಪೋಯಿರಾಂಡಿ' ಎಂದು ಕಳಿಸಿಕೊಟ್ಟರು. ಒಳಗೆ ಹೋದವರೇ ಬಾಗಿಲ ಬಳಿಯಲ್ಲಿ ಕುಳಿತುಕೊಂಡುಬಿಟ್ಟರು. ದೇಹ ಸಾಗಿದ ಬಹುಕಾಲದ ಮೇಲೂ ಯಾರು ಮಾತನಾಡಿಸಿದರೂ ಉತ್ತರ ಕೊಡದೆ ಮೂಕರಾಗಿ ಸುಮ್ಮನೆ ಇದ್ದರು, – ಮೇಲೆ ಬಿದ್ದ ಸುತ್ತಲಿದ್ದ ಮಕ್ಕಳುಮರಿಗಳನ್ನು ಲಕ್ಷಿಸದೆ. ಅದು ಕೊನೆಯಾಯಿತು.

ಮೂರ್ತಿಯ ಕಥೆ ಎಷ್ಟು ಸಾರ್ಥಕವಾದ್ದೊ ಅಷ್ಟೇ ರಮ್ಯವಾದದ್ದು. ಆ ಪ್ರೇಮಲತೆ, ಸಜ್ಜನತೆ, ನಿಷ್ಠೆ, ಮನಸ್ಸಿನ ಉದಾರತೆ ಸಂಸ್ಕೃತಿ ಸಾರಲಕ್ಷಣ; ಅದರ ಉನ್ನತಿಯನ್ನು ಕಾಣಿಸಬಲ್ಲದ್ದು.

ಬಿ. ವೆಂಕೋಬರಾವ್

ಮೈಸೂರಲ್ಲಿ ನನಗೆ ಪರಿಚಿತರಾಗಿ ಕಡೆಯವರೆಗೂ ಗೆಳೆಯರಾಗಿದ್ದವರು ಬಿ. ವೆಂಕೋಬರಾಯರು. ಅವರು ಬಂಕಾಪುರದವರು. ಎಂದರೆ, ಬಹುಮಟ್ಟಿಗೆ ಬಸವನಗುಡಿಯಲ್ಲಿರುವ ಬಾಂದಿನವರ ಯಾವುದೊ ಒಂದು ಮನೆತನಕ್ಕೆ ಸೇರಿದವರೆಂದುಕೊಂಡಿದ್ದೇನೆ. ಅವರಿಗೆ ಆ ಬೀದಿಯಲ್ಲಿ ಒಂದು ಮನೆಯೂ ಇತ್ತು. ಅವರ ತಮ್ಮಂದಿರು ಡಾ. ಬಿ. ನಾರಾಯಣರಾಯರು. ಆ ಇಬ್ಬರ ವಿಶ್ವಾಸವೂ ನನಗೆ ದೊರಕಿತ್ತು. ವೆಂಕೋಬರಾಯರು ಮೈಸೂರಲ್ಲಿ ನಾನು ಎರಡನೆ ಸಲ ಇದ್ದಾಗ – ಎಂದರೆ ಸುಮಾರು ೧೯೨೪ರಲ್ಲಿ – ನನಗೆ ಹೆಚ್ಚು ಸ್ನೇಹಿತರಾದರು. ಮೈಸೂರು ಓರಿಯೆಂಟಲ್ ಲೈಬ್ರರಿಯಲ್ಲಿ ಶಾಸನ ಮತ್ತು ವಾಸ್ತುಶಿಲ್ಪ ಇಲಾಖೆ ಅಧಿಕಾರಿಗಳಾಗಿ ಕೆಲಸ ಮಾಡಿದವರಾದ್ದರಿಂದ ಎ. ಆರ್. ಕೃಷ್ಣಶಾಸ್ತ್ರಿಯವರ ಜೊತೆಗೆ ಅವರನ್ನು ನೋಡಿದೆ. ಮೊದಲಿಂದಲೂ ಒಂದು ಚೊಕ್ಕಟ – ಉಡೆ, ನಡೆನುಡಿ ಎಲ್ಲದರಲ್ಲಿಯೂ– ಮನಸ್ಸಿಗೆ ಬರುವ ವ್ಯಕ್ತಿ ಅವರು. ಸೂಟು, ಟೈ, ಜರತಾರಿ ರುಮಾಲೆ – ಇವೊತ್ತು ಇದಾವುದೂ ಕಾಣದ ಸಿಂಗಾರ! – ಪ್ರತಿದಿನವೂ ನುಣ್ಣಗೆ ಕ್ಷೌರಮಾಡಿಕೊಂಡು ಎಲ್ಲಿರಲಿ, ಎಲ್ಲರಿಗಿಂತ ಮುಂಚೆ ಆ ದಿನದ ಕೆಲಸಕ್ಕೆ ಸಿದ್ಧವಾಗಿರುತ್ತಿದ್ದ ಲಕ್ಷಣ ಅವರದು. ಒಂದು ದಿನವೂ ಅವರು ದನಿ ಎತ್ತಿ ಮಾತಾಡಿದವರಲ್ಲ. ಯಾವುದನ್ನು ಮಾಡಿದರೂ ಒಪ್ಪ, ಹಾಳತ. ವ್ಯಕ್ತಿಶವಾದ ಯಾವ ನೆರವು ಬೇಕಾದರೂ ಜೊತೆಗಿದ್ದು ಮಾಡಿಕೊಡುತ್ತಿದ್ದವರು. ಅವರನ್ನು ತಿಳಿದ ಯಾರಿಗೇ ಆಗಲಿ, ನನಗೆ ಸ್ನೇಹಿತರಿಲ್ಲ ಎಂದುಕೊಳ್ಳಬೇಕಾದ ಕೊರತೆ ಇರುತ್ತಿರಲಿಲ್ಲ.

ರಾಯರು ಶಾಸನಕಲಾ ಇಲಾಖೆಗಳಲ್ಲಿ ಇದ್ದರೂ ಲಕ್ಷ್ಮೀನರಸಪ್ಪನವರ ವಾಸ್ತುಶಿಲ್ಪದ ಇಲಾಖೆಗೆ ಒಂದು ಬಗೆಯಲ್ಲಿ ಸೇರಿದವರು. ಅನೇಕ ಹೊಸಕಾಲದ ಕಟ್ಟಡಗಳ ನಿರ್ಮಾಣದಲ್ಲಿ ಹೆಸರುಪಡೆದರು. ಕಟ್ಟಡಗಳಿಗೆ ಸಂಬಂಧಿಸಿದಂತೆ ಆ ಇಲಾಖೆಯಲ್ಲಿ ಕೆಲಸ ಮಾಡಿದರೂ ಬಹುಕಾಲ ಮೈಸೂರು ಸಂಸ್ಥಾನದಲ್ಲಿದ್ದ ಅನೇಕ ದೊಡ್ಡ ದೇವಾಲಯಗಳ ನಕ್ಷೆ ಮತ್ತು ರಚನೆಗಳ ಅತಿಶಯಗಳು ಗೊತ್ತಾಗುವಂತೆ ರೇಖಾಚಿತ್ರಗಳನ್ನು ಬರೆದುಕೊಟ್ಟರು. ಒಂದು ಕಾಲದಲ್ಲಿ ಆರ್. ನರಸಿಂಹಾಚಾರ್ಯರ ಇಲಾಖೆಗೆ ಮೈಸೂರಿನ ಆ ಕಚೇರಿ ಒಳಪಟ್ಟಿತ್ತು. ಆಮೇಲೆ ಆರ್. ಶಾಮಾಶಾಸ್ತ್ರಿಗಳು, ಡಾ. ಎಂ. ಎಚ್. ಕೃಷ್ಣ ಅದರ ಅಧ್ಯಕ್ಷರಾಗಿದ್ದರು. ಮೈಸೂರಿಂದ ಬೆಂಗಳೂರಿಗೆ ಬಂದು ಲಾಲ್‌ಬಾಗ್ ಕಚೇರಿಯಲ್ಲಿದ್ದ ಕುಂಬಿಗಲ್ ಎಂಬ ಜರ್ಮನ್ ಅಧಿಕಾರಿಯ ಕೆಳಗೆ ಕೆಲಸ ಮಾಡಿ, ತೋಟ ಉಪವನಗಳ ಇಲಾಖೆಗೂ ಬರೆದ ನಕ್ಷೆಗಳಿಗೂ ಅವರ ಪ್ರೀತಿಯನ್ನು ಸಂಪಾದಿಸಿದರು.

ಇವೆರಡಕ್ಕೂ ಮುಂಚೆ ವಿಶ್ವೇಶ್ವರಯ್ಯನವರ ಕಚೇರಿಯಲ್ಲಿ ಅವರೂ ಡಿ. ಸಿ. ಸುಬ್ಬರಾಯಪ್ಪನವರೂ ಬಹುಶಃ ತಮ್ಮಾಜಿರಾಯರೂ ಜೊತೆಯಲ್ಲಿ ಕೆಲಸ ಮಾಡಿದರು.

ವಿಶ್ವೇಶ್ವರಯ್ಯನವರ ಶಿಸ್ತು, ತನ್ನ ಬಳಿ ಕೆಲಸಮಾಡುತ್ತಿದ್ದವರಲ್ಲಿ ಅವರಿಗಿದ್ದ ಆದರಗೌರವಗಳಿಂದಾಗಿ ತುಂಬಾ ಸಂತೋಷಪಟ್ಟಿದ್ದರು. ಅವರ ರೂಢಿ ಅಭ್ಯಾಸಗಳು ನೇಮಕ್ಕೆ ಬಂದಿದ್ದವು. ಆ ಕಾಲದಿಂದ ಬಂದದ್ದು ರಾಯರ ಶಿಸ್ತಿನ ನಡವಳಿಕೆ. ಊರಲ್ಲಿರಲಿ, ಹೊರಗೆ ಸಂಚಾರ ಹೋಗಲಿ, ಅವರ ಓರಣ, ಈ ಅಚ್ಚುಕಟ್ಟು ಎಲ್ಲಿಯೂ ತಪ್ಪುತ್ತಿರಲಿಲ್ಲ. ಆಗಿನ ಕಾಲದ ರೈಲುಪ್ರಯಾಣ ಮಾಡುತ್ತಿರುವಾಗಲೇ ಕ್ಷೌರ ಮುಗಿಸಿಕೊಳ್ಳುತ್ತಿದ್ದ ಅವರ ನೇರ್ಪು ನನಗಂತೂ ವಿಸ್ಮಯಕರವಾದ್ದು. ಮೊದಲು ಒಂದು ಬೈಸಿಕಲ್ ಮೇಲೆ ತಿರುಗಾಡುತ್ತಿದ್ದವರು ಕಾಲಕ್ರಮದಲ್ಲಿ ಒಂದು ಓವರ್‌ಲಂಡ್ ವ್ಹಿಪ್ಪೆಟ್ ಕಾರನ್ನು ಕೊಂಡು, ತಮಗೂ ಸ್ನೇಹಿತರಿಗೂ ಸೌಕರ್ಯಸೌಲಭ್ಯವನ್ನು ಒದಗಿಸಿಕೊಡುತ್ತಿದ್ದರು. ಅವರು ಬೆಂಗಳೂರಿಗೆ ಬಂದ ಮೇಲೆ ಅದು ಸೆಂಟ್ರಲ್ ಕಾಲೆಜ್ ಕರ್ನಾಟಕ ಸಂಘದ official ಕಾರಾಯಿತು.

ನೇರವಾಗಿ ಅವರು ಸಾಹಿತಿಗಳಾಗದಿದ್ದರೂ ಕೃಷ್ಣಶಾಸ್ತ್ರಿಗಳ ಜೊತೆಗೆ ಇದ್ದವರಾಗಿ ಮೈಸೂರು ದೇಶದ ವಾಸ್ತುಶಿಲ್ಪವನ್ನು, ದೇವಾಲಯದ ಮತ್ತು ವಿಗ್ರಹರಚನೆಗೆ ಸಂಬಂಧಿಸಿದ ಸಂಗತಿಗಳನ್ನು ಕುರಿತು ಪ್ರಬುದ್ಧ ಕರ್ನಾಟಕಕ್ಕೆ ಬರೆದುಕೊಟ್ಟರು. ಇಂಗ್ಲಿಷಲ್ಲಿಯೊ ಸಾಮಾನ್ಯವಾದ ಕನ್ನಡದಲ್ಲಿಯೊ ಬರೆದುದನ್ನು ಶಾಸ್ತ್ರಿಗಳು ಕನ್ನಡಿಸಿ ಅಥವಾ ಸರಿಪಡಿಸಿ ಅಚ್ಚು ಮಾಡಿ, ಕಾಲಕ್ರಮದಲ್ಲಿ 'ಮೈಸೂರು ದೇಶದ ವಾಸ್ತುಶಿಲ್ಪ' ಎಂಬ ಪುಸ್ತಕ ಹೊರಬಂತು. (ಕೃಷ್ಣಶಾಸ್ತ್ರಿಗಳು ಎಸ್. ಜಿ. ಶಾಸ್ತ್ರಿಗಳ 'ಸೂತ್ರದ ಬೊಂಬೆ' ಮುಂತಾದ ರಚನೆಗಳಿಗೂ ಅದೇ ಬಗೆಯ ಸೂಲು ಮಾಡಿಕೊಟ್ಟರು.) ಅಲ್ಲಿ ಬಂದಂಥ ದೇವಾಲಯಗಳ ಮತ್ತು ವಿಗ್ರಹಗಳ ಸ್ವರೂಪಲಕ್ಷಣವೇ ಸಾಮಾನ್ಯ ಕನ್ನಡ ಜನರಿಗೆ ಮೊದಲ ಬಾರಿಗೆ ಆ ಸೌಂದರ್ಯವನ್ನೂ ವಾಸ್ತುವಿಶೇಷಗಳನ್ನೂ ತಿಳಿಸಿಕೊಟ್ಟದ್ದು; ಮೂರ್ತಿಲಕ್ಷಣವನ್ನು ಕೂಡ.

ಮೈಸೂರಲ್ಲಿದ್ದಾಗ ಸ್ವಲ್ಪ ಹೆಚ್ಚು ಕಡಮೆ ಸಂಜೆ ನಾವು ಮೂವರೂ – ಎಂದರೆ ಶಾಸ್ತ್ರಿಗಳು, ರಾಯರು, ನಾನು – ಜೊತೆಯಲ್ಲಿ ಹೊರಗೆ ಹೋಗುತ್ತಿದ್ದೆವು. ಅವರ ಮಾತು, ಸೌಜನ್ಯ ಯಾವಾಗಲೂ ಪ್ರಿಯ. ಡಿ. ಸುಬ್ಬಯ್ಯ ರೋಡ್ ರಸ್ತೆಯಲ್ಲಿ ಮೊದಮೊದಲಿಗೆ ಲಾಯರ್ ರಾಮರಾಯರ ಮನೆ ಎದುರಿಗೆ ಒಂದು ಪಾರಿಜಾತ ಮರ ಇದ್ದ ಮನೆಯಲ್ಲಿ ಆಗ ಅವರು ಬಾಡಿಗೆಗಿದ್ದರು. ಅಲ್ಲಿಯೇ ದೊಡ್ಡ ಮಗಳ ಮದುವೆ ಮಾಡಿದರು. ಆ ಮಗಳನ್ನು ಕೃಷ್ಣರಾಜಪೇಟೆಯ ಭೀಮಾಚಾರ್ಯರೆಂಬವರಿಗೊ ಏನೊ – ಮುಂದೆ ಶ್ರೀರಂಗಪಟ್ಟಣದಲ್ಲಿ ಅವರು ಲಾಯರಾದರೆಂದು ನನ್ನ ಎಣಿಕೆ – ಕೊಟ್ಟು ಮದುವೆ ಮಾಡಿದರು. ಮಾಧ್ವರ ಮನೆ; ಬಾಂದಿನವರ ಸಂಪ್ರದಾಯ; ಮನೆಯಲ್ಲಿ ನಡೆದ ಮೊದಲ ಮದುವೆ. ಅಳಿಯನ ಮತ್ತು ಬೀಗರ ಕಡೆಯವರು ತಕ್ಕಮಟ್ಟಿಗೆ ಸ್ಥಿತಿವಂತರು; ಜೊತೆಗೆ ವೈಸರಾಯ್ ರೋಡಲ್ಲಿ ಅವರಿಗೆ ಮಾನ್ಯರೂ ಹಿರಿಯರೂ ಆಗಿದ್ದ, ಕಿವಿಗೆ ಸಣ್ಣ ಬಾವಲಿ ಹಾಕಿದ್ದ, ಉತ್ತರ ಕರ್ನಾಟಕದ ಕಡೆಯ ಜಾಗೀರ್‌ದಾರ್ ಒಬ್ಬರಲ್ಲಿ ಅವರಿಗೆ ಇವರ ನಂಟೊ ವಿಶ್ವಾಸವೊ ಅಧಿಕವಾಗಿತ್ತು. ತಮ್ಮ ದ್ರವ್ಯಸ್ಥಿತಿಯನ್ನು ಲಕ್ಷ್ಯ ಮಾಡದೆ ಅತಿ ವಿಜೃಂಭಣೆಯಿಂದ ಮದುವೆ ಮಾಡಿಕೊಟ್ಟರು. ಊಟದ ವಿಚಕ್ಷಣೆ, ಬಡಿಸುವ ಸಂಪ್ರದಾಯ ಮೇಲ್ತೆರದ್ದು. ಬೀಗರ ಜೊತೆಗೆ ನಮಗೂ ಭೋಜನವಾಯಿತು. ಹೋಳಿಗೆ ಮಂಡಿಗೆ ಬಡಿಸುವ ಸಮಯದಲ್ಲಿ ದೊಡ್ಡ ಗೋಮುಖದಲ್ಲಿ ಘಮ್ಮೆಂಬ ಪರಿಮಳವಿದ್ದ ತುಪ್ಪವನ್ನು

ತುಂಬಿಕೊಂಡು ತಂದು ಅದರಿಂದ ತುಪ್ಪ ಬಡಿಸಿದ್ದು ನಾನು ಮೊದಲ ಬಾರಿ ಕಂಡ ಅನುಭವ. ಮಿಣ್ಣೆಸೌಟೊ ಚಮಚವೊ ಸಾಮಾನ್ಯವಾಗಿ ಉಪಕರಣವಾಗಿದ್ದ ಪ್ರಸಂಗಗಳಲ್ಲಿ ಈ ಗೋಮುಖದ ಧಾರಾಳ ಅತಿಶಯವೇ. ಹಾಗೆಯೇ ಊಟದ ಕೊನೆಯಲ್ಲಿ ಹಾಲುಸಕ್ಕರೆಯಲ್ಲಿ ಕೈತೊಳೆಯಬೇಕು ಎಂಬ ಯಾವುದೊ ಸಂಪ್ರದಾಯವನ್ನು ಅನುಸರಿಸಿ ಕೈಗಳಿಗೆ ಸಕ್ಕರೆ ಹಾಲು ಸುರಿದರು. ಯಾವತ್ತೂ ಹಣವಂತರಲ್ಲ. ಹೆಣ್ಣುಮಗಳ ಮದುವೆಕಾಲದಲ್ಲಿ ತಕ್ಕ ಹಾಗೆ ನಡೆದುಕೊಳ್ಳಬೇಕಾದ ಪ್ರಸಂಗ ನಮ್ಮಲ್ಲಿ ಹೆಣ್ಣುಮಕ್ಕಳ ತಾಯಿತಂದೆಗಳಿಗೆ ಒದಗುವುದರಿಂದ ವೆಚ್ಚ ಮಿತಿ ಮೀರುವುದು ಸಾಧಾರಣ. Grin and bear up ಎಂದು ಇತರರೆಂದರೆ ಇವರು Hope and be prepared ಎಂಬ ಸೂಕ್ತಿ ಬಳಸುತ್ತಿದ್ದರು.

ಅವರಿಗೆ ಬೆಂಗಳೂರಿಗೆ ವರ್ಗವಾದ ಮೇಲೆ ಆ ಮನೆ ಬಿಡಲು ೧೯೨೮ರಲ್ಲಿ ವೆಂಕಣ್ಣಯ್ಯನವರು ಆ ಮನೆಗೆ ಬಂದರು. ಒಂದೇ ಒಂದು ಸಂದರ್ಭವನ್ನು ಮೈಸೂರಿನ ಪ್ರಸಂಗವಾಗಿ ತಿಳಿಸುತ್ತೇನೆ. ಒಂದು ದಿನ ಬೆಳಿಗ್ಗೆ ಸುಮಾರು ಹತ್ತೂವರೆ – ಹನ್ನೊಂದು ಗಂಟೆ ಸಮಯದಲ್ಲಿ ಅಶ್ವತ್ಥನಾರಾಯಣರಾಯರ ರೋಡಿಗೆ, ಬ್ರೈಡ್ಸ್‌ಪಾತ್ ಕಡೆಯಿಂದ ಬೂಲ್‌ವಾ ಕಡೆ ನಾವು ಮೂವರೂ ಬರುತ್ತಿದ್ದೇವೆ. ನಮ್ಮ ಹಿಂದಿನಿಂದ ಎನ್. ಎಸ್. ಸುಬ್ಬರಾಯರು ಕಾರಲ್ಲಿ ಬಂದು ಎರಡುಮೂರು ಸಲ ಗಾಡಿಯ ಕೊಂಬಿನ (horn) ಶಬ್ದ ಮಾಡಿ ನಮಗೆ ಎಚ್ಚರ ಕೊಟ್ಟಿದ್ದರಂತೆ. ನಾವು ಮೂವರೇ ಆದರೂ ರಸ್ತೆಯಲ್ಲಿ ಸ್ಥಳ ಬಿಡದೆ ಇದ್ದುದನ್ನು ನೋಡಿ ಸುಬ್ಬರಾಯರು ಕಾರು ನಿಲ್ಲಿಸಿ – 'ಏನಪ್ಪ, ನಿಮ್ಮ ಕಾರುಬಾರು? ಇಷ್ಟು ದೊಡ್ಡ ರಸ್ತೆಯನ್ನು ಮೂರು ಜನ ಆಕ್ರಮಿಸಿಕೊಂಡು ಇಷ್ಟಬಂದಂತೆ ನಡೆಯುತ್ತಿದ್ದರೆ ಗಾಡಿಗಳಲ್ಲಿ ಸಂಚಾರ ಮಾಡುವ ಜನದ ಗತಿ ಏನು? ಪಬ್ಲಿಕ್ ರಸ್ತೆಗೆ ಸಂಬಂಧಿಸಿದ ನಿಯಮ ಇಲ್ಲವೆ? ಮೂರು ನಾಲ್ಕು ಸಲ ಹಾರ್ನ್ ಮಾಡಿದ್ದೇನೆ; ನಿಮ್ಮ ಕಿವಿಗೆ ಬಿದ್ದ ಹಾಗೇ ಇಲ್ಲ! ಅದೇನು ಅಂಥ ವಿಷಯ? ಕೋಲಾಹಲಕ್ಕೆ ಕಾರಣ?' – ಎಂದವರೇ ಇಳಿದು ಬಿಟ್ಟು, ನಮ್ಮ ಜೊತೆಗೆ ಅದೂ ಇದು ಮಾತಾಡುತ್ತ, ಸುಂದರವಾದ ಆ ಸಾಲ್ಮರದ ರಸ್ತೆ, ಮಹಾರಾಜರ ಬಾಡಿಗಾರ್ಡ್ ಕಚೇರಿ ಎರಡನ್ನೂ ದಾಟಿ ಬಂದು, ಕೊನೆಯಲ್ಲಿ ಅವರೆಗೆ ಹೋಗಿ ನಿಂತಿದ್ದ ತಮ್ಮ ಕಾರಲ್ಲಿ ಕುಳಿತು ಮುಂದೆ ಹೋದರು. ತಲೆ ಹೋಗುವ ವಿಚಾರ ಯಾವುದೂ ಚರ್ಚೆಯಲ್ಲಿಲ್ಲದಿದ್ದರೂ ಆ ಊರಿಗೆ, ಆ ಗಂಟೆಗೆ, ಆ ರಸ್ತೆಯ ಆಗತ್ಯಗಳಿಗೆ ಸಂಬಂಧಪಡದೆ ಇನ್ನೇನೊ ಲೋಕೋತ್ತರತೆ ನಮ್ಮ ಮೂವರನ್ನೂ ಹಿಡಿದಿತ್ತಾಗಿರಬೇಕು. ನನ್ನ ಬುದ್ಧಿ ಹೇಗಾದರಾಗಲಿ, ನಮಗೆ ಎಂಟು–ಹತ್ತು ವರ್ಷಗಳ ವಯೋವ್ಯತ್ಯಾಸವಿತ್ತು, ಶಾಸ್ತ್ರಿಗಳು ವೆಂಕೋಬರಾಯರು ಸುಲಭವಾಗಿ ಮೈಮರೆಯುವವರಲ್ಲ. ಆದರೂ ಆ ಸ್ನೇಹಸಂಬಂಧ ಅಷ್ಟು ಸರಸವಾದ್ದು; ಮೈಮರಸುವಂಥಾದ್ದು ಎಂಬುದನ್ನು ತಿಳಿಸುವುದಕ್ಕೋಸ್ಕರ ಇದನ್ನು ಹೇಳಿದೆ.

ಓರಿಯೆಂಟಲ್ ಲೈಬ್ರರಿಯಲ್ಲಿದ್ದ ಈ ಇಬ್ಬರೂ ಕಾರಲ್ಲಿ ಕುಳಿತು ಶಾರದಾವಿಲಾಸ ಹೈಸ್ಕೂಲಿದ್ದ ಲ್ಯಾನ್ಸ್‌ಡೌನ್ ಕಟ್ಟಡದ ಮೇಲೆ ಬರುವುದು; ಅಷ್ಟು ಹೊತ್ತಿಗೆ ನಾನು ಅವರೊಡನೆ ಸೇರುವುದು, ಅಲ್ಲಿಂದ ಬೊಂಬಾಯಿ ಆನಂದ ಭವನಕ್ಕೆ ಮೂವರೂ ಹೋಗಿ

ಧಾತೂಪಚಾರ ಮಾಡಿಕೊಂಡು ಮುಂದೆ ಹೋಗುವುದು; ಅಲ್ಲಿಂದ ಹಾರ್ಡಿಂಗ್ ರೋಡ್, ಮಿರ್ಜಾರೋಡ್ ದಾಟಿ, ಗರಾಜ್, ತಬೇಲಿ ದಾಟಿ, ಕಾರಂಜಿಕೆರೆಯ ದಂಡೆಯ ಮೇಲೆ ಹೋಗುವುದು; ಅಷ್ಟರಲ್ಲಿ ನಮ್ಮಲ್ಲಿ ಯಾರಿಗೆ ಅವಸರವೊ ಅವರು ಹಿಂತಿರುಗುವುದು; ಭೂತ ಹಿಡಿದ ಹಾಗೆ ನಾನು ಮುಂದೆ ಹೋಗುವುದು: – ಇದು ಪದ್ಧತಿ. ಶ್ರೀನಿವಾಸಮೂರ್ತಿಗಳು ಮೈಸೂರಲ್ಲಿರುವಾಗ ಅವರೂ ಜೊತೆಗಿರುತ್ತಿದ್ದರು. ಅವರು ಟ್ರೈನಿಂಗ್ ಕಾಲೇಜಲ್ಲಿ ಅಭ್ಯಾಸ ಮುಗಿಸಿದ ಮೇಲೆ ನಾವು ಪುನಃ ಮೂವರೇ. ದಿನಕ್ಕೆ ಹೀಗೆ ಮೂರು – ನಾಲ್ಕು ಗಂಟೆಗಳ ಕಾಲವಾದರೂ ಜೊತೆಯಲ್ಲಿ ಕಳೆಯುತ್ತಿದ್ದುದರಿಂದ ಒಂದು ಆಪ್ತವಾದ ಅಂತಃಕರಣ ಬೆಳೆಯುವಂತಾಯಿತು. ೧೯೨೮ ಆದ ಮೇಲೆ ನಾನು ಬೆಂಗಳೂರಿಗೆ ಬಂದೆ. ವೆಂಕೋಬರಾಯರು ಎಲ್ಲಿದ್ದಾರೆ ಎಂದರೆ ಆಗ ಅವರನ್ನು ಲಾಲ್‌ಬಾಗಲ್ಲಿ ಇಟ್ಟಿದ್ದಾರೆ ಎಂದು ಕುಚೇಷ್ಟೆ ಮಾಡುತ್ತಿದ್ದವರುಂಟು ಎಂದು ತಿಳಿಸಿದ್ದೇನೆ. ಕುಚೇಷ್ಟೆಗೆ ಕಾರಣ: ಹಿಂದೆ ಅಲ್ಲಿ ಹುಲಿ ಸಿಂಹ ಕಪಿ ಕರಡಿ ಮುಂತಾದವನ್ನು ಇಡುತ್ತಿದ್ದರು. ಆ ಪ್ರಾಣಿವರ್ಗ ನಾನು ಮೈಸೂರಲ್ಲಿದ್ದಾಗಿಗೇ ಅಲ್ಲಿಗೆ ವರ್ಗವಾಗಿ ಹೋಯಿತು. ಆದರೂ ಆ ಸ್ಮೃತಿ ಶೇಷ ಲಾಲ್‌ಬಾಗ್ ಹೆಸರಿಗೆ ಅಂಟಿಕೊಂಡಿತ್ತು. ಮ್ಯೂಸಿಯಂ ಅರ್ಥ ಬೇರೆ. ಅಲ್ಲಿ ಅವರ ಗೆಳೆಯರಾದ ಅನಂತಸ್ವಾಮಿರಾಯರು ವರ್ಗವಾದಾಗ ಅಲ್ಲಿದ್ದ ಅಜಂತ ಚಿತ್ರಸಂಗ್ರಹದ ಪ್ರಯೋಜನ, ಓದು ನನಗೆ ದೊರೆಯಿತು.

ಸಾಹಿತಿಗಳೆಂದುಕೊಂಡ ನಮ್ಮ ಮೂರು – ನಾಲ್ಕು ಮಂದಿಯವರ ಜೊತೆಯಲ್ಲಿದ್ದ ಕಾರಣದಿಂದ ಅವರಿಗೂ ಆ ಭಾವಬಂಧ ತೊಡಗಿತ್ತು. ಅವರು ಸಂಸ್ಕೃತ ವಿದ್ಯಾರ್ಥಿ. ಎಷ್ಟೊ ಬಾಟು ಶ್ಲೋಕಗಳು ಅವರ ನೆನಪಿನಲ್ಲಿದ್ದವು. ಶಾಸ್ತ್ರಿಗಳಿಗೆ ಗುಂಡಪ್ಪನವರಿಗೆ ಇದರಿಂದ ತುಂಬಾ ಸಂತೋಷ. ನನಗಾಗಿ ಈ ಮಾಸ್ತರು ಏನೇನೆ ಕೊಡುತ್ತಿದ್ದರು, ಪರ್ಯಾಯವಾಗಿ. ಶಾಸ್ತ್ರಿಗಳ ಪ್ರಬುದ್ಧ ಕರ್ಣಾಟಕದ ಸಂಬಂಧದಿಂದ ಇದು ಬೆಳೆಯಿತು. ಆಮೇಲೆ ನಾವು ಪರಿಷತ್ತಿನ ಸಂಪರ್ಕ ಹೆಚ್ಚು ನಿಕಟವಾಗಿಟ್ಟುಕೊಂಡ ಕಾಲದಿಂದ ಕನ್ನಡ ಕಲಸಗಳಿಗೆ ತನ್ನನ್ನು ಅರ್ಪಿಸಿ

ವರ್ಷದಲ್ಲಿ ನಾವು ಏರ್ಪು ಮಾಡಿದ ಮೆಚ್ಚಿ ಬಂದುಬಿಡುತ್ತೆ, ನಾಟಕ ಕಲೆಯ ಪ್ರಯೋಗಪರೀಕ್ಷೆಗಳಿಗೆ ಅದು ಒದಗುತ್ತದೆ, ಪರಿಷತ್ತಲ್ಲಿಯೇ ಒಂದು ನಾಟಕಶಾಖೆಯನ್ನು ತೆರೆದು ಆ ಮೂಲಕ ಹೊಸ ಬಗೆಯ ಪ್ರಯೋಗಗಳನ್ನು ಮಾಡಬಹುದಲ್ಲವೆ, ಇತ್ಯಾದಿಯಾಗಿ ಲಲ್ಲೆಸಿ ಮಾತನಾಡಿ, ಅವರ ಅಸಮಾಧಾನ ತಗ್ಗಿಸಿದೆವು. 'ಅಪರಾಧಿಯನ್ನು ಐದಾರು ಪೀನಲ್ ಕೋಡ್ ಸೆಕ್ಷನ್ ಪ್ರಕಾರ ಯಾವುದಕ್ಕಾದರೂ ಸಿಕ್ಕುವಂತೆ ಗೌರಿ ಮಾಡುವ ಹಾಗೆ ನನಗೆ ವಾದಗಳನ್ನು ಪೋಣಿಸುತ್ತಿದ್ದೀರಲ್ರೀ, ಆಹಾ' ಎಂದರು 'ಶ್ರೀ'! ಕಬ್ಬಿಣದ –Clamps – ಮೊಳೆ ಬಿಗಿತಗಳ ತಂತಿಗಳು ಹಾಕಿ, ಮೂರು–ನಾಲ್ಕು ಪರದೆಗಳಿಗೆ ಅವಕಾಶವಾಗುವಂತೆ ಏರ್ಪಾಡುಮಾಡಿದೆವು. ಅಯ್ಯರನ್ನು ಕೇಳಿಕೊಂಡು ಬಂದು ಪರದೆಗಳನ್ನು ಹೊಲಿಹಾಕಿದೆವು. ಅವರನ್ನೇ ಆ ಕೆಲಸಕ್ಕೆ ಬಿಟ್ಟು ಅಂಕದ ಪರದೆಯ ರಚನೆಗೆ, ಅದರ ವ್ಯವಸ್ಥೆಗೆ, ತೂಕ ಭಾರಗಳ ಸಜ್ಜಿಗೆ, ಹೊಲಿಗೆಗೆ ಅಲಂಕರಣಕ್ಕೆ ಏರ್ಪಾಟು ಮಾಡಿದೆವು. ಸೀತಾರಾಂ ಅವರ ಅನುಗ್ರಹದಿಂದ ಪರಿಷತ್ತಿನ ಮುಂದೆ ಒಂದು ನೋಟೀಸ್ ಬೋರ್ಡ್ ಮಾಡಿಸಿ ಇವ್ತೊತ್ತಿನವರೆಗೂ ಉತ್ತಮಪಡಿಸಲಾಗದಿರುವ ಒಂದು ಚೌಕಟ್ಟನ್ನು ನಿಲ್ಲಿಸಿದೆವು. ಕಾರ್ಯದರ್ಶಿಯಾಗಿದ್ದ ವೆಂಕೋಬರಾಯರ ಸಹಾನುಭೂತಿ ಇಲ್ಲದಿದ್ದರೆ ಈ ಕೆಲಸ ನಡೆಯುತ್ತಿರಲಿಲ್ಲ.

ಬೆಂಗಳೂರಲ್ಲಿ ಪುನಃ ಸುಮಾರು ೧೯೩೮ರವರೆಗೆ ಕೃಷ್ಣಶಾಸ್ತ್ರಿಗಳು ಸೆಂಟ್ರಲ್ ಕಾಲೇಜಲ್ಲಿ ಕನ್ನಡದ ಇಲಾಖೆಯ ಮುಖ್ಯಸ್ಥರಾಗಿದ್ದರು. ನಮ್ಮ ವಿಶ್ವವಿದ್ಯಾನಿಲಯಕ್ಕೆ ಇದ್ದುದು ಒಬ್ಬ ಪ್ರೊಫೆಸರು. ಮೈಸೂರಲ್ಲಿ ವೆಂಕಣ್ಣಯ್ಯನವರು ತೀರಿಕೊಳ್ಳಲು ಮೈಸೂರಿಗೆ ಪ್ರೊಫೆಸರಾಗಿ ಶಾಸ್ತ್ರಿಗಳು ವರ್ಗವಾದರು. ಪ್ರತಿವರ್ಷವೂ ವಿಜೃಂಭಣೆಯಿಂದ ನಡೆಯುತ್ತಿದ್ದ ವಾರ್ಷಿಕೋತ್ಸವಗಳಲ್ಲಿ ರಾಯರ ಕಾರ್ಯಭಾರ ಚೆನ್ನಾಗಿ ನಡೆಯಿತು. ಸೆಂಟ್ರಲ್ ಕಾಲೇಜಲ್ಲಿ ಅವರೂ ಇಂಟರ್‌ಮೀಡಿಯಟ್ ಕಾಲೇಜಲ್ಲಿ ನಾನೂ ಇದ್ದು ನಮ್ಮ ಸ್ನೇಹ ಇನ್ನಷ್ಟು ಬೆಸೆಯಿತು. ಆ ಕಾಲದಲ್ಲಿ ಶ್ರೀನಿವಾಸಮೂರ್ತಿಗಳು ತುಮಕೂರಿನ ನಾರ್ಮಲ್ ಸ್ಕೂಲ್ ಪ್ರಿನ್ಸಿಪಲ್ ಆಗಿದ್ದವರು ನಮ್ಮನ್ನು ದೇವರಾಯನದುರ್ಗಕ್ಕೆ ಆಹ್ವಾನಿಸಿ, ನಮ್ಮ ಜೊತೆಗೆ ವೆಂಕಣ್ಣಯ್ಯನವರೂ ಬರಲು, ಎಲ್ಲರೂ ಒಟ್ಟಿಗೆ ದುರ್ಗಕ್ಕೆ ಹೋದೆವು. ದುರ್ಗದ ಯಾತ್ರೆ ತುಂಬಾ ಉತ್ಸಾಹದಿಂದ ನಡೆಯಿತು. ಅದರ ವಿವರಗಳನ್ನು ಬೇರಲ್ಲಿ ವರ್ಣಿಸಿದ್ದೇನೆ. ಹಿಂದಿರುಗುವಾಗ ದಾರಿಯುದ್ದಕ್ಕೂ ಕಥೆಗಳು. ಏನೇನೊ ಸುದ್ದಿ. ಒಬ್ಬರೊಬ್ಬರಿಗೆ ಮೇಲ್ನೋಟಿ. ದಾರಿ ನಿರ್ಜನವಾಗಿದ್ದುದರಿಂದ ಹುಲಿಗಿಲಿ ಬಾಯಿಗೆ ಸಿಕ್ಕಿದರೆ ಹೇಗೆ ಎಂಬ ಭಯ. ಮುಂದೆ ಒಂದು ಕಡೆ ಭೂತವಿದೆ ಎಂದು ಕೇಳಿದ್ದೆವಾದ್ದರಿಂದ ಅದರ ಭೀತಿ. ಏನೇ ಆಗಲಿ, ಭೂತಕ್ಕೆ, ಹುಲಿಗೆ ಇಷ್ಟು ಜನರ ಬೆದರಿಕೆ ಇರಲಿ ಎಂದು ಕೈಚಪ್ಪಾಳಿ ಹೊಡೆದುಕೊಂಡು ಜನಪದ ಗೀತಗಳನ್ನು ಹಾಡಿಕೊಂಡು ಇಳಿದುಬಂದೆವು. ರಾಯರದು ಹೆಚ್ಚು ಸದ್ದಿಲ್ಲದಿದ್ದರೂ ತುಂಬ ಚಟುವಟಿಕೆಯ ಕಾರ್ಯಭಾರ. ಹತ್ತಾರು ವರ್ಷಗಳ ಕಾಲ ದುರ್ಗದ ಪ್ರವಾಸ ನಮ್ಮೆಲ್ಲರ ನೆನಪಲ್ಲಿಯೂ ಇತ್ತು.

ರಾಯರು ಸ್ವಲ್ಪ ಕಾಲದಲ್ಲಿ ಪರಿಷತ್ತಿನ ಕಾರ್ಯದರ್ಶಿಯಾದರು. 'ಕನ್ನಡನುಡಿ', 'ಪರಿಷತ್ ಪತ್ರಿಕೆ' ಇವನ್ನು ನಡಸಬೇಕಿತ್ತು. ತ್ರೈಮಾಸಿಕ 'ಪತ್ರಿಕೆ'ಯ ಕೆಲಸ ನನಗೆ. 'ನುಡಿ'ಗೆ

ಸಂಬಂಧಿಸಿದ ಭಾಗದಲ್ಲಿ ಹೊರಗಿಂದ ಬಂದುದನ್ನು ಒಂದು ಸಲ ನೋಡಿ ಪ್ರತ್ಯಯಗಳನ್ನೂ ಶಬ್ದರೂಪಗಳನ್ನೂ spelling ಅಲ್ಲಲ್ಲಿ ಸರಿನೋಡುವುದನ್ನೂ ಬಿಟ್ಟರೆ ನನಗೆ ಬೇಳುತ್ತಿದ್ದ ಕೆಲಸ ಸಂಪಾದಕೀಯ. 'ನುಡಿ' ವಾರಕ್ಕೊಮ್ಮೆ ಶುಕ್ರವಾರವೊ ಶನಿವಾರವೊ ಹೊರಬೀಳಬೇಕಾಗಿತ್ತು. 'ಶ್ರೀ' ಅವರು ಪರಿಷತ್ತಿಗೆ ಉಪಾಧ್ಯಕ್ಷರು. ಒಂದೊಂದು ಸಲ ಅವರು ಪತ್ರ ಮೇಲೆಯೊ ಕಣ್ಣಾಡಿಸುತ್ತಿದ್ದರು ಮಾತ್ರ. ಸಂಪಾದಕೀಯದ ಹೊಣೆ ರಾಯರದು. ಪ್ರಬುದ್ಧ ಕರ್ನಾಟಕದಲ್ಲಿ ಶಾಸ್ತ್ರಿಗಳು ಮಾಡುತ್ತಿದ್ದಂತೆ ಸಾಹಿತ್ಯ ಪರಿಷತ್ಪತ್ರಿಕೆಗೆ ಒಂದು ವಸ್ತುಕೋಶ ಸಂಗ್ರಹಿಸಬೇಕಾಗಿ, ಮಿಥಿಕ್ ಸೊಸೈಟಿಗೆ ಹೋಗಿ ಬೇರೆಬೇರೆ ದೇಶವಿದೇಶಗಳ ನಿಯತಕಾಲಿಕೆಗಳನ್ನು ಹೆಕ್ಕಿ ವಿಷಯವನ್ನು ಸಂಗ್ರಹಿಸಿ ತರುವ ಕೆಲಸ ನನ್ನದಾಗುತ್ತಿತ್ತು. ಸಂಪಾದಕೀಯದ ಕೆಲಸವನ್ನು ರಾಯರು ತುಂಬ ನಾಜೂಕಿಂದ ನಿರವೇರಿಸತೊಡಗಿದ್ದರು. ಬಹುಶಃ ಪ್ರತಿ – ಗುಲಬರ್ಗದವರೆನ್ನುವಂತೆ 'ದರವೊಂದು' – ಗುರುವಾರ ಎಂದು ಕಾಣುತ್ತದೆ: ರಾಯರು ಕಾರಲ್ಲಿ ನಮ್ಮ ಕಾಲೆಜಿಗೆ ಬರುವರು. ವಾರಕ್ಕೆ ಒಂದು ದಿವಸವೊ ಎರಡು ದಿವಸವೊ ಮಾತ್ರ ಕಡೆಯ ಗಂಟೆ (೪ ರಿಂದ ೫) ಪಾಠ ನನಗೆ ಇದ್ದು, ಉಳಿದ ದಿನ ನಾಲ್ಕಕ್ಕೆ ಕಾರಲ್ಲಿ ಕುಳಿತು ಬೇಡವೆಂದರೂ ಕೇಳದೆ ಕಬ್ಬನ್ ಪಾರ್ಕ್ ರೆಸ್ಟೊರಂಟಿಗೆ ಅಲ್ಲಿಂದ ಹೊರಡುತ್ತಿದ್ದೆವು. ರಾಯರಿಗೆ ಸೆಕ್ರೆಟರಿಯೇಟ್‌ಗೆ ಸಂಬಂಧಿಸಿದ್ದ ಶ್ರೀವೈಷ್ಣವ ಹೊಟೇಲು ಯಜಮಾನ ವಿಶೇಷ ಗುರುತಿನವನು. ವಾರಕ್ಕೊಂದು ಸಲ ಬರುತ್ತಿದ್ದ ರಾಯರಿಗೆ ತುಂಬಾ ಮರ್ಯಾದೆ ತೋರುತ್ತಿದ್ದ ತಾನೇ ಬಂದು. ಅಲ್ಲಿಂದ ಹೊರಟು ಪಬ್ಲಿಕ್ ಲೈಬ್ರರಿ ದಾಟಿ – ಅಲ್ಲೊಂದು ಸೀಳುದಾರಿಯಿದೆ – ಚಾಮರಾಜ ಒಡೆಯರ ಪ್ರತಿಮೆ ಇರುವ ಕಡೆ ಹೋಗುವುದಲ್ಲ, ಸಂಪಂಗಿ ಕೆರೆಕಟ್ಟೆಯ ಮೇಲಕ್ಕೆ ಯುನೈಟೆಡ್ ಬ್ರೂಯೆರಿ ಚೌಕಕ್ಕೆ ಒಯ್ಯುವ ದಾರಿ (ಇಂದಿನ ಸಿದ್ದಲಿಂಗಯ್ಯ ವೃತ್ತ) – ರಸ್ತೆ ಕೂಡುವ ಸ್ಥಳದಿಂದ ಮುಂದೆ ಹೋಗಿ ಅವರು ಕಾರು ನಿಲ್ಲಿಸುವರು. ಆ ವಾರಕ್ಕೆ ಬೇಕಾದ ಯಾವುದಾದರೂ ಒಂದು ವಿಷಯವನ್ನು ಎತ್ತಿಕೊಂಡು ಒಂದು ಕಾಲಂ ಅಥವಾ ಎರಡು ಕಾಲಂ ಸಂಪಾದಕೀಯವನ್ನು ನಾನು ಹೇಳುತ್ತಿದ್ದೆ. ಅವರು ಬರೆದುಕೊಳ್ಳುತ್ತಿದ್ದರು. ಅದನ್ನು ನನ್ನ ಜೊತೆಯಲ್ಲಿತ್ತಿಕೊಂಡು ಬಂದು ರಾತ್ರಿ ತಿದ್ದುಪಡಿ ಮಾಡಿ ಇಟ್ಟಿದ್ದರೆ, ಮಾರನೆ ಬೆಳಿಗ್ಗೆ ಸುಮಾರು ಎಂಟೂವರೆಯ ಹೊತ್ತಿಗೆ ರಾಯರು ತೆಗೆದುಕೊಂಡು ಹೋಗುವುದು. ಒಡನೆಯೆ ಅಚ್ಚುಕೂಟದವರಿಗೆ ಕೊಟ್ಟು ಮೊಳೆಜೋಡಿಸುವುದು; ಹನ್ನೆರಡು ಗಂಟೆ ಸುಮಾರಿಗೆ ಕರಡುಪ್ರತಿ ನನ್ನ ಕೈಗೆ ತಂದು ಕೊಡುವುದು. ಅದನ್ನು ಸರಿಮಾಡಿಕೊಟ್ಟರೆ ಆ ವಾರದ 'ನುಡಿ'ಯ ಸಂಪಾದಕೀಯ ಮುಗಿಯುತ್ತಿತ್ತು.

ಅವರ ಮಕ್ಕಳೆಲ್ಲ ಕೆಲಸದಲ್ಲಿದ್ದರು. ದೊಡ್ಡ ಮಗ ಡಾಕ್ಟರು. ಎರಡನೆಯಾತ ಎಂಜಿನೀಯರ್. ಇದ್ದ ಮೂರು ಜನ ಹೆಣ್ಣುಮಕ್ಕಳು ಮದುವೆಯಾಗಿ ತಮ್ಮ ತಮ್ಮ ಮನೆಗಳಿಗೆ ಹೋಗಿದ್ದರು. ಯುದ್ಧದ ಕಾಲ ಹೊರಗೆ. ಅವರು ಇಂಥ ಇಲಾಖೆಗೆ ಖಚಿತವಾಗಿ ಸೇರಿದವರು ಎಂದು ನಿರ್ಣಯವಾಗದೆ ಎಂಜಿನಿಯರಿಂಗ್ ವಿಭಾಗ, ವಾಸ್ತುಶಿಲ್ಪದ ವಿಭಾಗ, ಮೈಸೂರು ಓರಿಯೆಂಟಲ್ ಲೈಬ್ರರಿಗೆ ಸೇರಿದ ಪ್ರಾಚ್ಯಸಂಶೋಧನಾ ಇಲಾಖೆಯ ಒಂದು ಕಡೆ ಇದ್ದ ಶಾಸನ, ನಾಣ್ಯಶಾಖೆ, ದೇವಾಲಯದ ಮೇಲ್ವಿಚಾರಣೆಯ

ಶಾಖೆ – ಮುಂತಾದ ಬೇರೆ ಬೇರೆ ಸಂಪರ್ಕವುಳ್ಳವರಾದ್ದರಿಂದ ಅವರು ಯಾವ ಒಂದು ಇಲಾಖೆಯ ಮುಖ್ಯಾಧಿಕಾರಿಗೂ ಕೇವಲವಾಗಿ ಸಂಬಂಧಿಸದವರಾಗಿದ್ದರು. ಆದರೆ ಇದರಿಂದ ಇವರ ಸಂಬಳಸಾರಿಗೆ ಮೇಲ್ಪಡದೆ ಉಳಿಯಿತು. ವಿದ್ಯಾ ಇಲಾಖೆಗೇ ಕಡೆಯೆಗೆಕೆಯಿರುವಾಗ ಶಿಲ್ಪಕಲೆಗಳ ಭಾಗವನ್ನು ಲಕ್ಷಿಸಬೇಕಾದ ಅನುಕೂಲ ಎಂದಿಗೂ ಪರಿಶಿಷ್ಟವೇ.

ಒಂದು ಕಾಲದಲ್ಲಿ ತಮ್ಮಲ್ಲಿದ್ದ ಮೈಸೂರು ಆರ್ಕಿಯಾಲಾಜಿಕಲ್ ರಿಪೋರ್ಟ್ಸ್‌ನ (Mysore Archaeological Reports) ಆರೆಂಟು ಸಂಪುಟಗಳನ್ನು ನನಗೆ ತಂದುಕೊಟ್ಟರು, ಇದನ್ನು ಬಳಸಿಕೊಳ್ಳಿ ಎಂದು. 'ನನಗೆ ಕೊಡುತ್ತೇನೆಂದು ಹೇಳಿದ್ದಿರಿ; 'ವಿ.ಸೀ' ಆದರೆ ಏನು? ನೀವು ಮಾತಿಗೆ ತಪ್ಪಬಾರದಾಗಿತ್ತು' ಎಂದು ಹಿರಿಯರೊಬ್ಬರು ಹೇಳಿದಾಗ, 'ಅವರಿಗೆ ಅದೇನೊ ಅಗತ್ಯವಿತ್ತು; ಒಂದು ಸಂಪುಟದಲ್ಲಿ ಹಲ್ಮಿಡಿ ಶಾಸನವಿದೆ. ಅದು ತಾನೆ ಅವರಲ್ಲಿ ಸರ್ವದಾ ಏಕಿರುತ್ತೆ? ಬಹುಶಃ ನಿಮಗೆ ತಾವೇ ತಂದುಕೊಟ್ಟಾರು' ಎಂದು ಹೇಳಿ ಸ್ವಲ್ಪಮಟ್ಟಿಗೆ ಆ ಹಿರಿಯರ ಕೋಪವನ್ನು ಕಡಮೆ ಮಾಡಿದ್ದುಂಟು.

ಇನ್ನೊಂದು ಸಂಗತಿ ಇದು: ಹಿಂದೆ ಡಾ. ಎ. ವೆಂಕಟಸುಬ್ಬಯ್ಯನವರು – ಅವರು ಅಲ್ಲಿ ಹಿಂದೆ ಇದ್ದು ಹೊರಬಂದಿದ್ದರು ಎಂದು ಕಾಣುತ್ತದೆ – ಕರ್ನಾಟಕದ ಅನೇಕ ಶಾಸನ ಭಾಗಗಳನ್ನು ರೋಮನ್ ಲಿಪಿಯಲ್ಲಿ ಬೆರಳಚ್ಚು ಮಾಡಿ, ಉಚ್ಚಾರಣೆಯ ಸೌಕರ್ಯವನ್ನು diacritical marks ಒಂದಿಗೆ ಅಕ್ಷರಗಳ ಮೇಲೆ ಕೆಳಗೆ ಹಾಕಿ, ಕ್ಲಿಷ್ಟ ಪದಗಳ ಅರ್ಥಗಳನ್ನು ವಿಶೇಷವಾದೆಡೆ ತಿಳಿಸಿದ್ದ ಸುಮಾರು ೩೦೦–೪೦೦ ಪುಟಗಳಷ್ಟು ಹಾಳೆಗಳನ್ನು ರಾಯರು ಮೈಸೂರಿಂದ ಬೆಂಗಳೂರಿಗೆ ಬರುವಾಗ ನನಗೆ ಕೊಟ್ಟರು. ಡಾ. ವೆಂಕಟಸುಬ್ಬಯ್ಯನವರು ಮೈಸೂರು ಆರ್ಕಿಯಾಲಾಜಿಕಲ್ ಆಫೀಸಿನಲ್ಲಿ ಪದಸ್ಥರಾಗಿರುವಾಗ – ಎಂದರೆ ಆರ್. ನರಸಿಂಹಾಚಾರ್ಯರ ಕಾಲದಲ್ಲಿ – ಅದನ್ನು ಮಾಡಿದ್ದರೆಂದು ಕಾಣುತ್ತದೆ. ರಾಯರು ಇದು ಇಂಥವರದೆಂದು ನನಗೆ ತಿಳಿಸಲಿಲ್ಲ. 'ನೋಡಿ, ನಿಮಗೇನಾದರೂ ಪ್ರಯೋಜನವಾಗುವುದಿದ್ದರೆ; ನನ್ನ ಒಂದು ಡ್ರಾನಲ್ಲಿ ಇದಿತ್ತು; ಬಳಸಿಕೊಳ್ಳಿ' ಎಂದು ಕೊಟ್ಟರು. ಹೊಯ್ಸಳ ಮತ್ತು ಮೊದಮೊದಲ ಕಾಲದ ವಿಜಯನಗರದವರ ಶಾಸನಗಳವು. ಅಲ್ಲಿ ರಾಜಕೀಯ ಬಿಟ್ಟು ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ ವಿಷಯಗಳನ್ನು ಕುರಿತ ಸಾಹಿತ್ಯ ಇತ್ತು. ಅಡಿಗೀಟುಗಳನ್ನು ಹಾಕಿ ಕೆಲವು ಭಾಗಗಳನ್ನು ಗುರುತು ಹಾಕಿದ್ದುದಲ್ಲದೆ ಪುಟದ ಎಡಭಾಗದ ಮಾರ್ಜಿನಲ್ಲಿ ಅಳತೆ ತೂಕಗಳು, ದವಸದ ಹಂಚಿಕೆ, ಕಂದಾಯದ ವಿಪ್ಪಾಡು, ಸಾಮಾಜಿಕ ರೀತಿನೀತಿ, ಕಟ್ಟಡ ದೇವಾಲಯಗಳು, ಮಾನ್ಯ ಪದ್ಧತಿ, ಆಡಳಿತ ವ್ಯವಸ್ಥೆ, ನಾಣ್ಯಗಳು, ದೇಶದ ಹೊರವ್ಯಾಪಾರ, ಆರ್ಥಿಕ ಸಂಬಂಧಗಳು, ಗುರುಪೀಳಿಗೆ, ಮಠಗಳ ವ್ಯವಸ್ಥೆ – ಮುಂತಾದ ಸಂಗ್ರಹ ಸೂಚಿಕೆಗಳನ್ನು ಹಾಕಿದ್ದರು. ಆ ಕಾಲದಲ್ಲಿ ನಮ್ಮವರು ಯಾರೂ ಚರಿತ್ರೆಯ ಇಂಥ ಅಂಶಗಳನ್ನು ಕುರಿತು ವ್ಯಾಸಂಗ ಮಾಡಿದವರಾಗಲಿ ಲೇಖನ ಬರೆದವರಾಗಲಿ ಇರಲಿಲ್ಲ. ಬುದ್ಧಿ ಆ ಕಡೆ ಹೊರಳಿದ್ದರೆ ಅದನ್ನು ಬಳಸಿಕೊಂಡು ಚರಿತ್ರೆ, ಅರ್ಥಸಾಧನೆ, ಸಾಂಸ್ಕೃತಿಕ ವಿಶೇಷ ಇವೆಲ್ಲ ಸೇರಿದಂತೆ ಒಂದು ಇತಿಹಾಸ ಖಂಡವನ್ನು ನನ್ನ ಸ್ವಂತ ಅಭ್ಯಾಸದ ಫಲವೆಂಬಂತೆ ಬರೆದು ಡಾಕ್ಟೊರೇಟ್

ಮಹಾಪ್ರಬಂಧವನ್ನು ತಯಾರು ಮಾಡಬಹುದಿತ್ತು. ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಆಗಿನ್ನೂ ಈ ಡಾಕ್ಟೊರೇಟ್ ಪದವೀದಾನವಿದ್ದಿ ಇರಲಿಲ್ಲವಾದ್ದರಿಂದ ಬೇರೆ ವಿಶ್ವವಿದ್ಯಾನಿಲಯಗಳಿಗೆ ಕಳಿಸಬಹುದಿತ್ತು. ಆದರೆ ಅದು ತಸ್ಕರವೃತ್ತಿಯಲ್ಲವೆ? ನನ್ನದಲ್ಲ ಆ ಕಿಲಸ; ಇನ್ನೊಬ್ಬರು ತಮ್ಮ ಪ್ರಯೋಜನಕ್ಕಾಗಿ, ಬಳಕೆಗಾಗಿ ಸಾಧಿಸಿದ್ದ, ಅಟ್ಟಿದ್ದ ಸಿದ್ಧಾನ್ನ. ಆದುದರಿಂದ ಎರಡು ಮೂರು ವರ್ಷ ಅದು ನನ್ನಲ್ಲಿಯೇ ಮರೆತು ಇದ್ದು, ನಾನು ಡಾಕ್ಟರವರದೇ ಇರಬಹುದೆಂದು ಅವರ ಮನೆಗೆ ಕಳಿಸಿದೆ. ಇದು ನನಗೆ ಯಾರು ಕೊಟ್ಟರು, ಹೇಗೆ ಬಂತು ಎಂಬುದನ್ನು ತಿಳಿಸದೆ, 'ಇದು ತಮ್ಮದೇ ಇರಬಹುದೆಂದು ಎಣಿಸಿ ಕಳಿಸಿದ್ದೇನೆ' ಎಂದು ಬರೆದು ಕಳಿಸಿಕೊಟ್ಟೆ. ಅವರು ಬೆಂಗಳೂರಿಗೆ ಈಚೆಗೆ ಸೆಂಟ್ರಲ್ ಕಾಲೇಜಿನವರ ಆಹ್ವಾನದ ಮೇಲೆ ಸನ್ಮಾನಕ್ಕೆ ಬಂದಿದ್ದಾಗ ಅದಕ್ಕೆ ನನಗೆ ಅಭಿನಂದನೆ ಮಾಡಿದರು. ದೊಡ್ಡ ವಿದ್ವಾಂಸರು ಅವರು. ಮೂರು ವರ್ಷ ಜರ್ಮನಿಯಲ್ಲಿ ಓದಿ ಡಾಕ್ಟೊರೇಟ್ ತೆಗೆದುಕೊಂಡು ಬರಲು ಹೋಗಿದ್ದವರು. ೧೩-೧೪ ತಿಂಗಳಲ್ಲಿ ಆ ಪದವಿ ಪಡೆದು, 'ನೀವಿನ್ನು ಕಲಿಯಬೇಕಾದ್ದು ಇಲ್ಲಿ ಏನೂ ಇಲ್ಲ; ಸಿಮ್ಲಾಗೆ ಹೋಗಿ' ಎಂದು ಹೇಳಿಸಿಕೊಂಡು ಬಂದಿದ್ದವರು. ಅಷ್ಟು ಜಾಗ್ರತೆ ಮುಗಿಸಿಕೊಂಡಲೆಂದು ಅವರು ಹೇಳಿದ ಮಾತಿನಲ್ಲಿ ನಂಬಿಕೆಯಿಲ್ಲದೆ ಸ್ಕಾಲರ್‌ಷಿಪ್ ಕೊಟ್ಟು ಕಳಿಸಿದ ನಮ್ಮ ಸರ್ಕಾರದವರು ಅವರನ್ನು ಆಕ್ಷೇಪಿಸಿದ್ದುಂಟು. ಅವರ ಅಭ್ಯಾಸವಿಧಾನ, ವಿಷಯವರ್ಗೀಕರಣ, ತೀರ್ಮಾನಗಳು, ಯಾವುದನ್ನು ನಾವು German Scholarship ಎನ್ನುತ್ತೇವೊ ಅದರ ಪ್ರತಿಫಲನ. ಅವರ ಸಂಶೋಧನೆಯ ಮಾರ್ಗವನ್ನು ಕನ್ನಡ ಸಾಹಿತ್ಯ ಚರಿತ್ರೆಯ ಅನೇಕ ವಿಷಯಗಳ ಪರಾಮರ್ಶೆಗೆ ದುಡಿಸಿರುವುದನ್ನು ನಾವು ಕಂಡಿದ್ದೇವೆ. ಈ ಕತೆಯ ವಿವರಗಳು ಲೋಕಕ್ಕೆ ಗೊತ್ತಿಲ್ಲವಾದರೂ ಅವರ ಮತ್ತು ರಾಯರ ಒಂದು ಸಂಬಂಧದಲ್ಲಿ ಇದನ್ನು ತಿಳಿಸಿದ ಹೊರತು ನನ್ನ ಮನಸ್ಸು ಹಗುರವಾಗುವುದಿಲ್ಲವೆಂದು ಇಲ್ಲಿ ಹೇಳಿದ್ದೇನೆ. ಅವರ ಅನೇಕ ಪುಸ್ತಕಗಳು, ನೋಟ್ಸು ಇಂಥವೆಲ್ಲ ಡಾ. ಚಿದಾನಂದ ಮೂರ್ತಿ ಅವರ ಉಪಕಾರದಿಂದಾಗಿ ಬೆಂಗಳೂರು ವಿಶ್ವವಿದ್ಯಾಲಯಕ್ಕೆ ಈಚೆಗೆ ದೊರಕಿವೆ ಎಂದು ಕೇಳಿ ಮನಸ್ಸಿಗೆ ಸಂತೋಷವಾಗಿದೆ.

ರಾಯರ ಉಡುಪಿನ ವಿಷಯ ಒಂದು ಮಾತು ಹೇಳಿದೆ: ಯಾವಾಗಲೂ ಅಚ್ಚುಕಟ್ಟು ಎಂದು. ಸಾಧಾರಣವಾಗಿ ಕೋಟು, ಪೇರಾಯಿ, ಬೂಟು, ರುಮಾಲೆ ಹಾಕಿಕೊಳ್ಳುತ್ತಿದ್ದರೂ ಕೆಲವೇಳೆ ದೊಡ್ಡ ಲಾಂಗ್‌ಕೋಟ್ ಹಾಕಿ, ಅರಮನೆಗೆ ಹೋಗುವಾಗ 'ಕಮರ್ ಬಂದ್' ಕಟ್ಟುತ್ತಿದ್ದುದು ಉಂಟು. ಇನ್ನು ಕೆಲವು ಸಲ ಮುಕ್ಕಾಲು ಅಂಗುಲ ಅಗಲದ ರೇಶಿಮೆ ಅಂಚಿನ ಪಂಚೆ ಉಟ್ಟು, ಬಾಂದಿನವರದೆನ್ನುವ ಅಥವಾ ಪೂನಾ ಪಾಪಾಸು ಅಥವಾ ಕಾಶೀಯಾತ್ರೆ ಜೋಡು ಎಂಬ ತರಹದ ಪಾದರಕ್ಷೆಯನ್ನು ಹಾಕುತ್ತಿದ್ದರು. ನಮ್ಮ ಗುಂಪಿನಲ್ಲಿ ಇನ್ನಾರೂ ಈ ಅಲಂಕಾರ ಮಾಡಿಕೊಳ್ಳುತ್ತಿರಲಿಲ್ಲ. ಅಪರೂಪವಾಗಿ ನನ್ನ ಇನ್ನೊಬ್ಬ ಸ್ನೇಹಿತರಾದ ಎಚ್. ಯೋಗನರಸಿಂಹಂ ಅವರು ಒಳ್ಳೆಯ ರೇಷ್ಮೆಯ ಸಿಲುವಂಗಿ ಹಾಕಿ ಜರತಾರಿ ಪಂಚೆಯುಟ್ಟು ಈ ಕಾಶೀಯಾತ್ರೆ ಪಾಪಾಸು ಹಾಕುತ್ತಿದ್ದುದುಂಟು. ಅವರು ಎತ್ತರದಲ್ಲಿ ಇವರಿಗಿಂತ ಕಡಮೆ. ಇಬ್ಬರೂ ತಾಂಬೂಲ ಪ್ರಿಯರಾಗಿದ್ದರೂ ಯೋಗನರಸಿಂಹಂ ಅವರ ತಾಂಬೂಲಪ್ರೀತಿ ಇನ್ನಷ್ಟು ರಸಿಕವಾದ್ದು.

ಸಾಮಾನ್ಯವಾಗಿ ಚಿನ್ನಾಗಿ ಇಸ್ತ್ರಿ ಮಾಡಿ ತೊಟ್ಟ ಬಟ್ಟೆಗಳು. ತೀಡಿ ಒಂದೇ ಹೆಬ್ಬೆರಳು ಆಗಲದ ಜರಿಯಿದ್ದ ರುಮಾಲು ರಾಯರದು. ಒಂದು ದಿನವೂ ಅವರ ಆಕೃತಿಗೆ ಮುಕ್ಕು ಬಂದುದಿಲ್ಲ. ಈ ಅಚ್ಚುಕಟ್ಟು ಅವರ ಜೀವನದಲ್ಲಿ ಬಹುದೊಡ್ಡ ಲಕ್ಷಣ. ಮೂವರು ಹೆಣ್ಣುಮಕ್ಕಳ ಮದುವೆ ಮಾಡಿದ್ದುದರಿಂದ ಅಷ್ಟೇನೂ ಸಂಪನ್ನವಾಗಿ ಇರಲಿಲ್ಲ. ಇತರ ಯಾವಯಾವುದೊ ಕಷ್ಟನಿಷ್ಠುರಗಳಿಗೆ ಸಿಕ್ಕಿ ಚಿಂತೆ ಬಂದಾಗ ತಮ್ಮ ಬೋಳು ತಲೆಯ ಮೇಲೆ ತರ್ಜನಿ ಮತ್ತು ಮಧ್ಯಮ ಬೆರಳುಗಳನ್ನು ಇಟ್ಟು ಬಡಿದುಕೊಳ್ಳುತ್ತಿದ್ದುದು ಅವರದೇ ವಿಶೇಷಕ್ರಿಯೆ. ಎಂಥ ಊಟಕ್ಕೆ ಎಲ್ಲಿಯೇ ಕುಳಿತಿರಲಿ, ಬಡಿಸಿದ ಒಂದಿಷ್ಟನ್ನೂ ಚೆಲ್ಲದೆ ಎಲೆಯನ್ನೆಲ್ಲ ಸವರಿದಂತೆ ಖಾಲಿಮಾಡಿ ನಾನಿನ್ನೂ ಊಟವೇ ಮಾಡಿಲ್ಲ ಎನ್ನುತ್ತಿದ್ದ ರಾಯರ ಒಂದು ದೃಶ್ಯ ನನಗಿಂತ ಸಣ್ಣ ವಯಸ್ಸಿನ ನನ್ನ ಗೆಳೆಯರಾದ ರಾಜರತ್ನಂ ಅವರಿನ್ನೊಬ್ಬರ ಲಕ್ಷಣ. ಬಡಿಸಿದುದನ್ನು ಚೆಲ್ಲಬಾರದು ಎಂಬುದು ಸೂತ್ರ. ಇದು ವಿಸ್ತೃತಗೊಂಡು ಜೀವನದ ಎಲ್ಲ ವ್ಯಾಪಾರಗಳಿಗೂ ಹಬ್ಬಿತ್ತು. ಕನ್ನಡದಲ್ಲಿ ಒಂದು ಮಾತಿದೆ: 'ಪಾಲಿಗೆ ಬಂದದ್ದು ಪಂಚಾಮೃತ' ಎಂದು ಸಿಹಿಯೊ ಕಹಿಯೊ ಲಾಭವೊ ನಷ್ಟವೊ–ನಮ್ಮ ಪಾಲಿಗೆ ಬಂದುದನ್ನು ನಾವು ಅನುಭವಿಸಿ ತೀರಬೇಕು. ವೃಥಾ ನೋವನ್ನು ಇನ್ನೊಬ್ಬರಲ್ಲಿ ಹೇಳಿಕೊಳ್ಳಬೇಕೇಕೆ? ಒಬ್ಬೊಬ್ಬರ ಜೀವನದಲ್ಲಿಯೂ ಒಂದು ಖಂಡುಗ ಕ್ಲೇಶಕಾರ್ಪಣ್ಯ ಇರುತ್ತವೆ. ಅವರವರದನ್ನು ಅವರವರು ಅನುಭವಿಸಿಕೊಳ್ಳಬೇಕು. ಇನ್ನೊಬ್ಬನ ಮೇಲೆ ನಮ್ಮವನ್ನು ಸುರಿಯುವುದು ಅಸಾಮಾಜಿಕ ಕೃತ್ಯ. ನೆತ್ತುದ್ರಿಯಾಗಿ ಎರಡು ನಿಮಿಷ ಜೊತೆಯಲ್ಲಿ ಕಾಲ ಕಳೆಯೋಣ ಎಂದು ಬಂದ ಸ್ನೇಹಿತರು, ಗುರುತಿನವರು ಸುಮ್ಮನೆ ದುರ್ಭರವಾದ ತಮ್ಮ ಕಷ್ಟವನ್ನು ತೋಡಿಕೊಂಡು ಇತರರ ಬದುಕನ್ನು ಗಾಸಿಗೊಳಿಸುವುದು ಸುತರಾಂ ತಕ್ಕುದಲ್ಲ. ಅಂಥವರು ಸಮಾಜದ್ರೋಹಿಗಳು ಎಂಬಂತೆ ಒಂದು ಸಲ ಅವರು ನುಡಿದುದುಂಟು. ಅವರನ್ನು ನೆನಸಿಕೊಂಡಾಗೆಲ್ಲ ನನ್ನ ಕಣ್ಣಿಗೆ ಅವರ ಸೌಜನ್ಯ, ಸವಿನುಡಿ, ಮನಶ್ಶಾಂತಿ, ಸಮಾಧಾನ, ತಮ್ಮನ್ನು ಕುರಿತು ಹೆಚ್ಚಾಗಿ ನುಡಿಯಲು ಇಷ್ಟವಿಲ್ಲದ ಮನೋಭಾವ, ನಾಜೂಕು, ಯಾವ ಸಮಯದಲ್ಲಿಯೇ ಆಗಲಿ ಸಜ್ಜಾಗಿರುವ, ನೆರವಿಗೆ ಸಿದ್ಧವಾಗಿರುವ ಜೀವನವೃತ್ತಿ – ಇವು ಒಂದು ಬದುಕನ್ನು ನಡಸಬೇಕಾದ ಧರ್ಮದ ಒಂದು ಸೂತ್ರವನ್ನು, ಮನಸ್ಸು ಮಾತುಗಳು, ನಡವಳಿಕೆಯ ಒಂದು ಹದವನ್ನೂ ಪ್ರಕಾರವನ್ನೂ ಕಾಣಿಸುತ್ತದೆ. ಸದ್ದುಗದ್ದಲವಿಲ್ಲದೆ ತಮ್ಮ ಬದುಕನ್ನು ತಾವು ನಡಸಿಕೊಂಡು ಹೋದವರು ಅವರು. ಎಲ್ಲ ಕಾಲಕ್ಕೂ ಎಲ್ಲೆಲ್ಲಿಯೂ ತನ್ನ ಮಿತಿಯಲ್ಲಿ ಉಪಕಾರಿಯಾದ ಅಂಥ ಜೀವ ಯಾರ ಜೊತೆಗೇ ಆಗಲಿ ಇರುವುದು ಒಂದು ದೊಡ್ಡ ಬಲವೇ; ಊರೆಯೇ.

ಪಂಡಿತ ರಾಳ್ಳಪಲ್ಲಿ ಅನಂತಕೃಷ್ಣಶರ್ಮ

ಕಾಲೇಜು ವ್ಯಾಸಂಗಕ್ಕಾಗಿ ನಾನು ಮೈಸೂರು ಮಹಾರಾಜ ಕಾಲೇಜನ್ನು ೧೯೧೭ರಲ್ಲಿ ಸೇರಿದಾಗ ನನ್ನ ಸ್ನೇಹಿತರಾದ ಹೊಸೂರು ಬಿ. ಸೀತಾರಾಮಯ್ಯ ತೆಲುಗನ್ನು ಎರಡನೆಯ ಭಾಷೆಯನ್ನಾಗಿ ತೆಗೆದುಕೊಂಡು ಸೇರಿದರು. ನಮ್ಮಿಬ್ಬರ ಸ್ನೇಹ ಅವರು ತೀರಿಕೊಳ್ಳುವ ಈಚಿನ ಐದಾರು ವರ್ಷಗಳವರೆಗೂ ನಡೆಯಿತು. ನಾನು ಕನ್ನಡ ವಿದ್ಯಾರ್ಥಿ. ನಮಗೆ ಡಿ. ಶ್ರೀನಿವಾಸ ಆಚಾರ್ಯರು, ಕಾನಕಾನಹಳ್ಳಿ ವರದಾಚಾರ್ಯರು, ಬಿ. ಕೃಷ್ಣಪ್ಪನವರು ಕನ್ನಡದ ತರಗತಿಗಳನ್ನು ಕ್ರಮವಾಗಿ ತೆಗೆದುಕೊಳ್ಳುತ್ತಿದ್ದರು. ತೆಲುಗಿಗೆ ತಮಿಳಿಗೆ ಇದ್ದವರು ಒಬ್ಬೊಬ್ಬರೇ. ಮೈಸೂರಲ್ಲಿ ತೆಲುಗಿಗೆ ಹೆಚ್ಚು ಬಳಕೆ ಇರಲಿಲ್ಲ. ಮೈಸೂರು, ಹಾಸನ, ಕಡೂರು (ಈಗಿನ ಚಿಕ್ಕಮಗಳೂರು), ಶಿವಮೊಗ್ಗ ಜಿಲ್ಲೆಗಳಲ್ಲಿ – ಎಂದರೆ ಸುಮಾರು ಮಲೆನಾಡು ಮತ್ತು ಉಪಪ್ರಾಂತಗಳಲ್ಲಿ – ಅಪರೂಪಕ್ಕೆ ತೆಲುಗು ಕೇಳುತ್ತಿತ್ತೇ ಹೊರತು ಅವು ತೆಲುಗಿಗೆ ದೂರದ ಪ್ರಾಂತಗಳು. ತರಗತಿಗಳು ತೆರೆದು ಹೆಚ್ಚು ದಿನಗಳು ಕಳೆದಿರಲಿಲ್ಲ. ಒಮ್ಮೆ ನಾನೂ ಸೀತಾರಾಮಯ್ಯನವರೂ ತಿರುಗಾಟಕ್ಕೆ ಹೋದಾಗ – ಅವರು ಹೈಸ್ಕೂಲ್ ಯು. ಇ. ಕಾಲದಿಂದಲೂ ಹೊಟೇಲಲ್ಲಿ ಹಾಸ್ಟೆಲಲ್ಲಿ ಇರುತ್ತಿದ್ದವರು – ತಮ್ಮ ತೆಲುಗು ಪಂಡಿತರನ್ನು ಕುರಿತು ತುಂಬಾ ಮೆಚ್ಚುಗೆಯ ಮಾತುಗಳನ್ನು ನುಡಿದರು. ಆ ವರ್ಷ ಅವರಿಗೆ ಭೋಗರಾಜು ನಾರಾಯಣಮೂರ್ತಿ ಅವರ 'ನೌಕಾಭಂಗಮು' ಎಂಬ ಹೆಸರಿನ ರವೀಂದ್ರನಾಥಟಾಗೋರರ ('ನೌಕಾಡುಬಿ'– ಇಂಗ್ಲಿಷ್‌ನಲ್ಲಿ The Wreck) ಕಾದಂಬರಿ ಗದ್ಯಪಠ್ಯವಾಗಿತ್ತು. ಪದ್ಯದಲ್ಲಿ ಬಹುಶಃ ತಿಕ್ಕನನ ವಿರಾಟಪರ್ವ, ಉದ್ಯೋಗಪರ್ವ ಒಂದೆರಡು ವರ್ಷಗಳ ಪಾಠವಾಯಿತು. 'ಆ ಪಾಠಗಳು ಬಹು ಸ್ವಾರಸ್ಯವಾಗಿರುತ್ತವೆ. ಪಂಡಿತರು ಓದುವ ರೀತಿ ಹೀಗೆ: ಚೊಕ್ಕವಾಗಿ ಸ್ಫುಟವಾಗಿ ಇರುತ್ತದೆ. ನಮ್ಮ ಪಂಡಿತರ ಪರಿಚಯ ಮಾಡಿಕೊಳ್ಳಬೇಕಯ್ಯ' ಎಂದು ಹೇಳಿ ಒಂದು ಭಾನುವಾರ ಬೆಳಗ್ಗೆ ನನ್ನನ್ನು ಅವರಲ್ಲಿಗೆ ಕರೆದುಕೊಂಡು ಹೋದರು. ಆಗ ಅವರು ಬಜ್ಜಣ್ಣ ಲೈನ್ಸ್ ಅಲ್ಲಿ ಇದ್ದ ಒಂದು ಮನೆಯ ಹಿಂಭಾಗದಲ್ಲಿ – ಔಟ್‌ಹೌಸ್‌ನಲ್ಲಿ ಇದ್ದರು. ಸ್ನಾನ ಮಾಡಿ ಆಗಿತ್ತು. ಬಹುಶಃ ಒಂದು ಹಳದಿ ನಾಮ ಹಾಕಿದ್ದರು. ಸುರಚಿತವಾದ ಆಕೃತಿ. ಮೈ ಬಣ್ಣ ಬಿಳುಪು. ಮುಖ, ಶಿರಸ್ಸು, ಹಣೆ ಯಾರ ಕಣ್ಣಿಗೂ ಆಕರ್ಷಕ. ಆ ಕಣ್ಣ ಹೊಳಪು ಕೊನೆಯವರೆಗೂ ಮಾಸಿರಲಿಲ್ಲ. ಆಗ ಇನ್ನೂ ಎಳಸಾದ್ದು, ತೀಕ್ಷ್ಣಕಾಂತಿಯುಳ್ಳದ್ದು. ಅಷ್ಟು ಮುಂಚೆಗಾಗಲೇ ನನ್ನ ಸ್ನೇಹಿತರನ್ನು ಕಂಡರೆ ಅವರಿಗೆ ಪ್ರೀತಿ ಉಂಟಾಗಿತ್ತು. ಅವರು ನಮ್ಮಿಬ್ಬರನ್ನೂ ಸ್ವಾಗತಿಸಿದರು. ಅರ್ಧ ಗಂಟೆಯ ಕಾಲ ಅವರ ಮನೆಯಲ್ಲಿದ್ದು ಅದೂ ಇದೂ ಮಾತಾಡುತ್ತಿದ್ದೆವು. ನನ್ನ ಹರುಕು ಮುರುಕು ತೆಲುಗನ್ನು ಇಂಥ ಸನ್ನಿವೇಶಗಳಲ್ಲಿ ಕುದುರಿಸಿಕೊಳ್ಳಬೇಕಾಗಿದ್ದುದರಿಂದ ನಾನು ತೆಲುಗಲ್ಲಿಯೇ ಮಾತಾಡುವುದು, ತೆಲುಗು ಒದಗದಿದ್ದಾಗ ಇಂಗ್ಲಿಷ್ ಮಾತನ್ನೊ ಕನ್ನಡವನ್ನೊ ಬಳಸುವುದು ಇಂದಿಗೂ ವಾಡಿಕೆಯಲ್ಲಿದೆ.

ಅವರನ್ನು ಕಂಡಾಗಲೆಲ್ಲ ಅವರು ಕನ್ನಡದಲ್ಲಿಯೇ ಮಾತನಾಡುತ್ತಿದ್ದರು. ಈ ಬೆರಕೆಯ ತೆಲುಗನ್ನೇ ಉಪಯೋಗಿಸುವುದು ನನ್ನ ರೂಢಿ. ರೂಢಿ ತಪ್ಪಿದರೆ ಅಷ್ಟೂ ಮರೆತುಹೋಗುತ್ತದಲ್ಲವೆ – ಎಂದು. ಇದು ಅವರಿಗೆ ಎಷ್ಟು ತಮಾಷೆಯಾಗಿ ಕಾಣುವುದೋ ನಾನರಿಯೆ. ಮೈಸೂರಲ್ಲಿಯೇ ೪೦–೪೫ ವರ್ಷ ಕಳೆದ ಅವರಿಗೆ ಅಚ್ಚಕನ್ನಡ ಮಾತುಗಾರಿಕೆ ಲಭಿಸಿದೆ. ಬಹು ಚೊಕ್ಕವಾದ ಕನ್ನಡ ಬರೆಯುವ, ನುಡಿಯುವ ಅಭ್ಯಾಸ ಅವರಿಗುಂಟು. ಅವರ ಸ್ನೇಹಿತರೆಲ್ಲ ಕನ್ನಡಿಗರು. ಸಂಗೀತದ ಪ್ರಪಂಚದವರೂ ಕನ್ನಡಿಗರು. ಹೀಗಾಗಿ ಅಚ್ಚಕನ್ನಡಿಗರಾದ ಯಾರ ಶೈಲಿಗೂ ಅವರದು ಎರಡನೆಯದಲ್ಲ. ಯಾವ ಶೈಲಿಯನ್ನು ಅವರು ತೆಲುಗು ಬರವಣಿಗೆಗೆ ಬಳಸಿದ್ದಾರೊ ಅದೇ ಗಂಡುಶೈಲಿಯನ್ನು ಕನ್ನಡದ ಮಾತುಗಾರಿಕೆಯಲ್ಲಿ ಬಳಸಿ ಇದಕ್ಕೆ ಒಂದು ವಿಶಿಷ್ಟ ರೀತಿಯನ್ನು ದಾನ ಮಾಡಿದ್ದಾರೆ. ಬಹುತರ ಸಿದ್ದವನಹಳ್ಳಿ ಕೃಷ್ಣಶರ್ಮರ ಶೈಲಿಗೆ ಇವರದೇ ಧಾತು; ಮಾದರಿ. ಆದುದರಿಂದ ಈ ಕಾಲದ ನಮ್ಮ ವರ್ಣನೆಯ, ವಿಮರ್ಶೆಯ, ಟೀಕೆಗಳ ಒಂದು ಲಕ್ಷಣಕ್ಕೆ ಅವರ ಕೊಡುಗೆ ಅತಿಶಯ ವಿಲಾಸವನ್ನು ತಂದುಕೊಟ್ಟಿದೆಯೆಂದು ನನ್ನ ನಂಬಿಕೆ.

ಆಚಾರಶೀಲರಾದ ಅವರು ಮಡಿಯಲ್ಲಿರುವಾಗ, ಒಂದು ಷರಟನ್ನು ಹಾಕಿಯೊ ಶಾಲನ್ನು ಹೊದೆದೊ ತಿರುಗಾಡುವಾಗ, ಮೈಸೂರವರ ತರಹದ ಕೋಟು, ಉತ್ತರೀಯ, ರುಮಾಲನ್ನೊ ಧರಿಸಿದಾಗ, ಈ ಒಂದೊಂದು ವೇಷದಲ್ಲಿಯೂ ಆ ಆಕೃತಿ ಖಚಿತವಾದ ಒಂದು ವ್ಯಕ್ತಿತ್ವವುಳ್ಳದ್ದು. ಹೀಗೆಂದು ವರ್ಣಿಸಲಾಗದ ತಲೆಯ, ಮುಖದ ಮಾಟ ಅವರದು. ಒಮ್ಮೆ 'ರೂಪಂ' ಪತ್ರಿಕೆಯ ಸಂಪಾದಕರಾದ ಒ. ಸಿ. ಗಂಗೂಲಿ ಮೈಸೂರು ಯೂನಿವರ್ಸಿಟಿ ಲೈಬ್ರರಿಯ ಒಳಗನ್ನು ನೋಡಿಕೊಂಡು ಬರುತ್ತಿರುವಾಗ, ಇವರನ್ನು ಎದುರಿಗೆ ಕಂಡು ಒಂದು ನಿಮಿಷ ಮಾತನಾಡಿ ತಟಕ್ಕನೆ ಹಾಗೇ ಇರಹೇಳಿ, ತಾವು ಬಂದಿದ್ದ ಮೋಟರಲ್ಲಿಟ್ಟಿದ್ದ ಕ್ಯಾಮರ ತೆಗೆದುಕೊಂಡು ಬಂದು ಅವರ ಆಕೃತಿ ಚಿತ್ರ ತೆಗೆದುಕೊಂಡು ಹೋದರು. ಅಷ್ಟು ಕಣ್ಣಿಗೆ ಹೊಡೆಯುವ ರೂಪ ಅವರದು. ಅರ್ಧ ಓಲಲ್ಲಿ ಆಗಲಿ, ಪೂರ್ತಿ ಎದುರಿಗಾಗಲಿ ಆ ಕಣ್ಣು ಮೂಗುಗಳ ಭಾವ ಯಾರನ್ನೂ ಆಕರ್ಷಿಸುತ್ತದೆ. ಈಗ್ಗೆ ಕೆಲವು ವರ್ಷದ ಹಿಂದೆ ತಾನೇ ಅವರ ಆಕೃತಿ ಚಿತ್ರವನ್ನು ಕ್ಯಾಮರಾದಲ್ಲಿ ತೆಗೆದ ಯುವಕ ಛಾಯಾ ಚಿತ್ರಕಾರ ಸೋಮಶೇಖರ್ ಆ ಕಣ್ಣುಗಳಿಗೆ ಮಾರುಹೋಗಿದ್ದಾರೆ. ಕೋಟು, ರುಮಾಲೆ ಹಾಕಿದಾಗ ಸುಮಾರು ಅವರು ರೇಶಿಮೆಗೆ ಒಲಿದಿದ್ದರು. ಅರಮನೆಗೆ ಹೋದಾಗ ಹೊದೆವ ಶಾಲು, ರುಮಾಲು ಒಂದು ದಿಟ್ಟತನವನ್ನೂ ಚುರುಕನ್ನೂ ಹಾಯಿಸುತ್ತಿದ್ದುದು ಅವರ ವ್ಯಕ್ತಿತ್ವದ ಇನ್ನೊಂದು ಮುಖವನ್ನು ಕಾಣಿಸುತ್ತಿತ್ತು. ಶನಿವಾರಗಳ ದಿನ ಮನೆಯಲ್ಲಿ ಭಜನೆ ಇಟ್ಟುಕೊಂಡಿದ್ದಾಗ ಕೆಲವು ಮಂತ್ರಗಳನ್ನು ಮೆಲ್ಲಗೆ ನುಡಿಯುತ್ತ ಅಂಗುಳಿನ್ಯಾಸ ಕರನ್ಯಾಸ ಮಾಡುವಾಗ, ಅಥವಾ ಯಾವುದನ್ನಾದರೂ ಸ್ಪಷ್ಟಪಡಿಸುವಾಗ, ಯಾವುದಾದರೂ ಕೀರ್ತನೆಯ ವಿಶೇಷಾಂಶವನ್ನು ಸ್ಪಷ್ಟಪಡಿಸುವಾಗ, ನಾದಶುದ್ಧಿಯಲ್ಲಿ ಭಾವಾರ್ಥ ಪ್ರಕಾಶವಾಗುವಂತೆ ಉಚ್ಚರಿಸುವಾಗ ಇತರ ಕಡೆ ಕಾಣದ ಈ ಅಂಗ ವಿನ್ಯಾಸ ಕಾಣುತ್ತಿತ್ತು. ಹೆಜ್ಜೆ ದೃಢ; ಸಾಮಾನ್ಯವಾಗಿ – ಒಂದೆರಡು ಸಲ ಅವರು ಕಾಹಿಲೆಬಿದ್ದಾಗ ಹೊರತು – ಅರೋಗದೃಢಕಾಯರು. ಈಗ ಹನ್ನೆರಡು ವರ್ಷಗಳ ಹಿಂದೆ ಮೂತ್ರಕೋಶದ ಒಂದು

ಪರೀಕ್ಷೆಗೆ ತಿರುಪತಿಯಲ್ಲಿದ್ದವರು ಬೆಂಗಳೂರಿಗೆ ಬಂದಾಗ, ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಡಾ. ಜಯರಾಂ ಅವರು ಇವರಿಗೆ ಶಸ್ತ್ರಚಿಕಿತ್ಸೆ ಮಾಡುವ ಮೊದಲು ಇವರ ವಯಸ್ಸನ್ನು ಕೇಳಿ, 'Strong at 72' ಎಂದು ಯಾವ ಸಂದೇಹ, ಆತಂಕಗಳನ್ನೂ ವ್ಯಕ್ತಪಡಿಸದೆ ಶಸ್ತ್ರಚಿಕಿತ್ಸೆ ನಡೆಸಿದರಂತೆ. ಇದನ್ನೆಲ್ಲ ಹೇಳುವ ಕಾರಣ, ದೇಹದ ಆರೋಗ್ಯ, ಮನಸ್ಸಿನ ಆರೋಗ್ಯ ಅವರ ಗುಣಲಕ್ಷಣಗಳ ಆರೋಗತೆಗೆ, ಚಾರಿತ್ರ್ಯಕ್ಕೆ ಪ್ರಕಾಶಕೆಯಾಗಿತ್ತು ಎಂಬುದನ್ನು ತಿಳಿಸಲು.

ಸಾಹಿತ್ಯವನ್ನು ಕುರಿತು ಅವರು ಮಾತನಾಡುವಾಗ, ಬರೆಯುವಾಗ, ಸಂಗೀತವನ್ನು ಕುರಿತು ನುಡಿಯುವಾಗ, ರಾಗಕೀರ್ತನೆಯನ್ನು ಪ್ರತಿಪಾದಿಸುವಾಗ ಇಡೀ ಆ ಶೀಲಸಂಪತ್ತಿ ಪ್ರಕಾಶಕ್ಕೆ ಬರುತ್ತಿತ್ತು. ಯಾವುದನ್ನು integrity, character, virile ಎನ್ನುತ್ತಾರೊ – ಆ ಮೂರೂ ಇಲ್ಲಿ ಮಿಳಿತವಾಗುತ್ತವೆ. ಅವರನ್ನು ಒಮ್ಮೆ ಕಂಡವರು ಯಾರೂ ಅವರಲ್ಲಿ ಈ ಲಕ್ಷಣವನ್ನು ಗುರುತಿಸಬಹುದು. ಯಾವುದನ್ನೂ ಖಡಾಖಂಡಿತವಾಗಿ ನುಡಿಯುತ್ತಾರೆಯಾಗಿ ಅವರನ್ನು ಒಪ್ಪುವವರು ಒಪ್ಪುತ್ತಾರೆ, ಬಿಡುವವರು ಬಿಡುತ್ತಾರೆ. ಹಾಗೆಯೇ ಅವರಲ್ಲಿ Compromise – ರಾಜಿ, ಕಬೂಲಿ – ಬುದ್ಧಿ ಇಲ್ಲ. ತನಗೆ ಯಾವುದು ಒಪ್ಪುತ್ತದೆ, ಯಾವುದು ಒಪ್ಪುವುದಿಲ್ಲ, ಸರಿ ಸರಿಯಿಲ್ಲ ಎಂದು ಅವರು ಒಂದು ತೀರ್ಮಾನಕ್ಕೆ ಬಂದಿರುತ್ತಾರಾಗಿ – ಇತರರಿಗೆ ರುಚಿಸಲಿ ಬಿಡಲಿ – ಅದನ್ನು ನುಡಿಯುತ್ತಾರೆ.

ಸಣ್ಣ ವಯಸ್ಸಿನಲ್ಲಿಯೇ ಅನಂತಪುರದ ಬಳಿ ಇರುವ ರಾಳ್ಳಪಲ್ಲಿಯಿಂದ ಮೈಸೂರಿಗೆ ಬಂದು ಪರಕಾಲಮಠದ ಆವರಣದಲ್ಲಿ ಸಂಸ್ಕೃತದ, ಶಾಸ್ತ್ರಗಳ ವ್ಯಾಸಂಗ ಮಾಡಿದರು. ಸ್ಫುರದ್ರೂಪಿಯೂ ಮೇಧಾವಿಯೂ ಆಗಿ ಬೇಗ ಯಾವುದನ್ನೂ ಗ್ರಹಿಸುವವರೂ ನಿರ್ಭೀತಿ ನಿರ್ದಾಕ್ಷಿಣ್ಯಗಳಿಂದ ಎಂಥ ಸಂದರ್ಭಗಳಲ್ಲಿಯೂ ನುಡಿಯುವವರೂ ಆದ ಇವರನ್ನು ಕಂಡರೆ ವಿದ್ವಾಂಸರಾದ ಆಗಿನ ಪರಕಾಲಮಠದ ಯತೀಂದ್ರರಿಗೆ ಬಹು ವಿಶ್ವಾಸ ಉಂಟಾಯಿತಂತೆ. ಸ್ವರ ವ್ಯಂಜನ ಲಕ್ಷಣಗಳನ್ನು ಹಿಡಿದು ಅರ್ಥವಿಶದವಾಗುವಂತೆ ಸುಶ್ರಾವ್ಯವಾಗಿ ಕಾವ್ಯಗಳನ್ನು ಓದುತ್ತಿದ್ದ ಇವರಿಂದ ಭಾರತವನ್ನೂ ರಾಮಾಯಣವನ್ನೂ ಇತರ ಕಾವ್ಯ ಭಾಗಗಳನ್ನೂ ಓದಿಸಿ ಸ್ವಾಮಿಗಳು ಕೇಳುತ್ತಿದ್ದರಂತೆ. ಮಹಾರಾಜ ಕಾಲೇಜಿನ ಪ್ರಿನ್ಸಿಪಾಲರಾದ ಕಟ್ಟಮಂಚಿ ರಾಮಲಿಂಗಂ ರೆಡ್ಡಿ ಅವರು ಪಂಡಿತರನ್ನು ತಮ್ಮ ಕಾಲೇಜಿನಲ್ಲಿ ತೆಲುಗು ಉಪಾಧ್ಯಾಯರಾಗಿ ಬರಲು ಆಹ್ವಾನಿಸಿದರಂತೆ. 'ನನಗೆ ಯಾವ ಪದವಿಯೂ ಇಲ್ಲ. ನನ್ನನ್ನು ಹೇಗೆ ನೇಮಿಸುತ್ತೀರಿ?' ಎಂದಾಗ, ರೆಡ್ಡಿಯವರು 'ಡಿಗ್ರಿ ನಾನು ಕೊಟ್ಟಿದ್ದೇನೆ, ನೀವು ಬನ್ನಿ. ನಮ್ಮ ವಿದ್ಯಾರ್ಥಿಗಳಿಗೆ ಭಾರತವನ್ನು ಓದಿ, ಸಾಕು' ಎಂದರಂತೆ. ಆ ಕಾಲ ದೊಡ್ಡದು. ಅದಕ್ಕೆ ತಕ್ಕ ಯೋಗ್ಯತೆ, ದೊಡ್ಡತನ ರೆಡ್ಡಿಯವರಲ್ಲಿತ್ತು. ವಿದ್ಯಾಪಕ್ಷಪಾತಿಗಳಾದ ಅವರಿಗೆ ಗುಣ, ಯೋಗ್ಯತೆಗಳನ್ನು ಅಳೆಯುವ ಶಕ್ತಿ ಇದ್ದಿತು. ಅಂಥವರ ಸಿಫಾರ್ಸುಗಳನ್ನು ಸರ್ಕಾರ ಒಪ್ಪಿಕೊಳ್ಳುತ್ತಿತ್ತು. ಯಾವ ಪದವಿ ಪಡೆದವರೂ ಸಾಧಿಸಲಾರದ್ದನ್ನು ಇವರು ಸಾಧಿಸಿ ಕೀರ್ತಿ ಪಡೆದಿದ್ದರು. ಆಮೇಲೆ ಮುಂದಿನ ಕಾಲಗಳಲ್ಲಿ ವಿದ್ವಾನ್ ಪರೀಕ್ಷೆಯನ್ನಾಗಲಿ ಎಂ.ಎ., ಡಾಕ್ಟೊರೇಟ್ ಮುಂತಾದವನ್ನು ಪಡೆದವರಾಗಲಿ ಆಗದಿದ್ದುದರಿಂದ ಹೊಸತಾಗಿ ತೆಲುಗು ಇಲಾಖೆಗೆ ಬಂದ ಉಪಾಧ್ಯಾಯರು ಇವರ ಮೇಲೆ ಯಾವ ಡಿಗ್ರಿಯೂ

ಇಲ್ಲದವರೆಂದು ಆಪಾದನೆ ಹೊರಿಸಿ ತಮ್ಮ ಮೇಲ್ಮೆಯನ್ನು ಪ್ರಕಟಿಸಿಕೊಂಡು ಪುರಸ್ಕಾರ ಪಡೆಯಲು ಅವಕಾಶವಾಯಿತು. ಇವರಿಗೆ ಬರಬಹುದಾಗಿದ್ದ ಮೇಲ್ಮೆಯ ಸಂಭಾವನೆಗೆ ಇದೇ ಅಡ್ಡಿತಂದಿತು. ಆದರೆ ಮೈಸೂರಲ್ಲಿ ಅವರಿಗಿದ್ದ ಗೌರವ, ಅವರ ಯೋಗ್ಯತೆ ವಿಶ್ವಾಸಗಳ ಕಾರಣದಿಂದ ಇತರ ಯಾರಿಗೂ ಅವರನ್ನು ಹೀನಾಯದಿಂದ ಕಾಣುವ ಮನಸ್ಸಿರಲಿಲ್ಲ. ಮೈಸೂರಿಗೆಲ್ಲ ಒಂದೇ ವಿಶ್ವವಿದ್ಯಾನಿಲಯ, ಸರ್ಕಾರದ್ದಾಗಿದ್ದುದರಿಂದ ಇದಕ್ಕೆ ಚ್ಯುತಿ ಇಲ್ಲದೆ ನಡೆಯುವುದು ಶಕ್ಯವಾಯಿತು. ಒಳ್ಳೆಯ ಸ್ನೇಹಿತರಾಗಿ, ಸಾಹಿತ್ಯ ರಸಜ್ಞರಾಗಿ, ಜನದ ವಿಶ್ವಾಸ ಗೌರವಗಳನ್ನು ಪಡೆದವರಾಗಿ, ಉಪಾಧ್ಯಾಯರಾಗಿ, ತಾವು ನುಡಿದುದರ ಹಿಂದೆ ದೊಡ್ಡದಾಗಿ ಸಂಪಾದಿಸಿಕೊಂಡಿದ್ದ ಶಾಸ್ತ್ರ ಪರಿಜ್ಞಾನ ತಿಳಿವಳಿಕೆ ಇದ್ದುದರಿಂದ ಅವರ ಮಾತಿಗೆ ಬೆಲೆ ಇತ್ತು, ಹಿರಿಮೆಗೆ ಪುರಸ್ಕಾರ ಇತ್ತು; – ಅಸಹನೆ, ಆಕ್ರೋಶವಿದ್ದವರಿಗೆ ಹೊರತು.

ಅವರು ಏನೇ ಆಗಿದ್ದರೂ ಅವರ ಹೆಸರು ಮೊದಲಿಂದಲೂ ತೆಲುಗು ಪಂಡಿತರೆಂದೇ ಉಳಿಯಿತು. ವಿದ್ವತ್ತಲ್ಲ, ಸಂಸ್ಕಾರವಲ್ಲ, ಸತ್ಯನಿಷ್ಠೆಯಲ್ಲ, ಶುಚಿಯಲ್ಲ, ಸಂಗೀತವಲ್ಲ, ತೆಲುಗಿನ ಉಪಾಧ್ಯಾಯರಾಗಿ, ಸಜ್ಜನರಾಗಿ ಪ್ರಶಸ್ತಿಗೆ ಬಂದವರು ಅವರು. ವಿಶಿಷ್ಟವಾಗಿ ಆ ಭಾಷಾಸಾಹಿತ್ಯದ ಪ್ರತಿನಿಧಿಗಳಾಗಿ ನಿಂತವರು. ಮೈಸೂರು ಜನಜೀವನದಲ್ಲಿ, ತೆಲುಗು ಬಲ್ಲವರು ಇದ್ದರೇನು, ಇಲ್ಲದಿದ್ದರೇನು? ಅದು ಬೇಕು ತಾನೇ ಏಕೊ? – ಎಂದು ಯಾರಿಗೂ ತೋರಲಿಲ್ಲ.

ತೆಲುಗು ಎಂದಾಗಲೂ ರಾಯಲಸೀಮೆಗೆ ಸೇರಿದ ಅವರು **Northern Circars** ಎನ್ನುವ ಕೃಷ್ಣಾ ಗೋದಾವರಿಯ ಪ್ರಾಂತದಲ್ಲಿಯೂ ಪೂರ್ವ ಕರೆನಾಡಿನಲ್ಲಿಯೂ ಇರುವ ಆಂಧ್ರದ ಚರಿತ್ರೆ, ಭಾಷೆ ಬೇರೆಯಾಗಿದ್ದರೂ ಅಸಲು ತೆಲುಗು ಸಾಹಿತ್ಯದ ವ್ಯಾಸಂಗಕ್ಕೆ ಪಂಡಿತರು ಸಲ್ಲಿಸಿದ ವಿಮರ್ಶೆ ದೊಡ್ಡದು. ಬಹುತರ ರೆಡ್ಡಿಯವರು ಬರೆದ ಸಾಹಿತ್ಯವಿಮರ್ಶೆ ಮುಂತಾದ ವ್ಯಾಸಂಗಗಳ ಮೇಲೆ ಪಂಡಿತರು ಕಣ್ಣಾಡಿಸಿರಲೂಬಹುದು. ಅವರಲ್ಲಿ ಇವರಿಗೆ ತುಂಬಾ ಪ್ರೀತಿ ಇದ್ದುದರಿಂದಲೇ ಆಂಧ್ರ ವಿಶ್ವವಿದ್ಯಾಲಯದಲ್ಲಿ ವೇಮನನನ್ನು ಕುರಿತ ವಿಸ್ತಾರೋಪನ್ಯಾಸಗಳನ್ನು ಮಾಡಿಸಿದ್ದು. ಆ ಕವಿಯನ್ನು ಕುರಿತ ರಸಿಕತೆ, ಸರ್ವಜ್ಞನಿಗೂ ಅವನಿಗೂ ಇರುವ ಹೋಲಿಕೆ, ವ್ಯತ್ಯಾಸಗಳು ಸ್ಪಷ್ಟಪಡುವಂತೆ ನುಡಿದು ನೆರವಾದರು. ಅನೇಕ ವಿದ್ವತ್ ಸಭೆಗಳಲ್ಲಿ ಸಾಹಿತ್ಯ ಸಂಸ್ಕೃತಿಗಳನ್ನು ಕುರಿತು ಮಾಡಿದ ಭಾಷಣ, ವಿಜಯನಗರ ಕಾಲದ ರಸಿಕತೆಯನ್ನು ಕುರಿತು, ಕ್ಷೇತ್ರಯ್ಯನನ್ನು ಕುರಿತು ಮಾಡಿದ ಭಾಷಣ ಮತ್ತು ಲೇಖನಗಳು ಸಾರವತ್ತಾದ ಚಿಂತನ. ತೆಲುಗು ಜನಕ್ಕೆ ಮಾತ್ರವಲ್ಲದೆ ಇವರು ವಾಸವಾಗಿ ಕಾರ್ಯ ಮಾಡುತ್ತಿದ್ದ ಕನ್ನಡನಾಡಿನವರಿಗೂ ಇದು ಪ್ರಯೋಜನ ದೊರಕಿಸಿತು. ಅವರ ಹೆಸರನ್ನು ಕೇಳಿ ಬರಹಂಪುರ, ವೈಚಾಗುಗಳವರೂ ಪೂಜ್ಯಭಾವ ತಳೆದರು. ಇದನ್ನು ನಾನು ಬಲ್ಲೆ. ಅವರ ಶೈಲಿ ಖಚಿತ, ನಿಷ್ಕೃಷ್ಟ ಎಂದು ಹೇಳಿದ್ದೇನೆ. ಸಿದ್ದವನಹಳ್ಳಿ ಕೃಷ್ಣಶರ್ಮರು ಮೈಸೂರು ಸರ್ಕಾರಿ ಹೈಸ್ಕೂಲಿನಲ್ಲಿ ಓದುತ್ತಿದ್ದಾಗ ಇವರ ಮನೆಯಲ್ಲಿದ್ದರು. ದಾವಣಗೆರೆಯ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಅವರು ಓದಿದ ಒಂದು ಪ್ರಬಂಧದ ರೀತಿ ವಿಷಯ ನನ್ನ ಯೋಚನೆಗೆ ಪ್ರಭಾವ ಬೀರುತ್ತದೆ. ಮುಂದೆ

ಅವರು ವೃತ್ತಪತ್ರಿಕೆಗಳಲ್ಲಿ ಬರೆಯುವಾಗಲೂ ವರ್ಧಾಯಾತ್ರೆ, ಪರ್ಣಕುಟಿ, ದೀಪಮಾಲೆ ಮುಂತಾದ ಬರಹಗಳ ಮೇಲಿನ ಪ್ರಭಾವ, ಹೊರಗಿನಿಂದ Free Press Journal, ಗಾಂಧೀಜಿ ಬರಹ ಇತ್ಯಾದಿಗಳಿಂದ ಬಂದಿರಬಹುದಾದರೂ ಸ್ವಭಾವಸಿದ್ಧವಾದ ಅತನ ಧಾರಾಳಕ್ಕೆ ಇವರ ಉಕ್ತಿಯ ನಿಷ್ಠುರ, ನಿಷ್ಕೃಷ್ಟತೆ ರೂಪಣಶಕ್ತಿಯಾಗಿ ನಿಂತಿರಬೇಕು. ಒಂದು ಒಟ್ಟು ಅವರಣ ರಚಿಸುವುದರಲ್ಲಿ, ರಸವತ್ತಾಗಿ ಅದಕ್ಕೆ ಅಭಿವ್ಯಂಜನೆ ಕೊಡುವುದರಲ್ಲಿ ಪಂಡಿತರು ಸಿದ್ಧಹಸ್ತರು. ಆ ಶೈಲಿ ಕನ್ನಡಕ್ಕೆ ಪರಿವರ್ತಿತವಾದ ಅವರ ಲೇಖನಗಳಲ್ಲಿ ಉಳಿದು ನಿಂತಿದೆ – ಕನ್ನಡಕ್ಕೆ ಕಾಣಿಕೆಯಾಗಿ.

ನಾವು ಮೊದಲ ವರ್ಷ ಬಿ. ಎ. ಕ್ಲಾಸಲ್ಲಿರುವಾಗಲೆ ಮೈಸೂರು ವಿದ್ವಾಂಸರ ನಡುವೆ ಒಂದು ವಿದ್ವತ್ ಸ್ಪರ್ಧೆಯನ್ನು ಅರಮನೆಯವರು ಏರ್ಪಡಿಸಿದ್ದರು. ಮೈಸೂರಿನ ವರ್ಣನೆಯನ್ನು, ಬಹುಶಃ ದಸರಾ ಉತ್ಸವ ಸೇರಿಕೊಂಡಂತೆ, ಸಂಸ್ಕೃತದಲ್ಲಿ ಕವನವೊಂದನ್ನು ರಚಿಸುವ ಪ್ರಸಂಗ ಒದಗಿತ್ತು. ಎಷ್ಟೊ ಮಂದಿ ಇತರ ವಿದ್ವಾಂಸರು ಸಂಸ್ಕೃತ ಕವಿಗಳು ಸ್ಪರ್ಧಿಸಿದ್ದರೂ ಮೊದಲ ಬಹುಮಾನ ಪಂಡಿತರಿಗೆ ಬಂದಿತು. ಎಂದರೆ, ಸಂಸ್ಕೃತ ತೆಲುಗು ಎರಡರಲ್ಲಿಯೂ ಆಂಧ್ರ ಕರ್ನಾಟಕ ಎರಡೂ ದೇಶಗಳಲ್ಲಿಯೂ ಅವರಿಗೆ ಪ್ರಾಧಾನ್ಯ ದೊರೆತಿತ್ತು. ಅವರು ಸ್ವಂತವಾಗಿ ತೆಲುಗಿನಲ್ಲಿ ಕವಿತೆಯನ್ನು ಬರೆಯಬಲ್ಲವರು. ಇವರ ಮೀರಾಬಾಯಿ, ತಾರಾ ಇತ್ಯಾದಿಯನ್ನು ಕುರಿತು ರೆಡ್ಡಿಯವರು ಹೇಳಿದ್ದಾರೆ. ಕೀರ್ತನೆಗಳ ಅಥವಾ ಪದಗಳ ಮಾದರಿಯಲ್ಲಿ ಅವರು ರಚಿಸಿದ ಕೆಲವು ಕೃತಿಗಳು ಜನಕ್ಕೆ ಮೆಚ್ಚುಗೆ ತಂದವು. ವೀಣೆ ಶೇಷಣ್ಣನವರನ್ನು ಕುರಿತೊ – ತನ್ನನ್ನೇ ಪರ್ಯಾಯವಾಗಿಯೊ 'ನನ್ನು ಕಚ್ಚೇರಿಕಿ ಪಿಲುತುರೇಲ?' ಎಂಬುದೂ 'ಮೀಕೆಪುಡೂ ಚದುವೇನಾ?' ಎಂಬುದೂ ಒಲ್ಲವಿಯಲ್ಲಿಯೇ ಮನಸ್ಸನ್ನು ತಕ್ಷಣ ಆಕರ್ಷಿಸುವ ಶಕ್ತಿ ಉಳ್ಳವು. ಎಷ್ಟು ಕಡಮೆ ಪದಗಳಲ್ಲಿಂದರೆ ಅಷ್ಟು ಕಡಮೆ ಮಾತುಗಳಲ್ಲಿ ಮನಸ್ಸು ತನ್ನ ಅನುಭವವನ್ನು ಸಂಗ್ರಹಿಸಬಹುದು ಎಂಬುದನ್ನು ಅಂಥವು ಕಾಣಿಸುತ್ತವೆ.

ಮನೆಯಲ್ಲಿಯೇ ಮೊದಲಿಂದಲೂ ಒಂದು ಸಂಸ್ಕಾರದ ಆವರಣ ಬೆಳೆದು ಬಂದಿತೆಂದು ಕಾಣುತ್ತದೆ. ಮೈಸೂರಿಗೆ ಬರುವ ಹೊತ್ತಿಗೇ ಸಾಹಿತ್ಯದ ಮೂಲಭೂತ ವ್ಯಾಸಂಗ ಅಭ್ಯಾಸ ನಡೆದು ಬಂದಿದ್ದುದರಿಂದ ವಿದ್ವಾಂಸರಾದ ಯತಿಗಳ ಸಂಪರ್ಕದಲ್ಲಿ ಬಹುಬೇಗ ಸೂಕ್ಷ್ಮ ನಯ ಬನಿ ಪಡೆದು ಬೆಳೆಯಿತು. ಪರಕಾಲಮಠದ ಯತೀಂದ್ರರ ವಿದ್ವದಾವರಣ ವಿಶಾಲವಾದ ಅವಕಾಶಗಳನ್ನು ಒದಗಿಸಿರಬೇಕು.

ಪಂಡಿತರ ಅಣ್ಣಂದಿರೊಬ್ಬರು 'ಪೆನುಗೊಂಡಕೊಂಡ' ಎಂಬ ಒಂದು ಲಾವಣಿಯನ್ನು ಬರೆದಿದ್ದರಂತೆ. ಅದರ ಪಲ್ಲವಿ ತಂದಾನ ತಾ ನಂದಾನ ಎಂದಿತ್ತು.

ಕೊಂಡ ಕಲ್ಗಿನ ಕೋಟ
ಕೋಟ ಕಲ್ಗಿನ ಕೊಂಡ
ಕೋಟ ಕೊಂಡಲಲೋನ
ಗೊಪ್ಪ ಮಾ ಪೆನುಗೊಂಡ ಕೊಂಡ

ಎಂಬುದು ಪಲ್ಲವಿ. ಇನ್ನೊಂದು

ವೆರುಪುಲೆರುಗುನಿ ಬದುದು ನಡಕಲ
ವಿಜಯನಗರಪು ರಾಜಕೊಡಕುಲ
ತೆನುಗು ಕತ್ತುಲ ಕಾನಬಿಟ್ಟಿನ
ಪಟ್ಟಿ ನೆತ್ತರು ಕಂಡ
ಮಾ ಪೆನುಗೊಂಡಕೊಂಡ

ಮುಂತಾಗಿ ಉತ್ಸಾಹಪೂರ್ಣವಾಗಿ ಬರೆದು ಬೆಳಸಿದ ಕವಿತೆಯ ಭಾಗ ಇವರದು. ಅಂಥಲ್ಲಿ ಬರವಣಿಗೆ ಅಲ್ಲ, ಹಾಡಲ್ಲ ಮುಖ್ಯ. ಜೀವನದ ಯಾವುದೊ ಒಂದು ಉತ್ಸಾಹ ಅಲ್ಲಿ ನುಡಿಗೊಂಡು ನಿಲ್ಲುತ್ತದೆ. ಆ ಸ್ವಭಾವ ಆ ಮನೆಗೇ ಬಂದುದೇನೊ. ಅವರು ಪದ್ಯಗಳನ್ನು ಓದಿದರೂ ಹಾಗೇ. ಕವಿತೆ, ವಿಮರ್ಶೆ ಬರೆದರೂ ಹಾಗೇ. ಮಾತನಾಡಿದರೂ ಹಾಗೇ. ಅವರಿಗೆ ಬಹುಪ್ರಿಯವಾದ ತಿಕ್ಕನ ಸೋಮಯಾಜಿಯ ಮಹಾಭಾರತದ ವಿರಾಟಪರ್ವ, ಉದ್ಯೋಗಪರ್ವಗಳ ಯಾವ ಭಾಗವನ್ನೂ ಎತ್ತಿಕೊಂಡು ತಿಕ್ಕನನ ವಿಶೇಷ ದೃಷ್ಟಿಯನ್ನು ಕುರಿತು ಮಾತನಾಡುವಾಗಲೂ ಇದು ಕಾಣುತ್ತದೆ. ಗಾನಕಲೆ, ರಾಯರ ಕಾಲದ ರಸಿಕತೆ, ನಾಟಕ ಉಪನ್ಯಾಸಗಳು ಮುಂತಾದ ಅವರ ಪ್ರಬಂಧಗಳಲ್ಲಿಯೂ ಇದೇ ಲಕ್ಷಣವನ್ನು ಕಾಣಬಹುದು. ಜೀವಂತಿಕೆ–Vitality– ಅದರ ಲಕ್ಷಣ. ಹೆಚ್ಚು ಮಾತುಗಳ ಸಾಂಗತ್ಯ, ಹೆಚ್ಚು ಅಲಂಕರಣ, ನಯದ ಕುಸುರಿಗಿಂತ ಹೆಚ್ಚು ಸಾರವತ್ತಾದ ವಿಷಯದ ಅಥವಾ ಭಾವದ, ಅರ್ಥದ ಅಂಶ ಅಲ್ಲಿ ರೂಪಗೊಂಡಿರುತ್ತದೆ. ಇದೇ ಲಕ್ಷಣವೇ ಅವರು ಒಂದು ಕೀರ್ತನೆಯನ್ನೊ ಪದವನ್ನೊ ಶ್ಲೋಕವನ್ನೊ ಹೇಳುವಾಗ ಪ್ರಕಾಶಕ್ಕೆ ಬರುತ್ತದೆ. ಸಂಗೀತಶಾಸ್ತ್ರದಲ್ಲಿಯೂ ಅಥವಾ ಸಭೆ ಕಚೇರಿಗಳಲ್ಲಿಯೂ ಹೆಚ್ಚು ವಿದ್ವತ್ ಪ್ರೌಢಿಮೆ, ರಾಗತಾಳಗಳ ಯಾವುದೊ ಬೆರಗುವೈಖರಿಗಳನ್ನು ತೋರಿಸಬಲ್ಲವರು ಎಷ್ಟೊ ಜನರಿರಬಹುದು; ಆದರೆ ಕೃತಿಯ ಜೀವಸಾರ ಹರಿಯುವಂತೆ ಅದನ್ನು ರಾಗತಾಳಗಳಲ್ಲಿ ನುಡಿಯುವಂಥ ಪಂಡಿತರ ರೀತಿಯನ್ನು ನಾನು ಬೇರೆಲ್ಲೂ ಕಂಡಿಲ್ಲ. ತ್ಯಾಗರಾಜರ ಕೀರ್ತನೆಗಳನ್ನು ಹಾಡುವಾಗಲೂ ದೀಕ್ಷಿತರನ್ನು ನುಡಿಯುವಾಗಲೂ ಇದೇ ಲಕ್ಷಣ ಕಾಣಿಸಿಕೊಳ್ಳುತ್ತದೆ. ಅರ್ಥ ಸ್ಪಷ್ಟವಾಗಿ ಇದು ಭಾವಬಂಧುರತೆಯನ್ನು ಅರಿತ ಸರಸ ಸಾಹಸಿಯ ಹಾಡುಗಾರಿಕೆ ಎನಿಸುತ್ತದೆ. ಕ್ಷೇತ್ರಯ್ಯನ ಪದಗಳನ್ನು ಹಾಡುವಾಗ ಅದರ ಜೀವವನ್ನು ಎತ್ತಿ ಕಾಣಿಸಬಲ್ಲದ್ದು. ಎಷ್ಟೋ ಪದಗಳು ಅಚ್ಚಳಿಯದೆ ಮನಸ್ಸಿನಲ್ಲಿ ನಿಲ್ಲುವಂತೆ ಒಂದು ಸಲ ಕೇಳಿದ ಕೂಡಲೆ ಅವರು ನುಡಿದಾಗ ನನ್ನಲ್ಲಂತೂ ಸ್ಥಾಯಿಯಾಗಿವೆ. ವೀಣಾಧನಂ ಅವರು ಮೃದುವಾಗಿ ಹಾರ್ದವಾಗಿ ವೀಣೆಯಲ್ಲಿ ನುಡಿಸಿಕೊಂಡು ಹಾಡಿದಾಗಲೂ ಈ ಸೌಷ್ಠವ ನನಗೆ ಕಂಡಿಲ್ಲವೆಂದರೆ ಧನಂ ಅವರ ಮಧುರಗಾನಕ್ಕೆ ಯಾವ ಹೀನಾಯವನ್ನೂ ಎಣಿಸುತ್ತಿಲ್ಲ; ಆದರೆ ಇವರ ಹೇಳಿಕೆಗೆ, ಭಾವಸಂಪತ್ತಿಗೆ ಅದು ನಿಲ್ಲದಾಗುತ್ತಿತ್ತೆಂದು ಮಾತ್ರ ಹೇಳಬಲ್ಲೆ. ಒಂದು ದ್ರಾಕ್ಷಿ, ಇನ್ನೊಂದು ಮಾವು, ಸೇಬು. 'ವದರಕ ಪೋಪೋ ವಾಡೇಲ ವಚ್ಚೀನಿ, ವದ್ದು ರಾವದ್ದನಿ ಚೆಪ್ಪು ಪೋವೆ: ಅದಿಯೊಕ್ಕ ಯುಗಮಾಯೆ ವೇರೆ ಜನ್ಮಮಿಪುಡು! ಆತಡೆವ್ವಡೊ, ನೇನೆವತೋ' ಎಂಬುದಾಗಲೀ, 'ಎಕ್ಕಡಿನೇಸ್ತಮು ಎಕ್ಕಡಿ ನೆನರು? ಎವ್ವರಿಕೆವ್ವರೆ' ಎಂಬಂಥುದಾಗಲಿ, 'ತೆಲಿವಿ ಒಕರಿಸಿ ಸೊಮ್ಮಾ ಎಂದುಕೇ ವಿಭುನಿ

ಪೊಮ್ಮಂಟಿನಮ್ಮ' ಎಂಬುದನ್ನೂ 'ಒಲುಪು ದಾಚಸೇರನೇ ಓ ಭಾಮಾ/ವಾರಿ ವೀರಿ ವಲಪೆ' ಎಂಬುದನ್ನೂ ತಕ್ಕ ಮನಸ್ಸಿನಲ್ಲಿ ಅವರು ನುಡಿಯುವಾಗ ಆ ಸ್ನಿಗ್ಧತೆ, ತುಂಬು ಹೃದಯ ಮನಸ್ಸನ್ನು ಆಕರ್ಷಿಸುತ್ತವೆ. ಇನ್ನು ಒಂದು ರಾಗದಲ್ಲಿಯೊ ಅಥವಾ ರಾಗಮಾಲಿಕೆಯಾಗಿಯೊ ಪದ್ಯಗಳನ್ನು ಹೇಳುವಾಗ ಅವಕ್ಕೆ ಸರಿತೂಗುವ ಇನ್ನೊಬ್ಬರ ಸಂಗೀತಸಾಹಿತ್ಯಗಳ ಅವಳಿ ಸೌಭಾಗ್ಯವನ್ನು ನಾನು ಬೇರೆಲ್ಲಿಯೂ ಕಂಡಿಲ್ಲ. ವಾಸುದೇವಾಚಾರ್ಯರ ಅಥವಾ ಅರಿಯಾಕ್ಕುಡಿ ರಾಮಾನುಜಯ್ಯಂಗಾರ್ಯರ ವಿನಿಕೆಗಳಿಗೆ ಅವನ್ನು ಹೋಲಿಸುವುದುಂಟು; ಆದರೆ ಈ ಮೂರೂ ಬೇರೆ ಬೇರೆ ಧಾತು, ಜೀವ, ರಂಗು ಉಳ್ಳವು. ಇವರದು ಒಂದು ಬಗೆಯ ಸರಸವಾದ ಗಂಡುವಾಣಿ. ಒಂದು ಜೀವದ ಸಂಸ್ಕಾರವೆಲ್ಲ ನುಡಿಯುವುದು ಇಲ್ಲಿನ ಲಕ್ಷಣ. ಉಳಿದ ಇಬ್ಬರೂ ಪ್ರಾಧಾನ್ಯದಿಂದ ಸಂಗೀತಗಾರರು. ಅಲ್ಲಿ ಕಲಿಗಾರರಾಗಿ ಬೆಡಗಿನ ವಾಣಿಯಾಗಿ ಅವು ನುಡಿಯುತ್ತಿದ್ದವು. ಸೆಮ್ಮಂಗುಡಿ ಅವರ ರೀತಿಯೂ ಹಾಗೆಯೇ. ಅವರೂ ಹೇಳಿಕೇಳಿ ಇನ್ನೂ ಹೆಚ್ಚಾಗಿ ಸಂಗೀತಗಾರರು. ಉಚ್ಚಾರಣೆ, ಅಕ್ಷರ ಸ್ಫುಟತೆ ವಿಭಿನ್ನ. ಪಂಡಿತರದು ಪ್ರಧಾನವಾಗಿ ಸಾಹಿತ್ಯ ಸಂಗೀತಗಳ ಕೂಡುಹೊಮ್ಮುಗೆ. ಆದರೆ 'ಆಡೆ ನಮ್ಮ' ಎಂಬ ಕೃತಿಯನ್ನೂ ದೀಕ್ಷಿತರ ಯಾವುದಾದರೊಂದು ಕೃತಿಯ ವಿಭವವನ್ನೂ ಅವರು ನುಡಿಯುವಾಗ ಸಂಗೀತದ ಈ ಗಂಡುತನ, ರಾಗತಾಳಗಳ ಅಸ್ಥಿಪಂಜರದ ರಚನೆಯ ಕಾಣ್ಕೆ ಶಕ್ತಿಯುತವಾಗಿ ಕಾಣುತ್ತವೆ. 'ಗಂಡು' ಎಂಬುದೇ ಪಂಡಿತರ ಜೀವನ ಸಂಸ್ಕಾರ ಮತ್ತು ಲೌಕಿಕ ಜೀವನದ ಸ್ವರೂಪ ಲಕ್ಷಣ. ಅವರ ಅಭಿಪ್ರಾಯಗಳು ಸಂಗೀತ ಸಾಹಿತ್ಯಗಳನ್ನು ಚೆನ್ನಾಗಿ ಅರಿತುಕೊಂಡ ಮನಸ್ಸು ತನ್ನದಾದ ಒಂದು ತೀರ್ಮಾನವನ್ನು ಮಾಡಿಕೊಂಡು ಸಿದ್ಧವಾಗಿದೆ. ಆ ಬಗೆಗೆ ಪ್ರಶ್ನೆ, ವಿಚಾರ ಎದ್ದಾಗ ಸ್ಪಷ್ಟವಾಗಿ ಅದನ್ನು ಹೇಳಬೇಕು. ಅದರಲ್ಲಿ ಮರೆಯಿಲ್ಲ, ಕೊಳೆಯಿಲ್ಲ. ಅಗ್ರಗಣ್ಯರು, ವಿದ್ವಾಂಸರು ಎಂಬ ಎಣಿಕೆಯಾಗಲಿ, ಸಾಮಾನ್ಯರು ಎಂಬುದಾಗಲಿ ವ್ಯತ್ಯಾಸ ತೋರಿಸುವುದಕ್ಕೆ ಆಗದು. ಈಚೆಗೆ ಒಬ್ಬ ಮಾನ್ಯ ಸಂಗೀತಗಾರರು ಸಭೆಗೆ ಅಧ್ಯಕ್ಷರಾಗಿರುವಾಗ ಅವರು ಮಾತನಾಡಬೇಕಾಗಿ ಬರಲು, ತಮಗೆ ಮುಂಚೆ ಮಾತನಾಡಿದ ಇತರರು ಅವರ ಗುಣಗಾನವನ್ನೆಲ್ಲ ಪೂರ್ತಿ ಮಾಡಿ ಮುಗಿಸಿದ್ದರು. ಇವರು ಏನು ಹೇಳಬೇಕು; 'ನನಗೆ ಅವರಿಂದ ಕೆಲವು ಕೃತಿಗಳ, ವಿಧಾನಗಳ, ರಹಸ್ಯಗಳ ಪರಿಚಯವಾಗಿದೆ. ಆ ಉಪಕಾರ ದೊಡ್ಡದು. ಅದಕ್ಕೆ ನಾನು ಕೃತಜ್ಞ, ಆದರೆ ಅವರದು ಬಡತನ. ದೇಹ ಪೋಷಣೆಗೆ ಸಾಕಷ್ಟು ಉಪಪತ್ತಿ ಇಲ್ಲ. ಅವರ ಬದುಕಿನಲ್ಲಿ ಒಂದು ಕ್ರಮ ಶಿಸ್ತು ಇದ್ದಿದ್ದರೆ ಅವರು ಅಷ್ಟು ಬೇಗ ತೀರಿಕೊಳ್ಳಬೇಕಿರಲಿಲ್ಲ. ಊಟ ಉಪಚಾರಗಳಲ್ಲಿ ಮಿತ, ಹಿತ ಇರಲಿಲ್ಲ. ಅಭ್ಯಂಜನ ಮಾಡಿಕೊಳ್ಳುವ ರೀತಿ ಅಪರಾಹ್ನಕಾಲದ ಕಯಾಲಿಯವರದು. ಆ ದಿನಗಳಲ್ಲಿ ಬಾಯಿ ಹಾಡುಗಾರಿಕೆಯವರು ನಿದ್ರೆ ಮಾಡಬಾರದು. ನಾಟಕಾದಿಗಳಲ್ಲಿ ಭಾಗವಹಿಸುವಾಗ ನಿದ್ರೆ ಆಹಾರ ನಿಯಮ ಕೆಡಬೇಕಾಗುತ್ತದೆ. ಅವರಿಗೆ ಸಣ್ಣ ವಯಸ್ಸಿನಲ್ಲಿ ದೊರಕಿದ ರಾಮಕೃಷ್ಣ ಅಯ್ಯರ್ ಎಂಬವರ ನಿರ್ದೇಶನ ಘಾತಕವಾಯಿತು ಎನ್ನುತ್ತಾರೆ. ತಮ್ಮದೊಂದು ದಾರಿ ಅರಿಸಿಕೊಂಡು ಅದನ್ನು ಬೆಳಸಿ ವ್ಯಕ್ತಿತ್ವ ಸಾಧಿಸಿಕೊಳ್ಳುವುದನ್ನು ಬಿಟ್ಟು ಯಾರು ಹೇಗೆ ಹಾಡಿದರೆ ತಾನು ಆ ರೀತಿಯಲ್ಲಿ ಮೇಲಾಗಿ ನುಡಿಯಬಲ್ಲೆ ಎಂಬಂತೆ ಮಾಡಿ ತಮ್ಮ ಶಕ್ತಿಯನ್ನು ಪೋಲು

ಮಾಡಿಕೊಂಡರೇನೊ ಎನ್ನಿಸುತ್ತದೆ' – ಎಂದು ಮುಂತಾಗಿ ನುಡಿದು ನೆರೆದಿದ್ದ ಸಂಗೀತಗಾರರಿಗೆ ಟೀಕಾತ್ಮಕವಾದ ಮಾತುಗಳನ್ನಾಡಿಬಿಟ್ಟರು. ಇದು ಸತ್ಯ, ನಿಜ. ಆದರೆ ಪ್ರಿಯವಾಗುವ ಮಾತಿನ ಮಾರ್ಗವಲ್ಲ. ಇವರೊ: ಎಪ್ಪತ್ತೈದಕ್ಕೆ – ಎಂಬತ್ತಕ್ಕೆ ಮೀರಿದ ವಯಸ್ಸಿನಲ್ಲಿ ಮಾತನಾಡುವಾಗಲೂ ಸತ್ಯವನ್ನು ನುಡಿಯದಿದ್ದರೆ ಇನ್ನು ಯಾವಾಗ ಹಿತ ನುಡಿಯಬೇಕೆನ್ನುತ್ತಾರೆ.

ಒಮ್ಮೆ ಮಹಾ ವಿದ್ವಾಂಸರೂ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಸಂಸ್ಕೃತದ ಪ್ರಾಧ್ಯರೂ ಆದ ಹಿರಿಯಣ್ಣನವರು ಹಿತೋಪದೇಶದ ಯಾವುದೊ ಒಂದು ಪ್ರಯೋಗವನ್ನೊ ಪ್ರಕರಣವನ್ನೊ ಕುರಿತು ಇವರನ್ನು ಕೇಳಿದರಂತೆ. ಇವರು ಹೇಳಿದುದು ಆ ಪ್ರಕರಣಕ್ಕೆ ತಕ್ಕ ಅಥವಾ ಹತ್ತಿರದ ಉತ್ತರವಾಗಿದ್ದಿರಬೇಕು. 'ಏನೋ ಹೇಳಿಬಿಟ್ಟಿರಲ್ಲ' ಎಂದರಂತೆ ಹಿರಿಯರು. ಅದು ತೃಪ್ತಿಯ ಮಾತೊ, ಅಲ್ಲವೊ. ತಮಗೂ ಇತರ ವಿದ್ವಾಂಸರಿಗೂ ತೋರದಿದ್ದ ಸಂಗತಿ ತಮ್ಮ ಕಾಲೆಜಿನ ಲೆಕ್ಚರರ್ ಕೂಡ ಅಲ್ಲದ, ಕೇವಲ ಪಂಡಿತರಾಗಿದ್ದ ಇವರಿಂದ ಸೂಚಿತವಾಯಿತು ಎಂದೊ ಏನೊ – ಯಾರು ಬಲ್ಲರು? ಪ್ರಸಂಗ ಯಾವುದೊ ಇವರಿಗೂ ನೆನಪಿಲ್ಲ. ಹಿಂದೆ ಪರಕಾಲ ಸ್ವಾಮಿಗಳು ಯಾವುದೊ ಒಂದು ಪದ್ಯ ಬರೆದಿದ್ದರಂತೆ. ಆ ಪದ್ಯದ ಯಾವುದೊ ಒಂದು ಪಾದಾಂತ್ಯದಲ್ಲಿ ಬರಹ ನಿಲ್ಲಿಸಿ ಮುಂದೆ ಓದಲು ಇವರು ತಡಮಾಡಿದರಂತೆ. 'ಏನಪ್ಪ, ಅಲ್ಲೇ ನಿಲ್ಲಿಸಿದೆಯಲ್ಲ?' ಎಂದು ಅವರು ಕೇಳಿದರಂತೆ. ಸಣ್ಣ ವಯಸ್ಸಿನ ವಿದ್ಯಾರ್ಥಿಯಾದ ಇವರು 'ನಿನ್ನೆ ಪಾಠಸಮಯದಲ್ಲಿ ಒಂದು ಪ್ರಯೋಗ 'ಅಬದ್ಧ' ಎಂದು ತಾವು ಅಪ್ಪಣೆ ಕೊಡಿಸಲಾಯಿತು. ಅಂಥದು ಇಲ್ಲಿ ನನ್ನನ್ನು ತಡೆದಿತು' ಎಂದರಂತೆ. ಅಲ್ಲಿದ್ದ ಇತರರು ಅವಾಕ್ಕಾದರು. ಗುರುಗಳು ಒಡನೆಯೇ 'ಹೌದು, ನೀನು ಹೇಳುವುದು ಸರಿ, ತಿದ್ದೋಣ, ಮುಂದೆ ಓದು' ಎಂದರಂತೆ. ಗುರುಶಿಷ್ಯರ ಸಂಬಂಧದಲ್ಲಿ ಈ ವರ್ತನೆ ತುಂಬಾ ಗಂಭೀರವಾದ್ದು; ಅಪರೂಪ; ಆದರೆ ಸಂಪನ್ನವಾದ್ದು. ಗುರುವಿಗೆ ಅಭಿಮಾನಭಂಗವಾಗಿ ಅವರು ಕೋಪಿಸಿಕೊಳ್ಳುವ ಪ್ರಸಂಗ. ಕೂಡಲೆ ಶಿಷ್ಯನಿಗೆ ಛೀಮಾರಿ ಹಾಕಬಲ್ಲ ಸಂದರ್ಭವೂ ಹೌದು. ಸತ್ಯನಿಷ್ಠರೂ ಸೂತ್ರ ನಿಷ್ಠರೂ ಆಗಿದ್ದ ಅವರು ತಪ್ಪೆಂಬುದನ್ನು ಅರಿತರು. ಸಮಾಧಾನದಿಂದ ಒಪ್ಪಿಕೊಂಡರು. ಈ ಹುಡುಗನ ದಾಷ್ಟಿಕ ಅವರಿಗೆ ಒಪ್ಪಿದುದರ ಲಕ್ಷಣ ಇದು. ಗುರುವಾದರೇನು? ಮತ್ತೊಬ್ಬರಾದರೇನು? ಸೂತ್ರನಿಷ್ಠೆ, ಪ್ರಯೋಗನಿಷ್ಠೆ ಯಾರಿಂದ ಕಲಿತರೊ ಅವರಲ್ಲೇ ಇದು ಒದಗಿದಾಗ ಅದನ್ನು ಅಡಗಿಸಿಕೊಳ್ಳದೆ ನಿರ್ಭೀತಿಯಿಂದ ನುಡಿಯುವುದು ಅಧಿಕ ಪ್ರಸಂಗವೆಂದುಕೊಳ್ಳದೆ, ಬೇರೆ ಜನದ ನಡುವೆ ನುಡಿದ ಇದರಿಂದ ಇಂಥವರಿಬ್ಬರ ಸಂಬಂಧದಲ್ಲಿ ಅಸಮಾಧಾನ ಉಂಟಾಗಬಹುದಿತ್ತು. ದೊಡ್ಡವರೂ ಪ್ರಾಮಾಣಿಕರೂ ಸತ್ಯಪ್ರಿಯರೂ ಆದ್ದರಿಂದ ಗುರು ಅಲ್ಲಿ ತೇರಿದರು. ಇತ್ತ ವಿನಯ ಬೇಡವೆ? – ಎಂಬ ಪ್ರಶ್ನೆ ಕೇಳಬಹುದು. ವಿನಯ ಸಾವಿರ ಒಳ್ಳೆಯದನ್ನೂ ಕೆಟ್ಟದ್ದನ್ನೂ ಮರೆಮಾಡುತ್ತದೆ. ಸಾವಿರ ಲೋಪದೋಷಗಳನ್ನು ಹೊಮ್ಮಿಸುತ್ತದೆ. ಇದರ ಲಕ್ಷಣವನ್ನು ನಿವೇದಿಸಲು ಮಾತ್ರ ಈ ಸಂಗತಿಯನ್ನು ಹೇಳಿದೆ.

ಹಾಗೆಯೆ ಈಚೆಗೆ ನಾನು ಬರೆದ ಒಂದು ಪುಸ್ತಕವನ್ನು (ಸತ್ಯ ಮತ್ತು ಮೌಲ್ಯ) ಅವರಿಗೆ ಅರ್ಪಿಸಿದೆ. ಅಲ್ಲಿಷ್ಟು, ಇಲ್ಲಿಷ್ಟು ಓದಿದರಂತೆ. ನನಗೂ ಅವರಿಗೂ ಇರುವ ವಿಶ್ವಾಸ

ಬಂದ ಐವತ್ತು ವರ್ಷಗಳಿಗೂ ಹೆಚ್ಚಾದುವು? 'ಬಿಸೋ ಹೊತ್ತಾಗ್ತು, ನಂಗೆ ಆರ್ಥ ಆಗೋದಿಲ್ಲ' ಎಂದು ಒಂದೇ ಮಾತು ಹೇಳಿದರು. ಆ ಅಭಿಪ್ರಾಯ ಅವರಿಗೊಬ್ಬರಿಲ್ಲ ಎಂದು ನಾನು ಅರಿತೆ. ದಾರಿ ತಪ್ಪಿಂದು ನನಗೆ ಸ್ಫೂರ್ತಿದಾಯಕ ಹೊಗಳಿಕೆ ಅವರಿಂದ ತಿರುಗುವುದು ನನಗೆ ಶಕ್ಯವಿಲ್ಲ, ಇದ್ದೂ ಬಂಬುಷ್ಟದ ಮೇಲೆ ಇಷ್ಟೇಕೆ ಆಗುತ್ತೆ ಎಂಬುದು ಅದೃಷ್ಟ. ಇದು ಅತಿಶಯೋಕ್ತಿ. ಅವರು ತಮ್ಮ ಅಭಿಪ್ರಾಯಗಳನ್ನೆ ಪ್ರಾಮಾಣಿಕವಾಗಿ ಸೂಚಿಸುತ್ತಿಲ್ಲವೇನೋ? ಬಹುಶಃ ಸ್ವಭಾವತಃ ಪ್ರತಿಕಾದನೆಗೊ ಅಭಿಪ್ರಾಯವೊ ಯಾವುದೂ ಅವರಿಗೆ ಒಪ್ಪಿರಲಾರದು. ಅದನ್ನು ಹೇಳಲು ಬಹುಶಃ ಮನಸ್ಸಿಲ್ಲ ಎಂದುಕೊಂಡೆ. ಅರ್ಥವಾಗಲಿಲ್ಲ ಎಂದರೆ ಸಾಮಾನ್ಯವಾಗಿ ಅಸ್ಪಷ್ಟವೇ ಎಂಬುದು ನಾನು ತಿಳಿಯಬೇಕಾದ ಸಂಗತಿ. ತ್ಯಾಗರಾಜರ ಒಂದು ಕೀರ್ತನೆಯಲ್ಲಿನ ಒಂದು ಪದದ ಅರ್ಥವನ್ನು ಒಮ್ಮೆ ಕೇಳಿದೆ. ಬಹುಕಾಲ ಅದು ನನಗೆ ಅರ್ಥವಾಗಿರಲಿಲ್ಲ, 'ಚೇತುಲಾರ ಶೃಂಗಾರಮು ಚೇಸಿ ಚೂತುನೊ ಓ ರಾಮಾ...' ಎಂದು ಆರಂಭವಾಗುವ ಬಹುಶಃ ವಿರಹದ ಪ್ರಿಯದ ಕೃತಿ. 'ಸೇತುಬಂಧನ, ಸುರಪತಿ ಸರೀರುಡು ಭವಾದಿಲು ಪೊಗಡ. ನಾಚೇತುಲಾರ ಶೃಂಗಾರಮು ಚೇಸಿ' ಎಂಬುದು ಅನುಪಲ್ಲವ. ಸೇತುಬಂಧವೆಂದರೇನು? – ಎಂದು ಕೇಳಿದೆ. 'ಪ್ರಾಸಾನಿಕವೇನ್ನೊ ಉನ್ನಾರಂಡಿ. ಅಕ್ಕಡ ರಾಮುನಿಕೇ ಸಂಬಂಧಮು' ಎಂದು ಬಿಟ್ಟರು. ತ್ಯಾಗರಾಜರಾದರೇನು? ವಿರಹರಪ್ರಿಯವಾದರೇನು? ನನ್ನ ಹಾಗೆಯೇ ಅವರಿಗೂ ಪ್ರಶ್ನೆ ಎದ್ದಿರಬೇಕು. ಸಮಸ್ಯೆ ಬಂದಿರಬೇಕು. ಇವರು ಇನ್ನೊಂದು ಕಡೆ ಯಾವುದೂ ಒಂದು ರಾಗದ ಆರೋಹಣದಲ್ಲಿನೊ ಅವರೋಹಣದಲ್ಲಿನೊ 'ನಿಷಾದ, ಕಾಕಲಿಯೆ ಕೈಶಿಕಿಯೆ? ಇದು ಇಂಥ ನಿಷಾದವಾದರೆ ಈ ರಾಗವಾಗುತ್ತದೆಯೆ ನೋಡಿ!' ಎಂದರು. ಅವರಿಗೆ ತಾವು ಕೇಳಿದ್ದ ಯಾರ ಹಾಡಿಕೆಯಲ್ಲಿಯೂ ಆ ಸ್ವರ ನುಡಿದುದಿಲ್ಲ, ತಾನು ಬಲ್ಲ ಯಾವ ಕೃತಿಯಲ್ಲಿಯೂ ಅದು ಶಕ್ಯವಾಗದು ಎಂದು ಸೂತ್ರದಲ್ಲಿನ ಮಾತನ್ನು ಒಪ್ಪಲು ಹೇಗಾದೀತು– ಎಂದು ನುಡಿದುದನ್ನು ಕೇಳಿದ್ದೇನೆ. ಅಷ್ಟು ನಿಖರ, ಖಚಿತ ಅವರ ಮನಸ್ಸು, ಚೇತನ, ಅಭಿಪ್ರಾಯ.

ತಮ್ಮ ಮನೆಯಲ್ಲಿಯೇ ಭಜನೆಯ ಸಮಯದಲ್ಲಿನೊ ಅದಕ್ಕಿಂತ ವಿಶೇಷವಾಗಿ ಕೊಠಡಿಯಲ್ಲಿ ಒಬ್ಬರೊ ಇಬ್ಬರೊ ಕುಳಿತು ಮಾತನಾಡುವಾಗಲೊ ಅವರು ವಿಷಯಗಳನ್ನು ಕುರಿತು ಮಾಡನಾಡುವುದೂ ಒಂದು ರಾಗದ ಸ್ವರೂಪವನ್ನೊ ಒಂದು ಕೃತಿಯಲ್ಲಿನ ಸಾಹಿತ್ಯದ ನಡೆಯನ್ನೊ ರಾಗದ ಸಂಚಾರವನ್ನೊ ಭಾವ ಸ್ವರಗಳ ನುಡಿತವನ್ನೊ ತಿಳಿಸುವುದೂ ತುಂಬ ಉದ್ದೀಪಕ (illuminating). ನನಗೆ ಅನೇಕ ಬೇಳೆ ಅನ್ನಿಸಿದೆ: ನಮ್ಮಲ್ಲಿರುವ ಇಂಥ ಇಬ್ಬರು ಮೂವರಿಗೆ ಸರ್ಕಾರದವರೊ ದೊಡ್ಡ ಶ್ರೀಮಂತರೊ ತಿಂಗಳಿಗೆ ಒಂದು ಸಾವಿರ ರೂಪಾಯಿ ಪುರಸ್ಕಾರವಿತ್ತು, ಜನರು ಬೇಕಾದಂತೆ ಇಂಥವರಲ್ಲಿ ಹೋಗಿ ಧಾರಾಳವಾಗಿ ಶಾಸ್ತ್ರ, ಸಾಹಿತ್ಯ, ಸಂಗೀತ ಇವುಗಳ ಮಾತುಕತೆಯಾಡಿ ಬರುವುದು ಶಕ್ಯವಾದರೆ ನಾಡಿನಲ್ಲಿ ವಿದ್ಯಾಸಂಸ್ಕಾರ, ಸಂಸ್ಕೃತಿ ದೊಡ್ಡದಾಗಿ ಬೆಳೆಯಲು ಅವಕಾಶವಾಗುತ್ತಿತ್ತು ಎಂದು. ಈ ಮನಸ್ಸಿಗೆ ಯಾವುದೂ ಯಾವ ಆಲೋಚನೆಯೂ ಅಡ್ಡಿ ಇರುವುದಿಲ್ಲ, ಯಾರನ್ನಾದರೂ ಕುರಿತು ಮಾತನಾಡಬೇಕು, ಬರೆಯಬೇಕು ಎಂದಾಗ ಪ್ರಶಂಸೆ ತಾನೆ

ಮಾಡಬೇಕು? ಅದರೆ ಹೇಳಬೇಡವೊ? – ಎಂಬ ಮಾತು ಬಂದಾಗ ಆ ಮನಸ್ಸಿನ ಧಾರಾಳ, ಧೈರ್ಯ ಎಷ್ಟು ದೊಡ್ಡದು ಎಂದು ಗೊತ್ತಾಗುತ್ತದೆ. ತಾವು ಪಾಠ ಹೇಳುವಾಗಲೂ ಹೀಗೇ. ಸಾಹಿತ್ಯವನ್ನು ಕುರಿತ ತೀರ್ಮಾನ ಹೇಳುವಾಗ 'ಇದು ಚಮತ್ಕಾರ; ಇದರಲ್ಲಿ ಸ್ವಲ್ಪ ಬುದ್ಧಿಯ ಭಾಗ ಹೆಚ್ಚು ಇದೆ; ಇನ್ನೊಂದು ಬರಿಯ ತರ್ಕ, ಅನುಮಾನ; ಇಲ್ಲಿ ರಸಕ್ರಿಯೆ ಇದೆ; ಇದು ಬರಿಯ ಸಂಪ್ರದಾಯ, ಸಮಯ; ಇಲ್ಲಿ ಬರೆದವನು ವಿದ್ವತ್ತನ್ನು ಮಾತ್ರ ಮೆರೆಯುತ್ತಿದ್ದಾನೆ; ಇನ್ನೊಂದಕ್ಕೆ ಬುಡ ಭದ್ರವಿಲ್ಲ' – ಎಂಬಂತೆ ನುಡಿಯಬಲ್ಲರು. ಅಥವಾ 'ಹೌದು, ಇದನ್ನು ಒಪ್ಪಿಕೊಂಡುಬಿಟ್ಟರೆ ಇನ್ನೇನೇನನ್ನೊ ಒಪ್ಪಿಕೊಳ್ಳಬೇಕಾಗುತ್ತದೆ, ನೋಡಿ' – ಎಂದು ಪ್ರಶ್ನೆ ಕೇಳುತ್ತಾರೆ. ಅಥವಾ 'ಇದನ್ನು ಬಿಟ್ಟರೆ ಇನ್ನು ಯಾವುದನ್ನು ನಾವು ಜನಸಾಮಾನ್ಯರ ದಿನಚರಿಯ ಜೀವನಕ್ಕೆ ನಂಬಿಕೆಯಾಗಿ ನೆಮ್ಮದಿಯಾಗಿ ಕೊಡಬಹುದು?' – ಎಂದಾರು.

ಎಷ್ಟು ವಿಶಾಲವಾಗಿ ಮಾತು ಆಲೋಚನೆ ಮಾಡಿದರೂ ಆಚಾರವಿಚಾರಗಳಲ್ಲಿ ಅವರು ಸಂಪ್ರದಾಯವಂತರು. ಅಲ್ಲಿಯೂ ಕುರುಡು ಅಥವಾ ಕಡುನಿಷ್ಠೆ ಇಲ್ಲ. ಊಟ ಉಪಚಾರಗಳಲ್ಲಿ ಒಟ್ಟು ಜೀವನದಲ್ಲಿ ಹೇಗೊ ಹಾಗೆ ರಸಜ್ಞರು; ಸಹೃದಯರು, ಸುಹೃದರು. ಅವರು ಭಾಷಾಂತರ ಮಾಡಿದ ಸುಂದರಪಾಂಡ್ಯನ 'ಆರ್ಯಾ' ಎಂಬ ಒಂದು ಸಣ್ಣ ಖಂಡ ಕಾವ್ಯ ಈಚೆಗೆ ಬಂದಿತು. ಅಂಥ ಗ್ರಂಥಗಳನ್ನು ಹುಡುಕುವುದು; ಅವನ್ನು ಆಯ್ದು ನಮ್ಮ ತಾಯ್ನುಡಿಗೆ ಮಾಡುವುದು ಅವರಿಗೆ ಸಂತೋಷದ ಕಾರ್ಯ. ಅದರಂತೆಯೇ ಪ್ರಾಕೃತದ ಶಾಲಿವಾಹನನ 'ಗಾಥಾಸಪ್ತಶತಿ'ಯನ್ನು ತೆಲುಗಿಗೆ ಮಾಡಿದರು. ಅದಕ್ಕೆ ಸಮಾನವಾದ ಸಾಮಾನ್ಯ ಜೀವನದ ಚಿತ್ರ ಭಾರತೀಯ ಕವಿತೆಯಲ್ಲಿ ಇಲ್ಲವೆನ್ನಬಹುದು. ಮೊದಲು ಸುಮಾರು ೧೯೩೫ರಲ್ಲಿ ಪ್ರಕಟವಾದ ನೂರು ಪದ್ಯಗಳಿಗೆ ಪೀಠಿಕೆ ಬರೆದ ಶ್ರೀ ರೆಡ್ಡಿ ಅವರು ಅದನ್ನು ಮೆಚ್ಚಿರುವ ರೀತಿ ಒಂದು ಸಾಹಿತ್ಯದ ದರ್ಶನವನ್ನು ಕಾಣಿಸುತ್ತದೆ.

ಸಂಸ್ಕೃತದ ಪ್ರೌಢ ಗ್ರಂಥಗಳಲ್ಲಿ ಯಾವ ಗುಣ, ಹಿರಿಮೆ ಇದೆ ಎಂಬುದನ್ನು ಅವರು ಬಲ್ಲರು. ಅದನ್ನು ಮೆಚ್ಚಿ ಪ್ರಶಂಸಿಸುವಾಗ ಅವರ ಬುದ್ಧಿ ಪ್ರಖರವಾಗಿ ಯಾವ ವಿದ್ವಾಂಸನಿಗೂ ಅಚ್ಚರಿತರುವಂತೆ ವ್ಯಾಖ್ಯಾನ ಮಾಡಬಲ್ಲರು. ಆಮುಕ್ತಮಾಲ್ಯದ, ವಸುಚರಿತ್ರೆ, ಮನುಚರಿತ್ರೆ, ಪಿಂಗಳಿ ಸೂರಣನ ಕೃತಿ ಮುಂತಾದುವನ್ನು ಪ್ರತಿಪಾದಿಸುವಾಗ ಅವರ ಮನಸ್ಸು ಹರಿಯುವ ರೀತಿ ಒಂದೇ. ತಿಕ್ಕನ ಸೋಮಯಾಜಿಯ ಭಾರತವನ್ನು ಮೆಚ್ಚುವಾಗ ಒದಗುವ ಮನಸ್ಸು ಇನ್ನೊಂದು ತೆರದ್ದು. ತಿಕ್ಕನನ ಬಗ್ಗೆ ಅವರು ಒಮ್ಮೆ ಎನ್. ಎಸ್. ರಾಮಚಂದ್ರಯ್ಯನವರಿಗೆ ಬರೆದ ಒಂದು ಕಾಗದದಲ್ಲಿನ ಈ ಮಾತುಗಳನ್ನು ಉದ್ಧರಿಸಬಹುದು:

'ಇದು ಪ್ರಪಂಚದ ಮಹದ್ಗ್ರಂಥದಲ್ಲಿ ಒಂದಾದ ವ್ಯಾಸರ ಭಾರತವನ್ನೇ ಅನುಸರಿಸಿದ ಸ್ವತಂತ್ರ ತರ್ಜುಮೆ. ಆದರೂ ವ್ಯಾಸರೇ ತೆಲುಗಿನಲ್ಲಿ ಬರೆದಿದ್ದರೆ ಇದಕ್ಕಿಂತ ಚೆನ್ನಾಗಿ ಬರೆದಿರಲಾರರೆಂಬ ಭಾವನೆ, ತೃಪ್ತಿಯುಂಟುಮಾಡಿಕೊಡುವ ರಚನೆ. ಅದರಲ್ಲಿಯೂ ವಿರಾಟ ಮೊದಲು ಸ್ವರ್ಗಾರೋಹಣಾಂತ ಬರೆದ ತಿಕ್ಕನ ಸೋಮಯಾಜಿಯ ಕೈವಾಡ ಇತರರಿಗೆ ನಿಲುಕದ ಕವಿಬ್ರಹ್ಮನದು. ಎಲ್ಲೆಯನ್ನೂ ಗೆಲ್ಲುವ ಹಿಂದೂ ಮುಂದೂ ಮೀರದ

ಉದ್ಯೋಗ, ಏಳೇಳು ಎರಡನ್ನೂ ಸಮವಾಗಿ ಗಂಭೀರವಾಗಿ ನಿರ್ವಹಿಸಿದ ಆತನ ಕಾವ್ಯಶಕ್ತಿ ಅಸಾಧಾರಣವಾದ್ದು. ಮೂಲದ ಮೂರರಲ್ಲಿ ಒಂದು ಪಾಲಾಗಿ ಇಳಿದಿದ್ದರೂ ಅದರ ಮರ್ಮ ಗಾಂಭೀರ್ಯ ಭವ್ಯತೆ ಇವೆಲ್ಲವನ್ನೂ ಕಂಡು ತೋರಿಸಬಹುದಾದದ್ದು. ಇದರಲ್ಲಿ ವಿರಾಟೋದ್ಯೋಗಗಳು ಮಾತ್ರವೇ ಅತ್ಯುತ್ತಮ. ರಚನಾಕುಶಲತೆ, ಭಾಷೆ, ಶೈಲಿ, ಛಂದಸ್ಸು, ಅಲಂಕಾರ ಮುಂತಾದುವು ಯಾವ ಮಿತಿಗಳಿಗೂ ಸೇರಿದುವಲ್ಲ. ಹರಿಹರೋಪಾಸಕನಾಗಿ ಕರ್ಮಠನಾಗಿ ರಾಜಕೀಯ ನೀತಿಯಲ್ಲಿ ಧರ್ಮಪಥದಲ್ಲಿ ನುರಿತ ಆತನ ಅಸಾಧಾರಣ ಕಾವ್ಯತಪಸ್ಸಿನ ಪ್ರಶಾಂತಚಿತ್ತದ ಪ್ರತಿಭಾಫಲ.' ಎಂಬಾಗ, ಅವರ ಪ್ರಶಂಸೆ ಯಾವ ಮಟ್ಟದ್ದಾಗುತ್ತದೆ ಎಂಬುದನ್ನು ಅರಿಯಬಹುದು. ಅವರು ಮೂಲ ಭಾರತವನ್ನು ವ್ಯಾಸಂಗ ಮಾಡಿದವರು. (ರಾಮಾಯಣ ಭಾಗವತಗಳೂ ಹಾಗೇ). ಅದು ಕಾವ್ಯವೆಂದು ಪರಿಗಣನೆ ಮಾಡುವ ಇಷ್ಟ ನೂರಕ್ಕೆ ನೂರು ಭಾಗ ಅವರಿಗೆ ಮೆಚ್ಚಿತೊ ಇಲ್ಲವೊ. ಹದಿನೈದನೆಯ ಶತಮಾನದ ಒಬ್ಬ ಕವಿ ತೆಲುಗಿಗೆ ಭಾರತವನ್ನು ಸಂಗ್ರಹಿಸುವಾಗ ಯಾವ ಗುಣವನ್ನು ತನ್ನ ಭಾಷಾಂತರಕ್ಕೆ ತಂದಿದ್ದಾನೆ ಎಂಬುದನ್ನು ಅವರು ಕಾಣಿಸಬೇಕಾಗಿದೆ. ಆ ಸಂದರ್ಭದಲ್ಲಿ ತೆಲುಗು ಭಾರತವನ್ನು ಮನಸ್ಸಿನಲ್ಲಿ ತೂಗುವ ರೀತಿ ಅದು. ನಮ್ಮವರಲ್ಲಿ ಕೆಲವರಿಗೆ ನಾರಣಪ್ಪನ ಭಾರತದಲ್ಲಿ ಪ್ರೀತಿ ಇದೆ. ಕೆಲವರಿಗೆ ಪಂಪಭಾರತದಲ್ಲಿ ಗೌರವವಿದೆ. ಯಾವನಾದರೊಬ್ಬ ಕನ್ನಡ ಕವಿ ತಿಕ್ಕನನ ಜೊತೆಗೆ ತೂಗಲು ಅರ್ಹನಾದವನು ಇದ್ದರೆ ಅವನು ಪಂಪ ಎಂದಿದ್ದಾರೆ. ಅದನ್ನು ತೆಲುಗಿಗೆ ಭಾಷಾಂತರ ಮಾಡಬೇಕೆಂದು ಕೂಡ ಅವರು ಇಷ್ಟಪಟ್ಟದ್ದುಂಟು. ಪಂಪನ ಅಡಕ, ರಚನೆಯ ಶಕ್ತಿ, ಕಲ್ಪನಾಸಾಹಸ ಅವರಿಗೆ ಪಕ್ಷಪಾತವನ್ನು ತರುವ ಸಂದರ್ಭಗಳಾದರೂ ಯಾವುದನ್ನು 'ರಾಜಕೀಯ ನೀತಿಯಲ್ಲಿ.....ಕಾವ್ಯ ತಪಸ್ಸಿನ ಪ್ರಶಾಂತಚಿತ್ತದ ಪ್ರತಿಭಾಫಲ' ಎನ್ನುತ್ತಾರೊ ಆ ಮಟ್ಟಕ್ಕೆ, ತೂಕಕ್ಕೆ ಬಹುಶಃ ಪಂಪನನ್ನು ಅವರು ಏರಿಸುವುದಿಲ್ಲ. ವಯಸ್ಸಿನಲ್ಲಿ ನೆಲಸಿನಲ್ಲಿ ಅಭಿರುಚಿಯ ಶುದ್ಧಿ ಉನ್ನತಿಗಳಲ್ಲಿ ತಿಕ್ಕನನ ಏರಿಗೆ ಪಂಪ ಏರುತ್ತಾನೊ ಇಲ್ಲವೊ ಅನ್ನಿಸಿತು ಇವರಿಗೆ. ಮುಖ್ಯವಾಗಿ ಉದ್ಯೋಗಪರ್ವದಲ್ಲಿ ಈ ಎರಡೂ ಕವಿಗಳ ತಾರತಮ್ಯವನ್ನು ವಿವೇಚಿಸುತ್ತ ತಿಕ್ಕನನ ಮಹೋನ್ನತಿಯನ್ನು ಅವರು ಹೆಚ್ಚು ಮಾನ್ಯ ಮಾಡುತ್ತಾರೆ. ಸಹಜವೇ. ಇಬ್ಬರು ಕವಿಗಳ ಉದ್ದೇಶ ಬೇರೆ, ಅವಕಾಶ ಬೇರೆ. ಪಂಪನಲ್ಲಿ ನೇರವಾಗಿ ಕೃಷ್ಣದುರ್ಯೋಧನರಿಗೆ ಮಾತು ನಡೆದು ಗುಡುಗು, ಮಿಂಚು, ಸಿಡಿಲು ಹುಟ್ಟಿ ಕೆಲವೇ ಪದ್ಯಗಳ ಉರುಬಿನಲ್ಲಿ ಪ್ರಸಂಗ ಮುಗಿಯುತ್ತದೆ. ಸೋಮಯಾಜಿ ಮೂಲ ಮಹಾಭಾರತದಲ್ಲಿನಂತೆ ವಿಸ್ತಾರ, ರಮಣೀಯತೆಗಳಲ್ಲಿ ಆ ಸನ್ನಿವೇಶದ ದರ್ಶನಗಳನ್ನು ಕಾಣಿಸುತ್ತಾನಾಗಿ ಈ ಪಕ್ಷಪಾತ ಎದ್ದು ಕಾಣುತ್ತದೆ. ತಿಕ್ಕನನದು ಮಹಾಭಾರತ; ಪಂಪನ ಭಾರತ ವಿಕ್ರಮಾರ್ಜುನ ವಿಜಯವಲ್ಲವೆ? ಬೇರೆ ಕಾವ್ಯಗಳನ್ನು ನಮ್ಮ ಭಾಷೆಗೆ ತಂದಿರುವಾಗ ಅವರು ಅದನ್ನು ಕಾಣುವ ರೀತಿ, ನುಡಿದ ಮಾತು ಇದು.

ತಾವೇ ನೇರವಾಗಿ ಭಾಷಾಂತರಿಸಿರುವ 'ಗಾಥಾಸಪ್ತಶತಿ'ಯಲ್ಲಿ, 'ಆರ್ಯಾ'ದಲ್ಲಿ ಅವರು ಅನುಸರಿಸಿರುವ ರೀತಿ ಮುದ್ದಾದ್ದು. ಏಳುನೂರು ಶ್ಲೋಕಗಳ ಶಾಲಿವಾಹನನ 'ಸಪ್ತಶತಿ' ಬಹುಪ್ರಾಚೀನವಾದ ಗ್ರಂಥ. ಶ್ಲೋಕಗಳೆಲ್ಲ ಮುಕ್ತಕಗಳು. ಒಂದೊಂದಕ್ಕೆ

ಅನುಕ್ರಮ ಸಂಬಂಧವಿಲ್ಲ. 'ತೋಚಿದ ಭಾಗವನ್ನು ಆಗಲೇ ಬರೆದಿಟ್ಟಂತೆ, ಚಕ್ಕಂದ ಇಲ್ಲದ ಶೃಂಗಾರ, ಲೋಕಾನುಭವ ಪರಿಶೀಲನೆ, ಜೀವಿತವನ್ನು ಪ್ರಶಾಂತವಾಗಿ ನೆಮ್ಮದಿಯಿಂದ ಸಾಗಿಸುವುದಕ್ಕೆ ಬೇಕಾದ ಆವರಣ ಮಾತ್ರ ಇವೆ ಇದರಲ್ಲಿ. ಇಲ್ಲಿಯ ಉಪದೇಶ ದೇಶ ಕಾಲ ಜಾತಿ ಮತಗಳ ಪರಿಮಿತಿ ವಿವಕ್ಷೆಗಳಿಲ್ಲದೆ ಸಮಸ್ತರಿಗೂ ಅನ್ವಯಿಸುತ್ತದೆ' ಎಂದು 'ಆರ್ಯಾ'ವನ್ನು ಕನ್ನಡಿಸಿರುವ ಡಾ.ವಿನೋದಾ ಹೇಳಿದ್ದಾರೆ. ಅಲ್ಲಿನ ಒಂದು ಪದ್ಯ –

ಅಲ್ಪಾಕ್ಷರ ರಮಣೀಯಂ
ಯತ್ಕಥಯತಿ ನಿಶ್ಚಿತಂ ಸ ವೈ ವಾಗ್ಮೀ
ಬಹುವಚನಮಲ್ಪಸಾರಂ
ಯಃ ಕಥಯತಿ ವಿಪ್ರಲಾಪೀ ಸಃ

ಎಂದು ನುಡಿಯುವ ಮನಸ್ಸು ಅವರಿಗೆ ತುಂಬ ಪ್ರಿಯ. 'ಆರ್ಯಾ'ದಲ್ಲಿ ನೀತಿ, ಲೋಕಜೀವನ, ಹಿತಬೋಧೆ ತುಂಬಾ ಚೆನ್ನಾಗಿ ತಿಳಿಯಾಗಿ ರೂಪುಗೊಂಡಿದೆ. 'ಸಪ್ತಶತಿ'ಯಲ್ಲಿರುವುವು ಬಹುಮಟ್ಟಿಗೆ ಸಾಮಾನ್ಯ ಜನ ದಿನಜೀವನದಲ್ಲಿ ಕಾಣುವ ಬಾಳಿನ ಚಿತ್ರಗಳು. ಅಲ್ಲಿನ ಸಹಜತೆ, ನಿರಾಳ ಮನಸ್ಸು, ಮುಚ್ಚುಮರೆಯಿಲ್ಲದೆ ಮನಸ್ಸನ್ನು ತಿಳಿಸುವ ಹಾರ್ದತೆ, ನೈಜಭಾವ ಪ್ರಪಂಚದ ಯಾವ ಸಾಹಿತ್ಯನಿರ್ಮಾಣಕ್ಕೂ ಸರಿತೂಗಬಲ್ಲದ್ದು. ಎಲ್ಲ ಜೀವಗಳೂ ಹೀಗಿರಬಾರದೆ, ನುಡಿಯಬಾರದೆ ಎನ್ನಿಸುವಷ್ಟು ಸುಕುಮಾರ ಅಂತಃಕರಣವುಳ್ಳ, ಆದರೂ ಧೀರವಾದ, ಮುದ್ದಾದ ಗಾಥೆಗಳು ಅವು. ರೆಡ್ಡಿಯವರೆನ್ನುವಂತೆ ಅದು ತೆಲುಗು ಸಾಹಿತ್ಯಕ್ಕೆ ಪಂಡಿತರು ಕೊಟ್ಟಿರುವ ದೊಡ್ಡ ಕಾಣಿಕೆ.

ಒಂದೊಂದು ಸಮಯದಲ್ಲಿ ಪ್ರವರಸೇನನ 'ಸೇತುಬಂಧ' ಕಾವ್ಯವನ್ನು ಅವರು ಹೆಸರಿಸುತ್ತಿದ್ದುದುಂಟು. ಜಾಂಬವಾನ್ ಎಷ್ಟು ಹಳಬ. ಅವನ ವಕ್ಷಸ್ಥಳ ಹೇಗೆ ಒಂದು ಕಾಡಿನ ಹಾಗೆ, ಗವಿಯ ಹಾಗೆ ಇತ್ತು! ಸಮುದ್ರಮಂಥನದ ಕಾಲಕ್ಕಿಂತ ಹಿಂದಿನವ ತಾನು; ಲಕ್ಷ್ಮೀ, ಕೌಸ್ತುಭ, ಅಮೃತ ಇನ್ನೂ ಹುಟ್ಟದಿದ್ದ ಕಾಲ ಅದು – ಎಂದು ಅವನು ತಿಳಿಸುವ ಪ್ರಾಕೃತ ಪದ್ಯಗಳನ್ನು ಅವರು ಹೇಳುವಾಗ ಆ ಪದ್ಯಗಳ ಸೊಗಸು, ಭಾಷೆ, ತುಂಬು ಮೆರುಗು ಕೊಡುತ್ತದೆ. ವರಾಂಗನಾಚರಿತ ಮುಂತಾದ್ದರಿಂದ ಎತ್ತಿದ ವಾಕ್ಯಗಳು, ಅಥವಾ ಇನ್ನೆಲ್ಲಿಂದಲೊ ಕ್ಲಿಷ್ಟವಾದ ಒಂದು ವಾಕ್ಯವನ್ನೆತ್ತಿ ಅದನ್ನು ಬಿಡಿಸಿ ಹೇಳುವರು. ಇವರು ಹೇಳುವುದರಲ್ಲಿಯೇ ಅರ್ಥ ವ್ಯಕ್ತವಾಗುತ್ತದೆ. ಮಹಾರಾಜಾ ಕಾಲೆಜಿನ ಸಂಸ್ಕೃತ ಕನ್ನಡ ಸಾಹಿತ್ಯಗಳನ್ನು ಕುರಿತ ಅಥವಾ ಪ್ರಾಕೃತದ ಒಂದು ವಾಕ್ಯದ ಅರ್ಥ ವಿವರಿಸುವ ಸಂಬಂಧದಲ್ಲಿ ನಮ್ಮ ಕಾಲದಲ್ಲಿ ಯಾರೂ ಅವರ ಸಲಹೆ ಕೇಳುತ್ತಿದ್ದುದು ರೂಢಿ. ಈಚೆಗೆ ಡಾ. ಎ. ಎನ್. ಉಪಾಧ್ಯೆ ಅವರನ್ನು ಜೈನ ದರ್ಶನ ಅಧ್ಯಯನಕ್ಕಾಗಿ ಕರಸಿ ಪ್ರಾಕೃತ, ಅರ್ಧಮಾಗಧಿ ವ್ಯಾಸಂಗ ಕ್ಷೇತ್ರವನ್ನು ಆರಂಭಮಾಡಿದ್ದು ಈ ಬಗೆಗೆ ದೊಡ್ಡ ವ್ಯಾಸಂಗ ಮಾಡುವ ಅವಕಾಶವಾಗಿದೆ. ಆದರೆ ಅವರೂ ತೀರಿಕೊಂಡುದು ದೊಡ್ಡ ನಷ್ಟವಾಗಿದೆ. ಶಾಸ್ತ್ರವಾಗಿ ಒಂದನ್ನು ಓದುವುದಕ್ಕೂ ಯಾವುದೊ ವಾಕ್ಯದ ಅರ್ಥನಿರ್ದೇಶನ, ಭಾವ ಪ್ರಕಾಶನ, ವ್ಯಾಪ್ತಿ – ಇವನ್ನು ಕುರಿತು ಹೇಳುವುದಕ್ಕೂ ಯಾವುದೊ ಸಂದರ್ಭಕ್ಕೆ ಎಲ್ಲಿನದೊ ಒಂದು ಸುಷ್ಠುವಾದ ಉಕ್ತಿಯನ್ನು ಹೇಳಿ ಬೆಳಕು ಹಾಯಿಸುವುದು ಎಲ್ಲರ

ಪಾಲಿಗೂ ಬರುವ ಯೋಗ್ಯತೆಯಲ್ಲ. ಪಂಡಿತರದು ಅಂಥ ಅಪರೂಪ ಶಕ್ತಿ. ಎರಡು ಸಂದರ್ಭಗಳನ್ನು ಇಲ್ಲಿ ತಿಳಿಸುತ್ತೇನೆ. ಪೊನ್ನನ ಶಾಂತಿಪುರಾಣದಲ್ಲಿ ಒಂದು ಕಡೆ 'ವಿಕ್ಕ' ಎಂಬ ಮಾತು ಬರುತ್ತದೆ. ಎಷ್ಟು ಹುಡುಕಿದರೂ ಅರ್ಥ ಸಿಕ್ಕಿರಲಿಲ್ಲ. ಯಾವುದೋ ಸಮಯದಲ್ಲಿ ಇವರನ್ನು ಕೇಳಿದೆ. ಒಂದು ವಯಸ್ಸಿನ (ಬಹುಶಃ ಹತ್ತು) ಆನೆಯ ಮರಿ ಎಂದು ಅವರು ಒಡನೆಯೆ ಉತ್ತರ ಕೊಟ್ಟು ಯಾವುದೂ ನಿಘಂಟಿನ ಮಾತು ಹೇಳಿದರು. ಪರೀಕ್ಷೆ ಪತ್ರಿಕೆಯಲ್ಲಿ ಅದಾದ ಬಹುಕಾಲದ ಮೇಲೆ ಈ ಮಾತುಳ್ಳ ಪದ್ಯವನ್ನು ಸೇರಿಸಿದಾಗ, ಡಿ. ಎಲ್. ನರಸಿಂಹಾಚಾರ್ಯರು ಹಿಂದಿನಿಂದ ಒಂದು ಚೀಟಿಯನ್ನು ನನಗೆ ಕಳಿಸಿದರು. 'ಈ ಶಬ್ದದ ಅರ್ಥ ಗೊತ್ತಿಲ್ಲವಲ್ಲವೆ?' ಎಂದು. ಪಂಡಿತರಿಂದ ಸಹಾಯ ಪಡೆದಿದ್ದ, ಮೋನಿಯರ್ ವಿಲಿಯಂಸ್ ಮುಂತಾದ್ದರಿಂದ ನಿಶ್ಚಯಗೊಂಡಿದ್ದ ನಾನು ಆ ಬಗೆಯಲ್ಲಿ ನಿಶ್ಚಿತವಾದ ಜ್ಞಾನ ಉಳ್ಳಂತೆ ಈ ಅರ್ಥವನ್ನು ತಿಳಿಸಿ, ಪಂಡಿತರು ಹೇಳಿದ್ದ ನಿಘಂಟಿನ ಮಾತನ್ನು ಬರೆದು ಕಳಿಸಿದೆ. ಸುಲಭವಾಗಿ ಇನ್ನೊಬ್ಬರ ಮಾತನ್ನು ಒಪ್ಪದ ಆಚಾರ್ಯರು 'ಸರಿ' ಎಂದರು. ಇನ್ನೊಂದು ಸಂದರ್ಭ ಭಕ್ತಿಯನ್ನು ಕುರಿತದ್ದು. ಶ್ರೀವೈಷ್ಣವರಲ್ಲಿ ವಿಷ್ಣುಭಕ್ತಿ ಪ್ರಪತ್ತಿ ಎಂಬ ಮಾತು ವಿಶೇಷವಾಗಿ ಬರುತ್ತದೆ. 'ಭಕ್ತಿರಹೈತುಕೀ' ಎಂಬುದು ಒಂದು. 'ಕೃಪೆ' ಎಂಬುದು ಇನ್ನೊಂದು. ದೇವರು ಪತಿತಪಾವನ ಎಂಬುದು ವಿಶೇಷವಾಗಿ ಬರುವ ಮಾತುಗಳು. ಈ 'ಅಹೈತುಕೀ' ನಿರ್ವ್ಯಾಜ ಎಂಬುದನ್ನು ಕುರಿತೂ ಪ್ರಪತ್ತಿಯ ನೆಲಸನ್ನು ಕುರಿತೂ ಪಂಡಿತರು ಒಂದು ದಿನ ಸೂಕ್ಷ್ಮವಾಗಿ ನನಗೆ ತಿಳಿವಳಿಕೆ ಕೊಟ್ಟರು. ಭಗವಂತನ ಕೃಪೆಗೆ ಅವನ ಅನುಗ್ರಹ, ಪ್ರಸಾದಗಳು ಕಾರಣವೇ ಹೊರತು, ಕಡೆಗೆ ಭಕ್ತನು ಕೂಡ ಕಾರಣವಾಗಬೇಕಿಲ್ಲ – ಎಂಬ ಮಟ್ಟಿಗೆ ಮಾತು ಬೆಳೆದಿರುವ ಪ್ರಸಂಗಗಳನ್ನು ಹೇಳಿದರು. 'ಯ ಮೈ ವೇಷ ವೃಣುತೇ ತೇನ ಲಭ್ಯಃ/ನ ಮೇಧಯಾ ನ ಬಹುನಾ ಶ್ರುತೇನ' ಎಂಬ ಮಾತುಗಳನ್ನು ಆ ಸಮಯದಲ್ಲಿ ಹೇಳಿ ಇಲ್ಲಿಗೆ ಅಳವಡಿಸಬಹುದು. ಇದು ಭಗವತ್ಕೃಪೆಯ ಒಂದು ಲಕ್ಷಣವಾಗುತ್ತದೆ. ಅದು ಪರಮಲಕ್ಷಣವೆಂಬಂತೆ ಅಲ್ಲಿ ಅರ್ಥದ ನೆಲಸು.

ಪತಿತರು ಎಂದರೆ ಎಷ್ಟು ಪತಿತರಾದರೂ ಆಗಬಹುದಲ್ಲವೆ? ಅಂಥವರನ್ನು ಉದ್ಧಾರ ಮಾಡಿದರಲ್ಲವೆ ದೇವರಿಗೆ ಈ ಕೀರ್ತಿ ಸಲ್ಲುತ್ತದೆ? – ಎಂಬುದನ್ನು ವೆಂಕಟಾಧ್ವರಿಯ 'ವಿಶ್ವ ಗುಣಾದರ್ಶ'ದಲ್ಲಿ ನುಡಿಯುವ ಒಂದು ಪದ್ಯ ಎಷ್ಟು ಕಟುವಾಗಿರಬಲ್ಲದು ಎಂಬುದನ್ನೂ ಉದಾಹರಿಸಿದರು.

ಕೇಚಿತ್ ವಿಪ್ಲಾವಯಂತೇ ಜಗದಭಿದಧತಃ
ಕೇಶವಂ ದೋಷಭೋಗ್ಯಂ....

ಕೇಶವನು ದೋಷಭೋಗ್ಯನು ಎಂಬ ಲಕ್ಷಣದಿಂದ ಕೆಲವು ಜನ ದೇವರಿಗೇ ಮೂದಲೆ ಕೊಡುವರಂತೆ: 'ಕೇಶವನು ನಿಜವಾಗಿ ಪತಿತಪಾವನನಾದರೆ ನಮ್ಮನ್ನು ಉದ್ಧಾರ ಮಾಡಲಿ' ಎಂಬುದು ಅವರ ಸವಾಲು. 'Finding in the deepest depths of degradation a depth deeper still!' ಎಂಬಂತೆ ದಿನದಿನಕ್ಕೂ ಹೆಚ್ಚು ಪತಿತರಾಗಿ ವಿಪ್ಲವವನ್ನೇ

ಉಂಟುಮಾಡುತ್ತಾರೆ ಎಂಬ ಎಚ್ಚರಿಕೆಯನ್ನು ಕೊಟ್ಟಿದ್ದಾನೆ. ಅವರ ಜ್ಞಾನದ ವಿಸ್ತಾರ, ಅದರೊಳಗಿನ ಪ್ರಜ್ಞಾಲಕ್ಷಣ, ಅಷ್ಟು ನಯವಾದ್ದು. ವಿಷಯಗಳನ್ನು ಒಳಗಿಂದ ಬೆಳಗತಕ್ಕದ್ದು.

ಸಾಹಿತ್ಯದಲ್ಲಿ ಸಂಗೀತದಲ್ಲಿ ಇನ್ನಷ್ಟು ನಯವಾಗಿ, ಮೃದುವಾಗಿ ಆ ಮನಸ್ಸು ಕಾರ್ಯ ಮಾಡುವಂಥದು. ಒಮ್ಮೆ ರಾಮಾಯಣವ ಯುದ್ಧಕಾಂಡದಲ್ಲಿ ವಿಭೀಷಣನಿಗೆ ಸಂಬಂಧಿಸಿದ ಒಂದು ಭಾಗವನ್ನು ಓದಿ ಹೇಳಿದರು. ರಾವಣ, ಕುಂಭಕರ್ಣ, ವಿಭೀಷಣ ಇವರ ಸಂಬಂಧ ಮೂರು ನೆಲಸಿನವು. ಇವನ್ನೇ ಕುರಿತು ವಿವರವಾಗಿ ಪರಿಶೀಲಿಸಬೇಕೆನಿಸುತ್ತದೆ: ಮಾನವಸ್ವಭಾವ, ಶೀಲಸಂಸ್ಕಾರಗಳ ದೃಷ್ಟಿಯಿಂದ, ರಾಜಕೀಯ ನೀತಿಯ ದೃಷ್ಟಿಯಿಂದ, ವ್ಯಕ್ತಿ ವ್ಯವಹಾರ ದೃಷ್ಟಿಯಿಂದ. ನನಗೆ ಅನೇಕ ವೇಳೆ ಎನ್ನಿಸಿದೆ: ಕೋರಿಯೊಲೇನಸ್ – ಭೀಷ್ಮ ವಿಭೀಷಣ – ಬ್ರೂಟಸ್ ಮುಂತಾದವರನ್ನು ಆಯಾ ಸನ್ನಿವೇಶಗಳಿಗೆ ತಕ್ಕಂತೆ ಹೋಲಿಸುವಾಗ ಇಂದಿನ ರಾಷ್ಟ್ರಜೀವನದ – ರಾಜನೀತಿಯ ದೃಷ್ಟಿಯಿಂದಲೂ ಪರಿಶೀಲಿಸಬೇಕೆನಿಸುತ್ತದೆ. ಇದು ಕೃತಕ ವಿಚಕ್ಷಣೆಯಾಗಬಾರದು. ವಿಭೀಷಣನ ಉಪದೇಶ ನ್ಯಾಯವಾದ್ದು, ಸಾಧುವಾದ್ದು, ಸಾತ್ವಿಕವಾದ್ದು. ಆದರೆ ಇದು ಅಣ್ಣನಿಗೆ ತೃಪ್ತಿ ಉಂಟು ಮಾಡಲಿಲ್ಲ. ನೀನು ತೊಲಗಿಹೋಗು ಎಂದು ರಾವಣನು ಹೇಳಿದ. ವಿಭೀಷಣನು ನಾಲ್ವರು ಜೊತೆಯವರೊಡನೆ ಲಂಕೆಯಿಂದ ಹೊರಟು ರಾಮನನ್ನು ಸೇರಿಕೊಂಡು ಲಂಕೆಯ ಮೇಲೆ ದಂಡೆತ್ತಿ ಬಂದ. ಅವನಿಗೆ ರಾಜ್ಯದ ಆಸೆ ಇಲ್ಲದೆಯೂ ಇರಲಿಲ್ಲ. ಆ ಕಾಲದಲ್ಲಿ ವಿಭೀಷಣನ ಹೆಂಡತಿ ಮಕ್ಕಳಿಗೆ ಯಾವ ಜೀವದ ಅಪಾಯವೂ ರಾಜಕ್ರೋಧವೂ ಎರಗದಿದ್ದುದು ಆಶ್ಚರ್ಯ. ಮೊದಲ ಯುದ್ಧಕಾಲದಲ್ಲಿ ಮೌಂಟ್ ಬ್ಯಾಟನ್ ತಂದೆಯವರು ಜರ್ಮನರಾದ್ದರಿಂದ ಅವರು ನಿರ್ಬಂಧದಲ್ಲಿರಬೇಕಾಯಿತಂತೆ. ಯುದ್ಧವಿರೋಧಿಯಾದ ಬರ್ಟ್ರಂಡ್ ರಸೆಲ್ ಮುಂತಾದವರು ಕಾರಾಗೃಹಗಳ ರುಚಿ ಅನುಭವಿಸಬೇಕಾಯಿತು. ಕುಂಭಕರ್ಣನು ಅಣ್ಣನಿಗೆ ತನ್ನ ಅಸಮಾಧಾನವನ್ನು ತಿಳಿಸಿ ಅವನು ತನ್ನ ಸಲಹೆಗೆ ಒಡಂಬಡದಿರಲು ಬೇರೆ ಕರ್ತವ್ಯ ತೋರದೆ ನಿದ್ರೆ ಮಾಡಿದನು. ಯುದ್ಧ ಮಾಡಬೇಕಾದ ಪ್ರಸಂಗ ಬಂದಾಗ ಪುನಃ ಅಣ್ಣನಿಗೆ ಹೇಳಿ ನೋಡಿ ಕೃತಾರ್ಥನಾಗದಿರಲು, ಅಣ್ಣನ ಪರವಾಗಿ ಅಥವಾ ಲಂಕೆಯ ಅಥವಾ ರಾಕ್ಷಸರ ಪರವಾಗಿ ಯುದ್ಧ ಮಾಡಿದ. ಭೀಷಣವಾಗಿ ಆವೇಶಗೊಂಡು ಅವನು ಬರುತ್ತಿರುವಾಗ ಅದನ್ನು ಕಂಡು ವಿಭೀಷಣನೇ ಅವನೆದುರಿಗೆ ನಡೆಯುತ್ತಾನೆ.

ವಿಭೀಷಣಂ ಪುರೋ ದೃಷ್ಟ್ವಾ ಕುಂಭಕರ್ಣೋऽಬ್ರವೀದಿದಂ
ಪ್ರಹರಸ್ವ ರಣೇ ಶೀಘ್ರಂ ಕ್ಷತ್ರಧರ್ಮೇ ಸ್ಥಿರೋ ಭವ
ಭ್ರಾತೃಸ್ನೇಹಂ ಪರಿತ್ಯಜ್ಯ ರಾಘವಸ್ಯ ಪ್ರಿಯಂ ಕುರು
ಅಸ್ಮತ್ ಕಾರ್ಯಂ ಕೃತಂ ವತ್ಸ ಯಸ್ತ್ವಂ ರಾಮಮುಪಾಗತಃ
ತ್ವಮೇಕೋ ರಕ್ಷಸಾಂ ಲೋಕೇ ಸತ್ಯಧರ್ಮಾಭಿರಕ್ಷಿತಾ
ನಾಸ್ತಿ ಧರ್ಮಾಭಿರಕ್ತಾನಾಂ ವ್ಯಸನಂ ತು ಕದಾಚನ
ಸಂತಾನಾರ್ಥಂ ತ್ವಮೇವೈಕಃ ಕುಲಸ್ಯಾಸ್ಯ ಭವಿಷ್ಯಸಿ
ರಾಘವಸ್ಯ ಪ್ರಸಾದಾತ್ತ್ವಂ ರಕ್ಷಸಾಂ ರಾಜ್ಯಮಾಪ್ಸ್ಯಸಿ

ಪ್ರಕೃತ್ಯಾ ಮಮ ದುರ್ಧರ್ಷ ಶೀಘ್ರಂ ಮಾರ್ಗಾದಪಕ್ರಮ
ನ ಸ್ಥಾತವ್ಯಂ ಪುರಸ್ತಾನ್ ಮೇ ಸಂಭ್ರಮಾನ್ನಷ್ಟಚೇತಸಃ
ನ ವೇದ್ಮಿ ಸಂಯುಗೇ ಶಕ್ತಃ ಸ್ವಾನ್ ಪರಾನ್ ವಾ ನಿಶಾಚರ
ರಕ್ಷಣೀಯೋSಸಿ ಮೇ ವತ್ಸ ಸತ್ಯಮೇತತ್ ಬ್ರವೀಮಿ ತೇ

ಎನ್ನುತ್ತಲೂ ವಿಭೀಷಣನು ಹೀಗೆ ಹೇಳುತ್ತಾನೆ:

ಗದಿತಂ ಮೇ ಕುಲಸ್ಯಾಸ್ಯ ರಕ್ಷಣಾರ್ಥಮರಿಂದಮ
ನ ಶ್ರುತಂ ಸರ್ವರಕ್ಷೋಭಿಃ ತಥೋSಹಂ ರಾಮಮಾಗತಃ

ಇಲ್ಲಿಗೆ ಮುಗಿಯಲಿಲ್ಲ ಪ್ರಸಂಗ. ಮುಂದಿನ ಒಂದು ವಾಕ್ಯ ಅತ್ತ ಸನ್ನಿವೇಶದ ಹಾರ್ದತೆಯನ್ನೂ ಇತ್ತ ಪಂಡಿತರ ಮನಸ್ಸಿನ ಆರ್ದ್ರತೆಯನ್ನೂ ತೋರುವಂಥದು.

ಏವಮುಕ್ತ್ವಾಶ್ರು ಪೂರ್ಣಾಕ್ಷೋ ಗದಾಪಾಣಿರ್ವಿಭೀಷಣಃ
ಏಕಾಂತಮಾಶ್ರಿತೋ ಭೂತ್ವಾ ಚಿಂತಯಾಮಾಸ ಸಂಸ್ಥಿತಃ

ಮಾನವಹೃದಯ ಸ್ವರೂಪವೆಂಥದು ಎಂಬುದನ್ನು ಸೂಚಿಸುವಲ್ಲಿ ಇಂಥ ಪ್ರಸಂಗಗಳ ದೊಡ್ಡತನ ಕಾಣಬೇಕಾದರೆ ಸಾಹಿತ್ಯ ಪಾಠವನ್ನು ಹೇಳುವವರು ಇಂಥವನ್ನು ಆಯ ಬೇಕೆನ್ನಿಸುತ್ತದೆ.*

ಸಾಹಿತ್ಯ ಪ್ರಸಂಗದ ಜೊತೆಗೆ ಸಂಗೀತದಲ್ಲಿ ಅವರು ಎಷ್ಟು ಆಸ್ಥೆಯುಳ್ಳವರು; ಅವರ ಸಂಗೀತಶಾಸ್ತ್ರಜ್ಞಾನ ಎಷ್ಟು ಖಚಿತ; ಅವರ ಅಭ್ಯಾಸ ಎಷ್ಟು ಮುಖ್ಯವಾದುದು – ಎಂಬುದನ್ನು ತಿಳಿದಿರುವವರಿಗೆ ಅವುಗಳ ಪರಿಚಯವಿದ್ದೀತು. ಸಭೆಗಳಲ್ಲಿ, ದೊಡ್ಡ ಕಚೇರಿಗಳಲ್ಲಿ ಅವರು ಕಸುಬುದಾರರಂತೆ ಕಚೇರಿ ಮಾಡಿರುವುದು ಹೆಚ್ಚಿಲ್ಲವಾದರೂ ಕೆಲವು ಸಂದರ್ಭಗಳಲ್ಲಿ ಪಿಟೀಲು ಮೃದಂಗಗಳೊಡನೆ ಸಂಗೀತಗೋಷ್ಠಿ ನಡಸಿರುವುದುಂಟು. ನಾನು ಮೈಸೂರಿಗೆ ಹೋಗುವ ಹೊತ್ತಿಗೆ (೧೯೧೭) ಅವರು ಕೊಳಲು ಅಭ್ಯಾಸಮಾಡಿ ಆರೋಗ್ಯದ ಯಾವುದೊ ಕಾರಣದಿಂದ ಅದನ್ನು ಬಿಟ್ಟಿದ್ದರು. ಅದರಲ್ಲಿಯೂ ಅವರಿಗೆ ಸನ್ನಾನ ಬಂದಿತ್ತಂತೆ. ಕೆಲವು ಕಾಲ ಕಂಠಶಕ್ತಿ ಕೆಟ್ಟು ಅವರು ಪಾಡುಪಟ್ಟುದುಂಟು. ಆದರೆ ಚಿಕಿತ್ಸೆಗಳನ್ನು ಮಾಡಿಕೊಂಡು ಅಭ್ಯಾಸ ಬಿಡದೆ ಏಕಾಂಗಿಯಾಗಿ ಅವರು ಹಾಡಿಕೊಂಡುದನ್ನು ನಾನು ಬಲ್ಲೆ. ಅಂಥ ಸಂದರ್ಭಗಳಲ್ಲಿ ಅವರ ಮುಖ ಕಳೆಗುಂದಿ ಸ್ವಲ್ಪ ಖಿನ್ನರಾಗಿದ್ದುದು ಕಂಡುಬರುತ್ತಿತ್ತು. ಒಂದು ಸಂದರ್ಭವನ್ನು ಬೇರೆ ಕಡೆ ವರ್ಣಿಸಿದ್ದೇನೆ. ಅವರು ಒಂದು ಪ್ರದೋಷದ ದಿನ ಮೈಸೂರು ಸಂತೆಪೇಟೆ ರಾಮಮಂದಿರದಲ್ಲಿ ಒಬ್ಬರೇ ಕುಳಿತು 'ತೆರ ತೀಯಗ ರಾದಾ ನಾಲೋನಿ' ಎಂಬ ಗೌಳಿಪಂತು ರಾಗದ ಕೀರ್ತನೆಯನ್ನು ಹಾಡುತ್ತಿದ್ದುದನ್ನು ಕೇಳಿದ್ದೇನೆ. ಅಂದಿನ ಅಲ್ಲಿನ ಹೃದ್ಯತೆ, ರಾಗ ಸಾಹಿತ್ಯಗಳ ಸುಭಗ ಸಂಯೋಗ, ಕೃತಿಯ ಸಾಹಿತ್ಯದೊಡನೆ ಬೆರೆತು ಮಹೋನ್ನತ ಅಭಿವ್ಯಂಜನೆ ಸಾಧಿಸಿತು

---

* ಭೀಷ್ಮರ ಗುಣಶೀಲ ಉನ್ನತ. ಆದರೆ ಅವರು ಕಡೆಯವರೆಗೂ ಕೌರವರ ಕಡೆಗೇ ಏಕೆ ನಿಂತರು ಎಂಬುದರ ವಿಚಾರ ಯುಕ್ತ.

ಎಂಬುದು, ಐವತ್ತು – ಅರವತ್ತು ವರ್ಷಗಳಿಗೆ ಮೀರಿ ಆ ಕೃತಿಯನ್ನೂ ಅದರ ಹಿಂದಿನ ಹಾಡುಗಾರಿಕೆಯನ್ನೂ ಸ್ವಚ್ಛವಾಗಿ ಇಂದೂ ನನ್ನ ಮನಸ್ಸಿನಲ್ಲಿ ಉಳಿಸಿದೆ. 'ನಾ ಲೋನಿ ತೆರ ತೀಯಗ ರಾದಾ' ಎಂಬ ಭಾಗದಲ್ಲಿಯ 'ನಾ ಲೋನಿ' ಎಂಬಲ್ಲಿನ ಸ್ವರಸಂಚಾರ, ಭಾವಸಂಚಾರ ಪ್ರಕಾಶನ ಅವರೇ ಈಚೆಗೆ ಇನ್ನೆಷ್ಟೋ ಸಲ ಹಾಡಿದಾಗ ರೂಪುಗೊಂಡಿಲ್ಲ. ಆ ಕೀರ್ತನೆಯ ಸನ್ನಿವೇಶ, ಆ ಚರಣಗಳಲ್ಲಿನ ಚಿತ್ರಗಳು ಒಟ್ಟು ಹೇಳುವ ಕೃತಿಗೆ ಹೇಗೆ ಸಂಬಂಧಿಸಿದವೊ: ನಾನು ಅನುಭವಿಸಿದ್ದೇನೆ. ಎರಡು ಚರಣದ ಚಿತ್ರಗಳೂ ತುಂಬ ಖಚಿತವಾಗಿ ಚೆಲುವಾಗಿವೆ. ಮೂರನೆಯ ಚರಣಕ್ಕೆ ಬರುವಾಗ ಅರ್ಥದ ನೆಲಸು ಉನ್ನತಿಗಳೇ ಬೇರೆಯಾಗಿ ಮಾನವ ಸಾಮಾನ್ಯನ ತಬ್ಬಲಿತನ ಹೃದಯವಿದ್ರಾವಕವಾಗಿ ವರ್ಣಿತವಾಗುತ್ತದೆ. ಅನೇಕ ವೇಳೆ ನುಡಿಗಳನ್ನು ಏಕಾಂಗಿಯಾಗಿ ನುಡಿದುಕೊಂಡಿದ್ದೇನೆ. 'ವಾಗುರಮನಿ ತೆಲಿಯಗ ಮೃಗ ಗಣಮುಲು ವಚ್ಚಿ ತಗುಲು ರೀತಿ ಉನ್ನದಿ' ಎಂಬಲ್ಲಿನ ಅಕ್ಷರಸಂಯೋಜನೆ, ನಾದಸಾಮರಸ್ಯ, ಲೋಕಪರಿಸ್ಥಿತಿ ಲೋಕಜೀವನದ ಉಕ್ತಿಗೆ ಮೇಲ್ಪಟ್ಟು, ದೀನಸ್ಥಿತಿಯನ್ನು ಎತ್ತಿ ನುಡಿಯುತ್ತದೆ. 'ವಾ' ತರುವಾಯದ ಹದಿನಾಲ್ಕು ಲಘುಗಳ ಸಂಯೋಜನೆಯಲ್ಲಿ ಮೃಗಗಣಗಳೆಲ್ಲ ಓಡಿ ವಾಗುರಕ್ಕೆ ಹೇಗೆ ಸಿಕ್ಕಿಬೀಳುತ್ತವೆ ಎಂಬುದರ ಚಿತ್ರಕ್ಕೆ ಪೋಷಕವಾಗುತ್ತದೆ. ಆ ಕೀರ್ತನೆ ಅಂದು ಅವರ ಜೀವನದ ಸ್ಥಿತಿಗೂ ಹೊಂದುವಂತಿತ್ತು. ಆ ಸಂಜೆಯ ಸಂಗೀತ ಅಂಥ ಫಲವನ್ನೂ ದೊರಕಿಸಬೇಕಾದರೆ ಭಾವ, ಸನ್ನಿವೇಶ ಸಮಯದ್ದು. ಹಾಡುವವರು, ಕೇಳುವವರು ಅಂಥ ಸಮಾನತೆ ಸಾಧಿಸಿದರೆ ಒಂದು ಪುಣ್ಯದ ಫಲವೇ ಎನ್ನಬೇಕು. ಮಂದಿರದಲ್ಲಿ ಅಂದಿದ್ದವರು ಪೂಜಾರಿ ಒಬ್ಬರೇ. ಇವರು ಒಂಟಿ. ನಾನು ಅಕಸ್ಮಾತ್ತಾಗಿ ವಾಕಿಂಗಿನಿಂದ ಹಿಂತಿರುಗಿದವನು ಅಲ್ಲಿಗೆ ಹೋದೆ. ಆ ಏಕಾಂತ ಫಲಿಸಿತ್ತು.

ಕ್ಷೇತ್ರಯ್ಯನ ಪದಗಳನ್ನೂ ಮೀರಿಸಿ ಈಚೆಗೆ ಅಣ್ಣಮಾಚಾರ್ಯರ ಪದಗಳ ಹಾಡುಗಾರಿಕೆಯಲ್ಲಿ ಅವರು ಎಷ್ಟು ಬಗೆಯ ಮನಸ್ಸಿನ ಸಾಮರಸ್ಯವನ್ನು ಸಾಧಿಸಬಲ್ಲರೆಂಬುದನ್ನು ಯಾರೂ ಕಾಣಬಹುದು. ಅದನ್ನು ಹಾಡುವುದರಲ್ಲಿ ಎರಡಕ್ಕೂ ಯಾವುದೋ ಸಾಂಪ್ರದಾಯಿಕವಾದ ಮಾರ್ಗಗಳಿರಬೇಕು. ತಾಮ್ರ ಪಟ್ಟಿಗಳಲ್ಲಿ ಬರೆದಿದ್ದ ಅಣ್ಣಮಾಚಾರ್ಯರ ಗೀತಗಳನ್ನು ಸಂಗೀತಕ್ಕೆ ಸಂಪಾದಿಸಿ, ಅವಕ್ಕೆ ಸ್ವರಪ್ರಸ್ತಾರ ಹಾಕಿ ರೂಢಿಸಿ, ಗ್ರಂಥಕ್ಕೆ ಪ್ರಸ್ತಾವನೆಯನ್ನು ಬರೆದು ಪ್ರಕಟಿಸುವ ಮಾರ್ಗರಚನೆ ಅವರ ಪಾಲಿಗೆ ಬಂದುದು ಸಂತೋಷದ ಕೆಲಸ. ಅಲ್ಲಿನ ರಾಗಗಳ ಚರಿತ್ರೆ, ಪ್ರತಿ ರಾಗದ ಹೃದ್‌ರಹಸ್ಯ, ನಾದ ಸ್ಥಾಯಿಗಳ ಜೀವ ಕಲ್ಪನೆ ಹೇಗಾಗಿವೆ ಎಂದು ಅವರು ವಿವೇಚಿಸಿ ತಿಳಿಸುವ ರೀತಿ ಕೇವಲ ಅವರದೇ. ಅಲಂಕಾರಶಾಸ್ತ್ರಕ್ಕೆ ಸಂಬಂಧಿಸಿದ ಹಾಗೆ ಒಂದು ಸಣ್ಣ ಪುಸ್ತಕವನ್ನು ಬರೆದಿದ್ದರಂತೆ. ಅದನ್ನು ಅಚ್ಚು ಮಾಡಿಸಲಿಲ್ಲ. ಈಚೆಗೆ ಸಂಸ್ಕೃತದಲ್ಲಿದ್ದ ನೃತ್ಯ ನಾಟ್ಯಗಳ ಸಂಬಂಧದ ಗ್ರಂಥವನ್ನು ತೆಲುಗಿಗೆ ಭಾಷಾಂತರಿಸಿದ್ದಾರೆ.

ರೆಡ್ಡಿಯವರು ಇವರು ಮೊದಲು 'ಸಪ್ತಶತಿ'ಯ ನೂರನ್ನು ಆಯ್ದು ತೆಲುಗಿಗೆ ತಂದಾಗ ಒಂದು ಪೀಠಿಕೆ ಬರೆದರು. ಅದರ ಕಡೆಯ ಭಾಗದ ಒಂದೆರಡು ಮಾತುಗಳನ್ನು ಸೇರಿಸಿ ಇದನ್ನು ಮುಗಿಸುತ್ತೇನೆ.

'ಒಂದು ಪದ್ಯವನ್ನು ಬರೆಯಬೇಕು. ಅದು ಮಿಂಚುಹುಳುವಿನಂತೆ ನಮ್ಮನ್ನು ಕವಿಯುವ ಅಂಧಕಾರವನ್ನು ಒಂದು ಕ್ಷಣ ಹೊರದೂಡಿ ನೂತನ ಲೋಕವನ್ನು ಒಂದು ನಿಮಿಷ ಮಾತ್ರ ಎದುರಿಗೆ ತೋರಿಸಿದರೇನು? ಅದರ ರಾಮಣೀಯಕ ಜೀವವೆಲ್ಲವನ್ನೂ ಆಕ್ರಮಿಸಿ ಸಾಯುವವರೆಗೂ ತದೇಕಧ್ಯಾನದಲ್ಲಿ ಮುಳುಗುವಂತೆ ಮಾಡುತ್ತದೆ. ಅಂತಹ ಕವಿಗಳೇ ಪ್ರಧಾನ; ರಾಶಿಯಲ್ಲ.

'ಗಾಥಾಸಪ್ತಶತಿ ಬೌದ್ಧಯುಗದ ಕಾಲದ ಉತ್ಕೃಷ್ಟಜೀವಿತವನ್ನು ತಿಳಿಸುತ್ತದೆ. ಭಾವಗಳು ಕೋಮಲ. ಅವಕ್ಕಿಂತ ಈಟಾದ್ದು ಅನಂತಕೃಷ್ಣಶರ್ಮರ ಶೈಲಿ: ಮಧುರ, ಲಲಿತ, ರಮಣೀಯ. ಇವರ ಸರಸತ್ವವನ್ನು ಅರ್ಹತೆಗೆ ತಕ್ಕಂತೆ ಹೊಗಳುವುದು ಅಸಾಧ್ಯ.'

✸

ಈಚೆಗೆ ಅವರು ತೀರಿಕೊಂಡ ನೋವು ನನಗಿದೆ. ಮುಖ್ಯ ಲೇಖನದ ಕೆಲವು ವಾಕ್ಯಗಳು ಇಲ್ಲಿ ಅವರು ಜೀವಂತವಾಗಿರುವಂತೆ ಇವೆ. ನನಗೆ ಅವರು ದಾನಮಾಡಿರುವುದು ನುಡಿದು ಮುಗಿಯದ, ಬೆಲೆಗಟ್ಟಲಾಗದ ಸಾರಸ್ವತ ಸೌಭಾಗ್ಯ. ಅಂಥವರನ್ನು ಕಂಡುದು, ಅವರು ನುಡಿದುದು ನನ್ನ ಬಾಳಿಗೆ ಎಷ್ಟು ಸಂತೋಷವನ್ನು ಕೊಟ್ಟಿದೆಯೊ ಅದನ್ನು ತಿಳಿಸುವುದು ಕಷ್ಟ. ಅವರ ಮಾತಿನಿಂದ ನನಗೆ ದೊರೆತ ತಿಳಿವು ಎಷ್ಟು ದೊಡ್ಡದೊ ಜೀವವಿಸ್ತಾರಕವೊ– ಅದನ್ನೂ ಹೇಳಲಾರೆ. ಅವಕ್ಕೆ ಋಣ ಹೊತ್ತು ನಿರಂತರವಾಗಿ ಅವನ್ನು ನೆನೆಯುತ್ತಿರುತ್ತೇನೆ.

ಅವರು ತೀರಿಕೊಳ್ಳುವ ಮುಂಚೆ ನಾನು ಅವರಲ್ಲಿಗೆ ಹೋದೆ. ಅವರ ಮನಸ್ಸು ಯಾವ ಕಳವಳವೂ ಇಲ್ಲದೆ ಇತ್ತು. 'ನಾನು ಮಾಡಬೇಕಾದುದನ್ನು ನನ್ನ ಕೈಯಲ್ಲಾದ ಮಟ್ಟಿಗೆ ಮಾಡಿದ್ದೇನೆ; ನನಗಿನ್ನಾವ ಅತೃಪ್ತಿಯೂ ವಿಷಾದವೂ ಇಲ್ಲ' ಎಂದರು. ಅವರ ಮನಸ್ಸು ಅಷ್ಟು ಸಮಾಧಾನದಲ್ಲಿತ್ತು. ತಿಳಿದವರೆನ್ನುವವರ ಮನಸ್ಸು ಈ ತಿಳಿಯನ್ನು ಸಂಪಾದಿಸುತ್ತದೆ. ಸಾಹಿತ್ಯ, ಸಂಗೀತ, ಆಳವಾದ ಆಲೋಚನೆ, ಬದುಕಿನಲ್ಲಿ ಅವರಿಗೆ ಬಂದಿದ್ದ ತೀರ್ಮಾನಗಳು, ಯಾವುದರಲ್ಲೂ ಅತಿಗೆ ಹೋಗದೆ ತನ್ನ ನೇಮನಿಷ್ಠೆಗಳಲ್ಲಿ ಸಾಧಿಸಿದ ಸತ್ಫಲ ಆ ಸಂಸ್ಕಾರ. ಒಂದು ಸಣ್ಣ ಕೋರಕವಾಗಿದ್ದದ್ದು ಬಲಿತು, ಬೆಳೆದು, ಬಿರಿದು, ಅರಳಿ ದೊಡ್ಡ ತಾವರೆಯಾಗಿ, ಸಹಸ್ರದಳ ಪದ್ಮವಾಗುವಂತೆ ಅವರ ಜೀವ ಅರಳಿತು.

೧೯೭೪ರ ಡಿಸೆಂಬರಲ್ಲಿ ಮದರಾಸಿನ ಮ್ಯೂಸಿಕ್ ಅಕಾಡೆಮಿಯ ವಾರ್ಷಿಕ ಸಂಗೀತ ಮಹಾಸಮ್ಮೇಳನದಲ್ಲಿ ಇವರನ್ನು ಅಧ್ಯಕ್ಷರನ್ನಾಗಿ ಆರಿಸಿ 'ಸಂಗೀತಕಲಾನಿಧಿ' ಎಂಬ ಬಿರುದನ್ನು ಕೊಟ್ಟು ಸನ್ಮಾನಿಸಿದರು. ಆಗ ತಮ್ಮ ಹರ್ಷವನ್ನು ಸೂಚಿಸಿದ ಒಬ್ಬ ಮಿತ್ರರಿಗೆ ತಮ್ಮ ವಂದನೆ ತಿಳಿಸಿ ಬರೆದ ಪತ್ರದಲ್ಲಿನ ಒಂದೆರಡು ಸಾಲು ಅವರ ಸ್ವಭಾವವನ್ನೂ ಮನಸ್ಸನ್ನೂ ತಿಳಿಸುತ್ತದೆ: 'ನಿಜವಾಗಿ ನನ್ನ ವ್ಯಾಸಂಗವೆಲ್ಲ ಹಸಿವಿಲ್ಲದವನ ಊಟದೆಲೆಯಂತೆ ಬರಿ ಎಂಜಲುಮಯ, ಅಷ್ಟೆ. ಎಲ್ಲದಕ್ಕೂ ಕೈಹಾಕಿ ಯಾವುದರ ಆಳಕ್ಕೂ ಇಳಿಯದ – ಇಳಿಯಲಾರದ ವೃತ್ತಿ. 'ಪುಣ್ಯೈರ್ಯಶೋ ಲಭ್ಯತೇ' ಎಂಬುದು ನನ್ನಲ್ಲಿ ಸಾರ್ಥಕ. ಆದರೆ ಆ ಪುಣ್ಯ ಇನ್ನಾರದೋ, ನನ್ನದಲ್ಲ; ಈ ಜನ್ಮದ್ದಂತೂ ಅಲ್ಲ.' ವಿನಯದಲ್ಲಿ ಅವರು

ಬಳಸಿರುವ 'ಹಸಿವಿಲ್ಲದವನ' ಎಂಬ ಮಾತನ್ನೂ ಎರಡನೆಯ ವಾಕ್ಯವನ್ನೂ ನಾವು ಒಪ್ಪಬೇಕೆಂಬ ಕಡ್ಡಾಯವಿಲ್ಲ. ಕಾರಣ ಇಷ್ಟೆ: ಯಾವ ಕಲೆಯನ್ನೂ ಶಾಸ್ತ್ರವನ್ನೂ ಆಳವಾಗಿ ವ್ಯಾಸಂಗಮಾಡಬೇಕಾದರೂ ಈವರೆಗೆ ಉತ್ಪನ್ನವಾದ ಗ್ರಂಥ, ಆಲೋಚನೆ, ಸಾವಿರಾರು ವರ್ಷಗಳ ಸಾಧನೆ, ಆ ಎಲ್ಲವನ್ನೂ ಗ್ರಹಿಸಬೇಕು ಎಂದು ಯತ್ನಿಸಿದರೂ ಒಂದು ಜೀವಿತ ಕಾಲವೆಲ್ಲ ಹಿಡಿಯುತ್ತದೆ. ಅವನ್ನೆಲ್ಲ ಸಂಗ್ರಹಿಸಿದ ಮೇಲೂ ಮಥಿತವಾಗಿ ಕಡೆಯ ತಿಳಿವಳಿಕೆಗೆ ಬಂದಿದ್ದೇವೆಂದು ಯಾರು ಹೇಳಬಲ್ಲರೊ ಅವರು ಕೃತಾರ್ಥರು.

ಕಡೆಯ ದಿನಗಳಲ್ಲಿ ತಿರುಪತಿ ವೆಂಕಟೇಶ್ವರ ವಿಶ್ವವಿದ್ಯಾನಿಲಯದವರು ಪಂಡಿತರಿಗೆ ಗೌರವ ಡಾಕ್ಟೊರೇಟ್ ಪದವಿ ನೀಡಿ ಸನ್ಮಾನಿಸಿದರು. ತಿರುಪತಿಯ ವೆಂಕಟೇಶ್ವರ ದೇವಾಲಯದವರು ಅವರನ್ನು ಆಸ್ಥಾನ ವಿದ್ವಾಂಸರೆಂದು ಗೌರವಿಸಿದರು. ಅವರನ್ನು ನೆನೆವಾಗೆಲ್ಲ 'Clarity is the varnish of the noble minds' ಎಂಬ ಫ್ರೆಂಚ್ ವಿಮರ್ಶಕನ ಮಾತೂ 'Clearness is the literacy conscience of the soul' ಎಂಬ ಇನ್ನೊಬ್ಬನ ಮಾತೂ ಫಲಿಸುತ್ತವೆ.

ಎನ್. ಕೆ. ದೀಕ್ಷಿತ್

ಎನ್. ಕೆ. ದೀಕ್ಷಿತ್ ಧಾರವಾಡದಲ್ಲಿ ಹೆಸರಾದ ವಕೀಲರು. ಎನ್. ಎಂದರೆ ನರಸಿಂಗರಾಯರು. ಆ ಕಡೆಯ ಜನ ದೀಕ್ಷಿತ್ ಮುಂತಾದ ಮನೆಯ ಅಥವಾ ವಂಶದ ಹೆಸರುಗಳಿಂದಲೇ ಕರಸಿಕೊಳ್ಳುವುದು ರೂಢಿ. ನಮ್ಮ ಕಡೆ ತಂದೆಯ ಹೆಸರಾಗಲಿ, ಊರಿನ ಅಥವಾ ಮನೆಯ ಹೆಸರಾಗಲಿ ಮೊದಲ ಹೆಸರುಗಳಾಗಿ, ಮೊದಲಕ್ಷರಗಳಲ್ಲಿ ಸೂಚಿತವಾಗಿ ವ್ಯಕ್ತಿಯ ಹೆಸರು ಹೇಳುವುದು ಪದ್ಧತಿ. ಇವರದು ಮಹಾರಾಷ್ಟ್ರದ ಕಡೆಯಿಂದ ಬಂದ ಸಂಪ್ರದಾಯವೊ ಪಾಶ್ಚಿಮಾತ್ಯ ಸಂಪರ್ಕದಿಂದ ಬಂದುದೊ ಹೇಳಲಾರೆ. ಆ ಊರಲ್ಲಿ ದೊಡ್ಡ ನ್ಯಾಯಶಾಲೆಗಳ ವಕೀಲರಲ್ಲಿ ಹೆಚ್ಚು ಸಂಪಾದನೆ ಇರುವ ವ್ಯಕ್ತಿಗಳಲ್ಲಿ ದೀಕ್ಷಿತರೊಬ್ಬರು. ಅವರು ಕೇಸುಗಳನ್ನು ತೆಗೆದುಕೊಳ್ಳುವ ಮುಂಚೆಯೇ ವಿಷಯವನ್ನು ಕೇಳಿ 'ನನ್ನ ಫೀ ಇಷ್ಟಾಗುತ್ತದೆ. ನಿಮಗೆ ಕೊಡಲು ಶಕ್ತಿಯಿದ್ದರೆ ತೆಗೆದುಕೊಳ್ಳುತ್ತೇನೆ' ಎಂದು ಹೇಳಿದ್ದನ್ನು ಕೇಳಿದ್ದೇನೆ. ಬಂದ ಕುಳಗಳಿಗೆ ಆ ಶಕ್ತಿಯಿದ್ದರೆ ಅವರನ್ನು ಕೋರಿಕೊಳ್ಳುತ್ತಾರೆ. ಕಡಮೆಗೆ ವ್ಯವಹಾರವನ್ನು ಕೈಕೊಳ್ಳುವವರಿದ್ದರೆ ಅಲ್ಲಿಗೆ ಹೋಗಬಹುದು ಎನ್ನುತ್ತಾರೆ. ಇದು ಅವರ ಸ್ವಭಾವದ ಒಂದು ಲಕ್ಷಣ. ಎಲ್ಲವೂ ಖಚಿತ; ಖಡಾಖಂಡಿತ. ಅವರಿರುವುದು ಮಾಳಮಡ್ಡಿ ಎಂದು ಪ್ರಖ್ಯಾತವಾದ ದಿಣ್ಣೆಭೂಮಿಯಲ್ಲಿ. ಮರಡಿ ಎನ್ನುವುದು ಮಡ್ಡಿ ಆಗಿದೆ ಎಂದು ಕಾಣುತ್ತದೆ. ಅನೇಕ ಜನ ಮೇಧಾವಿಗಳೂ ಶ್ರೀಮಂತರೂ ಆ ಸುಮಾರಲ್ಲಿ ಮನೆಗಳನ್ನು ಕಟ್ಟಿಕೊಂಡಿದ್ದಾರೆ. ಅದು ರೈಲ್ವೆ ಸ್ಟೇಷನಿಗೂ ಕೋರ್ಟುಗಳಿಗೂ ಹತ್ತಿರ. ಹಿಂದೆ ನಾಲ್ಕಾರು ಸಲ ಧಾರವಾಡಕ್ಕೆ ಹೋಗಿದ್ದೆನಾದರೂ ಮೂವತ್ತರ ದಶಕದಲ್ಲಿಯೇ ಒಮ್ಮೆ ನನಗೆ ದಸರೆ ಉತ್ಸವಕ್ಕಾಗಿಯೊ ಬೇರೆ ಇನ್ನೊಂದು ಸಂದರ್ಭದಲ್ಲಿಯೊ ಧಾರವಾಡದಿಂದ ಆಹ್ವಾನ ಬಂದು, ನನ್ನನ್ನು ಅವರ ಮನೆಯಲ್ಲಿ ಉಳಿಸಿಕೊಂಡಿದ್ದರು. ಅವರನ್ನು ಆ ಹಿಂದೆ ಕಂಡಿದ್ದೆನೊ ಇಲ್ಲವೊ. ಬಹುಶಃ ಮೊದಲ ಸಾರಿ ೧೯೨೫ರಲ್ಲಿ ಬೆಳಗಾಮಲ್ಲಿ ಕನ್ನಡ ಸಾಹಿತ್ಯ ಸಮ್ಮೇಳನ ಆದಾಗ, ನನಗೆ ಆತ್ಮೀಯರಾದ ರಂಗಪ್ಪ ಪೋತದಾರರ ಜೊತೆಗೆ ಇವರನ್ನು ಹೊರಗಿನಿಂದ ಬಂದವರ ವಿಭಾಗದಲ್ಲಿ ಕಂಡಿದ್ದೆನೊ ಏನೊ; ಖಚಿತವಾಗಿ ಹೇಳಲಾರೆ. ಅಲ್ಲಿಂದ ಈ ಮೊದಲ ಆತಿಥ್ಯಕ್ಕೆ ಹತ್ತು ವರ್ಷಗಳ ಅಂತರ.

ಅವರ ಮನೆ ಏಂದಾಗ, ಒಂದು ದೊಡ್ಡ ಕಾಂಪೌಂಡಲ್ಲಿ ಪಶ್ಚಿಮಕ್ಕೆ ಹೆಬ್ಬಾಗಿಲುಳ್ಳ ಕಡೆಯಿಂದ ಕೆಳಗಿನ ಎದುರುಬದುರು ಮನೆಗಳಿರುವ ಒಂದು ಭಾಗ. ಮೇಲೆ ಬಂಗಲೆಯಂಥ ಇನ್ನೊಂದು. ನಡುವೆ ಮಾವು ಮುಂತಾದ ಹಣ್ಣುಗಿಡಗಳನ್ನು ಬೆಳಸಿದ್ದಾರೆ. ಕೆಳಗಿನ ಭಾಗದ ಒಂದು ಕಡೆ ನಾವು ಮುಂದಿನ ಗೇಟಲ್ಲಿ ಹೋಗುವಾಗ – ಅವರ ಕಚೇರಿ ಎಡಗಡೆ. ಅವರು ವಕೀಲಿ ವೃತ್ತಿಯನ್ನು ಕೈಕೊಳ್ಳುವಾಗ ಅವರ ಮಾವಂದಿರ ವಕೀಲಿ ಕಚೇರಿಯಲ್ಲಿ ಕೆಲಸ ಮಾಡಿದರೆಂದೂ ತರುವಾಯ ಅದನ್ನು ಬೆಳಸಿದರೆಂದೂ ಕೇಳಿದ್ದೇನೆ. ಎಂದರೆ, ಮೊದಲಿನಿಂದಲೂ ನಡೆದುಬಂದಿದ್ದ ಒಂದು ವಕೀಲಿ ಕಚೇರಿ, ಕುಳವರ್ಗ

ಇದ್ದುದೇ ಆಯಿತು ಅವರ ನೆರವಿಗೆ. ಕೆಳಗಿನ ಮನೆಯ ಇನ್ನೊಂದು ಭಾಗದಲ್ಲಿ ಮೊಟ್ಟಮೊದಲಿಗೆ ಅವರ ಸಂಸಾರ ಇದ್ದು, ಅಲ್ಲಿಯೂ ಬಹುಶಃ ಊಟಮಾಡಿದ್ದೆಂಬ ನೆನಪು. ಆಮೇಲೆ ಅವರ ಸಂಸಾರ ಪೂರ್ತಿಯಾಗಿ ಮೇಲಿನ ಬಂಗಲೆಯಲ್ಲಿ ನೆಲೆಗೊಂಡಿದೆ. ಅಡಿಗೆಯವರೂ ಕೆಲಸದವರೂ ಇದ್ದಾರೆ. ಹೆಣ್ಣುಮಕ್ಕಳು, ಬಂದು ಹೋಗುವವರು; ಮನೆ ತುಂಬಿದ್ದ ಹಾಗಿರುತ್ತದೆ. ಅವರ ಬಂಗಲೆಯ ಇನ್ನೊಂದು ಪಕ್ಕದಲ್ಲಿಯೇ ಬಡಗು ಬಾಗಿಲ ಬಳಿ ಅವರ ಅಳಿಯ ಇನಾಮದಾರರು. ಇದೇ ವಕೀಲಿವೃತ್ತಿಯಲ್ಲಿ ಇವರ ಕಚೇರಿಯಲ್ಲೇ ಇದ್ದು, ಬಹುಶಃ ವಾಸ ಮಾಡುತ್ತಿದ್ದಾರೆ. ಆ ಎರಡು ಮನೆಗಳಿಗೂ ನಡುವೆ ಎದುರಿಗೆ ದೊಡ್ಡ ಬಾವಿ ಇದೆ. ಮನೆಗೆ ಕುಡಿವ ನೀರು, ಹೂಗಿಡಗಳಿಗೆ ಮರಗಳಿಗೆ ಎರೆಯುವ ನೀರು ಒದಗುತ್ತದೆ. ಬಂಗಲೆಯ ಕಾಂಪೌಂಡಲ್ಲಿ ಹೂವಿನ ಗಿಡಗಳಿವೆ.

ಇವನ್ನೆಲ್ಲ ಹೇಳುವುದಕ್ಕೆ ಕಾರಣ: ಅವರ ಜೀವನ ನಡುಮಟ್ಟದ್ದಲ್ಲ ಹೆಚ್ಚುಕಡಮೆ ಮೇಲಟ್ಟದ ಶ್ರೀಮಂತರದು ಎಂದು ತಿಳಿಸಲು. ಸಾಮಾನ್ಯವಾಗಿ ವ್ಯವಹಾರದ ಕುಳಗಳನ್ನು ಬಂಗಲೆಯ ಮೊದಲ ಒಳಸಾಲೆಯಲ್ಲಿಯೆ ಕೂಡಿಸಿ ಮಾತನಾಡಿ ಕಾರ್ಯ ಮುಗಿದ ಕೂಡಲೆ ಕಳಿಸುತ್ತಾರೆ. ಅಲ್ಲಿಯೂ ಕೆಲಸದ ಮೇಜು, ಕಾನೂನಿನ ಪುಸ್ತಕಗಳು, ಇನ್ನು ಕೆಲವು ಪ್ರಿಯವಾದ ಪುಸ್ತಕಗಳು, ಸಾಂಸ್ಕೃತಿಕ ಹಿನ್ನೆಲೆಯಿಂದ ಬೆಲೆಯುಳ್ಳ ಪುಸ್ತಕಗಳ ತೆರೆದ ಕಪಾಟು ಇವೆ. ಅಲ್ಲಿ ಪುನಃ ಎದುರುಬದುರಿನ ಎರಡು ಕೋಣೆಗಳು. ಅವರು ಅತಿಥಿಗಳನ್ನು ಕರೆದಾಗ ಅವುಗಳಲ್ಲಿ ಒಂದನ್ನು ಅವರಿಗೆ ಅಣಿಮಾಡಿಟ್ಟಿರುತ್ತಾರೆ. ತಾವು ಕೊಂಡು ಹೋದ ಹಾಸಿಗೆ ಬಟ್ಟೆಗಳನ್ನು ತೆರೆಯದೆಯೇ ಇಂದಿನ ದೊಡ್ಡ ಹೊಟೇಲುಗಳಲ್ಲಿ ಸಿದ್ಧವಾಗಿಟ್ಟಿರುವ ಮಂಚ, ಹಾಸಿಗೆ, ಹೊದಿಕೆ ಇರುವಂತೆ ಅಲ್ಲಿ ಸಜ್ಜಿರುತ್ತದೆ. ಸ್ವಲ್ಪ ಹೆಚ್ಚು ಪರಿಚಯವಿದ್ದು ಕೇವಲ ಲಘು ಉಪಚಾರ ನಡೆಯಬೇಕಾಗಿರುವಾಗ ಒಳಸಾಲೆಯಲ್ಲಿ; ಅಲ್ಲಿಯೂ ಎರಡೂ ಪಕ್ಕ ಕೋಣೆಗಳು. ಒಂದು ಮೇಜಿನ ಮೇಲೆ ಟೀಸಾಮಾನು ಬಿಸ್ಕಿಟ್ ಮುಂತಾದ ತಿಂಡಿತೀರ್ಥಗಳು. ಹೆಚ್ಚು ಕೊಡಬೇಕಾಗಿರುವಾಗ ಅವು ಒಳಗಿಂದ ಬಂದು ಈ ಅತಿಥಿಗಳಿಗೆ ಲಘು ಉಪಚಾರ ನಡೆಯುತ್ತದೆ. ಒಳಕ್ಕೆ ಎಡಕ್ಕೆ ಅಡುಗೆಯ ಮನೆ. ಅಲ್ಲಿಂದ ಹೊರಗಡೆ ಈಚೆಗೆ ಊಟಕ್ಕೆ ಕೂಡುವ ಮನೆ. ಬಲಗಡೆಗೆ ಉಗ್ರಾಣ, ಇತರ ಹೆಣ್ಣುಮಕ್ಕಳ ಕೊಠಡಿ ಇರುತ್ತವೆ. ಅಲ್ಲಿಂದ ಹೊರಗೆ ದೊಡ್ಡದಾದ ಒಂದು ಬಚ್ಚಲು ಮನೆ. ಬರಿಯ ಕೈಕಾಲು ತೊಳೆದು ಬರುವ ಹಾಗಿದ್ದರೆ ಅದಕ್ಕೆ ಏರ್ಪಾಡು; ಬಚ್ಚಲು, ನೀರಿನ ಪಾತ್ರೆ ತಂಬಿಗೆ ಇರುತ್ತದೆ. ಈತಿಬಾಧೆಗಳನ್ನು ತೀರಿಸಿಕೊಳ್ಳಲು ಹೊರಗೆ ಹೋಗಬೇಕಾದರೆ ಹೊರಗಡೆ ಕಟ್ಟಿರುವ ಎರಡು ಕಕ್ಕಸುಗಳು. ಅದರಲ್ಲಿ ಒಂದು ಅವರಿಗೆ ಅಥವಾ ಬಂದಿರುವ ವಿಶೇಷ ಅತಿಥಿಗಳಿಗೆ ಮಾತ್ರ; ಇನ್ನೊಂದು ಸಾಮಾನ್ಯ. ಅಂದರೆ ಮನೆಯಲ್ಲಿ ಎಲ್ಲ ಸುವ್ಯವಸ್ಥ. ಹೊರ ಒಳ ಲಘು ಉಪಚಾರ ಮುಂತಾದವುಗಳಲ್ಲಿ ವ್ಯವಸ್ಥೆಯ ಅಚ್ಚುಕಟ್ಟು ಆ ಮನೆಯ ಲಕ್ಷಣ. ಕೋರ್ಟಿನ ಕೆಲಸಕ್ಕೆ ಸಂಬಂಧಿಸಿದ ಮಾತುಗಳನ್ನು ಆಡಿಕಳಿಸಿದಮೇಲೆ ಅತಿಥಿಗಳಿಗೆ ಅವರಿಗೆ ವಸತಿ ಏರ್ಪಾಡು ಆಗಿದ್ದ ಕಡೆಯೊ ಪುನಃ ಅಲ್ಲಿಗೆ ಕರಸಿಕೊಂಡೊ ಮಾತುಕತೆ ಕಾರ್ಯಕ್ರಮದ ವಿಚಾರ. ಎಷ್ಟು ಗಂಟೆಗೆ ಎಲ್ಲಿಗೆ ಹೋಗಬೇಕಾಗಿದೆ ಎಂಬುದನ್ನು ಮೊದಲೆ ತಿಳಿದು ತಮ್ಮ ಕಾರಲ್ಲಿ ಕಳಿಸಿಕೊಡುವ ವ್ಯವಸ್ಥೆ. ಮೊದಮೊದಲು ಗಾಡಿ ನಡಸುವವರು ಬೇರೆ ಇದ್ದರೂ

ಈಚೆಗೆ ಅವರ ಎರಡನೆ ಮಗನೇ ಮೋಟರನ್ನು ನಡಸುತ್ತಾನೆ. ಅದು ಒಳ್ಳೆಯ ಬ್ಯೂಕ್ ಕಾರು. ಬೇಕಾದಷ್ಟು ಪೆಟ್ರೋಲ್ ಕುಡಿಯುವುದು. ಪೆಟ್ರೋಲ್ ಬೆಲೆ ಆಕಾಶಕ್ಕೆ ಏರಿರುವ ಈ ಕಾಲದಲ್ಲಿ ಹೇಗೆ ಮಾಡುತ್ತಿದ್ದರೊ ಕಾಣೆ.

ಮೊದಲು ಅವರ ಮನೆಗೆ ಅತಿಥಿಯಾಗಿ ಹೋದುದು ಒಂದು ಉತ್ಸವದ ಉಪನ್ಯಾಸಕ್ಕಾಗಿ ಎಂದೆ. ಹಬ್ಬದ ಊಟ ನಡೆಯಿತು. ಸಂಜೆ ನನ್ನ ಜೊತೆಯಲ್ಲಿಯೇ ಅವರಿದ್ದರು. ಆ ಊರಿನ ಟೌನ್‌ಹಾಲ್ ಅಟ್ಟದಲ್ಲಿ ಉತ್ಸವದ ಏರ್ಪಾಡಿತ್ತು. ಅಧ್ಯಕ್ಷರಾರೆಂದು ಖಚಿತವಾಗಿತ್ತೊ ಇಲ್ಲವೊ. ಎಲ್ಲಿಗಾದರೂ ಹೋಗುವುದು, ಕಾರ್ಯಕ್ರಮ ನಡಸುವವರು ಎಲ್ಲಿ ನಡಸುತ್ತಾರೊ ಅಲ್ಲಿ ನಡೆಯುವುದು, ಅದರ ಬಗ್ಗೆ ಪ್ರಶ್ನೆ ಕೇಳದಿರುವುದು ನನ್ನ ರೂಢಿ. ಇಂಥ ವಿಷಯವನ್ನೇ ಕುರಿತು ಮಾತನಾಡಬೇಕೆಂದು ಹೇಳಿದ ಹೊರತು ನಾನು ಅದನ್ನು ಕುರಿತು ಯೋಚನೆ ಮಾಡಿ ಮಾತಾಡುವ ಅಭ್ಯಾಸ ಇಲ್ಲದ ಅಲೆಮಾರಿ ಭಾಷಣಕಾರ. ಬಯಲು ಬಾಯಿ ನನ್ನದು. ಮೊದಲಲ್ಲಿ ಪರಿಚಯ ಮಾಡಿಕೊಡುವವರೊ ಅಧ್ಯಕ್ಷರೊ ನಾಲ್ಕು ಮಾತಾಡುವುದು ಪದ್ಧತಿಯಲ್ಲವೆ? ಒಂದು ಮಾತನ್ನೊ ಪರಿಸ್ಥಿತಿಯನ್ನೊ ಎತ್ತಿಕೊಂಡು ಅದನ್ನು ಬೆಳೆಸುವದು ಅಥವಾ ಲೋಕಾಭಿರಾಮವಾಗಿ ಆ ಸುತ್ತಲಿನ ಪ್ರಪಂಚವನ್ನು ಕುರಿತು ಮಾತಾಡುವುದು ನನ್ನ ವಾಡಿಕೆ. ಬಹುಕಾಲ ಉಪಾಧ್ಯಾಯನಾಗಿರುವ ನನಗೆ ಹೀಗೆ ಗಾಳಿ ತುಂಬುವುದು ಅಭ್ಯಾಸ. ಇದು ಹಲವರಿಗೆ ವಿಚಿತ್ರವಾಗಿ ಕಾಣಿಸಿದೆ. ಆ ದಿನ ಹೊರಡುವ ಮುಂಚೆಯೆ ನಾನವರನ್ನು ಬೇಡಿಕೊಂಡಿದ್ದೆ. 'ನೀವೇ ಅಧ್ಯಕ್ಷರು. ಕನ್ನಡದಲ್ಲಿ ಮಾತಾಡುವ ಹಾಗಿದ್ದರೆ ಸರಿ. ಇಲ್ಲವಾದರೆ ನನ್ನ ಮಾತಿಲ್ಲ' ಎಂದು. ಅವರು ಹಿಂದೆ ಇಂಥ ಸನ್ನಿವೇಶಗಳಲ್ಲಿ ಸುಲಭಕ್ಕೆ ಒಪ್ಪುತ್ತಿರಲಿಲ್ಲವಂತೆ. ಕಾಲ ಹಾಗಿತ್ತು. ಆದರೂ ಒಪ್ಪಿಕೊಂಡು ಅಧ್ಯಕ್ಷಸ್ಥಾನವನ್ನು ಅವರೇ ನಿರ್ವಹಿಸಿದರು. ಮನೆಯ ಮಾತು ಕನ್ನಡ. ಹುಡುಗರೊಡನೆ ಮಾತಾಡುವುದು ಕನ್ನಡ. ಸಮಾನಸ್ಕಂದರಾದ ಅಥವಾ ಹಿರಿಯರೊಡನೆ ಮಾತಾಡುವುದು ಕನ್ನಡ. ಮನಸ್ಸು ತುಂಬಿದ್ದು. ಹೀಗಿರುವಾಗ ಯಾವ ವಿಷಯವನ್ನಾದರೂ ಕುರಿತು ಕನ್ನಡದಲ್ಲಿ ಧಾರಾಳವಾಗಿ ಮಾತಾಡುವುದು ಅವರಂಥ ಮೇಧಾವಿಗಳಿಗೆ ಕಷ್ಟವಾಗಬಾರದು. ವೇದಿಕೆಯ ಭಾಷಣ ಮಾಡುವುದು ಯಾವುದೊ ಬೇರೆ ಕನ್ನಡವೆಂಬಂತೆ ಸಂಕೋಚಪಡುತ್ತಿದ್ದುದು ಹಿಂದಿನ ಎಣಿಕೆ. ಮೋಲಿಯೇ ನಾಟಕದ ಒಂದು ನೆನಪು ಬರುತ್ತದೆ. ತಾನು ದಿನಾ ಮಾತಾಡುತ್ತಿದ್ದುದೇ Prose – 'ಗದ್ಯ' ಎಂದು ತಿಳಿದಾಗ ಅವನು ಚಿಕಿತನಾದನಂತೆ. ಹಾಗೆ. ಜೊತೆಗೆ ಶ್ರೀಗಳಾದ ಬೇಂದ್ರೆ, ಗೋಕಾಕ ಮುಂತಾದವರ ಗೆಳೆತನ ಮೊದಲಿನಿಂದಲೂ ಇದೆ. ಅದರಿಂದಾಗಿಯೂ ಸ್ವಭಾವಜನ್ಯವಾಗಿಯೂ ಆಧ್ಯಾತ್ಮಿಕ ವಿಷಯಗಳಲ್ಲಿಯೂ ಮತ್ತು ಯಾವುದನ್ನು Mysticism ಎನ್ನುತ್ತಾರೊ ಅದರ, ಕನ್ನಡನಾಡಿನ ಮಹಾರಾಷ್ಟ್ರದ ಸಾಧುಸಂತರ ಬರಹ, ಜೀವನ ವಿಶೇಷವಾಗಿ ಈ ಗೆಳೆಯ ಮಂಡಲಿಯಲ್ಲಿ ಬೆಳೆದುಕೊಂಡು ಬಂದುದು. ಮೈಸೂರು ಕಡೆಯವರಲ್ಲಿ ಇಂಥುದನ್ನು ಹೆಚ್ಚಾಗಿ ನಾನು ನೋಡಿಲ್ಲ. ನಮ್ಮ ಕಡೆ ಹೆಚ್ಚು ಬಿಗುಮಾನವೊ ಸಂಕೋಚವೊ ಸಾಮಾನ್ಯ ಲೌಕಿಕ ಮಾತೊ ಬಳಕೆಗೆ ಬರುತ್ತದೆಯೇ ಹೊರತು, ಸಾಧಾರಣವಾಗಿ ಮನೆಗಳಲ್ಲಿ ಉತ್ತರ ಕರ್ನಾಟಕ, ಮಹಾರಾಷ್ಟ್ರ ಪ್ರಾಂತ ಕನ್ನಡ ಜಿಲ್ಲೆಗಳಲ್ಲಿ ಬೇರೆಬೇರೆಯಾಗಿ ಕಾಣಬರುವ

ಮಾತುಗಳ ವ್ಯವಹಾರ ಇಲ್ಲಿಗೆ ರೂಢಿಯಲ್ಲ. ಮೊದಲು ನಮ್ಮ ಆಸಕ್ತಿ ಎತ್ತಕಡೆಗಿದೆ ಎಂಬುದನ್ನು ಸುಮಾರು ಕೇಳಿದ್ದೊ ಮಾತು ಚರ್ಯೆಗಳಲ್ಲಿ ಕಂಡದ್ದೊ ಅರಿತು, ಆ ಬಗೆಗೆ ವಿಷಯಗಳನ್ನು ಬೆಳೆಸುವುದು ಉತ್ತರ ಕರ್ನಾಟಕದ ನನ್ನ ಗೆಳೆಯರ ವಾಡಿಕೆ. ಉತ್ತರ ಕರ್ನಾಟಕದ ಮತ್ತು ಅವರೆಗೆ ನಾನು ಬರೆದಿದ್ದ ಹರಕುಮುರುಕು ಪದ್ಯ ವಿಮರ್ಶೆ ಲೇಖನಗಳನ್ನೇ ಅವರು ಕೇಳಿದ್ದವರೊ ಓದಿದ್ದವರೊ ಆದ್ದರಿಂದ ನನ್ನ ಓಲು ಸುಮಾರು ಇಂಥುದೆಂಬುದನ್ನು ಹತ್ತಿರದ ಗೆಳೆಯರಿಂದ ಅರಿತುಕೊಂಡಿದ್ದವರು. ಅವರ ಮನೆಯಲ್ಲಿ ಅತಿಥಿಯಾಗಿ ಹೋದವರು ನೆಮ್ಮದಿಯಿಂದ ಕಾಲಕಳೆದು ಹಿಂದಿರುಗಿ ಬರುತ್ತಾರೆ. ಇನ್ನೂ ದೊಡ್ಡವರನ್ನು ತಮ್ಮ ಮನೆಗೆ ಅತಿಥಿಗಳಾಗಿ ಅವರು ಆಹ್ವಾನಿಸಿದುದುಂಟು. ಒಂದು ಸಲ ಒಟ್ಟು ಬಂಗಲೆಯ ಭಾಗವನ್ನೆಲ್ಲ ಸಜ್ಜುಮಾಡಿ ಮಿರ್ಜಾ ಸಾಹೇಬರನ್ನು ತಮ್ಮ ಅತಿಥಿಯಾಗಿ ನಿಲ್ಲಿಸಿಕೊಂಡು ಉಪಚಾರ ಮಾಡಿದರೆಂದು ಕೇಳಿದ್ದೇನೆ. ಅವರ ಶೈಲಿ, ನಿಲವು, ಧೋರಣೆ ಅಂಥವು. ಎಷ್ಟೋ ಸಲ ಗಾಡಿಯಲ್ಲಿ ಅಷ್ಟು ದೂರ ಹೋಗಿ ಅವರೂ ಅವರ ಸ್ನೇಹಿತರೂ ಕೂಡಿ ನಡಸುತ್ತಿರುವ ಸಂಸ್ಥೆಗಳಿಗೆ ಮತ್ತು ವ್ಯಾಯಾಮ ಶಾಲೆಗಳಿಗೆ, ಟ್ರೈನಿಂಗ್ ಕಾಲೆಜುಗಳಿಗೆ ಹೋಗಿರುವುದುಂಟು. ಒಂದೆರಡು ಸಲ ಈಗ ಯಾವುದು ವಿಶ್ವವಿದ್ಯಾನಿಲಯದ ಭಾಗವಾಗಿದೆಯೊ ಅಲ್ಲಿಗೆ ಹೋಗಿ ಸುತ್ತಾಡಿಕೊಂಡು ಬಂದೆವು. ಆಡಿದ ಮಾತು ಎಂಥವೊ, ಎಷ್ಟೊ. ಅವರು ನನಗೆ ತೆರೆದಿರುವ ವಿಶ್ವಾಸ ನನ್ನ ಮನಸ್ಸಿನ ಹಿರಿನೆನಪುಗಳಲ್ಲಿ ಒಂದು. ಜನ್ನನನ್ನು ಕುರಿತು ಕವಿ ನುಡಿಯುವ 'ಇತ್ತ ಕೈಯಲ್ಲದೆ ಪಡೆದುದಲ್ಲ' ಎಂಬ ಅಭಿಮಾನಶಾಲಿತೆ ಅಲ್ಲಿನ ಲಕ್ಷಣ. ಮನಸ್ಸು ಒಲಿಯಬೇಕು ಮಾತ್ರ: ಇಲ್ಲವಾದರೆ ಅಲ್ಲಿ ಯಾವ ತೆರದ ಕೊಡುಗೆಯೂ ಇಲ್ಲ.

ಕೋರ್ಟಿನಲ್ಲಿ, ಜನಜೀವನದಲ್ಲಿ ಉನ್ನತರಾಗಿದ್ದುದರಿಂದ ಅವರ ಮಾತುಕತೆ ಒಂದು ಆತ್ಮ ವಿಶ್ವಾಸದಿಂದಲೇ ಕೂಡಿರುತ್ತದೆ. ಇದನ್ನು ದುರಭಿಮಾನವೆಂದು, ಕೆಲವರು ದುರ್ಯೋಧನಾಭಿಮಾನವೆಂದು ಕೂಡ ಕರೆದುದುಂಟು. ಅವರ ಮನೆಯನ್ನು ಕುರಿತು 'ನೀವು Guest Houseನ ಅತಿಥಿಗಳು, ನಮ್ಮ ಮನೆಗಳಿಗೆ ಏಕೆ ಬರುತ್ತೀರಿ?' ಎಂದುದೂ ಉಂಟು. ಆ ಕಡೆ ಇನ್ನೊಂದು ಮಾರ್ಗ ನಮಗೆ ಹೇಗೆ ಹೇಗೊ ಕಾಣುತ್ತದೆ. ನಮ್ಮ ಮನೆಗೇ ಬನ್ನಿ ಎಂದು ಹೇಳುವುದು ಸರಿ. ಇಂಥ ಇನ್ನೊಬ್ಬರ ಮನೆಗೆ ಹೋಗಬೇಡಿ ಎನ್ನುವುದೂ ಸಹಜ. ಆದರೆ ಹೆಸರಿಟ್ಟು ಬೇಡ ಎನ್ನುವುದು ಕೆಲವು ಕಡೆ ಬಳಕೆಯಲ್ಲಿದೆ. ಇದನ್ನು ಸಾಧಾರಣದಿಂದ ನುಡಿಯುತ್ತಿದ್ದೇನೆ. ನಾನು ಹೋಗುವ ಮುಂಚೆ ಅವರಿಗೆ ಬರೆದಾಗ ಅವರು ಸ್ಟೇಷನ್ನಿಂದ ಕಾರಲ್ಲಿ ಕರಸಿಕೊಳ್ಳುವುದು, ಹೊರಡುವಾಗ ಸ್ಟೇಷನ್ನಿಗೆ ಕಳಿಸುವುದು ಇದು ಅಲ್ಲಿ ನನಗೆ ತಪ್ಪದ ಉಪಚಾರಗಳು. ಧಾರವಾಡದಲ್ಲಿ – ಆ ಕಡೆಯೆಲ್ಲ – ನನಗೆ ಅನೇಕ ಬಹುಕಾಲದ ಸ್ನೇಹಿತರಿದ್ದಾರೆ. ಸಾಹಿತಿಗಳು, ವಕೀಲರು, ಸರ್ಕಾರಿ ಅಧಿಕಾರಿಗಳು, ರಾಜಕಾರಣಿಗಳು, ಶಾಲೆಕಾಲೆಜು ಉಪಾಧ್ಯಾಯರು, ಹಿಂದಿನ ಕಾಲದ ಬೊಂಬಾಯಿ ಆಧಿಪತ್ಯದ ಶಾಸನಸಭೆಯ ಸದಸ್ಯರು, ವರ್ತಕ ಮಂಡಳಿಯವರು, ಡಾಕ್ಟರುಗಳು, ಪುಸ್ತಕ ಪ್ರಕಾಶಕರು ಹಲವಾರು ಮಂದಿ ಇದ್ದಾರೆ. ಎಲ್ಲರ ಮನೆಗೂ ಹೋಗಿ ಬರುವುದು ದುಸ್ತರವಾಗುತ್ತದೆ. ಮತ್ತು ಇಂಥವರ ಮನೆಯಲ್ಲಿ ಎಂದು ಗೊತ್ತಾಗಿ ಉಳಿದುಬಿಟ್ಟರೆ –

ಅವರು ಬೇಡವೆನ್ನುವುದಿಲ್ಲ – ಆ ಎಲ್ಲ ಕಡೆಗೂ ಹೋಗಿ ಇಚ್ಛೆ ಬಂದಂತೆ ಗಳಹಿ ಬರುವಾಗ ಇವರ ಕಾರ್ಯಕ್ರಮ, ಇವರ ಕಾಲದ ಅಗತ್ಯ ಪರಿಸರಗಳನ್ನು ಗಮನದಲ್ಲಿಟ್ಟುಕೊಂಡೇ ಮಾಡಬೇಕಾಗಿರುವುದರಿಂದ, ಅವರು ಹಾಗೆ ತಿಳಿಯದಿದ್ದರೂ ಸಂಕೋಚ ನಿರ್ಬಂಧವಾಗುತ್ತದೆ. ಆದ್ದರಿಂದ ನಾನು ಸಾಮಾನ್ಯವಾಗಿ ದೊಡ್ಡ ಪದವಿಗಳಲ್ಲಿರುವ ಅಧಿಕಾರದಲ್ಲಿರುವ ಪರಿಚಿತರ ಮನೆಗೆ ಹೋಗುವ ಪರಿಪಾಠಿಯನ್ನು ಬೇರೆ ಕಡೆ ಮಾಡುವುದಿಲ್ಲ. ಇಂಥ ಕಡೆ ಇನ್ನೊಂದು ಮಿತಿಯ ಮಾತು ಬರುತ್ತದೆ : ನಮ್ಮ ಕಡೆ ಸ್ನೇಹಿತರೂ ಅಲ್ಲಿರುತ್ತಾರೆ. ಅವರ ಪರವಾಗಿ ನಮ್ಮ ವಿಶ್ವಾಸ ನಡವಳಿಕೆಯ ಅಗತ್ಯ ಇರುತ್ತದೆ. ಆದರೆ ಬಹುಮಟ್ಟಿಗೆ ಆ ಸ್ಥಳದವರಲ್ಲಿಯೇ ನಾನು ಹೋಗಿ ಉಳಿಯುವುದು ಪದ್ಧತಿ. ನಾವೆಲ್ಲ ಮೈಸೂರವರು ತಾನೆ, ಅವರಲ್ಲಿಯೇ ಇದ್ದುಬಿಡುತ್ತಾರೆ ಎಂಬ ಅಪಖ್ಯಾತಿ ಬರಬಾರದು. ಜೊತೆಗೆ ಅಲ್ಲಲ್ಲಿನ ಸ್ನೇಹಿತರ ಮನೆತನ, ಅಭ್ಯಾಸಗಳ ರೀತಿ, ವ್ಯವಹಾರ, ಊಟ ಉಪಚಾರ ನಮಗೆ ಪರಿಚಯವಾಗದಿದ್ದರೆ ನಮ್ಮ ಬದುಕಿಗೆ ಬರಬೇಕಾದ ಒಂದು ಸಂಸ್ಕಾರ ದೊರಕದಾಗುತ್ತದೆ. ಅನೇಕ ಅಖಿಲಭಾರತ ಸಮಾರಂಭಗಳಲ್ಲಿ ಕೂಡ ಎಷ್ಟು ಕಡೆಯ ಉಡುಗೆತೊಡುಗೆ, ಊಟ ಉಪಚಾರ ಒಂದೊಂದು ಹೊತ್ತಿಗೂ ಬೇರೆಯಾಗಿ ಏರ್ಪಡಿಸುವ ಒಂದು ಕ್ರಮ ಏರ್ಪಟ್ಟರೆ ಇನ್ನಷ್ಟು ಅಖಿಲ ಭಾರತ ಜೀವನದ ಸೊಬಗಿನ ಪರಿಚಯವಾದೀತು, ಅನುಭವ ಇನ್ನಷ್ಟು ವಿಶಾಲವಾಗುತ್ತದೆ – ಎಂದು ಅನೇಕ ವೇಳೆ ನನಗನಿಸಿದೆ. ಅದು ಅಗತ್ಯ – ಸ್ನೇಹಬಂಧ, ಪರಿಚಯಗಳಿಗೆ.

ಇನ್ನೊಂದು ಸಲದ ವಿಶೇಷವನ್ನು ಹೇಳುತ್ತೇನೆ : ಸುಮಾರು ೧೯೪೬ರಲ್ಲಿ ಎಂದು ಕಾಣುತ್ತದೆ. ಬೇಂದ್ರೆಯವರ ಅರ್ಧಶತಮಾನದ ಉತ್ಸವವನ್ನು ಧಾರವಾಡದಲ್ಲಿ ನಡಸಿ ಮೂರು ನಾಲ್ಕು ದಿನ ಕಾರ್ಯಕ್ರಮ ಕೈಕೊಂಡಿದ್ದರು. ಅರುವತ್ತನೆಯ ವರ್ಷದ ಉತ್ಸವವನ್ನು ಮಾಡುವುದು ಸಾಮಾನ್ಯ. ಐವತ್ತಕ್ಕೆ ನಡೆದ ಉತ್ಸವವನ್ನು ಬಹುಶಃ ನಾನು ಅಲ್ಲಿಯೇ ಮೊದಲು ನೋಡಿದ್ದು. ಬೇಂದ್ರೆಯವರ ಶಿಷ್ಯಮಂಡಲ ಮತ್ತು ಪ್ರಭಾವ ಅಲ್ಲಿ ಅವರೆಗಾಗಲೆ ಬೆಳೆದು ಮಹತ್ತರವಾದ ಉನ್ನತ ಗೌರವ ನಡೆದಿತ್ತು. ಅವರೆಗಾಗಲೇ ಬಹುವಾಗಿ 'ಗೆಳೆಯರ ಗುಂಪು' ಅಲ್ಲಿ ಹುಟ್ಟಿ ಬೇಕಾದಷ್ಟು ಕೆಲಸ ಮಾಡಿಯಾಗಿತ್ತು. ಆ ವರ್ಗವೆಲ್ಲ ಆ ದಿನ ಆ ಉತ್ಸವಕ್ಕೆ ಬಂದು, ಅವರನ್ನು ಪೀಠದ ಮೇಲೆ ಕೂರಿಸಿ, ಅವರಿಗೆ ಪ್ರಣಾಮಮಾಡಿ, ಅವರಿಂದ ಅಕ್ಷತೆ ಹರಕೆ ಪಡೆದು ಹೋದ ದೃಶ್ಯ ಕಣ್ಣಿಗೆ ಕಟ್ಟಿದಂತಿದೆ. ಅದೇ ವರ್ಷ ನನ್ನ ಹಿರಿಯ ಮಗಳನ್ನು ನಾನು ಹರಿದ್ವಾರಕ್ಕೆ ಕರೆದುಕೊಂಡು ಹೋಗಿ ಬಿಡಬೇಕಿತ್ತು. ಆಕೆಯನ್ನು ಜೊತೆಯಲ್ಲಿ ಕರೆದುಕೊಂಡು ಹೋಗಿ ಆ ಉತ್ಸವದಲ್ಲಿ ಭಾಗಿಯಾದೆ. ಆಗಲೂ ನನಗೂ ನನ್ನ ಮಗಳಿಗೂ ದೀಕ್ಷಿತರಲ್ಲಿಯೇ ಠಿಕಾಣಿ. ಮನೆಯ ಹೆಣ್ಣು ಮಗಳು ಬಂದ ಹಾಗೆ ಪ್ರೀತಿಯಿಂದ ಅವಳನ್ನು ನೋಡಿಕೊಂಡರು. ಅವರಿಗೆ ಪರಿಚಿತರಾದ ನಮ್ಮ ಹಿರಿಯರು ಕನ್ನಡ ಸಾಹಿತ್ಯ ಪ್ರಪಂಚಕ್ಕೆ ಸೇರಿದವರು, ವಕೀಲವೃತ್ತಿಗೆ ವ್ಯವಹಾರಕ್ಕೆ ಸಂಬಂಧಿಸಿದವರು ಹಲವರು ಬೆಂಗಳೂರಲ್ಲಿ ಮೈಸೂರಲ್ಲಿ ಇದ್ದರು. ಅವರೆಲ್ಲರನ್ನು ಕುರಿತು ಯೋಗಕ್ಷೇಮ ಮಾತು ನಡೆಯುತ್ತಿದ್ದವು. ಬಹುಮಟ್ಟಿಗೆ ಅವರೆಲ್ಲ ಧಾರವಾಡಕ್ಕೆ ಹೋದಾಗ ಇವರ ಆತಿಥ್ಯವನ್ನು ಸವಿದವರೇ.

ಒಮ್ಮೆ ಸಂಜೆ ಅವರ ವ್ಯಾಯಾಮಶಾಲೆಯಲ್ಲಿ ಹೋಗಿ ಕುಳಿತಿದ್ದೆವು. ಅಲ್ಲಿಗೆ ಇಬ್ಬರು ಸ್ನೇಹಿತರು ಬಂದರು : ಒಬ್ಬರು ವಕೀಲರು; ಇನ್ನೊಬ್ಬರು ಅಲ್ಲಿನ ಮ್ಯಾಜಿಸ್ಟ್ರೇಟರೊ ಮುನ್ಸೀಫರೊ ಆಗಿದ್ದವರು. ಈ ಎರಡನೆಯವರು ಮೈಸೂರು ಮಹಾರಾಜ ಕಾಲೇಜಲ್ಲಿ ನನ್ನ ಕಾಲದಲ್ಲಿಯೇ ಜ್ಯೂನಿಯರ್ ವಿದ್ಯಾರ್ಥಿಯಾಗಿದ್ದವರು. ಅವರು ನನ್ನ ನೆನಪನ್ನು ಮಾಡಿಕೊಂಡರೊ ಇಲ್ಲವೊ. ಆ ದಿನ ಮಾತಿನಲ್ಲಿ ಆ ಪ್ರಸಂಗ ಬರಲಿಲ್ಲ. ಅವರ ಜೊತೆಯಲ್ಲಿ ತಳ್ಳಗೆ ಉದ್ದಕ್ಕೆ ಇದ್ದ ಕೊಯಮುತ್ತೂರು ಎಂಬ ಇನ್ನೊಬ್ಬರಿದ್ದರು. ಅದೂ ಮನೆಯ ಹೆಸರು. ನಾನೂ ನನ್ನ ಜೊತೆಯಲ್ಲಿ ಹೋಗಿದ್ದ ಸ್ನೇಹಿತರಾದ ಎಸ್. ಮಂಜನಾಥ್ ಇದ್ದೆವು. ನಾವು ಕಾರವಾರಕ್ಕೆ ಹೋಗಬೇಕೆಂದು ಗೊತ್ತಾಗಿತ್ತು –ಮೂರನೆಯ ದಿನ. ಕೊಯಮುತ್ತೂರು ಅವರು 'ನಮ್ಮ ಕಕ್ಕ ಡೆಪ್ಯುಟಿ ಕಲೆಕ್ಟರ್ ಆಗಿದ್ದಾರೆ. ಕಡಲಕರೆಯಲ್ಲಿಯೇ ಅವರ ಬಂಗಲೆಯಿದೆ. ನಾನು ತಾರು ಮಾಡಿ ತಿಳಿಸುತ್ತೇನೆ. ನೀವು ಹೋಗುವ ಹೊತ್ತಿಗೆ ಅವರು ಮನುಷ್ಯನನ್ನು ಕಳಿಸಿ ತಮ್ಮ ಮನೆಗೆ ಬರಮಾಡಿಕೊಳ್ಳುತ್ತಾರೆ. ಇನ್ನೆಲ್ಲಿಗೂ ಹೋಗಬೇಕಾಗಿಲ್ಲ' ಎಂದು ಹೇಳಿ ಕಾರವಾರದಲ್ಲಿ ನಮಗೆ ಆ ಸಲದ ಬೀಡಾರದ ಅನುಕೂಲ ಮಾಡಿಕೊಟ್ಟರು.

ಅದೆಲ್ಲ ಮುಗಿಸಿಕೊಂಡು ಮನೆಗೆ ಹಿಂದೆ ಬಂದ ಸನ್ನಿವೇಶದಲ್ಲಿ ವಿನಯದಿಂದ ಒಂದು ಮಾತನ್ನು ಅವರಲ್ಲಿ ಅರಿಕೆ ಮಾಡಿಕೊಂಡಿದ್ದೆ. ಸಾಹಿತಿಗಳಲ್ಲಿ ಎಲ್ಲ ಕಡೆಯೂ ಪುಡಿಪುಡಿಯಾಗಿ ಬೇರೆ ಬೇರೆ ಇರುವ ಪ್ರವೃತ್ತಿ ಇರುತ್ತದೆ. ಇವುಗಳಲ್ಲಿ ಒಮ್ಮತ ಸಾಮರಸ್ಯಗಳು ಕಷ್ಟ. ಆಗ ಇನ್ನೂ ಮೂವತ್ತರ ದಶಕದ ಕಾಲ. ರಾಜಕೀಯದ, ಅಂದರೆ ಸ್ವಾತಂತ್ರ್ಯ ಸಂಘಟನೆಯ ಕಾರ್ಯ–ಪ್ರಪಂಚಕ್ಕೂ ನನಗೂ ಎಂದಿಗೂ ದೂರವೇ. ಕಾರಂತರು ತಮಾಷೆಗಾಗಿ ಬರೆದ 'ಕೇವಲ ಸಾಯಿತಿ' ನಾನು; ಸಾಯಿತಿಯೊ –ಬದುಕುತಿಯೊ: ಹೇಗಾದರೂ ಆಗಬಹುದು. ನನ್ನ ಪ್ರಪಂಚ ಬೇರೆ ಎಂದುಕೊಂಡವನು ನಾನು. ನನಗೆ ಆ ಬಗೆಗೆ ಪಕ್ಷಪಾತ, ಧೋರಣೆ ಇಲ್ಲವೆಂದಲ್ಲ. ಆದರೆ ಆ ವಾದಗಳು ಕಾರ್ಪಣ್ಯಗಳು ತೀಕ್ಷ್ಣತೆ ಹಟಗಳು ಒಗ್ಗವು. ಇರುವವರು ಕೆಲವು ಜನವೇ ಎಲ್ಲಿಯೂ ಗಣ್ಯ ಸಾಹಿತಿಗಳು. ನೀವು ಊರಿಗೇ ದೊಡ್ಡವರಾಗಿದ್ದೀರಿ. ಎಲ್ಲರಲ್ಲಿಯೂ ನಿಮಗೆ ಪ್ರೀತಿಗೌರವ ಇದೆ. ಏನಾದರೂ ಮಾಡಿ ಒಂದು ಒಮ್ಮತದಲ್ಲಿ ಇಲ್ಲಿಯ ಸಾಹಿತ್ಯ ಮಂಡಲಿಯೂ ಸ್ನೇಹವರ್ಗವಾಗಿ ಬೆಳೆಯುವಂತೆ ಮಾಡುವುದು ಶಕ್ಯವಾದರೆ ಮಾಡಬಲ್ಲಿರಿ ಎಂದು ಬಿನ್ನವಿಸಿಕೊಂಡಿದ್ದೆ. ಅದನ್ನು ಮನಸ್ಸಿನಲ್ಲಿಯೇ ಇಟ್ಟುಕೊಂಡಿದ್ದರೆಂದು ಕಾಣುತ್ತದೆ. ನಾಲ್ಕೈದು ವರ್ಷಗಳ ತರುವಾಯ ಆ ಮಾತನ್ನೆತ್ತಿ 'ನೀವು ನನಗೆ ಇದನ್ನು ಹೇಳಿದ್ದಿರಿ. ಈ ಕಾರ್ಯ ಈ ಊರಲ್ಲಿ ಶಕ್ಯವಾಗುವ ಹಾಗೆ ಕಾಣೆ. ನಾನು ಪ್ರಯತ್ನ ಮಾಡಿದ್ದೇನೆ. ಅದು ನೆರವೇರುವ ಹಾಗಿಲ್ಲ' –ಎಂದು ಸ್ವಲ್ಪ ವ್ಯಥೆಯಿಂದ ನುಡಿದರು. ಆಮೇಲೆ ನಾಲ್ಕಾರು ಸಲ ಧಾರವಾಡಕ್ಕೆ ಆಹ್ವಾನ ಕಳಿಸಿಕೊಟ್ಟಿದ್ದ ಜನರ ವಿಪ್ರಾಡಿಗೆ ಕಟ್ಟುಬೀಳಬೇಕಾಗಿ ಬಂದಾಗಲೂ ಆ ವಿಷಯವನ್ನು ತಿಳಿಸುತ್ತಿದ್ದೆ. ಎಂದೇ ಆಗಲಿ ಒಮ್ಮೆ ಅವರನ್ನು ನೋಡದೆ ಹಿಂದಿರುಗಿ ಬಂದುದಿಲ್ಲ. ಅವರ ಮನಸ್ಸು ಒಪ್ಪಿ ಮಾತನಾಡುವಾಗ ಯಾವ ಮಟ್ಟದಲ್ಲಿಯಾದರೂ ಉದಾರವಾಗಿ ಮಾತಾಡಬಲ್ಲರು – ಅಲ್ಲಿನ ಮತ್ತು ಒಟ್ಟು

ಭರತಖಂಡದ ರಾಜಕೀಯ ಸ್ಥಿತಿಗತಿಗಳನ್ನು ಕುರಿತು, ಕರ್ನಾಟಕದ ಹಿರಿಯರನ್ನು ಕುರಿತು, ಮೈಸೂರು ಮತ್ತು ಉತ್ತರ ಕರ್ನಾಟಕದ ಸಂಬಂಧ ಕುರಿತು – ಇದಿನ್ನೂ ಕರ್ನಾಟಕವಾಗದಿದ್ದ ಕಾಲದಲ್ಲಿ – ಎಷ್ಟೋ ಸಲ ಬಿಚ್ಚುಮನಸ್ಸಿನಿಂದ ಮಾತನಾಡಿದ್ದೇವೆ. ವಿಶ್ವವಿದ್ಯಾನಿಲಯದಲ್ಲಿ ನನ್ನ ಸ್ಥಾನಮಾನಗಳನ್ನು ಕುರಿತು ಸಣ್ಣೊಡನೆಯೊ ಇದಕ್ಕೆ ಸಂಬಂಧಿಸಿದ ಇತರ ದೊಡ್ಡವರೊಡನೆಯೊ ಅವರು ಮಾತುಕತೆ ನಡಸಿರುವುದುಂಟು. ನನ್ನ ಪಾಡು ನನ್ನದು. ಉತ್ತರ ಕೊಡುವ ಅಗತ್ಯವಿದ್ದರೆ ಕೊಡುವುದು; ಇಲ್ಲವಾದರೆ ಸುಮ್ಮನಿರುವುದು. ಎಲ್ಲಿನವರೆಗೂ ಯಾವ ಪರಿಸ್ಥಿತಿಯಲ್ಲಿ ನಾವಿರಬೇಕಾಗಿದೆಯೊ –ನ್ಯಾಯವೊ ಅನ್ಯಾಯವೊ – ನಾನು ತಮಾಷೆಗಾಗಿ ಒಂದು ಸಲ ಅನ್ನದ ನ್ಯಾಯ ಅನ್ಯಾಯ ಎಂದುದುಂಟು – ಅದನ್ನು ಕುರಿತು ಮನಸ್ಸಿಗೆ ಹಚ್ಚಿಕೊಳ್ಳುವುದು ತರವಲ್ಲ, ಶಕ್ತಿ ಸಂತೋಷ ನೆಮ್ಮದಿಯನ್ನಾಗಲಿ ಸಾಧಿಸುವುದಿಲ್ಲ ಎಂದು ಉತ್ತರ ಕೊಟ್ಟಿದ್ದೇನೆ. ಬೇರೆ ಶಕ್ಯವಿದ್ದರೆ ಆಗಬಹುದು. ಅನ್ನಂ ನ ನಿಂದ್ಯಾತ್ ಎಂಬುದರ ಅರ್ಥವಿಸ್ತಾರಕ್ಕೆ ಅದು ಒಳಪಟ್ಟುದು.

ಒಂದು ಸಲ ಅವರೂ ನೆಗಳೂರ ರಂಗನಾಥರೂ ಸೇರಿ – ಅವರಷ್ಟು ವಿಭಿನ್ನ ಮನಸ್ಸಿನವರೂ ರೀತಿನೀತಿಗಳವರೂ ನನ್ನ ಎಣಿಕೆಯಲ್ಲಿ ಬೇರೆ ಹೆಚ್ಚು ಜನರಿಲ್ಲ – ಭಾರತ ಕಾನೂನಿನ ಒಂದು ಶಾಸನಕ್ಕೆ ಸಂಬಂಧಿಸಿದ ವಿಷಯ ನಿರೂಪಣೆಯನ್ನು ಕನ್ನಡದಲ್ಲಿ ಮಾಡಿದುದೂ ನನಗೆ ತುಂಬ ಸಂತೋಷವನ್ನುಂಟುಮಾಡಿತು. ಪೂರ್ವ–ಪಶ್ಚಿಮ ಎರಡೂ ಸೇರಿದ ಹಾಗೆ, ಇಂಗ್ಲಿಷಿನವರು ಹೇಳುವ ಹಾಗೆ – poles – ಧ್ರುವಗಳು ಒಟ್ಟುಕೂಡಿದ ಹಾಗೆ – ಎಂದು ಕಂಡಿತು. ಸೌಜನ್ಯ, ದೊಡ್ಡ ಉದ್ದೇಶ ಒಂದಿದ್ದರೆ ಎಂಥ ಕಾರ್ಯಗಳನ್ನಾದರೂ ಎಂದೂ ಸಾಧಿಸಬಹುದು ಎನ್ನಿಸಿತು. ಇಷ್ಟು ವ್ಯತಿರೇಕ ಮನೋಭಾವಗಳಿರುವವರು ಹೇಗೆ ಸೇರಿ ಕಾರ್ಯವನ್ನು ನಿರ್ವಹಿಸಿದ್ದಾರು ಎನ್ನಿಸಿದ ಸಂದರ್ಭ ಅದು. ಕಡೆಕಡೆಯ ದಿನಗಳಲ್ಲಿ ನಾಸ್ತಿಕನೆಂದೊ ಯಾವುದರಲ್ಲಿಯೂ ಪೂಜ್ಯಭಾವನೆ –reverence–ಇಲ್ಲದವರಂತೆ ವ್ಯಂಗ್ಯವಾಗಿಯೊ –ಚೇಷ್ಟೆವಿನೋದಗಳಲ್ಲಿಯೊ ಚುಚ್ಚುಮಾತುಗಳನ್ನು ಆಡುತ್ತಿದ್ದ ನೆಗಳೂರರು ಇದ್ದಕ್ಕಿದ್ದಂತೆ ಆಚಾರವಂತರಾಗಿ ತುಳಸಿಮಣಿ ಧರಿಸಿ, ಮುದ್ರೆ ಅಂಗಾರ ಹಾಕಿದ್ದನ್ನು ನೋಡಿ ಇದೇನು ಬಂತು ಇವರಿಗೆ ಎಂದುಕೊಂಡದ್ದುಂಟು. ಪವಾಡಗಳು ಈ ಕಾಲದಲ್ಲಿ ಆಗುವುದಿಲ್ಲ ಎನ್ನುತ್ತಾರೆ. ಯಾರು ಬಲ್ಲರು? ಇಂಥ ಮನಃಪರಿವರ್ತನೆಗಳು ಯಾವುದನ್ನೂ ಎಂದೂ ಇಷ್ಟು ಮಾತ್ರವೇ ಸರಿ, ಹೀಗೆ ಮಾತ್ರವೇ ಆದೀತು ಎಂದು ಹೇಳುವುದಕ್ಕಾಗುವುದಿಲ್ಲ. ಒಳಗೇ ಆಗುವ ಪರಿವರ್ತನೆ ಅದು. ಆ ಕಾರಣಪ್ರಪಂಚ ಯುಕ್ತಿಗೆ (reason) ಹೊಂದಿದುದಲ್ಲ; belief, faithಗೆ ಸೇರಿದ್ದು. ಅಲ್ಲಿ ವಾದ ಸಲ್ಲದು. ದೀಕ್ಷಿತರದು ಬಹು ಮಟ್ಟಿಗೆ ಸ್ಮಾರ್ತ ಸಂಪ್ರದಾಯವೇನೊ. ನನಗೆ ಗೊತ್ತಿಲ್ಲ. ಅದನ್ನು ಪರಿಶೀಲಿಸುವುದಕ್ಕೆ ನನಗೆ ಸಮಯವಿಲ್ಲ, ಆಗತ್ಯವಿಲ್ಲ, ಬೇಕಿಲ್ಲ. ವಿಶ್ವಾಸ, ಸಜ್ಜನತೆ ಇದ್ದರೆ ಲೋಕ ಬದುಕೀತು; ಇನ್ನಾವುದನ್ನೂ ಮನಸ್ಸಿಗೆ ತಂದುಕೊಳ್ಳಬೇಕಾಗಿಲ್ಲ. Where affection and understanding lead– ಎನ್ನುವುದುಂಟು. ಈ ಪ್ರೀತಿ ಪರಸ್ಪರವಾಗಿ ಒಬ್ಬರನ್ನೊಬ್ಬರು ಅರ್ಥಮಾಡಿಕೊಳ್ಳುವುದು, ಇರುವ ತಾರತಮ್ಯಗಳನ್ನು

ಅರಿತು ಸೌಹಾರ್ದವನ್ನು ಸಾಧಿಸುವುದು ಮನುಷ್ಯನಾದವನ ಯತ್ನವಾಗಬೇಕು. ಮನುಷ್ಯನಿಗೆ ಬೇರೆ ಮಾರ್ಗವಿಲ್ಲ ಎನಿಸುತ್ತದೆ. ದೀಕ್ಷಿತರು ಸ್ನೇಹಪರರಾಗಿ ನಡಸಿಕೊಳ್ಳುವಾಗ ಅದಕ್ಕೆ ಸರಿಸಾಟಿಯಾದ ಸೌಮನಸ್ಯವನ್ನು ನಾನು ಹೆಚ್ಚು ಕಡೆ ಕಂಡಿಲ್ಲ. ಕರ್ನಾಟಕ ಒಂದಾಗಿ ಇಲ್ಲಿನ ಶ್ರೇಷ್ಠ ನ್ಯಾಯಾಲಯದಲ್ಲಿ (High Court) ಅವರಿಗೆ, ಮಂಗಳೂರು ಕಡೆಯವರಾದ ಶ್ರೀ ರಾಮಕೃಷ್ಣ ಕಾರಂತರಿಗೆ, ಕಾರವಾರದ ಶ್ರೀ ಸಭಾಹಿತರಿಗೆ * –ಇಂಥವರಲ್ಲಿ ಕೆಲವರು ಅವರಾಗಿ ಯಾರನ್ನೂ ಬೇಡುವುದಿಲ್ಲ; ಅಂಥುದನ್ನು ನಿರೀಕ್ಷಿಸದವರೂ ಆಗಿ ಇರುತ್ತಾರೆ – ಕಡೆಯ ಪಕ್ಷವೆಂದರೆ 'ಅಟಾರ್ನಿ ಜನರಲ್' ಆಗಿಯೊ, ಒಬ್ಬ ನ್ಯಾಯಾಧಿಪತಿಯಾಗಿಯೊ ಆಗಿದ್ದಿದ್ದರೆ ಚೆನ್ನಾಗಿತ್ತು. ಆದರೆ ಅಂಥ ಸ್ಥಾನಮಾನ, ಪದವಿ ರಾಜಕೀಯ ಸನ್ನಿವೇಶಗಳಿಗೆ ತಕ್ಕಂತೆ ನಿಶ್ಚಯವಾಗುವುದರಿಂದ, ಅವರು ಧಾರವಾಡವನ್ನು ಬಿಟ್ಟು ಬೆಂಗಳೂರಲ್ಲಿ ಅಂಥ ಒಂದು ಪದವಿಯಲ್ಲಿ ಕಾರ್ಯನಿರ್ವಹಿಸುವ ಸಂತೋಷವನ್ನು ನಾನು ಕಂಡಿದ್ದರೆ ಆಗುತ್ತಿತ್ತು ಅನ್ನಿಸಿದೆ. ನಾನಾರು ಅಂಥುದನ್ನು ಬಯಸುವುದಕ್ಕೆ, ನುಡಿಯುವುದಕ್ಕೆ? A beggar's dream horses!

ಉಳಿದುದೆಲ್ಲ ಹೇಗೇ ಇರಲಿ, ಏನೇ ಆಗಲಿ, ದೀಕ್ಷಿತರನ್ನು ಧಾರವಾಡದಲ್ಲಿನ ಒಬ್ಬ ಪ್ರಧಾನ ವ್ಯಕ್ತಿಯನ್ನಾಗಿ ನಾನು ಕಂಡಿದ್ದೇನೆ. ಅವರ ರೀತಿಯಲ್ಲಿ ಒಂದು ಶ್ರೀಮಂತಿಕೆ ಇರುವುದನ್ನು ಕಂಡು, ಅನುಭವಿಸಿದ್ದೇನೆ. ಎರಡರ್ಥಗಳಲ್ಲಿ ಜನ ಹೀಗೆ ಹಾಗೆ ನುಡಿಯುವುದುಂಟು. ಅಂಥ ಕೆಲವರಲ್ಲಿ ಅಸೂಯೆಯಿದೆ. ಇವು ಯಾರಿಗೆ ತಪ್ಪಿದ್ದು? ಯಾವುದನ್ನೂ ಅವರು ಬಹುಕಾಲ ನಡಸುವವರು. ಮನೆಯ ಮುಂದಿನ ತೋಟದಲ್ಲಿ ಹಣ್ಣು ಹೂ ತರಕಾರಿ ಬೆಳಸಿ ಅವುಗಳಲ್ಲಿ ಹಿಗ್ಗುವುದುಂಟು. ತಾನು ಬೆಳಿಸಿದ ಬೆಳೆ. ಮನೆಯ ಮುಂದೆ ಹೊರಗೆ ಬೇರೊಂದು ಕಡೆ ಮೂರು–ನಾಲ್ಕು ಬಗೆಯ ಕಸಿ ಮಾವಿನ ಗಿಡಗಳನ್ನು ಹಾಕಿ ಹಣ್ಣಿನ ಕಾಲದಲ್ಲಿ ತಾನೂ ಅತಿಥಿಗಳೂ ಅದರಿಂದ ಸಂತೋಷಪಡುವುದು ಅತನ ಜೀವಲಕ್ಷಣ. ಇದು ಕನ್ನಡ ನಾಡಿನ ಸಂಪ್ರದಾಯ. ಅವರ ಕೈಯಲ್ಲಿ ಕೆಲಸ ಮಾಡಿದವರು ಅವರ ಶಿಸ್ತನ್ನು ಬಲ್ಲರು; ಅದರ ಬಿಸಿ ತಾಕುವುದೂ ಉಂಟು. ಆದರೆ ಅತನ ವರ್ಚಸ್ವಿತೆ ಮತ್ತು ಬುದ್ಧಿಶಕ್ತಿ, ಕಾನೂನಿನ ತಿಳಿವಳಿಕೆ ಗಾಢವಾದ್ದರಿಂದ ಅದಕ್ಕೆ ತಗ್ಗಿ ನಡೆಯಬೇಕಾಗಿರುತ್ತದೆ. ಮತ್ತೆಲ್ಲ ವಿಷಯಗಳಲ್ಲಿಯೂ ಮನಸ್ಸಿನಲ್ಲಿ ತನ್ನ ರೀತಿಯಲ್ಲಿ ಔದಾರ್ಯ ತೋರಿಸುವ ಒಂದು ಲಕ್ಷಣ ವಿಶೇಷವಾದ್ದು. ರಾಜಕೀಯ ರಂಗದಲ್ಲಿಯೂ ಧಾರವಾಡದ ಕಡೆ ಮೇಲಕ್ಕೆ ಬಂದ ಹಲವರೊಡನೆಯೂ ಅವರ ಸ್ನೇಹಸಂಬಂಧವಿತ್ತು. ಮತಧರ್ಮದಲ್ಲಿ ಒಂದು ಬಗೆಯ ಸಾಧನ–ವಿಶೇಷ ಅವರಲ್ಲಿ ಬೆಳೆದಿದೆ. ಸಂತರು, ಯೋಗಿಗಳು ಇವರನ್ನು ಕಂಡರೆ ಅವರಿಗೆ ಭಕ್ತಿ. ಶ್ರೀಯುತರಾದ ಬೇಂದ್ರೆ, ಗೋಕಾಕ, ಮಧುರಚೆನ್ನ ಮುಂತಾದವರೊಡನೆ ಕೆಲವು ಸಲ ಮೌನಸಪ್ತಾಹಗಳನ್ನು ನಡಸಿದ್ದಾರೆಂದು ಕೇಳಿದ್ದೇನೆ. ಅವರನ್ನು ಕುರಿತು ಸಾಹಿತಿಗಳಲ್ಲಿ ಯಾರಾದರೂ ಒಂದು ಪ್ರಬಂಧವನ್ನು ಬರೆದರೆ ಸಾಹಿತ್ಯಕ್ಕೆ ಒಂದು ಕೊಡುಗೆಯಾದೀತು. ವ್ಯಕ್ತಿಯಾಗಿ, ಅತಿಥಿ ಸತ್ಕಾರದಲ್ಲಿ

---

* ಇವರು ಈಚೆಗೆ ನಮ್ಮ ನ್ಯಾಯಮಂಡಲಿಯಲ್ಲಿ ದೊಡ್ಡ ಹುದ್ದೆಯನ್ನು ಪಡೆದರು.

ವಿಶಿಷ್ಟಲಕ್ಷಣಾವುಳ್ಳವರಾಗಿ, ತಾನು ತಿಳಿದಂತೆ ಸಾಹಿತಿಗಳಿಗೆ, ರಾಜಕೀಯದವರಿಗೆ, ಇತರರಿಗೆ, ತರುಣರಿಗೆ ನೆರವು, ಸಾಧನವಾಗಿ ಬಾಳಿದ ದೀಕ್ಷಿತರ ಬಾಳು ನಿಜವಾಗಿ ವಿಶಿಷ್ಟ ಸಾರ್ಥಕತೆಯನ್ನು ಪಡೆದುದು.

*

ಅವರ ಒಂದು ಛಾಯಾಚಿತ್ರ ಕಳಿಸಿಕೊಡಿ, ನನ್ನ ಈ ಪುಸ್ತಕಕ್ಕೆ ಬೇಕಿದೆ ಎಂದೆ. ತಮ್ಮ ಚಿತ್ರ ಬೇಡವೆಂದರು. ಒಮ್ಮೆ ನನ್ನ ತಿಳಿವಳಿಕೆ ಆ ಬಗೆಗೆ ಇಲ್ಲ, ಬೇಡಿ ಎಂದು ಹೇಳಿದರೂ ಬಿಡದೆ ಅವರ 'ಅನಾಹತ' ಎಂಬ ಯೋಗಕ್ಕೆ ಸಂಬಂಧಿಸಿದ ಪುಸ್ತಕಕ್ಕೆ ಒಂದು ಒಡನುಡಿ ಬರಸಿದರು. ಆ ಲೇಖನ ಬರೆದ ಮೇಲೆ ಇದು ಅಚ್ಚಾಗುವ ಮುಂಚೆ ಕಾಲಾಧೀನರಾದರು. ಆದರೆ ಅವರ ಪ್ರೀತಿ ನನ್ನ ವಿಶ್ವಾಸದಲ್ಲಿ ಸತತ ಅಂಶವಾಗಿದೆ. ಅದಕ್ಕೆ ಕೈಮುಗಿವುದು ಮಾತ್ರ ನನ್ನ ಪಾಲಿಗೆ ಈಗ ಉಳಿದಿರುವುದು.

ಡಾ. ದ. ರಾ. ಬೇಂದ್ರೆ

ದತ್ತಾತ್ರೇಯ ರಾಮಚಂದ್ರ ಬೇಂದ್ರೆ ಅವರು ೪೦-೫೦ ವರ್ಷಗಳಿಂದಲೂ ಕರ್ನಾಟಕ ಸಾಹಿತ್ಯ ಜೀವನದಲ್ಲಿ ದೊಡ್ಡ ಹೆಸರಾಗಿರುವವರು. ಅದಕ್ಕೆ ಸಮನಾಗಿ ಅಥವಾ ಹೆಚ್ಚಿಗೂ ದೊಡ್ಡ ಪ್ರಭಾವವಾಗಿ ಸಾಹಿತ್ಯ ಪ್ರಪಂಚದಲ್ಲಿ ಬೆಳಗಿರುವವರು. ಅವರ ಕಾವ್ಯನಾಮ 'ಅಂಬಿಕಾತನಯದತ್ತ' ಎಂದು. ಉತ್ತರ ಕರ್ನಾಟಕದ ಕಡೆಯ ಜನ ಬೇಂದ್ರೆ ಬೇರೆ, 'ಅಂಬಿಕಾತನಯದತ್ತ' ಬೇರೆ ಎಂಬಂತೆ ತಮ್ಮನ್ನು ಕುರಿತು ನಡೆದುಕೊಳ್ಳುವುದುಂಟು. ಇದರಲ್ಲಿ ಒಂದು ಔಚಿತ್ಯವಿದೆ; ಅನುಕೂಲವಿದೆ. ತಾವು ನಿರ್ಮಾಣ ಮಾಡಿದ ಕೃತಿ ತಮಗೆ ದೈವದತ್ತವಾಗಿ ಬಂದದ್ದು, ಅಲ್ಲಿ ಸುಳಿಯುವ ಜೀವವಿಶೇಷ ತಮ್ಮ ದಿನಬಳಕೆಯ ಜೀವನದ ಒಂದು ಪ್ರಕಾಶನ ಮಾತ್ರ; ಒಂದು ಕ್ರಿಯೆ ಮಾತ್ರ ಎಂಬ ಭಾವನೆ ಬಂದು ಕೃತಿಗೆ ಅತಿಶಯವನ್ನು ತಂದುಕೊಡುತ್ತದೆ. ಅವರಿಗೆ ಈಚೆಗೆ ಡಾಕ್ಟರೇಟ್ ಪ್ರಶಸ್ತಿ ಬಂದಿತು. 'ಡಿ. ಆರ್' ಎಂಬ ಹೆಸರಿನೊಳಗೆಯೇ ಡಾಕ್ಟರೇಟಿನ ನುಡಿತವಿರುವಾಗ ಇವರಿಗಿನ್ನಾರು ಡಾಕ್ಟರೇಟ್ ಪ್ರಶಸ್ತಿ ಕೊಡಬೇಕು ಎನ್ನಿಸಿರುವುದುಂಟು. ಸಹಜವಾಗಿ ಹಾಕಿರುವ, ಅದಕ್ಕಿಂತ ಹೆಚ್ಚಿನ ಮಾನ್ಯತೆ ತಾವು ಇರುವ ಪ್ರದೇಶದಲ್ಲಿ ಪಡೆದವರಿಗೆ ಇದು ಎರಡು ಅರ್ಥಗಳಲ್ಲಿಯೂ ಉಪಾಧಿಯೇ ಆಗುತ್ತದೆ. ಅವರು ಪ್ರಧಾನವಾಗಿ ಕವಿಗಳು; ಅದರಲ್ಲಿಯೂ ಭಾವಗೀತದ ಕವಿ. ಅವರು ಧಾರವಾಡದ ಸಾಧನಕೇರಿಯಲ್ಲಿ ಮೊದಲಿಂದಲೂ ಇರುವವರು. ವಿಕ್ಟೋರಿಯಾ ಹೈಸ್ಕೂಲಿನ ಉಪಾಧ್ಯಾಯರಾಗಿದ್ದು ಸ್ವಾತಂತ್ರ್ಯ ಸಾಧನೆಯ ಕಾಲದಲ್ಲಿ ಯಾವುದೊ ಆಪಾದನೆ ದೇಶಭಕ್ತಿಯ ಕಾರಣದಿಂದ ಅವರ ಮೇಲೆ ಹೊತ್ತು ಆ ಕೆಲಸದಿಂದ ಹೊರಗೆ ಬರಬೇಕಾಯಿತು. ಕೆಲಕಾಲ ಇನ್ನಾವ ಉದ್ಯೋಗವನ್ನೂ ಹಿಡಿಯದೆ ಇದ್ದರು. ಆ ಮೇಲೆ ಪುಣೆಯಲ್ಲಿದ್ದುಕೊಂಡು ಬೊಂಬಾಯಿ ವಿಶ್ವವಿದ್ಯಾನಿಲಯದ ಎಂ. ಎ. ಪದವಿಯನ್ನು ಪಡೆದುಕೊಂಡರು. ಆಮೇಲೆ ಸೊಲ್ಲಾಪುರದ ಕಾಲೆಜೊಂದರಲ್ಲಿ ಕೆಲವು ಕಾಲ ಕನ್ನಡದ ಪ್ರಾಧ್ಯಾಪಕರಾಗಿದ್ದು ಅಲ್ಲಿಂದ ನಿವೃತ್ತಿ ಪಡೆದರು.

ಉಪಾಧ್ಯಾಯ ವೃತ್ತಿ ನೇರವಾಗಿ ಪರೋಕ್ಷವಾಗಿ, ಶಾಲೆಗಳೊಳಗೆ ಹೊರಗೆ ಮೊದಲಿಂದಲೂ ಅವರ ಮಾಸ್ತರಿಕೆಗೆ ಕೀರ್ತಿ ತಂದದ್ದು. ಆ ಕಡೆಯ ಜನ ಅವರನ್ನು ಮಾಸ್ತರೆಂದೇ ಎನ್ನುವುದು ರೂಢಿ. ಶಾಲೆ ಕಾಲೆಜುಗಳಲ್ಲಿ ಕಲಿಸಿ ಉಪಾಧ್ಯಾಯ ವೃತ್ತಿ ಮಾಡುವುದು ಉದ್ಯೋಗವಾಗಿದ್ದವರೆಲ್ಲರೂ ಬೇಂದ್ರೆಯಂತಹ ಮಾಸ್ತರರಾಗಲಾರರು. ಇವರು ಕಾವ್ಯ ಗುರು. ಕವಿಗಳನ್ನು ನಿರ್ಮಾಣ ಮಾಡಿದವರು. ಕವಿಸ್ಫೂರ್ತಿಯನ್ನು ಕಾವ್ಯ ಸ್ಫೂರ್ತಿಯನ್ನು ಹುಟ್ಟಿಸಿ ಹಲವರಲ್ಲಿ ಆ ಉತ್ಸಾಹವನ್ನು ಬೆಳಸಿ ನಡೆಸಿದವರು. ಅದಕ್ಕೆ ತಕ್ಕಂತಹ ಉಪದೇಶ ಶಕ್ತಿ, ಅದರ ಹಿಂದೆ ವ್ಯಾಸಂಗ, ಅದರ ಹಿಂದೆ ಬುದ್ಧಿಮತ್ತೆ ಒಂದು ವಿಶಿಷ್ಟ ರೀತಿಯಲ್ಲಿ ಅವರಲ್ಲಿ ಇದ್ದುದೇ ಕಾರಣ. ಕನ್ನಡ ಇವರ ಮನೆಯ ಮಾತಲ್ಲ. ಬೇಂದ್ರೆ ಮಹಾರಾಷ್ಟ್ರ ದಖನಿ ಚಿತ್‌ಪಾವನ ಬ್ರಾಹ್ಮಣರು. ಈಗಲೂ ಕನ್ನಡದಲ್ಲಿ ಎಷ್ಟು ಪ್ರಾಬಲ್ಯ

ಪಡೆದಿದ್ದಾರೊ ಮರಾಠಿಯಲ್ಲಿಯೂ ಅಷ್ಟೇ ಪ್ರಾಬಲ್ಯ ಪಡೆದಿದ್ದಾರೆ. ಕನ್ನಡದಲ್ಲಿ ಹೇಗೆ ವಿಮರ್ಶೆ ಕವಿತೆ ಬರೆದಿದ್ದಾರೆಯೊ ಹಾಗೆಯೇ ಮರಾಠಿಯಲ್ಲಿಯೂ ಬರೆದು ಆ ಜನವರ್ಗದಲ್ಲಿ ಮಾನ್ಯರಾಗಿದ್ದಾರೆ. ಕನ್ನಡ ಸಾಹಿತ್ಯವನ್ನು ಅವರಿಗೆ ಬೆಳಗಿ ತೋರಿಸಿರುವಂತೆ ಮರಾಠಿ ಸಾಹಿತ್ಯದ ಸ್ವರೂಪ ಲಕ್ಷಣಗಳನ್ನು, ಸಾಧನೆಯನ್ನು ಕನ್ನಡಿಗರಿಗೆ ಪರಿಚಯ ಮಾಡಿಕೊಟ್ಟು ಎರಡೂ ಕಡೆ ಆ ಕೆಲಸಕ್ಕೆ ಸ್ಥಾನ, ಕೀರ್ತಿ ಬರುವಂತೆ ಮಾಡಿದ್ದಾರೆ. ಮರಾಠಿಯಲ್ಲಿಯೂ ಉದ್ದಂಡ ಧೋರಣೆಯಿಂದ ಮಾತನಾಡಬಲ್ಲರು. ಅವರು ಆಧುನಿಕ ಕಾವ್ಯದ ಪರಿಚಯ, ಸಹವಾಸ, ವಿಶ್ವಾಸ ಉಳ್ಳವರು. ಹೀಗೆ ಎರಡು ಭಾಷಾ ವರ್ಗಗಳ ಆದರ, ಗೌರವಗಳಿಗೆ ಪಾತ್ರರಾಗಿರುವವರು.

ಈ ಎರಡು ಗುಣಗಳ ಜೊತೆಗೆ ಅವರಿಗೆ ಸಂತ ಪಂಥದ ಮತ್ತು ಅನುಭಾವಿ ಪಂಥದವರ ವಿಷಯದಲ್ಲಿ ಅತೀವ ಭಕ್ತಿ, ಜ್ಞಾನ ಇವೆ. ಮಹಾರಾಷ್ಟ್ರ ಸಾಧುಸಂತರ, ಕರ್ನಾಟಕದವರ ಮಾನ್ಯರು ಹಿರಿಯರು ಮಾತ್ರವೇ ಅಲ್ಲ; ವಿದೇಶೀಯ ಖಲೀಲ್ ಜಿಬ್ರಾನ್, ಎ. ಇ., ಯೇಟ್ಸ್ ಮುಂತಾದವರ ಕ್ರಿಶ್ಚಿಯನ್ ಮತ್ತು ಇತರ ಪಂಥಗಳವರ Mystic ಮಾರ್ಗಗಳ ಪರಿಚಯವಿದೆ. ಇಲ್ಲಿ ಅರವಿಂದಘೋಷ್ ಯೋಗಿಗಳ ಮತ್ತು ಪಾಂಡಿಚೆರಿಯ ಆಶ್ರಮದ ಶ್ರೀಮಾತೆಯವರ ಪ್ರಭಾವಗಳ ಅರಿವಿದೆ. ಎಲ್ಲ ಶಾಸ್ತ್ರವರ್ಗ, ತಾಂತ್ರಿಕವರ್ಗಗಳವರ ಸಾಹಿತ್ಯವನ್ನೂ ಅವರು ಓದಿಕೊಂಡಿದ್ದಾರೆ. ಸ್ವಂತವಾಗಿ ಒಂದು ಉಪಾಸನಾ ಮಾರ್ಗವನ್ನು ಇಟ್ಟುಕೊಂಡಿರುವವರು. ಅವರ ದೃಷ್ಟಿಯಲ್ಲಿ, ವಾಕ್ಯನಲ್ಲಿ ಒಂದು ಅಸಾಮಾನ್ಯ ಶಕ್ತಿ ಇದೆ. ಅವರು ನುಡಿದುದು ಆಗುತ್ತದೆ ಎನ್ನುವ ಕೀರ್ತಿ ಅವರದು. ಜೊತೆಗೆ ಜ್ಯೋತಿಷದಲ್ಲಿ ಅವರ ಅನುಭವ ಆಳವಾದ್ದೆಂದು ಹಲವರು ಬಲ್ಲರು. ಸಂಸ್ಕೃತ, ಪ್ರಾಕೃತ, ಇಂಗ್ಲಿಷ್ ಮೂರರಲ್ಲಿಯೂ ಕವಿತೆ, ಅನುಭವ, ದರ್ಶನವನ್ನು ಕುರಿತಾಗಿ ಯಾವ ಉತ್ತಮ ಸಾಹಿತ್ಯ ನಿರ್ಮಾಣವಾಗಿದೆಯೊ ಅದನ್ನೆಲ್ಲ ತಮ್ಮಲ್ಲಿ ಸಂಗ್ರಹಿಸಿ ವಶಮಾಡಿಕೊಂಡಿದ್ದಾರೆ. ಅವರ ಪುಸ್ತಕ ಭಂಡಾರ ಅಸಾಧಾರಣಗಾತ್ರದ್ದು, ಗುಣದ್ದು. ಅಲ್ಲಿಲ್ಲದ ಪ್ರಧಾನ ಕೃತಿಗಳೇ ಇಲ್ಲವೇನೊ ಎಂಬಷ್ಟು ಪ್ರಾಚೀನ, ನವೀನ ಶಾಸ್ತ್ರಗಳ, ಕವಿಗಳ, ಸಾಹಿತ್ಯ ಗ್ರಂಥಗಳಿವೆ; ಒಬ್ಬಿಗರಿ ಪುಸ್ತಕಗಳಿವೆ; ನಾಣ್ಯ, ವಿಗ್ರಹ ಇವೆ; ಅವುಗಳನ್ನು ನೋಡಿದರೆ ಸಾಮಾನ್ಯರಿಗೆ ದಿಗ್ಭ್ರಮೆಯಾಗುತ್ತದೆ.

ಅವರು ಮಾತನಾಡಿದರೂ ಹೀಗೆಯೇ ಕೆಲವೇಳೆ ದಿಗ್ಭ್ರಮೆಯಾಗುತ್ತದೆ. ಯಾವುದನ್ನಾದರೂ ಹಿಡಿದು ಸಾಮಾನ್ಯ ಗೋಷ್ಠಿಗಳಲ್ಲಿಯಾಗಲಿ, ಸಭಾವೇದಿಕೆಗಳ ಮೇಲಿಂದಾಗಲಿ ಮಾತನಾಡಲು ನಿಂತರೆಂದರೆ ಆಯಿತು; ಅದನ್ನು ಅವರು ಬೆಳಸುವ ರೀತಿ ಒಂದು ರೀತಿ ಹುಟ್ಟಿದ ವಾದ ಅಥವಾ ಪ್ರತಿಪಾದನೆ ಮುಗಿಲು ಮುಟ್ಟಿ ಭೂಮ್ಯಾಕಾಶಗಳನ್ನು ಒಂದು ಮಾಡುವಂತೆ ಬೆಳಸುವ ಮೋಡಿ ಅವರದು. ಅವರು ಮಾತನಾಡುವಾಗ ಸುತ್ತಲ ಮಂದಿ, ಎದುರಿನ ಸಭೆ ಒಂದು ಮಂತ್ರದ ಮೋಡಿಗೆ ಸಿಕ್ಕಿರುವಂತಿರುತ್ತದೆ. ಆ ಮೋಡಿಯದು ಮಿಂಚಿನ ಪ್ರಕಾಶ. ಕಣ್ಣು ಕುಕ್ಕುವಂಥದು. ಅಂಥ ಇನ್ನೊಬ್ಬರ ಮಾತುಗಾರಿಕೆ ಕನ್ನಡದಲ್ಲಿ ಈ ಐವತ್ತು ವರ್ಷಗಳಲ್ಲಿ ನಾನು ಕಂಡುದಿಲ್ಲ. ಅವರ ಅಭಿಪ್ರಾಯವನ್ನು, ನಿಲವನ್ನು ಒಪ್ಪುವವರು ಒಪ್ಪುಬಹುದು, ಬಿಡುವವರು ಬಿಡಬಹುದು; ಆದರೆ ಅವರ ಮನಸ್ಸು,

ಮಾತು, ಹಾಯಿಸುವ ಬೆಳಕು, ವಿಷಯವನ್ನು ಅವರಿಗೆ ಕಾಣದಿದ್ದ ಬೆಳಕಿನಲ್ಲಿ ಕಾಣಿಸಬಲ್ಲದು. ಮಾತು, ಉಕ್ತಿವಿಲಾಸ, ಚಿತ್ರ, ರೂಪಕ ತಂತ್ರ, ಮೈತುಂಬ ಒಂದು ನಿಮಿಷದಲ್ಲಿ ಹೂ ಬಿಟ್ಟ ಲತಾವಲಯದಂತೆ ಸಿಂಗರಗೊಂಡು ಕಾಣುತ್ತದೆ. ಅದು ನಡೆಯುವವರೆಗೂ ಅದರ ಬಂದಿಗಳು ನಾವು. ಅದೇ ಲಕ್ಷಣ ಅವರ ಬರವಣಿಗೆಯಲ್ಲಿ ಕೂಡ. ಅಲ್ಲಿ ಕಾಣುವುದೂ ಒಂದು ವಿದ್ಯುಲ್ಲತೆಯ ಬಿಡಗು. ವಿದ್ಯುತ್ ಹೌದು; ಲತೆ ಹೌದು; ಬಿಡಗೂ ಹೌದು. ಇವರ ಕವಿತೆಯಲ್ಲಿಯಾಗಲಿ ವಾಗ್ವೈಭವದಲ್ಲಿಯಾಗಲಿ ರೂಪಗೊಳ್ಳುವ ಒಂದು ವೈಭವವೂ ವಿಲಾಸವೂ ಆ ಸಮಯಕ್ಕೆ ಸತ್ಯದ ಇತರ ಎಲ್ಲ ಮುಖಗಳನ್ನೂ ಮರೆಮಾಡಿ ಬಿಟ್ಟರೂ, ಆ ಮಿಂಚು ಮಾಯವಾದ ಮೇಲೆ ಲೋಕವನ್ನು ಮತ್ತಷ್ಟು ಮಬ್ಬಿಡಿದಂತೆ ಮಾಡುತ್ತದೆಯಾದರೆ, ಅದರ ಹೊಳಪು ಎತ್ತಿ ಕಾಣಿಸುವ ರೇಖೆ, ಆಕೃತಿ, ಅರ್ಥ, ಚಿತ್ರ ಅತಿಶಯ ಕಾಂತಿಯುಳ್ಳದ್ದು. ಇದರ ಗುಣ ದೋಷಗಳೆರಡೂ ನೋಡುವವರಿಗೆ ಅನುಭವಿಸುವವರಿಗೆ ಬಡಿಯುತ್ತದೆ; ತಟ್ಟುತ್ತದೆ; 'ಅಬ್ಬಾ' ಎನ್ನಿಸುತ್ತದೆ; ಎಂತಹ ಕಾಂತಿ ಎನ್ನಿಸುತ್ತದೆ; ಮೋಹನಗೊಳಿಸಿ ಅವರ ಕಡೆಗೇ ಒಲಿವಂತೆ ಮಾಡುತ್ತದೆ. ಆ ಶಕ್ತಿಯನ್ನು ತಾಳಿಕೊಳ್ಳಲಾರದವರಿಗೆ ಸ್ವಂತ ಹೀನತಾ ಭಾವದ ಅರಿವು ಉಂಟಾಗುತ್ತದೆ. ಮಾತು, ಚಿತ್ರ, ಭಾವ, ಕಲ್ಪನೆಯ ತಾಂಡವ, ಚಿತ್ರದ ಹಿಂದೆ ನಿಲ್ಲುವ ಚಿತ್ರ, ಅರ್ಥದ ಹಿಂದೆ ನುಡಿವ ಅರ್ಥ, ಅದರ ಒಳಗನ್ನು ಬೆಳಗುವ ಅರ್ಥ ಬೇರೆ ಬೇರೆ ಪದರಗಳಲ್ಲಿ ಉನ್ನತಿಗಳಲ್ಲಿ ನೆಲಸುಗಳಲ್ಲಿ ಕಾಣುತ್ತದೆ. ನವನವೋನ್ಮೇಷಶಾಲಿನಿ ಎಂದು ಪ್ರತಿಭೆಗೆ ಸ್ವರೂಪ ಲಕ್ಷಣವನ್ನು ಹೇಳುತ್ತಾರೆ. ಬೇಂದ್ರೆಯವರ ಪ್ರತಿಭಾವಿಲಾಸ ಅಂಥದು. ಅದು ಸಹಜ; ಅವರೊಬ್ಬರಿಗೆ ಮಾತ್ರ ಇರುವಂಥದು. ಅವರನ್ನು ಅನುಕರಿಸುವೆನೆಂದರೆ ಮಿಂಚಿನ ಎದುರಿಗೆ ಒಂದು ಪಂಜೊ ಒಂದು ಕಂದೀಲೊ ಎತ್ತಿ ನಿಂತ ಹಾಗೆ. ಆ ಕಲ್ಪನಾಶಕ್ತಿ, ಆ ಬೆಡಗು ಅವರಿಗೆ ಸಹಜ. ಆ ಇಂದ್ರಜಾಲ ಅವರೊಬ್ಬರಿಗೆ ಮಾತ್ರ ದಕ್ಕಿರುವ ಪುಣ್ಯ.

೧೯೨೦–೨೨ರ ಸಮಯದಲ್ಲಿ ಧಾರವಾಡದ ಕಡೆಯಿಂದ ಅಚ್ಚಾದ ಒಂದು ಕವನ ಸಂಕಲನದಲ್ಲಿ ಒಂದೆರಡು ಕವನಗಳನ್ನು 'ಅಂಬಿಕಾತನಯದತ್ತ'ರದೆಂಬ ಹೆಸರಿನಲ್ಲಿ ಇತ್ತ ನಾವು ಓದಿದೆವು. ಬೆಂಗಳೂರು ನ್ಯಾಷನಲ್ ಹೈಸ್ಕೂಲಿನ ಮುಖ್ಯೋಪಾಧ್ಯಾಯರಾದ ಶ್ರೀ ಸಂಪದ್ಗಿರಿರಾಯರು ಅದನ್ನು ಬರೆದಿರುವವರು ಬೇಂದ್ರೆ ಎಂಬವರೆಂದು, ಒಳ್ಳೆಯ ಪ್ರತಿಭಾಶಾಲಿಗಳೆಂದು ಹೇಳಿದ ಜ್ಞಾಪಕ. ಅವರು ಒಂದು ಸೇವಾದಳದ ಸಂಬಂಧದಲ್ಲಿ ಕಬ್ಬೂರ್, ಹಾರ್ಡಿಕರ್ ಮುಂತಾದವರ ಸಹವಾಸದಲ್ಲಿ ಒಂದು ಸ್ವಯಂ ಸೇವಕ ದಳದ ಕಾರ್ಯಗಳಲ್ಲಿ ಪ್ರವೃತ್ತರಾಗಿದ್ದವರಾಗಿ ಧಾರವಾಡದ ಕಡೆಯವರ ಸಂಪರ್ಕ ಅವರಿಗೆ ವಿಶೇಷವಾಗಿತ್ತು. 'ಏಳು ಶೂರರ ಖನೀ' ಎಂಬ ಒಂದು ಕವನವೂ, ಬಹುಶಃ 'ಕನಸಿನೊಳಗೊಂದು ಕನಸು' ಎಂಬುದೂ ತಾಯಿ ಭಾರತಿ ಮೂದಲಿಸಿ, ಪಣ ಹಾಕಿ ಆತ್ಮಬಲಿಯನ್ನು ಕೊಟ್ಟುಕೊಂಡು ಸೇವೆ ಸಲ್ಲಿಸಿಯೇನು? – ಎಂದೊ ಏನೊ ಮಗನನ್ನು ಕೇಳುವಂಥ ಪದ್ಯ.

ಅಲ್ಲಿಂದಾಚೆಗೆ ಅವರು ಗೆಳೆಯರ ಗುಂಪನ್ನು ಸ್ಥಾಪಿಸಿದರು. ಈಗ ಕೀರ್ತಿ ಶಾಲಿಗಳಾದ ಹಲವು ಉತ್ತರ ಕರ್ನಾಟಕದ ಕವಿಗಳ ಗುಂಪನ್ನು ಕಟ್ಟಿದರು. ಅವರನ್ನು

ಮಾತ್ಸಲ್ಯದಿಂದ ಬೆಳಸಿದರು. ಆ ಕವಿಯ ನುಡಿಗಟ್ಟು, ರೀತಿ, ಛಂದ, ಮಾರ್ಗ ಇತ್ತ ಕವಿಗಿಂತಲೂ ಪೂರ್ತಿ ಬೇರೆಯಾದರೂ ಒಂದು ಹೊಸ ವಿಲಾಸ ಬೆಳಗುವಂತೆ ಆ ಗುಂಪಿನವರಿಂದ ಮಾಡಿಸಿ ಒಂದು ಪಂಥವನ್ನೂ ವಿಶ್ವಾಸವನ್ನೂ ಕಟ್ಟಿದರು. ಗೋಕಾಕರು, ಮುಗಳಿ, ಆನಂದಕಂದ, ಶಂಬಾ, ಖಾನೋಲ್‌ಕರ್, ನರೇಗಲ್ ಮುಂತಾದವರೂ ಇನ್ನೊಂದು ಪಕ್ಕದಲ್ಲಿ ಮಧುರ ಚೆನ್ನ ಮುಂತಾದವರೂ ಆವರೆಗೂ ಕನ್ನಡ ಸಾಹಿತ್ಯದಲ್ಲಿ ಇಲ್ಲದಿದ್ದ ಒಂದು ಬಗೆಯ ಸಾರಸ್ವತ ನಿರ್ಮಾಣದಲ್ಲಿ ತೊಡಗುವಂತೆ ಮಾಡಿದರು. ತರುವಾಯ ಆಲೂರರು ಜಯಕರ್ನಾಟಕವನ್ನು ಸ್ಥಾಪಿಸಿ ನಡಸತೊಡಗಿದಾಗ ಅವರೊಡನೆ ಸಹಕರಿಸಿ ಈ ಗುಂಪಿನವರೆಲ್ಲರೂ ಹೊಸ ಕಾವ್ಯೋತ್ಸಾಹಗಳನ್ನು ಕಾಣಿಸಿದರು. ಕವಿತೆ, ನಾಟಕ, ವಿಮರ್ಶೆ – ಎಲ್ಲ ಬಗೆಯ ನಿರ್ಮಾಣ ಕಾರ್ಯಗಳಿಗೂ ಆಲೂರರ ಮತ್ತು ಬೇಂದ್ರೆಯವರ ನಾಯಕತ್ವ, ಬೆಂಬಲ ದೊರೆತು ಒಂದು ವ್ಯಕ್ತಿ ಒಂದು ಶಕ್ತಿಯಾಗಿಯೂ ಒಂದು ಸಂಸ್ಥೆಯಾಗಿಯೂ ರೂಪಗೊಂಡಿತು. ೧೯೨೯ರ (?) ಬೆಳಗಾಂ ಸಾಹಿತ್ಯ ಸಮ್ಮೇಳನದಲ್ಲಿ ಈ ಗುಂಪಿನ ನಾಯಕರಾಗಿ ಬೇಂದ್ರೆಯವರು ರಂಗದ ಮೇಲೆ ಬಂದು 'ಹಕ್ಕಿ ಹಾರುತಿದೆ ನೋಡಿದಿರಾ' ಎಂಬ ಪದ್ಯವನ್ನು ಹಾಡಿದುದು ಒಂದು ಕ್ರಾಂತಿ ದರ್ಶನದಂತೆ ಆಯಿತು. ಧೋತ್ರ ಉಟ್ಟು, ಕೋಟು ಹಾಕಿಕೊಂಡು, ತಲೆಗೆ ಮಹಾರಾಷ್ಟ್ರ ತರಹದ ರುಮಾಲು ಕಟ್ಟಿ, ಎಂದಿನಂತೆ ಕಣ್ಣು ಮುಖ ಕಾಲು ಹುಬ್ಬು ಮಿಡಿಸಿ, ಕೈಬೆರಳ ಹೂಟ ಹೂಡಿ, ಆ ಪಲ್ಲವಿಯನ್ನು ಚರಣಗಳ ಕೊನೆಯಲ್ಲಿ ಪ್ರತಿಯೊಂದು ಸಲ ಹೇಳಿದಾಗಲೂ ಈ ಹೊಸ ಹಕ್ಕಿಯ ಹಾರಾಟ ದಿಗ್ ದಿಗಂತವನ್ನೂ ಪುಳಕಗೊಳಿಸಿತು. ಅಂದಿನಿಂದ ಅವರು ಅಖಿಲ ಕರ್ನಾಟಕ ಪ್ರಭಾವವಾಗಿ ದೇಶದ ಮೇಲೆಲ್ಲ ಪ್ರಖ್ಯಾತರಾದರು. ಈಗ ಅವರು ಹೋಗದ ಸ್ಥಳವಿಲ್ಲ; ಅವರಿಗೆ ಪ್ರೀತಿ, ಭಕ್ತಿ, ವಿಶ್ವಾಸ ಇಲ್ಲದ ಊರಾಗಲಿ, ಸಾಹಿತಿ ವರ್ಗವಾಗಲಿ ಇಲ್ಲ. ಬೇಂದ್ರೆ ಎಂಬ ಹೆಸರು ಕನ್ನಡಿಗರ ಮನೆ ಮಾತಾಗಿದೆ.

ಇನ್ನೂ ಈಚಿನ ಕಾಲಗಳಲ್ಲಿ ಸಾಹಿತ್ಯ ಅಕಾಡೆಮಿ, ಆಕಾಶವಾಣಿಗಳಲ್ಲಿ ಉತ್ಪಾದಕ, ಸಲಹೆಗಾರ, ಕಾವ್ಯಮಂಡಲಿಗಳಲ್ಲಿ, ಅಖಿಲಭಾರತ ಸಮಾರೋಹಗಳಲ್ಲಿ ಅವರ ಕೀರ್ತಿ ಪ್ರತಿಷ್ಠವಾಗಿದೆ. ಕನ್ನಡ ಸಾರಸ್ವತದಲ್ಲಿ ಅಖಿಲ ಭಾರತ ಕೀರ್ತಿ ಪಡೆದ ನಾಲ್ಕೈದು ಹೆಸರುಗಳಲ್ಲಿ ಅವರದೊಂದು ಪ್ರಧಾನವಾದ್ದು. ಒಬ್ಬ ಸಣ್ಣ ಸ್ಕೂಲು ಮಾಸ್ತರು ಈ ಅಖಿಲ ಭಾರತ ಕೀರ್ತಿಯನ್ನೂ ವ್ಯಾಪಕತೆಯನ್ನೂ ಪಡೆದುದಕ್ಕೆ ಅವರ ಯೋಗ್ಯತೆ, ಚೈತನ್ಯಗಳ ಸ್ವರೂಪವೇ ಚುರುಕೇ ಕಾರಣ.

ಕವಿತೆ, ನಾಟಕ, ವಿಮರ್ಶೆ, ಸಂಶೋಧನೆ ಎಲ್ಲದರಲ್ಲಿಯೂ ಬೇಂದ್ರೆಯವರ ಕೈವಾಡ ವಿಶೇಷವಾದ್ದೇ ಆದರೂ ಕವಿಯಾಗಿಯೇ ಅವರದು ಪರಮ ಪ್ರಾಧಾನ್ಯ. ಬಹುಶಃ ಅವರಷ್ಟು ಶುದ್ಧ ಭಾವಗೀತೆಯನ್ನು ಬರೆದ ಇನ್ನೊಬ್ಬರಿಲ್ಲ. ಭಾವಗೀತೆ ಎಂಬ ಹೆಸರಿನ 'ಭೃಂಗದ ಬೆನ್ನೇರಿ ಬಂತು ಕಲ್ಪನಾ ವಿಲಾಸ' ಎಂಬ ಕವಿತೆಯ ಸಮಕ್ಕೆ ತೂಗುವ ಅಚ್ಚಕವಿತೆ ಬೇರೆಲ್ಲಿಯೂ ಬಂದಿಲ್ಲ. 'ಬೆಳುದಿಂಗಳ ನೋಡಾ' 'ಹೂತದ ಹುಣಿಸಿ', ಶ್ರಾವಣಾ ಬಂತು', 'ಸಚ್ಚಿದಾನಂದ', 'ಗಂಗಾವತರಣ' ಮುಂತಾದ ಗೀತಗಳು ಕನ್ನಡ ಗೀತೆಗಳಲ್ಲಿ ಅತಿ

ಮೇಲ್ಪಟ್ಟವು ಕವಿತೆಗಳು. ಹಾಗೆಯೇ 'ಪಾತರ ಗಿತ್ತಿ ಪಕ್ಕಾ', 'ಕುನಿಯೋಣು ಬಾರಾ' ಮತ್ತು 'ಮೂಡಲ ಮನೆಯಾ' ಎಂದು ತೊಡಗುವ ಅರುಣಗೀತೆ. ಎಲ್ಲಿ ಉತ್ತರ ಕನ್ನಡದ ಜಾನಪದ ಲಯಗಾನ, ಹಾಡುಗಾರಿಕೆ, ತಾಳದ ಜಿಗಿತ ತಾಂಡವವಾಡುತ್ತದೆಯೊ ಅಲ್ಲಿ ಅದನ್ನು ಬಳಸಿ ಅವರು ಹಾಡಿದ ಹಾಡುಗಳು ರಮ್ಯತೆಯಲ್ಲಿಯೂ ಅರ್ಥವಂತಿಕೆಯಲ್ಲಿಯೂ ಕನ್ನಡಕ್ಕೆ ಅತಿಶಯತೆಯನ್ನು ತಂದುಕೊಟ್ಟಿರುವ ಕವಿತೆಗಳು. ಅಂಥ ಕೆಲವು ಕಡೆ ಅತಿಗೇಳುವಂತೆ, ಅಗತ್ಯಕ್ಕಿಂತ ಹೆಚ್ಚಿನ ವಿಪುಲತೆ ಇರುವಂತೆ ಕವಿತೆ ಕಾಣಬಹುದು. ಅಲ್ಲಿ ಭಾವಗೀತೆಯ ಪರಮ ಪ್ರಮಾಣ ಮೀರಿದಂತೆ ಭಾಸವಾಗಬಹುದು. ಆದರೆ ಯಾವ ಒಂದು ಚರಣವನ್ನಾಗಲಿ ತೆಗೆಯಲು ಮನಸ್ಸು ಬರುವುದಿಲ್ಲ. ಅಂಥ ಸಮೃದ್ಧಿ ಅಲ್ಲಿನ ಭಾವದ ಹೊಮ್ಮುಗೆಯದು. ಆ ಕವಿತೆಗೆ ಸಂಬಂಧಿಸಿದ ಆವೇಶ ಮುಗಿದಾಗ ಕವಿ ತಮ್ಮ ಅಂಕಿತವನ್ನು ತಪ್ಪದೆ ಕಾಣಿಸುತ್ತಾರೆ.

ಪ್ರೇಮವನ್ನು ಕುರಿತ ಕವಿತೆಗಳು ಅನೇಕ. 'ಪೋರಿ–ಪೋರ' 'ಬಡವಿ', 'ಹಳ್ಳದ ದಂಡ್ಯಾಗ' ಮುಂತಾದವು ಬಹು ಸೊಗಸಾದ, ಸಹಜವಾದ ಚಿಲುವಿನವು. ಆ ಸರಳ ಸುಂದರವಾದ ಚಿತ್ರಗಳು ನಮ್ಮ ನೆಲದ ಹೂ, ಹಣ್ಣು, ಕಾಯಿ, ಬಳ್ಳಿ; ಅವುಗಳ ಪರಮ ಸೌಭಾಗ್ಯವನ್ನು ಕಾಣಿಸುತ್ತದೆ. ಎಷ್ಟು ಪಾಶ್ಚಿಮಾತ್ಯವನ್ನು ಅವರು ಓದಿದ್ದಾರೊ ಅದ್ಯಾವುದರ ಸಂಪರ್ಕವೂ ಇವರಿಗಿಲ್ಲವೇನೊ ಎಂಬ ಮಟ್ಟಿನ ಅಚ್ಚಕನ್ನಡತೆ ಅಲ್ಲಿರುತ್ತದೆ. ಪ್ರೇಮದ ಇತರ ಮುಖಗಳನ್ನೂ ಬೆಳಸನ್ನೂ ಅವರು ಕಾಣಿಸಿದ್ದಾರೆ. ಅವರ ಸುಖ–ದುಃಖಗಳನ್ನು ಕಾಣಿಸುತ್ತಾರೆ. ಮಗು ಕಳೆದುಕೊಂಡ ತಾಯಿಯ ಗೋಳನ್ನು ತಂದೆ ನೋಡಿ ತನ್ನ ಬೆಂದೊಡಲಿನ ದುಃಖವನ್ನು ತೋಡಿಕೊಳ್ಳುವ 'ನೀ ಹೀಂಗೆ ನೋಡಬ್ಯಾಡ ನನ್ನ' ಎಂಬ ಪದ್ಯವಾಗಲಿ, ದುಃಖ ಮರೆತು ಒಂದು ಸಲ ನಗು, ನನ್ನ ಬದುಕು ಸ್ವರ್ಗವಾದೀತು; ಈ ಬಡ ನೂರು ವರ್ಷವನ್ನು ಧೈರ್ಯದಿಂದ ಶಕ್ತಿಯಿಂದ ಕಳೆಯಲು ಶಕ್ಯವಾದೀತು –

'ಅತ್ತಾರೆ ಅತ್ತು ಬಿಡು, ಹೊನಲು ಬರಲಿ, ನಕ್ಕಾ ್ಯಕ ಮರಸತೀ ದುಕ್ಕ?
ಎವೆ ಬಡಿಸಿ ಕೆಡವು, ಬಿರಿಗಣ್ಣು ಬ್ಯಾಡ, ತುಟಿಕಚ್ಚಿ ಹಿಡಿಯದಿರು ಬಿಕ್ಕ''.

ಎಂಬ ನೋವು ದಾರುಣವಾದುದು. ತಾಯಿ ಪ್ರೀತಿಯನ್ನು ಹೊಮ್ಮಿಸುವ ಕವಿತೆಗಳು ಹಲವು. ದಾಂಪತ್ಯಕ್ಕೆ ಮೀಸಲಾದ ಅಖಂಡ ಕಾವ್ಯ 'ಸಖೀಗೀತ'. ತಾಯನ್ನು ಕುರಿತು ಬರೆವಾಗ ಹೆತ್ತ ತಾಯಿ, ನುಡಿತಾಯಿ, ನಾಡತಾಯಿ, ಭಾರತಿ, ಲೋಕಧಾತ್ರಿ ಎಲ್ಲಕ್ಕೂ ವ್ಯಾಪಕವಾಗುವ ಭಾವಸಾಕಲ್ಯದವರೆಗೂ ಹೋಗಬಲ್ಲ ಮನಸ್ಸು ಅಲ್ಲಿನದು. ರಬಿಂದ್ರನಾಥರಂಥ ಕವಿಗಳ ಮನಸ್ಸು ಶ್ರಾವಣಕ್ಕೆ ಒಲಿದಂತೆ ಇವರಿಗೂ ಶ್ರಾವಣ ಹುಚ್ಚು ಹಿಡಿಸುತ್ತದೆ. ಅಲ್ಲಿ ಇಲ್ಲಿ ವಿನೋದದ ಪ್ರೇಮ ಚಿತ್ರಗಳೂ ಉಂಟು. 'ಹುಬ್ಬಳ್ಳಿಯಾಂವ' ಎಂಬುದೂ ಅದರಲ್ಲಿ ಬರುವ 'ಚಹಾದ ಜೊತೆಗೆ ಚೂಡಾದಂತೆ ನೀ ನನಗಂದಾವ – ಇನ್ನೂ ಯಾಕ ಬರಲಿಲ್ಲವ್ವಾ' ಎಂಬ ಕಲ್ಪನೆ ಎಷ್ಟು ಹಗುರಾಗಿರುವಂತೆಯೇ ಅಲ್ಲಿನ ವಿರಹ ಅಷ್ಟೇ ಮೊನೆಯುಳ್ಳದ್ದು; ಸಹಜವಾದ್ದು; ಆಳದ್ದು... ಹೊಸಕಾಲದ ಚಿಲುವಲ್ಲಿ ವ್ಯಂಗ್ಯದ್ದು. ಈ ಹೆಣ್ಣಿಗೆ ಕಪ್ಪು ಕನ್ನಡಕದ ಹಿಂದೆ ನಿಜವಾದ ಕಣ್ಣಿದೆಯೊ ನಿಜವಾಗಿ ಹಲ್ಲಿದೆಯೊ ಅದು

ಕೃತಕವೊ ಎನ್ನುವವರೆಗೂ ಬೇಷ್ ಹೋಗುತ್ತದೆ. ಸಾಮಾನ್ಯ ಗೀತೆಗಳ ಜೊತೆಗೆ ಹಲವಾರು ಔದಶಪದಗಳನ್ನೂ ಬರೆದಿದ್ದಾರೆ. ಅನುಭಾವದ ಒಂದು ವಿಶಿಷ್ಟ ದರ್ಶನವೆಡೆಗೆ ಕರೆದುಕೊಂಡು ಹೋಗಲು ಆವರಣ ಕಟ್ಟುವ 'ಜೋಗಿ' ಪದ್ಯ ಮೊದಲಿಂದ ಕಡೆಯವರೆಗೆ ಹೊಸ ಹೊಸ ರಂಗು, ರಂಜನೆ, ಅರ್ಥವಂತಿಕೆ, ಧ್ವನಿ ಬೆಳಸುವ ಕವಿತೆ. ಒಂದು ಆದರ್ಶ ಹೇಗೆ ಹುಟ್ಟಿ, ಬೆಳೆದು, ಧಾತು ಕೆಟ್ಟು, ಬರಿಯ ತೋರಿಕೆಯ ಒಂದು ವ್ಯಾಪಾರದ ವಸ್ತುವಾಗುವುದೆಂಬುದರ ಒಂದು ತತ್ವವನ್ನು ಪ್ರತಿಪಾದಿಸುವಂತೆ ನಾಲ್ಕೈದು ಖಂಡಗಳಾಗಿ ರಚಿಸಿರುವ 'ಮೂರ್ತಿ'ಯಲ್ಲಿ ದ್ಯೋತಿತವಾಗುತ್ತದೆ. ಇಂಥವು ಎಷ್ಟೋ. ಈಚೆಗೆ ಬರೆದ ಕವಿತೆಗಳಲ್ಲಿ 'Mysticism' ಅಂಶ ಸ್ವಲ್ಪ ಹೆಚ್ಚಾಗಿ ಸಂಕೇತದ ಮತ್ತು ಬಿಡಗಿನ ಅಂಶಗಳು ಹೆಚ್ಚು ಪ್ರಚುರವಾಗುತ್ತಿವೆ. ಅವರು ಭಾಷಾಂತರಿಸಿರುವ 'ಮೇಘಸಂದೇಶ' ಕಾಳಿದಾಸನ ಮಂದಾಕ್ರಾಂತವನ್ನು ಎಂಟು ಮಾತ್ರಾಗಣದ ಛಂದೋವಿಲಾಸದಲ್ಲಿ ಬೆಳಗಿ ಕನ್ನಡದಲ್ಲಿ ಹೊಸ ಶೃಂಗಾರವನ್ನು ಕಾಣಿಸುವ ಕೃತಿಯಾಗಿದೆ.

ಜೊತೆಯವರೊಡನೆಯೂ ಇತರರೊಡನೆಯೂ ಅವರು ನಡೆದು ನುಡಿದು ನಾಡಿನ ಸಾವಿರಾರು ಮಂದಿಗೆ ಸಂತೋಷವನ್ನೂ ಸ್ಫೂರ್ತಿಯನ್ನೂ ಕೊಟ್ಟಿದ್ದಾರೆ. ಧಾರವಾಡದಲ್ಲಂತೂ ಸಾಹಿತ್ಯ ಸಂಸ್ಕೃತಿ ಜೀವನಗಳಲ್ಲಿ ಅವರು ಭಾಗವಹಿಸದ ಸಮಾರಂಭ ಬಡವಾಗಿರುತ್ತದೆ. ಹೀಗೆ ಸ್ವಂತ ಕ್ರಿಯಾಚೈತನ್ಯದಿಂದ ಹತ್ತು ಜನವನ್ನೂ ವ್ಯಕ್ತಿಶಕ್ತಿಗಳನ್ನೂ ಮಿಡಿದು ಕಟ್ಟಿದ್ದು ಅವರ ಪ್ರಭಾವ. ಒಂದು ಹೊಸ ಛಾತಿಯ ಕೃತಿಯನ್ನು ನಿರ್ಮಾಣಮಾಡಿದ ಕಾರಯಿತ್ರೀ ಪ್ರತಿಭೆ ಬೇಂದ್ರೆಯವರನ್ನು ಆಧುನಿಕ ಕನ್ನಡ ಸಾಹಿತ್ಯ ಪ್ರಪಂಚದಲ್ಲಿ ಒಂದು ದೊಡ್ಡ ಸತ್ವವನ್ನಾಗಿ ಮಾಡಿದೆ. ವ್ಯವಹಾರ ಜೀವನದಲ್ಲಿ ಅವರ ಕಷ್ಟಸುಖಗಳು, ಅವರ ಕುಂದುಕೊರತೆಗಳು, ಅವರಿಗೆ ಬಂದ ಕೀರ್ತಿ ನಿಂದೆಗಳು ಅವರನ್ನು ಇತರರಂತೆ ಮಾನವರನ್ನಾಗಿ ಉಳಿಸಿದೆ. ಸಮಾಜದಲ್ಲಿ ಬದುಕಬೇಕಾದವರೆಲ್ಲರಿಗೂ ಈ ಆಪತ್ತು ಎದುರಿಗೆ, ಪಕ್ಕದಲ್ಲಿ, ಸುತ್ತಮುತ್ತ ಕಾದೇ ಇರುತ್ತದೆ. ಅವರನ್ನು ಕಂಡವರಿಗೆಲ್ಲ ಇದೊಂದು ಅಸಾಧಾರಣವಾದ ಶಕ್ತಿ, ವ್ಯಕ್ತಿ, ಅಪೂರ್ವ ಚೈತನ್ಯ ಎಂಬ ಅನುಭವ ಯಾರಿಗೂ ಎಲ್ಲಿಯೂ ಉಂಟಾದೀತು. ಇತರ ಯಾರಂತೆಯೂ ಅಲ್ಲ, ಈ ಬಗೆಯ ಚೈತನ್ಯ ಇವರೊಬ್ಬರದೇ, ಆ ಅಂಕಿತ, ಮುದ್ರೆ ಅನನ್ಯಲಭ್ಯ ಎಂಬಷ್ಟು ಟಂಕಿತವಾದ ವ್ಯಕ್ತಿತ್ವ, ಮೂರ್ತಿತ್ವ ಅವರದು.

ಡಾ. ಶಂ. ಬಾ. ಜೋಶಿ

ಶಂಕರರಾವ್ ಬಿ. ಜೋಶಿ ಅವರ ಬದುಕು ಬಹುತರ ಕೇವಲವಾಗಿ ಸಂಶೋಧನೆಗೆ ಮೀಸಲಾದ್ದು. ಧಾರವಾಡದ ಸಾಧನಕೇರಿಯ ಒಂದು ಮೂಲೆಯಲ್ಲಿ ಮನೆಮಾಡಿಕೊಂಡು, ಹೆಚ್ಚಾಗಿ ಜನರ ಕೈಗೆ ಸಿಕ್ಕದೆ ಸದ್ದಿಲ್ಲದೆ ಅವರ ವ್ಯಾಸಂಗ, ಲೇಖನ ನಡೆದಿದೆ. ಮನೆಯಲ್ಲಿ ಹೆಣ್ಣುಮಕ್ಕಳು ಗಂಡುಮಕ್ಕಳು ಇದ್ದಾಗಲೂ ಅವರ ಚಲನವಲನ – ಆ ಸಣ್ಣವಯಸ್ಸಿನಲ್ಲಿ ಕೂಡ – ನಮಗೆ ಬೀಳುತ್ತಿರಲಿಲ್ಲ. ಈಗ ಹೆಣ್ಣು ಮಕ್ಕಳಿಗೆ ಮದುವೆಯಾಗಿದೆ. ಗಂಡು ಮಕ್ಕಳು ವಯಸ್ಕರಾಗಿ ತಮ್ಮ ವಿದ್ಯಾವ್ಯಾಸಂಗವನ್ನು ಮುಗಿಸಿಕೊಂಡು ಹೊರಗೆ ದೊಡ್ಡ ಕೆಲಸಗಳಲ್ಲಿದ್ದಾರೆ. ಒಬ್ಬ ಹುಡುಗನನ್ನು ಒಮ್ಮೆ ಅವರು 'ದಸರಾ'ಉತ್ಸವಕ್ಕಾಗಿ ಪುತ್ತೂರಿಗೆ ಕರೆತಂದಿದ್ದರು. ಅಲ್ಲಿಂದ ಮಂಜೇಶ್ವರಕ್ಕೆ ಹೋಗಿ ಗೋವಿಂದ ಪೈ ಸಹವಾಸದಲ್ಲಿ ಒಂದು ದಿವಸ ಕಳೆದು ಅವರು ಧಾರವಾಡಕ್ಕೆ ಹಿಂದಿರುಗುವಾಗ ಜೊತೆಗಿದ್ದ ನಾನು ಬೆಂಗಳೂರಿಗೆ ಹಿಂದಿರುಗಿದೆ. ಆ ಹುಡುಗನೂ ಹೆಚ್ಚು ಮಾತಾಡುತ್ತಿರಲಿಲ್ಲ. ತಂದೆಯ ಎದುರಿಗೆ ತನ್ನ ಅಭಿಪ್ರಾಯಗಳನ್ನಾಗಲಿ ಇತರ ಮಾತುಕತೆಗಳನ್ನಾಗಲಿ ಬೆಳಸುವ ಹವ್ಯಾಸವಿದ್ದವನಲ್ಲ; ಆ ಆಸಕ್ತಿಗೆ ಹೋಗಲಿಲ್ಲ. ಆ ರೀತಿ ಸಂಸ್ಕಾರ, ಶಿಸ್ತು ಆ ಮನೆಯಲ್ಲಿ ನಡೆದಿರಬೇಕು. ಗಂಡ–ಹೆಂಡತಿ ಕೂಡ ಮಿತಭಾಷಿಗಳು. ಒಟ್ಟಿನಲ್ಲಿ ಆಕೆ ತುಂಬಾ ಅಚ್ಚುಮೆಚ್ಚಾಗಿ ಹಿತವಾಗಿ ನಡೆದುಕೊಂಡಿದ್ದಾರೆ, ಒಬ್ಬರನ್ನೊಬ್ಬರು ನಡಸಿಕೊಂಡಿದ್ದಾರೆ – ಎಂಬುದನ್ನು 'ಶಂ.ಬಾ' ಪ್ರೀತಿಯಿಂದ ನುಡಿದಿದ್ದಾರೆ. ಆಕೆಯೂ ಶಾಲೆಯಲ್ಲಿ ಮಾಸ್ತರಿಣಿ ಆಗಿದ್ದರೆಂದು ಕೇಳಿದ್ದೇನೆ. ಬಹುಕಾಲದಿಂದ ಇವರಿಗೆ ಯಾವುದೋ ಒಂದು ಬಗೆಯ ಅನಾರೋಗ್ಯದ ಚಿಕಿತ್ಸೆಗೆ ಪಥ್ಯ ಗೊತ್ತಾಗಿ ನಡೆಯುತ್ತಿರುವುದರಿಂದ, ಆ ಕಡೆಗೆ ಎಲ್ಲ ರೀತಿಯಲ್ಲಿಯೂ ಗಮನಕೊಟ್ಟು, ಅವರನ್ನು ಕಾಪಾಡಿಕೊಂಡು ಬಂದವರು ಅವರು. ಹೋಗುವ ಬರುವ ಅತಿಥಿಗಳಿಗೆ ಅವರ ಆದರ, ಆತಿಥ್ಯ ಹಾರ್ದವಾದ್ದು. ತಮ್ಮ ಯಜಮಾನರ ಪಥ್ಯ ಒಂದು ಮಿತಕ್ಕೂ ಸಪ್ಪೆಗೂ ಅವರನ್ನು ನಿರ್ಬಂಧಿಸಿದ್ದರೂ ಅತಿಥಿಗಳಿಗೆ ನಾಲ್ಕಾರು ಬಗೆಯ ಭಕ್ಷ್ಯಭೋಜ್ಯಗಳನ್ನು ವಿಶೇಷವಾಗಿ ಮಾಡಿ ಬಡಿಸುವ ಸಂಪ್ರದಾಯ ಅವರದು. ಆ ಅಡಿಗೆ ಊಟ ಪದ್ಧತಿ ಚಿತ್ಪಾವನ ಕೊಂಕಣಸ್ಥ ಮನೆತನಗಳದು. ಅದು ನಡೆಯುವ ಬಗೆ ಒಂದು ವಿಶೇಷ ಹದದ್ದು. ಬೇಂದ್ರೆಯವರ ಮನೆಯಲ್ಲೂ ಇವರಲ್ಲಿಯೂ ನಮ್ಮ ಕನ್ನಡದ ಚಿತ್ಪಾವನ ಬಂಧುಗಳ ಮನೆಯಲ್ಲಿಯೂ ನನಗೆ ದೊರಕಿದ ಆದರ ಒಂದು ವಿಶೇಷ. ಅದರಲ್ಲಿ ಇವರ ಮನೆಯ ಸೀಮೆಅಕ್ಕಿ–ಸಬ್ಬಕ್ಕಿ ಹುರಿಗಾಳು ಹುರಿದೊ ಕರಿದೊ ಜೊತೆಗೆ ಗೋಡಂಬಿ ಮುಂತಾದ್ದನ್ನು ಬೆರಸಿ ಕಾರವಿಟ್ಟ ಕಾಳು. ಎಷ್ಟೋ ಬಗೆಯಲ್ಲಿ ನಾನದನ್ನು ಆಕೆ ಹೇಳಿದಂತೆ ಮಾಡಿಸಲು ಯತ್ನಿಸಿ ವಿಫಲನಾಗಿದ್ದೇನೆ! ಒಂದೊಂದು ಕಡೆ ಒಂದೊಂದು ಭಕ್ಷ್ಯಕ್ಕೆ ಒಂದೊಂದು ಕೈವಾಡ ಫಲಿಸಿರುತ್ತದೆ. ಇತರ ಮನೆಗಳಲ್ಲಿಯೂ ಅದರ ರುಚಿ ಕಂಡಿದ್ದೇನೆ. ಇದು ಬೇರೆ ರುಚಿಯದು. ಒಂದು ಸಂದರ್ಭದಲ್ಲಿ ಹೋಳಿಗೆ

ಪಾಯಸದ ಅಡಿಗೆ ಎಷ್ಟು ಸವಿ ಎನ್ನುವಂಥ ಅಡಿಗೆ ಮಾಡಿದ್ದರು. ಚಿತ್ಪಾವನ್ ಮನೆಗಳಲ್ಲಿ – ಏಕೆ ಮಹಾರಾಷ್ಟ್ರ ಪ್ರಭಾವಗಳಿಂದ ಬೆಳೆದ ಮನೆಗಳಲ್ಲಿ – ಸೀಮೆ ಅಕ್ಕಿಯ ಬಳಕೆ ಬೇರೆಬೇರೆಯಾಗಿ ನಡೆಯುತ್ತದೆ. ಅದನ್ನು ಮುಂದೆ ಎಲ್ಲಿಯಾದರೂ ಹೇಳುತ್ತೇನೆ. ಶಂ.ಬಾ ಸಾಮಾನ್ಯವಾಗಿ ಹೆಚ್ಚು ಚಿಲ್ಲರೆ ಮಾತು ಆಡದವರು. ಗಂಡಹೆಂಡಿರ ದಾಂಪತ್ಯ ಒಪ್ಪವಾಗಿ ಒಮ್ಮಸಮ್ಮತವಾಗಿ ನಡೆದು ಆ ಜೀವಗಳನ್ನು ಬೆಸೆದಿರುವಂತೆ ನನಗೆ ಕಂಡಿದೆಯಾಗಿ ಈ ಮಾತನ್ನು ಹೇಳಿದೆ. ಕವಿ ನರಸಿಂಹಸ್ವಾಮಿಯವರು ಬರೆದ ಒಂದು ಪದ್ಯದಲ್ಲಿ,

"ಹೆಂಡತಿಯೊಬ್ಬಳು ಮನೆಯೊಳಗಿದ್ದರೆ
ನಾನೂ ಒಬ್ಬ ಸಿಪಾಯಿ!'

ಎಂದು ನೆನಪು ಕೊಡುವ, ಲೋಕಸತ್ಯದ ಒಂದು ಮುಖವನ್ನು ಕಾಣಿಸುವ ಎರಡು ಸಾಲುಗಳಿವೆ. ಸಿಪಾಯಿಯೇ ಆಗಬೇಕೆಂದಿಲ್ಲ. ಆ ಧೈರ್ಯ, ಧೋರಣೆ, ನಿಲವು ಇಂಥಲ್ಲಿ ಬಂದು ತಮ್ಮ ಯಾವ ಇತರ ಕೆಲಸವನ್ನು ಮಾಡುವುದಕ್ಕೂ ಗಂಡಸಿಗೆ ಸ್ವಾಸ್ಥ್ಯತರುತ್ತದೆ. ಬದುಕಿನ ಒಳಮನೆ ಭಾಗದ ವ್ಯವಸ್ಥೆಯನ್ನು ಇನ್ನೊಬ್ಬರು ನೋಡಿಕೊಂಡರೆ ಯಾವ ಕಾರ್ಯಕ್ಕಾಗಿ ನಾವು ನಮ್ಮನ್ನು ಮೀಸಲು ಮಾಡಿಕೊಳ್ಳಬಯಸುತ್ತೇವೆಯೊ ಅದು ನಿರಾತಂಕವಾಗಿ ನಡೆಯಲು ಅವಕಾಶವಾಗುತ್ತದೆ. ಇನ್ನಾವ ಆತಂಕ, ತೊಂದರೆ ಬಂದರೂ ಅವು ನಾವು ಮಾಡಿಕೊಂಡದ್ದು. ನೇರವಾಗಿಯೊ ನಮ್ಮ ಕಾರ್ಯದ ಪರಿಣಾಮವಾಗಿಯೊ ನಮ್ಮ ಆವರಣದ ಪ್ರಭಾವದಿಂದಾಗಿಯೊ ಆದ್ದು ಮಾತ್ರ ಪ್ರತಿಕ್ರಿಯೆ. ಅದಕ್ಕೂ ಗೃಹಜೀವನಕ್ಕೂ ಸಂಬಂಧವಿರಬೇಕಿಲ್ಲ. ಮನೆಯ ಆವರಣ ಅನುಕೂಲವಿಲ್ಲವಾದರೆ ಸಾಹಿತ್ಯಕ ಜೀವನವಾಗಲಿ, ಸಂಶೋಧನೆಯ ಜೀವನವಾಗಲಿ ಯಾವುದೂ ಸುಸೂತ್ರವಾಗಿ ನಡೆಯದು. ನೆಮ್ಮದಿಯಾದ ಒಳ ಆವರಣವನ್ನು ಒದಗಿಸಿಕೊಟ್ಟು ಅವರನ್ನು ಸಂಶೋಧನೆಯ ಕಾರ್ಯಕ್ಕೆ ಮುಡಿಪು ಮಾಡಿಕೊಳ್ಳುವಂತೆ ಮಾಡಿರುವುದು ಆಕೆಯ ಪುಣ್ಯಕೃತಿ. What Every Woman Knows ಎಂಬ ಒಂದು ನಾಟಕ ಜೇಮ್ಸ್‌ಬ್ಯಾರಿ ಬರೆದುದ್ದಿದೆ. ಗಂಡಸಿನ ಸಮಸ್ತ ಗೆಲವಿಗೂ ಸಾಧನೆಗೂ ಹೆಂಡತಿಯ ಒಳವ್ಯವಸ್ಥೆ, ಕ್ರಿಯೆ ಹೇಗೆ ಅವನಿಗೆ ತಿಳಿಯದೆಯೇ ಒದಗಿರುತ್ತದೆ ಎಂಬುದು 'ಗಾರ್ಹಸ್ಥ್ಯ' ಪ್ರಧಾನವೆನ್ನುವ ನಮ್ಮ ನಾಡಿನಲ್ಲಿ ಒಂದರಲ್ಲಿಯೇ ಅಲ್ಲ, ಪ್ರೀತಿ ಬೆಳೆವ ಸಮಸ್ತ ದಾಂಪತ್ಯದಲ್ಲಿಯೂ ನೆಲಸಿರುತ್ತದೆ. ಮನಸ್ಸುಗಳು ಹೊಂದಿ ಒಂದಕ್ಕೆ, ಇನ್ನೊಂದು ಒಲಿದು ಬೆಳೆದರೆ ಅಂಥಲ್ಲಿ ಸದ್ದು ಮಾಡದ ಈ ಸ್ನಿಗ್ಧ ದಾಂಪತ್ಯವಿರುತ್ತದೆ. ಇನ್ನೊಂದು ಜೀವ ಹಣ್ಣಾಗುವುದಕ್ಕೆ ತನ್ನ ಪಾಲಿನ ಕೆಲಸವನ್ನು ಮಾಡಿ ಮುಗಿಸುವುದಕ್ಕೆ ನೆರವಾಗುತ್ತದೆ. ಆಗ ಎರಡೂ ಬಾಳು ಉತ್ತೀರ್ಣವಾಗುತ್ತವೆ. 'ಸಂಸಾರಸಾರಸರ್ವಸ್ವ ಫಲಂ' ಎಂದು ಪಂಪನು ನುಡಿದುದರ ಸಂಪೂರ್ಣತೆಗೆ ಸೇರಬಲ್ಲ ಅಂಶ ಇದು. ಇದಿಲ್ಲದೆ 'ಸರ್ವಸ್ವ' ಸಿದ್ಧಿಸದು.

ಜೋಶಿಯವರು ಒಂದು ಹೈಸ್ಕೂಲಿನ ಅಥವಾ ಒಂದು ಮಿಡಲ್ ಸ್ಕೂಲಿನ ಉಪಾಧ್ಯಾಯರಾಗಿ ಕೆಲಸಮಾಡಿದವರು. ಮೊದಮೊದಲು ವೃತ್ತ ಪತ್ರಿಕೆಗಳಿಗೆ ಲೇಖನ ಬರೆದು ಕೈ ಕುದುರಿಸಿಕೊಂಡರು. ಸ್ವಾತಂತ್ರ್ಯಸಾಧನೆಯ ಕಾಲದಲ್ಲಿ ಕರ್ನಾಟಕ ವೃತ್ತಪತ್ರಿಕೆ, ಕರ್ಮವೀರ ಮುಂತಾದ ಪತ್ರಿಕೆಗಳಲ್ಲಿ ಧಾರಾಳವಾಗಿ ಬರವಣಿಗೆ ಬರೆದು ಹೆಸರಾದರು.

ಆ ಕಾಲದಲ್ಲಿಯೂ ಅವರ ಮನಸ್ಸು ಸಾಹಿತ್ಯಕ್ಕೂ ಸಾಹಿತಿಗಳಿಗೂ ಎಷ್ಟು ತೆರೆದು ಉದಾರವಾಗಿ ನಡೆದುಕೊಂಡಿತೆಂಬುದನ್ನು ಒಮ್ಮೆ ಬೆಟಗೇರಿ ಕೃಷ್ಣಶರ್ಮರು ಜೋಶಿಯವರ ಸನ್ಮಾನಕ್ಕಾಗಿ ಏರ್ಪಡಿಸಿದ್ದ ಕಿಕ್ಕಿರಿದ ಒಂದು ಸಭೆಯಲ್ಲಿ ವಿವರಿಸಿದರು. ಶಾಲೆಯ ಕೆಲಸವನ್ನು ದಕ್ಷರಾಗಿ ಅಂತಃಕರಣಪೂರ್ವಕವಾಗಿ ಮಾಡುತ್ತಿದ್ದರು ಎಂದು ನಾನು ಕೇಳಿದ್ದೇನೆ. ಬೆಳಗಾಂ ಕನ್ನಡ ಸಾಹಿತ್ಯ ಸಮ್ಮೇಳನ ಕಾಲದಲ್ಲಿ ಬೆಟಗೇರಿಯವರೂ ಜೋಶಿಯವರೂ ಹಿಂದೆ ನಿಂತು ದುಡಿದುದನ್ನು ಕಂಡಿದ್ದೇನೆ. ನನಗೆ ಅವರ ವ್ಯಕ್ತಿ ಪರಿಚಯವಾದುದು ಸುಮಾರು ಮೂವತ್ತು ವರ್ಷಗಳಿಗೆ ಹಿಂದೆ. ಹೆಚ್ಚು ಸಂಪರ್ಕ ಬೆಳೆಯದಿರಲು ನಾನು ದೇಶಿ ಸಂಸ್ಥಾನದಲ್ಲಿ ಬೆಳೆದುದೂ ಇನ್ನೊಬ್ಬರು ದೂರದ ಮುಂಬೈ ಪ್ರಾಂತದಲ್ಲಿದ್ದುದೂ ಒಂದು ಕಾರಣ. ವ್ಯಕ್ತಿಶಃ ಅವರ ಇತರ ಯಾವ ಗುಣಶೀಲಕರ್ಮಗಳ ಪರಿಚಿತಿಗೆ ಅವಕಾಶವಿಲ್ಲವಾದರೂ – ಎಂದರೆ ಹೆಚ್ಚು ಆಪ್ತಸನ್ನಿವೇಶಗಳಲ್ಲಿ ಹತ್ತಿರದಲ್ಲಿ ಕೆಲವು ಕಾಲವಿದ್ದು ನೋಡಲು ಅವಕಾಶ ದೊರೆಯದೆ ಹೋದರೂ – ಸ್ವಲ್ಪ ಕಾಲ ನಾನು ಅವರಿರುವಲ್ಲಿಗೆ ಹೋಗಿ, ನಮ್ಮೂರಿಗೆ ಅವರು ಬಂದು, ಬೇರೆಲ್ಲೂ ಇಬ್ಬರೂ ಸಂಧಿಸಿ ಕಾಣುವಂತಾಗಿದೆ. ಎರಡು ಮೂರು ಸಲ ಅವರು ನನ್ನಲ್ಲಿಗೂ ದಯಮಾಡಿಸಿದರು. ಆ ಸಂದರ್ಭಗಳು ಸಾಹಿತ್ಯ ಸಂಶೋಧನೆಗಳಿಗೆ, ಆ ಬಗೆಯ ಭಾಷಣಗಳಿಗೆ ಸಂಬಂಧಿಸಿದವು. ಇನ್ನಾವ ಬಗೆಯ ಮಾತುಕತೆಯೂ ಅವರಿಗೆ ಶಕ್ಯವಿಲ್ಲವೇನೊ ಎಂಬ ಮಟ್ಟಿಗೆ ಅದರಲ್ಲಿ ಅವರು ಎಂದೂ ಮುಳುಗಿರುತ್ತಾರೆ. ಆಳ್ವಾರ್ ಎಂಬ ಮಾತು ವಿಷ್ಣುಭಕ್ತಿಯಲ್ಲಿ ಮುಳುಗಿರುವವನು ಎಂದು ಅರ್ಥ ಕೊಡುತ್ತದಂತೆ. ಹಾಗೆ ಜೋಶಿಯವರ ಮನಸ್ಸು ಭಾಷೆ, ಸಾಹಿತ್ಯ, ಮತ, ಧರ್ಮ, ಸಮಾಜಜೀವನ, ಇತಿಹಾಸ, ಪುರಾತತ್ವಸಂಶೋಧನೆ ಮುಂತಾದ ವಿಷಯಗಳಲ್ಲಿ ಮಗ್ನವಾದದ್ದು. ಮಾತುಗಳು ಮತ್ತು ಅರ್ಥವಿಮರ್ಶೆ, ಅವುಗಳ ನಿಷ್ಪತ್ತಿ, ಆ ನಿಷ್ಪತ್ತಿಯಲ್ಲಿ ಅಡಕವಾಗಿರುವ ಅಂಗ ಅಥವಾ ಅಂಶಗಳ ಅರ್ಥ ಭಾವಸೂಚನೆ; ಆ ಮೂಲಕವಾಗಿ ಅವರು ಬೆಳಸುವ ತತ್ತ್ವದ ಸಂಬಂಧ, ಕಲ್ಪನೆ ಬಹು ತೆರನದು. ಬಹುಶಃ ನಮ್ಮಲ್ಲಿ ಅವರಂತೆ ೪೦–೫೦ ವರ್ಷಕಾಲ ಈ ಬಗೆಗೆ ಕೆಲಸ ಮಾಡಿದವರಿಲ್ಲ. ಮಹಾರಾಷ್ಟ್ರದಲ್ಲಿ ಇಂಥವರಿದ್ದಾರಂತೆ. ಒಂದು ಕಡೆ ಸಮಾಜಶಾಸ್ತ್ರಕ್ಕೆ, ಇನ್ನೊಂದು ಕಡೆ ವೇದ, ನಿರುಕ್ತ, ಪುರಾಣಗಳಿಗೆ, ಜನವರ್ಗಗಳ ಪ್ರಾಚೀನ ಸಂಪ್ರದಾಯ ಸಂಪರ್ಕಗಳಿಗೆ ಸಂಬಂಧಪಟ್ಟವು ಅವರಲ್ಲಿ ವಿವೇಚನೆಗೆ ಬರುತ್ತವೆ. ಎಲ್ಲಿಂದೆಲ್ಲಿಗೊ ಮಾತುಗಳನ್ನು ತೆಗೆದುಕೊಂಡು ಹೋಗುತ್ತಾರೆ, ಅರ್ಥಕಲ್ಪನೆ ಬೆಳಸುತ್ತಾರೆ, ಸಂಬಂಧಸಂಪರ್ಕಗಳನ್ನು ಗಂಟು ಹಾಕುತ್ತಾರೆ, ಚಾರಿತ್ರಿಕವಾದ ಅಥವಾ ತತ್ತ್ವದ ಅಂಶಗಳನ್ನು ನಿರ್ಣಯಿಸಲು ಬಳಸುತ್ತಾರೆ ಎಂದು ಕೆಲವೇಳೆ ಅನ್ನಿಸಬಹುದು. ಅರಿಯದವರಿಗೂ ಮಂದಾಧಿಕಾರಿಗಳಿಗೂ ಆ ಕಾರ್ಯ ಭ್ರಮೆ, ಸೋಜಿಗ ಎರಡನ್ನೂ ತರಬಲ್ಲದು. ಆದರೆ ಎಲ್ಲವೂ ಕಲಸಿಕೊಂಡಿರುವ ಅನಿರ್ಣೇತವಾಗಿರುವ ಪ್ರಪಂಚದಲ್ಲಿ ಅವರ ವಿವೇಚನೆ, ಕಲ್ಪನೆ ಎಷ್ಟು ಜಾಣವಾದ್ದು, ಸಾರವಾದ್ದು, ಸಂಗತಿಗಳನ್ನು ಹೇಗೆ ಹೊಂದಿಸುತ್ತದೆ ಎಂಬುದನ್ನು ಪರಿಶೀಲಿಸಿದರೆ ಅದ್ಭುತವಾಗಿ ಕಾಣಿಸುತ್ತವೆ.

ಮಹಾರಾಷ್ಟ್ರದ ಇತಿಹಾಸವನ್ನು ಸಂಸ್ಕೃತಿಯನ್ನು ಅವರು ಚೆನ್ನಾಗಿ ಅಭ್ಯಾಸಮಾಡಿದ್ದಾರೆ. ಮರಾಠಿಯಲ್ಲಿ ಬರೆದು ಬಂದ ಎಲ್ಲ ಚರಿತ್ರೆ ಮತ್ತು ತಮ್ಮ ಅಭ್ಯಾಸಕ್ಕೆ ಒಳಪಟ್ಟ ಎಲ್ಲ

ಗ್ರಂಥಗಳನ್ನು ಓದಿದ್ದಾರೆ. ಎಂದಾಗ, ಕನ್ನಡ ಅಭ್ಯಾಸಕ್ಕೆ ಸಮವಾದ ಮರಾಠಿಯ ಅಭ್ಯಾಸ ಅವರಿಗೆ ಬಂದಿದೆ. ಉತ್ತರ ಕನ್ನಡದ ಪೂರ್ವದ ವಿದ್ಯಾಭ್ಯಾಸ ಕ್ರಮದಲ್ಲಿ ಕಾಲೇಜ್ ತರಗತಿಗಳಲ್ಲಿ ಹೈಸ್ಕೂಲುಗಳಲ್ಲಿ ಸಂಸ್ಕೃತದ ವ್ಯಾಸಂಗಕ್ಕೆ ಗೊತ್ತಾದ ಸ್ಥಾನವಿತ್ತು. ಸಂಸ್ಕೃತ ತಿಳಿಯದೆ ಯಾರೂ ಕಾಲೇಜಿನ ಪರೀಕ್ಷೆಗಳಲ್ಲಿ ಉತ್ತೀರ್ಣರಾಗುವ ಹಾಗಿರಲಿಲ್ಲ. ಆಸಕ್ತಿ ಇದ್ದವರು ಇನ್ನಷ್ಟು ವಿಶೇಷವಾಗಿ ಅದರ ವ್ಯಾಸಂಗ ನಡಸಬಹುದಿತ್ತು. ಜೋಶಿಯವರು ಬಿ.ಎ., ಎಂ.ಎ. ಮಾಡಿದ್ದಾರೊ ಇಲ್ಲವೊ ನಾನರಿಯೆ. ಬಹುಶಃ ಅವರ ಪರಿಶೋಧನೆಗಳನ್ನು ನೋಡಿದರೆ ಅವರಿಗೆ ಆಳವಾದ ಸಂಸ್ಕೃತ ಭಾಷೆಯ ಪರಿಚಯ ಇರುವ ಹಾಗೆ ಕಾಣುತ್ತದೆ. ಸಾಹಿತ್ಯ ಒಂದೇ ಅಲ್ಲ, ವೇದ, ಸ್ಮೃತಿ, ವ್ಯಾಕರಣ, ನಿರುಕ್ತಗಳ ವ್ಯಾಸಂಗವೂ ಅಲ್ಲಿ ಪ್ರತಿಫಲಿಸಿದಂತೆ ಒದಗಿರುವ ಇಂಗ್ಲಿಷ್ ಗ್ರಂಥಾಧಾರವೂ ಅತಿಶಯವಾದ್ದು; ಸಾಧಾರಣದ ಓದಿಗೆ ನಿಲುಕದ್ದು. ಕನ್ನಡ, ಮರಾಠಿ, ಸಂಸ್ಕೃತ ಈ ಮೂರೂ ಅವರ ಪರಿಶೀಲನೆಗೆ ಒಳಪಡುವ ಭಾಷೆಗಳೇ. ಪ್ರಾಚೀನ ಕಾಲದಿಂದಲೂ ಈ ಭಾಷಾ ಬಾಂಧವ್ಯ ನಡೆದು ಉಳಿದುಕೊಂಡು ಬಂದಿದೆ. ಆದರೆ ಇವನ್ನು ಹೀಗೆ ದುಡಿಸಿಕೊಳ್ಳುವುದು ಇತರರಿಂದ ಈ ಮಟ್ಟಿಗೆ ಈವರೆಗೂ ಆಗಿಲ್ಲ. ಯಾವುದನ್ನು 'Cultural Anthropology' ಎಂದು ಹೇಳುತ್ತಾರೊ ಆ ಶಾಸ್ತ್ರಕ್ಕೆ ಸಂಬಂಧಿಸಿದ ಪ್ರಪಂಚ ಅವರದು. ಇದು ನಮ್ಮಲ್ಲಿ ದೊಡ್ಡದು ಎಂಬುದನ್ನು ಇವರ ವ್ಯಾಸಂಗ ಕಾಣಿಸುತ್ತದೆ. ಭಾಷೆ ಶಬ್ದಾರ್ಥಗಳ ಪ್ರಪಂಚದಲ್ಲಿ ಮಾಡುವ ಕೆಲಸ ವಿಶೇಷವಾದ್ದು.

ಜನವರ್ಗಗಳಲ್ಲಿ ಇರುವ ವ್ಯತ್ಯಾಸಗಳು ಯಾವುವು, ಏಕೆ? ಇವರ ಮೂಲವಸತಿ ಯಾವುದು? ಇತಿಹಾಸಕಾಲದಲ್ಲಿ ಇವರ ಚಲನವಲನ ಹೇಗಾಯಿತು? ಇವರ ಜ್ಞಾತಿ ವರ್ಗಗಳು ಎಲ್ಲೆಲ್ಲಿ ಮೊದಲುಗೊಂಡು ಈಗ ಎಲ್ಲಿವೆ? ಹೇಗೆ ಸ್ಥಾಯಿ ಅಥವಾ ಸ್ಥಿರವಾಗಿವೆ? ಅಥವಾ ಮಾರ್ಪಾಡು ಹೊಂದಿವೆ? ಈ ಮಾರ್ಪಾಡಿಗೆ ಅವರ ಬೆಳವಣಿಗೆ ಕೇವಲವಾಗಿ ಕಾರಣವೆ? ಅವರಿಗೆ ದೊರೆತ ಹೊಸ ಸಂಪರ್ಕಗಳು ಕಾರಣವೆ? ಅವರ ಆಚಾರವಿಚಾರ ಎಂಥವು? ಲಾಂಛನಗಳೂ ಸಂಕೇತಗಳೂ ಎಂಥವು? ಸಾಮಾಜಿಕ ಸಂಬಂಧಗಳಲ್ಲಿ ಅವರವೇ ಆದ ಮೂಲಾಂಶಗಳು ಯಾವ ರೀತಿ ಉಳಿದುಕೊಂಡಿವೆ? – ಎಂಬೆಲ್ಲ ಸಂಗತಿಗಳು ಇಲ್ಲಿಗೆ ಸೇರುತ್ತವೆ.* ನಮ್ಮ ದೇಶದಲ್ಲಿ ಇನ್ನೂ ಅದಕ್ಕೆ ಸಂಬಂಧಪಟ್ಟ ವ್ಯಾಸಂಗ ವ್ಯವಸ್ಥಿತವಾಗಿ ನಡೆದಿಲ್ಲ. ಕನ್ನಡ, ಮರಾಠ, ರಾಷ್ಟ್ರಕೂಟ, ಮರಹಟ್ಟ ಮುಂತಾದ ಮಾತುಗಳಿಗೆ ಸಂಬಂಧಿಸಿದಂತೆಯೇ ಇನ್ನೂ ಖಚಿತ ಯೋಚನೆ ನಡೆಯಬೇಕಾಗಿದೆ. ಮಹಾರಾಷ್ಟ್ರದ ವಿದ್ವಾಂಸರೇ ಇವರ ವಿವೇಚನೆಗಳಲ್ಲಿ ಹಲವನ್ನು ಮೆಚ್ಚಿಕೊಂಡಿದ್ದಾರಾದರೂ ಇಂದು ಸುವ್ಯವಸ್ಥಿತವಾದ ಪ್ರಗತಿಶೀಲ ಸಾಹಸೀಜೀವ ಒಂದಕ್ಕೆ ಹೆಸರುಗೊಂಡ ಮಹಾರಾಷ್ಟ್ರವು ಇತಿಹಾಸದ ಈ ಸಂಗತಿಗಳಿಗೆ ಮನಸ್ಸು ಕೊಟ್ಟೀತೆಂದು ಎಣಿಸುವುದು ಕಷ್ಟ – ಅಲ್ಲಿಯವರ ಅಭಿಮಾನಕ್ಕೆ ಧಕ್ಕೆ ತರುವ ಸಂಗತಿಗಳಿರುವುದರಿಂದ.

---

* ಈ ಕಾರ್ಯ ಭಾರತದಲ್ಲೆಲ್ಲ ನಡೆದ ಹೊರತು ಭಾಷೆ, ಮತ, ಧರ್ಮ, ಆಚಾರಕಾಂಡ ಬಾಂಧವ್ಯಗಳು, ಒಟ್ಟಿನಲ್ಲಿ ಸಂಸ್ಕೃತಿಯ ರೂಪಣದ ಇತಿಹಾಸ ಸಿದ್ಧಿಸದು. ಈ ಕಾರ್ಯ ಅತಿಶಯವಾಗಿ ನಡೆಯುವಂತೆ ನಮ್ಮ ವಿಶ್ವವಿದ್ಯಾನಿಲಯಗಳು ದುಡಿಯಬೇಕು.

ಇತ್ತ ಕನ್ನಡದಲ್ಲಿ ಈ ಬಗೆಗೆ ಮೂಲನಿವಾಸಿಗಳ ಮತ್ತು ಇತರ ಕುಲಬಣಗಳವರ ಚರಿತ್ರೆಯನ್ನು ವಿಚಕ್ಷಣೆಯಿಂದ ಅಭ್ಯಾಸ ಮಾಡುವ ಪ್ರಯತ್ನ ನಡೆದಿಲ್ಲ. ಕಂ–ನಡ, ಕನ್ನಡ, ಕನ್ನಾಡು, ಕನ್ನುಡಿ, ಕರ್ನಾಟ, ಕರ್ಣಾಟ, ಕನ್ನಾಟ, ಕಣ್ಣ, ಕಳ್ಳ – ಮುಂತಾದ ಶಬ್ದಗಳ ಸ್ವರೂಪಲಕ್ಷಣವನ್ನು ಗೊತ್ತಾಗಿ ನಿರ್ಣಯಿಸುವುದು ಶಕ್ಯವಾಗಿಲ್ಲ. ಇಂಥಲ್ಲಿ ಇವರೊಬ್ಬರ ಸಂಶೋಧನೆ ಅನೇಕರಿಗೆ ಡಾನ್ ಕಿಯೊಟಿ ಅವರ ಸಾಹಸದಂತೆ ಕಂಡುಬಂದಿರುವುದುಂಟು. ಇವರ ವಾದಗಳೂ ವಿಮರ್ಶನ ರೀತಿಯೂ ಕೆಲವರಿಗೆ ತೆಳುವಾಗಿ ವಿಷಯ ಸಂಚಾರ ಮೇಲ್ಮೈಯಂತೆ ಕಂಡುಬಂದಿದೆ, – ಇವರು ಕಾಣಿಸುವ ಅಥವಾ ಊಹಿಸುವ ಶಬ್ದ ನಿಷ್ಪತ್ತಿಯನ್ನು ಒಪ್ಪದ ಹಲವರಿಗೆ. ಹೀಗಾಗಿ ಯಾವುದನ್ನು ಪರಮ ಶ್ರದ್ಧೆಯಿಂದ ಅವರು ಆಲೋಚನೆ ಮಾಡಿ ತೀರ್ಮಾನಗಳನ್ನು ಸಾಧಿಸಲು ಬಯಸುತ್ತಾರೆಯೊ ಅದನ್ನು ಕುರಿತು ಹಗುರವಾಗಿ ಕೆಲವರು ಮಾತನಾಡಿರುವುದುಂಟು. ಅವರ ವಾದವನ್ನು ಒಪ್ಪೆವೆಂದರೆ ಸಾಲದು; ಅದಕ್ಕೆ ತಕ್ಕ ತಿಳಿವಳಿಕೆ ಅಲ್ಲಿನ ವಿಮರ್ಶೆಗೂ ನಿರ್ಣಯಕ್ಕೂ ಬೇರೆಡೆ ಇಲ್ಲದಿರುವಾಗ ಅದನ್ನು ನಿರಸನ ಮಾಡುವುದು ಕಷ್ಟ. ಅದನ್ನು ಒಪ್ಪೆವೆನ್ನುವವರು ಸಂಗ್ರಹಿಸಿರುವ ವಿಷಯವ್ಯಾಪ್ತಿ ಸಾಲದು ಎಂಬಕಾರಣದಿಂದಲೊ ಆ ವಿಶ್ಲೇಷಣೆ ಸೂಕ್ತವಲ್ಲವೆಂತಲೊ ಇವರು ಒದಗಿಸಿರುವ ಪ್ರಮಾಣಗಳು ತಕ್ಕಷ್ಟು ತೂಕದ್ದಲ್ಲವೆಂತಲೊ ಎಲ್ಲ ಸಾಮಗ್ರಿ ಪ್ರಮಾಣಗಳನ್ನು ಒಂದೇ ಹದದಲ್ಲಿ ಅವರು ಬಳಸುವುದಿಲ್ಲವೆಂತಲೊ ವಾದಮಾಡಬಹುದು. ಅಷ್ಟಕ್ಕೆ ತಕ್ಕ ಪೂರ್ವಸಿದ್ಧತೆ, ವ್ಯವಧಾನ ವ್ಯಾಸಂಗಗಳ ಒಲವಿಲ್ಲದ್ದರಿಂದ ಅದಕ್ಕೆ ಕೈಹಾಕುವುದು ಕೂಡ ಯಾರಿಗೂ ಕಷ್ಟವಾಗುತ್ತದೆ. ಕನ್ನಡದ ಚರಿತ್ರೆ, ಕರ್ನಾಟಕದ ಇತಿಹಾಸ, ಮರಾಠಿಗೆ ಮೂಲವಾದ ಇತರ ಸಾಧನಸಂಪತ್ತಿಗಳ ತೂಕ ತೋಲನ ಇವನ್ನು ಅವರು ಮಾಡುವಾಗ ಹಿಂದೆ ಕಿವಿಗೆ ಬೀಳದಿದ್ದ, ಮನಸ್ಸಿಗೆ ಹೊಳೆಯದಿದ್ದ ಅರ್ಥಸಂಗತಿಗಳು ಬಡಿದು ಬರುತ್ತವೆ. ಇದು ಪೂರ್ತಿ ಸರಿಯಾಗಿಯೇ ಇದ್ದರೆ ಎಷ್ಟು ತೃಪ್ತಿಕರವಾಗುತ್ತಿತ್ತು ಎನ್ನಿಸುತ್ತದೆ. ಅವರ ಬರವಣಿಗೆ ಭ್ರಮರವೃತ್ತಿ ಎಂದು ಕೆಲವರಿಗೆ ಕಂಡುಬಂದಿದೆ. ಇದು ಶಾಸ್ತ್ರಮಾರ್ಗವಲ್ಲ, ಊಹೆ ಚಾತುರ್ಯಗಳ ದಿಬ್ಬಣ ಎನ್ನುವವರೆಗೂ ಟೀಕೆ ಹುಟ್ಟಿದೆ. ಆದರೆ ಎಷ್ಟು ಬಗೆಯ ಸಂಗತಿಗಳು ಅವರ ಪರಿಶೀಲನೆಗೆ ಬರುತ್ತವೆ, ಒಂದಕ್ಕೆ ಒಂದು ಹೊಂದಿಕೊಳ್ಳುವಂತೆ ಹೇಗೆ ಕಾಣಿಸುತ್ತವೆ ಎಂದಾಗ, ಅವರ ಬರವಣಿಗೆಗೆ ಬಗೆ ಮೋಹಗೊಳ್ಳುತ್ತವೆ. ಒಂದು ಗೋಜು, ಸಿಕ್ಕು ಕೆಲವೇಳೆ ಅವರನ್ನು ಈ ಅಪಪ್ರಥೆಗೆ ಗುರಿಮಾಡಿಸಿರುವುದು ನಿಜ. ಆದರೆ ಆ ಮನಸ್ಸು ಕಾರ್ಯ ಮಾಡುವುದು ಹಾಗೆ. ಇನ್ನಾರಾದರೊಬ್ಬರು ಪ್ರತಿ ಅಂಶದಲ್ಲಿಯೂ ಅವರು ಹೇಗೆ ಸಂಶೋಧನೆ ನಡಸಿದ್ದಾರೆ, ತೀರ್ಮಾನಕ್ಕೆ ಬಂದಿದ್ದಾರೆ ಎಂಬುದರ ಜಾಡನ್ನು ಕಾಣಿಸಿ ಅದನ್ನು ಸಂಗ್ರಹಿಸಿದರೆ ಮೇಲಾದೀತು. ಅವರು ಅದಕ್ಕೆ ನೆರವಾಗಬೇಕು. ಹಾಗೆ ಮಾಡುವವರಿಗೆ ಅವರಲ್ಲಿ ಭಕ್ತಿ, ವಿಷಯದಲ್ಲಿ ಉತ್ಸಾಹ ಬೇಕು.

ಅವರು ಪ್ರಾಮಾಣಿಕರು. ಯಾವೊಂದು ವಿಷಯದಲ್ಲಿಯಾಗಲಿ ಸತ್ಯವೆಂದು ತೋರಿದುದನ್ನು ತಮಗೆ ತಿಳಿದ ಪ್ರಮಾಣಗಳನ್ನೆಲ್ಲ ಒದಗಿಸಿಕೊಂಡು ಸ್ಥಾಪಿಸುತ್ತಾರೆ. ಸುಮಾರು ಅವರಲ್ಲಿ ಗೆಳೆಯರಾಗಿ ಹೋಗುವ ಆಲೋಚನಾಪರರನ್ನೆಲ್ಲ ಆ ಈ ಪರವಾಗಿ

ಪ್ರಶ್ನೆಗಳನ್ನು ಕೇಳುತ್ತಾರೆ. ಕೇಳಿದವರಿಗೆಲ್ಲಾ ಆ ಪ್ರಪಂಚದ ಅರಿವು ಸಂಪೂರ್ಣವಾಗಿ ಇರಬೇಕು ಎಂಬುದು ಅವರ ನಂಬಿಕೆ. ಅವರು ಉತ್ತರ ನೇರವಾಗಿ ಕೊಡದಿರುವಾಗ ಸಹಜವಾಗಿ ಅವರಿಗೆ ಅತೃಪ್ತಿ. ವಾದಕ್ಕೆ ಸಂಬಂಧಿಸಿದ ಸಂಗತಿಗಳಲ್ಲಿ ಈ ಸ್ನೇಹಿತರಿಗೆ ತಿಳಿವಳಿಕೆ ಇಲ್ಲದಿರಲು ಖಚಿತವಾಗಿ ಅಭಿಪ್ರಾಯ ಕೊಡಲಾಗದಾಗ ಅವರು ತಾನೆ ಏನು ಮಾಡಲಾದೀತು? ನನಗನ್ನಿಸಿದೆ: ಯಾವ ವಿಷಯದಲ್ಲಿಯಾಗಲಿ ಈವರೆಗೂ ನಡೆದಿರುವುದು ಇಂಥ ಅಭಿಪ್ರಾಯ; ಅವುಗಳ ಹಿಂದಿರುವ ಆಧಾರ ಪ್ರಮಾಣ ಸಾಲದು ಅಥವಾ ಸರಿಯಲ್ಲ; ತನ್ನ ಅಭಿಪ್ರಾಯ ಇದು; ಹಿಂದಿನದನ್ನು ಒಪ್ಪದಿರುವುದಕ್ಕೆ ನನ್ನ ಕಾರಣಗಳಿವು; ನನ್ನ ವಾದದ ಸ್ಥಾಪನೆಗೆ ಇಂಥವು ಕಾರಣಗಳು – ಎಂಬುದನ್ನು ನೇರ ನಿರ್ಧಾಯಕವಾಗುವಂತೆ ಅವರು ಒಂದು ಸಂಗ್ರಹಸೂಚಿಯನ್ನಾದರೂ ಕಡೆಯಲ್ಲಿಯೊ ಮೊದಲಲ್ಲಿಯೊ ಕೊಟ್ಟರೆ ಕೆಲವಂಶಗಳಲ್ಲಿಯಾದರೂ ಓದುವವನ ದಿಗ್ಭ್ರಮೆ ತಪ್ಪುತ್ತದೆ. ಕನ್ನಡದ ನೆಲೆ, ಮಹಾರಾಷ್ಟ್ರದ ಮೂಲ ಮುಂತಾದವುಗಳಲ್ಲಿ ಇದನ್ನು ಮಾಡಿದ್ದಾರೆ. ನಿಜವಾಗಿ ಕನ್ನಡದ ನೆಲೆ ಯಾವುದು? ಮಹಾರಾಷ್ಟ್ರೀಯರು ಯಾರು? ಅವರಿಗೂ ಕನ್ನಡಿಗರಿಗೂ ಯಾವ ಬಗೆಯ ಪ್ರಾಚೀನ ಸಂಬಂಧಗಳು? – ಎಂಬ ವಿಷಯಗಳಲ್ಲಿ ಮಹಾರಾಷ್ಟ್ರದ ಹಲವು ವಿದ್ವಾಂಸರಿಗೆ ಒಪ್ಪಿತವಾದ ಅಭಿಪ್ರಾಯಗಳನ್ನು ಅವರು ಕೊಟ್ಟಿದ್ದಾರೆ. ಖಾನ್‌ದೇಶ ಕನ್ನಡದ ಮೂಲಸ್ಥಾನ; ನರ್ಮದಾ ಕಾವೇರಿಯವರೆಗೂ ಕನ್ನಡಿಗರ ನೆಲಸುಭೂಮಿ; ಲಾಟದೇಶದವರೆಗೂ ಕನ್ನಡಿಗರ ಪ್ರಾಬಲ್ಯವಿತ್ತು; ಯದು ತುರ್ವಸು ಕುಲದವರು ಈ ಕಡೆಗೆ ಬಂದರು; ಇವರು ಮೂಲತಃ ಗೋವಳರು ಇತ್ಯಾದಿಯಾಗಿ ಅವರು ತಮ್ಮ ವಾದ ಬೆಳಸಿದ್ದಾರೆ. 'ಹಾಲುಮತ'ದಲ್ಲಿ ಅದರ ಮತ್ತು ಇನ್ನಷ್ಟು ವಿಸ್ತಾರವಾದ ತತ್ವಾಂಶಗಳನ್ನು ಬೆಳಸಿದ್ದಾರೆ. ಆ ಗ್ರಂಥದಲ್ಲಿ ಅವರ ವಿವೇಚನೆ ಸಮಾಜಶಾಸ್ತ್ರಕ್ಕೂ ಸಂಸ್ಕೃತಿಗೆ ಸಂಬಂಧಪಟ್ಟ ಶಾಸ್ತ್ರಪರಿಶೀಲನೆಗೂ ವಿಶೇಷವಾಗಿದೆ. ಈ ಬಗೆಗೆ ಈವರೆಗೆ ಯಾರೂ ಕನ್ನಡದಲ್ಲಿ ಹೆಚ್ಚಾಗಿ ತೊಡಗಿಲ್ಲ; ಏಕಾಂಗಿಯಾಗಿ ಅವರು ಕೆಲಸ ಮಾಡಬೇಕಾಗಿ ಬಂದಿದೆ. ಕನ್ನಡ ನಾಡಾಗಿದ್ದ ಈ ಪ್ರದೇಶದ ಜನವರ್ಗಗಳ ರಚನೆ ಹೇಗಾಗಿದೆ ಎಂಬುದನ್ನು ಈ ಮುಂಚೆ ವ್ಯಾಸಂಗ ಮಾಡಿದವರಿಲ್ಲ. ಯಾವ ಯಾವ ಕಾಲದಲ್ಲಿ ಯಾವ ಯಾವ ವೃತ್ತಿಗಳವರು, ಕುಲಗಳವರು, ಬಣಗಳವರು ಇಲ್ಲಿಗೆ ಬಂದು ಸೇರಿದರು, ಇಲ್ಲಿಂದ ಹೊರಗೆ ಹೋದರು ಎಂಬ ಸಂಗತಿಗಳನ್ನು ಕುರಿತು ಇಲ್ಲಿ Field Studies (ಸ್ಥಳಪರೀಕ್ಷೆಯ ವ್ಯಾಸಂಗ) ನಡೆಯಬೇಕಾಗಿದೆ. ಗ್ರಿಯರ್‌ಸನ್‌ರೊ ಅನಂತಕೃಷ್ಣ ಅಯ್ಯರೊ ಎಚ್. ವಿ. ನಂಜುಂಡಯ್ಯನವರೊ ಹಿಂದೆ ಮಾಡಿದಂತೆ ಸ್ಥೂಲವಾಗಿ ಪರಿಚಯ ಲೇಖನಗಳಿಗೆ ಆ ವ್ಯಾಸಂಗ ನಿಂತುಹೋಗಿದೆ. ಹೀಗಾಗಿ ಯಾವುದನ್ನು ಸಾಮಾಜಿಕ ಚರಿತ್ರೆ, ಸಮಾಜಶಾಸ್ತ್ರದ ವ್ಯಾಸಂಗ ಎನ್ನಬಹುದೊ ಅದು ನಡೆಯದೆ ನಿಂತಿದೆ. ಈ ಒಂದರಲ್ಲಿಯೇ ಏನು? ಈ ಭಾಷಾಪ್ರಾಂತದಲ್ಲಿ ಎಷ್ಟು ಬಗೆಯ ಕನ್ನಡಗಳು ಇವೆಯೊ ಅಷ್ಟರ ಕೂಲಂಕಷವಾದ ಪರಿಶೀಲನೆ ನಡೆದ ಹೊರತು ಕನ್ನಡದ Linguistics, Philology ಎರಡರಲ್ಲಿಯೂ ನಿರ್ಧಾರಕವಾದ ತೀರ್ಮಾನಗಳು ಆಗವು. ಖತ್ರೆಯವರು ತುಂಬ ಹಿಂದೆ ಸ್ಥಳಪಲ್ಲಟಗೊಂಡ ಜನವರ್ಗ ಯಾವ ಯಾವ ಭೂಮಿತಿಯಲ್ಲಿ ವಾಸಮಾಡುತ್ತಿದ್ದರು? ಅವರ ವಲಸೆಗಳು ಹೇಗೆ ಆದವು? ಎಂಥೆಂಥವರ

ಸಂಪರ್ಕ ಯಾರಿಗೆ ಹೇಗೆ ಆಯಿತು? ಇದರಿಂದ ಉಂಟಾದ ಸಾಮಾಜಿಕ ಆರ್ಥಿಕ ವ್ಯತ್ಯಾಸಗಳ ಜೊತೆಗೆ ನುಡಿಯ ವ್ಯತ್ಯಾಸ ಹೇಗೆ ಉಂಟಾಯಿತು ಎಂಬುದರ ವ್ಯಾಸಂಗ ಅಗತ್ಯವೆಂದು ಸೂಚಿಸಿದ್ದರು. ಅದು ಇನ್ನೂ ಆಗಬೇಕಾಗಿರುವ ಕೆಲಸ. ಈಗ ನಮ್ಮ ಭಾಷೆಯಲ್ಲಿ ರೂಢವಾಗಿರುವ ಮಾತುಗಳನ್ನು ಆಧರಿಸಿಕೊಂಡು ಊರುಗಳ ಹೆಸರುಗಳನ್ನು ಎತ್ತಿಕೊಂಡು ಅವುಗಳ ಹದಿಯ ಮೇಲೆ ಸಾಮಾಜಿಕ ಜನವರ್ಗಗಳ ಸಂಬಂಧದ ನಿರ್ಣಯಗಳನ್ನು ಮಾಡಹೋಗುವುದು ಕೆಲವರಿಗೆ ಒಪ್ಪಿತವಾಗಿಲ್ಲದಿರುವುದು ನಿಜ. ಆದರೆ ಆ ರೀತಿಯೂ ವಿಷಯದ ವ್ಯಾಪ್ತಿಯನ್ನು ಪರಿಶೀಲಿಸಿದರೆ ಈವರೆಗೆ ಬೀಳದಿದ್ದ ಬೆಳಕು ಈ ಪ್ರಪಂಚದ ಮೇಲೆ ಬೀಳುವುದು ಶಕ್ಯವಾಗುತ್ತದೆ. ಮಹಾರಾಷ್ಟ್ರ ಮನೆತನಕ್ಕೆ ಸಂಬಂಧಿಸಿದ ಶಂ.ಬಾ. ಕನ್ನಡದ ಅಭಿಮಾನವನ್ನು ಅತಿಯಾಗಿ ಬೆಳಸಿದ್ದಾರೆ. ಈ ಅಭಿಮಾನದಿಂದ ಸತ್ಯವೆಂಬುದರ ಕಾಣ್ಕೆ ಅಲ್ಪಸ್ವಲ್ಪ ಮಾರ್ಪಡುತ್ತದೆ ಎಂಬವರುಂಟು. ಅದು ಇಲ್ಲಿ ಕೂಡ ಅವರು ಒದಗಿಸುವ ಸಾಮಗ್ರಿ, ಅವರು ಹಾಯಿಸುವ ಬೆಳಕು ಮನಸ್ಸನ್ನು ಬಡಿದು ಯೋಚನೆಯನ್ನು ಜಾಗರಿಸುತ್ತದೆ. ಎಲ ಎಲ, ಈ ಅಂಶ ನಮಗೆ ಏಕೆ ತೋರಲಿಲ್ಲ ಎನಿಸುತ್ತದೆ.

ಇನ್ನೊಂದು ಸಂಗತಿ: ಆರ್ಯದ್ರಾವಿಡ ಪಂಗಡಗಳವರಿಗೆ ಉಂಟಾದ ಸಂಪರ್ಕಗಳ ಪರಿಣಾಮ ಮತಧರ್ಮದ ವಿಚಾರದಲ್ಲಿ ಒಂದು ಕಡೆ, ಆಚಾರ ವಿಚಾರ ಸಂಪ್ರದಾಯಗಳಲ್ಲಿ ಇನ್ನೊಂದು ಕಡೆ ವಿಸ್ತಾರಗೊಂಡಿದೆ. ಹಾಲುಮತದರ್ಶನ ಎಷ್ಟು ಗಂಭೀರವಾದ ವಿಷಯವನ್ನು ಹಿಡಿದು ವಿಸ್ತರಿಸುತ್ತದೆಯೊ ಅವರ ನಾಗಪ್ರತಿಮೆಯ ಪರಿಶೀಲನೆಯೂ ಹಾಗೇ ಆಗುತ್ತದೆ. ನಾಗ, ನಾಗರು, ನಾಗಸಂಸ್ಕೃತಿ – ಈ ಸಂಬಂಧದಲ್ಲಿ ಭರತಖಂಡಕ್ಕೆಲ್ಲ ಸಂಬಂಧಿಸಿದ ಹಾಗೆ ವ್ಯಾಸಂಗ ನಡೆದರಾದೀತು. ನಾಗ ಎಂಬ ಕಲ್ಪನೆಯ ಹಿಂದೆ ಇರುವ ಸಂಸ್ಕೃತಿ ತುಳಿದು ಅಡಗಿಹೋಗಿದೆ. ಒಂದು ಕಾಲದಲ್ಲಿ ನಾಗಪ್ರಾಬಲ್ಯ ಭರತಖಂಡದ ಸರ್ವತ್ರ ವ್ಯಾಪಿಸಿದ್ದಿರಬೇಕು. ಮೊಹೆಂಜೊದಾರೊ ಹರಪ್ಪ ಉಳಿಕೆಗಳಲ್ಲಿ ಹಾಗೆ; ಪಂಜಾಬಿನ ಕೆಲವು ಭಾಗಗಳಲ್ಲಿ ಹಾಗೆ; ಅಸ್ಸಾಮಿನಲ್ಲಿ ಹಾಗೆ; ಮಧ್ಯಭಾರತದ ವಿದರ್ಭಾದಿಗಳಲ್ಲಿ ಹಾಗೆ; ಮೈಸೂರಲ್ಲಿ, ಕೇರಳದಲ್ಲಿ ಹಾಗೆ. ಈ ನಾಗಸಂಸ್ಕೃತಿಯ ಹಬ್ಬುಗೆ ಕುರಿತು ಅದಕ್ಕೂ ಆರ್ಯಸಂಸ್ಕೃತಿಗೂ ಘರ್ಷಣೆ ಹೇಗೆ ನಡೆದು ಇದು ಪ್ರಭಾವ ಕಳೆದುಕೊಂಡಿತು ಎಂಬ ಇತಿಹಾಸ ಉದ್ಧಾರವಾಗಬೇಕು. ಆ ಬಗೆಗೆ ನಾಗಪ್ರತಿಮೆಯ ವಿವೇಚನೆ ದೊಡ್ಡ ಪ್ರಮಾಣವಾಗುತ್ತದೆ.

ಇನ್ನೊಂದು ಚಂದ್ರ – ಸೂರ್ಯನಾರಾಯಣ, ಸವಿತೃ, ವಿಷ್ಣು ಅವರ ಸಂಬಂಧದಲ್ಲಿ ಅವರು ಬೆಳಸುವ ಸಂಸ್ಕೃತಿಯ ಮತ್ತು ಮತಧರ್ಮದ ಬೆಳವಣಿಗೆಯ ವಿವೇಚನೆ. ಇದು ಇನ್ನೂ ಹೆಚ್ಚು ಸಿಕ್ಕಿನದು. ಈ ಯಾವ ವಿಷಯದಲ್ಲಿಯೂ ಚರಿತ್ರೆಯ ಹಿನ್ನೆಲೆ, ಪರಿವಿಡಿ ಸ್ಪಷ್ಟವಾಗಿಲ್ಲ. ವೇದದ ದೇವತೆಗಳಾಗಲಿ, ಉಪನಿಷತ್ತಿನ ಮತ್ತು ಪುರಾಣಗಳ ಪ್ರಸಂಗದಲ್ಲಿಯಾಗಲಿ ಖಚಿತವಾಗಿ ಇದು ಪೂರ್ವ, ಇದು ಉತ್ತರ ಎಂಬ ಚಾರಿತ್ರಿಕ ಸಂಗತಿಗಳು ನಿಷ್ಕೃಷ್ಟವಲ್ಲ. ಸಂಸ್ಕೃತ ಪದಗಳಿಗೆ ಅನೇಕ ವೇಳೆ ಯಾರು ಯಾವ ಅರ್ಥವನ್ನಾದರೂ ಕಲ್ಪಿಸಬಹುದು ಎನ್ನುವ ಹಾಗಿರುತ್ತದೆ. ಶಬ್ದರೂಪವನ್ನು ಅನುಸರಿಸಿ ಆ ಸಂಬಂಧಪಟ್ಟಂತೆ ಅರ್ಥವನ್ನೂ

ಕತೆಗಳನ್ನೂ ಕಟ್ಟಿರುವುದು ಕಾಣುತ್ತದೆ. ಯಾವುದು ಹೇಗಾಯಿತೊ, ಏಕಾಯಿತೊ? ಭಾರತದ ಯಾವ ಯಾವ ಭಾಗದಲ್ಲಿ ಯಾವ ಪ್ಯಾಟಲ್ಗಳನ್ನು ಸ್ಥಾಪಿಸುವದಕ್ಕೆ ಆಯಿತೊ? ಎಂಥೆಂಥ ಸಂಪ್ರದಾಯಗಳು ಏವರಿಗೆ ಬೆಳೆದು ಬಂದುವೊ? –ಖಚಿತವಿಲ್ಲ.* ಅಲ್ಲವೆ ಜನವರ್ಗಗಳಲ್ಲಿಯೂ ಮತಧರ್ಮದ ತಿಕ್ಕಾಟದಲ್ಲಿಯೂ ಸಮನ್ವಯ ದೃಷ್ಟಿ ಸಾಧನೆಯಲ್ಲಿಯೂ ಶತಮಾನದಿಂದ ಶತಮಾನಕ್ಕೆ ಅನೇಕ ಸಾಮರಸ್ಯದ ಕಾರ್ಯಗಳು ನಡೆದಿವೆ. ಇಂಥ ಕಾರ್ಯದಲ್ಲಿ ಇದಕ್ಕೆ ಅದಕ್ಕೆ ಅನುಕೂಲವಾದ ಅರ್ಥಮಕ್ತಿ ಮಾಡಿರುವುದುಂಟು. ಶೈವ – ವೈಷ್ಣವ, ಸುರ – ಅಸುರ,† ಆರ್ಯ – ದ್ರಾವಿಡ ಪ್ರಪಂಚಗಳಲ್ಲಿ ಅತ್ಯಾಶ್ಚರ್ಯಕರವಾದ ಕಾರ್ಯಕ್ರಮಗಳು ಈ ದೇಶದಲ್ಲಿ ನಡೆದಿವೆ. ಇಲ್ಲಿ ಸತ್ಯಪರೀಕ್ಷೆ ತುಂಬಾ ಗೋಜಿನದು. ಕಾಶಿ – ಪಾಟ್ನಾವರೆಗೆ ಬಂದಂಥ ಗಂಗಾನದಿಯನ್ನು ಹಿಂದಕ್ಕೆ ಪುನಃ ಋಷೀಕೇಶಕ್ಕೂ ಹಿಮಾಲಯಕ್ಕೂ ಹೋಗೆಂದು ಹೇಳುವುದು ಎಷ್ಟು ಸಾಧ್ಯವೊ ಅಷ್ಟು ಸಾಧ್ಯವಾದೀತು. ಈಗ ನಾರಾಯಣ ಕಲ್ಪನೆ – ಇವರ ಲಿಂಗವಿವಕ್ಷೆ – ಸೂರ್ಯಚಂದ್ರಾದಿಗಳ ಸಂಬಂಧಗಳ ಕಲ್ಪನೆ ಮೂಲಗಳಿಗೆ ಹೋಗಿ ಭಾರತದ ಜೀವನವನ್ನು ಸತ್ಯಗೊಳಿಸಿಕೊಳ್ಳಬೇಕು ಎಂಬ ಯೋಚನೆ ಜೋಶಿಯವರದು. ಅದು ಸತ್ಯವಾದರೆ ಈವರೆಗೆ ಕಲಿಯ ಪ್ರಥಮ ಪಾದದಲ್ಲಿಯಾದರೂ ನಡೆದಿರುವ ಭಾರತ ಸಂಸ್ಕೃತಿಯ ಚರಿತ್ರೆಯನ್ನು ಹಿಂದಕ್ಕೆ ಸಾಗಿಸಬೇಕು ಎಂದು ಕೇಳಿದ ಹಾಗಾಗುತ್ತದೆ.

ನಾನು ಈ ಸಂಗತಿಯನ್ನು ಅಬ್ಬರ ಮಾಡಿ ಹೇಳುತ್ತಿಲ್ಲ. ತುಂಬ ಕಷ್ಟನಿಷ್ಠುರಗಳಲ್ಲಿ ಈ ನಾಡಿನ ಜೀವನ ನಡೆದಿದೆ. ಶೈವ ವೈಷ್ಣವಗಳ ಕೋಟಲೆಗಳಲ್ಲಿ ಎಷ್ಟೋ ವಿರಸಗಳು ಹಿಂದಿನಿಂದಲೂ ಹುಟ್ಟಿಕೊಂಡಿವೆ. ಜೈನ ಸಂಪ್ರದಾಯಗಳು ಬಗೆಬಗೆಯಾಗಿ ಹಬ್ಬಿವೆ. ಬುದ್ಧಧರ್ಮ ಹುಟ್ಟಿದ ದೇಶದಲ್ಲಿ ಅದರ ಪ್ರಭಾವ ಹೆಸರಿಲ್ಲದಂತೆ ಅಡಗಿಹೋಗಿದೆಯಾದರೂ ಅನೇಕ ಭಾವನೆಗಳು ತಂತ್ರಗಳಲ್ಲಿ ಯೋಗಾದಿಗಳಲ್ಲಿ ಶೈವ ವೈಷ್ಣವ ಆಚಾರಗಳಲ್ಲಿ ಸೇರಿ

---

* ಉದಾ: ಗಾಯತ್ರಿ ಮಂತ್ರವನ್ನು ತೆಗೆದುಕೊಳ್ಳೋಣ. ಆ ಪದ ಸ್ತ್ರೀಲಿಂಗವಾಚಿ ಎನ್ನುತ್ತಾರೆ. ಅದಕ್ಕೆ ಒಂದು ದೇವೀಶಕ್ತಿಯೆಂದು ಕಲ್ಪಿಸಿ ಸವಿತೃ–ಸೂರ್ಯ (?) ತೇಜಸ್ಸನ್ನು ಆರೋಪಿಸಿ – ಮುಕ್ತಾವಿದ್ರುಮಹೇಮನೀಲಧವಳಚ್ಛಾಯೈಃ – ಇತ್ಯಾದಿ ಪದ್ಯದ ಆವಾಹನ ಮಂತ್ರವನ್ನು ನಿರೂಪಿಸುವುದುಂಟು. ಅದಕ್ಕೆ ಋಷಿ ವಿಶ್ವಾಮಿತ್ರ. ಅವನ ಪ್ರಭಾವ ಋಗ್ವೇದ ಕಾಲಕ್ಕೆ ಇದ್ದಷ್ಟು ಪ್ರಮುಖವಾಗಿ ವಸಿಷ್ಠರದಿರಲಿಲ್ಲವೇನೊ. ಗಾಯತ್ರಿ ಮಂತ್ರದ ಛಂದಸ್ಸು ಗಾಯತ್ರೀ– ೮ ಅಕ್ಷರಗಳ ಮೂರು ಪಾದಗಳದು. ತ್ರಿಪದಾ ಗಾಯತ್ರೀ; ಇದೇ ಕಾವ್ಯಸಾವಿತ್ರೀ –ಆರಾರು ಅಕ್ಷರಗಳುಳ್ಳ ನಾಲ್ಕು ಪಾದವುಳ್ಳದ್ದಾಯಿತು. ಜೊತೆಗೆ ಭರ್ಗಃ ಎಂಬುದಕ್ಕೆ ಹೇಗೆ ಅರ್ಥ ಮಾಡುತ್ತೇವೆ ಎಂಬುದರಲ್ಲಿ ವಿರಸಗಳು ಹುಟ್ಟಿ ಭರ್ಗಃ ಎಂದರೆ ಶಿವ (ಅಮರ ನೋಡಿ) ಎನ್ನುತ್ತಾರೆ. ಶಿವನೊ ವಿಷ್ಣುವೊ ಸೂರ್ಯನ ಬೇರೊಂದು ರೂಪ ಎಂದು ಕೋಟಲೆ ಹೊತ್ತಿತು. ಯಾವುದು ಬರಿ ಯುಕ್ತಿಯೊ ಕಾಲವಾಚಕವೊ ವಸ್ತು ವಾಚಕವೊ ಸ್ಪಷ್ಟವಾಗದಿದೆ.

†ಅಸುರ ಮೊದಲೊ (Ahura), ಸುರ ಮೊದಲೊ ಹೇಳುವುದು ಕಷ್ಟ. ವರುಣ ಅಸುರ ಎಂದು ಖ್ಯಾತಿ. ರಾಕ್ಷಸ ಎನ್ನುವುದೂ ಉಂಟು. ಈ Mythologyಯನ್ನು ವ್ಯಾಸಂಗ ಮಾಡಬೇಕಿದೆ. ರಾಕ್ಷಸ ಪದದ ಅರ್ಥವೂ ಹಾಗೇ.

ಮರೆಯಾಗಿವೆಯೆನ್ನುತ್ತಾರೆ. ಇದರ ಜೊತೆಗೆ ಮುಸ್ಲಿಂ, ಕ್ರೈಸ್ತಾದಿ ಪ್ರಭಾವಗಳು ಭರತ ಖಂಡದ ಮೇಲೆ ಬಂದು ಎರಗಿವೆ. ಇವೆಲ್ಲವನ್ನೂ ಸೇರಿಸಿಕೊಂಡು ನಾಳೆಗೆ ಭಾರತ ಧರ್ಮ ಎಂಬುದೊಂದು ರೂಪಿತವಾಗಬೇಕಾಗಿರುವುದು ಇಂದಿನ ವ್ಯವಹಾರ ಪ್ರಪಂಚದ ಅಗತ್ಯ. ಇದರ ಜೊತೆಗೆ ಸಂಸ್ಕೃತಿ ಚರಿತ್ರೆಯಲ್ಲಿ ಶಂ.ಬಾ. ಅವರ ಪರಿಶೀಲನೆ ತೂಗಬೇಕು, ತೋರಬೇಕು. ಸತ್ಯಾನ್ವೇಷಕರು, ಶ್ರದ್ಧಾಳುಗಳು, ಅಭಿಮಾನಶಾಲಿಗಳು, ನಿಷ್ಠೆ ಭಕ್ತಿಗಳಿಂದ ವಿಷಯವನ್ನು ಪರಿಶೀಲಿಸಬೇಕೆಂಬ ಆಸ್ಥೆ ಉಳ್ಳವರು ಆಗಿರುವುದರಿಂದ ಅವರ ಅನ್ವೇಷಣಾಗಳ ಕಡೆಗೆ ಎಲ್ಲ ಜನರ ಗಮನವೂ ಸಾಕಷ್ಟು ಹರಿಯದಿರುವುದಕ್ಕೆ ಅಸಮಾಧಾನ ಪಟ್ಟುಕೊಳ್ಳಬಾರದು. ಹದಿನೆಂಟನೆಯ ವಯಸ್ಸಿನಿಂದ ಮಾತ್ರ ಇಂಗ್ಲಿಷ್ ಕಲಿಯುವುದಕ್ಕೆ ಆರಂಭಮಾಡಿದೆ ಎನ್ನುವವರು ಎಷ್ಟು ದೊಡ್ಡ ಗ್ರಂಥಗಳನ್ನು ಅರಗಿಸಿಕೊಳ್ಳಲು ಯತ್ನಿಸಿದ್ದಾರೆ ಎಂಬುದನ್ನು ನೋಡಿದಾಗ ಆಶ್ಚರ್ಯವಾಗುತ್ತದೆ. ಇತರ ವಿದ್ವಾಂಸರ ಮನೆಗಳಲ್ಲಿ ಅವರವರು ಸಂಗ್ರಹಿಸಿರುವ ಪುಸ್ತಕ ಭಂಡಾರವನ್ನು ನಾನು ನೋಡಿದ್ದೇನೆ. ಶಂ.ಬಾ. ಬಳಸಿರುವ, ವ್ಯಾಸಂಗ ಮಾಡಿರುವ ಗ್ರಂಥಗಳು ಅವರಿಗೆ ಹೇಗೆ ದೊರೆತವೊ ಅವನ್ನೆಲ್ಲಾ ಎಲ್ಲಿ ಅಡಗಿಸಿ ಇಟ್ಟುಕೊಂಡಿದ್ದಾರೊ ಎನ್ನಿಸಿದೆ. ಆ ಗ್ರಂಥಗಳು ವಿಶ್ವವಿದ್ಯಾನಿಲಯಗಳಲ್ಲಿ ಮಾತ್ರ ದೊರೆಯುವಂಥವು. ಆದರೆ ವಿಷಯದಲ್ಲಿ ಆಸಕ್ತಿ ಉಳ್ಳವರು ಬೇರೆ ಕಡೆಗೆ ಹೋಗಿಯೊ ಬೇರೆಡೆಯಿಂದ ತರಿಸಿಕೊಂಡೊ ವ್ಯಾಸಂಗ ಮಾಡಬೇಕಾಗುತ್ತದೆ. ಅವರ ಅಭ್ಯಾಸಕ್ಕೆ ದೊರೆತಿರುವ ಪುಸ್ತಕಗಳು ಪ್ರಖ್ಯಾತ ತಜ್ಞರು ಬರೆದವು, ಅಧಿಕಾರಕವಾದವು.

ನಮ್ಮ ದೇಶದಲ್ಲಿ ವೇದದ ವ್ಯಾಸಂಗ ಈಗ ಸಾಮಾನ್ಯವಾಗಿ ಹೆಚ್ಚಾಗಿ ನಡೆಯುತ್ತಿಲ್ಲ. ಅದಕ್ಕೆ ಸಂಬಂಧಿಸಿದ ಮಾತುಗಳನ್ನು ಎಲ್ಲರೂ ಅಗ್ಗವಾಗಿ ಆಡುವವರಾದರೂ ವೇದದ್ದೇ ಪರಮಪ್ರಮಾಣ ಎಂದು ಆಡುವವರಿಗೂ – ಉದಾ: ಯಾವ ವೇದದ್ದು? ಋಗ್ವೇದವೆ? ಅದರ ಯಾವ ಮಂಡಲದ್ದು? ಯಾವ ಸೂಕ್ತದ್ದು? ಈ ಮಾತಿನ ಈ ಋಕ್ಕಿನ ಅರ್ಥ ನಿಖರವಾಗಿ ಏನು? –ಎಂಬ ಪ್ರಶ್ನೆಗೆ ಉತ್ತರ ಕೊಡಬಲ್ಲ ಸಂಖ್ಯೆ ತುಂಬಾ ಕಡಮೆ. ಈ ಸ್ಥಿತಿ ಶಿಕ್ಷಣದ ದೃಷ್ಟಿಯಿಂದ, ಸಂಸ್ಕೃತಿಯನ್ನು ಕುರಿತ ವ್ಯಾಸಂಗಗಳ ದೃಷ್ಟಿಯಿಂದ ನಿವಾರಣೆಯಾಗಬೇಕು. ಬಹುಮಟ್ಟಿಗೆ ಅದಕ್ಕೆ ಸಂಬಂಧಿಸಿದ ಗ್ರಂಥಗಳು ಭಾರತೀಯವಲ್ಲದ ಭಾಷೆಗಳಲ್ಲಿ ದೊರಕುವಂಥವು. ಆ ಭಾಷೆಗಳ ವ್ಯಾಸಂಗವೂ ಹೆಚ್ಚು ಜನರಿಗೆ ನಡೆಯಬೇಕಾಗಿದೆ. ಇಂದು ಟಿಬೆಟನ್, ಚೀನಿ, ಫ್ರೆಂಚ್, ಜರ್ಮನ್, ರಷ್ಯನ್ ಇಟ್ಯಾಲಿಯನ್ ಮುಂತಾದ ಭಾಷೆಗಳಲ್ಲಿ ಪೂರ್ವದೇಶಗಳ ಮತ್ತು ಭಾರತದ ಅಭ್ಯಾಸಗಳು ಸೂಕ್ಷ್ಮವಾಗಿ ನಡೆಯುತ್ತಿವೆ. ಎಷ್ಟೋ ನಿಯತಕಾಲಿಕೆಗಳು ಅಲ್ಲಿಂದ ಪ್ರಕಟವಾಗುತ್ತವೆ. ಅವುಗಳನ್ನೆಲ್ಲ ಇಲ್ಲಿನ ವಿದ್ಯಾರ್ಥಿಗಳ ಅವಗಾಹನೆಗೆ ತರುವಂತೆ ಪುಸ್ತಕ ಭಂಡಾರಗಳೂ ಅಚ್ಚಿನ ಶಾಲೆಗಳೂ ಏರ್ಪಡಬೇಕು. ಅವು ಬೇಕೆಂದು ಕೇಳುವುದಕ್ಕೂ ನಮಗೆ ಧೈರ್ಯ ಸಾಲದಂಥದು ನಮ್ಮ ಪರಿಸ್ಥಿತಿ. ಒಬ್ಬರೊ ಇಬ್ಬರೊ ಬಳಸಬಹುದಾದಂಥ ಪ್ರಕಾಶಿಕೆಗಳಿಗೆ ಸಾವಿರಾರು ರೂಪಾಯಿಗಳ ವೆಚ್ಚವನ್ನು ಮಾಡುವುದು ಸುಲಭವಲ್ಲದ ಕೆಲಸ. ಆದರೂ ಎಲ್ಲೆಲ್ಲಿ ಏನೇನು ಹೊಸ ಪರಿಶೋಧನೆ ನಡೆದಿದೆ? ನಮ್ಮ ದೇಶದ ಚರಿತ್ರೆ, ಸಮಾಜ ಜೀವನ, ಸಂಸ್ಕೃತಿ ಸಂಪತ್ತಿ ಇವನ್ನು ಕುರಿತು ಎಲ್ಲರೂ ಇಂದು ಹೊರಗಿನವರಿಗಿಂತ ಹೆಚ್ಚಾಗಿ

ನಮ್ಮ ಜನವೇ ಹೆಚ್ಚು ನಿಷ್ಠೆಯಿಂದ ಕೈಕೊಳ್ಳಬೇಕಾದ ಕೆಲಸ. ಎಷ್ಟೋ ಆಗಲಿ ಇದು ಗ್ರಂಥಗಳಿಂದ ಮಾತ್ರ ಲಭ್ಯವಾಗುವ ಪ್ರಯೋಜನ. ಹೊರಗಿನವರು ಸಮಗ್ರವಾದ ಆಚರಣೆಯೊಡನೆ ವಿಷಯ ಪರಿಶೀಲನೆ ಮಾಡಲು ಹೆಚ್ಚಿನ ಅವಕಾಶ ಬೇಕು; ಆಯಾ ಜನಮರ್ಗಗಳು ಇನ್ನೂ ಆ ಬದುಕನ್ನು ಬದುಕುತ್ತಾರೆಯಾಗಿ. ಯಾವ ಮಾತಿನ ಅರ್ಥವ್ಯಾಪ್ತಿ ಯಾವ ಸೂತ್ರಗಳ ಬಳಕೆ ಹೇಗೆ ಪಲ್ಲಟವಾಗಿದೆ ಅಥವಾ ಬಲವಾಗಿದೆ ಎಂಬುದರ ತಾಳೆ ಹಾಕಿ ನೋಡಲು ಅವಕಾಶವಿದೆ. ಸೂತ್ರಭಾಗ, ಗ್ರಂಥಸ್ಥ ವಿಷಯ, ದಿನಚರಿಯ ವ್ಯವಹಾರ ಮೂರೂ ಒಂದನ್ನೊಂದು ಸಮೀಪವಾಗಿ ಹೊಂದಿಸಬೇಕಲ್ಲವೆ?

ಪ್ರೌಢವಿದ್ಯಾಶಾಲೆಗಳಲ್ಲಿ ಕೂಡ ಶಾಸ್ತ್ರಗಳ ಪಾಠದಲ್ಲಿ ತೊಡಗುವಾಗ ಆಯಾ ಶಾಸ್ತ್ರಕ್ಕೆ ಸಂಬಂಧಿಸಿದಂತೆ ಯಾವ ಮಿತಿಯಲ್ಲಿ ಆಕಾಂಕ್ಷೆ-ವಿವಕ್ಷೆ ಬಳಸಿ ವ್ಯಾಸಂಗ ನಡಸುತ್ತಿದೆ? ಸೂಕ್ತ ಸಾಮಗ್ರಿ ಯಾವುದು? ಬೆಳಸುವ ರೀತಿ, ವಿಧಾನ, ಸಾಧನಗಳು, ಪರೀಕ್ಷೆಗಳು ಯಾವುವು? ಇಲ್ಲಿ ಪ್ರಮಾಣಗಳು ಎಂಥವು? ಇಲ್ಲಿ ಪೂರ್ವಪಕ್ಷ ಸಿದ್ಧಾಂತ ಹೇಗೆ ನಡೆಯಬೇಕು? ಪರೀಕ್ಷೆಗಳು ಹೇಗೆ ನಡೆದರೆ ಮಾತ್ರ ಸುಪ್ತವಾಗುತ್ತದೆ? ನಿರ್ಣಾಯಕಾಂಶಗಳಾವುವು? ನಿರ್ಣಯಗಳಿಗೆ ಬಂದಮೇಲೆ ಇವನ್ನು ಒಪ್ಪಬಹುದು ಎಂಬ ತಿಳಿವಳಿಕೆ ಕೊಡುವ ವಿಧಾನ ಮತ್ತು ವಿಚಕ್ಷಣೆ ನಡೆಯುವುದಿಲ್ಲ. ಇಂದು ಯಾವುದನ್ನು ವಿಜ್ಞಾನದ ವಿಧಾನ, ದೃಷ್ಟಿ ರೀತಿ ಎನ್ನುತ್ತೇವೊ ಅದನ್ನು ಪ್ರತಿಯೊಂದು ಶಾಸ್ತ್ರದ ವ್ಯಾಸಂಗಕ್ಕೂ ಬಳಸಬೇಕಾದ ಅಗತ್ಯ ಉಂಟು. ಸಮಾಜಶಾಸ್ತ್ರದಲ್ಲಿ ಮತಧರ್ಮ ಆಚಾರಗಳ ಎಷ್ಟೋ ಬಗೆಯ ಪಕ್ಷಪಾತ ಪ್ರಮಾಣರಹಿತವಾದ ನಂಬಿಕೆಗಳು ಪೂರ್ವಗ್ರಹಿಕೆಗಳು ರೂಢಿಯಾಗಿ ಜನರ ಮನಸ್ಸನ್ನು ಕವಿದಿರುತ್ತದೆ. ನಂಬಿಕೆ, ಆಚಾರ ಇವು ಹೊಸ ಬೆಳಕನ್ನು ಚೆಲ್ಲುವ ಪ್ರಪಂಚ. ಸಂಪ್ರದಾಯಕ್ಕೆ ಕಟ್ಟಿ ನಿಲ್ಲಿಸುವ ಸನ್ನಿವೇಶ. ನಾವು ಇಂದು ವೇದ ಋಷಿ, ಮುನಿ ವ್ಯತ್ಯಾಸಗಳಿಗೂ ಯೋಗಕ್ಕೂ ದೇವತೆಗಳ ಅಥವಾ ತತ್ಸಮ ಲಿಂಗನಿರ್ಣಯಕ್ಕೂ ಕೈಹಾಕುವಾಗ ಇನ್ನೂ ಕೆಲವು ನಂಬಿಕೆಗಳು, ಸಂಪ್ರದಾಯಗಳು ಅಡ್ಡಿಯಾಗಿ ಒಡ್ಡಿ ನಿಲ್ಲುತ್ತದೆ. ಇಂಥ ಪ್ರಸಂಗಗಳಲ್ಲಿ ವಾದವೂ ನಿರ್ಣಯವೂ ಬಹು ನಾಜೂಕಾಗಿ ಸೂಕ್ಷ್ಮವಾಗಿ ನಡೆಯಬೇಕು. ಶಂ.ಬಾ. ಅವರು ಇದನ್ನು ಅರಿತಿದ್ದಾರೆ. ಆದುದರಿಂದಲೇ 'ನನ್ನ ವ್ಯಾಸಂಗದಿಂದ ನನ್ನ ತಿಳಿವಳಿಕೆ ಹೀಗೆ ನಿರೂಪಿಸುತ್ತದೆ. ತಿಳಿದವರು ಈ ಬಗೆಗೆ ನನ್ನ ತೀರ್ಮಾನಗಳನ್ನು ಕುರಿತು ವ್ಯಾಖ್ಯಾನ, ಚರ್ಚೆ ನಡಸಬೇಕು' – ಎಂದು ಸ್ಪಷ್ಟವಾಗಿ ಬೇಡುತ್ತಾರೆ. ಅದಕ್ಕೆ ಬರುವ ಪ್ರತಿಕ್ರಿಯೆ ಯಾವುದಾದರೂ ಒಂದೊಂದು ವಿದ್ಯಾಮಂಡಲದವರು ಕಲ್ಪಿಸಿಕೊಂಡಿರುವ ಅಭಿಪ್ರಾಯದ ಮೇಲೆ ಹೊಂದಿರುವುದರಿಂದ, ಇವರು ಯಾವ ಪದದ ಯಾವ ಅರ್ಥವನ್ನು ತಮ್ಮ ಪರಿಶೋಧನೆಗಳಿಗೆ ಬಳಸುತ್ತಿದ್ದಾರೆ; ಅದರಿಂದ ಇನ್ನೊಂದರ ಮೇಲೆ ಯಾವ ಬೆಳಕನ್ನು ಹಾಯಿಸಬಲ್ಲದ್ದಾಗುತ್ತದೆ – ಎಂಬುದರ ಬಗೆಗೆ ಸಹಸಿ ತೋರಿಸುವುದಿಲ್ಲ.

ಆರ್ಯರು ಗೊತ್ತಾಗಿ ಯಾವ ಶತಮಾನದಲ್ಲಿ ಭಾರತಕ್ಕೆ ಬಂದರು? ಉತ್ತರ ಭಾರತದಲ್ಲೆಲ್ಲ ಹೇಗೆ ಹರಡಿಕೊಂಡರು? ಅವರ ಜೀವನಪದ್ಧತಿ, ಪೂಜಾವಿಧಾನಗಳು ಎಷ್ಟು ಮಟ್ಟದವು, ಬಗೆಯವು? ಇದಕ್ಕೆ ಹಿಮಾಲಯ ಪ್ರಾಂತದವರ ಭಾಗ, ಈಗ

ದಿಯಾರದಲ್ಲಿ, ಅಸ್ಸಾಂ, ನೇಫಾ ಭಾಗ, ಕಿರಾತಾದಿಗಳ ಭಾಗ ಏನೆನ್ನಾದರೂ ಮಾರ್ಪಡಿಸಿವೆಯೆ? ಸಾಂಖ್ಯಯೋಗಗಳ ಚರಿತ್ರೆ ಎಲ್ಲಿನವರೆಗೂ ಸಾಗುತ್ತದೆ? ಆಸ್ತಿಕವೆನ್ನಿಸಿಕೊಳ್ಳುವ ಅನಾರ್ಯವೃತ್ತಿ ಜೈನ, ಬೌದ್ಧ ಪಂಥಗಳಲ್ಲಿ ಹೇಗೆ ಏಕೆ ಬಂದವು? ಅವೆಲ್ಲ ನಾಡಿನ ಈಶಾನ್ಯಭಾಗದಲ್ಲಿಯೇ ಏಕೆ ಬೆಳೆದವು? – ಎಂಬವು ಇನ್ನೂ ಭಾರತದ ಚರಿತ್ರೆಯಲ್ಲೇ ನಿರ್ಣಯವಾಗಿಲ್ಲ. ಕ್ರಿ.ಪೂ. ೧೫೦೦ರಿಂದ ಹಿಂದಕ್ಕೆ ಇದನ್ನು ತಳ್ಳಲಾಗುವುದಿಲ್ಲ ಎಂಬ ಅನೇಕ ಪಾಶ್ಚಿಮಾತ್ಯ ವಿದ್ವಾಂಸರ ಅಭಿಪ್ರಾಯಕ್ಕೆ ಗಟ್ಟಿಯಾದ ಪ್ರತಿರೋಧವೇನೂ ಇದೆ. ಯಾವುದನ್ನು ಸೈಂಧವ ಸಂಸ್ಕೃತಿ – ಕರಾಚಿಯಿಂದ ಹಿಡಿದು ಕಾಶ್ಮೀರ, ಆಫ್‌ಘನಿಸ್ತಾನದ ಉತ್ತರದವರೆಗೂ ಪ್ರಬಲಿಸಿ ಹಬ್ಬಿದ್ದ ನಗರಸಂಸ್ಕೃತಿ – ಎನ್ನುತ್ತಾರೊ ಅದು ವೇದಕಾಲಕ್ಕೆ ಹಿಂದಿನದೊ, ಈಚಿನದೊ? ತ್ರಿಪುರದಹನ ಯಾವುದು? ಇಂದ್ರನಿಗೆ ಶಿವನಿಗೆ ಕಟ್ಟಿದ ಈ ಬಗ್ಗೆಯ ಕಥೆಗಳು ಯಾವುವು? ಪುರಂದರ/ಧರ ಪದಗಳ ಹಿಂದೆ ವಾಸ್ತವ ಚರಿತ್ರಾಂಶಗಳಿವೆಯೆ? ವಿರುದ್ಧವರ್ಗ ದ್ರಾವಿಡವೊ ಇನ್ನಾವುದಾದರೂ ಬೇರೆ ಬಗೆಯದೊ? –ಎಂಬ ಬಗ್ಗೆಯೂ ಯಾವ ನಿರ್ಣಯಗಳೂ ಆಗಿಲ್ಲ. ಅಲ್ಲಿನ ಮುದ್ರೆಗಳ ಮೇಲಿನ ಲಿಪಿಯನ್ನು ಓದುವುದಕ್ಕೆ ಇನ್ನೂ ಶಕ್ಯವಾಗಿಲ್ಲ. ಆರ್ಯರು ಪಶುಪಾಲನೆಯನ್ನು ವಿಶೇಷವಾಗಿ ಮಾಡುತ್ತಿದ್ದು ಕುಲಕುಲಗಳಾಗಿ ಬಂದು ವಾಯವ್ಯ ಪ್ರಾಂತ, ಯಮುನಾ – ಗಂಗಾ ಪ್ರಾಂತಗಳಲ್ಲಿ ಹರಡಿಕೊಂಡು ತಮ್ಮ ಪ್ರಭಾವ ಬೀರಿದರು. ಎತ್ತರವಾದ ಆಕೃತಿ ಉಳ್ಳವರಾಗಿ ಬೆಳ್ಳನೆಯ ವರ್ಣ ಲಕ್ಷಣವುಳ್ಳ ಅವರು ಬಲವಾದ ಮೂಗುಳ್ಳವರಾಗಿ ಶಕ್ತರಾಗಿ ಅಗ್ನಿ ಆರಾಧನೆ, ಯಜ್ಞಯಾಗಾದಿಗಳನ್ನು ಮಾಡುತ್ತ ಹರಡಿಕೊಂಡರು. ಅವರನ್ನು ತುಳಿದು ತಮ್ಮ ಪ್ರಾಜಾಪತ್ಯವನ್ನು ಸ್ಥಾಪಿಸಿಕೊಂಡ ಜನವನ್ನು ಶಿಶ್ನದೇವೋಪಾಸಕರು, 'ಅನಾಸ್ಯ'ರು –ಎಂದರೆ ಮೂಗಿಲ್ಲದವರು– ಎಂದುದುಂಟು. ಆದರೂ ಹೊರಗಿಂದ ಬಂದ ಜನಸಂಖ್ಯೆಯಲ್ಲಿ ಕಡಮೆಯಾದುದರಿಂದಲೂ ಬಹುಶಃ ಹೆಣ್ಣು ಸಂಖ್ಯೆ ಅಂಥ ಸಂದರ್ಭದಲ್ಲಿ ಎಂದಿಗೂ ಕಡಮೆಯಾಗಿರುವುದರಿಂದಲೂ ಈ ಜನರೊಡನೆ ಹಲವರು ಬೆರೆತರು. ಇಲ್ಲಿ ಅವರ ಸ್ನೇಹಮಂಡಲವನ್ನು, ಅಧೀನವರ್ಗಗಳನ್ನು ಬೆಳಸಿಕೊಳ್ಳಬೇಕೆಂದು ವಿವಾಹಸಂಬಂಧಗಳನ್ನು ವಿಚಿತ್ರ ವಿಚಿತ್ರವಾಗಿ ಬೆಳಸಿದರೆಂದು ಕಾಣುತ್ತದೆ. ತಮ್ಮ ಸಂಖ್ಯಾಬಲ ಹೆಚ್ಚಬೇಕೆಂದೂ ಅವರು ವ್ಯವಸಾಯಕ್ಕೆ ತೊಡಗಿದಾಗ, ಅದಕ್ಕೆ ತೊಡಗಲು ಗಂಡುಸಂತತಿ ಹೆಚ್ಚಾಗಬೇಕೆಂದೂ ಬಯಸಿ, ಪುತ್ರನಿಲ್ಲದವನಿಗೆ ಸದ್ಗತಿ ಇಲ್ಲ ಎಂಬವರೆಗೂ ಧರ್ಮವಿವರಗಳನ್ನು ಪ್ರಚಾರಗೊಳಿಸಿದ ಹಾಗೆ ಕಾಣುತ್ತದೆ. ಗಂಡುಮಕ್ಕಳು ಎಂಟು ಆಗಲಿ, ಹತ್ತು ಆಗಲಿ ಎಂದು ಹರಕೆಗಳನ್ನು ಹಾಕಿದರು (ಮಹಾಶೀರ್ವಾದಗಳು ಉದಾಹರಣೆ). ಪ್ರಬಲವಾದ ಗಿರಿದುರ್ಗಗಳನ್ನೂ ಪಟ್ಟಣಗಳನ್ನೂ ಕಟ್ಟಿಕೊಂಡ ಅವರ ಮೇಲೆ ಯುದ್ಧಮಾಡಬೇಕಾಗಿ ಬಂದ ಕಾಲಗಳಲ್ಲಿ ಪುರಂದರ, ತ್ರಿಪುರದಹನ ಮುಂತಾದ ಹೆಸರುಗಳೂ ಸಂದರ್ಭಗಳೂ ಹುಟ್ಟಿಕೊಂಡೇ ಈ ನಗರಸಂಸ್ಕೃತಿ ನಾಮಾವಶೇಷ ಆಗಿರಬೇಕು. ಬಂದ ಆರ್ಯರಲ್ಲಿಯೇ ಹೊಸತಾಗಿ ಬಂದ ದೇವತೆಗಳ ಆರಾಧನೆಗೂ ವರ್ಗಕ್ಕೂ ಇಲ್ಲಿನವರೊಡನೆ ಬೆರೆತಮೇಲೆ ಹುಟ್ಟಿಕೊಂಡ ಪೂಜೆ ಆರಾಧನೆ ದೇವಕತೆ ಇತ್ಯಾದಿಯೂ ಮಾರ್ಪಾಡುಗೊಂಡಿರಬೇಕು. ಕಲಾಪಗಳು ಬೆರೆತಿರಬೇಕು. ಹತ್ತು ರಾಜರ

ಯುದ್ಧ ಅವರವರಲ್ಲಿಯೇ ನಡೆಯಿತು. ವಿಷ್ಣುಪಂಥ ಶಿವಪಂಥದೊಡನೆ ಮೊದಲಿಂದಲೂ ವಿರಸದಲ್ಲಿ ಬೆಳೆದು ಅವತಾರಕತೆಗಳೂ ಮುಯ್ಯಿಗೆ ಮುಯ್ಯಿ ಎಂಬಂತೆ ಬೆಳೆದವು. ಐದು ಸಾವಿರ ವರ್ಷಗಳು ಕಳೆದ ಮೇಲೂ ಈ ಹಗೆ ಮುಗಿಯುವುದೇ ಇಲ್ಲವೇನೊ ಎಂಬಷ್ಟು ನಾಡಿನಲ್ಲೆಲ್ಲ ಹರಡಿ, ಉತ್ತರದಿಂದ ದಕ್ಷಿಣಕ್ಕೂ ಬಂದಿತು. ಆರ್ಯಮಾನ್, ಪೂಷನ್, ಮಿತ್ರ, ವರುಣ ಮುಂತಾದ ದೇವತೆಗಳ ಪ್ರಭಾವ ಕಾಲಕ್ರಮದಲ್ಲಿ ವ್ಯತ್ಯಾಸಗೊಂಡು ಮಧ್ಯ ಏಷಿಯಾ ಆರ್ಯಕಾಲದ ಇನ್ನೊಂದು ಶಾಖೆಯಾದ ಇರಾನ್ ಮಹಾದೇವತೆಯೆಂದು ಹೆಸರಾದ 'ಅಹುರಮಜ್ದ' ಜೊರಾಷ್ಟ್ರ – (> ಜರತುಷ್ಟ್ರ) – ಅಹೂರ > ಅಸುರ ಆಗಿ, ಅಸುರ ಎಂಬ ಪದಕ್ಕೆ ವಿರುದ್ಧವಾಗಿ 'ಸುರ' ಎಂಬ ಇನ್ನೊಂದು ಹೆಸರು ಮಾಡಿಕೊಂಡು, ಈ ಸುರ ಎಂದರೆ ದೇವರು, ಅಸುರ ಎಂದರೆ ರಾಕ್ಷಸರು ಎಂಬಂತೆ ವಿಪರೀತ ಪರಿಣಾಮವನ್ನು ಹೊಂದಿದವೇನೊ ಎಂದಿದ್ದಾರೆ. ಅಹುರಮಜ್ದ (ಆರ್‌ಮಜ್, ಹಾರ್ಮನ್ಜಿಗೆ ಹೋಲಿಸಿ) ವಿರುದ್ಧವಾದ ಶತ್ರುದೇವತೆ ಅಹ್ರಿಮಾನ್. ಇದೇ ಅರಿಯಮಾನ್ ಆಯಿತೊ? ಒಂದು ಸುರವರ್ಗ, ಒಂದು ಅಸುರ ವರ್ಗ ಆಗಿ ಶೈವ ವೈಷ್ಣವ ಪಂಥಗಳಲ್ಲಿ ಶೈವ ಪಂಥದವರು ಅಸುರರೆಂದೂ ವೈಷ್ಣವ ಪಂಥದವರು ಸುರರೆಂದೂ ಪ್ರಚಾರವಾಗಿ ಕೋಟಲೆ ಬೆಳೆಯುತ್ತ ಬಂದಿತೊ? ರಾಕ್ಷಸರು ಶೈವಪಂಥದವರು; ರಾವಣಾದಿಗಳು ಬ್ರಾಹ್ಮಣರು. ರಾವಣ ಕುಬೇರನ ತಮ್ಮ, ಕುಬೇರ, ನಿರಋತಿ ರಾಕ್ಷಸವರ್ಗಕ್ಕೆ ಪ್ರಿಯರು. ರಾಕ್ಷಸರಿಂದ ಪ್ರಪಂಚವನ್ನು ರಕ್ಷಿಸುವುದಕ್ಕಾಗಿ ಹರಿಯೊ ವಿಷ್ಣುವೊ ನಾರಾಯಣನೊ ಅವತಾರಗಳನ್ನು ಮಾಡುವಾಗ ಶಿವೋಪಾಸಕರಾದವರನ್ನು ದಮನಮಾಡಬೇಕಾಯಿತು. ಈ ಕುಲಗಳಲ್ಲಿ ಹುಟ್ಟಿದವರು ಸೋತವರು ಬೇರೆಡೆಗೆ ಹೋಗಿ ನೆಲಸಿದರು ಅಥವಾ ಗೆದ್ದವರಿಗೆ ಅಡಿಯಾಳಾದರು. ಗೆದ್ದವರು ತಮ್ಮ ಆಚಾರವಿಚಾರಗಳನ್ನು ಅಭಿಪ್ರಾಯಗಳನ್ನು ಪೂಜಾಕರ್ಮಗಳನ್ನು ತಾವು ಪ್ರಬಲಿಸಿದ ದೇಶಗಳಲ್ಲಿ ಪ್ರಚಾರಪಡಿಸಿದರು. ತಾವು ಹರಡಿಕೊಂಡ ಕಡೆಗಳಲ್ಲೆಲ್ಲ ಮುಂದಾಳಾಗಿ ಕಂಡವರನ್ನು ಸಂಸ್ಕೃತರಾಗಿ ಬ್ರಾಹ್ಮಣನಾಯಕರಾಗಿ ಕ್ಷತ್ರಿಯನಾಯಕರಾಗಿ ಸ್ವೀಕರಿಸಿದ ಸಂದರ್ಭಗಳೂ ಅನೇಕ. ಹೀಗಾಗಿ ಅನೇಕ ಕುಲಗಳೂ ಜಾತಿಗಳೂ ಪ್ರಭಾವ ಮಂಡಲಗಳೂ ಹುಟ್ಟಿಕೊಂಡವು.* ಇವರಿವರಲ್ಲಿಯೇ ಕದನ ಜಗಳ ನಡೆದಾಗ ಪರಸ್ಪರ ಬಂಧುವರ್ಗ ರಾಜಕೀಯವಾಗಿಯೂ ವಿವಾಹಾದಿ ಸಾಮಾಜಿಕ ಸಂಬಂಧಗಳಲ್ಲಿಯೂ ಪಕ್ಷಗಳು ವಹಿಸಿದವು. ಚಂದ್ರವಂಶ, ಸೂರ್ಯವಂಶ ಎಂಬ ಹೆಸರುಗಳಲ್ಲಿ ಕುಲಗಳು ಬೆಳೆದವು. (ಬೌದ್ಧ ಕತೆಗಳೂ ಅವೂ ಕಲಸಿಕೊಳ್ಳುತ್ತವೆಯಲ್ಲವೆ?) ಆರ್ಯಸಂಪ್ರದಾಯವನ್ನು ಒಪ್ಪಿ ನಡಸಿಕೊಂಡು ಬಂದವು ಉತ್ತಮ ಆದವು. ಒಪ್ಪದವು ಬೇರೆಯಾದವು. ಉದಾಹರಣೆಗೆ ಯಜ್ಞಯಾಗಾದಿಗಳನ್ನು ಒಪ್ಪಿದವರು ಒಂದು ಪಂಥ; ಒಲ್ಲದವರು ಇನ್ನೊಂದು ಎಂಬಂತೆ ಮಂಡಲಗಳು ಏರ್ಪಟ್ಟಾಗ, ಒಪ್ಪದವರು ಅಸುರವರ್ಗಕ್ಕೆ ಸೇರಿದರೇನೊ? ಈ ಪ್ರತಿಭಟನೆಗಳು ರಾಕ್ಷಸರ ಕತೆಗಳಲ್ಲಿಯೂ ರುಕ್ಮ

---

* ಉಪನಿಷತ್ತುಗಳಲ್ಲಿ ಕ್ಷತ್ರಿಯರಿಗೂ ಬ್ರಾಹ್ಮಣರಿಗೂ ವಾಗ್ವಾದಗಳು ನಡೆದು ಕ್ಷತ್ರಿಯರು ಗೆದ್ದ ಪ್ರಸಂಗಗಳಿವೆ. ಐತರೇಯ ಆರಣ್ಯಕ, ಬ್ರಾಹ್ಮಣ 'ಇತರ'ನೆಂದು ನಿಷ್ಕೃಷ್ಟಗೊಂಡ ಋಷಿಯಿಂದಲೇ ಹುಟ್ಟಿದುದು ಎಂಬುದನ್ನು ತಳ್ಳಿಹಾಕುವ ಹಾಗಿಲ್ಲ.

ಶಿಶುಪಾಲ ಮುಂತಾದ ಪ್ರಸಂಗಗಳಲ್ಲಿಯೂ ಸುಳಿಯುತ್ತದೆಂದು ಕಾಣಿಸುವವರುಂಟು. ಒಂದೇ ವಂಶದಲ್ಲಿ ಅಪ್ಪ ರಾಕ್ಷಸ, ಮಗ ವೈಷ್ಣವ. ಸೋದರಮಾವ – ಅವನ ಮಾವ – ರಾಕ್ಷಸ, ಅಳಿಯ ಪರಮದೈವ. ರಾಜರನ್ನು ಬಲಿಗೊಡುತ್ತೇನೆಂದು ಕಂಸನ ಮಾವ ಜರಾಸಂಧ ಪ್ರತಿಜ್ಞೆಮಾಡಿದರೂ ಅವರನ್ನು ರಕ್ಷಿಸಿದ್ದು ಕೃಷ್ಣನ ಕತೆ. ಆವರೆಗೂ ನಡೆಯುತ್ತಿದ್ದ ಇಂದ್ರಪೂಜೆ ತಪ್ಪಿ ತನ್ನ ಜನವರ್ಗವನ್ನು ಇಂದ್ರನ ದಬ್ಬಾಳಿಕೆಯಿಂದ ರಕ್ಷಿಸಿ ಉಪೇಂದ್ರನಾದವನು ಅದೇ ಕೃಷ್ಣ. ಖಾಂಡವದಹನಕ್ಕೆ ಆತ ನೆರವಾದದ್ದು, ಇಂದ್ರನನ್ನು ಸೋಲಿಸಿ ಪಾರಿಜಾತವನ್ನು ತಂದದ್ದು, ವ್ಯಂದಾ ಮುಂತಾದ ಕತೆಗಳು ಒಂದು ಕಡೆಯಾದರೆ, ದಕ್ಷನ ಕತೆ, ಪರಶುರಾಮನ ಕತೆ, ಭೃಗುಗಳ ಪ್ರಭಾವ ಇನ್ನೊಂದು ಕಡೆ ವಿಚಿತ್ರವಿಚಿತ್ರವಾಗಿ ಬ್ರಾಹ್ಮಣ, ಕ್ಷತ್ರಿಯ, ಆರ್ಯ–ಅನಾರ್ಯ ಪಕ್ಷಪಾತಗಳಾಗಿ ವಿಶ್ವಾಮಿತ್ರ ವಸಿಷ್ಠರ ಕತೆಗಳು, ವಸಿಷ್ಠ ಅರುಂಧತಿಯನ್ನು ಮದುವೆಯಾದದ್ದು, ಋಷಿಕುಲ, ದೇವಕುಲ ವಿಚಾರಿಸಬೇಡಿ ಎಂಬ ಅಭಿಪ್ರಾಯ ದೇಶದಲ್ಲಿ ಬೆಳೆದದ್ದು ವಿಚಿತ್ರ ವಿಧಿನಿಷೇಧಗಳನ್ನು ಜನವರ್ಗಗಳಲ್ಲಿ ಬೆಳಸಿತು. ಯದುಕುಲದವರನ್ನು ಸ್ವಲ್ಪ ಕಡಮೆಯಾಗಿ ಆಭೀರ ಅಥವಾ ಗೊಲ್ಲ ಕುಲದವರೆಂದು ಹೀನಾಯ ಮಾಡಿ ಕೃಷ್ಣನಿಗೆ ಪ್ರಾಬಲ್ಯ ಬಂದಮೇಲೆ, ಅದರ ಸಂತತಿಯಾಗಿ ಇನ್ನೆಷ್ಟೋ ಕುಲಗಳು ಹುಟ್ಟಿಕೊಂಡು ಯಾದವ ಕುಲವರ್ಗಗಳೆಂದು ಹೆಸರಾದವು. ಯಯಾತಿಯ ಮಕ್ಕಳು ವಿಂಧ್ಯವನ್ನು ದಾಟಿಕೊಂಡು ಬಂದರು. ಹೀಗೇ ಸಾವಿರಾರು. ಜೊತೆಗೆ ಭರತಖಂಡವೆಂದು ಹೆಸರು ತಂದುಕೊಟ್ಟ ಭರತನ ಮೂಲಪುರುಷ ಪುರು ಒಂದು ವಿಚಿತ್ರ ಕ್ರಮದಲ್ಲಿ ಪೌರವಕುಲದಲ್ಲಿ ಹುಟ್ಟಿದ. ಪೌರವರು ಮಹಾಭಾರತದ ವಿಶೇಷ ಪ್ರಸಂಗಗಳಲ್ಲಿ ನಾಡಿನ ನಾಯಕರಾದವರು. ಯಾದವರಲ್ಲಿ ವೃಷ್ಣಿ ಕುಲದವರಲ್ಲಿ ಸ್ನೇಹಸಂಬಂಧ ಮಾಡಿಕೊಂಡು ಕಾಶಿಮಗಧಗಳವರೆಗೂ ಇದ್ದ ಶತ್ರು ವರ್ಗವನ್ನು ನಾಶಮಾಡಿ ವಿದರ್ಭ, ಗೂರ್ಜರ, ಗಾಂಧಾರಗಳಲ್ಲಿ ಸ್ನೇಹಮಂಡಲಗಳನ್ನು ನಿರ್ಮಿಸಿಕೊಂಡದ್ದು ಒಂದು ಭಾಗ. ಯದುವಿಗೆ ಯೌವನವನ್ನು ಕೊಡಲೊಪ್ಪಿದ್ದು, ದೇವಯಾನಿ ಶರ್ಮಿಷ್ಠೆಯ ಮಕ್ಕಳು ತಂದೆಯಿಂದ ಶಾಪ ಪಡೆದು ರಾಜ್ಯದಿಂದ ಗಡೀ ಪಾರಾಗಿ ಹೋಗಿ ಬೇರೆ ಬೇರೆ ಕುಲಗಳಿಗೆ ಮೂಲಪುರುಷರಾಗಿ ಯದು, ತುರ್ವಸು ಮುಂತಾದ ಕುಲಗಳು ಹುಟ್ಟಿಕೊಂಡವೆಂಬುದು ಈ ದೇಶದ ಸಾಮಾಜಿಕ ಚರಿತ್ರೆಯಲ್ಲಿ ಆಳವಾಗಿ ವ್ಯಾಸಂಗ ಮಾಡಬೇಕಾದ ಸಂಗತಿಗಳು. ರಾಮಾಯಣವನ್ನು ನೋಡಿದರೂ ಹೀಗೆಯೇ. ಕೇವಲ ರಾಜಪುತ್ರಿಯನ್ನು ಮದುವೆಯಾದ ದಶರಥ ಕೈಕಯಿಯನ್ನು ಪಶ್ಚಿಮ / ಉತ್ತರ ಪಂಜಾಬ್ ಕಡೆಯಿಂದ ಮದುವೆ ಮಾಡಿ ತಂದು, ವಿಶ್ವಾಮಿತ್ರನ ಅನುಗ್ರಹದಿಂದ ಮಿಥಿಲೆಯ ರಾಜನಾದ ಜನಕನ ಮಗಳನ್ನು ಸೊಸೆಯಾಗಿ ಪಡೆದವನಲ್ಲವೆ? ಒಂದು ಕಡೆ ಪರಶುರಾಮನನ್ನು ಸೋಲಿಸಿ, ಇನ್ನೊಂದು ಕಡೆ ರಾಕ್ಷಸರಾದ ತಾಟಕಿ, ಮಾರೀಚ, ಸುಬಾಹುಗಳನ್ನು ಸೋಲಿಸಿ, ಅವರ ಬಂಧುವರ್ಗ ಪ್ರಬಲಿಸಿ ಆಳುತ್ತಿದ್ದ ಲಂಕಾಧಿಪತಿ – ಕುಬೇರನ ತಮ್ಮ – ಬ್ರಾಹ್ಮಣ ರಾಕ್ಷಸರಾಜನನ್ನು ಕೊಂದು, ಸೂರ್ಯಕುಲದ ಶ್ರೀರಾಮನ ಪ್ರಭಾವ ನೆಲೆಗೊಳ್ಳುವಂತೆ ಮಾಡಬೇಕಾಗಿ ಬಂದುದು ಇಂಥವೇ ಸಮಸ್ಯೆಗಳಾಗಿ ಉಳಿಯುತ್ತವೆ. ಅನೇಕ ರಾಕ್ಷಸರು ಶಾಪ ಪಡೆದ ದೇವತೆಗಳು. ತಾಟಕಿ,

ಕುರಿತ ಅಂಥವರು ದಕ್ಷಿಣಕ್ಕೆಲ್ಲ ಶಂಕ್ರಾಚಾರ್ಯರ ಪರಮಗುರುಗಳಾ ಅಗಸ್ತ್ಯ, ಅಗಸ್ತ್ಯಮುನಿ. ಅಯೋಧ್ಯೆಯಿಂದ ಹೆಚ್ಚು ದೂರದಲ್ಲಿ ಇಲ್ಲದ - ಎಷ್ಟು ನೂರು ಮೈಲಿ ಇದ್ದೀತು? - ವಿಶ್ವಾಮಿತ್ರಾಶ್ರಮದಲ್ಲಿ ತಾಟಕಿಯ ಕಾಟ ಇರಬೇಕಾದರೆ, ಎಷ್ಟು ಹತ್ತಿರ ದೂರ ಇವರ ಪ್ರಭಾವ ವಲಯಗಳು ಇದ್ದವೆಂಬುದನ್ನು ಕಲ್ಪಿಸಿಕೊಳ್ಳಬಹುದು. ರಾಮನು ದಂಡಕಾರಣ್ಯಕ್ಕೆ ಬರುವ ದಾರಿಯಲ್ಲಿ ಚಿತ್ರಕೂಟವನ್ನು ದಾಟಿ ಶರಭಂಗ, ಸುತೀಕ್ಷ್ಣರ ಆಶ್ರಮಗಳಿಗೆ ಬರುವ ದಾರಿಯಲ್ಲಿ ಋಷಿಗಳ ಪ್ರತಿನಿಧಿಗಳೂ ವಾನಪ್ರಸ್ಥರೂ ರಾಕ್ಷಸರ ವೇಧೆಯಿಂದ ಸೆರವು ಬೇಡಿದಾಗ, ಪಂಪಾನದೀತೀರದಲ್ಲಿ ಅನುಮಂದಾಕಿನೀ ತೀರದಲ್ಲಿ ರಾಕ್ಷಸರ ಹಾವಳಿ ಅತಿಶಯವಾಗಿದ್ದಿತೆನ್ನುತ್ತಾರೆ. ಇದು ಯಾವ ಭಾಗ? ಗೋದಾವರಿಯ ಪಕ್ಕದಲ್ಲಿದ್ದ ಪಂಚವಟಿಗೆ ಸಮೀಪದ ಪ್ರದೇಶವಾಗಿತ್ತೆಂದೂ ಸೀತೆಯನ್ನು ಅಲ್ಲಿಂದ ಎತ್ತಿಕೊಂಡು ಹೋಗಲು ರಾವಣ (ಹೇಸರಕತ್ತೆಗಳಂಥ) ಖರಗಳು ಎಳೆಯುತ್ತಿದ್ದ ರಥದ ಮೇಲೆ ಬಂದನೆಂದೂ ವರ್ಣನೆ ಇದೆ. ರಥಗಳಲ್ಲಿ ದಾಟಬಹುದಾದ ನೀರಿನ ಭಾಗ ಅಷ್ಟೇನೂ ಆಳವಾಗಿ ವಿಸ್ತಾರವಾಗಿ ಇದ್ದಿರಲಾರದೆಂದೂ ಸಿಂಹಳವೆಂಬುದೇ ವಿಂಧ್ಯದ ಯಾವುದೋ ಆಗ್ನೇಯ ಭಾಗದಲ್ಲಿ ಇದ್ದಿರಬಹುದೆಂದೂ ಕಲ್ಪನೆ ಬೆಳೆದಿದೆ. ಇಂಥ ಸಂದರ್ಭಗಳಲ್ಲಿ ಕನ್ನಡದ ಜನ ಸುಮಾರು ಖಾನ್‌ದೇಶದವರೆಗೆ ಲಾಟ ದೇಶದವರೆಗೂ ವ್ಯಾಪಿಸಿತ್ತು. ಇವರು ಯದು ತುರ್ವಸರಿಗೆ ಸಂಬಂಧ ಇದ್ದ ಗೊಲ್ಲರು, ಕನ್ನಡದ ಜನ ಹಾಲುಮತದವರು ಮುಂತಾದ ಅನುಮಾನಗಳನ್ನು ಸ್ಥಾಪಿಸುವ ಶಂ. ಬಾ. ಅವರ ಸಮಾಜವಿಜ್ಞಾನಕಲ್ಪನೆ, ಅನುಮಾನ ಪರ್ಯಾಲೋಚ್ಯವೇ ಸರಿ. ಹಾಡಿ, ಬೂಡು, ಮರಹಟ್ಟ, ವರಹಟ್ಟ, ಕರಹಾಡ(ಟ್ಟ) ಮುಂತಾದ ಮಾತುಗಳನ್ನು ಅವರು ಪರ್ಯಾಲೋಚಿಸುವ ಸಂಗತಿಯೂ ಪರ್ಯಾಲೋಚ್ಯವೆಂದು ಹೇಳಬೇಕಾಗಿದೆ.

ಆದರೆ ಈ ದೇಶದ ಸಂಪ್ರದಾಯ ವೇದಗಳಿಗೆ ಸ್ಮೃತಿಗಳೆಂಬವಕ್ಕೆ, ರಾಮಾಯಣ, ಮಹಾಭಾರತದ ಇತಿಹಾಸಗಳಿಗೆ, ಭಾಗವತ ಪುರಾಣಗಳಿಗೆ ಸಂಬಂಧಿಸಿದೆ; ಕತೆಯಾಗಿ ಬೆಳೆದು ಬಹುತರ ಎಲ್ಲೆಲ್ಲಿಯೂ ದಕ್ಷಿಣದಲ್ಲಿ ಕೇರಳದವರೆಗೂ ವೈಷ್ಣವ ಸಂಪ್ರದಾಯವಾಗಿ ಚರಿತ್ರೆಯನ್ನು ಬೆಳಸಿದೆ. ಶೈವ ಪಂಥದ ಬಹು ಪ್ರಾಚೀನ ಶಾಖೆಗಳು ಮಧುರೆ, ಚಿದಂಬರ ಮುಂತಾದ ಕಡೆ ವಿಶೇಷವಾಗಿ, ಶೈವ ಭಕ್ತಿ ಪಂಥದ ನಾಯನ್ಮಾರ್ ವರ್ಗವನ್ನು ಬೆಳಸಿವೆ. ವೈಷ್ಣವದ ಶ್ರೀರಂಗ, ಕಂಚಿ ಮುಂತಾದ ಮಹಾಸ್ಥಳಗಳು ಶ್ರೀವೈಷ್ಣವ ಭಕ್ತಿಪಂಥದ ಆಳ್ವಾರುಗಳ ಕತೆಯನ್ನು ಬೆಳಸಿವೆ. ಈ ಎರಡೂ ಸಮಸಮವಾಗಿ ಸ್ಪರ್ಧಿಸಿ ಬೆಳೆದಿದ್ದರೂ ಇಂದಿನ ತಮಿಳು ನಾಡಿನಲ್ಲಿ ಸಮಸಮವಾಗಿ ಪ್ರಭಾವಗೊಂಡು ನಿಂತಿವೆ.

ನಮ್ಮ ದೇಶದ ಶಾಲಾಕಾಲೆಜುಗಳಲ್ಲಿ ಇಂಗ್ಲಂಡ್, ಅಮೆರಿಕ, ಜರ್ಮನಿ ದೇಶಗಳಿಗೆ ಸಂಬಂಧಿಸಿದ ಸಂಗತಿಗಳನ್ನು ವ್ಯಾಸಂಗ ಮಾಡಿಸಿ, ಆ ಭಾಷೆಗಳಲ್ಲಿ ಗ್ರಂಥಗಳನ್ನು ಬರೆದು ಪದವಿಗಳನ್ನು ಡಾಕ್ಟರೇಟುಗಳನ್ನು ತೆಗೆದುಕೊಂಡು ಮುಕ್ತರಂತೆ ಈ ನಾಡಿಗೆ ಬರುತ್ತಾರೆ. ಇಲ್ಲಿಂದಲೇ ಅವರ ಪ್ರಶಸ್ತಿಗಳನ್ನು ಪಡೆಯುವವರಿಗೂ ಒಪ್ಪಿಗೆ ಅನುಗ್ರಹ ಬೇಕು. ಅಲ್ಲಿಯೇ ಹೋಗಿ ಓದುವವರಿಗೆ ಆ ಆವರಣದ ಅವಕಾಶಗಳೂ ಪುಸ್ತಕ ಭಂಡಾರಗಳೂ ಸಂಶೋಧನಾಕ್ರಮಗಳೂ ನಿಯತಕಾಲಿಕೆಗಳ ನೆರವೂ ದೊರಕುತ್ತವೆ. ಪದವಿಗಳನ್ನು ಪಡೆದು

ಹಿಂದಕ್ಕೆ ಬಂದಮೇಲೆ ಆ ವ್ಯಾಸಂಗಗಳವೇ ಮುಂದುವರಿಕೆ. ಅವರ ಭಾಷೆಗಳಲ್ಲಿ ತಮ್ಮ ಲೇಖನಗಳನ್ನು ಅಲ್ಲಿನವರಿಗೆ ತೃಪ್ತಿಯಾಗುವಂತೆ ಬರೆದರೆಯೇ ಮಾನ. ಇಲ್ಲಿ ಅವರ ಕೈಕೆಳಗೆ ವ್ಯಾಸಂಗ ಮಾಡುವವರ ಮೇಲೂ ಆಯಾ ಶಾಸ್ತ್ರಗಳನ್ನು ಬೆಳಸಿ ವ್ಯಾಸಂಗ ಮಾಡುವವರಿಗೂ ಇದು ಆಪ್ತ ಸಂಬಂಧ. ಇಲ್ಲಿನ ಸಂಸ್ಥೆ ಸಂಪ್ರದಾಯಗಳಲ್ಲಿ ನಮ್ಮ ವಿದ್ಯಾವರ್ಗದವರಿಗೇ ಈ ಬಗೆಗೆ ಆಸಕ್ತಿ ಇಲ್ಲ, ವ್ಯಾಸಂಗ ಸಂಶೋಧನೆ ನಿಷ್ಠೆ ಇಲ್ಲ. ನೇರ ಜನವರ್ಗಗಳಲ್ಲಿ ಹೋಗಿ ಬೆರೆತು, ಅವರ ಜೀವನ ರೀತಿಗಳನ್ನೂ ಪೂರ್ವಾಚಾರಗಳನ್ನೂ ಅರಿಯಲು ಕಷ್ಟಪಡಬೇಕು, ಹಣ ವೆಚ್ಚ ಮಾಡಬೇಕು, ಕಾಲ ವೆಚ್ಚ ಮಾಡಬೇಕು. ಅವರ ಭಾಷೆ ಕಲಿತು ಅವರೊಡನೆ ಕೆಲಕಾಲ ಇರಬೇಕು. ಅನೇಕ ಕಾರಣಗಳಿಂದ ಇದು ಸುಲಭಶಕ್ಯವಾಗುತ್ತಿಲ್ಲ. ವೇದ ಪುರಾಣಗಳ ವ್ಯಾಸಂಗ ಮಾಡಬೇಕಾದರೆ ಸಂಸ್ಕೃತ ಪಾಳಿ ಪ್ರಾಕೃತ ಅಭ್ಯಾಸ ಮಾಡಬೇಕು. ಅವುಗಳ ಭಾಷಾಮರ್ಯಾದೆ ಬಹುಮಟ್ಟಿಗೆ ಶತಮಾನಗಳ ಹಿಂದೆ ಮಾರ್ಪಟ್ಟಿರುತ್ತದೆ. ಅರ್ಥನಿರ್ಣಯಕ್ಕಾಗಲಿ ಖಚಿತವಾಗಿ ಹೊಸಕಾಲದವರು ಒಪ್ಪುವಂಥ ಕಲ್ಪನೆಗಳಿಗಾಗಲಿ ಪೂರ್ವಾಚಾರವನ್ನು ಅನುಸರಿಸುವ ಅಲ್ಪಸಂಖ್ಯೆಯ ಜನ ಒಪ್ಪುವುದಿಲ್ಲ. ಹೀಗಾಗಿ ಇಲ್ಲಿನ ವ್ಯಾಸಂಗ ಕುಂಠಿತವಾಗಿದೆ. ಇಂದು ಇದಕ್ಕೆಲ್ಲ ಪ್ರೀತಿ ನಿಷ್ಠೆ ಎಲ್ಲಿ ತರೋಣ ಎನ್ನಿಸುತ್ತದೆ. ಹೇಗೆ ಹೇಗೊ ದೊಡ್ಡ ದೊಡ್ಡ ಪದವೀಧರರಾಗಿ ವೇತನಗಳನ್ನು ಪಡೆದರಾಯಿತು ಎನ್ನುವವರಿಗೆ ಈ ಕೆಲಸ ಕಷ್ಟ, ಅಶಕ್ಯ. ಕರ್ನಾಟಕದಂತಹ ಒಂದು ರಾಜ್ಯದಲ್ಲಿ ನಾಲ್ವರು ಇಂಥ ವ್ಯಾಸಂಗವನ್ನು ಸ್ವಂತ ಶ್ರದ್ಧೆವಿಶ್ವಾಸಗಳಿಂದ ನಡಸಿ, ಜೀವನವನ್ನು ಅದಕ್ಕೆ ತೇಯಬೇಕೆಂದು ಸಂಕಲ್ಪಿಸುವವರು ಇದ್ದಾರೊ ಇಲ್ಲವೊ. ಡಾ. ಪಿ. ವಿ. ಕಾಣೆ ಅಂಥವರು ಸಾವಿರಾರು ರೂಪಾಯಿಗಳ ಸಂಬಳ ಮರ್ಯಾದೆ ಸ್ಥಾನಮಾನ ತರುವ ವೃತ್ತಿಯನ್ನು ಪದವಿಯನ್ನು ಬಿಟ್ಟು, ಧರ್ಮಶಾಸ್ತ್ರ ವಿಚಾರದಲ್ಲಿಯೂ ಇನ್ನಾವುದೊ ಪ್ರೀತಿಯ ಅಭ್ಯಾಸವನ್ನು ನಡಸಲೂ ಏಕಾಂತವಾಗಿ ಏಕಾಗ್ರವಾಗಿ ಮುಡಿಪು ಮಾಡಿಕೊಳ್ಳಬಲ್ಲವರಾಗಿದ್ದರು. ಮಹಾರಾಷ್ಟ್ರದ ಹಲವು ವಿದ್ವಾಂಸರು ಆ ರೀತಿ ಶ್ರಮಿಸಿದ್ದರಿಂದ ಮರಾಠಿಗೂ ನಾಡಿಗೂ ನಾಡಿನ ವಿದ್ಯಾಪರಿಷ್ಕರಣಕ್ಕೂ ದೊಡ್ಡ ಸೇವೆ ನಡೆಯಿತು. ಸುನೀತಿಕುಮಾರ ಚಟರ್ಜಿ, ಕೋಸಂಬಿ ಮುಂತಾದವರ ವ್ಯಾಸಂಗವೂ ಹಾಗೇ, ಮೂಲ ಭೂತವಾದ್ದು. ಶಂ.ಬಾ. ಅವರ ಮನಸ್ಸು ಮಹಾರಾಷ್ಟ್ರದ ಇಂಥ ವಿದ್ಯಾಮಂಡಲಿಗೆ ಮೆಚ್ಚುಗೆ ತೋರಿಸುತ್ತದೆ. ಅವರ ಒಪ್ಪಿಕೆ ದೊರೆಯುವಂತಾದರೆ ತೃಪ್ತವಾಗುತ್ತದೆ. ಇವರು ಮರಾಠಿಯಲ್ಲಿಯೂ ಮಾತನಾಡ ಬಲ್ಲವರಾದ್ದರಿಂದ, ಬರೆಯಬಲ್ಲವರಾದ್ದರಿಂದ ಆ ಸಂಪರ್ಕ ಇವರ ಮನಸ್ಸಿಗೂ ಸಂಶೋಧನೆಗೂ ಪ್ರತ್ಯಕ್ಷವಾಗಿ, ಪರೋಕ್ಷವಾಗಿ ನೆರವಾಗಿದೆ.

ಕನ್ನಡಿಗರಾದ ನಾವು ಅಲಸರು. ಸಾಹಸ, ನುಗ್ಗು, ಕ್ಷಿತಿಜಗಳನ್ನು ದಾಟುವ, ಗಡಿ ದಾಟುವ ಪ್ರಯತ್ನಗಳು ನಮ್ಮ ಜಾಯಮಾನಕ್ಕೆ ಬಂದುದೇ ಅಲ್ಲವೊ ಎನಿಸುತ್ತದೆ. ಈ ನಾಡಿನ ಜೀವನ ಆರ್ಥಿಕವಾಗಿ ರಾಜಕೀಯವಾಗಿ ಹೇಗೆ ಸಂಪನ್ನವಾಗಬೇಕಾಗಿದೆಯೊ ಹಾಗೆಯೇ ವ್ಯಾಸಂಗದಲ್ಲಿ ಸಂಶೋಧನೆಯಲ್ಲಿ ಮುಂದುವರಿಯಬೇಕಾಗಿದೆ. ಇದನ್ನು ಗುರುತಿಸಿ ಧಾರವಾಡದಲ್ಲಿ – ಎಂದರೆ ಸ್ವಂತ ತಾವಿರುವ ನೆಲೆಯಲ್ಲಿ – ಪ್ರಾಶಸ್ತ್ಯ

ಇಲ್ಲವಾಗಲೂ ಅವರು ಬರೆದ ಗ್ರಂಥವನ್ನು ಓದಿಸಿ ಮೆಚ್ಚಿ ಮೀಸಲಾದ ಅವರ ಜೀವನದ ವ್ಯಾಸಂಗ ಕಾರ್ಯಕ್ಕೆ ಪುರಸ್ಕಾರ ಎಂಬಂತೆ ಅವರಿಗೆ ಒಂದು ಡಾಕ್ಟೊರೇಟನ್ನು ಮೈಸೂರು ವಿಶ್ವವಿದ್ಯಾನಿಲಯ ಕೊಟ್ಟದ್ದು ತುಂಬಾ ಶ್ಲಾಘ್ಯ ಎನಿಸುತ್ತದೆ. ಹೊಸ ಸಂಗತಿಗಳ ಕಡೆಗೆ ದೃಷ್ಟಿ ಇಟ್ಟು, ಹೊಸ ಮಾರ್ಗಗಳನ್ನು ಹಿಡಿದು ಆಜೀವ ಕಾಲ ನಡಸುವ ಮೇಧಾವಿತೆಗೆ ಇಂಥ ಪುರಸ್ಕಾರ ದೊರಕಿಸುವುದು ದೇಶದ ವಿದ್ಯಾಮಂಡಲಿಗಳಿಗೆ ಒಂದು ಗೌರವವನ್ನು ತರುವ ಕಾರ್ಯ. ಹೆಚ್ಚು ಹೊರಗಿನ ಗೋಜುಗಳಿಗೆ ಸಿಕ್ಕಿಹಾಕಿಕೊಳ್ಳದೆ ಶಂ.ಬಾ. ಅವರು ತಮ್ಮ ಕೆಲಸವನ್ನು ಜನ ಮೆಚ್ಚಲಿ ಬಿಡಲಿ, ವಾದವನ್ನು ಸ್ವೀಕರಿಸಲಿ ತೆಗಳಲಿ, ತಮ್ಮ ಸಂಶೋಧನೆಗಳನ್ನು ನಡಸಿಕೊಂಡು ಹೋಗುತ್ತಿದ್ದಾರೆ. ಏಕಾಂಗಿಯಾಗಿ ಕೆಲಸಮಾಡುವಾಗ ತೆಗಳಿಕೆ ವಿರಸದ ನಡವಳಿಕೆಗಳು ಕವಿದಾಗ ಉದ್ವೇಗಗೊಳ್ಳುವುದು, ಮನಸ್ಸಿಗೆ ಕ್ಲೇಶವನ್ನು ತಂದುಕೊಂಡು ನೆಮ್ಮದಿಯನ್ನು ಕಳೆದುಕೊಳ್ಳುವುದು ಅಗತ್ಯವಿಲ್ಲವೆಂದು ಅರಿಯಬೇಕು. ಇದು ಹೀಗೆಯೇ – ಎಂದಿಗೂ. ಹೊಗಳುವವರೂ ತೆಗಳುವವರೂ ಬಗಳುವವರೂ ಎಂದಿಗೂ ಎಲ್ಲಿಯೂ ಇದ್ದೇ ಇರುತ್ತಾರೆ. ನಮ್ಮ ಮನಸ್ಸಿಗೆ ಸರಿತೋರಿದುದನ್ನು ನಾವು ಮಾಡಿ ಮುಗಿಸುತ್ತೇವೆ ಎಂಬ ಶೌರ್ಯ ಅವರನ್ನು ಈವರೆಗೂ ನಡಸಿಕೊಂಡು ಬಂದು ಕಾಪಾಡಿದೆ. ಇಷ್ಟು ಸಾಧನೆಯನ್ನಾದರೂ ಅವರ ಪಾಲಿಗೆ ತಂದಿದೆ. ಆ ಕೆಲಸ 'ಚಿರಂ ಅಭಿವರ್ಧತಾಂ' ಎಂದು ಹಾರೈಸುವ ಭಾಗ್ಯ ನಮ್ಮ ಪಾಲಿನದು.

ಆರ್. ನಾಗೇಂದ್ರರಾವ್

ಶ್ರೀ ನಾಗೇಂದ್ರರಾಯರಿಗೆ ಒಂದು ಸನ್ಮಾನ ಗ್ರಂಥವನ್ನು ಅರ್ಪಿಸಿ ಅವರ ೭೮ ಅಥವಾ ೭೯ರ ಹುಟ್ಟುಹಬ್ಬದ ಸಮಾರಂಭವನ್ನು ನಡಸಿ ಗ್ರಂಥವನ್ನು ಪ್ರಕಟಿಸಿದರು. ಅಲ್ಪಸ್ವಲ್ಪ ಹಣವನ್ನೂ ಕೊಟ್ಟರು ಎಂದು ಕೇಳಿದ್ದೇನೆ. ಕಳೆದ ವರ್ಷ ಗಣರಾಜ್ಯೋತ್ಸವದ ಸಂದರ್ಭದಲ್ಲಿ ಅವರಿಗೆ ಪದ್ಮಶ್ರೀ ಪ್ರಶಸ್ತಿ ಬಂದಿತು. ಪ್ರಶಸ್ತಿಯೊಡನೆ ಸರ್ಕಾರ 'ಒಂದು ಮಾನ್ಯ ಮಾಸಾಶನವನ್ನು ಏರ್ಪಡಿಸಿದ್ದಿದ್ದರೆ ಗೌರವದ ಜೊತೆಗೆ ಈ ವಯಸ್ಸಿನಲ್ಲಿ ಅವರಿಗೆ ಉಪಕಾರವೂ ಆಗುತ್ತಿತ್ತು. ಶಾಲು, ಹೂಮಾಲೆ, ಗಂಧದ ಪೇಟಿಕೆ ಇವುಗಳಿಂದ ಹೊಟ್ಟೆ ತುಂಬುವುದಿಲ್ಲ. ಆದರೆ ದೇವರ ಕಣ್ಣಂತೆ ಸರ್ಕಾರದ ಕಣ್ಣೂ ತೆರೆಯಬೇಕು.

ಚಲಚ್ಚಿತ್ರ ಪ್ರಪಂಚದಲ್ಲಿ ಗಣ್ಯರಾದ ಅವರಿಗೆ ಆ ವರ್ಗದವರೆಲ್ಲ ಸೇರಿ ಮೆಚ್ಚುಗೆ ಕೊಟ್ಟಾಗ ಒಂದು ಲಕ್ಷ ರೂಪಾಯಿಯ ಕಾಣಿಕೆ ಕೊಡುವುದು ಕಷ್ಟವಾಗುತ್ತಿರಲಿಲ್ಲ. ಆದರೆ ಇದನ್ನು ಯಾರಿಗೆ ಹೇಳಬೇಕು? ಕೊಡುವವರ ಮನಸ್ಸು, ಕೈ ಎರಡೂ ತೆರೆಯಬೇಕಲ್ಲವೆ? ಮೊದಲು ಆ ಮಾತು ಕೇಳಿದ್ದೆ. ಆದರೆ ಹಾಲಿನ ಹಳ್ಳ ಹರಿಯಲಿಲ್ಲ. ಎಂದಿಗಾದರೂ ನಮ್ಮ ನಟರಿಗೆ, ಸಂಗೀತಗಾರರಿಗೆ, ಚಿತ್ರಕಾರರಿಗೆ, ನೃತ್ಯಕುಶಲರಿಗೆ, ಶಿಲ್ಪಿಗಳಿಗೆ ಅಂಥ ಸನ್ಮಾನ ದೊರೆತೀತೆ? ಇದು ಶಕ್ಯ ಎಂಬ ಅಂಶದಲ್ಲಿ ನನ್ನ ಧೈರ್ಯ ಸಾಕಷ್ಟು ಬಲಗೊಂಡಿದೆ, – ಸಾಹಿತ್ಯಕ್ಕೆ ಜ್ಞಾನಪೀಠದ ಅಂಥ ಒಂದು ಭಾಗ್ಯ ದೊರೆತಿದೆಯಾಗಿ. ಇಂದು ಆಗದುದು ನಾಳೆ ಆಗಬಾರದೇಕೆ?

ಕಲೆಗಾರರೇ ಒಂದು ಸಂಸ್ಥೆಯನ್ನು ಮಾಡಿಕೊಂಡು ಒಂದೊಂದು ವರ್ಗದ ಮಿತ್ರರೇ ವರ್ಷಕ್ಕೆ ಮೂರುನಾಲ್ಕು ಸಲ ಒಟ್ಟಿಗೆ ಮೂರು ಮೂರು ದಿನ ರಸಿಕರಂಜನವಾಗತಕ್ಕ ಕೃತಿಗಳನ್ನು ಪ್ರದರ್ಶಿಸಿ, ಒಟ್ಟು ವ್ಯಂದದ ಪ್ರಯೋಜನಕ್ಕಾಗಿ ಟಿಕೆಟುಗಳನ್ನು ಮಾರಿ, ಪ್ರೋತ್ಸಾಹಗೊಂಡ ಆ ಹಣದಲ್ಲಿ ಖರ್ಚು ಕಳೆದು ಉಳಿದುದನ್ನು ಒಂದು ಭಾಗ ಈ ವರ್ಗದವರ ಸಹಾಯಧನವಾಗಿ ಮಾಡಿಕೊಳ್ಳಬಹುದು. ಇನ್ನೂ ಒಂದಷ್ಟನ್ನು ತಾವೇ ನಿರ್ಮಾಣ ಮಾಡಿಕೊಂಡಂತೆ, ಎಂದರೆ ಎಷ್ಟು ವರ್ಷವೊ ಆಯ್ದ ಗಣ್ಯರ ಸಲಹೆಯಂತೆ ವ್ಯಾಸಂಗಕ್ಕೊ ಪೋಷಾಕಿಗೊ ವಿನಿಯೋಗ, ಏರ್ಪಾಡು ಮಾಡಿಕೊಳ್ಳಬಹುದು. ಅದರ ಬಡ್ಡಿಯಿಂದ ಅಗತ್ಯಬಿದ್ದಂತೆ ಸಹಾಯಧನಗಳನ್ನು ಶುಭಾಶುಭ ಸಮಯಗಳಲ್ಲಿ ದೊರಕುವಂತೆ ಮಾಡಿಕೊಳ್ಳಬಹುದು. ಇನ್ನೊಂದು ಭಾಗವನ್ನು ಆ ವ್ಯಂದದಲ್ಲಿ ಭಾಗವಹಿಸಿದವರಿಗೆ ಸಮ್ಮತವಾದ ಒಂದು ಪ್ರಮಾಣದಲ್ಲಿ ಹಂಚಬಹುದು. ಯಾವುದಾದರೂ ರೀತಿಯಲ್ಲಿ ಈ ವರ್ಗಕ್ಕೆಲ್ಲ ಒದಗುವಂತೆ ಒಂದು ಸಂಘವಿಮೆ ಮಾಡಿಕೊಂಡು ಇಂಗ್ಲಂಡ್, ಅಮೆರಿಕಗಳಲ್ಲಿ ಎನ್.ಎಚ್.ಎಸ್. ಎಂಬಂತೆ ಸೋಷಿಯಲ್ ಇನ್‌ಷೂರೆನ್ಸ್ ವಿಮಾ ಭಾಗದ ಕ್ರಿಯೆಗಳನ್ನು ಗೊತ್ತುಮಾಡಿಕೊಳ್ಳಬಹುದು. ಮುಖ್ಯವಾಗಿ ಇವರೆಲ್ಲ ಒಟ್ಟುಗೂಡಬೇಕು. ಯಾರಾದರೂ ಕೂಡಿಯಾರು, ಕಲೆಗಾರರು ಒಟ್ಟುಗೂಡಿಯಾರೆಂಬ ಧೈರ್ಯ ಅಷ್ಟು ಬಲವತ್ತರವಾದುದಲ್ಲ.

ಅಂಥದೇನೂ ನಡೆಯದೆ ಕೆಲಸ ನಿಂತಾಗ, ಕಾಯಿಲೆಕಸಾಲೆ ಆಡಿಬಿದಾಗ, ವಯಸ್ಸಾಗಿ ಸೆರವು ಬೇಕಾದಾಗ, ಕಷ್ಟಕ್ಕೆ ಈಡಾದ ಕಲೆಗಾರರಿಗೆ ದಿನಚರಿಯ ಅಗತ್ಯಗಳು ನಡೆವುದೇ ದುಸ್ತರವಾಗುತ್ತದೆ. ಕಲೆಗಾರರೂ ಮಹಾಜನಗಳೂ ಸರ್ಕಾರವೂ ಒಟ್ಟಿಗೆ ಸೇರಿ ಯಾವುದಾದರೊಂದು ಬಗೆಯ ಏರ್ಪಾಡನ್ನು ಕೈಗೊಳ್ಳುವುದು ಉದಾರಶೀಲತೆಯಾದೀತು. ಪೆನ್‌ಷನ್, ಗ್ರಾಚ್ಯುಯಿಟಿ ಎಂಬಂತಹ ಏರ್ಪಾಡು ಇಂದು ಸರ್ಕಾರಗಳಿಗೆ, ಸಮಾಜಕ್ಕೆ ಎಟುಕದವಲ್ಲ.* ಒಂದು ಸಲದ ರಾಜ್ಯದ ಲಾಟರಿ ಹಣ ಅದಕ್ಕೆ ಮೀಸಲಾದರಾಯಿತು. ಹಣ ಸಂದ ರೀತಿಗೆ ಐದು ಪೈಸೆ ಹೆಚ್ಚು ಮೀಸಲಾದರಾಯಿತು. ಇಪ್ಪತ್ತು ರೂಪಾಯಿಗಳಿಗೂ ಈವರೆಗೆ ಹತ್ತು ಪೈಸೆ; ಇಪ್ಪತ್ತೈದು ಲಕ್ಷಕ್ಕೂ ಅಷ್ಟೇ. ಬಂಗ್ಲಾ ದೇಶದ ವಿರಸ ಸಮಯದಲ್ಲಿ ಪೋಸ್ಟ್ ಸ್ಟಾಂಪಿಗೆ ಐದು ಪೈಸೆ ಸೇರಿಸಿದಂತೆ ಇಲ್ಲಿ ಸಂದ ಹಣದ ಮೊತ್ತಕ್ಕೆ ತಕ್ಕಂತೆ, ಶೇಕಡ ಅಂತೆ, ಇಷ್ಟಿಷ್ಟು ಮೊತ್ತಕ್ಕಿಷ್ಟು ಎಂದು ಮಾಡಿದರಾಯಿತು. ಒಂದು ರೂಪಾಯಿಗೆ ಬಿಲ್ಲರೆ ಕೊಡಿ ಎಂದರೆ ಹಿಂದೆ ಮೂರು ಕಾಸು ಕೇಳುತ್ತಿದ್ದರು. ಪೇಟೆಯೊಳಗೆ ಪೋಸ್ಟ್ ಸ್ಟಾಂಪ್ ಕೊಳ್ಳಬೇಕಾದರೆ ಒಂದು ಪೈಸೆ ಹೆಚ್ಚು ಕೇಳುತ್ತಾರೆ. ಬ್ಯಾಂಕ್ ಚೆಕ್ಕಿಗೆ ಊರಿಂದೂರಿಗೆ ಕಳಿಸಬೇಕಾದರೆ ಐವತ್ತು ಪೈಸೆ, ಒಂದು ರೂಪಾಯಿ ಹಾಕುತ್ತಾರೆ – ಆದರೆ ಈ ಲೇಖನ ಅದನ್ನು ಕುರಿತುದಲ್ಲ.

ಪ್ರಕಟವಾದ ಪುಸ್ತಕದಲ್ಲಿ ರಾಯರ ಚಲಚ್ಚಿತ್ರ ಜೀವನವನ್ನು ಕುರಿತು ಮಾತ್ರ ಹೆಚ್ಚು ಲೇಖನಗಳಿವೆ. ಒಬ್ಬಿಬ್ಬರನ್ನು ಬಿಟ್ಟು ಬರೆದ ಉಳಿದವರೆಲ್ಲ ಈ ೨೫–೩೦ ವರ್ಷಗಳ ನೆನಪು, ಅನುಭವ ಉಳ್ಳವರು. ಪ್ರೀತಿ, ವಿಶ್ವಾಸ, ಗೌರವ, ತುಂಬ ಇದೆ. ನನ್ನಂಥ ಜರಠನು ಹಿಂದಿನ ಕಾಲವನ್ನು ಕುರಿತು ಒಂದೆರಡು ಮಾತುಗಳನ್ನು ಹೇಳಬಯಸುತ್ತೇನೆ. ಮೂಕೀ ವಾಕೀ ಎಂದೊ – ಮೂವಿ ಟಾಕಿ ಎಂದೊ ಚಿತ್ರಪ್ರಪಂಚದ ಎರಡು ಮುಖಗಳನ್ನು ಈಚಿನವರೆಲ್ಲ ಬಲ್ಲರು. ಸುಮಾರು ೧೯೨೭–೨೮ರಲ್ಲಿ ಯೂರೋಪಿನ ಉತ್ತಮ ನಟರು ಕೇವಲ ಚಲಚ್ಚಿತ್ರಗಳಲ್ಲಿ ಕೀರ್ತಿಪಡೆದಿದ್ದವರಲ್ಲಿ ಕೆಲವರು ಮಾತ್ರ ವಾಕ್ಚಿತ್ರಗಳಿಗೂ ಬಂದು ಹೆಸರು ಮಾಡಿದರು. ಈ ಯಾವುದು ಬಂದಾಗಲೂ ನಾಟಕಕ್ಕೆ ಮಾರಕವೇ ಎಂಬ ಒಂದು ಕಾಲವಿತ್ತು. ಇಂದು ಮೂವಿ ಹಿಂದೆ ಬಿದ್ದಿದೆ, ಟೆಲಿವಿಷನ್ ಬಂದದ್ದರಿಂದ. ವಾಕ್ಚಿತ್ರಕ್ಕೂ ಇನ್ನೇನು ಗತಿ ಕಾದಿದೆಯೊ – ಈಗಲೇ ಏನು ಹೇಳಬಹುದು? ಮನೆ ಒಳಗೆ ಕುಳಿತು ಏಕಾಂತದಲ್ಲಿ ಚಿತ್ರ, ನಾಟಕ–ಸರಸಾಲಾಪ, ಗಾನ, ದೃಶ್ಯಸಂಪತ್ತಿ, ಘಟನೆಗಳು – ಇವನ್ನು ಸಾಕ್ಷ್ಯಚಿತ್ರಗಳಂತೆ ನೋಡುವ, ಕೇಳುವ ಅವಕಾಶವಿರುವಾಗ ಚಿತ್ರಶಾಲೆಗಳಿಗೆ, ನಾಟ್ಯಶಾಲೆಗಳಿಗೆ ಹೋಗಿ ಸಾವಿರ ಜನದೊಡನೆ ಬೆರೆತು ಸಾಮೂಹಿಕವಾಗಿ, ಕಲಾಪ್ರಕಾರಗಳನ್ನು ಬೇರೆ ಬೇರೆ ನೋಡಬೇಕಾದ ಅಗತ್ಯ ತಪ್ಪುತ್ತಿದೆ. ಇದು ಒಂದು ಜಾಡ್ಯವೂ ಮಾದಕವೂ ಆಗುವಷ್ಟು ಪ್ರಬಲಿಸಬಲ್ಲದು. ಈ ಪ್ರಪಂಚ ಇನ್ನೂ ಭಾರತಕ್ಕೆ ಅಧಿಕವಾಗಿ ಪ್ರವೇಶ ಮಾಡಿಲ್ಲ.

ಆದರೆ ಚಲನಚಿತ್ರಗಳ ಪ್ರಾಬಲ್ಯದಿಂದ ಹಿಂದಿನ ಕಾಲ ನಾಟಕಗಳ ಕಾಲ. ಈಗಲೂ

---

* ಮಿರ್ಜಾ ಸಾಹೇಬರ ಕಾಲದಲ್ಲಿ ಆರು ಕೋಟಿ ದೊರೆಯದ ಸರ್ಕಾರದ ಆದಾಯ ಇಂದು ಐದುನೂರು ಕೋಟಿ + ಆಗಿದೆ ಎಂದು ಓದಿದ್ದೇನೆ.

ನಾಟಕದ ಪುನರುತ್ಥಾನ ಆಗಿ, ಒಂದು ಹೊಸ ಉತ್ಸಾಹ ನಟರ ನಿರ್ಮಾಣಕ್ಕೆ ನಿರ್ದೇಶನಕ್ಕೆ ತೆರೆದು, ಪ್ರದರ್ಶನಕ್ಕೆ ನಾನಾ ಬಗೆಯ ಹೊಸ ಸವಲತ್ತುಗಳು ದೊರಕುತ್ತಿದ್ದರೂ ಇಂದು ಒಂದು ಹೊಸ ಬಗೆಯ ನಾಟಕ ಕಲೆ ಪ್ರಚಾರದಲ್ಲಿದೆ. ಇಂದಿನದರ ಗುಣ, ರೀತಿ, ಆಕಾಂಕ್ಷೆ ಬೇರೆ. ಬಹುಮಟ್ಟಿಗೆ ಆ ಕಾಲದ ನಾಟಕ ಪ್ರಪಂಚದಲ್ಲಿ ಇದ್ದಷ್ಟು ಪುರಾಣ ಇತಿಹಾಸ ಪ್ರಾಚುರ್ಯ ಈ ಕಾಲದಲ್ಲಿಲ್ಲ. ವೇಷ, ಭೂಷ, ಭಾಷೆ ಎಲ್ಲ ಆಗಿಹೋದ ಕಾಲವನ್ನು ಕುರಿತುದು. ಎಷ್ಟೋ ತೆರನಾದ ಪ್ರದರ್ಶನದ ಬೆಡಗುಗಳಿದ್ದರೂ ಸಂಗೀತಕ್ಕೆ ಆಗ ಅಧಿಕ ಸ್ಥಾನವಿತ್ತು. ಹಾಡುಗಾರಿಕೆ ಇಲ್ಲದ ನಾಯಕ ನಾಯಿಕೆಯರ ಭೂಮಿಕೆಗಳು ಇರುತ್ತಿರಲಿಲ್ಲ. ಒಬ್ಬ ಸಿಪಾಯಿಯೂ ಹಾಡಬೇಕು; ಸೇವಕನೂ ಹಾಡಬೇಕು. ಇಲ್ಲವಾದರೆ ಅವರು ಸೊರಗುತ್ತಿದ್ದರು. ವೃತ್ತಿಶೀಲರಾದವರಿಂದ ನಡೆಯಲಿ, ಖಾಸಗಿ ವಿಲಾಸಿಗಳ ವರ್ಗದವರಾಗಲಿ, ಸ್ಥೂಲವಾಗಿ ಲಕ್ಷಣ ಅದು. ಹಾಗೆಯೇ ಹೆಣ್ಣು ಮಕ್ಕಳೇ ಸ್ತ್ರೀಪಾತ್ರವನ್ನು ನಿರ್ವಹಿಸಬೇಕಿತ್ತು. ಭರತನ ನಾಟ್ಯಶಾಸ್ತ್ರದಲ್ಲಿ 'ಶ್ಲಕ್ಷ್ಣ ನೈಪಥ್ಯಂ' ಎಂಬುದು ನೆಗವೇರಬೇಕಾದರೆ ಹೆಣ್ಣುಪಾತ್ರವನ್ನು ನಿರ್ವಹಿಸಲು ಹೆಣ್ಣುಮಕ್ಕಳೇ ಇರಬೇಕೆಂದು ಒಂದು ಗಂಧರ್ವ, ಅಪ್ಸರ ವರ್ಗವನ್ನು ನಿರ್ಮಾಣ ಮಾಡಲಾಯಿತು ಎಂದಿದ್ದರೂ ನಮ್ಮ ಕಾಲದಲ್ಲಿ ಇನ್ನೂ ಹೆಚ್ಚು ಮಂದಿ ಹೆಂಗಸರು ಸ್ತ್ರೀಪಾತ್ರಗಳಿಗೆ ತೊಡಗುತ್ತಿರಲಿಲ್ಲ. ಅಪರೂಪವಾಗಿ ಬಂದ ಕಡೆ ಸಾಮಾನ್ಯವಾಗಿ ಸಂಸಾರಿಗರು ಬರುತ್ತಿರಲಿಲ್ಲ. ಅಲ್ಲಿ ಲಾರೆನ್ಸ್ ಒಲಿವಿಯರ್, ವಿವಿಯನ್ ಲೈ, ಲೂಯಿ ಕ್ಯಾಸನ್ – ಸಿಬಿಲ್ ಥಾರನ್‌ಡೈಕ್, ಆಲ್‌ಫ್ರೆಡ್ ಲುಂಟ್ – ಲಿನ್ ಫಾಂಟೇನ್ ದಂಪತಿಗಳು ಅಪರೂಪವಾದ ಮುಖ್ಯ ಪಾತ್ರಗಳನ್ನು ವಹಿಸುತ್ತಿದ್ದುದುಂಟು. ಇಂಗ್ಲಂಡ್–ಅಮೆರಿಕಗಳಲ್ಲಿ, ಫ್ರಾನ್ಸಿನಲ್ಲಿ ಮೋಲಿಯೆ ಮತ್ತು ಅವನ ಹೆಂಡತಿ ಜೊತೆಪಾತ್ರಗಳು ಇರುತ್ತಿದ್ದವೆಂದು ತಿಳಿದು ಬಂದಿದೆ. ಆದರೆ, ಷೇಕ್ಸ್‌ಪಿಯರ್ ನಾಟಕಗಳನ್ನು ಆಡಿದಾಗ ಕೂಡ ಸ್ತ್ರೀಪಾತ್ರಗಳನ್ನು ನಿರ್ವಹಿಸಿದವರು ಗಂಡಸರೇ. ರಾತ್ರಿಯ ಬೆಡಗುಗಳನ್ನೂ ಕ್ರಿಯಾವೈಭವಗಳನ್ನೂ ಅತಿಶಯವಾಗಿ ಮೆರೆಯಬೇಕಾಗಿದ್ದ ಆ ನಾಟಕಗಳನ್ನು ಅಪರಾಹ್ನದಲ್ಲಿ ಆಡುತ್ತಿದ್ದರಂತೆ. ಗ್ರೀಸಿನ ಕಥೆಯೂ ಹಾಗೇ ಏನೊ? ಮೂರು ನಾಲ್ಕು ನಾಟಕಗಳ ಚಕ್ರವನ್ನು ಒಂದೇ ದಿನ ಹಗಲುರಾತ್ರಿ ಆಡಿ ಪ್ರದರ್ಶಿಸಬೇಕಾದ ಅಗತ್ಯ ಇರುತ್ತಿತ್ತಂತೆ. ಸಾಮಾನ್ಯವಾಗಿ ನಮ್ಮಲ್ಲಿ ಸುಮಾರು ರಾತ್ರಿ ಒಂಬತ್ತು – ಒಂಬತ್ತೂವರೆ ಗಂಟೆಗೆ ಆರಂಭಿಸಿ, ಅದಕ್ಕೆ ಹಿಡಿಯುವಷ್ಟು ಕಾಲ ನಾಟಕದ ಪ್ರದರ್ಶನ ಆಗುತ್ತಿತ್ತು; – ಒಂದೂವರೆ ಅಥವಾ ಎರಡೂವರೆ ಗಂಟೆ ಹೊತ್ತಿಗೆ ನಾಟಕವನ್ನು ಮುಗಿಸಬೇಕು ಎಂದು ಸರ್ಕಾರದ ವಿಧಿ ಆಗುವವರೆಗೂ. ಹಾಗೆ ಆದಮೇಲೆ ಒಂದು ಕಾಲದ ಮಿತಿ ಬಿದ್ದಿತು. ಕೆಲವು ನಾಟಕಗಳು ಕಡಮೆ ಕಾಲ ಹಿಡಿಯುವುವೂ ಇದ್ದವು. ಆಗ ಯಾವುದೊ ಒಂದು ನಕಲಿ ನಾಟಕ – ಎಂದರೆ ಫಾರ್ಸ್ – ಆಡಿ, ವರದಾಚಾರ್ಯರ ಕಂಪನಿಯಲ್ಲಿ ಕೂಡ ಏರ್ಪಡಿಸುತ್ತಿದ್ದರು. ಯಾರು ಇವುಗಳಲ್ಲಿ ಭಾಗವಹಿಸಲಿ, ಹಳೆಯ ಮೈಸೂರಲ್ಲಿ ಮುಖ್ಯವಾಗಿ ಆರ್. ಟಿ. ಕಂಪನಿ, ಮಹಾರಾಜಾ ಕಂಪನಿ ಮುಂತಾದ ಮುಖ್ಯ ಕಂಪನಿಗಳವರು ಬಹುಕಾಲ ಯಾವ ಹೆಣ್ಣು ನಟರ ಬಳಕೆಯನ್ನೂ ಮಾಡುತ್ತಿರಲಿಲ್ಲ. ಗಂಭೀರ ನಾಟಕಗಳಾಗಲಿ, ಫಾರ್ಸಾಗಲಿ ಅಂಥ ಸನ್ನಿವೇಶಗಳಲ್ಲಿ ನಾವು ಹುಡುಗರಾದಾಗಿನಿಂದಲೂ ನಾಟಕದ ಅನುಭವವನ್ನು

ಪದೆದಮ್ಮ, ತಮಿಳು ಕಂಪನಿಗಳು, ಪಾರ್ಸಿ ಕಂಪನಿಗಳು, ಮಹಾರಾಷ್ಟ್ರ ಸಾಗ್ರ ಸಂಗೀತ ಕಂಪನಿಗಳು, ಅದನ್ನನುಸರಿಸಿ ಹುಟ್ಟಿಬಂದ ಹಲವು ಕಂಪನಿಗಳು ಬಂದವು. ಅವುಗಳಲ್ಲಿ ಹೆಂಗಸರು ಪಾತ್ರವಹಿಸುತ್ತಿದ್ದರು. ಮರಾಠಿ ಕಂಪನಿಗಳನ್ನು ಅನುಸರಿಸಿದ ಶಿರಹಟ್ಟಿ ಮುಂತಾದ ಕಂಪನಿಗಳವರು ಉತ್ತರ ಕರ್ನಾಟಕದಲ್ಲಿ ಆ ಮಾರ್ಗವನ್ನು ಅನುಸರಿಸಿದ್ದರು. ಈ ವಿಚಾರಕ್ಕೆ ಸಂಬಂಧಪಟ್ಟುವಲ್ಲ ನಾನು ನಾಗೇಂದ್ರರಾಯರನ್ನು ಕುರಿತು ಬರೆಯುವ ಮಾತುಗಳು.

ನಾನು ಅವರನ್ನು ರಂಗದ ಮೇಲೆ ನೋಡಿದ ೧೯೧೩-೨೫ರವರೆಗಿನ ಕೆಲವು ನೆನಪುಗಳನ್ನು ಇಲ್ಲಿ ಕಾಣಿಸುತ್ತೇನೆ. ಅವರು ಹೇಗೆ ಹುಟ್ಟಿ, ಹೇಗೆ ಬೆಳೆದು, ಎಲ್ಲಿ ಸಂಗೀತವನ್ನು ಅಭ್ಯಾಸ ಮಾಡಿ ಬಂದರು ಎಂಬುದನ್ನು ನಾನು ಬಲ್ಲವನಲ್ಲ. ವರದಾಚಾರ್ ಕಂಪನಿಯಲ್ಲಿ ಶಾಮರಾವ್ ಎಂಬವರು ನಟರಾಗಿದ್ದರು. ಇವರಿಗೆ ಹಾಡಿಕೆಯ ಶಿಕ್ಷಣ ಅವರಲ್ಲಿ ಸ್ವಲ್ಪ ಮಟ್ಟಿಗೆ ದೊರೆಯಿತೆಂದು ಕೇಳಿದ್ದೇನೆ. ಅವರೂ ಅದೇ ಕಂಪನಿಯಲ್ಲಿ ನಟರಾಗಿದ್ದ ಜಯರಾಯರು ಇಬ್ಬರೂ ಇವರ ನೆರವಿಗಿದ್ದರು ಎಂಬುದನ್ನು ಕೇಳಿದ್ದೆ, ಅಷ್ಟೇ.

ನಾಟಕದಲ್ಲಿ ಹಾಡುಗಾರಿಕೆ ಎಷ್ಟು ಮಟ್ಟಿಗಿರಬೇಕು, ಅದು ಎಂಥದಾಗಿರಬೇಕು ಎಂಬುದನ್ನು ಕುರಿತು ಕೂಡ ನಾನು ಏನನ್ನೂ ಹೇಳುವುದಿಲ್ಲ. ಹಾಡಿದುದು ಪಾತ್ರಕ್ಕೆ, ಸನ್ನಿವೇಶಕ್ಕೆ ಹೊಂದಿಕೊಂಡು ಇಂಪಾದ ಧ್ವನಿಯಲ್ಲಿ ಪ್ರಕರಣವನ್ನು ಸಾಧಿಸುವ ಹಾಗಿದ್ದರೆ ಸಾಕಾಗುತ್ತದೆ. ಸ್ತ್ರೀಪಾತ್ರಗಳೆಲ್ಲಕ್ಕೂ ಕಂಠಮಾಧುರ್ಯ ಪರಮಾಗತ್ಯ ಎಂಬುದು ಯಾರೂ ಒಪ್ಪಬಹುದಾದ ಮಾತು. ಸೌಮ್ಯ ಪಾತ್ರಗಳಲ್ಲಿ, ಶೃಂಗಾರಾದಿ ಸಾಧನೆಗಳಲ್ಲಿ ನಾಯಕರ ಹಾಡುಗಾರಿಕೆಯೂ ಪ್ರಶಸ್ತವಾಗಿರಬೇಕು.* ರಾಯರು ಮೊದಲು ಮೊದಲು ವಹಿಸುತ್ತಿದ್ದ ಪಾತ್ರಗಳೆಲ್ಲ ಸ್ತ್ರೀಪಾತ್ರಗಳು. ನಾನು ಅವರನ್ನು ಮೊದಲ ಬಾರಿಗೆ ಕಂಡದ್ದು 'ಪ್ರತಾಪಸಿಂಹ' ನಾಟಕದಲ್ಲಿ; ಪ್ರತಾಪಸಿಂಹನಾಗಿ ವರದಾಚಾರ್ಯರೂ ಪಾತ್ರವಹಿಸಿದ್ದರು. ಬಹುಕಾಲ ಅವರು ಪ್ರಖ್ಯಾತರಾಗಿದ್ದುದು 'ನಾಗೇಂದ್ರ-ಮರಿ' ಎಂದು. ಅನಂತಪದ್ಮನಾಭರಾವ್ ಎಂದು ಅಚ್ಚಾದಾಗಲೂ 'ಮರಿ' ಎಂಬುದನ್ನು ಪಕ್ಕದಲ್ಲಿ ಕಾಣಿಸುತ್ತಿದ್ದರು. ಜನಕ್ಕೆ ಪ್ರೀತಿ ಎಲ್ಲಿ ಬೆಳೆಯುತ್ತದೆಯೊ ಅಲ್ಲಿ ಶ್ರೀ ರಾಯರು ಎಂಬ ಗೌರವದ ಮಾತುಗಳನ್ನು ಬಳಸುವುದಿಲ್ಲ. ಬಸವೇಶ್ವರಾದಿಗಳಿಗೆ, ಗಾಂಧಿ ತಿಲಕರಿಗೆ, ರಾಮಕೃಷ್ಣಾದಿಗಳಿಗೆ ವಿಶ್ವಾಸದ ಏಕವಚನ ಸಂಬೋಧನೆ ಸಲ್ಲುತ್ತಿರುವಾಗ - ಕೆಲವು ಸಂದರ್ಭಗಳಲ್ಲಿ ಇದಕ್ಕೆ ಅಪವಾದಗಳಾಗಿ ಶೇಷಣ್ಣನವರು ಸುಬ್ಬಣ್ಣನವರು ಎಂಬುದಿತ್ತು - ಬಹುಜನಪ್ರಿಯರಾದ ನಟರಿಗೆ ಬೋಧ, ಜಯ, ವರದಾಚಾರಿ, ನಾಗೇಂದ್ರ, ಮರಿ, ಶೇಷಗಿರಿ, - ಅದರಲ್ಲೂ ದೊಡ್ಡ ಶೇಷಗಿರಿ, ಚಿಕ್ಕ ಶೇಷಗಿರಿ- ಲಕ್ಷ್ಮೀಪತಿ ಶಾಸ್ತ್ರಿ, ಪುಟ್ಟಾರಿ, ಸುಬ್ಬಣ್ಣ, ಚಿಕ್ಕರಾಮು ಎಂಬ ಮಾತುಗಳು ಬಳಕೆಯಲ್ಲಿದ್ದುವೇ ಹೊರತು, ಹೆಚ್ಚು ಮರ್ಯಾದೆಯ ನಿರ್ದೇಶನವಿರುತ್ತಿರಲಿಲ್ಲ. ಸಲುಗೆ ಜನಪ್ರೀತಿಯ ಚಿಹ್ನೆ. ಚೆಲುವೆಯಾದ ಹುಡುಗಿಯಂತೆ, ರಾಜಕುಮಾರಿಯಂತೆ ಮಾತ್ರ ಪ್ರತಾಪಸಿಂಹದಲ್ಲಿ ಅವರಿಗೆ ಪಾತ್ರ. ಅರಸುಕುಮಾರಿಯೂ ಚೆಲುವೆಯಾಗಿರದಿದ್ದರೆ ಗತಿ ಏನು? ಇದು ಕಣ್ಣಿಗೆ ಹೆಚ್ಚಾಗಿ ಸೊಗಸಿದ ಚಿತ್ರ. ಮೈಸೂರು ಅರಮನೆಯ ಎರಡನೆ

* ಗಂಡು ಗಂಡಾಗಿ ಹೆಣ್ಣು ಹೆಣ್ಣಾಗಿ ಇದ್ದರೆ, ಹಾಡಿದರೆ ಆಯಿತು.

ಮಹಡಿಯಿಂದ ಸುಮಾರು ೧೯೧೪-೧೫ರಲ್ಲಿ ನನಗೆ ಕಾಣಿಸಿದ ಒಂದು ಚಿತ್ರ ಅಮೃತಪುಲಿನದ ಗ್ವಾಲಿಯರ್ ರಾಜಕುಮಾರಿಯದೊಂದು ನನಗೆ ಆ ಭ್ರಾಂತಿಯ ಸಮಾನತೆ ತಂದಿತು. ನನಗಿಂತ ಮೂರು-ನಾಲ್ಕು ವರ್ಷ ಮಾತ್ರ ಹೆಚ್ಚು ವಯಸ್ಸಿನವರು ರಾಯರು. ನನಗೆ ಹದಿಮೂರು, ಅವರಿಗೆ ಹದಿನಾರೊ-ಹದಿನೆಂಟೊ ಇರಬೇಕು ಆಗ. ಎರಡನೆ ನಾಟಕ ಗುಲೇಬಕಾವಲಿ. ಇದು ಹಿಂದುಸ್ತಾನಿ ಹೆಸರು. ಅದರಲ್ಲಿ ಬಕಾವಲಿ ಎಂದೇ ಹೆಸರ ಬಳಕೆ. ಗುಲ್ ಎಂದರೆ ಹೂ. ಗುಲಾಬಿ ಎಂದರೆ ಪನ್ನೀರು ಎಂದು ಅರ್ಥವೊ ಏನೊ. ನಾವು ಅದನ್ನು ಹೂವಿಗೆ ಹೆಸರಾಗಿ ಬಳಸುತ್ತಿದ್ದೇವೆ. ಗುಲೇಬಕಾವಲಿಯಲ್ಲಿ ಅವರು ಮಂದಾರವಲ್ಲಿಯ ಪಾತ್ರವನ್ನು ವಹಿಸುತ್ತಿದ್ದರು. ಇದನ್ನು 'ಮಂದಾರವಲ್ಲಿ ಪರಿಣಯ' ಎಂದೊ ಏನೊ ಕರೆಯುತ್ತಿದ್ದರು. ಮಂದಾರಪುಷ್ಪವನ್ನು ಹುಡುಕಿಕೊಂಡೇ ನಾಯಕ ರಾಜಕಿರೀಟಿ ಹೊರಟದ್ದು, ತಂದದ್ದು; ಯಾವುದೊ ಗಂಧರ್ವಲೋಕದಿಂದ. ಹಿಂದೆ ಅದನ್ನು ಶೇಷಗಿರಿರಾಯರೂ ಶಾಮರಾಯರೂ ಮಾಡುತ್ತಿದ್ದರೆಂದು ಕೇಳಿದ್ದೇನೆ. ಅವೆಲ್ಲ ನಮಗೆ ಕಥೆಗಳು. ಅಷ್ಟು ಹೊತ್ತಿಗಾಗಲೆ ಶ್ರೀ ಎಚ್. ಕೆ. ಶೇಷಗಿರಿರಾಯರು ನಾಟಕದಲ್ಲಿ ಪಾತ್ರವಹಿಸುವುದನ್ನು ಬಿಟ್ಟು ಹಾರ್ಮೋನಿಯಂ ವಾದಕರಾಗಿದ್ದರು. ಅದರಲ್ಲಿ ವರದಾಚಾರ್ಯರು ರಾಜಕಿರೀಟಿ. ಬೋಧರಾಯರೊ ಜಯರಾಯರೊ ಸಾಮಾನ್ಯವಾಗಿ ವರದಾಚಾರ್ಯರ ಪಟ್ಟಮಹಿಷಿ. ರಾಜನಿಗೆ ಇಬ್ಬರು ಹೆಂಡತಿಯರಾದಾಗ ಹಿರಿಯ ರಾಣಿ ಜಯರಾಯರು; ಚಿಕ್ಕರಾಣಿ ಬೋಧ; ಮಗ ಮರಿ. ನಮ್ಮ ಪ್ರಾಚೀನ ಕಾಲದ ವೀರರೂ ನಾಯಕರೂ ಅನೇಕ ಕಡೆ ಸುತ್ತಾಡಬೇಕಾಗಿ ಬಂದರೆ ಎಲ್ಲೆಲ್ಲಿಯೂ ಚೆಲುವೆಯರು ಅವರಿಗೆ ಮೋಹಗೊಳ್ಳುತ್ತಿದ್ದರು. ಕೃಷ್ಣ, ಅರ್ಜುನ, ರುಸ್ತುಂ ಹಾಗೇ. ಎಲ್ಲ ಪ್ರಾಚೀನ ಇತಿಹಾಸ ಕಥೆಗಳಲ್ಲಿಯೂ ಹಾಗೇ. ರಾಜಕಿರೀಟಿ ಮಂದಾರಪುಷ್ಪವನ್ನು ತಂದು ರಾಜನಿಗೂ ರಾಣಿಗೂ ಕೊಡುವುದಾದರೆ ಮಾತ್ರ ಅವನಿಗೆ ಪ್ರೀತಿಪುರಸ್ಕಾರ ಎನ್ನುವ ಸಂದರ್ಭ. ಇದು ಮಾನವನಿಗೆ ಸಿಗುವುದಿಲ್ಲ, ಸಾವು ಖಂಡಿತ; ಹಿಂದಕ್ಕೆ ಇವನು ಬರುವುದಿಲ್ಲ; ಹಿಂದಕ್ಕೆ ಬಾರದಂತೆ ಅಟ್ಟಿಬಿಡಬೇಕೆಂಬುದೇ ಅವನನ್ನು ರಾಜಧಾನಿಯಿಂದ ಅಟ್ಟಿದ್ದಕ್ಕೆ ಕಾರಣ. ನಾಟಕದ ಕಡೆಕಡೆಯ ಭಾಗದಲ್ಲಿ ಮಂದಾರವಲ್ಲಿ ಬಗೆಬಗೆಯ ತನ್ನ ಸಖಿಯರೊಡನೆ ಹಾಡುಗಳನ್ನು ಹಾಡಿ, ನೃತ್ಯಮಾಡಿಯಾದ ಮೇಲೆ ನಿದ್ರೆಹೋದ ಸಂದರ್ಭದಲ್ಲಿ ರಾಜಕಿರೀಟಿ ಅವಳನ್ನು ಕಂಡು ಮೋಹಗೊಳ್ಳುತ್ತಾನೆ. ನಾಟಕದ ಪ್ರಸಂಗ ಅದು.

ಮಂದಾರವಲ್ಲಿ ಪಾತ್ರವಹಿಸಿದ್ದ ರಾಯರು – ಅವಳು ಅಪರೂಪದ ಅಪ್ಸರೆಯಂಥ ಹೆಣ್ಣು ತಾನೆ? ಮೈಸೂರು-ಬೆಂಗಳೂರು ಹೆಣ್ಣುವೇಷ ಅಲ್ಲಿ ಹೇಗೆ ಹೊಂದೀತು? – ಪಾರ್ಸಿ, ಗುಜರಾತಿ, ರಜಪೂತಿ ಯಾವುದಾದರೂ ಆಗಬಹುದಿದ್ದ, ಆದರೆ ರಮ್ಯವಾದ ವೇಷ ಭೂಷಣಗಳನ್ನು ತೊಟ್ಟು ನರ್ತನ ಮಾಡಿದ, ತಲೆಗೆ ಒಂದು ನವರತ್ನಗಳದೆನ್ನುವಂಥ ಶಿರೋಲಂಕಾರವನ್ನು ಮಾಡಿಕೊಂಡು, ತೆನೆಯ ಹಾಗೆ ಕಟ್ಟಿದ್ದ ಶಿರಪೇಷ್ ಹಾಕಿಕೊಂಡು ನರ್ತನ ಮಾಡಿದ – ಸುಂದರಿ. ಯಾರೊ ಒಬ್ಬರು ನನಗೆ ಬರೆದುಕೊಟ್ಟಂತೆ 'ಕಾಹೆ ಸೌ ತನಕೆ ಸಂಗಬಿನ್ನಮೊರಹಿ ಅಜವುನ ಆವೊರೆ' ಎಂದೊ ಏನೊ ಮಲ್ಹಾರ್ ಅಥವಾ ಸುರಟಿಮಲ್ಹಾರ್ ಎಂಬ ರಾಗದಲ್ಲಿ ಹಾಡುತ್ತಿದ್ದರೆಂದು ಆಗ ಕೇಳಿದ್ದೆ. ಇದೂ ಹೌದೊ

ಅಲ್ಲವೊ. ಆ ಮಾತುಗಳೂ ಸರಿಯೊ ಅಲ್ಲವೊ. ಅರಿಯದ ಹುಡುಗರಿಗೆ ಯಾರು ಹೇಳಿದರೂ ತಥ್ಯವೇ. ಯಾರಾದರೂ ಅದನ್ನು ಸರಿಯಾಗಿ ಬರೆದು ಕೊಟ್ಟರೆ ನಾನು ಈಗಲೂ ನೆನಪಿನಲ್ಲಿಟ್ಟುಕೊಳ್ಳುತ್ತೇನೆ. ಆ ನೃತ್ಯ ಅತೀವ ಸುಂದರ, ಮೋಹಕ. ಅವರ ಆಕೃತಿ, ಮುಖಸೌಂದರ್ಯ, ಹಾಡುಗಾರಿಕೆ, ನೃತ್ಯ ಎಷ್ಟು ಚಿತ್ತಾಕರ್ಷಕವಾಗಿತ್ತೆಂದರೆ – ಎರಡನೆ ಬೆಳಿಗ್ಗೆ ನಾನು ನಮ್ಮ ಹಳ್ಳಿಗೆ ಹೋಗಬೇಕಾಗಿ ಬಂದಿತು; ನಾಲ್ಕೈದು ಮೈಲಿ ದೂರದ ದಾರಿಯಲ್ಲಿ ನನಗೆ ಅದು ಸ್ವಪ್ನಸೌಂದರ್ಯವಾಗಿ ಕಾಡಿಸಿತು. ಹಿಂದಿನ ರಾತ್ರಿ ಮಳೆ ಬಿದ್ದಿದ್ದರಿಂದ ದಾರಿಯಲ್ಲಿ ಗಾಸಿಪಡಬೇಕಾಯಿತು. ಆ ಪಾಡನ್ನು ನೆನಸಿಕೊಂಡರೆ ನಗೆ ಬರುತ್ತದೆ. ಇದು ಕಣ್ಣ ಮೋಹ, ಕಿವಿಯ ಇಂಪು. ಇನ್ನೊಂದು ಪ್ರಸಂಗದಲ್ಲಿ ಧನುರ್ವಿದ್ಯಾಭ್ಯಾಸಕ್ಕೆಂಬಂತೆ ಎಂಟು–ಹತ್ತು ಮಂದಿ ಹುಡುಗರನ್ನುಳ್ಳ ಒಂದು ನೃತ್ಯವನ್ನು ಒಂದು ನಾಟಕದಲ್ಲಿ ಏರ್ಪಡಿಸಿದ್ದು, ರಾಯರು ಪ್ರಧಾನ ಪಾತ್ರವನ್ನು ವಹಿಸಿದ್ದರೆಂದು ನನ್ನ ನೆನಪು. ನೃತ್ಯ, ವೇಷ, ಶಿಸ್ತು, ಅದಕ್ಕೆ ತಕ್ಕ ತಂತ್ರರಚನೆ. ಅದರ ವರ್ಣನೆ ಎಂಬ ಹಾಗೆ ಒಂದು ಪದ್ಯವನ್ನು ಕೂಡ ನಾನು ಬರೆದ ನೆನಪು – ಎಷ್ಟೋ ವರ್ಷಗಳ ತರುವಾಯ. 'ಧನುಗಳ ಪಿಡಿದು ಬನದೆಡೆಗೆ ಪೋಗುವ ಬನ್ನಿರೈ' – ಎಂದೊ ಏನೊ ಆರಂಭವಾಗಿತ್ತು ನನ್ನ ಹಾಡು. ಕಪಿನೀಪತಿ ಎಂಬಾತನು ಬೊಂಬಾಯಿ – ಗುಜರಾತ್ ಕಡೆಗಳಿಂದ ಆ ವೇಷಭೂಷಣ ನೃತ್ಯಗಳನ್ನು ಆ ಕಂಪನಿಗೆ ತಂದಿದ್ದರೆಂದು ಕೇಳಿದ್ದೇನೆ. ಅವರೆಲ್ಲ ಇಂದು ಎಲ್ಲೊ ಹೇಗೊ. ನೆನೆಯುವವರು ಕೂಡ ಇಂದು ಇಲ್ಲವಾಗಿದೆ. ಎದುರಿಗಿದ್ದವರು ತೀರಿಕೊಂಡಿದ್ದಾರೆ.

ಮುಂದಿನ ನಾಟಕ ಪ್ರಹ್ಲಾದಚರಿತ್ರೆ. ರಾಯರಿಗೆ ತುಂಬ ದೊಡ್ಡ ಪ್ರಖ್ಯಾತಿಯನ್ನು ತಂದುದು ಈ ನಾಟಕದ ಭೂದೇವಿಯ ಪಾತ್ರ. ಸೋದರ ರಾಕ್ಷಸರಾದ ಹಿರಣ್ಯಾಕ್ಷ – ಹಿರಣ್ಯಕಶಿಪು ದರ್ಬಾರ್ ನಡೆದಮೇಲೆ ಹಿರಣ್ಯಾಕ್ಷ ಭೂದೇವಿಯನ್ನು ಮುತ್ತಿ ಅಟ್ಟಿಸಿಕೊಂಡು ಬಂದು ಕಾಡುವ ಚಿತ್ರ.' ಹೆಚ್ಚು ವೇಷಭೂಷಣವಿಲ್ಲ. ಬಹುಶಃ ಬಿಳಿಯುಡೆ. ಸರ್ವಾಂಗಸುಂದರವಾದ ಆದರೆ ಒಂದು ಭೀತಿಯ ಚಿತ್ತವೃತ್ತಿಯನ್ನು ಪ್ರತಿಪಾದಿಸುವ ಸನ್ನಿವೇಶ. ಹಿರಣ್ಯಾಕ್ಷ ಅಟ್ಟಿಬರುತ್ತಿರಲು ಅವನಿಂದ ತಪ್ಪಿಸಿಕೊಂಡು ದಿಕ್ಕುಗಾಣದೆ ಓಡಿಬರುತ್ತಿರುವ ಭೂದೇವಿಯ ಚಿತ್ರವನ್ನು ನೋಡಿದವರು ಅದನ್ನು ಮರೆಯುವ ಹಾಗಿಲ್ಲ. 'ಯಮಘಾತಕನಿವನು ಭೀತಿ ತೋರ್ಪನು ಸೋತುದಲಾ ಕೈಕಾಲು। ಅಮ್ಮಾ ಎನಗಿದು ದುಮ್ಮಾನ ಏವೆನೊ ದೇವ' ಎಂದು ಒಂದು ಹಾಡು ಆರಂಭ ಮಾಡಿ, ಭೂದೇವಿಯ ಭೀತಿ ಕಳವಳ ಪೀಡೆಯನ್ನು ಕಾಣಿಸುತ್ತಿದ್ದರು. 'ಗತಿ ಇದೇನು ವಿಧಿಯೇ । ಇದೇನು ಮೋಸ' ಎಂದು ಭೂದೇವಿಯ ಪಾತ್ರವನ್ನು ಮುಗಿಸಿದುದು ಉತ್ತಮ ಅಭಿನಯದ ಪ್ರಸಂಗ. ಒಂದೊಂದು ಮಾತು ಒಂದೊಂದು ಸಾಲು ಹಾಡಾಗಿ, ಗತಿಯಾಗಿ, ಭಾವಪೋಷಕವಾಗಿ ರೂಪಿತವಾಗುತ್ತಿದ್ದುದು ಅವಿಸ್ಮರಣೀಯ. ಭೂಮಿಯನ್ನು ಸುತ್ತಿ ತರುವುದೆಂದರೇನು? ರಾಕ್ಷಸನಾದರೂ ಎಲ್ಲಿ ನಿಂತು ಭೂಮಿಯನ್ನು ಸುತ್ತಿದ? – ಆರ್ಕಿಮಿಡೀಸಿಗೆ ದೊಡ್ಡ ನೆರವಾಗುತ್ತಿತ್ತು ರಾಕ್ಷಸನ ಈ ಕ್ರಿಯೆ! – ಭೂಮಿ ಅವಳಂಥ ಹೆಣ್ಣು ಹುಡುಗಿಯಾಗಿ ಹೇಗೆ ಬಂದಾಳು? – ಎಂಬ ಚಿಂತೆ ಸರ್ವಥಾ ಅಯೋಗ್ಯ. ಇದು ನಾಟ್ಯಧರ್ಮಿ. ಕಲ್ಪನೆ ಸಂಕೇತ ಹಾಗೆ. ಭ್ರಾಮಕ; illusion. ರಾಕ್ಷಸರು ಪಾತಾಳ ಲೋಕದವರು, ದೇವತೆಗಳು

ಮೇಲಿನವರು; ಮಾನವರು ಇಳಿಸಿನವರು: ಆದುದರಿಂದ ಆಗಬೇಕು! ಹಾಗೆಯೇ ಒತೆಯನಾದ ವಿಷ್ಣುವಿಗೆ ಮೊರೆಯಿಡುತ್ತ 'ದೀನಪಾಲ, ಮಾನಿನಿಯ ಮೊರೆಯ ಕೇಳಿ ಪಾಲಿಸು' ಎಂದು ಹಾಡಿದ ದೀನಮೊರೆಯ ಚಿತ್ರ ಒಂದು ಕರುಣೆಯ ಸನ್ನಿವೇಶವಾಗಿ ಚಿತ್ರಿಸುತ್ತಿತ್ತು. ಹಿಂದಿನ ಕಾಲಗಳ ಹಾಡಿನ ರೀತಿಗೂ ಈ ಪ್ರಾರ್ಥನೆಯ ಭಾವಕ್ಕೂ ಎಷ್ಟು ವ್ಯತ್ಯಾಸ! ಆವರಣ, ಭಾವಮಂಡಲ ವ್ಯತ್ಯಾಸ ಆಗಿವೆ. ವಿಷ್ಣುವಿನ ವರಾಹಾವತಾರವಾಗಿ ಭೂದೇವಿಯ ಉದ್ಧಾರವಾಯಿತು. ಹಿರಣ್ಯಾಕ್ಷ ಮಡಿದ. ಆಗ ವಿಷ್ಣು-ಭೂದೇವಿ ಇಬ್ಬರೂ ಒಂದು ದ್ವಂದ್ವಗೀತೆಯನ್ನು ಹಾಡುತ್ತ ರಂಗದಲ್ಲಿ ನಡೆದುಹೋಗುವ, ಸತಿ-ಪತಿ ಎಂದುಕೊಂಡು ಒಬ್ಬರನ್ನೊಬ್ಬರು ಸಂಬೋಧಿಸಿ ಹಾಡುತ್ತಿದ್ದ ಪ್ರೀತಿಯ ಆಲಾಪ ಶಾಂತಿಯದು, ಸಂತೋಷದ್ದು. ವೈಕುಂಠದಲ್ಲಿ ವಿಷ್ಣುವಿನ ಪಾತ್ರವನ್ನು ವಹಿಸಿದ್ದವರದು ನರಸಿಂಹಪಂಡಿತ ಎಂದೊ ಏನೊ ಹೆಸರು. ಮುಂದಿನ ಕಾಲಗಳಲ್ಲಿ ನಮ್ಮ ಕಾಲೆಜ್ ದಾರಿಯಲ್ಲಿ ಈ ವಿಷ್ಣುವನ್ನು ದಿನಾ ಕಾಣುತ್ತಿದ್ದೆ. ವಿಷ್ಣುವೇ ಈಗ ಕೌಸ್ತುಭವನ್ನು ಧರಿಸಿ ಬಂದಿದ್ದಾನೆ; ಬೆಳ್ಳುಳ್ಳಿ ಪಟಾಕಿ ಹಾರಿಸಿ ಮೊದಲ ವೈಕುಂಠ ದೃಶ್ಯದಲ್ಲಿ ಕಂಡ ಹಾಗೆ. ಇದು ನಾಗೇಂದ್ರರಾಯರ ಪಾತ್ರವಾದರೆ ಮೊದಲು ನಾರದನ ಪಾತ್ರ ಶ್ರೀ ಬಿ. ಎಸ್. ರಾಜ ಅಯ್ಯಂಗಾರ್ಯರದು. ನಾಟಕದ ಆರಂಭದಲ್ಲಿ ಮೊದಲಿನ ನಟಿಯ ಪಾತ್ರ ಮತ್ತು ನಾರದನ ಪಾತ್ರ ಅವರವು. ಈ ಕಾಲಕಳೆದು ಬಹುದಿನಗಳಾದಮೇಲೆ ಒಮ್ಮೆ ಆಚಾರ್ಯರ ಕಡೆಕಡೆಯ ದಿನಗಳಲ್ಲಿ ರಾಕ್ಷಸಚಕ್ರವರ್ತಿ ಹಿರಣ್ಯಕಶಿಪುವಿನ ರಾಣಿ ಕಯಾದುವಾಗಿ ನಾಗೇಂದ್ರರಾಯರು ನಟಿಸಿದುದನ್ನು ಒಮ್ಮೆ ನೋಡಿದ್ದೇನೆ. ಈ ನಾಟಕವನ್ನು ಒಟ್ಟು ೧೪-೧೫ ಸಲ ನೋಡಿದ್ದೇನೆ. ಅನೇಕ ಸಲ ಬೋಧರಾಯರೇ ಕಯಾದು. ಪಟ್ಟದ ರಾಣಿ ಆಕೆ ಇರುವಾಗ ಇನ್ನೊಬ್ಬರಿಗೆ ಆ ಪಟ್ಟ ದೊರೆಯುವುದು ಕಷ್ಟ ಎಂಬಂತಿತ್ತು. ಆತನ ರೂಪು, ಮುಖಚರ್ಯೆ, ನಡೆ, ಹೆಜ್ಜೆ ಎಲ್ಲ ಹೆಣ್ಣು ಎಂಬಂತಿತ್ತು. ನಾಗೇಂದ್ರರಾಯರು ಕಯಾದು ಪಾತ್ರ ಮಾಡಿದಾಗ ಒಂದು ಬಗೆಯಲ್ಲಿ ಭಗವದ್ಭಕ್ತಿಯನ್ನು ತೋರದೆ ಇರಲಿಲ್ಲ ಎಂಬಂತೆ ಭಾವಪ್ರದರ್ಶನವಾಗುತ್ತಿತ್ತು. ಅದು ಹೇಗೇ ಇರಲಿ, ಪ್ರಹ್ಲಾದನಲ್ಲಿ ತೋರಿಸಬೇಕಾದ ಪುತ್ರವಾತ್ಸಲ್ಯವನ್ನು ಕಯಾದು ತನ್ನ ಮಗನಿಗೆ ವಿಷ ಕುಡಿಸಬೇಕೆಂದು ತನಗೆ ಭರ್ತೃವಾದ, ಮಗನಿಗೆ ತಂದೆಯಾದ ರಾಜ ಮಗನ ತಾಯಿಗೆ ಅಪ್ಪಣೆ ಮಾಡಿದಾಗ ಅದನ್ನು ನೆರವೇರಿಸಲೇಬೇಕಾದ ಪ್ರಸಂಗವನ್ನು ಆರ್ದ್ರವಾದ ಹೃದಯವಿದ್ರಾವಕವಾದ ಮಾತುಗಳಲ್ಲಿ ಕಾಣಿಸುತ್ತಿದ್ದರು. ಅದು ಹಿಂದಿನ ಕಯಾದುಗಳಲ್ಲಿ, ಈ ಕಯಾದುವೆಲ್ಲಿ ಎನ್ನುವಂತಿತ್ತು. ಇದು ಸುಮಾರು ೧೯೨೦-೨೧ರ ಕಾಲ; ಆ ಮುಂಚೆ ಇಲ್ಲ. ಮರಿರಾಯರು ಈ ನಾಟಕದಲ್ಲಿ ಪ್ರಹ್ಲಾದನ ಪಾತ್ರ ವಹಿಸುತ್ತಿದ್ದರು. ಕೆಲವು ದಿನ ಮಾತ್ರ ದ್ವಾರಕಿ (ಶ್ರೀ ದ್ವಾರಕನಾಥ್) ಮಾಡುತ್ತಿದ್ದ.

ನಿರುಪಮಾ, ರತ್ನಾವಳಿ ನಾಟಕಗಳಲ್ಲಿ ರಾಯರೇ ನಿರುಪಮೆ. ನಿರುಪಮದಲ್ಲಿ ಬೋಧರಾಯರು ವಿಮಲೆ, ಸಂತಾಪಕನು ಪ್ರೀತಿಸುತ್ತಿದ್ದ ಹೆಣ್ಣು. ತನ್ನಲ್ಲಿ ಅನುರಕ್ತಳಲ್ಲದ ಚೆಲುವೆ ಹುಡುಗಿಯನ್ನು ಸಂತಾಪಕನು ಬಲಾತ್ಕಾರದಿಂದ ಎತ್ತಿಕೊಂಡು ಬರುವ ದೃಶ್ಯದಿಂದ ಆರಂಭವಾಗುತ್ತದೆ ನಾಟಕ. ಅವಳಿದ್ದ ಮನೆಗೆ ಬೆಂಕಿಹಚ್ಚಿ ಸಂತಾಪಕನು ಉರಿಯುತ್ತಿದ್ದ

ಮನೆಯಿಂದ ನಿರುಪಮೆಯನ್ನು ಹೊತ್ತುಕೊಂಡು ಬರುವುದು ಮೂಕ ದೃಶ್ಯ. ರೆನಲ್ಡ್ಸ್ ಎಂಬ ಇಂಗ್ಲಿಷ್ ಕಾದಂಬರಿಕಾರರ ರಾಬರ್ಟ್ ಮೆಕೇರ್ ಎಂಬ ಕಾದಂಬರಿಯನ್ನು ಕನ್ನಡಕ್ಕೆ ರೂಢಿಸಿಕೊಂಡಿದ್ದ ಕತೆ ಅದು. ನಂಜನಗೂಡು ಶ್ರೀಕಂಠಶಾಸ್ತ್ರಿಗಳು ಈ ನಾಟಕವನ್ನು ಕನ್ನಡಕ್ಕೆ ಮಾಡಿಕೊಟ್ಟಿದ್ದರು. ನಿರುಪಮೆಯಲ್ಲಿ ಅನುರಕ್ತನಾಗಿ ಅವಳ ಪ್ರಿಯನಾಗಿದ್ದವನು ವಿಜಯವರ್ಮ. ವರದಾಚಾರ್ಯರು ಸಂತಾಪಕನಾದರೆ ವಿಜಯವರ್ಮನ ಪಾತ್ರ ಜಯರಾಯರದು. ಸಂತಾಪಕನು ಹೇಳಿ ಕೇಳಿ ದರೋಡೆಕಾರ. ನಾಟಕದಲ್ಲಿ ಅವನಿಗೂ ಸರ್ಕಾರದ ಯಾವ ಅಧಿಕಾರಿಗೂ ಸಂಬಂಧಪಡುವ ಮಾತು ಬರುವುದಿಲ್ಲ. ಇವನ ಸ್ನೇಹಿತನಾದ ನಂದಕನ ಪಾತ್ರವನ್ನು ಪ್ರಸಿದ್ಧ ಹಾಸ್ಯಗಾರರೆಂದು ಹೆಸರುಪಡೆದಿದ್ದ ಕೃಷ್ಣಮೂರ್ತಿ ವಹಿಸುತ್ತಿದ್ದರು. ಸಂತಾಪಕನು ನಿರುಪಮೆಯನ್ನು ಹೊತ್ತುಕೊಂಡು ಬಂದು ಸೆರೆಮನೆಯಲ್ಲಿಟ್ಟುಕೊಂಡಾಗ ಆ ಸ್ಥಾನವನ್ನು ಪತ್ತೆಮಾಡಲು ಮದ್ಯಪಾನ ಮಾಡಿದ್ದ ನಂದಕನನ್ನು ಮೋಹಗೊಳಿಸಿ ಗೋಪ್ಯ ಸ್ಥಳವನ್ನು ಹುಡುಕಿಕೊಂಡು ಹೋಗಿ ನಿರುಪಮೆಗೆ ಕಾವಲಿದ್ದ ಭುಜಂಗಮನ ಕಾಲು ಕತ್ತರಿಸಿ ಬಿಡಿಸಿಕೊಂಡು ಹೋಗುವ ಕಾರ್ಯ ನಡೆಯುತ್ತದೆ. ಸಂತಾಪಕನದೇ ಇಲ್ಲಿ ಪ್ರಧಾನ ಚಿತ್ರವಾಗುವುದು; ಅವನ ದಸ್ಯುವೃತ್ತಿ ಕಾಲು ಕತ್ತರಿಸಿದ್ದ ಸ್ನೇಹಿತ ಭುಜಂಗಮನ ಸ್ಥಿತಿ, ನಿರುಪಮೆಯನ್ನು ಬಿಡಿಸಿಕೊಂಡುಹೋದದ್ದು, ಜೊತೆಗೆ ತನ್ನ ಪ್ರೇಯಸಿಯಾದ ವಿಮಲೆ ಸತ್ತದ್ದು, ನಂದಕನು ಸತ್ತದ್ದು ಎಲ್ಲ ಸೇರಿ, ಒಂದು ಸಾಹಸದ ಕರುಣೆಯ ಚಿತ್ರವಾಗುತ್ತದೆ. ಈ ಆವರಣದಲ್ಲಿ ಮೊದಲು ನಿಸ್ಸಹಾಯಳಾಗಿ ಪ್ರಜ್ಞೆ ತಪ್ಪಿದಂತಿದ್ದ ನಿರುಪಮೆಯ ಪಾತ್ರವನ್ನು ಎತ್ತಿಕೊಂಡು ಬರುವ ಚಿತ್ರದಲ್ಲಿ ನಿರುಪಮೆಗೆ ಯಾವ ಕ್ರಿಯೆಯೂ ಇಲ್ಲ, ನಡೆಯೂ ಇಲ್ಲ, ನುಡಿಯೂ ಇಲ್ಲ. ನಿಜವಾಗಿ ಆ ವ್ಯಕ್ತಿಯನ್ನು ಸಂತಾಪಕನು ಎತ್ತಿ ತರುತ್ತಿದ್ದನೊ ಅಥವಾ ಅದು ಬೆಂಡಿನಂಥ ಒಂದು ಪದಾರ್ಥವೊ ಗೊತ್ತಾಗುತ್ತಿರಲಿಲ್ಲವಾಗಿ ಅದನ್ನು ಕುರಿತು ಏನೂ ಹೇಳುವಂತಿಲ್ಲ. ನಿಜವಾಗಿ ಅವಳನ್ನೇ ಎತ್ತಿ ತಂದಿದ್ದರೆ ೧೨೦–೧೩೦ ರಾತ್ತಾದರೂ ತೂಕದ ಮನುಷ್ಯ ವ್ಯಕ್ತಿಯನ್ನು ತರುವಾಗ ಕೆದರಿದ ಕೂದಲು, ಇಳಿಬಿದ್ದ ಮುಖ, ಸ್ತ್ರೀವ್ಯಕ್ತಿಯ ಪಾತ್ರವನ್ನು ನಿರ್ವಹಿಸುವುದು ಕಷ್ಟವೇ! ಸೆರೆಯಲ್ಲಿದ್ದ ನಿರುಪಮೆಯ ದುರ್ಬಲ ದೀನ ಸ್ಥಿತಿಯನ್ನು ರಾಯರು ಸಹಜವಾಗಿ ಸಾಗಿಸುತ್ತಿದ್ದರು. ತನ್ನ ಮನೆಯಿಂದ ಭೀಕರ ಸಂದರ್ಭದಲ್ಲಿ ಹೊತ್ತು ತಂದುದನ್ನು ನೆನಸಿಕೊಂಡು ದುಃಖಿತಳಾಗಿರುವಾಗ ಆಕೆಯ ಎದುರಿಗೆ ಬಂದು, ಸಂತಾಪಕನು ರೊಚ್ಚಿನಲ್ಲಿ ಕೂಗಾಡಿ, 'ಹರಿಯನದಾವಂ ಕೆಣಕಿದವಂ' ಎಂದು ಮೊದಲಾಗುವ ಅತಿಪ್ರಸಿದ್ಧವಾದ ಕಂದವನ್ನು ಮೋಹನ ರಾಗದಲ್ಲಿ ಹಾಡಿ, ಆಕೆಯ ಭಯವನ್ನೊ ದುರ್ಬಲತೆಯನ್ನೊ ಹೆಚ್ಚು ಮಾಡುತ್ತಿರಲು ಸಂತಾಪಕನು ಆಡುತ್ತಿರುವ 'ಎಲ್ಲೇ ನಿನ್ನ ಗಂಡನೆಂಬ ಹುಳುವೆಲ್ಲೆ? ಕಾಲಿಂದ ಹೊಸಕಿಬಿಡುತ್ತಿದ್ದೆನಲ್ಲೆ!!' ಎನ್ನುವಾಗ ಆ ಕಾಲಿನ ಅಭಿನಯವನ್ನೂ ಮುಖಚರ್ಯೆಯನ್ನೂ, ಆಕೆ ಭಯವನ್ನೂ ತನ್ನ ದುಃಸ್ಥಿತಿಯನ್ನೂ ಒಂದು ಕ್ಷಣಕಾಲ ಅಭಿನಯಿಸುವ ಚಿತ್ರವೂ ಮರೆವುದಂಥವಲ್ಲ. ರತ್ನಾವಳಿಯಲ್ಲಿ ರಾಣಿ ವಾಸವದತ್ತೆಯ ಮೇಲಧಿಕಾರಕ್ಕೆ ಒಳಪಟ್ಟು ರಾಜನ ಕಣ್ಣಿಗೆ ಬೀಳದೆ, ಆದರೆ ರಾಜನಲ್ಲಿ ಅನುರಕ್ತಳಾಗಿ, ಅವನ ಪ್ರೇಮವನ್ನು ಬಯಸುತ್ತಿದ್ದ ಸಾಗರಿಕೆಯ ಪಾತ್ರ ಹೆಚ್ಚು ಮೋಹಕವಾದುದು. ಒಂದು

ರಾಣಿಯ ಕಡೆಗೆ ಇದ್ದ ಭೀತಿ ಸಂಕೋಚ, ಇನ್ನೊಂದು ಪ್ರೇಮ ಇವುಗಳ ಸಮಿಶ್ರಣವಾಗಿ ತೋರಿಸಬೇಕಾಗಿತ್ತು. ವಾಸವದತ್ತೆಯ ಕಣ್ಣಿಗೆ ಬೀಳದಂತೆ ರಾಜನಿಗೆ ನೇರವಾಗಿ, ಪರೋಕ್ಷವಾಗಿ ತನ್ನ ಪ್ರೀತಿ ನಿವೇದಿಸಿ ನಡೆದುಕೊಳ್ಳಬೇಕಾಗಿತ್ತು. ಮಾಲವಿಕಾಗ್ನಿಮಿತ್ರದ ಅಗ್ನಿಮಿತ್ರನಷ್ಟು ಸಣ್ಣತನ, ಹಿಂಯ ಕಾಮಪ್ರವೃತ್ತಿ ವತ್ಸರಾಜನಲ್ಲಿರದೆ ಇಲ್ಲಿನ ಶೃಂಗಾರ ಸನ್ನಿವೇಶ ಹೆಚ್ಚು ನಯದ್ದಾದರೂ ಭಾವ ಹೆಚ್ಚು ಸಂಸ್ಕಾರಗೊಂಡದ್ದಾದರೂ ಸಾಗರಿಕೆ ಹೆಚ್ಚು ಹಿಡಿತದಲ್ಲಿ ನಡೆದುಕೊಳ್ಳಬೇಕಾಗಿತ್ತು. ಎರಡು ಸಂದರ್ಭಗಳು ಅಲ್ಲಿ ನೆನಪಿಗೆ ಬರುತ್ತವೆ.

ಪರಸ್ಪರ ಪ್ರೀತಿಯ ಸಂಭಾಷಣೆಯನ್ನು ನಡವಳಿಕೆಯನ್ನು ಬಳಸಿ ಮುಂದುವರಿಯುತ್ತಿರುವಾಗ ಇದ್ದಕ್ಕಿದ್ದಂತೆ ವಾಸವದತ್ತೆ ಎಂಬ ಹೆಸರು ಕೇಳಿದ ಕೂಡಲೆ ನಾಯಕನೂ ನಾಯಿಕೆಯೂ ತಟ್ಟನೆ ಒಬ್ಬರನ್ನೊಬ್ಬರು ಬಿಡಿಸಿಕೊಂಡು ಓಡಿ ತಪ್ಪಿಸಿಕೊಳ್ಳುವ ಸಂದರ್ಭ ತುಂಬಾ ಆಕರ್ಷಕವಾಗಿದ್ದುದು. ಅಂಥದೇ ತನ್ನ ಪ್ರೀತಿ ಸಫಲವಾಗುವುದಿಲ್ಲ ಎಂದು ರತ್ನಾವಳಿ ಸ್ವಹತ್ಯೆ ಮಾಡಿಕೊಳ್ಳಬೇಕೆಂದು ಬಳ್ಳಿಯನ್ನು ಹುಡುಕಿತಂದು ಕೊರಳಿಗೆ ಉರುಲು ಹಾಕಿಕೊಳ್ಳಬೇಕೆಂದಿರುವಾಗ, 'ಲತಾಪಾಶದಿಂ' ಎಂದು ಮೊದಲು ಮಾಡಿ ಹೇಳುವ ಹಾಡು ಒಂದು ಕಡೆ ಪ್ರೇಮ, ಇನ್ನೊಂದು ಕಡೆ ನಿರಾಶೆಗಳ ಒಳತೋಟಿಯನ್ನು ಕಾಣಿಸಿದೆ ಎಂಬುದರ ದೃಶ್ಯ ಮಿಂಚಿ ಮಾಯವಾಗುವದೂ ನೆನಪಿನಲ್ಲಿ ನಿಲ್ಲುತಕ್ಕದ್ದು. 'ಧ್ರುವವಿಜಯ'ದಲ್ಲಿ ಸುರುಚಿಯಾಗಿಯೂ 'ಸುಗ್ರೀವಸಖ್ಯ', 'ಲಂಕಾದಹನ'ಗಳಲ್ಲಿ ಸೀತೆಯಾಗಿಯೂ ರಾಯರು ವಹಿಸುತ್ತಿದ್ದ ಪಾತ್ರ ಇನ್ನೊಂದು ಬಗೆಯದು. ಸೀತೆಯ ಸ್ಥಿತಿ ಪುನಃ ದೀನ; ಆದರೆ, ರಾಮನಿಗೆ ಮುಡಿಪಾದ ಮನಸ್ಸು, ಸಾಧ್ವೀಶಿರೋಮಣಿ ಸೀತೆ ಯಾವ ಮಟ್ಟದ ನಡವಳಿಕೆಯನ್ನು ಹೇಗೆ ತೋರಿಸಬೇಕಾಗಿತ್ತು, ಮನಸ್ಸಿನ ಶುಚಿ, ನಿರ್ಧಾರಗಳನ್ನು ಕಾಣಿಸಬೇಕಾಗಿತ್ತು – ಅದನ್ನು ಸ್ಫುಟವಾಗಿ ಕಾಣಿಸುತ್ತಿದ್ದರು. ಸೀತಾಪಹರಣಕಾಲದಲ್ಲಿ ಭಯ ಕೋಪಗಳಲ್ಲಿ ತನ್ನ ಸ್ಥಿತಿಯನ್ನು ನಿವೇದಿಸಿ ಒಂದು ಶುದ್ಧತೆ ತೋರಬೇಕಿತ್ತು. ಸುರುಚಿಯದು ಹಾಗಲ್ಲ. ರಾಜನ ಅಂತಃಪುರದಲ್ಲಿ ದೊಡ್ಡ ರಾಣಿ ಸುನೀತಿಯ ಕೈ ಕೀಳಾದುದನ್ನು ತನ್ನ ಕೈ ಮೇಲಾಗಿರುವುದನ್ನು ಪ್ರದರ್ಶಿಸಬೇಕಾದ ಅಗತ್ಯ ತುಂಬ ಅಟ್ಟಹಾಸ ಹೊಂದಿರುತ್ತಿತ್ತು. ರಾಜನಿಗೇನೊ ಧ್ರುವನಲ್ಲಿ ವಾತ್ಸಲ್ಯವಿದೆ. ಸುನೀತಿಯಲ್ಲಿ ತಕ್ಷಣಕ್ಕೆ ಪ್ರೀತಿ ಕಡಮೆಯಾಗಿದ್ದರೂ ಚೆಲುವೆಯಾದ ಚಿಕ್ಕವಳ ಮೇಲೆ ಮೋಹ ಅತಿಶಯವಾಗಿತ್ತು. ತನ್ನ ಸಣ್ಣ ಮಗುವಿನೊಡನೆ ಆಕೆ ಎದುರಿಗೆ ಬಂದು ನಿಂತಾಗ ಧ್ರುವನ ಮೇಲೆ ಸುರುಚಿಗೆ ತಿರಸ್ಕಾರ; ಇಲ್ಲಿ ಒಂದು ವಿಚಿತ್ರವಾದ ಗುಜರಾತಿಮಟ್ಟಿನ ಹಾಡು ಹೇಳುತ್ತಿದ್ದರು. ಮುಂದಿನ ಕಾಲದಲ್ಲಿ ಸ್ಥಾನಂ ನರಸಿಂಹರಾಯರು ಸತ್ಯಭಾಮೆಯಾಗಿ ಕೃಷ್ಣತುಲಾಭಾರದಲ್ಲಿ ಹಾಡುತ್ತಿದ್ದ 'ಮೀರಜಾಲಗಲಡ ನಾಯಾನತಿ' ಎಂಬಷ್ಟು ಆಟೋಪ ಹೇಂಕಾರದ್ದಲ್ಲವಾದರೂ ಇದಕ್ಕೆ ಸ್ವಾಭಿಮಾನದಲ್ಲಿ ಸರಿಸಾಟಿ. ಹಿರಿಯ ಮಗನಿಗೆ ತಂದೆಯ ತೊಡೆಯ ಮೇಲೆ ಕೂಡುವ ಪುಣ್ಯ ಅದೃಷ್ಟ ಇಲ್ಲದೆ ರಾಜನ ಮನಸ್ಸು ಸುಖವಲ್ಲದ ಸ್ಥಿತಿಯಲ್ಲಿರುವ ಈ ಸನ್ನಿವೇಶವನ್ನು ಸಾಧಿಸಿ ಸುರುಚಿಯ ದರ್ಪ ಧಾರಾಳ ಒಂದು ವಿಚಿತ್ರ ಸಾಂಸಾರಿಕ ಚಿತ್ರವನ್ನು ಕಣ್ಣಿಗೆ ಕಟ್ಟುವಂತೆ ಮಾಡುತ್ತದೆ. ಸುರುಚಿ, ಸುನೀತಿ, ಉತ್ತಾನಪಾದ, ಧ್ರುವ ಇವು ನೀತಿಯ ಮಾತುಗಳು. ಹಾಗೆಯೇ ಮುಂದಿನ ಒಂದು ಕಾಲದಲ್ಲಿ ಅಂತಃಪುರದಲ್ಲಿ ತನ್ನ ಬೇಸರವನ್ನು ಹೆಚ್ಚು ಮಾಡಿ, ತನ್ನ ಅಸಮಾಧಾನಕ್ಕೆ

ಕಾರಣಳಾಗುತ್ತಿದ್ದ ಸುರುಚಿಯ ನಡವಳಿಕೆ ಎಂಥಾದ್ದಾಗುತ್ತಿದೆಯೆಂಬುದರ ಚಿತ್ರಣವಿರುವಾಗಲೇ ಉತ್ಥಾನಪಾದರಾಯನು 'ಕರಿಕರಿ ವಿಚಾರ.... ಮೆರೆದರೆ ಮೋಹಾಂಧಕಾರ' ಎಂಬ ಹಾಡನ್ನು ಹಾಡಿಕೊಂಡು ಬರಬೇಕಾದ ಸ್ಥಿತಿಗೆ ರಾಜನನ್ನು ಈಡುಮಾಡಿದ ಪ್ರಸಂಗವಿತ್ತು. ಇತರ ನಾಟಕಗಳನ್ನು, ಉದಾಹರಣೆಗೆ, ಕಾಮಪಾಲ ನಾಟಕದ ಒಂದು ಭಾಗ ಮುಂತಾದುವನ್ನು ವಿಸ್ತರಿಸಬೇಕಿಲ್ಲ.

ಕೇವಲ ಹೆಣ್ಣು ಪಾತ್ರಗಳನ್ನು ವಹಿಸಿ ವಹಿಸಿ ನಟರು ಹೀನಾಯಪಡಬಾರದು; ಅವರಲ್ಲಿ ಸಹಜವಾದ ಗಂಡುತನಕ್ಕೆ ಊನ ಬರಬಾರದು ಎಂಬ ಭಾವನೆಯಿಂದಲೊ ಏನೊ ಆಚಾರ್ಯರು ಬೋಧರಾಯರಿಗೂ ನಾಗೇಂದ್ರರಾಯರಿಗೂ ಒಂದೊಂದು ನಾಟಕಗಳಲ್ಲಿ ಗಂಡು ಪಾತ್ರಗಳಲ್ಲಿ ಅಭಿನಯಿಸುವ ಅವಕಾಶ ಉಂಟುಮಾಡಿದ್ದರು. ಆ ಮುಂಚೆ ಜಯರಾಯರು – ನಿರುಪಮಾದಲ್ಲಿ ವಿಜಯವರ್ಮ ಪಾತ್ರ, ಶಾಕುಂತಲದಲ್ಲಿ ಕಣ್ವ ಪಾತ್ರ, ಶಾಮರಾಯರದು ಕಾಮಪಾಲದಲ್ಲಿ ನಾಯಕ ಪಾತ್ರ, ಹೀಗೆ ಗಂಡುಪಾತ್ರಗಳನ್ನು ವಹಿಸುತ್ತಿದ್ದರು. ನಿರುಪಮಾದಲ್ಲಿ ಅವರದೇ ವೇಶ್ಯೆಯ ಪಾತ್ರ. ಸುಮಾರು ೧೯೧೬ ಎಂದು ಕಾಣುತ್ತದೆ: ಬಾಲರತ್ನಾವಳಿ ಎಂಬ ನಾಟಕವನ್ನಾಡಿ ಮುಖ್ಯಪಾತ್ರಗಳನ್ನು ಹುಡುಗರಿಗೆ ಏರ್ಪಡಿಸಿದ್ದರು. ಅದರ ಅಭ್ಯಾಸ ನಡೆಯುತ್ತಿದ್ದಾಗ ಆಚಾರ್ಯರು ಒಂದು ಕಡೆ ಕುಳಿತು ನಟರನ್ನು ಹೇಗೆ ಸಿದ್ಧಮಾಡುತ್ತಿದ್ದರು ಎಂಬ ಚಿತ್ರ ನನ್ನ ಕಣ್ಣಿಗೆ ಬಿದ್ದಿತ್ತು. ಅವರು ಹೇಳಿಕೊಟ್ಟುದು ಕಟ್ಟಡ ಕಟ್ಟಿದ ಮೇಲೆ ನಯಗಾರೆ ಕೆಲಸದಂತೆ ಇದ್ದುದರಿಂದ ಅಭ್ಯಾಸಕ್ಕೆ ನಟರು ಹೆಚ್ಚು ಶ್ರಮಪಡಬೇಕಿರಲಿಲ್ಲ. ಎಲ್ಲರಿಗೂ ಎಲ್ಲ ಪಾತ್ರಗಳ ಮಾತೂ ಹಾಡುಗಳೂ ಬಳಕೆಯಾಗುವಂತಿತ್ತು. ಆಚಾರ್ಯರು ವತ್ಸರಾಜರಾಗಿ, ಬೋಧ ವಾಸವದತ್ತೆಯಾಗಿ, ಕೃಷ್ಣಮೂರ್ತಿ ವಸಂತಕನಾಗಿ ಅಭಿನಯಿಸಿದುದನ್ನು ಇತರ ನಟರು ನೋಡಿ ತಾವೂ ನಿಷ್ಣಾತರಾಗಿದ್ದರು. ಬಾಲರತ್ನಾವಳಿಯಲ್ಲಿ ಮಿತ್ರ ವಸಂತಕನ ಪಾತ್ರ ಮರಿರಾಯರು; ಅಲ್ಲಿ ಬೋಧರಾಯರಿಗೆ ಸ್ಥಾನವಿರಲಿಲ್ಲ. ವಾಸವದತ್ತೆಯಾಗಿ ಶ್ರೀನಿವಾಸ ಅಯ್ಯಂಗಾರ್ಯರೆಂಬ ಹೊಸಬರು ಮಾಡಿದರು. ರಾಜಯ್ಯಂಗಾರ್ಯರು ಸಾಗರಿಕೆ, ನಾಗೇಂದ್ರರಾಯರು ವತ್ಸರಾಜ. ಆಗಲೂ ರಾಜ ಅಯ್ಯಂಗಾರ್ಯರು ಕಣ್ಣಿಗೆ ಕನ್ನಡಕ ಹಾಕಿಕೊಳ್ಳಬೇಕಾಗಿದ್ದರೂ ಅಂಥದನ್ನೆಲ್ಲ ಕಂಡು ಅಸಂಗತ ಇತ್ಯಾದಿಯಾಗಿ ಟೀಕಿಸಿ ಬೇಸರಿಸುವ ವಿಮರ್ಶಕ ಪ್ರಜ್ಞೆ ಘಟಿಸಿರಲಿಲ್ಲ. ವತ್ಸರಾಜನ ಪಾತ್ರವನ್ನು ನಿರ್ವಹಿಸುತ್ತಿದ್ದ ರಾಯರು ಮೊದಲಿಂದ ಕಡೆಯವರೆಗೂ ಕಥಾನಾಯಕರಾಗಿ ಶೃಂಗಾರ ಸನ್ನಿವೇಶವನ್ನು ವಹಿಸಿದ್ದರು. ಅದು ಬಹು ತೆರನಾದ ಮೃದು ಸಂದರ್ಭವುಳ್ಳ ನಾಟಕ. ಮೊದಲಿಂದ ಹಿಡಿದು ಕೊನೆಯವರೆಗೂ ಒಂದೇ ಧಾತುವಿನಲ್ಲಿ ಅನೇಕ ಸಂದರ್ಭಗಳಿಗೆ ತಕ್ಕಂತೆ ನಿರ್ವಹಿಸಬೇಕಾದ ಈ ನಾಯಕ ಪಾತ್ರದಲ್ಲಿ ತುಂಬ ಸಮರ್ಪಕವಾಗಿ ಅವರು ತಮ್ಮ ಭೂಮಿಕೆಯನ್ನು ಸಾಧಿಸಿದರು. ಕಡೆಗೆ ಆಚಾರ್ಯರ ಕಂಪನಿಯಲ್ಲಿ ಆಚಾರ್ಯರೇ ವತ್ಸರಾಜನ ಪಾತ್ರವನ್ನು ನಿರ್ವಹಿಸಿದ್ದರೆ ಎಷ್ಟು ಸಂತೋಷಪಟ್ಟುಕೊಳ್ಳುತ್ತಿದ್ದರೊ ಅದಕ್ಕೆ ಕಡಮೆ ಇಲ್ಲದ ಸಂತೋಷಪಟ್ಟವರೆಂದರೆ, ಇವರಿಗೆ ಮೇಲ್ಕ್ರಿ ಅವರಿಗೆ ಕೀಳ್ಕ್ರಿ ಎನ್ನಬಾರದು. ಮೊದಲಲ್ಲೆ ಬರುವ ವಸಂತೋತ್ಸವದಲ್ಲಿ ಪುರ ಪ್ರಮುಖರಲ್ಲಿ ಒಬ್ಬರಾಗಿ ಬಂದು ಆಚಾರ್ಯರ ಪ್ರಖ್ಯಾತವಾದ 'ಘನವಸಂತ' ಎಂಬ

ಒಂದು ಹಾಡನ್ನು ಹೇಳಿ ಪ್ರೇಕ್ಷಕರನ್ನು ಒಲಿಸಿ ಹಿಂದಕ್ಕೆ ಸರಿದಿದ್ದರು. ಮೊದಲಿಂದ ಕಡೆಯವರೆಗೂ ಆಕರ್ಷಣೆ, ಪ್ರೇಮ, ವಿರಹ, ನಡುನಡುವೆ ಸೇರುವೆ, ಒಡನೆಯೇ ಬೇರೆಯಾಗಬೇಕಾದ ಪ್ರಸಂಗ, ಎಷ್ಟೋ ಸಿಕ್ಕು ನಿರ್ಬಂಧಗಳನ್ನು ಬಿಡಿಸಿಕೊಂಡಾದಮೇಲೆ ಪುನಃ ಸಮಾಗಮ, ಪ್ರೇಮಸಿದ್ಧಿ – ಇವನ್ನು ಒಂದು ಹದದಲ್ಲಿ ಅನುಸ್ಯೂತವಾಗಿ ಸಾಧಿಸಬೇಕಾಗಿದ್ದ ಮಧುರ ಪ್ರಸಂಗ ರತ್ನಾವಳಿಯದು. ರಾಯರು ಹೆಣ್ಣುಪಾತ್ರಗಳನ್ನು ಹೇಗೆ ನಿರ್ವಹಿಸುತ್ತಿದ್ದರೊ ಅಷ್ಟೇ ಸಮರ್ಪಕವಾಗಿ ನಾಯಕ ಪಾತ್ರಗಳನ್ನೂ ನಿರ್ವಹಿಸಬಲ್ಲ ಶಕ್ತಿ ಉಳ್ಳವರೆಂಬ ಶಕ್ಯತೆಯನ್ನು ಕಾಣಿಸಿದರು. ಮೇಲಿನ ತುಟಿಯಲ್ಲಿ ಸ್ವಲ್ಪ ಏರಿದ್ದುದನ್ನು ಮೀಸೆ ಪೂರ್ತಿ ಮುಚ್ಚಿತ್ತು. ಅವರ ವತ್ಸರಾಜನ ಪಾತ್ರವನ್ನು ನೋಡಿ ಆಚಾರ್ಯರು ತೃಪ್ತರಾದರೆಂದು ಕೇಳಿದ್ದೇನೆ.

ಎಷ್ಟೋ ಮಂದಿ ಆಚಾರ್ಯರು ನಿರ್ವಹಿಸುತ್ತಿದ್ದ ಹಿರಣ್ಯಕಶಿಪು, ರಾವಣ, ಕೀಚಕ, ಸಂತಾಪಕ, ವತ್ಸರಾಜ ಪಾತ್ರಗಳನ್ನು ಅಭಿನಯಿಸಿದ್ದನ್ನು ನೋಡಿದ್ದೇನೆ. ಹೋಲಿಕೆ ಎಲ್ಲಿಂದೆಲ್ಲಿಗೆ! ಅವರು ಗುಹಾಧ್ವನಿಗಳು....ಅವರ ಮರಿಗಳು ನೆಳಲುಗಳು ಎಂಬಂತೆ ಅವು ಕಾಣಿಸುತ್ತಿದ್ದವೇ ಹೊರತು ಯಾವ ಇತರರು ಅಂಥಾ ನಾಯಕನ ಪಾತ್ರ ವಹಿಸಿದರೂ ಎಷ್ಟು ಚೆನ್ನಾಗಿ ಹಾಡಿದರೂ – ಕಡೆಗೆ ನಾಗೇಶರಾಯರಂಥ ಹಾಡುಗಾರರೂ ಹೆಸರು ಪಡೆದವರೂ ಅಭಿನಯಿಸಿದರೂ – ಪಾತ್ರಗಳು ಸನ್ನಿವೇಶಗಳು ನಮಗೆ ಅತೃಪ್ತಿಯನ್ನುಂಟು ಮಾಡುತ್ತಿತ್ತು. ಆಚಾರ್ಯರ ಆಕೃತಿ, ಹಾಡುಗಾರಿಕೆ, ರಂಗಸಂಚಾರ, ನಿಲವು ಅಂಥವು. ಅಂಥ ಅತೃಪ್ತಿ ಬಾಲರತ್ನಾವಳಿ ನಾಟಕಗಳಲ್ಲಿ ರಾಯರ ವತ್ಸರಾಜನ ಅಭಿನಯದಲ್ಲಿ ತಲೆಹಾಕಲಿಲ್ಲ. ಇದು ರಾಯರ ವಿಜಯ.

ಆಚಾರ್ಯರ ಕಂಪನಿಯ ಹೆಸರು ರತ್ನಾವಳಿ ಥಿಯಾಟ್ರಿಕಲ್ ಕಂಪನಿ. ಅದರ ಹೆಸರಲ್ಲಿ ಆಡಿದ್ದು ಬಾಲರತ್ನಾವಳಿ ನಾಟಕ. ಹಾಗಾದುದು ಮುಂದಿನ ಕಾಲದ ಒಂದು ಸೂಚನೆಯೇ ಎಂಬಂತಾಯಿತು ಎಂಬುದು ಹಿನ್ನೋಟದಲ್ಲಿ ಉಂಟಾಗುವ ಭಾವನೆ. ರಾಯರೇ ಶಾಕುಂತಲ ನಾಟಕದಲ್ಲಿ ಮೊದಲಿಂದ ಕಡೆಯವರೆಗೆ ಶಕುಂತಲೆಯ ಪಾತ್ರವನ್ನು ಅಭಿನಯಿಸಿದ್ದುದನ್ನು ನೋಡಿದ್ದರಾಗಿತ್ತು. ಅಲ್ಲಿನ ನಾಯಿಕೆಯ ಪಾತ್ರ ಮೊದಲಂಕದಿಂದ ಹಿಡಿದು ಕೊನೆಯವರೆಗೂ ಪ್ರೇಮದ ನಾನಾ ಅವಸ್ಥೆಗಳಲ್ಲಿ ಭಾವಕಾಂಡಗಳಲ್ಲಿ ಕಾಣಬಹುದಾದಷ್ಟು ವೈವಿಧ್ಯದಲ್ಲಿ ಇನ್ನಾವ ನಾಟಕದಲ್ಲೂ ಇಲ್ಲದ್ದರಿಂದ ಮೊದಲ ಮೂರಂಕಗಳ ಮುಗ್ಧತೆ, ನಾಲ್ಕನೆ ಅಂಕದಲ್ಲಿ ಕಣ್ವಾಶ್ರಮದ ಹಾರ್ದ ವಾತ್ಸಲ್ಯಪೂರ್ಣ ಸನ್ನಿವೇಶ, ರಾಜನ ಆಸ್ಥಾನದಲ್ಲಿನ ದಾರುಣ ನಾಟಕೀಯತೆ, 'ಭಗವತಿ ವಸುಧೇ ದೇಹಿ ಮೇ ವಿವರಂ' ಎಂದು ಕಡೆಗೆ ನಿರ್ಗತಿಕಳಂತೆ 'ಬಾಹೂತ್ಕ್ಷೇಪಂ ಕ್ರಂದಿತುಂ ಚ ಪ್ರವೃತ್ತಾ' ಎಂದು ಮುಂದೆ ನೀರಿನಲ್ಲಿ ಬೀಳಲು ಬಯಸಿದ ಸ್ಥಿತಿ, ಮಾರೀಚಾಶ್ರಮದಲ್ಲಿ ಪುನಸ್ಸಮಾಗಮ ಉಂಟಾದುದು ಇವನ್ನು ವೈವಿಧ್ಯದಲ್ಲಿ ಕಾಣಬಹುದಾಗಿತ್ತು. ಅವರು ಎಂದಾದರೂ ಆ ಪಾತ್ರವನ್ನು ವಹಿಸಿದ್ದರೊ ಇಲ್ಲವೊ ಕಾಣೆ. ನನಗಂತೂ ಅದೊಂದು ಅರಕೆಯೇ ಎಂಬ ಭಾವನೆ ಉಂಟುಮಾಡಿದೆ. ಆಸೆಗೆ ಮಿತಿ ಎಲ್ಲಿ?

ಈವರೆಗೂ ಹೇಳಿದ ಮಾತುಗಳು ಸಾಂಪ್ರದಾಯಿಕವಾದ್ದು; ನಾಟಕದ ವೃತ್ತಿ

ಸಂಸ್ಥೆಗಳವರು ಆಡುತ್ತಿದ್ದ ನಾಟಕಗಳ ವಿಚಾರ. ಆ ಕಾಲಕ್ಕಾಗಲೇ ನಾಟಕಕ್ಕೆ ಸಂಗೀತ ಬೇಕೆ? ಅದಿಲ್ಲದೆ ನಾಟಕವನ್ನು ಯಶಸ್ವಿಯಾಗಿ ಮಾಡುವುದು ಶಕ್ಯವಿಲ್ಲವೆ? – ಎಂಬ ಮಾತು ಎದ್ದಿತ್ತು. ಎ.ಡಿ.ಎ. ನಾಟಕಗಳಲ್ಲಿ ಸಂಗೀತ ಭಾಗವನ್ನು ಕಡಮೆ ಮಾಡಲು ಯತ್ನಿಸಿದ್ದರು. ಟಿ. ರಾಘವಾಚಾರಿ ಅವರು 'ಕನ್ಯಾಶುಲ್ಕಮು' ನಾಟಕವನ್ನಾಡಿ, ಸಾಮಾಜಿಕ ಸಮಯವನ್ನು ಕಾಣಿಸುವ ನಾಟಕ ಕ್ರಿಯೆಯನ್ನು ಸಂಗೀತದ ಸಂಪರ್ಕವಿಲ್ಲದೆ ಸಾಧಿಸಬಹುದು ಎಂಬುದನ್ನು ಕಾಣಿಸಿದ್ದರು. 'ಚಿತ್ರನಳೀಯಮು', 'ರಾಮದಾಸ್', 'ರಾಮರಾಜು' ಎಂಬ ನಾಟಕಗಳಲ್ಲಿ ರಾಘವಾಚಾರಿಯವರೇ ಹೆಚ್ಚು ಸಂಗೀತಕ್ಕೆ ಅವಕಾಶಕೊಡದೆ ಕೋಟಿನ ಒಂದು ಲೈನಿಂಗ್ ಇದ್ದ ಹಾಗೆ ರಾಗವನ್ನೊ ಛಂದಸ್ಸನ್ನೊ ಬಳಸಿ ಸೀಸ ಪದ್ಯಗಳನ್ನು ಹೇಳುತ್ತಿದ್ದುದುಂಟು. ಸಂಗೀತ ಪರಿಜ್ಞಾನ ಅವರಿಗೆ ಎಷ್ಟಿತ್ತೊ, ಆ ಕಂಠಕ್ಕೆ ತಯಾರಿಕೆ ಇದ್ದಿತೊ ಇಲ್ಲವೊ ನಾನರಿಯೆ. ಆದರೆ ಇತಿಹಾಸ ಪುರಾಣ ಕತೆಗಳನ್ನು ಆಡಬೇಕಾದಾಗ ವೇಷ–ಭೂಷ, ಮಾತಿನ ಒಂದು ಅತಿಶಯತೆ ಅಗತ್ಯವಾಗಿ, ಹಿಂದಿನ ಕಾಲದಿಂದ ಬಂದ ಸಾಹಿತ್ಯಕವೆನ್ನ ಬಹುದಾದ ವಾಕ್ಯರಚನೆ, ಉಚ್ಚಾರ ಬಳಸುತ್ತಿದ್ದರು. ನಾಟಕವನ್ನು ಭಿನ್ನರುಚಿಯ ಮನಸ್ಸುಗಳಿಗೆ 'ಏಕಂ ಸಮಾರಾಧನಂ' ಎಂಬಂತೆ ಬಳಸುವುದು ಮೊದಲಿನಿಂದಲೂ ಬಂದಿತ್ತು. ಶಾಕುಂತಲಾದಿ ಸಂಸ್ಕೃತ ನಾಟಕಗಳಲ್ಲಿ ಶ್ಲೋಕಗಳನ್ನು ಹೇಗೆ ಹೇಳುತ್ತಿದ್ದರೂ ಗೇಯಗಳನ್ನು ಹೇಗೆ ಹೇಳುತ್ತಿದ್ದರೊ ತೀರ್ಮಾನವಾಗಿ ಹೇಳುವಂತಿಲ್ಲ. ವರದಾಚಾರ್ಯರು ಸಾಹಿತ್ಯದಲ್ಲಿ, ಸಂಗೀತದಲ್ಲಿ ಎರಡರಲ್ಲಿಯೂ ಶಕ್ತರಾಗಿದ್ದುದರಿಂದ ಹಾಡುಗಾರಿಕೆಯ ಒಂದು ವಿಶೇಷ ಸಂಪತ್ತಿಯನ್ನೂಡಿ, ತಮ್ಮ ನಾಟಕಗಳಲ್ಲಿ ರಂಜನೆ ಸಾಧಿಸುತ್ತಿದ್ದರು. ತುಂಬಾ ಅಗತ್ಯ ಪ್ರಕರಣಗಳಲ್ಲಿ ಹತ್ತಾರು ಸಂಗತಿಗಳನ್ನು ಹಾಕಿ ಒಂದು ಪಲ್ಲವಿಯನ್ನು ಹಾಡಿರಬಹುದು. 'ಘನವಸಂತ', 'ಭಳಿರೆ–ಭಳಿರೆ', 'ಇಂದುವದನೆ', 'ನೀರಜಗಂಧಿಯ ಮುಖ ನೀರೇಜವನು', 'ಏನನೆಂಬೆ ನಾನು ಸಖಿನೆ', 'ಕೀರ ರಥದ ಮೇಲೆ ಕುಳಿತು, ರಾರಾಜಿಪಳೀ ಪರಿ' ಮುಂತಾದ ಹಾಡುಗಳಲ್ಲಿ ಬಳಸಿ, ಸನ್ನಿವೇಶವನ್ನು ತುಂಬುತ್ತಿದ್ದರು. ರಮಣೀಯತೆಗೆ ಅದು ಪೋಷಕವಾಗುತ್ತಿತ್ತು. ಹಾಗೆ ಹಾಡುತ್ತ ತಮಿಳು ನಾಟಕಗಳಲ್ಲಿ, ಪಾರ್ಸಿ ಕಂಪನಿಗಳಲ್ಲಿ, ಸಾಗ್ರ ಸಂಗೀತ ಮಂಡಲಿಗಳಲ್ಲಿ ಹಾಡುವಂತೆ, ಅದಕ್ಕೇ ಕೇವಲವಾಗಿ ಎಂಬಂತೆ, ಬೇರೆ ಮಾಡುತ್ತಿರಲಿಲ್ಲ. ನಾಟಕದ್ದೇ ಸಾವಯವ ಅಂಗವಾಗಿ ಚಲನ ಅಭಿನಯಗಳ ಮೂಲಕ ಆ ಸಮಯವನ್ನು ತುಂಬುತ್ತಿದ್ದರು. ಕಡೆಗೆ ಮಹಾರಾಜ ಕಂಪನಿಯಲ್ಲಿಯೂ ಹೆಚ್ಚಾಗಿ ಸಂಗೀತಗಾರರು ನಟರಾಗಿದ್ದುದರಿಂದ ಸಂಗೀತ ಗುಣಕ್ಕೆ ಹೆಚ್ಚು ವೇಳೆ ಪ್ರಾಶಸ್ತ್ಯ ಬರುತ್ತಿತ್ತು. ತಕ್ಕಮಟ್ಟಿಗೆ ರಾಗಜ್ಞಾನ, ಶ್ರಾವ್ಯವಾದ ಕಂಠ ಇದ್ದ ಇತರರು ಇಲ್ಲಿಯೂ ಹಾಡುತ್ತಿದ್ದರಾದರೂ ಅವುಗಳಿಗೆ ಹೋಗುವುದು ಅಪರೂಪವಾಗಿತ್ತು.

ವರದಾಚಾರ್ಯರು ೧೯೨೬ರಲ್ಲಿ ತೀರಿಕೊಂಡರು. ಆ ಮುಂಚೆ ಎರಡು ವರ್ಷಗಳ ಕಾಲ ಅವರಿಗೆ ರಂಗದ ಮೇಲೆ ಬಂದು ಪಾತ್ರಾಭಿನಯ ಮಾಡುವುದು ಕಷ್ಟವಾಗುತ್ತಿತ್ತು. ಅಪರೂಪಕ್ಕೆ ಅವರನ್ನು ರಂಗದ ಮೇಲೆ ಎಳೆದು ತಂದ ೧೯೨೩–೨೪ರ ಸಮಯದಲ್ಲಿ ಕೂಡ ಶೇಷಗಿರಿರಾಯರ ಹಾರ್ಮೋನಿಯಂ ವಾದನಕ್ಕೆ ತೂಗುವಂತೆ ಮಾತ್ರ ಹೊಂದಿಕೊಂಡು ಹಾಡುತ್ತಿದ್ದ ಶ್ರಮವನ್ನು ನಾನೇ ಕಂಡಿದ್ದೆ. ಆದರೆ, ಎಲ್ಲಿಯೇ ಆಗಲಿ, ರಸಭಂಗವಾಗುವಂತೆ ಅವರು ಹಾಡಿದ್ದಿಲ್ಲ. ಅಭಿನಯದಿಂದ ಆಗಲೂ ಪ್ರಕರಣ ಪೋಷಣೆ ಮಾಡುತ್ತಿದ್ದರು.

ಈ ಸಂಪ್ರದಾಯ ಮುರಿದು ಪ್ರಧಾನವಾಗಿ ಕೈಲಾಸಂ ಅವರ ಸಾಮಾಜಿಕ ನಗೆನಾಟಕಗಳು ಬಂದುವು. ಕೆಲವು ಕಾಲ ಮೈಸೂರು ಮಹಾರಾಜಾ ಕಾಲೇಜಿನ ಎನ್. ಎಸ್. ನಾರಾಯಣ ಶಾಸ್ತ್ರಿಗಳೂ ಕೈಲಾಸಂ ಅವರೂ ಬೇರೆಬೇರೆ ಬಗೆಯ ಸನ್ನಿವೇಶವನ್ನು ಒಬ್ಬರು ಪದ್ಯದಲ್ಲಿ, ಇನ್ನೊಬ್ಬರು ಗದ್ಯಹಾಸ್ಯಗಳಲ್ಲಿ ನಿರ್ವಹಿಸಿದರು. ಮುಂದೆ ಬಂದ ಆರ್. ಟಿ. ಕಂಪೆನಿಯ ಜನರಲ್ಲಿ ಕೆಲವರು ಲಕ್ಷ್ಮೀ ಥಿಯೇಟ್ರಿಕಲ್ ಕಂಪನಿಯ ಆಶ್ರಯದಲ್ಲಿ ಸೇರಿಕೊಂಡಿದ್ದರಾದರೂ ವರದಾಚಾರ್ಯರ ಶಿಷ್ಯರಲ್ಲಿ ಹೆಸರುಗೊಂಡಿದ್ದ ನಾಗೇಂದ್ರರಾಯರು, ಮರಿರಾಯರು, ಸ್ವಲ್ಪಮಟ್ಟಿಗೆ ಕಡೆಕಡೆಯ ಕಾಲದಲ್ಲಿ ಬಂದು ಆಚಾರ್ಯರ ಪಾತ್ರಗಳಾದ ಹಿರಣ್ಯಕಶಿಪು, ರಾವಣ ಮುಂತಾದ ಪಾತ್ರಗಳನ್ನು ನಿರ್ವಹಿಸಲು ಯತ್ನಿಸಿದ್ದ ನರಸಿಂಹಯ್ಯನವರು ಕೈಲಾಸಂರ ಹೊಸ ನಾಟಕದಲ್ಲಿ ಭಾಗವಹಿಸಲು ತೊಡಗಿದರು: ಬಹುಶಃ 'ಹೋಂ ರೂಲು' ನಾಟಕದಲ್ಲಿ ನಾಗೇಂದ್ರರಾಯರು ಲಾಯರ್ ಹೆಂಡತಿಯ ಪಾತ್ರ ವಹಿಸಿದ್ದರೆಂದು ಕಾಣುತ್ತದೆ. ಅದಕ್ಕಿಂತ ಹೆಚ್ಚಾಗಿ, ನಾಟಕದ ತಂತ್ರ ರಚನೆಯಲ್ಲಿಯೇ ಆಗಿನ ನನ್ನ ದೃಷ್ಟಿಯಲ್ಲಿ, ಹೊಸದಾದ್ದೊಂದು ರಚನೆ, ಸಂಭಾಷಣಾ ಶಿಲ್ಪ, ಸಾಮಾಜಿಕ ನಿಲವು ಕಾಣಿಸಿದ 'ಅಮ್ಮಾವ್ರ ಗಂಡ'ವನ್ನು ರಚಿಸಿದ ಕೈಲಾಸಂ ಇವರ ಕೈಯಲ್ಲಿ ಅದನ್ನು ಆಡಿಸಿದರು. ನಾಗೇಂದ್ರರಾಯರು ಅಮ್ಮಾವ್ರು, ಕೈಲಾಸಂ ಗಂಡ. ಅವರಿಗೆ ಎದುರು ದಂಪತಿಗಳಲ್ಲಿ ಗಂಡ ನರಸಿಂಹಯ್ಯ, ಹೆಂಡತಿ ಮರಿರಾವ್ ಪಾತ್ರಗಳನ್ನು ವಹಿಸಿದ್ದರು. ಮುಂದುವರಿದ ಹೆಂಡತಿ ಅಮ್ಮಾವ್ರು. ಹಳೆಯ ಕಾಲದ ಸಾಧು ಹೆಂಡತಿಯಂತೆ ಮರಿರಾಯರು ತಲೆತಗ್ಗಿಸಿ ನಡೆದು, ರಾಕ್ಷಸನಂಥ ಗಂಡನಿಗೆ ತಗ್ಗಿ ಬಗ್ಗಿ ಬಾಳುವೆ ನಡಸುತ್ತಿದ್ದವರು. ಈ ದೃಶ್ಯವನ್ನು ಈ ಇಬ್ಬರು ಈ ಸಂಸಾರಿಗಳ ಚಿತ್ರವನ್ನು ಬಹು ಚೆನ್ನಾಗಿ ನಿರ್ವಹಿಸಿದ್ದರು. 'The hand that rocks the cradle rules the world ಎಂದು ನೀವೇ ಹೇಳಿದ್ದರಲ್ಲವೆ? You rule the world for an hour. ನಾನು ಕ್ಲಬ್ಬಿಗೆ ಹೋಗಿಬರುತ್ತೇನೆ'ಂದು ಅಮ್ಮಾವ್ರು ಹೇಳಿ ಕೈಗೆ ಹೊಸ ಕಾಲದ ಬ್ಯಾಗ್ ಹಿಡಿದು ಹೋಗಲು, ಮಗುವನ್ನು ತೂಗುವ ಸಂದರ್ಭ ಗಂಡನ ಕೈಗೆ ಬರುತ್ತದೆ. ಇಂಥ ಹೆಂಗಸಿಗೂ ತನ್ನ ಗಂಡನಲ್ಲಿ ಪ್ರೀತಿ ಹೇಗೆ ಸಾಧ್ಯವಾಯಿತು ಎಂಬುದನ್ನು ಸುಮಾರು ಕಡೆಯ ದೃಶ್ಯದಲ್ಲಿ ಮಗು ಯಾರ ಹಾಗಿದೆ ಎಂಬುದನ್ನು ಕುರಿತು ಆದರದ ಮಾತುಗಳನ್ನಾಡುತ್ತ, ಗಂಡನು ಹಾಕಿಕೊಳ್ಳುತ್ತಿದ್ದ ಬಟ್ಟೆಗಳನ್ನು ನೋಡಿ ಸಹಿಸಲಾರದೆ, ಆತನಿಗೆ ಹೊಸ ನಯವಾದ ಉಡುಪನ್ನು ಹಾಕಿಸುವ ಅಮ್ಮಾವ್ರು ಪಾತ್ರವನ್ನು ರಾಯರು ತುಂಬಾ ಸಹಜವಾಗಿ ನಿರ್ವಹಿಸಿದರು ಎಂಬ ಚಿತ್ರ ಕಣ್ಣಿಗೆ ಕಟ್ಟಿದಂತಿದೆ. ಕತೆ ಸಾಮಾಜಿಕ – ದಿನ ಜೀವನಚಿತ್ರ. ಭಾಷೆ ಜನಸಾಮಾನ್ಯವಾಗಿ ನಡುಮಟ್ಟದವರ ಬದುಕಿನಲ್ಲಿ ಬಳಸುವಂಥದು. ಸಂಭಾಷಣೆ ನಾಡಾಡಿ ಸಂಸಾರದ್ದು. ವ್ಯಂಗ್ಯ, ದರ್ಪ, ಮಾತುಗಾರಿಕೆ, ಮೂದಲೆ, ಅಣಕ. ಸಂಭಾಷಣೆ ಎಲ್ಲ ಸಂಸಾರಗಳಲ್ಲಿ ಸ್ವಲ್ಪ ಇಂಗ್ಲಿಷ್ ಓದಿದ ನಮ್ಮ ಕಡೆಯವರಲ್ಲಿ ಬಳಕೆಯಾಗಿದ್ದು; ಅರ್ಧ ಕನ್ನಡ, ಅರ್ಧ ಇಂಗ್ಲಿಷ್. ತಮ್ಮ ಸ್ನೇಹಿತನ ಗಂಡ ಹೆಂಡತಿಯ ಮೇಲೆ ದಬ್ಬಾಳಿಕೆ ನಡಸಿ, ಅವಳನ್ನು ನೋಡುವುದಕ್ಕಾಗುವುದಿಲ್ಲ ಎಂಬ ಸ್ಥಿತಿಗೆ ತಂದುದನ್ನು ನೋಡಿ, ಆ ಗಂಡನನ್ನು ಎದುರಿಸುವ ಸನ್ನಿವೇಶದಲ್ಲಿ, ಆ ಗಂಡ 'What

do you mean?' ಎಂದಾಗ – 'ಮೀನಂತೆ ಮೀನು! ಯು ಮೊಸಳೆ' ಎಂಬ ಒಂದು ಭಾಗ ಎಷ್ಟು ಸಹಜವಾಗಿ ರಾಯರ ಬಾಯಲ್ಲಿ ಬಂತು ಎಂಬುದು ನೆನಪಿನಲ್ಲಿದೆ. ಹಾಗೆಯೇ ಬರ್ನಾರ್ಡ್‌ಷಾ ಅವರ Man and Superman ನಾಟಕದಲ್ಲಿ ಆನ್ – ಜಾನ್ ಟ್ಯಾನರ್ ನಡುವೆ ಬರುವ 'you crocodile, you boa–constrictor, you elephant' ಮುಂತಾದ ಮಾತುಗಳ ಸರಣಿಯನ್ನು ಕನ್ನಡಕ್ಕೆ ಹೊಸದಾಗಿ ತರುತ್ತಿದ್ದ ಸನ್ನಿವೇಶ ಅದು. ಸಾಮಾಜಿಕ ನಾಟಕದ, ಹಾಸ್ಯ ನಾಟಕದ ತಂತ್ರಗಳೇ ಬೇರೆ. ಸಂಗೀತ ನಾಟಕ ಸಾಂಪ್ರದಾಯಿಕ. ರೊಮ್ಯಾಂಟಿಕ್ ಅಥವಾ ಕ್ಲಾಸಿಕಲ್ ನಾಟಕ ಇವುಗಳಲ್ಲೇ ಬೆಳೆದು ಹೆಸರು ಪಡೆದ ರಾಯರು ಈ ದಿನಚರಿಯ ಜೀವನದ ವೇಷಭೂಷಣ, ಗೀತೆಗಳಿಲ್ಲದ ದಿನಚರಿಯ ಕೈಲಾಸಂ ನಾಟಕಗಳಿಗೆ ಕಳೆ ತಂದುಕೊಟ್ಟದ್ದು ಕ್ರಾಂತಿಕಾರಕವೆನ್ನುವಷ್ಟು ವಿಶಿಷ್ಟವಾದ ಮಾರ್ಪಾಡು.

ಆ ಕಾಲ ಮುಗಿಯಿತು. ಅವರೇ ಸ್ವಂತವಾಗಿ ಬರೆದ ನಾಟಕಗಳನ್ನು, ನಿರ್ದೇಶನಗಳನ್ನು, ಸುಬ್ಬಯ್ಯ ನಾಯ್ಡು ಅವರ ಜೊತೆಗೆ ನಡಸಿದ ನಾಟಕಗಳನ್ನು ಕುರಿತು ಇತರರು ಈಚೆಗೆ ಬರೆದಿದ್ದಾರೆ. ಅದನ್ನು ನಾನು ಹೆಚ್ಚಾಗಿ ನೋಡಿಲ್ಲ. ಒಂದೇ ಒಂದು ಸಲ ಬಳ್ಳಾರಿಗೆ ಎಂದೊ ಹೋಗಿದ್ದಾಗ ಅವರಿಬ್ಬರೂ ಪಾತ್ರವಹಿಸಿದ್ದ ಒಂದು ನಾಟಕವನ್ನು ಅರ್ಧಗಂಟೆ, ಒಂದು ಗಂಟೆ ನೋಡಿದ್ದೇನೆ. ರಂಗವ್ಯವಸ್ಥೆ, ಸಂಗೀತ, ದೀಪಬಳಕೆಗಳ ಏರ್ಪಾಡು, ವೇಷಭೂಷಣಗಳ ಸಜ್ಜು ಇವು ಹಿಂದಿನ ಕಾಲಕ್ಕಿಂತ ಚೆನ್ನಾಗಿ ಇದ್ದವು. ವ್ಯವಸ್ಥೆ ಚೆನ್ನಾಗಿತ್ತು ಎಂದಷ್ಟು ಮಾತ್ರ ಹೇಳಬಲ್ಲೆ. ಮುಂದೆ ಚಲನಚಿತ್ರಗಳಲ್ಲಿ, ವಾಕ್ ಚಿತ್ರಗಳಲ್ಲಿ ಎಷ್ಟೊ ಬಗೆಯ ಪಾತ್ರ ಸಾಧನೆಗಳನ್ನು ಸಿನೆಮಾ ಪ್ರಪಂಚದಲ್ಲಿ ಮಾಡಿ ಕೀರ್ತಿಪಡೆದಿದ್ದಾರೆಂಬುದೂ ನಾನು ಕೇಳಿರುವ ಸಂಗತಿ. ಅವರ ಮಕ್ಕಳೂ ಇದೇ ಪ್ರಪಂಚದಲ್ಲಿ ಒಬ್ಬೊಬ್ಬರು ಒಂದೊಂದು ರೀತಿಯಲ್ಲಿ ಹೆಸರು ಪಡೆದಿದ್ದಾರೆ.

ಈಗ ರಾಯರು ತೀರಿಕೊಂಡಿದ್ದಾರೆ. ಅವರೊಡನೆ ಅರವತ್ತುನಾಲ್ಕು ವರ್ಷಕ್ಕೆ ಹಿಂದೆ ನೋಡಲಾದ ನೆನಪುಗಳೂ ಹೀಗೆ ಕೊನೆಗೊಳ್ಳುತ್ತಿವೆ. ಒಂದೆರಡು ಹೊಸ ಕಂಪನಿಗಳ ಯಜಮಾನರಾಗಿ, ಹೊಸ ರಂಗಸಜ್ಜು ಇತ್ಯಾದಿಗಳ ನಿರ್ಮಾಣಕಾರರಾಗಿ, ಚಲನಚಿತ್ರ ನಿರ್ದೇಶಕರಾಗಿ, ಆ ಕಲೆಯ ಆಚಾರ್ಯರಾಗಿ, ಬಹುಜನಪ್ರಿಯರಾಗಿ, ಇದ್ದಲ್ಲೆಲ್ಲ, ಹೋದಲ್ಲೆಲ್ಲ ಗೌರವವನ್ನು ಕೀರ್ತಿಯನ್ನು ಸಂಪಾದಿಸಿ, ಸಜ್ಜನ ಎನಿಸಿಕೊಂಡು ಬದುಕಿದ ಬಾಳು ಪಾರ್ಥಿವ ಶರೀರವನ್ನು ತ್ಯಜಿಸಿತು. ಅವರ ಹೆಸರಿಗೆ ಸ್ಮಾರಕಗಳು ಏರ್ಪಡಲಿವೆಯೆಂದು ಪತ್ರಿಕೆಗಳಲ್ಲಿ ಓದಿದ್ದೇನೆ. ಅದರ ಜೊತೆಗೆ ಅವರನ್ನು ನಂಬಿ ಯಾರಿದ್ದರೊ, ದೃಢನಿಷ್ಠೆಯಿಂದ ಸುಖದಲ್ಲಿ ಹೇಗೊ ಕಷ್ಟದಲ್ಲಿಯೂ ಹಾಗೆಯೇ ಅವರ ಜೀವನಕ್ಕೆ ಅಂಟಿಕೊಂಡಿದ್ದರೊ ಅವರಿಗೆ ತಕ್ಕಮಟ್ಟಿಗಾದರೂ ಅನುಕೂಲಗಳನ್ನು ಒದಗಿಸಿಕೊಡುವ ಔದಾರ್ಯ ಕನ್ನಡ ಜನಕ್ಕೆ ಸಾಧ್ಯವಾಗಲಿ ಎಂದು ಹಾರೈಸುತ್ತೇನೆ.

ಪಡುಕೋಣೆ ದಂಪತಿಗಳು

ಸುಮಾರು ೧೯೨೯ರಲ್ಲಿ ಕಾರಂತರ ಕರೆಯ ಮೇರೆ ನಾನು ಪುತ್ತೂರಿಗೆ ಮೊದಲ ಬಾರಿಗೆ ಹೋದೆ. ಕಾರಂತರಿನ್ನೂ ಆಗ ಪೂರ್ತಿ ಕಾದಂಬರಿಕಾರರಾಗಿರಲಿಲ್ಲ. ಒಂದೆರಡು ನಾಟಕಗಳನ್ನು ಬರೆದಾಗಿತ್ತು. ಬೇಕಾದಷ್ಟು ಸಣ್ಣ ದೊಡ್ಡ ವ್ಯಕ್ತಿಚಿತ್ರಗಳನ್ನು ಬರೆದಿದ್ದರು. ಲೋಕವಿಮರ್ಶೆ, ಕಲಾವಿಮರ್ಶೆಗಳನ್ನು ಮಾಡಿದ್ದರು. 'ವಸಂತ' ಪತ್ರಿಕೆಯನ್ನು ನಡಸಿದ್ದರು. ಭಾರತವನ್ನೆಲ್ಲ ಸುತ್ತಿ ಈ ದೇಶದ ಕಲೆ, ಮುಖ್ಯವಾಗಿ ಚಿತ್ರ, ಶಿಲ್ಪ, ವಾಸ್ತುಶಿಲ್ಪ ಪ್ರತಿಫಲಿಸುವಂಥ ಛಾಯಾಚಿತ್ರಗಳನ್ನು ತಂದಿದ್ದರು. ಅವುಗಳಲ್ಲಿ ಕಾಣುವುದಕ್ಕಿಂತ ಮೊನೆಯಲ್ಲಿ ಕಳಿಯಲ್ಲಿ ಅವು ಅವರ ಮನಸ್ಸಿನಲ್ಲಿ ಇದ್ದುವು. ಅವರ ಎರಡು ಲಕ್ಷಣಗಳು ಪರಸ್ಪರ ವಿರುದ್ಧವೆಂಬಂತೆ ಕಾಣುತ್ತಿದ್ದವು. ಮಾತಿನ ಚುರುಕಿನ ಜೊತೆಗೆ ಚುಚ್ಚು, ಎರಡರ್ಥ ಮೂರರ್ಥ ಕೊಡುವಂತೆ ಮಾತಿಗೆ ಉತ್ತರವಾಗಿ ಮಾತು, ಅರ್ಥವತ್ತಾದ ಬೇಷ್ಟೆ. ಮಾತು ಸ್ವಲ್ಪ ಹೆಚ್ಚೇನೊ ಎನಿಸಿತ್ತು ಆ ಕಾಲದಲ್ಲಿ. ಇನ್ನೊಂದು: ಎಷ್ಟು ಹೊತ್ತೆಂದರೆ ಅಷ್ಟು ಹೊತ್ತು ಮೌನವಾಗಿ ದುಡಿವ, ಹತ್ತು ಜನರನ್ನು ಸೇರಿಸಿ ದುಡಿಸುವ ಪ್ರವೃತ್ತಿ. ಈ ಎರಡೂ ಗುಣಗಳು ಒಬ್ಬರಲ್ಲಿ ಸೇರುವುದು ಅಪರೂಪ. ಇನ್ನೂ ಎಷ್ಟೊ ಪದರಗಳು, ಮಟ್ಟಗಳು ಅವರ ಜೀವದ ಆಳದಲ್ಲಿ ಹೊರಹೊಮ್ಮಬೇಕಾಗಿತ್ತು. ಈ ನಲವತ್ತು ವರ್ಷಗಳು ಅವಕ್ಕೆ ಹೊಮ್ಮುಗೆ ಕೊಟ್ಟಿವೆ. ಬೆಂಗಳೂರಲ್ಲಿ ನಾನು ಅವರನ್ನು ಕಂಡು ಅವರ ಬಗೆಗೆ ಒಲಿದು ಅವರು ನನ್ನನ್ನು ಆಹ್ವಾನಿಸಿದ್ದರು. ಪುತ್ತೂರಿನಿಂದ ಕೆಲವು ಮೈಲಿ ದೂರದ ಸುಬ್ರಹ್ಮಣ್ಯಕ್ಕೆ ಹೋಗುವ ರಸ್ತೆಯಲ್ಲಿ ಬೆಳ್ಳಾರೆ ಎಂಬ ಸ್ಥಳದಲ್ಲಿ ಒಂದು ಸ್ವಯಂಸೇವಕ ತಂಡದ ಶಿಕ್ಷಣ ಶಿಬಿರವನ್ನು ನಡಸುತ್ತಿದ್ದರು. ಒಪ್ಪೊತ್ತು ಅಲ್ಲಿಗೆ ಬಂದು ಸಾಹಿತ್ಯವನ್ನು ಕುರಿತು ಒಂದು ಭಾಷಣ ಮಾಡಬೇಕೆಂದು ಕರೆದಿದ್ದರು. ಬೆಳಗ್ಗೆ ಮೈಸೂರಿಂದ ಬಸ್ಸಲ್ಲಿ ಹೊರಟವನು ಸುಮಾರು ಮೂರುವರೆ ನಾಲ್ಕರ ಹೊತ್ತಿಗೆ ಪುತ್ತೂರನ್ನು ಸೇರಿದೆ. ಬಸ್‌ಸ್ಟಾಂಡಲ್ಲಿ ಯಾರಾದರೂ ಬಂದಿರಬಹುದೆಂದು ಇಳಿದೆ. ಕೂಡಲೆ ಒಬ್ಬರು ಬಂದು 'ನೀವು ಇಂಥವರಲ್ಲವೆ?' ಎಂದು ಕೇಳಿ, ಪ್ರೆಸಿಡೆಂಟರು ನಿಮ್ಮನ್ನು ಕರೆತರಹೇಳಿದ್ದಾರೆ ಎಂದು ಹೇಳಿ, ನನ್ನ ಹಾಸಿಗೆ ಪೆಟ್ಟಿಗೆ ತೆಗೆದುಕೊಳ್ಳಲು ಇನ್ನೊಬ್ಬರಿಗೆ ಹೇಳಿ, ನನ್ನನ್ನು ಮೊಳಹಳ್ಳಿ ಶಿವರಾಯರ ಮನೆಗೆ ಒಯ್ದರು. ಶಿವರಾಯರೇ ಆ ತಾಲೂಕು ಬೋರ್ಡ್ ಅಧ್ಯಕ್ಷರು ಎಂದು ನನಗೆ ತಿಳಿದಿರಲಿಲ್ಲ. ಅದರ ಸುಳಿವನ್ನು ಕಾರಂತರೂ ನನಗೆ ಕೊಟ್ಟಿರಲಿಲ್ಲ. ಅವರು ಕಾರ್ಯ ನಡಸುವ ರೀತಿಯೇ ಹಾಗೆ. ಅದು ನಡೆಯುತ್ತದೆಂದು ಗೊತ್ತಿರುವುದರಿಂದ ಅದರ ವ್ಯವಸ್ಥೆಯನ್ನು ಮಾಡಿಟ್ಟಿರುವುದು ಅವರ ರೀತಿ.

ರಸ್ತೆಯ ಎಡಗಡೆ ಮನೆ. ಹೊರಗೆ ಒಂದು ಬಾಗಿಲು ಮಾತ್ರ. ಅದನ್ನು ಇಳಿದ ಕೂಡಲೆ ದೊಡ್ಡ ಅಂಗಳ. ಅಲ್ಲಿ ಎದುರಿಗೆ ಎಡಕ್ಕೆ ರಾಯರ ವಾಸದ ಮನೆ. ಬಲ ಭಾಗಕ್ಕೆ ರಾಯರ ಲಾಯರ್ ಆಫೀಸ್ ಇತ್ಯಾದಿ....ಬಾಗಿಲಲ್ಲಿ ನಿಂತಿದ್ದ ರಾಯರು ನನಗೆ ಸ್ವಾಗತ

ಕೊಟ್ಟರು. 'ಕಾರಂತರು ಇಲ್ಲಿಲ್ಲ. ಬೆಳ್ಳಾರಿಯಲ್ಲಿದ್ದಾರೆ. ಇಲ್ಲಿ ದೇವು ಆರಿಸಿಕೊಂಡು ಸಂಜೆ ಅಲ್ಲಿಗೆ ಹೋಗುವಿರಂತೆ. ವಿರ್ಪಾಡು ಮಾಡಿದ್ದೇನೆ' ಎಂದರು. ಆ ಕಡೆಯ ಪದ್ಧತಿಯಂತೆ ಅರ್ಘ್ಯಪಾದ್ಯ ಮುಗಿದಮೇಲೆ ಮೂರುನಾಲ್ಕು ಬಗೆಯ ತಿಂಡಿಯ ಸಾಮಾನನ್ನು ಕೊಟ್ಟು ಒಂದು ತಂಬಿಗೆಯ ತುಂಬ ಕಾಫಿಯಿಟ್ಟು ಕಪ್ಪು ಸಾಸರು ಮುಂದಿಟ್ಟರು. ರಾಯರ ಶ್ರೀಮತಿಯವರು ಕಾಯಿಲೆಯಲ್ಲಿದ್ದರು. ನನಗೆ ಉಪಚಾರ ನಡೆಸಿದವರು ಇಬ್ಬರು ಹೆಣ್ಣುಮಕ್ಕಳು; ಅಕ್ಕತಂಗಿಯರು; ರಾಯರ ದೊಡ್ಡ ಮಗಳು ಪಡುಕೋಣೆ ಸೀತಾದೇವಿ; ಮೂರನೆಯ ಅಥವಾ ಕಡೆಯ ಮಗಳು ಆಗ ಕುಮಾರಿ ವರದಾಬಾಯಿ. ಸ್ವಲ್ಪ ಹೊತ್ತಿನಲ್ಲಿಯೇ ಸೀತಾದೇವಿಯವರ ಯಜಮಾನರು ಎಲ್ಲಿಯೊ ಹೋಗಿದ್ದವರು ಬಂದು ಸೇರಿಕೊಂಡರು. ಕೋಟು ರುಮಾಲು ವೇಷದ ಸಂಸ್ಕಾರವುಳ್ಳ ಮೈಸೂರ ಪ್ರತಿನಿಧಿ ನಾನು; ಅರ್ಧತೋಳಿನ ಗಾಂಧೀ ಷರ್ಟ್ ಹಾಕಿ ಮೊಣಕಾಲಿನಿಂದ ಸ್ವಲ್ಪ ಮಾತ್ರ ಕೆಳಕ್ಕೆ ಪಂಚೆ ಉಟ್ಟಿದ್ದವರು ಶಿವರಾಯರು. ಶಿವರಾಯರ ಅಳಿಯ ರಮಾನಂದರಾಯರು ಉದ್ದವಾದ ಷರ್ಟ್ ತೊಟ್ಟು ಮಿಲ್ ಪಂಚೆ ಉಟ್ಟಿದ್ದವರು. ಶಿವರಾಯರು ಅಪ್ಪಟ ಖಾದಿ. ರಮಾನಂದರಾಯರು ನಮ್ಮ ಹಾಗೆ. ರಮಾನಂದರಾಯರ ಮುಖಪರಿಚಯ ಎಲ್ಲಿಯೊ ಇದ್ದಹಾಗೆ ಇತ್ತು. ಬೆಂಗಳೂರಿಗೆ ಹಿಂದಿರುಗಿದ ಮೇಲೆ ಗೊತ್ತಾಯಿತು: ಮಂಗಳೂರಲ್ಲಿ – ೧೯೨೬ರಲ್ಲಿ ಕನ್ನಡ ಸಾಹಿತ್ಯ ಪರಿಷತ್ ಸಮ್ಮೇಳನ ಎಂದು ಕಾಣುತ್ತದೆ – ತೆಗೆದ ಒಂದು ಚಿತ್ರದಲ್ಲಿ ಅವರು ಪಟ್ಟೆ ಉತ್ತರೀಯವನ್ನು ಹಾಕಿಕೊಂಡು ಮುಂದೆ ಬೆತ್ತ ಇಟ್ಟುಕೊಂಡು ಕುಳಿತ ಒಂದು ಗುಂಪಿನಲ್ಲಿದ್ದರು. ಆಗ ನಮನಮಗೆ ಪರಿಚಯ ಇರಲಿಲ್ಲ. ಅವರು ಹೆಚ್ಚು ಮಾತಿನವರಲ್ಲ. ಆಡಿದ ಮಾತು ಮನೆಯ ಮಾತಾಗದಿದ್ದರೂ ತಡೆತಡೆದು ಮಾತಾಡುವಂತಿದ್ದರೂ ಕನ್ನಡ ನುಡಿದು ಬಳಕೆಯಾದವರ ಮಾತು. ಅವರ ಮನೆಯ ಮಾತು ಕೊಂಕಣಿ. ಅವರು ಚಿತ್ರಾಪುರದ ಮಠಕ್ಕೆ ಸೇರಿದ ಸಾರಸ್ವತರು. ಸೀತಾದೇವಿ ತುಂಬ ಧಾರಾಳವಾಗಿ ಮಾತನಾಡಬಲ್ಲವರು. ಕನ್ನಡ ಆ ಜನರ ಬಾಯಲ್ಲಿ ಎಷ್ಟು ಸೊಗಸಾಗಿ ಬರಬಹುದೊ ಅಷ್ಟು ಸೊಗಸಾಗಿ ಬರುತ್ತಿತ್ತು. ಎಲ್ಲರೂ ಸ್ವಲ್ಪ ಮಾತುಗಳನ್ನು ಎಳೆದು ಇತರ ಕನ್ನಡ ಭಾಗಗಳವರು ಬಳಸದ ಬೇರೆ ಬಗೆಯ ಸ್ವರಘಾತಗಳನ್ನು, ದೀರ್ಘಗಳನ್ನು ಬಳಸುವವರು. ತಾಯ್ನುಡಿಯಾದ ಕೊಂಕಣಿ ಆಡುವುದರಲ್ಲಿಯೂ ಹಾಗೇ. ಗೌಡಸಾರಸ್ವತರು ನುಡಿವ ರೀತಿ ಸ್ವಲ್ಪ ಬೇರೆ. ಅವರ ವ್ಯವಹಾರ ಲೇವಾದೇವಿ, ಪೇಟೆವ್ಯವಹಾರ – ಸಾಗಣೆ ಇತ್ಯಾದಿ ವ್ಯವಹಾರ ವರ್ಗಕ್ಕೆ ತಕ್ಕಂತೆ ಇವರು ಸುಮಾರು Liberal Professions ಎಂಬಂತೆ ಸರ್ಕಾರಿ ನೌಕರಿ, ಲಾಯರು, ಎಂಜನೀಯರು, ಡಾಕ್ಟರು, ಆಡಳಿತ, ಕಲೆ ಸಾಹಿತ್ಯಗಳಲ್ಲಿ ತೊಡಗಿದವರು. ಮಾತು ವಿಲಾಸದ್ದು, ನೇವಣದಿಂದ ಒಲಿಸುವಂಥದ್ದು. ವರದಾಬಾಯಿ ಹೆಚ್ಚು ಮಾತನಾಡುವವರಲ್ಲ. ಆಕೆ ಆ ಸುಮಾರಲ್ಲಿ ಮಂಗಳೂರಲ್ಲಿ ಇಂಟರ್‌ಮೀಡಿಯೆಟ್ ವ್ಯಾಸಂಗ ಮಾಡುತ್ತಿದ್ದರಂತೆ; ಉತ್ತರ ಕಾಲದಲ್ಲಿ ಬಿ.ಎಸ್‌ಸಿ. (ಆನರ್ಸ್) ಮಾಡಿಕೊಂಡು ಕಾಲೆಜ್ ಯೂನಿಯನ್‌ನ ಅಧ್ಯಕ್ಷರೂ ಕೂಡ ಆಗಿದ್ದರಂತೆ.

ಅದೂ ಇದೂ ಮಾತನಾಡುತ್ತಿದ್ದಾಗ ಇವರಿಗೆ ಕನ್ನಡ ಸಾಹಿತ್ಯದಲ್ಲಿ ತುಂಬಾ ಅಭಿರುಚಿ ಎಂದೂ ಇಂಗ್ಲಿಷ್–ಕನ್ನಡ ನಾಟಕಪ್ರಯೋಗದಲ್ಲಿ ಅನೇಕವನ್ನು ರಂಗಸ್ಥಳಕ್ಕೆ

ತುಂಬಿದ್ದರೆಂದೂ ತಿಳಿಯಿತು. ಶಿವರಾಯರ ದೊಡ್ಡ ಮಗ ಗಣೇಶರಾಯರು ಮದರಾಸಲ್ಲಿಯೊ ಬೊಂಬಾಯಲ್ಲಿಯೊ ವಿದೇಶಿ ಸುಂಕ ಕಚೇರಿಯಲ್ಲಿ ಕೆಲಸ ಮಾಡುತ್ತಿದ್ದರು. ಎರಡನೆಯವರು ಸಂಜೀವರಾಯರು; ರಸಾಯನಶಾಸ್ತ್ರದಲ್ಲಿ ಎಂ.ಎಸ್ಸಿ. ಮಾಡಿದ್ದರು. ಮಾತು ಎಂದರೆ ಮಾತು ಆಡುವವರು. ಅವರು ಮಾತನಾಡಲು ತೊಡಗಿದರೆ ಇನ್ನಾರೂ ಮಾತನಾಡಲು ಅವಕಾಶ ಇಲ್ಲದಂತೆ ಆಡಬಲ್ಲವರು; ಆದರೆ ಜಾಣವಾಗಿ, ವಿಷಯ ತಿಳಿದು; ಇಂಗ್ಲಿಷ್ ಆಗಲಿ, ಕನ್ನಡವಾಗಲಿ ಹಾಗೇ. ಮೂರನೆಯವರು ಶ್ರೀ ಮುಕುಂದರಾವ್ – ಈವರೆಗೂ ಭೀಷ್ಮರಂತೆ ಬ್ರಹ್ಮಚಾರಿಯಾಗಿಯೇ ಇರುವವರು. May & Baker ಅಲ್ಲಿ ಕೆಲಸ ಮಾಡಿ ಬಹುಶಃ ಈಗ ಉಲ್ಲಾಳದಲ್ಲಿದ್ದಾರೆ. ಹೆಚ್ಚು ಮಾತಿಲ್ಲ; ಆದರೆ ಕಲೆಯಲ್ಲಿ –ವಿಶೇಷವಾಗಿ ಸಂಗೀತ –ವಿಶ್ವಾಸವುಳ್ಳವರು. ಉತ್ತರ ಕಾಲದಲ್ಲಿ ಮುಕುಂದರಾಯರು ಪಂಜೆ ಮಂಗೇಶರಾಯರ ಕಡೆಯ ಮಗ ರಾಮರಾಯರು –ಇವರೂ ಎಂ.ಎಸ್ಸಿ. ಮಾಡಿಕೊಂಡು ಲಕ್ನೊ ನಗರದಲ್ಲಿ Sugar Technology ಇಲಾಖೆಯಲ್ಲಿ ಮುಖ್ಯನಿರ್ದೇಶಕರಾಗಿದ್ದು ವಿಶ್ರಾಂತರಾಗಿ, ಈಗ್ಗೆ ಕೆಲವು ವರ್ಷಗಳ ಹಿಂದೆ ಬಸ್ ಅಪಘಾತ ಒಂದರಲ್ಲಿ ತೀರಿಕೊಂಡರು –ಇಬ್ಬರೂ ಅನೇಕ ಪಾಶ್ಚಿಮಾತ್ಯ ಹಾಡುಗಳನ್ನು ಹಾಡಬಲ್ಲರು. ಇತ್ತ ಹೆಣ್ಣುಮಕ್ಕಳಲ್ಲಿ, ಸೀತಾದೇವಿಯವರ ತಂಗಿ ಶಾರದಾಬಾಯಿ ಒಬ್ಬ ಇನ್‌ಷೂರೆನ್ಸ್ ಅಧಿಕಾರಿಯ ಮಡದಿಯಾಗಿ ಬಹುಶಃ ಬರ್ಮಾದಲ್ಲಿದ್ದು ಸ್ವಲ್ಪದರಲ್ಲಿಯೇ ಭಾರತಕ್ಕೆ ಹಿಂದಿರುಗುವವರಾಗಿದ್ದರು. ವರದಾಬಾಯಿಯವರಿಗೆ ಆಗ್ಗೆ ವಿವಾಹವಾಗಿರಲಿಲ್ಲ.

ರಮಾನಂದ್–ಸೀತಾಬಾಯಿ ತುಂಬಾ ಪ್ರೀತಿಯ ದಂಪತಿಗಳು. ಆ ಮನೆಯಲ್ಲಿ ಎಲ್ಲರಿಗೂ ಇರುತ್ತಿದ್ದ ಧಾರಾಳ ಅಪರಿಚಿತನಾಗಿ ಆಗ ತಾನೇ ಹೊರಗಿನಿಂದ ಹೋಗಿದ್ದ, ಅಷ್ಟೇನೂ ದಾಷ್ಟಿಕವಿಲ್ಲದ, ಸುಲಭವಾಗಿ ಸ್ನೇಹಸಂಬಂಧಗಳನ್ನು ಬೆಳಸಲಾರದವನೆಂದುಕೊಂಡಿದ್ದ ನನ್ನಂಥವನನ್ನು, ಹತ್ತಾರು ವರ್ಷಗಳ ಸುಪರಿಚಿತ ಬಂಧುವಿನಂತೆ ಮಾಡಿಕೊಳ್ಳಬಲ್ಲವರು. ಒಂದು ಸಂಗತಿ ನನ್ನನ್ನು ಇನ್ನಷ್ಟು ಅವರ ಕಡೆಗೆಳೆಯಿತು. ಗಂಡ ಹೆಂಡಿರಿಬ್ಬರೂ ಸಿ. ಕೆ. ವೆಂಕಟರಾಮಯ್ಯನವರ ಮಂಡೋದರಿ ನಾಟಕದಲ್ಲಿ ರಾಯರು ರಾವಣನಾಗಿ, ಸೀತಾದೇವಿ ಮಂಡೋದರಿಯಾಗಿ, ವರದಾಬಾಯಿ ಸೀತೆಯಾಗಿ ಪಾತ್ರವಹಿಸಿದ್ದರಂತೆ. ಸ್ವಲ್ಪ ಕಷ್ಟದ ಪಾತ್ರಗಳೇ. ಹಾಗೆಯೇ ನನ್ನ 'ಸೊಹ್ರಾಬ್–ರುಸ್ತುಂ' ನಾಟಕವನ್ನಾಡಿ, ರಮಾನಂದರಾಯರು ರುಸ್ತುಂ ಆಗಿ, ಸೀತಾದೇವಿ ತಾಹಮೀನೆ ಆಗಿ, ಇನ್ನೊಂದು ಸಣ್ಣ ಪಾತ್ರವನ್ನು ವರದಾಬಾಯಿ ಮಾಡಿದ್ದರೆಂದೂ ಗೊತ್ತಾಯಿತು. ಮಮತೆಯ ಸೆಲೆಗಳು ಸುಲಭವಾಗಿ ಆರಂಭವಾಗಿ ವಿಶ್ವಾಸವನ್ನು ಸ್ನೇಹದ, ಪ್ರೀತಿಯ, ಗೌರವದ ಕಟ್ಟುಗಳಾಗಿ ಮುಂದಿನ ಕಾಲದಲ್ಲಿ ಗಾಢವಾಗಿ ಬೆಳಸಿದವು. ಆ ಪ್ರೀತಿಗೆ ಕಾಣಿಕೆ ಸಲ್ಲಿಸುವುದಾದರೂ ಹೇಗೆ?

ಆ ದಿನ ಸಂಜೆ ನನ್ನನ್ನು ಬೆಳ್ಳಾರೆಗೆ ಕಳಿಸಿದರು. ಅಲ್ಲಿ ಕಾರಂತರು ನಡಸುತ್ತಿದ್ದ ಶಿಕ್ಷಣ ಶಿಬಿರದಲ್ಲಿ ಎಲ್ಲಾ ಶಿಸ್ತು. ಅಲ್ಲಿ ತಯಾರಾಗುವವರೆಲ್ಲ ಭಾರತ ಸ್ವಾತಂತ್ರ್ಯವನ್ನು ಸಾಧಿಸುವ ಎಷ್ಟೆಷ್ಟೊ ಕಾರ್ಯರಂಗಗಳಿಗೆ ಸಿದ್ಧವಾಗುವವರಂತೆ ಬೆಳಿಗ್ಗೆ, ಮಧ್ಯಾಹ್ನ, ಸಾಯಂಕಾಲ, ರಾತ್ರಿ ಕಟ್ಟುಪಾಡುಗಳಿಗೊಳಪಟ್ಟು ತಯಾರಾಗುತ್ತಿದ್ದರು. ಆ ಶಿಬಿರದಲ್ಲಿದ್ದ ಅನೇಕರು, ಆಮೇಲೆ ಕಾರಂತರೂ ಅವರ ಸ್ನೇಹಿತರೂ ಪುತ್ತೂರಲ್ಲಿ ನಡಸಿದ ೧೦–೧೨ ವರ್ಷಕಾಲದ 'ದಸರಾ'

ಮಹೋತ್ಸವದಲ್ಲಿ ಅವರ ನೆರವಿಗೆ ನಿಂತು ದುಡಿದರು. ಒಬ್ಬೊಬ್ಬರು ಒಂದೊಂದು ರೀತಿಯಲ್ಲಿ ವಿಶೇಷ ಯೋಗ್ಯತೆ ಗುಣ ಇದ್ದವರು. ಕಾರಂತರ ಅಪ್ಪಣೆ ಕಟ್ಟಪ್ಪಣೆ. ಅದನ್ನು ಮೀರದಂತೆ ಇವರು ಪ್ರೀತಿಯಿಂದ ಭಕ್ತಿಯಿಂದ ನಡಸಿಕೊಳ್ಳುತ್ತಿದ್ದರು. ಒಂದು ನಿಮಿಷದಲ್ಲಿ ಎಂಥ ಮಗುವನ್ನೂ ನಗಿಸಿ, ಆಡಿಸಿ ಬಳಕೆ ಮಾಡಿಕೊಳ್ಳಬಲ್ಲ ಸ್ವಭಾವವುಳ್ಳ ಕಾರಂತರ ಈ ನಿಯಮ ಶಾಸನ ಅವರ ಇನ್ನೊಂದು ಮುಖವನ್ನು ಕಾಣಿಸುತ್ತಿತ್ತು. ನಾಲ್ಕು ದಿವಸ ಊಟಕ್ಕೆ ಉಪ್ಪಿಲ್ಲ. ಎರಡು ದಿವಸ ತುಪ್ಪವಿಲ್ಲ. ಅಥವಾ ತರಕಾರಿಯಿಲ್ಲ. ಮಜ್ಜಿಗೆಯಿಲ್ಲ. ಹೀಗೆ ಭರತಖಂಡದ ಸೇವೆಗೆ ಅಗತ್ಯವಾಗುವಂಥ ಅನೇಕ ತ್ಯಾಗ, ಲೋಪ, ಅಭಾವಗಳ –ಇದು ನನ್ನ ನಾಡಿನ ಭಾಗ್ಯ! –ಅಭ್ಯಾಸವೇ ಇಲ್ಲಿ ಆಗುತ್ತಿತ್ತು. ಹಿಂದೆ ಪ್ರೀತಿ ಗೌರವಗಳಿದ್ದವಾಗಿ ಈ ಬಂಧ ಅನುರಾಗದ್ದು; ಪ್ರಿಯ. ಆ ಸಂಜೆ ನಾನು ಲಕ್ಷ್ಮೀಶನ ಜೈಮಿನಿ ಭಾರತದಲ್ಲಿ ಸೀತೆಯನ್ನು ರಾಮನು ಕಾಡಿಗಟ್ಟಿದ ಪ್ರಕರಣವನ್ನು ಕುರಿತು ಭಾಷಣ ಮಾಡಿ, ಅದರ ಮುಖ್ಯಿಭಾಗಗಳನ್ನು ಓದಿದೆ. ಅದಕ್ಕೂ ಶಿಬಿರಕ್ಕೂ ಏನು ಸಂಬಂಧವೊ ದೇವರಿಗೇ ಬೆಳ್ಳಂಬೆಳಗು. ಎರಡನೆಯ ಸಂಜೆ ಶಿವರಾಯರಿಂದ ಸುದ್ದಿ ಬಂತು. ನಾನು ಯಕ್ಷಗಾನದ ಆಟವನ್ನು ನೋಡುವ ಕುತೂಹಲವನ್ನು ತಿಳಿದು ಇಷ್ಟವಿದ್ದರೆ – ಮುಂದಿನ ರಾತ್ರಿಯೊ ಆ ರಾತ್ರಿಯೊ ನೆನಪಿಲ್ಲ – ಇಂಥ ಕಡೆ ಅದನ್ನು ನೋಡಬಹುದು, ಬೇಕೆನ್ನಿಸಿದರೆ ಅಲ್ಲಿಗೆ ಒಯ್ಯುವ ಏರ್ಪಾಡುಮಾಡುತ್ತೇನೆ ಎಂದು ಹೇಳಿಕಳಿಸಿದರು. ಮಾರನೆಯ ಬೆಳಗ್ಗೆ ಪುತ್ತೂರಿಗೆ ಹಿಂದಿರುಗಿ ರಾಯರ ಆತಿಥ್ಯವನ್ನು ಇನ್ನಷ್ಟು ಪಡೆದೆ. ನಿಮಗೆ ಶಿಬಿರದಲ್ಲಿ ಗಾಸಿಯಾಗಿರಬೇಕು. ಅವರ ವ್ರತ, ನೇಮ ನಿಮಗೆ ಎಲ್ಲಕ್ಕೂ ಸೊನ್ನೆ ಹಾಕಿರಬೇಕು. ಒಪ್ಪತ್ತು ನೆಮ್ಮದಿಯಾಗಿರಿ ಎಂದು ತುಂಬಾ ಉಪಚಾರ ಮಾಡಿದರು. ಹೆಚ್ಚು ಮಾತಿಲ್ಲದೆ ಮನೆಯ ಏರ್ಪಾಡು ಸಮಗ್ರವಾಗಿ ನಡೆಯುತ್ತಿತ್ತು. ಅವರಿಗೆ ಸಾಮಾಜಿಕ, ಆರ್ಥಿಕ ವಿಷಯಗಳಲ್ಲಿ ತುಂಬಿದ ಆಸಕ್ತಿ. ಸಹಕಾರ ಪ್ರಪಂಚದಲ್ಲಿ ಅವರ ಕೈವಾಡ, ಪ್ರಭಾವ ದೊಡ್ಡದು. ಪುತ್ತೂರು ತಾಲೂಕಿನಲ್ಲಿಯೂ, ಒಟ್ಟು ದಕ್ಷಿಣ ಕನ್ನಡ ಜಿಲ್ಲೆಯ ಸಹಕಾರದ ಬೆಳವಣಿಗೆಯ ದೃಷ್ಟಿಯಿಂದಲೂ ಅವರ ನಿಃಸ್ವಾರ್ಥಸೇವೆ, ಕ್ರಿಯಾವಿಚಕ್ಷಣೆ ಅತಿಶಯವಾದ್ದು. ಆ ದಿನ ರಾತ್ರಿ ನಾನು ಪುತ್ತೂರಿಂದ ಒಳವೂರಾದ ಮಿತ್ತೆನಡಕ ಎಂಬುದೊ ಏನೊ ಹೆಸರಾಗಿದ್ದ ಬಳಿಗೆ ಒಂದು ಲಾರಿಯ ಮುಂಭಾಗದ ಪೀಠದಲ್ಲಿ (ಕಸ್ತೂರಿಯವರ ಶೀಠ!) ಕುಳಿತು ಹೊರಟೆ. ಆ ದಿನ ಮಧ್ಯಾಹ್ನ ನನಗೆ ನಡೆದ ಉಪಚಾರದಲ್ಲಿ ಒಂದು ವಿಶೇಷ ನೆನಪಿಗೆ ಬರುತ್ತದೆ: ಬೆಳಗ್ಗೆ ಮಾತನಾಡುತ್ತಿದ್ದ ಹಾಗೆಯೇ ಕಾರಂತರು ಬೆಳ್ಳಾರೆಯ ಒಂದು ಕಡೆ ಎತ್ತರವಾಗಿ ಬೆಳೆದಿದ್ದ ಗೇರುಹಣ್ಣನ್ನು ಕಲ್ಲು ಹೊಡೆದು ಉದುರಿಸಿದ್ದು. ಎತ್ತರದಲ್ಲಿದ್ದ ಅದು ಇವರು ಒಂದು ಕಲ್ಲು ಎಸೆದದ್ದಕ್ಕೇ ಕೆಳಗೆ ಬಿತ್ತು. ಈ ಅಮೋಘ ಲಕ್ಷ್ಯಭೇದನವೂ ನನಗೆ ಕಾರಂತರಲ್ಲಿ ಮೆಚ್ಚುಗೆಯನ್ನುಂಟುಮಾಡಿತ್ತು. ಅದನ್ನು ಬೇರೆಡೆ ಹೇಳಿದ್ದೇನೆ. ಮಧ್ಯಾಹ್ನ ಮೂರು ಗಂಟೆಯ ಕಾಫೀ ಕುಡಿಯುವ ಹೊತ್ತಿಗೆ ರಮಾನಂದರಾಯರು ಇಪ್ಪತ್ತು ಹಸಿಯ ಗೇರುಬಿತ್ತವನ್ನು ತಂದು, ಒಂದು ತಟ್ಟೆಯ ನೀರಿನಲ್ಲಿ ಹಾಕಿದ್ದ ಅವುಗಳನ್ನು ಒಂದೊಂದಾಗಿ ಸಿಪ್ಪೆ ಸುಲಿದು ತಿನ್ನಲು ಕೊಟ್ಟರು. ನನಗೆ ಮೊದಲು ಹೇಗೊ ಏನೊ ಎಂದಿತ್ತು. ಆದರೆ ಬಾಯಲ್ಲಿ ಹಾಕಿದ್ದು ತುಂಬ ರುಚಿಯಾಗಿದ್ದುದರಿಂದ ಸಂಕೋಚಗಳನ್ನು ನುಂಗಿಕೊಂಡು ಅವನ್ನು ತಿಂದು ಮುಗಿಸಿದೆ. ಆ ರುಚಿ ಇನ್ನೂ ನಾಲಿಗೆಯ ಮೇಲಿದೆ.

ರಾತ್ರಿ ನಿಮಗೆ ಅಲ್ಲೇ ಊಟ ಎಂದು ಶಿವರಾಯರು ಮಿತ್ತೆನಡಕಕ್ಕೆ ಹೋಗುವಾಗ ಹೇಳಿದ್ದರು. ಅಲ್ಲಿಗೆ ಸುಮಾರು ಒಂಬತ್ತು ಗಂಟೆಯ ಹೊತ್ತಿಗೆ ಹೋದೆವು. ವೆಂಕಟರಮಣ ಭಟ್ಟ ಎಂಬುವವರ ಅಡಿಕೆತೋಟದ ಮನೆಯಲ್ಲಿ ನನ್ನನ್ನು ಇಳಿಸಿಕೊಂಡರು. ನನಗೆ ಹೊಸದಾಗಿ ಪುತ್ತೂರಿನಲ್ಲಿ ಕಾರಂತರ ಗೆಳೆಯರಾಗಿದ್ದ ಶ್ರೀ ಸಿ. ಎಸ್. ಶಾಸ್ತ್ರಿ ಅವರೂ ಅಲ್ಲಿಗೆ ಬಂದಿದ್ದರು. ಶಾಸ್ತ್ರಿಯವರ ತಂಗಿಯ ಗಂಡನೊ ಅಕ್ಕನ ಗಂಡನೊ ಭಟ್ಟರು. ಶಾಸ್ತ್ರಿಯವರೂ ಬೆಳ್ಳೆ ರಾಮಚಂದ್ರರಾಯರೂ ಸದಾಶಿವರಾಯರೂ ಎಲ್ಲರೂ ಪುತ್ತೂರಿನ ಗಣ್ಯಾಲಾಯರುಗಳು. ತುಂಬಾ ಬುದ್ಧಿವಂತರು. ಕೈತುಂಬ ಸಂಪಾದಿಸುತ್ತಿದ್ದರು. ಸದಾಶಿವರಾಯರು ಕಾರಂತರ ತಂಗಿಯ ಗಂಡ. ಬಹುದೊಡ್ಡ ಮಿತ್ರವರ್ಗ ಪುತ್ತೂರಿನದು. ಶಾಸ್ತ್ರಿಗಳು ಮಾತಿಗೆ ಮಾತು ಬಂದು ಶಿವರಾಯರ ಪ್ರಶಂಸೆ ಮಾಡಿದರು. ಒಂದು ಸಾವಿರ ರೂಪಾಯಿ ಫೀ ಕೊಟ್ಟು ಒಂದು ಕೇಸನ್ನು ತೆಗೆದುಕೊಳ್ಳುವ ಅವಕಾಶವಿದ್ದರೂ ಶಿವರಾಯರು ಅದಕ್ಕೆ ಒಪ್ಪಿಗೆ ಇಲ್ಲದವರಾದರೆ ಅಂಥ ಕೇಸನ್ನು ತಾನು ಮುಟ್ಟುವುದಿಲ್ಲ; ನಮಗೆ ಅವರ ದೊಡ್ಡತನದಲ್ಲಿ ಅಷ್ಟು ವಿಶ್ವಾಸ ಎಂದರು. ಆ ದಿನ ರಾತ್ರಿ ದೊಡ್ಡ ಮಳೆ ಬಂದುದರಿಂದ ಸುಮಾರು ಹತ್ತು-ಹತ್ತೂವರೆಗೆ ಆರಂಭವಾಗಬೇಕೆಂದಿದ್ದ ಯಕ್ಷಗಾನದ ಆಟ ನಡೆಯಲಿಲ್ಲ. ಮುಂದಿನ ವಾರಕ್ಕೆ ಮುಂದುವರಿಸಿದ್ದರು. ಬಹುಪ್ರಖ್ಯಾತರಾದ ಪಾತ್ರಧಾರಿಗಳು ಅಲ್ಲಿ ಭಾಗವಹಿಸುವವರಾಗಿದ್ದುದರಿಂದ ಶಿವರಾಯರು ನನಗೆ ಅದನ್ನು ಸಿಫಾರಸು ಮಾಡಿಕಳಿಸಿದ್ದರು. ದೊಡ್ಡ ಪಾತ್ರವನ್ನು ವಹಿಸುವವರು ಎಂದು ಕಾಣುತ್ತದೆ, ಬಾಳಿಗ ಎಂಬವರು ಭಟ್ಟರ ಮನೆಗೆ ಬಂದು ನನಗೆ ಈ ಸಂಗತಿಯನ್ನು ತಿಳಿಸುವುದಕ್ಕೆ ತುಂಬ ಸಂಕೋಚಪಟ್ಟುಕೊಂಡರು. ಶಿವರಾಯರು ತಮ್ಮನ್ನು ಇಲ್ಲಿಗೆ ಕಳಿಸಿದ ದಿವಸ ನಮಗೆ ಇದನ್ನು ಕೇಳಿಸಲು ಅವಕಾಶವಾಗದೆ ಹೋದುದಕ್ಕೆ ವಿಷಾದವಾಗಿದೆ ಎಂಬಂತೆ ನುಡಿದರು. ನನ್ನ ಮಾತು ಹಾಗಿರಲಿ, ಶಿವರಾಯರ ಪರವಾಗಿ ಆಡಿದ ಮಾತು ಎಷ್ಟು ಭಕ್ತಿಗೌರವಗಳಿಂದ ಕೂಡಿತ್ತು ಎಂಬುದರ ಅರಿವು ನನಗುಂಟಾಯಿತು. ಯಕ್ಷಗಾನದ ಆಟ ತಪ್ಪಿದರೇನು? ಬೆಂಗಳೂರಿಂದ ಬಂದ ಅತಿಥಿ, ತಮ್ಮ ಮಾನ್ಯ ಸ್ನೇಹಿತ ಶಿವರಾಯರು ಕಳಿಸಿದ ಜನ ಎಂದು ಆ ರಾತ್ರಿ ಯಕ್ಷಗಾನಕ್ಕೆ ಬದಲಾಗಿ ಪುತ್ತೂರು ಹವ್ಯಕರಿಗೇ ವಿಶೇಷವಾದ ಕಾಯಿಹುಳಿಯನ್ನು ಬಿಸಿಬಿಸಿಯಾಗಿ ಮಾಡಿ ಒಂದು 'ಪದಾರ್ಥ'ವಾಗಿ ಬಡಿಸಿದರು. ಒಂದೊಂದು ಕಡೆ ಅದಕ್ಕೆ ಒಂದೊಂದು ಹೆಸರಿದೆ. ಉತ್ತರ ಕನ್ನಡದಲ್ಲಿ ಪದಾರ್ಥ ಎನ್ನುವರು. ಇನ್ನೊಂದರಲ್ಲಿ ಮೇಲೋಗರ ಎನ್ನುವರು. ಅಲ್ಲಿನವರು ಅದನ್ನು ಮಾಡಿಸುವ ವಿಧಾನ, ಅದರ ರುಚಿ ಬೇರೆ ಬೇರೆ. ಮನೆ, ಕೈ ಬೇರೆಯಾದ್ದರಿಂದ. ಮಾತ್ರವಲ್ಲ, ಪ್ರಾದೇಶಿಕ ಲಕ್ಷಣವೂ ಸೇರುತ್ತದಾದೀತು. ಮಲೆಯಾಳದ, ತಮಿಳುನಾಡಿನ ಅವಿಯಲ್ ಇದ್ದಹಾಗೆ. ಉಳಿದ ಮೂರು ನಾಲ್ಕು ಪದಾರ್ಥಗಳು ಎಲ್ಲವೂ ರುಚಿಯೇ. ಆದರೆ ತೆಂಗಿನಕಾಯಿ, ಹಸಿಮೆಣಸು ಇನ್ನೇನೇನೊ ಸಂಭಾರಪದಾರ್ಥಗಳು ಹಾಕಿ, ಹಸುವಿನ ಹಾಲಿನ ಮೊಸರು ಕಡೆದು ಮಾಡಿದ್ದದ್ದು ಆರಾತ್ರಿ ತಿಂದ ಕಾಯಿಹುಳಿ. ಅಡಿಗೆಯ ಪದಾರ್ಥಗಳಲ್ಲಿ ಅತ್ಯುತ್ತಮವೆಂದು ಅದನ್ನು ನಾನು ಎಣಿಸುವಂತೆ ಭೋಜನ ಮಾಡಿಸಿದರು. ಭಗವಂತನ ಕೃಪೆ ಎಲ್ಲೆಲ್ಲಿ ಹೇಗೆ ಹೇಗೆ ರೂಪಿಸಿಕೊಳ್ಳುತ್ತದೆಯೊ ಅವನಿಗೊಬ್ಬನಿಗೆ ಮಾತ್ರ ಗೊತ್ತು. ಅವನಿಗೆ Providence ಎಂಬ ಹೆಸರಿದೆಯಲ್ಲವೆ? ಭಟ್ಟರಿಗೆ ಆ ದಿನ ಯಾವುದೊ ನೇಮವಿದ್ದುದರಿಂದ ಅವರು

ಊಟ ಮಾಡಲಿಲ್ಲ. ಸಜ್ಜಿಗೆ ಹಾಲು ಸೇವಿಸಿ ಜೊತೆಯಲ್ಲಿಯೇ ಈ ಪದಾರ್ಥ ಹೇಗೆ, ಈ ಮಿಡಿಮಾವಿನ ಉಪ್ಪಿನಕಾಯಿ ನೋಡಿ; ಈ ಪಲ್ಲೆ ನಿಮ್ಮ ಕಡೆ ಸಿಕ್ಕುವುದಿಲ್ಲ, ಇದರ ರುಚಿ ನೋಡಬಹುದು; ಈ ಪಾಯಸ ಹಲಸಿನ ಹಣ್ಣಿಂದ ಮಾಡಿದ್ದು, ಇದೂ ನಿಮ್ಮ ಕಡೆ ಇಲ್ಲ– ಎಂದು ಬಗೆಬಗೆಯಾಗಿ ವರ್ಣಿಸಿ, ಸಾಮಾನ್ಯವಾಗಿ ರಾತ್ರಿ ಚೆನ್ನಾಗಿ ನಿದ್ರೆ ಮಾಡುತ್ತಿದ್ದ ನನಗೆ ನಿದ್ರೆಯ ಭೀತಿ ಉಂಟುಮಾಡಿದ್ದರು. ಜೀರ್ಣಶಕ್ತಿಯಲ್ಲಿ ಅಷ್ಟೇನೂ ದಕ್ಷನಲ್ಲದವನಾದರೂ ನಾಲಗೆ ಚಪಲದಲ್ಲಿ ಇನ್ನಾರಿಗೂ ಕೀಳಲ್ಲದವನು, ನನಗೇ ಸುಸ್ತಾಗುವಷ್ಟು ಊಟ ಮಾಡಿದ ಮೇಲೆ ಇನ್ನೆಷ್ಟೊ ಉಪಚಾರ. ಅವರು ತಂಬಾಕು ಸೇವಿಸುವವರು. ಸುಮಾರು ೧೨–೧ ಗಂಟೆಯವರೆಗೂ ರಾತ್ರಿ ಮಾತನಾಡುತ್ತಾ ಕುಳಿತಿದ್ದೆವು. ಎರಡನೆಯ ಬೆಳಗ್ಗೆ ಪುತ್ತೂರಿಗೆ ಬಂದು ಅಲ್ಲಿಂದ ಪ್ರಯಾಣ ಬೆಳೆಸಿದೆ. ಶಿವರಾಯರ ಸ್ನೇಹ, ಪಡುಕೋಣೆ ದಂಪತಿಗಳ ಪರಿಚಯ ಹೀಗೆ ಆರಂಭವಾಯಿತು. ಇದು ಪೂರ್ವರಂಗ.

* * *

ಸೀತಾದೇವಿಯವರು ಕೆಲವು ಸಣ್ಣ ಕತೆಗಳನ್ನು ಬರೆದಿದ್ದಾರೆ. ಲಘುಪ್ರಬಂಧಗಳನ್ನು ಬರೆದಿದ್ದಾರೆ. ಮರಾಠಿಯಿಂದ ಕನ್ನಡಕ್ಕೆ ಏನೇನೊ ಭಾಷಾಂತರ ಮಾಡಿದ್ದಾರೆ. ಅವರಿದ್ದ ಕಡೆ ಹೆಣ್ಣುಮಕ್ಕಳೂ ಗಂಡಸರೂ ತುಂಬಿಕೊಂಡು ಅವರ ಮಾತಿನ ಮತ್ತು ಉಪಚಾರದ ಸವಿಯನ್ನು ಅನುಭವಿಸಿದ್ದಾರೆ. ಅವರೂ ವೀಳೆಯ ಅಗಿಯುವವರೇ. ಆಮೇಲೆ ಎಷ್ಟೊ ಸಲ ರಾಯರು ಕಾಲೇಜು ಪ್ರಾಚಾರ್ಯ, ಪ್ರಿನ್ಸಿಪಾಲ್ ಆಗಿ ಕೆಲಸ ಮಾಡಿದ್ದ – ರಾಜಮಹೇಂದ್ರಿ, ಪಾಲಘಾಟ್ ಬಿಟ್ಟು – ಮಂಗಳೂರು ಮದರಾಸ್ ಬಳ್ಳಾರಿ ಮುಂತಾದಲ್ಲಿ, ಬೊಂಬಾಯಿ, ಕಡೆಯ ಮಜಲು ಬೆಂಗಳೂರು ಮುಂತಾದ ಊರುಗಳಲ್ಲಿ ಅವರ ಅತಿಥಿಯಾಗಿ ಹೋಗಿ ಅವರ ಸ್ನೇಹವನ್ನು ಕಂಡಿದ್ದೇನೆ. ನಿರಾಳ ಮನಸ್ಸಿನಿಂದ ಬೆನ್ನಲ್ಲಿ ಬಿದ್ದ ಸ್ವಂತ ಅಣ್ಣ ತಮ್ಮಂದಿರಂತೆ ಇತರರನ್ನು ಕಂಡುಕೊಳ್ಳುವ ಅವರ ಪ್ರೀತಿಯನ್ನು ಕಂಡಿದ್ದೇನೆ. ಅವರ ಮಕ್ಕಳು ಮೊಮಕ್ಕಳ ಪ್ರೀತಿ ಕೂಡ ಕಂಡಿದ್ದೇನೆ. ನಾನಾಬಗೆಯ ಅಡುಗೆಗಳನ್ನು ಮಾಡಿ ಮನೆಯವರನ್ನೂ ಮಕ್ಕಳನ್ನೂ ಕೂಡಿಸಿ, ಹೋದ ನನ್ನನ್ನು ಜೊತೆಗೆ ಕೂಡಿಸಿಕೊಂಡು ಬಡಿಸುವ ಅವರ ಉಪಚಾರ ನಮ್ಮ ಕಡೆಗೆ ಬಳಕೆಯಲ್ಲದ್ದು. ವಿಶೇಷವಾಗಿ ಸಾರಸ್ವತರ ಮನೆಗಳಲ್ಲಿ – ಅದರಲ್ಲೂ ಶಿವರಾಯರು, ಪಂಜೆ ಕುಟುಂಬಗಳಲ್ಲಿ ಮಾತ್ರ – ನಾನು ಕಂಡದ್ದು. ಊಟ, ಮಾತು ಅವರ ಬಡಿಸಾದರೆ ಅದರಲ್ಲಿ ಉತ್ಸಾಹಿತರಾಗಿ ನಡುವೆ ಒಂದೊ ಎರಡೊ ಮಾತನಾಡುತ್ತ ಯಾವುದೊ ಇಂಗ್ಲಿಷ್ – ಅಮೆರಿಕನ್ ನಾಟಕಕಾರ, ಕಾದಂಬರಿಕಾರ, ಕವಿ ಇವರ ಮಾತನ್ನು ಸೇರಿಸುತ್ತದೆ. ದೇವಿಯರ ಟೀಕೆ, ವಿಮರ್ಶೆಯಂತೂ ತುಂಬಾ ಜಾಣು. ಈಗ ಆಕೆ ತೀರಿಕೊಂಡಿದ್ದಾರೆ. ಆಕೆಯ ನೆನಪು ಮಾತ್ರ ನನ್ನ ಮನೋರಂಗ, ಹೃದ್ರಂಗಗಳ ಆಳದಲ್ಲಿ ಸ್ನಿಗ್ಧವಾಗಿ ನಿಂತಿದೆ.

ಪುತ್ತೂರಿನ ದಸರಾ ಉತ್ಸವಗಳಲ್ಲಿ ಮೊದಲೆರಡು ವರ್ಷ ಶಿವರಾಯರ ಮನೆಯಲ್ಲಿಯೇ ಇದ್ದು ಆಮೇಲೆ ಊರಿಂದ ಎರಡು–ಮೂರು ಮೈಲಿ ಹೊರಗೆ

ಕಾರಂತರು ಕಟ್ಟಿಸಿದ ಮನೆಯಲ್ಲಿ ನಾವು ಅತಿಥಿಗಳಾಗುತ್ತಿದ್ದೆವು. ಆದರೂ ಒಪ್ಪತ್ತು ರಾಯರ ಮನೆಯಲ್ಲಿ ಆದರ ಪಡೆದೇ ಹಿಂತಿರುಗುವುದು ವಾಡಿಕೆ. ರಮಾನಂದರಾಯರ ಮಲತಮ್ಮ ಪ್ರಭಾಕರರಾಯರು ಚೆನ್ನಾಗಿ ಹಾರ್ಮೋನಿಯಂ ನುಡಿಸುತ್ತಿದ್ದರು. ರಮಾನಂದರಾಯರ ಮಗಳು ಚಂದ್ರಭಾಗಾ – ಕಾರಂತರ ಮಕ್ಕಳ ನಾಟಕಗಳಲ್ಲಿ, ಅವರು ಏರ್ಪಡಿಸಿದ ನೃತ್ಯಗಳಲ್ಲಿ ನೃತ್ಯವನ್ನು ಪ್ರಕಾಶಿಸುತ್ತಿದ್ದರು. ಆಕೆಗೆ ನೃತ್ಯದಲ್ಲಿ ಮೊದಲಿಂದಲೂ ಪ್ರೀತಿ. ಹಿಂದಿನಿಂದ ಹಾಡುವ ಪ್ರಸಂಗ ಬಂದಾಗ ಸೀತಾದೇವಿ ಹಾಡುವರು. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಯಕ್ಷಗಾನದ ಕಾರಣದಿಂದಾಗಿ ದಕ್ಷಿಣಾದಿ ಸಂಗೀತವೇ ಅಲ್ಲಿ ಬಳಕೆಯದು. ದಕ್ಷಿಣ ಕನ್ನಡ ಜಿಲ್ಲೆ ಮದರಾಸ್ ಅಧಿಪತ್ಯದ ಭಾಗವಾದ್ದರಿಂದ, ಇಲ್ಲಿನವರೆಲ್ಲ ಮದರಾಸ್ ಕಡೆಗೇ ಎಲ್ಲಕ್ಕೂ ಹೋಗಬೇಕಾಗಿದ್ದುದರಿಂದ ಮದರಾಸ್ ಸಂಪರ್ಕ, ಮಲಯಾಳದ ಸಂಪರ್ಕಗಳಿಂದಾಗಿ ದಕ್ಷಿಣಾದಿ ಸಂಗೀತ ಅವರಿಗೆ ತಿಳಿದಿತ್ತು. ಆದರೂ ಸಾರಸ್ವತರ ಗುಂಪುಗಳಲ್ಲಿ ಉತ್ತರಾದಿ, ಎಂದರೆ ಮಹಾರಾಷ್ಟ್ರ ಛಾಯೆಯ ಹಿಂದೂಸ್ತಾನಿ ಸಂಪ್ರದಾಯದ ಹಾಡುಗಾರಿಕೆಯೇ ಹೆಚ್ಚು ಬಳಕೆ. ಥಾಟಿ–ತಾಳ, ಹಾಡುಗಾರಿಕೆ ಅಲ್ಲಿನವು. ಕಾರಂತರ 'ಮುಕ್ತದ್ವಾರ' ನೃತ್ಯ ನಾಟಕದ ಪ್ರದರ್ಶನವನ್ನು ನಾನು ಮೊದಲು ಕಂಡು ಆಕರ್ಷಿತನಾಗಿ, ೧೯೩೩ರಲ್ಲಿ 'ಶ್ರೀ' ಅವರನ್ನು ಪುತ್ತೂರಿಗೆ ಕರೆದುಕೊಂಡುಹೋಗಿ ಅದರ ಆಟವನ್ನು ನೋಡಲು ಬೇಡಿಕೊಂಡೆ. ಅವರಿಗೂ ಅದರ ರಚನೆ, ಭಾವ, ಆಕಾಂಕ್ಷೆ, ಕವಿಯ ಆಳವಾದ ಸತ್ಯಶ್ರದ್ಧೆ ಮನಸ್ಸಿಗೆ ಬಂದವು. ಮೊದಲಿಂದಲೂ 'ಶ್ರೀ'ಯವರ ಬಹುಮೆಚ್ಚಿನ ಭಾಷಣವೆಂದರೆ 'The Burden of the Prophets' – ಪ್ರವಾದಿಗಳ ಪ್ರಧಾನ ಸಂದೇಶ. ಇದೇ ಈ ನಾಟಕದ ಸಾರಾರ್ಥ. ಇದು ಅವರಿಗೆ ಒಪ್ಪಿಕೆಯಾಗಿ, ಮುಂದಿನ ವರ್ಷ ರಾಯಚೂರಿನಲ್ಲಿ ಪಂಜೆಯವರ ಅಧ್ಯಕ್ಷತೆಯಲ್ಲಿ ಕನ್ನಡ ಸಾಹಿತ್ಯ ಸಮ್ಮೇಳನ ನಡೆಯುವಾಗ ಅಲ್ಲಿ ಅದನ್ನು ಪ್ರದರ್ಶಿಸಬೇಕೆಂದು ಪ್ರಾರ್ಥಿಸಿಕೊಂಡರು. ಮೊದಲಿಂದಲೂ ಅಲ್ಲಿನ ಮೇಳಗೀತೆಗಳನ್ನು ಹಾಡಿದವರು ಸೀತಾದೇವಿಯವರು. 'ಕುಣಿಯುತಾನೆ' ಎಂದು ಮುಗಿಯುವ ಗೀತವನ್ನು, ಮುಕ್ತಾಯ ಗೀತವನ್ನು, ಅಲ್ಲಿನ ಪ್ರವೇಶಗಳನ್ನು ಅವರು ಎಷ್ಟು ಸ್ವಾರಸ್ಯವಾಗಿ, ಹೊಂದಿಕೆಯಾಗಿ ಹಾಡುತ್ತಿದ್ದರು ಎಂಬುದನ್ನು ಕೇಳಿದವರೆಲ್ಲರೂ ಬಲ್ಲರು. ಉತ್ತರಕಾಲದಲ್ಲಿ ನಾನು ಬರೆದ 'ಕಾಲನಟ' ಎಂಬ ಕವಿತೆಯಲ್ಲಿ – ಕಾರಂತರಿಗೆ ಆ ವಿಲಾಸ, ಅದರ ಮೊದಲ ಸಾಲುಗಳು ಪ್ರಿಯವೊ ಅಲ್ಲವೊ ಕಾಣೆ – ಕಡೆಯ ಪಂಕ್ತಿಗಳಲ್ಲಿ ಬರುವ ತಂಗಿ ಆಕೆ ಎಂದು ನನ್ನ ನೆನಪಿನ ಕಾಣಿಕೆ ಸಲ್ಲಿಸುತ್ತಿದ್ದೇನೆ.

ಮನೆಯ ಮಕ್ಕಳಿಗೆಲ್ಲ ಒಂದೊಂದು ಕಲೆಯ ಆಸಕ್ತಿ, ಪಕ್ಷಪಾತ ಒಲವು ಉಂಟಾಗುವಂತೆ ಆ ಮನೆಯ ಜೀವನ. ಅವರ ಒಬ್ಬನೇ ಮಗ ಪ್ರಭಾಶಂಕರರಾವ್ Wireless Engineering ಅಲ್ಲಿ ಪದವೀಧರನಾಗಿ, Overseas Communications ಅಲ್ಲಿ ಬೊಂಬಾಯಿ ಮದರಾಸಲ್ಲಿ ಕೆಲಸ ಮಾಡಿದ್ದರೂ ಅಭಿರುಚಿಗಳಲ್ಲಿ ನಾಟ್ಯಕ್ಕೆ ಒಲಿದವರು. ನಾಟ್ಯದ 'ಬೋಲ್'ಗಳನ್ನು ಅತ ಅಭ್ಯಾಸ ಮಾಡಿದ್ದಾನೆ. ಅತನು ಮದುವೆಯಾದ ಮಗು ಚಿತ್ರಕಲೆಯಲ್ಲಿ ಅಭಿರುಚಿ ಪರಿಣತಿ ಉಳ್ಳವರು. ಚಂದ್ರಭಾಗಾದೇವಿ, ಶಾಂತಾ, ಜಯವಂತಿ, ಯಶೋಧರಾ ಎಂಬ ರಮಾನಂದರಾಯರ ನಾಲ್ವರು

ಹೆಣ್ಣುಮಕ್ಕಳಲ್ಲಿ ಚಂದ್ರಭಾಗಾದೇವಿ ಬೆಂಗಳೂರಿನ ಸುಪ್ರಸಿದ್ಧ ಸ್ತ್ರೀರೋಗತಜ್ಞರೂ ನಾಟ್ಯಾಚಾರ್ಯರೂ ಆದ ಡಾ. ಯು. ಎಸ್. ಕೃಷ್ಣರಾಯರ ಪತ್ನಿ. ಅವರ ಜೊತೆಗೆ ದೇಶವಿದೇಶಗಳಲ್ಲಿ ಸರ್ವತ್ರ ಪ್ರಸಿದ್ಧಿ ಪಡೆದಿದ್ದಾರೆ. ತಮ್ಮ ಮನೆಯಲ್ಲಿ ನಾಟ್ಯಶಿಕ್ಷಣದ ಕಾರ್ಯಗಳಲ್ಲಿ ಪತಿಗೆ ಸಹಕಾರಿಯಾಗಿದ್ದಾರೆ. ಜೊತೆಪಾತ್ರಧಾರಿ ಪ್ರದರ್ಶನಗಳಲ್ಲಿ ಭಾಗಿಯಾಗಿದ್ದಾರೆ. ಎರಡನೆಯ ಮಗಳು ಶಾಂತ ಚಿತ್ರಕಲೆಯಲ್ಲಿ ವಿಶೇಷ ಆಸಕ್ತಿ ಇರುವವರು. ಜಯವಂತಿದೇವಿ ಹಾಡುಗಾರಿಕೆಯಲ್ಲಿ ನಿಪುಣತೆ ಪಡೆದವರು. ಎಚ್. ಎಂ. ವಿ. ಕಂಪನಿಗೆ ಅನೇಕ ಕನ್ನಡ ಭಾವಗೀತೆಗಳನ್ನು ಹಾಡಿರುವುದರ ಜೊತೆಗೆ 'ಭಾಗ್ಯದ ಲಕ್ಷ್ಮೀ ಬಾರಮ್ಮ', 'ಹುಣ್ಣಿಮೆ ತರುವರ ಮನೆಗೆ ಹುಲ್ಲು ತರುವ' ಮುಂತಾದ ಗೀತೆಗಳನ್ನು ಹಾಡಿ ಪ್ರಸಿದ್ಧರಾಗಿರುವವರು. ಯಶೋಧರ ಒಂದೆರಡು ಕಲೆಗಳಲ್ಲಿ ತುಂಬಾ ಪ್ರೀತಿ ಉಳ್ಳವರಾಗಿದ್ದರೂ ದೇಹದ ಅನಾರೋಗ್ಯದಿಂದಾಗಿ ಹೆಚ್ಚಾಗಿ ಹೊರಗೆ ಹೆಸರು ಪಡೆಯಲಾರದವರು. ಆದರೆ ಅನೇಕ ಸಮಾಜಕ್ರಿಯೆಗಳಲ್ಲಿ ಸಂಸ್ಥೆಗಳಲ್ಲಿ ಭಾಗವಹಿಸಿರುವವರು. ಬೊಂಬಾಯಿ ಆಕಾಶವಾಣಿಗೆ ಕಿರುನಾಟಕಗಳನ್ನು ಬರೆದಿರುವವರು. ಮಾಸ್ತಿಯವರು 'ಯಶೋಧರಾ' ನಾಟಕವನ್ನು ಬರೆದ ವರ್ಷ ಇವಳು ಹುಟ್ಟಿದ್ದಾದ್ದರಿಂದ ಇವಳಿಗೆ 'ಯಶೋಧರಾ' ಎಂದು ಹೆಸರಿಟ್ಟರು. ಸಾಹಿತ್ಯದ ಸಾಹಚರ್ಯ ಅವರ ಮನೆಯಲ್ಲಿ ಎಷ್ಟು ಹತ್ತಿರದ್ದು ಎಂಬುದನ್ನು ಇದು ತಿಳಿಸುತ್ತದೆ. ಹೀಗೆ ಸಂಗೀತ, ಸಾಹಿತ್ಯ, ಚಿತ್ರಕಲೆ, ನೃತ್ಯ, ನಾಟಕ ಇವಕ್ಕೆ ಮೊದಲಿಂದ ಒಲಿದ ಮನೆ ಪಡುಕೋಣೆಯವರದು.

ಸೀತಾದೇವಿಯವರು ರಷ್ಯನ್ ನಾಟಕಕಾರ ಆಂಟನ್ ಚೆಕೋವನ ನಾಟಕಗಳಲ್ಲಿ ಒಂದಾದ 'ಅಂಕಲ್ ವಾನ್ಯ' ಎಂಬುದನ್ನು ಕನ್ನಡಿಸಿದ್ದಾರೆ. ಅದನ್ನು ಸುಮಾರು ೧೯೪೬ರಲ್ಲಿ ಮನೋಹರ ಗ್ರಂಥ ಮಾಲೆಯವರು ಪ್ರಕಟಿಸಿದರು. ರಷ್ಯನ್ ಹೆಸರುಗಳಿಗೆ ಬದಲಾಗಿ 'ವೇಣುಮಾವ' ಎಂಬ ಹೆಸರಲ್ಲಿ ಅಲ್ಪಸ್ವಲ್ಪ ಇಲ್ಲಿನ ಸನ್ನಿವೇಶಕ್ಕೆ ಹೊಂದುವಂತೆ ಸವರಿಸಿ ಪ್ರಕಟಿಸಿದರು. ಮೂಲನಾಟಕದಂತೆಯೇ ಈ ನಾಟಕವೂ ಚೆನ್ನಾಗಿದೆ. ಕಡೆಕಡೆಯ ದಿವಸಗಳಲ್ಲಿ ಅವರ ಮನಸ್ಸು ಭಕ್ತಿಯ ಕಡೆ, ಭಜನೆ, ಮಹಾರಾಷ್ಟ್ರ ಕೊಂಕಣ ಮಂಡಲಿಗಳಲ್ಲಿ ನಡೆಯುತ್ತಿದ್ದ ಪೂಜೆ ಆರಾಧನೆಗಳ ಕಡೆಗೆ ತಿರುಗಿತು. ಅವರ ಮನೆಗಳಲ್ಲಿ ಗಾಯನಕ್ಕೆ ಭಕ್ತಿಗೆ ವಿಶೇಷ ಓಲು. ಮನೆಯ ಮಕ್ಕಳು ಯಾವ ಸಂಸಾರಗಳಲ್ಲಿ ಹೇಗೆ ಜೀವನ ನಡಸಬೇಕಾಗಿದ್ದರೂ ಒಳ್ಳೆಯ ಗೃಹಿಣಿಯರಾಗಿ ಗೃಹಸ್ಥರಾಗಿ ನಡೆಯುವಂತೆ ತಯಾರು ಮಾಡಿ ನೋಡಿಕೊಂಡರು. ಈ ೪೦–೪೨ ವರ್ಷಗಳಲ್ಲಿ ನಾನು ಕಂಡಂತೆ ಆ ಮನೆಯವರ ಮನೋಭಾವ ವಿಶ್ವಾಸ ಒಂದೇ ಹದದಲ್ಲಿ, ಸ್ನಿಗ್ಧತೆಯಲ್ಲಿ ನಡೆದುಕೊಂಡು ಬಂದಿದೆ. ತಾಯಿ, ಅಜ್ಜಿ, ತಾತ ಇವರ ಪೋಷಣೆಯಲ್ಲಿ, ಉದಾರ ಅಂತಃಕರಣದಲ್ಲಿ ಬಹುಮಟ್ಟಿನ ಸ್ವಾತಂತ್ರ್ಯವಿದ್ದರೂ ದೊಡ್ಡ ಆದರ್ಶಗಳಿಗೆ ಒಳಗುಮಾಡಿಕೊಂಡು ಸಂಸಾರಗಳಲ್ಲಿ ಜೀವನ ಎಷ್ಟು ಸುಖಿವಾಗಿ, ಸುಂದರವಾಗಿ, ನೆಮ್ಮದಿಯಾಗಿ ನಡೆಯಬಹುದು ಎಂಬುದಕ್ಕೆ ನಿದರ್ಶನವಾಗಿದ್ದಾರೆ.

ರಾಯರು ಕೆಮಿಸ್ಟ್ರಿ ಪಂಡಿತರು. ನನಗಿಂತ ನಾಲ್ಕು ವರ್ಷ ವಯಸ್ಸಿನಲ್ಲಿ ಹಿರಿಯರು. ಅವರು ಅವರ ತಂದೆಯ ಮೊದಲ ಹೆಂಡತಿಯ ಒಬ್ಬನೇ ಮಗನಾಗಿ ಹುಟ್ಟಿದರು. ಮಗು

ಹುಟ್ಟಿದ ಒಂದು – ಒಂದೂವರೆ ವರ್ಷದಲ್ಲಿಯೇ ತಾಯಿ ತೀರಿಕೊಂಡು, ಮಂಗಳೂರಲ್ಲಿ ಸೋದರಮಾವನ ಮನೆಯಲ್ಲಿ ಬೆಳೆದರಂತೆ. ತಂದೆಯನ್ನು ಕಂಡರೆ ಅತೀವ ಪ್ರೀತಿಗೌರವಗಳಿದ್ದರೂ ಅವರ ಮಲತಾಯಿ, ಮಲಸೋದರ–ಸೋದರಿಯರ ಜೊತೆ ಬೆಳೆಯುವ ಅವಕಾಶ ದೊರೆಯಲಿಲ್ಲ. ಆ ತಮ್ಮಂದಿರೂ ಅವರನ್ನು ಕಂಡರೆ ವಿಶ್ವಾಸದಿಂದ ಇದ್ದಾರೆ. ತಂದೆಯ ತಮ್ಮಂದಿರು ಕಾಂಚನ್‌ಗಡ್ ಎಂಬ ಕಾಸರಗೋಡಿನ ಹತ್ತಿರ ಒಂದು ಕಡೆ ಶ್ರೀ ಸ್ವಾಮಿ ರಾಮದಾಸರಾಗಿ ಒಂದು ಆಶ್ರಮವನ್ನು ಸ್ಥಾಪಿಸಿ, ಸಾಧುಸಂನ್ಯಾಸಿಗಳಾಗಿ ಬದುಕಿದವರು. ರಮಾನಂದರಾಯರು ಮಂಗಳೂರು ಗೌರ್ನಮೆಂಟ್ ಕಾಲೆಜುಗಳಲ್ಲಿಯೂ ಮದರಾಸ್ ಪ್ರೆಸಿಡೆನ್ಸಿ ಕಾಲೆಜಲ್ಲಿಯೂ ಓದಿ ಎಂ. ಎ. ಪಾಸ್ ಮಾಡಿದರು. ಆ ಕಾಲದಲ್ಲಿ ಸೈನ್ಸ್ ಓದಿದವರಿಗೆ ಎಂ. ಎಸ್. ಸಿ. ಪದವಿಗಳಿರಲಿಲ್ಲ. ಅವರು ವಿಶ್ವವಿದ್ಯಾನಿಲಯದ ಸಂಸ್ಥೆಗಳಲ್ಲಿ ಕೆಲಸಮಾಡಿ ರಾಜಮಹೇಂದ್ರಿ, ಪಾಲ್‌ಘಾಟ್, ಮಂಗಳೂರು ಕಾಲೆಜುಗಳಲ್ಲಿ ಕೆಮಿಸ್ಟ್ರಿ ಅಧ್ಯಾಪಕರಾಗಿ ಕೆಲಸ ಮಾಡಿದರು. ಮದರಾಸ್ ಪ್ರೆಸಿಡೆನ್ಸಿ ಕಾಲೆಜಲ್ಲಿ ಕೆಮಿಸ್ಟ್ರಿ ಪ್ರಾಚಾರ್ಯರಾಗಿ, ಬಳಿಕ ಒಂದು ಮುಸ್ಲಿಂ ಕಾಲೆಜಲ್ಲಿ ಪ್ರಿನ್ಸಿಪಲರಾಗಿ ಕೆಲಸ ಮಾಡಿ ನಿವೃತ್ತರಾದರು. ತರುವಾಯ ಬಳ್ಳಾರಿಯಲ್ಲಿ ಖಾಸಗಿ ಕಾಲೆಜೊಂದು ನಿರ್ಮಾಣವಾದಾಗ ಅದರ ಪ್ರಿನ್ಸಿಪಲರಾಗಿಯೂ ಕೆಲಸ ಮಾಡಿದರು. ಅವರಿಗೆ ಇಂಗ್ಲಿಷ್ – ಕನ್ನಡ ಸಾಹಿತ್ಯಗಳಲ್ಲಿ ತುಂಬಾ ವಿಶ್ವಾಸ. ಮುಖಚರ್ಯೆಯಲ್ಲಾಗಲಿ ಮಾತಿನಲ್ಲಾಗಲಿ ಹೆಚ್ಚು ಅನುಮಾನಿಸಲಾಗದಂತೆ ಒಂದು ನಗೆಸಾಹಿತ್ಯದಲ್ಲಿ ಅವರಿಗೆ ಪ್ರೀತಿ ಹೆಚ್ಚು. ಅವರು ಮನೆಮಾಡಿಕೊಂಡ ಕಡೆ ದೊಡ್ಡ ಮನೆ ಮಾಡುವರು. ಅಲ್ಲಿಗೆ ಹತ್ತಾರು ಜನ ಬರುವರು. ಮಂಗಳೂರು – ಹಂಪನ ಕಟ್ಟೆಯಲ್ಲಿನ ಅವರಿದ್ದ ಮನೆಯಲ್ಲಿ ಎಷ್ಟೋ ಬಗೆಯ ನಟರು, ನೃತ್ಯಾಭಿಜ್ಞರು, ಸಂಗೀತಾಭಿಮಾನಿಗಳು, ಸಂಗೀತಗಾರರು ಇರುತ್ತಿದ್ದರು; ಅವರಲ್ಲಿಗೆ ಬಂದು ಹೋಗುತ್ತಿದ್ದರು ಎಂಬುದನ್ನು ಯಾರೂ ಕಾಣಬಹುದಿತ್ತು. ಇಂಗ್ಲಿಷ್ ನಾಟಕಗಳನ್ನಾಗಲಿ, ಕನ್ನಡ ನಾಟಕವನ್ನಾಗಲಿ ಒಂದೇ ಪ್ರೀತಿಯಿಂದ ಓದಿ ಸಂತೋಷಪಟ್ಟು, ಅನೇಕ ನಾಟಕಗಳನ್ನು – ಉದಾ: ಆಸ್ಕರ್‌ವೈಲ್ಡರ On the Importance of Being Earnest ಅನ್ನು, 'ಷಾ' ಅವರ ನಾಟಕಗಳನ್ನು ಆಡಿಸಿ ರಂಗಪ್ರವೇಶ ಮಾಡಿಸಿದ್ದಾರೆ. ತಾನೇ ಪಾತ್ರವಹಿಸಿ ಅಭಿನಯಿಸಿದ್ದಾರೆ. ಕೈಲಾಸಂ ಅವರ ನಾಲ್ಕಾರು ನಾಟಕಗಳನ್ನು ಪ್ರದರ್ಶಿಸಿದ್ದಾರೆ, ನಿರ್ದೇಶಿಸಿದ್ದಾರೆ. ಬೆಂಗಳೂರಲ್ಲಿ ಕೆ.ವಿ. ಅಯ್ಯರ್, ರಾಜರತ್ನಂ, ಶಿವರಾಂ ಇಂಥವರೂ ಗುಂಡಪ್ಪನವರೂ ಮಾಸ್ತಿಯವರೂ ಅವರಿಗೂ ಅವರ ಮನೆಯವರಿಗೂ ತುಂಬಾ ಬೇಕಾದವರು. ಒಮ್ಮೆ ಕನ್ನಡದಲ್ಲಿ ಏನಾದರೂ ಬರೆಯಬೇಕೆಂದು ಅವರನ್ನು ಸ್ನೇಹಿತರು ಒತ್ತಾಯ ಮಾಡಿದಾಗ ಕೆಲವು ಪ್ರಬಂಧಗಳನ್ನು ಬರೆದರು. ಒಂದೆರಡು ನಾಟಕಗಳನ್ನು ಪ್ರಕಟಿಸಿದರು. 'ನನ್ನ ಭಾವ', 'ಛತ್ರಿ' ಮುಂತಾದ ಹರಟೆಗಳು ಮನೋಜ್ಞವಾಗಿದೆ. 'ಹುಚ್ಚುಬೆಳುದಿಂಗಳಿನ ಹೂಬಾಣಗಳು' ಎಂಬುದನ್ನು ಪುಸ್ತಕ ರೂಪದಲ್ಲಿ ಪ್ರಕಟಿಸಿದರು. ಅದರಲ್ಲಿ ಸ್ಟೀಫನ್ ಲೀಕಾಕ್ ಬರೆದ 'Moonbeams from the Larger Lunacy' ಎಂಬ ಬರವಣಿಗೆಯ ಪ್ರಭಾವವನ್ನು ಕಾಣಬಹುದಾದರೂ ಕನ್ನಡದಲ್ಲಿ ಆ ಬಗೆಯ ಬರವಣಿಗೆ ವಿಶಿಷ್ಟವಾದ್ದು.

ಏಳೆಂಟು ವರ್ಷಗಳ ಹಿಂದೆ ಒಂದು ಸಂದರ್ಭದಲ್ಲಿ ಮಾತು ಬಂದು, 'ನಿಮಗೆ ಹೇಗಿದ್ದರೂ ಉದ್ಯೋಗದಿಂದ ನಿವೃತ್ತಿ, ವಿಶ್ರಾಂತಿ ದೊರೆತಿದೆ. ನಾಟಕದಲ್ಲಿ ನಿಮಗೆ ಪ್ರೀತಿ ಹೆಚ್ಚು. ಶ್ರೀಮತಿಯವರು 'ಅಂಕಲ್ ವಾನ್ಯ' ಭಾಷಾಂತರ ಮಾಡಿದರು. ಚೆಕೋವ್ ಬರೆದ ಇನ್ನು ಮೂರೊ ನಾಲ್ಕೊ ನಾಟಕಗಳನ್ನು ನೀವು ಮಾಡಿದ್ದರೆ ಒಂದು ಕೆಲಸ ಪೂರ್ತಿ ಆಗುತ್ತಿತ್ತು' ಎಂದು ಹೇಳಿದೆ. ಏನೇನೊ ನೆಪಗಳನ್ನು ಹೇಳಿ ನನಗೆ ಸಾಧ್ಯವಾಗುತ್ತದೆಯೊ ಇಲ್ಲವೊ' ಎಂದಿದ್ದವರು ಚೆಕೋವನ ಮೂರು ನಾಟಕಗಳನ್ನು ಭಾಷಾಂತರ ಮಾಡಿದರು. ಕಡಲಕಾಗೆ, ಚೆರ್ರಿ ಹಣ್ಣಿನ ತೋಟ, ಮೂವರು ಅಕ್ಕತಂಗಿಯರು ಎಂಬವು ಆ ನಾಟಕಗಳು. ರಷ್ಯನ್ ನಾಟಕಕರ್ತೃಗಳಲ್ಲಿ ತನ್ನದೇ ಆದ ಒಂದು ವಿಶೇಷ ನಾಟಕ ತಂತ್ರವನ್ನು ಪ್ರಪಂಚವನ್ನು ನಿರ್ಮಾಣ ಮಾಡಿದವನು ಚೆಕೋವ್. ಯೂರೋಪಿನಲ್ಲೆಲ್ಲ ಅವನ ಕಲೆಗಾರಿಕೆಗೆ ಪ್ರೀತಿಗೌರವ ಇದೆ. ಅಲ್ಲಿನ ನಯ, ಸೂಕ್ಷ್ಮ ಅಂತರಂಗದ ಪ್ರಕಾಶನ, ನಗೆ, ಜೀವನವಿಲಾಸ ವಿಮರ್ಶೆ ಯೂರೋಪಿನ ಬೇರೆ ನಾಟಕಕಾರರಲ್ಲಿ ಕಾಣದ್ದು. ಒಂದೊಂದು ಮನೆಗೆ ಸಂಬಂಧಿಸಿದಂತೆ ಸಮಷ್ಟಿ ಚಿತ್ರಿಗಳನ್ನೂ ಜೀವನ ವಿಲಾಸವನ್ನೂ ಆಪ್ತವಾಗಿ ಕಾಣಿಸಬಲ್ಲ ಕುಶಲತೆ ಆತನದು. ಯಾವುದನ್ನೂ ಅತಿಮಾಡಿ ಗಟ್ಟಿದನಿಯಲ್ಲಿ ಹೇಳದೆ, ಅತಿಯಾಗಿ ಬಣ್ಣಹಚ್ಚದೆ, ದೊಡ್ಡ ಗಂಟಲ ಕೂಗು ಕೇಳಿಸದೆ, ಹೊಕ್ಕು ನೋಡಿದಷ್ಟು ಹೃದ್ಭಾವಗಳ ನಡವಳಿಕೆ ಹೆಚ್ಚು ಸೂಕ್ಷ್ಮವಾಗಿ ಮಂದಟ್ಟಾಗುವಂತೆ ಬರೆವ ಚಾತುರಿ ಚೆಕೋವನದು. ಬರೆಯುವವರು ಕಷ್ಟಪಟ್ಟು ಬರೆಯಬಹುದು. ಅದನ್ನು ಪ್ರಕಟಿಸುವ ವ್ಯಕ್ತಿಗಳಾಗಲಿ, ಸಂಸ್ಥೆಗಳಾಗಲಿ ದುರ್ಲಭ. ರಷ್ಯ – ಇಂಡಿಯಾ ಸಂಬಂಧಗಳ ಕೆಲವು ಜನ, ಸಂಸ್ಥೆಗಳವರು ಇವುಗಳ ಪ್ರಕಟನೆಗೆ ನೆರವಾಗುವರೆಂಬ ಭರವಸೆ ಇತ್ತು. ನಮ್ಮ ನಾಡಿನಲ್ಲಿ ಸಾಹಿತ್ಯಪ್ರಕಾಶಕರ ಸಂಖ್ಯೆ ಕಡಮೆ. ಅದರಲ್ಲೂ ಪದ್ಯ, ನಾಟಕ, ವಿಮರ್ಶೆಗಳನ್ನು ಪ್ರಕಾಶಿಸುವವರ ಸಂಖ್ಯೆ ಇನ್ನೂ ವಿರಳ. ಎಂಟು–ಒಂಬತ್ತು ವರ್ಷಗಳಿಂದ ಈ ಮೂರರಲ್ಲಿ ಒಂದೂ ಹೊರಗೆ ಬರುವ ಆಸೆ ತೋರಲಿಲ್ಲ. ಕಡೆಗೆ ಮೈಸೂರಿನ 'ಗೀತಾ ಪುಸ್ತಕಾಲಯ'ದ ಗೆಳೆಯರಾದ ಶ್ರೀ ಸತ್ಯನಾರಾಯಣರಾಯರು ದೊಡ್ಡ ಮನಸ್ಸು ಮಾಡಲಾಗಿ 'ಚೆರ್ರಿಹಣ್ಣಿನ ತೋಟ' ಎಂಬ ಚೆಕೋವನ ಅತ್ಯಂತ ಪ್ರಖ್ಯಾತ ನಾಟಕವಾದರೂ ಹೊರಕ್ಕೆ ಬಂದಿದೆ.

ನನಗೆ ಅನೇಕ ವೇಳೆ ಅನ್ನಿಸಿದೆ: ಕನ್ನಡದಲ್ಲಿ ಸುಮಾರು ಈ ಶತಮಾನದ ಆರಂಭದ ಕಾಲದವರೆಗೂ ಸ್ವತಂತ್ರವಾದ ನಾಟಕಗಳಿರಲಿಲ್ಲ. ಈ ಶತಕದ ೨೦–೨೫ ವರ್ಷ ಕಾಲಕಳೆದ ಮೇಲೆ ಕೆಲವು ಬಂದವು. ಈಚೆಗೆ ನಾಲ್ಕಾರು ಮಂದಿ ನಾಡ ಮೇಲೆ ನಾಟಕ ಕಲೆಯ ವಿಶೇಷಗಳನ್ನು ಪ್ರಚಾರಮಾಡಿದ್ದಾರೆ. ಹೊಸಕಾಲದ ರೀತಿಗಳನ್ನೂ ಸಜ್ಜುಗಳನ್ನೂ ಬೆರಗುಗಾಣಿಸುತ್ತ ನಿರ್ದೇಶನ, ಪ್ರದರ್ಶನ ನಡೆಯುತ್ತಿದೆ. ಜನಕ್ಕೆ ನಾಟಕದಲ್ಲಿ ಅಭಿರುಚಿ ಹೆಚ್ಚಾಗುತ್ತಿದೆ. ಇಬ್ಸೆನ್ ಬಗೆಯ ಮೂರುನಾಲ್ಕು ನಾಟಕಗಳು ಕನ್ನಡಕ್ಕೆ ಬಂದಿವೆ. ಮೇಟರ್‌ಲಿಂಕನದು ಒಂದು, 'ಷಾ'ದು ಎರಡು, ಫ್ರೀಸ್ಟ್ಲಿ , ಗಾಲ್ಸ್‌ವರ್ದಿ, ಈಚಿನವರವು ಪರ್ಯಾಯವಾಗಿ ಮೂರು ನಾಲ್ಕು ಬಂದಿವೆ. ಸ್ವಲ್ಪ ಹೆಚ್ಚು ಕಡಮೆ ಇಬ್ಸೆನ್ ತರುವಾಯ ಎಂದರೆ, ಈ ಶತಮಾನದಲ್ಲಿ ಇಂಗ್ಲಿಷ್, ಅಮೆರಿಕನ್, ಯೂರೋಪಿಯನ್ ಜನವರ್ಗಗಳಲ್ಲಿ ಪ್ರಖ್ಯಾತಿಗೊಂಡಿರುವ ಇಪ್ಪತ್ತು ಮೂವತ್ತು ಮಂದಿ ನಾಟಕಕಾರರ ಒಂದೊ ಎರಡೊ

ಪ್ರಾತಿನಿಧಿಕ ನಾಟಕಗಳನ್ನು ಆಯ್ದು ಕನ್ನಡಿಸಿ ಅಡಿದರೆ ನಮ್ಮ ರಂಗಮಂಟಪಕ್ಕೆ ವಿವಿಧ ನಾಟ್ಯಾನುಭವ ಬಂದೀತು. ಎಂಥೆಂಥ ವಿಷಯಗಳನ್ನು ಅವರು ಆಯುತ್ತಾರೆ? ರಚನಾರೀತಿ ವಿಶೇಷ ಯಾವುದು? ಯಾವ ಗುರಿಗಳನ್ನು ಸಾಧಿಸಲು ತೊಡಗಿದ್ದಾರೆ? – ಎಂಬುದು ತಿಳಿಯುತ್ತದೆ. ಇವೆಲ್ಲವೂ ರಂಗದ ಮೇಲೆ ಕೀರ್ತಿ ಪಡೆದವಾದ್ದರಿಂದ ರಂಗನಿರ್ಮಾಣ, ಪ್ರದರ್ಶನಕೌಶಲ, ನಿರ್ದೇಶನ, ಬೆಳಕುಬಣ್ಣ, ವೇಷಗಳ ಸಜ್ಜು ಇವಕ್ಕೆ ಸಂಬಂಧಿಸಿದಂತೆ ತಿಳಿವಳಿಕೆ ದೊರಕುವುವಾದ್ದರಿಂದ ನಮ್ಮಲ್ಲಿ ಇವುಗಳ ಪ್ರದರ್ಶನ ಕಷ್ಟವಾಗಬಾರದು. ಭಾರತದ ಎಲ್ಲ ಭಾಷೆಗಳಲ್ಲಿಯೂ ಏಕೊ ಏನೊ ನಾಟಕದ ಭಾಗ ಅಷ್ಟೇನೂ ಹೇಳಿಕೊಳ್ಳುವಂಥದಲ್ಲ. ಮರಾಠಿ, ಉರ್ದು, ಬಂಗಾಳಿ ಭಾಷೆಗಳಲ್ಲಿ ಕೆಲವು ಪ್ರಸಿದ್ಧಿ ಪಡೆದಿವೆ. ಅವುಗಳ ಪ್ರಪಂಚವೂ ಅಷ್ಟೇನೂ ಮೌಲಿಕ ಸತ್ಯದವಲ್ಲ. ನಾಟಕವೇ ಮಾಡಿ ರೂಪಿಸಬೇಕಾದ ನಮ್ಮ ಜನಜೀನವದ ಚಿತ್ರಣ ಸರ್ವಸಮರ್ಪಕವಾಗುವಂತೆ ನಡೆದಿಲ್ಲ. ಈ ಜನಕ್ಕೆ ನಾಟಕ ನಿರ್ಮಾಣಶಕ್ತಿ ಬೆಳೆದು ಬರುವಂತೆ ಈ ನಾಟಕದ ಯತ್ನ ನೆರವಾದೀತು. ಈಚೆಗೆ ಬಂಗಾಳಿ, ಮರಾಠಿ, ಉರ್ದು, ಗುಜರಾತಿಗಳಿಂದ ಭಾಷಾಂತರವಾಗಿ ನಾಟಕಗಳು ಬಂದಿವೆ. ನಮ್ಮಲ್ಲಿಯೂ ಹೊಸ ಬಗೆಯ ಕಥಾಗರ್ಭ, ರಂಗತಂತ್ರ, ಕಲ್ಪನಾ ವಿಲಾಸ, ಸಂಕೇತವುಳ್ಳ ನಾಟಕಗಳು ಬರುತ್ತಿವೆ. ಚಾಪೆಕ್, ಸಾರ್ತ್ರೆ, ಪಿರಂಡೆಲ್ಲೋ, ಇವೊನೆಸ್ಕೊ, ಬ್ರೆಕ್ಟ್ ಮುಂತಾದವರನ್ನು ಆದರ್ಶವಾಗಿಟ್ಟುಕೊಂಡು ನಾಟಕಗಳು ಬರುತ್ತಿರುವುದು, ವಿಲಾಸಿ ನಾಟಕ ಸಭೆಗಳು ಅವನ್ನು ಆಡಿ, ನಾಟಕಾಭಿನಯವನ್ನು ಜನಪ್ರಿಯವನ್ನಾಗಿ ಮಾಡುತ್ತಿರುವುದು ತುಂಬಾ ಉತ್ಸಾಹಕ ಲಕ್ಷಣ. ನಮ್ಮ ಜನತೆಯ ಜಾಯಮಾನ, ಜೀವಲಕ್ಷಣಗಳನ್ನು ಕಾಣಿಸುತ್ತ ದಿನಜೀವನದ ಆಳದಲ್ಲಿನ ಸಂಗತಿಗಳನ್ನು ಪ್ರತಿನಿಧಿಸಿ ಎಲ್ಲ ವರ್ಗದ ಎಲ್ಲ ಮಟ್ಟದ ಜನರಿಗೂ ಆಹ್ಲಾದ ತರುವ ಮೂರು ನಾಲ್ಕು ಗಂಟೆಗಳ ಕಾಲ ನಡೆಯುವ ನಾಟಕಗಳು ಬೇಗ ಹುಟ್ಟಿಬರಲಿ ಎನ್ನಿಸುತ್ತದೆ. ಭಾಷಾಂತರಿಸುವವರು ಭಾಷಾಂತರಿಸಬೇಕು; ಪ್ರಕಟನಕಾರರು ಪ್ರಕಟಿಸಬೇಕು; ಆಡುವವರು ಪ್ರೀತಿಯಿಂದ ಆಡಬೇಕು. ಸ್ವಂತ ಪ್ರಜ್ಞೆಗಳ ಆಳದಿಂದ, ಪ್ರತಿಭೆಯ ಸಾಹಸಗಳಿಂದ ನಿರ್ಮಾಣಮಾಡಬಲ್ಲವರು ಮಾಡಲಿ. ಲೋಕವೆಲ್ಲ, ಇಂದಿನ ಜೀವನವೆಲ್ಲ ಅವರ ಕಲ್ಪನೆಗೆ ತೆರೆದಿದೆ. ನಾನಾದೇಶಗಳವರು ಈ ಕೃತಿ ಕಲೆ ಪ್ರಕಾಶನಗಳನ್ನು ಲೋಕದಲ್ಲಿ ಹೇಗೆ ಮಾಡಿ ಸಾಹಿತ್ಯವನ್ನು ಬೆಳಗಿದ್ದಾರೆ ಎಂಬುದರ ಅರಿವು ನಮ್ಮವರ ಮನಸ್ಸನ್ನು ತೆರೆಯಬಲ್ಲದು, ವಿಶಾಲಗೊಳಿಸಬಲ್ಲದು.* ಆಡಿದ ನಾಟಕದ ಪ್ರಕಾಶವಾಗಿಯೇ ನಮ್ಮ ಸಾಹಿತ್ಯದಲ್ಲಿ ರಸಮೀಮಾಂಸೆ ಬೆಳೆದುದು. ಅದರ ಸಂತೋಷಕಾರಿತೆ ಸಾಹಿತ್ಯದ ಬೇರಾವ ಪ್ರಕಾರಕ್ಕೂ ಬರಲಾರದು.

ಜೊತೆಗೆ, ಸಾಹಿತ್ಯದ ಅಂಗವಾಗಿಯೂ ಪ್ರಯೋಗದ ಅಂಗವಾಗಿಯೂ ನಾಟಕವನ್ನು ಕುರಿತ ವಿಮರ್ಶೆ ನಮ್ಮ ನಾಡಿನಲ್ಲಿ ಬೆಳೆಯಬೇಕಾಗಿದೆ. ವಿದೇಶಗಳಲ್ಲಿ ಈ ಸಂಪತ್ತಿ

---

* ಮೊದಲು ಕೈಲಾಸಂ, ಆಮೇಲೆ ಶ್ರೀರಂಗರು ಸ್ವತಂತ್ರ ಸಾಮಾಜಿಕಗಳನ್ನು ನಿರ್ಮಾಣ ಮಾಡಿದರು. ಈಚೆಗೆ ಹಲವರು ಪ್ರಖ್ಯಾತ ನಾಟಕಕಾರರು ಜನಮೆಚ್ಚಿಕೆಗೆ ಪಾತ್ರರಾಗಿ ಒಳಗೆ, ಹೊರಗೆ ಕೀರ್ತಿ ಪಡೆದಿರುವುದು ಸಂತೋಷದ ಸಂಗತಿ.

ಅತಿಶಯವಾಗಿ ವಾಗಿಗೊಂಡಿದೆ. ಹೊಸ ಕಾಲದ ನಾಟಕಕ್ಕೆ ಸಂಬಂಧಿಸಿದ ಲಕ್ಷಣನಿರೂಪಣೆ, ತಂತ್ರಸ್ವರೂಪ ಮುಂತಾದವುಗಳನ್ನು ನಮ್ಮ ಜನ ಅರಿಯಬೇಕಾದರೆ ಲಕ್ಷ್ಯಗಳಾಗಿ ಒಂದು ನೂರು ನಾಟಕಗಳು ಬೇಕು. ಸಾವಿರ ವರ್ಷ ಜೀವಂತವಾಗಿ ಬೆಳೆದ ಸಂಸ್ಕೃತ ಸಾಹಿತ್ಯದಲ್ಲಿಯೇ ತಲೆಮಣಿಗಳೆಂದು ಎಣಿಕೆ ಮಾಡಬಲ್ಲ ನಾಟಕಗಳು ಇಪ್ಪತ್ತಕ್ಕೆ ಹೆಚ್ಚಾಗಿಲ್ಲ. ಕಾಳಿದಾಸನವು ಮೂರು; ಭವಭೂತಿಯವು ಮೂರು; ಶ್ರೀಹರ್ಷನವು ಮೂರು; ಭಾಸನವು ಬಹುಶಃ ನಾಲ್ಕು-ಐದು; ವೇಣೀಸಂಹಾರ, ಮುದ್ರಾರಾಕ್ಷಸ, ಮೃಚ್ಛಕಟಿಕ, - ಜಾನಕೀಹರಣ, ಕೌಮುದೀಮಹೋತ್ಸವ, ವಿಶ್ವಗುಣಾದರ್ಶಾದಿಗಳನ್ನು ಸೇರಿಸೋಣವೆ?- ಇದನ್ನು ಬಿಟ್ಟರೆ ನಮ್ಮ ನಾಟಕ ಸಂಖ್ಯೆ ಸುಮಾರು ಮುಗಿದಂತೆ ಆಯಿತು. ೭೦೦-೮೦೦ ಸಂಖ್ಯೆಯ ನಾಟಕಗಳನ್ನು ಪಟ್ಟಿಗಳಲ್ಲಿ ಕಾಣಬಹುದು; ಆದರೆ ಲೆಕ್ಕಕ್ಕೆ ಬರುವ ಸಂಖ್ಯೆಯೆಲ್ಲ ಇಷ್ಟೇ. ಆಟಕ್ಕೆ, ಸಂತೋಷಕ್ಕೆ, ಸ್ವೀಕಾರಕ್ಕೆ ಒದಗದಿರುವವೇ ಹೆಚ್ಚು. ಭರತಖಂಡದ ನಾಟಕ ನಿರ್ಮಾಣದ ಶಕ್ತಿಗೇ ಯಾವುದೊ ಅಂಶ ಊನ. ಸ್ವತಂತ್ರವಾಗಿ ಬರೆಯುವವರ ಸಾಹಸದ ಮಾರ್ನುಡಿ ಆದರೂ ಭಾಷಾಂತರ ಮಾಡಬಲ್ಲ ಶಕ್ತಿ, ಪ್ರೀತಿ, ಭಕ್ತಿ ಇರುವ ಜನ ಭಾಷಾಂತರದ ಕಾರ್ಯವನ್ನು ಶ್ರದ್ಧೆಯಿಂದ ಮಾಡಬಹುದಲ್ಲವೆ? The more the merrier ಎನ್ನುವುದು ಜನದ ಗೋಷ್ಠಿಗೆ ಸಂಬಂಧಿಸಿದ್ದು ಮಾತ್ರವೇ ಅಲ್ಲ; ಇಂಥ ಪ್ರಕರಣಗಳಿಗೂ ಹೊಂದುವಂಥ ಮಾತು: ಭೂತಾಯಿಗೆ ವಸುಂಧರಾ ಎಂಬಂತೆ. ಈ ಕಲೆ ವಸುಂಧರೆ ಆಗಬಹುದು. ರಾಯರು ಅವರ ಪ್ರೀತಿಯ ಇನ್ನು ಕೆಲವು ನಾಟಕಗಳನ್ನು ಕನ್ನಡಕ್ಕೆ ಭಾಷಾಂತರ ಮಾಡಲಿ.* 'ಸರ್ವಂ ಕಾಲಂ ಅಪೇಕ್ಷತೆ' ಎನ್ನುತ್ತಾರೆ. ಆ ಕಾಲ ಬಂದಾಗ ಪ್ರಕಟವಾಗಲಿ. ರಾಯರ ಶಕ್ತಿ ಉತ್ಸಾಹಗಳೂ ಇಂದೂ ಹಿಂದಿನಂತೆಯೇ ಇವೆ. ಮುಂದಿನ ವರ್ಷಗಳಲ್ಲಿ, ಈವರೆಗಿನವರಂತೆ ಪ್ರೀತಿ ವಿಶ್ವಾಸ ಭಕ್ತಿಗಳಿಂದ ಹೊರದೇಶಗಳ ನಾಟಕಗಳನ್ನೂ ಅವುಗಳ ಹೃದಯವನ್ನೂ ಹೆಚ್ಚು ಭಾಷಾಂತರ ಮಾಡಬಲ್ಲವರ ಸಂಖ್ಯೆ ಕಡಮೆಯಾದೀತೆಂಬ ಭಯದ ಮುಂಗಾಣ್ಕೆಗಳಿಗೆ ಈಡಾಗದಿರಲಿ.

---

* ಅವರು ಇಂಗ್ಲಿಷಲ್ಲಿ Mirdad ಎಂಬ ಒಂದು ಗೇಯನಾಟಕವನ್ನು ಬರೆದಿದ್ದಾರೆ. ಅದಕ್ಕೆ ಒಳ-ಹೊರ ದೇಶಗಳಲ್ಲಿ ಯೋಗ್ಯತಾಪತ್ರಗಳು ದೊರಕಿವೆಯಾದರೂ ರಾಯರೇ ಮುಂಗಡವಾಗಿ ಹಣ ಒದಗಿಸಿರಲು, ಬೊಂಬಾಯಿನ ಭಾರತೀಯ ವಿದ್ಯಾಭವನದವರು ಅದನ್ನು ಪ್ರಕಟಿಸುತ್ತಿದ್ದಾರೆ. ಇದೂ ಒಂದು ಉಪಕಾರವೇ. ಸಂಸ್ಥೆಯ ಹೆಸರಿನ ಆಶ್ರಯ, ಕೀರ್ತಿ, ಅದಕ್ಕೆ ಸ್ಥಾನಮಾನ ತರುತ್ತಿದೆ. ಮಾರಾಟ ಬಲಿಯಬಹುದು. ಹೊಟ್ಟೆ ಕಟ್ಟಿ, ಬಟ್ಟೆ ಕಟ್ಟಿ ಅಚ್ಚುಮಾಡಿಸಬಹುದು. ಅದನ್ನು ಮಾರುವುದು, ಅಂಚೆಗೆ ಸಿದ್ಧಪಡಿಸುವುದು ಎಲ್ಲರ ಭಾಗ್ಯವಲ್ಲ, ಕಲೆಗಾರರಿಗೆ ಸುಲಭವಲ್ಲ. ಮಾರಾಟಗಾರರು ಅದನ್ನು ಮಾರಲು ಒಪ್ಪಿದಾಗ ಬೆಲೆಯ ಶೇ.೪೦ - ೫೦ ಕಮೀಷನ್ ಕೊಡಿ ಎಂದು ಕೇಳುತ್ತಾರಾಗಿ ಪರಿಸ್ಥಿತಿ ನಿರುತ್ಸಾಹ ತರುತ್ತದೆ. ಅಷ್ಟೇ ಅಲ್ಲ, ಏಕಾದರೂ ಈ ಶನಿಗೆ ಕೈಹಾಕಿದೆವೊ ಎನ್ನಿಸುತ್ತದೆ. ಈ ಸಂಗತಿ ನಿರ್ಮಾಣಯತ್ನಕ್ಕೇ ಭಂಗ ತರುತ್ತದೆ. ಕೊಳ್ಳುವವರು ಬೆಳೆದು ಮಾರಾಟವಾಗುವುದಾದರೆ ಆದೀತು. ಕನ್ನಡಿಗರ ಉಪಪತ್ತಿ, ಅಭಿಮಾನ ಎರಡೂ ವಿಚಾರ್ಯವೇ.

ಯೋಗ ಕ್ಷೇಮ ಎಂಬ ಮಾತು ನಮ್ಮ ಜನಜೀವನದಲ್ಲಿ ರೂಢವಾದ್ದು. ಉತ್ತರ ಭಾಗದ ಮಾತು ಇರವು; ಇರುವುದೆಲ್ಲ ಸುಖವಾಗಿ ನೆಮ್ಮದಿಯಾಗಿದೆ ಎಂಬುದು ಕ್ಷೇಮದ ಭಾಗ. ಹೊಸದಾಗಿ ಬರುವುದು ಯೋಗಭಾಗ. ಹೊರಗಿಂದ ಹೊಸತಾಗಿ ಬಂದುದೂ ಭಾಗ್ಯವೇ, ಭೋಗ್ಯವೇ. ನಾಡಿನ ಸಾರಸ್ವತ ಭೋಗಭಾಗ್ಯ ಮುಂದಿನ ಕಾಲದಲ್ಲಿ ಇತೋಪ್ಯತಿಶಯವಾಗಿ ಬೆಳೆಯುವಂತಾಗಲಿ.

ಎಚ್. ವಿ. ಭಾಷ್ಯಂ

ಬೆಂಗಳೂರಲ್ಲಿ ನಮ್ಮ ಕಾಲದಲ್ಲಿ ಹೆಸರಾಗಿದ್ದವರು ಭಾಷ್ಯಂ ಎಂಬ ಹೆಸರವರು ಇಬ್ಬರು. ಒಬ್ಬರು ಕೆ.ಟಿ. ಭಾಷ್ಯಂ; ಇನ್ನೊಬ್ಬರು ಎಚ್.ವಿ. ಭಾಷ್ಯಂ. ಇಬ್ಬರೂ 'ಫ್ರೆಂಡ್ಸ್ ಯೂನಿಯನ್' ಎಂಬ ಸಂಸ್ಥೆಗೆ ಸದಸ್ಯರು; ಇಬ್ಬರೂ ಮಾತುಗಾರರು. ಆದರೆ ಚಹರೆ, ಗುಣ, ರೀತಿ ಬೇರೆ ಬೇರೆ. ಪ್ರತಿಭಟನೆಯಲ್ಲಿ ಕೆ. ಟಿ. ಭಾಷ್ಯಂ ಚುರುಕು; ಎಚ್. ವಿ. ಭಾಷ್ಯಂ ನುಣು, ಸರಸಿ. ಕಾಲಕ್ರಮದಲ್ಲಿ ಕೆ.ಟಿ. ಭಾಷ್ಯಂ ಲಾಯರಾಗಿ, ರಾಜಕೀಯದಲ್ಲಿ ಮುಂದಾಳುವಾಗಿ, ಮೈಸೂರು ಸಾರ್ವಜನಿಕದಲ್ಲಿ ಪ್ರಭಾವಶೀಲರಾದರು; ಮಂತ್ರಿಯಾದರು. ಎಚ್.ವಿ. ಭಾಷ್ಯಂ ವೆಸ್ಲಿಯನ್ ಮಿಷನ್ ಹೈಸ್ಕೂಲಲ್ಲಿ ಮೇಸ್ಟರಾಗಿದ್ದು, ಸಾಹಿತ್ಯದ ಎಂ.ಎ. ಪರೀಕ್ಷೆಗೆ ಓದಲು ಮೈಸೂರಿಗೆ ಬಂದು, ಮೊದಲು ಶಾರದಾವಿಲಾಸ ಹೈಸ್ಕೂಲಲ್ಲಿಯೂ ಆಮೇಲೆ ಮಹಾರಾಜಾ ಕಾಲೆಜಲ್ಲಿಯೂ ಅಧ್ಯಾಪಕರಾದರು. ಉತ್ತರ ಕಾಲದಲ್ಲಿ ಬೆಂಗಳೂರಲ್ಲಿ ಇಂಟರ್‌ಮೀಡಿಯಟ್ ಕಾಲೆಜಲ್ಲಿ ಉಪಾಧ್ಯಾಯರಾಗಿದ್ದರು. ಕೆ. ಟಿ. ಭಾಷ್ಯಂ ಸ್ಥೂಲವಾದ ಪರಿಚಯ ಮಾತ್ರ ನನಗಿತ್ತು. ಎಚ್. ವಿ. ಸುಮಾರು ೧೯೧೫–೧೬ರಿಂದ ಕಡೆಯ ತನಕ ನನ್ನ ನಚ್ಚಿನ ಗೆಳೆಯರು. ವಯಸ್ಸಿನಲ್ಲಿ ನನಗೆ ಅವರು ಕೆಲವು ವರ್ಷ ಹಿರಿಯರು. ಆದರೆ ವಯಸ್ಸಿನ ಹಿರಿಮೆಯನ್ನಾಗಲಿ ತಿಳಿವಳಿಕೆ ಲೋಕಾನುಭವಗಳ ಹೆಚ್ಚಿಗೆಯನ್ನಾಗಲಿ ನನ್ನ ಮೇಲೆ – ಏಕೆ ಯಾರ ಮೇಲೆಯೂ – ಹೊರಸಿದವರಲ್ಲ. ಅವರ ಮಾನವತೆ, ಸರಸ, ಸಹಚರ್ಯೆ ಇತರರಲ್ಲಿ ನಾನು ಕಂಡಿರಲಿಲ್ಲ. ಶಾರದಾವಿಲಾಸ ಹೈಸ್ಕೂಲಿಂದ ಮಹಾರಾಜಾ ಕಾಲೆಜಿಗೆ ಟ್ಯೂಟರಾಗಿ ಇವರು ಹೋದಮೇಲೆ ಖಾಲಿಬಿದ್ದ ಆ ಸ್ಥಳಕ್ಕೆ ಉಪಾಧ್ಯಾಯನಾಗಿ ನಾನು ಸೇರಿಕೊಂಡದ್ದು. ಅಲ್ಲಿನ ಸಂಪರ್ಕಗಳು ಅವರಿಗೂ ಆಪ್ತವಾದುದರಿಂದ ನಮ್ಮ ಸಾಹಚರ್ಯವೂ ಕಂದದೆ, ಕುಂದದೆ ನಡೆದುಕೊಂಡು ಬಂದಿತು.

ಅವರು ಆಂಗ್ಲ ಸಾಹಿತ್ಯ ಬೋಧಕರು. ತರಗತಿಗಳಲ್ಲಿ ಹೇಳಬೇಕಾಗಿದ್ದ ಪಾಠಗಳ ಜೊತೆಗೆ ಅವರು ಓದಿದ್ದ ನೂರಾರು ಗದ್ಯ ಪದ್ಯ ಕಾವ್ಯಗಳಿಂದ ನಾಟಕಗಳಿಂದ ಉದಾಹರಣೆಗಳನ್ನು ಎತ್ತಿಕೊಂಡು ಸಂಭಾಷಣೆಯನ್ನೊ ಪಾಠ ಪ್ರವಚನಗಳನ್ನೊ ಹರ್ಷಗೊಳಿಸುತ್ತಿದ್ದರು. ತಕ್ಷಣದ ಪಾಠದಲ್ಲಿ ಮಾತನ್ನು ಗಮನದಲ್ಲಿಟ್ಟುಕೊಂಡು ಲೋಕವನ್ನೂ ಜನಜೀವನವನ್ನೂ ಮರೆಯುವುದಕ್ಕೆ ಎಂದಿಗೂ ಅವರ ಮನಸ್ಸು ಒಗ್ಗುತ್ತಿರಲಿಲ್ಲ. ಸಾಹಿತಿಯ ಮನೋಭಾವ ಒಂದು ಹೃದ್ವಿಲಾಸದ್ದು. ಒಂದು ನಗೆ, ಮನಸ್ಸಿನ ಹಗುರ ಎಲ್ಲಕ್ಕೂ ಹೊಂದಿಕೊಂಡು ಅದದಕ್ಕೆ ಬೆಲೆಕೊಟ್ಟು ಅದನ್ನು ಜೀವನಕ್ಕೆ ಹೇಗೆ ಹೊಂದಿಸಿಕೊಳ್ಳುತ್ತದೆಂದು ತಿಳಿಸಿ, ಹುಡುಗರ ಮನಸ್ಸನ್ನು ಹಿಗ್ಗಿಸಿ, ಅವರ ಓಲನ್ನು ದೊಡ್ಡದಕ್ಕೆ ಒಲಿಸಬಲ್ಲವರಾಗಿದ್ದರು. ಇತರ ಅನೇಕ ಉಪಾಧ್ಯಾಯರು ಮಾಡದಿದ್ದ ಕೆಲಸವಾದ ವಿದ್ಯಾರ್ಥಿಗಳ ಇಂಗ್ಲಿಷ್ ವಾಕ್ಯರಚನೆ, ಲೇಖನಗಳನ್ನು ಅವರಿಂದ

ತರಿಸಿಕೊಂಡು, ಒಬ್ಬೊಬ್ಬರನ್ನಾಗಿ ತಮ್ಮ ಬಳಿಗೆ ಕರೆದು, ಸರಿತಪ್ಪುಗಳನ್ನು ಅವರಿಗೆ ಪ್ರೀತಿಯಿಂದ ಹೇಳುತ್ತಿದ್ದರು. ಸೆಂಟ್ರಲ್ ಕಾಲೇಜಲ್ಲಿ ಮುಖ್ಯವಾಗಿ ಹಿಂದೆ ಟೇಟ್ ಸಾಹೇಬರು, ಸೆಲ್ ಸಾಹೇಬರು, ಮೈಸೂರಲ್ಲಿ ಕ್ವಚಿತ್ತಾಗಿ ರಾಲೊ ಹಾಗೆ ಮಾಡುತ್ತಿದ್ದುದುಂಟು. ಸೆಲ್ ಬೆಂಗಳೂರು ಕಾಲೇಜಿಗೂ ಪಾಠಕ್ಕೆ ಬರುತ್ತಿದ್ದರು. ಫ್ರೆಂಡ್ಸ್ ಯೂನಿಯನ್ ಅಧ್ಯಕ್ಷರು. ಇವರು ಟೇಟ್ ಸಾಹೇಬರಲ್ಲಿಯೂ ಸೆಲ್ ಸಾಹೇಬರಲ್ಲಿಯೂ ಕಲಿತವರು. ಇಂಗ್ಲಿಷನ್ನು ಕಲಿಯುವುದೇ ಆದರೆ ಅದನ್ನು ಸರಿಯಾಗಿ ಬಳಸುವುದನ್ನು, ಉಚ್ಚಾರಣೆ ತಪ್ಪದಿರುವುದನ್ನು ಕಲಿಸಿಕೊಡುವ ಪದ್ಧತಿ ಅವರದು. ಇಂಗ್ಲಿಷಿಗೆ ಬೆಲೆ ಇಲ್ಲದಿರುವ ಕಾಲದಲ್ಲಿ ಅಂಥದನ್ನು ಕಟ್ಟಿಕೊಂಡು ಏನಾಗಬೇಕು? – ಎನಿಸುತ್ತಿದೆ ಜನಕ್ಕೆ ಈಗ. ಆದರೆ ಯಾವ ಭಾಷೆಯನ್ನು ಕುರಿತೂ ಅದೇ ಮಾತಲ್ಲವೇ ಪ್ರಧಾನ? ಮೂಲಗ್ರಂಥಗಳಿಗೆ ಹೋಗಬೇಕು; ಅವನ್ನು ಆಳವಾಗಿ, ಕ್ರಮವಾಗಿ ಅಭ್ಯಾಸ ಮಾಡಬೇಕು; ಪಠ್ಯಪುಸ್ತಕಗಳೇ ಅಲ್ಲದೆ ಹತ್ತಾರು ಬೇರೆ ಗ್ರಂಥಗಳನ್ನು ಓದಿ ಮನಸ್ಸನ್ನು ವಿಸ್ತಾರ ಮಾಡಿಕೊಳ್ಳಬೇಕು ಎಂಬುದು ಅವರು ಹೇಳುತ್ತಿದ್ದ ಮಾತು. ಹೇಳುವ ರೀತಿಯಲ್ಲಿ ಒಂದು ನಯ, ಪ್ರೀತಿ, ವಿಶ್ವಾಸದ ಕಟ್ಟು ಇರುತ್ತಿದ್ದಿತು. ಅವರಿಗೆ ಬೆಂಗಳೂರೆಲ್ಲ ಸ್ನೇಹಿತವರ್ಗದಿಂದ ತುಂಬಿತ್ತು. ಅವರ ಅಕ್ಷರ ದುಂಡಗೆ ಮುತ್ತಿನಂತೆ, ಅದನ್ನು ಪೋಣಿಸಿದಂತೆ ಇರುತ್ತಿತ್ತು. ಬರವಣಿಗೆಯಲ್ಲಿಯೂ ಅದೇ ವಿಲಾಸ, ಸೌಲಭ್ಯ, ನಾಲ್ಕೈದು ಪುಟಗಳ ಕಾಗದ ಅವರ ಬರವಣಿಗೆಯ ಲಕ್ಷಣ.

ಅವರು ಕಲ್ಕತ್ತದಿಂದ ಹೊರಡುತ್ತಿದ್ದ ಮಾಸಪತ್ರಿಕೆ 'ಮಾಡರ್ನ್ ರೆವ್ಯೂ', ಕನ್ನಡದಲ್ಲಿ ಹೊಸತಾಗಿ ಧಾರವಾಡದಿಂದ ಪ್ರಕಟವಾಗುತ್ತಿದ್ದ 'ಜಯಕರ್ನಾಟಕ'ಗಳನ್ನು ತರಿಸುತ್ತಿದ್ದರು. ಉತ್ತರ ಕನ್ನಡ ಭಾಷೆ, ರೀತಿ ಮರ್ಯಾದೆಗಳೂ ಅವರಿಗೆ ಬೇಕಾಗಿದ್ದವು. ಇಲ್ಲಿನ ನಾವೂ ನಮ್ಮ ಪ್ರಬುದ್ಧ ಕರ್ನಾಟಕವೂ ಹೇಗೂ ಬಳಕೆಯಾಗಿದ್ದವು. ಆಗ ಬಳಕೆಯಲ್ಲಿರುತ್ತಿದ್ದ ಹುಬ್ಬಳ್ಳಿ – ಧಾರ್ಢವ್ಯಾಡಗಳ ಕನ್ನಡ, ಆ ಎರಡು ಪ್ರಪಂಚ ಇನ್ನೂ ಒಂದಾಗಿ ಆಪ್ತವಾಗಿ ಸೇರಿರಲಿಲ್ಲವಾಗಿ ಅದಕ್ಕೆ ಅವರದು ಗಮನ. ಇತ್ತ ರಾಜಕೀಯ ರಂಗದಲ್ಲಿ ಪ್ರಮುಖರಾಗಿದ್ದ ಅನಿಬೆಸೆಂಟ್, ಜಿ. ಎಸ್. ಅರುಂಡೇಲ್, ವಿ. ಎಸ್. ಶ್ರೀನಿವಾಸಶಾಸ್ತ್ರಿ, ಗೋಖಲೆ, ಸತ್ಯಮೂರ್ತಿ, ಜಾರ್ಜ್‌ಜೋಸೆಫ್ ಇವರ ಬರವಣಿಗೆ, ಮಾತು, ಪ್ರಭಾವ ಅವರ ಮೇಲಿತ್ತು. 'ಹಿಂದೂ' ದಿನಪತ್ರಿಕೆ ಜೊತೆಗೆ 'ನ್ಯೂ ಇಂಡಿಯ' ತಪ್ಪದೆ ಓದುತ್ತಿದ್ದರು. ಆ ಕಾಲದ ಭಾಷಣಕಾರರಲ್ಲಿ ಪ್ರಸಿದ್ಧರಾಗಿದ್ದ ಬಿಪಿನ ಚಂದ್ರ ಪಾಲ, ಸುರೇಂದ್ರನಾಥ ಬ್ಯಾನರ್ಜಿ ಇವರನ್ನೂ ಬೆಸೆಂಟ್ ಅವರನ್ನೂ ಮೆಚ್ಚಿಕೊಳ್ಳುತ್ತ ಭಿನ್ನ–ಭಿನ್ನವಾದ ಅವರ ವಾಗ್ವಿಲಾಸವನ್ನು ಕುರಿತು ಚರ್ಚೆ ಮಾಡುವುದು ಒಂದು ಸಮಯವಾಗಿತ್ತು. ಹಾಗೇ ಅರ್ಡ್ಲಿ ನಾರ್ಟನ್, ನ್ಯೂಜೆಂಟ್ ಗ್ರಾಂಟ್, ವಿ.ವಿ.ಎಸ್. ಅಯ್ಯಂಗಾರ್, ಎಸ್. ಶ್ರೀನಿವಾಸ ಅಯ್ಯಂಗಾರ್, ಚಿತ್ತರಂಜನ ದಾಸ್ ಮುಂತಾದವರ ನ್ಯಾಯವಾದಿತ್ವವನ್ನೂ ಅವರ ವಾದಸರಣಿಗಳನ್ನೂ ತಪ್ಪದೆ ಓದುವುದು ಅವರ ಒಂದು ರೂಢಿ. ಎಚ್.ಜಿ. ವೆಲ್ಸ್ ಬರೆದ 'ಟೋನೊ ಬಂಗೆ', 'ಹಿಸ್ಟರಿ ಆಫ್ ಮಿಸ್ಟರ್ ಪಾಲಿ' ಮುಂತಾದುವನ್ನು ಓದಬೇಕೆಂದು ನನಗೆ ಪ್ರಶಂಸಿಸಿ ಹೇಳಿ ನನ್ನ ಕೈಯಿಂದ ಅವನ್ನು ಓದಿಸಿದರು. ಹಾಗೆಯೇ ನಮ್ಮ ವಾಚನಾಲಯಕ್ಕೆ ಪ್ರತಿವಾರ 'ಇಲಸ್ಟ್ರೇಟೆಡ್ ಲಂಡನ್ ನ್ಯೂಸ್' ಬರುತ್ತಿತ್ತು. ಜಿ.ಕೆ. ಚೆಸ್ಟರ್‌ಟನ್, ಬೆಲ್ಲಾಕ್, ಎ.ಜಿ.

ಗಾರ್ಡಿನರ್ ಮುಂತಾದವರ ಬರವಣಿಗೆಯನ್ನೂ ನಾವು ಜೊತೆಗೆ ಓದುತ್ತಿದ್ದುದುಂಟು. ಅವರ ಸ್ನೇಹಿತರಾಗಿ ಬೆಂಗಳೂರು ಕೊಟ್ಟಿಗೆಯಲ್ಲಿ ವಾಸ ಮಾಡುತ್ತಿದ್ದ ಬಿ.ಎಸ್.ಎನ್. ಅಯ್ಯಂಗಾರ್ ಉರುಫ್ ಅಪ್ಪಣ್ಣನವರ ಮನೆಗೆ ನಾನೂ ಸಾಮಾನ್ಯವಾಗಿ ಹೋಗುತ್ತಿದ್ದುದುಂಟು. ಅವರ ಮಹಡಿಯ ಮೇಲೆ ಕುಳಿತು ಅವರ ಪುಸ್ತಕ ಭಂಡಾರದ ಅನೇಕ ಪುಸ್ತಕಗಳನ್ನು ಮತ್ತಿತರ ವ್ಯಾಸಂಗಗಳನ್ನು ಅಲ್ಲಿ ಮಾಡಿದ್ದುಂಟು. ಮುಂದಿನ ಕಾಲದಲ್ಲಿ ಅಪ್ಪಣ್ಣನವರು ಅವರಿಗೆ ಇನ್ನೂ ಹತ್ತಿರದ ಬಂಧುಗಳಾದರು; ಭಾಷ್ಯಂ ಎರಡನೆ ತಮ್ಮ ಎಚ್. ವರದರಾಜ ಐಯೆಂಗಾರ್ – ಎಚ್. ವಿ. ಆರ್. ಐಯೆಂಗಾರ್– ಅಪ್ಪಣ್ಣನವರ ಹಿರಿಯ ಅಳಿಯಂದಿರಾದಾಗ.

ಅವರ ಮನೆ ಇದ್ದದ್ದು ಅಕ್ಕಿಪೇಟೆಯ ಒಂದು ಬೀದಿಯಲ್ಲಿ. ಪೇಟೆಬೀದಿಯಿಂದ ಎಡ ಒಳಕ್ಕೆ ಆ ಬೀದಿಯಲ್ಲಿ ಹೋಗಿ ಸುತ್ತ ಗೌಳಿಗರ ಮನೆಯನ್ನೂ ಹಸು ಎಮ್ಮೆಗಳನ್ನೂ ತತ್ಸಂಬಂಧದ ವಾಸನೆಗಳನ್ನೂ ಸಹಿಸಿಕೊಂಡು ಅವರ ಮನೆಗೆ ಹೋಗಬೇಕಿತ್ತು. ತಂದೆ ಸೆಕ್ರೆಟೇರಿಯೇಟಲ್ಲಿ ಒಂದು ನೌಕರಿಯಲ್ಲಿದ್ದರು. ಮೂರು ನಾಲ್ಕು ಮಂದಿ ಹೆಣ್ಣು ಮಕ್ಕಳು, ಮೂವರು ಸಹೋದರರು ಇದ್ದರು. ಭಾಷ್ಯಂ ದೊಡ್ಡವರು. ಎರಡನೆಯವರು 'ಪಾಪಾ' ಎಂದು ಕರೆಯುತ್ತಿದ್ದ ಲಕ್ಷ್ಮೀನರಸಿಂಹ ಅಯ್ಯಂಗಾರ್ಯರು; ಲಾಯರು ಪರೀಕ್ಷೆ ಪ್ಯಾಸು ಮಾಡಿದ್ದವರು. ಮೂರನೆಯವರು ಮೊದಲಿಂದಲೂ ಜಾಣರು, ಚುರುಕಿನವರು ಎನ್ನಿಸಿಕೊಂಡು ವಿದ್ಯಾರ್ಥಿ ದೆಸೆಯಲ್ಲಿಯೇ ಹೆಸರು ಪಡೆದಿದ್ದ ವರದರಾಜ ಅಯ್ಯಂಗಾರ್ಯರು. ಅವರನ್ನು ಮನೆಯಲ್ಲಿ ಬಹುಶಃ 'ರಾಜ' ಎಂದು ಕರೆಯುತ್ತಿದ್ದರು. ತಮ್ಮ ದೊಡ್ಡ ಹೆಸರನ್ನು ಸುಮಾರು ೧೯೨೫ರ ಹೊತ್ತಿಗೆ ಐ.ಸಿ.ಎಸ್. ಪಾಸುಮಾಡಿದಾಗ ಎಚ್. ವಿ. ಆರ್. ಅಯ್ಯಂಗಾರ್ (ಆಮೇಲೆ lengar) ಎಂದು ಸಣ್ಣಗೆ ಮಾಡಿಕೊಂಡು, ಬ್ರಿಟಿಷರ ಕಾಲದಲ್ಲಿಯೂ ಸ್ವಾತಂತ್ರ್ಯೋತ್ತರ ಕಾಲದಲ್ಲಿಯೂ ದೊಡ್ಡ ಹುದ್ದೆಗಳನ್ನಲಂಕರಿಸಿದ್ದರು. ಬೊಂಬಾಯಿ ಗೌರ್ನರರ ಹಣದ ಮಂತ್ರಿ, ಗೃಹಮಂತ್ರಿ ಆಗಿದ್ದಂತೆ ನೆಹರೂ ಅವರಿಗೂ ಪಟೇಲರಿಗೂ ಆಪ್ತಕಾರ್ಯದರ್ಶಿಗಳಾಗಿ, ಬ್ರಿಟಿಷ್ ಸರ್ಕಾರದಿಂದಲೂ ಭಾರತ ಸರ್ಕಾರದಿಂದಲೂ ಬಿರುದನ್ನು ಸಂಪಾದಿಸಿದ್ದರು. ರಿಜರ್ವ್ ಬ್ಯಾಂಕ್ ಗೌರ್ನರಾಗಿ ಪದವಿಯಿಂದ ನಿವೃತ್ತರಾದರು. ಆ ಎಲ್ಲ ಸಮಯಗಳಲ್ಲಿಯೂ ಅವರ ಸಜ್ಜನತೆ, ಸೌಲಭ್ಯ ನಡೆದುಕೊಂಡು ಬಂದವು. ಈ ಗುಣಗಳು ಆ ಮನೆಗೇ ಬಂದುವೆನಿಸುತ್ತದೆ. ಈ ಸೋದರರ ಸೋದರ ಮಾವನೇ ನಾನಿದ್ದಷ್ಟು ಕಾಲವೂ ಮೈಸೂರು ಶಾರದಾವಿಲಾಸ ಹೈಸ್ಕೂಲಲ್ಲಿ – ನಾನು ಅಲ್ಲಿಂದ ಬಿಟ್ಟುಬಂದ ಮೇಲೂ – ಭೌತಶಾಸ್ತ್ರದ ಉಪಾಧ್ಯಾಯರಾಗಿದ್ದು, ಅಲ್ಲಿ ಹೆಡ್ ಮಾಸ್ಟರ್ ಆಗಿ, ನನ್ನ ಬದುಕಿಗೆ ನೆರವಾದರು. ಶಾರದಾವಿಲಾಸ ಹೈಸ್ಕೂಲಿನ ನನ್ನ ಬದುಕಿಗೆ ಭಾಷ್ಯಂ ಆರಂಭ. ನಾನು ಅಲ್ಲಿರುವಷ್ಟು ದಿನವೂ ಅಲ್ಲಿ ನನಗೆ ಒತ್ತಾಸೆಯಾಗಿ ಹತ್ತಿರದ ಗೆಳೆಯರಾಗಿದ್ದವರು ಅವರ ಸೋದರಮಾವ ರಾಮಣ್ಣನವರು. ಅವರೂ ಹಾಗೇ ಸ್ನೇಹಪರರು, ಸರಸ ವಿನೋದಿಗಳು. ಭಾಷ್ಯಂಗೂ ತಮ್ಮಂದಿರಿಗೂ ಮೈದುನಂದಿರಿಗೂ ತುಂಬಾ ಪ್ರೀತಿ, ಸಲುಗೆ. ಅಣ್ಣನೆಂದರೆ ಅವರಿಗೂ ಅತಿಶಯ ಆದರ, ಭಕ್ತಿ.

ಮೈಸೂರಲ್ಲಿ ಡಿ. ಸುಬ್ಬಯ್ಯ ರಸ್ತೆಯಲ್ಲಿ ಒಂದು ಹೆಬ್ಬಾರ್ ವೈಷ್ಣವ ಹಾಸ್ಟೆಲ್ ಎಂಬ ವಸತಿ – ಭೋಜನಗಳ ಮನೆ ಇತ್ತು. ಅವರಿರುವವರೆಗೂ ಅಲ್ಲಿದ್ದು ಬೆಂಗಳೂರಿಗೆ ಬಂದಮೇಲೆ ಅಲ್ಲಿನ ಸಂಪರ್ಕಗಳನ್ನು ಬಿಟ್ಟುಕೊಟ್ಟರು. ಅವರಿಗೆ ದೇಹಾರೋಗ್ಯ ಇರಲಿಲ್ಲ. ರ್ಯೂಮ್ಯಾಟಿಸಂ ಎಂಬ ಒಂದು ಬಗೆಯ ವಾಯುಪೀಡೆ ಇತ್ತು. ಅವರು ಅದನ್ನು ಅನುಭವಿಸಿ ತಾಳಿಕೊಂಡ ರೀತಿ ಲೋಕೋತ್ತರವಾದ್ದು. ಅದಕ್ಕೆ ಚಿಕಿತ್ಸೆ ಬಹು ನಾಜೂಕಾಗಿ ನಡೆಯಬೇಕು. ಕಾಶಿಯಿಂದ ಮಧುಸೂದನ ಶರ್ಮ ಎಂಬ ಶುಚಿಶೀಲರೂ ವಿದ್ವಾಂಸರೂ ಆದ ಆಯುರ್ವೇದ ವೈದ್ಯರು ಬಂದಿದ್ದರು. ಅವರು ಬಂದಾಗ ಉಡಲು ಹೊದೆಯಲು ಎಷ್ಟು ಬೇಕೊ ಅಷ್ಟೇ ಬಿಟ್ಟಿ; ಒಂದು ತಂಬಿಗೆ, ಒಂದು ದಂಡ ಮಾತ್ರ ಅವರಲ್ಲಿ ಇತ್ತು. ಕಾಲಕ್ರಮದಲ್ಲಿ ಅವರು ಚಾಮುಂಡಿ ಬೆಟ್ಟದ ತಪ್ಪಲಲ್ಲಿ ಒಂದು ಕಡೆ ಆಶ್ರಮ ಮಾಡಿಕೊಂಡು ನಿಂತು ಆಯುರ್ವೇದ ವೈದ್ಯ ನಡಸಿದರು. ನೂರಾರು ಬಗೆಯ ಭಸ್ಮಗಳು, ಲೇಹ್ಯಗಳು, ಔಷಧಿಗಳು ತಯಾರಾದವು. ಸುತ್ತಲ ಎಲ್ಲ ಮೂಲಿಕೆಗಳ ಅನ್ವೇಷಣೆಯೂ ನಡೆದು ಕೆಲವು ಮಂದಿ ಶಿಷ್ಯರು ಅವರಲ್ಲಿ ಆಯುರ್ವೇದ ಪ್ರಯೋಗವನ್ನು ಕಲಿತರು. ನಾಡಿ ಪರೀಕ್ಷೆಯಲ್ಲಿ ಅವರ ನಿಷ್ಣಾತತೆ ವಿಶೇಷವಾದ್ದು. ಅವರಿಗೆ ಭಾಷ್ಯಂ ಅವರನ್ನು ಕಂಡರೆ ಅತಿಶಯಪ್ರೀತಿ. ಇವರ ಕಾಹಿಲೆ ಪೂರ್ತಿ ವಾಸಿಯಾಗುವ ಸ್ಥಿತಿಯಲ್ಲಿರಲಿಲ್ಲವಾದರೂ ನೋವು ಕಡಮೆಯಾಗುವುದಕ್ಕೂ ಅವರ ದಿನಚರಿಯ ಕಾರ್ಯವೃತ್ತಿ ಸುಸೂತ್ರವಾಗಿ ನಡೆಯಬೇಕೆಂದೂ ಅನೇಕ ಬಗೆಯ ಔಷಧಿ–ಪಥ್ಯಗಳನ್ನು ಅವರು ಮಾಡಿದ್ದರು. ಸೌಮ್ಯರಾದ, ಆರು ಅಡಿ ಎತ್ತರದ, ಹೆಚ್ಚು ಮಾತಾಡದ ಪಂಡಿತರು ಭಾಷ್ಯಂ ಅನ್ನೂ ಮನೆಯವರನ್ನೂ ಅವರ ಮಿತ್ರರಾದ ನಮ್ಮಂಥವರನ್ನೂ ನಡಸಿಕೊಂಡ ರೀತಿ 'ಉದಾರ ಚರಿತಾನಾಂ ತು ವಸುಧೈವ ಕುಟುಂಬಕಂ' ಎಂಬ ಲಕ್ಷಣದ್ದು. ನಾನೂ ಅವರೂ ಬೆಟ್ಟದ ಆಶ್ರಮಕ್ಕೆ ಹೋಗುತ್ತಿದ್ದೆವು. ನನ್ನನ್ನು ತುಂಬಾ ಪ್ರೀತಿಯಿಂದ ಉಪಚಾರ ಮಾಡುವುದರ ಜೊತೆಗೆ ಹೊಸದಾಗಿ ಮಾಡಿದ ಮಹಾಕೂಷ್ಮಾಂಡ, ಚ್ಯವನಪ್ರಾಶ ಮುಂತಾದ ಲೇಹ್ಯಗಳನ್ನು ಕೊಟ್ಟು, ಇದರ ಜೊತೆಗೆ ಬೇಕಾದಷ್ಟು ತುಪ್ಪ–ಹಾಲು ತೆಗೆದುಕೊಳ್ಳಿ ಎನ್ನುತ್ತಿದ್ದರು. ಪಂಡಿತರನ್ನು ಕಂಡರೆ ಭಾಷ್ಯಂ ಅವರಿಗೂ ಗೌರವ, ಗುರುಭಕ್ತಿ. ಆ ಸಂಬಂಧವನ್ನು ಯಾರೂ ನೋಡಬಹುದಾಗಿತ್ತು. ಭಕ್ತಿ ಇಬ್ಬರ ನಡುವೆ ಪ್ರೀತಿ ಬೆಳೆಯುವ ಭಾವ, ರೀತಿ ಎನ್ನುತ್ತಾರೆ. ಭಕ್ತಿಯ ಎರಡು ಮೂರು ಭಾವಗಳು ಇಲ್ಲಿ ಬೆರೆತು ಬೆಳೆದಿದ್ದವು.

೧೯೨೮ರಲ್ಲಿ ನಾನು ಬೆಂಗಳೂರು ಇಂಟರ್‌ಮೀಡಿಯೆಟ್ ಕಾಲೆಜಿಗೆ ಕನ್ನಡ ಉಪನ್ಯಾಸಕನಾಗಿ ಬರುವ ವೇಳೆಗೆ ಭಾಷ್ಯಂ ಅಲ್ಲಿ ಇಂಗ್ಲಿಷ್ ಉಪನ್ಯಾಸಕರಾಗಿದ್ದು, ನನಗೆ ಹಿರಿಯಣ್ಣನಂತೆ ನಡಸಿಕೊಂಡರು. ಅಲ್ಲಿ ಏರ್ಪಟ್ಟ ಯೂನಿಯನ್ ಸಂಬಂಧದಲ್ಲಿಯೂ ಪುಸ್ತಕ ಭಂಡಾರಗಳ ರಚನೆ, ಗ್ರಂಥ ಸಂಕಲನಗಳ ಸಂಬಂಧದಲ್ಲಿಯೂ ದೊಡ್ಡ ಪ್ರಮಾಣದಲ್ಲಿ ಅದು ನಡಸುತ್ತಿದ್ದ ಯೂನಿಯನ್ ರೀಡಿಂಗ್ ರೂಮಿಗೆ ನಿಯತಕಾಲಿಕೆಗಳನ್ನು ತರಿಸುವ ವಿಷಯದಲ್ಲಿಯೂ ನಾವು ಮೂರು – ನಾಲ್ಕು ಜನ ಇತರರಿಗೆ ಅಸೂಯೆ ಬರುವಷ್ಟು ಪ್ರೀತಿಯಿಂದ ವ್ಯವಹರಿಸುತ್ತಿದ್ದೆವು. ನಮ್ಮ ರೀಡಿಂಗ್ ರೂಮಿನ ಪತ್ರಿಕೆಗಳನ್ನು ನೋಡಿ ನನ್ನ ಪ್ರಾಧ್ಯಾಪಕರೂ ಕಾಲೆಜ್ ಪ್ರಿನ್ಸಿಪಲ್ ಉಪಕುಲಪತಿಗಳೂ ಆಗಿದ್ದ

ಎನ್. ಎಸ್. ಸುಬ್ಬರಾವ್ ಅವರು 'ಇಷ್ಟೆಲ್ಲ ಪತ್ರಿಕೆಗಳು ಇಂಟರ್ ಕಾಲೇಜಿಗೆ ಬೇಕೆ? ಇದೇನು ವೈಭವ ನಿಮ್ಮದು' – ಎಂದು ಕೇಳುವಂತಾಗಿತ್ತು. '೧೫೦೦ ವಿದ್ಯಾರ್ಥಿಗಳು, ಉತ್ಸಾಹಶಾಲಿಗಳಾದ ನೂರು ಮಂದಿ ಉಪಾಧ್ಯಾಯರು ಬೇರೆ ಬೇರೆ ಶಾಸ್ತ್ರಗಳನ್ನು ಕಲಿಸುತ್ತಿದ್ದರು. ಇವರೆಲ್ಲರ ಸಂತೋಷಕ್ಕೂ ವಿದ್ಯಾಸಂಸ್ಕಾರಕ್ಕೂ ಮೇಧಾವಿತೆಗೂ ಒದಗಬೇಕಾದ ವಾಚನಾಲಯ ಇದು. ನಾಳೆ ನಮ್ಮ ವಿದ್ಯಾರ್ಥಿಗಳು ತಾವು ದೊಡ್ಡವರಾದಾಗ ಎಲ್ಲಿಯಾದರೂ ವಾಚನಾಲಯಗಳನ್ನು ತೆರೆಯಬೇಕೆನ್ನಿಸಿದರೆ ಇಂಥುದರ ಕಲ್ಪನೆ, ನೆನಪು ಇರಲಿ ಎಂಬುದು ಕಾಲೇಜಿನ ನಮ್ಮ ಮನಸ್ಸು' ಎಂದಿವು. ಆದರೆ 'ಕಲೆಗೆ ಮೀಸಲಾದ Studio ಯಾರಿಗೆ? Theatre Arts ಪತಕ್ಕೆ?' ಎಂದರು. 'ನಮ್ಮಲ್ಲಿ ಕಲೆಯ ಅಭ್ಯಾಸ ಮಾಡಿರುವ, ಅದರಲ್ಲಿ ಪ್ರೀತಿಯುಳ್ಳ ವಿದ್ಯಾರ್ಥಿಗಳಿದ್ದಾರೆ; ನಾವು ನಾಟಕಗಳನ್ನು ಹುಡುಗರಿಂದ ಆಡಿಸುತ್ತೇವೆ. ಅದಕ್ಕೆ ಸಂಬಂಧಿಸಿದ ತಂತ್ರ, ಪ್ರಯೋಗ, ಸಜ್ಜು ಎಲ್ಲೆಲ್ಲಿ ಹೇಗೆ ಹೇಗೆ ನಡೆಯುತ್ತಿದೆ ಎಂಬುದನ್ನು ವಿದ್ಯಾರ್ಥಿಗಳು ಅರಿಯಲಿ ಎಂದಿದೆ' ಎಂದು ತಿಳಿಸಿದೆವು. ಎರಡು–ಎರಡೂವರೆ ಸಾವಿರ ರೂಪಾಯಿ ವರ್ಷಕ್ಕೆ ವೆಚ್ಚ ಮಾಡಿ ನಮ್ಮ ರೀಡಿಂಗ್ ರೂಮಿಗೆ ತರಿಸುತ್ತಿದ್ದ ಪತ್ರಿಕೆಗಳ ಆಯ್ಕೆಯಲ್ಲಿಯೂ ವ್ಯಾಸಂಗದಲ್ಲಿಯೂ ಭಾಷ್ಯಂ ಅವರ ಅಭಿರುಚಿ, ನೆರವು, ಸಹಕಾರ ಅತಿಶಯವಾಗಿತ್ತು.

ಅವರ ದೇಹಾರೋಗ್ಯ ದಿನದಿನಕ್ಕೆ ಕೆಡುತ್ತ ಬಂದಿತು. ಮೈ ಕೈ ಒಂದೊಂದು ಸಲ ಊದಿಕೊಂಡು ಮೊಳಕೈ ಮೊಳಕಾಲು ಬೇನೆ ತರುತ್ತಿತ್ತು. ಕಣ್ಣಲ್ಲಿ ಆ ನೋವು ಕಾಣುತ್ತಿತ್ತು. ಆದರೂ ಹೆಚ್ಚು ರಜೆ ಪಡೆದುಕೊಂಡು ಮನೆಯಲ್ಲಿ ಕುಳಿತವರಲ್ಲ; ಕೆಲಸಕ್ಕೆ ತಪ್ಪಿಸಿಕೊಂಡವರಲ್ಲ. ಆ ಕಾಲದಲ್ಲಿ ಮೋಟರುಗಳ ಬಳಕೆ ಹೆಚ್ಚಿಲ್ಲ. ಆಗಿನ ನಾಲ್ಕೈದು ರೂಪಾಯಿ ಬೆಲೆಯೇ ಹೆಚ್ಚು. ದಿವಸವೂ ಟ್ಯಾಕ್ಸಿಗೆ ಹಣ ಕೊಡುವುದು ಸಾಮಾನ್ಯ ಉಪನ್ಯಾಸಕರಿಗೆ ದೊರೆಯದ ಸೌಭಾಗ್ಯ. ಆಟೋರಿಕ್ಷಗಳ ಬಳಕೆ ಈಚಿನದು. ಬಸ್ ಸಿಕ್ಕಿದರೆ ಅದಕ್ಕೆ ಕಾದು ಹೋಗಬೇಕಿತ್ತು. ಆದುದರಿಂದ ಬೆಂಗಳೂರಿನ ಮಹಾವಾಹನವಾದ ಜಟಕಾಬಂಡಿಗೆ ಹೇಳಿಕಳಿಸಿ ಅದನ್ನು ಮೈಸೂರು ಬ್ಯಾಂಕ್ ಸುಮಾರಿಂದ ತರಿಸಿ ಹೋಗಬೇಕಾಗಿದ್ದಿತು. ಒಂದು ಅಪರಾಹ್ನ ಮೂರುಮೂವತ್ತರ ಸಮಯ. ನೋವು ಹೆಚ್ಚಾಗಿದೆ. ಸ್ವಲ್ಪ ಜ್ವರವೂ ಇದೆ. ಗಾಡಿ ತರಿಸಿ ಕಾಲುಗಂಟೆಯಾಗಿತ್ತು. ಅವರು ತಮ್ಮ ಕೋಣೆಯಿಂದ ಹೊರಬಂದರು. ಇನ್ನೇನು ಗಾಡಿ ಹತ್ತ ಬೇಕು ಎನ್ನುವ ಹೊತ್ತಿಗೆ ಯಾರೊ ಗೆಳೆಯರು ಬಂದು ಮಾತಿಗೆ ನಿಂತರು. ಎಂಥವರು ಬಂದು ಮಾತಿಗೆ ನಿಂತರೂ ಕೊಸರಿಕೊಂಡು ಹೋಗುವ ಸ್ವಭಾವ ಭಾಷ್ಯಂದಲ್ಲ. ಬಂದವರು ಬೇಗ ಬಿಡಲಿಲ್ಲ. ಎಂದಿಗೇ ಆಗಲಿ, ಸ್ಥಿತಿಸೂಕ್ಷ್ಮ ಅರಿಯುವುದು ಎಲ್ಲರ ಪಾಲಿಗೂ ನಮ್ಮಲ್ಲಿ ಬಂದುದಲ್ಲ. ನಾನು ಬೇಗ ಹೋಗಬೇಕು, ಅಪ್ಪಣೆ ಕೊಡಿ ಎನ್ನುವುದಕ್ಕೆ ಇವರಿಗೆ ಮನಸ್ಸಿಲ್ಲ; ಬಾಯಿಲ್ಲ. ಅದು ಒರಟುತನ, ಅಮರ್ಯಾದೆ ಎಂಬ ಭಾವ. ತಮ್ಮ ಎಡಕ್ಕೆ ಮುಂದೆ ಚಾಚಿ ಅದನ್ನು ನೋಡಿಕೊಳ್ಳುತ್ತ ತಮ್ಮ ನೋವನ್ನೇ ಕುರಿತು 'ಸ್ವಲ್ಪ ತಾಳೊ ಮಗು, ಇನ್ನೊಂದೆರಡು ನಿಮಿಷದಲ್ಲಿ ಹೋಗೋಣವಂತೆ. ಯಾರೊ ಸ್ನೇಹಿತರು ಬಂದು ಮಾತನಾಡುತ್ತಿದ್ದಾರೆ' ಎಂದು ತಮ್ಮ ಮೊಳಕೈ ನೋವನ್ನು ಕುರಿತು ನೋಡಿದರು. ಬಂದಿದ್ದವರಿಗೆ ನಾವು ಹೇಳಿ ಇವರನ್ನು ಮನೆಗೆ ಕಳಿಸಿಕೊಡಬೇಕಾಯಿತು.

ಫ್ರೆಂಡ್ಸ್ ಯೂನಿಯನಿಗೆ ಹೇಗೆ ಸದಸ್ಯರೊ ಹಾಗೆ ಅವರು ಬೆಂಗಳೂರಿನ ಎ.ಡಿ.ಎ. ಸದಸ್ಯರೂ ಆಗಿದ್ದರು. ಅಲ್ಲಿನ ಸಾಂಸ್ಕೃತಿಕ ಕಾರ್ಯಗಳಲ್ಲೆಲ್ಲ ಭಾಗವಹಿಸುತ್ತಿದ್ದರು. ಅಲ್ಲಿನ ಕಾರ್ಯದರ್ಶಿಯವರೂ ಅಚ್ಚುಕೂಟದ ಯಜಮಾನರೂ ಆದ ಶ್ರೀನಿವಾಸ ಅಯ್ಯಂಗಾರ್ಯರು ಇವರಿಗೆ ಬಹಳ ಗೆಳೆಯರು. ಷೇಕ್ಸ್‌ಪಿಯರಲ್ಲಿಯೊ ಅಥವಾ ಅವನ ಪಾತ್ರಗಳನ್ನು ಕುರಿತೊ ಒಂದು ಕಡೆ ಬರುವಂತೆ 'A smile for everybody and a hope for everyone' ಎಂಬಂತೆ ಭಾಷ್ಯಂ ಜೀವನ. ಸಜ್ಜನತೆಯ ಒಂದು ವಿಶೇಷ ನಯದ ಪ್ರಾದುರ್ಭಾವ, ಹೊಮ್ಮುಗೆ ಅವರಲ್ಲಿ ನಾನು ಕಂಡಂತೆ ಆ ಕಾಲದ ನನ್ನ ಇತರ ಗೆಳೆಯರಲ್ಲಿ ಕಂಡುದಿಲ್ಲ.

ಭಾಷ್ಯಂ ಅವರನ್ನು ನೆನಸಿಕೊಂಡಾಗಲೆಲ್ಲ ನನಗೂ ಅವರಿಗೂ ಇಬ್ಬರಿಗೂ ಹತ್ತಿರದ ಸ್ನೇಹಿತರಾದ ಎಸ್. ಮಂಜನಾಥ್ ಅವರನ್ನು ನೆನಸಿಕೊಳ್ಳದೆ ಇರಲಾರೆ. ಇಬ್ಬರೂ ಮಲ್ಲೇಶ್ವರದಲ್ಲಿಯೇ ಇದ್ದರು. ಅವರನ್ನು ಕಂಡರೆ ಭಾಷ್ಯಂಗೆ ಮತ್ತು ಅವರ ಮನೆಯವರಿಗೆ ಅತಿಶಯ ಪ್ರೀತಿ. ಅವರೂ ನಮ್ಮ ಹಾಗೆಯೇ ಇಂಟರ್‌ಮೀಡಿಯಟ್ ಕಾಲೇಜಲ್ಲಿ ಇಂಗ್ಲಿಷ್ ಉಪಾಧ್ಯಾಯರು. ಮಂಜನಾಥ್ ತಮ್ಮ ಪಾಠಪ್ರವಚನಗಳಲ್ಲಿ ನಿಷ್ಠೆಯಿಂದಲೂ ಪ್ರಾಮಾಣಿಕತೆಯಿಂದಲೂ ಕೆಲಸಮಾಡುತ್ತಿದ್ದರು. ಅವರನ್ನು ಬಲ್ಲವರಿಗೇ ಗೊತ್ತು – ಅವರನ್ನು ನಂಬಿ ಯಾವ ಕೆಲಸವನ್ನೂ ಕೈಕೊಳ್ಳಬಹುದೆಂದು. ಹುಡುಗರ ವಾಕ್ಯರಚನೆಗಳನ್ನು ತಿದ್ದಿ ಅವರಿಗೆ ಸೂಕ್ತ ಸಲಹೆ ಕೊಡುವ ಕೆಲಸದಲ್ಲಿ ಭಾಷ್ಯಂ ಅಂತೆಯೇ ಅವರು ಪ್ರೀತಿಯಿಂದ ತೊಡಗುತ್ತಿದ್ದರು. ಲೈಬ್ರರಿಗೆ ಪುಸ್ತಕಗಳನ್ನು ಕೊಳ್ಳುವುದರಲ್ಲಿಯೂ ವಾಚನಾಲಯಕ್ಕೆ ಪತ್ರಿಕೆಗಳನ್ನು ತರಿಸುವ ವಿಷಯದಲ್ಲಿಯೂ ನಮ್ಮ ಜೊತೆಗೆ ಇದ್ದು ಅವರ ಅಭಿಮತವನ್ನು ತಪ್ಪದೆ ನಮ್ಮ ಪರವಾಗಿ ಕೊಡುತ್ತಿದ್ದರು. ನನಗೆ ಇಂದಿಗೂ ಜ್ಞಾಪಕ ಇದೆ: ಲ್ಯೂಗಿ ಪಿರಂಡೆಲ್ಲೊ ನಾಟಕಗಳುಳ್ಳ ಎರಡು ಪುಸ್ತಕಗಳನ್ನು ಕಂಡು ಕೃಷ್ಣ ಬಿಲ್ಡಿಂಗ್ಸಲ್ಲಿ ರಾಮಯ್ಯರ್ ಅಂಡ್ ಸನ್ಸ್ ಎಂದೊ ಇಂಟರ್ ನ್ಯಾಷನಲ್ ಬುಕ್ ಡಿಪೊ ಎಂದೊ ಹೆಸರಿದ್ದ ಅಂಗಡಿಯೊಂದರಲ್ಲಿ ಬಹುಕಾಲ ಯಾರೂ ಕೊಳ್ಳದೆ ಇದ್ದ ಪುಸ್ತಕವನ್ನು ಆಕಸ್ಮಿಕವಾಗಿ ಕಂಡು ಕೊಂಡುತಂದು ನಮ್ಮ ಕಾಲೆಜಿನ ಪುಸ್ತಕ ಭಂಡಾರಕ್ಕೆ ಸೇರಿಸಿದೆವು. ಆ ಕಾಲಕ್ಕೆ ಆ ನಾಟಕಕರ್ತೃವಿನ ಹೆಸರನ್ನೂ ಕೇಳದಿದ್ದ ಕೆಲವರು ಏನೇನೊ ಪುಸ್ತಕಗಳನ್ನು ಇವರು ಕನ್ನಡ ಇಲಾಖೆಯವರ ಪ್ರಚೋದನೆಯಿಂದ ಇಂಗ್ಲಿಷ್ ವಿಭಾಗಕ್ಕೆ ಸೇರಿಸುತ್ತಿದ್ದಾರೆ ಎಂಬ ಅಪಖ್ಯಾತಿಗೆ ಇವರು ಈಡಾಗಬೇಕಾಯಿತು.

ಮಂಜನಾಥ್ ಸರಳ ಸ್ವಭಾವದವರು. ಕಾಯಿಲೆಯಲ್ಲಿ ಕಾಲ ಕಳೆಯಬೇಕಾಗಿದ್ದ ಭಾಷ್ಯಂ ಜೊತೆಗೆ ಬಿಡುವಾದ ಎಲ್ಲ ಸಮಯದಲ್ಲಿಯೂ ಇದ್ದು ಸಂತೋಷವಾಗಿ ಅವರು ಕಾಲ ಕಳೆಯಲು ನೆರವಾದರು. ಭಾಷ್ಯಂ ಕಡೆಕಡೆಯ ದಿನಗಳಲ್ಲಿ ತುಂಬ ಅಧೀರರಾಗಿದ್ದಾಗ ಅವರ ಮನೆಯಲ್ಲಿಯೇ ಹೆಚ್ಚು ಕಾಲ ಕಳೆದು ಇವರು ಮನೆಯವರಿಗೆ ನೆರವಾದರು. ಅವರ ತರುವಾಯದ ಕಾಲದಲ್ಲಿ ನನ್ನ ನೆರವಿಗಿದ್ದು, ಸುಮಾರು ೧೯೩೪–೩೫ರಿಂದ ಹಿಡಿದು ಬರೆಯುವ ಕೈ ದುರ್ಬಲವಾಗಿದ್ದ ನನಗೆ ನನ್ನ 'ಹಣ ಪ್ರಪಂಚ'ದ ಕಡೆಯ ಮೂರು ಪ್ರಕರಣಗಳನ್ನು ಬರೆದುಕೊಂಡರು. ಅವಸರದಲ್ಲಿ ಆಗಬೇಕಾಗಿ ಬಂದ ಆ ಕೆಲಸ ಅವರು ಮಾಡದಿದ್ದರೆ ಆಗುತ್ತಿರಲಿಲ್ಲ. ಪ್ರತಿವಾರದ ಶನಿವಾರ, ಭಾನುವಾರ ಮಲ್ಲೇಶ್ವರದಿಂದ ತಪ್ಪದೆ

ಚಾಮರಾಜಪೇಟೆಗೆ ಬಂದು ಆ ಕಾರ್ಯ ಮಾಡಿಕೊಡುತ್ತಿದ್ದರು. ಅವರು ಡಾ. ಎ. ಎನ್. ನರಸಿಂಹಯ್ಯನವರ ಷಡ್ಡಕರು. ವಿದ್ಯಾ ಇಲಾಖೆಯಲ್ಲಿ ಡಿ.ಇ.ಓ. ಆಗಿ ವಿಶ್ರಾಂತಿ ಪಡೆದ, ವಯಸ್ಕರ ಅಕ್ಷರ ಪ್ರಚಾರ ಕಾರ್ಯದಲ್ಲಿ ಮೊದಮೊದಲ ಕಾಲದಲ್ಲಿ ದುಡಿದ ಜಿ. ಆರ್. ರಂಗಸ್ವಾಮಿ ಅವರ ಮೈದುನರು. ಹಿಂದೆ ನನ್ನ ಸ್ನೇಹಿತರಾಗಿದ್ದ ಕೃಷ್ಣಶಾಸ್ತ್ರಿ, ವೆಂಕಣ್ಣಯ್ಯ ಅವರಿಗೆ ಹಿರಿಯರಾಗಿದ್ದು, ಮೈಸೂರಿನ ಬನುಮಯ್ಯ ಹೈಸ್ಕೂಲಲ್ಲಿ ಹೆಡ್ ಮಾಸ್ಟರ್ ಆಗಿದ್ದ ಜಿ. ಆರ್. ರಂಗಣ್ಣನವರ ಅಳಿಯಂದಿರು. ಚಿಕ್ಕಮಗಳೂರಲ್ಲಿ ಹೊಸದಾಗಿ ತೆರೆದ ಕಾಲೇಜಲ್ಲಿ ನಾನು ಕಾರ್ಯ ಮಾಡುತ್ತಿದ್ದಾಗಲೂ ಅಲ್ಲಿ ಇಂಗ್ಲಿಷ್ ಪಾಠಗಳು ವರ್ಷಾಂತ್ಯದಲ್ಲಿ ಉಪನ್ಯಾಸಕರಿಲ್ಲದೆ ಹಿಂದೆಬಿದ್ದಾಗ, ಅಲ್ಲಿಗೆ ಬಂದು ನಮ್ಮ ಹುಡುಗರನ್ನು ಪರೀಕ್ಷೆಗೆ ಸಿದ್ಧಪಡಿಸಿ ಊರವರ, ವಿದ್ಯಾರ್ಥಿಗಳ ಪ್ರೀತಿಗೆ ಪಾತ್ರರಾದರು. ಆ ಊರಲ್ಲಿ ನನ್ನ ಮಗಳ ಮದುವೆಯಾಗಬೇಕಾಗಿ ಬರಲು, ಆ ಊರಲ್ಲಿ ಏನು ಸಿಕ್ಕುತ್ತದೆಯೊ ಇಲ್ಲವೊ ಎಂದುಕೊಂಡು ಒಂದು ದೊಡ್ಡ ಮಕ್ಕರಿ ತುಂಬಾ ಬಗೆಬಗೆಯ ತರಕಾರಿಗಳನ್ನು ಹೊರಿಸಿ ತಂದುಕೊಟ್ಟು, ಮನೆಯ ಅಣ್ಣತಮ್ಮಂದಿರೆಂಬಂತೆ ಆ ಸಮಯದ ಕಾರ್ಯಗಳನ್ನೆಲ್ಲ ನೆರವೇರಿಸಿಕೊಟ್ಟರು. ಇವು ಅವರ ಉಪಕಾರ, ನೆರವು ಯಾವ ಬಗೆಯದು ಎಂಬುದು ತಿಳಿಯುವಂತೆ ಹೇಳಿದ ಸಂಗತಿಗಳು. ಯಾರಲ್ಲಿಯೂ ಸ್ನೇಹ. ತಮ್ಮ ಕೈಯಲ್ಲಾದ ಮಟ್ಟಿಗೆ ನೆರವು ಕೊಟ್ಟು ದುಡಿವ ಅವರಿಗೆ ಭಾಷ್ಯಂ ಮನೆಯವರು ಬಹುವಾಗಿ ಒಲಿದಿದ್ದರು. ಮೇಷ್ಟ್ರು ಮನೆಗೆ ಊಟಕ್ಕೆ ಬಂದರೆಂದರೆ ಭಾಷ್ಯಂ ಮನೆಯವರಿಗೆ ತುಂಬಾ ಸಂತೋಷ. ನಮ್ಮ ತಾಯಿಗೂ ಹಾಗೇ. ಊಟ ಉಪಚಾರಗಳಲ್ಲಿ ಧಾರಾಳ, ವಿತರಣೆ. ಸ್ವಲ್ಪದರಲ್ಲಿ ಯಾವುದರಲ್ಲಿಯೂ ತೃಪ್ತಿಯಿಲ್ಲ. ಈ ಬಗೆಯ ಧಾರಾಳ, ತುಂಬಾ ನಾಜೂಕಾದ ಜನಗಳಲ್ಲಿ ಕಾಣದಿರುವುದನ್ನು ನೋಡಿ, ಅವರಿಗೆ ಇವರನ್ನು ನೋಡಿ ತಿರಸ್ಕಾರ. ತನ್ನ ಜೊತೆಯಲ್ಲಿ ಇದ್ದವರಿಗೆ ತಿನ್ನಿಸಬೇಕು, ತಾವೂ ತಿನ್ನಬೇಕು; ಅದಕ್ಕೆ ಹಣ ಒದಗುವಂತೆ ಸಂಪಾದಿಸಬೇಕು ಎಂಬ ಮನಸ್ಸು ಅವರದು. ದೇಹದಾರ್ಢ್ಯ ಚೆನ್ನಾಗಿದ್ದುದರಿಂದ ಎಷ್ಟು ಶ್ರಮವನ್ನಾದರೂ ಸಹಿಸಬಲ್ಲವರಾಗಿದ್ದರು. ಇಂಗ್ಲಿಷ್ ನಾಟಕಗಳು ದಂಡಿನ ನಾಟಕ ಶಾಲೆಗಳಲ್ಲಿ ನಡೆದರೆ ನಾವಿಬ್ಬರೂ ಜೊತೆಗೆ ಹೋಗಿ ರಾತ್ರಿ ಹನ್ನೆರಡೂವರೆಗೊ ಒಂದು ಗಂಟೆಗೊ ಹಿಂದಿರುಗಿ ಬರುತ್ತಿದ್ದೆವು. ಅನ್ನಾ ಪವ್ಲೋವ (Anna Pavlova) ಎಂಬ ಖ್ಯಾತ ನರ್ತಕಿ ಕಲ್ಕತ್ತಾಕ್ಕೆ ಬಂದು ಒಂದು ಪ್ರಯೋಗಕ್ಕೆ ಒಪ್ಪಿಕೊಂಡಿದ್ದಾಳೆ ಎಂದು ಗೊತ್ತಾದಾಗ ಅಲ್ಲಿಗೆ ತೆರಳಲು ತೀರ್ಮಾನಿಸಿ ಇನ್ನೇನು ಟಿಕೆಟ್ ಕೊಳ್ಳಬೇಕೆಂದಿರುವಾಗ ಅಡಚಣೆ ಬಂದು ನಿಲ್ಲಿಸಬೇಕಾಯಿತು. ಆ ನರ್ತಕಿಯ ವಿಷಯ ತಿಳಿಯುವ, ಅನುಭವಿಸುವ ಯೋಗ ತಪ್ಪಿತು.

ಭಾಷ್ಯಂ ತೀರಿಕೊಳ್ಳುವಾಗ ಮಂಜನಾಥ್ ಎರಡು ಮೂರು ದಿವಸ ಕಾಲೆಜಿಗೆ ರಜ ತೆಗೆದುಕೊಂಡು ಭಾಷ್ಯಂ ಅವರ ಬಳಿಯಿದ್ದು ಆ ಸುದ್ದಿಯನ್ನು ಕಾಲೆಜಿಗೆ ಕಳಿಸಿದ್ದರು. ಒಂದು ರೀತಿ ನಾವು ಹೇಳುವ ಹಾಗೆ ಕಾಲೆಜಿಗೆ ಕಾಲೆಜೇ ಮಲ್ಲೇಶ್ವರಕ್ಕೆ ಹೋಗಿ ಅವರ ಅಂತ್ಯಸಂಸ್ಕಾರದ ಸಮಯದಲ್ಲಿ ವಿದ್ಯಾರ್ಥಿಗಳ, ಸಹಉಪಾಧ್ಯಾಯರ ಪ್ರೀತಿಯನ್ನು ಅರ್ಪಿಸಿದೆವು. ಆ ದಿನ ಮಂಜನಾಥರ ಮುಖ ನೋಡಬೇಕಿತ್ತು..... ಅವರು ತೊಟ್ಟಿದ್ದ ಷರಟು ಉತ್ತರೀಯ ನೆನೆದು ಒದ್ದೆಯಾಗಿದ್ದವು. ಭಾಷ್ಯಂ ಅನ್ನು ನೆನಸಿಕೊಂಡಾಗಲೆಲ್ಲ

ಅವರು ಎಷ್ಟೇ ಕಷ್ಟತೊಂದರೆಗಳಲ್ಲಿರಲಿ ಅವನ್ನು ಹೆಚ್ಚಾಗಿ ತೋರಗೊಡದೆ ಸಂಯಮದಿಂದ ಇರುತ್ತಿದ್ದರು ಎಂದಿದ್ದೇನೆ. ಅವರದು ಹಸನ್ಮುಖ. ಹೆಚ್ಚು ಎತ್ತರಕ್ಕೆ ದನಿ ಎತ್ತಿ ಮಾತನಾಡುತ್ತಿರಲಿಲ್ಲ. ಕೋಪದಲ್ಲಿ ನುಡಿಯಬೇಕಾದರೂ ವಿನೋದವಾಗಿ ಯಾವುದೊ ಮಾತನ್ನು ಹೇಳಿ, ಯಾರದೊ ವಾಕ್ಯವನ್ನು ಉದ್ಧಾರಮಾಡಿ, ಮಾತು ಚುಚ್ಚದಂತೆ, ಅದಕ್ಕೆ ಈಡಾದವರು ನೋಯದಂತೆ, ಹಗೆಯಾಗದಂತೆ ನುಡಿಯುತ್ತಿದ್ದರು. ಅವರಿಗೆ ಬಂದ ಆ ರ್ಹೂಮ್ಯಾಟಿಕ್ ಕಾಯಿಲೆಯಿಂದಾಗಿ ತುಂಬ ಗಾಸಿಪಟ್ಟರು. ಸಣ್ಣ ವಯಸ್ಸಿನ ಹೆಂಡತಿಯನ್ನು, ಒಬ್ಬ ಮಗ ಒಬ್ಬ ಮಗಳು ಇವರನ್ನು ಬಿಟ್ಟು ತಮ್ಮ ಇಹಲೋಕ ಯಾತ್ರೆಯನ್ನು ಮುಗಿಸಿಕೊಂಡರು. ಅವರನ್ನು ನೆನಸಿಕೊಂಡಾಗಲೆಲ್ಲ ಹಸನ್ಮುಖಿಯಾದ, ಸಂಯಮಶೀಲರಾದ, ಬಹು ಜನಪ್ರಿಯರಾದ, ಹಣ್ಣಾದ ಒಂದು ಜೀವದ ಒಬ್ಬ ಸ್ನೇಹಿತರ ಚಿತ್ರ ನನ್ನ ಕಣ್ಣೆದುರು ಬಂದು ನಿಲ್ಲುತ್ತದೆ.

ದೇವುಡು ನರಸಿಂಹ ಶಾಸ್ತ್ರಿ

ಮೈಸೂರು ಕಡೆ ಪ್ರಖ್ಯಾತರಾದ ಸಾಹಿತಿಗಳಲ್ಲಿ ಈ ಶತಮಾನದ ಎರಡನೆಯ ದಶಕದಲ್ಲಿ ಮೈಸೂರಲ್ಲಿಯೂ ಅಲ್ಲಿಂದೀಚೆಗೆ ಅವರು ತೀರಿಕೊಂಡ ೧೯೬೨ರವರೆಗೆ ಬೆಂಗಳೂರಲ್ಲಿಯೂ ಹೆಸರಾದ ಲೇಖಕರು ದೇವುಡು. ದೇವುಡು ನರಸಿಂಹ ಶಾಸ್ತ್ರಿ ಎಂಬುದು ಅವರ ಪೂರ್ತಿ ಹೆಸರು. ಮೈಸೂರಲ್ಲಿಯೂ ಅದೇ ಹೆಸರಿನ ಇನ್ನೊಬ್ಬ ಪ್ರಸಿದ್ಧ ಗಮಕಿಗಳಿದ್ದರು. ಅವರು ಶಾರದಾವಿಲಾಸ ಹೈಸ್ಕೂಲಲ್ಲಿ ಕನ್ನಡ ಉಪಾಧ್ಯಾಯರಾಗಿದ್ದರು. ಇಬ್ಬರದೂ ಗಂಡು ಸ್ವಭಾವ. ಇಬ್ಬರ ಗಂಟಲೂ ದೊಡ್ಡವು, ಗಟ್ಟಿ. ಈ ದೇವುಡು ತಂದೆ ಅರಮನೆಯ ಸೀನಿಯರ್ ಪುರೋಹಿತರಾಗಿದ್ದರೆಂದು ಕೇಳಿದ್ದೇನೆ. ಅವರ ಹಿರಿಯರೂ ಚಿಕ್ಕಪ್ಪಂದಿರೂ ಮೈಸೂರಲ್ಲಿ ಹಿರಿಯ ವಿದ್ವಾಂಸರು, ಗಣ್ಯರು. ಇವರೋ: ಮೊದಲಿಂದ ಸುಪುಷ್ಟರು. ನಿರ್ಬಂಧಗಳಿಗೆ ಒಳಪಡದೆ ಮನೆಯ ಮೇಲ್ಮೆಯನ್ನು ವ್ಯಕ್ತಿತ್ವವನ್ನು ಸಂಪ್ರದಾಯಗಳನ್ನು ಬೆಳಸಿಕೊಂಡು ಬಂದರು. ಕಡೆಯ ಕಾಲದವರೆಗೂ ಸೋಲರಿಯದ ಸೋಲೊಪ್ಪದ ನಿರ್ಭೀತವ್ಯಕ್ತಿ. ಸಂಪತ್ತು, ಅಧಿಕಾರ ಇಲ್ಲದಿದ್ದರೂ ತಮ್ಮ ಸುತ್ತಲವರ ಸಂಬಂಧಗಳಲ್ಲಿ ತಾವಿದ್ದ ಕಡೆ ದರ್ಪದಿಂದ ಪ್ರಕಾಶಗೊಳ್ಳುತ್ತಿದ್ದರು. ತಮ್ಮ ನಿರ್ಣಯಗಳ, ವಿದ್ಯೆಯ ವಿಶ್ವಾಸ ಅದಕ್ಕೆ ಕಾರಣ. ಆಚಾರ, ವೇದಶಾಸ್ತ್ರಗಳ ಪಾಠ, ಜಿಜ್ಞಾಸೆಗಳ ಆವರಣದಲ್ಲಿ ಬೆಳೆದವರಾದ್ದರಿಂದ ಅದನ್ನು ಕನ್ನಡ ಸಾಹಿತ್ಯ ಪ್ರಪಂಚಕ್ಕೆ ಪರಿಚಯ ಮಾಡಿಕೊಡಲು ಶಕ್ತರಾದರು.

ಮೈಸೂರು ಮಹಾರಾಜ ಕಾಲೆಜಲ್ಲಿ ನಾನೂ ಅವರೂ ಜೊತೆಗೆ ಬಿ.ಎ., ಎಂ.ಎ. ಪ್ಯಾಸು ಮಾಡಿದೆವು, – ೧೯೧೭ ರಿಂದ ೧೯೨೨ರ ಕಾಲದಲ್ಲಿ. ಇಬ್ಬರಿಗೂ ಸಾಧಾರಣವಾದ ಇಂಗ್ಲಿಷಿಗೆ ಅವರು ನಮ್ಮೊಡನೆಯೇ ಹಾಜರಾಗುತ್ತಿದ್ದರು. ಅವರ ಐಚ್ಛಿಕ ವ್ಯಾಸಂಗ ಸಂಸ್ಕೃತ; ಒಂದು ಭಾಗ ತತ್ತ್ವಶಾಸ್ತ್ರ. ಪ್ರೊ. ಹಿರಿಯಣ್ಣನವರಲ್ಲಿ ಸಂಸ್ಕೃತ ಪಾಠಮಾಡಿ ಅವರ ಗಮನಕ್ಕೆ ಸಂದರು. ಹಾಗೇ ಕಡೆಯವರೆಗೂ ಡಾ. ರಾಧಾಕೃಷ್ಣನ್ ಅವರ ನೆನಪಿನಲ್ಲಿ ಉಳಿದಿದ್ದರು. ೧೯೨೨ರಿಂದೀಚೆಗೆ ಹಲವು ವಿದ್ಯಾಕಾರ್ಯಗಳಲ್ಲಿ ನಿರತರಾಗಿ ಹೆಸರಾಗಿದ್ದರು.

ಬೆಂಗಳೂರಲ್ಲಿ ಆರ್ಯ ವಿದ್ಯಾ ಶಾಲೆಯನ್ನು ಸ್ಥಾಪಿಸಿದರು. ಕೆಂಪೇಗೌಡ ರಸ್ತೆಯ ಮೊದಲಲ್ಲಿ 'ಕೋಲಾ ಲಾಡ್ಜ್' ಎಂಬ ಬಂಗಲೆ ಇತ್ತು. ಅಲ್ಲಿ ಈಗ ಒಂದು ಚಲಚ್ಚಿತ್ರ ಮಂದಿರವಿದೆ. ಅಲ್ಲಿ ಅವರ ಜೊತೆಗೆ ಶ್ರೀ ಬೆಟಗೇರಿ ಕೃಷ್ಣಶರ್ಮರು ಕೆಲಸ ಮಾಡುತ್ತಿದ್ದರು. ಮಕ್ಕಳ ವಿದ್ಯಾಭಿವೃದ್ಧಿಯಲ್ಲಿ ಅತಿಶಯವಾದ ಆಸ್ಥೆವಹಿಸಿ ಅಶ್ವತ್ಥನಾರಾಯಣರೆಂಬವರೊಡನೆ ಮಕ್ಕಳ ಪ್ರಪಂಚ ಮುಂತಾದವುಗಳ ಪ್ರಕಟನೆ ಮಾಡಿದರು. ಬೆಂಗಳೂರಿನ ಅಮೆಚ್ಯೂರ್ ನಾಟಕ ಮಂಡಲಿಯಲ್ಲಿ ಅನೇಕ ಕಾರ್ಯಕ್ರಮದಲ್ಲಿ – ಬಹುಶಃ 'ರಂಗಭೂಮಿ'ಯ ಪ್ರಕಾಶನದಲ್ಲಿ – ನೆರವಾದರು. ಅವರು ಆಡುತ್ತಿದ್ದ ಸಿ. ಕೆ. ವೆಂಕಟರಾಮಯ್ಯ ಅವರ

'ನಚಿಕೇತ', 'ಮಂಡೋದರಿ'ಗಳಲ್ಲಿ ಭೂಮಿಕೆ ವಹಿಸಿದರು. ಮಾಸ್ತಿಯವರ 'ಯಶೋಧರಾ' ನಾಟಕದಲ್ಲಿ ಬುದ್ಧನ ಪಾತ್ರವನ್ನು ವಹಿಸಿ, ಶ್ರೀ ವೆಂಬಾರ್ ವೆಂಕಟಾಚಾರ್ಯರ ಯಶೋಧರಾ ಪಾತ್ರಮೊಡನೆ ಅಭಿನಯಿಸಿದ ಬುದ್ಧಚಿತ್ರ ನನ್ನ ನೆನಪಿನಲ್ಲಿ ಅಚ್ಚಳಿಯದೆ ಇದೆ. ಅಲ್ಲಿ ಕಾಣಿಸಿದ ಗಂಭೀರ, ಸ್ವಾಸ್ಥ್ಯ, ರಸಪ್ರತಿಪಾದನೆ ಅವರಿಗೆ ಕೀರ್ತಿ ತಂದಿತು. ಧಾರವಾಡ ಹುಬ್ಬಳ್ಳಿಗಳಲ್ಲಿಂದ ಮೈಸೂರು ಕಡೆಯ ಕೆಲವರೊಡನೆ 'ಚಿರಂಜೀವಿ' ಎಂಬ ಚಲಚ್ಚಿತ್ರವನ್ನು ತಯಾರುಮಾಡುವುದರಲ್ಲಿ ನೆರವಾದರು.

ಇಷ್ಟೆಲ್ಲ ಹೇಳಿದರೂ ಅವರ ಬಹುಮುಖ ಚೈತನ್ಯವನ್ನು ವರ್ಣಿಸಿದಂತಾಗಲಿಲ್ಲ. ಸರ್ಕಾರದವರು ಅವರನ್ನು ಪ್ರಜಾಪ್ರತಿನಿಧಿ ಸಭೆಯ ಸದಸ್ಯರಾಗಿ ನೇಮಿಸಿದರು. ತಾವೇ ನಮ್ಮ ಪೌರಸಭೆಗೆ ಆಯ್ಕೆಯಾಗಿದ್ದರು. ಸಂಸ್ಕೃತ ವಿದ್ಯಾಸಮಿತಿ, ಪಠ್ಯಪುಸ್ತಕದ ಸಮಿತಿಗಳಲ್ಲಿ ಕೆಲಕಾಲ ದುಡಿದರು. ಅವರ ಮುಖ್ಯ ಲೇಖನಗಳು ಸಾಹಿತ್ಯಕವಾಗಿ ಹತ್ತು ಹನ್ನೆರಡಕ್ಕಿಂತ ಹೆಚ್ಚು. ವಿಶೇಷ ಶಾಸ್ತ್ರವ್ಯಾಸಂಗಕ್ಕಾಗಿ ಶಂಕರ ಮಠದಲ್ಲಿ ಮಹಾ ಮಹೋಪಾಧ್ಯಾಯ ವೈದ್ಯನಾಥ ಶಾಸ್ತ್ರಿಗಳಲ್ಲಿ ಮೀಮಾಂಸಾ ಶಾಸ್ತ್ರವ್ಯಾಸಂಗ ಮಾಡಿ ಕನ್ನಡಕ್ಕೆ 'ಮೀಮಾಂಸಾದರ್ಪಣ'ವನ್ನು ದಾನಮಾಡಿದರು. 'ಯೋಗವಾಸಿಷ್ಠ'ದ ಇಪ್ಪತ್ತನಾಲ್ಕು ಭಾಗಗಳನ್ನು ಬಹುಶಃ ಅರಮನೆಯ ಪ್ರಕಾಶನಕ್ಕಾಗಿ ಬರೆದುಕೊಟ್ಟರು. ಹಾಗೆಯೇ ಸ್ವಾಮಿ ವಿವೇಕಾನಂದರ ಭಾಷಣಗಳನ್ನು, ಥೋರೊ ಅವರ 'ವಾಲ್ಡನ್'ಅನ್ನು ಕನ್ನಡಿಸಿದರು. ಯಾರಿಗೇ ಆಗಲಿ, ಇಂಥ ಕಾರ್ಯ ಅದ್ಭುತವೇ. ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿಯೂ ಕೆಲಕಾಲ ಅದರ ಪತ್ರಿಕೆಯ ಸಂಪಾದಕರಾಗಿದ್ದರೆಂದು ನನ್ನ ಎಣಿಕೆ. ಆ ಕಾಲದಲ್ಲಿ ಅವರು ಬರೆದ 'ಕನ್ನಡ ಸಂಸ್ಕೃತಿ' ಎಂಬ ಗ್ರಂಥವೂ ಪತ್ರಿಕೆಯಲ್ಲಿ ಧಾರಾವಾಹಿಯಾಗಿ ಬಂದ ಕನ್ನಡಲಾವಣಿ ಸಾಂಗತ್ಯಗಳಂತೂ ತುಂಬಾ ಉಪಯುಕ್ತವಾದ, ಬೆಲೆಯುಳ್ಳ ಲೇಖನಗಳು.

ಎಲ್ಲಕ್ಕಿಂತ ಕೇವಲ ಸಾಹಿತ್ಯಕವಾದವು ನಾಲ್ಕು ಕಾದಂಬರಿಗಳು: (೧) 'ಮಯೂರ' ಎಂಬ ಒಂದು ಕನ್ನಡ ರಾಜಮನೆತನಕ್ಕೆ ಸೇರಿದ ವೀರನ ಹಿರಿಮೆಯ ಪ್ರಕಾಶನ; (೨) 'ಮಹಾಬ್ರಾಹ್ಮಣ', (೩) 'ಮಹಾಕ್ಷತ್ರಿಯ', ಮತ್ತು (೪) 'ಮಹಾದರ್ಶನ': ವೇದ ಉಪನಿಷತ್ತುಗಳಲ್ಲಿ ಖ್ಯಾತರಾದವರ ಪ್ರಸಂಗಗಳು.

'ಮಹಾಬ್ರಾಹ್ಮಣ' – ವಸಿಷ್ಠ ವಿಶ್ವಾಮಿತ್ರರನ್ನು ಕುರಿತುದು. ತಪೋಬಲದಲ್ಲಿ ವಸಿಷ್ಠರ ಮಹಿಮೆಯನ್ನು ಅರಿತು, ಆ ಮಟ್ಟದ ಶಕ್ತಿಯನ್ನು ತಾನೂ ಸಾಧಿಸಬೇಕೆಂದು ಹಟ ಹಿಡಿದು, ತಪಃಪ್ರಭಾವನ್ನು ಸಂಪಾದಿಸಿದ ವಿಶ್ವಾಮಿತ್ರ ಬ್ರಹ್ಮರ್ಷಿಯಾದ ಪ್ರಕರಣ. ಆತನಷ್ಟು individualist ಪ್ರಾಚೀನ ಭಾರತದಲ್ಲಿ ಕಡಮೆ. ನಮ್ಮಲ್ಲಿ ಸೇಟನ್ನಂಥ ದೈವ ವಿದ್ರೋಹಿ ಇರಲಿಲ್ಲ. ದೇವರಿಗೆ ಎದುರಾಗಿ ನಿಂತ ಅವನಾಗಲಿ, ಅಹ್ರಿಮಾನ್ ಆಗಲಿ ಇಲ್ಲ. ಈತನು ನಾಸ್ತಿಕನೂ ಅಲ್ಲ. ಕ್ಷಾತ್ರದಿಂದ ದೈವೀತಪಶ್ಶಕ್ತಿಯನ್ನು ಮುರಿಯಬಹುದೆಂದುಕೊಂಡು ನಾಶಕಾರ್ಯದಲ್ಲಿ ತೊಡಗಿ ಸೋತು, ತಪಸ್ ಚೈತನ್ಯವನ್ನು ಪಡೆದು ವಸಿಷ್ಠರಿಂದಲೇ ಸನ್ಮಾನಿತನಾದ ಮಹಾಚೈತನ್ಯ ಆತನದು. ಗಾಯತ್ರೀ ಮಂತ್ರಕ್ಕೆ ಆತನೇ ಅಧಿದೇವತೆ. ರಾಮಾಯಣದಲ್ಲಿ ರಾಮನಿಗೆ ಶಸ್ತ್ರ ಅಸ್ತ್ರ ವಿದ್ಯೆಗಳನ್ನು ರಹಸ್ಯ ವಿದ್ಯೆಗಳನ್ನು ಬೋಧಿಸಿ, ಆತನನ್ನು ಆ ಕಾಲಕ್ಕೆಲ್ಲ ಮೇಲ್ಪಟ್ಟ ಸಾತ್ವಿಕ ಶಕ್ತಿಯಾಗಿ ಮೆರಸಿದ ಪ್ರಭಾವ ಆತನದು, –

ಈ ಕಾಲಗಳಿಲ್ಲ ಒಂದು ಎಂದು ನಂಬುವುದು ಕಷ್ಟವಾದರೂ. ವಿಶ್ವಾಮಿತ್ರನೆಂಬ ಹೆಸರಿನವನು ಈ ಒಬ್ಬಾತನೆಯೊ ಎಂಬುದೂ ವಿವಾದದಲ್ಲಿದೆ. ಆದರೆ ಇಲ್ಲಿ ನಾವು ನೋಡುತ್ತಿರುವುದು ಸಾಂಸ್ಕೃತಿಕ ಮಹತ್ವ, ದಾನವನ್ನು.

'ಮಹಾಕ್ಷತ್ರಿಯ' – ನಹುಷನ ಕತೆ. ಯಜ್ಞಯಾಗಾದಿಗಳ ಬಲದಿಂದ, ದಾನವೀರಗಳಿಂದ ಇಂದ್ರನ ದರ್ಪವನ್ನು ಮುರಿದು ಇಂದ್ರಪಟ್ಟಕ್ಕೆ ಬಂದವನು. ಇದಕ್ಕೇ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ದೊರೆತದ್ದು. ಅವರ ತರುವಾಯ ಅವರ ಮಡದಿಯ ಕೈಗೆ ಬಹುಮಾನವ ನಗದು ಬರಲಿಲ್ಲ. ಯಾವುದೊ ಹಣ ಸಂಕೋಚದ ಕಾರಣದಿಂದ ಅಕೆಗೆ ದೊರೆತದ್ದು ನ್ಯಾಷನಲ್ ಸೇವಿಂಗ್ಸ್ ಸರ್ಟಿಫಿಕೇಟುಗಳು ಮಾತ್ರ!

ಮೂರನೆಯದು 'ಮಹಾದರ್ಶನ' – ಯಾಜ್ಞವಲ್ಕ್ಯರ ಪ್ರಸಂಗ. ಆದಿಶಂಕರರನ್ನು ಕುರಿತದ್ದು ಇನ್ನೊಂದು ಗ್ರಂಥ – 'ಮಹಾಸಂನ್ಯಾಸಿ', ಮುಗಿಯದೆ ನಿಂತಿದೆ. ಅದೂ ಬಂದಿದ್ದರೆ ಯಾವ ಸಂಪ್ರದಾಯಕ್ಕೆ ಹುಟ್ಟಿ ಬೆಳೆದಿದ್ದರೂ ಅದಕ್ಕೆ ದೇವುಡು ತನ್ನ ಕಾಣಿಕೆಯನ್ನು ಜ್ವಲಂತ ರೀತಿಯಲ್ಲಿ ಅರ್ಪಿಸಿದಂತಾಗುತ್ತಿತ್ತು. ವಸಿಷ್ಠ – ವಿಶ್ವಾಮಿತ್ರ, ನಹುಷ, ಯಾಜ್ಞವಲ್ಕ್ಯ – ಇವರ ಚರಿತ್ರೆ ಭರತಖಂಡವನ್ನು ಒಂದು ಹಿರಿಯ ಸತ್ವವನ್ನಾಗಿ ಬೆಳಗಿದ ಚೈತನ್ಯಗಳು. ತತ್ಪ್ರಸಿದ್ಧಿಗೆ, ಲೋಕಸಂಗ್ರಹಕ್ಕೆ, ಸಾತ್ವಿಕ ಹಿರಿಮೆಗೆ ಎತ್ತಿದ ವಾಣಿಗಳು, ಕೈಗಳು ಅವರವು. ಇವರ ಮೂರ್ತಿಸ್ವರೂಪವನ್ನೂ ಜೀವವಿಶೇಷವನ್ನೂ ತಕ್ಕಂತೆ ಕಾಣಿಸುವುದು ಯಾರಿಗೂ ಸಾಹಸವೇ. ಸಾಧಿಸಿದವರು ದೇವುಡು.

ಅವರು ಬೆಂಗಳೂರಲ್ಲಿದ್ದ ಹಲವರು ದೊಡ್ಡ ವ್ಯಕ್ತಿಗಳ ಬಳಕೆಯವರು. ಎಲ್ಲಿಯೇ ಆಗಲಿ, ಯಾರಿಗೂ ತಲೆತಗ್ಗಿಸದೆ ನಿಂತ ನಿಲವಿನವರು. ತಮ್ಮ ಮಾತು ನಡೆದರಾಯಿತು; ಇಲ್ಲವಾದರೆ ಅವರು ಅಲ್ಲಿ ಸುಳಿಯುತ್ತಿರಲಿಲ್ಲ. ಹಿರಿಯ ಮಗನಿಗೆ ಅರ್ಧ ಕಾಲೆಜ್ ರುಸುಮು ವಿನಾಯಿತಿ ಮಾತ್ರ ದೊರಕೀತು ಎಂದು ಹೇಳಿದಾಗ, ಆತನ ಹೆಸರನ್ನು ಪುನಃ ಆ ಸಂಬಂಧದಲ್ಲಿ ಸೇರಿಸಬೇಡಿ, ಹೇಗೊ ಮಾಡಿಕೊಳ್ಳುತ್ತೇನೆ ಎಂದ ಧೀರಪುರುಷರು. ಬಂದದ್ದು ಬರಲಿ ಎಂದು ಯಾವುದಕ್ಕೂ ಕೈಯೊಡ್ಡುವ ಮನಸ್ಸು, ರೀತಿ ಎಂದಿಗೂ ಅವರದಲ್ಲ. ವ್ಯಕ್ತಿಗಳೊಡನೆ, ಸಂಘಸಂಸ್ಥೆಗಳೊಡನೆ ತಮ್ಮ ಮಾತು ನಡೆದರೆಯೇ ಸಂಗ, ಸಾಂಗತ್ಯ, ಅನುಷ್ಠಾನ. ಅಧಿಕಾರದಲ್ಲಿ ಇರುವವರಲ್ಲಿಯೂ ತಮಗೆ ವಿದ್ಯಾವಿಚಾರಗಳಲ್ಲಿ ಗುರು ಸದೃಶರಾದವರಲ್ಲಿಯೂ ಕೂಡ ತಗ್ಗಿ ನಡೆಯಲು ಒಪ್ಪರು. ಯಾವ compromise – ಮಧ್ಯಸ್ಥ ನಡತೆಗೂ ಒಡಂಬಡದ ಗುಣ ಅವರದು. ವಿವೇಕವೊ ಅಲ್ಲವೊ, ಪ್ರಯೋಜನವೊ ಅಲ್ಲವೊ; ಬೈಗಳಿಗೆ ಅವಹೇಳನಕ್ಕೆ ಇಳಿದರೆ ಅದರಲ್ಲಿ ಯಾರಿಗೂ ಬೀಳಲ್ಲ. ಯಾವುದೂ ಅವರನ್ನು ಮಾರ್ಪಡಿಸುತ್ತಿರಲಿಲ್ಲ. ಯಾವುದನ್ನು ಆ ಕಾಲದಲ್ಲಿ ಮೇಧಾವಿತೆ, ಸಂಪ್ರದಾಯ ಎನ್ನುತ್ತಿದ್ದರೊ ಅದಕ್ಕೆ ತರ್ಕ, ಮೀಮಾಂಸಾ, ವೇದಾಂತಗಳ ಹೃದ್ಭಾವವನ್ನೂ ತಿರುಳನ್ನೂ ಬಳಸಿ, ವಾದದಲ್ಲಿ ಜ್ಞಾನಪ್ರತಿಪಾದನೆಯಲ್ಲಿ ಬಲಗೊಳಿಸುತ್ತಿದ್ದರು. ಭಾರತದ ಮೊದಲ ರಾಷ್ಟ್ರಾಧ್ಯಕ್ಷರಾದ ಡಾ. ರಾಜೇಂದ್ರ ಪ್ರಸಾದರು ಪೂರ್ವಸಂಪ್ರದಾಯದಲ್ಲಿ ನಾಡಿನ ನೂರುಮಂದಿ ವೈದಿಕರನ್ನು, ವಿದ್ವಾಂಸರನ್ನು ಕರಸಿ – ಬಹುಶಃ ಕಾಶಿಯಲ್ಲಿ – ಕಾಲು ತೊಳೆದು ಪಾದಪೂಜೆ ಅರ್ಪಿಸಿದರಂತೆ. ಆಗ ಇವರೂ

ಒಬ್ಬರಾಗಿ ಅಲ್ಲಿಗೆ ಆಹ್ವಾನಿತರಾಗಿದ್ದುದು ಅವರಿಗೆ ಅಭಿಮಾನದ ಸಂಗತಿಯಾಗಿತ್ತು. ಇವೆಲ್ಲ ಗತಕಾಲದ ಲಕ್ಷಣಗಳೆಂದು ಇಂದಿನವರೆಂದಾರು. ಎರಡನೆಯ ಮಹಾಯುದ್ಧ ಮುಗಿದ ತರುವಾಯ ಆಲೋಚನೆಯ ನಾನಾ ಬಗೆಯ ಕಲಸುಗಳು – ರೀತಿನೀತಿ ವಿಧಾನಗಳಲ್ಲಿ, ಯೋಚನೆಯಲ್ಲಿ, ತತ್ತ್ವವಿಚಾರದಲ್ಲಿ, ವ್ಯವಹಾರದಲ್ಲಿ, ಸಾಹಿತ್ಯ ಸಂಸ್ಕೃತಿಗಳ ಪರಿಶೀಲನಗಳಲ್ಲಿ, ಸಾರಸ್ವತ ಸೃಷ್ಟಿಯಲ್ಲಿ, ಕೃತಿಗಳ ರೂಪರೇಖೆಗಳಲ್ಲಿ – ಬಂದು ಇಂಥವಕ್ಕೆ ಅಷ್ಟು ಮಾನ್ಯತೆ ಇಲ್ಲವಾಗಿದೆ. ಆದರೆ ಯಾರೂ ತಮ್ಮ ಕಾಲದಲ್ಲಿ ತಾವು ಬಲ್ಲಂತೆ ಮಾತ್ರ ನಡೆದಾರು, ನುಡಿದಾರು ತಾನೆ? ಆ ಆ ಕಾಲದ ಕೊಡುಗೆ ಅದು.

ಒಂದು ಮಾತು ಹೇಳಿದೆ: ಅವರಿಗೆ ಯಾರ ಲಕ್ಷ್ಯವೂ ಇರಲಿಲ್ಲ ಎಂದು. ತಮ್ಮ ದೇಹಾರೋಗ್ಯವನ್ನು ಕುರಿತು ಇನ್ನಷ್ಟು ಎಚ್ಚರಿಕೆ ವಹಿಸಿದ್ದರೆ ಕಡೆಯ ದಿನಗಳಲ್ಲಿ ಇನ್ನಷ್ಟು ನೆಮ್ಮದಿಯಾಗಿರಬಹುದಾಗಿತ್ತು. ಸಕ್ಕರೆಯ ವ್ಯಾಧಿ ಇರುವಾಗ ಬೇಡೆಂದರೂ ಸಿಹಿಗಳನ್ನು ತಿಂದು, ಅದು ವಿಷಮಿಸಿ ಶಸ್ತ್ರಚಿಕಿತ್ಸೆ ಆಗಿ ಕಷ್ಟಪಡಬೇಕಾಯಿತು. ಮಕ್ಕಳಲ್ಲಿ ದೊಡ್ಡವನಾದ ರಾಮು ಕನ್ನಡ ಎಂ.ಎ. ಪ್ಯಾಸು ಮಾಡಿದ್ದರು. ಇನ್ನಿಬ್ಬರು ಒಳ್ಳೆಯ ಹುದ್ದೆಗಳಲ್ಲಿ ಇದ್ದಾರೆ. ಬಹುಶಃ ಇದ್ದ ಒಬ್ಬಳೇ ಮಗಳು ಸಣ್ಣ ವಯಸ್ಸಿನಲ್ಲಿ ವೈಧವ್ಯ ಅನುಭವಿಸಬೇಕಾಗಿಬಂದಿತಂತೆ. ಆಕೆಯ ಮಕ್ಕಳು – ಮರಿ ಒಳ್ಳೆಯ ಸ್ಥಿತಿಯಲ್ಲಿದ್ದಾರೆಂದು ಕೇಳಿದ್ದೇನೆ. ಶಾಸ್ತ್ರಿಗಳ ಜೊತೆಯಲ್ಲಿ ಸಂಸಾರ ಮಾಡುವುದು ಸಾಮಾನ್ಯವಾಗಿ ನಮ್ಮ ಮನೆತನಗಳಲ್ಲಿನ ಹೆಣ್ಣು ಮಕ್ಕಳಿಗೂ ಸುಲಭವೇನಲ್ಲ. ಆದರೆ ಆತನ ಬದುಕನ್ನು ನಡಸಿಕೊಂಡು ಆತನನ್ನೂ ಮಕ್ಕಳನ್ನೂ ಪೋಷಣೆ ಮಾಡಿ ಮೇಲಕ್ಕೆ ತಂದ ಭಾರ್ಯೆ ಶ್ರೀಮತಿ ಗೌರಮ್ಮನವರು ಒಳ್ಳೆಯ ಬದುಕು ಬದುಕಿ ಎಲ್ಲರಿಗೂ ಗೌರವಪಾತ್ರರಾಗಿದ್ದಾರೆ. ಅವರಿಗೆ ನಮಃ.

ಎಚ್. ಯೋಗನರಸಿಂಹಂ

ಮೈಸೂರು ಮಹಾರಾಜಾ ಕಾಲೇಜಿಗೆ ನಾವು ಹೋದಾಗ ಅಲ್ಲಿ ಸಂಸ್ಕೃತ ಇಲಾಖೆಯಲ್ಲಿ ಟ್ಯೂಟರ್ ಆಗಿ ಎಚ್. ಯೋಗನರಸಿಂಹಂ ಇದ್ದರು. 'ಎಚ್' ಎಂದರೆ ಬಹುಶಃ ಹಾಸನವಿರಬೇಕು. ಅವರಿಗೆ ಒಬ್ಬರೊ ಇಬ್ಬರೊ ಅಣ್ಣಂದಿರು ಇದ್ದಂತೆ ನೆನ್ನೆ ನೆನಪು. ಇವರಿಗಿಂತ ಸ್ವಲ್ಪ ವಯಸ್ಸಾದ ಸಿ.ಆರ್. ನರಸಿಂಹಶಾಸ್ತ್ರಿಗಳು ಅದೇ ಇಲಾಖೆಯಲ್ಲಿದ್ದರು. ಇಬ್ಬರಿಗೂ ಎಂ. ಎ. ಪ್ಯಾಸ್ ಆಗಿರಲಿಲ್ಲ. ೧೯೧೮ರಲ್ಲಿಯೊ '೧೯ರಲ್ಲಿಯೊ ಇಬ್ಬರೂ ಆ ಪರೀಕ್ಷೆಗೆ ಕುಳಿತುಕೊಳ್ಳಬೇಕೆಂದು ತಿಳಿಸಿದಾಗ ಪ್ರೊ. ಒರಿಯಣ್ಣನವರು 'ನಿಮಗೆ ಕ್ಲಾಸ್ ಬೇಕಾದರೆ ಬರುವ ವರ್ಷ ಕುಳಿತುಕೊಳ್ಳಿ; ಈ ವರ್ಷ ನರಸಿಂಯಶಾಸ್ತ್ರಿ ಕುಳಿತುಕೊಳ್ಳುತ್ತಿದ್ದಾರೆ' ಎಂದರಂತೆ ಇವರಿಗೆ. ಇವರಿಗಿಂತ ಶಾಸ್ತ್ರಿಗಳು ಮೇಲಟ್ಟದವರು – ಲೆಕ್ಚರರ್ ಆಗಿದ್ದುದರಿಂದ – ಎಂದಲ್ಲ ಅರ್ಥ. ಒಂದೇ ಇಲಾಖೆಯ ಇಬ್ಬರೂ ಉಪಾಧ್ಯಾಯರು ಎಂ.ಎ.ಗೆ ಕುಳಿತುಕೊಳ್ಳುವಾಗ ಇಬ್ಬರಿಗೂ ಫಸ್ಟ್‌ಕ್ಲಾಸ್ ಕೊಡುವುದು ಸ್ವಲ್ಪ ಸಂಕೋಚವಾದೀತು, ಒಬ್ಬರಿಗಿಂತ ಇನ್ನೊಬ್ಬರನ್ನು ಕಡಮೆ ಮಾಡುವುದು ಅವರಿಗೆ ಅಭಿಮಾನಭಂಗವಾಗುತ್ತದೆ ಎಂದಿರಬಹುದು. ಶಾಸ್ತ್ರಿಗಳು ವಯಸ್ಸಿನಲ್ಲಿ ಇವರಿಗಿಂತ ಸ್ವಲ್ಪ ಹಿರಿಯರು. ಅಂತೂ ಆ ವರ್ಷ ಅವರು ಆ ಪರೀಕ್ಷೆಗೆ ಕುಳಿತುಕೊಳ್ಳಲಿಲ್ಲ; ಮುಂದಿನ ವರ್ಷ ಕುಳಿತು ತೇರ್ಗಡೆಹೊಂದಿದರು.

ನರಸಿಂಹಶಾಸ್ತ್ರಿಗಳು ಮೈಸೂರಲ್ಲಿ ಸಾಹಿತ್ಯದಲ್ಲಿ ಬಹಳ ಪ್ರಖ್ಯಾತರಾಗಿದ್ದು, ನಮ್ಮ ಕಾಲಕ್ಕೆ ತೀರಿಕೊಂಡಿದ್ದ ಚಾಮರಾಜನಗರದ ರಾಮಾಶಾಸ್ತ್ರಿಗಳ ಮಕ್ಕಳು. ನಾನು ಕೇಳಿರುವುದರಲ್ಲಿ ರಾಮಾಶಾಸ್ತ್ರಿಗಳಷ್ಟು ದೊಡ್ಡ ರಸಜ್ಞರೂ ಸಹೃದಯರೂ ಸಾಹಿತ್ಯ ಹೃದಯವನ್ನು ಅರಿತ ಸಂಸ್ಕಾರವಂತರಾದ ಇನ್ನೊಬ್ಬರು ಇರಲೇ ಇಲ್ಲ ಎಂದು. ಶಾಸ್ತ್ರಿಗಳಲ್ಲಿ ಆ ರಸಜ್ಞತೆಯೂ ತುಂಬುಜೀವನಕ್ಕಿಂತ ಹೆಚ್ಚಾಗಿ ಮನಸ್ಸಿನ ಮೃದು ವಿಲಾಸವೂ ಲಘುವಾಗಿ ಚೇಷ್ಟೆ ಮಾಡುವ ಆಸಕ್ತಿಯೂ ಇದ್ದವು. ಕಡೆಯವರೆಗೂ ಅವರು ಅದನ್ನು ಉಳಿಸಿಕೊಂಡಿದ್ದರು. ಯೋಗನರಸಿಂಹಂ ಹೆಚ್ಚು ಗದ್ದಲವಿಲ್ಲದ ಮನುಷ್ಯರು. ಎಲ್ಲಿಗಾದರೂ ಹೋದರೆ ಬಂದರೆ, ಉಪಾಧ್ಯಾಯರ ಕೊಠಡಿಯಲ್ಲಿ ಕುಳಿತರೆ, ಹೆಚ್ಚು ಗಲಾಟೆಯ ಮನುಷ್ಯರಲ್ಲ. ತಮ್ಮ ಓದು ಬರಹ ಏನೊ, ತಮ್ಮನ್ನು ಯಾರಾದರೂ ಬಂದು ಏನಾದರೂ ಕೇಳಿದವರಿಗೆ ಏನು ಉತ್ತರ ಕೊಡುವುದೊ ಅಷ್ಟೇ ಹೊರತು, ಬಹುಮಟ್ಟಿಗೆ ಅಗತ್ಯವಿಲ್ಲದೆ ಇನ್ನೊಬ್ಬರಲ್ಲಿ ಮಾತನಾಡುವ ಹವ್ಯಾಸ, ನುಗ್ಗು ಅವರಲ್ಲಿ ಇರಲಿಲ್ಲವೆಂದುಕೊಂಡಿದ್ದೇನೆ. ಹೊಸತಾಗಿ ಬಂದ ವಿದ್ಯಾರ್ಥಿಗಳು ಸಂಸ್ಕೃತ ಅರಿಯದವರಾಗಿದ್ದರೆ ಅವರಿಗೆ ಹೊಸ ರೀತಿಯಲ್ಲಿ ಸುಲಭವಾಗಿ ಸಂಸ್ಕೃತ ಕಲಿಸುತ್ತೇನೆಂದು ಖಾಸಗಿಯಾಗಿ ಕೆಲವು ತರಗತಿಗಳನ್ನು ಅವರು ನಡಸಿದ್ದುಂಟು. ನಾನೂ ಆ ಕ್ಲಾಸಿಗೆ ಒಂದು ತಿಂಗಳು ವಾರಕ್ಕೊಂದು ಸಲ ಸುಮಾರು ಹೋಗಿದ್ದೇನೆ. ಅವರ ದನಿ ತಗ್ಗು. ಅವರು ರಸಿಕರೇ ಆದರೂ ಮೃದುವಾಗಿ

ನಕ್ಕೂ ಕನ್ನಡ ಬೇಕು ಹಾಯಂತೊ ಅದನ್ನು ತೊರಿಸುವೆಂ. ನಕ್ಕರೂ ಕ್ಯಾಗಳಂತೆ ಇತರರಂತೆ ಗುಡುಗಿಂತೊ ಮೊಳಗಿಂತೊ ಗರ್ಜಿಸುಂತೊ ದಂಡಪಿಂಡ ಮಾಡಿಯೊ ಅಲ್ಲ, ಸಂಸ್ಕೃತದ ಹೊಸ ಮಾರ್ಗ ಎಂದಾಗ ಒಂದು ಮಾತು ನನ್ನ ಕಿವಿಗೆ ಬರುತ್ತದೆ. 'ದಹ್' ಸುಡು ಎಂಬ ಅರ್ಥವಿದ್ದಲ್ಲವೆ? ಅದು ಯಾವ ಬಗೆಯ ಧಾತು? – ಎಂದು ಹೇಳುವ ಮುಂಚೆ, ಅದಕ್ಕೆ ಸಂಬಂಧಿಸಿದ ಇನ್ನೆರಡು – ಮೂರು ಮಾತುಗಳನ್ನು ಹೇಳಿ, ಇವೆಲ್ಲ ಆ ಧಾತುವಿನಿಂದಲೇ ಹುಟ್ಟಿದವು; ಉದಾ:ಗೆ, 'ದಹನ – ಕಾಮದಹನ ನೋಡಿ, ದಾಹ – ಬಾಯಾರಿಕೆ, ದಗ್ಧ – ಸುಟ್ಟದ್ದು; ಸಂಸ್ಕೃತದಲ್ಲಿ 'ವಿದಗ್ಧ' ಎಂದರೆ ಒಳ್ಳೆಯ ಪಂಡಿತ ಎಂದು, ಕೆಟ್ಟ ಪಂಡಿತರನ್ನು ಕುರಿತು ದುರ್ವಿದಗ್ಧ ಎಂಬ ಮಾತುಂಟು; ಅಲ್ಲಿ ನೋಡಿ: ದಾಹ, ದಗ್ಧ, ವಿದಗ್ಧ, ದುರ್ವಿದಗ್ಧ ಎಂದು ಬೆಳೆದಿದೆ ಮಾತು. ಇದರಲ್ಲಾಗಲೇ ಎರಡು–ಮೂರು ಹೊಸ ಅಂಶ ಸೇರಿಕೊಂಡಿವೆ: ರೂಪ ವ್ಯತ್ಯಾಸ, ಎರಡು ಉಪಸರ್ಗಗಳು' ಇತ್ಯಾದಿ ನುಡಿಯುತ್ತಿದ್ದರು. ಇದು ನನ್ನ ಮನಸ್ಸನ್ನು ಆಕರ್ಷಿಸಿ ರಂಜಿಸಿತ್ತು. ಹೀಗೆ ಭಾಷೆಯನ್ನೆಲ್ಲ ಕಲಿಯುವುದು ಮೇಲಾದೀತು ಎನ್ನಿಸಿದೆ. ಅದೂ ಕೆಲವರಿಗೆ ಒಣವಾಗಿ ಕಾಣಿಸುವ ವ್ಯಾಕರಣದಂಥ ಶಾಸ್ತ್ರದಲ್ಲಿ.

ಅವರು ಕ್ಲಾಸಿನ ಪಾಠಗಳನ್ನು ಹೇಳಿದರೆ ಆಕರ್ಷಕವಾಗಿ ಹೇಳುತ್ತಿದ್ದಿರಬೇಕು. ಆ ಕಾಲದ ಟ್ಯೂಟರುಗಳಿಗೆ ಪಾಠ ಹೇಳುವ ಭಾಗವನ್ನು ಹೆಚ್ಚಾಗಿ ವಹಿಸುತ್ತಿರಲಿಲ್ಲ, ಅವರದು ಆ ಇಲಾಖೆಯ ವಿದ್ಯಾರ್ಥಿಗಳ ಸಂದೇಹವನ್ನೂ ಕಷ್ಟವನ್ನೂ ನಿವಾರಿಸುವ ಕೆಲಸ. ಸಂಸ್ಕೃತವಾದ್ದರಿಂದ ಭಾಷಾಂತರದ ಕೆಲಸ; ಅದರಲ್ಲಿ ದೊಡ್ಡ ಉಪಾಧ್ಯಾಯರು ಕೊಟ್ಟಿದ್ದ ಅಭ್ಯಾಸವನ್ನು (exercise) ವಿದ್ಯಾರ್ಥಿಗಳು ಹೇಗೆ ಬರೆದಿದ್ದಾರೆ ಎಂದು ನೋಡುವುದು ಬೆಲೆಗಟ್ಟುವುದು ತಿದ್ದುವುದು ಮಾತ್ರವಿತ್ತು. ಹಾಗೆಯೇ ವಿದ್ಯಾರ್ಥಿಗಳ ಟ್ಯುಟೋರಿಯಲ್ ತರಗತಿಗಳನ್ನು ತೆಗೆದುಕೊಂಡು ವ್ಯಾಸಂಗವಿಷಯಗಳನ್ನು ಕುರಿತು ಅದೂ ಇದೂ ಹೇಳುವುದು; ಪುಸ್ತಕಭಂಡಾರದ ಪುಸ್ತಕಗಳನ್ನು ನಿರ್ದೇಶಿಸುವುದು; ಇದರಲ್ಲಿ ಈ ವಿಷಯವಿದೆ, ಆ ವಿಷಯ ಇಲ್ಲ ಎನ್ನುವುದು: ಇಂಥ ಉಪಕಾರದ ಕೆಲಸ.

ಬಹುಶಃ ೧೯೧೯ರಲ್ಲಿಯೊ '೨೦ರಲ್ಲಿಯೊ ಅವರಿಗೆ ಬೆಂಗಳೂರಲ್ಲಿ ವಿವಾಹವಾಯಿತು. ಆ ಹೊತ್ತಿಗೆ ನಾನು ಅವರಿಗೆ ಏನೇನೊ ಕಾರಣಗಳಿಂದ ಚೆನ್ನಾಗಿ ಪರಿಚಿತನಾಗಿದ್ದೆ. ಅವರಿಗೆ ಸಂಗೀತದಲ್ಲಿ ತುಂಬಾ ಪ್ರೀತಿ; ಅದನ್ನು ಅಭ್ಯಾಸ ಮಾಡುತ್ತಿದ್ದರು. ವಾಸುದೇವಾಚಾರ್ಯರಲ್ಲಿ ಉನ್ನತ ಪಾಠಗಳನ್ನು ಮಾಡುತ್ತಿದ್ದರೆಂದು ಕೇಳಿದ್ದೇನೆ. ಆದರೆ ಆ ಅಭ್ಯಾಸದಲ್ಲಿ ಸದ್ದು ಗಲಭೆ ಇಲ್ಲ. ಜೊತೆಗೆ '೨೧ರ ಸುಮಾರಿಗೆ ರಮಾವಿಲಾಸ ಅಗ್ರಹಾರದಲ್ಲಿ ರಂಗಮ್ಮನವರೆಂಬ ಸ್ತ್ರೀ ವಿದ್ಯಾ ಇಲಾಖೆಯ ಇನ್ಸ್‌ಪೆಕ್ಟರವರ ಒಂದು ಹೊಸ ಮನೆಯಲ್ಲಿನ ಒಂದೆರಡು ರೂಮುಗಳಲ್ಲಿ ನಮಗೆ ಸ್ನೇಹಿತರಾಗಿದ್ದ ಒಬ್ಬಿಬ್ಬರು ಬಾಡಿಗೆಗಿದ್ದರು. ಅವರಲ್ಲಿ ಇಬ್ಬರು ಕೊಳಲಿನವರು; ಜೊತೆಗೆ ಇವರು ಸೇರುತ್ತಿದ್ದರು. ಅವರಲ್ಲಿ ಒಬ್ಬರು ನರಸಿಂಹಾಚಾರ್ಯರು, ಶ್ರೀವೈಷ್ಣವರು; ಇನ್ನೊಬ್ಬರು ನಾರಣಯ್ಯರೆಂಬವರು, ದೇವರಾಯಸಮುದ್ರದ ಕಡೆಯವರು. ನರಸಿಂಹಾಚಾರ್ಯರು ಮಂಡ್ಯದ ಕಡೆಯವರು. ನರಸಿಂಹಾಚಾರ್ಯರು ಎತ್ತರವಾಗಿ ಅಚ್ಚುಕಟ್ಟಾಗಿದ್ದವರು. ಬೆರಳಲ್ಲಿ ಉಂಗುರವಿರುತ್ತಿತ್ತು. ಉದ್ದದ ಮೂಗು. ಅವರು ಕೊಳಲು

ಹಿಡಿವ ರೀತಿ ಬಹಳ ಮೋಜಿನದು. ಇನ್ನೊಬ್ಬರು ಹಾಗೂ ಹೀಗೂ ದಟ್ಟಿ ಸುತ್ತಿಕೊಂಡು ಹೊಟ್ಟೆಗೆ ಆತುಕೊಳ್ಳುವಂತೆ ಕೊಳಲನ್ನು ದಟ್ಟಿಯಲ್ಲಿ ಸಿಕ್ಕಿಸಿ ಖುಷಿ ಬಂದಾಗ ಒಂದೆರಡು ಗಂಟೆ ಬಾರಿಸಿಕೊಳ್ಳುತ್ತಿದ್ದರು. ಯೋಗನರಸಿಂಹಂ ಆ ರೂಮಿಗೆ ಬಂದು – ನನ್ನ ನೆನಪು ಹೀಗೆ – ತಬಲ ಅಭ್ಯಾಸಮಾಡುತ್ತಿದ್ದರು. ಸಂಗೀತಗಾರರಿಗೆ ಆ ವಾದ್ಯದ ಅನುಭವ ಇದ್ದರೆ ಮೇಲು ಎಂಬುದು ಅವರ ಅಭಿಪ್ರಾಯ. ಲಯದ ನಡೆಯನ್ನೂ ನುಡಿತವನ್ನೂ ಅದರ ಮರ್ಮವನ್ನೂ ಹಾಡುವವರು ಚೆನ್ನಾಗಿ ಅರಿತಿದ್ದರೆ ಅದೊಂದು ಶಕ್ತಿಸಾಧನೆ ಎಂದು. ಗಾನಕ್ಕೆ ಕಳೆ ಬರುತ್ತದೆ; ಬಿಗಿ ಬರುತ್ತದೆ ಎಂಬುದು ಒಂದು ಕಡೆಯಾದರೆ ಲಯಕ್ಕೆ ಹೊಂದಬೇಕು, ಅದಕ್ಕೆ ಸೋಲಬಾರದು ಎಂಬುದು ಇನ್ನೊಂದು ಕಡೆ. ಆ ಕಾಲದಲ್ಲಿ ಮೈಸೂರಲ್ಲಿ ಬೆಂಗಳೂರಲ್ಲಿ ಹೆಚ್ಚಾಗಿ ಮೃದಂಗಕ್ಕಿಂತ ತಬಲಾನೇ ಬಳಕೆ. ಮೃದಂಗದ ಬಳಕೆಯನ್ನು ಕಣಿವೆ ಕೆಳಗಿನ ಹಾಡುಗಾರರು ತಂದರು.

ಬೆಂಗಳೂರು ಅಕ್ಕಿಪೇಟೆಯ ಓಬಯ್ಯನ ಗಲ್ಲಿಯಲ್ಲಿ ವಾಜಪೇಯಂ ಗೋವಿಂದಯ್ಯನವರ ಮನೆಯಲ್ಲಿ ಅವರ ಮದುವೆಯಾದದ್ದು. ಮೈಸೂರಿನ ಕಿರಿಯ ಗೆಳೆಯನಾದ ನಾನೂ ಅಲ್ಲಿಗೆ ಹೋಗಿ ಲಾಡು ಊಟಮಾಡಿದ್ದೆ. ಅವರ ಮಾವಂದಿರು ಸರ್ವೆಂಟ್ಸ್ ಆಫ್ ಇಂಡಿಯ ಸೊಸೈಟಿಯಲ್ಲಿ ಗಣ್ಯರಾದ, ಬೆಂಗಳೂರಿನ ನನ್ನ ಹಿರಿಯರಿಗೆಲ್ಲ ತುಂಬಾ ಗೌರವಸ್ಥ ಗೆಳೆಯರಾದ ವಿ. ವೆಂಕಟಸುಬ್ಬಯ್ಯನವರು. ಅವರು ಗೋವಿಂದಯ್ಯನವರ ಅಣ್ಣಂದಿರೊ ತಮ್ಮಂದಿರೊ. ಅವರ ಆಕೃತಿ ರೀತಿ ಮಾತು ಎಲ್ಲ ನನಗೆ ಪ್ರೊ. ಹಿರಿಯಣ್ಣನವರ ನೆನಪು ತರುತ್ತಿತ್ತು. ಮಾತಾಡಿದರೆ ಸ್ವಲ್ಪ ಬಾಯಿ ತೆರೆದು ನಸುನಗುತ್ತ ನುಣುಪಾಗಿ ಮಾತಾಡುತ್ತಿದ್ದವರು. ಮುಲಕನಾಡು ಜನ. ವಾಜಪೇಯಂ ಬಳಗ ಅಕ್ಕಿಪೇಟೆಯಲ್ಲಿ ಬಹು ಪ್ರಖ್ಯಾತವಾದ್ದು.

ಯೋಗನರಸಿಂಹಂ ರಸಿಕರು, ಪ್ರೀತಿಶೀಲರು. ಆದ್ದರಿಂದ ಅವರ ದಾಂಪತ್ಯ ತುಂಬಾ ಸುಖವಾಗಿದ್ದಿತು. ಮನೆಯ ಎಲ್ಲ ವ್ಯವಸ್ಥೆಯನ್ನೂ ಮಡದಿಗೆ ಬಿಟ್ಟು ತಮ್ಮ ಕೆಲಸವನ್ನು ತಾವು ನೋಡಿಕೊಳ್ಳುತ್ತಿದ್ದರು. ಆತನ ಧರ್ಮಪತ್ನಿ ಗಂಡನನ್ನೂ ಮನೆಯನ್ನೂ ಮುಂದಿನ ಕಾಲದಲ್ಲಿ ಮಕ್ಕಳನ್ನೂ ಬಹು ಒಪ್ಪವಾಗಿ ನೋಡಿಕೊಳ್ಳುತ್ತಿದ್ದರು. ಹೀಗೆ ಆ ಮನೆಗೆ ಆಕೆಯೇ ತಾಯಿ, ಲಕ್ಷ್ಮಿ. ಇಂದು ಆ ಮನೆಯ ಮಕ್ಕಳೆಲ್ಲ ಚೆನ್ನಾಗಿದ್ದಾರೆ. ಅವರ ಶಿಕ್ಷಣ, ಯೋಗ್ಯತೆ, ಶೀಲ, ಜವಾಬ್ದಾರಿ ಬುದ್ಧಿ, ಸ್ವತಂತ್ರಸಾಹಸ, ಸೇವೆ ಮತ್ತು ಲೋಕ ಪ್ರಯೋಜಕ ಗುಣ, ಮಾಡುತ್ತೇನೆಂದ ಕೆಲಸವನ್ನು ತಪ್ಪದೆ ಖಚಿತವಾಗಿ ನಿರ್ವಹಿಸುವ ಲಕ್ಷಣ – ಎಲ್ಲವೂ ಆ ತಾಯಿಂದ ಬಂದುದೆನಿಸುತ್ತದೆ. ಮೈಸೂರನ್ನು ಬಿಟ್ಟು ಬೇರೆ ಸರ್ಕಾರಿ ಕೆಲಸಕ್ಕೆ ಹೋಗುವ ಮುಂಚೆ ರಾಮಚಂದ್ರ ಅಗ್ರಹಾರದಲ್ಲಿದ್ದ ತಮ್ಮ ಮನೆಯಲ್ಲಿ ನಾನಿರಬಹುದೆಂದು ಹೇಳಿದರು. ಆವರೆಗೆ ಬೇರೆ ಏರ್ಪಾಡಾಗಿದ್ದುದರಿಂದ ನಾನು ಅದನ್ನು ಮಾಡಲಾಗಲಿಲ್ಲ. ಆಗ ಇನ್ನೂ ಅವರ ತಂದೆಯವರಿದ್ದರು.

ಯೋಗನರಸಿಂಹಂ ಸ್ವಂತ ಬಟ್ಟೆಬರೆ ಹಾಕುವುದರಲ್ಲಿ ಅಚ್ಚುಕಟ್ಟಿನವರು, ಸೊಗಸುಗಾರರು. ನಿಡಿದಾದ ಅಥವಾ ಅರೆಸಿಲ್ಕ್ ಕೋಟು ಹಾಕಿ, ಜರತಾರಿಯ ಬಲೆ ರುಮಾಲು ಸುತ್ತಿ, ಒಳ್ಳೆಯ ಜರತಾರಿ ಪಂಚೆ ಉಟ್ಟು, ಕಾಲಿಗೆ ಆ ಕಾಲದ ಶ್ರೀಮಂತ ಫ್ಯಾಷನ್ ಆಗಿದ್ದ

ಪೂನಾವೆಂದು ಹೆಸರಾದ ನಮ್ಮ ಕಾಶೀಯಾತ್ರೆಯ ಪಾಪೋಸು ಹಾಕಿಕೊಂಡು ನಡೆಯುತ್ತಿದ್ದವರು. ಇವನ್ನೆಲ್ಲ ನಾಜೂಕಾಗಿ ಅರಿಸುತ್ತಿದ್ದರು. ಅವರಿಗೆ ಊಟವಾದ ಮೇಲೆ ಒಳ್ಳೆ ತಾಂಬೂಲ ಹಾಕಲು ಪ್ರೀತಿ, ಅಭ್ಯಾಸ. ಮೈಸೂರಿನ ಬುತ್ತಿ ಚಿಗುರು ವೀಳೆಯದೆಲೆ ನೋಡಿತರೆ ಯಾರಿಗೆ ಆ ಪ್ರೀತಿ ಬರುವುದಿಲ್ಲ! ನಾನು ಅದನ್ನು ಸವಿದವನು. ಹಿಂದೆ ಮೈಸೂರು ವೀಳೆಯದೆಲೆಗೆ, ಮಲ್ಲಿಗೆ ಹುವ್ವಿಗೆ, ಈರನಗೆರೆ ಬದನೆ ಬೆಂಡೆಗಳಿಗೆ ಪ್ರಖ್ಯಾತವಾಯ್ತು. ಇಂದು ಎಲ್ಲ ಶೂನ್ಯವಾಗಿದೆ. ಹಾಗೆಯೇ ನಂಜನಗೂಡು ಮಂಡ್ಯಗಳ ರಸಬಾಳೆ, ಬೆಣ್ಣೆಗಳು ಕೂಡ. ಅವುಗಳ ರುಚಿ ಪರಿಮಳ ಕಂಡವರಿಗೆ ಒಂದು ಬೆಳಸಿನ ಸಂಸ್ಕೃತಿಯೇ ಇಂದು ಮಾಯವಾಗಿದೆ. ಒಂದು ದಿನ ಕಾಲೆಜ್ ಪಡಸಾಲೆಯಲ್ಲಿ ಅವರು ತುಂಬ ಸುಖವಾಗಿ ಮೆಲ್ಲಗೆ ತಿರುಗಿ ಮಾತನಾಡುತ್ತಿದ್ದುದನ್ನು ಪ್ರಿನ್ಸಿಪಲ್ ಸುಬ್ಬರಾಯರು ಕಂಡು ಏನೊ ಅಂದರು ಎಂದು ಕಾಣುತ್ತದೆ. ಏನು ಹೇಳಿದರು ಎಂದು ಹೇಳಲಿಲ್ಲ. ಸುಬ್ಬರಾಯರೇ ಒಂದು ದಿವಸ 'ಏನ್ರಿ, ಈ ಹುಡುಗ ಅಲಂಕಾರ ಮಾಡಿಕೊಂಡು ಎಲ್ಲಿಗೊ ಬಂದ ಹಾಗೆ ಕಾಲೆಜಿಗೆ ಬರ್ತಾನಲ್ಲ?' ಎಂದರು ನನಗೆ. ಅಂಥದು ಇವರ ದುರಭ್ಯಾಸವಲ್ಲ. ಅಂಥ ಚಪಲವಾಗಲಿ, ಅಭ್ಯಾಸವಾಗಲಿ ಅವರಿಗೆ ಇಲ್ಲದ್ದು, ಸಲ್ಲದ್ದು. ಅವರಿಗೆ ಒಂದು ಬಗೆಯ ಮೈಸೂರಿನ ಸೊಗಸುಗಾರಿಕೆ ಪ್ರಿಯ ಎಂಬುದನ್ನು ತಿಳಿಸಲು ಮಾತ್ರ ಇದನ್ನು ಹೇಳಿದೆ.

೧೯೨೧ರಲ್ಲಿ ನಮ್ಮ ಕಾಲೆಜಲ್ಲಿ ಐದಾರು ಜನ ಮೈಸೂರು ಸಿವಿಲ್ ಸರ್ವಿಸ್ ಪರೀಕ್ಷೆಗೆ ಕುಳಿತಿದ್ದವರಲ್ಲಿ ಇವರೂ ಒಬ್ಬರು. ಯಾರೊ ಒಬ್ಬರಿಗೆ ಪ್ಯಾಸ್ ಆಯಿತೊ ಇಲ್ಲವೊ ಕಾಣೆ. ಆ ವರ್ಷ ಇಬ್ಬರನ್ನು ಮಾತ್ರ ತೆಗೆದುಕೊಂಡರಂತೆ: ಯಾರನ್ನೊ. ಮಿಲ್ಲರ್ ಕಮಿಟಿ ರಿಪೋರ್ಟು ಬಂದು ಬ್ರಾಹ್ಮಣರಿಗೆ ಅನನುಕೂಲವಾದ ಸಿಫಾರಸುಗಳಾಗಿದ್ದುದರಿಂದ ಅನೇಕ ಬ್ರಾಹ್ಮಣ ಹುಡುಗರು ಆ ವರ್ಷ ಪರೀಕ್ಷೆಗೆ ಕೂಡಲಿಲ್ಲ. ಕಾಲಕ್ರಮದಲ್ಲಿ ಯೋಗನರಸಿಂಹಂ ಅಲ್ಲಿ ಉಪನ್ಯಾಸಕರಾಗಿದ್ದು, ಅಲ್ಲಿಂದ ವಿದ್ಯಾ ಇಲಾಖೆಗೆ ಬಂದರು. ಅಲ್ಲಿ ಉಪನ್ಯಾಸಕರಾಗಿ, ಸಂಸ್ಕೃತದ ಸ್ಕೂಲುಗಳ ಇನ್ಸ್‌ಪೆಕ್ಟರಾಗಿ, ಆಮೇಲೆ ನಾರ್ಮಲ್ ಸ್ಕೂಲುಗಳ ಮುಖ್ಯೋಪಾಧ್ಯಾಯರಾಗಿ, ಡಿ.ಇ.ಓ. ಆಗಿ ಸೇವೆಸಲ್ಲಿಸಿದರು. ಒಂದು ಕಾಲದಲ್ಲಿ ಅವರು ಮೈಸೂರು ಶ್ರೀಮನ್ಮಹಾರಾಜರವರ ಸಂಸ್ಕೃತ ಮಹಾಪಾಠಶಾಲೆಯ ಪ್ರಿನ್ಸಿಪಲರಾಗಿದ್ದರು. ಹೆಚ್ಚು ಜನರ – ಅದರಲ್ಲಿಯೂ ಸರ್ವತಂತ್ರಸ್ವತಂತ್ರರೆನ್ನಬಹುದಾದ ಅಲ್ಲಿನ ವೈದಿಕ ಮತ್ತು ವಿದ್ವಾಂಸ ವರ್ಗಗಳ – ಸಂಬಂಧದಲ್ಲಿ ಅವರು ಸುಖಪಟ್ಟರೊ ಇಲ್ಲವೊ ಕಾಣೆ.

ಆಮೇಲೆ ಅವರನ್ನು ನಾನು ಪುನಃ ನೋಡಿದ್ದು ತುಂಬಾ ದಿನಗಳಾದ ಮೇಲೆ. ಬೆಂಗಳೂರು ಆಕಾಶವಾಣಿಯಲ್ಲಿ ನಾನು ಭಾಷಣಾದಿಗಳ ಉತ್ಪಾದಕನಾಗಿದ್ದಾಗ ಅವರು ಹೈಸ್ಕೂಲು ಕಾರ್ಯಕ್ರಮಗಳ ಚಾಲಕರಾಗಿದ್ದರು. ವಿದ್ಯಾ ಇಲಾಖೆಗೆ ಉಪಕಾರಕವಾದ ಕಾರ್ಯಕ್ರಮವನ್ನು ಏರ್ಪಡಿಸುತ್ತಿದ್ದರು. ಇಲ್ಲಿ ದುಡಿಯುವುದು ಅಷ್ಟೇನೂ ಹಿತಕರವಾದ ಅಥವಾ ಸುಖವಾದ ಕೆಲಸವಲ್ಲ – ಅವರಿಗಂತೂ. ಒಂದೆರಡು ಸಲ ನಾನೇ ಅವರಿಗೆ 'ಇನ್ನೂ ಸ್ವಲ್ಪ ಬಿಗಿಯಾಗಿದ್ದು ನಿಮ್ಮ ಮೇಜಿಗೆ ಜನ ಬರುವ ಹಾಗೆ ಮಾಡಿಕೊಳ್ಳಿ; ನೀವೇಕೆ

ಇಲ್ಲಿ ಅಲ್ಲಿ ಹೋಗಬೇಕು?' ಎಂದು ಹೇಳಬೇಕಾಯಿತು. 'ಏನೊ ಅರ್ಧಗಂಟೆ ಕೆಲಸವಷ್ಟೆ, ಮಾಡಿ ತೀರಿಸಿಕೊಂಡು ಬಿಡೋಣ' ಎನ್ನುತ್ತಿದ್ದ ಸ್ವಭಾವ ಅವರದು. ಸ್ವಭಾವ ಸಹಜ; ಅದರಲ್ಲಿ ಮೃದು. ರಸಿಕರು. ತಮಗೆ ಮೆಚ್ಚಿಕೆಯಾದುದನ್ನು ಇನ್ನೊಬ್ಬರಿಗೆ ಹೇಳಬೇಕೆನ್ನುವವರು. 'She that joyeth double and halveth trouble' ಎಂದು ಪ್ರೀತಿಯ ಮಡದಿಯನ್ನು ಕುರಿತು ಹೇಳುವುದುಂಟು; ಒಳ್ಳೆಯ ಸ್ನೇಹಿತರ ಗುಣವೂ ಅದೇ. ಕನ್ನಡದಲ್ಲಿ ಅದನ್ನು ಹೇಳಬೇಕಾದರೆ ಸಂತೋಷದಲ್ಲಿ ತಮ್ಮದನ್ನು ಸೇರಿಸಿ ಅದನ್ನು ಇಮ್ಮಡಿಸುವುದು, ನೋವು ಬಂದಾಗ ಭಾಗವಹಿಸಿ ಅದನ್ನು ಅರೆ ಮಾಡುವುದು ಆ ಲಕ್ಷಣ.

ಅವರು ಸಂಗೀತವಿದ್ಯೆಯಲ್ಲಿ ಕಚೇರಿ ಮಾಡಿದವರಲ್ಲ. ಆದರೆ ವಿದ್ವದ್‌ಸಭೆಗಳಿಗೆ ಹೋಗಿ ಬರುತ್ತಿದ್ದರು. ಮದರಾಸಿನ ಸಂಗೀತ ಅಕಾಡೆಮಿಯ ವಾರ್ಷಿಕ ಅಧಿವೇಶನಗಳಿಗೂ ಹೋಗುತ್ತಿದ್ದರು. ಸಂಸ್ಕೃತ ಚೆನ್ನಾಗಿ ತಿಳಿದವರಾದ್ದರಿಂದ ಮೂಲಗ್ರಂಥಗಳನ್ನು ಅಭ್ಯಾಸ ಮಾಡಿದ್ದರು. ಒಂದು ಕಡೆ ತಾನು, ತನ್ನ ಪಾಠ; ಇನ್ನೊಂದು ಕಡೆ ಸ್ವಂತ ಆ ಶಾಸ್ತ್ರ ವ್ಯಾಸಂಗ; ಸಂಗೀತಪ್ರಿಯರ ಮತ್ತು ವಿದ್ವಜ್ಜನರ ಸಂಪರ್ಕ. ಸ್ವಂತವಾಗಿ ರಾಗಸ್ವರೂಪವನ್ನು ಪರಿಶೀಲಿಸುತ್ತ ಇದ್ದುದರಿಂದ ಹಾಗೇ ತಮ್ಮದಾಗಿ ಏನಾದರೂ ನಿರ್ಮಾಣ ಮಾಡೋಣ ಎಂದು ಯೋಚಿಸುತ್ತಿದ್ದವರು. ಅವರ ಧ್ವನಿ ಒಂದು ಎತ್ತರಕ್ಕೆ ಮೇಲೆ ಏರುತ್ತಿರಲಿಲ್ಲವಾಗಿ ತಾರಸ್ಥಾಯಿಗಳನ್ನು ಮೆರೆಸುವ ಅಭ್ಯಾಸದ ಬೆಡಗುಗಳ ಗೋಜಿಗೆ ಹೋಗುತ್ತಿರಲಿಲ್ಲ. ಆ ನೆಲೆಯನ್ನು ತೋರಿಸಿ ವಾಸುದೇವಾಚಾರ್ಯರು ಹೇಗೆ ನಿಲ್ಲಿಸುತ್ತಿದ್ದರೊ ಹಾಗೆಯೇ ಇವರೂ ಹಿಮೆಟ್ಟುತ್ತಿದ್ದರು. ಕೆಲವೇಳೆ ಟೈಗರವರೂ ಹಾಗೆ ಕೈ ಬೆರಳೆತ್ತಿ ಸ್ಥಾಯಿಯ ನೆಲಸನ್ನು ತೋರಿಸುತ್ತಿದ್ದುದುಂಟು. ಅದು ಕಂಠಗಳ ಗುಣ, ಕ್ರಿಯೆ. ಎಲ್ಲಿ ಕಂಠ ಏರುವುದಿಲ್ಲವೊ ಶ್ರುತಿಸುಭಗತೆ ಒದಗುವುದಿಲ್ಲವೊ ಅಂಥದರ ಗೋಜಿಗೆ ಹೋಗದಿರುವುದು ಮೇಲು ಎಂದು. ಮಧ್ಯಮ ಕಾಲದಲ್ಲಿ ಮತ್ತು ಕೆಳಗೆ ಅವರು ಬಹು ಸುಖವಾಗಿ ಹಾಡುತ್ತಿದ್ದರು. ಅಲ್ಲಿ ಸಾಹಸವಲ್ಲ, ಸ್ನಿಗ್ಧತೆ ಇರುತ್ತಿತ್ತು. ನಾನು ವಿಶೇಷವಾಗಿ ನಾಲ್ಕೈದು ಕೃತಿಗಳನ್ನು ಅವರ ಬಾಯಲ್ಲಿ 'ಸುಖವಾಗಿ' ಕೇಳಿದ್ದು ನೆನಪು. 'ಶಾಂತಮುಲೇಕ ಸೌಖ್ಯಮುಲೇದು' ಎಂಬ ಸಾಮರಾಗದ ಕೃತಿ; 'ತೊಲಿನೇನು ಚೇಯು ಪೂಜಾಫಲಮು ಈಲಾಗೇ' ಎಂಬ ಕೋಕಿಲ ಧ್ವನಿಯದು; 'ನೀ ಭಕ್ತಿ ಭಾಗ್ಯಸುಧಾ' ಎಂಬ ಜಯಮನೋಹರಿಯದು; 'ಎನ್ನಗ ಮನಸುಕುರಾನಿ ಪನ್ನಗಶಾಯಿ ಸೊಗಸು' ಎಂಬ ನೀಲಾಂಬರಿಯ ಕೃತಿ: ಇವು ನನ್ನ ಹೃದಯವನ್ನು ಮುಟ್ಟಿದುವು. 'ಅನಾಥುಡುನು ಗಾನುನೇನು' ಎಂಬ ಜಿಂಗ್ಲ ಎಂದೊ ನಟಭೈರವಿ ಎಂದೊ ಕರೆಯುತ್ತಿದ್ದುದು ಇನ್ನೊಂದು. ಅವನ್ನು ನಾನು ಅನೇಕ ವೇಳೆ ನೆನಸಿಕೊಳ್ಳುತ್ತಿರುತ್ತೇನೆ: ಈಗಲೂ. ಅವು ಅವರಿಗೆ ನನ್ನನ್ನು ಕಟ್ಟಿಹಾಕಿವೆ: ನನ್ನ ಸಂತೋಷಕ್ಕೆ ನೆಲೆಯಾಗಿದೆ. ಸಂಸ್ಕೃತದ ಶ್ಲೋಕವನ್ನು ಹೇಳುವ ಒಲವೂ ಅವರದೇ ಒಂದು ಒನಪಿನದು. ಕಿವುಡನಾಗಿರುವ ಈಗ ನನಗೆ ಅಶ್ರುತಗಾನ – ಅಭಿರಾಮತರ.

ಇನ್ನೊಂದು: ಹಾಗೆಯೇ ಕೆಲವು ಶ್ಲೋಕಗಳಿಗೆ ಸ್ವರಪ್ರಸ್ತಾರ ಹಾಕಿ ಚಿಟ್ಟೆಗಳನ್ನು ಬರೆದು ತಾಳಕಟ್ಟನ್ನು ಸಿದ್ಧಮಾಡಿ ಪ್ರಚಾರಕ್ಕೆ ತರಬೇಕು ಎಂದುಕೊಂಡು ಮಾಡಿದ್ದರು. 'ಶ್ಯಾಮಲಾದಂಡಕ', 'ಗೀತಗೋವಿಂದ'ದ ಎರಡು ಮೂರು ಅಷ್ಟಪದಿಗಳು; ಇನ್ನೂ

ಯಾವುಯಾವುದೋ ಬೇರೆ ಬೇರೆ ಸಂದರ್ಭಗಳಲ್ಲಿ ಅವರು ನನ್ನ ಮೇಲಿನ ಪ್ರೀತಿಯಿಂದ ಹಾಡಿ ತೋರಿಸಿದ್ದಾರೆ. 'ಗೀತಗೋವಿಂದ'ದ 'ಮದ್ಗುಕರನಿಕರ ಕರಂಬಿತ ಕೋಕಿಲಕುಂಜ ಕುಟೀರೇ' ಎಂಬ ಸಾಲನ್ನು ಭ್ರಮರಝೇಂಕಾರದಂತೆ ಅವರ ಕೊರಲು ನುಡಿಯುತ್ತಿತ್ತು. ಒಂದೆರಡು ಬಲ ಮೈಸೂರಲ್ಲಿ ಬೆಂಗಳೂರಲ್ಲಿ ನಾನಿದ್ದ ಕಡೆಗೂ ದಯಮಾಡಿಸಿ ಕೆಲವನ್ನು ಕೇಳಿಸಿದ್ದಾರೆ. ಖಾಸಗಿ ಸಂಗೀತ ಕಚೇರಿಗಳಲ್ಲಿ ನಾವು ಜೊತೆಯಲ್ಲಿದ್ದುದರಿಂದ ಜೊತೆಯಲ್ಲಿ ಸಂಗೀತದ ಆ ನಾದದಲ್ಲಿ ಭಾಗಿಗಳಾಗಿದ್ದೇವೆ. ಹೊಸ ವಾಗ್ಗೇಯಕಾರರಲ್ಲಿ ಮೊದಲಿಗೆ ಶ್ರೀ ರಾಲ್ಗುಡಿ ಜಯರಾಮನ್ ಅವರು ತುಂಬಾ ಮೇಲಕ್ಕೆ ಬರುವಾತ ಎಂದೂ ನಾನು ಆ ಕಡೆ ಗಮನ ಕೊಡಬೇಕೆಂದೂ ಹೇಳಿದ್ದರು. ಆವರೆಗಾಗಲೆ ಶ್ರೀ ಗೋಪಾಲಕೃಷ್ಣನ್ ಅವರು ಹೆಸರಾಗಿದ್ದರು. ಈಚೆಗೆ ವಿದ್ವಾನ್ ರಾಳಪಲ್ಲಿ ಅನಂತಕೃಷ್ಣಶರ್ಮರು ಗೆಳೆಯರಿಗಾಗಿ ಜಯನಗರದಲ್ಲೊಂದು ಕಡೆ ಸೇರಿ ಕಾರ್ಯಕ್ರಮ ನಡಸಿಕೊಟ್ಟಾಗ ಇಬ್ಬರಿಗೂ ಹಿರಿಯರಾದ ಅವರ ಗಾನವನ್ನು ಜೊತೆಗೇ ಕೇಳಿದ್ದೇವೆ. ಚಾಮರಾಜಪೇಟೆಯ ರಾಘವೇಂದ್ರಸ್ವಾಮಿ ಮಠದಲ್ಲಿ ಸಂಗೀತವಿದ್ವಾಂಸರ ಗೋಷ್ಠಿಯಲ್ಲಿ ಜೊತೆಗೆ ಕುಳಿತು ಸಿಹಿಭೋಜನ ಮಾಡಿದ್ದೇವೆ. ಕಚೇರಿಗಳಲ್ಲಿ ದೊಡ್ಡದಾಗಿ ಇನ್ನೊಬ್ಬರ ಮೇಲೆ ಪ್ರಭಾವ ಬೀರುವಂತೆ, ಅಚ್ಚು ಬೀಳುವಂತೆ ಸಾಹಸದಿಂದ ಹಾಡುವವರಿಲ್ಲದೆ ಎಂಥ ಒಳ್ಳೆಯ ಕೀರ್ತನೆಯೂ ಪ್ರಭಾವಕ್ಕೆ ಬರುವುದು ಕಷ್ಟ. ಅದು ಅಹಂತೆಯ, ಅಟ್ಟಹಾಸದ ವಿಜೃಂಭಣದ ಪ್ರಪಂಚ. ಅರಿಯಕುಡಿಯವರು, ಅವರಿಗಿಂತ ಚಿಕ್ಕವರಾದ ಚೆಂಬೈ ವೈದ್ಯನಾಥ ಭಾಗವತರು, ಶೆಮ್ಮಂಗುಡಿಯವರು, ಬೆಂಗಳೂರಿಗೆ ಹೆಚ್ಚು ಸಲ ಮುತ್ತಯ್ಯ ಭಾಗವತರು ಆಗ ಬಂದುದು ನನ್ನ ನೆನಪಿನಲ್ಲಿಲ್ಲ: ಒಮ್ಮೆ ಮೈಸೂರ ವಿದ್ವಾಂಸರು ಹಲವರನ್ನು ತಂದು ಒಕ್ಕಲಿಗರ ಸಂಘದ ಹಾಲಲ್ಲಿ ಭಾಗವತರು ಮೇಳಗಾನವನ್ನು ಏರ್ಪಡಿಸಿದ್ದರು, ಹರಿಕಥೆ ಮಾಡಿದ್ದರು, ಅಷ್ಟೆ. ಅವರು ಭಾಗವತರು ತಾನೇ. ಕಥೆ, ಪೌರಾಣಿಕ ನಡುವೆ. ನಮ್ಮ ಸಂಗೀತದ ತ್ರಿಮೂರ್ತಿಗಳದು, ಸ್ವಾತಿ ತಿರುನಾಳರದು, ಸ್ವಂತವಾದ ಕೃತಿಗಳನ್ನು ಸೇರಿ ತುಂಬು ತರುತ್ತಿದ್ದರು. ಇನ್ನೂ ಹಿಂದಿನ ಅನಂತರಾಮ ಭಾಗವತರೂ ಹಾಗೆಯೇ. ಕಡೆಗೆ ಮುಸುರಿ ಸುಬ್ರಹ್ಮಣ್ಯಯ್ಯರೂ ಸಾಹಸಗಳನ್ನು ಮಾಡಿ ಬೆಂಗಳೂರು ಮೈಸೂರಿನವರ ಮೇಲೆ ತಮ್ಮ ಪ್ರಭಾವವನ್ನು ಅಚ್ಚೊತ್ತಿಹೋದುದುಂಟು. ಇವರು ಹೂವಿನಂತೆ; ಪಾರಿಜಾತದಂತೆ ಮುಟ್ಟಿದರೆ ನಲುಗುವ ಸ್ವಭಾವದವರು. ಇವರ ತಿಳಿವಳಿಕೆ ಯೋಗ್ಯತೆ ಅನೇಕರಿಗೆ ಗೊತ್ತಿದ್ದರೂ ಇತರರ ಮೇಲೆ ಬಿದ್ದು ಹೋಗುವವರಲ್ಲವಾದ್ದರಿಂದ ಮತ್ತು ದಾಷ್ಟಿಕದಿಂದ ದೊಡ್ಡ ಗಂಟಲಲ್ಲಿ ಹಾಡಿ ಬೆಡಗು ಮಾಡದೆ ಇರುತ್ತಿದ್ದುದರಿಂದ ಇವರ ಗುಣವೂ ಇವರ ಕೆಲವು ಕೃತಿಗಳೂ ಹಿಂದೆ ಬಿದ್ದವೆನ್ನಿಸುತ್ತದೆ. ಈಗ ಪುಸ್ತಕದಲ್ಲಿ ಅಚ್ಚಾಗುತ್ತಿರುವ ಕೆಲವು ಸಂಗೀತಗಾರರಿಗೆ ಪ್ರಿಯವಾದೀತೆಂದು ನಾನು ನಂಬಿದ್ದೇನೆ. ಸಂಗೀತಗಾರರೆಂಬವರ ಸಂಖ್ಯೆಯೇ ಇಂದು ಮೈಸೂರಲ್ಲಿ ಕ್ಷಯಿಸಿ ಹೋಗುತ್ತಿರುವಾಗ ಇದರ ಭರವಸೆ ಹೇಗೊ ಏನೊ. ಈ ಮಾತನ್ನು ಪ್ರಕಟವಾಗಿ ನುಡಿವುದು ಅವಿವೇಕ; ಅಲೌಕಿಕ ಕೂಡ. ನಾನಾರು ತೀರ್ಮಾನಕ್ಕೆ? ನನ್ನ ಸಂಗೀತದ ಪರಿಚಯ ಕೇವಲ ಕೇಳ್ಮೆಯದು.

ಒಮ್ಮೆ ನ್ಯಾಷನಲ್ ಬುಕ್ ಟ್ರಸ್ಟ್ ಚೇರ್‌ಮನರಾದ ಡಾ. ಬಿ. ವಿ. ಕೇಸ್ಕರ್ ಅವರು

ಮಾತನಾಡುತ್ತ ಯಾವುದೊ ಒಂದು ಸಂದರ್ಭದಲ್ಲಿ 'ಯೋಗನರಸಿಂಹಂ ಅವರ ರಾಗ ಸ್ವರೂಪವನ್ನು ಕುರಿತ ಬರವಣಿಗೆಯನ್ನು ನೀವು ಓದಿದ್ದೀರ?' ಎಂದು ಕೇಳಿದರು. ನಾನು ಓದಿರಲಿಲ್ಲ. ಆದರೆ ರಾಗಸ್ವರೂಪವನ್ನು ಕುರಿತು ಹತ್ತು-ಹನ್ನೆರಡು ವರ್ಷಗಳು ಅವರೊಡನೆ ಇದ್ದ ಸಂಬಂಧದಿಂದ ಅವರ ಅಭಿಪ್ರಾಯ ಎಂಥದೆಂದು ನನಗೆ ತಿಳಿದಿತ್ತು. 'ಹಾಗಿದ್ದರೆ ಅವರನ್ನು ನೀವು ಬಲ್ಲಿರ?' ಎಂದರು; '೧೯೨೭ರಿಂದ ಕಂಡಿದ್ದೇನೆ' ಎಂದೆ. ಕೇಸ್ಕರ್ ಅವರಿಗೆ ದಕ್ಷಿಣಾದಿ ಸಂಗೀತದ ವಿಚಾರದಲ್ಲಿಯೂ ಯೋಗನರಸಿಂಹಂ ಅವರಲ್ಲಿಯೂ ತುಂಬಾ ಗೌರವವಿತ್ತು ಎಂಬುದನ್ನು ಸೂಚಿಸಲು ಮಾತ್ರ ಇದನ್ನು ಹೇಳುತ್ತಿದ್ದೇನೆ.

ಕಡೆಕಡೆಯಲ್ಲಿ ಅವರ ದೇಹಶಕ್ತಿ ಕಡಮೆಯಾಗಿತ್ತು. ಪೋಷಣೆ ನಾಜೂಕಿನಿಂದ ನಡೆಯಬೇಕಾಗಿ ಬಂದಿತು. ಅದೂ ಇದೂ ಹಾಡಬೇಕೆಂದು ಆಸೆ. ಈಚೆಗೆ ಒಂದೆರಡು ಸಲ ಒಂದೆರಡರ ಓಲನ್ನೂ ನಡೆಯನ್ನೂ ತೋರಿಸಲು ಪ್ರಯತ್ನಪಟ್ಟಾಗ ಉಸಿರಿನ ಕಷ್ಟ ಬಂದುದನ್ನು ನೋಡಿ ನಾನು ಬೇಡವೆಂದೆ. ತನಿಯಾದ ಒಂದೆರಡು ನಡೆ, ಆವೃತ್ತಗಳನ್ನು ಮೆಲ್ಲನೆಯ ದನಿಯಲ್ಲಿ ಹೇಳಿದರು. ಆ ಆಸೆ, ಅಭಿಲಾಷೆ ಸಮುದ್ರಗಳನ್ನು ಆಕಾಶವನ್ನು ಮುಟ್ಟುವಂಥವು, ಬಾಚುವಂಥವು. ಮಡದಿ ಮಕ್ಕಳು ದೊಡ್ಡದಾಗಿ ನಡೆದುಕೊಂಡು ಅವರನ್ನು ನೋಡಿಕೊಂಡರು. ಇವರಲ್ಲಿ ಅವರಿಗೆ, ಅವರಲ್ಲಿ ಇವರಿಗೆ ಹೆಮ್ಮೆ. ಎಲ್ಲಕ್ಕಿಂತ ಹೆಚ್ಚಾಗಿ ಈ ಎಲ್ಲವನ್ನೂ ನಡಸುತ್ತಿದ್ದ ಆ ತಾಯಿ, ಅವರ ಹೆಂಡತಿಯ ರಕ್ಷಣೆ ಪೋಷಣೆಯಲ್ಲಿ ಅವರು ತಮ್ಮ ಕಾಲವನ್ನು ಕಳೆದರು.

ಒಂದು ಸಂಗತಿಯನ್ನು ತಿಳಿಸಿ ಇದನ್ನು ಮುಗಿಸಬೇಕೆನ್ನಿಸುತ್ತದೆ: ಆಕೆ ಒಂದು ಶಿಶು ವಿಹಾರವನ್ನು ನಡಸುತ್ತಿದ್ದರು. ಕನ್ನಡ ಗದ್ಯದಲ್ಲಿ ಮಹಾಭಾರತ ಒಂದು ಗ್ರಂಥವನ್ನು ಬರೆದರು. ಅದನ್ನು ನೋಡುವ ಸುಯೋಗ ಮೈಸೂರಲ್ಲಿ ನನಗೆ ದೊರಕಿತ್ತು. ಒಂದು ದಿನ ಅವರಿಬ್ಬರನ್ನೂ ಮನೆಗೆ ಕರೆದು ಸಣ್ಣ ಉಪಚಾರ ಮಾಡಿ ಪುಸ್ತಕ ಹಿಂದೆ ಕೊಡೋಣ, ಏನಾದರೂ ಕೇಳಿದರೆ ಹೇಳೋಣ ಎಂಬ ಅಭಿಲಾಷೆ ಇತ್ತು. ನಾನು ಉದಾಸೀನನೆಂದು ಎಣಿಸಿದರೊ ಏನೊ. ಪುಸ್ತಕವನ್ನು ಹಿಂದಕ್ಕೆ ತರಿಸಿಕೊಂಡರು. ನನ್ನ ಮನೆಯ ಯಾವ ಯಾವವೊ ಕಷ್ಟಗಳಿಂದ ಆ ಊಟ ಉಪಚಾರ ಸಲ್ಲಿಸಲು ಅವಕಾಶ ಒದಗದ್ದು ಬೇಸರ ತರುತ್ತಿದೆ. ಅಪಚಾರದ ಭಾವನೆ ಸುತರಾಂ ನನ್ನಲ್ಲಿ ಇರಲಿಲ್ಲವೆಂದು ಮಾತ್ರ ಬಿನ್ನೈಸಬಲ್ಲೆ. ಇನ್ನೊಂದು ಸಂಗತಿ: ನನ್ನ ಕಿವಿಗೆ ಬಿದ್ದುದು. ೧೯೪೨ರ ಸುಮಾರಲ್ಲಿ ಕಾಲೆಜ್ ವಿದ್ಯಾರ್ಥಿಗಳು ಸತ್ಯಾಗ್ರಹದಲ್ಲಿ ತೀವ್ರವಾಗಿ ಭಾಗವಹಿಸಿದ್ದರು. ಅವರ ಹಿರಿಯ ಮಗ ಶ್ರೀ ಎಚ್. ವೈ. ಶಾರದಾಪ್ರಸಾದ್ ಆಗ ಒಬ್ಬ ವಿದ್ಯಾರ್ಥಿಮುಂದಾಳು. ನಾನು ಆಗಿನ್ನೂ ಮೈಸೂರಿನ ಕಾಲೆಜಿಗೆ ಹೋಗಿರಲಿಲ್ಲ. ಯಾವುದೊ ಸಂದರ್ಭದಲ್ಲಿ ಸರ್ಕಾರದ ನೌಕರರು ತಮ್ಮ ಮಕ್ಕಳನ್ನು ತಮ್ಮ ಪ್ರಭಾವ ಬೀರಿ ಕಾಲೆಜಿಗೆ ತಪ್ಪದೆ ಹೋಗುವಂತೆ ಮಾಡಬೇಕು ಎಂಬ ಅಪ್ಪಣೆ ಬಂದಿತು. ಮೈಸೂರಲ್ಲಿ ಬೆಂಗಳೂರಲ್ಲಿ ಕೆಲವರು ಹಾಗೆ ಮಾಡಬೇಕಾಯಿತು. ಕೇಳಿದ ಮಕ್ಕಳು ಕೇಳಿದರು; ಕೇಳದವರು ಕೇಳಲಿಲ್ಲ. ಈ ಮಗನ ಮಾತಿಗೆ ಬಂದು ಒಮ್ಮೆ ಏಕಾಂತದಲ್ಲಿ ತಮ್ಮ ಪತ್ನಿಯೊಂದಿಗೆ ಯೋಗನರಸಿಂಹಂ ಈ ಸಂಗತಿಯನ್ನು ನುಡಿದರಂತೆ.

ಆಕೆ ಹೀಗೆಂದರೆಂದು ನನಗೆ ವರದಿಯಾಗಿದೆ: 'ಮಗು ಸ್ವತಂತ್ರವಾದ ಮನಸ್ಸುಳ್ಳವನು; ಒಂದು ತೀರ್ಮಾನಕ್ಕೆ ಬಂದಿದ್ದಾನೆ: ಅವನಿಷ್ಟ ಹಾಗಿದ್ದರೆ ಹಾಗೆ ಮಾಡಲಿ. ನೀವೂ ಚಳವಳಿಗೆ ಸೇರಬೇಕೆಂದು ನಿಮಗೆ ಮನಸ್ಸು ಬಂದರೆ ಸರ್ಕಾರದ ಕೆಲಸ ಬಿಟ್ಟು ನೀವೂ ಸೇರಿ. ಮನೆಯನ್ನು ಹೇಗೊ ನಾನು ನೋಡಿಕೊಳ್ಳುತ್ತೇನೆ' ಎಂದರಂತೆ. ಈ ಮನೋಧರ್ಮ ವೀರಮಾತೆಯದು. ಇದು ನಾನು ಕೇಳಿ ಬಂದುದು. ಅಂಥ ಪತ್ನಿ, ಅಂಥ ಮಕ್ಕಳು, ತನ್ನ ಸ್ವಂತ ದೊಡ್ಡ ಸಾಂಸ್ಕೃತಿಕ ಅಭಿಲಾಷೆ, ಸಾಹಿತ್ಯಸೌಹಾರ್ದ, ಸಂಗೀತವಿಲಾಸ ಪಡೆದಿದ್ದ ಯೋಗನರಸಿಂಹಂ ಧನ್ಯರೆನ್ನಿಸುತ್ತದೆ.

ಅವರಿಗೆ ನಾಟಕದಲ್ಲಿ ತುಂಬಾ ಪ್ರೀತಿ. ಒಂದು ಸಲ ಭಾಸನ 'ಊರುಭಂಗ' ನಾಟಕವನ್ನು ಮಹಾರಾಜಾ ಕಾಲೇಜಲ್ಲಿ ಪ್ರದರ್ಶಿಸಿದ್ದರು. ಅದರಲ್ಲಿ ದುರ್ಯೋಧನ ಪಾತ್ರವಹಿಸಿ ಮನಸ್ಸು ಕರಗುವಂತೆ ತಂದೆ – ಮಕ್ಕಳ ದೃಶ್ಯವನ್ನು – ದುರ್ಯೋಧನ ಮರ್ಜಿಯರದು – ನಿರ್ವಹಿಸಿದುದು ನನ್ನ ಕಣ್ಣಿಗೆ ಕಟ್ಟಿದಂತಿದೆ. ಇನ್ನೊಂದು ಸಲ 'ವೇಣೀಸಂಹಾರ' ನಾಟಕವನ್ನಾಡಿದ್ದರು. ಅದರಲ್ಲಿಯೂ 'ಸ್ವಪ್ನವಾಸವದತ್ತ'ದಲ್ಲಿಯೂ ತುಂಬಾ ಮನಸ್ಸಿಗೆ ಹಿಡಿಯುವಂಥ ಪಾತ್ರಗಳನ್ನು ನಿರ್ವಹಿಸಿದ್ದರಂತೆ. ಸಂಸ್ಕೃತ ನಾಟಕದ ಅಭಿನಯದಲ್ಲಿ ಅವರಿಗೆ ಆಸಕ್ತಿಯಿತ್ತು. ನಾಯಕ ಪಾತ್ರವನ್ನು ನಿರ್ವಹಿಸಬಲ್ಲವರು ಎಂಬುದು ಸಾಮಾನ್ಯವಾಗಿ ಅವರನ್ನು ಹೊರಗಿಂದ ನೋಡಿದವರಿಗೆ ತೋರುತ್ತಿರಲಿಲ್ಲ. ಗುಪ್ತವಾಗಿದ್ದಂತೆ ಇದ್ದರೂ ಚೈತನ್ಯದ ಚಿಲುಮೆಯಂತಿದ್ದುದು ಅವರ ಸ್ವಭಾವ. ಎಷ್ಟೊ ಶಕ್ತಿಗಳು ಜನದಲ್ಲಿ ಗುಪ್ತವಾಗಿರುತ್ತವೆ. ಇನ್ನು ಕೆಲವು ದುರ್ದಮ್ಯವಾಗಿದ್ದುದನ್ನು ಅಡಗಿಸಿಕೊಂಡಿರಬೇಕಾಗುತ್ತದೆ. ಅವಕಾಶ ದೊರೆತಾಗ ಅವಕ್ಕೆ ಪ್ರಕಾಶನ. ಬೇಟೆಗೆ ಸಿದ್ಧವಾದ ಪ್ರಾಣಿ ಹಾಡದಿರುವಾಗ ಹಕ್ಕಿ ಬಾಯಿ ಕಟ್ಟಿರುತ್ತವೆ. ಕಣ್ಣಿಗೆ ಮರೆ ಹಾಕಿದ್ದರೆ ಮಾತ್ರ ಸಮ್ಮನೆ ನಿಂತಿರುತ್ತವೆ. ಕಣ್ಣು ತೆರೆದು ಬೇಟೆ ಕಂಡಾಗ, ಬಾಯಿ ಕಟ್ಟು ತೆಗೆದಾಗ ಅವು ಸಹಜವಾಗಿ ಗುರಿಗೆ ನುಗ್ಗುತ್ತವೆ. ಯೋಗನರಸಿಂಹಂಗೆ ಆಳದಲ್ಲಿ ಈ ಶಕ್ತಿ ಇತ್ತು. ಅದು ಎಷ್ಟು ಪ್ರಕಾಶಕ್ಕೆ ಬರಬಹುದಾಗಿತ್ತೊ ಅಷ್ಟು ಬರಲಿಲ್ಲವೆಂಬುದು ನನ್ನ ವ್ಯಥೆ. ಅರುವತ್ತರ ವಯಸ್ಸಿಗೇ ಅದು ಇಲ್ಲವಾದುದು, ದುರ್ಬಲವಾದುದು ನಮ್ಮ ಕಲಾಪ್ರಪಂಚಕ್ಕೆ ಒಂದು ದೊಡ್ಡ ನಷ್ಟ.

ಕೆ. ಸಂಪದ್ಗಿರಿರಾವ್

ಸಂಪದ್ಗಿರಿರಾಯರು ಬೆಂಗಳೂರಿನ ವಿದ್ಯಾಪ್ರಪಂಚದಲ್ಲಿ ಹೆಸರಾದವರು. 'ಕೆ' ಎಂದರೆ ಕೋಲಾರ. ಅವರಿಗೂ ನ್ಯಾಷನಲ್ ಹೈಸ್ಕೂಲಿಗೂ ಮೊದಲಿಂದಲೂ ಸಂಬಂಧ. ಆ ಹೈಸ್ಕೂಲಿಗೂ ಮೊದಲು ಥಿಯೊಸೊಫಿಕಲ್ ಸೊಸೈಟಿಗೆ ಸೇರಿದ ಒಬ್ಬರಿಬ್ಬರು ಮಾನ್ಯರಿದ್ದರು. ಕಲ್ಯಾಣಸುಂದರಂ ಅವರೂ ರಾಯರೂ ಕಂದಾಡೆ ಕೃಷ್ಣಯ್ಯಂಗಾರ್, ಕೆ.ಎಸ್. ಕೃಷ್ಣಯ್ಯರ್, ಹೊರಗಿಂದ ಡಾ. ಕುನ್ಹಿ ಕಣ್ಣನ್ – ಇವರ ಸ್ನೇಹ ಆ ಸಂಸ್ಥೆಯನ್ನು ಕಟ್ಟಿತು. ಮೊದಲು ನಾನು ಆ ಸಂಸ್ಥೆಯನ್ನು ನೋಡಿದುದು ಚಾಮರಾಜಪೇಟೆಯ ಹೊಸ ತರಗುಪೇಟೆಯಲ್ಲಿನ ಒಂದು ಮಂದಿರದಲ್ಲಾದರೂ ಆ ಮುಂಚೆ ಅದು ಈಗಿನ ಎಸ್. ಎಲ್. ಎನ್. ಹೈಸ್ಕೂಲು ಕಟ್ಟಡದಲ್ಲಿ ಕೆಲವು ಕಾಲ ಬೀಡುಬಿಟ್ಟಿತ್ತೊ ಏನೊ. ಆದರೆ ಶಂಕರಪುರ – ಬಸವನಗುಡಿ ಸೇರುವ ವಿಸ್ತಾರವಾದ ಬಯಲು ಪ್ರದೇಶದ ಕೊನೆಯಲ್ಲಿ ಆ ಹೈಸ್ಕೂಲಿಗೆ ಹೊಸ ಕಟ್ಟಡ ಬಂದು ಅದು ರಾಷ್ಟ್ರೀಯ ವಿದ್ಯಾಶಾಲೆ ಎಂಬ ಹೆಸರಲ್ಲಿ ಕಾರ್ಯ ಮಾಡತೊಡಗಿತು. ಆವರೆಗೂ ಸೆಂಟ್ರಲ್ ಕಾಲೆಜಲ್ಲಿ ಇಂಗ್ಲಿಷ್ ವಿಭಾಗದಲ್ಲಿ ಉಪನ್ಯಾಸಕರಾಗಿದ್ದ ರಾಯರು ಸರ್ಕಾರಿ ಉದ್ಯೋಗವನ್ನು ಬಿಟ್ಟು ಇಲ್ಲಿಗೆ ಬಂದರು. ಇಲ್ಲಿ ಹೆಡ್‌ಮಾಸ್ಟರ್ ಆಗಿ ಬಹುಕಾಲ ಇದ್ದು ನ್ಯಾಷನಲ್ ಕಾಲೆಜ್ ಆದಮೇಲೆ ಅದರ ಪ್ರಿನ್ಸಿಪಲ್ ಕೂಡ ಆದರು. ಏನಾಗಲಿ, ಬಿಡಲಿ: ಅವರ ಪಾಠಪ್ರವಚನಗಳು ತುಂಬಾ ಪ್ರಿಯವಾಗಿರುತ್ತಿದ್ದುವು, ಸ್ಫೂರ್ತಿಯುತವಾಗಿರುತ್ತಿದ್ದುವು ಎಂದು ಕೇಳಿದ್ದೇನೆ.

ಆ ಕಾಲದಲ್ಲಿ ಸುಮಾರು ೧೯೨೦ರಿಂದ ಈಚೆಗೆ ಪೂರ್ತಿ ಭಾರತದ ರಾಷ್ಟ್ರೀಯ ಕಾಂಗ್ರೆಸ್ ಪ್ರಭಾವಕ್ಕೆ ಒಳಪಟ್ಟು ಒಂದು ವಿಶಿಷ್ಟವಾದ ಶಿಸ್ತು, ದೇಶಭಕ್ತಿ, ವ್ರತನಿಷ್ಠೆಯಂತೆ ನಡಸಿಕೊಂಡು ಬರಬೇಕೆಂದು ಇವರು ಮಾಡಿಕೊಂಡಿದ್ದರು. ಅವರೆಲ್ಲರಿಗೂ ಖಾದಿ ಉಡುಪು; ಒಂದು ಸ್ವಯಂಸೇವಕ ದಳ ಅಲ್ಲಿ ಏರ್ಪಟ್ಟಿತ್ತು. ಇಂಥ ದಳಗಳ ಸಾಮಾನ್ಯ ಚಟುವಟಿಕೆಗಳ ಜೊತೆಗೆ ಲಜಿಂ ಮುಂತಾದ ಹೊಸ ಬಗೆಯ ಪ್ರಯೋಗಗಳ ಪ್ರದರ್ಶನ ಕಂಡಿತು. ವಿದ್ಯಾರ್ಥಿಗಳಿಗೂ ಸಾಮಾನ್ಯವಾಗಿ ಮೊಂಡು ತೋಳಿನ ಖಾದಿ ಬನಿಯನ್, ನೀಲಿ ಚಡ್ಡಿ, ಖಾದಿ ಟೋಪಿ – ಸಮವಸ್ತ್ರವೇ ವಿಶೇಷ. ಆ ಸುಮಾರಿಗೆ ಲಾಲಾ ಲಜಪತರಾಯರ ಕಾರ್ಯದರ್ಶಿಯಾಗಿದ್ದು ಅಮೆರಿಕಾದಿಂದ ಹಿಂದಿರುಗಿದ್ದ ನಾ.ಸು. ಹರ್ಡೀಕರ್ ಅವರು ಅಧ್ಯಕ್ಷರಾಗಿದ್ದ ಹಿಂದೂಸ್ತಾನ ಸೇವಾದಳ ಎಂದೊ ಏನೊ ಹೆಸರಿದ್ದ ಅಖಿಲ ಭಾರತೀಯ – ನಮ್ಮಲ್ಲಿ ಅಖಿಲ ಕರ್ನಾಟಕ – ಸ್ವಯಂಸೇವಕ ಮಂಡಲ ಅರ್ಧ ಸೈನ್ಯ ಶಿಸ್ತುಳ್ಳಂತೆ ಏರ್ಪಾಡಾಯಿತು. ಮುಂದೆ ಇವರಲ್ಲಿ ಕೆಲವರು ಅಲ್ಲಿನ ಸೇನಾನಾಯಕರಂತೆ ತಯಾರಾಗಬೇಕೆಂದು ಶಾಲೆಯ ಕಾಂಪೌಂಡೊಳಗೇ ಒಂದು ತಾಲೀಂ ಮಾಡಿಕೊಂಡು ಅಂಗಸಾಧನೆಗಳನ್ನು ಮಾಡುತ್ತಿದ್ದುದುಂಟು. ಇದು ವಿದ್ಯಾರ್ಥಿಗಳಿಗೆ ರುಚಿಸಿತು; ಇವರಲ್ಲಿನ ಗೌರವವನ್ನು ಹೆಚ್ಚುಮಾಡಿತು. ಉಳಿದ ಮೈಸೂರು ಸರ್ಕಾರದ ಮತ್ತು ಖಾಸಗಿ ವಲಯಗಳ

ವಿದ್ಯಾಮಂದಿರಗಳು ಕೆಲವು ಪರಕೀಯರ ಆಡಳಿತಕ್ಕೆ ಒಳಪಟ್ಟು ದೇಶಿ ಸಂಸ್ಥಾನಕ್ಕೂ ಸೇರಿದವು; ತಾವು ಅಖಿಂಡ ಭಾರತದ ರಾಷ್ಟ್ರಕವರ್ಗ ಎಂಬಂತೆ ಭಾವನೆ, ಮುಡಿಪು ಆ ಸಂಸ್ಥೆಯಲ್ಲಿ ನಡೆಯಿತು. ಅವರು ತಕಲಿ, ಚರಕ ವಿಧಾನಗಳನ್ನೂ ಬಳಕೆಗೆ ತಂದರು; ಹಿಂದೀ ಪ್ರಚಾರಕ್ಕೆ ಮನಸ್ಸು ಕೊಟ್ಟರು. ಪ್ರಾರ್ಥನಾಗೀತಗಳಲ್ಲಿ, ಸ್ವಯಂಸೇವಕರ ಗೀತಗಳಲ್ಲಿ ಹಿಂದೀ ರಾಷ್ಟ್ರಗೀತೆಗಳು ಎನ್ನುವುದರ ಜೊತೆಗೆ, 'ವಂದೇ ಮಾತರಂ' ಗೀತೆಯನ್ನೂ ರವೀಂದ್ರನಾಥ ಟಾಗೋರರ 'ದೇವಿ ಭುವನಮನಮೋಹಿನೀ' ಗೀತವನ್ನೂ ಸ್ವಲ್ಪಮಟ್ಟಿಗೆ 'ಜನಗಣಮನ' ಗೀತವನ್ನೂ ದಿನಾ ಪ್ರಾರ್ಥನೆಯಲ್ಲಿ ಭಗವದ್ಗೀತೆಯ ಕೆಲವು ಭಾಗಗಳನ್ನೂ – ರಾಮಕೃಷ್ಣಾಶ್ರಮದಲ್ಲಿ ಪಠಿಸುವ ರೀತಿಯಲ್ಲಿ – ಬಳಸುತ್ತಿದ್ದರು. ಇದರಿಂದೆಲ್ಲ ಆ ಸಂಸ್ಥೆಯ ಪರವಾಗಿ ಬೆಂಗಳೂರಿನ ವಿದ್ಯಾರ್ಥಿವೃಂದದಲ್ಲಿ ಜನರಿಗೆ ಒಂದು ಭಕ್ತಿ ಹುಟ್ಟಿತ್ತು. ಅಖಿಲ ಕರ್ನಾಟಕದ ಒಂದು ಸಂಪರ್ಕ ರೂಪಿಸುವಂತೆ ಹರ್ಡೀಕರ್, ಕಬ್ಬೂರ್, ದಿವಾಕರ್ ಮುಂತಾದವರು ಇತ್ತಕಡೆ ಬರುವುದಕ್ಕೂ ಬಳಕೆಯಾಗುವುದಕ್ಕೂ ಆರಂಭವಾಯಿತು. ಗಾಂಧೀಜಿಯವರಾಗಲಿ, ಇತರ ರಾಷ್ಟ್ರೀಯ ನಾಯಕರಾಗಲಿ ಬೆಂಗಳೂರಿಗೆ ಬರುವರೆಂದಾಗ ಈ ಸ್ವಯಂಸೇವಕವರ್ಗ, ನ್ಯಾಷನಲ್ ಹೈಸ್ಕೂಲಿನ ಮೈದಾನ ಅವರ ದರ್ಶನದ ಮತ್ತು ಭಾಷಣಗಳ ರಂಗವಾಯಿತು: ಸಾಮಾನ್ಯವಾದ ವಿದ್ಯಾಮಂದಿರಗಳಲ್ಲಿ ನಡೆಯುತ್ತಿದ್ದ ಪಾಠದ ಜೊತೆಗೆ. ಹಾಗಿಲ್ಲದೆ ಸರ್ಕಾರದ ಎಸ್. ಎಸ್. ಎಲ್. ಸಿ. ಪರೀಕ್ಷೆಗೆ ಕಟ್ಟುವ ಹಾಗಿರಲಿಲ್ಲ. ಯಾರನ್ನು ರಾಷ್ಟ್ರಸ್ವಾತಂತ್ರ್ಯದ ವೀರರು ಎಂದು ನಾಡು ಭಾವಿಸಿತ್ತೊ ಅಂಥವರಿಗಾಗಿ ಭಾಷಣಗಳು, ಗ್ರಂಥಪ್ರಚಾರ ಆಗಾಗ ಅಲ್ಲಿ ಏರ್ಪಡುತ್ತಿದ್ದವು.

ಇನ್ನೊಂದು ವಿಶಿಷ್ಟ ಲಕ್ಷಣ: ಅಲ್ಲಿ ಮೂರು – ನಾಲ್ಕು ಜನ ಹಿರಿಯ ಉಪಾಧ್ಯಾಯರಲ್ಲಿ ಒಂದು ಆಯ್ಕೆ ಅಥವಾ ಪರ್ಯಾಯ ರೀತಿ ಏರ್ಪಟ್ಟು, ಅವರು ಒಂದು ನಿಯತಕಾಲದವರೆಗೂ ಹೆಡ್‌ಮಾಸ್ಟರುಗಳಾಗಿರಬೇಕೆಂದು ರೂಢಿಯಾಯಿತು. ಅವರೆಲ್ಲರಿಗೂ ಸಾಮಾನ್ಯವಾಗಿ ಒಂದೇ ಮಟ್ಟದ ಸಂಬಳಸಾರಿಗೆ ಇದ್ದು ಹೆಡ್‌ಮಾಸ್ಟರ್ ಆದಾಗ ಒಂದು ಸ್ವಲ್ಪ ಹೆಚ್ಚಳ ವೇತನ ದೊರೆಯುತ್ತಿತ್ತು. ಈ ಲಕ್ಷಣಗಳು ನಿಜವಾಗಿ ಒಂದು ಬಗೆಯ Democratic – ಇದನ್ನು ಪ್ರಜಾಸತ್ತಾತ್ಮಕ ಎನ್ನುವ ಹಾಗಿಲ್ಲ – ಒಂದು ಸಮಾನತಾಕೂಟ ವ್ಯವಸ್ಥೆ – ವಿತರಣೆ ಎನ್ನಬಹುದು. ಈ ಹಿಂದೆಲ್ಲ ಒಟ್ಟಿಗೆ ಒಂದು ಮನಸ್ಸುಳ್ಳವರಂತೆ, ಒಂದು ವಾಣಿಯವರಂತೆ ಬಹುಕಾಲ ಇದ್ದವರು ಕಂದಾಡೆ ಕೃಷ್ಣಯ್ಯಂಗಾರ್, ಕೆ. ಎಸ್. ಕೃಷ್ಣಯ್ಯರ್, ಸಂಪದ್ಗಿರಿರಾಯರು. ಕೆಲವು ಕಾಲ – ಮುಂದೆ ಸರ್ದಾರ್ ಎಂದು ಹೆಸರಾದ ಶ್ರೀ ಕಾನಕಾನಹಳ್ಳಿ ವೆಂಕಟರಾಮಯ್ಯನವರು ಅಲ್ಲಿ ಕೆಲಸ ಮಾಡುತ್ತಿದ್ದರು. ಸ್ವಲ್ಪ ಕಾಲ ಶ್ರೀ ನಿಟ್ಟೂರು ಶ್ರೀನಿವಾಸರಾಯರೂ ಆ ಶಾಲೆಯಲ್ಲಿ ಉಪಾಧ್ಯಾಯರಾಗಿದ್ದರೆಂದು ನನ್ನ ನೆನಪು. ದೇಶದ ಸ್ವಾತಂತ್ರ್ಯಚಳವಳಿಯ ಕಾಲದಲ್ಲಿ ಇವರು ಯಾರೂ ಜೈಲಿಗೆ ಹೋಗದಿದ್ದರೂ ಇವರ ಮೇಲೆ ಸರ್ಕಾರದ ಕಣ್ಣು ಇದ್ದೇ ಇತ್ತು. ಸರ್ಕಾರ ಏನು ಮಾಡೀತು? ಇದು ದೇಶಿ ಸರ್ಕಾರ – ಇವರ ಮೇಲೆ ಕಣ್ಣಿದ್ದದ್ದು ಸಂಸ್ಥಾನದ ರೆಸಿಡೆಂಟರ ಕಾರಣವಿಂದ. ಬೆಂಗಳೂರು ಬ್ರಿಟಿಷ್ ಸೇನಾಪಡೆ ದೊಡ್ಡದಾಗಿದ್ದ ಒಂದು ಲಷ್ಕರ್. ಈ ಸನ್ನಿವೇಶವನ್ನು ಊಹಿಸಿಕೊಳ್ಳಬಹುದು. ಇದರ ಹಳೆಯ ಕಟ್ಟಡವನ್ನು ಹೊಸ

ರೂಪಕ್ಕೆ ತರುವಾಗ ಮಿರ್ಜಾ ಸಾಹೇಬರು ಕಟ್ಟಡದ ರಚನೆಯ ಹೊರಸಾಲಿಗೆ ಕೆಲವು ಸೂಚನೆಗಳನ್ನು ಕೊಟ್ಟರು. ಇಲ್ಲಿನ ಲೆಕ್ಕಪತ್ರಗಳ ವ್ಯವಸ್ಥೆ ಚೊಕ್ಕವಾಗಿ ನಡೆಯುವಂತೆ ರಾಯರೂ ಇವರ ಸಲಹೆಗಾರ ಮೇಲ್ವಿಚಾರಕ ಮಂಡಲಿಯ ಅಧಿಕಾರಿಗಳೂ ನೋಡಿಕೊಳ್ಳುತ್ತಿದ್ದರು. ಅವರಲ್ಲಿಯೂ ಒಂದು ನಿಷ್ಠೆ ಕ್ರಮ ಇತ್ತು. ಊರಲ್ಲಿ ತುಂಬ ಗಣ್ಯರಾದ ರಾಷ್ಟ್ರಕರು ಅಯ್ದವರು ಅಧ್ಯಕ್ಷರು. ಬಹುಕಾಲ – ಮುಂದೆ ಮೈಸೂರು ವಿಶ್ವವಿದ್ಯಾನಿಲಯದ ರೆಜಿಸ್ಟ್ರಾರ್ ಆದ ಪ್ರೊ. ವಿ. ಗೋಪಾಲಸ್ವಾಮಿ ಅಯ್ಯಂಗಾರ್ ಅವರು ಅದರ ಖಜಾಂಚಿಯೊ ಕಾರ್ಯದರ್ಶಿಯೊ ಆದರು. ಆದುದರಿಂದ ಯಾವ ಬಗೆಯ ಸಡಿಲತೆಯೂ ಸಂಸ್ಥೆಯಲ್ಲಿ ಉಂಟಾಗಲು ಅವಕಾಶವಿರಲಿಲ್ಲ. ಅವರು ಸೆಂಟ್ರಲ್ ಕಾಲೇಜಲ್ಲಿ ಗಣಿತಶಾಸ್ತ್ರದ ಉಪಪ್ರಾಚಾರ್ಯರು. ನಾನು ಮೈಸೂರಲ್ಲಿ ಶಾರದಾವಿಲಾಸ ಹೈಸ್ಕೂಲಲ್ಲಿ ಕೆಲಸ ಮಾಡುತ್ತಿದ್ದಾಗ – ಅದರಲ್ಲಿಯೂ ವಿಶೇಷವಾಗಿ ಬೊಂಬಾಯಿಂದ ಹಿಂದಿರುಗಿದ ಮೇಲೆ – ಪುನಃ ೧೯೨೩ರಿಂದ ೧೯೨೮ರ ವರೆಗೆ ಇದ್ದ ಕಾಲದಲ್ಲಿ ಒಂದೆರಡು ಸಲ ಈ ಸಂಸ್ಥೆಯಲ್ಲಿ ಕೆಲಸ ಮಾಡುವ ಮಾತುಕತೆ ಅನೌಪಚಾರಿಕವಾಗಿ ಖಾಸಗಿಯಾಗಿ ನಡೆಯಿತು. ಇಷ್ಟು ಶಿಸ್ತಿನದಲ್ಲದಿದ್ದರೂ ಮೈಸೂರಿನ ಆ ಶಾಲೆ ಅನೇಕ ತೊಳಲಿಗೆ ಬಳಲಿಗೆ ಈಡಾಗಿ ಅಲ್ಪ ಸಂಬಳಗಳಲ್ಲಿ ಉಪಾಧ್ಯಾಯರು ಕೆಲಸಮಾಡುತ್ತಿದ್ದೆವು. ಈ ಮಾತು ಹೇಳಿದ ನೆನಪು: 'ನಾನು ಸರ್ಕಾರಿ ಶಾಲೆಗಳಲ್ಲಿ ಓದಿದವನು. ಅದರ ಫ್ರೀಷಿಪ್, ಸ್ಕಾಲರ್‌ಷಿಪ್ ಪಡೆದು ತೇರ್ಗಡೆಹೊಂದಿದವನು. ಬ್ರಿಟಿಷರು ಇಲ್ಲಿ ಆಳಿದರೂ ನಮ್ಮ ಸಂಸ್ಥಾನವೂ ಭಾರತೀಯ ತಾನೆ?' ಪ್ರಜ್ಞಾವಾದಗಳನ್ನು ಹೇಳುವುದರ ಜೊತೆಗೆ, 'ಸರ್ಕಾರದ ಒಂದು ಕಾಲೇಜಲ್ಲೊ ಕೊಲಿಜಿಯೇಟ್ ಹೈಸ್ಕೂಲಲ್ಲೊ ಕೆಲಸಕ್ಕೆ ಹೋಗಲು ಯತ್ನಿಸಬೇಕಾಗಿದೆ. ನೀವು ಅದನ್ನು ದಾಸ್ಯವೆನ್ನಿ. ದಾಸ್ಯ ಹೃದಯಕ್ಕೆ ಸಂಬಂಧಿಸಿದ್ದು. ಎಲ್ಲಿ ಉಪಾಧ್ಯಾಯನಾಗಿದ್ದರೂ ನಮ್ಮ ಗಮನ ವಿದ್ಯಾರ್ಥಿಜೀವನದ ಉದಾತ್ತತೆಯ ಕಡೆಗೇ ಅಲ್ಲವೆ?' 'ನಿಮ್ಮ ಮಾರ್ಪಾಡು ಚೆನ್ನಾಗಿದೆ. ದೃಷ್ಟಿ, ರೀತಿ ಚೆನ್ನಾಗಿವೆ. ಆದರೆ ನೀವು ಖಾದಿ, ಖದ್ದರ್ ವ್ರತ ಧರಿಸಿದವರು. ಅದಕ್ಕೆ ಗಾಂಧೀಜಿಯವರ ಆಶೀರ್ವಾದ ಇದೆ. ನಾನು ಈ ಆರ್ಥಿಕ ನೀತಿಗೆ ಒಲಿಯದವನಾದ್ದರಿಂದ ಆ ತಕಲಿ, ಚರಖ, ಖದ್ದರ್ ತತ್ವವನ್ನು ಒಪ್ಪದೆ, ಆ ಉಡುಪು ಸಮವಸ್ತ್ರಗಳನ್ನು ಆ ವ್ರತಗಳನ್ನು ಒಪ್ಪದೆ, ಅಲ್ಲಿಗೆ ಬಂದು ಕೆಲಸ ಮಾಡುವುದು ತರವಲ್ಲ; ತಪ್ಪು. ಬೆಂಗಳೂರಿಗೆ ಒಂದು ಪ್ರೈವೇಟ್ ಹೈಸ್ಕೂಲಿಗೆ ಸೇರಬೇಕಾದರೆ ಇಲ್ಲಿಗೇ ಬರುತ್ತೇನೆ; ನಿಮ್ಮ ಹಾಗೆ ನಡೆದುಕೊಳ್ಳುತ್ತೇನೆ' – ಎಂದಿದ್ದೆ. ಇದು ಸರಿಯೊ ತಪ್ಪೊ ಕಾಣೆ.

ಒಮ್ಮೆ ಹೀಗಾಯಿತು: ರಾಯರು 'Economics of Khaddar' ಎಂಬ ಒಂದು ಸುಮಾರು ೧೦೦–೧೨೦ ಪುಟಗಳ ಪ್ರಬಂಧವನ್ನು ಬರೆದರು – ಅಖಿಲ ಭಾರತ ಸ್ಪರ್ಧೆಗಾಗಿ. ನನ್ನ ಗುರುಗಳಾದ ಎನ್. ಎಸ್. ಸುಬ್ಬರಾಯರಿಗೆ ಅದನ್ನು ನೋಡಬೇಕೆಂದು ಕೊಟ್ಟರು. ಅವರು ಅಲ್ಲಿ ಇಲ್ಲಿ ಕಣ್ಣಾಡಿಸಿ 'ವಿವರವಾಗಿ ನೋಡಲು ಸೀತಾರಾಮಯ್ಯನವರಿಗೆ ಕೊಡಿ' ಎಂದರು. ನನಗೂ ರಾಯರಿಗೂ ಇಷ್ಟು ಹೊತ್ತಿಗೆ ಸ್ನೇಹ ವಿಶ್ವಾಸ ಬೆಳೆದಿದ್ದುವಾದುದರಿಂದ ಯಾವ ಸಂಕೋಚವೂ ಇಲ್ಲದೆ ನನಗೆ ಬೆರಳಚ್ಚು ಮಾಡಿಸಿದ ಆ ಪ್ರಬಂಧವನ್ನು ಕೊಟ್ಟರು. ನಾನು ಆಧುನಿಕ ಅರ್ಥಶಾಸ್ತ್ರ ಪ್ರಪಂಚಕ್ಕೆ ಸೇರಿದವನು.

ಜೊತೆಗೆ ಕೆಲಸ ಮಾಡುವವರ ವರಮಾನ, ಜೀವನ, ಸಹಾಯ, ಉದ್ಯೋಗ ಕಲ್ಪನೆ ಇವುಗಳ ದೃಷ್ಟಿಯಿಂದಲಾದರೂ ನೂಲು ತೆಗೆದವರಿಗೆ ಎಂಟು-ಹತ್ತು ಗಂಟೆಯ ಕೆಲಸ ಮಾಡಿದರೆ ಸಂಜೆ ಒಂದೂವರೆ ಆಣೆ ಬರುತ್ತಿದ್ದುದನ್ನು ನೋಡಿ ಸಂಕಟಪಟ್ಟಿದ್ದವನು. ಕಾಕಿನಾಡ ಮಚಲಿಪಟ್ಟಣಗಳಲ್ಲಿ ತಯಾರಾದ ನೆಹರೂ ಷರ್ಟಿಂಗ್ ಎಂಬ ನಯವಾದ ಬಟ್ಟೆಗಳನ್ನು ಹೆಚ್ಚು ಹಣ ಕೊಟ್ಟು ಕೊಂಡು ಉಟ್ಟು ತೊಟ್ಟು ಒಂದೆರಡು ಸಲ ಕಷ್ಟಪಟ್ಟಿದ್ದೆ. ಧೋತ್ರವಾಗಿ ಒಪ್ಪುತ್ತಿರಲಿಲ್ಲ; ಯಂತ್ರೋದ್ಯೋಗವನ್ನು ಒಪ್ಪಿ ಅಲ್ಲ. ಹೆಚ್ಚು ಮಾನವೀಯ ಆವರಣ ಕಲ್ಪನೆ ಮಾಡಿದರೆ ಭರತಖಂಡದ ಎಲ್ಲ ಜನರಿಗೂ ಸಾಕಾಗುವಷ್ಟು ಬಟ್ಟೆಯನ್ನು ನಮ್ಮ ಬಟ್ಟೆ ಕಾರ್ಖಾನೆಗಳು ತುಂಬ ಅಗ್ಗದಲ್ಲಿ ಒದಗಿಸಬಹುದಾದೀತು. ತಯಾರಕರ ಸ್ವಾರ್ಥ, ಅಲ್ಲಿನ ಅಧಿಕಾರಿಗಳ ಬಿಗಿ, ಯಜಮಾನರ ಲಾಭದೃಷ್ಟಿ ಇವು ಮಾತ್ರ ಮಾರ್ಪಡಬೇಕು. ಬೇರೆ ದೇಶಗಳಲ್ಲಿ ಇದು ಶಕ್ಯವಾದರೆ ಭರತಖಂಡದಲ್ಲಿ ಶಕ್ಯವಾಗಬಾರದೆ? ಗಾಂಧೀಜಿಯವರಂಥ ನಾಯಕರು ಭಾರತದಲ್ಲಿ ಇರುವಾಗಲಾದರೂ ಇದು ವ್ಯರ್ಥಾಲಾಪವೇ. ಮನುಷ್ಯಸ್ವಭಾವ ಅಷ್ಟು ಸುಲಭವಾಗಿ ಬದಲಾದೀತೆ? ಅರ್ಥಸಾಧನೆಯ ದೃಷ್ಟಿಯಿಂದ ಈ ಖದ್ದರ್ ತತ್ವ ನನಗೆ ಅಷ್ಟು ತೃಪ್ತಿಕರವಾಗಿಲ್ಲದಿದ್ದರೂ ಅದರ ಹಿಂದೆ ಇದ್ದ ರಾಷ್ಟ್ರೀಯ ಮನೋವೃತ್ತಿ, ತಿನ್ನಲು ಏನೂ ಇಲ್ಲದಿರುವ, ಹೆಂಡತಿಮಕ್ಕಳು, ಮುದುಕರಿಗೆ ಸ್ವಲ್ಪ ಸಂಪಾದನೆ ಉಪಸಂಪಾದನೆ, ಇವುಗಳ ಜೊತೆಗೆ ಒಂದು ವ್ರತನೇಮ, ರಾಷ್ಟ್ರೀಯ ಕಲ್ಪನೆ, ಸ್ವದೇಶಿ ಎಂಬ ಭಾವನೆ ಬಂದೀತು ಎಂಬ ಗಾಂಧೀಜಿಯವರ ವಿಶ್ವಾಸ ಹೆಚ್ಚು ಬಲಯುತವಾದ್ದು. ಆ ನಂಬಿಕೆಗೆ ತಕ್ಕ ಗೌರವ ನನ್ನದು. ನಾನು ಜೆ. ಸಿ. ಕುಮಾರಪ್ಪನವರ ಗ್ರಂಥ ಮುಂತಾದವನ್ನು ಓದಿದ್ದೆ. ಯಂಗ್ ಇಂಡಿಯ, ಹರಿಜನ್ ಪತ್ರಿಕೆಗಳನ್ನೂ ಸುಮಾರು ಓದುತ್ತಿದ್ದೆ. ಆದರೆ ಇದನ್ನು 'Economics' ಎಂದು ಕರೆಯಬೇಡಿ; ಇದು ನಾನು ಓದಿದ Economics ಆಗುವುದಿಲ್ಲ; ಪ್ರಪಂಚದಲ್ಲಿ ಪ್ರಬಲವಾಗಿರುವ ಅರ್ಥಶಾಸ್ತ್ರದ ತತ್ತ್ವಗಳ ದೃಷ್ಟಿಯಿಂದ ಈ ಈ ಟೀಕೆಗಳು ಬಂದಾವು ಎಂಬಂತೆಯೊ ಏನೊ ನಾಲ್ಕಾರು ಕಡೆ ಸೀಸದ ಕಡ್ಡಿಯಲ್ಲಿ ಎರಡೆರಡು ಮಾತು ಬರೆದಿದ್ದೆ. ರಾಯರಿಗೆ ತಮ್ಮ ಪ್ರಬಂಧದ ವಿಚಾರದಲ್ಲಿ ಭರವಸೆ ಉಂಟಾಗಲಿಲ್ಲವೆಂದು ಕಾಣುತ್ತದೆ. ಬರವಣಿಗೆಯೇನೊ ಚೆನ್ನಾಗಿತ್ತು. ಆದರೆ ಅವರು ಸ್ಪರ್ಧೆಗೆ ಅದನ್ನು ಕಳಿಸಲಿಲ್ಲ. ಮೂರು ತಿಂಗಳಾದ ಮೇಲೆ ಸ್ಪರ್ಧೆಯಲ್ಲಿ ಬಹುಮಾನ ಪಡೆದಿದ್ದ ಪ್ರಬಂಧ ಇದಕ್ಕಿಂತ ಮೇಲಾದ್ದೇನೂ ಆಗಿರಲಿಲ್ಲ. ಇದನ್ನು ಕಳಿಸಿದ್ದರೆ ಇವರಿಗೇ ಈ ಪ್ರಬಂಧಕ್ಕೇ ಪ್ರಶಸ್ತಿ ಬರಬಹುದಿತ್ತು. 'ನಾನು ಏನು ಅನ್ಯಾಯ ಮಾಡಿದೆ: ನನ್ನ ಪೆಗ್ಗೆಯಿಂದ ರಾಯರ ಇಂಥ ಒಂದು ಕೆಲಸಕ್ಕೆ ನಿರುತ್ತೇಜನ ತಂದೆನಲ್ಲ' ಎಂದು ಈಗಿಗೂ ವಿಷಾದ ಉಳಿದಿದೆ. ಆದರೆ ಇದರಿಂದಾಗಲಿ, ನನ್ನ ಇತರ ಅಭಿಪ್ರಾಯಗಳಿಂದಾಗಲಿ ರಾಯರು ನನ್ನಲ್ಲಿ ವಿಶ್ವಾಸ ಕಡಮೆ ಮಾಡಲಿಲ್ಲ. ಅದು ಅವರ ಉದಾರತೆಯ ಲಕ್ಷಣ. ಕಡೆಯವರೆಗೂ ನಾವು ಸ್ನೇಹಿತರಾಗಿದ್ದೆವು.

ಆಗ ಕನ್ನಡಕ್ಕಾಗಿ ಕೆಲಸ ಮಾಡುತ್ತಿದ್ದ ನಾವು ಕೆಲವರು ಮಾತ್ರ ಇಲ್ಲಿ ತುಂಬ ಕಷ್ಟದಲ್ಲಿ ನಿಷ್ಠುರ ಆಕ್ಷೇಪಗಳ ನಡುವೆ 'Little Kannada Men' ಎನ್ನಿಸಿಕೊಂಡೊ, ವಿಶ್ವವಿದ್ಯಾನಿಲಯದಲ್ಲಿ ಯಾರಾದರೂ ಸೆನೇಟಲ್ಲಿ ಕೌನ್ಸಿಲಲ್ಲಿ (ಈಗ ಸಿಂಡಿಕೇಟ್) ಎದ್ದು

ನಿಂತಾಗ 'The Kannada Knights' ಇತ್ಯಾದಿ ಎನ್ನಿಸಿಕೊಂಡೊ, ನಿಮ್ಮ ಕನ್ನಡ 'ಕೇಳು ಜನಮೇಜಯ' ತಾನೆ ಎನ್ನಿಸಿಕೊಂಡೊ, parochial ಇತ್ಯಾದಿ ಬಿರುದಾಂಕಿತರಾಗಿಯೊ ಕನ್ನಡಕ್ಕೆ ದುಡಿಯಬೇಕಿತ್ತು. ಕರ್ನಾಟಕ ಸಂಘಗಳಾಗಲಿ, ಪರಿಷತ್ತಾಗಲಿ, ಕನ್ನಡದ ಕೂಗನ್ನು ಎತ್ತಿದವರಾಗಲಿ ಏಕದೇಶವಾದ ಮನಃಪ್ರೀತಿ ಉಳ್ಳವರು ಎಂಬಂತಹ ಭಾವನೆ ಇರಲಿಲ್ಲ. ಹಿಂದಿ ರಾಷ್ಟ್ರಭಾಷೆ, ಅದನ್ನು ಪ್ರಚಾರಕ್ಕೆ ತರಬೇಕು ಎಂಬ ಮನಸ್ಸು ಅವರಲ್ಲಿ. ಅದಕ್ಕಾಗಿ ದುಡಿದರು, ಪ್ರಚಾರ ಮಾಡಿದರು. ಒಮ್ಮೆ ಪರಿಷತ್ತಲ್ಲಿ ಗುಂಡಪ್ಪನವರ ಉಪಾಧ್ಯಕ್ಷತೆಯ ಕಾಲದಲ್ಲಿ 'ಹಂಸ್' ಎಂಬ ಹಿಂದೀ ಪತ್ರಿಕೆಯ ಪರವಾಗಿ ಕೆ. ಎಂ. ಮುನ್ಷಿಯವರೂ ಅವರ ಶ್ರೀಮತಿಯವರೂ ಕನ್ನಡದ ಪರವಾಗಿ ಆ ಪತ್ರಿಕೆಗೆ ಸಲಹೆಗಾರರಿಗಾಗಿ ಬಂದಿದ್ದರು. ಪ್ರತಿನಿಧಿಗಳನ್ನು ಪರಿಷತ್ತು ಕಳಿಸಬೇಕೆಂದು ಭಾಷಣ ಮಾಡಿದರು. ಅವರ ಹಿಂದೆ ರಾಯರೂ ನ್ಯಾಷನಲ್ ಹೈಸ್ಕೂಲ್ ವರ್ಗವೂ ಭಕ್ತಿಯಿಂದ ಕೂತಿತ್ತು. ಇಷ್ಟು ದೊಡ್ಡವರು ಪರಿಷತ್ತಿಗೆ ಬಂದಾಗ ಆರು ಅಡಿ ಮೂರು ಅಂಗುಲ ಎತ್ತರ ಇದ್ದ ವೆಂಕಟನಾರಾಯಣಪ್ಪನವರು ಭಕ್ತಿ ವಿಗ್ರಹದ ಹಾಗೆ ಪದ್ಮಾಸನ ಹಾಕಿ ಕೈಕಟ್ಟಿ ಕುಳಿತುಕೊಂಡರು. ಗುಂಡಪ್ಪನವರೂ ಏನೂ ಮಾತಾಡಲಿಲ್ಲ. ನಾನು ಇವರಿಗೆಲ್ಲ ಹುಡುಗ. ಮುನ್ಷಿಯವರ ಮಾತೆಲ್ಲ ಆದಮೇಲೆ – ಇದನ್ನು ಅಧಿಕಪ್ರಸಂಗ ಎಂದುಕೊಳ್ಳಿ – ಪರಿಷತ್ತಿನ ಪರವಾಗಿ ಮಾತು ಹೇಳಬೇಕಾಯಿತು: 'ಕನ್ನಡಕ್ಕೆ ಇಲ್ಲಿ ಇನ್ನೂ ನಮ್ಮಲ್ಲಿ ಸ್ಥಾನವಿಲ್ಲ. ಪರಿಷತ್ತಿಗೆ ಸದಸ್ಯ ಸಂಖ್ಯೆ ಅಲ್ಪ. ಕನ್ನಡ ಸಾಹಿತ್ಯ, ಭಾಷೆ ಅಭಿವೃದ್ಧಿಗೊಳ್ಳಬೇಕಾಗಿದೆ. ಇದಕ್ಕೆ ನೆರವಾಗಲು ಜನರ ಮನಸ್ಸನ್ನು ಒಲಿಸಬೇಕೆಂದು ಈ ಸಂಸ್ಥೆ ಪ್ರಯತ್ನಪಡುತ್ತಿದೆ. ಈಗ ನಾವು ರಾಷ್ಟ್ರೀಯ ಎಂಬ ದೃಷ್ಟಿಯಿಂದ ನಮ್ಮ ಪ್ರತಿನಿಧಿಗಳನ್ನು ಕಳಿಸುತ್ತೇವೆ ಎಂದರೆ ಈ ಕೆಲಸವೂ ಆಗುವುದಿಲ್ಲ. ಈಗಾಗಲೇ ಡಿ.ಕೆ. ಭಾರದ್ವಾಜರೂ ಬಹುಶಃ ಶ್ರೀ ದಿವಾಕರ್ ಅವರೂ ಕನ್ನಡದ ಪ್ರತಿನಿಧಿಗಳಾಗಿ 'ಹಂಸ್' ಪತ್ರಿಕೆಯ ಸಲಹಾಮಂಡಲಿಯಲ್ಲಿ ಇದ್ದಾರೆ. ಅವರಿಗಿಂತ ಉತ್ತಮ ಪ್ರತಿನಿಧಿಗಳನ್ನು ಸಾಹಿತ್ಯ ಪರಿಷತ್ತು ಕೂಡ ಕಳಿಸಲಾರದು. ಪ್ರತಿನಿಧಿಯಾಗಿ ಕಳಿಸೆಂದು ದಯಮಾಡಿ ಪರಿಷತ್ತನ್ನು ಒಂದು ಸಂಸ್ಥೆಯಾಗಿ ಕೇಳದಿದ್ದರೆ ಈ ಸಂಸ್ಥೆಗೆ ಉಪಕಾರ ಮಾಡಿದಂತಾಗುತ್ತದೆ' ಎಂದು ನಿವೇದಿಸಿಕೊಂಡೆ. ಶ್ರೀಮತಿಯವರಿಗೆ ಇದು ಒಪ್ಪಿಕೆಯಾಗಲಿಲ್ಲ. ಐದು ನಿಮಿಷದಲ್ಲಿ ಮುನಿದಂತೆ ಹೊರಟುಹೋದರು. ಮುನ್ಷಿಯವರು ಸ್ವಲ್ಪಕಾಲ ಇದ್ದು ಅದೂ ಇದೂ ಮಾತಾಡಿ ಹೊರಟರು. ಸಂಜೆ ನ್ಯಾಷನಲ್ ಹೈಸ್ಕೂಲಲ್ಲಿ ಅವರದು ಭಾಷಣ; ಬಹುಶಃ ವಿ. ಎಸ್. ಶ್ರೀನಿವಾಸ ಶಾಸ್ತ್ರಿಗಳ ಅಧ್ಯಕ್ಷತೆ. ಆಗ ಮುನ್ಷಿಯವರು ಒಂದು ಘಟ್ಟದಲ್ಲಿ ಕನ್ನಡದಂಥವರ ನಿಲವನ್ನು ಟೀಕೆ ಮಾಡುವಂತೆ ರಾಷ್ಟ್ರಭಾಷೆಯ ಕಾರ್ಯ ಆಗಬೇಕಾಗಿರುವಾಗ ಪ್ರಾಂತ ಭಾಷೆಗಳದು 'Little Frogs in the Well' ಎಂಬಂತಹ ಒಂದು ಮಾತನ್ನು ಬಳಸಿದರು. ಶಾಸ್ತ್ರಿಗಳು ತಮಿಳರಾದರೂ ತಮಿಳುಸಾಹಿತ್ಯಭಕ್ತರು ಹೌದೊ ಅಲ್ಲವೊ ಕಾಣೆ. ಅವರಿನ್ನೂ ಇಂಗ್ಲಿಷಿಗೇ ಸುಮುಖರಾಗಿದ್ದವರು; ಒಂದು ಬಗೆಯ ಕಾಜಿ ನ್ಯಾಯ ಮಾಡುವಂತೆ ಮಾತನಾಡಿದರು. ಭಾಷಣ ಮುಗಿದಮೇಲೆ ನಾನು ಖಾಸಗಿಯಾಗಿ ಮುನ್ಷಿಯವರಿಗೆ ನಿವೇದಿಸಿಕೊಂಡೆ. 'We in the Parishat tried to explain our position. To be dubbed as 'frogs in the well' can be unfair. I don't know if there are frogs in the sea; if there

are, they are none the less frogs' ಎಂದೊ ಏನೊ ಹೇಳಿದೆ. ಮುನ್ಷಿಯವರು ಅದನ್ನು ಕಿವಿಯ ಮೇಲೆ ಹಾಕಿಕೊಳ್ಳಲಿಲ್ಲ. ಆದರೆ ಇಂಥ ಸಂದರ್ಭಗಳಲ್ಲೆಲ್ಲ ಬಹುತರ ರಾಯರದು ಹಿಂದಿ ಕಡೆಗೆ ಪಕ್ಷಪಾತ. ತಪ್ಪೆಂದಲ್ಲ; ಸರಿಯೇ. ಆದರೆ ಎರಡು ಕೋಟಿ ಜನ ನಮ್ಮದು ಸಣ್ಣ cause ಅಲ್ಲ. ನಮ್ಮ ಪರವಾಗಿ ರಾಯರಿಗೆ ವಿಶ್ವಾಸವಿರಲಿಲ್ಲವೆಂದಲ್ಲ. ಕನ್ನಡ ಸಾಹಿತ್ಯ ಪರಿಷತ್ತಿನ ಸಲಹಾ ಮಂಡಲಿಯಲ್ಲು ಇತರವಾಗಿಯೂ ನಮಗೆ ಅವರು ನೆರವಾಗಿದ್ದರು. ನಿಟ್ಟೂರರೂ ಕಂದಾಡೆಯವರೂ ತಿ. ತಾ. ಶರ್ಮರೂ ನಮ್ಮ ಜೊತೆಯಲ್ಲಿದ್ದರು. ಆ ಕಾಲದ ಒಂದು ಚಿತ್ರವನ್ನು ತೋರಿಸುವ ಉದ್ದೇಶದಿಂದ ಇದನ್ನು ಹೇಳುತ್ತಿದ್ದೇನೆ ಮಾತ್ರ.

ರಾಯರು ತಮಿಳಿಂದ, ಹಿಂದಿಯಿಂದ ಕನ್ನಡಕ್ಕೆ ಕೆಲವು ಲೇಖನಗಳನ್ನು ಭಾಷಾಂತರ ಮಾಡಿದರು;* ನಿಟ್ಟೂರರೂ ಅವರ ಶ್ರೀಮತಿಯವರೂ ಗಾಂಧೀಜಿಯವರ 'ಸತ್ಯಶೋಧನ'ವನ್ನು ಕನ್ನಡಕ್ಕೆ ತಂದರು. ನಮ್ಮ ಸಮ್ಮೇಳನಗಳಿಗೆಲ್ಲ ಬರುವವರು. ನನಗೆ ನೆನಪಿರುವ ಮಟ್ಟಿಗೆ '೨೦ರ ದಶಕದ ಮಧ್ಯಕಾಲದಲ್ಲಿ 'ಬೇಂದ್ರೆ ಎಂಬ ಕವಿ ಇದ್ದಾರೆ ಧಾರವಾಡದಲ್ಲಿ. ಅವರ ಪ್ರಭಾವ ಸ್ಫೂರ್ತಿ ಕಿರಿಯ ಕವಿಗಳಿಗೆ ವಿಶೇಷವಾಗಿದೆ' ಎಂದು ಮೊದಲು ಹೇಳಿದವರು ಅವರು. ಅಲ್ಲಿನ ಗರತಿಯ ಹಾಡಿಗೆ, ಆ ಮುಂಚಿನ ಸಣ್ಣ ಕವನಸಂಕಲನಗಳಿಗೆ ಇಲ್ಲಿ ಬಳಕೆ ಬರುವಂತೆ ಮಾಡಿದವರು ರಾಯರು. ಇವರೆಲ್ಲ ಹಿಂದುಸ್ತಾನ್ ಸೇವಾದಳದ ನಾಯಕ ವರ್ಗಕ್ಕೆ ನಾಳೆ ಸೇರಿ ಭಾರತದ ಒಂದು ದೊಡ್ಡ ದಳವಾಗುತ್ತದೆ ಎಂದಿರುವಾಗ, ಜವಾಹರ್‌ಲಾಲ್ ನೆಹರೂ ಒಮ್ಮೆ "ಇಂಥ 'Paramilitary' ಸ್ವಯಂಸೇವಕ ಮಂಡಳಿಗಳು ನಾಡಿನಲ್ಲಿ ಬೇಡ; ಸರ್ಕಾರ ಇವೊತ್ತಲ್ಲ ನಾಳೆ ನಮ್ಮದಾಗುತ್ತದೆ. ಯಾವಾಗ ನಮ್ಮದಾಗುತ್ತದೆಯೋ ನಮ್ಮ ಸೈನ್ಯ, ಊರ ಕಾವಲುದಳಗಳು ನಮ್ಮವಾಗುತ್ತವೆ. ಬೇರೆ ಖಾಸಗಿ ದಳಗಳು ನಾಡಿನ ಹಿತಕ್ಕೆ ಕೆಲವು ಬಗೆಯಲ್ಲಿ ತೊಡಕಾಗಬಹುದು: ಇದನ್ನು ಬಿಡಿ" ಎಂದು ಹೇಳಲು, ಅದು ಕರಗಿಹೋಯಿತು. ಇವೊತ್ತಿನ ದಿನ ಈ ಸ್ವಯಂಸೇವಕದಳ, ಆ ದಳ ಎಂದು ಪ್ರಾಂತಗಳವರು, ಮತಪಂಥಗಳವರು ಬಗೆಬಗೆಯ ಆದರ್ಶಗಳುಳ್ಳ ದಳಗಳು (ideologies) ಅಖಂಡ ರಾಷ್ಟ್ರದೃಷ್ಟಿಯಿಂದ ಎದುರಾಗಿ ಪ್ರಬಲಿಸಿದರೆ ಒಡಕುಗಳು, ವಿರುದ್ಧ ವರ್ಗಗಳು ಪ್ರಬಲವಾದಾವು ಎಂಬ ಭಯ ಪಂಡಿತ ಜವಾಹರಲಾಲರಿಗೆ ತೋರಿತ್ತು. ಬಹುಶಃ ಅವರಿಗೆ ಗಾಂಧೀಜಿಯವರು ಮಹಮ್ಮದಲಿ ಷೌಕತಲಿ ಅವರ ಹಿಂದೆ ನಿಂತ – ಖಿಲಾಫತ್ – ಮುಸ್ಲಿಂ ಸ್ವಯಂಸೇವಕ ದಳವೂ ಹಿಂದೂ ದಳ ಸಿಖ್ ದಳವೂ ಬಲಿತು ಬಿಟ್ಟರೆ ವಿರುದ್ಧ ಮಂಡಲಗಳು ಪ್ರಬಲವಾಗುವುದು ಖಂಡಿತ, ಒಟ್ಟು ರಾಷ್ಟ್ರಹಿತಕ್ಕೆ ಇವು ಸಾಧಕವಾಗುವುವೊ ಇಲ್ಲವೊ ಎಂಬ ಅಭಿಪ್ರಾಯವಿತ್ತು. ಆದರೆ ಗಾಂಧಿಯವರಿಗೆ ಇದ್ದಂತೆಯೆ ನೆಹರೂ ಅವರಿಗೂ ಹಿಂದೂ – ಮುಸ್ಲಿಂ ಮೈತ್ರಿ, ಸೋದರಭಾವ ಪ್ರಧಾನವಾದ ತತ್ತ್ವಾಂಶಗಳಾಗಿದ್ದವು. ಇದನ್ನು ನಾಡು

---

* ಕಡಿಕಡೆಗೆ ಗುಂಡಪ್ಪನವರ 'ಮಂಕುತಿಮ್ಮನ ಕಗ್ಗ'ವನ್ನು ಇಂಗ್ಲಿಷಿಗೆ ಭಾಷಾಂತರಿಸಿದರು.

ಬಲ್ಲುದು. ಅದಕ್ಕೆಲ್ಲ ಹೋಗುವುದು ಇಲ್ಲಿ ಪ್ರಕರಣವಲ್ಲ. ರಾಯರ ಜೀವನ ರೀತಿ ಬೆಂಗಳೂರಿನ ವಿದ್ಯಾಶಾಲೆಗೆ, ಇಲ್ಲಿನ ವಿದ್ಯಾರ್ಥಿ ಜೀವನದ ನೆರವಿಗೆ ಮಿತಿಗೊಂಡಿತು ಎನ್ನಲೂ ಆಗದು; ಅಲ್ಲಿನ ವಿದ್ಯಾ ಜೀವನದ ಸಮಸ್ತಕ್ಕೂ ವ್ಯಾಪಿಸಿತ್ತು ಎನ್ನಬೇಕು. ಗಾಂಧೀಜಿಯವರು ನಂದಿಗೆ ಬಂದಾಗ ಕೂಡ ಅವರ ಸೇವೆಗಾಗಿ ನಿಂತವರು ರಾಷ್ಟ್ರೀಯ ವಿದ್ಯಾಶಾಲೆಯ ಸ್ವಯಂಸೇವಕರೇ.

ರಾಯರು ಬೆಂಗಳೂರು ಅಮಚ್ಯೂರು ಡ್ರಮಾಟಿಕ್ ಅಸೋಸಿಯೇಷನ್ ಸಂಸ್ಥೆಯ ಮಾನ್ಯರಲ್ಲಿ ಒಬ್ಬರಾಗಿ ಇದ್ದುಕೊಂಡು ಅಲ್ಲಿನ ಸಾಹಿತ್ಯಕ ಮತ್ತು ಕಲಾ ಚಟುವಟಿಕೆಗಳಿಗೆ ನೆರವಾಗಿದ್ದರು. 'ದೇಶೀಯ ವಿದ್ಯಾಶಾಲಾ ಪತ್ರಿಕೆ'ಯನ್ನು ಶಾಲೆಯ ವಿದ್ಯಾರ್ಥಿಗಳಿಗಾಗಿ ನಡಸುತ್ತಿದ್ದರು. ನನ್ನ 'ಮೈಸೂರು ರುಮಾಲು', 'ಕಾಯಿಲೆಗಳು' ಅಲ್ಲಿಯೇ ಪ್ರಕಟವಾದ್ದು (೧೯೨೬). ಒಂದೆರಡು ಪದ್ಯಗಳೂ ಆದವು. ಹಾಗೆಯೇ Friends' Union ಎಂದು ನಡೆಯುತ್ತಿದ್ದ ಸಾಹಿತ್ಯ ಸಂಸ್ಕೃತಿಗಳ ಒಂದು ಸಂಸ್ಥೆಗೂ ಜೀವವಾಗಿದ್ದರು. ಇತ್ತ ಕಡೆ ಎಂ. ಜಿ. ವರದಾಚಾರ್, ಕೆ.ಟಿ. ಭಾಷ್ಯಂ, ಎಲ್. ರಾಮರಾವ್ ಮುಂತಾದವರಿದ್ದರು; ಅತ್ತಕಡೆ ಬಳ್ಳಾರಿಯಿಂದ ಬರುತ್ತಿದ್ದ ಟಿ. ರಾಘವಾಚಾರಿಯವರೂ ಅವರ ಸಂಗಡ ಬರುತ್ತಿದ್ದ ಗಂಡು, ಹೆಣ್ಣು ಅಭಿಮಾನಿ ವರ್ಗವೂ ಇತ್ತು. ಪಿ. ಕೋದಂಡರಾಯರು ೧೯೧೮ರಲ್ಲಿ ಅಮಚ್ಯೂರ್ ಡ್ರಮಾಟಿಕ್ ಅಸೋಸಿಯೇಷನ್ ಏರ್ಪಡಿಸಿದ ಇನ್‌ಫ್ಲುಯೆನ್ಸಾ ಪಿಡುಗಿಗೆ ಔಷಧಿಪಥ್ಯಗಳ ವಿತರಣೆಯನ್ನು ಕೈಕೊಂಡಾಗ ಆ ಕಾರ್ಯಮಂಡಲಿಯಲ್ಲಿಯೂ ರಾಯರು ನೆರವಾದರು. ಕೋದಂಡರಾಯರು ಸೆಂಟ್ರಲ್ ಕಾಲೆಜಲ್ಲಿ ಬಾಟನಿ ಉಪಾಧ್ಯಾಯರಾಗಿದ್ದವರು. ಇವರಿಬ್ಬರಿಗೂ ಹತ್ತಿರದ ಸ್ನೇಹ. ಅಮಚ್ಯೂರ್ ಡ್ರಮಾಟಿಕ್ ಅಸೋಸಿಯೇಷನ್ ನಾಟಕಗಳು ಮುಗಿದ ಮೇಲೆ ನಡೆದ ಸಂತೋಷಕೂಟಗಳಲ್ಲಿ ಆ ನಾಟಕಗಳ ಸಮೀಕ್ಷೆ, ಮಾತುಕಥೆ, ಸಾಹಿತ್ಯಕ ಸುಖಸಂಕಥಾವಿನೋದ ನಡೆಯುತ್ತಿದ್ದುದು ಪದ್ಧತಿ. ಇವರು 'Camp Nightingale' ಎಂಬ ಹೆಸರಿಂದಲೊ ಏನೊ ಒಂದು ಬೆರಳಚ್ಚಿನಲ್ಲಿ ನಡೆಯುತ್ತಿದ್ದ ಪತ್ರಿಕೆಯ ಸಂಪಾದಕರು. ಎಲ್ಲರಿಗೂ ಪ್ರಿಯರಾಗಿ ಮೃದುವಾದ ಹಾಸ್ಯ ವಿನೋದಗಳಿಂದ ಬರೆಯುತ್ತಿದ್ದ ಅವರ ಬರವಣಿಗೆ, ಆಡುತ್ತಿದ್ದ ಅವರ ಮಾತು ಎಲ್ಲರಿಗೂ ಅವರಲ್ಲಿ ಪ್ರೀತಿ ಉಂಟುಮಾಡುತ್ತಿತ್ತು. ಅಮಚ್ಯೂರ್ ಡ್ರಮಾಟಿಕ್ ಅಸೋಸಿಯೇಷನ್ ನಡಸಿದ Festival of Fine Arts ಸಮಾರಂಭಕ್ಕೆ ರವೀಂದ್ರನಾಥ ಟಾಗೋರರನ್ನು ಕರಸಿದಾಗ ಕೈಲಾಸಂ ಅವರು ಬೆಂಗಳೂರಿನ ಸಾಹಿತ್ಯರಂಗಕ್ಕೆ ಸಾರ್ವಜನಿಕವಾಗಿ ಕಾಣಿಸಿಕೊಂಡರು ಎಂದಿದ್ದೇನೆ. ಕೈಲಾಸಂರಿಗೂ ರಾಯರಿಗೂ ಸ್ನೇಹ. ರಾಷ್ಟ್ರೀಯ ವಿದ್ಯಾಶಾಲೆಯ ಎಲ್ಲರಿಗೂ ಹಾಗೇ. ತಿ.ತಾ. ಶರ್ಮರಿಗೂ ಹಾಗೇ. ಮಡಿವಂತರೆಂದು ಅನ್ನಿಸಿಕೊಳ್ಳುತ್ತಿದ್ದ ಕನ್ನಡ ಸಾಹಿತಿಗಳ ವರ್ಗಕ್ಕೂ ಹೀಗೇ. ನಿಜವಾಗಿ ಇವರಲ್ಲಿ ವಿರೋಧವಿರಲಿಲ್ಲ. ಇದು ಕನ್ನಡ ಸಾಹಿತ್ಯವನ್ನು ಮೊದಲಿಂದ ವ್ಯಾಸಂಗ ಮಾಡುವುದಕ್ಕಾಗಿ ಮೀಸಲು ಮಾಡಿಕೊಂಡಿದ್ದ ವರ್ಗ. ಆದುದರಿಂದ ಇದರ ರೀತಿ, ವಿಮರ್ಶೆ, ದೀರ್ಘಕಾಲದ ವ್ಯಾಖ್ಯಾನ ಟಿಪ್ಪಣಿಗಳಿಂದ ಕೂಡಿರುತ್ತಿದ್ದುದರಿಂದ ಒಂದೆರಡು ಅಂಶಗಳಲ್ಲಿ ಕೈಲಾಸಂ ಹೇಳಿ ಬರೆಯಿಸಿ ಅಚ್ಚಾದ ಕೃತಿಗಳ ಮೇಲೆ ಪ್ರಬುದ್ಧ ಕರ್ಣಾಟಕದಲ್ಲಿ, ಪರಿಷತ್ ಪತ್ರಿಕೆಯಲ್ಲಿ

ಒಂದು ಅವಲೋಕನ ಬಂದಿತು. ಆದರೆ ಅದು ಕೈಲಾಸಂ ಅವರ ನಿರ್ಣಾಯೋಗ್ಯತೆಯನ್ನು ಕುರಿತು ಅಥವಾ ಅವರು ಹೊಸದಾಗಿ ವಿಪ್ಲವಕಾರಿಯಾಗಿ ತಂದ ನಾಟಕತಂತ್ರವನ್ನು ಕುರಿತು ವಿರುದ್ಧ ಭಾವದಿಂದ ಆಡಿದ ಮಾತಲ್ಲ. * ಆದರೆ ಪರಿಷತ್ತು, ಕರ್ನಾಟಕ ಸಂಘ ಎರಡಕ್ಕೂ ಸೇರಿದವನಾಗಿ ಈ ಗುಂಪಿಗೂ ಸ್ನೇಹಿತನಾಗಿದ್ದ ನನಗೆ ಅನೇಕ ವೇಳೆ ವಿಚಿತ್ರ ಸನ್ನಿವೇಶಗಳು ಹುಟ್ಟಿಕೊಳ್ಳುತ್ತಿದ್ದವು. ಈ ಕಡೆಯವನೆಂದು ಅವರು, ಆ ಕಡೆಯವನೆಂದು ಇವರು ಇಬ್ಬರೂ ಸಂದೇಹ ಸಂಶಯಗಳಿಂದ ಕಾಣುವಂತಾಯಿತು. ಇಂಥದು ನನ್ನ ಜೀವಕ್ಕೆ ಅಂಟಿದ ವಿಧಿವಿಲಾಸ. ಆದರೆ ಇಬ್ಬರ ವಿಶ್ವಾಸವೂ ನನಗೆ ದೊಡ್ಡದಾಗಿ ದೊರೆತು, ಈ ಎರಡು ಪಕ್ಷಗಳಿಗೆ ಸ್ನೇಹ ಸೌಹಾರ್ದ ಬೆಳೆಯುವಂತೆ ನಡಸಿಕೊಡಬೇಕಾದ ಕರ್ತವ್ಯ, ಹೊಣೆಗಾರಿಕೆ, ಮುಜುಗರ ಕೂಡ, ನನಗೆ ಸಹನೆಯನ್ನೂ ಓರ್ಪನ್ನೂ ತಂದು ಉಪಕಾರ ಮಾಡಿದೆ.

ಅನೇಕ ಸಾಹಿತ್ಯ ಸಮ್ಮೇಳನಗಳಿಗೆ ಹೋದಂತೆಯೇ ನಾವು – ೧೯೨೯ರಲ್ಲಿ ಎಂದು ಕಾಣುತ್ತದೆ – ಗುಲ್ಬರ್ಗ ಸಮ್ಮೇಳನಕ್ಕೆ ಹೋದೆವು. ಅಲ್ಲಿ ಬ್ರಹ್ಮಪುರಿಯಲ್ಲಿನ ವಿದ್ಯಾರಣ್ಯ ಹೈಸ್ಕೂಲಿನ ಒಂದು ದೊಡ್ಡ ಕೊಠಡಿಯಲ್ಲಿ ನಮಗೆ ವಸತಿ ಏರ್ಪಾಡುಮಾಡಿದ್ದರು. ಇನ್ನೂ ಅರ್ಧ ಗಂಟೆ ವ್ಯವಧಾನವಿದೆ ಎಲ್ಲರೂ ಹೊರಡುವುದಕ್ಕೆ ಎಂದು ನಾನು ಸ್ವಲ್ಪ ತಡಮಾಡಿದ್ದೆ. ನಾನು ಇನ್ನೂ ಕ್ಷೌರ ಮಾಡಿಕೊಂಡಿಲ್ಲ ಎಂಬುದು ಸಂಕೋಚ. ಅಷ್ಟು ಹೊತ್ತಿಗೆ ರಾಯರು ಬಂದರು. ಇದರ ಪುನಶ್ಚರಣೆ ರಾಯರಿಗೆ ಆಮೇಲಿನ ಕಾಲದಲ್ಲಿ ಒಂದು ಬಗೆಯ ಅಪ್ರೀತಿಯನ್ನು ತಂದರೂ ಇದನ್ನು ಈಗ ಹೇಳಲು ನಾನು ಸಂಕೋಚಪಡಬೇಕಾಗಿಲ್ಲ. ಆವರೆಗೆ ನಾನು ಎರಡು ಮೂರು ಮಜಲು ದಾಟಿ ಹದಿನೈದು ದಿನಗಳಿಗೊಂದು ಸಲವಲ್ಲ, ಹತ್ತಕ್ಕೆ ಒಂದು ಸಲವಲ್ಲ, ವಾರಕ್ಕೊಂದು ಸಲ ಕ್ಷೌರ ಮಾಡಿಸಿಕೊಳ್ಳುವ ಅಭ್ಯಾಸದವನಾಗಿದ್ದೆ. ನಾನು ಹೇಗೆ ಹೇಗೊ ಆಡುತ್ತಿದ್ದಾಗ ಹೀಗೇಕೆ ಅವಸ್ಥೆ ಪಡುತ್ತಿದ್ದೀರಿ ಎಂದು ಕೇಳಿ, ಒಂದು ಸೇಫ್ಟಿ ರೇಜರ್ ಸೆಟ್ ತೆಗೆದುಕೊಂಡು ಬಂದು 'ಕೊಳ್ಳಿ, ಹೀಗೆ ಮಾಡಿಕೊಳ್ಳಿ. ಐದು ನಿಮಿಷದಲ್ಲಾಗುತ್ತದೆ' ಎಂದು ಹೇಳಿ ಮುಖ ಕ್ಷೌರದ ದೀಕ್ಷಾಪ್ರದಾನ ಮಾಡಿದರು. ಆ ಬಗೆಗೆ ಅವರು ನನ್ನ ಗುರುಗಳು ಎಂದು ಗ್ರಹಚಾರ ಕಡಮೆಯಾಗಿ ಬೆಂಗಳೂರಲ್ಲಿ ಒಂದು ದಿನ ಹೇಳಿದಾಗ ಅವರಿಗೆ ಆ ನೆನಪು ಅಷ್ಟು ಸಂತೋಷ ತರಲಿಲ್ಲ. ನಿಜ: ಇದೇನು ಗುರುಶಿಷ್ಯ ಸಂಬಂಧ! ಎನ್ನಿಸಿರಬೇಕು. ಆದರೆ ನನಗೆ ಯಾವುದೇ ಆಗಲಿ, ಮೊದಲು ಸಾಧಿಸುವ ಉತ್ಸಾಹ ಕಾಲಕ್ರಮದಲ್ಲಿ ಕಂದುತ್ತ ಕುಂದುತ್ತ ಮುಂದಿನ ಕಾಲಗಳಲ್ಲಿ ನನ್ನ ಅಯೋಗ್ಯತೆ ಹೆಚ್ಚಾಗುತ್ತಲೇ ಹೋಗುತ್ತದೆ. ಎಲ್ಲಿಯೂ ಹಾಗೇ. ಇದರಲ್ಲಿಯೂ ಹೀಗೇ ಆಗಿದೆ. ಇಂದಿಗೂ ಅವರು ಹಾಕಿಕೊಟ್ಟ ವಿಧಾನ ನನ್ನದಾಗಿ ಕಾಗದದ ಚೂರುಗಳನ್ನು ಮಾಡಿಕೊಳ್ಳುವ ಒಂದು ವಿಧಾನ ನನ್ನನ್ನು ಹಲವರ ಲೇವಡಿಗೆ ಕಾರಣ, ಈಡುಮಾಡಿದೆ – ಬ್ಲೇಡ್ ಸೆಟ್ಟನ್ನು ನೀರಲ್ಲಿ ಒದ್ದೆ, ಕೊಳೆ ಮಾಡದೆ ಸೋಪನ್ನು ಒರಸುವ ರೀತಿಯಾಗಿ. ಅದನ್ನು 'ಓಂಪುಡಿ ಪ್ರಕರಣ' ಎಂದಿರುವವರುಂಟು. ಅದಕ್ಕೆ ರಾಯರು ಕಾರಣವಲ್ಲ. ಆದರೆ ಉಪಕಾರ ಮಾಡಿದವರ ನೆನಪು ಸರ್ವಥಾ ಮಾನ್ಯ. ಆದ್ದರಿಂದ ಈ ಸಂಗತಿ ಒಂದು ಕರ್ಮಧರ್ಮವೇ ಆಗಿದೆ.

---

* ಇದನ್ನು ಬೇರಲ್ಲಿ ಹೇಳಿದ್ದೇನೆ.

ಅದು ಹೇಗೇ ಇರಲಿ, ರಾಯರಿಗೆ ಮಾಧ್ವರಾದ ಕಾರಣದಿಂದ ಮೊದಲಿಂದ ಕನ್ನಡ ಬಳಕೆ, ಪ್ರೀತಿ. ದಾಸಸಾಹಿತ್ಯದಲ್ಲಿ ಅತೀವ ಪಕ್ಷಪಾತ. ಸಂಗೀತದಲ್ಲಿ ಅಭಿರುಚಿ ವಿಶೇಷ. ಕಾಲೇಜಲ್ಲಿ ಮದರಾಸಲ್ಲಿ ಓದಿದವರಾದ್ದರಿಂದ ಅಲ್ಲಿ ತಮಿಳು ಬಳಕೆಯಾಯಿತು. ಅಲ್ಲಿ ಅವರಿಗೆ ಅನೇಕರು ಸ್ನೇಹಿತರಾದರು. ಅವರಲ್ಲಿ ಅಲ್ಲಿನ ಹೈಕೋರ್ಟ್ ನ್ಯಾಯಾಧೀಶರಾಗಿದ್ದ ಸರ್ ಎ. ಕೃಷ್ಣಸ್ವಾಮಿ ಅಯ್ಯರ್ ಮಕ್ಕಳು – ಸ್ವತಃ ಲಾಯರುಗಳಾದ ಬಾಲಸುಬ್ರಹ್ಮಣ್ಯಂ, ಅವರ ತಮ್ಮ ಶ್ರೀ ಚಂದ್ರಶೇಖರನ್, ಸೂಕ್ಷ್ಮ ಮನೋಧರ್ಮದಿಂದ ವೀಣಾವಾದನ ಮಾಡುವ ಇವರ ಸಹೋದರಿ ಸರಸ್ವತಿ ಅಮ್ಮಾಳ್ ಇವರ ಪರಿಚಯ ಆಪ್ತವಾಯಿತು. ಬಹುಶಃ ಅಲ್ಲಿಯೇ ವಿ. ಭಾಸ್ಕರನ್, ಕೆ.ರಾಮಕೋಟೀಶ್ವರ ರಾಯರ ಪರಿಚಯವೂ ಆಯಿತೊ ಏನೊ. ಕೋಲಾರದ ಮನೆತನವಾದ್ದರಿಂದ ತೆಲುಗು ಮೊದಲಿಂದ ರೂಢಿಯೇ. ಹೀಗೆ, ಐದಾರು ಭಾಷೆಗಳಲ್ಲಿ ಅವರಿಗೆ ಹತ್ತಿರದ ಅಭಿಮಾನ. ರಸಿಕರಾದ್ದರಿಂದ ಮೃದುವಾಗಿ ಸ್ನೇಹಪರರಾಗಿ ಇದ್ದುದರಿಂದ – ಇಂಗ್ಲಿಷಲ್ಲಿ ಹೇಳುವಂತೆ – 'mixer' – ಸುಲಭವಾಗಿ ಜನರಲ್ಲಿ ಬೆರೆದು, ಬೇಗ ಸ್ನೇಹಗಳನ್ನು ರೂಪಿಸಿಕೊಳ್ಳುವ ಗುಣ ಬೆಳೆದು ಅವರ ವ್ಯಕ್ತಿತ್ವವನ್ನೂ ಮೂರ್ತಿತ್ವವನ್ನೂ ಪೋಷಿಸಿದವು.

೧೯೨೮ರಲ್ಲಿ ಈ ಊರಿಗೆ 'ಹಿಂದೂ' ಪ್ರತಿನಿಧಿಯಾಗಿ ಶ್ರೀ ಕೆ. ಎಸ್. ರಾಮಸ್ವಾಮಿ, ಪ್ರಕಾಶಂ ಪತ್ರಿಕೆ 'ಸ್ವರಾಜ್ಯ'ಕ್ಕೆ ವಿ. ಭಾಸ್ಕರನ್ ಬಂದು ನೆಲಸಿದರು. ರಾಮಸ್ವಾಮಿ ಅವರದು ಆಳವಾದ, ಶಾಂತವಾದ, ಸ್ವಲ್ಪ ಹೆಚ್ಚು ಗಂಭೀರವೆನ್ನಬಹುದಾದ ಮಾತು. ಭಾಸ್ಕರನ್ ಹಾಗಲ್ಲ. ಅವರ ಮನೆಯ ಮಾತು ತೆಲುಗೊ ತಮಿಳೊ ನಾನರಿಯೆ. ಎರಡನ್ನೂ ಚೆನ್ನಾಗಿ ಮಾತನಾಡುತ್ತಿದ್ದರು. ಆತನು ಕಟ್ಟಿಕೊಂಡ ಸ್ನೇಹ ಮಂಡಲಿ ನಮ್ಮ ಸಾಹಿತಿ ವರ್ಗಕ್ಕೂ ಬೆಳೆಯಿತು. ಅಮಚ್ಯೂರ್ ಡ್ರಮಾಟಿಕ್ ಅಸೋಸಿಯೇಷನ್, ಕೈಲಾಸಂ, ಹೊಸ ಕನ್ನಡ ಸಾಹಿತಿವರ್ಗ ಎಲ್ಲಕ್ಕೂ ವ್ಯಾಪಿಸಿತು. ಆತನೂ ತುಂಬ ರಸಿಕ. ಬಹಳ ಚುರುಕು ಸ್ವಭಾವದವನು. 'ಹಿಂದೂ'ಗು 'ಸ್ವರಾಜ್ಯ'ಕ್ಕೂ ಯಾವ ಗುಣಲಕ್ಷಣಗಳು, ಧೋರಣೆ, ವಾಣಿ, ಶೈಲಿಗಳ ವ್ಯತ್ಯಾಸ ಇದ್ದಿತೊ, ಶ್ರೀನಿವಾಸ್ – ಪ್ರಕಾಶಂ ನಡುವೆ ಯಾವ ತಾರತಮ್ಯವಿದ್ದಿತೊ ಅದು ಈ ಪ್ರತಿನಿಧಿಗಳಲ್ಲಿ ಪ್ರತಿಫಲಿತವಾಗಿತ್ತು. ಎಂದರೆ, ಭಾಸ್ಕರನ್ ರಾಯರಂತೆಯೇ ಧಾರಾಳ. ಹೀಗಾಗಿ ನಮಗೆಲ್ಲ ಆಪ್ತವಾಗಿ ಬೇಕಾದವರಾದರು. ಅವರು ಅಮಚ್ಯೂರ್ ಡ್ರಮಾಟಿಕ್ ಅಸೋಸಿಯೇಷನ್ ನಾಟಕ ಪ್ರದರ್ಶನಗಳಲ್ಲಿ ಹೆಚ್ಚು ಕುತೂಹಲ ಉಳ್ಳವರಾಗಿದ್ದು ಆ ಸಂಸ್ಥೆಯಲ್ಲಿ ಪ್ರೀತಿ ಪಕ್ಷಪಾತ ಬೆಳಸಿದರು. ಅದು ಪ್ರಕಟಿಸಿದ 'Theatre' ಪತ್ರಿಕೆಗೆ ಸಂಪಾದಕರಾದರು. ಬಹುಶಃ ಎರಡು ಸಂಚಿಕೆ ಹೊರಬಂದಮೇಲೆ ಅದು ನಿಂತುಹೋಯಿತೆಂದು ಕಾಣುತ್ತದೆ. ಆ ಸುಮಾರಿಗೆ ತಾನೆ 'ಶ್ರೀ'ಯವರ 'ಅಶ್ವತ್ಥಾಮನ್' ನಾಟಕ ರಂಗದ ಮೇಲೆ ಪ್ರದರ್ಶಿತವಾಗಿ ಪುಸ್ತಕವಾಗಿ ಅಚ್ಚಾಗಿತ್ತು. ಅದನ್ನು ಕುರಿತು ಇಂಗ್ಲಿಷಲ್ಲಿ ನನ್ನಿಂದ ಒಂದು ಪರಿಚಯ ಲೇಖನವನ್ನು ಆ ಪತ್ರಿಕೆಯಲ್ಲಿ ಬರಸಿದರು. ಅದು ಹೊರಗಿನ ಪ್ರಾಂತಗಳವರಿಗೆ ನಮ್ಮ ಸಾಹಿತ್ಯ, ನಾಟಕ, ನಿರ್ಮಾಣದ ವಿಷಯದಲ್ಲಿ ಒಳ್ಳೆಯ ಅಭಿಪ್ರಾಯವನ್ನು ತಂದಿತು ಎಂದು ಕೇಳಿದ್ದೇನೆ. ಇಂಗ್ಲಿಷಲ್ಲಿ ನಾನು ಮಾಡಿದ ಕಾವ್ಯಾವಲೋಕನವೆಲ್ಲ ಬಹುತರ ನಮ್ಮ ಸಾಹಿತ್ಯಕ್ಕೆ ಹೊರನಾಡಿನ ಸೇವೆ (external services) ಎಂದು ನಾನು ಹೇಳಿದ್ದೇನೆ.

ಭಾಸ್ಕರನ್ ಅವರಿಗೆ ಒಬ್ಬ ತಮ್ಮನಿದ್ದರು. ಅವರನ್ನು ಶಾಸ್ತ್ರಿ ಎಂದು ಕರೆಯುವುದು ರೂಢಿಯಾಗಿತ್ತು. ಅಕೌಂಟೆಂಟ್ ಜನರಲ್ ಕಚೇರಿಯಲ್ಲಿಯೊ ಏನೊ ಕೆಲಸ; ಮಲ್ಲೇಶ್ವರದಲ್ಲಿ ಬಿಡಾರ ಮಾಡಿದ್ದರು. ಅವರ ಮನೆಗೆ ಒಂದೆರಡು ತಿಂಗಳ ಕಾಲ ವೀಣಾಧ್ಯಯನಂ ದಯಮಾಡಿಸಿ ಮದರಾಸಿನ ಬೇಸಿಗೆಯ ಬೇಗೆಯನ್ನು ಕಳೆದುದುಂಟು. ಆ ಸಂಬಂಧದಲ್ಲಿ ಹಲವಾರು ವೇಳೆ ನನ್ನನ್ನು ಕರೆದುಕೊಂಡು ಹೋಗಿ ಆಕೆಯ ವೀಣೆಯ ವಿನಿಕೆಯನ್ನು ಸವಿಯುವ ಅವಕಾಶ ಕಲ್ಪಿಸಿಕೊಟ್ಟರು. ಧನಂ ರಾಗವನ್ನು ಬೆಳಸುವ ರೀತಿಯೂ ಕೃತಿಗಳನ್ನು ಪದಗಳನ್ನು ಅಷ್ಟಪದಿಗಳನ್ನು ಬಾಜಿಸುವ ರೀತಿಯೂ ಆ ಬಗೆಯ ಪರಮೋತ್ಕೃಷ್ಟವೆನ್ನಬಹುದಾದ ಒಂದು ಪಕ್ವತೆಯನ್ನೂ ನಯವಂತಿಕೆಯನ್ನೂ ಪಡೆದಿತ್ತು. ಆ ಮೃದು ಭಾವಸಂಪನ್ನತೆ, ಅರ್ಥದ್ಯೋತನೆ, ನಯಸೂಕ್ಷ್ಮ ಜೀವನವನ್ನು ನೇರ ತನ್ನ ಕಡೆಗೆ ಪೂರ್ತಿಯಾಗಿ ಒಲಿಸಿಕೊಳ್ಳಬಲ್ಲಂಥದು. ಆಕೆ ಇದ್ದಾಗ ಶ್ರೀಮತಿ ಬಾಲಸರಸ್ವತಿಯವರೂ ಮೊಮ್ಮಕ್ಕಳೂ ಅಲ್ಲಿಗೆ ಒಮ್ಮೆ ದಯಮಾಡಿದ್ದರು. ಒಂದು ದಿನ ಯಾವುದೊ ಒಂದು ಕ್ಷೇತ್ರಯ್ಯನ ಪದದ ಒಂದು ಪಲ್ಲವಿಯನ್ನು ಎತ್ತಿ 'ಪಾರ್ಕಲಾಂ, ಅಭಿನಯಂ ಎಪ್ಪಡಿ' ಎಂದು ಹೇಳಿ ಹತ್ತು ನಿಮಿಷ ಆಕೆಯಿಂದ ಅಭಿನಯ ಮಾಡಿಸಿ 'ಆಂ, ಆಂ, ಅಪ್ಪಡಿಯಾ' ಎಂದುದನ್ನು ಕೇಳಿದ್ದೇನೆ. ಆ ಸನ್ನಿವೇಶ ಸ್ಥಾಯಿಯಾಗಿ ನನ್ನ ಮನಸ್ಸಿನಲ್ಲಿ ಈವರೆಗೂ ಉಳಿದಿದೆ, – ನಡೆದು ನಲವತ್ತೈದು ವರ್ಷಗಳ ಮೇಲಾದರೂ. 'ಪಯ್ಯೆದಮೀದ ಚೇರಿ ಪವ್ವಡಿಂಚಿ ಉಂಡೇ ಸಾಮಿಕಿ ಅಯ್ಯಯ್ಯೊ ವೆಗಟಾಯಿನೇ' ಎಂಬುದೂ 'ವಲಪು ದಾಚನೇರನೇ ಓ ಭಾಮಾ ವಾರಿವೀರಿ ವಲನೇ' ಎಂಬುದೂ – ಇವೆರಡರಲ್ಲಿ ಒಂದು. ಅಭಿನಯ ಮಾಡುತ್ತಿದ್ದಾಗ ಹಾಡುತ್ತಿದ್ದ ಪದದಲ್ಲಿದ್ದ ಒಂದು ಮಾತನ್ನು ಮೂರು–ನಾಲ್ಕು ತರಹವಾಗಿ ವಿಸ್ತರಿಸಿ ಹೊಸ ಭಾವ ಅರ್ಥ ಬರುವಂತೆ ನುಡಿಸಿ, ರಾಗಕ್ಕೆ ಒಂದು ಹೊಸ ಗತಿ ಗಮಕ ಹೊಮ್ಮಿಗೆ ಇರುವಂತೆ, ಪದ ಪದಗಳಲ್ಲಿರುವ ಅರ್ಥ ಭಾವ ನುಡಿಸಿ ಬೆಳಸುವುದರಲ್ಲಿಯೂ ಗಮಕದ ಲಯದ ವಿನ್ಯಾಸಗಳು ಇರುತ್ತವೆ, ಎಂದು ಮೊದಲು ಅಭಿನಯಿಸಿದ್ದುದರ ಜೊತೆಗೆ ಒಂದು ಮಾತನ್ನು ಆಕೆ ಕಾಣಿಸಿದರು. ಇಂಥುದು post-graduate instruction or doctoral comment ಎನ್ನಬಹುದು. ಹೇಳುವವರು ಹೇಳಬೇಕು, ಕೇಳುವವರು ಕೇಳಬೇಕು, ಅದನ್ನು ಗ್ರಹಿಸಿ ಮುಂದಕ್ಕೆ ಹೋಗಬೇಕು; ಅಷ್ಟೇ.

ರಾಮಕೋಟೀಶ್ವರರಾಯರು ಬಹುಕಾಲ ಕಷ್ಟಪಟ್ಟು 'ತ್ರಿವೇಣಿ' ಪತ್ರಿಕೆಯನ್ನು ನಡಸುತ್ತಿದ್ದರು. ಸಾಹಿತ್ಯ, ಕಲೆಗಳನ್ನು ಕುರಿತು ಒಳನಾಡಿನ ಹೊರಗಿನವರ ಎಲ್ಲರ ಪ್ರೀತಿ ವಿಶ್ವಾಸಗಳೂ ಲೇಖನಗಳೂ ದೊರೆಯುವಂತೆ ಆ ಪತ್ರಿಕೆಯನ್ನು ಪ್ರಕಾಶಪಡಿಸುತ್ತಿದ್ದರಲ್ಲದೆ ಭಾರತೀಯ ಚಿತ್ರಕಲೆಗೆ ಹೆಸರು ತಂದ ಅನೇಕರ ವರ್ಣಚಿತ್ರಗಳನ್ನು ಅಲ್ಲಿ ಚೆನ್ನಾಗಿ ಅಚ್ಚುಮಾಡಿಸುತ್ತಿದ್ದರು. ಜಿನರಾಜದಾಸ, ರಾಮಕೋಟೀಶ್ವರರಾವ್, ಮಂಜೇರಿ ಈಶ್ವರನ್, ಶ್ರೀ ಚಂದ್ರಶೇಖರನ್, ಸಂಪದ್ಗಿರಿರಾವ್ ಮುಂತಾದವರು ಬೇರೆ ಬೇರೆ ಕಾಲಗಳಲ್ಲಿ 'ಸಂಪಾದಕ' – ಸಲಹಾಮಂಡಲಿಗೆ ಸೇರಿದವರಾಗಿದ್ದರು. ಒಂದು ಕಾಲದಲ್ಲಿ ರಾಮಕೋಟಿ ಕಾಂಗ್ರೆಸ್ ಚಳವಳಿಯ ಕಾರಣದಿಂದ ಜೈಲಿಗೆ ಹೋಗಬೇಕಾಗಿ ಬಂದಾಗ, 'ತ್ರಿವೇಣಿ'ಯ ಕಾರ್ಯ ಎಷ್ಟು ದಿನ ನಡೆಯಿತೊ ಅಷ್ಟು ಕಾಲವೂ ತಮಗೂ ತಾನು ಕೈಕೊಂಡ ಕ್ರಿಯಾಪ್ರಚಾರಕ್ಕೂ ಗೌರವವನ್ನೂ ಪ್ರೀತಿಯನ್ನೂ ರಾಯರ ಕಾರ್ಯ ತಂದಿತು.

ಇಂಥದೇ ಇನ್ನೊಂದು ಬಗೆಯ 'ತ್ರಿವೇಣೀಸಂಗಮ' ರಾಯರಿಗೆ ಸಂಬಂಧಿಸಿದಂತೆ ಬೇರೆ ರೂಪದಲ್ಲಿ ಫಲಕಾರಿಯಾಯಿತು ಎನ್ನಬಹುದು. ಬೆಂಗಳೂರು ಕೋಟೆಯಲ್ಲಿರುವ ಖಾದಿಭಂಡಾರದಲ್ಲಿ ಶ್ರೀ ಟಿ. ಸದಾಶಿವಂ ಕೆಲವು ಕಾಲ ಮುಖ್ಯರಾಗಿ ಕೆಲಸ ಮಾಡುತ್ತಿದ್ದರು. ಆಗಿಂದಲೇ ರಾಯರಿಗೂ ಅವರಿಗೂ ಸ್ನೇಹವಿದ್ದು, ಮುಂದಿನ ಕಾಲದಲ್ಲಿ ಇನ್ನೂ ಆಪ್ತವಾಗಿ ಬೆಳೆಯಿತು. ಬೆಂಗಳೂರಿಂದ ಶ್ರೀ ಸದಾಶಿವಂ ಹೊರಟುಹೋಗಿ ಮದರಾಸನ್ನು ಸೇರಿದ ಮೇಲೆ ಶ್ರೀಮತಿ ಎಂ. ಎಸ್. ಸುಬ್ಬಲಕ್ಷ್ಮೀ ಅವರನ್ನು ಮದುವೆಯಾದರು. ಅವರ ದಾಂಪತ್ಯ ದಿನದಿನಕ್ಕೆ ಸಂಗೀತದ ಸುಫಲಗಳನ್ನೂ ಕೀರ್ತಿಯನ್ನೂ ಅಕೆಗೆ ತಂದು ಕೊಟ್ಟಿತು. ಕಾಲಕ್ರಮದಲ್ಲಿ ಒಂದು ಕಡೆ ರಾಜಾಜಿ, ಇನ್ನೊಂದು ಕಡೆ ಕಂಚಿ ಪೀಠದ ಹಿರಿಯ ಶ್ರೀಗಳವರು ಇವರ ಪ್ರಭಾವ, ಆಶೀರ್ವಚನ ಎಂ. ಎಸ್. ಬಾಳನ್ನು ಇನ್ನಷ್ಟು ಉನ್ನತಗೊಳಿಸಿ, ಗುಂಡಪ್ಪನವರು ಒಂದು ಪದ್ಯದಲ್ಲಿ ಬೇರೆ ಸಂದರ್ಭದಲ್ಲಿ ಹೇಳಿರುವಂತೆ, 'ಸುಫಲ ಸುಮಭರಿತ ಪಾದಪದಂತೆ' ಒಟ್ಟಿನಿಂದ ಬಾಳುವಂತೆ ಆಯಿತು. ಲಕ್ಷಾಂತರ ಜನಗಳನ್ನು ತಮ್ಮ ಸಂಗೀತದಿಂದಲೂ ಸಜ್ಜನತೆ, ನಯ ಗಾಂಭೀರ್ಯಗಳಿಂದಲೂ ಸಂತೋಷ ಪಡಿಸಿದ, ಪಡಿಸುತ್ತಿರುವ ಶ್ರೀಮತಿಯವರು ನೂರಾರು ಸಂಸ್ಥೆಗಳಿಗೆ ಪುಗಸಟ್ಟೆಯಾಗಿ ಸಹಾಯಕ ಕಚೇರಿಗಳನ್ನು ಮಾಡಿಕೊಟ್ಟು, ಅವುಗಳ ಏಳಿಗೆಗೆ ನೆರವು ಕೊಟ್ಟಿದ್ದಾರೆ. ಮೊದಲಿಂದಲೂ ಗುಂಡಪ್ಪನವರಿಗೂ ರಾಯರಿಗೂ ಸ್ನೇಹ. ಅದು ಬೆಳೆದು ಗೋಖಲೆ ಸಂಸ್ಥೆಗೆ ರಾಯರು ಇನ್ನಷ್ಟು ಹೆಚ್ಚು ಹತ್ತಿರ ಬಂದಾಗ ಅದರ ಕಟ್ಟಡಕ್ಕೆ, ಅದರ ಇತರ ಸಾಹಿತ್ಯಕ ಸಾಂಸ್ಕೃತಿಕ ಕಾರ್ಯಗಳಿಗೆ ಸಹಾಯವಾಗುವಂತೆ ಎಂ. ಎಸ್. ಮತ್ತು ಸದಾಶಿವಂ ಬಹುವಾಗಿ ಧನಸಹಾಯ ಮಾಡಿದ್ದಾರೆ. ಬೆಂಗಳೂರಿಗೆ ಬಂದಾಗಲೆಲ್ಲ ಶ್ರೀಮತಿಯವರು ಗುಂಡಪ್ಪನವರಲ್ಲಿಗೂ ಗೋಖಲೆ ಸಂಸ್ಥೆಗೂ ಭೇಟಿಕೊಟ್ಟು, ತಮ್ಮ ಸಹಾನುಭೂತಿಯಲ್ಲದೆ ಸಹಕಾರವನ್ನೂ ಕೊಟ್ಟು, ಅದನ್ನು ಒಂದು ಒಪ್ಪಕ್ಕೆ ತರುವುದರಲ್ಲಿ ಸಹಾಯ ಮಾಡಿದರು. ಇದಕ್ಕೆ ಎಷ್ಟೊ ಮುಂಚೆ ಭಾಸ್ಕರನ್ ಅವರು ನನಗೆ ಹೇಳಿದ್ದುಂಟು: ಎಸ್. ಬಿ. ಸುಬ್ಬಲಕ್ಷ್ಮೀ ಎಂದೊ ಏನೊ ಇನ್ನೊಬ್ಬರು ಮಹಿಳಾ ಗಾಯಕರಿದ್ದರು ಎಂದು ನಮ್ಮ ಜೊತೆಯವರೆಂದಾಗ 'ಮೀರು ಎಂ. ಎಸ್. ವಿನವಲನಂಡಿ' ಎಂದು ಹೇಳುತ್ತಿದ್ದರು. ಅದಿನ್ನೂ ಆಕೆಯ ಸಂಗೀತವನ್ನು ನಾನು ಕೇಳದಿದ್ದ, ಆಕೆಯ ಪ್ರಾಶಸ್ತ್ಯ ಇಷ್ಟು ವಿಸ್ತಾರವಾಗಿ ಹರಡಿರದಿದ್ದ ಕಾಲ. ಕಾರಣವೇನೊ ಹೇಗೊ: ಕೆಲವು ಕಲೆಗಾರರ ಜೀವನದಲ್ಲಿ ಒಂದು ಸಫಲತೆ ಬೆಳೆಯುತ್ತಲೇ ಹೋಗುತ್ತದೆ. ರಾಯರು, ಸುಬ್ಬಲಕ್ಷ್ಮೀ, ಗೋಖಲೆ ಸಂಸ್ಥೆ ಇವೂ ಒಂದು ಬಗೆಯ ತ್ರಿವೇಣೀಸಂಗಮವಾಗಿ ಬೆಂಗಳೂರಿನ ಒಂದು ಸಾಂಸ್ಕೃತಿಕ ಪ್ರದಾತ್ರವರ್ಗಕ್ಕೆ ಒದಗಿತ್ತು

ಸಾರ್ವಜನಿಕ ಜೀವನದಲ್ಲಿ ಮೊದಲಿಂದಲೂ ಕೆಲಸ ಮಾಡಿ ಇಲ್ಲಿನ ದಿವಾನರು, ದೊಡ್ಡ ಸರ್ಕಾರಿ ಅಧಿಕಾರಿಗಳು, ಮುಖ್ಯ ಪೌರರು, ರಾಜಕೀಯ ಮತ್ತು ವೃತ್ತಪತ್ರಿಕಾ ಪ್ರಪಂಚದ ಹಿರಿಯರು ಸೇರುವ ಸ್ಥಳಗಳಲ್ಲೆಲ್ಲ ಗುಂಡಪ್ಪನವರ ಪ್ರಭಾವ ಒಂದು ಕಡೆ ಇದ್ದರೆ, ಅವರಿಗೆ ಮಾನ್ಯತೆ ಪ್ರೀತಿ ಬೆಳೆದದ್ದರಿಂದ ಅವರನ್ನು ಸಂತೋಷಕೂಟಗಳಿಗೆ ಸಭೆಗಳಿಗೆ ಕರೆಯದೆ ಇದ್ದವರೇ ಇರಲಿಲ್ಲ. ಸುಮಾರು ಅದೇ ತರಹದಲ್ಲಿ ರಾಯರ ಸ್ನೇಹ

ಮಂಡಲಿ ವಿಶ್ವಾಸಮಂಡಲಿಗಳೂ ಬೆಂಗಳೂರಲ್ಲಿ ಹರಡಿದ್ದವು. ಬಹುತರ ಇವರಿಬ್ಬರೂ ಭಾಗವಹಿಸದ ಭೋಜನಕೂಟಗಳೇ ಇರುತ್ತಿರಲಿಲ್ಲ. ಆದುದರಿಂದ ಅವರಿಗೆ ಅಡಿಗೆಯ ರುಚಿ, ಊಟದ ವ್ಯವಸ್ಥೆ, ಪದಾರ್ಥಗಳ ತಯಾರಿಕೆಯಲ್ಲಿ ಯಾವ ಯಾವ ಅಂಶಗಳು ಹೇಗೆಹೇಗೆ ಸೇರತಕ್ಕದ್ದು, ಯಾವಯಾವ ಬಗೆಯ ಮನೆತನಗಳ ಊಟ ಉಪಚಾರ ಹೇಗೆ ಎಂಬ ಅರಿವು, ವೈವಿಧ್ಯ ವಿಲಾಸ ಅವರ ಜೀವನವನ್ನು ರುಚಿಕರವನ್ನಾಗಿ ಮಾಡಿತು. ಮನೆಯಲ್ಲಿ ಬಹುಶಃ ಯಾವುದೊ ಒಂದು ಕಷ್ಟ ಅವರ ಜೀವಕ್ಕೆ ಉಂಟಾಗಿ ಅವರ ಮನಸ್ಸನ್ನು ಕುಗ್ಗಿಸುತ್ತಿದ್ದಿತಾದರೂ ಒಮ್ಮೆಯೂ ಅದರ ಸುಳಿವು ಹೊರಗಿನವರಿಗೆ ಹಾಯ್ದುದಿಲ್ಲ. ಅವರ ತಾಯಿಯಲ್ಲಿ ಅವರಿಗಿದ್ದ ಪ್ರೀತಿ, ಭಕ್ತಿ, ಪೂಜ್ಯಭಾವ ಅತಿಶಯವಾದ್ದು. ತಾಯಿಯವರು ಶ್ರೀಪಾದರಾಯರ ಸುಳಾದಿಗಳನ್ನು, ಹಿಂದಿನ ಕಾಲದ ದಾಸವರ್ಗದ ಮತ್ತು ತಮ್ಮ ಕಾಲದವರ ಗೀತಗಳನ್ನು ರೀತಿಬದ್ಧವಾಗಿ ಹೇಳಬಲ್ಲವರಾಗಿದ್ದರು. ಆ ಸಂಪ್ರದಾಯ ಈಗ ಕೇಳಲು ಬಾರದಾಗಿದೆ. ನಾನು ತುಂಬಾ ಕಷ್ಟಪಟ್ಟಿ: ಆಕೆಯನ್ನು ಗಾಡಿ ಕಳಿಸಿ ಕರಸಿಕೊಂಡೊ ಆಕೆ ಇರುವಲ್ಲಿಗೇ ಹೋಗಿಯೊ ಅವನ್ನು ಧ್ವನಿಮುದ್ರಿಸಿ ಆಕಾಶವಾಣಿಯ ಶಾಶ್ವತ ಭಂಡಾರದಲ್ಲಿ ಉಳಿಸಬೇಕೆಂದು. ಅದು ಕಚೇರಿ: ಯಂತ್ರಮಂದಿರದ ನೇಮಗಳು ವಿಪರೀತ. ಎಲ್ಲರಿಗೂ ಎಲ್ಲದರಲ್ಲಿಯೂ ಆಸಕ್ತಿ ಉಂಟಾಗುವುದು ಅಪರೂಪ. ವಯಸ್ಸಾದ ಇಂಥವರನ್ನು ಯಾವ ಪೂರ್ವ ವಿನಿಕೆಗಳಿಗೂ ಪರೀಕ್ಷೆಗೂ (screening) ಒಳಪಡಿಸುವುದು ಕಷ್ಟವಾಯಿತು. ಹೀಗಾಗಿ ಅವು ಧ್ವನಿಮುದ್ರಿತವಾಗಲಿಲ್ಲ. ಅದರಂತೆಯೇ ರವೀಂದ್ರನಾಥ ಟಾಗೋರರು ಮೈಸೂರಿಗೆ ಈ ಕಡೆಗೆ ಬಂದಾಗ ದಕ್ಷಿಣಾದಿ ಅಥವಾ ಕರ್ನಾಟಕ ಕೀರ್ತನೆಗಳನ್ನು ಕೇಳಿದಾಗ ಆ ಧಾಟಿಯಲ್ಲಿ ಬಂಗಾಳಿಯಲ್ಲಿ ಕೃತಿಗಳನ್ನು ರಚಿಸಿದ್ದಾರೆ. ಇಲ್ಲಿ ಬಂಗಾಳಿ ಅಸೋಸಿಯೇಷನ್‌ಗೆ ಸಂಬಂಧಿಸಿದಂತೆ ಐ.ಟಿ.ಐ.ಗೆ ಇಬ್ಬರು ಮೂವರು ಒಳ್ಳೆಯ ಗಾಯಕರು ಅವನ್ನು ಹಾಡುವವರಿದ್ದಾರೆ. ಆ ಧಾಟಿಗಳನ್ನು ಉಳಿಸಿಕೊಂಡು ಆ ಹಾಡುಗಳನ್ನು ಧ್ವನಿಮುದ್ರಿಸಿಕೊಂಡರಾಗಿತ್ತು ಎಂದು ನಾನು ಹತ್ತುಹದಿನೈದು ವರ್ಷಗಳಿಗೆ ಮೀರಿ ಮಾಡಿದ ಪ್ರಯತ್ನ ಕಾರ್ಯಕಾರಿಯಾಗದಿದೆ. ಈಗ ಶೇಷಣ್ಣನವರ ವೀಣೆಯನ್ನೊ 'ಶ್ರೀ'ಯವರ ವಾಣಿಯನ್ನೊ ಎಲ್ಲಿ ಕೇಳಬಹುದು? 'ಸರ್ವಂ ಕಾಲಮಪೇಕ್ಷತೇ' ಎನ್ನುತ್ತಾರೆ: ಕಾಲ ಒದಗಿದರೆ ಆಯಿತು; ಇಲ್ಲವಾದರೆ ಕಾಲ ಇಲ್ಲವಾಗಿಸಿ ಬಿಡುತ್ತದೆ. ಎಲ್ಲವೂ ಕಾಲವೇ; ಹುಟ್ಟು, ಬೆಳೆ, ಕ್ಷಯ, ನಾಶ ಎಲ್ಲವೂ ಅದರ ಅಧಿಕಾರಕ್ಕೇ ಒಳಪಟ್ಟಿದ್ದು. ಈ ನಡುವೆ ಎಲ್ಲದರ ಅದೃಷ್ಟವೂ ಹೊಮ್ಮಬೇಕಾಗುತ್ತದೆ; ಉಳಿಯಬೇಕಾಗುತ್ತದೆ; ಅಳಿಯಬೇಕಾಗುತ್ತದೆ. ಈಗ ಅಳಿವಿನ ಸಂಕೇತ ಮಾತ್ರ ಆಗಿಬಿಟ್ಟಿದೆ ಕಾಲ.

ರಾಯರು ಒಳ್ಳೆಯ ಸ್ನೇಹಿತರು. ಎಲ್ಲಕ್ಕೂ ಸಂಬಂಧಪಟ್ಟುಕೊಂಡಂತೆ ಇದ್ದರೂ ಯಾವುದಕ್ಕೂ ಪೂರ್ತಿಯಾಗಿ ಅಂಟಿಕೊಳ್ಳದೆ ತಮ್ಮ ಜೀವಕ್ಕೆ ಒಂದು ತಿಳಿಯನ್ನೂ ವಿಸ್ತಾರವನ್ನೂ ತಂದುಕೊಂಡಿದ್ದರು. ವ್ಯಾವಹಾರಿಕ ಮತ್ತು ಸಾಹಿತ್ಯ ಪ್ರಪಂಚಗಳಲ್ಲಿ ಹೇಗೊ ರಾಜಕೀಯ ರಂಗದಲ್ಲಿಯೂ ಹಾಗೇ. ನಮ್ಮ ವಿಧಾನಸಭೆಗೆ ಆರಂಭಕಾಲದ 'ಸ್ಪೀಕರ್' ಆಗಿ ಒಮ್ಮೆ ಆಯ್ಕೆಗೊಂಡುದುಂಟು. ಸಭೆಸಮಾರಂಭಗಳಲ್ಲಿ ಅಧ್ಯಕ್ಷರಾಗಿಯೂ ಭಾಷಣಕಾರರಾಗಿಯೂ ಕಾರ್ಯಮಾಡಿದ್ದುಂಟು. ಭಾಷಣಕಾರರಾಗಿ ನಡೆದ ಒಂದು ಸಂಗತಿಯನ್ನು

ಒಮ್ಮೆ ತಮಾಷೆಗಾಗಿ ಹೇಳಿದರು. ಇಲ್ಲಿ St. Joseph's College ಅಲ್ಲಿ ಒಂದು ಸಲ ಅವರು ಭಾಷಣ ಮಾಡಬೇಕಿತ್ತಂತೆ. ಅಲ್ಲಿನ ಪ್ರಿನ್ಸಿಪಲ್ – ಫೊಬ್ ಪಾದ್ರಿಯೊ ಇಟಲಿಯವರೊ – ಅಂದು ಅಧ್ಯಕ್ಷರು. ಭಾಷಣಕ್ಕೆ ಮುಂಚೆ ಎಷ್ಟು ಹೊತ್ತಿನ ಅವಕಾಶ ಎಂದೊ ಏನೊ ಕೇಳಿದರಂತೆ ರಾಯರು. ಆತ `The first twenty or thirty minutes are with the angels' ಎಂದರಂತೆ. ಇವರಿಗರ್ಥವಾಯಿತು: ಅರ್ಧಗಂಟೆಯಲ್ಲಿ ಮುಗಿಸಿದೆ ಎಂದರು. ಇದು ಎರಡು ಸಂಪ್ರದಾಯಗಳಿಗೆ ಎಚ್ಚರ, ಮಾರ್ಗ, ವಿಧಾನ, ವಿಮರ್ಶೆ, ಮರ್ಯಾದೆ ಆಗುತ್ತದೆ. ರಾಮಕೃಷ್ಣಾಶ್ರಮದಲ್ಲಿ ಹೇಗೆ ಅವರ ಪ್ರೀತಿಯೊ ಇಲ್ಲಿನ ಯಾಷ್ಟವಲ್ಯಾಶ್ರಮದಲ್ಲಿಯೂ ಹಾಗೇ. ಇವೆರಡರಲ್ಲಿ ಹೇಗೊ ದಾಸಕೂಟದಲ್ಲಿ ಅಥವಾ ಭಕ್ತಿ, ಭಜನಮಂದಿರಗಳಲ್ಲಿ, ಹರಿಕಥಾಪ್ರವಚನ ಮಂದಿರಗಳಲ್ಲಿ ಹಾಗೇ. ಎಲ್ಲಿಯೂ ಅವರಿಗೆ ಧಾರಾಳವೇ. ಎಲ್ಲರಿಗೂ ಬೇಕಾದವರೇ. 'ಯಥೇಚ್ಛಯಾ ವಿಹರ' ಎಂಬ ಒಂದು ಉತ್ತರ ಕ್ರಿಯೆಯ ಉಕ್ತಿ ತುಂಬಿದುದರ ಒಂದು ಶುಭಾರ್ಥದಲ್ಲಿ ಅವರ ಬದುಕಿನ ಮಾರ್ಗ. ಕಡೆಕಡೆಯ ಭಾಗಗಳಲ್ಲಿ ಗೋಖಲೆ ಸಂಸ್ಥೆಗೆ ತುಂಬಾ ಹತ್ತಿರದಲ್ಲಿ ಸೇರಿಕೊಂಡು ಕೆಲಸ ಮಾಡಿದರು. ನಾನು 'ಇಂಡಿಯಾ ಬುಕ್ ಹೌಸ್' ಸಂಸ್ಥೆಯವರಿಗೆ ಸಂಪಾದಿಸಿ ಕೊಡುತ್ತೇನೆಂದು ಕೈಕೊಂಡ ಒಂದು ಪುಸ್ತಕ ಮಾಲೆಯಲ್ಲಿ 'ಕನ್ನಡ ಸಾಹಿತ್ಯಕ್ಕೆ ದಾಸರ ಕೊಡುಗೆ' ಎಂಬ ಒಂದು ಲೇಖನವನ್ನು ಬರೆದುಕೊಟ್ಟರು. ಆ ಮುಂಚೆ ಮೂರು – ನಾಲ್ಕು ದಶಮಾನಗಳಿಂದ ಅವರಿಗೂ ಶ್ರೀ ರಂಗನಾಥ ದಿವಾಕರರಿಗೂ ಸ್ನೇಹ ಬಳಕೆ ಇದ್ದುದರಿಂದ ಅವರು ಬಿಹಾರದಲ್ಲಿ ಗವರ್ನರ್ ಆಗಿದ್ದ ಕಾಲದಲ್ಲಿ ರಾಂಚಿಯಲ್ಲಿಯೊ ಹತ್ತಿರವೊ ಒಂದು Public School ಪ್ರಿನ್ಸಿಪಲರಾಗಿ ನಿಯಮಿತರಾದರು. ದಿವಾಕರರು ತಕಲಿ ಹಿಡಿದಿದ್ದರೊ ಇಲ್ಲವೊ; ರಾಯರು ಹಿಡಿದರು. ಇಲ್ಲಿ ಜಿ. ಎ. ಆಚಾರ್ಯರು ಮುಂತಾದವರೂ ಅವರಿಗೆ ಪ್ರಿಯರೇ. ಗಾಂಧಿ ಸ್ಮಾರಕ ಭವನಗಳಲ್ಲಿಯೂ ರಾಯರಿಗೆ ಧಾರಾಳವೇ. ದಿವಾಕರರು Bihar through the Ages ಎಂದು ಅವರ ಸಂಪಾದಕತ್ವದಲ್ಲಿ ರಚಿಸಿದ ಗ್ರಂಥದಂತೆ, Karnataka through the Ages ಎಂಬ ಸಂಕಲನದ ಸಂಪಾದನೆಯನ್ನು ರಾಯರು ಒಪ್ಪಿಕೊಂಡು ಇಂಗ್ಲಿಷಲ್ಲಿ ಕನ್ನಡದಲ್ಲಿ ಎರಡರಲ್ಲಿಯೂ ಅದನ್ನು ಯಶಸ್ವಿಯಾಗಿ ನೆರವೇರಿಸಿದರು.

ಹೇಳುತ್ತ ಹೋದರೆ ಇದಕ್ಕೆ ಕೊನೆಯಿಲ್ಲ.....ಸಜ್ಜನರಾಗಿ, ಒಳ್ಳೆಯ ಸ್ನೇಹಿತರಾಗಿ, ನೆಚ್ಚಬಲ್ಲ ವ್ಯಕ್ತಿಯಾಗಿ, ವಿದ್ಯಾರ್ಥಿಗಳಿಗೆ ಸರ್ವದಾ ಸ್ಫೂರ್ತಿಸ್ಥಾನವೂ ವಿಶ್ವಾಸದ ನೆಲೆಯೂ ಆಗಿ ಇದ್ದವರು ರಾಯರು. ಒಂದು ಸಲ ಉಪಾಧ್ಯಾಯರಾದರೆ ಆ ಉಪಾಧ್ಯಾಯ – ಲಕ್ಷಣ ಆಜನ್ಮ ಸ್ವರೂಪ, ಲಕ್ಷ್ಯ ಆಗುತ್ತದೆ. ವಿದ್ಯೆಯನ್ನು ನಂಬಿದ್ದವರು ಅವರು. ಹುಟ್ಟಲ್ಲ, ಕುಲವಲ್ಲ, ಬಣ್ಣವಲ್ಲ, ಶ್ರೀಮಂತಿಕೆಯಲ್ಲ, ಪದವಿಯಲ್ಲ, ಪ್ರಭಾವವಲ್ಲ; ಯಾವ ನಾಡಿನ ಯಾವ ಕಾನೂನು, ಜೀವನ ಉತ್ತಾನಗೊಳ್ಳಬೇಕಾದರೂ ವಿದ್ಯೆಯ ಮೂಲಕವೇ ಆಗಬೇಕು. ಕ್ರಮಕ್ರಮವಾಗಿ ನಮ್ಮಲ್ಲಿ ವಿದ್ಯೆಗೆ ಮಂಕು ಬಡಿಯುತ್ತಿರುವ ಸನ್ನಿವೇಶವನ್ನು ನೋಡಿ ಈ ನಾಡಿನ ವಿದ್ಯಾ ಪ್ರಚಾರ, ಸಂಸ್ಕೃತಿ ಸಾಧನೆ ಹೇಗೆ ಉಳಿದೀತು, ಬೆಳೆದೀತು? ನಿಧಾನವಾಗಿ ಏನು, ಸ + ಅವಧಾನವಾಗಿ ನಡೆಯಬೇಕಾದ ಈ ವಿದ್ಯಾಕಾರ್ಯ ಹೇಗೆ

ಚೊಕ್ಕವಾದೀತು? ಶುಚಿಯಾದೀತು? ದಕ್ಷವಾದೀತು? – ಎಂಬ ಚಿಂತೆ ನಿಜವಾಗಿ ವಿದ್ಯಾಸುವಾಗಿದ್ದ ಅವರಿಗೆ ಅಸುಖವನ್ನು ಉಂಟುಮಾಡಿತ್ತು. ಅವರಿಗೆ ಸನ್ಮಾನ ಮಾಡಿದ ಸಮಾರಂಭದಲ್ಲಿ ಇದನ್ನು ನುಡಿದರು. ಇಲ್ಲಿ, ಮದರಾಸಲ್ಲಿ ಅನೇಕ ಸ್ನೇಹಿತರನ್ನು ಪಡೆದುಕೊಂಡು ಎಲ್ಲರಿಗೂ ಬೇಕಾದವರಾಗಿ ಕೃತಾರ್ಥ ಜೀವನವನ್ನು ಸಾಧಿಸಿದವರು ಅವರು.

ಡಾ. ತೋನ್ಸೆ ಮಾಧವ ಅನಂತ ಪೈ

ಕೇವಲ ವಿಶೇಷ ವಿದ್ಯೆಗಳಿಗೆ ಶಾಸ್ತ್ರಗಳಿಗೆ ಮೀಸಲಾಗದೆ ಕಲೆ ವಿಜ್ಞಾನಗಳನ್ನೂ ಕಲಿಸುವ ಉದ್ದೇಶದಿಂದ ಸ್ಥಾಪಿತವಾದವು ಮೈಸೂರು ವಿಶ್ವವಿದ್ಯಾನಿಲಯ, ಕರ್ನಾಟಕ ವಿಶ್ವವಿದ್ಯಾನಿಲಯ, ಬೆಂಗಳೂರು ವಿಶ್ವವಿದ್ಯಾನಿಲಯಗಳು. ಈ ಮೂರರ ಚರಿತ್ರೆಯೂ ಬೇರೆ ಬೇರೆ. ಅವನ್ನು ಕುರಿತೇ ಪ್ರತ್ಯೇಕವಾಗಿ ಬರೆಯಬೇಕು. ಅವುಗಳಲ್ಲಿ ಎರಡು – ಮೈಸೂರಿನದು, ಕರ್ನಾಟಕದ್ದು – ಕೇವಲ ವ್ಯಕ್ತಿಗಳ ದರ್ಶನಸಾಹಸಗಳಿಂದ ಬೆಳೆದವು, ಹುಟ್ಟಿದವೆಂದು ಹೇಳಲಾರೆ. ಬೆಳೆದು ಒಂದು ಉನ್ನತಿಗೆ ಬಂದದ್ದು ಹಾಗೆ. ಧಾರವಾಡದ ಕರ್ನಾಟಕ ವಿಶ್ವವಿದ್ಯಾನಿಲಯದಲ್ಲಿ ಹಿಂದೆ ಇಬ್ಬರು ಕುಲಪತಿಗಳು ಆಗಿಹೋಗಿದ್ದರೂ ಅದಕ್ಕೆ ಉನ್ನತಿಯನ್ನು ತಂದು ಸ್ಥಿರವಾಗಿ ನಿಲ್ಲಿಸಿದವರು ಡಾ. ಡಿ. ಸಿ. ಪಾವಟೆ. ಮೈಸೂರು ವಿಶ್ವವಿದ್ಯಾನಿಲಯ ೧೯೧೬ ರಿಂದಲೆ ನಡೆದು ಬಂದಿದ್ದರೂ ಹೊಸ ಒಂದು ನೆಲಸಿಗೆ ಆ ವಿದ್ಯಾಸಂಸ್ಥೆಯನ್ನು ತೆಗೆದುಕೊಂಡು ಹೋಗಿ ಅದಕ್ಕೆ ಕೀರ್ತಿ ತಂದವರು ಪ್ರೊ.(ಆಮೇಲೆ ಡಾಕ್ಟರ್) ಕೆ. ವಿ. ಪುಟ್ಟಪ್ಪ ಅವರು. ಮೊದಲೇ ಕಾಂತರಾಜ ಅರಸರ ಬಂಗಲೆಯನ್ನು ವಿಶ್ವವಿದ್ಯಾನಿಲಯದ ಕಾರ್ಯಕಲಾಪಗಳಿಗೆ ಬಳಸಿಕೊಳ್ಳಬೇಕೆಂಬ ಮನಸ್ಸಿದ್ದರೂ ಖಾಸಾ ವಾಣೀ ವಿಲಾಸ ಸನ್ನಿಧಾನದವರ, ಕಾಂತರಾಜ ಅರಸರವರ ಮತ್ತು ಆತನು ಮದುವೆಯಾಗಿದ್ದ ಶ್ರೀ ಕೃಷ್ಣರಾಜ ಒಡೆಯರವರ ತಂಗಿ ಇನ್ನೂ ಅಲ್ಲೇ ಇದ್ದರು. ಆದುದರಿಂದ ವಿಸ್ತಾರವಾದ ಆ ನೆಲಸನ್ನೂ ಆ ಬಂಗಲೆಯನ್ನೂ ವಿಶ್ವವಿದ್ಯಾನಿಲಯಕ್ಕೆ ಬಳಸಲಾಗಲಿಲ್ಲ. ಉತ್ತರಕಾಲದಲ್ಲಿ ಅದು ಶಕ್ಯವಾಯಿತು. ಶ್ರೀಮಾನ್ ಕೆ. ವಿ. ಪುಟ್ಟಪ್ಪನವರು ಅದನ್ನು ಮಾನಸಗಂಗೋತ್ರಿಯನ್ನಾಗಿ ಮೈಸೂರು ಸರ್ಕಾರದ ನೆರವಿಂದ ಕಟ್ಟಿದರು; ಅಲ್ಲಿ ಕುಲಪತಿಯಾಗಿದ್ದು ತಮ್ಮ ಮಹಾಕೃತಿಯಾದ 'ರಾಮಾಯಣದರ್ಶನ'ದಿಂದೀಚೆಗೆ 'ಕುವೆಂಪು' ಆದರು. ಆ ಭೂಮಿಯೆಲ್ಲ ಈಗ ವಿದ್ಯಾವಿಹಾರವಾಗಿದೆ. ಧಾರವಾಡದಲ್ಲಿ ಹಿಂದೆ 'ಛೋಟಾ ಮಹಾಬಲೇಶ್ವರ' ಎನ್ನುತ್ತಿದ್ದ ಕಾಡುಮೇಡು ಪ್ರದೇಶ ವಿಶ್ವವಿದ್ಯಾನಿಲಯದ ನೆಲಸಾಯಿತು. ಬೊಂಬಾಯಿಯಲ್ಲಿ ಲಾಯರಾಗಿ ನನಗೆ ತಿಳಿದವರಾಗಿದ್ದ ಶ್ರೀ ಆರ್. ಎ. ಜಹಗೀರ್‌ದಾರ್ ಮೊದಲೂ ಆಮೇಲೆ ಡಾ. ಹುಲಕೋಟಿ ಅವರೂ ಕುಲಪತಿಗಳಾದರು. ಆ ಬಳಿಕ ಬೊಂಬಾಯಿನ ವಿದ್ಯಾಇಲಾಖೆಯ ದೊಡ್ಡ ಅಧಿಕಾರಿ (D.D.P.I.) ಆಗಿದ್ದ ಡಾ. ಡಿ. ಸಿ. ಪಾವಟೆ ಕುಲಪತಿಗಳಾಗಿ ಆಯ್ಕೆಯಾಗಿ ಅದನ್ನು ಇಂದಿನ ಉನ್ನತಿಗೆ ತರಲು ಶ್ರಮಿಸಿದರು. ಮಾನಸಗಂಗೋತ್ರಿಯ ಹಿಂದೆ ಒಬ್ಬ ವ್ಯಕ್ತಿ, ಮೈಸೂರು ಸರ್ಕಾರದ ನೆರವು ಎರಡೂ ಸೇರಿಕೊಂಡಿವೆ. ಅದು ಊರಿನ ಹೊರಗಿನ ನೆಲಸುಳ್ಳದ್ದಾಗಿ ಒಂದು ವಿದ್ಯಾಪ್ರಪಂಚವಾಗಿದೆ. ಧಾರವಾಡದಲ್ಲಿ ನಾನು ಗೆಳೆಯರಾದ ಲಾಯರ್ ಎನ್. ಕೆ. ದೀಕ್ಷಿತರೊಡನೆಯೂ ಕನ್ನಡದ ಪರಮ ಅಭಿಮಾನಿ ಆಗಿದ್ದ ರಂಗಪ್ಪ ಬಿ. ಪೋತದಾರರ ಒಡನೆಯೂ ಎಷ್ಟೋ ಸಲ ಆ ಕಾಡುಭೂಮಿಯಲ್ಲಿ ಸುತ್ತಾಡಿದ್ದೇನೆ. ವಿಸ್ತಾರವಾದ ನೆಲಸುಳ್ಳ

ಆ ಕಾಡಲ್ಲಿ ವಿಶ್ವವಿದ್ಯಾನಿಲಯವನ್ನು ಸ್ಥಾಪಿಸಿ ಅದರ ಸರ್ವತೋಮುಖವಾದ ಅಭಿವೃದ್ಧಿಗೆ ಕಾರಣರಾದವರು ಪಾವಟೆ. ಅವರಿಗೆ ಒಂದು ಕಡೆ ಬೊಂಬಾಯಿ ಸರಕಾರದ ತಕ್ಕಮಟ್ಟಿನ ನೆರವೂ ಪ್ರಭಾವವೂ ದೊರಕಿದುದರ ಜೊತೆಗೆ, ಆ ಕಡೆಗೆ ಹೆಚ್ಚಿಗೆ ಪ್ರಾಬಲ್ಯಪಡೆದಿರುವ ಲಿಂಗಾಯತ ಮಠಗಳವರೂ ಜನವರ್ಗದವರೂ ಬೇಕಾದಷ್ಟು ಬೆಂಬಲವನ್ನೂ ನೆರವನ್ನೂ ಕೊಟ್ಟರು. ಈ ಎರಡು ವಿಶ್ವವಿದ್ಯಾನಿಲಯಗಳೂ ಅತಿಶಯ ಪ್ರತಿಷ್ಠೆಯನ್ನು ಪಡೆದುಕೊಂಡಿವೆ. ಹೊಸತಾಗಿ ಸ್ಥಾಪಿತವಾಗಿರುವ 'ಜ್ಞಾನ ಭಾರತಿ' ನೆಲಸಲ್ಲಿ ಬೆಳೆಯುತ್ತಿರುವ ಬೆಂಗಳೂರು ವಿಶ್ವವಿದ್ಯಾನಿಲಯ ಡಾ. ಗೋಕಾಕ್ ಕಾಲದಲ್ಲಿ ಆರಂಭವಾಗಿ, ನ್ಯಾಯಾಧೀಶರಾದ ಟಿ. ಕೆ. ತುಕೋಳರ ಕಾಲದಲ್ಲಿ ಕೆಲಸಗಳು ತೊಡಗಿ, ಡಾ. ಎಚ್. ನರಸಿಂಹಯ್ಯನವರ ಕಾಲದಲ್ಲಿ, ಆ ತರುವಾಯದಲ್ಲಿ ಹೊಸ ರೂಪ ತಾಳಿ ಬೆಳೆಯಿತು.

ನಾನು ಇಲ್ಲಿ ಹೇಳಬೇಕೆಂದಿರುವುದು ಉಡುಪಿಗೆ ಹತ್ತಿರದಲ್ಲಿರುವ ಮಣಿಪಾಲದಲ್ಲಿ ಹುಟ್ಟಿ ಬೆಳೆದು, ಎಲ್ಲ ಬಗೆಯ ಲಕ್ಷಣಸ್ವರೂಪಗಳೂ ಯೋಗ್ಯತೆಯೂ ಇದ್ದರೂ ವಿಶ್ವವಿದ್ಯಾನಿಲಯವಾಗದಿರುವ ಮಣಿಪಾಲ ಶಿಕ್ಷಣ ಸಂಸ್ಥೆಗಳ ವಿದ್ಯಾವಲಯವನ್ನು ಕುರಿತು. ಅದು ಒಬ್ಬರ ಪ್ರಧಾನ ದರ್ಶನದಿಂದಲೂ ಕ್ರಿಯಾಶಕ್ತಿಯಿಂದಲೂ ಶ್ರದ್ಧೋತ್ಸಾಹದಿಂದಲೂ ನಿರಂತರ ಪ್ರೀತಿವಿಶ್ವಾಸಗಳಿಂದಲೂ ಬೆಳೆದ ಸಂಸ್ಥಾ ಮಂಡಲ. ಧಾರವಾಡದ ಫೋಟಾ ಮಹಾಬಲೇಶ್ವರದಲ್ಲಿ ಒಂದು ಕಾಲದಲ್ಲಿ ಹೇಗೆ ಏನೂ ಇರಲಿಲ್ಲವೊ ಹಾಗೆಯೇ ಮಣಿಪಾಲವೂ ವ್ಯವಸಾಯವಿಲ್ಲದೆ ಕಾಡುಮೇಡಾಗಿದ್ದ ಪ್ರದೇಶವಾಗಿತ್ತು. ಮಂಗಳೂರಲ್ಲಿ ೧೯೨೬–೨೭ರಲ್ಲಿ ಕನ್ನಡ ಸಾಹಿತ್ಯ ಪರಿಷತ್ ಸಮ್ಮೇಳನ ನಡೆದಾಗ ಅದನ್ನು ಮುಗಿಸಿಕೊಂಡು ಮೂವರು ಸ್ನೇಹಿತರು ನಾವು (ವೆಂಕಣ್ಣಯ್ಯ, ಕೃಷ್ಣಶಾಸ್ತ್ರಿಗಳು, ನಾನು) ಉಡುಪಿಗೆ ಹೋದಾಗ, ಉಡುಪಿಗೆ ಸೇರುವ ಮುಂಚೆ ಮೂರು–ನಾಲ್ಕು ಮೈಲಿ ದೂರದಲ್ಲಿ ನಾವು ಕಂಡದ್ದು ಒಂದು ಚದರದಷ್ಟು ಕೂಡ ದೊಡ್ಡದಲ್ಲದ ಸಣ್ಣ ಜೋಪಡಿ, – ಅಷ್ಟೇ. ಈಗ ಆ ಭಾಗ ಪ್ರಾಚೀನ ಕೀರ್ತಿಯುಳ್ಳ ಉಡುಪಿಯ ಮಾಹಾತ್ಮ್ಯವನ್ನು ಸರಿತೂಗುವಷ್ಟು ಲೌಕಿಕವಾದ ಅಖಿಲಭಾರತ ಕೀರ್ತಿಯನ್ನೂ ವಿದೇಶಗಳ ಪ್ರಶಂಸೆಯನ್ನೂ ಗಳಿಸಿರುವ ಪ್ರೌಢವಿದ್ಯಾಕೇಂದ್ರವಾಗಿ, ಮಣಿಪಾಲ ಎಂಬ ಪಟ್ಟಣವಾಗಿದೆ. 'ಶೆಟ್ಟಿ ಇದ್ದಲ್ಲಿ ಪಟ್ಟಣ' ಎನ್ನುತ್ತಾರೆ. ಶೆಟ್ಟಿಗೆ ಧನದ ವ್ಯಾಪಾರದ ಗೌರವ ಉಂಟು. ಅದರಿಂದ ಒಂದು ಪ್ರಭಾವಮಂಡಲ ಬೆಳೆಯಬಲ್ಲುದು. ಒಬ್ಬ ದೊಡ್ಡ ಗುರು ಇರುವ ಕಡೆ ಭಕ್ತಾದಿಗಳೂ ಶಿಷ್ಯವರ್ಗವೂ ಸೇರುತ್ತದೆ; ಅದನ್ನು ಒಂದು ಮಹಾಸಂಸ್ಥೆಯಾಗಿ ಮಾಡುತ್ತದೆ. ಅಡಿಯಾರ್, ದಕ್ಷಿಣೇಶ್ವರ – ಬೇಲೂರು, ಶಾಂತಿನಿಕೇತನ, ಸಾಬರಮತಿ, ವರ್ಧಾ, ಪುಣೆ, ಪಾಂಡಿಚೇರಿ – ಈಚಿನ ಕಾಲದಲ್ಲಿ ಪುಟ್ಟಪರ್ತಿ, ವೈಟ್‌ಫೀಲ್ಡ್ – ಅಂಥ ಸಂಸ್ಥೆಗಳಾಗಿ ಗಣನೆಗೆ ಬಂದಿವೆ. ಅವುಗಳಲ್ಲೆಲ್ಲ ಮತದ ಅಥವಾ ಕಲೆ ಸಂಸ್ಕೃತಿಗಳ, ಆರ್ಥಿಕ ಅಥವಾ ಧರ್ಮದ ಪ್ರಭಾವಗಳು ಒಂದೊಂದು ಬಗೆಯಲ್ಲಿ ಬೆಳೆದವು.

ಮಣಿಪಾಲ ಬೆಳೆದಿರುವುದು ಇನ್ನೊಂದು ರೀತಿಯಲ್ಲಿ. ಅದು ಮಹಾವಿದ್ಯಾನಿಲಯಗಳ ಪಟ್ಟಣ. ಸೋದರವರ್ಗದವರೂ ಇತರರೂ ಎಷ್ಟೋ ಬಗೆಯಲ್ಲಿ ಬೆಂಬಲವಾಗಿ ದುಡಿದಿದ್ದರೂ ಮುಖ್ಯವಾಗಿ ಡಾ. ತೋನ್ಸೆ ಮಾಧವ ಅನಂತ ಪೈ ಅವರ ಸಾಹಸದಿಂದ

ರೂಪಗೊಂಡದ್ದು. ದಕ್ಷಿಣ ಕನ್ನಡ ಜಿಲ್ಲೆಯ ಇತರ ಅನೇಕ ಪಟ್ಟಣಗಳಲ್ಲಿಯೂ – ಶೃಂಗೇರಿಯವರೆಗೂ ವ್ಯಾಪಿಸಿದಂತೆ – ವಿದ್ಯಾಮಂದಿರಗಳನ್ನು ಪೈ ಸ್ಥಾಪಿಸಿದರು. ಲೌಕಿಕದ ಯಾವುದೊ ಕಾರ್ಪಣ್ಯದಿಂದ ರಾಗದ್ವೇಷಗಳ ಒತ್ತಡದಿಂದ ಅದನ್ನು ವಿಶ್ವವಿದ್ಯಾನಿಲಯದ ಪಟ್ಟಕ್ಕೆ ಏರಿಸುವುದು ಶಕ್ಯವಾಗಿಲ್ಲವಾಗಿದ್ದರೂ ಅಂಥ ಯೋಗ್ಯತೆಯುಳ್ಳ ಕ್ರಿಯಾವಿಚಕ್ಷಣೆ, ಆಡಳಿತವಿವೇಕ, ವಿಚಕ್ಷಣೆ ಸಾಧಿಸಿಕೊಂಡು ಬೆಳೆದ ಪಟ್ಟಣ ಅದು. ಕಲೆ ಮತ್ತು ಸಾಹಿತ್ಯವಿದ್ಯೆ, ಎಂಜಿನಿಯರಿಂಗ್ ಕಾಲೆಜ್, ಮೆಡಿಕಲ್, ಲಾ, ಕಾಮರ್ಸ್ ಕಾಲೆಜ್ ಎಲ್ಲವೂ ಅಲ್ಲಿ ಸ್ಥಾಪಿತವಾಗಿವೆ. ಭಾರತದ ಎಲ್ಲೆಲ್ಲಿಂದಲೊ ವಿದ್ಯಾರ್ಥಿವೃಂದ ಬಂದು ಅಲ್ಲಿಯ ದಕ್ಷ ಆಡಳಿತದಲ್ಲಿ ವಿದ್ಯಾರ್ಜನೆ ಮಾಡುತ್ತಿದೆ. ಜೊತೆಗೆ ಅನ್ನವಸತಿಗಳ, ನವೀನ ಸೌಕರ್ಯಗಳ ಒಂದು ದೊಡ್ಡ ವಸತಿ ವಿರಾಮ ಮಂದಿರ ಅಲ್ಲಿ ನಿರ್ಮಿತವಾಗಿದೆ. ಕ್ರೀಡಾರಂಗಗಳು, ಚರ್ಚಾಕೂಟಗಳು ಬಗೆಬಗೆಯಾಗಿ ನಡೆಯುವುದಕ್ಕೆ ಏರ್ಪಾಡಾಗಿದೆ. ಮೌಲಿಕ ನೀತಿ, ಧರ್ಮ ವ್ಯಾಸಂಗ ಪರಿಶೀಲನೆಗಾಗಿ ಗೀತಾಮಂದಿರ ಒಂದೂ ಆಗಿದೆ. ಅಲ್ಲಿಗೂ ಉಡುಪಿಗೂ ನಡುವೆ ಮಹಾತ್ಮಾ ಗಾಂಧಿ ಮೆಮೊರಿಯಲ್ ಕಾಲೆಜ್ ಎಂಬ ವಿದ್ಯಾಲಯ ನಾನಾವಿಧವಾದ ಸಾಹಿತ್ಯ, ನಾಟಕ, ಯಕ್ಷಗಾನ ಮುಂತಾದವುಗಳ ಪ್ರಯೋಗಗಳಿಗೂ ಕರ್ನಾಟಕಕ್ಕೆಲ್ಲ ವಿಸ್ತಾರಗೊಂಡ ಮತ್ತು ಭರತಖಂಡದ ಅನೇಕ ಕಡೆಗಳಿಂದ ಆಹ್ವಾನಿತರಾಗಿ ಬಂದು ಸೇರಿ ವಿದ್ಯಾಗೋಷ್ಠಿಗಳನ್ನು ಮಾಡುವ ಕೇಂದ್ರವಾಗಿದೆ. ಈಚೆಗೆ ಅದರ ಆಶ್ರಯದಲ್ಲಿ ಕನ್ನಡ ಕವಿಯಾಗಿ, ಸಂಶೋಧಕರಾಗಿ ಕೀರ್ತಿಗೊಂಡಿದ್ದ ಮಂಜೇಶ್ವರದ ಗೋವಿಂದ ಪೈ ಹೆಸರಲ್ಲಿ ಸಂಶೋಧನ ಕೇಂದ್ರ ಒಂದು ಸ್ಥಾಪಿತವಾಗಿದೆ.

ಇವುಗಳ ಹಿಂದೆ ಈಗ ಸಿಂಡಿಕೇಟ್ ಬ್ಯಾಂಕ್ ಎಂದು ಹೆಸರಾಗಿ ನವನವೀನವಾಗಿ ಜನಜೀವನ ಪೋಷಕವಾದ ಕಾರ್ಯಕ್ರಮಗಳನ್ನು ಕೈಕೊಂಡು ಭರತಖಂಡದಲ್ಲೆಲ್ಲ ಪ್ರಸಿದ್ಧವಾಗಿ ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ ಒಂದೆಂದು ಪರಿಗಣಿತವಾಗಿರುವ ಬ್ಯಾಂಕಿಂಗ್ ಸಂಸ್ಥೆಯಿದೆ. ಈ ಎಲ್ಲದರ ಹಿಂದೆ ನಿಂತು ಕೆಲಸ ಮಾಡಿರುವವರು ಡಾ. ಪೈ ಅವರು. ಹೀಗೆ ಒಂದು ಕಡೆ ಬ್ಯಾಂಕಿಂಗ್ ಅಭಿವೃದ್ಧಿ, ಎಂದರೆ ಆರ್ಥಿಕ ಜೀವನ ವಿಸ್ತರಣಕ್ಕೆ ಬೇಕಾದ ಧನಸಂಪತ್ತಿಯನ್ನೂ ಕ್ರಿಯಾತಂತ್ರವನ್ನೂ ಬೆಳಸಿ, ಇನ್ನೊಂದು ಕಡೆ ವಿದ್ಯಾ ಪ್ರಪಂಚವನ್ನು ಹುಟ್ಟಿಹಾಕಿ ನಡಸಿದ ದರ್ಶನ ಮತ್ತು ಕ್ರಿಯಾಚೈತನ್ಯ ಅವರದು. ಪೈಗಳೆಂಬ ಹೆಸರಿನ ಒಂದು ಮನೆತನ ಹೇಗೆ ಹುಟ್ಟಿ ಬೆಳೆದು ಸೋದರವರ್ಗ, ಜ್ಞಾತಿವರ್ಗ ಸೇರಿಕೊಂಡು ಹೇಗೆ ಈ ಕಾರ್ಯಗಳಲ್ಲಿ ನೆರವಿತ್ತಿದೆ ಎಂಬುದನ್ನು The Pais of Manipal ಎಂಬ ಹೆಸರಲ್ಲಿ ಅಮೆರಿಕದ ವಿದ್ವಾಂಸರೊಬ್ಬರು ಬರೆದಿರುವ ಪುಸ್ತಕದಲ್ಲಿ ಕಾಣಬಹುದು. ಜೊತೆಗೆ ಡಾ. ಪೈ ಅವರ ಎಂಬತ್ತನೆಯ ವರ್ಷೋತ್ಸವ ಸಂಬಂಧದಲ್ಲಿ ಸಂಗೃಹೀತವಾದ ಪುಸ್ತಕವೊಂದು ಪ್ರಕಟವಾಗಿದೆ; ಅದರಲ್ಲಿಯೂ ಅವರ ಸಾಧನೆಯ ಬಗೆಗೆ ವಿವರಗಳಿವೆ. ಇದಲ್ಲದೆ ಕನ್ನಡದ ಬೇರೆ ಬೇರೆ ಸಣ್ಣ ದೊಡ್ಡ ಪುಸ್ತಕಗಳಲ್ಲಿಯೂ ಪತ್ರಿಕೆಗಳಲ್ಲಿಯೂ ಅವರ ಗುಣಕಾರ್ಯಗಳನ್ನು ಕುರಿತು ಪರಿಚಯ ಲೇಖನಗಳೂ ಗುಣಗಾನವೂ ಆಗಿವೆ. ಎಂಬತ್ತು ವರ್ಷಕ್ಕೆ ಮೇಲ್ಪಟ್ಟು ವಯಸ್ಸಾಗಿದ್ದರೂ ಯುವಕರಂತೆ – 'I am yet 82 !' ಎಂದರು, ಈಚೆಗೆ ಲಾರ್ಡ್ ಮ್ಯಾಕ್ಮಿಲನ್, B.B.C. ಅಲ್ಲಿ – ಅವಸರ, ಗದ್ದಲ ಇಲ್ಲದೆ ಅವಿಚಲಿತರಾಗಿ,

ಕಾರ್ಯಸಿದ್ಧರಾಗಿ ಈ ಎಲ್ಲವನ್ನೂ ಹಗಲೂ ರಾತ್ರಿ ನೋಡಿಕೊಂಡು, ಬಂದವರಿಗೆ ತೋರಿಸುತ್ತ, ಕಂಡ ಸ್ನೇಹಿತರಿಗೆ ಅದರಲ್ಲಿ ವಿಶ್ವಾಸ, ಸ್ನೇಹ, ಉತ್ಸಾಹ ಹುಟ್ಟಿಸಿ, ಕೊನೆಯವರೆಗೂ ನಿರ್ಲಿಕಾರದಿಂದ ನಡೆದವರು ಡಾ. ಪೈ. ಒಂದು ಜೀವಕ್ಕೆ ಇಷ್ಟು ಇಂಥ ಕೆಲಸ ಶಕ್ಯವಾದೀತೇ ಎನ್ನಿಸುವ ಅಗಾಧತೆ ಇದೆ, ವಿವಿಧತೆ ಇದೆ – ಆ ಕಾರ್ಯದ ವಿಸ್ತರಣದಲ್ಲಿ, ಕುಂದದ, ನಂದದ ಉನ್ನತವಾದ ಒಂದು ಬಿಳಿಬಿಳಕಿನ ಕಾವಿನಲ್ಲಿ ಉರಿಯುವಂಥದು ಅವರ ಜೀವನ. ಸಂನ್ಯಾಸಿಯೊ ಮುಕ್ತಿ ಪಿಪಾಸುವೊ ಆಗಿರುವವನು ಲೋಕಸಂಗ್ರಹ ಮಾಡಿದ ಹೊರತು ಪೂರ್ಣನಾಗುವುದಿಲ್ಲ ಎಂಬ ಆಚಾರ್ಯರ ಮಾತಿದೆ. ಇವರು ಸಂನ್ಯಾಸಿಯಲ್ಲ; ಆದರೆ ಇವರ ಲೋಕ ಸಂಗ್ರಹಕಾರ್ಯ ಎಂಥವರ ಮನಸ್ಸನ್ನೂ ಆಕರ್ಷಿಸಿ ಮೆಚ್ಚಿಸಬಲ್ಲದ್ದು, ತೃಪ್ತಿಪಡಿಸಬಲ್ಲದ್ದು.

ಡಾಕ್ಟರಾಗಲು ಬಗೆಬಗೆಯ ಕಷ್ಟಗಳನ್ನು ಅನನುಕೂಲಗಳನ್ನು ಅನುಭವಿಸಿ ಜಯಿಸಿ ತಮ್ಮ ವೈದ್ಯಕೀಯ ಸೇವೆಯನ್ನು ಆರಂಭಿಸಿದರು. ಬೇಗ ತಿಳಿಯಿತು ಅವರಿಗೆ: ತಾನು ಗುಣಪಡಿಸಬೇಕಾದ ರೋಗಿಗಳಿಗೆ ಚಿಕಿತ್ಸೆ ಚೆನ್ನಾಗಿ ನಡಸಬೇಕಾದರೆ ಕೆಲಕಾಲ ಒಂದು ಸ್ಥಳದಲ್ಲಿ ಉಳಿಸಿ ಔಷಧಿ ಪಥ್ಯ, ಶಸ್ತ್ರಚಿಕಿತ್ಸೆ ನಡಸಲು ಒಂದು ವಸತಿ ಬೇಕು ಎಂದು; ಗರ್ಭಿಣಿ ಸ್ತ್ರೀಯರಿಗೆ ಹೆರಿಗೆಗೆ ಮುಂಚಿತವಾಗಿಯೂ ಆಮೇಲೆ ಸ್ವಲ್ಪ ಕಾಲವೂ ನೆಮ್ಮದಿಯಾದ ಒಂದು ಆಸ್ಪತ್ರೆಯ, ಚಿಕಿತ್ಸೆಯ ಶುಶ್ರೂಷೆಯ, ಸೌಕರ್ಯ ಅಗತ್ಯ ಎಂದು. ಅದನ್ನು ಹೇಗೆ ಮಾಡಿಕೊಂಡರು, ತಮ್ಮ ಮನೆಯವರೂ ಇತರ ಸ್ನೇಹಿತರೂ ಸಾರ್ವಜನಿಕರೂ ಅದು ತೊಡಗಿ ಬೆಳೆಯಲು ಯಾವ ಯಾವ ಬಗೆಯ ನೆರವಿತ್ತರು ಎಂಬುದನ್ನು ಕೇಳಿದರೆ ಭವಭೂತಿಯ 'ಕ್ರಿಯಾಸಿದ್ಧಿಃ ಸತ್ವೇ ಭವತಿ ಮಹತಾಂ ನ ಉಪಕರಣೇ' ಎಂಬ ಮಾತು ಜ್ಞಾಪಕಕ್ಕೆ ಬರುತ್ತದೆ. ಆದಾಗ್ಯೂ ಉಪಕರಣವನ್ನು ನಿರಾಕರಿಸುವ ಹಾಗಿಲ್ಲ. ಇಂಥಲ್ಲಿಯಂತೂ ಅದರ ಅಗತ್ಯ ಹೆಚ್ಚು ಎಂಬುದು ಸ್ಪಷ್ಟವಾಗಿ ವೇದ್ಯವಾಗುತ್ತದೆ. ಆದರೂ ಸತ್ವಕ್ಕೇ ಪ್ರಾಧಾನ್ಯ ಕೊಡುವ ಮನಸ್ಸು, ಶಕ್ತಿ ಅಡ್ಡಿ ಆತಂಕಗಳನ್ನು ಲಕ್ಷಿಸದೆ ಸನ್ನಿವೇಶವನ್ನು ದುಡಿಸಿಕೊಳ್ಳಬಲ್ಲದು. ಸಾಹಸ ಸಜ್ಜನಿಕೆ ಇದ್ದರಾಯಿತು; ಉಳಿದುದೆಲ್ಲ ಸುಲಭವಾಗಿ ದೊರೆಯುತ್ತದೆ.

ಕಾಲಕ್ರಮದಲ್ಲಿ ಈ ಪ್ರಯತ್ನ ಬೆಳೆದು ಅವರೇ ಸ್ಥಾಪಿಸಿ ವಿಸ್ತಾರಗೊಳಿಸಿದ ಆಸ್ಪತ್ರೆಯೊಂದು ನಿರ್ಮಾಣವಾಯಿತು ಎಂಬುದು ಅವರ ಚೇತನಕ್ಕೆ ದೊಡ್ಡ ಸಾಕ್ಷಿ. ಯಾವಾಗ ಸುತ್ತಮುತ್ತಿನ ಜನರ ನೆರವನ್ನೂ ಸಹಕಾರವನ್ನೂ ಪಡೆದು ಸಣ್ಣದಾಗಿ ಆರ್ಥಿಕ ಉದ್ಯೋಗ ಮಂಡಲಿಯನ್ನು ಸ್ಥಾಪನೆ ಮಾಡಬೇಕೆನ್ನಿಸಿತೊ ಅದಕ್ಕೆ ಹಣ ಒದಗಿಸುವ ಕಾರ್ಯ ಮೊದಲನೆಯದೆಂಬುದು ಯಾರಿಗೂ ಹೊಳೆದೀತು. ಇವರಿಗೆ ಹೊಳೆದುದು ಕ್ರಮಶಃ ಸಿಂಡಿಕೇಟ್ ಬ್ಯಾಂಕಾಗಿ ರೂಪತಾಳಿ ಬೃಹತ್ 'ಬ್ಯಾಂಕಿಂಗ್' ಸಂಸ್ಥೆಯಾಯಿತು. ಸಣ್ಣದಾದ ಒಂದು ಬಿತ್ತ ಮಹಾವೃಕ್ಷವಾಗಿ ಬೆಳೆಯುವಂತೆ ಆ ಸಂಸ್ಥೆ ಬೆಳೆಯಿತು. ಬಿತ್ತದಲ್ಲಿ ಮೊದಲು ಹೊರಕ್ಕೆ ಜೀವ ಕಾಣುವುದಿಲ್ಲ. ಅದು ನಟ್ಟುಕುಡಿ ಒಡೆದಮೇಲೆ ಅದರಿಂದ ಗಿಡ ಮರ, ರೆಂಬೆ ಕೊಂಬೆ, ಎಲೆ ಹೂ ಹಣ್ಣು. ಒಂದೇ ಬಿತ್ತದಿಂದ ಒಂದು ಕಾಡು ಬೆಳಸಬಂದೀತು. ಆ ಹಣ್ಣು ಒಂದೊಂದರಲ್ಲಿಯೂ ಇನ್ನೆಷ್ಟೊ ಬಿತ್ತಗಳು ಆಗಿ

ಅಭಿವೃದ್ಧಿಗೊಳ್ಳುವಂತೆ ಸಿಂಡಿಕೇಟ್ ಬ್ಯಾಂಕಿನ ಕ್ರಿಯಾವಿಸ್ತರಣೆ ನಡೆಯಿತು. ಅದರ ಚಾಲನೆಗೂ ವಿಸ್ತರಣೆಗೂ ತಕ್ಕ ಕಾರ್ಯಚಾಲಕರನ್ನು ತಯಾರಿಸಿ ಉತ್ಸಾಹ, ಶಕ್ತಿ ತುಂಬಿ, ಮಹಾಕಾಂಕ್ಷೆ ಬೆಳೆಯುವಂತೆ ಮಾಡಿ, ತಮ್ಮ ಕುಟುಂಬದವರೇ ಆದ ಶ್ರೀ ಟಿ. ಎ. ಪೈ ಅವರಂಥವರ ಕರ್ತೃತ್ವ ಶಕ್ತಿಯನ್ನು ಮುಂದಕ್ಕೆ ತಂದು, ಇಂದು ಅದನ್ನು ರಾಷ್ಟ್ರೀಕೃತ ಬ್ಯಾಂಕುಗಳ ಗಣನೆಯಲ್ಲಿ ನಿಲ್ಲಿಸಿದ ಕ್ರಿಯಾರೂಪಣ, ಕಲ್ಪನಾಶಕ್ತಿ, ಕ್ರಿಯಾಚೈತನ್ಯ, ಸಾಹಸ ಅವರದು. ಸಣ್ಣಸಣ್ಣ ನ್ಯಾಸವನ್ನು ಹೂಡಿಸಿ, ಮಕ್ಕಳು ಹೆಂಗಸರು ಹಳ್ಳಿಯವರು ಯಾರೇ ಆಗಲಿ, ಸುಲಭವಾಗಿ ಕಾಸುಕಾಸು ಕೂಡಿಸಿ, ನೂರಾರು ಸಾವಿರಾರು ರೂಪಾಯಿಗಳವರೆಗೂ ಬೆಳೆಯಲು ಅವಕಾಶವಾಗುವಂತೆ 'ಪಿಗ್ಮಿ' ಡಿಪಾಸಿಟ್ ಕೂಡಿಸುವ ಏರ್ಪಾಡಿನ ಚಾತುರಿ ಶ್ಲಾಘ್ಯವಾದುದು. ನಾಡಿನ ಹೆಣ್ಣುಮಕ್ಕಳು ಲೌಕಿಕ ಕುಶಲತೆಯಲ್ಲಿ ತರಪೇತಿ ಪಡೆಯಲು ಮಹಿಳಾವರ್ಗದವರಿಂದಲೇ ಅವರಿಗಾಗಿಯೇ ಬ್ಯಾಂಕನ್ನು ನಡಸುವ ಏರ್ಪಾಡೂ ಅನನ್ಯಸಾಧಾರಣವಾದ್ದು. ಪ್ರತಿಭೆಯನ್ನು 'ನವನವೋನ್ಮೇಷಶಾಲಿನೀ' ಎನ್ನುತ್ತಾರೆ; ಡಾ. ಪೈ ಪ್ರತಿಭೆ ಅಂಥ ಕವಿಗರ್ಭವುಳ್ಳದ್ದು. ಈ ಬ್ಯಾಂಕಿನ ಬಲದಿಂದ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅನೇಕ ಉದ್ಯೋಗಿಗಳೂ ಉದ್ಯೋಗಗಳೂ ಬೆಳೆಯುವಂತಾದುವು. ಈ ಬೆಳವಣಿಗೆಯನ್ನು ಸಾಧಿಸುವ ಕಾರ್ಯದಲ್ಲಿ ತಮ್ಮ ಜ್ಞಾತಿ ವರ್ಗದವರನ್ನೆಲ್ಲ ಈ ಪ್ರಪಂಚಕ್ಕೆ ಎಳೆದರು. ಇದರಿಂದಲೇ ಅವರ ಆಸ್ಪತ್ರೆಯ ಪೋಷಣೆ ನಡೆಯುವಂತೆಯೂ ಆಯಿತು. ತಾನು ಡಾಕ್ಟರು, ತನ್ನಂತೆಯೇ ದೇಶಕ್ಕೆ ನೆರವಾಗಬಲ್ಲ ಇತರ ವೈದ್ಯರನ್ನು ಚಿಕಿತ್ಸಕರನ್ನು ತಯಾರು ಮಾಡುವುದು ದೊಡ್ಡ ಕೆಲಸವಾದೀತೆಂದು ವೈದ್ಯವಿದ್ಯೆಯ ಶಿಕ್ಷಣಕ್ಕೆ ಏರ್ಪಾಟು ಮಾಡಲು ತೊಡಗಿ, ಮಣಿಪಾಲದ ವಿಸ್ತಾರ ಪ್ರದೇಶದಲ್ಲಿ ಒಂದು ಅತ್ಯಾಧುನಿಕ ಮೆಡಿಕಲ್ ಕಾಲೆಜ್ ತೊಡಗಬೇಕೆಂದೆನಿಸಿ ತೊಡಗಿದರು. ನಮ್ಮ ನಾಡಿನಲ್ಲಿ ಎಲ್ಲಿಯೇ ಆಗಲಿ ದೊರಕುವ ಶಿಕ್ಷಣಕ್ಕೆ ಗುಣದಲ್ಲಿ ಯೋಗ್ಯತೆಯಲ್ಲಿ ಕಡಮೆಯಾಗದ ವೈದ್ಯಕೀಯ ಶಿಕ್ಷಣದ ಮಂದಿರವಾಗಬೇಕು ಅದು; ಆ ಶಾಸ್ತ್ರದ ಎಲ್ಲ ಶಾಖೆಗಳ ಬೋಧನೆಯೂ ಶಿಕ್ಷಣವೂ ಪ್ರಯೋಗವೂ ಅಲ್ಲಿ ಓದುವ ವಿದ್ಯಾರ್ಥಿಗಳಿಗೆ ದೊರೆಯಬೇಕು ಎಂದುಕೊಂಡು ಆ ಮೆಡಿಕಲ್ ಕಾಲೆಜ್ ಸ್ಥಾಪನೆ ಮಾಡಿದರು. ಇಷ್ಟಕ್ಕೆ ಬೇಕಾದ ಹಣವನ್ನು ಒದಗಿಸುವುದು ಒಬ್ಬರಿಗೆ, ಒಂದು ಕುಟುಂಬಕ್ಕೆ ಕಷ್ಟವಾದೀತೆಂದು ಹೊಸತಾಗಿ ಒಂದು ಉಪಾಯ ಯೋಚಿಸಿದರು. ಅಪಾರವಾದ ಧನಸಹಾಯವಿಲ್ಲದೆ ವೈದ್ಯವಿದ್ಯೆಯ ಕಲಿಕೆ ಶಕ್ಯವಾಗದು; ಅದಕ್ಕೆ ಬಹಳ ಹಣ ಬೇಕು; ವರ್ಷಕ್ಕೆ ಲಕ್ಷಗಟ್ಟಲೆ ವೆಚ್ಚವಾಗುತ್ತದೆ; ಶ್ರೀಮಂತರಾದವರು ಇಂಗ್ಲಂಡ್, ಅಮೆರಿಕ, ಫ್ರಾನ್ಸ್, ಜರ್ಮನಿ, ಆಸ್ಟ್ರಿಯ ಮುಂತಾದ ಪ್ರದೇಶಗಳಿಗೆ ಹೋಗಿ ಶಿಕ್ಷಣ ಪಡೆಯುವ ಅವಕಾಶ ಕಲ್ಪಿಸಿಕೊಳ್ಳುತ್ತಾರೆ; ಆದರೆ ಅವರಲ್ಲಿಯೂ ಕೆಲವರು ವಿಫಲರಾಗುತ್ತಾರೆ; ಅಂಥ ಅವಕಾಶವನ್ನು ಇಲ್ಲೇ ದೊರಕಿಸಿಕೊಟ್ಟು ಶ್ರೀಮಂತ ತಾಯಿತಂದೆಯರಿಂದ ಶುಲ್ಕದ ಹಣವನ್ನು ಮುಂಗಡ ಚಂದಾ ಪಡೆದು ಭರತಖಂಡದ ಯಾವುದೇ ಭಾಗದಿಂದ ವಿದ್ಯಾರ್ಥಿಗಳು ಬಂದರೂ ಅವರಿಗೆ ಪ್ರವೇಶ, ವಸತಿ, ಶಿಕ್ಷಣ, ಪ್ರಯೋಗಕುಶಲತೆ ದೊರೆಯುವಂತೆ ಮಾಡಬೇಕೆಂದು ತುಂಬ ವಿಚಕ್ಷಣೆಯಿಂದ ಅದನ್ನು ಏರ್ಪಡಿಸಿದರು. ಪುಸ್ತಕಗಳು, ಪ್ರಯೋಗಪರೀಕ್ಷೆಗೆ ಬೇಕಾದ ಕಂಕಾಳಗಳು, ರಾಸಾಯನಿಕ ದ್ರವ್ಯಗಳು, ಆ

ಆ ಶಾಖೆಯ ವಿದ್ಯಾಧುರೀಣರಾದ ದಕ್ಷ ಅಧ್ಯಾಪಕ ವರ್ಗ ಅಲ್ಲಿಗೆ ಒದಗಿ ಬರುವಂತೆಯೂ ಏರ್ಪಾಡಾಗಬೇಕಾಯಿತು. ಇವರು ಕೈಕೊಂಡುದಕ್ಕೆ ಎಷ್ಟು ಬಗೆಯ ಆಕ್ಷೇಪಣೆ, ಅಡ್ಡಿ ನಿರ್ಬಂಧಗಳು ಬಂದವೆಂಬುದನ್ನು ಊಹಿಸುವುದು ಕೂಡ ಕಷ್ಟ. ಸರ್ಕಾರಗಳು, ರಾಜಕೀಯ ಅಸೂಯೆ ಅಡ್ಡಿ ಬಂದವು. ಪ್ರವೇಶಕ್ಕೆ ವಿದ್ಯಾರ್ಥಿಗಳ ಶುಲ್ಕ ಮುಂತಾದವಕ್ಕೆ ಅತಿಯಾಗಿ ಹಣ ತೆಗೆದುಕೊಂಡು ಬಡವರಿಗೆ ವಿದ್ಯಾಸುಗಳಿಗೆ ಶಿಕ್ಷಣ ಇಲ್ಲದಂತೆ ಕಾರ್ಯಭಾರ ನಡಸುತ್ತಿದ್ದಾರೆ; ಇದು ಅನೀತಿ; ಇವರ ಮೇಲೆ ಶಿಸ್ತುಕ್ರಮ ಕೈಕೊಳ್ಳಬೇಕು ಎನ್ನುವವರೆಗೆ ವಿರೋಧ ನಡೆಯಿತು. ತಾವಾಗಿ ತಾವು ಬಂದು ಅದಕ್ಕಾಗಿ ಹಣ ತೆರಲು ಸಿದ್ಧವಾಗಿರುವಾಗ ಖಾಸಗಿ ಜನ ತಮಗೆ ಒಪ್ಪಿದ ಸಂಸ್ಥೆಯಲ್ಲಿ ವಿದ್ಯಾರ್ಜನೆ ಮಾಡಲು ಅವಕಾಶ ದೊರಕಿಸಿದರೆ ಅಪರಾಧವೇನು? ಕೆಲವೆಡೆಗಳಲ್ಲಿ ಮತಗಳ ಮಿಷನುಗಳು – ಉದಾ. ಕ್ರಿಸ್ಟಿಯನ್ – ತಮ್ಮಲ್ಲಿಗೆ ಬರುವ ರೋಗಿಗಳಿಗೆ ಚಿಕಿತ್ಸೆ ದೊರಕಿಸಲು ವಿಶೇಷ ಏರ್ಪಾಡುಗಳನ್ನು ಮಾಡಿ ಹೆಚ್ಚು ಹಣ ತೆರುವಂತೆ ಮಾಡಿಕೊಳ್ಳುವುದಿಲ್ಲವೆ? ಪರದೇಶಗಳಿಗೆ ಹೋಗಬೇಕಾದ ಅಗತ್ಯ ತಪ್ಪಿಸಿ ಇಲ್ಲಿಯೇ ಅವನ್ನು ದೊರಕಿಸಿಕೊಡುವ ಕಾರ್ಯ ದೌರ್ಜನ್ಯಕ್ಕೆ, ಆಕ್ಷೇಪಕ್ಕೆ ಎಡೆಯಾಗಬೇಕೇಕೆ? ತಮ್ಮ ಇಷ್ಟವಾದ ವಿದ್ಯಾಸಂಸ್ಥೆಗಳನ್ನು ಪೋಷಕರು ಆಯ್ದುಕೊಳ್ಳುವುದು, ಅಲ್ಲಿನ ಪ್ರವೇಶವನ್ನು, ಶಿಕ್ಷಣವನ್ನು ಎಷ್ಟು ಬೇಕೆಂದರೆ ಅಷ್ಟು ಹಣ ಕೊಟ್ಟು ತಮ್ಮದಾಗಿಸಿಕೊಳ್ಳುವುದು ಅಪರಾಧವಾಗಬಾರದು ಎಂಬಂತಹ ಮಾತು ಇದಕ್ಕೆ ಸಾಧಕ ಆಧಾರವಾಗಿ ಒದಗಿತು. ಹೀಗೆ ವೈದ್ಯವಿದ್ಯೆ, ಚಿಕಿತ್ಸಾ ಪ್ರಯೋಗ ಇವೆರಡೂ ಹೊಯ್‌ಕಯ್ಯಾಗಿ ನಡೆಯಿತು. ಸಿಂಡಿಕೇಟ್ ಬ್ಯಾಂಕ್ ಹಿಂದೆ ನಿಂತು ಆ ಬಗೆಯ ಕಾರ್ಯಗಳಿಗೆ ಬಲಕೊಟ್ಟು ಕ್ರಿಯಾವಿಸ್ತರಣಕ್ಕೆ ನೆರವಾಯಿತು. ಇದೆಲ್ಲ 'Pai – Effect'.

ಡಾ. ಪೈ ಮೊದಲಿಂದಲೂ ವಿದ್ಯಾವಿತರಣೆಗೆ ಮನಸ್ಸು ತೆತ್ತವರು. ಯುವಕರ ಮನಸ್ಸು ಬೆಳೆಯಬೇಕು, ಲೋಕಕಾರ್ಯಗಳಲ್ಲಿ ಪ್ರವೃತ್ತವಾಗಲು ಉತ್ಸಾಹ ಪಡೆಯಬೇಕು, ಪ್ರತಿಯೊಬ್ಬರೂ ಒಂದು ಕ್ರಿಯಾಶಕ್ತಿಯಾಗಲು, ಸ್ವಂತವಾಗಿ ಬದುಕಲು, ಯತ್ನ ಕೈಕೊಳ್ಳಲು ಸಿದ್ಧವಾಗಬೇಕು – ಎಂಬ ಮನಸ್ಸಿನಿಂದ ಒಂದು ಕಡೆ ಮಹಾತ್ಮಾ ಗಾಂಧಿ ಮೆಮೊರಿಯಲ್ ಕಾಲೆಜ್ ಸ್ಥಾಪಿಸಿ ಡಿಗ್ರಿ ಶಿಕ್ಷಣವನ್ನು – ಕಲೆ ಮತ್ತು ಮಾನವಿಕ ಶಾಸ್ತ್ರಗಳಲ್ಲಿ – ಒದಗಿಸಿದರು. ಅಲ್ಲಿ ಆರ್ಥಿಕ, ರಾಜಕೀಯ, ಸಾಂಸ್ಕೃತಿಕ, ವಿಷಯಗಳ ಪರ್ಯಾಲೋಚನೆಗೆ ದೇಶದ ಬೇರೆ ಬೇರೆ ಕಡೆಯಿಂದ ಜನರು ವಿದ್ವಾಂಸರು ಬಂದು ಸಭಿಸಮಾರಂಭಗಳಲ್ಲಿ, ಅಭಿಪ್ರಾಯ ವಿನಿಮಯಗಳಲ್ಲಿ, ಪ್ರದರ್ಶನಗಳಲ್ಲಿ ಭಾಗವಹಿಸುವಂತೆ ಪ್ರೋತ್ಸಾಹಿಸಿ ಇದಕ್ಕೆಲ್ಲ ಸಂಬಂಧಿಸಿದಂತೆ ಕಾರ್ಯದಕ್ಷತೆಯನ್ನು ಹೆಚ್ಚಿಸಿಕೊಂಡರು. ಇವೆರಡೂ ಹಕ್ಕಿಯ ಎರಡು ರೆಕ್ಕೆಗಳಂತೆ: ಬರಿಯ ಯೋಚನೆಯಾಗಿ ಉಳಿದು ಕಾರ್ಯಮುಖವಾಗದಿದ್ದರೆ ಅಂಥದು ಕೈಕಾಲು ಚಲನೆಯಿಲ್ಲದ್ದಾಗುತ್ತದೆ. ಅದು ಸಾಂಖ್ಯದ ಪುರುಷನಿದ್ದಂತೆ. ಆಲೋಚನೆಯ ಭಾಗ ಇಲ್ಲದಿದ್ದರೆ ಜಡವಾಗುವ ಸಂಭವವುಂಟು – ಪ್ರಕೃತಿಯಂತೆ. ಈ ಬಗೆಯ ಪ್ರಕೃತಿ–ಪುರುಷ ಸಂಯೋಗ ನಡೆಯುವುದರಿಂದಲೇ ಸಮಸ್ತ ಜಗತ್ತಿನ ಜೀವಕಾರ್ಯ ಎಂಬುದು ಅಲ್ಲಿ ಹೇಗೆ ರಚಿತವಾಗುವುದೊ ಅಂತಹ ಸಂಘಟನೆ, ಒಂದು

ಸಮವಾಯ ಪ್ರಸಂಗ – ಡಾ. ಪೈ ಅವರ ಕ್ರಿಯಾ ಮಂಡಲ. ಬ್ಯಾಂಕು, ಇವರ ಕ್ರಿಯಾವ್ಯಾಪಾರ, ಇವರ ವಿದ್ಯಾವಿಸ್ತರಣದ ವಿಚಕ್ಷಣೆ – ಮೂರೂ ಒಟ್ಟಿಗೆ ಸೇರಿದ್ದು ಇಂದಿನ ಮಣಿಪಾಲದ ವಿಶಿಷ್ಟ ಕೊಡುಗೆ.

ಬ್ಯಾಂಕು ಹೇಗೆ ಹಣದ ಸಂಗ್ರಹವನ್ನು ಮಾಡಿ ದೊಡ್ಡದಾಗಿ ಬೆಳೆಯಿತೊ, ಒಂದು ವಿದ್ಯಾವ್ಯವಸ್ಥೆ ಹೇಗೆ ಉನ್ನತಿಯಲ್ಲಿ ವಿಸ್ತಾರದಲ್ಲಿ ವಿವಿಧತೆಯಲ್ಲಿ ಬೆಳೆಯಿತೊ, ಅದಕ್ಕೆ ಬೇಕಾದ ಒಂದು ಅಚ್ಚುಕೂಟ, ಪ್ರಕಟನಕಾರ್ಯ ನಡೆಯುವಂತೆ 'ಮಣಿಪಾಲ ಪವರ್ ಪ್ರೆಸ್' ಎಂಬ – ಕನ್ನಡ ನಾಡಿಗೇ ಕೀರ್ತಿ ತಂದಿರುವ – ಒಂದು ಅಚ್ಚುಕೂಟವನ್ನು ಸ್ಥಾಪಿಸಿ, ಇಂಗ್ಲಿಷ್ ಕನ್ನಡ ಮುದ್ರಣ, ವರ್ಣಚಿತ್ರ ತಯಾರಿಕೆಯ ವಿಭಾಗಗಳಿಂದ ಉತ್ತಮ ಮುದ್ರಣಕಾರ್ಯ, ಪ್ರಕಟನಕಾರ್ಯ ನಡೆಯುವಂತೆ ನೋಡಿಕೊಂಡರು. ಕನ್ನಡದಲ್ಲಿ ಒಂದು ವೃತ್ತಪತ್ರಿಕೆಯನ್ನು ತೊಡಗಿಸಿ ಚೊಕ್ಕವಾದ ಒಂದು ದಿನಪತ್ರಿಕೆ, ವಾರಪತ್ರಿಕೆ, ಒಂದು ಮಾಸಪತ್ರಿಕೆ ಹೊರಡಿಸಿ, ಸುದ್ದಿಸಂಚಾರ ಮತ್ತು ಸಾಹಿತ್ಯದ ಪ್ರೋತ್ಸಾಹ ದೊರಕಿಸಲು ದಾರಿತೋರಿಸಿದರು. ಒಬ್ಬ ಮನುಷ್ಯ ಕಾರ್ಯೋನ್ಮುಖವಾದರೆ ಎಷ್ಟು ಕಲ್ಪನೆ, ನಿರ್ಮಿತಿ ಮೂರ್ತಿಗೊಳ್ಳಬಲ್ಲದೆಂದು ಮನವರಿಕೆಯಾಯಿತು!

ಮೊದಲಿಂದಲೂ ದಕ್ಷಿಣ ಕನ್ನಡ ಜಿಲ್ಲೆ ದೂರದ ಮದರಾಸಿನ ಒಂದು ಜಿಲ್ಲೆಯಾಗಿ ಉಳಿದಿತ್ತು. ಹೈದರಲಿ, ಟಿಪ್ಪೂಸುಲ್ತಾನ್ ಇವರ ಬಲವನ್ನು ಮುರಿಯಬೇಕೆಂದು ಬ್ರಿಟಿಷರು ಆ ಜಿಲ್ಲೆಯನ್ನು ಒಡೆದು, ಉತ್ತರ ಕನ್ನಡ ಜಿಲ್ಲೆಯನ್ನು ಕನ್ನಡ ನಾಡಿಂದಲೆ ಬೇರೆ ಮಾಡಿ ಉತ್ತರ ಭಾಗವನ್ನು ಬೊಂಬಾಯಿ ಪ್ರಾಂತಕ್ಕೆ, ದಕ್ಷಿಣದ್ದನ್ನು ಮದರಾಸ್ ಪ್ರಾಂತಕ್ಕೆ ಹೋಳು ಮಾಡಿದ್ದರು. ಕರೆಯ ಜಿಲ್ಲೆಯಾದ ಈ ಪ್ರದೇಶವನ್ನು ಬಹುಮಟ್ಟಿಗೆ ಬಯಲು ಸೀಮೆಯಾದ ಇತರ ಕನ್ನಡ ಪ್ರಾಂತದಿಂದ ಹೊರಗಿರಿಸಿ ಸಹ್ಯಾದ್ರಿಯ ಬೆಟ್ಟಸಾಲು ಪ್ರಾಕೃತಿಕವಾದ ದೊಡ್ಡ ಆತಂಕವಾಗಿ ಗೋಡೆಯಂತೆ ನಿಂತಿತ್ತು. ಸ್ವತಃ ಜಾಣರೂ ಕುಶಲ ಕರ್ಮಿಗಳೂ ಸ್ವಭಾವದಲ್ಲಿ ಚುರುಕುಳ್ಳವರೂ ಆದ ಈ ಜನವರ್ಗದಲ್ಲಿ ಒಂದು ಕಡೆ ಬ್ರಾಹ್ಮಣ ವರ್ಗದ ಹವ್ಯಕ ಮಂಡಲಿ, ಇನ್ನೊಂದು ಕಡೆ ಅಳಿಯಸಂತಾನ ಸಮಾಜವರ್ಗಕ್ಕೆ ಸೇರಿದ ಭೂಸ್ಥಿತಿವಂತರಾದ ಬಂಟ್ ಜನ, ಗೋವಾ ಕಡೆಯಿಂದ ಬಂದ ಎರಡು ಬಗೆಯ ಸಾರಸ್ವತ ವರ್ಗ ಇವೆ. ಇವೆಲ್ಲ ನೂರಾರು ವರ್ಷಗಳಿಂದ ಕರೆನಾಡಿಗೆ ಬಂದು ನಿಂತು ಇಲ್ಲಿ ವಿದ್ಯೆ, ಮತಪ್ರಚಾರ, ವೈದ್ಯಕೀಯ ಉದ್ಯೋಗಗಳಲ್ಲಿ ತೊಡಗಿದ್ದಾರೆ. ಕ್ರೈಸ್ತ ಪಂಥದ ಕ್ಯಾಥೊಲಿಕ್, ಪ್ರೊಟೆಸ್ಟಾಂಟ್ ಪಂಥಗಳು – ವಿಶೇಷವಾಗಿ ಜರ್ಮನ್ ಪ್ರೊಟೆಸ್ಟಾಂಟ್ ವರ್ಗದವರು ನಡಸುತ್ತಿದ್ದ ಆ ಬೇಸಲ್ ಮಿಷನ್ ಸಂಸ್ಥೆಯ ವಿದ್ಯಾಕಾರ್ಯ ಮತ್ತು ಉದ್ಯೋಗ ಕಾರ್ಯಗಳು ಜನರಿಗೆ ಬಗೆಬಗೆಯ ಕಾರ್ಯಜ್ಞತೆಯನ್ನೂ ತಿಳಿವಳಿಕೆಯನ್ನೂ ಹರಡಿದವು. ಕ್ಯಾಥೊಲಿಕ್ ಪಂಥವೂ ದೊಡ್ಡದಾಗಿದೆ. ರಾಜಕೀಯವಾದ ಮತ್ತು ಅಡಳಿತದ ಎಲ್ಲ ಸಂಬಂಧಗಳಲ್ಲಿಯೂ ಮದರಾಸಿಗೆ ಈ ಜನ ಹೋಗಬೇಕಿತ್ತು. ಪ್ರೌಢವಿದ್ಯಾಕೇಂದ್ರಗಳೂ ನ್ಯಾಯಶಾಲೆಗಳೂ ಅಲ್ಲಿದ್ದವು. ಆದ್ದರಿಂದ ಬಹುಮಂದಿ ಇಲ್ಲಿನ ಜನ ಅಲ್ಲಿಗೆ ಹೋಗಿ ನೆಲಸಬೇಕಾಯಿತು. ಅವರೊಡನೆ ಸ್ಪರ್ಧೆಯಲ್ಲಿ ಉಳಿದು ಗೆದ್ದು ನಿಲ್ಲಬೇಕಾಯಿತು. ಮದರಾಸಿನ ಜನವೂ ಬುದ್ಧಿಯ ಚುರುಕಿಗೆ ಹೆಸರಾದವರು. ನೆರೆಯ ತೆಂಕಲವರ್ಗ

ಮಲೆಯಾಳಿಗಳದು. ಇವರಿಬ್ಬರಲ್ಲಿ ಯಾರು ಹೆಚ್ಚು ಗಟ್ಟಿಗರೆಂದು ತೀರ್ಮಾನಿಸುವುದು ಕಷ್ಟ. ಒಂದು ಕಾಲದಲ್ಲಿ ಕೇರಳವೂ ಮದರಾಸ್ ಅಧಿಪತ್ಯಕ್ಕೆ ದಕ್ಷಿಣ ಕನ್ನಡದಂತೆಯೇ ಸೇರಿತ್ತು. ವ್ಯಾಪಾರ ವಿದ್ಯೆ ಉದ್ಯೋಗದಲ್ಲಿ, ಚುರುಕಿನಲ್ಲಿ ಈ ಇಬ್ಬರೊಡನೆಯೂ ನಿಂತು ಸ್ಪರ್ಧೆಯಲ್ಲಿ ಗೆಲ್ಲಬೇಕಾದ ಅಗತ್ಯ ದಕ್ಷಿಣ ಕನ್ನಡದವರಿಗೆ ಬಂದಿತು. ವಿದ್ಯಾವಿಸ್ತರಣೆಗೆ ದಕ್ಷಿಣ ಕನ್ನಡ ಜಿಲ್ಲೆಯ ಜಿಲ್ಲಾ ಕೇಂದ್ರವಾಗಿ ಮಂಗಳೂರು ಇದ್ದರೂ ಅಲ್ಲಿನ ಸರ್ಕಾರಿ ಕಾಲೇಜು ಬಹುಕಾಲ ಎರಡನೆ ದರ್ಜೆಯ ಕಾಲೇಜಾಗಿ ಉಳಿಯಿತು. ಮಿಷನರಿಗಳು ನಡಸುತ್ತಿದ್ದ ಸೆಂಟ್ ಎಲೋಯ್‌ಷಿಯಸ್ ಕಾಲೇಜಿನಲ್ಲಿ ಹಿಂದಿನಿಂದ ಪ್ರೌಢವಿದ್ಯಾವ್ಯಾಸಂಗ ನಡೆಯಬೇಕಾಗಿತ್ತು. ಹೆಣ್ಣುಮಕ್ಕಳ ಪ್ರೌಢವಿದ್ಯಾಭ್ಯಾಸ ಸೆಂಟ್ ಆಗ್ನಿಸ್ ಕಾಲೇಜ್ ಮುಂತಾದಲ್ಲಿ ನಡೆಯುತ್ತಿತ್ತು. ಒಂದು ಜಿಲ್ಲೆಗೆ ಇಷ್ಟು ನೆರವುಗಳೂ ಪ್ರಚೋದನೆಗಳೂ ಉತ್ಸಾಹಗಳೂ ಪ್ರೋತ್ಸಾಹನಗಳೂ ಸಾಹಸವೂ ಬೆಳೆದು ಬಂದುದು ಮಹಾಸಮಾರಂಭವೇ. ಇದನ್ನು ಇನ್ನಷ್ಟು ತುಂಬುವಂತೆ ಮಾಡಿದ್ದು ಮಣಿಪಾಲದ ವಿದ್ಯಾವಿಚಕ್ಷಣೆಯ ಸಾಹಸ. ಅಲ್ಲಿಯ ಚೇತನವನ್ನು ಗುರುತಿಸಿ, ಬೆಳಸಿ, ಬಗೆಬಗೆಯಾದ ಪ್ರೋತ್ಸಾಹ ಕೊಟ್ಟು ಇದನ್ನು ಸಂಪನ್ನವಾಗಿ ಮಾಡಿದ ಮಹಾಪುರುಷರು ಡಾ. ಮಾಧವ ಅನಂತ ಪೈ. ಯಾವ ರೀತಿಯಲ್ಲಿ ನೋಡಿದರೂ ಮಣಿಪಾಲದ ಈ ಕ್ರಿಯಾವಿಲಾಸ ಅದನ್ನು ಸ್ವತಂತ್ರ ಗಣನೆಗೆ ನಿಲ್ಲಿಸಲು ಶಕ್ಯವಾಗಿದೆ. ಆದರೆ ಯಾವಯಾವುದೊ ಗಾಳಿಗಳು ಮೋಡಗಳು, ಎಲ್ಲೆಲ್ಲಿನವೊ ಎಂಥೆಂಥವೊ ಪ್ರಭಾವಗಳು ಅದಕ್ಕೆ ಒಂದು ಅಖಂಡ ಸ್ವಾಧೀನತೆಯನ್ನು ದೊರಕಿಸಿಕೊಡಲು ಅಡ್ಡಿಯಾಗಿವೆ. ಜನವರ್ಗದಲ್ಲಿ ಆಗಾಗ್ಗೆ ಕೆಲವು ಕಾರ್ಪಣ್ಯಗಳು ಬೆಳೆಯುತ್ತವೆ. ಲೋಕದಲ್ಲಿ ಯಾವುದಕ್ಕೆ ಇಂಥ ಅಭ್ಯಂತರಗಳಿಲ್ಲ!

ಮಾಧವ ಪೈಗಳ ಮನಸ್ಸು ಸಂತತವಾಗಿ ಕಾರ್ಯಮುಖವಾದುದು. ಒಂದು ಯೋಚನೆ ಹೊಳೆದ ಕೂಡಲೆ ಅದರ ಗುಣಾವಗುಣಗಳ ಪರಿಶೀಲನೆಯ ಜೊತೆಗೆ ಅಂಥುವನ್ನು ಸಾಧಿಸುವುದು ಹೇಗೆ, ಸಲಕರಣೆಗಳನ್ನು ಒದಗಿಸುವುದು ಹೇಗೆ, ಅದು ಆಗಬೇಕಾದಾಗ ತಕ್ಕ ಜನರನ್ನು ಕೂಡಿಹಾಕುವುದು ಹೇಗೆ, ಗುಣಭಾಗವನ್ನು ಹೆಚ್ಚಿಸಿ ಲೋಪದೋಷ ಭಾಗವನ್ನು ಕಡಮೆ ಮಾಡುವ ಮಾರ್ಗಗಳು ಯಾವುವು – ಎಂಬುದು ತಕ್ಷಣದಲ್ಲಿಯೇ ಅವರ ಮನಸ್ಸಿನಲ್ಲಿ ಅಧಿಷ್ಠಾನಗೊಳ್ಳುತ್ತಿತ್ತಾಗಿ ಆಲೋಚನೆಯ ಜೊತೆಗೆ ಇಚ್ಛೆ ಅವನ್ನು ನಡಸುವ ಪ್ರಯತ್ನಗಳಿಗೆ ತಿರುಗಿ, ಸಜ್ಜು ಸಾಮಗ್ರಿ ಇವುಗಳ ಕಡೆಗೆ ಹರಿಯುತ್ತಿತ್ತು. ಷೇಕ್ಸ್‌ಪಿಯರಿನ ಒಬ್ಬ ನಾಯಕನನ್ನು ಕುರಿತು `With him to feel was to think, to think was to act' ಎಂಬ ಮಾತನ್ನು ಒಬ್ಬ ವ್ಯಾಖ್ಯಾನಕಾರರು ಬರೆಯುತ್ತಾರೆ. ಅದು ಒಬ್ಬ ದುರಂತನಾಯಕನನ್ನು ಕುರಿತದ್ದು. ಮಾಧವ ಪೈ ಶುಭಾಂತನಾಯಕರು. ಕ್ಷೇಮಸಾಧನೆಯಲ್ಲಿ ಈ ಬುದ್ಧಿಶಕ್ತಿಯನ್ನು ಅವರು ಬಹುವಾಗಿ ದುಡಿಸಿಕೊಂಡಿದ್ದಾರೆ. ಅವರ ಮನಸ್ಸಿಗೆ ವಿರಾಮವಿಲ್ಲ. ಒಂದು ಚೇತನ ಎಷ್ಟೆಲ್ಲ ಕಾರ್ಯೋದ್ಯೋಗಶೀಲತೆಗಳನ್ನು ಹಬ್ಬಿ ಹರಡುವಂತೆ ಮಾತಬಹುದೊ ಅಷ್ಟರ ವ್ಯಾಪ್ತಿಯನ್ನೂ ಮಣಿಪಾಲದಲ್ಲಿ ಮಾಡಿದವರು ಡಾ. ಪೈ. ಅವರ ಚುರುಕು ಯಾರನ್ನೂ ಬೆರಗುಗೊಳಿಸುತ್ತದೆ. ಕಂಡವರನ್ನೆಲ್ಲ ತಮ್ಮ ಸಂಸ್ಥೆಗಳ ಕಡೆಗೆ, ಯೋಚನೆಗಳ ಕಡೆಗೆ ನಿರಂತರವಾಗಿ ಸೆಳೆಯುತ್ತಾರೆ. ಸುಮಾರು

ಇಂಥವರು ಈ ಕಾರ್ಯಗಳಲ್ಲಿ ಆಸಕ್ತರು, ಸೌಹಾರ್ದ ಉಳ್ಳವರು, ಗುಣವನ್ನು ಕಾರ್ಯವನ್ನು ಗ್ರಹಿಸಬಲ್ಲವರು ಎಂದು ಕಾಣುತ್ತದೆಯೊ ಅಂಥವರನ್ನು ಅಂಥ ಸಂಸ್ಥೆಗಳಿಗೆ ಕಾಲ್ನಡಿಗೆಯಲ್ಲಿ ತಾವೇ ಇಳಿವಯಸ್ಸಿನಲ್ಲಿಯೂ ಕರೆದೊಯ್ದು ಉತ್ಸಾಹವನ್ನು ಕಾಣಿಸುತ್ತಾರೆ, ವಿವರಿಸುತ್ತಾರೆ. ಅವರು ತಮ್ಮ ಆಸ್ಪತ್ರೆಗೂ ಮೆಡಿಕಲ್ ಕಾಲೆಜಿಗೂ ಜನರನ್ನು ಕರೆದುಕೊಂಡು ಹೋದಾಗ ಅಲ್ಲಿ ಅವರಿಗೆ ದೊರೆವ ಗೌರವ ಭಕ್ತಿವಿಶ್ವಾಸಗಳು ಎಷ್ಟು ಎಂಬುದು ಗೊತ್ತಾಗುತ್ತದೆ.

ನೋಡಲು ಹೋಗುವವರಿಗೆ ಇನ್ನೊಂದು ಸಂಗತಿ ವೇದ್ಯವಾಗುವುದು: ಅಲ್ಲಿ ನಡೆಯುತ್ತಿರುವ ಪ್ರತಿಯೊಂದು ಏರ್ಪಾಡಿನ ವಿವರಾಂಶವನ್ನೂ ಅವರು ಬಲ್ಲರು; ಪ್ರತಿ ಶಾಖೆಯಲ್ಲಿ ಏನಿದೆ, ಏನಿಲ್ಲ; ಎಂದು ಬಂದಿತು; ಏನು ನಡೆಯಬೇಕಾಗಿದೆ, ಅದಕ್ಕೆ ಏನು ಕಾರ್ಯಕ್ರಮ ಈಗ ಕೈಕೊಳ್ಳುತ್ತಿದೆ ಎಂಬುದನ್ನು ತಿಳಿಯುವರು; ಇತರರಿಗೆ ವಿವರಿಸುವರು. ಒಬ್ಬ ರೋಗಿ ತಮ್ಮಲ್ಲಿಗೆ ಯಾವಾಗ ಬಂದರೂ ಅವರು ಎಲ್ಲಿನವರು, ವೈದ್ಯರು ಯಾರು, ನೋಡಿಕೊಳ್ಳುತ್ತಿರುವ ದಾದಿಯರು ಯಾರು, ಯಾವ ಔಷಧಿ ಪಥ್ಯ ನಡೆಯುತ್ತಿವೆ ಎಂಬ ಅರಿವು ಅವರಿಗಿರುತ್ತದೆ. ಎಲ್ಲರನ್ನೂ ವಿಶ್ವಾಸದಿಂದ ಮಾತಾಡಿಸುವರು. ಇಷ್ಟು ಅವಧಾನ, ನಾನಾಮುಖವಾದ ತಾಳ್ಮೆ ತಿಳಿವಳಿಕೆ ಒಬ್ಬರಿಗೆ ಶಕ್ಯವಾಗಿದ್ದುದು ಅತ್ಯಾಶ್ಚರ್ಯಕರ ಸಂಗತಿ. ಕೆಲವು ಕಾಲ ಮಂಗಳೂರಿನ ಆಸ್ಪತ್ರೆಯಲ್ಲಿ ವೈದ್ಯವಿದ್ಯಾರ್ಥಿಗಳಿಗೆ ಕ್ರಿಯಾ ಭಾಗ ಪ್ರಯೋಗಭಾಗ ನಡಸಬೇಕಾದುದುಂಟು. ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಅವರ ಮೆಡಿಕಲ್ ಕಾಲೆಜಿಗೆ ಸ್ಥಾನಮಾನ ಸಿಕ್ಕದೆ ಧಾರವಾಡದ ಕರ್ನಾಟಕ ವಿಶ್ವವಿದ್ಯಾನಿಲಯಕ್ಕೆ ಮಾನ್ಯತೆಗಾಗಿ ಬೇಡಿ ಅದನ್ನು ಪಡೆದರು. ಕರ್ನಾಟಕದ ಒಂದು ಭಾಗವಾದ ಇಲ್ಲಿನ ಲಲಿತಕಲಾ ವಿಭಾಗ, ವಿಜ್ಞಾನವಿಭಾಗ, ತಂತ್ರಶಿಲ್ಪ, ವಾಣಿಜ್ಯ, ಕಾನೂನುವಿದ್ಯಾ ಇಲಾಖೆ ಮುಂತಾದುವಕ್ಕೆ ಸರ್ಕಾರದ ಗ್ರಾಂಟ್ ಬರುವಂತೆ ಮಾಡಿಕೊಳ್ಳಬೇಕಾದಾಗ ಅವರು ಪಾಡು ಪಡಬೇಕಾಗಿ ಬಂತು. ಆದರೆ ಎಂದೂ ಎದೆಗೆಡಲಿಲ್ಲ. ಸರ್ಕಾರದವರು ಕೇಳಿದ ಪುರಾವೆ ಪ್ರಮಾಣಗಳನ್ನೆಲ್ಲ ಒದಗಿಸಿಕೊಟ್ಟರು. ಮೆಡಿಕಲ್ ಕಾಲೆಜಿಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರವೂ ಭಾರತ ಸರ್ಕಾರದ ಮೆಡಿಕಲ್ ಕೌನ್ಸಿಲೂ ಬೇಡಿದ ನೇಮಪರಿಪಾಲನೆಗೆ ತಕ್ಕ ಸಮಾಧಾನವನ್ನು ಒದಗಿಸಿದರು.

ತಮ್ಮ ವಿದ್ಯಾಮಂಡಲದ ವ್ಯವಸ್ಥಾಪನ ಮತ್ತು ಆಡಳಿತ ಒಂದು ಒಟ್ಟು ಮೇಲ್ವಿಚಾರಣೆಯಲ್ಲಿ ನಡೆಯುವಂತೆ ಅವರು ಮೊದಲಿಂದ ನೋಡಿಕೊಂಡು ಬಂದಿದ್ದಾರೆ. ಬೇಕಾದ ಕಟ್ಟಡಗಳು, ವಿದ್ಯಾಸಾಧನೆಗೆ ಬೇಕಾದ ಸಜ್ಜು, ನಿರ್ವಾಹಕ ಮತ್ತು ಬೋಧಕ ವರ್ಗ, ಅವರಿಗೆ ಸಲ್ಲಬೇಕಾದ ಹಣದ ಒದಗಣೆ, ಸಂಬಳಸಾರಿಗೆಗಳ ವ್ಯವಸ್ಥೆ – ಪ್ರತಿಯೊಂದೂ ನ್ಯೂನತೆಗಳಿಲ್ಲದಂತೆ ನಡೆಯಲು ಮಾಡಿರುವ ಏರ್ಪಾಡು ಯಾವ ಖಾಸಗಿ ಮಂಡಲಿಗೂ ಆದರ್ಶವಾಗಬಲ್ಲ, ಉತ್ಸಾಹ ತರಬಲ್ಲ ಸಂಪ್ರದಾಯ, ಶಿಸ್ತು. ಸಾಮಾನ್ಯವಾಗಿ ವಿದ್ಯಾಸಂಸ್ಥೆಗಳಲ್ಲಿ ಸ್ಥಾಪಿಸುವ ಹುಮ್ಮಸ್ಸು, ಅಭಿಮಾನ, ಆರಂಭದಲ್ಲಿ ಮಾಡಬೇಕಾದ ವೆಚ್ಚ ಅಷ್ಟನ್ನು ಮಾಡಿಬಿಟ್ಟಮೇಲೆ ಅವುಗಳ ಗತಿ ಹೇಗೆ, ಸಂಬಳಸಾರಿಗೆಗಳು ಬೋಧಕರಿಗೆ ಸಿಬ್ಬಂದಿಗೆ ಕ್ರಮವಾಗಿ ತಪ್ಪದೆ ಸಲ್ಲುತ್ತಿವೆಯೆ, ಹೇಗೆ – ಎಂಬುದರ ಕಡೆ ಲಕ್ಷ್ಯವಿಲ್ಲದೆ,

ಹೆಚ್ಚು ಹಣ ಸಲ್ಲುಗೆಗೆ ಗಮನ ಕೊಡದೆ ಅವನ್ನು ದುರ್ಬಲಗೊಳಿಸುವ ಪ್ರಸಂಗಗಳು ನಾಡಿನ ಅನೇಕ ಕಡೆ ಕಾಣುತ್ತಿರುವಾಗ ಮಣಿಪಾಲದ ಆಡಳಿತ ಕ್ರಮಕ್ಕೆ ಒಳಪಟ್ಟ ಯಾವ ಸಂಸ್ಥೆಯಲ್ಲಿಯೂ ಅಂತಹ ಅವ್ಯವಸ್ಥೆ, ದೌರ್ಬಲ್ಯ ತಲೆಹಾಕದಂತೆ ನೋಡಿಕೊಳ್ಳುವ ಕಾರ್ಯ ಬಹುದೊಡ್ಡದು. ಅವರ ಸಂಸ್ಥೆ ಬೇರೆ ಬೇರೆ ಕಡೆ ಏರ್ಪಟ್ಟಾಗಲೂ ಆ ಆ ಸ್ಥಳಗಳ, ಸುತ್ತಲ ಪ್ರದೇಶಗಳ ಜನರ ಅಭಿಮಾನ ಪ್ರೀತಿ ವಿಶ್ವಾಸ ಪಕ್ಷಪಾತ ಅಲ್ಲಿಗೆ ಹರಿಯುವಂತೆ, ದುಡಿಯುವಂತೆ ಮಾಡಿದ್ದೂ ದಕ್ಷ ದೂರದರ್ಶಿತೆ. ಅದರಿಂದ ಸ್ಥಳದ ಸ್ವಾಭಿಮಾನಕ್ಕೆ ಅಪ್ತವಾದ ಸಂಬಂಧ, ಪೋಷಣೆ ದೊರೆಯುವಂತಾಗುತ್ತದೆ. ಇದು ದೂರದ ಮಣಿಪಾಲದ್ದಲ್ಲ, ನಮ್ಮದೇ ಸಂಸ್ಥೆ; ನಮ್ಮ ಗೌರವಕ್ಕೆ ಹಾನಿ ಬರದಂತೆ ನಾವು ನೋಡಿಕೊಳ್ಳಬೇಕು ಎಂಬ ಭಾವನೆ ಆ ಆ ಪ್ರದೇಶಗಳವರಲ್ಲಿ ಬೆಳೆಯುವಂತೆ ಮಾಡಿದ್ದು ದೂರದ ಕ್ರಿಯಾದೃಷ್ಟಿ. ಅನ್ನ ಹಾಕುವುದು ಬಟ್ಟೆ ಕೊಡುವುದು ದಾನವೇ ನಿಜ. ಅದಕ್ಕಿಂತ ತಾನೇ ಮಾಡಿಕೊಳ್ಳುವುದು ಯೋಗ್ಯ. ಶಿಕ್ಷಣ ಪಡೆಯುವುದು ಒಂದು ಶ್ರಮದ ಫಲವಾದರೆ ಅಂತಹ ದರ್ಶನವೂ ಮಾರ್ಗವೂ ಲೋಕಹಿತವನ್ನು ಮೇಲಾಗಿ ಸಾಧಿಸುತ್ತದೆ. ಒಬ್ಬರೊ ಕೆಲವರೊ ಮಾಡುವ ದಾನ ಕೆಲವರನ್ನು ಉದ್ಧಾರ ಮಾಡಬಹುದು. ದಾನ ಸ್ವೀಕರಿಸಿದವರ ದುರ್ಬಲತೆಯನ್ನು ಹೆಚ್ಚಿಸುತ್ತದೆ. ಅಂಥವರು ನಿರಂತರವಾಗಿ ಇನ್ನೊಬ್ಬರ ಕೃಪೆಗೆ, ಹಂಗಿಗೆ ಕಾಯುವಂತೆ ಮಾಡಿ ಅವರನ್ನೂ ಕೊಟ್ಟವರನ್ನೂ ಇಬ್ಬರನ್ನೂ ಈಡುಮಾಡುತ್ತದೆ. ಶಕ್ತರಾದ ಸ್ವತಂತ್ರವಾದ ಉತ್ಸಾಹಶಾಲಿಗಳಾದ ಕ್ರಿಯಾಚೈತನ್ಯಗಳಾಗುವ ಮಾರ್ಗವನ್ನು ಡಾ. ಪೈ ಅವರು ಹೀಗೆ ಉಂಟು ಮಾಡಿದ್ದಾರೆ.

ಇಷ್ಟಾದರೂ ಅವರು ಸುಲಭರು. ಎಲ್ಲರನ್ನೂ ಪ್ರೀತಿಯಿಂದ ವಿನಯದಿಂದ ಮಾತಾಡಿಸುವವರು. ತಮ್ಮಲ್ಲಿಗೆ ಕರೆದುಕೊಂಡು ಹೋಗಿ ಉಪಚಾರ ಮಾಡುತ್ತಾರೆ. ಹೋದ ಕಡೆ, ಬಂದ ಕಡೆ ಜನಕ್ಕೆ ಬೇಕಾದವರಾಗುತ್ತಾರೆ. ಕೆಲಸ ಮಾಡುತ್ತಿರುವವರ ಬೆನ್ನು ತಟ್ಟುತ್ತಾರೆ. ತಮಗೆ ತೋರಿದ ಸೂಚನೆ ಕೊಟ್ಟು ನಡೆಯುತ್ತಿರುವ ಕೆಲಸ ಇನ್ನಷ್ಟು ಚೆನ್ನಾಗಿ ಫಲಪ್ರದವಾಗುವಂತೆ ಮಾಡುತ್ತಾರೆ. ಅನುಗ್ರಹ ಮಾಡುತ್ತಿದ್ದಾರೆ ಎಂಬಂತಲ್ಲ; ಸೋದರಿಕೆಯಲ್ಲಿ, ಸ್ನೇಹದಲ್ಲಿ. ತಾವು ಸಂಚಾರ ಮಾಡುತ್ತಿರುವ ರೈಲಲ್ಲಿ ತಮಗೆ ತಿಳಿದವರು ಬೇರೆ ಗಾಡಿಗಳಲ್ಲಿ ಪ್ರಯಾಣ ಮಾಡುತ್ತಿದ್ದಾಗ ತಮಗೆ ತಂದುಕೊಟ್ಟ – ಎಷ್ಟು ಕಡೆ, ಎಷ್ಟು ಜನ! – ತಿಂಡಿತೀರ್ಥ ಹಣ್ಣುಹಂಪಲನ್ನು ಇವರಿಗೆ ಹಂಚುತ್ತಾರೆ. ತಮ್ಮಲ್ಲಿಗೆ ಕರೆದೊ ಅವರಿರುವಲ್ಲಿಗೆ ತಾವೇ ಹೋಗಿ ಕುಳಿತೊ ನಿರಾಡಂಬರವಾಗಿ ನಡೆಯುವ ವೃತ್ತಿ ಅವರದು. ತಮ್ಮವರು ಎಂದಲ್ಲ, ಹೊರಗಿನವರು ಎಂದಲ್ಲ, ವಿದೇಶಿಗಳು ಎಂದಲ್ಲ. ಯಾರಿಗೆ ತೋರಿಸಬೇಕಾದ ಮರ್ಯಾದೆ ಅವರಿಗೆ ತೋರಿಸಿ, ತಮಗೆ ಅಗತ್ಯವೆಂದು ತೋರುವ ಉಪಚಾರ ವಸತಿಸೌಕರ್ಯಗಳನ್ನು ಒದಗಿಸಿ, ಅವರು ನೆಮ್ಮದಿಯಾಗಿದ್ದು ಸಂತೋಷವಾಗಿ ಹಿಂದಿರುಗುವಂತೆ ಮಾಡುವ ಶಕ್ತಿ ನಾನು ಪೈ ಅವರಲ್ಲಿ ಕಂಡಷ್ಟು ಬೇರೆ ಎಲ್ಲಿಯೂ ಕಂಡಿಲ್ಲ. ಒಂದು ಸಮಯದಲ್ಲಿ ಒಂದು ನಿರ್ಣಯಕ್ಕೆ ಬಂದರೆಂದರೆ ಆ ನಿರ್ಣಯ ಸರಿ ಎಂದು ತಮಗೆ ತೋರಿದಾಗ ಅದರಂತೆ ನಡೆದಾರೇ ಹೊರತು ಅದಕ್ಕೆ ಬೇರೆಯಾಗಿ ಅವರ ವರ್ತನೆ ಸಲ್ಲುವುದಿಲ್ಲ.

ನಮ್ಮಲ್ಲಿ ಎರಡು ವಿಧಾನಗಳಿವೆ; ಮೊದಲಿಂದ ಇವು ಬಾಳದಾರಿಯ ವಿವೇಚನೆಗಳು. ಒಂದು ಸಂಕೋಚ ಮಾರ್ಗ; ಇನ್ನೊಂದು ವಿಕೋಚ ಮಾರ್ಗ. ಇದಕ್ಕೆ ಬೇರೆ ಪದಗಳೂ ಬಳಕೆಯಾಗುವುದುಂಟು. ಒಂದು ಜೀವ ಕೃತಾರ್ಥವಾಗಬೇಕಾದರೆ ಅದು ಎಷ್ಟು ದೊಡ್ಡದಾಗಿ ಬೆಳೆಯಬಹುದೊ ಅದರ ಆಳ ಎತ್ತರ ವಿಸ್ತಾರ ಲೋಕದ ಸಮಸ್ತವನ್ನೂ ಸಂಗ್ರಹಿಸಬೇಕು – ಎಂಬುದು ಎರಡರಲ್ಲಿಯೂ ನೆಲಸು. ಈ ಸಮಸ್ತದ ಸಂಗ್ರಹಣೆ ಸಾಧಿಸುವಂತೆ ತಾವಿದ್ದಲ್ಲಿಯೇ ಸಂಸ್ಕಾರಕಾರಿಯಾಗುವಂತೆ ತಮ್ಮ ಆತ್ಮಶಕ್ತಿಗೂ ಅಂತಃಕರಣಶುದ್ಧಿಗೂ ಸೌಹಾರ್ದದಿಂದ ಕೂಡಿದ್ದು ಅದರ ಪರಾಂಬರಿಕೆಗೆ ಬರುವಂತೆ ಮಾಡಿಕೊಳ್ಳುವುದು ಸಂಕೋಚ ಮಾರ್ಗ. ಸಮಸ್ತವನ್ನೂ ನೆಲಸುವಂತೆ ಲೋಕವಿಸ್ತಾರವಾಗಿ ಬೆಳಸುವುದೂ ಅಲ್ಲಿ ಎಲ್ಲವನ್ನೂ ತಮಗೆ ಸಂಬಂಧಿಸಿದಂತೆಯೇ ಭಾವಿಸಿ ನಡೆದುಕೊಳ್ಳುವುದೂ ವಿಕೋಚ ಮಾರ್ಗ. ಸುತ್ತಲ ಎಲ್ಲವನ್ನೂ ತಮ್ಮದೇ ಎಂದು ಅಲ್ಲಿನ ವ್ಯಾಪಾರವನ್ನೆಲ್ಲ ತಮ್ಮ ಆತ್ಮವಿಲಾಸಕ್ಕೆ ಸಂಬಂಧಪಟ್ಟ ಕ್ರಿಯಾರಂಗ, ಅನುಭವರಂಗ ಎಂದು ಎಣಿಸುವ ಭಾವನೆ, ವ್ಯವಹಾರ ಈ ಎರಡರಲ್ಲಿಯೂ ಇದ್ದರೂ ಒಂದು ತನ್ನಲ್ಲಿ ತಾನು ತುಂಬಿಕೊಂಡು ಕೃತಾರ್ಥವಾಗಬಯಸುತ್ತದೆ; ಇನ್ನೊಂದು ಎಲ್ಲಕ್ಕೂ ವ್ಯಾಪಿಸಿ ಎಲ್ಲವನ್ನೂ ತನ್ನನ್ನೂ ಹೊರಗೆಲ್ಲಿಗೂ ಸಂಬಂಧಿಸಿಕೊಳ್ಳುವ ಮಾರ್ಗ. ಈ ಸಫಲತೆಯ ಸಾಧನೆ ಲೋಕಕ್ಕೆ ಹೆಚ್ಚು ಉಪಕಾರಿಯಾಗುತ್ತದೆ. ಮಾಧವ ಪೈಗಳದು ಹೀಗೆ ಒಂದು ವಿಕ್ಷೇಪ ಶಕ್ತಿ; ಮಾರ್ಗ ವಿಕೋಚಮಾರ್ಗ. ಇದು ಒಂದು ಜೀವ ಕೃತಾರ್ಥವಾಗುವ ಸಾಧನಾ ಮಾರ್ಗವಾಗಿದೆ. ಇದನ್ನು ಗುರುತಿಸಿ ಸಂತೋಷಪಟ್ಟು ಕೃತಜ್ಞತೆ ತೋರುವ ಭಾರ ಸರ್ವರಿಗೂ ಆಗಬೇಕು. ಈಶಾವಾಸ್ಯದಲ್ಲಿ 'ಕ್ರತೋ ಸ್ಮರ ಕೃತಂ ಸ್ಮರ' ಎಂಬ ವಾಕ್ಯವಿದೆ. ಈ ಸ್ಮರಣೆ ಲೋಕ ಸಲ್ಲಿಸಬೇಕಾದ ಋಣಭಾರ. ಆ ಮೂಲಕ ಮಾನವನ ಸಂಸ್ಕಾರ ಎರಡೂ ಕಡೆ, ಎಲ್ಲ ಕಡೆ ಬೆಳೆಯುವಂತಾಗುತ್ತದೆ. ನಮ್ಮ ನಾಡು ಪುರಸ್ಕರಿಸಿದ ಧರ್ಮಕಾಂಡದಲ್ಲಿ ಈ ಬಗೆಯ ಕ್ರಿಯೆ ಋಣ ತೀರಿಸಿದರೆ ಜೀವ ಕೃತಾರ್ಥವಾದಂತೆ ಎಂದು ಕಲ್ಪನೆ. ಪೈ ಅವರದು ಅಂಥ ಕೃತಾರ್ಥ ಜೀವನ.

ಪ್ರೊ. ಕೆ. ವಿ. ಅಯ್ಯರ್

ನಮ್ಮ ಕಾಲದಲ್ಲಿ ಎ. ವಿ. ಸ್ಕೂಲ್ ಎಂಬ ಪಾಠಶಾಲೆಗಳಿದ್ದವು. ಇಂದಿನ ಮಿಡಲ್ ಸ್ಕೂಲ್‌ಗಳಿಗೆ ಹಿಂದೆ ಆ ಹೆಸರಿತ್ತು. ಈಗ ಆಂಗ್ಲೊ ಇಲ್ಲ; ವರ್ನಾಕ್ಯುಲರ್ ಗಡಿ ಪಾರಾದ್ದು; ವರ್ಜ್ಯ. ಅವುಗಳಲ್ಲಿ ಒಂದು, ಎರಡು, ಮೂರನೆಯ ಫಾರ್ಮ್‌ಗಳಿರುತ್ತಿದ್ದವು. ಮೂರು ವರ್ಷ ಪಾಠಗಳಾಗಿ ಕಡೆಗೆ ಲೋವರ್ ಸೆಕೆಂಡರಿ ಪರೀಕ್ಷೆ ನಡೆದು ಅಲ್ಲಿ ಉತ್ತೀರ್ಣರಾದವರಿಗೆ ಸಂಸ್ಥಾನದ ವಿದ್ಯಾ ಇಲಾಖೆ ಸರ್ಟಿಫಿಕೇಟ್ ಕೊಡುತ್ತಿತ್ತು. ಹಾಗೆ ಉತ್ತೀರ್ಣರಾದವರು ಹೈಸ್ಕೂಲಿಗೆ ಪ್ರವೇಶಿಸಬಹುದಾಗಿತ್ತು. ನಾವು ಬೆಂಗಳೂರು ಕೋಟೆಯಲ್ಲಿರುವ (ಆಗ) ಸರ್ಕಾರಿ ಹೈಸ್ಕೂಲಿದ್ದ ಕಟ್ಟಡದಲ್ಲಿ ಬೆಳಗ್ಗೆ ನಡೆಯುತ್ತಿದ್ದ ಎ. ವಿ. ಸ್ಕೂಲ್ ತರಗತಿಗಳಿಗೆ ಹೋಗುತ್ತಿದ್ದೆವು. ಆಗ ಇನ್ನೂ ಕೋಟೆಗೋಡೆ, ಕಂದಕ, ಟಿಪ್ಪೂಸುಲ್ತಾನರ ಧ್ವಜದ ದಿಬ್ಬ ಇದ್ದವು; ಬಲಕ್ಕೆ ತಾಲೂಕ್ ಕಚೇರಿ. ಅದರೆದುರಿಗೆ ಸೆಂಟ್ರಲ್ ಪೊಲೀಸ್ ಸ್ಟೇಷನ್ ಇದ್ದಿತು. ಕಚೇರಿಯ ಪಕ್ಕದಲ್ಲಿ ವೆಂಕಟರಮಣಸ್ವಾಮಿಯ ಗುಡಿ. ಸುಮಾರು ೧೯೧೨ರ ಹೊತ್ತಿಗೆ ಹೈಸ್ಕೂಲ್ ಅಲ್ಲಿಗೆ ಹೋದ ತರುವಾಯ ನಮ್ಮ ಪಾಠಗಳು ಹನ್ನೊಂದರಿಂದ ಸಂಜೆ ಐದರವರೆಗೆ ಕ್ರಮವಾಗಿ ನಡೆಯತೊಡಗಿದವು. ಹೈಸ್ಕೂಲಿನ ಮರ್ಯಾದೆ ಬೇರೆ ಕಡೆಗೆ ಸಾಗಿದುದರಿಂದ ನಮ್ಮ ಗೌರವ ಹೆಚ್ಚಾಯಿತು. ಇದು ಉಪಾಧ್ಯಾಯರಿಗೂ ವಿದ್ಯಾರ್ಥಿಗಳಿಗೂ ಇಬ್ಬರಿಗೂ ಹರ್ಷ ತಂದ ಸಂಗತಿ. ನಮ್ಮ ಜೊತೆಯಲ್ಲಿ ಓದಿದ ವಿದ್ಯಾರ್ಥಿಗಳಲ್ಲಿ ಅನೇಕರು I.C.S., D.Sc., Ph.D. ಪದವಿ ಪಡೆದು ದೊಡ್ಡ ಹುದ್ದೆಗಳಿಗೆ ಹೋದರು. ನಾಲ್ಕಾರು ಮಂದಿ ಅಂಥ ಹುದ್ದೆಗೆ ಬಂದವರು ಇನ್ನೂ ಭಾಗ್ಯವಶಾತ್ ಇದ್ದಾರೆ.

ಆಗ್ಗೆ ಬೆಂಗಳೂರು, ಮೈಸೂರು, ತುಮಕೂರು – ಮೂರು ಎ. ವಿ. ಸ್ಕೂಲ್‌ಗಳೂ ಹೆಸರಾದವು. ತುಮಕೂರು, ಕೋಲಾರಗಳಿಂದ ಬೆಂಗಳೂರಿಗೆ, ಹಾಸನದಿಂದ ಮೈಸೂರಿಗೆ ಓದಲು ಹೋಗುವುದು ವಾಡಿಕೆ. ತುಮಕೂರಿಂದ ಹೈಸ್ಕೂಲಿಗೆ ಬಂದ ವಿದ್ಯಾರ್ಥಿಗಳು ಅಲ್ಲಿ ಮಾನ್ಯರಾಗುತ್ತಿದ್ದರು. ಹೈಸ್ಕೂಲುಗಳಲ್ಲಿಯೂ ಇವೇ ಹೆಸರಾದವು. ಆಮೇಲೆ ಕೋಲಾರ, ಹಾಸನ ಎಣಿಕೆಗೆ ಬರುತ್ತಿದ್ದವು. ಇವುಗಳಲ್ಲಿ ಹುರುಡು; ಪರೀಕ್ಷೆಯಲ್ಲಿ ಕ್ಲಾಸ್ ತೆಗೆದುಕೊಂಡು ಪಾಸು ಮಾಡುವವರು ಹೆಚ್ಚು ಸಂಖ್ಯೆಯವರಾಗಬೇಕು ಎಂದು. ನನ್ನ ಜೊತೆಗೆ ಓದುತ್ತಿದ್ದವರಲ್ಲಿ ಆಗ ಅಷ್ಟು ಹೆಚ್ಚಿಗೆ ಕಣ್ಣಿಗೆ ಬೀಳದ ವ್ಯಕ್ತಿ ಈಗಿನ ಪ್ರೊ. ಕೆ. ವಿ. ಅಯ್ಯರ್. ಅದು ಕೆ. ವೆಂಕಟೇಶ ಅಯ್ಯರ್ ಎಂಬುದರ ಸಂಕುಚಿತ ನಾಮ. ಕೈಲಾಸಂ ಅವರನ್ನು 'ವೆಂಕಟೇಶ್' ಎಂದೇ ಕರೆಯುತ್ತಿದ್ದರು. ಇತರ ಕೆಲವರು ಓದಿನಲ್ಲಿ ಹೆಮ್ಮೆ ಪಡೆದರು; ನಾವು ಶ್ರೀಸಾಮಾನ್ಯರು. ಆದರೆ ಅಯ್ಯರ ಸಜ್ಜನತೆ ಆಗಲೂ ಇಂದಿನಂತೆಯೇ ಇತ್ತು. ಮುಚ್ಚಿದ ಕುತ್ತಿಗೆ ಕೋಟು, ದಟ್ಟಿ, ಟೋಪಿ, ಕಿವಿಯಲ್ಲಿ ಕಡುಕಿತ್ತೆಂದೂ ಕೆನ್ನೆಯ

ಮೇಲೆ ಸಣ್ಣ ಮಚ್ಚೆಯಿತ್ತೆಂದೂ ನೆನಪು. ನಾನು ಅವರನ್ನು ಕೇಳಿಲ್ಲ; ಇದು ನಿಜವೊ ಸುಳ್ಳೊ ಎಂದು.

ಲೋವರ್ ಸೆಕಂಡರಿ ದಾಟಿದಮೇಲೆ ಅವರು ವೆಸ್ಲಿಯನ್ ಮಿಷನ್ನಿಗೆ ಹೋದರೆಂದು ಕಾಣುತ್ತದೆ. ನಾನು ಸರ್ಕಾರಿ ಹೈಸ್ಕೂಲಿಗೆ, ಅಲ್ಲಿಂದ ಮುಂದೆ ಮೈಸೂರಿಗೆ ಹೋಗಿ ವಿದ್ಯಾಭ್ಯಾಸ ಮುಗಿಸಿ, ಅಲ್ಲಿ ಆರೆಂಟು ವರ್ಷ ಹೈಸ್ಕೂಲು ಉಪಾಧ್ಯಾಯನಾಗಿದ್ದು, ಬೆಂಗಳೂರಿನ ಇಂಟರ್‌ಮೀಡಿಯಟ್ ಕಾಲೆಜಿಗೆ ಕನ್ನಡದ ಉಪಾಧ್ಯಾಯನಾಗಿ ೧೯೨೮ರಲ್ಲಿ ಬಂದೆ. ಆಮೇಲೆ ಪುನಃ ಅವರ ದರ್ಶನ ಆಯಿತು. ಅಷ್ಟು ಹೊತ್ತಿಗೆ ವೆಂಕಟೇಶ ಅಯ್ಯರ್ ಪ್ರೊ. ಕೆ. ವಿ. ಅಯ್ಯರ್ ಆಗಿದ್ದರು. ಅವರ ವ್ಯಾಯಾಮ ಶಿಕ್ಷಣ ಶಾಲೆ ಏರ್ಪಟ್ಟು, ಅವರು ನೂರಾರು ಜನಕ್ಕೆ ಆರೋಗ್ಯವನ್ನೂ ಶಕ್ತಿಯನ್ನೂ ಬಲವನ್ನೂ ತಂದುಕೊಟ್ಟು, ಶಿಸ್ತು ಜೀವನವನ್ನು ಕಲಿಸಿ ಖ್ಯಾತರಾಗಿದ್ದರು. ಅವರಿಗೆ ದೇಶವಿದೇಶಗಳಲ್ಲಿ ಅಂದಿಗಾಗಲೇ ಕೀರ್ತಿ ಬಂದಿತ್ತು. ವ್ಯಾಯಾಮದಲ್ಲಿ ಕ್ರಮವಾಗಿ ಶಿಕ್ಷಣ ಪಡೆಯದವರು ಅವರ ಸೂರ್ಯನಮಸ್ಕಾರದ ಚಿತ್ರಗಳನ್ನು ಕೊಂಡು ದೇಹಶಕ್ತಿಯನ್ನು ಕುದುರಿಸಿಕೊಂಡರು. ಅವರ ಪ್ರದರ್ಶನಗಳು ರೋಮಾಂಚಕಾರಿಯಾಗಿದ್ದವು, ಜನಪ್ರಿಯವಾಗಿದ್ದವು. ಯಾವಯಾವುದೊ ವಿಶೇಷ ಶಕ್ತಿ, ಗುಪ್ತಿಗಳಲ್ಲಿ ಅವರು ಹೆಸರಾದವರೆಂದು ಜನ ಆಡಿಕೊಳ್ಳುತ್ತಿದ್ದರು. ಹೊಟ್ಟೆಯ ಯಾವುದೋ ಒಂದು ಭಾಗದ ಒಂದು ಮಾಂಸಖಂಡದ್ದೊ ಮತ್ತೊಂದೊ – ಅವರಿಗೇ ಗೊತ್ತು, ನನಗೇನು ಗೊತ್ತು! – ಅತಿಶಯವಾದ ಗಡಸನ್ನು ಬಲಿಸಿದ್ದರೆಂದೂ ಮುಷ್ಟಿಕಾಳಗ ಮಾಡುವ ಗಟ್ಟಿಗರು ಅಲ್ಲಿ ಬಡಿದರೂ ಅವರು ತಡೆದುಕೊಳ್ಳುತ್ತಿದ್ದರೆಂದು ಪ್ರತೀತಿ. ಮೊನ್ನೆ ವಿನೋದಕ್ಕಾಗಿ ನಾನೆಂದುದುಂಟು: ಆ ಖಂಡಗಳು ನನ್ನ ಮೈಯಲ್ಲಿಯೂ ಇದ್ದಿದ್ದರೆ, ನಾನೂ ಅವುಗಳ ನಿಯಮವನ್ನೂ ಚಲನೆಯನ್ನೂ ಕಾಣಿಸುತ್ತಿದ್ದೆ ಎಂದು. ಮಾಂಸಖಂಡಗಳನ್ನು ಕಸಾಯಿ ಅಂಗಡಿಯಿಂದ ಕೊಂಡುತರಬಹುದು, ತಿನ್ನಲು ಬರುತ್ತವೆ ರಾಕ್ಷಸರಿಗೆ – ಎಂದರು. ಅಂಥ ಅಯ್ಯರ್ ನಮ್ಮ ಎ. ವಿ. ಸ್ಕೂಲ್ ಸಹಪಾಠಿ ಎಂದು ನಾನು ಕನಸುಮನಸಲ್ಲಿಯೂ ಎಣಿಸಿರಲಿಲ್ಲ.

ಆ ಕಾಲದ ಒಂದು ಸಂಗತಿಯನ್ನು ನಿವೇದಿಸಬಹುದು. ಯೂಜೇನ್ ಸ್ಯಾಂಡೊ ಎಂಬವರು ಬಹು ಪ್ರಸಿದ್ಧರು. ಯೂರೋಪಿನಲ್ಲಿ ಯೂಜೇನ್ ಸ್ಯಾಂಡೊ, ಭಾರತದಲ್ಲಿ ರಾಮಮೂರ್ತಿ ಪ್ರಚಂಡ ಸತ್ವರೆಂದು ಹೆಸರಾಗಿದ್ದರು. ನಡೆಯುವ ಮೋಟಾರನ್ನು ನಿಲ್ಲಿಸುತ್ತಾರೆ; ಹೊಟ್ಟೆಯ ಮೇಲೆ ಕಲ್ಲುಚಪ್ಪಡಿ ಹಾಕಿಸಿಕೊಂಡು ಅದನ್ನು ಒಡಸುತ್ತಾರೆ; ಬಹು ದೊಡ್ಡ ಭಾರವನ್ನು ಹಲ್ಲು ಸಾಲುಗಳ ನಡುವೆ ಹಿಡಿದು ತೂಗುತ್ತಾರೆ; ಬಲವಾದ ಕಬ್ಬಿಣದ ಸರಪಣಿಯನ್ನು ಭುಜ, ಬೆನ್ನುಸಾಹಸಗಳಿಂದ ಮುರಿಯುತ್ತಾರೆ – ಮುಂತಾದ ಅದ್ಭುತಗಳನ್ನು ನಡಸುತ್ತಿದ್ದರು. ಗಂಡು ಸ್ಯಾಂಡೋಗಳಂತೊ ಹೆಣ್ಣು ಸ್ಯಾಂಡೋಗಳೂ ಒಬ್ಬಿಬ್ಬರಿದ್ದರು. ರಾಮಮೂರ್ತಿಯವರು ಮೊದಲು ಬಂದ ಮೇಲೆ ನಾವು ಅಂಥವರನ್ನು ಕಂಡಿದ್ದೆವು. ಪಹಲವಾನ್ ಆಗಬೇಕೆಂಬ ಬಯಕೆ ಬಾರದಿದ್ದರೂ ವ್ಯಾಯಾಮ ಅಂಗಸಾಧನೆಗಳಿಂದ ಶಕ್ತರೂ ದಡುವತ್ತಾದವರೂ ಆಗಬೇಕೆಂದು ನಮ್ಮಲ್ಲಿ ಕೆಲವರ ಆಸೆ. ಕೈ – ಮೊಳಕೈ ಎಷ್ಟು ಬಿಗಿ ಮಾಡಿದರೂ ಒಂದು ಗಜ್ಜುಗದಷ್ಟು ಮಾಂಸಖಂಡ ಕಾಣದ

ನನ್ನಂಥವರಿಗಂತೂ ಈ ಚಪಲ ಅತೀವವೇ. ದುರ್ಬಲರಿಗೆ ಮಿಲಿಟರಿ ಸಾಹಸಗಳ ಚಪಲ ಹುಟ್ಟುವುದೂ ಜಂಬ ಕೊಚ್ಚುವುದೂ ಸಹಜವಂತೆ. ಅವರಲ್ಲಿಗೆ ಹೋಗಿ ವಿದ್ಯಾರ್ಥಿಗಳಿಗೆ ಪ್ರಿಯರಾದ ಅವರನ್ನು ಒಲಿಸಿಕೊಂಡು, ಅನೇಕ ಬಗೆಯಾದ ಅಂಗಸಾಧನೆಯ ಅಭ್ಯಾಸಗಳನ್ನು ಕಲಿತು, ಎರಡು ದಿವಸ ಅಭ್ಯಾಸ ಮಾಡಿ, ತಡೆಯಲಾರದಷ್ಟು ಮೈನೋವು ಬಂದು 'ಈ ಶನಿ ಯಾರಿಗೆ ಬೇಕು; ನಡೆದು ಸ್ಕೂಲಿಗೆ ಹೋಗುವುದಕ್ಕೆ ಕಾಟ ಕೊಡುವ ಮೊಣಕಾಲು ಕಟ್ಟು (ಕಾಫ್ ಮಸಲ್ – ಎಲ್ಲಿತ್ತೊ ಆ ಭಾಗ!) ಇಷ್ಟು ನೋಯಲು ತೊಡಗಿದರೆ ಸಾಧಿಸುವ ಪುಣ್ಯ ಯಾವುದು' ಎಂದುಕೊಂಡು, ಸಾಮಾನ್ಯವಾದ ನಡಿಗೆಯ ಓಟಗಳ ವಿಧಾನಕ್ಕೆ ಹಿಂತಿರುಗಿದೆ. ಈ ಓಟದ ವಿಧಾನ ದೈಹಿಕವಾಗಿ ಬಹುಕಾಲ ನಡೆಯಿತು. ಓಟ, ಚಾಮರಾಜಪೇಟೆ ಮೊದಲನೆ ಬೀದಿ ಗೋರಿ ಸ್ಥಳದಿಂದ ತೊಡಗಿ, ವೆಂಕಟರಮಣಸ್ವಾಮಿ ಗುಡಿಯ ಕಡೆ ಬಲಕ್ಕೆ ತಿರುಗಿ, ಇದುರಿನ ಆಟದ ಮೈದಾನವನ್ನು ದಾಟಿ, ಈಗಿನ ಉತ್ತರಾದಿ ಮಠದ ರಸ್ತೆಯಿಂದ ಇಂದಿರುವ ಸಾಹಿತ್ಯ ಪರಿಷತ್ ಮಂದಿರದ ಎಡಕ್ಕೆ ತಿರುಗಿ, ಮನೆಗೆ ಹಿಂತಿರುಗುವುದು ಒಳ್ಳೆಯ ವ್ಯಾಯಾಮವೇ. ವಯಸ್ಸು ಹಣ್ಣಾಗಿ, ಅಷ್ಟು ದೂರ – ಏಕೆ, ಅದರ ಮೂರರಲ್ಲಿ ಒಂದು ಭಾಗ – ನಡೆಯುವುದು ಗಾಸಿ ತರುತ್ತಿರುವಾಗ ಆ ಓಟದ ನೆನಪು ಹೆಮ್ಮೆಯದು; ನಾನು ಹಾಗೆ ಮಾಡಬಲ್ಲವನಾಗಿದ್ದೆ ಎಂಬುದು ಇದನ್ನು ತಿಳಿಸಲು ಕಾರಣ. ರಾಮಮೂರ್ತಿಯವರು ನಮಗೆ ತಿಳಿಸಿದುದು ಒಂದು ಸಂಗತಿ: ಪುಷ್ಟಿಕರ ಆಹಾರದ ಪಾಕ ಹೇಗೆ ಅಗತ್ಯ ವ್ಯಾಯಾಮ ಸಿದ್ಧಿಗೆ ಎಂಬುದು. ಇದು ಚಪಲವಾಗಿ ಬಯಕೆಯಾಗುವಂತಾಯಿತು. ಒಂದು ಬಗೆಯ ಹಲ್ವ, ಹರೀರ ತಯಾರು ಮಾಡುವ ವಿಧಾನ. ಹಸಿಕಡಲೆ ತಿಂದು ಸಾದಾ ಪಹಲವಾನ್ ದೇಹವನ್ನು ಬೆಳಸುವ ವಿಧಾನ ವಿದ್ಯಾರ್ಥಿಗಳಿಗೆ ಬೇಡ. ಅದು ದೇಹವನ್ನು ಜಡಗೊಳಿಸುತ್ತದೆ. ಹೊಟ್ಟೆಯೊಳಗೆ ಗಾಳಿ ತುಂಬಬಲ್ಲದು, ಆದ್ದರಿಂದ. ಹೆಚ್ಚು ಸಾರವತ್ತಾದ ಸುಖವಾದ ರುಚಿಯಾದ ವಿಧಾನ ಈ ಹಲ್ವದ್ದು. ತುಂಬ ಆಪ್ಯಾಯನಕರ. ಕಡಲೆಯಾಗಲಿ, ಗೋಧಿಯಾಗಲಿ ನೆನೆದದ್ದು, ಹಸಿಯದು, ಹಸಿಯ ವಾಸನೆಯವು. ಗ್ರಹಣೆ ಸೂಕ್ಷ್ಮವಾದವರಿಗೆ ಆಹಾರದ ಕೆಲವು ವಾಸನೆಗಳು ಕಷ್ಟ. ಹರೀರ, ಹಲ್ವ ಹಾಗಲ್ಲ ಮಾಡುವುದೆ ಒಂದು ಸೊಗಸು; ಅದಕ್ಕೆ ಬೀಳುವ ಪದಾರ್ಥಗಳು ಉತ್ತಮವಾದವು. ಗೋಧಿ, ಹಾಲು, ತುಪ್ಪ, ಬಾದಾಮಿ, ಲವಂಗ, ಜಾಯಿಕಾಯಿ, ದ್ರಾಕ್ಷಿ, ಕಿಸ್ಮಿಸ್ ಅಥವಾ ಕರಬೂಜ ಬೀಜ, ಸಕ್ಕರೆ (ಅಕ್ರೋಟ್, ಚಿಲಗೋಜ, ಪಿಸ್ತ, ಹಿಂದೂಸ್ತಾನಿ ಹೆಸರುಗಳು) ಪುಷ್ಕಳವಾಗಿ ಬಿದ್ದಾಗ ದೊರೆಯುವ ಪಾಕ ಶ್ರೀಮಂತ; ಮೋಹಕ. ಪಾಕ ಕಡೆಗೆ ಹೇಗೇ ಇಳಿಯಲಿ, ಅವಕ್ಕೆ ಬೀಳುವ ಪದಾರ್ಥಗಳು ಎಂಥೆಂಥವು? ಕಲ್ಪನೆಗೆ ಬಂದಾಗ ತೊಡಗಿ ಬಾಯಲ್ಲಿ ನುಡಿದರೆಯೇ ತೋಳಿಂಡ, ಮೊಣಕಾಲು ಮಾಂಸ ಬೆಳೆಯುತ್ತದೆ. ಅಂತಹ ಸಹಜ ಆಕರ್ಷಣೆ ಅವುಗಳದ್ದು. ಕಡಲೆ ತಿಂದು ಮಡ್ಡಿಯಾಗುವುದಕ್ಕಿಂತ ಶಕ್ತಿ ಬರಲಿ ಬಾರದಿರಲಿ, ಜೀರ್ಣವಾಗಲಿ ಬಿಡಲಿ, ಈ ಪುಷ್ಟಿ ಪಡೆಯುವುದು ಲೇಸೆಂದು ಮನಸ್ಸು ಒಪ್ಪಿಕೊಂಡದ್ದು ನನ್ನ ಪಾಲಿನ ಭಾಗ್ಯ. ಇದಕ್ಕೆ ಹಣ ಒದಗಿಸುವುದು ಹೇಗೆ ಎಂಬುದು ಮಾತ್ರ ಚಿಂತೆಯೇ ಹೊರತು ಮಾಡುವುದಕ್ಕಾಗಲಿ ತಿನ್ನುವುದಕ್ಕಾಗಲಿ ನನಗೆ ಮೊದಲಿಂದಲೂ ಉಮೇದೇ. ಸ್ಯಾಂಡೋಗಳನ್ನು ಕುರಿತ ಗೌರ

ಕಡಮೆ ಆಗಲಿಲ್ಲ. ಅಂಗಸಾಧನೆ ಮಾಡುವ ಶಕ್ತಿ ಇಲ್ಲದವರಿಗೆ ಗಟ್ಟಿ ಶರೀರ ಸಿದ್ಧಿ ಶಕ್ಯವಾದರೆ ಮೇಲೆನಿಸಿತ್ತು. ಆತ್ಮನಾತ್ಮವಿವೇಕ ಕಡೆಕಡೆಯ ಹೈಸ್ಕೂಲು ವರ್ಷಗಳಿಂದ ಭಾಷಣಗಳಲ್ಲಿ ಒದಿನಲ್ಲಿ ದೊರಕಿ ದೇಹ ಕ್ಷೀಣಿಸಿದರೂ ಲಕ್ಷ್ಯವಿಲ್ಲ, ಆತ್ಮಸಾಧನೆಯ ಕಡೆಗೆ ಲಕ್ಷ್ಯ, ಗಮನ ಹೋಗಬೇಕು ಎಂಬ ಒಲವು ಉಂಟಾಗಿ ಎರಡಕ್ಕೂ ಸೊನ್ನೆ ಬಿತ್ತು. ಆತ್ಮದ ಪರಿಚಯ ಸುಲಭವಲ್ಲದ್ದು ದೊಡ್ಡ ಆತಂಕ. ಆ ಮಾತುಗಳನ್ನು ಆಡುವವರನ್ನು ಕಂಡರೆ ನನಗೆ ಕಾರಂತರ ಬುರ್ನಾಸ್ ಎಂಬ ಶಬ್ದ ನೆನಪಿಗೆ ಬರುತ್ತದೆ. ಇದರ ಫಲಾಫಲಗಳು ಈ ದೀರ್ಘ ವಯಸ್ಸಿನವರೆಗೆ ಲಭಿಸಿದ ಅಂಶವಾಗಿ ಮಾತ್ರ ಬೆಳೆದಿದೆ.

೧೯೨೮–೨೯ರ ಹೊತ್ತಿಗೆ ಒಂದು ದಿನ ಅಕಸ್ಮಾತ್ತಾಗಿ ನಮ್ಮ ಮನೆಗೆ ಅಯ್ಯರೂ ಟಿ. ಪಿ. ಕೈಲಾಸಂ ಅವರೂ ದಯಮಾಡಿಸಿದರು. ನಮ್ಮ ಜೊತೆಯಲ್ಲಿ ಎ. ವಿ. ಸ್ಕೂಲಲ್ಲಿ ಟಿ. ಪಿ. ಕೃಷ್ಣಸ್ವಾಮಿ ಓದಿದ್ದರು. ಇವರ ದೊಡ್ಡ ಅಣ್ಣ ಟಿ. ಪಿ. ಕೈಲಾಸಂ. ನಮ್ಮ ಮನೆಯ ಹತ್ತಿರದಲ್ಲಿದ್ದ ಟಿ. ಪರಮಶಿವಯ್ಯರ್ ಮನೆಗೆ (White House) ನಾನು ಕೃಷ್ಣಸ್ವಾಮಿಯನ್ನು ನೋಡಲು ೧೯೧೨ರಲ್ಲಿ ಹೋಗುತ್ತಿದ್ದುದು ಉಂಟು. ಆಗಿನ್ನೂ ಕೈಲಾಸಂ ಇಂಗ್ಲಂಡಲ್ಲೇ ಇದ್ದರು. ಅವರ ನಡುವೆಯ ಸೋದರ ತ್ಯಾಗರಾಜನ್ ಇನ್ನೂ ಇದ್ದು, ಮುಂದಿನ ಒಂದು ವರ್ಷದಲ್ಲಿ ಮದರಾಸ್ ಅಧಿಪತ್ಯದ ಮೆಟ್ರಿಕ್ಯುಲೇಷನ್ ಪರೀಕ್ಷೆಯಲ್ಲಿ ಪಾಸಾದ ಮಂದಿಯಲ್ಲಿ – ಆ ವರ್ಷ ಶೇ.೮ ಮಾತ್ರ ಪಾಸಾಗಿದ್ದದ್ದು – ಅಧಿಪತ್ಯಕ್ಕೆಲ್ಲ ಫಸ್ಟ್ ಆಗಿ ಪಾಸುಮಾಡಿ, ತಮ್ಮ ಊರಿನ ಹತ್ತಿರದಲ್ಲಿನ ತಾಮ್ರಪರ್ಣಿಯಲ್ಲಿಯೊ ಆ ಸನಿಯದ ಎಲ್ಲಿಯೊ ಈಜಲು ಹೋಗಿ ನೀರಿನಲ್ಲಿ ಮುಳುಗಿ ಕಾಲವಾಗಿದ್ದುದು ಗೊತ್ತಿತ್ತು. ಕೈಲಾಸಂ ಅವರು ಇಂಗ್ಲಂಡಿಂದ ಬಂದಮೇಲೆ ಭೂಗರ್ಭಸಂಪತ್ತಿಯನ್ನು ರೂಢಿಸುವ ಇಲಾಖೆಯಲ್ಲಿ ಆಫೀಸರಾಗಿ ಅದಕ್ಕೆ ರಾಜಿನಾಮೆ ಕೊಟ್ಟು, ಕನ್ನಡ ಸಾಹಿತ್ಯ ಪ್ರಪಂಚದಲ್ಲಿ ಗಣ್ಯರಾಗಿ ಬಗೆಬಗೆಯ ಕೀರ್ತಿ, ಅಪಕೀರ್ತಿಗಳನ್ನು ಪಡೆದು ಬೆಂಗಳೂರಲ್ಲಿ ಪ್ರಖ್ಯಾತರಾಗಿದ್ದರು. ಅತನನ್ನು ಕುರಿತು ಇದ್ದ ಜನರ ಪ್ರೀತಿ ದೊಡ್ಡದು. ಇಂಥವರಿಬ್ಬರೂ ನನ್ನನ್ನು ಹುಡುಕಿಕೊಂಡು ಬಂದುದು ಅಚ್ಚರಿ. ನಾನು ಆಗ ಹರುಕುಮುರುಕು ಕನ್ನಡ ಬರೆದು ಪ್ರಬುದ್ಧ ಕರ್ಣಾಟಕದ ಲೇಖಕವರ್ಗಕ್ಕೆ ಸೇರಿದವನಾಗಿದ್ದೆ. ಪ್ರಬುದ್ಧ ಕರ್ಣಾಟಕಕ್ಕೆ ಆಗಿನ ಕಾಲದಲ್ಲಿ ಗಳಿಕೆಯಾಗಿದ್ದ ಹಿರಿಮೆ ನನಗೂ ಒಂದು ಬೆಲೆಯನ್ನು ಕೊಟ್ಟಿತ್ತಾದೀತು. ಯೋಗಕ್ಷೇಮ ವಿಚಾರ ನಡೆದಾದ ಕೂಡಲೆ ಮುಂದಿನ ವಾರ ಬಾಗಲುಕೋಟೆಯಲ್ಲಿ ಯಾವುದೊ ಯುವಜನ ಸಮ್ಮೇಳನ ಇದೆಯೆಂದೂ ಅದಕ್ಕಾಗಿ ಇಂಗ್ಲಿಷಲ್ಲಿ ಒಂದು ಭಾಷಣ ಬರೆದಾಗಿದೆಯೆಂದೂ ಅದನ್ನು ಕನ್ನಡಿಸಿಕೊಡಲೊ ಅಥವಾ ಅದರ ಕನ್ನಡವನ್ನು ನೋಡಿ ಕೊಡಬೇಕೆಂದೊ ನನ್ನನ್ನು ಕೇಳಿದರು. ಸಂತೋಷದಿಂದ ಒಪ್ಪಿಕೊಂಡೆ. ಹದಿನೈದು ವರ್ಷದ ಹಿಂದೆ ಕಡಿದುಹೋಗಿದ್ದ ಅಯ್ಯರ ಸಂಪರ್ಕ, ಸಂದರ್ಶನ ನನಗೆ ಪುನಃ ಉಂಟಾಯಿತು. ಆಗಿನ ವೆಂಕಟೇಶ ಅಯ್ಯರ್ ಎಲ್ಲಿ? ಈಗಿನ ಪ್ರೊ. ಕೆ. ವಿ. ಅಯ್ಯರ್ ಎಲ್ಲಿ? ವಿಶ್ವಾಸ ದಿನದಿನಕ್ಕೆ ಬೆಳೆದು ನನ್ನ ಬಾಳಲ್ಲಿ ಅವರ ಸ್ನೇಹ ಕಟ್ಟಿ ಮಹಾವೃಕ್ಷದಂತಾಗಿದೆ.

'ಕೈ', ಅಯ್ಯರ್ ಇಬ್ಬರೂ ಆಗ್ಗೆ ಪುರಾಣಪುರುಷರಾಗುತ್ತಿದ್ದರು. ಹತ್ತು ವರ್ಷಗಳ ಕನ್ನಡ ನಾಟಕ ಚರಿತ್ರೆಯಲ್ಲಿ ವಿಷಯ, ಪ್ರಯೋಗ, ನಗೆಬಗೆಯಲ್ಲಿಯೂ

ಭಾಷಣಚಮತ್ಕೃತಿಯಲ್ಲಿಯೂ 'ಕೈ' ಕೀರ್ತಿ ಗಗನಕ್ಕೆ ಏರಿತ್ತು. ಎಲ್ಲಿ ಅಡಗಿತ್ತೊ ಈ ಜೀವನೋಲ್ಲಾಸ ಅವರೆಗೂ! ತಮಿಳ ಮೇಧಾವಿಯೊಬ್ಬನ ತಲೆಯಲ್ಲಿ, ಹೃದಯದಲ್ಲಿ ಕರ್ನಾಟಕದ ಈ ಸಂಸ್ಕಾರವೂ ವಾಸನೆಯೂ ಲೋಕಾನುಭವವೂ ಪ್ರತಿಭೆಯ ಉಕ್ಕೂ ಬದುಕಿನ ಪ್ರೀತಿಯೂ – ಈ ಯಾವುದೂ ಆಗಿರಲಿ – ನಾಟಕ ಸಂಭಾಷಣೆರೂಪದಲ್ಲಿ, ನಗೆ ಹಾಡುಗಳಲ್ಲಿ ಹೊರಗೆ ಬಂದು ಜನವನ್ನು ನಲಿಸಿತ್ತು. ನಾಟಕದ ಹೊಸ ತಂತ್ರ ಒಂದು ನಿರ್ಮಾಣವಾಗಿ ಹಾಡಿಲ್ಲದ, ಹೆಚ್ಚು ವೇಷವಿಲ್ಲದ, ಪುರಾಣ ಪುಣ್ಯಕಥೆಗಳಿಲ್ಲದ, ಜ್ಞಾನ, ಕರ್ಮ, ಭಕ್ತಿ, ವೈರಾಗ್ಯ, ಶಾಂತಿ, ದಿವ್ಯಸಂದೇಶಗಳಿಲ್ಲದ, ಯಾವ ಆಧ್ಯಾತ್ಮಿಕ ಉದ್ದೇಶಗಳನ್ನೂ ಪ್ರತಿಫಲಿಸದ ಜೀವನ ಪ್ರಚೋದನ ದರ್ಶನ ಹೊರಗೆ ಬಂದಿತೊ! ಇದು ನಮ್ಮ ಸಮಾಜದ ಪ್ರತಿಬಿಂಬನ ಎಂದು ಹೇಳಿದರೂ ಅದಕ್ಕೆ ಕನ್ನಡಿ ಹಿಡಿಯುವೆನೆಂಬ ಮಾತು ಅದರ ಆಕೃತಿಯನ್ನು ನಗೆಯ ಬಣ್ಣದ ಬೆಳಕಿಗೆ ಹಿಗ್ಗಿಸಿತು; ಕೆಲವೇಳೆ ವಿಕೃತಗೊಳಿಸಿ ಕಾಣಿಸಿತು. ಕಾರ್ಟೂನ್, ಕ್ಯಾರಿಕೇಚರ್ ಇವೂ ಕಲಾ ಪ್ರಕಾರಗಳೇ. ವಿಮರ್ಶೆಯ ಕನ್ನಡಿಯಲ್ಲಿ * ಕಾಣುವಂತೆ ಕಾಣಿಸಿತು. ಬಳಕೆಯಲ್ಲಿಲ್ಲದ ಮೌಲ್ಯಗಳನ್ನು ಕಾಣಿಸಿತು. ಐತಿಹಾಸಿಕ, ಪೌರಾಣಿಕ ನಾಟಕಗಳು, ಸಂಗೀತ ನಾಟಕಗಳು ಹೊಸ ಕಾಲದವರ ಕಣ್ಣಿಗೆ ಗತಕಾಲದ ವೈಭವಗಳಂತೆ ಕಾಣತೊಡಗಿದವು. ನಂ ಕಂಪ್ನಿ, ಶೂರ್ಪನಖೀ ಕುಲವೈಭವದಂಥ ಅಂಕಗಳು ಹಿಂದಿನ ನಾಟಕ ವಿಧಾನಗಳನ್ನು ಗೇಲಿಗೆಬ್ಬಿಸಿದವು. ಅಯ್ಯರ್ ಅಂಗಸಾಧನೆಯ ಶಿಕ್ಷಣಶಾಲೆಯೂ ವಿದ್ಯಾರ್ಥಿವರ್ಗದಲ್ಲಿ ಅವರು ಗಳಿಸಿದ್ದ ಸಾಹಸದ ಕೀರ್ತಿಯೂ ಕಣ್ಣು ಹೊಡೆವಂತೆ ಹಿರಿದಾಗಿತ್ತು. ಒಂದು ಕಡೆ ಅವರು ಅಂಚೆಯ ಮೂಲಕ ಕಳಿಸುವ ಪಾಠಪ್ರವಚನ ಅಭ್ಯಾಸಗಳು ಜನಪ್ರಿಯತೆ ಪಡೆದು ಭರತಖಂಡದ ನಾನಾಭಾಗಗಳಲ್ಲಿಯೂ ಹೊರದೇಶಗಳಲ್ಲಿಯೂ ಹಬ್ಬಿತು. ಆ ಕಾಲದಲ್ಲಿ ಅಂಗಸಿದ್ಧಿಯಲ್ಲಿನ ತಲೆಯಾಳುಗಳು, ಹೆಸರು ಪಡೆದಿದ್ದವರು ಸಹಿಹಾಕಿ ಇವರಿಗೆ ಪ್ರೀತಿಗೌರವಗಳನ್ನು ತೋರಿಸಿದ್ದ ದೊಡ್ಡ ಚಿತ್ರಪಟಗಳಿದ್ದವು. ಇನ್ನೊಂದು ಕಡೆ ಅವರ ವ್ಯಾಯಾಮ ಪ್ರದರ್ಶನಗಳು ಯುವಕರನ್ನು ವಿಸ್ಮಯ, ಸ್ಫೂರ್ತಿಗೊಳಿಸಿದ್ದವು. ಕುಸ್ತಿಯ ಪಹಲವಾನರಂತೆ ಮೈಬಲ ಗಳಿಸಿಕೊಳ್ಳುವುದೇ ಅಲ್ಲ; Physique, Figure, Health, Strength, Vitality ಎಂಬ ಪದಗಳ ಸೇರುವೆ ಭಾವಗಳು ಯುವಕರ ಮೂರ್ತಿತ್ವಕ್ಕೆ ಒಂದು ಸುರಚಿತವಾದ ಹದ ಪ್ರಮಾಣವನ್ನು ತಂದವು; – ಕಣ್ಣಿಗೆ ಚೆಲುವಾದ ಆಕೃತಿಯೂ ಆಗಬೇಕೆಂದು. ಹೊರಗೆ ಕಾಣುವುದಲ್ಲ ಮುಖ್ಯ; ಒಳರಚನೆಯಲ್ಲಿ, ಮಾಂಸಖಂಡಗಳಲ್ಲಿ, ಮೈಎಲು ಸ್ನಾಯುಗಳು ಗಟ್ಟಿಯಾಗಬೇಕು, ಬಿಗಿಯಾಗಬೇಕು, ಯಾವ ಕೆಲಸಕ್ಕೂ ಒದಗುವ ಶಕ್ತಿಚಾಲನೆಗೆ ಹೊಂದುವಂತಿರಬೇಕು ಎಂಬ ಅವರ 'Physique as Form' ಎಂಬ ಮಾತು ವ್ಯಾಯಾಮವನ್ನು ಒಂದು ಕಲೆಯನ್ನಾಗಿ ಮಾಡಲು ಬಯಸುತ್ತಿತ್ತು.

---

* ಇಂಥಲ್ಲಿ ೨–೩ ಅಂಶಗಳು ಸೇರುತ್ತವೆ: ಯಾವುದನ್ನು ಕಾಣಿಸುತ್ತೇವೊ ಅದು ಕಾಣಿಸಲು ಬಳಸುವ ಕನ್ನಡಿಯ ಪ್ರತಿಫಲನ ಶಕ್ತಿ, ಲಕ್ಷಣ; ಹಿಡಿಯುವವರು ಯಾರು? ಎಷ್ಟನ್ನು, ಏಕೆ?– ಎಂಬವು. ಎಂಥ ಕನ್ನಡಿಯೂ ಎಲ್ಲಕ್ಕೂ ಹಿಡಿಯಲಾಗುವುದಿಲ್ಲ. ಎಲ್ಲವನ್ನೂ ನೋಡಲು ಬೇರೆ ಕನ್ನಡಿಯೇಕೆ? ಆಯ್ಕೆ ಮುಖ್ಯ.

೧೯೩೦ರಿಂದ ತೊಡಗಿದ ದಶಕದಲ್ಲಿ ಹೆಚ್ಚು ಆಪ್ತವಾಗಿ ತೊಡಗಿದ ಈ ಇಬ್ಬರ ಕೆಳತನ ನನಗೆ ಇನ್ನಷ್ಟು ಹತ್ತಿರವಾಯಿತು ಈ ಸುಮಾರಿಗೆ ಪುತ್ತೂರಿಂದ ಕಾರಂತರೂ ಬೆಂಗಳೂರಿಗೆ ಭೇಟಿ ಕೊಟ್ಟಿದ್ದರು. ಬೆಂಗಳೂರು ಚಾಮರಾಜಪೇಟೆಯ ಐದನೆಯ ರಸ್ತೆಯಲ್ಲಿ ಅಯ್ಯರ್ ಇದ್ದ ಮನೆ ಈ ತ್ರಿವೇಣಿಸಂಗಮಕ್ಕೆ ಎಡೆಕೊಟ್ಟು, ನಾನು ಅದರ ವಿಶಿಷ್ಟ ಸಂಪರ್ಕವನ್ನು ಬೆಳಸಿಕೊಳ್ಳಲು ಅವಕಾಶ ಕಲ್ಪಿಸಿತು. 'ಕೆ' ಭಾಗ್ಯದಲ್ಲಿ ಮನೆಯ ನೆಲೆ, ಆಸರೆ ಒಂದು ಫರ್ಲಾಂಗ್ ದೂರದಲ್ಲಿದ್ದ ತಂದೆ ಮನೆಯ ಹಿತ್ತಲಿನ ಒಂದು ಕಿರುಕತ್ತಲೆ ಕೋಣೆಗೆ ಮಿತವಾಗಿದ್ದರೂ ಅಲ್ಲಿಗೆ ನಾನು ಹೋದ್ದು ಒಂದೇ ಸಲ. ಹೆಚ್ಚಾಗಿ ಅಯ್ಯರ್ ಮನೆ ಕಾಂಪೌಂಡಿನಲ್ಲಿದ್ದ ಒಂದು ಕೋಣೆ `Nook' ಎಂದು ಹೆಸರುಗೊಂಡು ಅನೇಕ ಮಂದಿ ಯುವಕರ, ಸಾಹಿತಿಗಳ ಮಕ್ಕಾಂ, ಕಾಶಿಯಂಥ ಯಾತ್ರಾಸ್ಥಾನವಾಯಿತು. ಕೈಲಾಸಂ ನೆನಪಿನಲ್ಲಿ ಅಯ್ಯರು ಬರೆದ 'ಕೈಲಾಸಂ ಸ್ಮರಣೆ' ಒಂದು ಉತ್ಕೃಷ್ಟ ಕೃತಿಯಾಗಿದೆ.

ಕೈಲಾಸಂ ಸಾಹಚರ್ಯ ನಡೆನುಡಿಗಳಿಂದಾಗಿ ಅಯ್ಯರರ ಮನಸ್ಸಿಗೆ ವಿಲಕ್ಷಣವಾದ ವಸ್ತುಪ್ರಪಂಚವೂ ವಿಸ್ತಾರವೈವಿಧ್ಯವೂ ಬಂದವು. ಸ್ವತಃ ಅಯ್ಯರಿಗೆ ನಾಟಕಗಳೆಂದರೆ ಮೊದಲಿಂದಲೂ ಪ್ರೀತಿ. ಬೆಂಗಳೂರಲ್ಲಿ ಆಡುತ್ತಿದ್ದ ಹಳೆಯ ಕಾಲದ ನಾಟಕಗಳನ್ನೆಲ್ಲ ನೋಡುವುದರಲ್ಲಿ ಆಸಕ್ತಿ. ಇವರೂ ಅವರೂ ಅವರಾಡಿಕೊಳ್ಳುತ್ತಿದ್ದ ಮಾತಿನಿಂದ ಕೈಲಾಸಂ ಅವರನ್ನು ಸುಲ್ತಾನ್‌ಪೇಟೆಯ ಯಾವುದೋ ಒಂದು ಭಾಗದ ವಾಸಕ್ಕೆ ಸೀಮಿತವಾಗಿಸಿದ್ದಂತೆ ಕಂಡಿತು. ಬಜ್ಜಣ್ಣನ ಕಂಪನಿ, ಬುಳ್ಳಯ್ಯನ ಕಂಪನಿ, ಇತ್ಯಾದಿ ಸಂಘಗಳ ನಾಟಕಗಳ ಪರಿಚಯವನ್ನು ತಂದುಕೊಟ್ಟಿತು.

ಮೂಲತಃ ಅಯ್ಯರ್ ದೇವರಾಯಸಮುದ್ರದ ಮನೆತನಕ್ಕೆ ಸೇರಿದವರಾದ್ದರಿಂದ ಅಯ್ಯರ್ ಅವರಿಗೆ ಅಡಿಗೆಯ ಪರಿಚಯ ಅತಿಶಯವಾಗಿ ತಿಳಿದಿತ್ತು; ಪಾಕಶಕ್ತಿಯನ್ನೂ ರುಚಿನಿರ್ಣಯ ಸಾಧನೆಶಕ್ತಿಯನ್ನೂ ತಂದುಕೊಟ್ಟಿತ್ತು. ತಮ್ಮ ರೀತಿಯಲ್ಲಿ ಅವರು ಹಾಡಿಕೊಳ್ಳುತ್ತಿದ್ದುದೂ ಉಂಟು. ವ್ಯಾಯಾಮಶಾಲೆಯಲ್ಲಿ ವಾರಕ್ಕೆ ಒಂದು ದಿವಸವಾದರೂ ಭಜನೆ. ಹಾರ್ಮೋನಿಯಂ ಮುಂದೆ ಕುಳಿತು ಅದನ್ನು ಬಾರಿಸುತ್ತ ಭಕ್ತಿಯಿಂದ ಗೀತಗಳನ್ನು ಹಾಡುವ ಸಂಪ್ರದಾಯ ಅವರಿಗಿತ್ತು. ವರದಾಚಾರ್ಯರ ಹಾಡುಗಳೂ ಅವರಿಗೆ ತುಂಬಾ ಪ್ರಿಯ. ಈ ಸಂಗತಿಗಳೆಲ್ಲ ಒಂದು ವಿಚಿತ್ರ ರೀತಿಯಲ್ಲಿ ಅವರ ಜೀವನ ವಿಲಾಸಕ್ಕೆ ತೊಡಗಿ, ಕೇವಲ ವ್ಯಾಯಾಮಕ್ಕೆ ಅವರನ್ನು ಸೀಮಿತಗೊಳಿಸದೆ ಸಾಹಿತ್ಯ ಕಲೆಗಳ ಪ್ರಪಂಚಕ್ಕೂ ಒಲನ್ನು ತಂದುಕೊಟ್ಟಿತ್ತು. ಹಾಗಿಲ್ಲದಿದ್ದರೆ ನನ್ನಂಥ ಬಡಕಲು ಸಾಹಿತಿಗೆ ಆ ಪ್ರಪಂಚದ ಸಂಪರ್ಕ ಬರಲು ಶಕ್ಯವಿರಲಿಲ್ಲ.

ಎ. ವಿ. ಸ್ಕೂಲಲ್ಲಿ ಜೊತೆಗೆ, ಈಚೆಗೆ ಬೆಳೆದು ಬಂದು ಈವರೆಗೂ ನಡೆದಿರುವ ಈ ಕೆಳೆ ನನ್ನ ಬಾಳ ಸಂತೋಷಗಳಲ್ಲಿ ಒಂದು. ಅವರ ಸ್ನೇಹ, ಅದರಲ್ಲಿ ಮಾರ್ದವದ ಜೊತೆಗೆ ದೃಢ ಇದೆ; ಹಲವರ ನೆರವೂ ಸೌಭಾಗ್ಯವೂ ಆಗಿದೆ. ಗಂಡಸಿಗೆ ಶಕ್ತಿ ಬೇಕು; ಮುಷ್ಟಿ ಹಿಡಿದು ಗುದ್ದಿದರೆ ಕಲ್ಲು ಪುಡಿಯಾಗುತ್ತದೆ ಎನ್ನುವುದುಂಟು. ಎಷ್ಟೋ ವೇಳೆ ಅವರು ಬೀದಿಯಲ್ಲಿ ನಡೆಯುತ್ತಿರುವಾಗ – ಇದನ್ನು ಹೇಳಲು ಸಂಕೋಚವಾಗುತ್ತದೆ – ಅಷ್ಟೇನೂ ಶಿಕ್ಷಣ ಪಡೆಯದ ಕೆಲವು ಜನವರ್ಗದವರು 'ದೇಖಿರೆ, ದೇಖಿರೆ ಅಯ್ಯರ್

ಸಾಹೇಬ್' ಎಂದು ಗೌರವದ ಮೆಚ್ಚಿಗೆ ಸೂಚಿಸಿದುದನ್ನು ಕಂಡಿದ್ದೇನೆ. ಅವರು ಬೇಗ ತೀರ್ಮಾನಕ್ಕೆ ಬರುವವರು, ಬಂದುದನ್ನು ಹಟದಂತೆ ನಡಸುವವರು, ಓಲದೆ, ಚಲಿಸದೆ. ಆದರೆ ಅವರ ಹೃದಯ ಹೆಣ್ಣುಹೃದಯ. ಅಷ್ಟು ಮೃದು. ಸ್ನೇಹದ ಕಾವು ಸೋಕಿದ ಕೂಡಲೆ ಕರಗಿ ಆರ್ದ್ರವಾಗುವಂತಹುದು. ಅದರ ಸವಿಯನ್ನೂ ಪೋಷಕಶಕ್ತಿಯನ್ನೂ ಬಲ್ಲವನು ನಾನು.

ಚಾಮರಾಜಪೇಟೆಯಲ್ಲಿ ಐದನೆಯ ರಸ್ತೆಯ ಮನೆಯಲ್ಲಿ ಅವರು ತಮ್ಮ ವ್ಯಾಯಾಮ ಶಾಲೆಯನ್ನು ನಡಸಲು ಬಾಡಿಗೆಗೆ ಪಡೆದಿದ್ದಾಗ ನಾನೂ ವ್ಯಾಯಾಮಕ್ಕೆಂದು ಮೊದಲು ಆಗಾಗ್ಗೆ ಅಲ್ಲಿಗೆ ಹೋಗುತ್ತಿದ್ದೆ. ಬರಿಯ ವ್ಯಾಯಾಮಕ್ಕಲ್ಲ; ಅವರು ವ್ಯಾಯಾಮ ಮಾಡಿಸುವುದನ್ನು ನೋಡುವುದಕ್ಕೆ. ಅಲ್ಲಿಗೆ ಹಲವು ಮಂದಿ ಕರ್ನಾಟಕದ ಇತರ ಭಾಗಗಳ ವಿದ್ಯಾರ್ಥಿಗಳು ಬರುತ್ತಿದ್ದರು. ಎರಡು – ಮೂರು ತಿಂಗಳ ಕಾಲದವರೆಗೂ ಅಲ್ಲಿ ನಿಲ್ಲುತ್ತಿದ್ದ ವಿದ್ಯಾರ್ಥಿಗಳು ಕೆಲವರಾದರೆ ಎಂಟು – ಹತ್ತು ದಿವಸಗಳು ಮಾತ್ರ ಇದ್ದು ಹೋಗುತ್ತಿದ್ದವರು ಇನ್ನು ಕೆಲವರು. ಕೆಲವರು ನನ್ನ ಪರಿಚಯಸ್ಥರು. ಇನ್ನು ಕೆಲವರು ಆ ಮೂಲಕ ಆಗಿ ಅಥವಾ ಅವರ ಊರುಗಳಿಗೆ ಎಂದೊ ಹೋಗಿದ್ದ ಕಾರಣಗಳಿಂದ ಹೆಚ್ಚು ಹತ್ತಿರವಾದವರು. ಅಯ್ಯರ ಶರೀರಶಿಕ್ಷಣದ ಜೊತೆಗೆ ಅವರ ಆಹಾರವ್ಯವಸ್ಥೆ ತುಂಬಾ ವಿಚಕ್ಷಣೆಯದು. ಈಗ ಹೇಗೆ ಮಾಡುತ್ತಿದ್ದಾರೊ ಕಾಣೆ; ಬಹುಕಾಲ ಅವರು ಕೊಟ್ಟಣದಲ್ಲಿ ಕುಟ್ಟಿದ, ಪೂರ್ತಿ ತವುಡು ತೆಗೆಯದ ಕೆಂಪಕ್ಕಿಯ ಅನ್ನವನ್ನೇ ಬಡಿಸುತ್ತಿದ್ದರು. ಆ ಅನ್ನ ರುಚಿ; ಪುಷ್ಟಿಕರವಾದ್ದು. ದಪ್ಪ ಅಕ್ಕಿಯಾದರೂ ಒಂದೊಂದು ಕಾಳೂ ಚೆನ್ನಾಗಿ ಹೊಂಗಿ ಅನ್ನವಾದುದಾದ್ದರಿಂದ ಹೂವಿನಂತೆ ಮೃದುವಾಗಿರುತ್ತಿತ್ತು. ವಿದ್ಯಾರ್ಥಿಗಳ ಜೊತೆಯಲ್ಲಿಯೇ ಊಟಕ್ಕೆ ಕುಳಿತು ಊಟ ಮಾಡುತ್ತಿದ್ದ ಅವರು ತುಪ್ಪ ಹಾಕಿಸಿಕೊಳ್ಳುತ್ತಿರಲಿಲ್ಲ, ಬೊಜ್ಜು ಬೆಳಸುತ್ತದೆ ಎಂಬ ಕಾರಣದಿಂದ. ನಮ್ಮ ಆಹಾರದಲ್ಲಿ ನಾವು ಬಳಸಬಹುದಾದ ತುಪ್ಪ, ಹಾಲು, ಮೊಸರುಗಳಿಂದ ಮಾತ್ರವೇ ಅಲ್ಲವೇ ಸ್ವಲ್ಪಮಟ್ಟಾದರೂ ಪುಷ್ಟಿಕರ ಎಂದು ಕೇಳಿದರೆ, 'ನಾನು ಬಡಕಲಾಗಿದ್ದೇನೆಯೆ, ನನ್ನ ದೇಹಕ್ಕೆ ಪುಷ್ಟಿ ಸಾಲದೆ' ಎಂದುಬಿಡುತ್ತಾರೆ. ಅದರಿಂದ ಅಡಿಗೆ ಮಾಡಿದ ಮಾಡಿಸಿದ ಎಲ್ಲ ಪದಾರ್ಥಗಳೂ ರುಚಿಯಾಗಿ ಆರೋಗ್ಯಕರವಾಗಿ ಇರುತ್ತಿದ್ದವು. ಅಂಗಸಾಧನೆ ಅದೂ ಇದೂ ಮಾತಾಡುತ್ತಿದ್ದು ಎಷ್ಟೋ ಸಲ ಅಲ್ಲಿಯೇ ಊಟ ಮಾಡುವ ಅವಕಾಶವೂ ನನ್ನದಾದುದರಿಂದ ಅಲ್ಲಿನ ವಹಿವಾಟು ವಿವರವಾಗಿ ಗೊತ್ತಾಗುತ್ತಿದ್ದವು. ಹಲವು ವೇಳೆ ಅವರು 'ನಾನು ಕೊಟ್ಟ ಅಂಗಸಾಧನೆಯಿಂದ ನಿಮಗೇನೂ ಪ್ರಯೋಜನವಾಗುವುದಿಲ್ಲ. ನೀವು ಸುಖವಾಗಿ ಊಟ ಮಾಡಿಕೊಂಡಿರುತ್ತಿರಿ' ಎನ್ನುವರು. ಅಲ್ಲಿಗೆ ಕಾರಂತರೂ ಕೈಲಾಸಂ ಅವರೂ ಹೆಚ್ಚಾಗಿ ಬರುತ್ತಿದ್ದರು ಎಂದೆ. ಹರಟೆಯ ಅನೇಕ ಪ್ರಸಂಗಗಳು ನಡೆಯುತ್ತಿದ್ದವು. ಸಿಟಿ ಇನ್‌ಸ್ಟಿಟ್ಯೂಟ್ ಕಡೆಯಲ್ಲಿ ಆ ಮನೆಯಲ್ಲಿ ಅನೇಕ ವೇಳೆ ನಡೆದ ವಾರ್ಷಿಕೋತ್ಸವಗಳಲ್ಲಿ ಹಳೆ, ಹೊಸ ವಿದ್ಯಾರ್ಥಿಗಳು ಚಂದಾ ಕೊಟ್ಟು ಊಟಕ್ಕೆ ಸೇರಿದ್ದರು. ಯಾವ ಚಂದಾ ರುಸುಮು ಕೊಡದೇ ಊಟ ಉಪಚಾರ ದೊರೆಯುತ್ತಿದ್ದುದು ನನಗೆ. ಅಲ್ಲಿಯೇ ಅವರ ಬಳಿ ಉತ್ತಮವಾದ ರೇಡಿಯೊ ಸೆಟ್ ಇದ್ದುದರಿಂದ ಎಷ್ಟೋ ಬಾರಿ ರಾತ್ರಿ ೧೨–೩೦ ಗಂಟೆಯ ಮೇಲೆ ಆರಂಭವಾಗುತ್ತಿದ್ದ

ಬಿ.ಬಿ.ಸಿ.ಯ ಉಪನ್ಯಾಸಗಳನ್ನು, ಸರ್ ಥಾಮಸ್ ಬೀಚಂ, ಟಾಸ್ಕಾನಿನಿ, ವೈನ್ ಗಾರ್ಟ್ನರ್, ಫ್ರಿಟ್ಸ್‌ಬುಷ್, ಬ್ರೂನ್ ವಾಲ್ಟರ್, ಅಮೆರಿಕದಿಂದ ಲಿಯೋ ಸ್ಟೊಕೋವ್‌ಸ್ಕಿ ಮುಂತಾದ ಸಂಗೀತ ನಿರ್ದೇಶಕರ ಮೇಳಸಂಗೀತವನ್ನು ಕೇಳಲು ನಡುರಾತ್ರಿಯ ಹೊತ್ತಿಗೂ ಹೋದುದುಂಟು. ಅಯ್ಯರ್ ಛಾಯಾಚಿತ್ರಗಳನ್ನು ತೆಗೆವುದರಲ್ಲಿ ನಿಪುಣರು. ತಮ್ಮ ಸ್ನೇಹಿತರ ಅನೇಕ ಛಾಯಾಚಿತ್ರಗಳನ್ನು ತೆಗೆದಿದ್ದಾರೆ. ಇವೆಲ್ಲ ನನಗೂ ಫಲಿಸಿವೆ. ಅವರಿಂದ ಅನೇಕ ತರತೀಪುಗಳನ್ನು ಕುರಿತು ಮಾತುಗಳು ಬರುತ್ತಿದ್ದವು. ಒಮ್ಮೆ ವಾರ್ಷಿಕೋತ್ಸವದಲ್ಲಿ ಮಾಡಿದ ಸಾರು ಅಷ್ಟು ತಿಳಿಯಾದುದಕ್ಕೆ, ಪನ್ನೀರಿನಂತೆ ಇದ್ದುದಕ್ಕೆ ಕಾರಣವೇನೆಂದು ಕೇಳಿದೆ. ಅದು ಟೊಮ್ಯಾಟೊ ಸಾರು: ಕೆಂಡದ ಮೇಲೆ ಟೊಮ್ಯಾಟೊ ಇಡಬೇಕು. ಅದು ಹದವಾಗಿ ಸುಟ್ಟಮೇಲೆ ಅದನ್ನು ತೆಗೆದು ಬೇಳೆ ಚೆನ್ನಾಗಿ ಬೆಂದು ಕಟ್ಟು ಬಿಟ್ಟುಕೊಂಡಮೇಲೆ ಸಾರು ಕುದಿಯುವ ಮುಂಚೆ ಅದರಲ್ಲಿ ಇದನ್ನು ಹಾಕಿ ಚೆನ್ನಾಗಿ ಕಡೆದು ಆಮೇಲೆ ಕುದಿಸಿದರೆ ತುಂಬಾ ರುಚಿಯಾಗಿರುತ್ತದೆ. ಆಮೇಲೆ ಅದನ್ನು ಶೋಧಿಸಿಕೊಂಡರೆ ಸಾರಿನ ಸಾರ – ಟೊಮ್ಯಾಟೊ ರುಚಿ ಎರಡೂ ಸಾರಿಗೆ ಬರುತ್ತದೆ – ಎಂದರು. ಇನ್ನೊಂದು ಸಲ ಗುಜರಾತಿನವರು ನಂಜಿಕೊಳ್ಳಲು ಮಾಡುವ ಇಡಿ ಹಾಗಲಕಾಯಿ ಕರಿದು ಮಾಡುವ ಬಾಳಕದ ರಹಸ್ಯವನ್ನು ಮಾಡಿ ತೋರಿಸಿದರು. ಅದರ ಹೃದಯ ಹೊರಗೆಡವಿ ಯಾರನ್ನೂ ಕೆಡಿಸಲು ಸದ್ಯಃ ಮನಸ್ಸಿಲ್ಲ. ಅದರ ಖಾಸಾ ರುಚಿ ತಿಳಿಯಲು ೧೯೫೦–೫೧ರ ವರೆಗೂ ಕಾಯಬೇಕಾಯಿತು; ನಾನು ಬೊಂಬಾಯಿಗೆ ಅಹಮ್ಮದಾಬಾದಿಗೆ ಹೋಗುವವರೆಗು.

ಅಡಿಗೆಯವನು ಇಲ್ಲದಾಗಲೊ ತಮಗೆ ಗೀಳು ಹತ್ತಿದಾಗಲೊ ಮಡದಿಯ ಪ್ರೀತಿಯ ಸೇವೆಯನ್ನು ಕೂಡ ಯಾವಂಶದಲ್ಲಿಯೊ ತಪ್ಪಿಸಿ ತಾವೇ ಏನಾದರೂ ಪದಾರ್ಥಗಳನ್ನು ಮಾಡುತ್ತಿದ್ದುದುಂಟು. ಅದರಲ್ಲಿ ಒಂದು: ಅವರು ಅಪ್ಪೂರಾಯರ ತುಲಜಾಭವನ ಬಂಗಲೆಯಲ್ಲಿದ್ದ ಸಮಯದಲ್ಲಿ, ಇನ್ನೊಂದು ಶಂಕರಪುರದ ಕಲ್ಲುಕಟ್ಟಡದ ಬಂಗಲೆಯಲ್ಲಿದ್ದಾಗ, ಸುಮಾರು ೧೯೩೬ರಿಂದ ಅವರ ಸ್ವಂತ ಮನೆಗೆ ಹೋಗುವ ಕಾಲದವರೆಗೂ ವಿಶಿಷ್ಟವಾಗಿ ನನಗೆ ಲಭಿಸಿತು. ಒಂದು ಕಡೆ ಅವರೇ ಮಾಡಿದ ಎಲೆಯ ಕೋಸಿನ ಪಲ್ಯ ಮತ್ತು ಜಾಮೂನು. ನಮ್ಮ ಕಡೆಯ ಜನರಿಗೆ ಜಾಮೂನ್ ಮಾಡಲು ಬಾರದು. ಸಾಮಾನ್ಯವಾಗಿ ಖಾಸಗಿ ಮನೆಗಳಲ್ಲಿಯೂ ಹಾಗೇ. ನಮ್ಮವರ ಹೊಟೇಲುಗಳಲ್ಲಿಯೂ ಹಾಗೇ. ಉತ್ತರ ಪ್ರದೇಶಗಳವರ ಕೈರುಚಿ ಅಂತಹ ಸಿಹಿತಿಂಡಿಗಳಿಗೆ ಪಳಗಿದ್ದು ಬಹುಶಃ ಎಂದೊ ಏನೊ ನಾನು ಅಂದಿದ್ದ ಮಾತನ್ನು ಕೇಳಿದ್ದರೊ ಏನೊ ಅವರು – ಜಾಮೂನ್ ಮಾಡಿ ನನಗೆ ಕೊಟ್ಟರು. ಶ್ಲಾಘ್ಯವಾಗಿತ್ತು – ಅದರ ರುಚಿ, ಹದ. ಅದನ್ನು ವರ್ಣಿಸತೊಡಗುವುದಿಲ್ಲ; ಕೇಳುವವರಿಗೆ ಸರಿಕಟ್ಟೇತಾಗಿ. ಮತ್ತೊಂದು ದಿನ ಶಂಕರಪುರದ ಮನೆಯಲ್ಲಿ ನನಗೆ ಹೋಗುವುದಕ್ಕಾಗಿರಲಿಲ್ಲವಾಗಿ ಒಂದು ಸ್ಟೀಲ್ ಪಾತ್ರೆಯ ತುಂಬಾ ತಾವೇ ಮಾಡಿದ್ದ ಈರುಳ್ಳಿ ಹುಳಿ ಕಳಿಸಿದ್ದರು. ನನಗೆ ಆ ಪದಾರ್ಥದಲ್ಲಿ ಪಕ್ಷಪಾತವಿದೆಯೆಂದಲ್ಲ, ಬಹುಶಃ ಇಲ್ಲ. ಆದರೆ ಚೆನ್ನಾಗಿ ಮಾಡಿದಾಗ ಮನೆಯಲ್ಲಿಯೇ ಆಗಲಿ, ಹೊರಗೇ ಆಗಲಿ, ಯಾವುದಾದರೂ ರುಚಿಯರಿತು ತಿನ್ನದ ಮೂರ್ಖನಲ್ಲ. ಪದಾರ್ಥ ಚೆನ್ನಾಗಿ ಅಟ್ಟಾಗ ಅದನ್ನು ಒಲ್ಲದವನು ಒಳ್ಳೆಯದಕ್ಕೆ ದ್ರೋಹ ಮಾಡಿದಂತಾಗುತ್ತದೆ.

ಈರುಳ್ಳಿ ಹುಳಿಯಲ್ಲಿ ಎರಡಾದರೂ ಬಗೆಯುಂಟು. ಒಂದು ದೊಡ್ಡ ಈರುಳ್ಳಿ (ಹೆಚ್ಚಾಗಿ ತೋಟಗಳಲ್ಲಿ ಬೆಳೆದುದು) – ಹೆಚ್ಚಿ ಹೋಳು ಮಾಡಿ ಹಾಕಿ ಮಾಡುವುದು; ಇನ್ನೊಂದು ಸುಮಾರು ನಮ್ಮ ಚಿಕ್ಕಬಳ್ಳಾಪುರದ ಕಡೆಯ ಸಣ್ಣ ಗೊಂಚಲು ಈರುಳ್ಳಿಯಿಂದ ಮಾಡಿದ್ದು, ಎರಡೂ ಬಗೆಯೂ ರುಚಿಯೇ. ಹತ್ತಾರು ಕಡೆ ಎರಡೂ ಬಗೆಯ ರುಚಿಯನ್ನು ಕಂಡಿದ್ದೇನೆ. ದೊಡ್ಡ ಈರುಳ್ಳಿ ಹೆಚ್ಚಿ ಮಾಡಿದ ಹುಳಿ – ಒಮ್ಮೆ ನಾನು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕೋಟೇಶ್ವರಕ್ಕೆ ಅತಿಥಿಯಾಗಿ ಹೋಗಿದ್ದಾಗ ಯಾರೋ ಪಟೇಲ್ ಐತಾಳ್ ಎಂಬವರು ಮಾಡಿಸಿ ಬಡಿಸಿದ್ದು. ಸುಮಾರು ನಲವತ್ತು ವರ್ಷ ಹಿಂದೆ. ದೊಡ್ಡ ಈರುಳ್ಳಿ ಹೋಳುಗಳು ಸ್ವಲ್ಪ ದೊಡ್ಡ ದೊಡ್ಡದಾಗಿಯೇ ಹೆಚ್ಚಿ ಮೂಡಿದ್ದವು. ಅಲ್ಲಿ ಹೋಳು ಬೆಂದ ರೀತಿ, ಕಾರ ಹದವಾಗಿ, ಸಮವಾಗಿ ಸೇರಿಕೊಂಡದ್ದು, ಆ ಒಟ್ಟು ಹುಳಿಯ ತೆಳುವಲ್ಲದ, ದಪ್ಪವಲ್ಲದ ಸಾಂದ್ರತೆ ಸುಭೋಜ್ಯವಾಗಿತ್ತು. ಅಯ್ಯರ್ ಸ್ವಂತವಾಗಿ ಮಾಡಿ ಕಳಿಸಿದ ಈ ಹುಳಿ ಸಣ್ಣ ಈರುಳ್ಳಿಯಿಂದ ಮಾಡಿದ್ದು. ಮೇಲಿನ ಒಂದೋ ಎರಡೋ ಸಿಪ್ಪೆ ತೆಗೆದು ಈ ಕೊನೆ ಆ ಕೊನೆ ಕತ್ತರಿಸಿ ಇಡೀ ಈರುಳ್ಳಿಯನ್ನು ಹುರಿದು ಹದವಾಗಿ ಬೇಯಿಸಿ ಮಾಡಿದ ಅಡುಗೆ. ಅದಕ್ಕೆ ಬಿದ್ದ ಸಾಂಭಾರ ಹುಳಿಯ ಸಾಂದ್ರತೆಯಲ್ಲಿ ಕರಗಿ ಹೋಗದಿದ್ದರೂ ಒಂದೇ ಸಮನೆ ಹೊರ – ಒಳ ಕಾರ ಹುಷಾರಾಗಿ ಬೇಯಿಸದಿದ್ದರೆ, ಒಳಗರ್ಭ ಮೂಲರುಚಿಯನ್ನು ಕೆಡಿಸಿ ತಿಳಿಯಾಗಿ ಬಿಡುತ್ತದೆ, ಸೀಸೀಯಾಗಿ ರಸಭಂಗವುಂಟುಮಾಡುತ್ತದೆ. ಆಲೂಗಡ್ಡೆಗೆ ಸೇರಿ ರುಚಿಕಟ್ಟು ತಂದದ್ದು ಆಗಿದ್ದಾಗ ಒಳಗೆ ಹಸಿಯೊ ಬೇಯದ ಭಾಗವೊ ಕಾಣದೆ ಬಂದು ಯಾವುದೊ ಹುಳಿಯಲ್ಲದ ಸಿಹಿ ಒಡೆಯದ ಆ ಈರುಳ್ಳಿಯ ರುಚಿ, ರುಚಿಯ ಜೊತೆಗೆ ಪರಿಮಳವಾಗಿ ಆಪ್ಯಾಯನ ತರುವಂಥದು. ಇವನ್ನು ಅಯ್ಯರ್ ಅರಿತವರು. ಇವರ ಬಾಣಸಕ್ಕೆ ಇವರಿಗೆ ದೊರೆಯಬಹುದಾದ ಪುರಸ್ಕಾರವನ್ನು ನಾಡು ಕೊಡಬೇಕು ಎನ್ನಿಸಿತು. ನಾನೇನು ಕೊಟ್ಟೇನು? ನಿರ್ಭಾಗ್ಯ ದೇಶ. ಗುಣಗ್ರಹಣ ಪುರಸ್ಕಾರ ಎಲ್ಲಿದೆ? ಯಾವುದಕ್ಕೇ ಆಗಲಿ: ಕಲೆಯೆ? ಸಾಹಿತ್ಯವೆ? ಪದಾರ್ಥ ನಿರ್ಮಾಣವೇ? ಅಡಿಗೆಯೆ? ಕ್ರಿಯಾವಂತಿಕೆಯೆ?

ಅವರು ಸ್ನೇಹಿತರಿಗೆ ತೋರಿಸುವ ವಿಶ್ವಾಸದ ರೀತಿಗಳು ಹಲವಾರು. ಯಾವುದೊ ನೆನಪಿಟ್ಟುಕೊಂಡು ಏನೇನೊ ತಮ್ಮ ಪ್ರೀತಿಯ ಸೂಚಿಕೆಯನ್ನು ಕೊಡುವರು. ಇನ್ನೊಮ್ಮೆ ನಾನು ಬೇಡವೆಂದರೂ ಕೇಳದೆ, ಸುಮಾರು ೧೯೩೮–೩೯ರಲ್ಲಿ ನಾನಿಲ್ಲದಾಗ ಮನೆಗೆ ಬಂದು, ತಮ್ಮದಾದ ಒಂದು Philco ರೇಡಿಯೊ ಸೆಟ್ ತಂದು ಇಟ್ಟು, ಮಾಳಿಗೆ ಮೇಲೆ ಹತ್ತಿ ಅದಕ್ಕೆ ಏರಿಯಲ್ ಹಾಕಿ ಹೊರಟು ಹೋಗಿದ್ದರು. ಬೇಕೆನ್ನಿಸಿದಾಗ ಸುದ್ದಿಗಳನ್ನೊ ಸಂಗೀತವನ್ನೊ ನನ್ನ ಮನೆಯಲ್ಲೇ ಕೇಳಲಿ ಎಂದು. ರಾತ್ರಿ ಸರಿಹೊತ್ತಿನಲ್ಲಿ ಅದಕ್ಕಾಗಿ ಬೇರಲ್ಲಿಗೆ ಯಾಕೆ ಹೋಗಬೇಕು, ತಮ್ಮಲ್ಲಿಗಾಗಲಿ ಹೋಗುವ ಅಗತ್ಯ ಏಕೆ ಬೇಕು? – ಎಂದು ಕಾಣುತ್ತದೆ. ಸ್ವಂತ ವಿದ್ಯುಚ್ಛಕ್ತಿ ಕಾರ್ಯಗಳಲ್ಲಿ, ರೇಡಿಯೊ ರಿಪೇರಿ ಮತ್ತು ಇಂದು ಸ್ವರಲೇಖನ ಯಂತ್ರಗಳ ಸಂಘಟನೆಗಳಲ್ಲಿ ನಿಪುಣತೆ ಪಡೆದಿರುವರು. ಯಾವ ಯಂತ್ರವನ್ನು ತಂದರೂ ಅದನ್ನು ಬಿಡಿಸಿ, ಬಿಚ್ಚಿ ಪುನಃ ಅದನ್ನು ಸೇರಿಸಿ ಸರಿಪಡಿಸುವ, ಮೇಲ್ಪಡಿಸುವ ಚಾತುರಿ ಅವರಿಗೆ ವಿಶೇಷವಾಗಿದೆ. ಅನೇಕ ಟೇಪ್‌ರೆಕಾರ್ಡರುಗಳನ್ನು ಅವರು ಹಾಗೆ ಮಾಡುವುದುಂಟು. ಯಾವ ಹೊಸ ಯಂತ್ರಶಾಸ್ತ್ರಗಳ ನಿರ್ಮಾಣ ಹೀಗೆಯೇ ಆಗುವುದು

ಎಂದು ಕೇಳಿದ್ದೇನೆ. ಇದ್ದ ಒಂದೇ ಒಂದನ್ನು ಬಿಡಿಸಿ ನೋಡಿ, ಕೆಡಸಿ ಕೂಡ, ಆ ದೊರೆತ ತಿಳಿವಿನಿಂದ ಸಾಮಿರವನ್ನು ಆಮೇಲೆ ಮಾಡುವ ವಿಧಾನ ತಂತ್ರ ಅದು. ಅವರ ಮನೆಯಲ್ಲಿದ್ದ ಒಂದು ಹ್ಯಾಲಿಕ್ಯಾಪ್ಟರ್ ತುಂಬಾ ಬೆಲೆಯದು; ಮಿಲಿಟರಿ ಅಧಿಕಾರಿಗಳು ಎಲ್ಲೊ ಬಳಸುತ್ತಿದ್ದ ಅದನ್ನು ಇವರು ಕೊಂಡಿಟ್ಟುಕೊಂಡಿದ್ದಾರೆ. ಒಂದು ಅಲೆಮಾನದಲ್ಲಿ ಒಂದು ಸ್ಟೇಷನ್ ನುಡಿಯುತ್ತಿರುವುದನ್ನೇ ವಿಶೇಷವಾಗಿ ಶ್ರುತಿಸುಭಗವಾಗುವಂತೆ, ಸ್ಫುಟವಾಗುವಂತೆ ಮಾಡಿಕೊಂಡು ಕೇಳಬಲ್ಲ ವಿಶೇಷವನ್ನು ಆ ಯಂತ್ರದಲ್ಲಿ ಕಂಡೆ. ಸ್ವಂತವಾಗಿ ಅಂಥದನ್ನು ಮಾಡಿಕೊಳ್ಳುವ ಯಂತ್ರ ತಂತ್ರ ಅವರಿಗೆ ಗೊತ್ತಿದೆ. ಇಷ್ಟೆಲ್ಲ ಹೇಳಿದುದು ಅವರ ಮನಸ್ಸು ಎಷ್ಟು ಬಗೆಯ ವ್ಯಾಪಾರಗಳಲ್ಲಿ, ಅವರ ಬದುಕು ಎಷ್ಟು ವಿಧಾನ ಕ್ರಿಯೆಗಳಲ್ಲಿ ಅನುಭವ ಪಡೆದಿದೆ, ಸಂಸ್ಕಾರಗೊಂಡಿದೆ ಎಂದು ತಿಳಿಸುವುದಕ್ಕೆ.

ತಾನು ಕಾಲೆಜಲ್ಲಿ ಓದಲಿಲ್ಲ, ಡಿಗ್ರಿ ಪಡೆಯಲಿಲ್ಲ ಎಂದುಕೊಂಡವರು ತಮ್ಮ ಯೋಗ್ಯತೆಗೆ ಸ್ಥಾಪಕವಾದ ಒಂದು ಡಿಗ್ರಿಯನ್ನು ಅಮೆರಿಕ ದೇಶದ ಯಾವುದೊ ಒಂದು 'Physical Culture Naturopathy'ಗೆ ವಿಶಿಷ್ಟವಾದ ಅಧಿಕಾರಪತ್ರಿಕೆಯನ್ನು ಪಡೆದುಕೊಂಡು Professor ಎಂಬ ಉಪಾಧಿಯನ್ನು ಪಡೆದುಕೊಂಡರು. ಆದರೆ ಆ ಕಾಲದಲ್ಲಿ ಇದೊಂದು ಅಮೆರಿಕನ್ ಡಿಗ್ರಿ ಎಂದು ಹಲ್ಲುಕಿರಿಯುವ ಪದ್ಧತಿ ಇತ್ತು. ಅವರು ಮಾಡಿ ತೋರಿಸಬಲ್ಲ ಸಾಧನೆ ನೂರಾರು. ಇದಕ್ಕಿಂತ ಡಿಗ್ರಿ ಬೇರೆ ಬೇಕೆ? ಭಾರತಕ್ಕೆ ಇಂಥ ಉಪಾಧಿಗಳಿಗೆಲ್ಲ ಗೌರವವಿಲ್ಲ. ಸಾಮಾನ್ಯವಾಗಿ ನಿಂತರೆ, ಮೈಕಟ್ಟು ಕೈಕಟ್ಟು ಹಾಳತವಾಗಿ ಬಹು ಸುಂದರವಾದ ಆಕೃತಿಯನ್ನು ಎಲುಖಂಡಗಳು ಕಾಣಿಸುತ್ತದೆ. ತೋಳು ತೋಳಾಗಿಯೇ ಕಂಡರೂ ತೇಗದ ಒಂದು ತೊಲೆ. ಅಷ್ಟೇ ಗಡುಸಾದುದು. ಕೈಯನ್ನು ಬಾಚಿದರೆ ಸಹಜವಾಗಿ ಭುಜದಿಂದ ಇಳಿದು ಬಿಗಿಯಾಗಿ ಮಾಂಸಲವಾಗಿ ಇರುವ ಅದು ಆನೆಯ ಸೊಂಡಿಲು ಬಂದು ಹೇಗೆ ಇಳಿದು ಕಾಣುತ್ತದೆಯೊ ಹಾಗೆ. ಚಿತ್ರಶಿಲ್ಪಾದಿಗಳಲ್ಲಿ ಈ ಲಕ್ಷಣ ನಿರ್ದೇಶಿಸಿದ್ದರೂ ಮೈಯ ಅಂಗಲಕ್ಷಣವಾಗಿ ಕಂಡದ್ದು ಅವರಲ್ಲಿ. ಅಯ್ಯರ್ ಭುಜದಿಂದ ಇಳಿವ ದೃಢವಾದ, ಬಲಿಷ್ಠವಾದ ಸಹಜ ಚಲನೆಯುಳ್ಳ ಅವರ ತೋಳು ಗಜನಾಸದಂತೆ. ಯಾವುದಾದರೂ ಪ್ರದರ್ಶನದಲ್ಲಿ ಮೈಕಟ್ಟಿನ ಯಾವ ಒಳಗಿನ ಭಾಗದ ಒಂದು ಸಣ್ಣ ಮಾಂಸವನ್ನೊ ಪ್ರತ್ಯೇಕಮಾಡಿ ಅದರ ಚಲನೆಯನ್ನು ತೋರಿಸುವ ಅವರ ಚಾತುರಿಯೂ ನಿಯಂತ್ರಣಶಕ್ತಿಯೂ ಅದ್ಭುತವಾದವು; ವಿಸ್ಮಯಕರವಾದುದು. ಕಬ್ಬಿಣದ ಯಾವ ಸರಪಣಿಗಳೂ ಹಾಗೆ ಕಟ್ಟಿ ಬಿಗಿದು ತೋರವು. ಅಂಥ ಖಂಡ ರಚನೆ ಅವರದು. ಒಂದು ಸಲ ಬೆಂಗಳೂರು ರೈಲ್ವೆ ಸ್ಟೇಷನ್ನಿಂದ ಜಟಕಾ ಗಾಡಿಯಲ್ಲಿ ಕುಳಿತು ಬಂದರಂತೆ. ಬೆಳಗ್ಗೆ ರೈಲಿಂದ ಇಳಿದವರು ಅದರಲ್ಲಿ ಕುಳಿತರು.. ಒಂದೊ, ಒಂದುಕಾಲು ರೂಪಾಯಿಯೇನೊ – ಆ ಕಾಲದಲ್ಲಿ ಅದು ಹೆಚ್ಚು – ಬಾಡಿಗೆ ಗೊತ್ತು ಮಾಡಿದರು. ಆಗ ವಾಸವಾಗಿದ್ದ ಅಪ್ಪೂರಾಯರ ಮನೆಗೆ ಬಂದು ಸೇರಿದರು. ಮನೆಗೆ ಬರುವ ವೇಳೆಗೆ ಕುದುರೆಯ ಗಾಡಿಯ ಅಲ್ಲಾಟದಿಂದ ಅವರ ಎಲುಬುಗಳಿಗೇ ನೋವಾಯಿತಂತೆ. ಎರಡು ರೂಪಾಯಿ ನೋಟನ್ನು ಅವನ ಕೈಯಲ್ಲಿ ಕೊಟ್ಟು ಚಿಲ್ಲರೆ ಒಬ್ಬ ಹುಡುಗನ ಕೈಗೆ ಕೊಡು ಎಂದು ಹೇಳಿ ಒಳಗೆ ಹೋದರು. ಗಾಡಿಯವನು ನೋಟನ್ನು ತೆಗೆದುಕೊಂಡು

ಹೊರಟುಹೋದ. ಹಿಂದಕ್ಕೆ ಬರಲಿಲ್ಲ, ಚಿಲ್ಲರೆ ಸಲ್ಲಿಸಲಿಲ್ಲ, ಕೋಪ ಬಂದ ಇವರು ಗಾಡಿಯವನನ್ನು ಕರೆತನ್ನಿ ಎಂದರು. ಬೈಸಿಕಲ್ಲಲ್ಲಿ ಎರಡೂ ಕಡೆಗೆ ಜನ ಹೊರಟರು. ಬಹು ದೂರ ಹುಡುಕಿಕೊಂಡು ಹೋಗಿರಬೇಕು. ಅವನು ಬಂದು ನಿಂತ. 'ಚಿಲ್ಲರೆಯನ್ನು ಏಕೆ ಕೊಡದೆ ಹೋದೆ' ಎಂದರು. 'ಭಕ್ಷೀಸು ಕೊಟ್ಟಿದ್ದೀರಿ ಎಂದು ತಿಳಿದೆ. ಕ್ಷಮಿಸಬೇಕು' ಎಂದನಂತೆ. ಹಿಂಗುತ್ತಿಗೆ ಭಾಗದ ಪರ್ಟಿನಿಂದಲೂ ಕೋಟಿನಿಂದಲೂ ಹಿಡಿದು ಅವನನ್ನು ಮೇಲಕ್ಕೆತ್ತಿ ಕುಕ್ಕಿ ಒಂದೆರಡೇಟು ಕೊಡಬೇಕು ಎನ್ನಿಸಿತಂತೆ. ಐದಡಿ – ಆರಂಗುಲ ಇದ್ದ ಅವನು ಅತ್ತು ಕರೆದು ಗೋಳಾಡಿ ಕ್ಷಮಿಸಿರೆಂದು ಕೇಳಲು 'ತೊಲಗಿಹೋಗು. ಇನ್ನು ಮೇಲೆ ಹೀಗೆ ಮಾಡಬೇಡ' – ಎಂದು ಹೇಳಿ ಅಷ್ಟನ್ನೂ ಪುನಃ ಅವನಿಗೇ ಕೊಟ್ಟು ಕಳಿಸಿದರಂತೆ.

ಇನ್ನೊಂದು ಸಲ ನನಗೆ ಬಂದ ಸುದ್ದಿ ಇದು. ಶಂಕರಮಠದ ಐದನೆಯ ರಸ್ತೆಯ ಚೌಕದಲ್ಲಿ ಎಡಗಡೆಗೆ ತಿರುಗುವಾಗ ಉತ್ತರಮುಖವಾದ ಮೂಲೆಮನೆಯಲ್ಲಿ 'ಅರಸು ಕ್ರಷಸ್' ಎಂಬ ಪಾನಗಳನ್ನು ತಯಾರು ಮಾಡುತ್ತಿದ್ದರು. ಅದರ ಕಾಂಪೌಂಡಿನ ಹೊರಗೆ ರಸ್ತೆಗೂ ಅದಕ್ಕೂ ನಡುವೆ ಅಗಲವಾದ ಕಲ್ಲುಚರಂಡಿಯಿತ್ತು. ಅದರಲ್ಲಿ ಒಂಟೆತ್ತಿನ ಗಾಡಿಯ ಎತ್ತೊಂದು ಸಿಕ್ಕಿಕೊಂಡಿತ್ತಂತೆ. ಏನು ಮಾಡಿದರೂ ಅದನ್ನು ಹೊರಗೆ ತರಲು ಕಷ್ಟವಾಗಿತ್ತು. ಅದರ ಕಣ್ಣಲ್ಲಿ ಬಾಯಲ್ಲಿ ನೀರು, ನೊರೆ ಇತ್ತಂತೆ. ಹತ್ತಿರದಲ್ಲಿಯೇ ವಾಸ ಮಾಡುತ್ತಿದ್ದ ಇವರು ಬಂದು ತಮ್ಮ ಮನೆಯಿಂದ ದೊಡ್ಡ ಹಗ್ಗವೊಂದನ್ನು ತರಿಸಿ ಆಯಕಟ್ಟು ನೋಡಿ, ಲಾಳ ಕಟ್ಟುವಾಗಿನಂತಲ್ಲದೆ ಬೇರೆ ರೀತಿಯಲ್ಲಿ ಅದಕ್ಕೆ ಕಟ್ಟಿ, ಒಂದೆರಡು ಸಲ ಹಾಗೆ ಹೀಗೆ ಅಲ್ಲಾಡಿಸಿ, ಹದವಾದ ಅವಕಾಶವನ್ನು ಸಾಧಿಸಿ, ಎತ್ತನ್ನು ಜಗ್ಗಿ ಎತ್ತಿ ಹೊರಕ್ಕೆ ತೆಗೆದು ಮತ್ತೇನೂ ಮಾತನ್ನಾಡದೆ ಅಲ್ಲಿಂದ ಹೊರಟುಹೋದರಂತೆ. ಇದು ಸಾಮಾನ್ಯ ಸಾಧನೆಯಲ್ಲ. ಬಿಗಿಯಾಗಿ ಸಿಕ್ಕಿಹಾಕಿಕೊಂಡಿದ್ದ ಆ ಮೂಕಜೀವಿಯ ನೋವು ಅವರಿಗೆ ಆ ಮನಸ್ಸನ್ನೂ ಶಕ್ತಿಸಾಹಸಗಳನ್ನೂ ತಂದುಕೊಟ್ಟಿತ್ತು. ಎಷ್ಟು ಜನ ಆಮೇಲೆ ಅವರಿಗೆ ವಂದನೆಗಳನ್ನು ಸಮರ್ಪಿಸಲು ನಿಂತರೂ ಅದನ್ನು ನೋಡಿ ಹಿಗ್ಗದೆ ಮೌನವಾಗಿ ಕೈನಿಷೇಧ ಕಾಣಿಸಿ ಹೊರಟುಹೋದುದು ಅವರ ಸ್ವರೂಪಲಕ್ಷಣ.

ಇನ್ನೊಮ್ಮೆ ಈಗ ಕೆಳದಾರಿ ಮಾಡಿ ಪ್ರವೇಶದ್ವಾರವಿರುವ ಮಾರ್ಕೆಟ್ ಮುಂದಿನ ಚೌಕದಲ್ಲಿ ಕ್ಯಾಂಟ್‌ಗೆ ಹೋಗುವ ಬಸ್ಸುಗಳು ನಿಲ್ಲುತ್ತಿದ್ದವು. ಬಹಳ ಹೊತ್ತು ಕಾದು ಹೆಚ್ಚು ಕಾಲ ಕಾಯಲಾರದೆ – ನಾವು ಹೋಗಬೇಕಾಗಿದ್ದ ಸಿನೆಮಾಗೆ ತಡವಾಗುತ್ತಿತ್ತು – ಎಲ್ಲರಂತೆ ಇವರೂ ಫುಟ್‌ಬೋರ್ಡಿನ ಮೇಲೆ ನಿಂತು ಒಳಗೆ ಹೋಗಲು ಪ್ರಯತ್ನಿಸುತ್ತಿರುವಾಗ, ಇನ್ನಾವನೊ ಒಬ್ಬ ಬಂದು ಜರ್ಬಿನಿಂದ 'ಕೈ ತೆಗೆಯಿರಿ' ಎಂದು ಮೂದಲಿಸಿದ. 'ತಾಳಯ್ಯ, ನನ್ನ ತರುವಾಯ ಬಾ' ಎಂದರೂ ಕೇಳದೆ, ಇವರ ಕೈ ಜಗ್ಗಿ ಎಳೆಯಲು ಪ್ರಯತ್ನಪಟ್ಟಾಗ ಅವನನ್ನು ತಡೆದರು. ಅವನು ನಾಲ್ಕು ಗಜ ಉರುಳಿಬಿದ್ದ. ಮುಂದೆ ಅವನು ಇವರ ಮೇಲೆ ಕೈಯೆತ್ತಹೋದ. ಇದನ್ನು ನೋಡಿದವರು, 'ಕ್ಷಮಿಸಿ ಸ್ವಾಮಿ' ಎಂದು ಇವರಿಗೆ ಹೇಳಿ, ರೊಚ್ಚಿಗೆದ್ದವನನ್ನು ರೇಗಾಡಿದವನನ್ನು 'ಸುಮ್ಮನಿರೊ ಬಕರಾ, ಸತ್ತುಗಿತ್ತು ಹೋಗೀಯೆ!' ಎಂದರು. ಇವು ಅವರಿಗೆ ಲಕ್ಷ್ಯವಿಲ್ಲ. ಆ ಕೈಯಲ್ಲಿ ಒಂದು ಪೆಟ್ಟು ಬಿದ್ದರೆ ತಡೆಯುವ ಸಾಮರ್ಥ್ಯ ಆ ನಾಡಾಡಿಗಂತೂ ಇರಲಿಲ್ಲ. ಒಂದು ಹುಲಿ ತನ್ನ ಪಂಜದಿಂದ ಒಂದು

ಪೆಟ್ಟು ಕೊಟ್ಟರೆ ನಾಲ್ಕು ಟನ್ ತೂಕದ ಘಾತ ಪೆಟ್ಟು ಬಿದ್ದು ಒಂದು ಕೋಣದ ಬೆನ್ನೆಲುಬು ಮುರಿಯುವುದೆಂದು ಕೇಳಿದ್ದೇನೆ. ತತ್ಸಮ ಈ ಘಾತ. ಆದರೂ ಅವರು ಕೆಲವು ಬಗೆಯ ಮಾಂಸದ ಅಥವಾ ಎಲುಬಿನ ಜಾಡ್ಯಗಳಿಗೆ ಚಿಕಿತ್ಸೆ ಮಾಡುವಾಗ, ಆ ಕೈಗಳಿಂದ ನೀವುವಾಗ –ಸಂವಹನ ಕ್ರಿಯೆ – ಪೂರ್ತಿ ಅವರ ಅಂಗೈ ನಿಮ್ಮ ಮೈಮೇಲೆ ಆಡುವಾಗ, ಎಂಥ ಒತ್ತಡದಲ್ಲಿಯೂ ಎಷ್ಟು ಮೃದುವಾಗಿ ಆಡಬಲ್ಲುದೆಂಬುದನ್ನು ನಾನು ಬಲ್ಲೆ. ಯಾವುದೊ ಒಂದು ಸಮಯದಲ್ಲಿ ನನ್ನ ಬೆನ್ನ ಮೇಲೆ ಕೈಯಾಡಿಸುತ್ತಿರುವಾಗ ಇದ್ದುದೊ ಇಲ್ಲದ್ದೊ ಬೆನ್ನ ಒಳಭಾಗವನ್ನು ಬೇರೆ ಬೇರೆ ಮಾಡುತ್ತ ಅವರ ಬೆರಳು ಒಂದು ಕಡೆ ಯಾವುದೊ ನರವನ್ನೊ ಹುರಿಯನ್ನೊ ಮುಟ್ಟಿದಂತೆ ಆಯಿತು. 'ಇದೇನು?' ಎಂದೆ. 'ನಿಮ್ಮ ಬೆನ್ನಹುರಿ ಅಲ್ಲಿದೆ. ಅಲ್ಲಿನ ಯಾವುದೊ ಒಂದು ಅಂಶ ನಿಮಗೆ ಬಾಧೆ ಕೊಡುತ್ತಿದೆ' ಎಂದು ಅದನ್ನು ಮೃದುವಾಗಿ ತೀಡಿದರು.

ಮಹಾರಾಜ ಶ್ರೀ ಕೃಷ್ಣರಾಜಒಡೆಯರು ಕಡೆಕಡೆಯ ದಿನಗಳಲ್ಲಿ ಇವರಿಂದ ಈ ಸಂವಹನ ಚಿಕಿತ್ಸೆಯನ್ನು ಪಡೆದು, ಇವರ ಕೈ ಚಳಕಕ್ಕೂ ಶಕ್ತಿಗೂ ಮೃದುತೆಗೂ ನೋವು ಕಡಮೆ ಮಾಡುವ ಕುಶಲತೆಗೂ ತುಂಬ ಮೆಚ್ಚಿಕೊಂಡಿದ್ದರು. ಬೆಂಗಳೂರು, ಮೈಸೂರು, ಊಟಿ, ಎಲ್ಲಿಗೆಂದರೆ ಅಲ್ಲಿಗೆ ಕರೆಸಿಕೊಂಡು ಅವರ ನೆರವು ಪಡೆಯುತ್ತಿದ್ದರು. ಒಮ್ಮೆ ಅವರ ತೋಳನ್ನು ಹಿಡಿದು ಅದರ ಆಕೃತಿಯನ್ನು ಅವರ ಮೈ ಕಟ್ಟನ್ನು ನೋಡಿ ನಮ್ಮ ರಾಜ್ಯದ ಗಂಡುಮಕ್ಕಳಿಲ್ಲ ಈ ರೀತಿಯ ಸಮರೋಚಿತ ಅಂಗಾಂಗಸೌಷ್ಠವವುಳ್ಳವರಾಗಬೇಕು ಎಂದು ಅದಕ್ಕೆ ಅತುಕೊಂಡರಂತೆ. ವೆಬರ್ (Weber) ಎಂಬೊಬ್ಬ ಜರ್ಮನ್ ವಸ್ತಾದಿ ಇಲ್ಲಿ ನಡೆದ ಅಂತಾರಾಷ್ಟ್ರೀಯ ಕುಸ್ತಿಗಳನ್ನು ಗೆದ್ದವನನ್ನು ತಮ್ಮ ಅಂಗರಕ್ಷಕ ರಾವುತ ದಳಕ್ಕೆ ಶಿಕ್ಷಕನಾಗಿ ನೇಮಿಸಿಕೊಂಡಿದ್ದರು. ಅತನ ಶಕ್ತಿ ಅತಿಶಯವಾದ್ದು. ಅತನನ್ನು ಕುರಿತು "ನಿಮ್ಮ ಅಭಿಪ್ರಾಯವೇನು"? – ಎನ್ನಲು, 'ಸ್ವಾಮಿ, ಅದು ಮೈ ಅಲ್ಲ. ಕಲ್ಲು, ಉಕ್ಕು. ಆ ಶಕ್ತಿ ಅಸಾಧಾರಣ' ಎಂದಾಗ ವೆಬರ್ 'ಅಂಗಸಾಧನೆ ನಿಮ್ಮಂತೆ ಮಾಡಿದರೆ ನನ್ನದೂ ಹಾಗಾಗುತ್ತಿತ್ತು. ನಮ್ಮ ಪಹಲ್ವಾನರು ಶಕ್ತಿ ತೂಕ ಬೆಳೆಸಬಹುದು; ನಿಮ್ಮಂಥ ಸಮತೋಲ ಬೆಳಸುವುದು ಒಂದು ಕಲೆ, ಒಂದು ಪುಣ್ಯಸಾಧನೆ' ಎಂದರಂತೆ.

ನಾನು ಇಂಟರ್‌ಮೀಡಿಯಟ್ ಕಾಲೇಜಲ್ಲಿ ಉಪಾಧ್ಯಾಯನಾಗಿದ್ದಾಗ, ಕೆಲವು ಸಲ ಅವರು ಆ ಕಡೆ ಬಂದು ನಾವಿಬ್ಬರೂ ಸಂಜೆಯ ಹೊತ್ತಿಗೆ ಕಬ್ಬನ್ ಪಾರ್ಕ್ ಕಡೆಗೊ ಯಾವುದೊ ಸಿನೆಮಾ ಮಂದಿರದ ಕಡೆಗೊ ಹೋಗುವ ವಾಡಿಕೆಯಿತ್ತು. ಅವರೊಡನೆ ಬಂದಾಗ ವಿದ್ಯಾರ್ಥಿಗಳು ಆಡಿಕೊಂಡುದುಂಟು. ಹಿಂದೆ ವೆಂಕಣ್ಣಯ್ಯನವರ ಸಂಬಂಧದಲ್ಲಿ the long and the short ಎಂದ ಹಾಗೆ, the thick and the thin ಎಂದು ಕೊಂಡರು. ಆದರೆ ಬಲಿಷ್ಠರಾಗಿ ಕಾಲೆಜಿಗೆಲ್ಲ ದುರ್ವಾರ್ಯರಾಗಿದ್ದ ವಿದ್ಯಾರ್ಥಿಗಳು ನನ್ನ ಈ ಸ್ನೇಹವಿಶೇಷವನ್ನು ನೋಡಿ ಹದ್ದಿನಲ್ಲಿ ನಡೆದುಕೊಂಡುದುಂಟು. ನಾನೇ ತಮಾಷೆಗೆ 'ನನ್ನ ಕೈಯಲ್ಲಾಗದಿದ್ದರೇನು, ನನ್ನ ಸ್ನೇಹಿತರು ಅಯ್ಯರ್ ಬರುತ್ತಾರೆ, ಅವರಿಂದ ನಿಮ್ಮ ಎಮಕೆ ಮುರಿಸಿಯೇನು' ಎಂದು ಗುಂಪುಕೂಡಿದ ನೂರು ಮಂದಿಯಲ್ಲಿ ನುಡಿದುದುಂಟು. ನಾನು ಹೇಳಿಯೇನೆ? ಅವರು ಮಾಡಿಯಾರೆ? –ಎಂಬುದಲ್ಲ. ಅಯ್ಯರ್ ಬಿಮ್ಮು (prestige) ಅದು.

ವ್ಯಾಯಾಮ, ಸಂವಹನದ ಮೂಲಕ ಚಿಕಿತ್ಸೆ, ಇವುಗಳ ಜೊತೆಗೆ ಆಯುರ್ವೇದ ವಿಧಾನಗಳನ್ನೂ ಬಲ್ಲರು. ಈಚೆಗೆ ultraviolet therapy – ಇನ್ನೂ ಎಂಥೆಂಥದೊ ವಿದ್ಯುತ್ ಚಿಕಿತ್ಸೆ ಬಳಸುವರು. ಎಲ್ಲೆಲ್ಲಿಯು ಕೈಬಿಟ್ಟಿದ್ದ ನಾಲ್ಕಾರು ಮಂದಿ ದೇಶವಿದೇಶಗಳ ರೋಗಪೀಡಿತರು ಅವರಲ್ಲಿ ಕೆಲವು ತಿಂಗಳು ಚಿಕಿತ್ಸೆಪಡೆದು ಗುಣಹೊಂದಿದ್ದುಂಟು. ಮಧುರೆಯ ಒಂದು ಶ್ರೀಮಂತ ಚೆಟ್ಟಿಯಾರ್ ಮನೆತನದ ಹಲವರು ಇವರ ಭಕ್ತರು. ಅವರಲ್ಲಿ ಹಲವರು ಇವರಲ್ಲಿ ಆರೋಗ್ಯಕ್ಕೆ ವ್ಯಾಯಾಮಕ್ಕೆ ಬಂದಿದ್ದವರು. ಕೆಮ್ಮೊ ಶ್ವಾಸಕೋಶದ ಯಾವುದೊ ಒಂದು ಕಾಯಿಲೆಯಿಂದಾಗಿಯೊ ಎಲ್ಲರೂ ಕೈ ಬಿಟ್ಟಿದ್ದ ಒಬ್ಬ ಹುಡುಗನನ್ನು ಮೂರು–ನಾಲ್ಕು ತಿಂಗಳ ಕಾಲ ತಮ್ಮಲ್ಲಿಯೇ ಇರಿಸಿಕೊಂಡು, ಅವನಿಗೆ ಪುನಃ ಆರೋಗ್ಯ ಶಕ್ತಿ ಬರುವಂತೆ ಮಾಡಿ ಉಳಿಸಿಕೊಟ್ಟುದು ನನ್ನ ಅನುಭವದಲ್ಲಿದೆ. ಆ ಮನೆಯವರಿಗೆ ಇವರನ್ನು ಕಂಡರೆ ದೇವರೆಂಬ ಅಭಿಮಾನ ಭಕ್ತಿ ಇದೆ. ಸೋದರರಲ್ಲಿ ಆಸ್ತಿ ಹಂಚಿಕೆಯಾಗಬೇಕಾಗಿ ಬಂದಾಗ ಇವರನ್ನು ಕರೆದುಕೊಂಡು ಹೋಗಿ ಸಮಾಧಾನವಾಗುವಂತೆ ಎಲ್ಲರೂ ಒಪ್ಪುವಂತೆ ಸ್ಥಾಪಿಸಿದರು. ಅವರ ಮನೆಗೆ ಆ ಕಾಲದ ಸ್ಯಾಂಡೋಗಳಲ್ಲಿ ಪ್ರಖ್ಯಾತರಾದವರೆಲ್ಲರೂ ಬರುತ್ತಿದ್ದರು. ರಾಜಾ ಸ್ಯಾಂಡೋ ಮತ್ತು ಅವರ ಕುಟುಂಬ ತುಂಬಾ ಹತ್ತಿರದ ಗೆಳೆಯರು. ಇನ್ನೊಬ್ಬರು ಆಮೇಲೆ ಸಂನ್ಯಾಸಿಯಾಗಿ ಪ್ರಖ್ಯಾತ ಆಶ್ರಮದ ಗುರುಗಳಾದರು. ಮಧುರೆಯ ಶ್ರೀಮಂತರಲ್ಲಿ ಒಬ್ಬರಾದ ಕೃಷ್ಣಮೂರ್ತಿ ಎಂಬ ಒಬ್ಬರು ಯೂರೋಪಿನಲ್ಲಿ ಪ್ರವಾಸ ಮಾಡುತ್ತ ತಮ್ಮ ಪ್ರವಾಸದ ನೆನಪಿಗಾಗಿ ಇಟಲಿಯಿಂದ ಒಂದು 'ಅಪಾಲೊ' ಅಮೃತಶಿಲೆಯ ವಿಗ್ರಹವನ್ನು ಕಳಿಸಿಕೊಟ್ಟರು. ಹಾಗೆಯೇ ಕೈಲಾಸಂ ಅವರು ಒಂದು ಚಲನಚಿತ್ರವನ್ನು ತಯಾರುಮಾಡಿಕೊಳ್ಳಲೆಂದು ಇವರ ಸಿಫಾರ್ಸಿನಂತೆ ಮಧುರೆಯಲ್ಲಿ ಎಲ್ಲ ಏರ್ಪಾಡುಗಳನ್ನು ಮಾಡಿ ಅದಕ್ಕೆ ಬೇಕಾದ ಹಣವನ್ನು, ನಟನಟಿಯರ ನಿಯೋಜನೆಯನ್ನು ಮಾಡಿಕೊಟ್ಟರು. ಅದು ನೆರವೇರಿದ್ದರೆ ಮಧುರೆಯ ಅವರಿಗೂ ಕೈಲಾಸಂ ಅವರಿಗೂ ದೊಡ್ಡ ಕೀರ್ತಿ ಬರಬಹುದಿತ್ತು. ನೆರವೇರಲಿಲ್ಲ ಅಷ್ಟೇ. ನಾ ಬಲ್ಲಂತೆ ಈ ಪ್ರಯೋಗಸಂಬಂಧದಲ್ಲಿ ಅಯ್ಯರ್ ಅವರಿಗೆ ಬೇಸರ ಉಂಟಾಯಿತು. ಆ ಬೇಸರ ಅವರನ್ನು ಕೆಲವು ದಿವಸ ವ್ಯಸ್ತರನ್ನಾಗಿ ಮಾಡಿತ್ತು. 'ಕೈ' ಕೈಯಲ್ಲಿ ಇನ್ನೆಷ್ಟೊ ಸಾವಿರ ಸಿಗರೇಟ್ ಡಬ್ಬಿಗಳು ಗಾಳಿಯಲ್ಲಿ ಹೊಗೆ – ಬೂದಿಯಾಗಿ ಹೋಯಿತು. ಮೂರು–ನಾಲ್ಕು ತಿಂಗಳಲ್ಲಿ ಎಂಟು ಸಾವಿರ ರೂಪಾಯಿ ಬೆಲೆಯ ಪಾನಕ ಬಚ್ಚಲಿಗೆ ಹೋಯಿತು.

ಇನ್ನೊಮ್ಮೆ ಸಮಸ್ತ ಭಾರತ ಕೀರ್ತಿಯನ್ನು ಪಡೆದಿದ್ದ ಹಿಂದಿನ ಅಭಿನೇತ್ರಿ ಒಬ್ಬಾಕೆಯೊಡನೆ ಒಂದು ಚಿತ್ರಕ್ಕೆ ಒಪ್ಪಂದವಾಗಿ ಒಪ್ಪಬೇಕಿತ್ತು. ಹೇಗೊ ಏನೊ ಇವರ ಮನೆಯಲ್ಲಿಯೇ ಸಂಧಾನಗಳು ನಡೆದವು. ಆಕೆ ಹಾಡುಗಾರಿಕೆಗೂ ಪ್ರಖ್ಯಾತಳು. ಚಲನಚಿತ್ರದ ಗಾಯಕಿಯೂ ಆಗಿದ್ದಳು. ಒಪ್ಪಂದದ ಕಾಲದಲ್ಲಿ ಗಂಟೆಗೆ ಏಳುರೂಪಾಯಿಯಂತೆ ಫೀ (fee) ಒಡಂಬಡಿಕೆಯಾಯಿತು. ಕಲ್ಕತ್ತದ New Theatre ನಿರ್ದೇಶನ. ಅಭಿನಯಗಳ ಸಂಬಂಧದಲ್ಲಿ ಯಾವುದೊ ತಕರಾರುಂಟಾಗಿ ಆಕೆ ಮುಂದೆ ಅಭಿನಯಿಸುವುದಿಲ್ಲವೆಂದು ಹಟ ಹಿಡಿದರಂತೆ. ಇಲ್ಲಿಂದ ಇವರು ಹೋಗಬೇಕಾಯಿತು. ಯಾರು ನಿರ್ದೇಶಕರಾಗಿದ್ದರೊ ಅವರೇ ನಾಯಕಪಾತ್ರ ವಹಿಸುತ್ತಿದ್ದರು. ಆತ ಈಕೆಗೆ ಪ್ರೀತಿ

ತೋರಿಸಬೇಕಾದ ಸಂದರ್ಭಗಳಲ್ಲಿ ಕೂಡ ಭಯವೊ ಸಂಕೋಚವೊ ಪಟ್ಟುಕೊಂಡು ಏನು ಮಾಡಿದರೂ ಮುಂದಿನ ಅಭಿನಯ ನಡೆಯದೆ ನಿಂತಿತ್ತಂತೆ. ಇವರಿಗೆ ಮೊರೆ ಬಂತು. ಆಕೆ ಹೇಳಿದರು: 'ನಾನೇನು ಮಾಡಲಿ? ಸಂತೋಷವಾಗಿ ಒಂದು ಸಲ ಈತ ನನ್ನನ್ನು ನೋಡಲಾರ, ಮಾತನಾಡಲಾರ, ಬಳಿಗೆ ಬರಲಾರ, ಪ್ರೀತಿಯಿಂದ ಕುಳಿತುಕೊಳ್ಳಲಾರ, ನಾನು ಈತನಿಗೆ ಹೇಗೆ ಪ್ರೀತಿಯ ಪ್ರತಿಕ್ರಿಯೆ ತೋರಿಸಲಿ? ಈತನೇ ನಾಯಕ; ಈತನೇ ನಿರ್ದೇಶಕ' ಎಂದುಬಿಟ್ಟಳಂತೆ. ಎರಡೂ ಕಡೆಯವರಿಗೆ ಸಮಾಧಾನ ಹೇಳಿ, ಆ ನಿರ್ದೇಶಕನಿಗೂ ಸಲಹೆಗಳನ್ನು ಕೊಟ್ಟು ಚಿತ್ರ ಹೊರಬರುವುದಕ್ಕೆ, ಹಣ ಹಾಕಿದವರಿಗೆ ನಷ್ಟವಾಗದಂತೆ ಏರ್ಪಾಟು ಮಾಡಿ ಅಯ್ಯರ್ ಬರಬೇಕಾಯಿತು.

ಸುಮಾರು ೨೦–೩೦ ವರ್ಷಗಳಿಗೆ ಹಿಂದೆ ಇವರಲ್ಲಿ ಅನುಮಾನ ಮಾಡಲಾಗದಿದ್ದ ಸಾಹಿತ್ಯನಿರ್ಮಾಣಶಕ್ತಿ ಇವರು ಬರೆದ 'ದೆಯ್ಯದ ಮನೆ' ಎಂಬ ಕಥೆಯ ರಚನೆಯಲ್ಲಿ ಹೊಸ ಬಗೆಯ ಕಥಾಪ್ರಪಂಚವನ್ನು, ರಚನೆಯನ್ನು, ರಂಗನ್ನು ಕನ್ನಡನಾಡು ಕಂಡಿತು. ಕತೆಗಾರಿಕೆಯ ಶಕ್ತಿ, ವಿಚಿತ್ರ ಸನ್ನಿವೇಶಗಳನ್ನೂ ತೀವ್ರವಾಗಿ ವರ್ಣಿಸುವ ರಚನಾಶಕ್ತಿ, ವರ್ಣನಾಶಕ್ತಿ ಅವರಿಗಿದೆ. ಅಪಾರ್ಥಿವದಂಥ ಆವರಣ ನಿರ್ಮಾಣ ಮಾಡುವ ಶಕ್ತಿ ಇತರ ಹಲವು ಸಣ್ಣಕತೆಗಳಲ್ಲಿಯೂ ಇನ್ನಷ್ಟು ತೀವ್ರವಾಗಿ ಕಥಾಸನ್ನಿವೇಶಗಳಲ್ಲಿ ಒಂದು ಬಗೆಯದನ್ನು 'ರೂಪದರ್ಶಿ'ಯಲ್ಲಿಯೂ ಇನ್ನೊಂದನ್ನು 'ಶಾಂತಲಾ'ದಲ್ಲಿಯೂ ನಿರ್ಮಿಸಿದ್ದಾರೆ. 'ರೂಪದರ್ಶಿ' ಅವರು 'ರೀಡರ್ಸ್ ಡೈಜಸ್ಟ್'ಲ್ಲಿ ಓದಿದ ಒಂದು ಪುಟದ ಕಥಾಸಂಗ್ರಹದಿಂದ ಸ್ಫೂರ್ತಿಗೊಂಡು, ವಿಸ್ತರಿಸಿದ ಕಾದಂಬರಿ. ಯಾವ ಹುಡುಗನು ಹುಡುಗ ಯೇಸುಕ್ರಿಸ್ತನ ಚಿತ್ರಣಕ್ಕೆ ರೂಪದರ್ಶಿ (model) ಆಗಿ ಭಾಗ್ಯವಶಾತ್ ಮೈಕೆಲ್ ಏಂಜೆಲೊ ಎಂಬ ಚಿತ್ರಕಾರನಿಗೆ ದೊರಕಿದನೊ ಅವನೇ ಮುಂದೆ ದ್ರೋಹಿಯಾದ ಜುದಾಸನ ಪಾತ್ರ ನಿರ್ಮಾಣಕ್ಕೂ ರೂಪದರ್ಶಿಯಾದ ಸನ್ನಿವೇಶವನ್ನು ವೈದೃಶ್ಯದ ಪರಾಕಾಷ್ಠೆಯಲ್ಲಿ ಕಾದಂಬರಿ ಕಾಣಿಸುತ್ತದೆ. ಅದರಿಂದ ಚಿದರಿಬಂದ ಒಂದು ಕಿಡಿ ಇನ್ನೊಂದು ಸಣ್ಣ ಕಾದಂಬರಿ 'ಲೀನಾ' ಎಂಬುದು. 'ಶಾಂತಲಾ' ಹೆಚ್ಚು ವಿಸ್ತಾರವಾದ ಭೂಮಿಕೆಯದು. ಹೊಯ್ಸಳ ಚಕ್ರವರ್ತಿ ವಿಷ್ಣುವರ್ಧನನ ರಾಣಿ, ನಾಟ್ಯಸರಸ್ವತಿ ಎಂಬ ಕೀರ್ತಿಯ ಶಾಂತಲಾದೇವಿ. ಚಕ್ರವರ್ತಿಗೂ ರಾಣಿ ಶಾಂತಲಾದೇವಿಗೂ ಇದ್ದ ಪ್ರೇಮ ಅಭೂತಪೂರ್ವವಾದ್ದು. ಅವಳಿಗೆ ಮಕ್ಕಳಾಗದ ಒಂದು ದೋಷ ಮಾತ್ರ ಬೇರೆ ಕಡೆಗೆ ರಾಜನ ಮನಸ್ಸನ್ನು ಒಲಿಸಿತಾದರೂ ಒಂದು ನಿಮಿಷವೂ ಇವರ ಪರಸ್ಪರ ಪ್ರೀತಿಗೆ ಭಂಗ ತರದೆ ಇವರ ಪ್ರೇಮ ಜೀವನವನ್ನೂ ಧರ್ಮಜೀವನವನ್ನೂ ಕಲಾಭಿಮಾನವನ್ನೂ ನಡಸಿತಂದಿತು. ಇವರು ಹೊಯ್ಸಳ ಕಾಲದ ಚರಿತ್ರೆಯನ್ನೆಲ್ಲ ಕತೆ, ಶಾಸನಗಳನ್ನೆಲ್ಲ ಆ ಕಾಲದಲ್ಲಿ ಓದಿದರು. ಆದರೂ ಪಾಂಡಿತ್ಯದ ಯಾವ ಅಬ್ಬರವೂ ಇಣಿಕಿಹಾಕದಂತೆ ಕಥಾಸನ್ನಿವೇಶಗಳನ್ನು ಇವರು ಬೆಳಸುವ ರೀತಿ ಕನ್ನಡಕ್ಕೆ ಕೀರ್ತಿ ತರುವ ಕಾದಂಬರೀ ದಾನ. ಇದನ್ನಾಗಲಿ, ಆಮೇಲೆ ಅವರು ರಚಿಸಿರುವ ಸಣ್ಣಕತೆಗಳನ್ನಾಗಲಿ ಕುರಿತು ಹೆಚ್ಚಾಗಿ ಹೇಳಲು ಇದು ಸಂದರ್ಭ, ಅವಕಾಶ ಅಲ್ಲ.

ಎರಡು ಅಂಶಗಳು ಮೊದಲಿಂದಲೂ ಇವರ ವಿಶಿಷ್ಟ ಲಕ್ಷಣಗಳಾಗಿ ಕಂಡಿವೆ. ಇವರಿಗೆ ಅತಿಮಾನುಷವಾದ ಜೀವ, ಚೈತನ್ಯಗಳ ವಿಷಯದಲ್ಲಿ ವಿಶ್ವಾಸವಿದೆ. ಶಾಂತಲಾ

ತೀರಿಕೊಂಡ ಮೇಲೆ ಆಕೆಗೂ ವಿಷ್ಣುವರ್ಧನನಿಗೂ ಸಂಭಾಷಣೆ ಮತ್ತು ಸಂಪರ್ಕ ಉಳ್ಳಂತೆ, ಮುಂದೆ ಬಂದ ಇತರ ರಾಣಿಯರಲ್ಲಿ ಆಕೆಯ ಪ್ರಭಾವ ಉಳಿದು ಆ ಮನೆಯನ್ನು ಕಾಪಾಡಿಕೊಂಡು ಬಂದಿತೆಂಬಂತೆ ಅವರು ವಿಸ್ತರಿಸಿದ್ದರೂ ಆ ಭಾಗ ಈಗಿರುವಂತೆ ಶಾಂತಲಾದಲ್ಲಿ ಸೇರಿಸಬೇಕಿತ್ತು. ಇದೇ ಬಗೆಯ ಅತಿಮಾನುಷ ವ್ಯಾಪಾರ 'ಸಮುದ್ಯತಾ' ಎಂಬ ಕಥಾಸಂಕಲನದ ಒಂದೆರಡು ಕತೆಗಳಲ್ಲಿ ಹೇಗಿದೆಯೆಂಬುದನ್ನು ಕಾಣಬಹುದು. ಎರಡನೆಯ ಲಕ್ಷಣ ಗೇಲಿ, ಲೇವಡಿ, ಹಾಸ್ಯ ಇವುಗಳಿಗೆ ಪಕ್ಷಪಾತವುಳ್ಳ ಮನಸ್ಸು ಅವರದು. ಅದನ್ನು ಅನೇಕ ಕತೆಗಳಲ್ಲಿ, ಬಾಯಲ್ಲಿ ವರ್ಣನೆ ಮಾಡುತ್ತಾರೆ, ಯಾರಿಗೂ ನೋವಾಗದಂತೆ. ಆದರೆ ಇನ್ಸ್‌ಪೆಕ್ಟರ್ ಗದಹ ಎಂಬ ಒಂದು ಲೇವಡಿಕಥೆಯಲ್ಲಿ ಈ ಅಂಶ ಒಂದು ವಿಶೇಷ ಕಥನ ವ್ಯಾಪಾರವಾಗಿ ಬೆಳೆಯುತ್ತದೆ. ಇಷ್ಟಾದರೂ ಸಹಜವಾದ ಮಾನವತೆ, ಸೌಹಾರ್ದ ಅಲ್ಲಿಯೂ ಆಕೃತಿಗೊಂಡು ನಿಲ್ಲುತ್ತದೆ. ನಾಟಕಗಳೆಂದರೆ ಮೊದಲಿಂದಲೂ ಇವರಿಗೆ ಪ್ರೀತಿಯೆಂದು ಹೇಳಿದೆ. ಈ ೨೫–೩೦ ವರ್ಷಗಳಿಂದ 'ರವಿ ಕಲಾವಿದರು' ಎಂಬ ನಾಟಕ ಸಂಸ್ಥೆಯ ಅಧ್ಯಕ್ಷರಾಗಿ ಹತ್ತಾರು ನಾಟಕ ಪ್ರಯೋಗಗಳನ್ನು ನಡಸಲು, ನಿರ್ದೇಶಿಸಿ, ನಟನಟಿಯರನ್ನು ಸಿದ್ಧಪಡಿಸಲು ಶ್ರಮಿಸಿದ್ದಾರೆ. ಸ್ವಂತವಾಗಿ ಇಬ್ಸನ್ನನ 'ಡಾಲ್ಸ್ ಹೌಸ್' 'ಎನೆಮಿ ಆಫ್ ದಿ ಪೀಪಲ್' 'ಮಾಸ್ಟರ್ ಬಿಲ್ಡರ್' ಮುಂತಾದ ನಾಟಕಗಳನ್ನೂ 'ಮೃಚ್ಛಕಟಿಕ'ವನ್ನೂ ಕನ್ನಡಿಸಿ, ನಾಟಕ ತಂತ್ರಕ್ಕೆ ಅಳವಡಿಸಿ ಸಾಹಿತ್ಯ ಸೇವೆಮಾಡಿದ್ದಾರೆ.

ಎಲ್ಲಕ್ಕೂ ಮೀರಿದ್ದು ಇವರ ಸೌಜನ್ಯ, ಮಾನವತೆ. ಹತ್ತಾರು ಸನ್ನಿವೇಶಗಳಲ್ಲಿ ಅದರ ಸಿಹಿಯನ್ನು ಕಂಡು ಉಂಡವನು ನಾನು. ಯಾವುದೊ ಸಂದರ್ಭದಲ್ಲಿ ನಾನು ನನ್ನ ಮನೆ ಬಿಟ್ಟು ಬೇರೆ ಮನೆ ಮಾಡಬೇಕಾದ ಸಂದರ್ಭ ಒದಗಿತು. ಪರಿಷತ್ತಿನ ಉಪಾಧ್ಯಕ್ಷರನ್ನು ಕೇಳಿಕೊಂಡು ನಾನು ಅಲ್ಲಿ 'ಕೋಶಾಧ್ಯಕ್ಷ' ಕೆಲಸ ಮಾಡುತ್ತಿದ್ದ ಕೋಣೆಯಲ್ಲಿ ಎರಡು ದಿವಸವಿರಲು ಆಶ್ರಯ ಬೇಡಿ ಅಪ್ಪಣೆ ಪಡೆದೆ. ನಾನು ಅಂಥ ಸನ್ನಿವೇಶದಲ್ಲಿ ಅಲ್ಲಿದ್ದ ಸಂಗತಿ ಶಂಕರಪುರದಲ್ಲಿದ್ದ ಅವರಿಗೆ ತಿಳಿದು, ಪರಿಷತ್ತಿಗೆ ಕೂಡಲೇ ಧಾವಿಸಿದರು. ರೂಮಿನ ಹೊರಗೆ ನಿಂತು ನಿರಾಕರಿಸಲು ಅಸಾಧ್ಯವಾದ ರೀತಿಯಲ್ಲಿ ನನ್ನನ್ನು ಒಪ್ಪಿಸಿ ತಮ್ಮ ಮನೆಗೆ ಕರೆದುಕೊಂಡು ಹೋಗಿ ನನಗೆ, ನನ್ನ ಮನೆಯವರಿಗೆ ಆಶ್ರಯ ಕೊಟ್ಟರು. ಅವರ ಮಡದಿ ನಮಗೆ ಇನ್ನೊಂದು ಮನೆ ಬಾಡಿಗೆಗೆ ದೊರೆಯುವಂತೆ ಮಾಡಿಕೊಟ್ಟರು. ಇದನ್ನು ನನ್ನ ಜೀವನದಲ್ಲಿ ಮರೆಯಲಾರೆ. ಆ ಸಂದರ್ಭವಾಗಿ ರೂಮಿನ ಹೊರಗೆ ನಿಂತ ಅವರ ನಿಲವು 'ನೀವಿಲ್ಲಿ ಬಂದಿರುವುದಕ್ಕೆ ನಾವೆಲ್ಲ ಸತ್ತು ಹೋಗಿದ್ದೇವೆಯೆ' ಎಂದು ನುಡಿಯುವಾಗ ಕಂಡ ಆ ಮುಖವನ್ನು, ಆ ಮಾತನ್ನು ಹೇಗೆ ತಾನೆ ಮರೆಯಲಿ? ಆಸ್ಕರ್ ವೈಲ್ಡ್ ನಿರಾಶೆಯ ಒಂದು ಸಂದರ್ಭದಲ್ಲಿ, ತನ್ನನ್ನು ಜೈಲಿಗೆ ಒಯ್ಯುವ ದಾರಿಯಲ್ಲಿದ್ದಾಗ ಹಿಂದಕ್ಕೆ ಸರಿದು ಒಬ್ಬ ಯುವಕ ಮರ್ಯಾದೆಯಲ್ಲಿ ತನ್ನ ಹ್ಯಾಟನ್ನು ಮೇಲೆತ್ತಿ ವಂದನೆ ಸಲ್ಲಿಸಿದ್ದನ್ನು De Profundis ಅಲ್ಲಿ ವರ್ಣಿಸುತ್ತ 'I cherish the memory of that act of the unknown young man with the myrrh and cassia of many tears' ಇತ್ಯಾದಿಯಾಗಿ ಹೇಳುತ್ತಾನೆ.

ದೇವತೆಗಳನ್ನು ವರ್ಣಿಸುವಾಗ ಅನೇಕ ಪರ್ಯಾಯ ಪದಗಳು ಬರುತ್ತವೆ. ಅವುಗಳಲ್ಲಿ 'ಸುಮನಸಾಃ' ಎಂಬ ಪದ ಒಂದು ಉಂಟು. ಈ ಸೌಮನಸ್ಯವೇ ದೇವತೆಗಳಿಗೆ ದಿವ್ಯತೆಯನ್ನು ಕೊಡುವ ಲಕ್ಷಣ. The humane ones ಎಂಬ ಮಾತು ಈಷ್ಕಿಲಸನ ನಾಟಕದಲ್ಲಿ ಹೊಸ ಕಾಲದ ದೇವತೆಗಳ ವರ್ಗವನ್ನು ಈ ಸೌಮನಸ್ಯದಲ್ಲಿ ಕಾಣಿಸುತ್ತದೆ. Human ಮನುಷ್ಯನನ್ನೆ humane ಸುಮನಸವಾಗಿ ಸೌಹಾರ್ದ ಮಾಡುವ ಲಕ್ಷಣ. ಮಾನವತೆಯ ಪರಮಸಂಸ್ಕಾರದ ಲಕ್ಷಣ. ಸೌಮನಸ್ಯ ಇಲ್ಲವಾದರೆ ದೇವತ್ವಕ್ಕೆ ಬೆಲೆ ಏನು ಬಂತು? ಮಾನವತೆಗೆ ಸಾರ್ಥಕವೆಲ್ಲಿ? ಆ ಮಾನವತೆಯನ್ನು ಎಲ್ಲಿಂದ ತರೋಣ ಇಂದಿನ ಈ ನಿರ್ಘೃಣ ಕಾಡುಜೀವನದಲ್ಲಿ? ಇಂಥ ಸೌಮನಸ್ಯದ ಸಂಸ್ಕಾರವನ್ನು ಕಾಣುವ ಭಾಗ್ಯ ನನ್ನ ಜೀವಕ್ಕೆ ಇಂಥ ಒಬ್ಬಿಬ್ಬರು ಸ್ನೇಹಿತರಲ್ಲಿ ದೊರೆತು ನನ್ನ ಹೃದಯ ಕೃತಜ್ಞವಾಗಿದೆ ಎಂದು ಹೇಳಿ ಇದನ್ನು ಮುಗಿಸುತ್ತೇನೆ.

ಡಾ. ಡಿ. ಸಿ. ಪಾವಟೆ

ಡಾ. ಪಾವಟೆ ಬೊಂಬಾಯಿ ಆಧಿಪತ್ಯದಲ್ಲಿ ಉನ್ನತ ವಿದ್ಯಾಧಿಕಾರಿಗಳಾಗಿ ಇದ್ದರು. ಆಮೇಲೆ ಕರ್ನಾಟಕ ವಿಶ್ವವಿದ್ಯಾಲಯದ ಉಪಕುಲಪತಿ ಆಗಿ, ಉತ್ತರ ಕರ್ನಾಟಕದಲ್ಲಿ ಹೆಚ್ಚು ವಿಶೇಷವಾಗಿ ಕೆಲಸ ಮಾಡಿ, ಅದಕ್ಕೆ ಒಂದು ಪ್ರಾಧಾನ್ಯವನ್ನು ತಂದರು. ಆ ಬಳಿಕ ಪಂಜಾಬಿನ ರಾಜ್ಯಪಾಲರಾಗಿ ಯಶಸ್ವಿಯಾಗಿ ಆ ಕಾರ್ಯನಿರ್ವಹಿಸಿ ಬಂದು, ತೀರಿಕೊಳ್ಳುವ ಈಚಿನವರೆಗೆ ಬಹುಮಟ್ಟಿಗೆ ಬೆಂಗಳೂರಲ್ಲಿ ವಿಶ್ರಾಂತಿ ಪಡೆಯುತ್ತಿದ್ದರು. ಅವರು ಎಲ್ಲಿಯೇ ಇರಲಿ, ಹೇಗೇ ಇರಲಿ ಅವರ ವ್ಯಕ್ತಿತ್ವ, ಕ್ರಿಯಾಶಕ್ತಿ ಅತಿಶಯವಾದುದು. ನಾನು ಆಪ್ತವಾಗಿ ಅವರ ಜೀವನಚರಿತ್ರೆಯನ್ನು ಓದಿಲ್ಲ. ಹೊನ್ನಾವರದಲ್ಲಿ ಒಂದು ಕಾಲೇಜಲ್ಲಿದ್ದಾಗ ಅವರ ಪುಸ್ತಕವೊಂದನ್ನು – ಆ ಕಾಲೇಜಿನ ಅಧ್ಯಕ್ಷನಾಗಿದ್ದ ಕಾರಣದಿಂದ ಎನ್ನುತ್ತೇನೆ – ನನಗೆ ಕಳಿಸಿದರು. ಅಲ್ಲಿ ಅವರು ತಾನು ವಿದ್ಯಾಪ್ರಚಾರ ಅಥವಾ ವಿದ್ಯಾವಿಚಾರಗಳನ್ನು ಕುರಿತು ಬರೆಯುವುದಕ್ಕಿಂತ ಹೆಚ್ಚಾಗಿ – Educationist ಎಂಬುದಕ್ಕಿಂತ – Educational Administrator – ಆಡಳಿತಾಧಿಕಾರಿ ಎಂಬಂತೆ ಹೆಚ್ಚಾಗಿ ತಮ್ಮನ್ನು ಭಾವಿಸಿಕೊಂಡಿದ್ದೇನೆಂದು ಬರೆದಿದ್ದಾರೆಂದು ನೆನಪು. ಪುಸ್ತಕ ಚೆನ್ನಾಗಿದೆ; ಹೊನ್ನಾವರದಲ್ಲಿಯೇ ಇದೆ. ಆದ್ದರಿಂದ ಅದನ್ನು ಕುರಿತು ಏನೂ ಹೇಳಲಾರೆ. ಇದೆಲ್ಲಾ ಆಗುವುದಕ್ಕೆ ಮುಂಚೆ ಅವರು ಗಣಿತಶಾಸ್ತ್ರದಲ್ಲಿ ಉತ್ತಮ ಸಂಸ್ಕಾರವುಳ್ಳವರಾಗಿ ಬಹುಶಃ ಕೇಂಬ್ರಿಜ್ಜಲ್ಲೊ ಆಕ್ಸ್‌ಫರ್ಡಲ್ಲೊ 'ರ್‍ಯಾಂಗ್ಲರ್' ಎಂಬುದಕ್ಕೆ ಸಮನಾದ ಪದವಿಯನ್ನು ಪಡೆದು ಬಂದವರೆಂದು ಕೇಳಿದ್ದೇನೆ. ಆದ್ದರಿಂದ ಅವರ ಮನದಲ್ಲಿ ಯಾವುದು ಬಂದರೂ ಅದರಲ್ಲಿ ನಿಶಿತತೆ, ನಿಶ್ಚಯ, ಎಂದರೆ ತೀರ್ಮಾನಬುದ್ಧಿ ಇರುತ್ತಿತ್ತು. ಅದನ್ನು ಅನೇಕ ಬಗೆಯಾಗಿ ಕನ್ನಡನಾಡು ಕಂಡಿದೆ. ಮಾನವನಾಗಿ ಒಬ್ಬ ವ್ಯಕ್ತಿ ಹೇಗೆ ಕಂಡಿದ್ದಾರೆ ಎಂಬುದನ್ನು ಕುರಿತೇ ನಾನು ಸಾಮಾನ್ಯವಾಗಿ ಹೆಚ್ಚಾಗಿ ಆಲೋಚಿಸುವವನು. ವಿದ್ಯೆ, ಅಧಿಕಾರ, ಕ್ರಿಯಾಶಕ್ತಿ, ಸಂಪತ್ತು, ಪ್ರಭಾವಗಳ ವ್ಯಾಪ್ತಿ ಇವು ಲೌಕಿಕವಾಗಿ ಎಷ್ಟು ವ್ಯಾಪಕವೊ ಅಷ್ಟರ ಕಡೆ ನನ್ನ ಮನಸ್ಸು ತೊಡಗುವುದಿಲ್ಲ. ಸ್ವಂತವಾಗಿ ನನಗೆ ಎರಡು ಮೂರು ಆಕಸ್ಮಿಕಗಳಿಂದಾಗಿ ಎರಡು ಕಾಲೇಜುಗಳನ್ನು ನಡಸುವ ಭಾರ, ಆಕಾಶವಾಣಿಯಲ್ಲಿ ಒಂದು ಇಲಾಖೆಯ ಭಾಷಣೋತ್ಪಾದನೆ ಕಾರ್ಯ – Producer of the Spoken Word – ಒದಗಿದರೂ ಅದರಲ್ಲಿ ಯಾವ ಅಧಿಕಾರ ಅಥವಾ ದರ್ಪವನ್ನೂ ವಹಿಸಲು ಮನಸ್ಸು ಒಪ್ಪಲಿಲ್ಲ. ಇದು ಪ್ರಕೃತಿ ಸ್ವಭಾವ. ಇದರ ಲೋಪದೋಷಗಳು ಅನೇಕ. ಆದರೆ 'ಲೋಪದೋಷಗಳಿಲ್ಲದ ಮನುಷ್ಯ ಯಾರಿದ್ದಾನೆ' ಎಂಬ ಒಂದು ಮಾತು ನನ್ನನ್ನು ಕಾಪಾಡಿದೆ. ಇದನ್ನು ಸ್ವರೂಪ ವಿವರಣಕ್ಕಾಗಿ ಹೇಳುತ್ತಿದ್ದೇನೆಯೇ ಹೊರತು ಬೇರೆ ಅಲ್ಲ. ಡಾ. ಪಾವಟೆಯವರನ್ನು ಕುರಿತು ಮುಂದಿನ ನಾಲ್ಕು ಮಾತಾಡುವುದು ಆ ದೃಷ್ಟಿಯಿಂದ.

೧೯೩೫ರಲ್ಲಿ ಬೊಂಬಾಯಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಸಮ್ಮೇಳನ ನಡೆಯಿತು. ಸಮ್ಮೇಳನ ಕಾರ್ಯದಲ್ಲಿ ಒಂದು ದಿನ ಆಗತಾನೆ ಸುಮಾರು ಸ್ಥಾಪನೆ ಆಗಿದ್ದ ಇಂಡಿಯನ್

ಪಿ. ಈ. ಎನ್. ಸಂಸ್ಥೆಯ (ಅಂತಾರಾಷ್ಟ್ರೀಯ ವ್ಯಾಪಾರಿ ಉಳ್ಳ ಅದರ ಭಾರತಶಾಖೆ) ಸ್ಥಾಪಕರೂ ಕಾರ್ಯಕರ್ತೆಯೂ ಆದ ಶ್ರೀಮತಿ ಸೋಫಿಯಾ ವಾಡಿಯಾ ಅವರು ಸಾಹಿತ್ಯ ಸಮ್ಮೇಳನದಲ್ಲಿ ಭಾಗವಹಿಸಿದ್ದ ಮೂವರನ್ನು ಕರೆದು ಕನ್ನಡ ಸಾಹಿತ್ಯವನ್ನು ಕುರಿತು ಮಾತಾಡಬೇಕೆಂದು – ಎಂದರೆ, ಅದರ ಸ್ವರೂಪವನ್ನು ಬೊಂಬಾಯಿ ಕನ್ನಡಿಗರಲ್ಲದವರಿಗೆ ವಿಶದಪಡಿಸಬೇಕೆಂದು – ಆಹ್ವಾನ ಕಳಿಸಿದರು. ಡಿ.ಪಿ.ಜಿ. ಅವರನ್ನು ಪ್ರತಿನಿಧಿಸಲು ಮಾಸ್ತಿಯವರು ದಯಮಾಡಿಸಿದ್ದರು. ಪೂನಾದಲ್ಲಿ ಫರ್ಗ್ಯುಸನ್ ಕಾಲೇಜಲ್ಲಿ ಇಂಗ್ಲಿಷ್ ಸಾಹಿತ್ಯದ ಆಚಾರ್ಯರಾಗಿದ್ದ ವಿ. ಕೃ. ಗೋಕಾಕರನ್ನೂ ನನ್ನ ಭಾಗ್ಯದಿಂದ ನನ್ನನ್ನೂ ಕರೆಸಿ, ಸಮ್ಮೇಳನಾಧ್ಯಕ್ಷರಾಗಿದ್ದ ಎನ್. ಎಸ್. ಸುಬ್ಬರಾಯರ ಅಧ್ಯಕ್ಷತೆಯಲ್ಲಿ ನಾವು ಮೂವರೂ ಸಾಹಿತ್ಯದ ಮೂರು ಮುಖಗಳನ್ನು ಆಯ್ದುಕೊಂಡು ಮಾತಾಡಬೇಕೆಂದು ಗೊತ್ತು ಮಾಡಿದರು. ಸುಬ್ಬರಾಯರು ಇಳಿದುಕೊಂಡಿದ್ದ ಮೆಜೆಸ್ಟಿಕ್ ಹೊಟೇಲಿಂದ ಅವರು ತಮ್ಮ ಕಾರಲ್ಲಿ ಬಂದರು. ನಮ್ಮನ್ನು ನಾವಿಳಿದುಕೊಂಡಿದ್ದ ಎಂಪೈರ್ ಹಿಂದೂ ಹೊಟೇಲಿಂದ ಕರೆದುಕೊಂಡು ಹೋಗಲು ಡಾ. ಎಮಿಲಿ ಹಫ್ ಎಂಬವರು ವಾಹನವನ್ನು ತಂದು ಕರೆದೊಯ್ದರು. ಆಪೆರಾಹೌಸ್ ಹತ್ತಿರ ಇದ್ದ ಯಾವುದೊ ಒಂದು ಥಿಯಾಸಫಿ ಹಾಲಲ್ಲಿ ಈ ಉಪನ್ಯಾಸಮಾಲೆ ನಡೆಯಿತು. ನಾವು ಮೂವರೂ ಆಧುನಿಕ ಗದ್ಯಪದ್ಯ ನಾಟಕ ವಿಮರ್ಶೆ ಮುಂತಾದವನ್ನು ಕುರಿತು ಕಾಲು ಗಂಟೆ, ಇಪ್ಪತ್ತು ನಿಮಿಷಗಳ ಅವಧಿಯಲ್ಲಿ ಮಾತಾಡಿದೆವು. ರಾಯರು ಅಧ್ಯಕ್ಷಭಾಷಣ ಮಾಡಿದರು. ಅಂದಿನಿಂದ ನನಗೆ ಇಂಗ್ಲಿಷಲ್ಲಿಯೂ ಮಾತನಾಡಬೇಕೆಂಬ ಆಹ್ವಾನಗಳು ಉತ್ತರ ಕರ್ನಾಟಕದ ನಾನಾ ಭಾಗಗಳಿಂದ ಬಂದು ನಾನು ದ್ವಿಭಾಷಾವಾಚಾಳಿಯಾದೆ. ಒಂದು ಸಂತೋಷ ಆ ದಿನದ್ದು: ಸುಲಭತೃಪ್ತರಲ್ಲದ ಸುಬ್ಬರಾಯರಿಗೆ ತೃಪ್ತಿ ಆದದ್ದು. ನಮ್ಮ ಮೂವರ ಮಾತೂ ಅವರಿಗೆ ಸಂತಸ ತಂದುಕೊಟ್ಟದ್ದಕ್ಕೆ ಕಾರಣ: **We didn't talk like little Kannada men. It is our objective way of presenting the past and the present** – ಎಂದದ್ದು. ಅವರನ್ನು ಒಪ್ಪಿಸುವುದು ಕಷ್ಟ. ಅವರಲ್ಲಿ ಐದು ವರ್ಷ ಓದಿದ್ದ ನಾನು ಅವರ ಇಂಗ್ಲಿಷ್ ಎಷ್ಟು ಚೊಕ್ಕವಾದ್ದು, ಅವರ ಸಾಹಿತ್ಯಕ ವಿಶ್ವಾಸ ಎಷ್ಟು ದೊಡ್ಡದು ಎಂಬುದರ ಪರಿಚಯ ಮಾಡಿಕೊಂಡಿದ್ದೆ. 'ಕನ್ನಡಕ್ಕೆ ಗೌರವ ತಂದಿರಿ' ಎಂದರು.

೧೯೩೬ರ ಸುಮಾರು ಫೆಬ್ರವರಿ–ಮಾರ್ಚ್ ತಿಂಗಳಲ್ಲಿ ಧಾರವಾಡದಿಂದ, ಸಾಂಗ್ಲಿಯಿಂದ, ಪೂನಾದಿಂದ ಅಲ್ಲಲ್ಲಿ ಕರ್ನಾಟಕ ಸಂಘಗಳ ವಾರ್ಷಿಕ ಸಮಾರಂಭಗಳ ಸಮಯದಲ್ಲಿ ನನ್ನನ್ನು ಅತಿಥಿಯಾಗಿ ಕರೆದರು. ಆಗಿನ್ನೂ ಕರ್ನಾಟಕ ವಿಶ್ವವಿದ್ಯಾಲಯ ಇರಲಿಲ್ಲ. ಕರ್ನಾಟಕ ಕಾಲೇಜಿನ ಪ್ರಿನ್ಸಿಪಲರು ಒಬ್ಬ ಐರಿಷ್ ಮಂದಿ. ಕನ್ನಡದ ಪ್ರಾಚಾರ್ಯರು ಎ. ಟಿ. ಸಾಸನೂರರು, ಜನಪ್ರಿಯರು. ಅವರ ಸಜ್ಜನತೆ, ಸ್ನೇಹಪರತೆ, ರಸಿಕತೆ ಕಂಡವರಿಗೆಲ್ಲ ಗೊತ್ತು. ಇನ್ನೂ ಸಣ್ಣ ವಯಸ್ಸಿನವರು. ಒಂದು ನಗೆಬರಹದಲ್ಲಿ, ಆಳವಾದ ವಿದ್ಯಾವಿನೋದದಲ್ಲಿ ಅವರು ಎಷ್ಟು ದೂರ ಹೋಗಬಲ್ಲವರೆಂಬುದನ್ನು ಅವರ ಬರವಣಿಗೆ, ಮಾತು, ಕ್ರಿಯಾವ್ಯವಸ್ಥೆ ಕಾಣಿಸುತ್ತಿದ್ದವು. ಉಡುಪು, ತಲೆಗೆ ಸುತ್ತುತ್ತಿದ್ದ ಪಯಣದ ರುಮಾಲು ರಮ್ಯವಾದವು. ಅಲ್ಲಿಂದ ಸಾಂಗ್ಲಿಗೆ ಹೋಗಬೇಕಿತ್ತು. ಆ ದಿನ ಚಾರ್ಜ್ – V ತೀರಿಕೊಂಡರೆಂತಲೊ ಏನೊ ಕಾಲೇಜಿಗೆ ರಜೆ ಬಂದಿತ್ತಾಗಿ ಎರಡು ದಿನ

ಈ ಉತ್ಸವ ಮುಂದೂಡಿತು.* ಸಾಂಗ್ಲಿ ವಿಲ್ಲಿಂಗ್ಡನ್ ಕಾಲೆಜಲ್ಲಿ ಆಗ – ಈಗ ಡಾಕ್ಟರ್ ಆಗಿರುವ – ಆರ್. ಎಸ್. ಮುಗಳಿ ಅವರು ಕನ್ನಡ ಶಾಖೆಯ ಮುಖ್ಯಸ್ಥರು. ಕಾಲೆಜಿನ ಪ್ರಿನ್ಸಿಪಲ್ ಡಿ. ಜಿ. ಕರ್ವೆ ಅವರು ದಖನಿ ಪಂಗಡದವರು, ಅರ್ಥಶಾಸ್ತ್ರದಲ್ಲಿ ಗಣ್ಯ ಸ್ಥಾನವನ್ನು ಪಡೆದವರು. ಭರತಖಂಡದ ಜನಸಂಪತ್ತಿ ಮತ್ತು ಅದಕ್ಕೆ ಸಂಬಂಧಿಸಿದ ಆರ್ಥಿಕ ವಿಚಾರಗಳನ್ನು ಕುರಿತು ಒಂದು ಪುಸ್ತಕ ಬರೆದಿದ್ದರು. ಆಗತಾನೇ ಸಂಕ್ರಾಂತಿ ಮುಗಿದಿತ್ತಾದ್ದರಿಂದ ಅವರ ಮನೆಯಲ್ಲಿ ಸಕ್ಕರೆಯಲ್ಲಿ ಮಾಡಿದ ಕುಸುರಿ ಎಳ್ಳು – ಒಂದು ಸೇರೆ – ಕೊಟ್ಟರು. ಕರ್ನಾಟಕ ಸಂಘದ ಕಾರ್ಯ ಮುಗಿದು ಅಲ್ಲಿಯೂ ಭೋಜನಕೂಟ ಮುಗಿದಮೇಲೆ, ಎರಡನೆ ದಿನ ಒಂದು ದಿನ ಕೊಲ್ಹಾಪುರಕ್ಕೆ ಹೋಗಿ ಆಮೇಲೆ ಪೂನಾಕ್ಕೆ ಹೋದೆ. ಹೋಗುವ ಮುಂಚೆ ಗೋಕಾಕರಿಗೊಂದು ಕಾಗದ ಬರೆದಿದ್ದೆ. ಶಕ್ಯವಾದರೆ ಅಲ್ಲಿ ಯಾರು ಯಾರು ಹಿರಿಯ ಮರಾಠಿ ಸಾಹಿತಿಗಳಿದ್ದಾರೊ ಅವರನ್ನು ಕರೆದು ಸ್ವಲ್ಪ ಕಾಲ ಅವರ ಜೊತೆ ಕಲೆಯೋಣ, ಪರಸ್ಪರ ಪರಿಚಯ ಮಾಡಿಕೊಳ್ಳೋಣ ಎಂದು. ಅದಕ್ಕೆ ಪ್ರತಿಯಾಗಿ ಅವರೊ: ಕರ್ನಾಟಕ ಸಂಘದ ಕಾರ್ಯಕಲಾಪಗಳ ಜೊತೆಗೆ 'ನಾವೆಲ್ಲಿ ಹೇಳಿದರೆ ಅಲ್ಲಿಗೆ ಸಂಕೋಚಪಡದೆ ಬಂದು 'ಒದರ'ಬೇಕೆಂದರು. ಈ ಒಡಂಬಡಿಕೆಗಳು ಸತ್ಫಲಗಳನ್ನು ಉಂಟುಮಾಡಿದವು. ಈ ಪೀಠಿಕೆಯ ಕಾರಣ ಇಷ್ಟೆ: ಫರ್ಗ್ಯುಸನ್ ಕಾಲೆಜಿನ ಪ್ರಿನ್ಸಿಪಲ್ ರ್‍ಯಾಂಗ್ಲರ್ ಆಗಿದ್ದ ಡಾ. ಮಹಾಜನಿಯವರು ಮಹಾರಾಷ್ಟ್ರದವರು. ಸಂಘದ ಅಧ್ಯಕ್ಷರು ಡಾ. ಡಿ. ಸಿ. ಪಾವಟೆ. ಎಲ್ಲ ಜನರೂ ಕಾಲೆಜಿನ ಸಭಾಮಂದಿರದಲ್ಲಿ ಸೇರಬೇಕಾಗಿದ್ದರಿಂದ ಭಾಷಾಮಾಧ್ಯಮ ಇಂಗ್ಲಿಷಾಗಬೇಕಾಗಿ ಬಂತು. ಕರ್ನಾಟಕ ಸಂಘದ ವಾರ್ಷಿಕ ಭಾಷಣ ಕನ್ನಡದಲ್ಲಾದರೂ ಇಂಗ್ಲಿಷ್ ಭಾಷಣ ಬಂದು ಕಟ್ಟಿತು. ಭಾಷಣ, ಫೋಟೊಗ್ರಾಫ್ ಎಲ್ಲ ನಡೆದಮೇಲೆ ತುಂಬ ಪ್ರೀತಿಯಿಂದ ನಾನು ಆ ರಾತ್ರಿ ತಮ್ಮಲ್ಲಿಗೆ ಬಂದು ಊಟ ಮಾಡಿ ಹೋಗಬೇಕೆಂದೂ ಡಾ. ಪಾವಟೆಯವರು ಕರೆದರು. ನಾನು ಎಂದೂ ಸಾಮಾನ್ಯವಾಗಿ ಹಳೆಯಕಾಲದ ಬ್ರಾಹ್ಮಣನಂತೆ ಕಾಣುತ್ತೇನೆ. ಬ್ರಾಹ್ಮಣತ್ವ ಏನಿದೆಯೊ ಕಾಣೆ. ಉಡುವ ಧೋತ್ರ, ತಲೆಯ ರುಮಾಲು, ಒಂದು ಸಣ್ಣ ಕೂದಲ ಗಂಟು ಮೊನ್ನೆ ಮೊನ್ನೆಯವರೆಗೂ ಇತ್ತು. ಆ ಕಾಲದಲ್ಲಿ ಹಣೆಗೆ ಇನ್ನೂ ಅಕ್ಷತೆ ಇಡುತ್ತಿದ್ದೆ. ಇದನ್ನು ಕಂಡವರಿಗೆ ಇದೊಂದು ಪ್ರಾಚೀನ ಅವಶೇಷ ಎಂದೇ ಕಾಣುತ್ತಿದ್ದಿರಬೇಕು. ಆದುದರಿಂದ ಒಂದೆರಡು ಮಾತುಗಳು ಮೊದಲು ಹೇಳಿದರು. 'ಸಂಕೋಚ ಬೇಡ, ನಾನು ಶಾಕಾಹಾರಿ, ನಿಮಗೆ ಹೇಗೆ ಬೇಕೊ ಹಾಗೆ ಅಡುಗೆ ಮಾಡಿಸುತ್ತೇನೆ. ಮನೆಯವರೆ ಮಾಡುತ್ತಾರೆ. ನಾನು ಲಿಂಗಾಯಿತನಾದರೂ ನೀವು ಸಂಕೋಚಪಡದೆ ಬರಬೇಕು' ಎಂದು ಹೇಳಿದ ರೀತಿ ನನಗೆ ಮೆಚ್ಚಿಕೆಯಾಯಿತು. 'ನನಗೆ ಅಂತಹ ನಿರ್ಬಂಧಗಳೇನೂ ಇಲ್ಲ' ಎಂದು ಭೋಜನಕ್ಕೆ ಅವರ ಮನೆಗೆ ಹೋದಾಗ ತೋರಿದ ವಿಶ್ವಾಸ ಅಪೂರ್ವವಾದ್ದು. ಧಾರಾಳವಾದ ಮನೋವಿಲಾಸ, ಸಜ್ಜನತೆ, ಅತಿಥಿ ಇಂಥವನೆಂದು ಅರಿತು ಸತ್ಕಾರ ಮಾಡಿದ ವಿಶೇಷ ನನ್ನ ಮನಸ್ಸಿಗೆ ಪ್ರೀತಿಯನ್ನೂ

---

* ಕಾಲ ಕಳಿಯುವ ನೆವದಿಂದ ಕೊಲ್ಹಾಪುರಕ್ಕೆ ಹೋಗಿ ಬಂದೆ. ಊರನ್ನು ನೋಡಿ ಬರುವುದರ ಜೊತೆಗೆ ಅಲ್ಲೂ ಒಂದು ಭಾಷಣ ಮಾಡಬೇಕಾಯಿತು. ಅತಿಥಿ ತೆರಬೇಕಾದ ಸುಂಕ ಅದು, ಆ ಕಾಲದಲ್ಲಿ.

ಗೌರವವನ್ನೂ ಅವರಲ್ಲಿ ಉಂಟುಮಾಡಿತು. ನನ್ನ 'ಪಂಪಾಯಾತ್ರೆ'ಯ ಒಂದು ಪ್ರತಿಯನ್ನು ಅವರಿಗೆ ಕೊಟ್ಟಾಗ ಅದರ ಹಾಳೆಗಳನ್ನು ತಿರುವಿ ಹಾಕಿ 'I shall try to have a shot at it in a few days' ಎಂದರು. ಆ ಇಂಗ್ಲಿಷ್ ನುಡಿಗಟ್ಟು ನನಗೆ ಆಗ ಹಿಡಿಸಲಿಲ್ಲವೇನೊ. ಅದು ಅವರ ನುಡಿತ. ಇಂಗ್ಲಿಷಿಗೆ ಸಹಜ. ಅವರು ಆಗ ಬೊಂಬಾಯಿ ಅಧಿಪತ್ಯದ ಸದರ್ನ್ ಮರಾಠ ಎಂದು ಕರೆಯುತ್ತಿದ್ದ ದಕ್ಷಿಣವಲಯಕ್ಕೆ ವಿದ್ಯಾಧಿಕಾರಿಯಾಗಿದ್ದರು. ನೂರಲ್ಲಾ ಎಂಬ ಮುಸಲ್ಮಾನ್ ಅಧಿಕಾರಿ ಮಾತ್ರ ಇವರಿಗೆ ಮೇಲ್ಪಟ್ಟವರು. ಇವರು ಡಿ.ಪಿ.ಐ. ಆಗಿದ್ದರು. ಪೂನಾದಂತಹ ವಿದ್ಯಾಮಂಡಲದಲ್ಲಿಯೂ ಡೆಕ್ಕನ್ ಎಜುಕೇಶನ್ ಸೊಸೈಟಿ ವಿದ್ಯಾಮಂಡಲಗಳಲ್ಲಿಯೂ ಗಳಿಸಿದ್ದ ಗೌರವವೂ ಅವರಿಗೆ ಗೌರವವನ್ನೂ ಘನತೆಯನ್ನೂ ಎಷ್ಟು ಹೆಚ್ಚಾಗಿ ತಂದುಕೊಟ್ಟಿದ್ದವು ಎಂಬುದನ್ನು ಅರಿಯಲು ಶಕ್ಯವಾಯಿತು.

ಅವರು ಗೋಕಾಕ ಎಂಬ ಸ್ಥಳದಲ್ಲಿ ಹುಟ್ಟಿದವರೆಂದೂ ಅವರ ವಿದ್ಯಾರ್ಜನೆ ಹೇಗಾಯಿತೆಂದೂ ವಿದ್ಯಾಧಿಕಾರಿಗಳಾಗಿ ಯಾವ ಯಾವ ಕೆಲಸ ಕೈಗೊಂಡಿದ್ದರೆಂದೂ ಸೂಕ್ಷ್ಮವಾಗಿ ತಿಳಿಸಿದ್ದರು. ಸೂಕ್ಷ್ಮ ಎಂದರೆ ಇಲ್ಲಿ ಸ್ಥೂಲ ಎಂಬರ್ಥದಲ್ಲಿ. ಎರಡನೆ ದಿನವೂ ನನಗೆ ಒಂದೆರಡು ಕಡೆಗಳಲ್ಲಿ ಭಾಷಣ ಮಾಡಬೇಕಾದ ಅಗತ್ಯ ಬಿದ್ದಿತು. ಪರಶುರಾಮ ಭಾವು ಕಾಲೇಜಲ್ಲಿ ಒಂದು ಭಾಷಣ ಮಾಡಬೇಕಾಯಿತು. ಪ್ರೊ. ನರೇಳ್ಕರ್ ಎಂಬ ತತ್ತ್ವಶಾಸ್ತ್ರದ ಪ್ರಾಧ್ಯಾಪಕರು ಅಧ್ಯಕ್ಷರು. ಆ ದಿನದ ಸಭೆ ಅನೇಕ ರೀತಿಗಳಲ್ಲಿ ನನಗೆ ಒಂದು ಆತ್ಮಗೌರವವನ್ನು ಸ್ಥಾಪಿಸಿದ ಪ್ರಯೋಗದ ಸಂದರ್ಭವಾಯಿತು. ನನ್ನನ್ನು ಕರೆದುಕೊಂಡು ಹೋಗಿದ್ದ ಗೋಕಾಕರಿಗೆ, ಅಲ್ಲಿಯೇ ಇದ್ದ ಶ್ರೀಮಾನ್ ಬೇಂದ್ರೆಯವರಿಗೆ ಸಂತೋಷವಾಯಿತೆಂದು ಹೇಳಿದರು. ಕನ್ನಡನಾಡಿನವರು ಇಂಗ್ಲಿಷಲ್ಲಿ ವಿವಿಧ ವಿಷಯಗಳನ್ನು ಕುರಿತು ಮಾತಾಡಬಲ್ಲರು ಎಂದು ಬೇರೆ ಜನವರ್ಗಗಳಲ್ಲಿ ಇದಕ್ಕೆ ಮರ್ಯಾದೆ ತರಲು ಯತ್ನಿಸುತ್ತಿದ್ದ ಕಾಲ ಅದಾದ್ದರಿಂದ ನನ್ನನ್ನು ಅದಕ್ಕೆ ಆ ಎಲ್ಲ ಕಡೆಯ ಜನ ಬಳಸಿತು. ಹೊರನಾಡಿನಲ್ಲಂತೂ ಇದು ಪರಮಾಗತ್ಯ. ಆಗ 'ನವಮತವಾದ' ಎಂಬ ಕೋಟಲೆ ಘರ್ಷಣೆ ಇತ್ತು. ಒಂದು ಕಡೆ ಪ್ರೊ. ಅತ್ರೆ, ಮತ್ತೊಂದು ಕಡೆ ಪ್ರೊ. ಘಡಕೆ ಎಂಬ ನಾಯಕರ ಗುಂಪುಗಳ ನಡುವೆ ಅದು ಬೆಳೆದಿತ್ತಂತೆ. 'ವಿಷಯ ನೀವು ಯಾವುದನ್ನು ಸೂಚಿಸುತ್ತೀರಿ?' ಎಂದೆ. 'Art and Morality' ಮೇಲೆ ಮಾತಾಡುತ್ತೀರ?' – ಎಂದರು. ಆಗಬಹುದು ಎಂದೆ–ಒಂದು ಮೊಂಡು ಧೈರ್ಯದಿಂದ. ನಾನು ಮಹಾರಾಜ ಕಾಲೇಜು ಸೇರಿದ್ದಾಗ – ಎಂದರೆ ೧೯೧೭ರಲ್ಲಿ – ಕಾಲೇಜಿನ ವಿದ್ಯಾರ್ಥಿಪತ್ರಿಕೆಗೆ ಆ ವಿಷಯವನ್ನು ಕುರಿತು ಬಾಲಿಶವಾಗಿ ನನ್ನ ಮೊದಲ ಲೇಖನ ಬರೆದ ನೆನಪಿತ್ತು. ಏನು ಬರೆದೆನೊ ಏನೊ. ಈಗ ಅದನ್ನು ಓದಿದರೆ ನಗೆ ಬರಬಹುದು. ೧೯೧೭ರಿಂದ '೩೬ಕ್ಕೆ ತುಂಬಾ ಅಂತರ. ಈ ವಿಷಯದ ಸಂಬಂಧದಲ್ಲಿ ಒಂದು ಬಗೆಯಲ್ಲಿ ಗ್ರಂಥಗಳನ್ನು ಓದಿದ್ದರ ಜೊತೆಗೆ ಸ್ವಂತವಾಗಿ ಆಲೋಚನೆ ಮಾಡತೊಡಗಿದ್ದೆ, ಕಡೆಯದಾಗಿ ಯಾವ ತೀರ್ಮಾನಕ್ಕೂ ಇಂದಿಗೂ ಬಂದಿಲ್ಲ. ಅಂಥ ತೀರ್ಮಾನ ಬರುತ್ತದೆಯೊ ಇಲ್ಲವೊ ಗೊತ್ತಿಲ್ಲ. ಆದರೂ ಧೈರ್ಯ ಮಾಡಿ ಒಪ್ಪಿಕೊಂಡೆ. ಹತ್ತು ನಿಮಿಷ ಕಳೆದ ಮೇಲೆ ನನ್ನನ್ನು ಆಹ್ವಾನಿಸಿದ ತಂಡದವರು ಪುನಃ ಬಂದು 'ಪುಣೆಯಲ್ಲಿ ಒಂದು ಘನಘೋರ ಯುದ್ಧವೇ ನಡೆಯುತ್ತಿದೆ ಈ ವಿಷಯದ ಸಂಬಂಧದಲ್ಲಿ, ಪ್ರಸಂಗ ಹೀಗಿರುವಾಗ ನೀವು ಬೇರೆ ಯಾವ ವಿಷಯವನ್ನಾದರೂ ಕುರಿತು ಮಾತಾಡಬಹುದು:

ಸಂಕೋಚ, ನಿರ್ಬಂಧ ಇಲ್ಲ' ಎಂದರು. 'ನಾನು ಯೋಧನಲ್ಲ; ಸಂಗ್ರಾಮಕ್ಕೆ ಹೊರಟವನಲ್ಲ; ನನಗೆ ತಿಳಿದಂತೆ ವಿಷಯ ಪ್ರತಿಪಾದನೆ ಮಾಡುತ್ತೇನೆ; ವಿಷಯದ ಒಂದೆರಡು ಮುಖಗಳಿಗೆ ಇರಬಹುದಾದ, ಇರದ ಸಂಬಂಧವನ್ನು ವಿಶ್ಲೇಷಣೆ ಮಾಡುತ್ತೇನೆ; ಸ್ವಭಾವತಃ ನನ್ನಲ್ಲಿ ಕಲಹದ ಅಥವಾ ಹಟ ನುಡಿಯುವ, ಚುಚ್ಚಿ ನುಡಿಯುವ ಅಭ್ಯಾಸವಿಲ್ಲ; ಅದುದರಿಂದ ಸಂಕೋಚವಿಲ್ಲದೆ ನೀವಿರಬಹುದು' ಎಂದು ಅವರಿಗೆ ಹೇಳಿದೆ. ಔಚಿತ್ಯ!

ಗೆಳೆಯ ಗೋಕಾಕರು ಎರಡನೆ ಮಧ್ಯಾಹ್ನ ಮಾನ್ಯ ಸಾಹಿತಿಗಳನ್ನು ಕರೆದಿದ್ದರು. ಜಸವಂತ್, ಗಿರೀಶ್ ಮತ್ತು ಮೊನ್ನೆ ತಾನೆ ಜ್ಞಾನಪೀಠದ ಪುರಸ್ಕಾರವನ್ನು ಪಡೆದು ನಮ್ಮ ದುರದೃಷ್ಟದಿಂದ ತೀರಿಕೊಂಡ ಕಾದಂಬರಿಕಾರ ವಿ. ಎಸ್. ಖಾಂಡೇಕರ್ ಬಂದಿದ್ದರು. ಜಸವಂತ್, ಗಿರೀಶ್ ಇಬ್ಬರೂ ಕವಿಗಳು. ಗಿರೀಶ್ ಅವರನ್ನು ಸಾಂಗಲಿಯಲ್ಲಿ ಆಮೇಲೆ ಕಂಡೆ. ಜಸವಂತ್ ಬರೋಡ ಗಾಯಕವಾಡರ ಆಸ್ಥಾನ ಕವಿಗಳಲ್ಲಿ ಮುಖ್ಯರಾಗಿದ್ದರೆಂದು ಕೇಳಿದ್ದೇನೆ. ಮೂವರೂ ಸರ್ವಥಾ ಮೇಧಾವಿಗಳು, ಉದಾರ ಮನೋಭಾವ ಉಳ್ಳವರು. ಅವ್ಹೊತ್ತು ನಡೆದ ಸನ್ನಿವೇಶದಲ್ಲಿ 'ರಾಜಕೀಯಕ್ಕಿಂತ ಸಾಹಿತಿಗಳು ಬೇರೆ ಬೇರೆ ಭಾಗಗಳವರು ವಿಶ್ವಾಸದಲ್ಲಿ ಸೇರಿ ವಿಚಾರವಿನಿಮಯ ಮಾಡಿದರೆ ಭಾಷೆಗಳ ಮತ್ತು ಸಾಹಿತ್ಯದ ಕಾರ್ಪಣ್ಯಗಳು ಹೋಗುತ್ತವೆ, ಸ್ನೇಹಗೌರವವನ್ನು ಬೆಳಸುವ ಅವಕಾಶವಿದೆ, ದೇಶದ ಐಕ್ಯತೆಗೆ ದೊಡ್ಡ ಸಾಧನವಾಗುತ್ತದೆ' ಎಂಬುದು ತಿಳಿಯಿತು. ಈ ಸಮಾವೇಶದಲ್ಲಿ ನಮ್ಮೊಡನೆ ಸೇರಲು 'ಸಕಾಳ' ಪತ್ರಿಕೆಯ ಸಂಪಾದಕರಾದ ಪರುಳೇಕರ್ ದಯಮಾಡಿಸಿದ್ದರು. ಅಂದಿನ ದಿನದ ಸಂಭಾಷಣೆಗಳನ್ನು ಅವರ ಪತ್ರಿಕೆಯಲ್ಲಿ ಬರೆದರು. ರಾತ್ರಿ ಗೋಕಾಕರ 'ಜನನಾಯಕ' ನಾಟಕವನ್ನು ಆಡಿದರು. ಪ್ರಭಾತ್ ಫಿಲಂ ಕಂಪನಿಯ ಕೆಲವು ಜನ ಬಂದು ರಂಗರಚನೆಯಲ್ಲಿಯೂ ದೀಪವಿನ್ಯಾಸದಲ್ಲಿಯೂ ನೆರವು ಕೊಟ್ಟರು. ಅಲ್ಲಿದ್ದ ಎರಡು ಮೂರು ದಿನ ಮನಸ್ಸಿಗೆ ನನಗೆ ಒಂದು ಹೆಚ್ಚಿನ ಧೈರ್ಯವನ್ನೂ ಆತ್ಮವಿಶ್ವಾಸವನ್ನೂ ತಂದುಕೊಟ್ಟವು. ಇದರ ಜೊತೆಗೆ International Book Agency ಎಂಬ ಹೆಸರಿನದೊ ಏನೊ – ಅತಿ ನವೀನ ಸಾಹಿತ್ಯದ ಪುಸ್ತಕಗಳನ್ನು ಮಾರಾಟ ಮಾಡುತ್ತಿದ್ದ ದೀಕ್ಷಿತರ ಮತ್ತು ಅವರ ಮಡದಿ ಶ್ರೀಮತಿ ಚಿಂತಾದೇವಿ(?) ಅವರ ಪರಿಚಯವೂ ಆಯಿತು. ಅವರೂ ಪುಸ್ತಕಾಲಯಕ್ಕೆ ಬರುತ್ತಿದ್ದ ಮುಖ್ಯ ಗ್ರಂಥಗಳನ್ನು ಓದಿ ತತ್ತ್ವಾನುಸಂಧಾನದಲ್ಲಿ ಹಲವರಿಗೆ ಗೌರವಸ್ಥಾನದಲ್ಲಿದ್ದರು. ಈ ಸನ್ನಿವೇಶವನ್ನು ಮರೆಯುವ ಹಾಗಿಲ್ಲ. ಡಾ. ಪಾವಟೆಯವರನ್ನು ಕಂಡದ್ದು ಅಂಥ ಸನ್ನಿವೇಶದಲ್ಲಾದ್ದರಿಂದ ಈ ಒಟ್ಟು ಪೂನಾ ಪ್ರಯಾಣದ ಸವಿನೆನಪಿನಲ್ಲಿ ಇವೆಲ್ಲ ಸೇರಿ ಈಗಿಗೂ ಪರಿಮಳಿಸುತ್ತಿದೆ.

ಸರ್ಕಾರದಲ್ಲಿ ವಿದ್ಯಾಧಿಕಾರಿಯಾಗಿ ಪೂರ್ತಿಯಾಗಿ ಕಾರ್ಯಮಾಡಿ ಅದು ಮುಗಿದ ಮೇಲೆ ತಮ್ಮ ಜನದ ನಡುವೆ ಇರುತ್ತ ಹೊಸದಾಗಿ ಸ್ಥಾಪಿತವಾಗಿದ್ದ ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಮನ್ನಣೆಯ ಉಪಕುಲಪತಿಗಳಾಗಿ ಆಯ್ಕೆಯಾದವರು ಡಾ. ಪಾವಟೆ. ಆರಂಭದಲ್ಲಿ ಬೊಂಬಾಯಲ್ಲಿ ವಕೀಲರಾಗಿದ್ದ ಆರ್. ಎ. ಜಾಗೀರ್‌ದಾರ್ ಇದ್ದರು. ಅವರು ಪರಿಷತ್ತಿನ ಮಾನ್ಯ ಸದಸ್ಯರು. ತರುವಾಯ ಸ್ವಲ್ಪ ಕಾಲ ಹುಲಕೋಟಿ ಎಂಬವರಿದ್ದರು.

ಜನಪ್ರಿಯರಾಗಿ ದಕ್ಷರಾಗಿ, ಕಾರ್ಯನಿರ್ವಾಹಕದಲ್ಲಿ ವಿಚಕ್ಷಣೆಯನ್ನೂ ಸುವ್ಯವಸ್ಥೆಯನ್ನೂ ಸ್ಥಾಪಿಸಿ, ಯಾವುದು ಒಂದು ಒಣಕಲು ನಿರ್ಜನ ಕಾಡಿನಂಥ ಪ್ರದೇಶವಾಗಿತ್ತೊ ಅದನ್ನು ವಿದ್ಯಾಮಂಡಲವಾಗಿ ಪಾವಟೆಯವರು ಮಾರ್ಪಡಿಸಿದರು. ಅಲ್ಲಿ ವಿದ್ಯಾಕೇಂದ್ರಗಳು ಸ್ಥಾಪಿತವಾಗುವ ಮುಂಚೆ ನನ್ನ ಗೆಳೆಯರಾದ ರಂಗಪ್ಪ ಪ್ಲೋತದಾರರೊಡನೆಯೂ ವಕೀಲ್ ಎನ್. ಕೆ. ದೀಕ್ಷಿತ್‌ರೊಡನೆಯೂ ಅಲ್ಲಿ ಸುತ್ತಾಡಿದ್ದೆ. ಸ್ಥಳ ಪ್ರಶಸ್ತವಾದ್ದು. ಎತ್ತರಕ್ಕೆ ವಿಸ್ತಾರವಾದ ಬಯಲುಪ್ರದೇಶ. ಅದನ್ನು ದೀಕ್ಷಿತರು 'ಛೋಟಾ ಮಹಾಬಲೇಶ್ವರ ಎನ್ನುತ್ತೇವೆ' ಎಂದು ಹೇಳಿದ್ದುದು ಜ್ಞಾಪಕ. ಮಹಾಬಲೇಶ್ವರ ಮಹಾರಾಷ್ಟ್ರದವರಿಗೆ ಒಂದು ಆರೋಗ್ಯಧಾಮ. ಇಂಥ ಪ್ರದೇಶಗಳೆಲ್ಲ ಗಿರಿಕೂಟಗಳಂತಹ ಸ್ಥಳಗಳೇ. ಭೂಮಿ ಉಬ್ಬೆದ್ದು ಒಂದು ಉನ್ನತಿಯನ್ನು ಸಾಧಿಸಬೇಕು, ಸ್ಥಾಪಿಸಬೇಕು ಎನ್ನುವಂತೆ ಇಂಥ ಗುಡ್ಡಗಳು ಆಗುತ್ತವೆಯೊ ಏನೊ. ಅಲ್ಲಿನ ವಾಯುಗುಣ ಹದವಾದ್ದು. ಮೊದಲಿಂದಲೂ ವ್ಯಾಪಾರಕ್ಕೆ ಹುಬ್ಬಳ್ಳಿ, ವಿದ್ಯಾಸಂಸ್ಕಾರಗಳಿಗೆ ಧಾರವಾಡ ಹೆಸರಾದವು. ಆಗ ಧಾರವಾಡವೇ ಸರ್ಕಾರದ ಒಂದು ಕಾಲೆಜಿಗೆ ನೆಲೆ. ಪಾವಟೆಯವರು ಒಂದು ನಿಮಿಷವೂ ಕೆಲಸ ಮಾಡದೆ ಕಾಲ ಕಳೆಯುವವರಲ್ಲ. ಒಟ್ಟು ಬೊಂಬಾಯಾಧಿಪತ್ಯದ ವಿದ್ಯಾಮಂಡಲದ ಅನುಭವ ಅವರಿಗಿತ್ತು. ಅಧಿಕಾರಿ ಮಂಡಲಗಳಲ್ಲಿ ಬಳಕೆ, ಪ್ರಭಾವ ಇತ್ತು. ಅವರೆಗೂ ದಕ್ಷಿಣ ಮಹಾರಾಷ್ಟ್ರ ಎನ್ನಿಸಿಕೊಂಡು ಕ್ಲೇಶಪಡುತ್ತಿದ್ದ ಕರ್ನಾಟಕಕ್ಕೆ, ಒಂದು ವಿಶ್ವವಿದ್ಯಾನಿಲಯವನ್ನು ರಚಿಸುವ ಕಾರ್ಯ (A University Town Planning) ಒಂದು ಮಹಾ ವಾಸ್ತು ಶಿಲ್ಪದಂತೆ ಆಗಬೇಕೆಂದು ಮನಸ್ಸಿಗೆ ತಂದುಕೊಂಡು, ನಕ್ಷೆಗಳನ್ನು ಕಲ್ಪಿಸಿ, ತಂತ್ರಜ್ಞರನ್ನು ಕಲಸಿ ಆಡಳಿತ ಕಛೇರಿ, ಪುಸ್ತಕ ಭಂಡಾರ, ಸಭಾಮಂದಿರಗಳು, ನಾನಾ ವಿದ್ಯಾ ವಿಭಾಗಗಳ ಶಿಕ್ಷಣ ಮತ್ತು ಪ್ರಯೋಗಶಾಲೆಗಳು, ಅವಕ್ಕೆ ಬೇಕಾದ ಸಜ್ಜು ಸರಂಜಾಮು ಒದಗುವಂತೆಯೂ ಅಲ್ಲಿಗೆ ಆಕರ್ಷಣೆಗೊಂಡು ಬರುವ ವಿದ್ಯಾರ್ಥಿಗಳಿಗೆ ಊಟ ವಸತಿಗಳನ್ನು ವಿರ್ಪಡಿಸುವುದಕ್ಕೂ ಆಟದ ಬಯಲುಗಳನ್ನು ವಿಂಗಡಿಸುವುದಕ್ಕೂ ಈ ವಿದ್ಯಾಮಂಡಲದಲ್ಲಿ ನಿಯೋಜಿತರಾಗಿರುವ ಉಪನ್ಯಾಸಕರಿಗೆ ಪ್ರಾಚಾರ್ಯರಿಗೆ ವಾಸಗೃಹಗಳನ್ನು ನಿರ್ಮಿಸುವುದಕ್ಕೂ ಹೊರಗಿಂದ ಬಂದ ಅತಿಥಿಗಳಿಗೆ ಅತಿಥಿಶಾಲೆ ರಚಿಸುವುದಕ್ಕೂ ಶುಚಿಯಾದ ನಿರ್ಮಲವಾದ ನೀರಿನ ವಸತಿಸೌಕರ್ಯಗಳನ್ನು ನಿರ್ಮಾಣ ಮಾಡುವುದಕ್ಕೂ ಯತ್ನಿಸಿ, ಒಂದು ಮಹಾನಗರವೇ ನಿರ್ಮಾಣವಾಗುವಂತೆ ಹಗಲಿರುಳೂ ಅವರು ದುಡಿದರು. ಒಂದು ಕಡೆ ಸರ್ಕಾರದ ನೆರವು ಪ್ರೋತ್ಸಾಹ, ಇನ್ನೊಂದು ಕಡೆ ಅವರಿಗೆ ವಿಶೇಷವಾಗಿ ಪ್ರಿಯರಾದ ತಮ್ಮದೇ ಜನವರ್ಗ ವಿದ್ಯಾಪಕ್ಷಪಾತಿಗಳಾಗಿ ನಿಂತು, ವೀರಶೈವ ಮಠಗಳವರೂ ವರ್ತಕರೂ ಸಾಹುಕಾರರೂ ಧನವನ್ನೂ ಇತರ ನೆರವು ಬೆಂಬಲಗಳನ್ನೂ ಕೊಟ್ಟರು. ಎಲ್ಲ ಕಲೆ, ಶಿಲ್ಪ, ಮತ ಧರ್ಮ ಒಬ್ಬ ಕೇಂದ್ರ ವ್ಯಕ್ತಿಯ ಮೂಲಭೂತವಾದ ಕಲ್ಪನಾವಿಶೇಷವಾಗಿ ಸ್ಫೂರ್ತಿಯಾಗಿ ಉತ್ಸಾಹವಾಗಿ ಅಭಿಮಾನವಾಗಿ ಬೆಳೆಯತೊಡಗುತ್ತದೆ. ಇದು ಒಂದು ಬಗೆಯ ದೀಕ್ಷೆಯೇ; ಒಂದು ಮೀಸಲು ಕರ್ತವ್ಯ. ಮೂರ್ತಿಮತ್ತಾದ ಪ್ರಚೋದನೆ ಎಷ್ಟು ವಿಧವಾಗಿ ಕಾರ್ಯಸಾಧನೆಯನ್ನು ಮಾಡಬಲ್ಲದು ಎಂಬುದಕ್ಕೆ ಧಾರವಾಡದಲ್ಲಿ ಇವರ ಕೆಲಸ ಸಾಕ್ಷಿ.

ಸರ್ಕಾರದ ಮತ್ತು ಜನವರ್ಗದ ಉದಾರ ಮಹಾಕಾಂಕ್ಷೆ ಕರ್ನಾಟಕ ವಿಶ್ವವಿದ್ಯಾನಿಲಯದ ರೂಪಣಕ್ಕೆ ಹಿರಿಮೆಯನ್ನೂ ಶಿಯಾಸಿದ್ಧಿಯನ್ನೂ ತಂದುಕೊಟ್ಟಿದೆ.

ಇಲ್ಲಿ ಏನು ನಡೆಯುತ್ತಿದೆ ಎಂಬುದನ್ನು ನಾನು ಕೇಳಿದ್ದೆ. ಒಂದೆರಡು ಸಲ – ವಿಶೇಷವಾಗಿ 'ಶೀ'ಯವರು ತೀರಿಕೊಂಡ ಮೇಲೆ – ಧಾರವಾಡದ ಓರಿಯೆಂಟಲ್ ರಿಸರ್ಚ್ ಸಂಸ್ಥೆಯ ಸಲಹಾಮಂಡಳಿ ಕಾರ್ಯಗಳಿಗಾಗಿ ವರ್ಷಕ್ಕೊಮ್ಮೆಯಾದರೂ ಅಲ್ಲಿಗೆ ಹೋಗಿ ಬರುತ್ತಿದ್ದೆ. ಹಿಂದೆ ಭೋಟಾ ಮಹಾಬಲೇಶ್ವರ್ ಆಗಿದ್ದ ಸ್ಥಿತಿಗೂ ಆಗ ಬೆಳೆಯುತ್ತ ಬಂದಿದ್ದ ಸಂಸ್ಥೆಯ ವಿದ್ಯಾಕಾರ್ಯಗಳಿಗೂ ಎಲ್ಲಿನ ಹೋಲಿಕೆ? ಆಗ ನನಗೆ ವಿಶ್ವವಿದ್ಯಾನಿಲಯಕ್ಕೇ ಹೋಗುವ ಅವಕಾಶವಾಗಲಿಲ್ಲ. ನಾನು ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಕನ್ನಡದ ಇಲಾಖೆಯಲ್ಲಿ ಇದ್ದ ಒಬ್ಬ ಪ್ರಾಚಾರ್ಯ ಮಾತ್ರ. ಹಿಂದೊಂದು ಸಲ ವಿಚಿತ್ರ ನಡೆದಿತ್ತು. ಅದು ಯಾವುದೊ ಎಂ. ಎ. ಪರೀಕ್ಷೆಯ ಪ್ರಶ್ನೆ ಪತ್ರಿಕೆಗಳ ವ್ಯವಸ್ಥೆಯ ಕಾರ್ಯಕ್ಕಾಗಿ ಬೆಂಗಳೂರಿಂದ ಧಾರವಾಡಕ್ಕೆ ಹೋದೆ. ಅಲ್ಲಿನ ಮೀಟಿಂಗ್ ಮುಗಿಯುವ ಮುಂಚೆ ನನಗೆ ಹಿಂದೆ ಕವಿಯಾಗಿಯೂ ಲೇಖಕರಾಗಿಯೂ ಪರಿಚಿತರಾಗಿದ್ದ ಶ್ರೀ ಒಡೆಯರ್ ಅವರು ರಿಜಿಸ್ಟ್ರಾರ್ ಆಗಿದ್ದರು. ಅವರು ನನ್ನ ರುಜು ಹಾಕುವುದಕ್ಕೆ ಪ್ರಯಾಣದ ವೆಚ್ಚ ತೋರಿಸುವ ಒಂದು ಕಾಗದ ಕೊಟ್ಟಿದ್ದರು. ರೈಲಲ್ಲಿ ಯಾವ ತರಗತಿಯಲ್ಲಿ ಪ್ರವಾಸ ಮಾಡಿದ್ದೀರಿ ಎಂದು ನಮೂದಿಸುವುದರ ಜೊತೆಗೆ ನಾನು ಯಾವಾಗಲೂ ಆ ತರಗತಿಯಲ್ಲಿಯೇ ಪ್ರಯಾಣ ಮಾಡುವವನು ಎಂದು ಅದರಲ್ಲಿ ರುಜು ಹಾಕಬೇಕಿತ್ತು. ಫರ್ಸ್ಟ್‌ಕ್ಲಾಸ್ ತರಗತಿಯಲ್ಲಿಯೇ ಹೋಗಲಾರೆ, ಸೆಕೆಂಡಲ್ಲಿ ಹೋಗುವವನು ಎಂದು ಹೇಳಿದೆ. ನಾನು ಈ ಆಶ್ವಾಸನೆ ಕೊಟ್ಟ ಹೊರತು ನನ್ನ ಫರ್ಸ್ಟ್‌ಕ್ಲಾಸ್ ರುಸುಮು ಕೊಡುವಂತಿರಲಿಲ್ಲ. ಸಂಸ್ಥೆಯ ನಿಯಮ ಹಾಗೆ. ನಾನು ಒಡೆಯರಿಗೆ ಹೇಳಿದೆ: ಕೊಡುತ್ತೀರೆಂದು ಫರ್ಸ್ಟ್‌ಕ್ಲಾಸಲ್ಲಿ ಬಂದಿದ್ದೇನೆ. ನೀವು ಕೊಟ್ಟ ತರಗತಿಯಲ್ಲಿ ಹಿಂದಕ್ಕೆ ಹೋಗುತ್ತೇನೆ. ಪ್ರಯಾಣ ಮಾಡಿ ಬಂದ ಹೆಚ್ಚು ವೆಚ್ಚ ನನ್ನದು ಎಂದೆ. ಪ್ರಮಾಣ ಮಾತ್ರ ಮಾಡಲಾರೆ ಎಂದೆ. ಅವರು ಪಾವಟೆ ಅವರಲ್ಲಿಗೆ ಹೋದರಂತೆ. ಅವರು ಅದನ್ನು ಕೇಳಿದ ಕೂಡಲೆ ನಕ್ಕು ಸಾಧುಗಳನ್ನು ಸತಾಯಿಸಬಾರದು ಎಂಬಂತಹ ಯಾವುದೊ ಒಂದು ಮಾತಾಡಿ, ನನ್ನ ರುಜುವಾತಿಲ್ಲದೆ ಹೋಗು–ಬರು ಫರ್ಸ್ಟ್‌ಕ್ಲಾಸ್‌ನದೇ ಪ್ರಯಾಣದ ರುಸುಂ ಕೊಡಿಸಿದ್ದರು. ಇದು ಅವರ ರಿಜಿಸ್ಟ್ರಾರರ ನೆನಪಿನಲ್ಲಿಯೂ ಬಹುಕಾಲ ಉಳಿಯಿತು. ಅನೇಕರ ಕಿವಿಗೆ ಬಿದ್ದಿತ್ತು. ಇದೊಂದು ಮೊಂಡು ಸತ್ಯವಂತಿಕೆ. ಸರಿಯೊ ತಪ್ಪೊ ಕಾಣೆ. ಖಾಸಗಿಯಾಗಿ ನಡೆದ ಸಂದರ್ಭ ಇದು.

ನಿವೃತ್ತನಾದಮೇಲೆ ಸುಮಾರು ಮೂವತ್ತು ತಿಂಗಳು ಕಾಲ ಬೆಂಗಳೂರು ಆಕಾಶವಾಣಿಯಲ್ಲಿ ಕೆಲಸ ಮಾಡಿ ವಿಶ್ರಾಂತನಾಗಿದ್ದಾಗ ನನ್ನ ೬ಳನೆ ವಯಸ್ಸಿನಲ್ಲಿ ಉತ್ತರಕನ್ನಡ ಜಿಲ್ಲೆಯ ಹೊನ್ನಾವರದ ಸ್ನೇಹಿತರು ಅಲ್ಲಿನ ಕಾಲೆಜಿಗೆ ಪ್ರಿನ್ಸಿಪಲ್ ಆಗಿ ಬರಲು ಆಹ್ವಾನ ಕೊಟ್ಟರು. ೫೫ಕ್ಕೆ ನಮ್ಮಲ್ಲಿ ಸಾರ ವಯಸ್ಸು ಮುಗಿಯುತ್ತಿತ್ತು. ೫೬ರಿಂದ ೫೮ ಭಾರತ ಸರ್ಕಾರದ ಆಕಾಶವಾಣಿಯ ಬೇರೊಂದು ವಿಚಕ್ಷಣೆಯ ಕಾರ್ಯ. ಅದಾದ ಆರು ವರ್ಷದ ತರುವಾಯ ಅರುವತ್ತಕ್ಕೆ ಅರಳುಮರಳು ಬರಬೇಕಾಗಿದ್ದಾಗ ನನಗೆ ಈ ಕರೆ ಬಂದುದು ಆಶ್ಚರ್ಯವಾಗಿತ್ತಲ್ಲದೆ ಒಂದು ಹೊಸ ಯೌವನ ಕಂಡಂತಾಗಿತ್ತು. ಹೊಸ

ಊರು, ಜನ, ಹೊಸದಾಗಿ ನಾನೇ ತೊಡಗಿಸಿ ನಡಸಬೇಕಾದ ಒಂದು ಕಾಲೆಜಿನ ಒಳವ್ಯವಸ್ಥೆ. ಶರಾವತಿ ನದಿಯ ದಂಡೆಯಲ್ಲಿ ನಡೆದು ನೀರ ಹರಡಿದ ಪಡುಗಡಲು. ಎತ್ತರದ ಒಂದು ಪ್ರದೇಶದಲ್ಲಿ ನದಿಯ ದಂಡೆಯಲ್ಲಿ ಕಡಲಸೋಟ ನಿರಂತರವಾಗಿ ಕಾಣುವ ನಿವೇಶದಲ್ಲಿ, ನನ್ನದಲ್ಲದ ಬೇರೊಂದು ವಿಶ್ವವಿದ್ಯಾನಿಲಯದ ಅಂಗವಾಗಿರುವ ಒಂದು ಕಾಲೆಜಿನ ಮುಖ್ಯನಾಗುವ ಯೋಗ ನನ್ನ ದೃಷ್ಟಿಯಲ್ಲಿ ವಿಸ್ಮಯಕರ ಸಂಗತಿ. ಅಲ್ಲಿನ **facilities** ಮತ್ತು ಪರೀಕ್ಷಾವಲಯಗಳಿಗೆ ಸೇರಿ ಕೆಲಸ ಮಾಡುವ ಅಗತ್ಯ ಬಿದ್ದುದರಿಂದ ಆ ಕಾರ್ಯಭಾರದಿಂದ ಆ ವಿಶ್ವವಿದ್ಯಾಲಯಕ್ಕೆ ನನಗೆ ನೇರ ಪ್ರವೇಶ ದೊರೆತಂತಾಯಿತು. ಹಿಂದೆಷ್ಟೋ ಬಾರಿ ಧಾರವಾಡದ ಇತರ ವಿದ್ಯಾ ಅಥವಾ ಸಂಸ್ಕೃತಿ ಕಾರ್ಯಗಳಿಗೆ ಸಮಾವೇಶಗಳಿಗೆ ಗೆಳೆಯರಿಗಾಗಿ ಮಾತ್ರ ಹೋಗಿರುತ್ತಿದ್ದೆ. ತೀ. ನಂ. ಶ್ರೀ. ಅವರು ಅಲ್ಲಿನ ಕನ್ನಡದ ಪ್ರಾಚಾರ್ಯರಾಗಿದ್ದ ಕಾಲದಲ್ಲಿ ಹಿಂದೆ ಟ್ರೈನಿಂಗ್ ಕಾಲೆಜಾಗಿದ್ದುದು ಆಮೇಲೆ ಕೆಲಕಾಲ ಬಹುಶಃ ಪುಸ್ತಕ ಭಂಡಾರವಾಗಿತ್ತು. ಎಂ. ಎ. ವಿದ್ಯಾರ್ಥಿಗಳನ್ನು ಕುರಿತು ನಾಲ್ಕು ಮಾತಾಡುವ ಅವಕಾಶ ದೊರೆತಿತ್ತು. ಅದಕ್ಕೂ ಮುಂಚೆ ಅಲ್ಲಿನ ಟ್ರೈನಿಂಗ್ ಕಾಲೆಜಿನ ಹೆಡ್‌ಮಾಸ್ಟರ್ ರಾಮರಾಯರ – ಈಗ ನನ್ನ ಗೆಳೆಯರಾಗಿರುವ ಪ್ರೊ. ವಿ. ಎಂ. ಇನಾಮದಾರರ ಮಾವಂದಿರು – ಕಾಲದಲ್ಲಿ ಅಲ್ಲಿ ಹೋಗಿ ಸಾಮಾನ್ಯವಾಗಿ ಒಂದು ಭಾಷಣ ಮಾಡಿದ್ದೆ, ಅಷ್ಟೆ. ಈಗ ಹೋಗುತ್ತಿದ್ದುದು ನನ್ನ ಕಾಲೆಜಿನ ಪ್ರತಿನಿಧಿಯಾಗಿ, ಅಧಿಕಾರಿಯಾಗಿ, ವಿಶ್ವವಿದ್ಯಾನಿಲಯದ ಅಂಶವಾಗಿ.

ಸಾಮಾನ್ಯವಾಗಿ ಅಲ್ಲಿನ ಸಭೆಗಳಿಗೆ ಹೋಗಿದ್ದ ಕಾಲದಲ್ಲಿ ಡಾ. ಪಾವಟೆ ಅವರೇ ಸ್ಥಾಯೀ ಚೇರ್‌ಮನ್. ಸಭೆಗಳಲ್ಲಿ ಆರು–ಎಂಟು ಗಂಟೆ ಸುಮಾರು ನೂರು ಕಾಲೆಜುಗಳ ವಿದ್ವದ್‌ವರ್ಗ, ಪ್ರಿನ್ಸಿಪಲರು ಅಲ್ಲಿ ಸೇರುತ್ತಿದ್ದರು. ಪಾವಟೆ ಅವರ ಕಾರ್ಯನಿರ್ವಾಹಶಕ್ತಿ ಇಂಥ ಸಂದರ್ಭದಲ್ಲಿ ಎಷ್ಟು ದಕ್ಷವಾಗಿ ಶೀಘ್ರವಾಗಿ ತೀರ್ಮಾನಗಳನ್ನು ಸಾಧಿಸುತ್ತಿದ್ದವು ಎಂಬುದನ್ನು ಕಂಡಿದ್ದೇನೆ.* ಕಾರ್ಯಕ್ರಮ ಪಟ್ಟಿಯಲ್ಲಿ ೧೦೦ – ೧೫೦ ವಿಷಯಗಳು

---

* ನಮ್ಮಲ್ಲಿ ಎನ್. ಎಸ್. ಸುಬ್ಬರಾಯರು, ಇಲ್ಲಿ ಪಾವಟೆ ಹಾಗೆ ಮಾಡುತ್ತಿದ್ದರು. ಎರಡು ದಿನ ನಡೆಯಬೇಕಾಗಿದ್ದ ವಿಶ್ವವಿದ್ಯಾನಿಲಯ ಕೌನ್ಸಿಲು ಮೀಟಿಂಗ್‌ಗಳನ್ನು ಒಂದೇ ದಿನ ನಾಲ್ಕು ಗಂಟೆಯ ಅವಕಾಶದಲ್ಲಿ, ಮಾಡಬೇಕಾಗಿದ್ದ ಎಲ್ಲ ಕೆಲಸವನ್ನೂ ಮಾಡಿ ಮುಗಿಸಿ, ಸಭಿಕರಿಗೆ ಕೊಡಬೇಕಾದ ತಿಂಡಿತೀರ್ಥ ಕೊಟ್ಟು ಮೀಟಿಂಗ್ ಮುಗಿಸಿದಾಗ, ನಮ್ಮ ವಿಶ್ವವಿದ್ಯಾನಿಲಯ ಕೌನ್ಸಿಲಿನ ನಾಲ್ಕಾರು ಮಂದಿ ಮಹನೀಯರು – 'ಈ ಪಾಪಿ ನಮ್ಮವನೆಂದು ನಂಬಿಕೊಂಡಿದ್ದರೆ ನಮ್ಮ ಕಾರುಗಳು ಬರುವುದಕ್ಕೂ ಅವಕಾಶವಿಲ್ಲದಂತೆ ಮೀಟಿಂಗ್ ಮುಗಿಸಿಬಿಟ್ಟ' ಎಂದು ಗೊಣಗಿದ್ದುಂಟು. 'ಕಾರ್ಯಕ್ರಮದಲ್ಲಿ ೨೦–೩೦ ವಿಷಯಗಳಿವೆ. ಇದರಲ್ಲಿ ಇಷ್ಟು ಕೆಲಸವಾಗಿದೆ. ವರದಿಗಳನ್ನು ಕಳಿಸಿದ್ದೇನೆ. ಇಷ್ಟಕ್ಕೆ ನಮ್ಮ ತೀರ್ಮಾನಗಳನ್ನು ಸರ್ಕಾರಕ್ಕೆ ಕಳಿಸಿದೆ. ತೀರ್ಮಾನ ಬಂದ ಕೂಡಲೆ ತಮಗೆ ತಿಳಿಸುತ್ತೇನೆ. ನಾವು ತೀರ್ಮಾನಿಸಬೇಕಾಗಿರುವುದು ಈ ಐದಾರು. ವಿಶ್ವವಿದ್ಯಾನಿಲಯದ ಕಚೇರಿಯ ಸಲಹಾಂಶಗಳು ಇವು. ದಯಮಾಡಿ ಪರಿಶೀಲಿಸಿ ತಮ್ಮ ಸಲಹೆಗಳನ್ನು ಕೊಟ್ಟರೆ ಇವ್ಹೊತ್ತಿನ ಕೆಲಸ ಮುಗಿಯಿತು. ಹೊಸದೇನಾದರೂ ಸೂಚನೆ ಕೊಡಬೇಕಾಗಿದ್ದರೆ ಕೊಡಬಹುದು' ಎಂದು ಮುಗಿಸಿಬಿಡುತ್ತಿದ್ದರು.

ಇರುತ್ತಿದ್ದವು. ಒಂದು ದಿನದ ಮೀಟಿಂಗಲ್ಲಿ ಅಷ್ಟನ್ನೂ ಮುಗಿಸಿಬಿಡುತ್ತಿದ್ದರು. ಅಲ್ಲಿ ಹೆಚ್ಚಾಗಿ ಮಾತಾಡುವವರು ಎರಡು ಮೂರು ಜನ – ಸ್ವಲ್ಪ ತಕರಾರಿನವರು. ಅದು ಎಲ್ಲರಿಗೂ ಗೊತ್ತಿತ್ತು. ಡಾಕ್ಟರಿಗೂ ಗೊತ್ತಿತ್ತು. ಯಾವುದಾದರೊಂದು ವಿಷಯದಲ್ಲಿ ಚರ್ಚೆಯನ್ನೊ ವಿವಾದವನ್ನೊ ನಡೆಸಬೇಕಾದರೆ ಅವರಿಗೆ ಮೊದಲು ಪ್ರಾಶಸ್ತ್ಯ ಕೊಟ್ಟು ಅವರನ್ನು ಮುಗಿಸಿ ಬಿಡುತ್ತಿದ್ದರು. ವಿಶಿಷ್ಟವಾಗಿ ಅದಕ್ಕೆ ಸಂಬಂಧಿಸಿ ಇತರರು ಯಾರಾದರೂ ಮಾತಾಡಬೇಕಾಗಿದ್ದರೆ, ಸಲಹೆ ಕೊಡಬೇಕಾಗಿದ್ದರೆ ಅವರನ್ನು ಕೇಳುವುದೊ ಅವರೇ ಮಾತಾಡುವುದೊ ಪದ್ಧತಿ. ನಡುವೆ ೧ ರಿಂದ ೨ ಗಂಟೆಯವರೆಗೆ ಲಘು ಉಪಹಾರ. ಆ ನಡುವೆ ನಮ್ಮ ಪ್ರಯಾಣ ವೆಚ್ಚದ ಫಾರ್ಮುಗಳಿಗೆ ರುಜು ತೆಗೆಸಿಕೊಂಡು ಸಭೆ ಮುಗಿವ ಹೊತ್ತಿಗೆ ಹಣ ಸಂದಾಯ ಮಾಡುತ್ತಿದ್ದುದು ವಾಡಿಕೆ. ಸಂಜೆ ಆರಾಗಲಿ, ಏಳಾಗಲಿ ಅಷ್ಟು ವಿಷಯಗಳೂ ಫೈಸಲಾಗಿಬಿಡುತ್ತಿದ್ದವು.

ಡಾ. ಪಾವಟೆ ಅವರೇ ಹೊನ್ನಾವರಕ್ಕೆ ಕಾಲೇಜನ್ನು ನೋಡಿಕೊಂಡು ಹೋಗುವ ಸಲುವಾಗಿ ಒಮ್ಮೆ ಬಂದಿದ್ದರು. ಅಲ್ಲಿನ ಪರಿಸ್ಥಿತಿಯನ್ನು ನೋಡಿ, ಕಾಲೇಜಿನ ವಿದ್ಯಾರ್ಥಿಗಳನ್ನು ನೋಡಿ ಅಧಿಕಾರಿಗಳಿಗೆ – ಎಂದರೆ, ಸಲಹಾ ಮತ್ತು ಆಡಳಿತ ಮಂಡಲಿಯವರನ್ನು ಕುರಿತು – ಉತ್ತೇಜನಕರವಾಗಿ ಮಾತಾಡಿದರು. ಆ ದಿನ ಸಂಜೆ ಕರ್ಕಿಯ ಹಾಸ್ಯಗಾರರ ಯಕ್ಷಗಾನ ಮಂಡಲಿಯವರು ಸುಮಾರು ಒಂದೂವರೆ – ಎರಡು ಗಂಟೆಯ ಅವಕಾಶದಲ್ಲಿ ಖಾಂಡವದಹನ ಪ್ರಸಂಗವನ್ನು ಅವರ ಮನೋರಂಜನೆಗಾಗಿ ಏರ್ಪಡಿಸಿದ್ದರು. ಒಂದು ರಾತ್ರಿಯ ಕಾಲವೆಲ್ಲಾ ಹಿಡಿಯುವ ಯಕ್ಷಗಾನ ಪ್ರಸಂಗಗಳನ್ನು ಇಷ್ಟು ಅಲ್ಪಕಾಲಾವಧಿಯಲ್ಲಿ ಸಂಗ್ರಹಿಸಿ ನಿರೂಪಿಸಿದ್ದು ಅವರಿಗೆ ತುಂಬಾ ಸಂತೋಷ ಉಂಟುಮಾಡಿತು. ವೃದ್ಧರಾದ ಪರಮಯ್ಯ ಹಾಸ್ಯಗಾರರು ವಹಿಸಿದ ಪಾತ್ರದ ವಿಶೇಷವನ್ನು ಅತಿಶಯವಾದ್ದೆಂದು ಮೆಚ್ಚಿಕೊಂಡರು. ಮಾರನೆಯ ದಿನ ಇನ್ನೊಂದೆರಡು ವರ್ಷಕಾಲವಿದ್ದು ಕಾಲೇಜನ್ನು ಒಂದು ಸ್ಥಿತಿಗೆ ತಂದು ಆಮೇಲೆ ಹೋಗಬೇಕೆಂದು ನನಗೆ ಸೂಚಿಸಿದರು. ಅದಾದ ಮೇಲೆಯೆ ನಾನು ಈ ಮುಂಚೆ ವಿವರಿಸಿದ ಸಂಗತಿ ನಡೆದುದು.

ಆ ಕಾಲೇಜಲ್ಲಿರುವಾಗಲೆ ಸುಮಾರು '೬೬ರ ಕೊನೆಗೊ '೬೭ರ ಮೊದಲಲ್ಲಿಯೊ ಕರ್ನಾಟಕ ವಿಶ್ವವಿದ್ಯಾನಿಲಯದ ವಿಶೇಷ ಉಪನ್ಯಾಸಗಳ ಮಾಲೆಯಲ್ಲಿ ನಾನು ಮೂರು ಭಾಷಣಗಳನ್ನು ಮಾಡುವ ಪ್ರಸಂಗ ಒದಗಿತು. ಯಾವುದೊ ಸಾಹಿತ್ಯ ಸಮಾರೋಹಕ್ಕಾಗಿ ನಾನು ಎನ್ಕಾಕುಳಮಿಗೆ ಹೋಗಿದ್ದಾಗ ಗೆಳೆಯರಾದ ಕವಿ ಚೆನ್ನವೀರ ಕಣವಿಯವರು ತಮ್ಮ ವಿಶ್ವವಿದ್ಯಾನಿಲಯದ ಪರವಾಗಿ ಈ ಭಾಷಣಗಳನ್ನು ಮಾಡಬೇಕೆಂದು ತಿಳಿಸಿ ನನ್ನನ್ನು ಒಪ್ಪಿಸಿದ್ದರು. ಅವರ ಅತಿಥಿಗೃಹದಲ್ಲಿ ಉಳಿದುಕೊಳ್ಳುವುದಕ್ಕೆ ಬೇಕಾದ ಅನುಕೂಲಗಳನ್ನು ಕಲ್ಪಿಸಿಕೊಟ್ಟರು. ಆ ಸುತ್ತಲಿನ ಪ್ರಕೃತಿಯ ರಮ್ಯತೆ ನಿಜವಾಗಿ ಮೋಹಕವಾದುದು. ಬೆಳಗ್ಗೆ, ಸಂಜೆ ಅಲ್ಲಿಂದ ಹೊರಕ್ಕೆ ನೋಡುವುದರಲ್ಲಿ, ಸುತ್ತ ತಿರುಗಾಡುವುದರಲ್ಲಿ ನನಗುಂಟಾದ ಸಂತೋಷ ಮರೆಯುವಂತಹುದಲ್ಲ. ಅಲ್ಲಿ ನಾನು 'ಸಾಹಿತ್ಯದಲ್ಲಿ ಸಂಪ್ರದಾಯ ಮತ್ತು ಹೊಸ ಮಾರ್ಗ' ಎಂಬ ವಿಷಯ ಕುರಿತು ಮಾತಾಡಿದೆ. ಮೊದಲ ದಿನ ಆರಂಭ ಭಾಷಣವನ್ನು ಡಾ. ಪಾವಟೆ ಮಾಡಿದರು. ಆ ದಿನದ ಅಧ್ಯಕ್ಷ ಪೀಠದಲ್ಲಿ ಅಲ್ಲಿನ ಕನ್ನಡದ

ಪ್ರಧಾನ ಆಚಾರ್ಯರಾದ ಗೆಳೆಯ ಆರ್. ಸಿ. ಹಿರೇಮಠರಿದ್ದರು. ಊರಿನ ನನ್ನ ಮಿತ್ರರಸೇಕರು ಸಭೆಗೆ ದಯಮಾಡಿಸಿ ನನಗೆ ಉತ್ತೇಜನವನ್ನೂ ಅಪ್ತವಾದ ಒಂದು ಆವರಣ ಕಲ್ಪನೆಯನ್ನೂ ಮಾಡಿಕೊಟ್ಟರು. ಡಾ. ಬೇಂದ್ರೆಯವರೂ ಶಂ. ಬಾ. ಜೋಶಿ ಅವರೂ ಡಾ. ಕೆ. ಕೃಷ್ಣಮೂರ್ತಿ ಅವರೂ ಇನ್ನೂ ಬಹುಕಾಲದ ಗೆಳೆಯರು ಹಲವರೂ ಸಭೆಯಲ್ಲಿದ್ದುದು ನಾನು ಆಡಬೇಕಾದ ಮಾತಿಗೆ ಹೆಚ್ಚು ಎಚ್ಚರಿಕೆಯನ್ನೂ ಹೊಣೆಗಾರಿಕೆ ಬುದ್ಧಿಯನ್ನೂ ಸ್ಫೂರ್ತಿಯನ್ನೂ ಊಡಿದುವು. ನನ್ನ ಯೋಗ್ಯತೆ ಹೇಗೇ ಇರಲಿ: ಅವರ ನಿರೀಕ್ಷೆ ಭಂಗವಾಗದಂತೆ ಆದರೂ ವಿಷಯವನ್ನು ಪ್ರತಿಪಾದಿಸಬೇಕಾಗಿತ್ತು. ಆರಂಭ ಭಾಷಣವನ್ನು ಗುಂಭೀರ ಸೌಜನ್ಯದಿಂದ ಡಾ. ಪಾವಟೆ ಅವರು ಮಾಡಿ ಕುಳಿತುಕೊಂಡಮೇಲೆ ನನ್ನ ಮಾತನ್ನಾಡಲು ತೊಡಗುವ ಹೊತ್ತಿಗೆ ಶಿವಯೋಗ ಮಂದಿರದ ಶ್ರೀ ಶ್ರೀ ಬಸವಲಿಂಗ ಸ್ವಾಮಿಗಳು ಅಲ್ಲಿಗೆ ದಯಮಾಡಿಸಿದುದನ್ನು ಕಂಡೆ. ಏತಕ್ಕೊ ಧಾರವಾಡಕ್ಕೆ ಬಂದಿದ್ದರಂತೆ. ನನ್ನ ಒದರಾಟವನ್ನು ಅವರು ಹಿಂದೆ ತಮ್ಮ ಶಿವಯೋಗ ಮಂದಿರದಲ್ಲಿ 'ಶ್ರೀ' ಅವರ ಜೊತೆ ನಾನು ಹೋಗಿದ್ದಾಗ ಕೇಳಿದ್ದರು. ಅವರು ಎದುರಿಗಿದ್ದದ್ದು ನನಗೆ ಮತ್ತಷ್ಟು ಪ್ರೋತ್ಸಾಹನವಾದಂತಾಯಿತು. ನನ್ನ ಎಣಿಕೆಯಂತೆ ಪದ್ಯ ಕಾವ್ಯಗಳನ್ನೆಲ್ಲ ಕುರಿತು ಮತ್ತು ನಾಟಕವನ್ನು ಕುರಿತು ಬಹುಶಃ ಮಾತನಾಡುತ್ತಾರೆಂದು ಅಧ್ಯಕ್ಷರು ಮೊದಲಿಗೇ ಹೇಳಿದರು. ಅಚ್ಚಾಗಿದ್ದ ಕಾರ್ಯಕ್ರಮದ ಪತ್ರಿಕೆಯಲ್ಲಿ ಹಾಗಿತ್ತು. ಹೇಗಿದ್ದರೂ ಮೂರು ದಿನವಿದೆಯಲ್ಲ ಎಂದುಕೊಂಡವನೇ ನಾನು ನಾಟಕದ ಹತ್ತಿರ ಕೂಡ ಬರದೆ ಕನ್ನಡದ ಇತರ ಮಧ್ಯಕಾಲದ ಇತರ ಪ್ರಕಾರಗಳ ಬೆಳವಣಿಗೆಯನ್ನೂ ಮನಸ್ಸಿಗೆ ತಂದುಕೊಳ್ಳದೆ ಪಂಪನ ಎರಡು ಕೃತಿಗಳನ್ನು ಕುರಿತು ವಿವರಿಸುವ ಹೊತ್ತಿಗೆ ನನ್ನ ಒಂದು ಗಂಟೆಯ ಕಾಲಾವಧಿ ಮುಗಿದುಹೋಯಿತು. ಪ್ರತಿಜ್ಞೆಯ ಕಾರ್ಯ ನೆರವೇರದುದನ್ನು ಅಧ್ಯಕ್ಷರು ನುಡಿದರು. ಅವರು ಮಾರನೆಯ ದಿನ ಎರಡು ದಿನ ಊರಲ್ಲಿ ಇರುವುದಿಲ್ಲವೆಂದೂ ಮುಂದಿನ ಎರಡೂ ದಿನ ಇನ್ನೊಬ್ಬ ಗೆಳೆಯರಾದ ಪ್ರೊ. ಮಾಳವಾಡರು ಅಧ್ಯಕ್ಷರಾಗುವರೆಂದೂ ಹೇಳಿದುದು ನನ್ನ ಲೋಪದ ವಿಷಯದಲ್ಲಿ ಮನಸ್ಸನ್ನು ಬಿಗಿಸಿತು. ನನ್ನ ಕಾರಣವನ್ನು ಎರಡನೆ ದಿನ ನಿರೂಪಿಸಬೇಕೆಂದಿದ್ದೆ.

ನನ್ನ ಮನಸ್ಸಿನಲ್ಲಿದ್ದುದು ಇದು. ನಮ್ಮ ಚಂಪೂ ಸಂಪ್ರದಾಯ ಬಹುಶಃ ಪಂಪನಿಂದ ತೊಡಗಿ ಮೇಲ್ಮೆಗೊಂಡಿತು. ಅವನ ಆದರ್ಶವನ್ನು ರೀತಿಯನ್ನು ಉಳಿದ ಎಲ್ಲ ಜೈನ ಕವಿಗಳೂ ಅನುಸರಿಸಿದರು ಎಂಬುದನ್ನು ತಿಳಿಸುವುದರ ಜೊತೆಗೆ, ಸಾಮಾನ್ಯವಾಗಿ ಜೈನ ಕಾವ್ಯಗಳ ವಿವರ ಅಲ್ಲಿ ಹೆಚ್ಚು ಬಳಕೆ ಇರುವುದಿಲ್ಲ, ಮತ್ತು ಪಂಪನ ಹಿರಿಮೆ ಆ ಸಂಪ್ರದಾಯದಲ್ಲಿ ಕಾಣಿಸುವ ಉನ್ನತಿ ಕನ್ನಡ ಕವಿತೆಗೇ ಮುಡಿ, Rarely equal, never superior – ಎಂಬಂತೆ, ಉಳಿದವರ ಸಾಧನೆ ಆ ಮಟ್ಟಕ್ಕೇರಲು ಏರಿತು ಮಾತ್ರ ಎಂಬಂತೆ ನನ್ನ ಮನಸ್ಸಿನ ಭಾವನೆ. ಅದರಲ್ಲಿಯೂ ಆದಿಪುರಾಣದ ಭಾಗ, ಅಲ್ಲಿ ಕವಿ ಕಾಣಿಸುವ ೯–೧೦ ಜನ್ಮಗಳ ಕತೆ ಹೇಗೆ ಒಂದು ಜೀವವನ್ನು ಶುದ್ಧಿಗೊಳಿಸುತ್ತ ಹೋಗಿ ತೀರ್ಥಕರತ್ವ – ಜಿನತ್ವ ಹೇಗೆ ಸಾಧಿತವಾಯಿತು; ಸಾಮಾನ್ಯ ಮನುಷ್ಯನಾಗಿದ್ದವನು ಭೋಗಲಾಲಸೆಗಳ ತೃಷೆಯಲ್ಲಿ ಮುಳುಗಿದ್ದು, ಕ್ರಮವಾಗಿ ಎಲ್ಲ ಕರ್ಮಬಂಧಗಳನ್ನು ತೃಷೆಗಳನ್ನು ದಾಟಿಕೊಂಡು

ಏಕಾಗ್ರ ಸಾಧನೆಯಿಂದ ಜಿನನಾದ? ಇಂಥುದನ್ನೆಲ್ಲ ಕವಿ ಹೇಗೆ ವರ್ಣಿಸುತ್ತಾನೆ? ಅಲ್ಲಿನ ಮನುಗಳ ಪ್ರಸಂಗ, ಭರತಬಾಹುಬಲಿಗಳ ಪ್ರಸಂಗ ಎಷ್ಟು ವಿಶಿಷ್ಟವಾದುವು ಎಂದು ವರ್ಣಿಸುತ್ತ ಮೈಮರೆತೆನೆಂದು ಕಾಣುತ್ತದೆ. ಪ್ರೋಗ್ರಾಂ ಕಡ್ಡಾಯವಾಗಿ ಮುಗಿಸಿದರೇನು ಬಂತು? ಮುಖ್ಯ ಸಂಗತಿಗಳ ಪರಿಚಯ ಮಾಡಿಕೊಡಬೇಕಲ್ಲವೆ – ಎನ್ನಿಸಿತ್ತು ನನಗೆ. ಅಧ್ಯಕ್ಷರು ಏನೇ ಹೇಳಲಿ – ಲೋಪದೋಷ ಲೋಪದೋಷವೆ ಅಲ್ಲವೇ? ಪಾವಟಿಯವರು, ಸ್ವಾಮಿಗಳವರು ಮೆಚ್ಚಿ ಆ ದಿನದ ಕಾರ್ಯವನ್ನು ಕುರಿತು ಪ್ರೀತಿಯಿಂದ ನುಡಿದರು.* ಎರಡು ದಿನಗಳಲ್ಲಿ ವಿಷಯದ ಉಳಿದ ಎಲ್ಲ ಭಾಗಗಳನ್ನೂ ನನಗೆ ಒಪ್ಪಿಸಿದ್ದ ಕಾರ್ಯವನ್ನೂ ಮುಗಿಸಿ, ನನ್ನ ಹಸ್ತಪ್ರತಿಯನ್ನು ಕಣವಿಯವರಿಗೆ ಒಪ್ಪಿಸಿ ಬಂದೆ. ಆ ಹಸ್ತಪ್ರತಿಯಲ್ಲಿರುವುದೊಂದು: ನಾನು ಮಾತಾಡಿದ್ದೊಂದು. ನಾನೇ ಬರೆದುದನ್ನು ನನಗೆ ಎಂದೂ ಓದಲು ಕಷ್ಟ. ಆದರೆ ಅದರ ಜಾಡು, ಮೂಲಾಂಶ ಎಂಥುದು ಎಂದು ಎದುರಿಗಿರುವ ಜನರ ಮುಖ ನೋಡಿಕೊಂಡು ಉತ್ಸಾಹಗೊಂಡು ಮಾರ್ಪಡಿಸಿಕೊಂಡು ಅದನ್ನು ಕುರಿತು ಮಾತಾಡುವುದು ಎಂದಿಗೂ ನನ್ನ ಪದ್ಧತಿ. ಇದರ ಬಲಾಬಲಗಳೆರಡೂ ಉಂಟು. ಎದುರಿಗೆ ಹತ್ತು ಜನ ಕುಳಿತಿರುವಾಗ ವಾಚಾ ವಿಷಯವನ್ನು ವಿವೇಚಿಸುವುದರಂತಹ ಸಂತೋಷ ಕರಡುಗಟ್ಟಿದ ಬರವಣಿಗೆಯಲ್ಲಿ ಕಾಣಿಸುವುದಿಲ್ಲವೆಂದೂ ಮಾತಿನ ಧಾರಾಳ ಬರವಣಿಗೆಗೆ ಬರುವುದು ಕಷ್ಟವೆಂದೂ ನನ್ನ ನಂಬಿಕೆ. ಬರವಣಿಗೆಯ ನಿರ್ಬಂಧ ಬೇರೆ ಬಗೆಯ ಸೂತ್ರದ್ದು, ಧಾತುವಿನದು ಎಂದು ನನ್ನ ಅಭಿಪ್ರಾಯ. ಕೇಳುವವರಿದ್ದರೆ ಮಾತಾಡಿಬಿಡುವುದು ಇಬ್ಬರಿಗೂ ಹೆಚ್ಚು ಸಂತೋಷವಾದೀತೆಂದು ಮಾತನಾಡುವ ಅಭ್ಯಾಸ ನನಗೆ ಆಗಿದೆ. ಬರೆದುದನ್ನು ಯಾರಾದರೂ ಓದುತ್ತಾರೊ ಇಲ್ಲವೊ; ಲಿಖಿತವಾಗಿ ಹೆಚ್ಚು ಖಚಿತವಾಗಿ ಒಂದು ಕಡೆ – ನಾಲ್ಕು ಕಾಲ ಜಡವಾಗಿ ಎನ್ನಲೆ? – ಇದ್ದೀತು ಮಾತ್ರ. ಇಷ್ಟು ಜನವಾದರೂ ವಿಷಯವನ್ನು ಕುರಿತು ಕೇಳುತ್ತಿರುವರೆಂಬ ನಂಬಿಕೆ ಇರುತ್ತದೆಯಾಗಿ ಹಾಗೆ ಮಾತನಾಡುವುದನ್ನು ಇದಕ್ಕೆ ಆಧಾರವಾಗಿ ಮಾಡಿಕೊಂಡಿದ್ದೇನೆ. ಗುಣದೋಷಗಳು ಏನೊ ಹೇಗೊ.

ನಾನು ಊರಿಂದ ಹೊರಟು ಬರುವುದಕ್ಕೆ ಮುಂಚೆ ಪಾವಟೆ ಅವರನ್ನು ಕಾಣಲು ಹೋಗಿದ್ದೆ. ಮನೆಯಲ್ಲಿ ಸ್ವಲ್ಪ ಉಪಾಹಾರವನ್ನೂ ಟೀಯನ್ನೂ ಕೊಟ್ಟು ನನ್ನನ್ನು ಉಪಚರಿಸಿ, 'ಅಂತಹ ಉಪನ್ಯಾಸಗಳನ್ನು ಸಭಿಕರಿಗೆ ಪ್ರಿಯವಾಗುವಂತೆ ಮಾಡಿದ್ದಕ್ಕಾಗಿ ವಿಶ್ವವಿದ್ಯಾನಿಲಯದ ಪರವಾಗಿ ಕೂಡ ನಾನು ನಿಮ್ಮನ್ನು ಅಭಿನಂದಿಸುತ್ತೇನೆ' – ಎಂದರು. ಜೊತೆಗೆ ಅನಿರೀಕ್ಷಿತವಾಗಿ 'ಮೊದಲ ದಿನ ಈ ಮಾತಾಡಿದಿರಿ. ಡಾ. ಕೃಷ್ಣಮೂರ್ತಿ ಅಷ್ಟು ದೊಡ್ಡ

---

* ನಡುವೆ ಯಾವುದೊ ಪ್ರಸಂಗದಲ್ಲಿ ನಾನೊಂದು ಮಾತನಾಡಿದೆ. ಒಂದು ಸಾವಿರ ವರ್ಷದ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ನಡೆಯದಿದ್ದ ಕಾರ್ಯವನ್ನು ಒಬ್ಬರ ಜೀವನದ ೧೫–೨೦ ವರ್ಷಗಳ ಕಾಲದಲ್ಲಿ ಆ ವಿಶ್ವವಿದ್ಯಾನಿಲಯದಲ್ಲಿಯೇ ಸಂಸ್ಕೃತ ಇಲಾಖೆಯಲ್ಲಿರುವ ಡಾ. ಕೃಷ್ಣಮೂರ್ತಿ ಅವರು ಸಂಸ್ಕೃತ ಸಾಹಿತ್ಯದಲ್ಲಿರುವ ಪ್ರಧಾನ ಅಲಂಕಾರ ಗ್ರಂಥಗಳನ್ನು ಕನ್ನಡಿಸಿ ಒಂದು ವಿಕ್ರಮವನ್ನೇ ಸಾಧಿಸಿದ್ದಾರೆ, ಅದಕ್ಕೆ ನಾವು ಎಷ್ಟು ಕೃತಜ್ಞರಾಗಿದ್ದರೂ ಸಾಲದು ಎಂದು ನುಡಿದಿದ್ದೆ. ಅದಕ್ಕೆ ಅಗತ್ಯ ಬಿದ್ದ ಒಂದು ಮಾತು ಮುಖ್ಯ ಭಾಷಣಕ್ಕೆ ಒದಗಿತ್ತು.

ಕೆಲಸ ಮಾಡಿದ್ದಾರೆಯೆ?' ಎಂದರು. ನಾನು ಹೇಳಿದೆ: 'ಈವರೆಗೆ ಅಂಥ ಕೆಲಸ ಮಾಡಿದವರು ಈ ಸಾವಿರ ವರ್ಷದಲ್ಲಿ ಬೇರೆಯಿಲ್ಲ' ಎಂದು. ಪುಸ್ತಕವನ್ನು ಅಚ್ಚು ಮಾಡುವಾಗ ಆ ಸಂಗತಿಯನ್ನು ಒಂದು ಅಡಿಟಿಪ್ಪಣಿಯಾಗಿ ಕೂಡ ಕೊಟ್ಟಿದ್ದೇನೆ. ಎಲ್ಲ ಮಾಡಿದ ಕೆಲಸಕ್ಕೆ ಗೌರವ ಸಲ್ಲಿಸಬೇಕೊ ಅದನ್ನು ಸಲ್ಲಿಸಿ ನಮ್ಮ ಕೃತಜ್ಞತೆಯನ್ನು ಸಾರ್ವಜನಿಕವಾಗಿ ಸೂಚಿಸುವುದು ಸಂಪ್ರದಾಯವಾಗಬೇಕು ಎಂಬುದು ನನ್ನ ಮನದಲ್ಲಿ ಇರುವ ಆಸೆ. ಎಲ್ಲ ಬರವಣಿಗೆಯಲ್ಲಿಯೂ ಜನರ ವಿಶ್ವಾಸವನ್ನು ಪಡೆವ ಭಾಗ, ಪಡೆಯದ ಭಾಗ ಇದ್ದೇ ಇರುತ್ತದೆ. ಕಾವ್ಯಾವಲೋಕನಗಳೆಂದು ಬರುವ ಬರವಣಿಗೆಗಳಲ್ಲಿ ಅವಲೋಕನ ಮಾಡುವವರು ಯಾವಾಗಲೂ ಗ್ರಂಥಕಾರನಿಗಿಂತ ಉತ್ತಮರೆಂಬ ಜಾಣ್ಮೆಯನ್ನೊ ವಿದ್ವತ್ತನ್ನೊ ಪ್ರಕಾಶಿಸುವುದು ಪದ್ಧತಿ. ಒಂದು ಕೀಳರ್ಥದಲ್ಲಿ (pejorative sense) ವಿದ್ವಾನ್ – ವಿಪಶ್ಚಿತ್ – ಮಾತ್ರವಲ್ಲ – ದೋಷಜ್ಞಃ * ಅಲ್ಲವೆ? ದೋಷೈಕ – ಮಾತ್ರ – ಜ್ಞಃ ಆಗಿ ನುಡಿಯುವ ಚಪಲವಾಗಬಾರದು. ಆದುದರಿಂದಲೂ ಅಲ್ಲಿ ಅವಲೋಕನಕಾರನ ಪಕ್ಷಪಾತಗಳೂ ಅಭಿಪ್ರಾಯ ಭಿನ್ನತೆಗಳೂ ಮೂಲಕ್ಕೆ ಸಲ್ಲಿಸಬೇಕಾದ ಗೌರವವನ್ನು ವಿನಯವನ್ನು ಕೂಡ (courtesy) ಕಾಣಿಸದೆ ಹೋಗುವ ಶಕ್ಯವಿದೆ.† ಅವರದು ಅಲಂಕಾರಶಾಸ್ತ್ರದ ಪ್ರಧಾನ ಗ್ರಂಥಗಳನ್ನು ಕನ್ನಡಿಸಿ, ತಮ್ಮದಾಗಿ ಕಂದಗಳನ್ನು ವೃತ್ತಗಳನ್ನು ಬರೆದು ಇಂಥ ದೊಡ್ಡ ಸೇವೆಸಲ್ಲಿಸಿದ, ಯಾರಿಗೂ ಕೀರ್ತಿ ತರುವಂತಹ, ಬಹುಕಾಲ ನಿಲ್ಲುವಂತಹ ಕಾರ್ಯ. ಕೃತಿಯನ್ನು ಕರ್ತನನ್ನು ಸ್ಮರಿಸುವುದು ಸಹೃದಯರ ಧರ್ಮ. ಸಹೃದಯನಿಗೆ ತಾನೆ ಏನು – ಜನತೆಯ ಕರ್ತವ್ಯ. ಆ ಅವಕಾಶದಲ್ಲಿ ನಾನದನ್ನು ನುಡಿಯುವುದು ಶಕ್ಯವಾದ್ದಕ್ಕಾಗಿ ನಿಜವಾಗಿ ಹರ್ಷಪಟ್ಟಿದ್ದೆ ಎಂದೆ.

ಇನ್ನೊಂದು ಸಲ ಅವರನ್ನು ಕಂಡದ್ದು ಬೆಂಗಳೂರಲ್ಲಿ; ವಿಧಾನಸೌಧದಲ್ಲಿ. ನಮ್ಮ ಸರ್ಕಾರದ ಮುಖ್ಯಕಾರ್ಯದರ್ಶಿಗಳಾಗಿದ್ದ ಶ್ರೀ ಪಿ. ವಿ. ಆರ್. ರಾವ್ ಒಂದು ಉಪಸಮಿತಿಯನ್ನು ಏರ್ಪಡಿಸಿ ಆಡಳಿತದ ವ್ಯವಸ್ಥೆಯಲ್ಲಿ ಕನ್ನಡವನ್ನು ಬಳಸುವುದಕ್ಕೆ ಸಲಹೆಗಳನ್ನು ಕೇಳಿದ್ದರು. ಆ ಸಂಬಂಧದಲ್ಲಿ ಡಾ. ಪಾವಟೆ ದಯಮಾಡಿಸಿದ್ದರು. ಆಗ ನಡೆದ ಒಂದು ಸಂದರ್ಭ ನನಗೆ ಸ್ವಲ್ಪ ಮುಜುಗರ ಉಂಟುಮಾಡಿದರೂ ಪಾವಟೆ ಅದನ್ನು

---

* ಉದಾಹರಣೆಗೆ: ನಾನು ನ್ಯಾಷನಲ್ ಬುಕ್ ಟ್ರಸ್ಟ್ ಅವರಿಗಾಗಿ ಇಂಗ್ಲಿಷಲ್ಲಿ 'ಮಹಾಕವಿ ಪಂಪ' ಎಂಬ ಪುಸ್ತಕವನ್ನು ಬರೆದೆ. ಅದನ್ನು ಬೊಂಬಾಯಿನ ಪಾಪ್ಯುಲರ್ ಪ್ರಕಾಶನದವರಿಗೆ ವಹಿಸಲು, ಅವರು ೧೯೬೭ರಲ್ಲಿ ಪ್ರಕಟಿಸಿ The Times of India ಪತ್ರಿಕೆಗೆ ಅವಲೋಕನಕ್ಕಾಗಿ ಕಳಿಸಿದರು. ಅದನ್ನು ಮಾಡಿದ ಮಹಾತ್ಮರು ಮೇಲೆ ದೂಳುರಟ್ಟಿನ ಎರಡು ವಾಕ್ಯಗಳನ್ನು ಕೂಡ ಓದಿದ ಹಾಗೆ ಕಾಣೆ. 'A pedestrian translation of great Kannada epic' ಎಂದು ಒಂದು ವಾಕ್ಯ ಬರೆದು ಮುಗಿಸಿದ್ದರು. ಅರವತ್ತೇಳು ವಯಸ್ಸಿನ ಕೃತಿಕಾರನಿಗೆ, ಕೃತಿಗೆ, ಪ್ರಕಟಿಸಿದ N.B.T. ಸಂಸ್ಥೆಗೆ ಮೂರಕ್ಕೂ ಕಾಮಧೇನು ಕಲ್ಲು ಕರೆದಂತಾದೀತೆಂಬ ಆಲೋಚನೆಯೂ ಬರಲಿಲ್ಲವಾದೀತು. ಇದು ನಾಡಿನ ಮಹಾ ಪತ್ರಿಕೆಯೊಂದರ ಚರ್ಯೆ, ಕಾವ್ಯಾವಲೋಕನ ವೈಭವ.

† ಇಲ್ಲಿ ಇದು ಗುಣಾರ್ಥದಲ್ಲಿ ಮಾತ್ರ ಗಣ್ಯ.

ಸವರಿಸಿಕೊಂಡ ರೀತಿ ಅವರ ದೊಡ್ಡತನವನ್ನು ಕಾಣಿಸಿತು. ಹಳೆಯ ಕಾಲದಿಂದ ನಾನು ಇಂಥ ಕಡೆಗಳಿಗೆಲ್ಲ ಹೋಗುವಾಗ ಒಂದೇ ಬಗೆಯ ಉಡುಪನ್ನು ಹಾಕಿಕೊಳ್ಳುವ ರೂಢಿ. ನನ್ನ ತಲೆಯ ಮೇಲೆ ರುಮಾಲಿರುತ್ತದೆ. ಈಚೆಗೆ ನಾಡಿನಲ್ಲಿ ರುಮಾಲು ಅಭ್ಯಾಸ ಹೋಗಿರುವುದರಿಂದ, ಬಹುವಾಗಿ ಅಗಸರು ರುಮಾಲನ್ನು ಒಗೆದು ಹದವಾಗಿ ಗಂಜಿ ಹಾಕಿ ಇಸ್ತ್ರಿ ಮಾಡುವ ಕಾರ್ಯ ಮರೆತಿದ್ದಾರೆ. ಆ ಸಲ ಗಂಜಿ ಹೆಚ್ಚಾಗಿ ನಾನು ಕಟ್ಟಿದ ರುಮಾಲು ಸ್ವಲ್ಪ ದೊಡ್ಡದಾಗಿತ್ತು. ಅದನ್ನು ಧರಿಸಿದ ನನಗೇ ಅಷ್ಟೇನೂ ಹಗುರವಾಗಿ ಕಾಣಲಿಲ್ಲ. ಆದರೆ ಬೇರೆ ಕಟ್ಟಲು ಕಾಲದ ಅವಕಾಶವಿಲ್ಲದೆ ಅದನ್ನೇ ಧರಿಸಿ ಹೋದೆ. ಆಕೃತಿ ಸರಿಯಾಗಿತ್ತು; ಗಾತ್ರ ಸ್ವಲ್ಪ ದೊಡ್ಡದು. ಪಾವಟೆ ಅವರು ಬಂದ ಕೂಡಲೆ ಅವರಿಗೆ ವಂದನೆ ಸಲ್ಲಿಸಿದೆ. ಬಂದವರು ಪಕ್ಕದಲ್ಲಿ ಕುಳಿತರು. ನನ್ನ ತಲೆಯ ಮೇಲಿನ ರುಮಾಲನ್ನು ನೋಡಿ 'It's big turban that V. Si. is wearing today' – ಎಂದೊ ಏನೊ ಅಂದರು. ಒಡನೆಯೆ ಅನಿರೀಕ್ಷಿತವಾಗಿ ಪಿ. ವಿ. ಆರ್. ರಾವ್ 'You need not worry, Pavate, V. Si.'s head can sustain three more such at once' ಎಂದುಬಿಟ್ಟರು. ಯಾರೂ ಇದಕ್ಕೆ ಅಸಮಾಧಾನ ಪಡಬೇಕು. 'Not that I am not aware of it, Mr. Rao, I did not feel like hurting my friend; nor the feelings of anyone in making the observation. I hope he doesn't mind it. It was just enjoyment' – ಎಂದರು. ರಾಯರು ಐ.ಸಿ.ಎಸ್. ಆಫೀಸರು. ಆಗ ಕಾರ್ಯ ಮಾಡಬೇಕಾಗಿರುವವರು. ನಾವು ಹೋಗಿದ್ದ ಆರೆಂಟು ಮಂದಿ ಅಲ್ಲಿ ಜಮಾಯಿಸಿದ್ದ ಸಲಹೆಗಾರರು. ರಾಯರು ಕೊಟ್ಟ ಉತ್ತರಕ್ಕೆ ಇನ್ನೊಬ್ಬರಾಗಿದ್ದರೆ ಅತೃಪ್ತಿ ಪಡಬಹುದಿತ್ತು. ಹಾಗೆ ಮಾಡದೆ ನನ್ನನ್ನು, ತಮ್ಮನ್ನು, ರಾಯರನ್ನು–ಮೂವರನ್ನೂ ಸಮಜಾಯಿಷಿ ಮಾಡುವಂತೆ ನುಡಿದ ದೊಡ್ಡತನ, ಪ್ರಪಂಚ ನೋಡಿದವರ ಉದಾರನೀತಿ. ಯಾವುದನ್ನು Wisdom ಎನ್ನುತ್ತಾರೆಯೊ ಅದರ ಸಾರ ಅಲ್ಲಿನ grace, spaciousness ಆಗಿ – ಅಂಥಲ್ಲಿದೆ.

ಮೂರು ಅವಧಿಗಳ ಉಪಕುಲಪತಿ ಪದವಿ ಕಳೆದಮೇಲೆ ಪಂಜಾಬಿಗೆ ರಾಜ್ಯಪಾಲರಾಗಿ ನಿಯಮಿತರಾಗಿ ಹೋಗುವಾಗ ವಿಮಾನದಲ್ಲಿ ನಾನೂ ಹೋಗುವ ಯೋಗ ದೊರೆತು, ಅವರಿಗೆ ನನ್ನ ಅಭಿನಂದನೆಯನ್ನು ಸೂಚಿಸಿದೆ. ಜೊತೆಗೆ 'ಅದು ಪಂಜಾಬ್, ಉತ್ತರ ದೇಶದಲ್ಲಿ ಉತ್ತರದ್ದು. ಆ ಜನ ನಮ್ಮ ಕಡೆಯವರಿಗಿಂತ ಸ್ವಭಾವದಲ್ಲಿ ಬೇರೆ. ರಾಜಕೀಯವಾಗಿ ಈಗಿನ ಸನ್ನಿವೇಶ ಜಟಿಲವಾದ್ದು, ಮುಳ್ಳುಮುಳ್ಳು' ಎಂದೆ. ಅವರು ಇಂಥ ಸನ್ನಿವೇಶಗಳನ್ನು ಎಷ್ಟೋ ರೀತಿ ಕಂಡಿದ್ದರೂ ನಿಭಾಯಿಸಿದ್ದರೂ ಕೇವಲ ರಾಜಕೀಯ ವಾತಾವರಣದಲ್ಲಿ, ಪಕ್ಷಗಳ ಉಗ್ರಮನೋವೃತ್ತಿಗಳಲ್ಲಿ, ಗುಂಪುಗಳ ಘರ್ಷಣೆಗಳ ಸ್ಥಿತಿಯಲ್ಲಿ ಅಲ್ಲಿಗೆ ಹೋಗುತ್ತಿದ್ದುದು ಯಾರಿಗೂ ಕಷ್ಟಕರವೆಂದು ತೋರುವ ಸಂದರ್ಭ. 'ರಾಜಕೀಯದವರನ್ನೆಲ್ಲ ಬಿಟ್ಟು ವಿದ್ಯಾಡಳಿತಕ್ಕೆ ಸೀಮಿತವಾಗಿದ್ದ ನನ್ನಂಥವರನ್ನು ಬಯಸಿದ್ದಾರೆ. ಈ ಸಮಯದಲ್ಲಿ ಯಾವ ಪಕ್ಷಪಾತವೂ ಇಲ್ಲದೆ ಕಾರ್ಯ ನಿರ್ವಹಿಸುವ ಒಂದು ಅವಕಾಶವಿದೆ. ನಿಮ್ಮ ಅಭಿನಂದನೆ ನನಗೆ ಹಿತೈಷಿಯಾಗುತ್ತದೆ' ಎಂದೊ ಏನೊ ಅಂದರು. ಪುನಃ ನಾನು ಅವರನ್ನು ಮುಖತಃ ಕಾಣಲಾಗಲಿಲ್ಲ. ಅವರು ಬೆಂಗಳೂರಲ್ಲಿಯೇ

ಇದ್ದಾರೆಂದಾಗಲೂ ಒದಗಬಹುದಾದ ಕೆಲವು ಸಂದರ್ಭಗಳಲ್ಲಿಯೂ ಅವರನ್ನು ಭೇಟಿ ಮಾಡಲಾಗಲಿಲ್ಲ.* ಆದರೆ ಕನ್ನಡನಾಡಿನ ವಿದ್ಯಾಮಂಡಲದಲ್ಲಿ ಅತಿಶಯ ಧೈರ್ಯಸಾಹಸಗಳಿಂದ ಕರ್ನಾಟಕ ವಿಶ್ವವಿದ್ಯಾನಿಲಯದಂಥ ಒಂದು ಹೊಸ ಕ್ರಿಯಾಪ್ರಪಂಚವನ್ನೇ ವ್ಯವಸ್ಥೆಗೊಳಿಸಿ, ಅದನ್ನು ದಕ್ಷತೆಯಿಂದಲೂ ಕಾರ್ಯಕೌಶಲದಿಂದಲೂ ಉನ್ನತಿಗೆ ತಂದ ವ್ಯಕ್ತಿತ್ವ ಯಾರಿಗೂ ಅಭಿಮಾನವನ್ನು ಉಂಟುಮಾಡುತ್ತದೆ. ಅಂಥ ಛಾತಿ ಸಾಮಾನ್ಯವಲ್ಲ.

ತನ್ನ ಜನವರ್ಗದಲ್ಲಿಯೇ ಒಂದು ಪ್ರಬಲ ಸಂಸ್ಥೆ ಅವರಿಗೆ ಅನುಕೂಲವಲ್ಲದ ರೀತಿ ಆಯಿತೆಂದೂ ತಾನು ಬೆಂಬಲಿಸಿದ್ದ ಒಬ್ಬರನ್ನು ಮುಂದಿನ ಅದೇ ಅಧಿಕಾರಕ್ಕೆ ಆಯಲು ನೆರವಾಗಲಿಲ್ಲವೆಂದೂ ಕೇಳಿದ್ದೇನೆ. ಕಾರ್ಯ ಪ್ರಪಂಚದಲ್ಲಿ ಜಯಾಪಜಯಗಳು ಸಿದ್ಧವಲ್ಲ; ಸರ್ವದಾ ಸಾಧ್ಯವಲ್ಲ. ಜಯವಾಗಲಿ ಆಗದಿರಲಿ, ಲಕ್ಷ್ಯಮಾಡದೆ ತಮ್ಮ ಧರ್ಮವನ್ನು ನಡಸಿಕೊಳ್ಳುವ ಯೋಗ್ಯತೆ ಮಾತ್ರ ಸಾಮಾನ್ಯವಲ್ಲ. ಅಂತಹ ಅಸಾಮಾನ್ಯ ವ್ಯಕ್ತಿಗಳಿಗೆ ನಾಡು ಋಣಿಯಾಗಿರುತ್ತದೆ. ಕಲೆಗಾರರ ಕ್ರಿಯೆ, ಕ್ರಿಯಾವೀರರ ಒಂದು ಕಾರ್ಯ ಇನ್ನೊಂದು ರೀತಿ ಜನದ ಕಣ್ಣು ಮುಂದೆ ನಿಂತಿರುತ್ತದೆ. ಈಗ 'ಕರ್ನಾಟಕ ಭಾರತಿ' ಎಂದಿರುವ ವಿದ್ಯಾಮಂಡಲಿಯನ್ನು ವ್ಯವಸ್ಥೆಗೊಳಿಸಿ, ಸಾವಿರಾರು ವಿದ್ಯಾರ್ಥಿಗಳಿಗೆ ಅನೇಕ ಬಗೆಯ ಶಿಕ್ಷಣ ದೊರಕುವಂತೆ ಮಾಡಿ ಕೃತಾರ್ಥರಾದ ಡಾ. ಪಾವಟೆ ಧನ್ಯರು, ಅಭಿವಂದ್ಯರು.

---

* ಆಕಸ್ಮಾತ್ ಆಮೇಲೆ ಒಮ್ಮೆ ಗೋಖಲೆ ಸಾರ್ವಜನಿಕ ಸಂಸ್ಥೆಯ ವಾರ್ಷಿಕೋತ್ಸವ ಸಮಯದಲ್ಲಿ ಅವರನ್ನು ಕಂಡಾಗ ಹಿಂದಿನ ವಿಶ್ವಾಸವನ್ನೇ ತೋರಿಸಿದ್ದು ಅವರ ಸಜ್ಜನತೆ.

ಪಾನ್ಯಂ ಶ್ರೀನಿವಾಸರಾವ್

ಶ್ರೀನಿವಾಸರಾಯರು ನನ್ನ ಜೀವನದಲ್ಲಿ ಒಂದು ದೊಡ್ಡ ಕುಳ. ಸುಮಾರು ಎ. ವಿ. ಸ್ಕೂಲಲ್ಲಿ ಇದ್ದಾಗಿನಿಂದ ಅವರು ಜೊತೆಯಲ್ಲಿದ್ದರು. ಕಾಲೆಜಲ್ಲಿ ಅವರು ಸೈನ್ಸ್ ತೆಗೆದುಕೊಂಡದ್ದರಿಂದ ಸೆಂಟ್ರಲ್ ಕಾಲೆಜಲ್ಲಿ ಇದ್ದರು. ಭೌತಶಾಸ್ತ್ರ (ಫಿಸಿಕ್ಸ್)ದಲ್ಲಿ ಹೆಸರು ಮಾಡಿ ವಿದ್ಯಾರ್ಥಿಗಳಿಗೆ ಸೂಕ್ಷ್ಮದರ್ಶಿಗಳಾಗಿದ್ದರು. ಆಗಿನ ಕಾಲದಲ್ಲಿ ಸೈನ್ಸ್‌ಗೆ ಮೊದ ಮೊದಲು ಮೆಟ್‌ಕಾಫ್ ಇದ್ದರೂ ಉತ್ತರಕಾಲದಲ್ಲಿ ಬಿ. ವೆಂಕಟೇಶಾಚಾರ್ ಅವರು ಮೇಲ್ಪಟ್ಟ ವಿದ್ಯಾಧಿಕಾರಿಗಳಾದರು. ಇವರ ಜೊತೆಗೆ ಎಲ್. ಸೀಬಯ್ಯನವರು, ನರಸಿಂಹಯ್ಯನವರು, ಸುಬ್ಬರಾಯಶಾಸ್ತ್ರಿಗಳು ಮುಂತಾದವರು ಗಣ್ಯರಾಗಿದ್ದರೂ ಮೇಲಧಿಕಾರದಲ್ಲಿ ಇವರ ಕೈವಾಡವೇ ನಡೆಯುತ್ತಿತ್ತು. ವೆಂಕಟೇಶಾಚಾರ್ಯರಿಗಿಂತ ಅಧಿಕಾರದಲ್ಲಿ ಸೀಬಯ್ಯನವರಿಗೆ ಹೆಚ್ಚು. ಪ್ರಾಶಸ್ತ್ಯ ಬಂದರೂ ಅದೇನೂ ವಿದ್ಯಾರ್ಥಿವೃಂದದಲ್ಲಿ ಇವರ ಗುಣ ಗೌರವವನ್ನು ಕಡಮೆ ಮಾಡಲಿಲ್ಲ.

ನಾನು ಮೈಸೂರಲ್ಲಿ ಮಹಾರಾಜಾ ಕಾಲೆಜಿಗೆ ವಿದ್ಯಾಸುವಾಗಿ ಹೋದೆ. ಅಲ್ಲಿಯೇ ಎಂ.ಎ. ಆಯಿತು. ಒಂದು ಹೈಸ್ಕೂಲಲ್ಲಿ ಉಪಾಧ್ಯಾಯನಾಗಿ ಸುಮಾರು ೧೯೨೮ರ ವರೆಗೂ ಮೈಸೂರಲ್ಲಿಯೇ ಇದ್ದು ಬೆಂಗಳೂರು ಮರೆಯುವ ಹಾಗಾಗಿತ್ತು. ಆದರೆ '೨೮ಕ್ಕೆ ಬೆಂಗಳೂರಿಗೆ ಬಂದಾಗ ಪುನಃ ಇಲ್ಲಿನ ಹಿಂದಿನ ಸಂಪರ್ಕಗಳು ಹೆಚ್ಚಾದವು. ಸೆಂಟ್ರಲ್ ಕಾಲೆಜಿನ, ಅದರಲ್ಲಿಯೂ ಫಿಸಿಕ್ಸ್ ಅಲ್ಲಿ ಅಸಿಸ್ಟೆಂಟ್ ಪ್ರೊಫೆಸರಾಗಿದ್ದ ಶ್ರೀನಿವಾಸರಾಯರ ಸಂಪರ್ಕ ಅತಿಶಯ ವಿಶ್ವಾಸದಲ್ಲಿ ಬೆಳೆಯಿತು. ಆ ಸುಮಾರಲ್ಲಿ ಯೂನಿವರ್ಸಿಟಿ ಯೂನಿಯನ್ನಲ್ಲಿ ಹೆಚ್ಚಾಗಿ ಓಡಿಯಾಡುತ್ತಿದ್ದ ರಾಯರ ಪ್ರಭಾವ ಕಾಣಿಸಿತು. ಅಲ್ಲಿ ನಡೆಯುತ್ತಿದ್ದ ಕಾರ್ಯಕಲಾಪಗಳು ಅತಿಯಾಗಿ ನನ್ನನ್ನು ಅತ್ತ ಎಳೆದವು. ಕಾರ್ಯದರ್ಶಿಯಾಗಿ ರಾಯರು ಅಲ್ಲಿ ಕೆಲಸ ಮಾಡಿದರು. ನಾಟಕಗಳನ್ನು ಆಡಿಸುವುದು, ಆಡುವುದು – ಇದಕ್ಕಾಗಿ ಒಂದು ವರ್ಗವೇ ಉತ್ಪನ್ನವಾಯಿತು. ಇವರ ಮಧ್ಯೆ ಸುಳಿದಾಡಿದಾಗ ಇವರಲ್ಲಿ ಜನಶಕ್ತಿಗೆ ಇದ್ದ ಗೌರವ ಕಂಡಿತು. ಗಾಲ್ಸ್‌ವರ್ದಿ, ಷೇಕ್ಸ್‌ಪಿಯರ್ ನಾಟಕಗಳು ಇವುಗಳಲ್ಲಿ ಇವರ ಶಕ್ತಿಯನ್ನು ಗುರುತಿಸಲಾಯಿತು. ಹಾಗೆಯೇ ಇಲ್ಲಿಗೆ ಬಂದ ಸ್ಥಾನಂ ನರಸಿಂಹರಾವ್ ಆಡುತ್ತಿದ್ದ ನಾಟಕಗಳಲ್ಲಿ ಇವರಿಗೆ ಅತಿಶಯವಾದ ಭಕ್ತಿ ಉಂಟಾಯಿತು. ಎ.ಡಿ.ಎ. ಕಂಪನಿಯ ನಾಟಕಗಳಲ್ಲಿಯೂ ಭಕ್ತಿ ಇದ್ದ ರಾಯರಿಗೆ ಅಲ್ಲಿ ರಾಘವಾಚಾರಿಯವರ ಪ್ರಭಾವ ವಿಶೇಷವಾಗಿ ಕಂಡಿತು. ಆ ಕಾಲದಲ್ಲಿ ಇದನ್ನು ಬೆಂಗಳೂರಲ್ಲಿ ಬೆಳಸಿದುದು ಸ್ಥಾನಂ ನರಸಿಂಹರಾಯರ ನಟಚರ್ಯೆ. ಶ್ರೀನಿವಾಸರಾಯರು ಸ್ಥಾನಂ ಅವರಿಗೆ ಸತ್ಕಾರವೇರ್ಪಡಿಸಿದ್ದರು.

ರಾಯರು ರಂಗನಿರ್ದೇಶನದಲ್ಲಿಯೂ ಆಸ್ಥೆ ಉಳ್ಳವರಾಗಿದ್ದರು. ಆ ಸಂಬಂಧದಲ್ಲಿ ಒಂದು ಕಥೆ ನಡೆಯಿತು. ಬೆಂಗಳೂರು ಎ. ಡಿ. ಎ. ಕಾರ್ಯದರ್ಶಿಯಾದ

ಶ್ರೀನಿವಾಸಯ್ಯಂಗಾರ್ ಜೊತೆಗೆ ಶ್ರೀನಿವಾಸರಾಯರು ಅಲ್ಲಿನ ನಾಟಕ ಮಂದಿರದಲ್ಲಿ ಕಾರ್ಯದರ್ಶಿಯಾಗಿದ್ದುದರಿಂದ ಒಮ್ಮೆ ಒಂದು ಕಾಗದ ಬಂದಿತು. ಸಾಮರ್‌ಸೆಟ್ ಮಾಂ ಬರೆದ 'ದಿ ಲೆಟರ್' ಎಂಬ ನಾಟಕ ಆಸ್ಟ್ರೇಲಿಯಾದ ಒಂದು ಸಂಗತಿ; ಅದನ್ನು ತದ್ವತ್ ಚಿತ್ರಿಸಿದ್ದಾರೆ; ಅತನು ಬರಲಿ; ಇನ್ನೊಂದು ಸಲ ಬಂದರೆ ಅದನ್ನು ಬರೆದ ಮಾಂಗೆ ಟಾರ್‌ಫೆದರ್ ಮಾಡುತ್ತೇವೆ ಎಂದಿತ್ತು.' ಅದನ್ನು ಬೆಂಗಳೂರು ಎ. ಡಿ. ಎ. ಅಲ್ಲಿ ಅಡುತ್ತಿದ್ದರು. ಆ ಎ. ಡಿ. ಎ. ಗೆ ಇದ್ದುದು ಈ ಎ. ಡಿ. ಎ. ಅಧಿಕಾರಿಯಾದ ರಾಯರ ಕೈಗೆ ದೊರಕಿತು. ಆ ಕಾಗದ ತಮಗೆ ಸಂಬಂಧಪಟ್ಟುದಲ್ಲವೆಂದೂ ಕಂಟೋನ್‌ಮೆಂಟಿನ ಎ.ಡಿ.ಎ.ಗೆ ಸಂಬಂಧಿಸಿದುದೆಂದೂ ರಾಯರು ಕಳಿಸಿಕೊಟ್ಟರು. ಇದರ ಜೊತೆಗೆ ರಾಯರು ಎಷ್ಟೋ ಸಲ ದಂಡಿಗೆ ಬಂದ ಸಿನೆಮಾಗಳನ್ನು ಮೊದಲ ದಿವಸವೇ ಹೋಗಿ ನೋಡಿಕೊಂಡು ಬರುವ ಹವ್ಯಾಸ ಇಟ್ಟುಕೊಂಡಿದ್ದರು. ಜೊತೆಗೆ ನಾನೂ ಇರುತ್ತಿದ್ದೆ. ಎಲ್ಲಿಗೆ ಹೋದರೂ ನಾವು ಜೊತೆಯಲ್ಲಿ ಹೋಗುತ್ತಿದ್ದೆವು. ಹೀಗೆ ಜೊತೆ ಕಲಸಿಕೊಂಡಿತು.

ರಾಯರು ಪಾಶ್ಚಿಮಾತ್ಯ ನಾಟಕಗಳಲ್ಲಿ ವಿಶ್ವಾಸವುಳ್ಳವರು. ಆ ಕಾಲದಲ್ಲಿ ಇಂಗ್ಲಂಡಲ್ಲಿ 'ಮ್ಯಾಂಚೆಸ್ಟರ್ ಸ್ಕೂಲ್' ನಾಟಕಕಾರರು ಆಡುತ್ತಿದ್ದ ನಾಟಕಕರ್ತೃಗಳ Plays of Today ಎಂಬ ನಾಟಕಗಳು ಅಚ್ಚಾಗಿ ಬರುತ್ತಿದ್ದವು. ಆ ನಾಟಕಗಳನ್ನೆಲ್ಲ ಅವರು ಓದಿದ ತಕ್ಷಣ ನನಗೆ ಕೊಡುತ್ತಿದ್ದರು. ಇಲ್ಲಿ ಎ.ಡಿ.ಎ. ಜೊತೆಗೆ ನನ್ನ ನಾಟಕ 'ಆಗ್ರಹ' ಆಡಿದ್ದರು. ಅದಕ್ಕೆ ಅಮೆರಿಕಾದಿಂದ ಬಂದಿದ್ದು ನಾಟಕವನ್ನು ನಿರ್ವಹಿಸಲು ಶಕ್ತರಾದ ಮಿಸ್ ನೀಲಾ ನಾಗಿಣೆದೇವಿಯವರು ಸಹಾಯಕರಾದರು. ಅವರ ನಿರ್ದೇಶನದಲ್ಲಿ Select Picture Talkies ಅಲ್ಲಿ ಈ ನಾಟಕವನ್ನು ಪ್ರದರ್ಶಿಸಲಾಯಿತು. ಅದರ ಚರಿತ್ರೆ ಅತಿಯಾಯಿತು. ಎಷ್ಟು ವಿಶೇಷವಾಗಿ ಆಡಬೇಕೆಂದು ಏರ್ಪಾಡಾಗಿತ್ತೊ ಅದು ದೀಪಗಳು ಒದಗದ್ದರಿಂದ ಸರಿಯಾಗಿ ನಡೆಯದೆ ಕೆಟ್ಟಿತು. ವಿಜೃಂಭಣೆಯಿಂದ ನಡೆಯುತ್ತದೆಂದು ಇದ್ದ ನಾಟಕ ಈ ರೀತಿ ಕೆಟ್ಟುದು ಎಲ್ಲರಿಗೂ ಅಚ್ಚರಿ ತಂದಿತು.

ಈ ಮುಂಚೆಯೇ ಮೈಸೂರು ವಿಶ್ವವಿದ್ಯಾನಿಲಯದವರು ತಾವು ಏರ್ಪಡಿಸುತ್ತಿದ್ದ ಕನ್ನಡ ಪ್ರಚಾರೋಪನ್ಯಾಸಗಳಲ್ಲಿ ಕನ್ನಡದಲ್ಲಿ ವಿಜ್ಞಾನ ವಿಷಯವನ್ನು ಕುರಿತು ಮಾತನಾಡುವುದರಲ್ಲಿ ಅವರೆಗಾಗಲೇ ಹೆಸರು ಪಡೆದಿದ್ದ ರಾಯರ ವಿದ್ವತ್ತೆಯನ್ನು ಬಳಸಿಕೊಂಡಿದ್ದರು. ಆ ಸಂಪ್ರದಾಯ ಬೆಳೆದು ರಾಯರು ಕನ್ನಡದಲ್ಲಿ ವಿಜ್ಞಾನ ವಿಷಯಕ ಭಾಷಣಗಳನ್ನು ಕೊಡುವುದನ್ನು ಮುಂದುವರಿಸಿದರು. ಗೋಖಲೆ ಸಾರ್ವಜನಿಕ ವಿಚಾರಸಂಸ್ಥೆಯಲ್ಲಿಯೂ ಅನೇಕ ಉಪನ್ಯಾಸಗಳನ್ನು ಕೊಟ್ಟರು. ಆ ಕಾಲದಲ್ಲಿ ನರಸಿಂಹಯ್ಯನವರು, ಶ್ರೀನಿವಾಸರಾಯರು ಇಬ್ಬರೇ ಕನ್ನಡದಲ್ಲಿ ಸೈನ್ಸ್ ವಿಷಯಗಳನ್ನು ಕುರಿತು ಮಾತನಾಡುತ್ತಿದ್ದವರು. ಈ ಕಾಲಕ್ಕೆ ಬಹುಮುಂಚೆ ಬಿ. ಎಂ. ಶಿವರಾಮಯ್ಯನವರು ವಿಜ್ಞಾನ ಸಂಬಂಧಿ ವಿಷಯಗಳನ್ನು ಕುರಿತು ಕನ್ನಡದಲ್ಲಿ ಮಾತನಾಡುತ್ತಿದ್ದರು. ಆದರೆ ರಾಯರ ವೈಖರಿ ಅದ್ಭುತವಾದ್ದು. ಸೆಂಟ್ರಲ್ ಕಾಲೆಜಿನ ಕರ್ನಾಟಕ ಸಂಘದ ಉಪನ್ಯಾಸಗಳಲ್ಲಿ ತೊಡಗಿದ್ದು ಅವರ ಹೆಸರ ಮೇಲೆ ಬಹುಕಾಲ ಮುಂದುವರಿಯಿತು. ಅವರಿರುವಷ್ಟು ಕಾಲವೂ ಅದನ್ನು ಮುಂದುವರಿಸಿದರು. ಅವರಷ್ಟು ರಸಿಕವಾಗಿ ತಿಳಿಯಾಗಿ ವಿಷಯವನ್ನು ವಿವರಿಸುವವರು ಕನ್ನಡದಲ್ಲಿ ಈವರೆಗೆ

ಬಂದಿಲ್ಲವೆನಿಸುತ್ತದೆ. ಅದನ್ನೆಲ್ಲ ಕೂಡಿಸಿ ಒಂದು ಕಡೆ ಅಚ್ಚು ಮಾಡಿದರೆ ಕನ್ನಡಕ್ಕೆ ಬಹುಮಟ್ಟಿನ ಉಪಕಾರವಾಗುತ್ತದೆ.

ಜಮಖಿಂಡಿಯಲ್ಲಿ ೧೯೩೭ರಲ್ಲಿ ನಡೆದ ಪರಿಷತ್ತಿನ ಸಾಹಿತ್ಯ ಸಮ್ಮೇಳನದಲ್ಲಿ ಅವರು ಭಾಗವಹಿಸಿದ್ದರು. ಗುಂಡಪ್ಪನವರೊಡನೆ ಹೊರಟು ಬಿಜಾಪುರಕ್ಕೆ ಬಂದು ಅಲ್ಲಿಂದ ಬೆಂಗಳೂರಿಗೆ ಬಂದೆವು. ಆ ದಾರಿ ಉದ್ದಕ್ಕೂ ರಾಯರಿದ್ದರು. ಅಲ್ಲಿಂದ ಗುಂಡಪ್ಪನವರ ಸಂಪರ್ಕ ರಾಯರಿಗೆ ಬಲವಾಯಿತು. ಇನ್ನೊಮ್ಮೆ ಗುಂಡಪ್ಪನವರೊಡನೆ ಪುತ್ತೂರಿನ ದಸರಾ ಉತ್ಸವಕ್ಕೆ ಹೋಗಬೇಕಾಗಿ ಬಂದು, ಜೊತೆಯಲ್ಲಿ ಮಂಗಳೂರು ಉಡುಪಿ ಸುತ್ತಿಕೊಂಡು ಬಂದೆವು. ಮುಂದೆ ಪರಿಷತ್ತಿನಲ್ಲಿ ಶ್ರೀಕಂಠಯ್ಯನವರ ಆಧಿಪತ್ಯದಲ್ಲಿ ಒಂದು ನಾಟಕಶಾಲೆ ಏರ್ಪಟ್ಟು ಅದರಲ್ಲಿ ನಾಟಕಗಳನ್ನು ಆಡಿಸಬೇಕೆಂದು ಏರ್ಪಾಡಾಯಿತು. ಅದರಲ್ಲೆಲ್ಲ ಶ್ರೀನಿವಾಸರಾಯರು ಭಾಗವಹಿಸಿದರು.

ರಾಯರು ಸ್ಫುರದ್ರೂಪಿಗಳು; ಬಟ್ಟೆಬರೆ ಹಾಕುವುದರಲ್ಲಿ ತುಂಬಾ ಶಿಸ್ತುಗಾರರು. ಆ ಕಾಲದ ವಿದ್ಯಾಪ್ರಪಂಚದಲ್ಲಿ ಬಹಳ ಚೆನ್ನಾಗಿ ಬಟ್ಟೆ ಹಾಕುವವರೆಂದು ಖ್ಯಾತರಾದವರು.

ಕಾಲೇಜಿಂದ ಹೊರಗೆ ಬಂದ ಮೇಲೆ ತಾತಾ ವಿಜ್ಞಾನ ಮಂದಿರದಲ್ಲಿ ಜರ್ಮನ್ ವಿಜ್ಞಾನಿಯೊಬ್ಬನ ಕೆಳಗೆ ಕೆಲಸ ಮಾಡಿದರು. ಅಲ್ಲಿಂದ ಎಚ್. ಎ. ಎಲ್. ಅಲ್ಲಿ ಕೆಲಸ ಮಾಡಿದರು. ಇದರಲ್ಲೆಲ್ಲ ಕೀರ್ತಿಶಾಲಿಗಳಾಗಿ ದುಡಿದರು. ಕಡೆಯವರೆಗೂ ಅವರ ರಸಿಕತೆ ಉಳಿಯಿತು. ಕಡೆಗೆ ಸೈನ್ಸ್ ಓದುವ ವಿದ್ಯಾರ್ಥಿಗಳಿಗೆ, ಇಂಜಿನಿಯರಿಂಗ್ ಓದುವ ವಿದ್ಯಾರ್ಥಿಗಳಿಗೆ ಪಾಠಗಳನ್ನು ಹೇಳಿಕೊಡುತ್ತಿದ್ದರು. ಅವರ ವಿದ್ಯಾವಿಲಾಸ ಹೀಗೆ ಕೃತಾರ್ಥವಾಯಿತು.

ಎಸ್. ವಿ. ಶ್ರೀನಿವಾಸರಾವ್

ನಮಗೆ ಹೈಸ್ಕೂಲಿನ ಒಂದು ತರಗತಿಯಲ್ಲಿ ಚಾರ್ಲಸ್ ರೀಡ್ ಬರೆದ The Cloister and the Hearth ಎಂಬ ಪುಸ್ತಕವನ್ನಿಟ್ಟಿದ್ದರು. ಅದು ಮೂಲ ಕಾದಂಬರಿಯಲ್ಲ. ಕಾದಂಬರಿಯ ಸಣ್ಣಿಸಿದ ರೂಪ. ಆದರೂ ಅಲ್ಲಿನ ಮೊದಲ ಸಾಲಿನ ವಾಕ್ಯ ಇಂದಿಗೂ ನನ್ನ ಮನಸ್ಸಲ್ಲಿದೆ; Not a day passes over the earth when men, women and children of no note think great things, do great deeds – ಎಂದೊ ಏನೊ ಅಲ್ಲಿ ಮಾತು. ನನ್ನ ಗೆಳೆಯರಾದ ಎಸ್. ವಿ. ಶ್ರೀನಿವಾಸರಾಯರನ್ನು ನೆನೆದಾಗ ಈ ಮಾತು ಜ್ಞಾಪಕಕ್ಕೆ ಬರುತ್ತದೆ. ದಿನವೂ ಇದು ನಡೆಯುತ್ತದೆ; ಎಲ್ಲೆಲ್ಲಿಯೂ. ಹೆಸರಿಗೆ ಬಾರದವರು, ಪತ್ರಿಕೆಗಳಲ್ಲಿ ವೇದಿಕೆಗಳಿಂದ ಖ್ಯಾತಿ ಪಡೆಯದವರು ದೊಡ್ಡ ಆಲೋಚನೆಗಳನ್ನು, ದೊಡ್ಡ ಕೆಲಸಗಳನ್ನು ಮಾಡುತ್ತಾರೆ. ಪ್ರಾಂತದಲ್ಲಾಗಲಿ, ನಾಡಿನಲ್ಲಾಗಲಿ ಅವರಿಗೆ ಪ್ರತಿಷ್ಠೆ ಇಲ್ಲ; ಚರಿತ್ರೆಗಳಲ್ಲಿ ಅವರನ್ನು ಕುರಿತು ಯಾವ ಹೇಳಿಕೆಯೂ ಸುಳಿವೂ ಸುಳಿಯದು. ಚರಿತ್ರೆ ಎಂಬುದೆಲ್ಲ ರಾಜಕೀಯದವರಿಂದ, ಸೈನ್ಯಾಧಿಕಾರಿಗಳಿಂದ, ಅದ್ಭುತ ಸಾಹಸಗಳಿಂದ, ಸಾವಿರ ಲಕ್ಷ ಕೊಂದು ಕೂಗಿದವರಿಂದ, ಕೊಲ್ಲಿಸಿದ ರಾಜರ ಹೆಸರಿಂದ ತುಂಬಿರುತ್ತದೆ. ಯಾವುದೊ ಅಸಾಧಾರಣತೆ ಬೇಕು ಜನದ ಮನಸ್ಸನ್ನು ಆಕರ್ಷಿಸುವುದಕ್ಕೆ; ಮನಸ್ಸು, ಕಣ್ಣು, ಗಾತ್ರ ಬೇಕು ಎಂದಾಯಿತು. ಅದು ನಾಶಕರವಾಗಬಹುದು; ಹಿತಕರವಾಗಬಹುದು. ಹಾಗೆ ನೋಡಿದರೆ, ಯಾರು ಲೋಕವನ್ನು ತುಳಿದು, ರಕ್ತಗಳ ಪ್ರವಾಹವನ್ನು ಹರಿಸಿ, ಲಕ್ಷಾಂತರ ಮಂದಿಯನ್ನು ಕೊಂದು ಜನಮನೆ ಹೊಲಗದ್ದೆ ಮೆಟ್ಟಿ ದೊಡ್ಡ ವಿಜಯಗಳನ್ನು ಮೆರೆದಿದ್ದಾರೊ ಅಂತಹವರಿಗೆ ಇರುವ ಕೀರ್ತಿ, ಐತಿಹಾಸಿಕ ಗಣ್ಯತೆ ಸಾಮಾನ್ಯವಾಗಿ ಇತರರಿಗೆ ಸಿಕ್ಕುವುದಿಲ್ಲ. ಅಕ್ಕಿ ಗೋಧಿ ಬೆಳೆದವರಾರು? ನೇಗಿಲು, ಸಲಿಕೆ, ಗಾಲಿ, ಗಾಡಿ, ಕೊಡಲಿ ಮಾಡಿದವರಾರು? ರುಚಿರುಚಿಯಾದ ಅಡಿಗೆಗಳನ್ನು ಕಂಡುಹಿಡಿದವರು ಯಾರು? 'ಗುಣಾಃ ಪೂಜಾಸ್ಥಾನಂ' ಎನ್ನುತ್ತಾರೆ ನಿಜ, ಪುಸ್ತಕಗಳಲ್ಲಿ ಅದರ ಪ್ರಮಾಣ ದೊಡ್ಡದಾಗಬೇಕೇನೊ! ಹೆಚ್ಚು ಜನರ ಕಣ್ಣಿಗೆ ಬೀಳಲಿ, ಬಿಡಲಿ; ಇತಿಹಾಸದಲ್ಲಿ ಲಿಖಿತವಾಗಲಿ, ಇಲ್ಲದಿರಲಿ; ಕೆಲವು ಬಗೆಯ ಗುಣ ಅದನ್ನು ಕೊಂಡವರ, ಗುರುತಿಸಿದ ಪ್ರೀತಿಯಲ್ಲಿ ಶಾಶ್ವತವಾಗಿರುತ್ತದೆ. ಇವರೂ ಅವರೂ ತೀರಿಕೊಂಡ ಮೇಲೆ, ಕಾಲದ ಗಾಳಿ ಬೀಸಿ ಅದರ ಗುರುತು ಪೂರ್ತಿ ಗುಡಿಸಿ ಹೋಗುತ್ತದೆ. ಹೋಗಲಿ. ದೊಡ್ಡ ಹೂ ದೊಡ್ಡ ಹೂವೇ. ಸಣ್ಣದೂ ಹೂವೇ. ಎರಡೂ ಚೆಲುವೇ. ಪರಿಮಳವುಳ್ಳದ್ದೂ ಆಗಬಹುದು. ಆದರೆ ದೊಡ್ಡದಕ್ಕೆ ಬರುವ ಪ್ರಶಂಸೆ ಸಣ್ಣದಕ್ಕೆ ಬಾರದು. ಇಂಥಲ್ಲಿ ಮಾಸ್ತಿಯವರ 'ವಿಷ್ಣುಕ್ರಾಂತಿ' ಪದ್ಯ ನನ್ನ ನೆನಪಿಗೆ ಬರುತ್ತದೆ. ಈ ಸಣ್ಣದು ಸ್ಥಾನದಿಂದ ಆಗಬಹುದು; ಕ್ರಿಯಾಮಂಡಲದಲ್ಲಿ ಲೋಕದ ಪ್ರಚಾರ ಖ್ಯಾತಿ ನಡೆಯುತ್ತದೆಯೊ ಅದಕ್ಕೆ ಸಂಬಂಧಿಸಿದಂತೆಯೊ ಇದ್ದರೆ ದೊರೆಯಬಹುದು. ಆ ಎರಡು ಬಗೆಯ

ಸಂಬಂಧವಿಲ್ಲದ ವಿದ್ಯಾಪ್ರಪಂಚದ ಒಂದು ಮೂಲೆಯಲ್ಲಿ ಇಲ್ಲಿ ಅಲ್ಲಿ, ಹೊರನಾಡುಗಳಲ್ಲಿ ದುಡಿದ ಜೀವ ಶ್ರೀನಿವಾಸರಾಯರದು. ಇನ್ನೊಂದು – ಅವರ ಲೋಪ – ಮೊದಲಿಂದಲೂ, ಹೇಗೂ ಪ್ರಕಟನೆ ಮಾಡಿಕೊಳ್ಳಲಿಲ್ಲ. ಸಭೆಗಳನ್ನು ಸೇರಿಸಿ, ಉತ್ಸವಗಳನ್ನು ಏರ್ಪಡಿಸಿ ಉದ್ದಂಡ, ಅಬ್ಬರದ ಭಾಷಣಗಳನ್ನು ಮಾಡಿಸಿದರೂ ತಾನು ಮುಂದೆ ಬಂದು ನಿಲ್ಲಲಿಲ್ಲ. ಮಾತು ಕಡಮೆ. ತಾನೇ ನಿಂತು ನಿರ್ವಹಿಸುತ್ತಿದ್ದ ಕೆಲಸದಲ್ಲಿಯೂ ಎಷ್ಟು ಅಗತ್ಯವೊ ಅಷ್ಟು ಮಾತ್ರ ಮಾತು. ಭಾಷಣ ಮಾಡಬೇಕಾದಾಗಲೂ ಮಾತು ಸಾಮಾನ್ಯ. ಅದರಲ್ಲಿ ವಾಗ್ವಿಜೃಂಭಣೆ, ಮಾತುಗಳ ರಂಗು, ಆವೇಶ ಇರಲಿಲ್ಲ. ಶ್ರದ್ಧೆಯ ಆವೇಗ, ಕಾವು, ದುಡಿತ ಇರುತ್ತಿತ್ತು. ಅನುಭವದ ಆಳ ಇರುತ್ತಿತ್ತು; ಖಚಿತತೆ ಇರುತ್ತಿತ್ತು. ಇದನ್ನು ಮಾಡಬೇಕೆಂದಿದೆ, ಹೀಗೆ ಮಾಡುತ್ತಿದೆ; ಬೇರೆ ರೀತಿಯದಕ್ಕೆ ಅವಕಾಶ, ಅಗತ್ಯ ಉಂಟು; ಇಂಥಿಂಥ ಕಾರಣಗಳಿಂದ ಇಂಥವು ಶಕ್ಯವಾಗುತ್ತಿಲ್ಲ – ಎಂದು ಖಚಿತವಾಗಿ ನುಡಿದು ಸುಮ್ಮನಾಗುವರು. ಸುತ್ತಲೂ ಘುಖ್ಯರೊಡನೆ ಮುಂಚೆಯೊ ಆಮೇಲೆಯೊ ಮಾತನಾಡುವಾಗ ಈ ಮಾತುಗಳ ಹಿಂದೆ ಇದ್ದ ಉತ್ಸಾಹ, ಹೃದ್ವಿಲಾಸ ಗೊತ್ತಾಗುತ್ತಿತ್ತು. ಕೊರಲೆತ್ತಿ ನುಡಿದವರಲ್ಲ. ತುಂಬ ಕೋಪಬಂದಾಗಲೂ ಗಟ್ಟಿಯಾಗಿ ಕೂಗಾಡುತ್ತಿರಲಿಲ್ಲ. ಮಾತಿನಲ್ಲಿ ಬಿರುಸು, ಕಠಿಣ ಇರುತ್ತಿರಲಿಲ್ಲ. ಸ್ಥಿರ, ನಿಷ್ಠ. ಆ ಧ್ವನಿಯ ನುಡಿತದಲ್ಲಿ, ಮುಖಚರ್ಯೆಯ ಸ್ಥೈರ್ಯದಲ್ಲಿ – ಅದೂ ಬಹುತರ ನಿರ್ವಿಕಾರವೇ – ಅದನ್ನು ಕಾಣಬೇಕೇ ಹೊರತು, ಕಾಣಿಸಲು ಬಯಸುತ್ತಿರಲಿಲ್ಲ. ಹತ್ತು ಜನ ತುಂಬಿದ ಸಭೆಯಲ್ಲಿ ಒರಟಾಗಿ ನಡೆಯಲು ಸಾಮಾನ್ಯವಾಗಿ ಇಷ್ಟಪಡರು. ಒಂದು ಸಲ ಹೀಗಾಯಿತು: Wind ಎಂಬುದರ ಉಚ್ಚಾರ ವಿಂಡ್, ವೈಂಡ್ ಎರಡೂ ಉಂಟು. ನಾಮಪದವಾಗಿ ಹ್ರಸ್ವ, ಕ್ರಿಯಾಪದವಾಗಿ ದೀರ್ಘ – ಸಾಮಾನ್ಯವಾಗಿ. ನಾಮಪದವಾದಾಗಲೂ ವೈಂಡ್ ಉಂಟು. ನಾನು ಹಾಗೆ ಉಚ್ಚರಿಸಿದಾಗ ಅವರ ತುಟಿಯಲ್ಲಿ ಮೋಜು ಕಾಣಿಸಿತು. ನಾನು, ಕೂಡಲೆ ಷೆಲ್ಲಿಯ

.....O, Wind
If Winter comes, can Spring be far behind?

ಸಾಲುಗಳನ್ನು ಹೇಳಿದೆ. ಒದ್ದಾಡಿಬಿಟ್ಟರು–ನನ್ನ ಅಪಚಾರ ಕ್ಷಮಿಸಿ ಎಂದು. ವರ್ಲೆ (Verlaine) ಕವಿತೆಯಲ್ಲಿ ನವೆಂಬರ್ ಗಾಳಿ ಎಂಬುದನ್ನು ಓದುವಾಗ 'ಲಾವೈಂಡ್ ನವಾಂಬ್' ಎಂದು ಬರುತ್ತದೆ ಕೂಡ ಅಂದಿದ್ದೆ. ನಾನು ಕೇಳಿದ್ದದ್ದು ಹಾಗೆ. ಜೊತೆಗೆ ವಿಂಡ್ ಎಂದಾಗ ಅದು ಅಪಶಬ್ದವೂ ಆಗಬಲ್ಲುದು. ಆ ಮಾತು ಅಂದಿದ್ದೆ. ಒಂದು ತೀರ್ಮಾನಕ್ಕೆ ತಾವು ಬಂದಮೇಲೆ, ಅಥವಾ ಯಾವುದೂ ಶಕ್ಯವಿಲ್ಲ, ಆಗದು ಎಂದು ಹೇಳಬೇಕಾದಾಗ ನುಡಿತ ಖಂಡಿತವಾಗಿರುತ್ತಿತ್ತು. ರಾಯರನ್ನು ನೆನಸಿಕೊಂಡಾಗಲೆಲ್ಲ Firm, not hard or harsh – ಇವು ನನ್ನ ಮನಸ್ಸಿಗೆ ಬಂದು ನಿಲ್ಲುತ್ತವೆ. ಈ ಗುಣ ಅವರನ್ನು ನನಗೆ ಒಲಿಸಿದುದು. ಸೌಮ್ಯತೆಯನ್ನು ಅವರು ಅಭ್ಯಾಸ ಮಾಡಿದ್ದರು. ಅವರ ಶೀಲಸಂಸ್ಕಾರಗಳ ಸ್ವರೂಪಲಕ್ಷಣ ಅದು.

ವೇಷವೂ ಹಾಗೇ; ಸೌಮ್ಯ. ಅಪರೂಪವಾಗಿ ಯಾವುದೊ ವುಲನ್ ಕೋಟ್ ಹಾಕಿದಾಗ ಹೊರತು, ಉಳಿದೆಲ್ಲ ಸಮಯಗಳಲ್ಲಿಯೂ ಒಂದು ಮಾಸಲು ಬಿಳುಪಿನ ವೇಸ್ಟ್ ಸಿಲ್ಕ್ ಅಥವಾ ಟಸ್ಸೂರ್ ಕೋಟು; ಕೊರಲು ಮುಚ್ಚಿದುದು. ಉಟ್ಟ ಶುಭ್ರವಾದ ಪಂಚೆ. ಕಾಲಿಗೆ ಕೆರ. ತಲೆಯ ಮೇಲೆ ಬಿಳಿಯ ರುಮಾಲು. ಮೈಸೂರಲ್ಲಿ ಇದಕ್ಕೆ ಓಲಿ, ಒಲಿದು ಧರಿಸುತ್ತಿದ್ದ ನಾವು ಮೂವರಲ್ಲಿ ಅವರೊಬ್ಬರು. ಈಗ ಅವರು ತೀರಿಕೊಂಡು ಇನ್ನಿಬ್ಬರು: ನಾನು, ಶಾರದಾವಿಲಾಸ ಹೈಸ್ಕೂಲಿನ ಮುಖ್ಯೋಪಾಧ್ಯಾಯರಾಗಿ ನಿವೃತ್ತರಾಗಿರುವ ಶ್ರೀ ಕೆ. ವಿ. ನಾರಾಯಣ್ (ಅ.ನ.ಕೃ. ಅವರ ಭಾವಂದಿರು) ಉಳಿದಿದ್ದೇವೆ. ಅವರ ಪಾಲಿಗೆ ರಾಯರ ಸಾಧನೆ ಬರಲಿಲ್ಲ. ಅವರು ಆ ಶಾಲೆಗೇ ಉಳಿದುಕೊಂಡರು; ಆದರೆ ಅದೇ ಎಂದಿನ ಸೌಜನ್ಯದಲ್ಲಿ. ಯಾವುದೊ ಕಾರಣದಿಂದ ರಾಯರ ಒಂದು ಕಾಲು ಹೆಜ್ಜೆ ಹಾಕುವುದು ಅಸ್ಥಿರವಾದಂತಿರುತ್ತಿತ್ತು. ತುಂಬ ಹತ್ತಿರದಿಂದ ನೋಡಿದವರಿಗೆ ಮಾತ್ರ ಅದು ಕಂಡುಬರುತ್ತಿತ್ತು. ಆಗದ ಒಬ್ಬಿಬ್ಬರು ಅಸೂಯೆಯಿಂದ ಕುಹಕದಂತೆ ಆಡಿಕೊಂಡದ್ದು ಕಿವಿಗೆ ಬಿದ್ದಿದೆ. ಹಾಗೆ ನೋಡಿದರೆ ಯಾರ ಹೆಜ್ಜೆ ಕುಂಟದು? ಎರಡು ಕಾಲೂ ಕುಂಟು. ಅನೇಕರ ಮನಸ್ಸಲ್ಲಿ, ಬುದ್ಧಿಯಲ್ಲಿ; ಹೃದಯ ಬಿಡಿ, ಬುದ್ಧಿ ಬಿಡಿ, ಧರ್ಮಶ್ರದ್ಧೆ ಬಿಡಿ. 'ಒಲ್ಲದವರಿಗೆ ಮೊಸರಲ್ಲಿ ಕಲ್ಲು ಸಿಕ್ಕುತ್ತದೆ' ಎನ್ನುತ್ತಾರೆ. ಹಾಗೆ ಆಡುವವರಿಗೆ ವಿರೋಧವೇ ಪ್ರಮಾಣ.

ರಾಯರು ಎಸ್. ವೆಂಕಣ್ಣನವರೆಂಬ ಒಬ್ಬ ಉಪಾಧ್ಯಾಯರ ಮಕ್ಕಳು. ನಾಲ್ವರೊ ಐವರೊ ಗಂಡುಮಕ್ಕಳು; ಒಬ್ಬಿಬ್ಬರು ಹೆಣ್ಣುಮಕ್ಕಳು ಹುಟ್ಟಿದ ಮನೆಯಲ್ಲಿ ಪ್ರೀತಿಯಿಂದ ಬೆಳೆದರು. ಅವರು ಚನ್ನಪಟ್ಟಣದ ಹೈಸ್ಕೂಲಲ್ಲಿ ಒಳ್ಳೆಯ ಗಣಿತದ ಉಪಾಧ್ಯಾಯರಾಗಿ ಹೆಸರುಗೊಂಡಿದ್ದವರಂತೆ. ನನಗೆ ರಾಯರ ಪರಿಚಯವಾಗುವಷ್ಟು ಹೊತ್ತಿಗೆ ತಂದೆ ತೀರಿಕೊಂಡಿದ್ದರು. ತಾಯಿ ಸ್ವಲ್ಪ ಕಾಲ ಇದ್ದರು. ಚಿಕ್ಕಪ್ಪನವರಲ್ಲಿ ಒಬ್ಬರು ನಮ್ಮ ಕಂಟ್ರೋಲರ್ ಆಫೀಸಲ್ಲಿ ಯಾವುದೊ ಒಂದು ಭಾಗದ ದೊಡ್ಡ ನೌಕರರಾಗಿದ್ದರು. ಮನೆಯ ಸಂಬಂಧದಲ್ಲಿ ವೈಮನಸ್ಯಗಳಿದ್ದು, ಬಹುಶಃ ಮನೆಗಳಲ್ಲಿ ಹೆಚ್ಚು ಹೋಗು – ಬರು ಇರಲಿಲ್ಲ. ಆದರೂ ರಾಯರಿಗೂ ಅವರಿಗೂ ವಿಶ್ವಾಸ. ಇವರ ತಮ್ಮಂದಿರಲ್ಲೊಬ್ಬರು, ಎಸ್. ವಿ. ರಾಮರಾಯರು. ಇವರು ಬಿ. ಸೀತಾರಾಮಾಚಾರ್ಯರ ಅಳಿಯಂದಿರು. ಬೆಂಗಳೂರಿನ ಭೌತವಿಜ್ಞಾನಿ ಬಿ. ವೆಂಕಟೇಶಾಚಾರ್ಯರ ತಮ್ಮಂದಿರು ಸೀತಾರಾಮಾಚಾರ್ಯರ ಅಳಿಯಂದಿರು. ಸೀತಾರಾಮಾಚಾರ್ಯರ ಬುದ್ಧಿವಂತಿಕೆ ಅಸಾಧಾರಣವಾದ್ದು. ಅವರ ಮನಸ್ಸಿನ ಚುರುಕು, ಸಾಧನೆಯ ಸಾಹಸ ಆ ಕಾಲದಲ್ಲಿಯೇ ಬುದ್ಧಿವಂತರ ಮನಸ್ಸನ್ನು ತಟ್ಟಿತ್ತು. ಸರಕಾರದ ಅಧಿಕಾರದಲ್ಲಿ ಮೈಸೂರಿನ ವಾಣಿಜ್ಯ ಕೈಗಾರಿಕೆ ಶಾಖೆಯಲ್ಲಿ ಡೈರಕ್ಟರ್ ಆಗಿದ್ದು, ಯಾವುದೊ ಕೆಟ್ಟ ಸಂದರ್ಭದಲ್ಲಿ ಅವರ ಮೇಲೆ ಅಪವಾದ ಹೊತ್ತು ನಿವೃತ್ತರಾದರು. ಸರ್ಕಾರ ಸರಿಯಾಗಿಯೊ ಅಲ್ಲವೊ ಹೊರಿಸಿದ ಯಾವುದೋ ಅನ್ಯಾಯ ಕ್ರಮನಿಯಮಗಳ ರೀತ್ಯ ಅವರು ತಪ್ಪಿತಸ್ಥರೆಂದಾದ್ದು ಅಷ್ಟೇನೂ ಧರ್ಮವಲ್ಲದ ರೀತಿಯಂತೆ ಕಾಣಿಸುತ್ತಿತ್ತು. ತಾವು ಸರ್ಕಾರಕ್ಕಾಗಿ ಹಿಡಿದ ಕೆಲಸದಲ್ಲಿ ಅನ್ಯಾಯ ಮಾಡಿದವರಲ್ಲ. ಸರ್ಕಾರದ ಜೊತೆಗೆ ಭರತಖಂಡದ ನಾನಾ ಕಡೆಗಳಿಂದ ಕೈಗಾರಿಕೆಗಳವರು, ವ್ಯಾಪಾರಮಂಡಳಿಗಳವರು, ಬ್ಯಾಂಕುಗಳವರು ಸಲಹೆಗಾಗಿ ಬರುತ್ತಿದ್ದರು. ಬೇಕಾದ ಹಾಗೆ

ಪುರಸ್ಕಾರ ಕೊಡುತ್ತಿದ್ದರು. ನಮ್ಮ ಸರ್ಕಾರದಿಂದ ಪ್ರಯೋಜನ ಪಡೆಯಲಿಲ್ಲ. ಅವರು ತುಂಬ ಬುದ್ಧಿವಂತರಾಗಿ ಇಂಥ ಸಂಪಾದನೆ ಉಳ್ಳವರಾಗಿದ್ದುದರಿಂದ, ಅವರ ಮೇಲೆ ಅಪವಾದ ಹೊರಿಸುವುದು ಸುಲಭವಾಯಿತು. ಹೊರ ಸ್ನೇಹಿತರು ಪೆಟ್ಟಿಗೆಗಳ ತುಂಬ ಅಮೆರಿಕದ ಸಿಗಾರ್‌ಗಳನ್ನು ಕಳಿಸಿದಾಗ ಅದನ್ನು ಸೇದಿ ತೃಪ್ತಿಪಟ್ಟು ಅದಕ್ಕೆ ಆಸೆಪಟ್ಟು ಅವರಲ್ಲಿಗೆ ಬರುತ್ತಿದ್ದವರೇ ಅವರ ಮೇಲಿನ ಆಪಾದನೆಯನ್ನು ಸ್ಥಾಪಿಸಲು ನೆರವಾದರು. ಅಳಿಯಂದಿರಿಬ್ಬರಿಗೆ ವಿದೇಶಗಳಲ್ಲಿ ವಿದ್ಯಾಭ್ಯಾಸಕ್ಕೆ ಬೇಕಾದ ಹಣಸೌಕರ್ಯ ಒದಗಿಸುತ್ತಿದ್ದುದು ಎದೆಬೇನೆಯಾಗಿ, ಕಣ್ಣು ಕೆಂಪಾಗಿ, ಅವರ ಮೇಲಿನ ಆಪಾದನೆ ಸ್ಥಾಪಿತವಾಗಲು ಸಹಾಯಕವಾಯಿತು. ಸರ್ಕಾರದ ಹಣವನ್ನು ಪ್ರಭಾವವನ್ನು ಇವರು ದುಡಿಸಿಕೊಳ್ಳುತ್ತಿದ್ದಾರೆ ಎಂದು ಆಡಿಕೊಂಡು ಆದದ್ದು ಅಿದು. ಪೇಟೆಯಲ್ಲಿ ಪದಾರ್ಥದ ಬೆಲೆ ಒಂದು ರೀತಿಯಾಗಿ ಕಚ್ಚಾಸಾಮಗ್ರಿ (raw materials) ಕೊಂಡು ಸರ್ಕಾರಕ್ಕೆ ಇಷ್ಟು ನಷ್ಟವುಂಟುಮಾಡಿದರು ಇತ್ಯಾದಿಯಾಗಿ ದಾಖಲೆಗಳ ಜೊತೆಗೆ ಮೂದಲೆ ಸೇರಿಸಿದರು. ಉತ್ಪತ್ತಿಗೆ ವ್ಯಾಪಾರಕ್ಕೆ ಪೇಟೆಯಲ್ಲಿ ಸ್ಪರ್ಧೆಗೆ ತಡೆಯುವಂತೆ ಮುಂಗಡ ಕೆಲವು ಪದಾರ್ಥಗಳನ್ನು ಕೊಳ್ಳಬೇಕಾಗುತ್ತದೆ ಎಂಬುದನ್ನು ಅರ್ಥವಿದರೆಲ್ಲ ಬಲ್ಲರು. ಸರ್ಕಾರದ ಕ್ರಮನಿರ್ಬಂಧ ಇದನ್ನು ಅಕ್ರಮವೆಂದರೆ ಇವರು ದುರ್ಬಲರು. ಹೀಗಾಗಿಯೇ ಒಮ್ಮೊಮ್ಮೆ ಸಾಬೂನಿಗೆ ಪೇಟೆಯಲ್ಲಿ ಶಾಸ್ತ್ರಿಗಳ ಕಾಲದಲ್ಲಿ ದೌರ್ಬಲ್ಯ ಉಂಟಾಯಿತು. ಆಚಾರ್ಯರ ಕಾಲ ಇನ್ನೂ ಹಿಂದಿನದು. ಸುಮಾರು ೨೦ರ ದಶಕದ ಮೊದಲರ್ಧದ ಭಾಗ ಅದು. ದೇಶದಲ್ಲಿ ಆಗ ಇದ್ದ ಬುದ್ಧಿಶಾಲಿಗಳಲ್ಲಿ ಉದ್ಯೋಗ ಸಾಹಸಿಗಳಲ್ಲಿ ಅವರೊಬ್ಬರು. ಶ್ರೀನಿವಾಸರಾಯರ ತಮ್ಮ ರಾಮರಾಯರು ಅವರ ಎರಡನೆಯ ಅಳಿಯಂದಿರು. ಅವರು ವಿದೇಶಗಳಲ್ಲಿ ವಿದ್ಯುಚ್ಛಕ್ತಿ ಯಂತ್ರತಂತ್ರ ವಿದ್ಯೆಯಲ್ಲಿ ಪರಿಣತರಾಗಿ, ಕೆಲವು ದಿನ ಬುಡಾಪೆಸ್ಟಲ್ಲಿದ್ದು ಇಲ್ಲಿಗೆ ಬಂದು, ಸರ್ಕಾರದ ವಿದ್ಯುದಿಲಾಖೆಯಲ್ಲಿ ದೊಡ್ಡ ಪದವಿಗೇರಿ ತೀರಿಕೊಂಡರು. ಶ್ರೀನಿವಾಸರಾಯರ ಪ್ರೀತಿ ವಿಶ್ವಾಸಗಳು ಆ ಮನೆಯನ್ನು ಒಂದು ಹದದಲ್ಲಿ ನಡಸಿತು ಎನ್ನಿಸುತ್ತದೆ. ಆತನ ಸಹನೆ, ಧರ್ಮನಿಷ್ಠೆ, ಹಿತಮಿತ ಮಾತು ಇದಕ್ಕೆ ಕಾರಣ.

ರಾಯರು ನಾನು ಕೆಲಸ ಮಾಡುತ್ತಿದ್ದ ಶಾರದಾವಿಲಾಸ ಹೈಸ್ಕೂಲಿಗೆ ಉಪಾಧ್ಯಾಯರಾಗಿ ಬಂದರು. ಇಂಗ್ಲಿಷ್ ಎಂ. ಎ. ತರಗತಿಯಲ್ಲಿ ವ್ಯಾಸಂಗ ಮಾಡಿದರು. ಏನೊ ಕಾರಣದಿಂದ ಉತ್ತೀರ್ಣರಾಗಲಿಲ್ಲ. ನನಗೆ ಗೊತ್ತಿದೆ: ಫಸ್ಟ್‌ಕ್ಲಾಸ್ ತೆಗೆದುಕೊಂಡು ಪಾಸು ಮಾಡಿರುವ ಅನೇಕರಿಗಿಂತ ಅವರ ಸಾಹಿತ್ಯಜ್ಞಾನ ಹಿರಿದು, ವಿಸ್ತಾರವಾದುದು, ನಯಸೂಕ್ಷ್ಮ ಉಳ್ಳದ್ದು ಎಂದು. ಅವರ ವ್ಯಾಸಂಗ ಪರೀಕ್ಷೆಗೆ ತಕ್ಕಂತೆ ಶಕ್ತವಾಗಿರಲಾರದು. ಪರೀಕ್ಷೆಗೆ ಪ್ಯಾಸು ಮಾಡಲು ಬೇರೆ ಯೋಗ್ಯತೆ ಬೇಕು. ಆ ಪ್ಯಾಸು ಯೋಗ್ಯತೆ ಇದ್ದವರಿಗೆ ಸಾಹಿತ್ಯ ಹೃದಯ, ಜ್ಞಾನ ಇರಬೇಕೆಂಬುದೂ ಇಲ್ಲ. ಇಲ್ಲವಾಗಿರುತ್ತದೆ ಎಂದೂ ಅಲ್ಲ. ಆದರೆ ಪರೀಕ್ಷೆಗಳಲ್ಲಿ ತೋರುವ ಶಕ್ತಿ ಒಂದು ವಿಶಿಷ್ಟ ಬಗೆಯದು. ಸೋಲು ಅವರ ಮನಸ್ಸನ್ನು ವ್ಯಥೆಗೊಳಿಸಿತು. ಅವರು ಉಪಾಧ್ಯಾಯರೂ ಆಗಿದ್ದುದರಿಂದ ಬಿ.ಟಿ. ಪರೀಕ್ಷೆಯಲ್ಲಿ ಶಿಕ್ಷಣ ಪಡೆದು ಉತ್ತೀರ್ಣರಾದರು. ಅವರು ನಮ್ಮ ಹೈಸ್ಕೂಲಲ್ಲಿ ಇಂಗ್ಲಿಷ್, ಗಣಿತ ಎರಡೂ ಪಾಠಗಳನ್ನು ಮಾಡುತ್ತ ವಿದ್ಯಾರ್ಥಿಗಳ ಮೆಚ್ಚಿಕೆಗೆ ಪಾತ್ರರಾಗಿದ್ದರು. ಅದಕ್ಕಿಂತ ದೊಡ್ಡ ಕೀರ್ತಿ ಉಪಾಧ್ಯಾಯನಿಗೆ ಇನ್ನಾವುದಿದೆ?

ಸುಮಾರು ಮೂರುನಾಲ್ಕು ವರ್ಷಗಳ ಕಾಲ ನಾವು ಜೊತೆಯಲ್ಲಿದ್ದೆವು. ಓದ್ದವಾದ, ಸರಳವಾದ ಅವರ ನಡೆನುಡಿ ನಮ್ಮಿಬ್ಬರನ್ನೂ 'ಬಹಿ ಪ್ರಾಣಾ' ಎನ್ನುವಂತೆ ಮಾಡಿತ್ತು. ದಿನಕ್ಕೆ ಎಂಟು-ಹತ್ತು ಗಂಟೆಗಳ ಕಾಲ ಸುಮಾರು ನಾವು ಜೊತೆಯಲ್ಲಿರುತ್ತಿದ್ದೆವು. ಅವರು ಎಂ.ಎ. ಓದುತ್ತಿರುವಾಗ ನೂರಡಿಯ ರಸ್ತೆಯಲ್ಲಿ ಸೀತಾವಿಳಾಸ ಛತ್ರದ ಬಳಿ, ಸುಬ್ಬರಾಯರನಕೆರೆ ದಾಟಿ ಲಕ್ಷ್ಮೀಪುರದ ಕಡೆ ಹೋಗುವ ಮುಖ್ಯ ದಕ್ಷಿಣೋತ್ತರ ರಸ್ತೆಯ ಈಚೆಕಡೆ ಒಂದು ಮನೆಯಲ್ಲಿ ಬಾಡಿಗೆಗಿದ್ದರು. ಅಲ್ಲಿ ಬೇರೆ ಐದಾರು ವಿದ್ಯಾರ್ಥಿಗಳು ಕೂತಡಿ ಮಾಡಿಕೊಂಡು ಅನ್ನಪೂರ್ಣ ಹೊಟೇಲಲ್ಲಿ ಊಟ ಮಾಡುತ್ತಿದ್ದರು. ಅವರಿಗೆ ಪುಸ್ತಕಗಳನ್ನು ಕೊಳ್ಳುವುದು, ಓದುವುದು ಎಷ್ಟು ಪ್ರೀತಿಯೊ ಚಿತ್ರಕಲೆಯಲ್ಲಿಯೂ ಅಷ್ಟೇ ಪ್ರೀತಿ. ಬೆಂಗಳೂರು-ಮೈಸೂರಲ್ಲಿ ಚಿತ್ರಕಲೆಯ ಯಾವ ಕೆಲಸ ನಡೆದಿದ್ದರೂ ಅವರಿಗೆ ತಿಳಿದಿರುತ್ತಿತ್ತು. ಇಲ್ಲಿನ ಲೈಬ್ರರಿಗಳಲ್ಲಿ, ಚಿತ್ರಶಾಲೆಗಳಲ್ಲಿ ಯಾವ ಯಾವ ಚಿತ್ರದ, ಶಿಲ್ಪದ ಗ್ರಂಥಗಳಿದ್ದವೊ ಪಟಗಳಿದ್ದವೊ ಅವನ್ನೆಲ್ಲ ತಿರುವಿಹಾಕಿದ್ದರು. ಅನೇಕವುಗಳ ಫೋಟೊಗ್ರಾಫ್ ಅಥವಾ ಅಚ್ಚುಮಾಡಿದ ವರ್ಣರಂಜಿತ ಪ್ರತಿಗಳು ಅವರಲ್ಲಿದ್ದುವು. ವರ್ಜಿನಿಯಾ ವುಲ್ಫ್ ಅಲ್ಲಿ ವಿಶ್ವಾಸವುಳ್ಳವರೆಂದಾಗ ಆ ಕಾಲದ – ಎಂದರೆ, ಈ ಶತಮಾನದ ಮೂರನೆ ನಾಲ್ಕನೆ ದಶಕದ, ಮಧ್ಯಭಾಗದ್ದು – ಅದು ಪ್ರಗತಿಪರ ಅಭಿರುಚಿ ಎಂದುಕೊಳ್ಳಬಹುದು. ಆಕೆ ಬ್ಲೂಂಸ್‌ಬರಿ ತಂಡದಲ್ಲಿ ಗಣ್ಯಳು. ಲೆನಾರ್ಡ್ ವುಲ್ಫರ ಹೆಂಡತಿ. ಲೆಸ್ಲಿ ಸ್ಟೀವನ್ ಮಗಳು. ರಾಯರ ಸ್ನೇಹಿತರಾಗಿ ಹಲವು ಮಂದಿ ಬಂದು ಹೋಗಿ ಅವರ ರೂಮು ಯಾವಾಗಲೂ ಸ್ನೇಹಿತರಿಂದ ತುಂಬಿರುತ್ತಿತ್ತು. ಅದೇ ಮನೆಯಲ್ಲಿ ಇನ್ನಿಬ್ಬರು ವಿದ್ಯಾರ್ಥಿಗಳು ಕಲೆಯ ಅಭ್ಯಾಸಕ್ಕಾಗಿ ಮೈಸೂರಿಗೆ ಆಂಧ್ರದಿಂದ ಬಂದಿದ್ದರು; ಅಣ್ಣ ತಮ್ಮಂದಿರು ರಾಮಮೋಹನಶಾಸ್ತ್ರಿ, ಆನಂದಮೋಹನಶಾಸ್ತ್ರಿ ಎಂಬವರು. ಅವರಿಬ್ಬರೂ ವೆಂಕಟಪ್ಪನವರಲ್ಲಿ ಕಲಾಭ್ಯಾಸ ಮಾಡಬೇಕೆಂದು ಮೈಸೂರಿಗೆ ಬರುವ ಮುಂಚೆಯೇ ಅನೇಕ ಚಿತ್ರಪಟಗಳನ್ನು ಬರೆದು ಆಂಧ್ರ ಮದರಾಸುಗಳಲ್ಲಿ ಆ ಕಾಲದಲ್ಲಿ ಹೆಸರಾಗಿದ್ದವರು. ಅವರ ಚಿತ್ರಪಟಗಳಲ್ಲಿ ಕೆಲವಕ್ಕೆ ಕೆಲವು ಎಕ್ಸಿಬಿಷನ್‌ಗಳಲ್ಲಿ ಪ್ರಸಿದ್ಧಿಯೂ ಬಹುಮಾನವೂ ಬಂದಿತ್ತು. ಅಣ್ಣ ಶಾಸ್ತ್ರಿ ಹೆಚ್ಚು ದಿನ ಮೈಸೂರಲ್ಲಿ ಉಳಿಯಲಿಲ್ಲ. ಚಿಕ್ಕಾತ ವರ್ಷಕಾಲ ಸುಮಾರು ವೆಂಕಟಪ್ಪನವರಲ್ಲಿ ಕಲೆ ಕಲಿತರು. ಅಪ್ಪನವರಲ್ಲಿ ಅಭ್ಯಾಸ ಮಾಡುವುದು ಕಷ್ಟ. ನೇರಗೆರೆ, ಸೊಟ್ಟಗೆರೆಗಳನ್ನು ಹಾಕುವುದನ್ನೇ ಬಗೆಬಗೆಯಾಗಿ ತೋರ, ತೆಳು ಪೆನ್ಸಿಲಲ್ಲಿ, ಲೇಖನಿಯಲ್ಲಿ, ಬ್ರಷ್ಷಲ್ಲಿ ಹಾಕಿ ಅಭ್ಯಾಸ ಮಾಡಲು ಮೊದಲು ನಾಲ್ಕಾರು ತಿಂಗಳು ಎಂಥವರನ್ನೂ ಅರೆಯುತ್ತಿದ್ದರು. ಆಮೇಲೆ ನಿರ್ಜೀವ ಪದಾರ್ಥಗಳ ಆಕೃತಿ ರೇಖನ, ಅದರಲ್ಲಿ ನೆಳಲು-ಬೆಳಕು, ಘನ ತುಂಬುವುದು ಇನ್ನಷ್ಟು ಕಾಲ. ಎಲೆಹಸಿರು, ಹಳದಿ, ಬಿಳುಪು, ಕೆಂಪು ಸರಿಯಾಗಿ ಆಕೃತಿ ನಿಲ್ಲುವಂತೆ, ಬಣ್ಣ ನಿಲ್ಲುವಂತೆ ಬರೆಯುವುದು. ಬಣ್ಣಗಳಲ್ಲಿನ ತಿಳಿ, ಎಳಸು, ಗಟ್ಟಿ ಸಾಧಿಸುವುದು. ಎಲೆಯಲ್ಲಿನ ಮಧ್ಯದ ನಾರು, ಅವುಗಳ ಭಾಗಗಳು ಎಷ್ಟು ಸೂಕ್ಷ್ಮವಾಗಿದ್ದರೆ ಅಷ್ಟು ಸೂಕ್ಷ್ಮವಾಗಿ ಕಾಣುವಂತೆ, ಬೇರೆಬೇರೆ ಬೆಳಕಿನಲ್ಲಿ ಅವು ಹೇಗೆ ಕಾಣುವುವೊ ಹಾಗೆ ಕಾಣಿಸಬೇಕು. ಹಣ್ಣೆಲೆ ಗಿಡದಿಂದ ಕೆಳಗೆ ಬಿದ್ದು ಒಣಗಿ ಸುರುಳಿಯಾದಾಗ, ಅದರ ಬೇರೆ ಬೇರೆ ಅವಸ್ಥೆಗಳಲ್ಲಿ ಕಾಣಿಸುವಂತೆ ಅವರಿಗೆ ಅಭ್ಯಾಸ ಮಾಡಿಸಿದರು. ಆಮೇಲೆ ನಿಜವಾದ

ಪ್ರಾಣಿ, ಪಕ್ಷಿಗಳ ರೇಖನಕ್ಕೆ ಬಂದರೂ ಇಲ್ಲವೊ ಕಾಣೆ. ಅಲ್ಲಿ ಇಲ್ಲಿ ಬೀದಿಯಲ್ಲಿ ನಿಂತ, ನಲಿವ ಮಕ್ಕಳ ಆಕೃತಿ, ಅಂಗಾಂಗರಚನೆ ವಿನ್ಯಾಸಗಳ ರೇಖನ ಆಮೇಲಿನದು. ವೆಂಕಟಪ್ಪನವರು ಬರೆದ ಒಂದು ಪಕ್ಷಿಯ ಚಿತ್ರ ಪ್ರಾಚೀನ ಪರ್ಷಿಯನ್ ಚಿತ್ರಕ್ಕಿಂತ ಮೇಲ್ತರದ ಕಲಾಕೌಶಲವುಳ್ಳದ್ದು ಎಂದು ರಾಥೆನ್‌ಸ್ಟೈನ್, ಬಿನಿಯನ್ ಮುಂತಾದವರು ಹೇಳಿದ್ದುಂಟು. ನಮ್ಮ ಅದೃಷ್ಟದಿಂದ ಅದು ಇನ್ನೂ ಅವರ ಸಂಗ್ರಹದಲ್ಲಿದೆ. ಸಣ್ಣ ಮಗು ಒಂದನ್ನು ನಿಲ್ಲಿಸಿ, ಕೂಡಿಸಿ, ನಗಿಸಿ, ಅಳಿಸಿ, ಕೀಟಲೆ ಮಾಡಿ, ಆಟವಾಡಿಸಿ ಆ ರೂಪರೇಖೆಗಳನ್ನು ಅಭ್ಯಾಸ ಮಾಡಿ, ಬೆರಳನ್ನೂ ಕುಂಚವನ್ನೂ ಲೇಖನಿಯನ್ನೂ ಪಳಗಿಸಿಕೊಳ್ಳಬೇಕೆಂಬುದನ್ನು ವೆಂಕಟಪ್ಪನವರ ರೀತಿಯೆಂದು ಶಾಸ್ತ್ರಿಗಳು ಹೇಳುತ್ತಿದ್ದರು. ವೆಂಕಟಪ್ಪನವರು ದೂರದಲ್ಲಿ ಬರುತ್ತಿದ್ದರೆ ಇವರು ಕಣ್ಣಿಗೆ ಬೀಳದೆ ಮರೆಯಾಗುತ್ತಿದ್ದರು. ಎದುರಿಗಿದ್ದರೆ ಐದೂವರೆ ಅಡಿ ಎತ್ತರದ ಆಳು ಸೊಟ್ಟೆಯಾಗಿ ಮೂರಲ್ಲ, ಷಡ್ಭಂಗಿಯಾಗಿ ಮೂರಂಗುಲದ್ದಾಗುತ್ತಿತ್ತು. ಅಷ್ಟು ಭಕ್ತಿಭಾವ, ಭಯ ಅವರಿಗೆ. ರಾಯರೂ ಅವರೂ ತುಂಬ ಹತ್ತಿರದ ಸ್ನೇಹಿತರು. ಅವರು ಕೆಲಸ ಮಾಡುತ್ತಿದ್ದಾಗ, ಅಭ್ಯಾಸದಲ್ಲಿದ್ದಾಗ ಕುಂಚಗಳ ವಿಷಯ, ಬಣ್ಣಗಳ ವಿಷಯ, ರೇಖನದ ವಿಷಯ ತಿಳಿದುಕೊಂಡು ಚಿತ್ರ ಮತ್ತು ರೇಖನಗಳ, ಕಲೆಗಳ ಅನೇಕ ಸಂಗತಿಗಳನ್ನು ಅರಿತರು. ಆ ವಿಷಯಗಳಲ್ಲೆಲ್ಲ ತಿಳಿವಳಿಕೆ, ಅಭ್ಯಾಸ ಹೆಚ್ಚು ಬೇಕು. ಯಾವ ಕಲೆಯ ವಾಸ್ತವ, ಖಚಿತ ಅಭ್ಯಾಸವನ್ನೇ ಮಾಡದ ನಾನು ಎಲ್ಲದರ ವಿಮರ್ಶಕನಾದೆ. ಹೆಚ್ಚು ತಿಳಿದ ಅವರು ಬಾಯಿ ಮುಚ್ಚಿಕೊಂಡು ಸುಮ್ಮನಿರುತ್ತಿದ್ದರು. ಆ ಇಬ್ಬರಿಗೂ ನನ್ನಲ್ಲಿ ವಿಶ್ವಾಸವಿದ್ದುದು ಆಶ್ಚರ್ಯ. ನನ್ನ ತಿಳಿವಳಿಕೆ ಪುಸ್ತಕಗಳಿಂದ, ಹಲವಾರು ದೇಶ ಕಾಲಗಳ ಚಿತ್ರಗಳ ಕಾಣ್ಕೆ, ವಿವರಣೆ, ವಿಶ್ಲೇಷಣೆ, ವಿಮರ್ಶೆಗಳಿಂದ ಬಂದದ್ದು. ನಾನು ಕಲೆಯಲ್ಲಿ ಎಂದೂ consumer; ಉತ್ಪಾದಕನಲ್ಲ.

ಬಿ.ಎಂ.ಶ್ರೀ. ಅವರು ಬಹಳ ಹಿಂದೆಯೆ ಕನ್ನಡದಲ್ಲಿ ಉತ್ಸಾಹವಂತರಾಗಿದ್ದರು. ಧಾರವಾಡದಲ್ಲಿ ಸುಮಾರು ೧೯೧೨–೧೩ರಲ್ಲಿ ಕನ್ನಡ ಭಾಷೆಯನ್ನು ಕುರಿತು ಎರಡು ಉಪನ್ಯಾಸಗಳನ್ನು ಕೊಟ್ಟಿದ್ದರು ಎಂಬ ಮಾತು ನನ್ನ ಕಿವಿಯ ಮೇಲೆ ಬಿದ್ದಿತ್ತು. ಅಷ್ಟೇ ಹೊರತು ನಾನು ಅವನ್ನು ಓದಿರಲಿಲ್ಲ, ನೋಡಿರಲಿಲ್ಲ. ಹಾಗೆಯೇ ಇಂಗ್ಲಿಷ್ ಭಾವಗೀತೆಗಳ ಕೆಲವು ಭಾಷಾಂತರಗಳನ್ನು ಅವರು ಆಗಲೇ 'ವಿದ್ಯಾದಾಯಿನಿ'ಯಲ್ಲಿಯೂ ಕರ್ನಾಟಕ ಗ್ರಂಥಮಾಲೆಯಲ್ಲಿಯೂ ಅಚ್ಚುಮಾಡಿಸಿದ್ದರು. ಅವನ್ನೂ ಕೆಲವು ಗೀತೆಗಳನ್ನೂ ಶ್ರೀನಿವಾಸರಾಯರು ಹೇಗೋ ಸಂಗ್ರಹಿಸಿದ್ದರು. ನಾನು ಅವನ್ನು ಮೊದಲು ಓದಿದುದು ಅವರಿಂದ ಎರವಲು ತಂದ ಪುಟಗಳಲ್ಲಿ. ಕಾಲೇಜಲ್ಲಿ ಆವರೆಗಾಗಲೇ ನಾನು ಎರಡು ವರ್ಷ ಎಂ.ಎ. ವಿದ್ಯಾರ್ಥಿಯಾಗಿದ್ದರೂ ಬೇರೆಯಾದ ಸುಳಿವು ದೊರೆತಿರಲಿಲ್ಲ. ಶ್ರೀನಿವಾಸರಾಯರು ಬೆಂಗಳೂರು ಸೆಂಟ್ರಲ್ ಕಾಲೇಜಿನಿಂದ ಮೈಸೂರಿಗೆ ಬಂದಿದ್ದವರು. ಅವರಿಗೆ ಕನ್ನಡದಲ್ಲಿ ಅಷ್ಟು ಆಸಕ್ತಿ ಇದೆ ಎಂಬುದು ನನಗೆ ಮೊದಮೊದಲು ಗೊತ್ತಾಗಲಿಲ್ಲ. ಆ ಕಾಲದಲ್ಲಿ ಬಂದ ಎಲ್ಲ ಪದ್ಯಗದ್ಯ ಪುಸ್ತಕಗಳನ್ನೂ ಅವರು ಕೊಳ್ಳುತ್ತಿದ್ದರು. ಇಂಗ್ಲಿಷ್ ಸಾಹಿತ್ಯಕ್ಕೆ ಸಂಬಂಧಿಸಿದ ಪುಸ್ತಕಗಳನ್ನು ಹಾಗೆಯೆ ತಿಂಗಳಿಗೆ ಎರಡು ಮೂರರಂತೆಯಾದರೂ ಕೊಳ್ಳುತ್ತಿದ್ದರು. ಆಗ್ಗೆ ಇನ್ನೂ 'ಪೇಪರ್ ಬ್ಯಾಕ್' ಬಂದಿರಲಿಲ್ಲ. ಗಟ್ಟಿ ಕವಚದ ಆ

ಪುಸ್ತಕಗಳಿಗೆ ಎಂಟರಿಂದ ಹತ್ತು ರೂಪಾಯಿ ಕೊಡಬೇಕಾಗಿತ್ತು. (೧೨ ½ = ೧೫/=ಕ್ಕೆ ಪೌಂಡಿಗೆ ಹತ್ತೂವರೆಯಿಂದ ಹನ್ನೆರಡು ಆಣೆಯವರೆಗೂ ಮಾರುವೆ ಇತ್ತಾಗಿ). ಚೆನ್ನಾಗಿ ಅಚ್ಚಾಗಿ ಬೈಂಡಾಗಿರುವ ಪುಸ್ತಕಗಳನ್ನು ಕಂಡರೆ ಅವರಿಗೆ ತುಂಬಾ ಪ್ರೀತಿ. ಕನ್ನಡದಲ್ಲಿ ಪುಸ್ತಕಗಳು ಈ ಗಾತ್ರದವು, ಈ ಅಚ್ಚುಕಟ್ಟಿನವು ಎಂದು ಬಂದಾವೊ ಎಂಬ ಹಾರೈಕೆ ನಮ್ಮಿಬ್ಬರಲ್ಲಿಯೂ ಇತ್ತು.

ಶಾರದಾವಿಲಾಸ ಹೈಸ್ಕೂಲಲ್ಲಿ ಜೊತೆಯಾಗಿ ಕೆಲಸ ಮಾಡಿದ ನಾವು ಸಂಜೆಯ ಹೊತ್ತು ಜೊತೆಯಾಗಿ ವಾಕಿಂಗ್ ಹೋಗುತ್ತಿದ್ದೆವು. ನಾನು ಸ್ವಲ್ಪ ತಿಂಡಿಪೋತನಾದ್ದರಿಂದ ಅವರು ಜೊತೆಯಲ್ಲಿದ್ದರೆ ಏನೆಂದುಕೊಂಡಾರೊ ಎಂದು ಯಾವತ್ತಾದರೂ ಬೇರೆ ರಸ್ತೆ ಹಿಡಿಯಲು ಪ್ರಯತ್ನಿಸಿದರೆ, ಅವರು ನನ್ನ ಮೇಲೆ ಒತ್ತಾಯ ಹಾಕಿದ ಹಾಗೆ ಮಾಡಿ, ಆಗ ಮೈಸೂರಲ್ಲಿ ಇನ್ನೂ ಹೊಸದೆನ್ನಬಹುದಾದ ಆನಂದಭವನಕ್ಕೊ ಅಥವಾ ಈ ಕಡೆ ಕಾಸ್ಮೊಪಾಲಿಟನ್ ಕ್ಲಬ್ ಹೊಟೇಲಿಗೂ ಹೋಗಿ ಟೀ ತೆಗೆದುಕೊಂಡು ವಾಕಿಂಗ್ ಮುಗಿಸುತ್ತಿದ್ದೆವು. ೧೯೨೫–೨೬ರ ಸುಮಾರಲ್ಲಿ Nation and Athenaeum ಎಂಬ ಪತ್ರಿಕೆಯಲ್ಲಿ ಆಲ್ಡಸ್ ಹಕ್ಸ್‌ಲಿ ಅವರು ಭರತಖಂಡದಲ್ಲಿ ತಾವು ಮಾಡುತ್ತಿದ್ದ ಪ್ರವಾಸದ ದಿನಚರಿಯನ್ನು ಪ್ರಕಟಿಸುತ್ತಿದ್ದರು. ಆ ಕಾಲದಲ್ಲಿ ಆ ವಾರಪತ್ರಿಕೆ ತುಂಬಾ ಯಶಸ್ವಿಯಾಗಿ ನಡೆಯುತ್ತಿತ್ತು. ನಾವಿಬ್ಬರೂ ಟಿ. ಎಸ್. ಎಲಿಯಟ್ಟರ The Waste Land ಪುಸ್ತಕವನ್ನು ೧೯೨೩–೨೪ರಲ್ಲಿ ಕೊಂಡು ಜೊತೆಗೆ ಓದಿದ್ದೆವು. ಆ ಬಗೆಗೆ ಎದ್ದ ಟೀಕೆ ಆಕ್ಷೇಪಣೆಗಳನ್ನೆಲ್ಲ ಪರಿಚಯ ಮಾಡಿಕೊಂಡಿದ್ದೆವು. ಎಷ್ಟು ಅರ್ಥವಾಯಿತೊ ಕಾಣೆ. ವಾರಪತ್ರಿಕೆಯಲ್ಲಿ ಒಂದು ಪುಟದಷ್ಟು ಸುಮಾರು ಹಕ್ಸ್‌ಲೀ ಪ್ರವಾಸ ವರ್ಣನೆ ಇರುತ್ತಿತ್ತು, ಅಷ್ಟೇ. ಕೇನ್ಸ್, ವರ್ಜಿನಿಯಾ ವುಲ್ಫ್, ಡೆಸ್ಮಂಡ್ ಮೆಕಾರ್ಥೆ, ವೆಲ್ಸ್, ಅಗಸ್ಟಿನ್ ಮತ್ತು ಫ್ರಾನ್ಸಿಸ್ ಬಿರ್ರೆಲ್, ಲೊವೆಸ್ ಡಿಕೆನ್ಸನ್, ಮ್ಯಾಸಿಂಗ್‌ಹಂ, ನೆವಿನ್‌ಸನ್, ಬರ್ಟ್ರಂಡ್ ರಸ್ಸೆಲ್, ಸ್ಕೆಂಟ್ಸ್‌ಬರಿ, W. J. ಟರ್ನರ್, ಗಾರ್ನೆಟ್ ಸೋದರರು, ರಾಜರ್ ಫ್ರೈ, ಲಿಟ್ಟನ್ ಸ್ಟ್ರಾಚಿ, ಕ್ಲೈವ್ ಬೆಲ್ – ಎಷ್ಟು ಹೇಳುವುದು? ಆ ಕಾಲದಲ್ಲಿ ಧೀಮಂತರೆಂಬವರಲ್ಲಿ ಖ್ಯಾತನಾಮರಾದವರು –ಮುಂತಾದವರೆಲ್ಲ ಅಲ್ಲಿಗೆ ಲೇಖನಗಳನ್ನೊ ಕಾವ್ಯಾವಲೋಕನಗಳನ್ನೊ ಬರೆಯುತ್ತಿದ್ದರು. ಡಾ|| ಹ್ಯಾರಿ ರಾಬರ್ಟ್ಸ್ – ಮುಂದೆ Every Man in Health and Disease ಎಂಬ ಹೆಸರಲ್ಲಿ ಒಂದು ಪುಸ್ತಕವನ್ನು ಬರೆದು ಪ್ರಖ್ಯಾತರಾದವರು – ಸುಮಾರು ಪ್ರತಿಯೊಂದು ಸಂಚಿಕೆಯಲ್ಲಿಯೂ ಜನರ ಆರೋಗ್ಯಕ್ಕೆ, ರೋಗರುಜಿನಗಳ ಸ್ವರೂಪಕ್ಕೆ ಸಂಬಂಧಿಸಿದಂತೆ ತುಂಬಾ ಚೆನ್ನಾಗಿ ಲೇಖನಗಳನ್ನು ಬರೆಯುತ್ತಿದ್ದರು. ಆಗತಾನೆ ಇಂಗ್ಲಂಡಲ್ಲಿ 'ನಿಜಿನ್‌ಸ್ಕಿಯ ಬಾಲೆ', 'ರಷ್ಯನ್ ಡಯಾಘಿಲೆಫ್ ಬಾಲೆ' ಮುಂತಾದವು ಬಂದು ಅವುಗಳ ವರ್ಣನೆ, ಪ್ರಶಂಸೆ ನಮ್ಮ ಮನಸ್ಸನ್ನು ಆಕರ್ಷಿಸಿದವು. ಅಂಥ ಯಾವುದನ್ನೂ ನೋಡಿಲ್ಲದ ನಮಗೆ ಕೆಂಬ್ರಿಜ್‌ಗೆ ಹೋಗಬೇಕು ಎಂದೊ ಆಸ್ಟ್ರಿಯಾದಲ್ಲಿ, ಜರ್ಮನಿಯಲ್ಲಿ ವಿಶೇಷವಾಗಿ ನಡೆಯುತ್ತಿದ್ದಿತೆಂದು, ಕೇಳಿದ ಸಂಗೀತ ಮತ್ತು ವಾದ್ಯಕೂಟಗಳಿಗೂ ಹಲವು ವರ್ಷಗಳಿಗೊಮ್ಮೆ ಯೇಸುಕ್ರಿಸ್ತನ ಚರಿತ್ರೆಯನ್ನು ರೂಪಿಸುವ 'ಸಾಲ್ಸ್‌ಬರ್ಗ್ ಫೆಸ್ಟಿವಲ್' ಎಂಬ ಸಂಗೀತೋತ್ಸವಕ್ಕೊ 'ಓಬರ್‌ಮರಾಗೊ' ಜಾತ್ರೆಗೊ ಹೋಗುವ ಪುಣ್ಯವಿದ್ದಿದ್ದರೆ ಎಷ್ಟು ಚೆನ್ನಾಗಿರುತ್ತಿತ್ತು

ಎನ್ನಿಸುತ್ತಿತ್ತು. ಇತ್ತ ಅನ್ನಾ ಪಾವಲೋವ ನೃತ್ಯದ ವರ್ಣನೆಗಳೂ ಬರುತ್ತಿದ್ದವು. ಹೊಸ ಹೊಸ ಸಂಗೀತ ನಾಟಕಗಳ ವರ್ಣನೆ ಟೀಕೆಗಳೂ ಬರುತ್ತಿದ್ದವು. ಚಿತ್ರಕಲೆಯನ್ನು ಕುರಿತು ಉತ್ಸಾಹದಿಂದ ಬರೆಯುತ್ತಿದ್ದವರು ಕೀನ್ಸ್ ಗುಂಪಿಗೆ ಸಂಬಂಧಿಸಿದ ರಾಜರ್ ಫ್ರೈ, ಕ್ಲೈವ್ ಬೆಲ್, ಬೆರೆನ್‌ಸನ್ ಮುಂತಾದವರು. 'ಮೆಕ್‌ಫ್ಲೆಕ್ನೊ' ಎಂಬ ಹೆಸರು ಹಾಕಿ ವಿಡಂಬನಗೀತೆ ಬರೆಯುತ್ತಿದ್ದಾತನ ಕವಿತಾಧಾಟಿ, ವಿಷಯ, ರೀತಿ ನಮಗೆ ನಿತ್ಯಸಂತಸವನ್ನು ಕೊಡುತ್ತಿದ್ದವು. ಆ ಕಾಲದಲ್ಲಿಯೇ ಆಗಲಿ ಈಚೆಗೇ ಆಗಲಿ, ಅವನ ಕೀರ್ತಿ ಮುಂದಕ್ಕೆ ಬರದಿದ್ದರೂ W. J. ಟರ್ನರ್ ಬರೆದ ಕೆಲವು ಭಾವಗೀತಗಳು ನಮ್ಮ ಮನಸ್ಸಿಗೆ ಸಂತೋಷವನ್ನು ತಂದುಕೊಟ್ಟವು. ಅವುಗಳಲ್ಲಿ ಎರಡಂತೂ ನಾವಿಬ್ಬರೂ ಜೊತೆಯಲ್ಲಿ ಎಷ್ಟು ಸಲ ಓದಿದೆವೊ! ರಷ್ಯದ ಬಾಲೆಯ ನರ್ತಕಿಯರು ಪಿರಿನಾ ಬಾರನೋವಾ, ಲಿಡಿಯಾ ಲೋಪಖೋವಾ (ಮುಂದೆ ಕೀನ್ಸ್ ಹೆಂಡತಿಯಾದವರು) ಮುಂತಾದ ಐದು ಆರು ಹೆಸರುಗಳು ಕೂಡಿ ಬರುತ್ತಿದ್ದ ಪದ್ಯವಂತೂ ಈಗಲೂ ನೆನಸಿಕೊಂಡರೆ ರೋಮಾಂಚಕ. ಹೀಗೆಯೇ ದಕ್ಷಿಣ ಅಮೆರಿಕಾಗೆ ಮೆಕ್ಸಿಕೋಗೆ ಸಂಬಂಧಪಟ್ಟು, ನಾವು ರಘುನಾಥರಾಯರ ಭೂವಿವರಣೆಯಲ್ಲಿ ಚಿಕ್ಕತನದಲ್ಲಿ ಎಂದೊ ಓದಿ ತಮಾಷೆ ಅನುಭವಿಸಿದ್ದ 'ಪೊಪೊಕೆಟಪೆಟಲ್'ಅನ್ನು ಪದ್ಯದ ಧಾಟಿಗೆ ಹೇಗೆ ಸೇರಿಸಿದ್ದ ಎಂಬುದನ್ನು ನೋಡಿ ಕನ್ನಡದಲ್ಲಿ ಇಂಥುದನ್ನು ಹೇಗೆ ಬರೆಯುವುದು ಎಂದುಕೊಂಡು ನಾನೇ, ಅದೇ ರಘುನಾಥರಾಯರ ಭೂವಿವರಣೆಯಲ್ಲಿ ಓದಿದ್ದ ತಲೆಗುಡ್ಡೆ, ತಲೆಮಕ್ಕಿ, ಗಂಟೆವಿನಾಯಕ, ಶೀತಮಲ್ಲಪ್ಪ ಎಂಬ ವಿಚಿತ್ರ ಹೆಸರುಗಳನ್ನು ಸೇರಿಸಿ ಒಂದು ಪದ್ಯ ಬರೆದುದು ನೆನಪು. ಅವರು ಅದನ್ನು ಪ್ರಕಟಿಸಬೇಕೆಂದು ಪ್ರಯತ್ನಿಸಿದರು; ನಾನು ಇಷ್ಟಪಡಲಿಲ್ಲ. ನಾವು ಇನ್ನೂ ಮಡಿ ಜನ; ಎತ್ತಿಕೊಳ್ಳುತ್ತಲೇ ಇಂಥದನ್ನು ಬರೆದರೆ 'ಶ್ರೀ'ಯವರೊ ಹಿರಿಯಣ್ಣನವರೊ ಏನೆಂದುಕೊಂಡಾರು ಎಂದು ಒಪ್ಪಲಿಲ್ಲ. ಅದೆಲ್ಲಿ ಹೋಯಿತೋ ಕಾಣೆ! ಹಾಗೆಯೇ ಟರ್ನರ್ ತುಂಬ ದೊಡ್ಡ ಸಂಗೀತ ವಿಮರ್ಶಕರು. ಅವರು ಉಳಿದುದನ್ನೆಲ್ಲ ಬಹಳ ಚೆನ್ನಾಗಿ ವಿಮರ್ಶೆ ಮಾಡಿ ಹೇಳುತ್ತಿದ್ದರು. ವಾಗ್ನರ್ (Wagner) ಗಿಂತ ಮೊಟ್ಸಾರ್ಟ್ (Mozart) ಪಕ್ಷಪಾತ ಹಿಡಿದವರು. ಎರಡೂ ಗೊತ್ತಿಲ್ಲದವರಿಗೆ ಈ ಹಿರಿಮೆ ಏನು ಎಂದು ಹೇಳುವುದಕ್ಕೆ ಆಗದಿದ್ದರೂ ಬರವಣಿಗೆಯಲ್ಲಿ ಒಂದು ರೋಮಾಂಚಕಾರಿ ಪ್ರತ್ಯಾಮ್ನಾಯದಂತೆ ಆ ಸಂಗೀತಗಳ ಲಕ್ಷಣಗಳನ್ನು ಅರಿಯುತ್ತಿದ್ದೆವು. ಹಾಗೆಯೇ ಅವರು ಬರ್ಲಿಯೋಸ್ (Berlioz) ಎಂಬ – ಆ ಕಾಲಕ್ಕೆ ವಿಶೇಷ ಉಗ್ರಚರ್ಚೆಗೆ ಈಡಾಗಿದ್ದ – ಸಂಗೀತಗಾರನ ಪಕ್ಷ ಹಿಡಿದು ಬರವಣಿಗೆ ಬರೆಯುತ್ತಿದ್ದರು. ಅದರ ಸಮಕ್ಕಿರುತ್ತಿತ್ತು 'ಮ್ಯಾಂಚೆಸ್ಟರ್ ಗಾರ್ಡಿಯನ್' ಪತ್ರಿಕೆಯಲ್ಲಿ ನೆವಿಲ್ ಕಾರ್ಡಸ್ ಬರೆಯುತ್ತಿದ್ದ ಸಂಗೀತವಿಮರ್ಶೆ, ಐವರ್ ಬ್ರೌನ್, ಪಿ. ಮಾಂಟೆಗ್ಯೂ, ಸಿ. ಇ. ಮಾಂಟೆಗ್ಯೂ ಅವರ ನಾಟಕ ಸಾಹಿತ್ಯ ಕಾವ್ಯಾವಲೋಕನಗಳು. ಮೂಲಗಳನ್ನು ಓದಿ, ಯಾರ ಯಾವ ಅಭಿಪ್ರಾಯ ಸರಿ, ಗ್ರಾಹ್ಯ ಎಂಬುದನ್ನು ಅರಿಯಬೇಕೆಂಬ ಕುತೂಹಲ ದಾಹವಾಗುತ್ತಿತ್ತು. ಆಗ ಇನ್ನೂ ಷೊನ್‌ಬರ್ಗ್ (Schoenberg) ಆಗಲಿ, ಆತನ ಕಾಲಕ್ಕೂ ಈಚಿನ ಮೇಳಗೀತಗಳನ್ನು ಬರೆದವರಾಗಲಿ, ಹೆಚ್ಚು ಪ್ರಕಾಶಕ್ಕೆ ಬಂದಿರಲಿಲ್ಲ. ವ್ಯಾಗ್ನರ್, ವಾಹನ್ ವಿಲಿಯಂಸ್, ಎಲ್ಗರ್, ಕಾನ್‌ಸ್ಟಂಟ್

ಲ್ಯಾಂಬರ್ಟ್, ಬೆಂಜಮಿನ್ ಬ್ರಿಟನ್ ಮುಂತಾದವರನ್ನೆಲ್ಲ ಕುರಿತು ಟೀಕೆ, ಪ್ರಶಂಸೆ, ಪ್ರಚಾರ ಬರುತ್ತಿತ್ತಾಗಿ ಒಂದು ವಾರದ Nation and Athenaeum ಬಂದರೆ ಹಬ್ಬ ನಮಗೆ. ಬಹುಶಃ ನಾವಿಬ್ಬರೇ ಎಂದು ಕಾಣುತ್ತದೆ, ಈ ಹುಚ್ಚು ಹಿಡಿಸಿಕೊಂಡವರು; ಅಷ್ಟು ವಿಶೇಷವಾಗಿ ಆ ಪತ್ರಿಕೆಯನ್ನು ಓದುತ್ತಿದ್ದುದು. ರಾಜಕೀಯ, ಆರ್ಥಿಕ ಸಂಬಂಧವಾಗಿ ಲಿಬರಲ್ ಪಂಥ ಇಂಗ್ಲಂಡಲ್ಲಿ ಕಡೆಕಡೆಯ ಹಂತ ಮುಟ್ಟುತ್ತ ಲಾಯ್ಡ್ ಜಾರ್ಜಿನ ಯಾವುದೊ ನಡವಳಿಕೆಯ ಕಾರಣದಿಂದ ಅವನಲ್ಲಿ ಲಿಬರಲ್ ಪಂಥದವರಿಗೆ ನಂಬಿಕೆ ಹೋಗಿತ್ತು. ಆಸ್ಕ್ವಿತ್‌ಗೆ ಆತನು ದ್ರೋಹ ಮಾಡಿದ ಎಂಬ ಮಾತು ಆ ಪಕ್ಷವನ್ನೇ ಶಿಥಿಲಗೊಳಿಸಿತ್ತು. ಸುಮಾರು ಅದೇ ಕಾಲದಲ್ಲಿಯೇ ಮಾರ್ಗರೇಟ್ ಆಸ್ಕ್ವಿತ್ ಅವರ Autobiography ಬಂದಿತು. ಎಷ್ಟು ತರಹದ ಜನ, ಎಷ್ಟು ಬಗೆಯ ಕೃತಿ, ಎಷ್ಟು ಬಗೆಯ ಮನೋವಿಲಾಸ! ವಿಮರ್ಶೆ ತೆಗೆದುಕೊಂಡರೆ ಮಿಡಲ್‌ಟನ್ ಮರ್ರಿ, ಬೊನಾಮಿ ಡೋಬ್ರಿ, ರೇಮಂಡ್ ಮಾರ್ಟಿಮರ್, ಲೆನಾರ್ಡ್ ವುಲ್ಫ್, ಹರ್ಬರ್ಟ್‌ರೀಡ್, ಗ್ರೇವ್ಸ್! ಕೆಲವು ದಿನ ಬ್ಲಂಡೆನ್ ಸಾಹಿತ್ಯಭಾಗದ ಸಂಪಾದಕರು, ಅನಂತರ ಲೆನಾರ್ಡ್‌ವುಲ್ಫ್. ಡೀನ್ ಇಂಗ್ ಅವರ ವಾರಲೇಖನ ಸಂಡೇ ಟೈಂಸ್‌ಲ್ಲಿ ಬೇರೆ ಬರುತ್ತಿತ್ತು. ಕೇನ್ಸ್ ಅವರು ಆ ಪತ್ರಿಕೆಯ ಒಡೆಯ ವರ್ಗಕ್ಕೆ ಚೇರ್‌ಮನ್ ಆಗಿ ನಾಲ್ಕೆಂಟು ಸಾವಿರ ಪೌಂಡ್ ವರ್ಷವರ್ಷದ ನಷ್ಟ ತುಂಬಿಕೊಟ್ಟು ಅದನ್ನು ನಡಸುತ್ತಿದ್ದರಾಗಿ, ಸುಮಾರು ಆ ಕಾಲದ ಪ್ರತಿಭಾವಂತರಲ್ಲಿ ಬಹು ಮಂದಿ ಆ ಪತ್ರಿಕೆಗೆ ಬರೆಯುತ್ತಿದ್ದರು. Westminister Gazette, Athenaeum ಎರಡೂ ಸೇರಿಕೊಂಡಿದ್ದು, Nation ಜೊತೆಗೆ Nation and Athenaeum ಆಯಿತು. ಇನ್ನು ಕೆಲವು ವರ್ಷಗಳ ಕಾಲದಲ್ಲಿ ಅದಕ್ಕೆ ನಮ್ಮಲ್ಲಿ Madras Times ಅಲ್ಲಿಯೊ Mail ಅಲ್ಲೊ ಇದ್ದು, ಇಂಗ್ಲಂಡಿಗೆ ಹೋಗಿ, Saturday Reviewಗೆ ಸೇರಿ, ಆಮೇಲೆ ಸ್ವತಂತ್ರವಾಗಿ Week End Review ಪತ್ರಿಕೆ ತೆರೆದು ನಡಸಿ, ಅದೂ ಬಹುತರ ಈ ಪತ್ರಿಕೆಗೇ ಸೇರಿ ಪತ್ರಿಕೆ–ಎಡಲಿಬರಲ್ ಬಲಲಿಬರಲ್ ಎರಡಕ್ಕೂ – ಒಡಂಬಡಿಕೆಗಳಾಗಿ, New Statesman ಅವರು ಈ Nation and Athenaeumಅನ್ನು ತಮ್ಮ ವಶಕ್ಕೆ ತೆಗೆದುಕೊಂಡು, ಪತ್ರಿಕೆಯ ಲಕ್ಷಣವನ್ನೇ ಬೇರ್ಪಡಿಸಿದರು. ಆದರೆ Nation and Athenaeum ಸುಮಾರು ನಾಲ್ಕೈದು ವರ್ಷಗಳ ಕಾಲ ಪ್ರಕಟಿಸಿದ ಲೇಖನಗಳು ಇತರ ಯಾವ ಪತ್ರಿಕೆಯಲ್ಲಿಯೂ ನಾನು ಕಾಣದ ವಿಶೇಷಗಳು. ಕೇನ್ಸ್ ಸ್ವತಂತ್ರ ಆರ್ಥಿಕ ಲೇಖನಗಳನ್ನೂ ರಾಜಕೀಯ ಲೇಖನಗಳನ್ನೂ ಬರೆಯುತ್ತಿದ್ದುದರ ಜೊತೆಗೆ ಬ್ರಿಟನ್ನಿನ ಆರ್ಥಿಕ ಪುನರ್ವ್ಯವಸ್ಥೆಗೆ ಯಾವ ಹೊಸ ಬಗೆಯ ಏರ್ಪಾಡುಗಳು ಬೇಕು ಎಂಬುದನ್ನು ಕುರಿತೊ, ಆತನು ಚೇರ್‌ಮನ್ ಆಗಿದ್ದ National Provincial Bankನ ವಾರ್ಷಿಕ ವರದಿಗಳ ಸಮಯದಲ್ಲಿಯೊ ಮಾಡುತ್ತಿದ್ದ ಭಾಷಣಗಳು ಇಂಗ್ಲಂಡಿನ ಹಣ ಮಂಡಲದಲ್ಲಿ ಕ್ರಾಂತಿಕಾರಕವಾದ ಅಭಿಪ್ರಾಯಗಳನ್ನು ಹರಡುತ್ತಿದ್ದವು. ಒಂದು ಕಡೆ ಈ ಪತ್ರಿಕೆ, ಈ ಜನ, ಇನ್ನೊಂದು ಕಡೆ ಮ್ಯಾಂಚೆಸ್ಟರ್ ಗಾರ್ಡಿಯನ್ನಲ್ಲಿ ಕ್ರಿಕೆಟ್ ಮತ್ತು ಸಂಗೀತ ಇವೆರಡಕ್ಕೂ ಸಂಬಂಧಿಸಿದಂತೆ ಬರೆಯುತ್ತಿದ್ದ ನೆವಿಲ್ ಕಾರ್ಡಸ್ ಎಂಬಾತನ ಬರವಣಿಗೆ ನಮಗೆ 'ನ ಭೂತೋ ನ ಭವಿಷ್ಯತಿ' ಎಂಬಂಥ ಸಂತೋಷವನ್ನು ಚುರುಕನ್ನು

ತಂದುಕೊಡುತ್ತಿದ್ದವು. ಆ ಕಾಲದ ಈ ವಾರಪತ್ರಿಕೆಗಳಲ್ಲಿ, London Mercury, Times Literary Supplement, Economist ಮುಂತಾದವುಗಳಲ್ಲಿ ನನಗೆ ಪ್ರೀತಿ ಇದ್ದಿತಾಗಿ, ಒಂದೇ ಪುಸ್ತಕವನ್ನು ಕುರಿತು ಬೇಬೇಯ ಮನೋಧರ್ಮ, ಮೇಧಾವಿತೆ, ಅಭಿರುಚಿಯುಳ್ಳವರು ಯಾವ ರೀತಿ ಪುಸ್ತಕ ವಿಮರ್ಶೆಯಲ್ಲಿ ತೊಡಗುತ್ತಾರೆ ಎಂಬುದರ ಅರಿವಾಗುತ್ತಿತ್ತು. ಶಕ್ಯವಾದವನ್ನು ಓದಿ ನನ್ನ ತಿಳಿವಳಿಕೆ ತಿದ್ದುವುದು ಸಾಧ್ಯವಾಯಿತು. ಓ....ಅದೊಂದು ಪರ್ವಕಾಲ ನಮ್ಮ ಜೀವನದಲ್ಲಿ! ಶ್ರೀನಿವಾಸರಾಯರು ಈ ಎಲ್ಲದರಲ್ಲಿಯೂ ಜೊತೆ ಆಸ್ಥೆವಹಿಸಿದ್ದರು. ನಾವು ಜೊತೆಯಲ್ಲಿ ಬಹುಭಾಗ ಕಾಲವನ್ನು ಆಗ ಕಳೆದೆವು.

ಆಲ್ಡ್ಸ್ ಹಕ್ಸ್‌ಲೀ ಉತ್ತರ ದೇಶದಲ್ಲಿ ಮಾತ್ರ ಸಂಚಾರ ಮಾಡಿಕೊಂಡು ಅದರ ಡೈರಿ ಕೊಡುತ್ತಿದ್ದರು ಎಂದೆ. ದಕ್ಷಿಣದವರ ಸಂಸ್ಕೃತಿವಿಲಾಸವನ್ನು ಅವರು ಕಂಡಿದ್ದರೆ ಅದು ಅವರ ಮನಸ್ಸನ್ನು ಹೆಚ್ಚು ತುಂಬಿಕೊಳ್ಳುತ್ತಿತ್ತು. ಅಂಥವರು ಈ ಕಡೆ ಬರಬೇಕು; ಅವರು ಶೇಷಣ್ಣನವರ ವೀಣೆ ಕೇಳಿದರೆ, ಆ ಕಾಲದಲ್ಲಿ ಇನ್ನೂ ನಾಲ್ಕು ತಂತಿಯಲ್ಲಿಯೇ ವಯೊಲಿನ್ ಬಾರಿಸುತ್ತಿದ್ದ ಚೌಡಯ್ಯನವರ, ಗೋವಿಂದಸ್ವಾಮಿಯವರ ವಯೊಲಿನ್ ಕೇಳಿದರೆ, ದಕ್ಷಿಣದ ಸಂಗೀತ, ದೇವಾಲಯ ರಚನೆ, ಕಲಾಶಿಲ್ಪ ನೋಡಿದರೆ, ಬಾಲ ಸರಸ್ವತಿ ಅವರ ಅಭಿನಯ ಕಂಡರೆ, ಕಥಕ್ಕಳಿ– ಆಗಿನ್ನೂ ಬೆಂಗಳೂರು ಮೈಸೂರು ಕಡೆಗೆ ನಮ್ಮ ಯಕ್ಷಗಾನ ಪ್ರದರ್ಶನ ಬಂದಿರಲಿಲ್ಲ – ನೋಡಿದರೆ, ಮೃದಂಗ ಬಾಜನೆಯಲ್ಲಿ ಅಳಗನಂಬಿ, ದಕ್ಷಿಣಾಮೂರ್ತಿ ಅವರ ಬಾಜನ ಕೇಳಿದರೆ, ನಮ್ಮ ಬಾದಾಮಿ, ಪಟ್ಟದಕಲ್, ಐಹೊಳೆ, ಹಳೇಬೀಡು, ಬೇಲೂರು, ಶ್ರವಣಬೆಳುಗೊಳದ ಮೂರ್ತಿಶಿಲ್ಪವನ್ನು ನೋಡಿದರೆ – ಅವರ ಮನಸ್ಸಿಗೆ ಭಾರತದ ವಿಷಯದಲ್ಲಿ ಇನ್ನೊಂದು ಮುಖದ ದರ್ಶನ ಕಂಡೀತು ಎಂದುಕೊಂಡು, ನಾವು Thomas Cook and Sons ಅವರ ಅಡ್ರಸ್ಸಿಗೆ ಕಾಗದ ಬರೆದೆವು. ಆಗಿನ್ನೂ ವಿಮಾನಯಾನ ಬಂದಿರಲಿಲ್ಲ. ಅಲ್ಲಿಂದ ಉತ್ತರ ಬಂದಿತು: ಅವರು ಇಂಡಿಯಾ ಬಿಟ್ಟು ಹೊರಟುಹೋಗಿ ಮೂರು ತಿಂಗಳಾಯಿತು ಎಂದು. ಮತ್ತೊಂದು ಸಲ ಅವರು ಇಂಡಿಯಾಕ್ಕೆ ಬರುವುದಾದರೆ ಆಗ ದಕ್ಷಿಣದ ಪ್ರವಾಸ ಕೈಗೊಳ್ಳುತ್ತಾರೆ; ತಮಗೆ ತಿಳಿಸಲು ಬರೆದಿದ್ದಾರೆ ಎಂದು. ವಾರದ Nation and Athenaeum ನಮ್ಮ ಕೈಗೆ ಬರಬೇಕಾದರೆ ಆರು ವಾರ ತಡವಾಗುತ್ತದೆ; ಅದಕ್ಕೆ ಮುಂಚೆ ಎಷ್ಟೋ ದಿವಸಗಳ ಹಿಂದೆ ಇವರ ಲೇಖನ ಅವರಲ್ಲಿಗೆ ಹೋಗಿರುತ್ತದೆ ಎಂಬ ಯೋಚನೆ ಮಾಡಿ, ಆ ಡೈರಿಯ ಮುಖ್ಯ ಭಾಗಗಳನ್ನೆಲ್ಲ ಸೇರಿಸಿ, ಅವರು ಮುಂದೆ Jesting Pilate ಗ್ರಂಥವನ್ನು ಪ್ರಕಟಿಸಿದರು. ಪುಸ್ತಕದಲ್ಲಿ ಪತ್ರಿಕೆಯಲ್ಲಿ ಬಂದ ಕೆಲವು ಭಾಗಗಳು ಬಿಟ್ಟು, ಸವರಿ ಬಂದಿದ್ದವು, – ಇನ್ನೂ ಈಚಿನ ಕ್ಯಾಂಬೆಲ್ ಜಾನ್ಸನ್ ಅವರ Mission with Mountbatten ಅಲ್ಲಿನಂತೆ. ಹಕ್ಸ್‌ಲಿ ದೊಡ್ಡ ಮನೆತನಕ್ಕೆ ಸೇರಿದವರು; ದೊಡ್ಡ ವಿದ್ವಾಂಸರು; ಸ್ವತಂತ್ರ ಮನೋಭಾವವುಳ್ಳವರು. ಕಾದಂಬರಿ, ಕವಿತೆ, ಸಣ್ಣ ಕತೆ, ಪ್ರವಾಸಚಿತ್ರಗಳು ಬರೆದು, ಇಂಗ್ಲಿಷ್ ಸಾಹಿತ್ಯದಲ್ಲಿ ಹೆಸರಾಗಿದ್ದವರು. ನಮ್ಮ ಸುತ್ತಲ ಜೀವನದಲ್ಲಿ ಆ ಮೆರುಗು, ಆ ಚುಚ್ಚಿನ ಬರವಣಿಗೆ, ಆ ಮನೋವಿಲಾಸ, ಬೆಡಗು ಇರಲಿಲ್ಲ. ಪ್ರವಾಸಚಿತ್ರಗಳನ್ನು ಕನ್ನಡದಲ್ಲಿ ಬರೆವಾಗ ಸ್ವಲ್ಪಮಟ್ಟಿಗಾದರೂ ಆ ಗುಣಲಕ್ಷಣ ಬಂದರೆ ಚಂದ ಎನ್ನಿಸಿತ್ತು.

೧೯೨೬-೨೭ರ ಹೊತ್ತಿಗೆ ಬಿ. ಎಂ. ಶ್ರೀ. ರಿಜಿಸ್ಟ್ರಾರ್ ಆಗಿ, ಅವರ ಕಡೆಕಡೆಯ ದಿನಗಳಲ್ಲಿ ಅರಿಸಿದ ಕೆಲವರು ಕನ್ನಡದ ವಿದ್ಯಾರ್ಥಿಗಳನ್ನು ಕರೆದು ಕನ್ನಡ ಸಾಹಿತ್ಯ ಚರಿತ್ರೆ ಛಂದಸ್ಸುಗಳನ್ನು ಕುರಿತು ಆಪ್ತವಾಗಿ ಮಾತಾಡುತ್ತಿದ್ದರು. ೧೯೨೬ರಲ್ಲಿ 'ಇಂಗ್ಲಿಷ್ ಗೀತ'ಗಳನ್ನು ಬೆಂಗಳೂರು ಸೆಂಟ್ರಲ್ ಕಾಲೇಜಿನ ಕರ್ನಾಟಕ ಸಂಘದ ಅಧಿಕಾರಿಗಳು – ಅಂದರೆ, ವೆಂಕಣ್ಣಯ್ಯ ಕೃಷ್ಣಶಾಸ್ತ್ರಿಗಳು – ಪ್ರಕಟಿಸಿದರು. ಅದು ಉಂಟುಮಾಡಿದ ಆಂದೋಳನ ಕನ್ನಡನಾಡಿನ ಚರಿತ್ರೆಯ ಒಂದು ಘನ ಅಂಶ, ಅಂಗ ಆಗಿದೆ. ಇಷ್ಟು ಹೊತ್ತಿಗೆ ಸೆಂಟ್ರಲ್ ಕಾಲೇಜಿನ ಕರ್ನಾಟಕ ಸಂಘ, ಪ್ರಬುದ್ಧ ಕರ್ನಾಟಕ ಹೊಸಕನ್ನಡ ಸಾಹಿತ್ಯಕ್ಕೆ ಒಂದು ಹೊಸ ಯುಗವನ್ನೂ ಮಾರ್ಗವನ್ನೂ ದರ್ಶನವನ್ನೂ ವಿಮರ್ಶನ ರೀತಿಯನ್ನೂ ತಂದಿತ್ತು. ಅಲ್ಲಿನ ವಾರ್ಷಿಕೋತ್ಸವಗಳಿಗೆ ನಾನೂ ರಾಯರೂ ಜೊತೆಗೆ ಹೋಗಿ ಬರುತ್ತಿದ್ದೆವು. ಕೆಲವು ಕಾಲವಾದ ಮೇಲೆ ಅವರು ಸರ್ಕಾರಿ ಹೈಸ್ಕೂಲಿನ ಉಪಾಧ್ಯಾಯ ಉದ್ಯೋಗವನ್ನು ಪಡೆದು ತಿಪಟೂರು ಮುಂತಾದ ಕಡೆಗಳಲ್ಲಿ ಕೆಲಸ ಮಾಡಿದರು. ಅವರು ತಿಪಟೂರಿನಲ್ಲಿಯೂ ಅವರ ಸ್ನೇಹಿತರಾದ ಶ್ರೀ ಕೂಡಲಿ ಚಿದಂಬರಂ ಶಿವಮೊಗ್ಗೆಯಲ್ಲಿಯೂ ಕರ್ನಾಟಕ ಸಂಘಗಳನ್ನು ಸ್ಥಾಪಿಸಿದರು. ಅವರಿಬ್ಬರು ಇರುವಷ್ಟು ಕಾಲವೂ ಎರಡೂ ಸಂಘಗಳು ಚೆನ್ನಾಗಿ ಕೆಲಸ ಮಾಡಿದವು. ಕೇವಲ ವ್ಯಕ್ತಿಶವಾದ ಒಂದು ಮಾತನ್ನು ಈ ಸಂಬಂಧದಲ್ಲಿ ಹೇಳುತ್ತೇನೆ. ತಿಪಟೂರಿಗೆ ನನ್ನನ್ನು ಕರಸಿ ನನ್ನಿಂದ ಯಾವುದೋ ಭಾಷಣಮಾಡಿಸಿ, ನಾನು ಹಿಂದಕ್ಕೆ ಬರುವಾಗ ಒಂದು ಸಣ್ಣ ಬೀಲದ ತುಂಬಾ ಒಂದು ವಿಶೇಷ ಬಗೆಯ ಕೊಬ್ಬರಿಗಿಟಕುಗಳನ್ನು ತುಂಬಿ, ರೈಲಿಗೆ ನಾನು ಬಂದು ಕುಳಿತಮೇಲೆ ತಂದುಕೊಡುತ್ತ 'ಮನೆಗೆ' ಎಂದರು. ಸಣ್ಣ ಸಣ್ಣ ಗಿಟಕು; ಅದು ತಿನ್ನುವ ಕೊಬ್ಬರಿ ಅಂತೆ. ಒಳಗೆ ಟೊಳ್ಳು ಭಾಗ ಕಡಮೆ. ಪೂರ್ತಿ ಕೊಬ್ಬರಿಯೇ; ತುಂಬಾ ಸಿಹಿ, ಮೃದು. ಅದರ ಅತಿಶಯ ನನ್ನ ಮನಸ್ಸನ್ನು ತುಂಬಾ ಆಕರ್ಷಿಸಿತು. ಬೆಂಗಳೂರಿಗೆ ಬಂದ ಮೇಲೆ ನಾನು ಅದನ್ನು ಅನುಭವಿಸಿದ್ದು. ಅಂಥ ಕೊಬ್ಬರಿಯನ್ನು ನಾನು ಈವರೆಗೂ ನೋಡಿಲ್ಲ. ಮಾತನಾಡದೆ ಇಂತಹ ಪ್ರೀತಿಯ ಪ್ರತೀಕಗಳನ್ನು ತೋರಿಸುವ ಸ್ವಭಾವ ರಾಯರದ್ದು.

ಮೈಸೂರು ಮಹಾರಾಜಾ ಕಾಲೇಜಿನ ಉಪಾಧ್ಯಾಯರಲ್ಲಿ ಕೆಲವರು ಹೊರಗಿನ ಮಹನೀಯರೊಡನೆ ಸೇರಿ ಕಾಲೇಜ್ ಯೂನಿಯನ್ನಿನ ಸಂಬಂಧದಲ್ಲಿ ಹಳ್ಳಿಗಳಿಗೆ ಹೋಗಿ ವಿದ್ಯಾಪ್ರಚಾರ, ಸಂಸ್ಕೃತಿಸಾಧನಕಾರ್ಯಗಳನ್ನು ನಡಸುತ್ತಿದ್ದರು. ಅದು ಬೇಗ ದೊಡ್ಡದಾಗಿ ಅಂಥ ಚಟುವಟಿಕೆಗಳಿಗೆ ಪ್ರೋತ್ಸಾಹ ದೊರೆಯಿತು. ಶ್ರೀ ಎನ್. ಕಸ್ತೂರಿ, ಶ್ರೀನಿವಾಸರಾಯರು, ಟಿ. ಕೃಷ್ಣಮೂರ್ತಿ, ಜಿ. ಆರ್. ರಂಗಸ್ವಾಮಿ ಮುಂತಾದ ಸಾಹಿತಿಗಳೂ ಶ್ರದ್ಧಾಳುಗಳೂ ಈ ಕೆಲಸದಲ್ಲಿ ನಿರತರಾಗಿದ್ದರು. ಇದಕ್ಕಾಗಿ ಅಕ್ಷರ ಪ್ರಚಾರ ಸಂಸ್ಥೆ, ವಯಸ್ಕರ ವಿದ್ಯಾಪ್ರಚಾರ ವಿದ್ಯಾಪೀಠಗಳು ಸ್ಥಾಪಿತವಾದವು. ಅಂಥ ಒಂದೊಂದು ಪೀಠದಲ್ಲೂ ಕಾವ್ಯವಾಚನ, ನಾಟಕ ಪ್ರದರ್ಶನ, ಕೋಲಾಟ, ಜಾನಪದ ಕಲಾಭಿರುಚಿಯನ್ನು ಹೆಚ್ಚಿಸುವ ಕಾರ್ಯಮಂಡಲಿ ರಚಿತವಾದವು. ಯೂನಿವರ್ಸಿಟಿ ಯೂನಿಯನ್ ಅಂಗವಾಗಿ ಹುಟ್ಟಿದ್ದು, ವಿದ್ಯಾ ಇಲಾಖೆಯ ಒಂದು ಸ್ವತಂತ್ರ ಮಂಡಲಿಯ ಹಾಗೆ ಬೆಳೆದು ಇಂಥ ಕಾರ್ಯಕ್ಕೆಲ್ಲ ದಿಗ್ದರ್ಶಕವಾಗಿ, ಮೂಲ ಪ್ರಚೋದಕವಾಗಿ ಬೆಳೆಯಿತು. ಇದನ್ನು 'The Mysore

Experiment' ಎಂದೇ ಹೆಸರಿಸಿ ಭಾರತದಲ್ಲಿಯೂ ಹೊರಗೂ ಇದಕ್ಕೆ ಪ್ರಶಸ್ತಿ ಬಂದಿತು. ಶ್ರೀನಿವಾಸರಾಯರು ಈ ಸಂಸ್ಥೆಗೆ ದುಡಿದರು. ಟಿ. ಕೃಷ್ಣಮೂರ್ತಿ, ರಾಯರು ಸೇರಿ ಈ ಸಂಸ್ಥೆಯ ಕಾರ್ಯವ್ಯವಸ್ಥೆ ದಕ್ಷವಾಗುವಂತೆ ಮಾಡಿದರು. ಕಾಲಕ್ರಮದಲ್ಲಿ ನ. ಭದ್ರಯ್ಯನವರು, ಕೂಡಲಿ ಚಿದಂಬರಂ ಅವರು ಸೇರಿದರು. ನಂಜನಗೂಡಿನ ಹತ್ತಿರ ಒಂದು ವಿದ್ಯಾಸಂಸ್ಥೆಯನ್ನು ನಡಸುತ್ತ ಆಗಾಗ ಅಲ್ಲಿ ಭಾಷಣಗಳು, ಗುಡಿಸಲು ಕೈಗಾರಿಕೆಗಳ ಶಿಕ್ಷಣ ಇವು ಸೇರುವಂತೆ ವ್ಯವಸ್ಥವಾಯಿತು. ವಯಸ್ಕರ ಪುಸ್ತಕ ಭಂಡಾರಗಳನ್ನು ತೆರೆದು ಶಾಲಾವಿದ್ಯಾಭ್ಯಾಸವನ್ನು ಆರಂಭ ಮಾಡಿತು. ವೃತ್ತಿಗಳಲ್ಲಿ ತೊಡಗಿದ ವಯಸ್ಕರಿಗೆ ಓದುಬರಹ ಕಲಿಸಿ, ಲೋಕದ ವಿದ್ಯಮಾನಗಳನ್ನು ತಿಳಿಸಲು ಮಂಡ್ಯದ ಬಳಿ ಶಿಕ್ಷಣಕೇಂದ್ರವನ್ನು ನಡಸಿತು. ದೇಶದ ಚರಿತ್ರೆಸಾಧನೆಗಳನ್ನು ವರ್ಣಿಸುವುದು ಮುಂತಾದ ಕಾರ್ಯಕ್ರಮಗಳನ್ನು ಕೈಗೊಂಡು ಕೀರ್ತಿ ಸಂಪಾದಿಸಿತು. ಮೈಸೂರು ಸರ್ಕಾರ ಮತ್ತು ವಿದ್ಯಾಭ್ಯಾಸ ಇಲಾಖೆ ಇದಕ್ಕಾಗಿ ಹಣದ ನೆರವನ್ನೂ ಇತರ ಬಗೆಯ ಪ್ರೋತ್ಸಾಹವನ್ನು ಕೊಟ್ಟಿತು. ಶ್ರೀನಿವಾಸರಾಯರು ಈ ವಯಸ್ಕರ ಶಿಕ್ಷಣ ಸಮಿತಿಯ ಕಾರ್ಯದರ್ಶಿಯಾಗಿ ಶ್ರದ್ಧೆಯಿಂದಲೂ ಉತ್ಸಾಹದಿಂದಲೂ ಕೆಲಸ ಮಾಡಿದರು. ಮೊದಲು ಬಿ. ಎಂ. ಶ್ರೀ. ಇದಕ್ಕೆ ಚೇರ್‌ಮನ್ ಎಂದೊ ಅಧ್ಯಕ್ಷರೆಂದೊ ಆಗಿದ್ದರು. ಆಮೇಲೆ ಒಂದು ಕಾಲದಲ್ಲಿ ಮೈಸೂರು ಮಹಾರಾಜಾ ಕಾಲೆಜಿಗೆ ಇಂಗ್ಲಿಷ್ ಪ್ರಾಚಾರ್ಯರಾಗಿ ಡಬ್ಲು ಯ. ಜಿ. ಈಗಲ್‌ಟನ್ ಎಂಬ ವಿದ್ಯಾ ಸಂಸ್ಕೃತಿ ಪಕ್ಷಪಾತಿಗಳು ಬಂದರು. ಅವರು ಇದನ್ನೆಲ್ಲ ಕಂಡರು. ಇದರಲ್ಲಿ ಭಾಗವಹಿಸಿ ಅಧ್ಯಕ್ಷತೆ ವಹಿಸಿದರು. ಯಾರು ಯಾರು ಪ್ರಾಮಾಣಿಕವಾಗಿ ಕೆಲಸ ಮಾಡುತ್ತಿದ್ದಾರೆ, ಇಂಥ ಕೆಲಸ ಮಾಡಿದುದು ಎಷ್ಟು ವಿಶೇಷವಾಗಿ ಅಗತ್ಯವಾದ್ದು ಎಂಬುದನ್ನು ಅರಿತರು. ಕೃಷ್ಣಮೂರ್ತಿ ಅವರೇನೊ ವಿಶ್ವವಿದ್ಯಾನಿಲಯದಲ್ಲಿ ಗಣಿತಶಾಸ್ತ್ರದ ಉಪಾಧ್ಯಾಯರು. ರಾಯರು ವಿದ್ಯಾ ಇಲಾಖೆಯಲ್ಲಿ ಹೈಸ್ಕೂಲ್ ಮಟ್ಟದ ಪಾಠಪ್ರವಚನಗಳಲ್ಲಿ ನಿಯುಕ್ತರಾಗಿದ್ದವರು. ದೇಶದ ಆರ್ಥಿಕ ಪ್ರಪಂಚದಲ್ಲಿ ಇಂಥವರಿಗೆ ಬೇಕಾದ ಪುರಸ್ಕಾರ, ಸ್ಥಾನಮಾನ ದೊರೆಯವೆಂಬುದು ಅವರಿಗೆ ಮಂದಟ್ಟಾಗಿತ್ತು. ದುಡಿಯದ ಜನಕ್ಕೆ, ಇದನ್ನು ರಾಜಕೀಯಕ್ಕಾಗಿ ಬಳಸಿಕೊಳ್ಳುವ ಜನಕ್ಕೆ ಪ್ರಚಾರ ಸಂಸ್ಥೆಯನ್ನು ಮಾಡಿಕೊಂಡಾರೆಂದು ಅವರಿಗೆ ಯೋಚನೆ ಹುಟ್ಟಿತು. ಅವರು ನಮ್ಮ ವಿಶ್ವವಿದ್ಯಾನಿಲಯದ ನೀತಿಯನ್ನು ಬಿಟ್ಟುಕೊಟ್ಟು ಪ್ಯಾರಿಸ್ಸಿಗೆ UNESCO ಸಂಸ್ಥೆಯ ಅಧಿಕಾರಿಯಾಗಿ ಹೊರಟರು. ಆಫ್ರಿಕದಲ್ಲಿ, ಪಶ್ಚಿಮ ಏಷಿಯಾದಲ್ಲಿ, ಸಿಲೋನ್ ಫಿಲಿಪೈನ್ಸ್ ಮುಂತಾದ ಕಡೆ ವಯಸ್ಕರ ವಿದ್ಯಾಪ್ರಚಾರಕಾರ್ಯಗಳನ್ನು ಸ್ಥಾಪಿಸಿ ನಡಸಬೇಕಾದ ಕಾರ್ಯವನ್ನು UNESCO ಕೈಕೊಂಡಾಗ, ರಾಯರನ್ನು ಮೊದಲೂ ಕೃಷ್ಣಮೂರ್ತಿಯವರನ್ನು ಸ್ವಲ್ಪ ಕಾಲವಾದ ಮೇಲೂ UNESCO ಸೇವೆಗೆ ಆಹ್ವಾನಿಸಿದರು. ಇನ್ನೂರು ರೂಪಾಯಿ ಮಾಸಿಕ ವರಮಾನವಿಲ್ಲದ ಶಾಲಾ ಉಪಾಧ್ಯಾಯರೊಬ್ಬರಿಗೆ ೨,೦೦೦–೩,೦೦೦ ಡಾಲರ್ ವರಮಾನವಿರುವ ಅಂತಾರಾಷ್ಟ್ರೀಯ ಸುಖಸೌಕರ್ಯಗಳನ್ನು ಒದಗಿಸುವ ಕೆಲಸ ದೊರಕಿದ್ದು ಹಲವರಿಗೆ ಅಸೂಯೆ ಉಂಟುಮಾಡಿತು. ವಿದ್ಯಾ ಇಲಾಖೆಯ ಮುಖ್ಯಾಧಿಕಾರಿಗಳೇ ಇಂಥ ಅದೃಷ್ಟ ತಮ್ಮ ಇಲಾಖೆಯ ಒಬ್ಬ ಸಾದಾ ನೌಕರನಿಗೆ ಬಂದುದನ್ನು ಕಂಡು ಹೇಗೆ

ಹೇಗೊ ನಡೆದುಕೊಂಡರೆಂದು ಕೇಳಿದ್ದೇನೆ. ಆಗ ಇಲ್ಲಿಂದ ಅವರಿಗೆ ಬಿಡುಗಡೆಯಾಗುವುದೇ ಕಷ್ಟವಾಯಿತು. ಪೂರ್ತಿ ಸರ್ಕಾರಿ ನೌಕರಿಗೆ ರಾಜೀನಾಮೆ ಇತ್ತು ಇಲ್ಲಿಂದ ಅವರು ಹೊರಟುಹೋಗಬೇಕಾಯಿತು. ಮೊದಲು ಸಿಲೋನಿಗೆ ಹೋಗಿ ಅಲ್ಲಿ ಎರಡು ವರ್ಷಕಾಲ ಕೆಲಸ ಮಾಡಿದರು. ಅನಂತರ ಆಫ್ರಿಕಾದಲ್ಲಿ ಲೈಬೀರಿಯದಲ್ಲಿ, ಈಶಾನ್ಯ ಭಾಗವಾದ ಸೂಡಾನಲ್ಲಿ ಅನೇಕ ವರ್ಷಕಾಲ ದೊಡ್ಡ ಕೆಲಸಗಳನ್ನು ಮಾಡಿ, ಅಲ್ಲಿನ ಭಾಷೆಗಳನ್ನು ಕಲಿತು, ಅಲ್ಲಿನ ಜನಜೀವನದಲ್ಲಿ ಒಂದಾಗಿ ಬೆರೆತು, ಅಲ್ಲಿನ ವಿದ್ಯಾಪ್ರಚಾರ ಕಾರ್ಯಗಳನ್ನು ಒಂದು ಹದಕ್ಕೆ ತಂದು, ಆಯಾ ಸರ್ಕಾರಗಳಿಂದಲೂ UNESCO ಅಧಿಕಾರವರ್ಗದಿಂದಲೂ ಮೆಚ್ಚುಗೆ ಪಡೆದರು.

ಈ ಕಾಲದಲ್ಲಿ ಒಂದೆರಡು ಬಾರಿ ಅವರು ತವರುನಾಡಿಗೆ ಬಂದುದುಂಟು. ಪಂಚೆ, ಚಪ್ಪಲಿ ಹೋಗಿ ಸೂಟು ಬಂದಿತ್ತು. ಕ್ರಾಪಿನವರಾದ್ದರಿಂದ ತಲೆಗೆ ರುಮಾಲು ಹಾಕಬೇಕಿರಲಿಲ್ಲ. ಸುಖವಾಗಿದ್ದರು. ಎಂಟು–ಹತ್ತು ಸಾವಿರ ರೂಪಾಯಿಗಳಿಗಿಂತ ಹೆಚ್ಚಿನ ನೌಕರಿ ಅದು. ಸಹಜ ಸೌಜನ್ಯದಲ್ಲಾಗಲಿ, ಸೌಮ್ಯತೆಯಲ್ಲಾಗಲಿ, ಜನಹಿತಾಕಾಂಕ್ಷೆಯಲ್ಲಾಗಲಿ, ಕಲೆ ವಿದ್ಯೆಗಳಿಗೆ ಸಂಬಂಧಿಸಿದ ಅಭಿರುಚಿಯಲ್ಲಾಗಲಿ, ಅಸಾಧಾರಣವಾದ ವಿಶ್ವಾಸವನ್ನು ಉಳಿಸಿ ಬೆಳಸಿಕೊಂಡಿದ್ದರು. ಅವರಿಗೆ ಇಬ್ಬರು ಗಂಡು ಮಕ್ಕಳು. ಒಬ್ಬ ಹುಡುಗ ನಿವಾರಣೆಯಾಗದ ದೈಹಿಕ ಮಾನಸಿಕ ರೋಗಗ್ರಸ್ತ. ಏನು ಮಾಡಿದರೂ ಸುಧಾರಿತನಾಗದಿದ್ದುದನ್ನು ಕಂಡರು. ಇನ್ನೊಬ್ಬನನ್ನಾದರೂ ವಿದ್ಯಾವಂತನನ್ನಾಗಿ ಮಾಡಬೇಕೆಂದೂ ಹಾರೈಸಿದರು. ತಾವು ಎದುರಿಗೆ ಮನೆಯಲ್ಲಿಲ್ಲದೆ, ಎಂಟು – ಹತ್ತು ವರ್ಷ ತಂದೆಯ ಮೇಲೆಚ್ಚರಿಕೆ ಇಲ್ಲದೆ ಇದ್ದುದರಿಂದ, ಆ ಹುಡುಗನ ವಿದ್ಯಾಭ್ಯಾಸ ಸಾಕಷ್ಟು ಸಮರ್ಪಕವಾಗಲಿಲ್ಲ. ಲೋಕೋಪಕಾರ ಮಾಡುತ್ತೇನೆಂಬವನು ಮನೆಯ ಮಕ್ಕಳನ್ನು ಅಲಕ್ಷ್ಯ ಮಾಡಿದ ಎಂಬಂತೆ ಆಯಿತೆಂದು ತುಂಬ ಕೊರಗಿದರು, ಮರುಗಿದರು. ಇಬ್ಸೆನ್‌ನ 'Little Eyolf' ನಾಟಕದ ನೆನಪು ತರುತ್ತಿತ್ತು ಇವರ ಅಂದಿನ ಮನಃಸ್ಥಿತಿ. ಒಂದಾರು ತಿಂಗಳಕಾಲ ಈ ಸಂಗತಿ ಅವರ ಮನಸ್ಸನ್ನು ಒತ್ತಿ ಅವರನ್ನು ಒಂದು ಬೇನೆಗೆ ಒಳಪಡಿಸಿತು. ಆಮೇಲೆ UNESCO ಅವರು ಸ್ವಲ್ಪಕಾಲ ಬಿಡುವು ಮಾಡಿಕೊಂಡು ಇರಾನಿಗೆ ಹೋಗಿ ಸ್ವಲ್ಪ ಕೆಲಸ ಮಾಡಬೇಕೆಂದು ಅವರ ಮನಸ್ಸನ್ನು ಒಲಿಸಿಕೊಂಡರು. ಹುಡುಗನೇನೊ ಕಾಲೆಜ್‌ಗೆ ವಿಜ್ಞಾನ, ತಂತ್ರವಿದ್ಯೆಗಳಲ್ಲಿ ಪರೀಕ್ಷೆ ಕೊಟ್ಟಿದ್ದನಾದರೂ ಇವರ ಎಣಿಕೆಗೆ ತಕ್ಕಂತೆ ವಿದ್ಯೆ ಸಾಧಿಸಲಿಲ್ಲವೆಂಬುದು ಅವರ ಮನಸ್ಸನ್ನು ವ್ಯಸ್ತ ಮಾಡಿತ್ತು. ಅಲ್ಲಿಯೇ ನಮ್ಮ ದುರದೃಷ್ಟದಿಂದ ಅವರು ತೀರಿಕೊಳ್ಳಲು ಅವರ ಕಳೇಬರ ಹಿಂದಕ್ಕೆ ಬಂದಿತು.

ನಾವು ಅನೇಕ ಸಂಗತಿಗಳಲ್ಲಿ ಜೊತೆಯಲ್ಲಿದ್ದೆವೆಂದು ಹೇಳಿದ್ದೇನೆ. ೧೯೨೯ರ ಸುಮಾರಿಗೆ ಪ್ರಪಂಚದಲ್ಲೆಲ್ಲ ಒಂದು ಮುಗ್ಗಟ್ಟು ಹುಟ್ಟಿ ಉದ್ಯೋಗ ಕುಸಿದಿತ್ತು, ಸೊರಗಿತ್ತು. ನಮ್ಮ ಸರ್ಕಾರದಲ್ಲಿಯೂ ಮೊದಲು ಸಂಬಳಗಳಲ್ಲಿ ೧೦% ಖೋತಾ ಮಾಡಿದರು. ಕೆಲವು ತಿಂಗಳಾದಮೇಲೆ ೧೦% ಕಷ್ಟವಾಗುತ್ತದೆ ಎಂದು ೫% ಕ್ಕೆ ಇಳಿಸಿದರು. ಇದರಲ್ಲಿಯೂ ಸರ್ಕಾರಕ್ಕೆ ಮೂರರಿಂದ ಹಿಡಿದು ಐದು ಲಕ್ಷದವರೆಗೆ ಮಿಗಿತಾಯವಾಗುತ್ತಿತ್ತು. ನಮ್ಮವರು ಈ ಕೊರತೆಯನ್ನು ಸಹಿಸಿಕೊಳ್ಳಲೊಪ್ಪಿದರೂ ಹೊರಗಿಂದ ಬಂದು ಕೆಲಸ

ಮಾಡುತ್ತಿದ್ದವರು ಒಪ್ಪಿರಲಿಲ್ಲ. ಇದೇ ಸಮಯದಲ್ಲಿ ನಮ್ಮಲ್ಲಿ ಪ್ರಜಾನಾಯಕರಾದ ಎಚ್. ಸಿ. ದಾಸಪ್ಪನವರ ಅಧ್ಯಕ್ಷತೆಯಲ್ಲಿ ಒಂದು ಯೋಜನಾ ಮಂಡಲಿಯನ್ನು ನಮ್ಮ ಸರ್ಕಾರ ನೇಮಿಸಿ, ಇಲ್ಲಿನ ವ್ಯಾಪಾರ ಉದ್ಯೋಗ ಮುಂತಾದ ವಿಷಯಗಳಲ್ಲಿ ಸಲಹೆ ಕೊಡಬೇಕೆಂದು ಗೊತ್ತು ಮಾಡಿತು. ಅದಕ್ಕೆ ನಾವು ಒಂದು ಸಣ್ಣ ಸಲಹೆಯನ್ನು ಜೊತೆಯಾಗಿ ಕಳಿಸಿ ಕೊಟ್ಟಿವು. ಅದು ಅವರ ಕೈ ಸೇರಿದುದರ ಸುದ್ದಿ ಕೂಡ ಬರಲಿಲ್ಲ. ಮೂರೂವರೆ ಲಕ್ಷ ರೂಪಾಯಿ ಉಳಿದರೆ ಅದನ್ನು ಮೀಸಲು ಹಣವಾಗಿ ಮಾಡಿ, ಅಕ್ಷರಪ್ರಚಾರ, ವಯಸ್ಕರ ಶಿಕ್ಷಣ, ಜಾನಪದ ಕಲೆಗಳ ಪ್ರೋತ್ಸಾಹದ ವಿಸ್ತರಣ ನಾಡಿನ ಮೇಲೆಲ್ಲ ಬೆಳಿಯುವಂತೆ ಮಾಡಬೇಕೆಂದೆವು. ಆವರೆಗೂ ಅದನ್ನು ವಿಶ್ವವಿದ್ಯಾನಿಲಯದ ಉಪನ್ಯಾಸಕರ ಸಂಘವೊಂದು ಕೈಕೊಳ್ಳುತ್ತಿತ್ತು. ಸಂಸ್ಥೆಯ ಕಾರ್ಯಗಳಂತೆ ಈ ಎರಡು ಮೂರು ಕಾರ್ಯಗಳೂ ಸೇರಿ ನಡೆಯಬಹುದೆಂದು ಅಲ್ಲಿ ಒಂದು ಯೋಜನೆಯನ್ನು ರೂಪಿಸಿ ಅದನ್ನು ಕಳಿಸಿದ್ದೆವು. ಆಗ ಹತ್ತುಸಾವಿರ ರೂಪಾಯಿಗಳಿಗೆ ದೊಡ್ಡ ವ್ಯಾನ್--ಬಸ್ ಬರುತ್ತಿತ್ತು. ಮೈಸೂರಲ್ಲಿ ಆಗಿದ್ದ ಎಂಟೊಂಬತ್ತು ಜಿಲ್ಲೆಗಳಿಗೆ ಎಂಟೊಂಬತ್ತು ಇಂಥ ಬಸ್ಸುಗಳನ್ನೊ ವ್ಯಾನುಗಳನ್ನೊ ತೆಗೆದುಕೊಂಡು ಕಾಲೇಜಿನ ಉಪನ್ಯಾಸಕ ಮಂಡಲಿಗಳು, ಈ ಪ್ರಚಾರ ಮಂಡಲಿಗಳು ತಮ್ಮ ಪ್ರತಿನಿಧಿಗಳನ್ನು ಕಳಿಸುವುದು; ಅದರಲ್ಲಿ ಒಬ್ಬ ಡಾಕ್ಟರ್, ಒಬ್ಬ ವ್ಯವಸಾಯತಜ್ಞ, ಉಪನ್ಯಾಸಕರು, ಆರ್ಥಿಕಜೀವನಕ್ಕೆ ಸಂಬಂಧಿಸಿದ ಸಂಗತಿಗಳನ್ನು ಸಂಗ್ರಹಿಸುವವರು; ಒಬ್ಬರೊ ಇಬ್ಬರೊ ಶ್ರದ್ಧಾವಂತ ವಿದ್ವಾಂಸರು, ಗಮಕಿಗಳು – ಹೀಗೇ ಇನ್ನಿಬ್ಬರು ಮೂವರು – ಎಂದು ಗೊತ್ತುಮಾಡತಕ್ಕದ್ದು. ಅವರು ಪ್ರಚಾರಕಾರ್ಯಮಾಡಿ, ಈಗಿನ ಕಾಲದ First Aid ಮುಂತಾದವುಗಳ ಉಪಯೋಗವನ್ನು ಬೋಧಿಸಿ, ಶಕ್ಯವಾದರೆ ಊರಿನ ರಸ್ತೆ ದೀಪ ಹಾಕುವುದು, ಗಲೀಜು ನಿರ್ಮಲೀಕರಣಕ್ಕೆ ನೆರವಾಗಿ, ಬಾವಿಗಳಿಲ್ಲದ ಕಡೆ ಬಾವಿಗಳನ್ನು ತೋಡಿಸಿ, ಕುಡಿಯುವ ನೀರಿನ ಸೌಕರ್ಯಗಳನ್ನು ಒದಗಿಸಲು ಆಯಾ ಊರಿನವರಿಗೆ ಪ್ರಚೋದನೆ, ನೆರವು ಕೊಟ್ಟು ಅದಕ್ಕೆ ಬೇಕಾದ ಹೆಚ್ಚು ಹಣ ಸರ್ಕಾರ ಕೊಡಬೇಕೆಂದು ಸಲಹೆ ಮಾಡಿ, ಆಯಾ ಸ್ಥಳಗಳಲ್ಲಿ ವ್ಯವಸಾಯದ, ಕೈಗಾರಿಕೆಯ ಮೂಲ ಸಾಮಗ್ರಿ ಹೇಗಿದೆ? ಜನರ ಸಾಮರ್ಥ್ಯ ಏನು? ಸಂತೆಯಲ್ಲಿ ಮಾರಾಟವಾಗುವ ಸರಕುಗಳೇನು? ಎಷ್ಟು ಅಲ್ಲಿಂದ ದುಡಿಸಬಹುದು? ಎಷ್ಟು ಎಂಥೆಲ್ಲ ಹೊರಗಿಂದ ಅಲ್ಲಿಗೆ ಬರಬೇಕಿದೆ? ಹೊಸ ಉದ್ಯೋಗಗಳನ್ನು ಹೇಗೆ ಸ್ಥಾಪಿಸಿ ವ್ಯವಸ್ಥೆ ಮಾಡಬಹುದು? – ಮುಂತಾದ ಕಾರ್ಯಗಳ ಕನಸಿನ ನಕ್ಷೆಗಳನ್ನು ಮಾಡಬಹುದು? – ಎಂಬುದೆಲ್ಲ ಒಳಗೊಂಡಿರುತ್ತಿತ್ತು. ಜೊತೆಗೆ ಇಂಟರ್ ಪರೀಕ್ಷೆಗೆ ಮೇಲ್ಪಟ್ಟು ಯಾರು ಯಾರು ಕೆಲಸವಿಲ್ಲದಿರುತ್ತಾರೊ ಯಾರು ಯಾರು ಒಡನೆ ಕೆಲಸಕ್ಕೆ ಸಿದ್ಧರಿರುತ್ತಾರೊ – ಅಂಥವರೆಲ್ಲ ಇದಕ್ಕೆ ಸೇರಿಕೊಂಡು ದೇಶವನ್ನೆಲ್ಲ ಸಂಚಾರ ಮಾಡಿ, ಈ ಕೆಲಸದಿಂದ ನಾಡಿನ ಜೀವನವನ್ನು ಅರ್ಥಮಾಡಿಕೊಳ್ಳಬೇಕು; ಅವರಿಗೆಲ್ಲ ಮೂರು ತಿಂಗಳು ಶಿಕ್ಷಣಕೊಟ್ಟು ಈ ಕೆಲಸ ಒಪ್ಪಿಸಬೇಕು; ರಿಟೈರ್ ಆಗುವ ಜನರ ಅವಕಾಶ ದೊರೆತಂತೆಲ್ಲ ಹೊಸದಾಗಿ ಉದ್ಯೋಗ ಏರ್ಪಡಿಸಲು ಸರ್ಕಾರವೊ ಇತರ ಸಂಸ್ಥೆಗಳೊ ಏರ್ಪಡಿಸಿ ಇವರನ್ನು ಆಯಾ ಕಾರ್ಯಗಳಿಗೆ ನೇಮಿಸಿಕೊಳ್ಳಬಹುದು. ಅವರೆಗೆ ಈ ಕೆಲಸದಲ್ಲಿ ತೊಡಗಿರುವವರಿಗೆ

ಐವತ್ತರಿಂದ ನೂರು ರೂಪಾಯಿವರೆಗೂ – ಆಗಿನ ಕಾಲಕ್ಕೆ ಅವು ದೊಡ್ಡ ಸಂಬಳಗಳು – ದೊಡ್ಡ ಪ್ರಮಾಣದಲ್ಲಿ ಕೊಡಬಹುದೆಂದು ಏನೇನೊ ಕನಸುಗಳಂಥ ಸೂಚನೆ ಮಾಡಲಾಗಿತ್ತು. ಇಂಥದಕ್ಕೆ ಕಾಲವಿನ್ನೂ ಒದಗಿಬಂದಿರಲಿಲ್ಲ. ಇದು ಆಗ್ಗೆ ಕನಸಾಗಿಯೇ, ಲೋಕವರಿಯದ ಯೋಜನೆಯೇ ಆಗಿ ಉಳಿಯಿತು. ಇಂಥ ಕೆಲಸ ದೇಶಕ್ಕೆ ಸ್ವಾತಂತ್ರ್ಯ ಬಂದು 'ಪ್ಲಾನಿಂಗ್ ಮತ್ತು ಕಮರ್ಷಿಯಲ್ ಡಿಪಾರ್ಟ್‌ಮೆಂಟ್' ಮುಂತಾದ ವ್ಯವಸ್ಥಾಪನೆಗೆ ಕಾಯಬೇಕಿತ್ತು. ಆಮೇಲೆ ಮೊದಲು ಅಮೆರಿಕದವರು ಕೊಟ್ಟ ಒಂದು ಹಣದ ಪ್ರೋತ್ಸಾಹ, ತಾಂತ್ರಿಕ ನೆರವುಗಳಿಗೆ ಕಾಯಬೇಕಿತ್ತು! ಶ್ರೀನಿವಾಸರಾಯರನ್ನು ನೆನೆಸಿಕೊಂಡಾಗಲೆಲ್ಲ ನನಗೆ ಮೂಲೆಯಲ್ಲಿ ಕುಳಿತು ದುರ್ಬಲರಾದ ಪ್ರಭಾವಶಾಲಿಗಳಲ್ಲದ ಜನ ಯಾವ ಬಗೆಯ ಕಲ್ಪನೆಗಳನ್ನು ನೆಯ್ದುಕೊಳ್ಳಬಹುದೊ – ಅಂಥದನ್ನು ನೆನಸಿಕೊಳ್ಳುವ ಅವಕಾಶ ಬರುತ್ತದೆ. ತಮ್ಮ ಮಿತಿಯಲ್ಲಿ ಅವರು ದೊಡ್ಡ ಬದುಕನ್ನು ಬದುಕಿದರು. ತಾವು ಮಾಡಿದ ಕೆಲಸದಲ್ಲಿ ಪ್ರಾಮಾಣಿಕವಾಗಿ ಆಸ್ಥೆ ವಹಿಸಿ ಉದಾರಚರಿತರಾಗಿ ತಮ್ಮ ಕೆಲಸವನ್ನು ಮಾಡಿ ಕೃತಾರ್ಥರಾದರು. ವಿವೇಕಾನಂದರು ತಮ್ಮ 'Modern India' ಎಂಬ ಲೇಖನದ ಕಡೆಗೆ ದೊಡ್ಡ ಸ್ಫೂರ್ತಿಯುತ ಪ್ಯಾರ ಬರೆದು, 'Make me a man' ಎಂದು ಮುಗಿಸುತ್ತಾರೆ. ಇಂಥವರು ಮಾತ್ರ 'Man' ಎಂಬ ಹೆಸರಿಗೆ ತಕ್ಕವರು.

ಕೋಟ ಶಿವರಾಮ ಕಾರಂತ

ಕಾರಂತರು ದಕ್ಷಿಣ ಕನ್ನಡ ಜಿಲ್ಲೆಯ ಕುಂದಾಪುರದ ಬಳಿ ಇರುವ ಕೋಟದಲ್ಲಿ ಹುಟ್ಟಿದವರು. ಅವರ ತಂದೆ ಶೇಷ ಕಾರಂತರು. ಊರಲ್ಲಿ ಬಹು ಗಣ್ಯ ವ್ಯಕ್ತಿ. ಬ್ರಾಹ್ಮಣರ ಕೂಟ ಪ್ರಬಲವಾಗಿದ್ದ ಸ್ಥಳ ಅದು. ಅವರು ಸ್ಮಾರ್ತಬ್ರಾಹ್ಮಣ ಸಂಪ್ರದಾಯಕ್ಕೆ ಸೇರಿದವರು. ಹೊರಗಿನ ಯಾವುದಾದರೂ ಮತಕ್ಕೆ ವಿನಯವನ್ನು ಸಲ್ಲಿಸಿರಬಹುದೇ ಹೊರತು ತಮಗೆ ಸಂಬಂಧಿಸಿದ ಎಲ್ಲ ಸಾಮಾಜಿಕ, ಧಾರ್ಮಿಕ ವ್ಯವಹಾರಗಳನ್ನು ತಮ್ಮಲ್ಲಿಯೇ ನಿರ್ಣಯಿಸಿಕೊಳ್ಳುವ ಜನ. ಸೋದರರು ಸುಮಾರು ಏಳು ಮಂದಿ, ಇಬ್ಬರು – ಮೂವರು ಸೋದರಿಯರು ಮಕ್ಕಳಾಗಿ ಉಳ್ಳ ದೊಡ್ಡ ಸಂಸಾರ ಶೇಷ ಕಾರಂತರದು. ಮೊನ್ನೆ ಮೊನ್ನೆಯವರೆಗೂ ತಾಯಿ–ತಂದೆಯರು ಮಕ್ಕಳ ಆಗು–ಹೋಗುಗಳನ್ನೆಲ್ಲ ನೋಡಲು ಉಳಿದಿದ್ದರು. ಆ ಮನೆಯಲ್ಲಿ ಹುಟ್ಟಿದ ಗಂಡುಮಕ್ಕಳೆಲ್ಲ ಒಂದಲ್ಲ ಒಂದು ರೀತಿಯ ವಿಶಿಷ್ಟ ಲಕ್ಷಣ, ಶಕ್ತಿ, ಸಾಮರ್ಥ್ಯ ಉಳ್ಳವರು; ಸ್ವಾಭಿಮಾನಶಾಲಿಗಳು.

ನನಗೆ ಶಿವರಾಮ ಕಾರಂತರ ಪರಿಚಯವಾದುದು ಸುಮಾರು ೧೯೨೮–೨೯ರಲ್ಲಿ. ಅವರೆಗಾಗಲೇ ಅವರು ಹೈಸ್ಕೂಲು ವ್ಯಾಸಂಗ ಮುಗಿಸಿ, ಇಂಟರ್ ಮೀಡಿಯಟ್ ತರಗತಿಯಲ್ಲಿದ್ದರೊ ಏನೊ. ೧೯೨೧ರಲ್ಲಿ ಗಾಂಧೀಜಿ ಸತ್ಯಾಗ್ರಹವನ್ನೂ ಅಸಹಕಾರ ಚಳವಳಿಯನ್ನೂ ಆರಂಭಿಸಿದಾಗ ಭಾರತದ ಅನೇಕ ಪ್ರದೇಶಗಳ ವಿದ್ಯಾರ್ಥಿಗಳಂತೆ ಶಾಲೆ–ಕಾಲೆಜ್‌ಗಳ ಶಿಕ್ಷಣ ವ್ಯಾಸಂಗ ಬಿಟ್ಟು ನಾಡಿನ ಸ್ವಾತಂತ್ರ್ಯ ಸಾಧನೆಗೆ ನೆರವಾಗುವ ಕಾರ್ಯಗಳಲ್ಲಿ ತೊಡಗಿದರು. ಇವರು ಶ್ರೀ ಎನ್. ಎಸ್. ಹಾರ್ಡಿಕರ್ ಅವರ ಸೇವಾದಳಕ್ಕೂ ಸ್ವಲ್ಪ ಕಾಲ ಸೇರಿದ್ದರೆಂದು ಕೇಳಿದ್ದೇನೆ. ಹಾಗೆಯೇ ಬ್ರಹ್ಮಚರ್ಯ ಸಾಧನೆಗಾಗಿಯೂ ಬೋಧನೆಗಾಗಿಯೂ ನಾಡ ಮೇಲೆಲ್ಲ ಸಂಚಾರ ಮಾಡಿದ್ದರಂತೆ. ಅನೇಕ ಪತ್ರಿಕೆಗಳಲ್ಲಿ ಬರೆದಿದ್ದರು. ನಾಲ್ಕಾರು ಗ್ರಂಥಗಳನ್ನೂ ಅವರೆಗೆ ಪ್ರಕಟಿಸಿದ್ದರು. 'ವಸಂತ'ವೆಂಬ ಪತ್ರಿಕೆ ನಡಸಿ ಭಾರತೀಯ ಚಿತ್ರಕಲೆಗೆ ಸಂಬಂಧಿಸಿದ ಚಿತ್ರಗಳನ್ನು ಅಲ್ಲಿ ಪ್ರತಿಪಾದಿಸಿದ್ದರು. ಕಲೆಯನ್ನು ಕುರಿತ ಲೇಖನಗಳನ್ನು ಬರೆದಿದ್ದರು. ಪತಿತರ ಉದ್ಧಾರವೆಂಬ ಕಾರ್ಯದಲ್ಲಿ ಕೆಲವು ಮನೆಗಳವರಿಗೆ ನೆರವು ಕೊಟ್ಟು ಅವರನ್ನು ಸಂಸಾರಗಳಲ್ಲಿ ಸ್ಥಾಪಿಸಿ ಅವರು ಮರ್ಯಾದೆಯಿಂದ ಬಾಳಲು ನೆರವು ಕೊಟ್ಟಿದ್ದರು. ಬಗಲಿಗೆ ಕ್ಯಾಮರಾ ಹಾಕಿಕೊಂಡು ನಾಡಿನ ಮೇಲೆಲ್ಲ ಸುತ್ತಾಡಿ ಶಿಲ್ಪ, ಚಿತ್ರ, ವಾಸ್ತು ಕೃತಿಗಳಿಗೆ ಪ್ರಖ್ಯಾತವಾದ ಸ್ಥಳಗಳಿಗೆಲ್ಲ ಹೋಗಿ ಫೋಟೋಗಳನ್ನು ತಂದಿದ್ದರು. ಹೀಗೆ ಸುತ್ತಾಡುವಾಗ ಅನೇಕ ಸ್ಥಳಗಳ, ಅನೇಕ ಜನರ ಪರಿಚಯ, ಸಾಹಚರ್ಯ, ಸ್ನೇಹ ಸಿಕ್ಕಿದವು. ಕರೆನಾಡಿನ ಒಂದು ಪ್ರದೇಶದಲ್ಲಿ ಹುಟ್ಟಿ ಬೆಳೆದ ಒಂದು ಜೀವ ಹೀಗೆ ನಾಡಿನ ಪ್ರದಕ್ಷಿಣೆ ಮಾಡಿ, ತಾನು ನುಡಿದು, ಇತರರು ನುಡಿದುದನ್ನು ಕೇಳಿ, ತಾನು ಮಾಡಿ, ಇತರರು ಮಾಡಿದ್ದನ್ನು ನೋಡಿ, ಮುಂದೆ ಬಾಳಲು ಎಲ್ಲ ಸಿದ್ಧತೆಗಳನ್ನೂ ಮಾಡಿಕೊಳ್ಳುವ ಯೋಗ್ಯತಾ ಸಂಪಾದನೆ ಅವರ ಪಾಲಿಗೆ ಬಂದು,

ಅವರ ಎಲ್ಲ ಅನುಭವಕ್ಕೂ ಆಲೋಚನೆಗೂ ತಳಹದಿಯಾಯಿತು. ತಮ್ಮ ಪ್ರದೇಶದಲ್ಲಿ ಜಾನಪದ ಕಲೆಯಾಗಿರುವ ಯಕ್ಷಗಾನದ ವಿಷಯದಲ್ಲಿ ಅವರಿಗೆ ಮೊದಲಿಂದಲೂ ಉಮೇದು. ಹಾಗೆಯೇ ಸುತ್ತಮುತ್ತಲ ಜನಗಳಲ್ಲಿ ಬಳಕೆಯಲ್ಲಿರುವ ಭೂತಪೂಜೆ, ಕೋಲಗಳ ಕತೆಗಳೆಲ್ಲ ಅವರಲ್ಲಿ ಸಂಗ್ರಹವಾದವು. ಯಾವ ಯಾವ ಭೂತ ಎಲ್ಲಿಂದ ದಕ್ಷಿಣ ಕನ್ನಡ ಜಿಲ್ಲೆಗೆ ಬಂದಿತು; ಅದರ ಸ್ವರೂಪ, ಕ್ರಿಯಾತಂತ್ರ, ಆರಾಧನೆ, ಸಮಾಧಾನ ಹೇಗೆ? –ಎಂಬ ಸಂಗತಿಯೆಲ್ಲ ಅರಿವಾಯಿತು. ಇದರ ಕಲಾಪ ಬಹುಬಗೆಯದು. ಯಾವುದೊ ಭೂತ ಪ್ರಸಂಗವನ್ನು ಚಲಚ್ಚಿತ್ರ ರೂಪದಲ್ಲಿ ರಚಿಸಿ ಅದನ್ನು ತಮ್ಮ ಬಳಿ ಇಟ್ಟುಕೊಂಡಿದ್ದರು. ಒಂದು ದುರದೃಷ್ಟಕರ ಸಂದರ್ಭದಲ್ಲಿ ಅದಕ್ಕೆ ಬೆಂಕಿ ತಗುಲಿ, ಅದು ಸುಟ್ಟು ಹೋಯಿತೆಂದು ಕೇಳಿದ್ದೇನೆ.

ನಾನು ಬೆಂಗಳೂರಿಗೆ ಮೈಸೂರಿಂದ ಹಿಂದಿರುಗಿ ಬಂದು ಕಾಲೇಜಲ್ಲಿ ಉಪಾಧ್ಯಾಯನಾದಾಗ ಒಂದು ದಿನ ಮಧ್ಯಾಹ್ನ ಅವೆನ್ಯೂ ರೋಡಲ್ಲಿ ಅವರನ್ನು ಕಂಡು ಪರಸ್ಪರ ಪರಿಚಯ ಆರಂಭವಾಯಿತು. ಎರಡನೆಯ ದಿನ ಅವರು ನನ್ನ ಮನೆಗೆ ದಯಮಾಡಿಸಿ ನನ್ನ ಆಲ್ಪಾತಿಥ್ಯವನ್ನು ಸ್ವೀಕರಿಸಿದರು. ಆ ಕಡೆಯ ಯಾವುದೊ ಒಂದು ನಾಟಕ ಕಂಪನಿಯವರ ಬೀಡಾರದಲ್ಲಿ ಅವರಿದ್ದು – ಮೊದಲು ಗರೂಡ ಸದಾಶಿವರಾಯರ ಕಂಪನಿಯಲ್ಲಿದ್ದು ಆ ಬಳಿಕ ಸ್ವತಂತ್ರಮಂಡಲಿಯನ್ನು ಸ್ಥಾಪಿಸಿಕೊಂಡಿದ್ದ ಸೀತಾರಾಮ ಎಂಬವರೊ ಏನೊ – ತಾವು ಬರೆದಿದ್ದ 'ಕಠಾರಿ ಭೈರವ' ಎಂಬ ನಾಟಕವನ್ನೂ, 'ಹ್ಯಾಮ್ಲೆಟ್' ಕನ್ನಡದ ಅನುವಾದದಲ್ಲಿನ ಅಷ್ಟಿಷ್ಟು ಭಾಗಗಳನ್ನೂ ನನಗೆ ಓದಿ ಆದಿನ ತೋರಿದ ಸ್ನೇಹ ಈವರೆಗೂ ನಡೆದುಕೊಂಡು ಬಂದಿರುವುದು ನನ್ನ ಭದುಕಿನ ಒಂದು ಸಂತೋಷವಾಗಿದೆ. ಈ ೪೦–೪೨ ವರ್ಷಗಳಲ್ಲಿ ಅವರ ಶಕ್ತಿ, ಗೆಯ್ಮೆ ಕೀರ್ತಿ, ಚಾರಿತ್ರ್ಯ ಕನ್ನಡ ರಾಜ್ಯದ ಮೇರೆಗಳನ್ನು ಮೀರಿ ಭರತಖಂಡಗಳಲ್ಲಿ ಪ್ರಖ್ಯಾತವಾಗಿದೆ. ಎಷ್ಟು ಬಗೆಯ ಕೆಲಸ! ನಾಡ ಒಳಗೆ ಹೊರಗೆ ಎಷ್ಟು ಕಡೆ ಸಂಚಾರ! ಬಹುತರ ತನ್ನ ಬಾಳಿನ ಪ್ರತಿದಿನವನ್ನೂ ಸಾರ್ಥಕವಾಗಿ ವಿನಿಯೋಗಿಸಬೇಕು, ದಿನದಿನಕ್ಕೆ ಅದರ ವ್ಯಾಪ್ತಿಯೂ ಅರ್ಥವಂತಿಕೆಯೂ ಪ್ರಯೋಜನವೂ ಹೆಚ್ಚಾಗಬೇಕು ಎಂಬ ಆಕಾಂಕ್ಷೆಯನ್ನು ಮೊದಲಿಂದಲೂ ಬೆಳಸಿದವರು ಅವರು. ಭಾರತವೊಂದರಲ್ಲಿಯೇ ಅಲ್ಲದೆ ಯೂರೋಪಿನ ಹಲವು ದೇಶಗಳಿಗೆ ಸ್ವಂತ ಖರ್ಚಿನಲ್ಲಿ ಹೋಗಿ ಅಲ್ಲಿನ ಜೀವನ ಸ್ಥಿತಿಯನ್ನು ಅರಿತು ಬಂದರು; ಒಂದು ತಾರತಮ್ಯ ಜ್ಞಾನಕ್ಕೂ ತೋಲನಕ್ಕೂ ಇದು ಬಹು ದೊಡ್ಡ ಅವಕಾಶವಾಯಿತು.

ಮೊದಲಿಂದಲೂ ಅವರು ಸ್ವಂತಕ್ಕೆ ಏನನ್ನೂ ಬಯಸಿದವರಲ್ಲ. ಯಾವುದೊ ಒಂದು ಸಮಯದಲ್ಲಿ ಸಾಮಾನ್ಯ ಪಂಚೆ, ತೊಟ್ಟ ಬನಿಯನ್, ಒಂದು ಚೌಕ ಅವುಗಳ ಜೊತೆ ಒಂದಷ್ಟನ್ನು ಮಾತ್ರ ಚೀಲದಲ್ಲಿ ಹಾಕಿಕೊಂಡು ಮನೆಯಿಂದ ಹೊರಟು ಬಂದರೆಂದು ಕೇಳಿದ್ದೇನೆ. 'ಕ್ರಿಯಾಸಿದ್ಧಿಃ ಸತ್ವೇ ಭವತಿ ಮಹತಾಂ; ನ ಉಪಕರಣೇ' ಎಂಬ ಮಾತಿದೆ. ಸಾಧನ, ಸಜ್ಜು, ಉಪಕರಣ ಇದ್ದರೆ ಸಂತೋಷವೇ; ಅವುಗಳ ನೆರವು ಉಂಟು, ಉಪಯೋಗಿಸಿಕೊಂಡರೆ – ಉಪಯೋಗಿಸಿಕೊಳ್ಳಬಲ್ಲವರ ಕೈಯಲ್ಲಿ. ದುಷ್ಟರ ದುರ್ಮಾರ್ಗಿಗಳ ಕೈಯಲ್ಲಿ ಅವುಗಳಿಂದ ಒಳಿತಿಗಿಂತ ಕೇಡಾಗುವುದೇ ಹೆಚ್ಚು. ಯಾರಲ್ಲಿ ಅಂತಃಸತ್ವ ಒಳಿತರ

ಕಡೆಗೂ ಪ್ರಯೋಜಕತೆಯ ಕಡೆಗೂ ಹಾಯುವುದೊ ಅಲ್ಲಿ ವ್ಯಕ್ತಿಗುಣವೇ ವ್ಯಕ್ತಿಶಕ್ತಿಯೇ ಗೆಳಿತನಗಳನ್ನು ಸಂಪಾದಿಸಿಕೊಳ್ಳುತ್ತವೆ; ತಮ್ಮ ಕ್ರಿಯಾವರಣಗಳನ್ನೂ ಸಾಧನಗಳನ್ನೂ ನಿರ್ಮಾಣ ಮಾಡಿಕೊಳ್ಳುತ್ತವೆ. ಹತ್ತು ಜನಗಳನ್ನು ಕಟ್ಟಿ ತಾನು ನಿಂತ ನೆಲೆಯಲ್ಲಿ ಕೆಲಸಗಳನ್ನು ಮಾಡುತ್ತವೆ; ಮಾಡಿಸುತ್ತವೆ. ತನ್ನ ಕೈ ಮನಸ್ಸು ನಡೆಯುವುದರಿಂದ ಪ್ರಭಾವಗಳನ್ನೂ, ಪ್ರಭಾವಕೇಂದ್ರಗಳನ್ನೂ ಸ್ಥಾಪಿಸಿಕೊಳ್ಳುತ್ತವೆ. ಇಂಥ ಬದುಕು ನೇರವಾಗಿ ಪರೋಕ್ಷವಾಗಿ ಕಾರಂತರದಾಯಿತು. ಅವರ ಜಿಲ್ಲೆಯಲ್ಲಿ ಅವರರಿಯದ ದೊಡ್ಡವರೂ ಚಿಕ್ಕವರೂ ಇಲ್ಲವೆನ್ನುವಷ್ಟರ ಮಟ್ಟಿಗೆ ಅವರ ಪರಿಚಯ ಮಂಡಲ ಹಬ್ಬಿದೆ. ಈ ಕನ್ನಡ ನಾಡಿನಲ್ಲಿ ಸಾಮಾನ್ಯ ಹೆಸರು ಪಡೆದವರೆಲ್ಲರ ಗೆಳಿತನ ಅವರಿಗಿದೆ. ಬೊಂಬಾಯಲ್ಲಿ, ಇಂದು ದೆಹಲಿಯಲ್ಲಿ ಅವರ ಮಿತ್ರ ಮಂಡಲಿ ದೊಡ್ಡದು. ಇದಕ್ಕೆ ಹೂಡಿದ ಬಂಡವಾಳ ಅವರ ಯೋಗ್ಯತೆ, ಶೀಲಸಂಪತ್ತಿ, ಸೌಜನ್ಯ ಮತ್ತು ಕ್ರಿಯಾಸಾಮರ್ಥ್ಯ. ಹಸನ್ಮುಖಿ ಬರವಣಿಗೆ, ಮಾತುಗಳ ಮೂಲಕ ಕಲೆ, ವಿದ್ಯೆ ಮತ್ತು ಸಂಸ್ಕೃತಿ ಪ್ರಚಾರಕಾರ್ಯ– ಈ ಮೂರೂ ಅವರು ಕೈಕೊಂಡ ಕ್ರಿಯಾಮಂಡಲದ ಅಂಗಗಳು. ಅದಕ್ಕಾಗಿ ಅವರು ಹಗಲು ಇರುಳು ವಿಶ್ರಾಂತಿ ಇಲ್ಲದೆ ದುಡಿದಿದ್ದಾರೆ.

ಒಂದು ಸ್ವಯಂ ಸೇವಕ ಮಂಡಲಿಯ ತರಬೇತಿ ಶಿಬಿರದಲ್ಲಿ ಮೊದಲು ಅವರ ಜಿಲ್ಲೆಯಲ್ಲಿ ನಾನು ಅವರನ್ನು ಕಂಡದ್ದು. ಅಲ್ಲಿ ತಯಾರಾದ ಸ್ವಯಂ ಸೇವಕರೆಲ್ಲ ಗೆಳಿಯರಂತೆ, ಭಕ್ತರಂತೆ ಇವರು ಏನು ಹೇಳಿದರೆ ಅದನ್ನು ಮಾಡಲು ಸದಾ ಸಿದ್ಧರಾಗಿದ್ದವರು. ಇವರಿಗೆ ಒಲಿದವರು. ಸುಮಾರು ಹತ್ತು ವರ್ಷಗಳ ಕಾಲ ಪುತ್ತೂರಿನಲ್ಲಿ ಕಾರಂತರು ಅಲ್ಲಿನ ಮಿತ್ರವೃಂದದ ಸಹಾಯದಿಂದ ದಸರಾ ಉತ್ಸವವನ್ನು ನಡಸಿದರು. ದಸರಾ ಸಮಾರಂಭದಲ್ಲಿ ದುಡಿದರು. ಊಟ ನಿದ್ರೆ ಯಾವಾಗ ಮಾಡುತ್ತಿದ್ದರೊ ಅರಿಯುವುದು ಕಷ್ಟವಾಗುವಷ್ಟು ಮಟ್ಟಿಗೆ ಅಗಿನ ದುಡಿಮೆ. ಯಾವುದು ಅವರ ಕೆಲಸ, ಯಾವುದಲ್ಲ! ಎಲ್ಲಿಂದರಲ್ಲಿ ಹೇಗೆಂದರೆ ಹಾಗೆ ಮಲಗಬಲ್ಲ, ಯಾವಾಗೆಂದರೆ ಆಗ ಎಚ್ಚರವಾಗಬಲ್ಲ ಅವರ ಶಕ್ತಿ ಅಸಾಮಾನ್ಯವಾದ್ದು. ಮರದ ಅಡಿ, ದೇವಸ್ಥಾನದ ಮೆಟ್ಟಿಲ ಮೇಲೆ, ಶಾಲೆಯ ಒಂದು ಬೆಂಚು, ಯಾರದೊ ಪಡಸಾಲೆ ಯಾವುದೂ ಸಾಕು; ಹಾಸಿಗೆ ಹೊದ್ದಿಕೆಗಳ ಅಗತ್ಯವಿದ್ದುದನ್ನು ಆ ಕಾಲದಲ್ಲಿ ನಾನು ಕಾಣೆ. ಏನಿದ್ದರೆ ಅದು, ಹೇಗಿದ್ದರೆ ಹಾಗೆ. ಯಾವ ಕೆಲಸ ನಡೆಯಬೇಕಾದರೂ ಅದೇ ಸೂತ್ರ, ಮಂತ್ರ. ಆದರೆ ಕೆಲಸ ನೆರವೇರುತ್ತದೆ. ಆ ಉತ್ಸವಕ್ಕೆ ಕನ್ನಡ ನಾಡಿನ ಎಲ್ಲ ಭಾಗಗಳ ಹಿರಿಯರೂ ಗರುವರೂ ಸಾಹಿತಿಗಳೂ ಕಲೆಗಾರರೂ ವಿದ್ಯಾಧಿಕಾರಿಗಳೂ ವೈದ್ಯರೂ – ಮೇಧಾವಿ ವರ್ಗವೆಲ್ಲ ಬಂದು ಸೇರುತ್ತಿತ್ತು. ಪುತ್ತೂರಿನ ಸ್ನೇಹಿತ ವರ್ಗದಲ್ಲಿ ಐದಾರು ಮಂದಿ ಲಾಯರುಗಳು ಮತ್ತು ಸಿ.ಪಿ.ಸಿ. ಕಂಪನಿಯ ಕುಡುವರಂಥ ಅಧಿಕಾರಿಗಳು ಆಪ್ತವಾಗಿ ಸೇರಿಕೊಂಡು ಈ ಕೆಲಸದ ನೆರವೇರಿಕೆಗೆ ಬೆನ್ನೆಲುಬಿನಂತೆ ಇದ್ದರು. ಇಂಥ ಎಲ್ಲ ಸಮಾರಂಭಗಳಂತೆಯೇ ಇದೂ ಒಂದು ಕಾಲಕ್ಕೆ ನಿಂತಿತು. ಮಾನವಸಹಜವಾದ ಕೆಲವು ಕಾರಣಗಳು ಸಮಷ್ಟಿಯಲ್ಲಿ ಕೆಲಸ ಮಾಡಲು ಒಡ್ಡಿದ ಒಂದೆರಡು ಪ್ರಸಂಗಗಳು ಈ ಉತ್ಸವ ನಿಂತುಹೋಗಲು ಕಾರಣವಾದವು. ಆದರೆ ಅದರ ನೆನಪು ಕನ್ನಡ ನಾಡಿನ ಸ್ನೇಹಿತರಿಗೂ ಪರಿಚಯಸ್ಥರಿಗೂ

ದೊಡ್ಡದಾಗಿ ಉಳಿದಿದೆ. ಕಾರಂತರಿಗೇ ಅದರಿಂದ ಬಂದ ಅನುಭವ ಅವರ ಮನಸ್ಸಿನ ರೀತಿಯನ್ನೂ ಯಾವುದೊ ಹದವನ್ನೂ ತನ್ನದೇ ಆದ ಎರಕಕ್ಕೆ ತಿರುಗಿಸಿದೆ : ಈ ಎರಕ ಸೆತೆದದ್ದಲ್ಲ, ಕನಿಷ್ಠವಲ್ಲ; ಬೇಕಾದ ಬನಿಯನ್ನು ಬಾಳಿಗೆ ತಂದುಕೊಟ್ಟು ಅದಕ್ಕೆ ವೈವಿಧ್ಯವನ್ನು ತಂದುಕೊಟ್ಟದ್ದು.

ಪುತ್ತೂರಿನ ಹೊರವಲಯದಲ್ಲಿ 'ಬಾಲವನ'ವೆಂಬುದನ್ನು ಕಟ್ಟಿ ಅಲ್ಲಿ ಅವರು ಸಣ್ಣ ಮಕ್ಕಳ ವಿದ್ಯಾ ಶಿಕ್ಷಣ ಕೇಂದ್ರವನ್ನು ಸ್ಥಾಪಿಸಿದರು. ತಮಗೆ ಅದನ್ನು ಸಹಜ, ಕ್ರಿಯಾತ್ಮಕ ಎಂಬ ರೀತಿಯಲ್ಲಿ ನಡಸಬೇಕೆಂಬ ಪರೀಕ್ಷಣ ಪ್ರಯೋಗವನ್ನು ಮಾಡಿ ಅದಕ್ಕೆ ಹಲವಾರು ಸಜ್ಜು ಸಹಾಯಗಳನ್ನು ಒದಗಿಸಿಕೊಂಡರು. ವಸ್ತು ಪ್ರಾಣಿ ಮಾಡಿ, ಕೆಲಸಗಳನ್ನು ನೋಡಿ, ಮನಸ್ಸನ್ನು ಕುದುರಿಸಿಕೊಳ್ಳುವ ವಿದ್ಯೆಯೇ ವಿದ್ಯೆ ಎನಿಸಿತ್ತು. ಅಲ್ಲಿ ಒಂದು ಪ್ರಾಣಿಶಾಲೆಯೇ ನಿರ್ಮಾಣವಾಯಿತು. ಆದರೆ ವಿದ್ಯೆಯ ಫಲವಾಗಿ ಜೀವನದ ದಾರಿ ಕಲ್ಪಿಸುವ ಉದ್ದೇಶ ಪ್ರಧಾನವಾಗಿರುವ ನಾಡಿನ ಸನ್ನಿವೇಶದಲ್ಲಿ ಇದಕ್ಕೆ ಸಾಕಷ್ಟು ಉತ್ತೇಜನವೂ ಪ್ರೋತ್ಸಾಹವೂ ದೊರೆಯದಾದುದು ಆಶ್ಚರ್ಯವಲ್ಲ. ಶಾಂತಿನಿಕೇತನದಂಥ ಸಂಸ್ಥೆಯಲ್ಲಿಯೇ ಸರಕಾರದ ಪರೀಕ್ಷೆಗಳಿಗೆ ಸಿದ್ಧ ಮಾಡಿಸಿದ ಹೊರತು ಸಂಸ್ಥೆ ಬಾಳುವ ಮಾರ್ಗ ತೋರದಾಯಿತೆಂದಾಗ ಇದರಲ್ಲಿ ಹೀಗಾಗುವದರಲ್ಲಿ ಏನು ಸೋಜಿಗವಿದೆ?

ತಮ್ಮ ಬರಹಗಳ ಪ್ರಕಟನೆಗೂ ಇತರರ ಕೃತಿಗಳ ಪ್ರಸಾರಕ್ಕೂ ಒದಗಲೆಂದು ಒಂದು ಅಚ್ಚುಕೂಟವನ್ನು ಅಲ್ಲಿಯೇ ಸ್ಥಾಪಿಸಿದರು. ಇತರ ಅಚ್ಚುಕೂಟಗಳಲ್ಲಿನಂತೆಯೇ ರೂಲಿಂಗ್, ಬೈಂಡಿಂಗ್ ವಿಭಾಗಗಳೂ ಅಲ್ಲಿ ಏರ್ಪಟ್ಟವು. ಕೆಲವು ಕಾಲ ಇವೂ ನಡೆದುವು. ವಿಶೇಷವಾಗಿ ಈ ಇಪ್ಪತ್ತು ವರ್ಷಗಳಲ್ಲಿ ಬೆಳೆದ ಕೆಲಸಗಾರರ ಕ್ರಿಯಾವಿಧಾನದ ಪರಿಣಾಮವಾಗಿ ಇದರಲ್ಲಿ ಲಾಭಕ್ಕಿಂತ ನಷ್ಟ ಹೆಚ್ಚೆಂದು ಅವರಿಗೆ ಮಂದಟ್ಟಾಗಿ, ಆ ಕೆಲಸದ ಪ್ರಮಾಣವನ್ನು ಕುಗ್ಗಿಸಿಕೊಳ್ಳಬೇಕಾಯಿತು. ಎರಡನೆಯ ಯುದ್ಧದ ಕಾಲದಲ್ಲಿ ತಮ್ಮ 'ಸಿರಿಗನ್ನಡ ಅರ್ಥಕೋಶ'ವನ್ನು ಅಚ್ಚು ಮಾಡಬೇಕಾದಾಗ ಪುತ್ತೂರು ಕಡೆ ಕಾಗದ ಸಿಕ್ಕದೆ ಅವರು ಮೈಸೂರಿಗೆ ಅದರ ಪ್ರಕಟನೆಗಾಗಿ ಬರಬೇಕಾಯಿತು. ಈಗ 'ಉಷಾ ಪ್ರೆಸ್' ಎಂದಿರುವ ಅಚ್ಚುಕೂಟದ ನಿರ್ಮಾಣಕ್ಕೆ ಅವರೂ ಮನೋಹರ ಗ್ರಂಥ ಮಾಲೆಯ ಜಿ.ಬಿ. ಜೋಶಿಯವರೂ ಈಗ ಆ ಪ್ರೆಸ್ಸಿನ ಮಾಲಕರಾದ ಶ್ರೀ ಹಬ್ಬು ಅವರೂ ಪಾಲುದಾರರಾಗಿ ಅದನ್ನು ನಡಸಿದರು. ಕಡೆಗೆ ಕಾರಂತರು ಅದರಿಂದ ಹೊರಗೆ ಬಂದಾಗ ಒಂದು ಒಡಂಬಡಿಕೆಗೆ ಒಳಪಟ್ಟು ಅದು ಹಬ್ಬು ಅವರ ಕೈಗೆ ಹೋಯಿತು. ಇತ್ತ ಯುದ್ಧ ಕಾಲದಲ್ಲಿ ಕಬ್ಬಿಣಕ್ಕೆ, ಮರಕ್ಕೆ ದೊಡ್ಡ ಗಿರಾಕಿ ಪೇಟೆ ಇದ್ದುದನ್ನು ನೋಡಿ ಒಂದು ಮರದ ವ್ಯಾಪಾರವನ್ನೂ ಹಲಗೆ–ಮುಟ್ಟುಗಳ ಕಾರ್ಯಗಳ ಉದ್ಯಮವನ್ನೂ ಅವರು ಕೈಗೊಂಡರು. ಸ್ವಲ್ಪ ಕಾಲ ಅದೂ ಚೆನ್ನಾಗಿ ನಡೆಯಿತು. ಲೌಕಿಕವಾದ ಯಾವ ಯಾವುದೊ ಕಾರಣಗಳಿಂದ ಅದೂ ನಿಲ್ಲಬೇಕಾಯಿತು..... ಈ ನಡುವೆಯೆಲ್ಲ ಅವರ ದೇಶಸಂಚಾರ ನಡೆಯಿತು; ಜನಸಂಗ್ರಹ ನಡೆಯಿತು; ಅನುಭವ ವಿಸ್ತಾರವಾಯಿತು; ಆಳವಾಯಿತು, ಓದು ಹೆಚ್ಚಾಯಿತು; ಬರವಣಿಗೆ ವಿವಿಧವಾಯಿತು. ಅವರ ಕಲೆಯ ಅಭಿಮಾನ ಪ್ರತಿ ವರ್ಷವೂ ಯಾವ ಯಾವ ಚಳವಳಿ, ಶಕ್ತಿ, ಪ್ರಭಾವ ಎಲ್ಲಿ ಬೆಳೆದರೆ ಅದನ್ನು ಗುರುತಿಸಿ, ಅರಿತು, ಅದನ್ನು ತಮ್ಮ ಮನೋರಂಗಕ್ಕೆ ತಂದುಕೊಳ್ಳಲು ನೆರವಾಯಿತು.

ಈಚಿನ ಕಾಲ ಅವರು ಲೇಖನಗಳನ್ನು ಬರೆದು ಕೀರ್ತಿ ಪಡೆದ ಕಾಲ. ಅವರು ಬರೆಯದ ಪ್ರಕಾರವಿಲ್ಲ; ಅವರದ ನಾಟಕ ಪ್ರಕಾರಗಳಿಲ್ಲ; ಮಾಡದ ಪ್ರಯೋಗಗಳಿಲ್ಲ. ವೃತ್ತಪತ್ರಿಕೆಗಳ ಲೇಖನ, ವಿದ್ಯಾಶಾಲೆಗಳಿಗೆ ಶಿಕ್ಷಣಕ್ಕೆ ಸಂಬಂಧಿಸಿದ, ಸುಮಾರು ಎಲ್ಲ ಭಾಗಗಳಿಗೆ ಸಂಬಂಧಿಸಿದ ಬರಹಗಳು, ಮಕ್ಕಳ ಆಟಪಾಟ ವಿನೋದಗಳಿಗೆ ಸಂಬಂಧಿಸಿದ ಹಾಡು, ಮಾತು ಕೂಡಿದವು ಇತ್ಯಾದಿ. ಮೊದಮೊದಲು ಅವರ ಲೇಖನದಲ್ಲಿ ವ್ಯಂಗ್ಯ ವಿನೋದವಿರುತ್ತಿತ್ತು. ಜನಗಳನ್ನು ಚುಚ್ಚಿ ಮಾತನಾಡುವ ಮನಸ್ಸು, ನಾಲಿಗೆ ಅವರದು. ಆ ಮಾತನ್ನೂ ಧಾರೆಯ ಮೊನೆಯನ್ನೂ ಪೆಟ್ಟನ್ನೂ ತಡೆಯುವುದು ಕಷ್ಟವಾಗಿತ್ತು. ಆದರೆ ಯಾರನ್ನೂ ಮಾತನಾಡಿಸುವರು; ಮಕ್ಕಳಿಂದರಂತೂ ಏನೂ ಮಾಡಿಯಾರು. ಎರಡು ನಿಮಿಷದಲ್ಲಿ ಇವರ ಹೊಸಮುಖ ಮಕ್ಕಳ ಪ್ರೀತಿಯ ಗೆಳೆತನಕ್ಕೆ ಈಡಾಗುತ್ತಿತ್ತು. ಆದರೆ ವ್ಯಂಗ್ಯ ಪರಿಹಾಸ್ಯಗಳ ಹಿಂದೆ ಸೌಹಾರ್ದ ಇದ್ದುದರಿಂದ ಯಾವ ವಿಷ ಮುರಿದುಕೊಳ್ಳುವುದೂ ಶಕ್ಯವಿರುತ್ತಿರಲಿಲ್ಲ. ಮಾತಿನ ಚುರುಕಿನಲ್ಲಿ ದ್ವಂದ್ವಾರ್ಥ, ಪರಿಹಾಸ್ಯವೃತ್ತಿ, ಅಪಾರ್ಥ ಅಥವಾ ಅಣಕ ಮೊದಮೊದಲು ಹೆಚ್ಚಾಗಿರುತ್ತಿತ್ತು. ಜಾಣು, ಚಾಟು, ಅತಿ; ಭಾವ ತುಂಬಾ ತೀಕ್ಷ್ಣ. ತೆಳು ತೊಗಲಿನ ಮಡಿ ಬುದ್ಧಿಯವರಿಗೆ ಹೇಗೆ ಹೇಗೊ ಕಾಣಿಸುತ್ತಿತ್ತು. ಯಾರದೊ ಚಿಕಿತ್ಸೆ ಮೇಹರೋಗಗಳಿಗೆ ರಾಮಬಾಣ; ಇನ್ನೊಬ್ಬರು ನಮ್ಮ ಮಲೆನಾಡು ಹುಲಿಗಳಂತೆ –ತಿನ್ನುವುದಕ್ಕಿಂತ ಕೊಲ್ಲುವುದು ಹೆಚ್ಚು; ಸಾಹಿತಿಗಳು ಸಾಯಿತಿಗಳು; ಸಿನೆಮ ಶನಿಮಾ– ಇಂಥವು ದಿನಕ್ಕೆ ಸಾವಿರ. ಸಮಾಜ ಸಮತಾವಾದದಲ್ಲಿ ತೀವ್ರವಾದ ತೀಕ್ಷ್ಣ ರೀತಿಗಳಿಗೆ ಅವರ ಮನಸ್ಸು ಒಲಿದೀತೇನೊ – ಮುಂದಕ್ಕೆ ಎಂಬ ಕಾಲವಿತ್ತು. ಸುತ್ತಲಿನ ಬಡತನ, ಅನಕ್ಷರತೆ, ನಿರ್ಗತಿಕತೆ, ದೊಡ್ಡವರ ಉದಾರ ಸಹಾಯಕತೆಯ ಕಡೆ ಗಮನ ಹರಿಸದ ಸ್ವಾರ್ಥ, ಕ್ಷುದ್ರತೆ, ನಾಡಿನ ಬದುಕಿನ ಸಾರವನ್ನು ಇದರ ಎಲ್ಲ ಅಂಗಗಳನ್ನೂ ಪೀಡಿಸಿ ಶೋಷಿಸಿ ಸ್ವಪ್ರಯೋಜನ ಪಡೆವ ಸಮಾಜವರ್ಗದ ಆರ್ಥಿಕ ಜೀವನಚಿತ್ರ ಅವರ ಮನಸ್ಸನ್ನು ಸುಡುತ್ತಿತ್ತು. ಒಂದು ವ್ಯಕ್ತಿ ಇಂಥ ಸಂಬಂಧಗಳಲ್ಲಿ ಏನು ಮಾಡಬಹುದು? ಅದರಲ್ಲಿಯೂ ಯಾವ ಇನ್ನೊಂದನ್ನೂ ಲಕ್ಷಿಸದ, ಇನ್ನೊಂದರ ಲೋಪದೋಷಗಳನ್ನು ಸ್ಪಷ್ಟವಾಗಿ ಕಾಣುವ, ಎತ್ತಿ ನುಡಿದು ತೋರಿಸುವ ಹಂಬಲವುಳ್ಳ ಒಂದು ಅಪರಾಧೀನ ಚಿತ್ತವೃತ್ತಿ ಉಳ್ಳ ವ್ಯಕ್ತಿಗಂತೂ ಇದು ಕಷ್ಟವೇ. ತಮ್ಮ ನಡೆ ನುಡಿ ಅನುಭವ ಚಿಂತನ ಸರಿ; ತಮ್ಮ ರೀತಿ ಧರ್ಮ್ಯ. ಇತರರ ಆಲೋಚನೆಗಳನ್ನು ಪರ್ಯಾಲೋಚಿಸಿದ ಮೇಲೆಯೂ ಅದನ್ನು ಒಳಗೆ ಮಾಡಿಕೊಂಡು ತಮ್ಮ ಮಾತು ಮನಸ್ಸು ನಡೆದಿದೆ ಎಂಬ ರೀತಿಯ ಮನುಷ್ಯನ ಒಡನೆ ಇತರರಿಗೆ ಕೆಲಸ ಕಷ್ಟ. ಸಂಘ–ಸಂಸ್ಥೆಗಳೂ ಕಮಿಟಿಗಳೂ ಹೊಂದಿಕೊಂಡು ಹೋಗುವವರೆಗೆ, ಹೋಗುವವರಿಗೆ ಮಾತ್ರ. ಈ ಮನಸ್ಸು ಇನ್ನೊಂದಕ್ಕೆ ಸುಲಭವಾಗಿ ಹೊಂದುವುದಿಲ್ಲ. ಇದಕ್ಕೆ ಇನ್ನೊಬ್ಬರ ಅನುಗ್ರಹ ಬೇಕಿಲ್ಲ; ಇನ್ನೊಬ್ಬರಿಂದ ಪ್ರಯೋಜನಾಕಾಂಕ್ಷೆಯಿಲ್ಲ. ಕವಿ ರವೀಂದ್ರರು ಹೇಳಿದಂತೆ ಇತರರು ಜೊತೆಗೆ ಬಾರದಿದ್ದರೆ 'ಏಕ್ಲ ಚಲೋರೆ' – Going it alone – ಗಾಂಧೀಜಿಯವರದೂ ಇದೇ ಮಾರ್ಗ – ಇತರರು ಜೊತೆಗೆ ಸೇರಿದರೊ ಆಯಿತು; ಇಲ್ಲವೇ ತಾವು ಅದನ್ನು ಮಾಡಿ ಬಿಡುವುದು ಪದ್ಧತಿ. ಕಾಯುವ ಚಿತ್ತವೃತ್ತಿ ಅಲ್ಲ. ವ್ಯವಹಾರ ಮಂಡಲದಲ್ಲಿಯೂ ಇವರ ರೀತಿ

ಹಾಗೆಯೇ ಆಗಬೇಕಾಯಿತು. ಬಹುಕಾಲ ಈ ವಿಕಾಂಗವರ್ತನೆ ಅವರನ್ನೂ ಅವರ ಮನಸ್ಸನ್ನೂ ನಡಸಿತು. ಆದರೆ ಎಂದೇ ಆಗಲಿ, ಅವರು ಹೆಚ್ಚಾಗಿ ಮನುಷ್ಯರನ್ನು ಕಳೆದುಕೊಳ್ಳಲಿಲ್ಲ; ಸ್ನೇಹಗಳನ್ನು ಮುರಿದುಕೊಳ್ಳಲು ಇಷ್ಟಪಡಲಿಲ್ಲ. ಅಭಿಪ್ರಾಯ ರೀತಿಗಳಲ್ಲಿ ಎಷ್ಟೇ ಭಿನ್ನತೆ ಇದ್ದರೂ ವ್ಯವಹಾರ ಜೀವನದಲ್ಲಿ ಪ್ರೀತಿ ವಿಶ್ವಾಸಗಳನ್ನು ಬೆಳಸಿಕೊಂಡರೇ ಹೊರತು ಕಳೆದುಬಿಡಲು ತ್ವರೆಪಡಲಿಲ್ಲ. ಕಡು ಭಿನ್ನಾಭಿಪ್ರಾಯವುಳ್ಳವರಲ್ಲಿಯೂ ಅವರು ಕೆಳಿತನ ಕಳೆದುಕೊಳ್ಳಲಿಲ್ಲ.

ಆದರೆ ಮನಸ್ಸಿನ ಆತುರ ಮಾತ್ರ ಧಾವತಿಗೊಳಿಸುತ್ತಿತ್ತು. ಯಾವುದನ್ನೂ ಮಾಡಬೇಕು; ಬೇಗ ಮಾಡಬೇಕು; ಜೊತೆಗಿನ್ನಾರೂ ಬಾರದಿದ್ದರೆ ತಾನೇ ಹಿಡಿದು ಮಾಡಿ ಮುಗಿಸಬೇಕು – ಎಂಬುದು ಆ ಜೀವದ ಮುಖ್ಯ ಲಕ್ಷಣ. ಅದಕ್ಕೆ ಬೇಕಾದಂತಹ ದೇಹಶಕ್ತಿ, ಮನಸ್ಸಿನ ಏಕಾಗ್ರತೆ, ಕ್ರಿಯಾದಕ್ಷತೆ, ಧಾರಣೆ ಅವರಿಗೆ ದೈವದತ್ತವೆಂಬಂತೆ ಬಂದಿವೆ. ಕೇಳುವವರನ್ನು ಕೇಳಿ, ನೆರವು ಕೊಡುವವರನ್ನು ಒಪ್ಪಿಸಿ, ವಿಷಯಗಳನ್ನು ಸಂಗ್ರಹಿಸಿ ಎಲ್ಲೊ ಒಂದು ಕಡೆ ಕುಳಿತು ವಾರ, ತಿಂಗಳು ಒಟ್ಟಿಗೆ ಬೇರೆ ಇನ್ನೊಂದು ಹವ್ಯಾಸವಿಟ್ಟುಕೊಳ್ಳದೆ "ಬಾಲಪ್ರಪಂಚ"ದಂಥ ಕಾರ್ಯವನ್ನು ಹೇಗೆ ಮಾಡಿದರೊ ಹಾಗೆಯೇ ಉತ್ತರ ಕಾಲದಲ್ಲಿ ವಿಜ್ಞಾನದ ನಾಲ್ಕೈದು ಭಾಗಗಳನ್ನು ಸಾಧಿಸುವುದೂ ಶಕ್ಯವಾಯಿತು. ಜನದ ನೆರವನ್ನು ಸಂಗ್ರಹಿಸಿದರು; ಹಣವನ್ನು ಒದಗಿಸಿಕೊಂಡರು; ಅವರಲ್ಲಿಯೂ ಅಂಥ ಕಾರ್ಯದಲ್ಲಿಯೂ ನೆಚ್ಚಿಕೆ, ಭರವಸೆ ಇದ್ದ ಸ್ನೇಹಿತರು ಅವರಿಗೆ ನೆರವಾಗಿ ನಿಂತರು. ಅವರ ಕಷ್ಟ ನಿಷ್ಠುರಗಳಲ್ಲಿ ಭಾಗವಹಿಸಿದರು. ಅಂಥ ನೆರವು ಎರಡನೆಯ ಮಟ್ಟದ ಕೆಲಸವೆನ್ನಬಹುದು. ಪ್ರಧಾನ ಕಾರ್ಯ ಕೆಲಸವನ್ನು ಮಾಡುವುದು. ಮಾಡುವ ಛಾತಿ ಅವರದು.

ಈ ನಡುವೆ ದೇಶವಿದೇಶಗಳ ಬೇರೆ ಬೇರೆ ಜನ ಅವರ ಶಕ್ತಿ ಸಂಪನ್ನತೆಯನ್ನು ಕೇಳಿ ತಿಳಿದು ಅವರಲ್ಲಿಗೆ ಬಂದು ಅವರ ನೆರವನ್ನು ಬಯಸಿದರು. ವಿಶೇಷವಾಗಿ ಆರ್ನಲ್ಡ್ ಬಾಕೇ ದಂಪತಿಗಳು. ಆ ಸುತ್ತಲೂ ಬೇರೆ ಕಡೆಯೂ ಇದ್ದ ಜಾನಪದ ಗೀತೆಗಳನ್ನೂ ಮತಧರ್ಮಕ್ಕೆ ಸಂಬಂಧಿಸಿದ ಗೀತೆಗಳನ್ನೂ ಕೂಡಿಸಿ ಧ್ವನಿ ಮುದ್ರಣ ಮಾಡಿಕೊಳ್ಳಲು ಶಕ್ಯವಾಯಿತು. ಇಂಥವರೊಬ್ಬರಿದ್ದಾರೆಂದು ಕೇಳಿ ಯೂರೋಪ್, ಅಮೆರಿಕಗಳಿಂದ ಅವರನ್ನು ಹುಡುಕಿಕೊಂಡು ಬಂದು ನೆರವು ಪಡೆಯುವುದು, ಅವರ ಪ್ರಭಾವವನ್ನು ಬೇರೆ ಕಡೆ ಬಿತ್ತರಿಸುವುದು ಶಕ್ಯವಾಯಿತು. ಹೀಗಾಗಿಯೇ ಅವರ ಯಕ್ಷಗಾನದ ಪ್ರಕಟನೆಗೆ ಸ್ವೀಡನಿನ ಪ್ರಶಸ್ತಿ ಬಂದುದು. ಮೂಲಭೂತವಾದ ಕಾರ್ಯಯೋಗ್ಯತೆ ಇಲ್ಲವಾದಲ್ಲಿ ಇಂಥದು ಹೇಗೆ ದೊರೆತೀತು? ಇಷ್ಟೂ ವಿಶ್ವವಿದ್ಯಾನಿಲಯದ ಯಾವ ಡಿಗ್ರಿ ಸಹಾ ಪಡೆಯದಿದ್ದವರಿಗೆ ನಮ್ಮ ದೇಶದಲ್ಲಿ ಸಾಧ್ಯವಾಗುವುದು ದುಸ್ತರ. ಎಂಥ ಮಹಾ ಅಧಿಕಾರಿಕವೆಂಬ ಗ್ರಂಥದಲ್ಲಿಯೂ ಆ ಆ ಭಾಗದಲ್ಲಿ ನಿಪುಣತೆಯನ್ನು ಪಡೆದವರೆಂಬವರು ಏನಾದರೊಂದು ಲೋಪದೋಷ ಕಂಡಾರು. ಹೀಗಿರುವಾಗ ವಿದ್ಯಾಪ್ರಪಂಚದ ಸಾಮಸ್ತ್ಯವನ್ನು ಕುರಿತು ನಮ್ಮ ಜನಕ್ಕೆ ತಿಳಿವಳಿಕೆ ಕೊಡಬೇಕು – ತನಗೆ ತಿಳಿದ ಮಟ್ಟಿಗೆ – ತಾನು ಸಂಗ್ರಹಿಸಿದ ಮಟ್ಟಿಗೆ –ಎಂಬ ಉದ್ದೇಶದಿಂದ ಕೆಲಸ ಮಾಡಿದವರಲ್ಲಿ ಪ್ರಾಜ್ಞರು

ಬೇಕಾದಷ್ಟು ಆಕ್ಷೇಪಗಳೆ ಎತ್ತಿವ್ವಾರು. ಮುಂದಿನವರು, ಮೇಧಾವಿತೆಯಲ್ಲಿ ತನಗಿಂತ ಮೇಲಟ್ಟವರು, ನಾಳೆ ಇನ್ನೂ ಚೆನ್ನಾದ ಕೆಲಸ ಮಾಡಲಿ, ಇದು ಒಂದು ಆರಂಭದ ಕೃತಿ, ಕುರುಡರ ಮಧ್ಯೆ ಒಕ್ಕಣ್ಣ ಮೇಲಲ್ಲವೆ? – ಎಂಬಂತೆ ಪ್ರಾಧಾನ್ಯ ಬಂದರೂ ಸರಿಯೇ – ಎಂಬ ಮನಸ್ಸು ಅದನ್ನು ನಡೆಸಿತು.

ಇವರಿಗೆ ಚಿತ್ರ, ಶಿಲ್ಪ, ಗಾನ, ನಾಟ್ಯ, ನೃತ್ಯಗಳಲ್ಲಿಯೂ ಬಹುವಾಗಿ ಅಭಿರುಚಿಯಿದೆ. ಮೊದಲಿಂದಲೂ ಯಕ್ಷಗಾನ ನೃತ್ಯಕ್ಕಾಗಿ ಅವರು ಅವಿಶ್ರಾಂತರಾಗಿ ದುಡಿದಿದ್ದಾರೆ. ಅದನ್ನು – ಯಕ್ಷಗಾನ – ಒಂದು ಬಾಲೆ ನೃತ್ಯರೂಪಕವಾಗಿ ಪರಿವರ್ತಿಸಿ ಅದಕ್ಕೊಂದು ಹೊಸ ರೂಪ ತಂದುಕೊಟ್ಟಿದ್ದಾರೆ. ಈವರೆಗೂ ಹೊರಗಿನ, ಬೆಳಕಿಗೆ ಬಾರದ ವೈದ್ಯ ಅಥವಾ ನಾಗನೃತ್ಯಾದಿಗಳ ಪರಿಚಯ ಮಾಡಿಕೊಟ್ಟಿದ್ದಾರೆ. ತಾವೇ ಹಲವಾರು ಕಲಾತ್ಮಕ ವಿಷಯಗಳನ್ನು ನೃತ್ಯಗಳಾಗಿ ಅಳವಡಿಸಿ, ವ್ಯಕ್ತಿಶವಾಗಿಯೂ ಸಂಸ್ಥೆಗಳನ್ನು ಕಟ್ಟಿಕೊಂಡೂ ಬೇರೆ ಬೇರೆ ನೃತ್ಯ ಪ್ರದರ್ಶನಗಳನ್ನು ಕೊಟ್ಟಿದ್ದಾರೆ. ಇವು ಶುದ್ಧವೆ, ಅಶುದ್ಧವೆ? ಅಚ್ಚ ಸಂಪ್ರದಾಯಕ್ಕೆ ಸೇರುತ್ತವೆಯೆ, ಇಲ್ಲವೆ? ಎಂಬ ದೃಷ್ಟಿಯಿಂದ ನೋಡಿದರೆ ಅವುಗಳ ಮೇಲಿನ ಅಚ್ಚು ಅವರವೇ. ಆದರೆ ಆಯಾ ಸನ್ನಿವೇಶಗಳಿಗೆ ಆ ಯತ್ನ ಸಾಧಕವಾಗಿರುವುದು ಕಂಡುಬರುತ್ತದೆ. ಯಾವುದನ್ನು ರೂಪಿಸಿ ತೋರಿಸಬೇಕೆಂದು ಬಯಸುತ್ತದೆಯೊ ಅದನ್ನು ಸಾಧಿಸುತ್ತದೆ. ಲೋಕದಲ್ಲಿ ಇಂದು ಯಾವುದು ಶುದ್ಧವೊ, ಯಾವುದು ಮಿಶ್ರವೊ, ಶುದ್ಧ ಮಿಶ್ರಗಳಿಂದು ಕರೆದುಕೊಳ್ಳುವ ಎಲ್ಲವೂ ಇಂದು ಜನದ ಪ್ರೀತಿಗೆ, ಎಣಿಕೆಗೆ ನಿಲ್ಲುತ್ತವೆಯೆ? – ಎಂಬ ಸಂಗತಿಗಳ ಕಡೆಗೆ ಮನಸ್ಸು ಹೋಗುತ್ತದೆ. ತೀರ್ಮಾನಗಳಲ್ಲಿ ವೈವಿಧ್ಯ ಬರಬಹುದು. ಅವರು 'ಮುಕ್ತದ್ವಾರ'ವೆಂಬ ನೃತ್ಯನಾಟಕದಲ್ಲಿ ಕಾಲ ಪಾತ್ರವನ್ನು ವಹಿಸಿ ಮಾಡಿದ ನೃತ್ಯ ಒಂದು. ಅವರು ನೃತ್ಯಕ್ಕೆ ಪ್ರೋತ್ಸಾಹಿಸಿದವರಲ್ಲಿ ಕೆಲವು ಮಂದಿ ಬೇರೆ ಬೇರೆಯಾಗಿ ಆ ಕಲೆಯಲ್ಲಿ ಇಂದು ಪರಿಣತಿ ಪಡೆದಿದ್ದಾರೆ. ದಕ್ಷಿಣಾದಿ, ಉತ್ತರ – ಎರಡೂ ಬಗೆಯ ಸಂಗೀತವನ್ನು ಅವರು ಪರಿಚಯ ಮಾಡಿಕೊಂಡಿದ್ದಾರಾದರೂ ವಿಶೇಷವಾಗಿ ಹಿಂದುಸ್ತಾನಿ ಪದ್ಧತಿಯಲ್ಲಿ ಕ್ರಮವಾಗಿ ಕೆಲವು ಕಾಲ ಶಿಕ್ಷಣ ಪಡೆದವರಾಗಿದ್ದಾರೆ. ಯಕ್ಷಗಾನದ ಮಟ್ಟುಗಳು ಮೊದಲಿಂದಲೂ ಕನ್ನಡದ ದಕ್ಷಿಣಾದಿ ಪದ್ಧತಿಯ ಮೂಲಾಂಶಗಳನ್ನು ವಿವೇಚಿಸುವುದರಲ್ಲಿ ಅನೇಕ ಪರೀಕ್ಷಣಗಳನ್ನು ಮಾಡಿದ್ದಾರೆ. ಸುಮಾರು ೧೯೫೭ರಲ್ಲಿ "ನದೀವೃತ್ತ" (The Life giving River) ಎಂಬ ಹೆಸರಿನ ಒಂದು ಗೇಯ ಪ್ರಬಂಧವನ್ನು ರಚಿಸಿ ಬೆಂಗಳೂರು ಆಕಾಶವಾಣಿಯ ಮೂಲಕ ಮಾಡಿದ ಪ್ರಸಾರ ಗೇಯಕಲ್ಪನೆಯಲ್ಲಿ ಒಂದು ಮಹಾ ಪ್ರಯೋಗ; ಘಟ್ಟ. ಏನೊ ಅದು ಹೆಚ್ಚು ಜನರನ್ನು ಜಾಗರಿಸಲಿಲ್ಲ.

ಚಿತ್ರ ಅವರಿಗೆ ಮೊದಲಿಂದಲೂ ಗೀಳಾಗಿ ಬಂದ ವಿದ್ಯೆ. ರೇಖಾಚಿತ್ರಗಳೂ ವರ್ಣಚಿತ್ರಗಳೂ ನೂರಾರನ್ನು ಮಾಡಿ ತಮ್ಮ ಬರವಣಿಗೆಗೂ ಇತರ ಬರವಣಿಗೆಗೂ ಅಲಂಕರಣವಾಗಿ ಉಪಷ್ಟಂಭಕವಾಗಿ ಮಾಡಿಕೊಟ್ಟಿದ್ದಾರೆ. ನಮ್ಮ ಚಿತ್ರ ಶಿಲ್ಪಾದಿಗಳ ಇತಿಹಾಸವನ್ನು ಅರಿತವರಾದುದರಿಂದ ಇಲ್ಲಿ ಬೆಳೆದು ಬಂದ ಶೈಲಿಗಳಲ್ಲಿ ಯಾವ ಯಾವ ಗುಣ ಎಂಥದೆಂಬುದನ್ನು ಬಲ್ಲವರಾಗಿ, ಆಧುನಿಕವೆಂಬ ಮಾರ್ಗದಲ್ಲಿ ಇರುವ ವಿಶೇಷ

ಲಕ್ಷಣಗಳನ್ನು ಕಂಡುಕೊಂಡಿದ್ದಾರೆ. ಸಂಪ್ರದಾಯ ಸಾಧಿಸಿರುವುದನ್ನು ಮೆಚ್ಚಿಕೊಂಡರೂ ಈಚಿನವರ ಮುನ್ನಡೆ, ಅವರ ಮಾರ್ಗದ ನವ್ಯತೆ ಇವರಿಗೆ ಹಿಡಿಸಿದೆ. ಇದನ್ನು ನಾಲ್ಕಾರು ಕಡೆ ಬರೆದಿದ್ದಾರೆ; ನುಡಿದಿದ್ದಾರೆ. 'ಅಳಿದ ಮೇಲೆ' ಎಂಬ ಒಂದು ಕಾದಂಬರಿಯಲ್ಲಿ ಅದರ ಹೃದ್‌ರಹಸ್ಯ, ಮಾರ್ಗ, ವಿಧಾನ ತಿಳಿಯುವಂತೆ ಪರ್ಯಾಯವಾಗಿ ಸ್ವಾರಸ್ಯವಾದ ವಿವರಣೆಯನ್ನು ಕೊಟ್ಟಿದ್ದಾರೆ. ಕಲಾಕೃತಿಯನ್ನು ನಿರ್ಮಾಣ ಮಾಡುವವರ ಮನಸ್ಸು ಹೇಗೆ ರೂಪಗೊಳ್ಳುತ್ತದೆ ಎಂಬುದು ಒಂದು ಕಡೆಯ ಸಂಗತಿಯಾದರೆ ಅದನ್ನು ಗ್ರಹಿಸುವುದಕ್ಕೆ ಬೇಕಾದ ಅಧಿಕಾರ ಸೌಹಾರ್ದ, ಸೂಕ್ಷ್ಮ ವಿವೇಚನಾ ಬುದ್ಧಿ, ಕಲ್ಪನಾಶಕ್ತಿ ಮಿಡಿತ ಹೇಗಿರಬೇಕು ಎಂಬ ಕಡೆಗೂ ಗಮನ ಕೊಟ್ಟಲ್ಲದೆ ಕಲಾಕೃತಿ ಅರ್ಥವಾಗುವುದಿಲ್ಲ; ಅದರ ವಿಮರ್ಶೆ ತಪ್ಪು ದಾರಿ ಹಿಡಿಯುತ್ತದೆ ಎಂಬುದನ್ನು ತಿಳಿಸುತ್ತಾರೆ.

ವ್ಯಕ್ತಿಚಿತ್ರಗಳೂ ಚಿಕ್ಕ ಚಿಕ್ಕ ಜೀವನ ಕಥೆಗಳೂ ಪ್ರಯಾಣ ಅನುಭವಗಳೂ, ಹರಟೆ, ಪ್ರಬಂಧ, ವಿಮರ್ಶೆ, ವಿಡಂಬನೆ, ನಾಟಕ, ಕತೆ, ಕವಿತೆ, ಗ್ರಂಥ ಸಂಪಾದನೆ – ಈ ಎಲ್ಲ ರಂಗದಲ್ಲಿಯೂ ಅವರ ಕ್ರಿಯಾಶಕ್ತಿ ವ್ಯಾಪಿಸಿದೆ. ಕಲೆ ಮಾಡಬೇಕಾದ ಕೆಲಸವೊಂದಿದೆ, ವ್ಯಕ್ತಿ ಜೀವನದ ಪೋಷಣೆಗೆ ವಿಕಸನಕ್ಕೆ, ಒಂದು ಜನತೆಯ ಸಂಸ್ಕಾರಕ್ಕೆ ಎಂಬುದನ್ನು ಬಲ್ಲವರಾದ್ದರಿಂದ, ನಿರರ್ಥಕವಾದ ಯಾವ ಕಾರ್ಯಕ್ಕೂ ಅವರ ಮನಸ್ಸು ತೊಡಗದು. ಹೀಗೆಂದು ಕಲೆ ಇನ್ನೊಂದರ ಉಪಜೀವಿ. ಅದಕ್ಕಾಗಿ ಇದು ಬದುಕಬೇಕು, ಸ್ವಂತ ಪ್ರಾಧಾನ್ಯ ಸಿದ್ಧಿ ಇದಕ್ಕಿಲ್ಲ ಎಂಬುದನ್ನು ಅವರು ಎಂದಿಗೂ ಒಪ್ಪುವವರಲ್ಲ.

ಅವರ ಕಾದಂಬರಿಗಳನ್ನು ಕುರಿತು ಇಲ್ಲಿ ಏನೂ ಹೇಳುವುದಿಲ್ಲ. ಉತ್ತರ ದಕ್ಷಿಣ ಕನ್ನಡ ಜಿಲ್ಲೆಯ ಸಾಮಾನ್ಯ ಜೀವನದ ಚಿತ್ರಣ ಅವರು ಮಾಡಿರುವಂತೆ ಸಾಕಲ್ಯದಿಂದ ಸೂಕ್ಷ್ಮತೆಯಿಂದ ನಯವಿಚಕ್ಷಣೆಯಿಂದ ಪ್ರೀತಿ ಸೌಹಾರ್ದಗಳಿಂದ ಪ್ರಾದೇಶಿಕ ಸಹಜತೆಯಿಂದ ಬೇರೆ ಯಾರೂ ಮಾಡಿಲ್ಲ. ಸಾಮಾನ್ಯ ಹೆಣ್ಣು ಮಕ್ಕಳ ಚರಿತ್ರೆಯಲ್ಲಿನ ವೀರ, ಪ್ರೀತಿ, ಭಕ್ತಿಗಳ ಪರಾಕಾಷ್ಠೆ, ಅಲ್ಲಿನ ಸಜ್ಜನತೆ ದುರ್ಜನತೆ ಹೊಸ ಕನ್ನಡ ಸಾಹಿತ್ಯದ ಕಣಜಕ್ಕೆ ಅವರು ತುಂಬಿಕೊಟ್ಟ ದವಸ. ಅವುಗಳಲ್ಲಿ ಅವರು ಬಳಸುವ ತಂತ್ರವೂ ಅವರದೇ. ಇತರರು ಒಂದು ಕಾದಂಬರಿಗೆ ಹಿಂಜಿ ತುಂಬುವಷ್ಟು ವಿಷಯವನ್ನು ಅವರು ಒಂದು ಅಧ್ಯಾಯಕ್ಕೆ ಗಿಡಿಯುವುದನ್ನು ನಾವು ಕಾಣುತ್ತೇವೆ. ಆ ವರ್ಣನೆಗಳಲ್ಲಿ, ವಿಶ್ಲೇಷಣೆಗಳಲ್ಲಿ ಆ ಪ್ರಕರಣದ ಜನರ ಸ್ಥಿತಿಯ, ಪ್ರದೇಶದ ಸಂಬಂಧ ನಿರ್ಬಂಧಗಳ ಅಖಂಡ ಪ್ರತಿಫಲನವಿರುತ್ತದೆ. ಬೆಳುದಿಂಗಳು, ಕಾಡುಹೂ, ಕಡಲ ಕರೆ, ಬೆಟ್ಟದ ತಪ್ಪಲು, ಕಾನು, ಅರಾಲು ತೆಂಗು, ಹಲಸು, ಹುಲಿಬೇಟೆ, ಕಾಡು ಹಂದಿಗಳ, ಆನೆಗಳ ಕಾಟ ಇವುಗಳನ್ನೊ, ಕುಡಿಯರಂಥ ಜನವರ್ಗ, ಹೊಲೆಯ ದಲಿತ ವರ್ಗಗಳಂಥ ಜನವರ್ಗ, ಒಂದು ಕೋಲವನ್ನೊ, ಮಳೆಗಾಲದಲ್ಲಿ ಮಳೆ ಸುರಿದು ಕಟ್ಟುವ ಭೂಮಿ ಚಿತ್ರವನ್ನೊ, ಕಬ್ಬಿನ ತೋಟವನ್ನೊ ಹೊಲಗದ್ದೆ ತೋಟಗಳಲ್ಲಿ ಬೆಳೆಯುವ ಕೆಲಸಗಳನ್ನೊ, ಮದುವೆ ಬೊಜ್ಜಗಳ ವೈಖರಿಗಳನ್ನೊ, ಒಂದು ದುಡಿಯ ಬಾಜನವನ್ನೊ ಅವರ ಕಾದಂಬರಿಗಳಿಗಿಂತ ಮುಂಚೆ ಕಣ್ಣಿಗೆ ಕಟ್ಟಿದಂತೆ ಕಾಣಿಸುವ ವರ್ಣನೆ ಅಪರೂಪವಾಗಿತ್ತು. ಈಚೆಗೆ ಬರೆದ 'ಮೂಕಜ್ಜಿ'ಯನ್ನು ಕುರಿತ ಕಾದಂಬರಿಯಲ್ಲಿ ಆಕೆಯನ್ನು ಒಂದು ಮಾಧ್ಯಮವನ್ನಾಗಿ ಮಾಡಿ

ಪ್ರಾಗೈತಿಹಾಸಿಕ ಸಂಗತಿಗಳ ಮಾಧ್ಯಮವನ್ನಾಗಿ ಬಳಸುತ್ತಿದ್ದಾರೆ. ಕಾಲ ಅಲ್ಲಿ ಕಾಣಿಸುವ ವಿಕಾರಗಳೂ ವಿಲಾಸಗಳೂ ಸೂಕ್ಷ್ಮವಾದವು. ಜೀವನದರ್ಶನಕ್ಕೆ ಮೆರುಗು ಕೊಡುವಂಥವು. ಯಾರೊಬ್ಬರ ಮುಖ ನೋಡಿದರೂ ಒಳಗಿರುವ ಸಂಗತಿ ಯಾವುದೊ ಆ ಬಗ್ಗೆ ಹಿಂದಿನದು, ನಾಳೆಗೆ ಆಗಲಿರುವುದು ಅಕೆಗೆ ತಿಳಿಯುವಂತಿದೆ. ಅಲ್ಲಿನ ಅಜ್ಜಿ ಎಷ್ಟು ಮಾನವ, ಎಷ್ಟು ಪ್ರೀತಿಯ ಹೆಣ್ಣು, ಆದರೆ ಎಷ್ಟು ನಿರ್ದಾಕ್ಷಿಣ್ಯದವಳು – ಸತ್ಯವನ್ನು ನುಡಿಯಬೇಕಾದಾಗ! ಇದಕ್ಕೆ ಮೊಮ್ಮಗನೂ ಅವನ ಹೆಂಡತಿಯೂ ಹೇಗೆ ಸಾದೃಶ್ಯ ವೈದೃಶ್ಯಗಳಲ್ಲಿ ತಮ್ಮ ಕಾಣಿಕೆಯನ್ನು ಅರ್ಪಿಸಿದರು ಎಂಬ ಚಿತ್ರ ಬರುತ್ತದೆ. ಇತರ ಬೇರೆ ಕೆಲಸಗಳನ್ನು ಮಾಡಿ ಬೇಸರವಾದಾಗ ನಾಲ್ಕು ದಿನ ಕುಳಿತುಕೊಂಡು ೨೫೦–೩೦೦ ಪುಟಗಳ ಒಂದು ಕಾದಂಬರಿಯನ್ನು ಬರೆಯುವುದೊ ಹೇಳಿ ಬರಸಿ ಮುಗಿಸಿಬಿಡುವುದೊ ಈಚೆಗೆ ಅವರಿಗೆ ಅಭ್ಯಾಸವಾಗಿಬಿಟ್ಟಿದೆ. ಎಲ್ಲ ಕಾದಂಬರಿಗಳಲ್ಲಿಯೂ ಅವರದೇ ಆದ ಒಂದು ಅಂಕಿತ ಅದನ್ನು ನಮ್ಮ ಕಾಲದ ಸಾಹಿತ್ಯಕ್ಕೆ ಒಂದು ವಿಶೇಷ ಕೊಡುಗೆಯನ್ನಾಗಿ ಮಾಡಿದೆ.

ಎಲ್ಲಕ್ಕಿಂತ ಹೆಚ್ಚಾಗಿ ಅತನ ವ್ಯಕ್ತಿತ್ವ, ಸ್ನೇಹಪರತೆ, ಪ್ರಾಮಾಣಿಕತೆ ದೊಡ್ಡವು. ಹಿಂದಿನಷ್ಟು ಈಗ ಮಾತಿಲ್ಲ; ಚೇಷ್ಟೆ ಚಮತ್ಕಾರಗಳ ಆಸೆ ನಾಲಿಗೆಗಿಲ್ಲ. ಮಾತು ಕಡಮೆಯಾಗುತ್ತಿದೆ. ಬೇರೆ ಜನ, ಸಂಘ, ಸಂಸ್ಥೆ, ಸಮಾರಂಭಗಳಲ್ಲಿ ಪಾಲುಗೊಳ್ಳುತ್ತಿದೆ. ಆದರೆ ಎಷ್ಟು ಕೆಲಸ ಮಾಡಬೇಕೊ ಅಷ್ಟಾಗಿಲ್ಲ ಎಂಬ ಅತೃಪ್ತಿ, ಕೆಲವು ವೇಳೆ ಅಸಹನೆಯ ಮಟ್ಟಕ್ಕೆ ಏರುವುದುಂಟು. ಆದರೆ ಆ ಅತೃಪ್ತಿಗೆ ಮಿತಿ ಯಾವುದು? ನೀವು ಬಡಿದದ್ದರಿಂದ ಕತ್ತೆ ವೇಗವಾಗಿ ಓಡುವುದಿಲ್ಲವೆಂಬುದನ್ನು ಅವರು ಬಲ್ಲರು. ತಾವು ಮಾಡಬೇಕೆನ್ನಿಸಿದುದನ್ನು ಮಾಡಿಬಿಡುವವರು. ದೊಡ್ಡ ಮಾತುಗಳನ್ನು, ಧ್ಯೇಯಗಳನ್ನು ಪ್ರತಿಪಾದನೆ ಮಾಡಿ, ವೇಷಹಾಕುವ ಅಥವಾ ಟೊಳ್ಳು ನುಡಿತದ ಬೇಸರ ಅವರನ್ನು ಕೆಲವೇಳೆ ಕಹಿ ಮಾಡಿದೆ. ಯೋಚನೆ ಮಾಡಬಲ್ಲವರೆಲ್ಲ ಮಾಡರು; ನುಡಿಯಬಲ್ಲವರೆಲ್ಲ ಹಿಮ್ಮೆಟ್ಟುತ್ತಿದ್ದಾರೆ; ಮಾಡಲಾಗುವುದನ್ನೆಲ್ಲ ಮಾಡುತ್ತಿಲ್ಲ, ಅರವತ್ತು–ಎಪ್ಪತ್ತು ವರ್ಷ ಬಾಳಿರುವ ಕಾಲದಲ್ಲಿಯೂ ಎಂಬುದು ಅವರ ಅತೃಪ್ತಿಗೆ ಒಂದು ಕಾರಣವಾಗಿ ಉಳಿಯುತ್ತದೆ. ಸತ್ಯವನ್ನು ಹೇಳಬೇಡವೆ? ತಮ್ಮ ಬೆಲೆಗಳನ್ನು ನಿರೂಪಿಸಬೇಡವೆ? ನಾಡಿನ ಸತ್ವವನ್ನು ಮೂದಲಿಸುತ್ತಿರುವ, ಪರೀಕ್ಷಿಸುತ್ತಿರುವ ಪ್ರಭಾವಗಳನ್ನು ಹೊರಗೆಳೆದು ತೋರಿಸಬೇಡವೆ? ಒಳಗಿರುವ ಕೊಳೆ, ಅಸಾಧುತೆ, ಸ್ವಾರ್ಥ, ಡಾಂಭಿಕತೆ ಕಪಟಗಳನ್ನು ಕಾಣಿಸಬೇಡವೆ? – ಎಂಬ ಮನಸ್ಸು ಒಳಗಿನ ಬೆಂಕಿಗೆ ಬೂದಿ ಮುಸುಕದಂತೆ ಅಥವಾ ಜ್ವಾಲೆಯಾಗಿ ಉರಿದು ಹೋಗದಂತೆ ಕಾಪಾಡಿಕೊಂಡು ಬಂದಿದೆ. ಕಾರ್ಯದ ಈ ಅವಸರ, ಆತುರ ಅವರು ಮಾಡಿದ ಕೆಲಸಗಳಿಗೆ ಕೆಲವೊಮ್ಮೆ ಆಕ್ಷೇಪಣೆಗಳನ್ನು ತಂದಿವೆಯಾದರೂ ಈ ಕೆಲಸದ ಸ್ವರೂಪ ಅತ್ಯಸಾಮಾನ್ಯವಾದುದು. ಇದರ ಪ್ರಮಾಣ ಬಹು ದೊಡ್ಡದು. ಅದರ ಹಿಂದಿರುವ ಜೀವ ಉದಾತ್ತವಾದುದು ಎಂಬುದನ್ನು ಯಾರೂ ಕಾಣಬಹುದು. ಇಷ್ಟೆಲ್ಲ ಕೆಲಸದ ಹಿಂದೆ ನಿಂತ ವ್ಯಕ್ತಿ ಇವೆಲ್ಲಕ್ಕೂ ಮೀರಿದ ಸತ್ವ ಅತ್ಯತಿಷ್ಠದ್ದಶಾಂಗುಲಂ. ಆದರೆ ಆಸೆಗೆ ಆಕಾಂಕ್ಷೆಗೆ ಯಾವ ಎಲ್ಲೆಯೂ ಇಲ್ಲ.

ಎಲ್ಲಕ್ಕಿಂತ ಹೆಚ್ಚಾಗಿ ನಮ್ಮ ವಿದ್ಯಾಶಿಕ್ಷಣದಲ್ಲಿಯೂ ನಮ್ಮ ಆಲೋಚನಾ

ರೀತಿಗಳಲ್ಲಿಯೂ ಇರುವ ಜಡತೆಗಳೂ, ಕೃಪಣತೆಗಳೂ ಹೋಗಬೇಕು. ಸ್ವತಂತ್ರ ಚಿಂತನೆ, ಪ್ರಯೋಗ ಮಾಡಿ, ಹೊಸ ಕಾಲದ ಅಗತ್ಯಗಳಿಗೆ ಹೊಂದಿಕೊಂಡು ಸಾರ್ಥಕವಾಗಬಲ್ಲ ಬುದ್ಧಿ ವಿಧಾನಗಳು ಎಷ್ಟು ಹೆಚ್ಚಾಗಿ ಎಷ್ಟು ಬೇಗ ಬೇಗ ಬೆಳೆದರೆ, ಅಷ್ಟು ಅಷ್ಟು ಈ ಕಾಲದ ಜೀವನ ಸಾರ್ಥಕವಾದೀತು ಎಂದು ನಂಬಿರುವವರು ಅವರು. ಅವರ ಆಸೆ ಫಲಿಸಲಿ. ಆದರೆ ಅವರೆತ್ತಿಗೆ ಅವರಷ್ಟು ಚುರುಕಿನಲ್ಲಿ ಧಾವಿಸಲು ಶಕ್ತಿ ಇಲ್ಲದವರ ವಿಧಾನದಿಂದ ಅವರೂ ಬೇಸರಪಡದೆ ನಡಸಿಕೊಳ್ಳಬೇಕೆನೊ, –ಇವರ ದೌರ್ಬಲ್ಯಗಳನ್ನು ಲಕ್ಷಿಸಿ. ಆ ಮನಸ್ಸಿನ ಧಾರಾಳ, ಸ್ವಾತಂತ್ರ್ಯ ಸಾಹಸಗಳಿಗಂತೂ ಯಾವುದೂ ಬೆರಗಲ್ಲ; ಹೊರಗಲ್ಲ.

೧೯೬೩ ಅಕ್ಟೋಬರ್ ೧೧ರಂದು ಧಾರವಾಡದ ಕರ್ನಾಟಕ ವಿಶ್ವವಿದ್ಯಾನಿಲಯದವರು ಕೋಟದ ಶಿವರಾಮ ಕಾರಂತರಿಗೆ ಗೌರವ ಡಾಕ್ಟರೇಟ್ ಪ್ರಶಸ್ತಿಯನ್ನು ಕೊಟ್ಟು ಸನ್ಮಾನ ಮಾಡಿದರು. ಮೈಸೂರಲ್ಲಿನ ವಿಶ್ವವಿದ್ಯಾನಿಲಯದ ಡಾಕ್ಟರೇಟ್ ಮೊದಲು ದೊರಕುವುದೆಂದು ಇಲ್ಲಿನ ನಾವು ನಂಬಿದ್ದೆವು. ಮೈಸೂರಿನ ಎಲ್ಲ ಕೆಲಸ ಎಂದಿಗೂ ಹಿಂದೆಯೇ ಏನೊ. ಈ ಸಂಬಂಧದಲ್ಲಿಯೂ ಕರ್ನಾಟಕ ವಿಶ್ವವಿದ್ಯಾನಿಲಯ ಮುಂದಿನ ಹೆಜ್ಜೆ ಇಟ್ಟಿತು. ಯಾರಾದರೂ ಇಡಲಿ, ವಿದ್ವಾಂಸರೊಬ್ಬರಿಗೆ ಗೌರವ ಸನ್ಮಾನ ದೊರೆತದ್ದು ಒಂದು ಸಂತೋಷ. ಅದಕ್ಕಾಗಿ ಗೊತ್ತಾದ ರೀತಿಯಲ್ಲಿ ಓದಿ ಕ್ರಮಬದ್ಧವಾಗಿ ಪದವಿಗಳನ್ನು ಪಡೆವ ವಾಡಿಕೆ ವಿಶ್ವವಿದ್ಯಾನಿಲಯಗಳು ಏರ್ಪಡಿಸಿದ್ದು. ಅದರಲ್ಲಿ ಅಭ್ಯಾಸ, ಸಿದ್ಧತೆ, ಪ್ರೊಫೆಸರೊಬ್ಬರ ಮಾರ್ಗದರ್ಶನ, ಅವರ ತಿದ್ದುಗಡೆ ಎಲ್ಲ ನಡೆದ ಮೇಲೆ ಒಳಹೊರ ಪರೀಕ್ಷಕರು ಅಭ್ಯಾಸದ ಫಲವಾಗಿ ರಚಿತವಾದ ಪ್ರಬಂಧವನ್ನು ಒಪ್ಪಿದರೆ, ಆ ಮರ್ಯಾದೆ ಅಭ್ಯಾಸಿಗೆ ದೊರಕುತ್ತದೆ; ಇಲ್ಲವಾದರೆ ಇಲ್ಲ. ಒಂದು ವರ್ಷವೊ ಎರಡು ವರ್ಷವೊ, ಎಂ.ಎ., ಎಂ.ಎಸ್.ಸಿ.ಗಳಲ್ಲಿ ತೇರ್ಗಡೆಯಾದ ಮೇಲೆ ಪಿ.ಎಚ್.ಡಿ., ಅದಕ್ಕೆ ಮೇಲ್ಪಟ್ಟದ ಡಿ.ಲಿಟ್., ಡಿ.ಎಸ್.ಸಿ., ಎಲ್.ಎಲ್.ಡಿ., ಡಿ.ಸಿ.ಎಲ್., ಮುಂತಾದ ಪ್ರಶಸ್ತಿ ದೊರಕಿದಾಗ ಅವನ್ನು ಪಡೆದಂಥವರನ್ನು ಡಾಕ್ಟರ್ ಎಂದು ಕರೆವುದು ಪಾಶ್ಚಿಮಾತ್ಯರಲ್ಲಿ ಬಂದ ರೂಢಿ. ನಮ್ಮ ವಿಶ್ವವಿದ್ಯಾನಿಲಯಗಳೂ ಅವನ್ನು ಅನುಸರಿಸುವುದರಿಂದ ಇಲ್ಲಿಯೂ ಹಾಗೆಯೇ ಪದ್ಧತಿ ಬಿದ್ದಿತು. ಸರ್ವದಾ ಇಂಥ ಅಸಮತೆಗಳನ್ನು ನಿರ್ಧರಿಸುವ, ಏರ್ಪಡಿಸುವ ವಿದ್ಯಾಕೇಂದ್ರಗಳು ವಿಶ್ವವಿದ್ಯಾನಿಲಯಗಳು – ಅಲ್ಲಿಯೂ ವಿದ್ವನ್ಮಾನ್ಯರು, ಬಹುಮುಖ ಪ್ರತಿಭೆ, ಕ್ರಿಯಾಶಕ್ತಿ ಮೇಧಾವಿತನ ಪ್ರಕಾಶಕ್ಕೆ ಬಂದಾಗ ಅವನ್ನು ಗುರುತಿಸಿ, ಗೌರವದ ಡಾಕ್ಟರೇಟ್ ಪ್ರಶಸ್ತಿ ಕೊಡುವ ರೀತಿಯೊಂದುಂಟು. ಅದು 'ಅಪರೂಪ'ವಾದ ಕೊಡುಗೆ. ಈಗ ಎಲ್ಲಿಯೂ ಅದನ್ನು ಬಳಕೆಗೆ ತಂದಿದ್ದರೂ ಎಲ್ಲಿ ಅದನ್ನು ಅಗ್ಗ ಮಾಡಿ ಬಿಡುತ್ತಾರೊ ಎಂಬ ಮಟ್ಟಿಗೆ ಅದನ್ನು ಹಂಚುವ ಚಾಳಿ ಬೆಳೆಯುತ್ತಿದೆ. ಪುರಸ್ಕಾರ ಯೋಗ್ಯವಾದಾಗ, ಹತ್ತಾರು ವರ್ಷಗಳ ಕ್ರಿಯಾಶಕ್ತಿಯಾಗಿ ನಿರ್ಮಾಣಶಕ್ತಿಯಾಗಿ ರೂಪುಗೊಂಡು ಯೋಗ್ಯತೆ ಸ್ಥಾಪಿತವಾಗಿರುವಾಗ, ಆ ಪ್ರದಾನ ಉಚಿತವಾಗುತ್ತದೆ. ಧಾರವಾಡದಲ್ಲಿ ಶ್ರೀ ಮಾಸ್ತಿಯವರಿಗೂ ಮೈಸೂರಲ್ಲಿ ಶ್ರೀ ಡಿ.ವಿ. ಗುಂಡಪ್ಪನವರಿಗೂ ಆ ಪ್ರಶಸ್ತಿ ದೊರೆತುದು ಕನ್ನಡಿಗರಿಗೆ ಅತೀವ ಸಂತೋಷವನ್ನುಂಟುಮಾಡಿತು. ಕಾರಂತರಿಗೆ ಕೊಡುವ ಸಮಯದಲ್ಲಿಯೇ ಮಂಜೇಶ್ವರದ ಗೋವಿಂದ ಪೈಗಳಿಗೂ

ಡಾಕ್ಟರೇಟ್ ಕೊಡಬೇಕೆಂದು ಮೈಸೂರವರು ನಿಶ್ಚಯಿಸಿದ್ದರೆಂದು ಪ್ರಕಟವಾಗಿತ್ತು. ಅದು ನೆರವೇರುವ ಮುಂಚೆ ಪೈಗಳು ತೀರಿಕೊಂಡುದು ನಮ್ಮ ದುರದೃಷ್ಟ. ಅಭ್ಯಾಸದ ಫಲವಾಗಿ ಗಳಿಸಿದ್ದ ಬಿ.ಎ. ಡಿಗ್ರಿಯನ್ನೇ ಅವರು ತೆಗೆದುಕೊಳ್ಳಲಿಲ್ಲ; ಈ ಗೌರವ ಪ್ರಶಸ್ತಿ ತನಗೆ ಬಂದುದೆಂಬುದನ್ನು ಕೇಳಿಯೇ ತೃಪ್ತರಾಗಿರಲಿಕ್ಕೆ ಸಾಕು. ಅವರ ಜೀವಗುಣ, ಚಾರಿತ್ರದೃಷ್ಟಿ ಅಂಥವು.

ಈಚೆಗೆ ಕಾರಂತರು ವಿಜ್ಞಾನ ಕೋಶವೊಂದನ್ನು ನಾಲ್ಕು ದೊಡ್ಡ ಸಂಪುಟಗಳಲ್ಲಿ ಹೆಚ್ಚು ಪ್ರೌಢವಾಗಿ ಹೆಚ್ಚು ಸಾಕಲ್ಯದಿಂದ, ಆಧುನಿಕ ಪ್ರಪಂಚದ ಅರಿವು ವಯಸ್ಕ ಕನ್ನಡಿಗರಿಗಾಗುವಂತೆ ಮಾಡಿರುವ ಸೇವೆ ಅಸಾಧಾರಣವಾದುದು; ವ್ಯಕ್ತಿಯೊಬ್ಬನ ಎದೆಗಾರಿಕೆಯನ್ನು ಸ್ಥಾಪಿಸುವಂಥದು. ಹಣದೆಣಿಕೆಯಲ್ಲಿ ಒಂದೊಂದು ಗ್ರಂಥದ ಪ್ರಕಾಶನಕ್ಕೆ ಇಪ್ಪತ್ತು ಸಾವಿರ ರೂಪಾಯಿ ವೆಚ್ಚ ತಗಲುವುದೆಂದು ತಿಳಿದಿದ್ದರೂ ಅದನ್ನು ಸಾಧಿಸಿ, ಈಗಾಗಲೇ ಮೂರನ್ನು ಹೊರ ತಂದು ನಾಲ್ಕನೆಯದನ್ನು ತರಲಿದ್ದಾರೆ. ನಾಡು ಅವರ ಶ್ರಮವನ್ನು ಮೆಚ್ಚಿ ವಿದ್ಯಾಸಂಸ್ಥೆಗಳೂ ಸರ್ಕಾರವೂ ಅದಕ್ಕೆ ತಕ್ಕ ಸ್ವೀಕಾರ ಕೊಡಬೇಕು.

ವಿದ್ಯಾ ಇಲಾಖೆಗಳೂ ರಾಜ್ಯ, ಕೇಂದ್ರ ಸರ್ಕಾರಗಳೂ ದೊಡ್ಡ ಮಾತುಗಳನ್ನಾಡುತ್ತ, ಅಬ್ಬರದ ಪ್ರೋತ್ಸಾಹನಗಳನ್ನು ನೆಗಹುತ್ತ ಕಾಲ ಕಳೆಯುತ್ತವೆಯೇ ಹೊರತು, ತಾವು ನೇಮಿಸಿದ ಸಲಹಾಮಂಡಲಿಗಳ ಸದಸ್ಯರಿಗೆ ಬತ್ತೆಯ, ಸಾರಿಗೆ, ಅಧಿವೇಶನ ವೆಚ್ಚಗಳಿಗೆ ತೆರುವ ಹಣಕ್ಕೆ ಇಂತಹ ನಾಲ್ಕಾರು ಕಾರ್ಯಗಳು ಒಂದೊಂದು ರಾಜ್ಯದಲ್ಲಿಯೂ ಆದಾವೆಂದು ಎಣಿಸುವ ಪಾಪಕ್ಕೆ ಹೋಗುವುದಿಲ್ಲ. ಉದಾ–ಹತ್ತು ಮಂದಿ ಕಲಾ ಸಲಹೆಗಾರರು ಭಾರತದ ದೂರ ಭಾಗಗಳಿಂದ ವಿಮಾನಗಳಲ್ಲಿ ಬೆಂಗಳೂರಿಗೊ ದೆಹಲಿಗೊ ಬಂದು ತಮ್ಮ ಸಮಿತಿಯ ಅಧಿವೇಶನಕ್ಕೆ ಕೂಡಿದಾಗ ಅವರ ಪ್ರಯಾಣವೆಚ್ಚ, ಊಟ, ವಸತಿವೆಚ್ಚ ಹತ್ತುಸಾವಿರಕ್ಕೆ ಕಡಮೆ ಇಲ್ಲದೆ ಆಗಬಲ್ಲದು. ಅಂಥ ಒಂದು ದಿನ ಒಬ್ಬ ಹಿರಿಯ ಕಲೆಗಾರನ, ಕೃತಿಕಾರನ ಉತ್ತಮ ಚಿತ್ರವನ್ನೊ ಶಿಲ್ಪವನ್ನೊ ಕೊಂಡು ಐದುಸಾವಿರ ಬೆಲೆ ಕೊಡುವ ಸಾಹಸಕ್ಕೆ ಮನವೀಯದು; ಎದೆ ತಾರದು! ಕಲೆಯ ಎಲ್ಲ ಸಾಹಸದ ಲಕ್ಷಣವೂ ತನ್ನ ಕಾರ್ಯವನ್ನೂ ಧರ್ಮವನ್ನೂ ತಾನು ನಡಸುವುದು; ಪುರಸ್ಕಾರ, ಸ್ವೀಕಾರ ಬರಲಿ, ಬಿಡಲಿ. ಇತರರು ನೋಡಲಿಲ್ಲ, ಬಳಸಲಿಲ್ಲ, ಬೆಲೆಗೊಡಲಿಲ್ಲ ಎಂದು ಗಿಡ ತನ್ನ ಚಿಗುರು, ಹೂ, ಕಾಯಿ ಹಣ್ಣು ಬಿಡುವುದನ್ನೂ ತಾಳು ಬಲಿಸುವುದನ್ನೂ ಹೇಗೆ ಬಿಡದೊ ಹಾಗೆಯೇ ಇವರ ಧರ್ಮ ಪ್ರವೃತ್ತಿಯೂ ತಮ್ಮ ಸಾಧನೆಯ ಹೆಜ್ಜೆಗಳಾದ ಈ ಕಾರ್ಯಗಳನ್ನು ಮಾಡಿಯೇ ತೀರುತ್ತದೆ.

ಕಾರಂತರ ಜೀವನದಲ್ಲಿ ನಡೆದು ಬಂದ ಒಂದು ವಿಶೇಷ ಅವರ ಸ್ನೇಹ ವರ್ಗ. ಕನ್ನಡಿಗರು, ಹೊರಗಿನವರು, ವಿದೇಶಗಳವರು ಸಾವಿರಾರು ಮಂದಿ ಅವರ ಯೋಗ್ಯತೆಯನ್ನೂ ಕಲಾನಿಷ್ಠೆಯನ್ನೂ ಅಭಿರುಚಿ, ಅನುಭವಗಳನ್ನೂ ಅರಿತು ಅವರನ್ನು ಒಪ್ಪಿಕೊಂಡಿದ್ದಾರೆ; ಅವರ ಮೂಲಕ ಕನ್ನಡ ನಾಡಿನ ಜನಪದ ಗೀತೆ, ಕಲಾ ಪ್ರಕಾರಗಳ ಪರಿಚಯವನ್ನು ಮಾಡಿಕೊಂಡು ಅದಕ್ಕಾಗಿ ಅವರಿಗೆ ಕೃತಜ್ಞರಾಗಿದ್ದಾರೆ. ಅವರ ಜಿಲ್ಲೆಯ ಕಡೆಯ ಜಾನಪದ ಗೀತೆ, ನೃತ್ಯ, ನಡೆ, ನುಡಿ, ರೀತಿ ಮತಾಚಾರಗಳ ಪರಿಚಯ ಪಡೆಯಲೂ ವ್ಯಾಸಂಗ

ನಡೆಸಲೂ ನೆರವಾಗಿದ್ದಾರೆ. ಈಚೆಗೆ ತಾನೇ ತೀರಿಕೊಂಡ ಆಕ್ಸ್‌ಫರ್ಡ್, ಲೆಯಡೆನ್ ವಿಶ್ವವಿದ್ಯಾನಿಲಯಗಳ ಡಾ. ಅರ್ನಲ್ಡ್ ಬಾಕೆ ಅವರು ನಮ್ಮಲ್ಲಿ ಧ್ವನಿಮುದ್ರಣ ಮಾಡಿಕೊಂಡ ನೂರಾರು ಗೀತೆಗಳು ಕಾರಂತರ ನೆರವಿಂದಾದ್ದು ಎಂದೆ. ತಾವು, ತಮ್ಮಂಥ ಒಳ ಹೊರ ಮೇಧಾವಿಗಳೂ ಚಲಚ್ಚಿತ್ರ, ಧ್ವನಿಚಿತ್ರಗಳ ರೂಪದಲ್ಲಿ ಬಗೆಬಗೆಯ ಕರೆಯ, ಮಲೆಯ ಜೀವನ ಚಿತ್ರಗಳನ್ನು ರೇಖಿಸಿಕೊಂಡಿದ್ದಾರೆ. ಇದನ್ನು ಶಾಶ್ವತವಾಗಿ ಉಳಿಸಿಕೊಳ್ಳುವ ಪ್ರಜ್ಞೆ, ಪ್ರಯತ್ನ ನಾಡಿನಲ್ಲಿ ರಾಜ್ಯಾಧಿಕಾರಿಗಳಲ್ಲಿ ಇಲ್ಲ, ಉಪನ್ಯಾಸ ವೇದಿಕೆಗಳಿಂದ ಮಾತ್ರ ಬಾಯಿ ಕೊಚ್ಚುತ್ತ ರಾಮನಿಗೆ ಸ್ವಸ್ತಿ, ರಾವಣನಿಗೂ ಸ್ವಸ್ತಿ ಎನ್ನುವ ವಕ್ತಾರರ ಮುಕ್ತಕಂಠತೆಯಿಂದ ನಾಡು ಮುಕ್ತವಾದಲ್ಲದೆ ಇಂಥ ಪ್ರಯೋಜನ ತೆರೆಯದೊ ಏನೊ! ಬರೋಡದ ರಾಮಾಯಣ, ಪೂನಾದ ಮಹಾಭಾರತ, ಹರಿವಂಶ, ಮತ್ತೊಂದು ಕಡೆಯ ವೇದ, ಪುರಾಣಗಳು, ಇಂಥವರ ಲೇಖನ ಸಂಗ್ರಹವನ್ನು ಮೊದಲೇ ಆಶ್ವಾಸನ ಕೊಟ್ಟು, ನೀವು ಕೆಲಸ ಮಾಡಿ; ಅದರ ವೆಚ್ಚವನ್ನು ನಾವು ತೆರುತ್ತೇವೆಂದರೆ ಒಂದು ಡೆಲಿಗೇಷನ್ನಿನ ವೆಚ್ಚಕ್ಕಿಂತ ಅರೆಪಾಲು ಕಡಮೆಯಷ್ಟರಲ್ಲಿ ಇಂಥ ಕಾರ್ಯ ನಡೆಯುತ್ತದೆ. ಆದರೆ ಹೇಳುವವರು ಯಾರು? ಕೇಳುವವರು ಯಾರು? ನೆಹರು ಕಾಲದಲ್ಲಿಯೇ ಹೀಗಾದರೆ, ಹಣವೆಂದರೆ ಬೆಚ್ಚಿ ನಡುಗುವ, ಮುದುರಿಕೊಳ್ಳುವ ಮುಂದಿನ ಮುಂದಾಳುಗಳ ಕಾಲದಲ್ಲಿ ಇನ್ನೇನಾದೀತು?

ಈ ಮೂವತ್ತು ವರ್ಷಗಳಿಂದ ಯಕ್ಷಗಾನಕ್ಕಾಗಿ, ಅದರ ಸಂಶೋಧನೆಗಳಿಗಾಗಿ ದುಡಿದ ಕಾರಂತರು ಧಾರವಾಡದಲ್ಲಿ ಕೆಲವು ಪ್ರಚಾರ ಉಪನ್ಯಾಸಗಳನ್ನು ಮಾಡಿದರು. ಅದನ್ನು ವಿಸ್ತರಿಸಿ, ಪರಿಶೋಧಿಸಿ ಗ್ರಂಥ ಬರೆದರು; ಅದಕ್ಕೆ ಸಾಹಿತ್ಯ ಅಕಾಡೆಮಿಯ ಬಹುಮಾನ ದೊರೆಯಿತು, ನಿಜ. ಅಲ್ಲಿನ ಅಂಶ ಅಲ್ಲಿ ಒಂದು, ಇಲ್ಲಿ ಒಂದು; ಅವರ ಬೇರೆಯ ವಾದದಲ್ಲಿ ಈ ಅಂಶ ಆ ಅಂಶ ಇತರ ಸಂಶೋಧಕರಿಗೆ ಒಪ್ಪಿತವಾಗದಿರಬಹುದು. ಇಂಥ ಪ್ರಪಂಚದಲ್ಲಿ ಅದು ಎಂದಿಗೂ ಇದ್ದುದೇ. ಇರುವ ಪ್ರಮಾಣಗಳನ್ನು ಕೂಡಿಸಿ, ಅವುಗಳಿಂದ ರೂಢಿಸಬಲ್ಲ ಅನುಮಾನಗಳನ್ನೂ ಸಿದ್ಧಾಂತಗಳನ್ನೂ ತಾನೇ ಅವರವರು ಯಾರೇ ಆಗಲಿ ಮಾಡಿಯಾರು? ಅಲ್ಲಿ ವಾದ, ಚರ್ಚೆ, ಪ್ರಮಾಣ ಸ್ಥಾಪನ ಸರಿಯಾದ ಮಾರ್ಗಗಳು. ಸತ್ಯ ಆಮೇಲೆ ಸುಖನೀತವಾಗುತ್ತದೆ. ಆ ನಡುವೆ ಶ್ರದ್ಧಾಳುಗಳು ಪ್ರಮಾಣ ಸಂಗ್ರಹ, ತಾವು ಬಲ್ಲಂತೆ 'ಸತ್ಯ' ಪ್ರತಿಪಾದನೆ ಮಾಡಬೇಕು ತಾನೆ?

ಯಕ್ಷಗಾನ ಒಂದು ಉತ್ತಮ ಜಾನಪದ ಕಲೆ; ಕೇರಳದಲ್ಲಿ ಕಥಕ್ಕಳಿಯಂತೆ ಕನ್ನಡದಲ್ಲಿ – ಸ್ವಲ್ಪ ಮಟ್ಟಿಗೆ ಆಂಧ್ರದಲ್ಲಿ – ಜಾನಪದ ಕಲೆ. ಅದರ ವಿಶಿಷ್ಟ ವೇಷ, ಮಾತುಗಾರಿಕೆ, ನೃತ್ಯ, ರಂಗಪರಿಕರ, ಪ್ರಯೋಗ ವಿಶೇಷಗಳು ಕಾಣುವಂತೆ ಆಧುನಿಕರ ಮನಸ್ಸು ಸೆಳೆವಂಥ ಒಂದು ಕಲಾನುಭವವಾಗುವಂತೆ, ಅದರ ಗಂಟೆಗಟ್ಟಲೆಯ ಕಾಲಮಿತಿಯನ್ನು ಎರಡು–ಮೂರು ಗಂಟೆಗಳ ಅವಕಾಶಕ್ಕೆ ಹೊಂದಿಸಿ, ಅದರ ವಿಶೇಷವನ್ನು ಕಾಣಿಸಬೇಕೆಂದು ಆಶೆಪಟ್ಟರು. ಇದು ಒಂದು ನವೀಕರಣದ, ಸುಧಾರಣೆಯ ತಂತ್ರ (Technique). ತಾಳಮದ್ದಳೆ, ಯಕ್ಷಗಾನ ಪ್ರಸಂಗಗಳ ಸಾಮಸ್ತ್ಯಕ್ಕೆ ಎಡೆಯಿಲ್ಲದಿರುವಾಗ ಅದರ ಜೀವಸ್ವರೂಪವನ್ನೂ ಅಲ್ಲಿ ಬೆಳೆಯುವ ನೃತ್ಯ ಸಂಗೀತಗಳ

ವಿಲಾಸವನ್ನು ಎತ್ತಿ ತೋರಿಸಲು, ಪಾರ್ಶ್ವ್ಯ ಭಾಗವತರಿಂದ ಹಾಡಿನ ತುಣುಕುಗಳನ್ನು ಹೇಳಿ ಪಾತ್ರಧಾರಿಗಳ ವೇಷ, ನಡೆ, ನೃತ್ಯ, ಚಲನವಲನಗಳಿಂದಲೇ, ಭಂಗಿ, ಮುದ್ರೆ, ಹಸ್ತ, ನಯ, ಗತಿ, ಚಾರಿ ಮಂಡಲಗಳ ಆ ತಾಂಡವ, ಆ ಲಾಸ್ಯಗಳ ಸಮೂಹವಿನ್ಯಾಸಗಳ ಸಮ್ಮೇಳನದಿಂದಲೇ ಒಂದು ನೃತ್ಯಕ (Ballet)ವನ್ನು ಏಳೆಂಟು ತಿಂಗಳಾರು ಕಾಲ ದುಡಿದು, ಅಭ್ಯಾಸ ಮಾಡಿಸಿ ಈಗ್ಗೆ ನಾಲ್ಕಾರು ನೃತ್ಯಕಗಳನ್ನು ನಾಡಿನ ದೊಡ್ಡ ದೊಡ್ಡ ನಗರಗಳಲ್ಲಿ ತೋರಿಸಿದ್ದಾರೆ. ಎರಡನೆಯ ಬಾರಿಗೆ ಅಲ್ಲಿನ ಕನ್ನಡ ಸಂಘದವರ ಆಹ್ವಾನದ ಮೇರೆಗೆ ಬೊಂಬಾಯಲ್ಲಿ 'ಬಭ್ರುವಾಹನ ಕಾಳಗ' 'ರತಿಕಲ್ಯಾಣ'ಗಳ ಪ್ರದರ್ಶನ ಅಕ್ಟೋಬರ್ ೪ ರಿಂದ ೧೩ರ ವರೆಗೆ ನಡೆದವು. 'ಯಕ್ಷಗಾನದ' ಪಾತ್ರಧಾರಿಗಳಿಗೆ ಮೂಕನೃತ್ಯ ಕಷ್ಟವೇ. ಸಂಪ್ರದಾಯದ ಮೇಳಗಳ ಇವರು ಹೇಗೆ ಮೌನದಲ್ಲಿ ಅದನ್ನು ಸಾಧಿಸುತ್ತಾರೆಯೊ? ಅದಕ್ಕೆ ಅವರು ಒಪ್ಪಿದುದು ಕೂಡ ಕಾರಂತರಲ್ಲಿನ ಗೌರವದಿಂದ, ಅವರ ಉತ್ಸಾಹ ಪ್ರಭಾವಗಳಿಂದ ಎನ್ನಿಸುತ್ತದೆ. ಆದರೆ ಆ ಲಹರಿ ನಡೆದಾಗ ಆ ಸೊಗಸನ್ನು ಮನಸ್ಸು ಬಿಚ್ಚಿ, ಪೂರ್ವಗ್ರಹವಿಲ್ಲದೆ ನೋಡಬೇಕು. ಪಾಶ್ಚಿಮಾತ್ಯ ಪ್ರಯೋಗ ಚಾಲಕರಿಗೆ, ನಿರ್ಮಾರ್ತೃಗಳಿಗೆ, (Producers & Directors) ಅಂಥ ಉಪಪತ್ತಿಯುಳ್ಳವರಿಗೆ ಈ ಸೊಗಸು ದೊರಕಿದರೆ ಏನು ಮಾಡಲಾಗುತ್ತಿರಲಿಲ್ಲ ಎನ್ನಿಸುತ್ತದೆ. ಇದು ನಿಜವಾದ ಕಲಾ ಪುನರುಜ್ಜೀವನ ಕ್ರಿಯೆ. ಮೂಲ ಯಕ್ಷಗಾನದ ಪ್ರತ್ಯಾಮ್ನಾಯವಲ್ಲ; ಪ್ರತಿಸ್ಪರ್ಧಿ ಅಲ್ಲ. ಅದರ ಜೀವನದ ಒಂದು ಬಗೆಯ ಪ್ರಕಾಶನ; ಬೇರೆ ನಡೆ, ರೂಪಣ ನಡಸಬಲ್ಲವರು ಬೇರೆ ನಡಸಲಿ. ನಿರ್ಮಾಣ ಕ್ರಿಯೆಗೆ ಅಡ್ಡಿ ಯಾವುದಿದೆ?

ಕಾರಂತರು ಕವನ ಬರೆದಿದ್ದಾರೆ, ಟೀಕೆ, ವಿಡಂಬನ ಬರೆದಿದ್ದಾರೆ. ನಾಲ್ಕಾರು ಬಗೆಯ ನಾಟಕಗಳನ್ನು ಬರೆದಿದ್ದಾರೆ; ಅವನ್ನೆಲ್ಲ ಅಡಿಸಿದ್ದಾರೆ. 'ಮುಕ್ತದ್ವಾರ'ದಲ್ಲಿ ಕಾಲಪುರುಷನಾಗಿ ಕುಣಿದಿದ್ದಾರೆ; ನೃತ್ಯ ತಂಡಗಳನ್ನು ಕಟ್ಟಿ ಗೆಳೆಯರೊಡನೆ ಸೇರಿ ಪ್ರಯೋಗಮಾಡಿದ್ದಾರೆ. ಪ್ರಬಂಧ, ಲಘುಲೇಖನ, ವ್ಯಕ್ತಿಪರಿಚಯ, ಲೋಕವಿಜ್ಞಾನ, ಸಾಹಿತ್ಯ, ವಿಮರ್ಶೆ, ಕಲಾವಿಮರ್ಶೆಗಳನ್ನು ಒದಗಿಸಿದ್ದಾರೆ. ಭಾಷಣಗಳನ್ನು ಮಾಡಿದ್ದಾರೆ. ಮೂವತ್ತು-ನಲವತ್ತು ಉತ್ತಮ ಕಾದಂಬರಿಗಳನ್ನು ರಚಿಸಿ ಕನ್ನಡ ಸಾರಸ್ವತಕ್ಕೆ ಐಶ್ವರ್ಯವನ್ನು ತುಂಬಿದ್ದಾರೆ. ಆ ತುಂಬು ನಿಜವಾದುದು; ಕೇವಲ ಕಲ್ಪನೆಯದಲ್ಲ – ಜೀವನದ ಅನ್ವೇಷಣದಿಂದ, ಅನುಭವದಿಂದ ಪುಷ್ಟವಾದದ್ದು; ಅದಕ್ಕೆ ಮೆರುಗು ಕೊಡುವಂಥದು. ಅದು ಜೀವನದ ಮಾತು. ಈ ಕಾಡಿನ, ಕರೆಯ, ಬೆಟ್ಟದ, ಈ ಕೋಮಿನ, ಈ ವ್ಯಕ್ತಿಗಳ, ಈ ವೃತ್ತಿಗಳವರ ವಾಣಿ. ಅದರಲ್ಲಿ ಅಯಾ ಜೀವನದ ಕಾವು, ಮಿಡಿತ ವಿವಿಧತೆ ಉಂಟು. ಅದರ ನೋವು ನಲಿವು, ಆಶೋತ್ತರ, ಭಂಗ, ನಿರಾಶೆಗಳುಂಟು. ಒಂದು ಪ್ರದೇಶದ ಜೀವನಪ್ರಕಾರ, ಆ ಮಾತಿನ ಲಯ ಬಿಡಗು ಹೊಮ್ಮುತ್ತದೆ ಅಲ್ಲಿ.

ಅಷ್ಟು ಮಾಡಿರುವವರನ್ನು ಬರಿಯ ಮಾನವತ್ವವಾದಿಗಳು, ತಂತ್ರರಹಿತರು ಎಂಬಂತೆಲ್ಲ ಕೀಳು ನುಡಿವ ಪ್ರಜ್ಞಾಹೀನ ವೃತ್ತಿ ಕೆಲವರಲ್ಲಿ ಕಾಣಿಸುತ್ತದೆ. ಯಾರು ಯಾವ ಗುಣವನ್ನು ಪ್ರಕಾಶಕ್ಕೆ ತರುತ್ತಾರೊ ಅವರು ತಾವು ಕಂಡ ಕಾಣ್ಕೆಯನ್ನು ಮಾತ್ರ ತೋರಿಸುತ್ತಾರೆ; ತಮ್ಮ ಶಕ್ತಿಗೆ ತಕ್ಕಂತೆ ತಾನೇ ಯಾರೂ ಕಾಣಿಸುವುದು? In this best

of all possible worlds – ಶಕ್ಯವಾದ ಎಲ್ಲ ಪ್ರಪಂಚಗಳಲ್ಲಿ ಅತ್ಯುತ್ತಮವಾದ ಪ್ರಪಂಚದ ಸೃಷ್ಟಿ ಇದು, ಎಂಬುದು ತಾನೆ ದೇವರನ್ನು ಕುರಿತು ಕೂಡ ನಾವು ಹೇಳಬಲ್ಲದ್ದು? ಇದು ಸರ್ವ ಸಮರ್ಪಕವೆಂದು ಆ ಭಗವಂತನೇ ಹೇಳಬಲ್ಲನೊ! ನಾವೇ ಒಪ್ಪುತ್ತೇವೊ?

ಅಲ್ಲದೆ ಇನ್ನೊಂದು ಮಾತು; ಮಾನವತಾವಾದ (Humanism) ಕೀಳಲ್ಲ; ಮನುಷ್ಯನಿಗೆ ಬೇರೊಂದು ಶಕ್ಯವಿಲ್ಲ. ಇದ್ದರೆ ವಾದ ಅನುಮಾನಗಳ ಕಾಂಡ; ಅವರವರ ಕಲ್ಪನೆಯ ತಾಂಡವದ್ದು. ಅಲ್ಲಿ ಯಾರೂ ಏನನ್ನೂ ಹೇಳಬಹುದು. ಯಾರದೂ ನಿಜವಿರಬಹುದು; ಅಲ್ಲದಿರಬಹುದು. ಅಲ್ಲಿನ ಪ್ರಮಾಣಸ್ಥಾಪನೆ, ಅವಾಸ್ತವ ನುಡಿಗೆ ನಿಲುಕದ್ದು. ಅವಕ್ಕೆ ಒಳಪಟ್ಟದ್ದೇ ಸಾಹಿತ್ಯಕಲೆ – ಎಂಬುದು ಸಮಯ. ಅವನವನ ದೇವವಾನ ಕೂಡ, ಮಾನವನು ಪ್ರಕಾಶ ಮಾಡಿದ್ದು. ಅಲ್ಲಿ ಕೆಲವು ಕಾಲ್ಪನಿಕ; ಕೆಲವು ಭ್ರಾಮಕ; ಕೆಲವು ಬರಿಯ ಅವಟ, ಅಬ್ಬರ; ಅಂಥವೇ ಹಿರಿಯವೆಂದುಕೊಂಡವರು ಉಳಿದ ರೀತಿಗಳನ್ನು ತೆಗಳುವ, ಹೀನಾಯ ಮಾಡುವ, ಅಪಕ್ವ ಪ್ರವೃತ್ತಿ ಕೆಲವು ಕಡೆ ಕಾಣುತ್ತದೆ. ಅವರ ಹಿರಿಮೆಯಲ್ಲಿ ಅವರು ಕುದಿಯಲಿ; ಇನ್ನೊಬ್ಬರನ್ನು ಕೀಳಿನಿಸುವ ರೀತಿ ಅಸಭ್ಯ ಕೂಡ... ಇನ್ನು ತಂತ್ರವೆಂಬುದು ಇಂದಿನ ಕೆಲವರ ಮಹಾವಾದ. ಯಾವುದರ ತಂತ್ರ? ತಂತ್ರಕ್ಕೆಂದೇ ತಂತ್ರವಲ್ಲ. ಉತ್ತಮ ಕೃತಿಯನ್ನು ಉತ್ತಮವಾಗಿ ಮಾಡುವ ಅಂಶ ರೀತಿ, ವಿಧಾನ, ರಚನೆ ಅದರ ತಂತ್ರ. ಆಧುನಿಕ ತಂತ್ರ ಅಮೆರಿಕ, ಇಂಗ್ಲಂಡು, ಫ್ರಾನ್ಸಿನ ಹಲವು ಐಲುಗಳನ್ನೊ ಟೊಳ್ಳುಗಳನ್ನೊ ಹೊಮ್ಮಿದೆ. ಅಲ್ಲಿಯೇ ಸರ್ವಗ್ರಾಹ್ಯರಲ್ಲದವರಲ್ಲಿನ ಏನೊ ಕವಿತಾವಿಲಾಸವನ್ನು ಪ್ರಕಾಶಪಡಿಸಿದರೆ ಮಾತ್ರ ತಂತ್ರವೆಂದೂ ಅದು ಇಲ್ಲದಂದು ಇಲ್ಲಿನದನ್ನು ತೆಗಳುವುದೂ ಬುದ್ಧಿಯ ಅಪವ್ಯಯ.

ಅದೆಲ್ಲ ಹೇಗಾದರಾಗಲಿ. ಸರ್ವರೂ ಒಪ್ಪಬಹುದಾದ ಹಲವಾರು ಗದ್ಯರೂಪಕ, ಗೀತ ನೃತ್ಯ ಕೃತಿಗಳನ್ನು ನಿರ್ಮಾಣ ಮಾಡಿ ಕಾರಂತರು ಕೃತಾರ್ಥರಾಗಿದ್ದಾರೆ. ಅಂಥವರ ಮೇಧಾವಿತೆಗೆ, ಸಾಹಸಕ್ಕೆ, ಕೃತಿತ್ವಕ್ಕೆ ಮೆಚ್ಚಿ ನಮ್ಮ ವಿಶ್ವವಿದ್ಯಾನಿಲಯಗಳು ಪ್ರಶಸ್ತಿ ಕೊಡುತ್ತಿರುವುದು ತುಂಬಾ ಸಂತೋಷವನ್ನೂ ತೃಪ್ತಿಯನ್ನೂ ತರುವ ಸಂಗತಿ. ತನ್ನ ಕಾರ್ಯಗಳಿಗಿಂತ ಕಲೆಗಾರ, ಕೃತಿಕಾರ ಹಿರಿಯ. ಇಂಥ ಕೆಲಸಗಳನ್ನು ಈ ನಲವತ್ತು ವರ್ಷಗಳಲ್ಲಿ ಕಾರಂತರು ಇಷ್ಟು ಮಾಡಿದ್ದಾರೆ. ಅವರ ಶಕ್ತಿ ಉಡುಗಿಲ್ಲ; ಅಡಗಿಲ್ಲ. ಅವರ ಶ್ರದ್ಧೆ, ಉತ್ಸಾಹ ಕುಂದಿಲ್ಲ. ನಾಡನ್ನು ಕುರಿತು ಅವರ ಪ್ರೀತಿ ಭಕ್ತಿಗಳಿಗೆ ಚ್ಯುತಿ ಉಂಟಾಗಿಲ್ಲ. ದಿವ್ಯವನ್ನು ಬಿತ್ತಿ ಮೆರಸುವ ಮಹಾತ್ಮರು ಅವರು ಬಲ್ಲಂತೆ ದುಡಿಯಲಿ. ಕಾರಂತರ ಮಾನವತೆ, ಮೃದುತೆ, ಧೈರ್ಯ, ಸವಿ, ಸಮಾಧಾನ, ಪಕ್ವತೆಗಳನ್ನು ಪಡೆಯುತ್ತಿವೆ. ಇನ್ನೂ ನೂರು ಕೆಲಸಗಳನ್ನು ಕೈಕೊಂಡು ಮಾಡಲು ಅವರಿಗೆ ಇಷ್ಟ, ಶಕ್ತಿ ಇವೆ. ಅವರೊಡನೆ ಮಾತನಾಡಿದವರಾರಿಗೂ ಇದು ಕಂಡೀತು. ಅವುಗಳೆಲ್ಲ ರೂಪ ತಾಳುವಂತೆ ನಾಡು ನೆರವಾಗಲಿ. ಅವಾಗುವಂತೆ ಭಗವಂತನು ಅವರಿಗೆ ಆಯುರಾರೋಗ್ಯ ಭಾಗ್ಯಗಳನ್ನು ಕರುಣಿಸಲಿ; ಅವರಿಗೂ ಅವರ ಕುಟುಂಬದವರಿಗೂ ಸಂತೋಷ ಸಮೃದ್ಧಿ ನೆಮ್ಮದಿಗಳನ್ನು ಅನುಗ್ರಹಿಸಲಿ. (೧೯೬೩)

ಮೋಟಗಾ(ಗ)ನಹಳ್ಳಿ ಸುಬ್ರಹ್ಮಣ್ಯಶಾಸ್ತ್ರೀ

ಒಂದೇ ಪೇಟೆಯಲ್ಲಿ ನಾವಿಬ್ಬರೂ ಬೆಳೆದವರಾದರೂ ಸುಬ್ರಹ್ಮಣ್ಯಶಾಸ್ತ್ರಿಗಳ ಪರಿಚಯವಾಗಲಿ ಸ್ನೇಹವಾಗಲಿ ಅವರ ಜೀವನದ ಕಡೆಕಡೆಯ ೧೫–೨೦ ವರ್ಷಗಳವರೆಗೂ ನನಗೆ ಅಪ್ತವಾಗಿರಲಿಲ್ಲ. ಕಡೆಯ ಹತ್ತು ವರ್ಷವಂತೂ ತುಂಬ ಹತ್ತಿರದ್ದಾಗಿತ್ತು. ದಿವಸಕ್ಕೆ ಆರೇಳು ಗಂಟೆ ನಾವು ಜೊತೆಯಲ್ಲಿರುತ್ತಿದ್ದೆವು. ಅಂಥ ಸ್ನಿಗ್ಧತೆ ಸಾಮಾನ್ಯವಾಗಿ ಆ ಕಾಲದಲ್ಲಿ ಬೇರೆಲ್ಲಿಯೂ ನನಗೆ ದೊರಕದಾಗಿತ್ತು. ಒಂದೊಂದು ಕಾಲದಲ್ಲಿ ಈ ಭಾಗ್ಯ ನನಗೆ ಬೇರೆ ಬೇರೆಯವರಿಂದ ದೊರಕಿದೆ. ನಮ್ಮ ಕಡೆ ಗೆಳೆಯ ವೆಂಕಣ್ಣಯ್ಯ, ಎ. ಆರ್. ಕೃಷ್ಣಶಾಸ್ತ್ರಿಗಳು, ಎಂ. ಆರ್. ಶ್ರೀನಿವಾಸಮೂರ್ತಿ, ಬಿ. ವೆಂಕೋಬರಾವ್, ಎಸ್. ವಿ. ಶ್ರೀನಿವಾಸರಾವ್, ಎಸ್. ಮಂಜನಾಥರು, ಕೆ. ವಿ. ರಾಘವಾಚಾರ್ಯರು, ಕೆ. ಎಸ್. ನರಸಿಂಹಸ್ವಾಮಿ, ಈಚೆಗೆ ವೆಂಕಟೇಶಮೂರ್ತಿ ಇ. –ಹೀಗೆ ಗೆಳೆಯರು ನನ್ನನ್ನು ಕಾಪಾಡಿಕೊಂಡಿದ್ದಾರೆ. ಶಾಸ್ತ್ರಿಗಳನ್ನು ಕಾಣದವರು, ಒಡನಾಡದವರು ಅವರ ಸ್ವರೂಪವನ್ನು ಅರಿವುದು ಕಷ್ಟ. ಅದನ್ನು ವರ್ಣಿಸುವುದು ಇನ್ನೂ ಕಷ್ಟ. ಹೆಚ್ಚು ಮಾತಾಡುವವರಾದರೆ ಅದನ್ನು ತಿಳಿಸಬಹುದು. ಬದುಕಿನಲ್ಲಿ ಹೆಚ್ಚು ಘಟನೆಗಳಿದ್ದು ಅಥವಾ ಸಾರ್ವಜನಿಕ ವೇದಿಕೆಯ ಮೇಲೆ ಹೆಚ್ಚು ಸಲ ಪ್ರಕಾಶಕ್ಕೆ ಬಂದಿದ್ದರೆ ಅದನ್ನು ವರ್ಣಿಸಬಹುದಿತ್ತು. ಶಾಸ್ತ್ರಿಗಳು ಮಾತಾಡದವರೆಂದಲ್ಲ; ವೇದಿಕೆಗಳ ಮೇಲಿಂದ ಭಾಷಣಗಳನ್ನು ಮಾಡದವರೂ ಅಲ್ಲ. ಆದರೆ ಅವು ಮಿತ ಸಂದರ್ಭಗಳು. ಅಲ್ಲಿಯೂ ದನಿ ಎತ್ತಿ ಮಾತಾಡಿದವರಲ್ಲ. ನನಗಿಂತ ಹೆಚ್ಚು ಎತ್ತರದ ಆಳು; ಆದುದರಿಂದ ಜನರ ಕಣ್ಣಿಗೆ ಅವರು ಮೊದಲು ಬೀಳುತ್ತಿದ್ದರು. ಎಲ್ಲದರಲ್ಲಿಯೂ ಹೊಸಬರು ಇವರಾರು ಎಂದು ಮತ್ತೊಬ್ಬರನ್ನು ಕೇಳಿ ತಿಳಿದುಕೊಳ್ಳುವ ಕುತೂಹಲ ಉಂಟುಮಾಡುತ್ತಿತ್ತು. ಅವರನ್ನು ಕುರಿತು ಬರೆವ ಮುಂಚೆ ಅವರ ಮನೆಯನ್ನು ಕುರಿತು ಎರಡು ಮಾತು.

ಚಾಮರಾಜಪೇಟೆಯ ನಾಲ್ಕೈದು ರಸ್ತೆಗಳು ಮೊದಲಿಂದ ಪ್ರಖ್ಯಾತವಾದವು. ಐದನೆಯದರಲ್ಲಿ ಶ್ರೀಮಂತರಾಗಿಯೊ ಸರ್ಕಾರದ ದೊಡ್ಡ ಹುದ್ದೆಗಳಲ್ಲಿಯೊ ಇದ್ದು ಸುಮಾರು ವಿಶ್ರಾಂತಿಯ ಕಾಲ ಮುಟ್ಟಿದ ಜನ ಹೆಚ್ಚು ಮಂದಿ. ಶಾಸ್ತ್ರಿಗಳ ಚಿಕ್ಕತಂದೆಯವರಲ್ಲಿ ಒಬ್ಬರು ಮಾತ್ರ ಅಲ್ಲಿದ್ದರು. ಅವರು ವೈದ್ಯರು. ಆ ರಸ್ತೆಯ ಪಡುವಲ ಕಡೆಯಿಂದ ಕೋಟೆಗೆ ಬರುವ ಕಡೆ ನೋಡಿದರೆ ಡಾ. ಅಚ್ಯುತರಾಯರು, ಹುಚ್ಚಾಸ್ಪತ್ರೆಯ (ಆ ಕಾಲದಲ್ಲಿ ಅದಕ್ಕೆ ಆ ಹೆಸರಿತ್ತು. ಅದು ಆಗ ಆಸ್ಪತ್ರೆ ಗಲ್ಲಿಗೂ ಮೈಸೂರು ಬ್ಯಾಂಕಿನ ಕಚೇರಿಯ ಈಚೆಗೂ ನಡುವೆ ದೊಡ್ಡಪೇಟೆಗೆ ಸೇರುವವರೆಗೂ ಇದ್ದಿತು. ಈ ಕಡೆ ಹುಚ್ಚಾಸ್ಪತ್ರೆ, ಆ ಕಡೆ ಬೆಂಗಳೂರು ಸೆಂಟ್ರಲ್ ಜೈಲ್. ಈ ಎರಡರ ನಡುವೆ ಇರುವ ರಸ್ತೆ– ಈಗಿನ ಕೆಂಪೇಗೌಡ ರಸ್ತೆ) ರಾಘವೇಂದ್ರರಾಯರು, ಎಚ್. ರಾಮಯ್ಯನವರು, ಆರ್. ರಘುನಾಥರಾಯರು, ಕೆ. ಆರ್. ಶ್ರೀನಿವಾಸಯ್ಯಂಗಾರ್, ಪುಟ್ಟಣ್ಣಶೆಟ್ಟರು, ಚೆಂಗಯ್ಯಶೆಟ್ಟರು, ಬಿ. ಪುಟ್ಟಯ್ಯನವರು,

ಸಿ. ಎಸ್. ದೊರೆಸ್ವಾಮಿ ಅಯ್ಯರ್. ಈ ಕಡೆ ಮುಂದೆ ಬಂದರೆ ಅಪ್ಪೂರಾಯರು, ಮೊದಲು ಸಿ. ಕೃಷ್ಣರಾಯರು, ಆಮೇಲೆ ಮೋಕ್ಷಗುಂಡಂ ರಾಮಚಂದ್ರರಾವ್ ಮನೆ, ಬಲಗಡೆಗೆ ದೇಶ್‌ಮುಖ್ ಶ್ಯಾಮರಾಯರು, ಕಡೇಮನೆ ರಾಮರಾಯರು, ಡೆಪ್ಯುಟಿ ಕಮಿಷನರ್ ನಾರಾಯಣರಾಯರು – ಹೀಗೆ ಎಲ್ಲ ಹೆಸರಾದ ಬೆಂಗಳೂರಿನ ಹಿರಿಯ ಪ್ರಜೆಗಳು. ಇವುಗಳಲ್ಲಿನ ಯಜಮಾನರನ್ನು ಕುರಿತು ಚಾಮರಾಜಪೇಟೆಗೆ ಅಭಿಮಾನ; ಬೆಂಗಳೂರಿಗೆ ಮೆಚ್ಚು, ಗೌರವ.

ನಾಲ್ಕನೆಯ ರಸ್ತೆಗೆ ಬಂದರೆ ಅದರ ಪೂರ್ವಭಾಗ ವಿದ್ವಾಂಸರಿಗೆ ಹೆಸರಾದುದು. ಆ ವಿದ್ವಾಂಸರೆಲ್ಲರೂ ಈಗಿನ ಶಂಕರಮಠದ ರಸ್ತೆಯ ಈಚೆ ಆಚೆ ಕಡೆಯವರು. ಲಾಯರು ಎಂ. ಜಿ. ವರದಾಚಾರ್, ನಾರಾಯಣಸ್ವಾಮಿ ಅಯ್ಯರ್, ಗೋಪಾಲಸ್ವಾಮಿ ಅಯ್ಯರ್ ಮನೆ ಆದಮೇಲೆ ವೆಂಕಟರಾಮ ಶಾಸ್ತ್ರಿಗಳು, ಪಕ್ಕದಲ್ಲಿ ಅನುಗೊಂಡನಹಳ್ಳಿ ಸುಬ್ಬಣ್ಣನವರ ಮನೆ, ಅವರ ಎದುರಿಗೆ ವಿಶ್ವೇಶ್ವರಶಾಸ್ತ್ರಿಗಳು. ಶಂಕರಮಠದ ಕಡೆ ಮೋಟಗಾನಹಳ್ಳಿ ರಾಮಶೇಷ ಶಾಸ್ತ್ರಿಗಳು, ಅವರಣ್ಣ ಶಂಕರಶಾಸ್ತ್ರಿಗಳು. ಎದುರಿನ ರಾಮೇಶ್ವರ ಗುಡಿದಾಟಿದರೆ ಮೇಲೆ ಎಡಕ್ಕೆ ಎಂ. ಶಾಮರಾಯರು. ಅದರ ಎದುರು ಆಚೆಗೆ ಡೆಪ್ಯುಟಿ ಕಮಿಷನರ್ ನಾನಾರಾಯರು –ಎಲ್ಲ ಆ ಕಾಲದಲ್ಲಿ ಹೆಸರಾದವರು. ಚಪ್ಪಲ್ಲಿ ವಿಶ್ವೇಶ್ವರಶಾಸ್ತ್ರಿಗಳು ಬೆಂಗಳೂರು ಸೆಂಟ್ರಲ್ ಕಾಲೆಜಲ್ಲಿ ಸಂಸ್ಕೃತ ವಿದ್ವಾಂಸರು. ಹೊಸಕೋಟೆ ವೆಂಕಟರಾಮ ಶಾಸ್ತ್ರಿಗಳು ಎಲ್ಲಿಯೊ ಮಿಷನ್ ಸ್ಕೂಲಲ್ಲಿ ಉಪಾಧ್ಯಾಯರು. ಮೋಟಗಾನಹಳ್ಳಿ ಸೋದರರ ವಿಚಾರ ಅನಂತರ ಹೇಳುತ್ತೇನೆ. ಅವರ ಮನೆ ಪಕ್ಕದಲ್ಲಿ ಚೆನ್ನರಾಯಪಟ್ಟಣದ ವೆಂಕಟರಮಣಯ್ಯನವರು. ಅವರು ಕೋಟೆಯ ಸಂಸ್ಕೃತ ಕಾಲೆಜಿನ ಮುಖ್ಯೋಪಾಧ್ಯಾಯರು. ಎಂ. ಶಾಮರಾಯರು ವಿದ್ಯಾ ಇಲಾಖೆಯ ಇನ್ಸ್‌ಪೆಕ್ಟರ್–ಜನರಲ್ ಆಗಿದ್ದರು. ಇವರೆಲ್ಲರೂ ವಿದ್ವಾಂಸರು. ಬೆಂಗಳೂರಿನ ದಕ್ಷಿಣದ ಕಡೆಯಲ್ಲಿ, ಬೆಂಗಳೂರಿನ ಮೂಲಭಾಗಕ್ಕೆ ಈ ಕಡೆಯ ಮೊದಲ ವಿಸ್ತರಣ ಚಾಮರಾಜಪೇಟೆ. ಉಳಿದ ಹೊಸ ವಿಸ್ತರಣಗಳಿಗೆ ಹೋಲಿಸಿದರೆ ಇದು ಈಗ ಹಳ್ಳಿ. ಬಹುಮಟ್ಟಿನ ಶ್ರೀವೈಷ್ಣವ ಭಾಗ ಸರ್ಕಾರಿ ಅಧಿಕಾರಿಗಳ ಭಾಗ, ಮುಂದಿನ ಕಾಲದಲ್ಲಿ ಮಲ್ಲೇಶ್ವರದ ವಿಸ್ತರಣವಾಯಿತು.

ನನಗೆ ಈಗ ಅದು ಸಂಬಂಧಿಸಿದುದಲ್ಲ. ಅದು ಬೆಳೆದ ರೀತಿಯೂ ವಿಚಿತ್ರವೇ. ಬೆಂಗಳೂರು ವಿಸ್ತರಣಗಳು ವಿಧವಿಧವಾಗಿ ಬೆಳೆದಿವೆ. ಈಗಂತೂ ಹೊಸ ವಿಭಾಗ ಎಲ್ಲಿ ಹೇಗೆ ಬೆಳೆಯುತ್ತಿದೆ ಎಂಬುದು ಹಳಗಾಲ್ದ ಬೆಂಗಳೂರವರಿಗೆ ದುಸ್ತರವಾಗುತ್ತಿದೆ. ಒಟ್ಟು ೧೯೧೧–೧೨ರ ಕಾಲದಲ್ಲಿ ಸ್ಥಾಪಿತವಾದ ಕಣ್ಣಾಸ್ಪತ್ರೆಯಿಂದ ಹಿಡಿದು ಪೊಲೀಸ್ ಸ್ಟೇಷನ್, ಮಸೀದಿ ಮೈದಾನದವರೆಗೂ – ಅಲ್ಲಿಂದ ಮುಂದಕ್ಕೂ ಹರಡಿರುವ ಮೊದಲ ರಸ್ತೆಯಿಂದ ಹಿಡಿದು, ಐದನೆ ರಸ್ತೆಯಲ್ಲಿ ಸಿಟಿ ಇನ್ಸ್‌ಟ್ಯೂಟ್‌ನಿಂದ ಹಿಡಿದು ಡಾ. ರಾಘವೇಂದ್ರರಾಯರ ಮನೆ ದಾಟಿ ಕಡೆಗೆ ಕೆಂಪಾಂಬುಧಿಗೆ ನಡಸುವವರೆಗೂ ಬೆಳೆದ ಭಾಗ ಚಾಮರಾಜಪೇಟೆ. ಈಚಿನ ಕಾಲದಲ್ಲಿ ಬೆಳೆದದ್ದು ಆರನೆಯ ರಸ್ತೆಯ ತುಣುಕು. ಅದೇ ಬೀದಿ ಪೂರ್ವದಲ್ಲಿ ಸುಮಾರು ೧೯೧೩–೧೪ರವರೆಗೂ ಗಟ್ಟಿಯಾಗಿ ನಿಂತಿದ್ದ ಟಿಪ್ಪುಸುಲ್ತಾನರ ಕೋಟೆಯ ಆರಮನೆಯವರೆಗೂ ವಿಸ್ತರಿಸಿತ್ತು. ಆ ಕೋಟೆಯಿಂದ ಆಚೆಕಡೆ ಕೋಟೆ ಹೈಸ್ಕೂಲು,

ಆಂಗ್ಲೊ ವರ್ನಾಕ್ಯುಲರ್ ಸ್ಕೂಲು –ಎಂಬ ಭಾಗ ಚಾಮರಾಜಪೇಟೆಯ ಚೌಕಟ್ಟಿಗೆ ಸೇರಿದ್ದೇ. ಆ ಸ್ಕೂಲಿನ ಎಡಕ್ಕೆ ಅವೆನ್ಯೂ ರಸ್ತೆಯಲ್ಲಿ ತಾಲೂಕು ಕಚೇರಿ. ಅದರಾಚೆಗೆ ಚಿಕ್ಕದೇವರಾಜರ ಕಾಲದಲ್ಲಿ ಕಟ್ಟಿದ ವೆಂಕಟರಮಣಸ್ವಾಮಿ ಗುಡಿ. ಎಂದರೆ ಅಲ್ಲಿಂದ ಹಿಡಿದು 'ಈದ್‌ಗಾ'ವರೆಗೂ ಸಿಟಿ ಇನ್ಸ್‌ಟಿಟ್ಯೂಟ್‌ನಿಂದ ಕೆಂಪಾಂಬುಧಿಯವರೆಗೂ ನಡುವೆ ಇರುವ ಭಾಗ ಹುಡುಗರಾದ ನಮ್ಮ ಬಳಕೆಯ ಭಾಗ. ಸುಮಾರು ಅಲ್ಲಿ ಏನು ನಡೆದರೂ ನಮಗೆ ಗೊತ್ತಿಲ್ಲದೆ ನಡೆಯುತ್ತಿರಲಿಲ್ಲ. ನಾವು ಅಲ್ಲಿ ಮುನಿಸಿಪಲ್ ಸ್ಕೂಲ್, ಎ. ವಿ. ಸ್ಕೂಲುಗಳ ವಿದ್ಯಾರ್ಥಿಗಳಾಗಿದ್ದು ನಮ್ಮ ಆಟದ ಮೈದಾನ, ಇತರ ಬಗೆಬಗೆಯ ಪಂದ್ಯಗಳು ನಡೆಯುತ್ತಿದ್ದ ಭೂಮಿಯಾಗಿದ್ದುದರಿಂದ ಎಚ್ಚರವಿದ್ದ ಎಲ್ಲ ಗಂಟೆಗಳಲ್ಲಿಯೂ ಗೋಲಿಯಾಡಿ, ಬುಗುರಿಯಾಡಿ ಸೋತು, ಡೋಕುವುದರಿಂದ ಹಿಡಿದು, ಚಿಣ್ಣೆ ಅಥವಾ ಗಿಲ್ಲಿದಾಂಡು ಆಟ, ಕಾಂಡ್‌ರೇಸ್, ರ್‍ಯಾಕೆಟ್ ಆಟ, ಕಾಲ್‌ಚೆಂಡು, ಕ್ರಿಕೆಟ್ ಆಟಗಳಲ್ಲೆಲ್ಲ ಭಾಗವಹಿಸುತ್ತಿದ್ದುದರಿಂದ ಚಾಮರಾಜಪೇಟೆಯಲ್ಲಿ ನಡೆಯುವ ಯಾವುದೂ ನಮ್ಮ ಕಣ್ಣು ತಪ್ಪುತ್ತಿರಲಿಲ್ಲ.

ಅವುಗಳಲ್ಲಿ ಇನ್ನೂ ಮೂರು ಹೆಚ್ಚು ಸಾರ್ವಜನಿಕವಾದ ಘಟನೆಗಳು. ಟಿಪ್ಪುಸುಲ್ತಾನರ ಅರಮನೆಯ ಎದುರಿಗೆ ಇದ್ದ ಸಂಸ್ಕೃತ ಕಾಲೆಜಲ್ಲಿ ಬೆಂಗಳೂರು ಗಾಯನ ಸಮಾಜದ ಕಚೇರಿಗಳು ನಡೆಯುತ್ತಿದ್ದವು. ಆ ಕಾಲೆಜಲ್ಲಿ ಬಹುಜನ ಚಾಮರಾಜಪೇಟೆಯ ವಿದ್ವಾಂಸರು ಉಪಾಧ್ಯಾಯರಲ್ಲದೆ ಮೇಲೆ ಹೇಳಿರುವಂತೆ ಚೆನ್ನರಾಯಪಟ್ಟಣದ ವೆಂಕಟರಮಣಯ್ಯನವರು ಪ್ರಿನ್ಸಿಪಲರು. ಗಾಯನ ಸಮಾಜಕ್ಕೆ ಇಬ್ಬರು ಸೆಕ್ರೆಟರಿಗಳು. ಒಬ್ಬರು ಲಂಡನ್ ಮಿಷನ್ ಹೈಸ್ಕೂಲಿನ ಹೆಡ್‌ಮಾಸ್ಟರ್ ಆದ ರಾಮಚಂದ್ರರಾಯರು; ಇನ್ನೊಬ್ಬರು ಸುಬ್ರಹ್ಮಣ್ಯ ಅಯ್ಯರ್. ಅವರಾದ ಮೇಲೆ ಅನಂತರಾಮ ಭಾಗವತರ ತಮ್ಮಂದಿರಾದ ಸೋಮೇಶ್ವರ ಅಯ್ಯರ್. ಅದು ಪೂರ್ತಿ ಅಯ್ಯರ್ ಪ್ರಾಬಲ್ಯದ ಕಾಲ. ಶಾಶ್ವತವಾಗಿ ಗಾಯನ ಸಮಾಜದ ಪರಮಪ್ರತಿನಿಧಿಯಾದ ಕೃಷ್ಣಪ್ಪ ಅದರ ಗುಮಾಸ್ತರು. ಕೃಷ್ಣಪ್ಪನವರಿಲ್ಲದೆ ಇದ್ದರೆ ಗಾಯನ ಸಮಾಜದ ವ್ಯವಸ್ಥೆ ಅವ್ಯವಸ್ಥೆ. ಆತನು ನಮ್ಮ ನೆನಪಿನಲ್ಲಿ ಚಿರಂಜೀವಿ. ಇತ್ತ ಈ ಸಂಸ್ಕೃತ ಕಾಲೆಜ್ ಪರಭಸ್ತವಾದ ಮೇಲೆ ಐದನೆಯ ರಸ್ತೆಯ ಆಚೆ ಶಂಕರಪುರದಲ್ಲಿರುವ ಶಂಕರಯ್ಯ ಹಾಲಲ್ಲಿ ಗಾಯನ ಸಮಾಜದ ಕಚೇರಿಗಳು ನಡೆಯುತ್ತಿದ್ದವು. ಈ ಎರಡರಲ್ಲಿಯೂ ಅಧಿಷ್ಠಾತ್ರಿಯಂತೆ ನ್ಯಾಯಾಧೀಶರಾಗಿದ್ದ ಕೆ. ಚಂದ್ರಶೇಖರ ಅಯ್ಯರವರು. ಒಂದೆರಡು ಕಚೇರಿಗಳು ನಮ್ಮ ಕೋಟೆ ಎ. ವಿ. ಸ್ಕೂಲಲ್ಲಿ ನಡೆದವು. ಪಾಲ್‌ಘಾಟ್ ಪುದುಕೋಟೆಯ ನಾರಾಯಣಸ್ವಾಮಿ ಅಯ್ಯರವರ ವಯೊಲಿನ್ ವಿಸಿಕೆ.

ಮೂರನೆ ರಸ್ತೆಯ ರಾಮೇಶ್ವರ ದೇವಸ್ಥಾನದ ಹಿಂಭಾಗದಲ್ಲಿ ನಾಲ್ಕನೆಯ ರಸ್ತೆಯಲ್ಲಿ ಶಂಕರಮಠದ ಮೇಲಕ್ಕೆ ಹಿಂದೆ ಹಾರ್ಡಿಂಗ್ ರಸ್ತೆಯಾಗಿದ್ದ ಇಂದಿನ ಪಂಪಮಹಾಕವಿ ರಸ್ತೆಯವರೆಗೆ ಇದ್ದ ಭಾಗದಲ್ಲಿ ಒಂದು ಕಾಲದಲ್ಲಿ ಎಂ. ಜಿ. ವರದಾಚಾರ್ ಅವರೂ ಅನಂತನಾರಾಯಣಯ್ಯರ್ ಎಂಬವರೂ ಆಮೇಲೆ ಪೆಡ್ಡೂಲ್ಟ್ ಕ್ಯಾಪ್ಟ್ ಜನರ ನಾಯಕರೂ R.A. ಅಲ್ಲಿ ಜನ ಪ್ರತಿನಿಧಿಗಳ ನೆರವಿಗೂ ನಿಂತ ಆರ್. ಗೋಪಾಲಸ್ವಾಮಿ ಅಯ್ಯರ್

ಅವರೂ ಇದ್ದರು. ವರದಾಚಾರ್ಯರಷ್ಟು ಮೇಧಾವಿಗಳೂ ಆಧುನಿಕ ಮನೋಭಾವದವರೂ ಹೆಚ್ಚು ಜನ ಬೆಂಗಳೂರಲ್ಲಿ ಲಾಯರುಗಳಿರಲಿಲ್ಲ. ಯಾವ ಸಾರ್ವಜನಿಕ ಕಾರ್ಯವಾಗಬೇಕಾಗಲಿ, ಉಪನ್ಯಾಸಗಳಾಗಲಿ, ಸಾಹಿತ್ಯಕ ಅಥವಾ ಸಾಮಾಜಿಕ ಪ್ರಸಂಗಗಳಾಗಲಿ ಅವುಗಳಲ್ಲಿಲ್ಲ ಮಂದಾಳಾಗಿ ನಿಂತಿರುತ್ತಿದ್ದವರು ಅವರು. ಅವರ ಪುಸ್ತಕ ಭಂಡಾರ, ಕಾನೂನು ಮತ್ತು ನ್ಯಾಯಶಾಸ್ತ್ರಗಳಿಗೆ ಮಾತ್ರವೇ ಮಿತವಾಗಿದ್ದಿರಲಿಲ್ಲ; ಸಾಹಿತ್ಯ ಚರಿತ್ರೆ, ರಾಜ್ಯಶಾಸ್ತ್ರ, ಮಾರ್ಲೆ, ಮಿಲ್ ಪುಸ್ತಕಗಳು, ಹರ್ಬರ್ಟ್ ಸ್ಪೆನ್ಸರ್, ಭಾರತದಲ್ಲಿ ಹೊಸಕಾಲದ ಪ್ರವರ್ತಕರಾದ ಗಣ್ಯನಾಯಕರ ಕೃತಿಗಳು, ಅನೇಕ ನಿಯತಕಾಲಿಕೆಗಳು ಅವರಲ್ಲಿ ಇರುತ್ತಿದ್ದವು. ನಾಲ್ಕನೆಯ ರಸ್ತೆಯಲ್ಲಿ ಇವರು, ಅಲ್ಲಿಂದ ನಾಲ್ಕತ್ತು ಗಜ ದೂರದಲ್ಲಿ ಐದನೆಯ ರಸ್ತೆಯಲ್ಲಿ ಸಿ. ಎಸ್. ದೊರೆಸ್ವಾಮಿ ಅಯ್ಯರು. ಈ ಇಬ್ಬರೂ ತುಂಬಾ ಪ್ರಖ್ಯಾತರಾದ ವಿದ್ವಾಂಸರು. ವರದಾಚಾರ್ ಮನೆ ದಾಟಿದ ಮೇಲೆ (ರಾಮೇಶ್ವರ ದೇವಸ್ಥಾನದ ಹಿಂದಿನ ನಾಲ್ಕನೆಯ ರಸ್ತೆಯಲ್ಲಿ) ಮೋಟಗಾನಹಳ್ಳಿ ರಾಮಶೇಷ ಶಾಸ್ತ್ರಿಗಳು, ಶಂಕರಶಾಸ್ತ್ರಿಗಳು ಇದ್ದರು. ಶಂಕರಶಾಸ್ತ್ರಿಗಳ ಮಕ್ಕಳೇ ಸುಬ್ರಹ್ಮಣ್ಯಶಾಸ್ತ್ರಿಗಳು. ಮೊದಲ ಮಗ ದಕ್ಷಿಣಾಮೂರ್ತಿ ತೀರಿಕೊಂಡು ಈಗ ಈ ಒಬ್ಬರು ಉಳಿದುಕೊಂಡಿದ್ದರು. ಹೆಣ್ಣು ಮಕ್ಕಳು ಒಬ್ಬರೊ ಇಬ್ಬರೊ. ಶಂಕರಶಾಸ್ತ್ರಿಗಳು ದೊಡ್ಡವರು. ರಾಮಶೇಷ ಶಾಸ್ತ್ರಿಗಳು ಅವರ ತಮ್ಮ. ಇಬ್ಬರೂ ಸಂಸ್ಕೃತ ವಿದ್ವಾಂಸರು. ರಾಮಶೇಷ ಶಾಸ್ತ್ರಿಗಳು 'ವೇಣೀಸಂಹಾರ' ನಾಟಕವನ್ನೂ ಭಾಗವತವನ್ನೂ ಇನ್ನೊಂದೆರಡು ಸಂಸ್ಕೃತ ಕಾವ್ಯಗಳನ್ನೂ ಭಾಷಾಂತರಿಸಿದ್ದರು. ಅವರು ಕಡೆಕಡೆಗೆ ಮೈಸೂರು ಅರಮನೆಯಲ್ಲಿ ಪಾಠ ಹೇಳುತ್ತಿದ್ದರಲ್ಲದೆ ಮಹಾರಾಣಿ ಕಾಲೇಜಲ್ಲಿ ಸಂಸ್ಕೃತ ಅಧ್ಯಾಪಕರಾಗಿ ವಿಶ್ರಾಂತರಾದರು; ಆಜಾನುಬಾಹು. ಶಂಕರಶಾಸ್ತ್ರಿಗಳೂ ಒಂದೆರಡು ಸಂಸ್ಕೃತ ಗ್ರಂಥಗಳನ್ನು ಕನ್ನಡಿಸಿದರಲ್ಲದೆ ಸ್ವಂತವಾಗಿ ಇಂದ್ರಸಭಾ, ಹರಿಶ್ಚಂದ್ರ, ಪ್ರಭಾವತಿ ದರ್ಬಾರ್ ಮುಂತಾದ ಜನಪ್ರಿಯ ನಾಟಕಗಳನ್ನು ಆಗ ಪ್ರಸಿದ್ಧರಾಗಿದ್ದ ನಾಟಕ ಪ್ರದರ್ಶನಕಾರರಿಗೆ ದೊರಕಿಸಿದ್ದರು. ಸೋದರರಿಬ್ಬರೂ ಅಶುಕವಿಗಳು –ಸಂಸ್ಕೃತದಲ್ಲಿ, ಕನ್ನಡದಲ್ಲಿ. ಯಾವ ಛಂದಸ್ಸು, ಅಲಂಕಾರಗಳನ್ನಾಗಲಿ ದಕ್ಷತೆಯಿಂದ ಸುಸೂತ್ರವಾಗಿ ನಡಸಬಲ್ಲವರು. 'ಆಕಾರ ಸದೃಶ ಪ್ರಜ್ಞೆ' ಎಂಬ ಮಾತುಂಟು: ಕಾಳಿದಾಸ ಸೂರ್ಯಕುಲದ ರಾಯರನ್ನು ವರ್ಣಿಸುವಾಗ ಬಳಸುವಂಥದು. ಇವರ ಪ್ರಜ್ಞೆ ಅಸಾಧಾರಣ. ಶಂಕರಶಾಸ್ತ್ರಿಗಳಿಗಂತೂ ಇತರ ಶಾಸ್ತ್ರಗಳೂ ವೇದೋಪನಿಷತ್ತುಗಳೂ ಹೃದ್ಗತ, ಮುಖಸ್ಥವಾಗಿದ್ದವು. ಹಾಗೆಯೇ ಸ್ಮೃತಿಗಳಲ್ಲಿಯೂ ಅತಿಶಯ ಪಾಂಡಿತ್ಯವಿತ್ತು ಎನ್ನುತ್ತಾರೆ. ಸಭೆಯಲ್ಲಿ ಯಾರಾದರೂ ಇದ್ದರೆ ಇವರ ಎದುರಿಗೆ ನಿಂತು ವಾದಿಸುವವರು ವಿರಳ. ಶಂಕರಶಾಸ್ತ್ರಿಗಳ ಗಂಟಲು ಕಂಠೀರವರಾವ. ಅವರು ಕುಳ್ಳು. ದಪ್ಪಗಿದ್ದರು. ಸ್ವಲ್ಪ ಸಿರಿಬಾಯಿ. ಕುಚೇಷ್ಟೆಯವರು. ಅದು ಸಿಂಹ ಅಲ್ಲವೊ ಶರಭ ಎನ್ನುತ್ತಿದ್ದುದುಂಟು. ಈ ಸಂಗತಿ ಅವರಿಗೆ ತಿಳಿದಿದ್ದರೂ ಅವರ ಎದುರಿಗೆ, ಅವರ ಕಿವಿಗೆ ಬೀಳುವ ಹಾಗೆ, ನುಡಿಯಲು ಯಾರಿಗೂ ಧೈರ್ಯವಿರುತ್ತಿರಲಿಲ್ಲ. ಬೆಂಗಳೂರು ದಂಡಿನಲ್ಲಿ –ಬಹುಶಃ ಆರ್ಕಾಟ್ ನಾರಾಯಣಸ್ವಾಮಿ ಸ್ಕೂಲಲ್ಲಿ– ಉಪಾಧ್ಯಾಯರಾಗಿದ್ದರು. ಸಂಜೆಯ ಹೊತ್ತು ಪ್ರತಿದಿನ ಅಥವಾ ವಾರಕ್ಕಷ್ಟು ದಿನ ಎಂಬಂತೆ ಚಾಮರಾಜಪೇಟೆಯಿಂದ ದಂಡಿಗೆ ಪುರಾಣ ಹೇಳಲು ಹೋಗುತ್ತಿದ್ದರು. ತಿಂಗಳಿಗೆ ಇಷ್ಟು

ಎಂದು ಅವರಿಗೆ ಅದಕ್ಕೆ ಸಂಭಾವನೆ ಕೊಡುತ್ತಿದ್ದರಲ್ಲದೆ ಪ್ರತಿದಿವಸದ ಕೊಸೆಗೆ ಆರತಿಗೆ ಬಿದ್ದ ಹಣವೆಲ್ಲ ಅವರದೇ. ಸ್ಕೂಲಿಗೆ ಹೋಗುವಾಗ ಕೋಟು ತೊಟ್ಟು, ಶಾಲು ರುಮಾಲು ಸುತ್ತಿ ಹೋಗುತ್ತಿದ್ದರಾದರೂ ಇತರವಾಗಿ ಶಾಲು, ಒಳಗೆ ಒಂದು ಉತ್ತರೀಯ ಸೇರಿಸಿ ಹೊದೆದು, ಯಾವುದಾದರೊಂದು ಪುಸ್ತಕವನ್ನು ಹಿಡಿದು ಪುರಾಣಕ್ಕೆ ಹೋಗುವರು. ರಾಮಶೇಷಶಾಸ್ತ್ರಿಗಳೂ ಹೀಗೆ ಮಾಡುತ್ತಿದ್ದರೊ ಏನೊ ತಿಳಿಯೆ. ಚಾಮರಾಜಪೇಟೆಗೆಲ್ಲ ಶಂಕರಶಾಸ್ತ್ರಿಗಳ ಮತ್ತು ಚಪ್ಪಲ್ಲಿ ವಿಶ್ವೇಶ್ವರಶಾಸ್ತ್ರಿಗಳ ಮಾತು ಪರಮಪ್ರಮಾಣ. ನನ್ನ ಎರಡನೆಯ ಬೀದಿಗೆ ಶ್ರೀ ಹರಿಯಾಚಾರ್ಯರು.

ಆ ಮನೆಯಲ್ಲಿ ಸುಮಾರು ಎಲ್ಲರಿಗೂ ಶಾಸ್ತ್ರಜ್ಞಾನದ ಜೊತೆಗೆ ಸಂಗೀತಜ್ಞಾನವೂ ಇತ್ತು. ಕಾರ್ತೀಕ ಮಾಸದ ತಿಂಗಳ ಪೂಜೆಯಲ್ಲಿ 'ಋಗ್ವೇದಮವಧಾರಯ' ಎಂಬಂತೆ ಇತರ ವೇದಗಳ ಹೆಸರನ್ನು ಹೇಳುವುದು, ಶ್ಲೋಕ ಚೂರ್ಣಿಕೆ ಇವುಗಳನ್ನೆಲ್ಲ ಶ್ರೀರಾಮನ ಕಿವಿಗೆ ಹಾಕಿ ಎಂದಾಗ – ಈಶ್ವರನ ಸ್ತೋತ್ರ ಕಡಮೆ – ಈ ಅಣ್ಣತಮ್ಮಂದಿರು ಒಬ್ಬರು ಚೂರ್ಣಿಕೆಯನ್ನೂ ಇನ್ನೊಬ್ಬರು ಶ್ಲೋಕವನ್ನೂ ಹೇಳುವುದು ಪದ್ಧತಿ. ವಿಶ್ವೇಶ್ವರಶಾಸ್ತ್ರಿಗಳಂತೂ ತಪ್ಪದೆ ಶಂಕರಾಚಾರ್ಯರದೆನ್ನುವ ಷಟ್‌ಶ್ಲೋಕಿಯಲ್ಲಿ 'ಅವಿನಯಮಪನಯ ವಿಷ್ಣೋ' ಎಂದು ಆರಂಭಮಾಡಿ: 'ದಮಯ ಮನಃ ಶಮಯ ವಿಷಯಮೃಗತೃಷ್ಣಾ। ಭೂತದಯಾಂ ವಿಸ್ತಾರಯ ತಾರಯಮಾಂ ಸಂಸಾರಸಾಗರತಃ' ಎಂಬುದನ್ನು ಓದುವುದು. ಇನ್ನೊಂದನ್ನು ಅಪ್ಪಣೆ ಕೊಡಿಸಿ ಎಂದರೆ 'ಸತ್ಯಪಿ ಭೇದಾಪಗಮೇನಾಥ ತವಾಹಂನ ಮಾಮಕೀನಃ ತ್ವಂ। ಸಾಮುದ್ರೋ ಹಿ ತರಂಗಃ। ಕ್ವ ಚ ನ ಸಮುದ್ರೋ ನ ತಾರಂಗಃ' ಎಂದು ಹೇಳಿ ಮುಗಿಸುತ್ತಿದ್ದರು. ಇಷ್ಟೇ. ಈ ಅಣ್ಣತಮ್ಮಂದಿರತ್ತ ನೋಡಿದರೆ, ಇಬ್ಬರಲ್ಲಿ ಒಬ್ಬರು ಭವಭೂತಿಯ ಶಿವನ ಆಸ್ಥಾನದ ಒಂದು ಚಿತ್ರವನ್ನು ಒಳಗೊಂಡ 'ಸಾನಂದಂ ನಂದಿಹಸ್ತಾ ಮುರಜರವಾಹೂತ ನಾಸಾಗ್ರರಂಧ್ರಾತ್' ಎಂದು ತೊಡಗುವ ವೃತ್ತವನ್ನು ಹೇಳುತ್ತಿದ್ದರು. ಆ ಪದ್ಯದ ಅರ್ಥ ಎಷ್ಟೇ ವಿಚಿತ್ರವಾಗಿರಲಿ ಅಲ್ಲಿನ ಶಬ್ದವೈಭವ–ಡಂಬರ, ಇವರ ಉಕ್ತಿಧೋರಣೆ ದೇವಸ್ಥಾನವನ್ನು ಸಭೆಯನ್ನು ತುಂಬಿ ನಡುಗಿಸುವಂತಿರುತ್ತಿತ್ತು.

ಶಂಕರಶಾಸ್ತ್ರಿಗಳು ತಪ್ಪದೆ ನಮ್ಮ ಮೂರನೆಯ ರಸ್ತೆಯಲ್ಲಿದ್ದ ಚೌಬೀನೆ ಸುಬ್ಬರಾಯರ ಮನೆಯಲ್ಲಿ ನವರಾತ್ರಿಯ ಕಾಲದಲ್ಲಿ ಪೂರ್ತಿಯಾಗಿ ವಾಲ್ಮೀಕಿರಾಮಾಯಣ ಪಾರಾಯಣ ಮಾಡಿ, ವಿಜಯದಶಮಿಯ ದಿನ ರಾಮಪಟ್ಟಾಭಿಷೇಕವನ್ನು ಮಾಡುವುದು ರೂಢಿ. ಆಗ ರಾಮಾಯಣದ ಕೆಲವು ಭಾಗಗಳನ್ನು ಹೇಳಿ ಅರ್ಥ ವಿವರಿಸಿ ನೆರೆದಿದ್ದ ಜನರಿಗೆಲ್ಲ ಶ್ರೀರಾಮನ ಕತೆಯ ಸ್ವಾರಸ್ಯವನ್ನು ಹಿರಿಮೆಯನ್ನು ವರ್ಣಿಸುತ್ತಿದ್ದ ಚಿತ್ರ ಅಳಿಸಲಾಗದುದು. ಸೀತಾಸ್ವಯಂವರದಲ್ಲಿ ಮುಗಿಯುತ್ತಿತ್ತು ಆ ವ್ಯಾಖ್ಯಾನ. ಯಾವ ಧ್ವನಿಯಿಂದ ಅವರು ಇದನ್ನು ಮಾಡುತ್ತಿದ್ದರು ಎಂಬುದು ಗಾಂಭೀರ್ಯದ್ದು. ಯಾವುದೊ ಬೇರೆ ಪ್ರಪಂಚಕ್ಕೆ ಹೋಗಿ ಅಲ್ಲಿ ನಾವು ವಾಸಮಾಡುವಂತೆ ಮಾಡುತ್ತಿತ್ತು. ಸಣ್ಣ ಹುಡುಗರಾದ ನಮಗೆ ಅದನ್ನು ಕೇಳುವುದು ಒಂದು ಹಬ್ಬದ ಸಂತೋಷ. ಚೌಬೀನೆ ಸುಬ್ಬರಾಯರು ಶ್ರೀಮಂತರು. ಆ ದಿನ ಬಂದವರಿಗೆಲ್ಲ ಅವರ ಗೃಹದಲ್ಲಿ ಸಮಾರಾಧನೆ. ಅನೇಕರ ಮನೆಯಲ್ಲಿ ಸಂತರ್ಪಣೆಯ ದಕ್ಷಿಣೆ ಮೂರು ಕಾಸಾಗಿದ್ದರೆ ಅವರ ಮನೆಯಲ್ಲಿ ಹೊಚ್ಚಹೊಸ ತಾಮ್ರದ ಮೂರು

ಮೂರು ಕಾಸಿನ ಪೊಟ್ಟಣಗಳನ್ನು ತೆಗೆದು ಎರಡೆರಡನ್ನು ಕೊಡುತ್ತಿದ್ದರು. ಅಲ್ಲಿ ರಾಮಪಟ್ಟಾಭಿಷೇಕದ ದಿನ ಸೀತಾಕಲ್ಯಾಣದ ಭಾಗ ಒಂದು ಪರಿಣಯ ಮಾಡಿಕೊಳ್ಳುವ ಸಂದರ್ಭದಲ್ಲಿ ವಾಲ್ಮೀಕಿಯ ಪದ್ಯ

ಇಯಂ ಸೀತಾ ಮಮ ಸುತಾ ಸಹಧರ್ಮಚರೀ ತವ
ಪತಿವ್ರತಾ ಮಹಾಭಾಗಾ ಛಾಯೇವ ಅನುಗತಾ ಸದಾ

ಇತ್ಯಾದಿಯನ್ನು ಅವರು ಹೇಳಿ, ದೊಡ್ಡ ಆರತಿಯನ್ನು ವಾಲ್ಮೀಕಿಯ ಗ್ರಂಥಕ್ಕೂ ಶ್ರೀರಾಮರ ಪಟ್ಟಾಭೀಷೇಕದ ಪಟಕ್ಕೂ ಮಾಡಿ, ಹೂ ಅಕ್ಷತೆ ಎಲ್ಲರಿಗೂ ಕೊಟ್ಟು, ಭಕ್ತಿಯಿಂದ ಅದನ್ನು ಎಲ್ಲರೂ ಪಟಕ್ಕೆ ಎರಚುತ್ತಿದ್ದ ದೃಶ್ಯ ಇಂದು ಅಪರೂಪವಾಗಿದೆ, ಅಥವಾ ಬಣ್ಣಗೆಟ್ಟಿದೆ. ಶಂಕರಶಾಸ್ತ್ರಿಗಳನ್ನು ನೋಡಿದರೆ ವಸಿಷ್ಠ ಋಷಿಯೇ ನಿಂತಿದ್ದಾರೆ ಎನ್ನುವ ಹಾಗಿರುತ್ತಿತ್ತು.

ಸುಬ್ರಹ್ಮಣ್ಯಶಾಸ್ತ್ರಿಗಳ ಮನೆಯ ಆವರಣದಲ್ಲಿ ಹೀಗೆ ಒಂದು ಪಾಂಡಿತ್ಯ, ಇತಿಹಾಸ ಪುರಾಣಾದಿಗಳ ಪ್ರಾಚುರ್ಯ, ವೇದ ಶಾಸ್ತ್ರ ಸ್ಮೃತಿಗಳ ಚರ್ಚೆಪರಿಷ್ಕಾರಗಳ ಮಾತು ನಿರಂತರವಾಗಿದ್ದು, ಅಂಥ ತಂದೆ ಚಿಕ್ಕಪ್ಪಂದಿರು ಪ್ರಬಲವಾಗಿದ್ದ ಮನೆತನದಲ್ಲಿ ಶಾಸ್ತ್ರಿಗಳ ಮನಸ್ಸು ಸಂಸ್ಕಾರಗೊಂಡು ಬೆಳೆಯುತ್ತಿತ್ತು. ಇವರಿಗೂ ಪುರಾಣಗಳಲ್ಲಿ ಹುಡುಗುತನದಿಂದ ಪ್ರೀತಿ ಇದ್ದುದರಿಂದ, ಮುಂದಿನ ಒಂದು ಕಾಲದಲ್ಲಿ 'ಸ್ಕಾಂದಪುರಾಣ'ದಂಥ ಧೈತ್ಯಪುರಾಣವನ್ನು ಕನ್ನಡಿಸುವುದು ಅವರಿಗೆ ಹಗುರವಾಯಿತು. ಮನಸ್ಸಿನ ಒಂದು ಭಾಗಕ್ಕೆ ಅವರಿಗೆ ಅದು ಸಂತೃಪ್ತಿಯನ್ನೂ ತಂದಿರಬೇಕು. ಎಷ್ಟು ಬಗೆಯ ಕತೆಗಳು, ಸನ್ನಿವೇಶಗಳು, ಪ್ರಕರಣಗಳು ಸ್ಕಾಂದಪುರಾಣದಲ್ಲಿ ಸೇರಿಕೊಳ್ಳುತ್ತವೆಯೊ ಅಷ್ಟನ್ನೂ ಬೇಕಾದಾಗ ನೆನಪಿಗೆ ತಂದುಕೊಂಡು ಸಮಯವನ್ನೂ ತಮ್ಮ ಮಾತನ್ನೂ ತುಂಬಲು ಇವರಿಗೆ ಶಕ್ಯವಾಗುತ್ತಿತ್ತು. ರಾಮಾಯಣ, ಮಹಾಭಾರತ, ಭಾಗವತ –ಇವು ಇತಿಹಾಸ ಕಾವ್ಯವಾದರೆ, ಪಾಠಶಾಲೆಯಲ್ಲಿ ಕ್ರಮವಾಗಿ ಸಾಹಿತ್ಯಪಾಠವನ್ನು ಮಾಡಿದ್ದ ಅವರಿಗೆ ಮಹಾಕಾವ್ಯಗಳ ಮತ್ತು ನಾಟಕಗಳ ವ್ಯಾಸಂಗ ನಡೆಯಿತು. ಹೆಚ್ಚು ಕಡಮೆಯನ್ನು ತಿಳಿಯುವುದಕ್ಕೆ ಪ್ರಾಚೀನ ಕಾಲದ ವ್ಯಾಖ್ಯಾನ ವಿಧಾನವನ್ನೊ ಸಾಹಿತ್ಯಪಾಠವನ್ನೊ ಕುದುರಿಸಿಕೊಳ್ಳುವುದಕ್ಕೆ ತಂದೆಯವರ ಅಥವಾ ಚಿಕ್ಕಪ್ಪಂದಿರ ನೆರವು ದೊರಕುತ್ತಿತ್ತು. ರಾಮಶೇಷಶಾಸ್ತ್ರಿಗಳನ್ನು ಕೇಳಿದರೆ ಉತ್ತರ ವ್ಯಾಖ್ಯಾನ ಉದ್ದಂಡ ಗಂಭೀರತೆಯದು. ತಂದೆಯನ್ನು ಕೇಳಿದರೆ ಭಯ. ಇವರಿಗೆಲ್ಲೋ ಸಂದೇಹವಿದೆ ಎಂದು ಆತನ ಮನಸ್ಸಿಗೆ ಬಂದರೆ ಆತನೇ ವಿಷಯವನ್ನೆತ್ತಿ ಏನಾದರೂ ಹೇಳುವುದು ಒಂದು ಪದ್ಧತಿಯಾಗಿತ್ತೆನ್ನುತ್ತಾರೆ. ಸಾಮಾನ್ಯವಾಗಿ ಶಂಕರಶಾಸ್ತ್ರಿಗಳಿಗೆ ಬಿಡುವು ಕಡಮೆ. ಮನೆಯಲ್ಲಿ ಇರುವಾಗಲೂ ಅವರೂ ಇವರೂ ವಿದ್ವಾಂಸರು ಲೌಕಿಕರು ಯಾವಾಗಲೂ ಜೊತೆಯಲ್ಲಿಯೇ ಇರುತ್ತಿದ್ದರು. ಅಲ್ಲಿನ ಮಾತುಗಳಲ್ಲಿ ಪುನಃ ಇದೇ ಸಾಹಿತ್ಯ, ಶಾಸ್ತ್ರ, ನಾಟಕ ಕಲೆ ತುಂಬಿದ ಪ್ರಸಂಗಗಳು.

ಇವೆಲ್ಲ ಚಿಕ್ಕ ವಯಸ್ಸಿನ ಸುಬ್ರಹ್ಮಣ್ಯಶಾಸ್ತ್ರಿಗಳಿಗೆ ಸಾಮಗ್ರಿ, ಸಜ್ಜು, ಸರಂಜಾಮು. ಮನಸ್ಸಿನ ಕಣಜವನ್ನು ತುಂಬಿ ಯಾವಯಾವುದೊ ಆಯಕಟ್ಟುಗಳನ್ನು ಮುಂದಿನ ಕಾಲಕ್ಕೆ ಅವರಿಗೆ ದೊರಕಿಸಿದವು. ಈ ಮನೆಯ ಎಲ್ಲರಿಗೂ ಸಂಗೀತದಲ್ಲಿ ತುಂಬ ಪ್ರೀತಿ

ಎಂದಿದ್ದೇನೆ. ಸ್ವತಂತ್ರವಾಗಿ ಕಂದ, ವೃತ್ತ ನಿರ್ಮಾಣಮಾಡುವ ಶಕ್ತಿಯ ಜೊತೆಗೆ ಅವನ್ನು ಹಾಡುವ, ಹತ್ತು ಜನರಿಗೆ ಪ್ರಿಯವಾಗಿರುವಂತೆ ಮಾಡುವ ಶಕ್ತಿಯೂ ಇತ್ತು. ದೊಡ್ಡ ಮಗನು ತೀರಿಕೊಂಡು, ಸುಬ್ರಹ್ಮಣ್ಯಶಾಸ್ತ್ರಿಗಳು ಮಾತ್ರ ಮಗನಾಗಿ ಉಳಿದುಕೊಂಡಿದ್ದುದರಿಂದ ಇವರ ಆರೈಕೆ, ಪೋಷಣೆ ತುಂಬ ಪ್ರೀತಿಯಿಂದ, ನಾಜೂಕಿಂದ ನಡೆಯಿತು. ಆ ಪ್ರೀತಿ ಸ್ಪಷ್ಟವಾಗಿ ಪ್ರಕಟವಾಗುವುದಕ್ಕಿಂತ ಹೆಚ್ಚಾಗಿ ಆಗ ಈಗ ನುಡಿವ ಒಂದು ಮಾತು, ನಡೆವ ಒಂದು ನಡತೆ, ಧ್ವನಿಯ ಸ್ನಿಗ್ಧತೆ, ಕಣ್ಣಿನ ನೋಟ, ಹುಡುಗನ ತಾಯಿಗೆ ಕೊಡುತ್ತಿದ್ದ ನಿರ್ದೇಶನದ ರೂಪಗಳಲ್ಲಿಯೇ ಹೆಚ್ಚಾಗಿರುತ್ತಿದ್ದವು. ಆಗಿನ ಕಾಲದ ರೀತಿಯಲ್ಲಿ ಮಕ್ಕಳನ್ನು ಮುದ್ದುಮಾಡಬಾರದು, ಹೆಚ್ಚಾಗಿ ಲಾಲಿಸಿದರೆ ಕೆಟ್ಟುಹೋಗುತ್ತಾರೆ, ಗಂಡುಮಕ್ಕಳು ಬಿಗಿಯಲ್ಲಿ ಬೆಳೆಯಬೇಕು ಎಂಬ ನಂಬಿಕೆ, ಅಭ್ಯಾಸ ಇದ್ದವು. ಆದುದರಿಂದ ಶಿಸ್ತಿನಲ್ಲಿ – ಶಿಸ್ತೇನು, ಒಂದು ಅದಬ್ಬಿನಲ್ಲಿ – ಮನೆಯ ಆವರಣ ಅವರಿಗೆ ಕಟ್ಟಿತ್ತು. ಸುಬ್ರಹ್ಮಣ್ಯಶಾಸ್ತ್ರಿಗಳು ಚಿಕ್ಕಂದಿನಲ್ಲಿ ತಮ್ಮ ಪಾಠಶಾಲೆ ಸ್ನೇಹಿತರೊಡನೆ ಬೆಳೆದಾಗಲೂ ಪ್ರಕಟವಾದ ಇವರ ಮನಸ್ಸಿನ ಗುಣದ ಜೊತೆಗೆ ಇವರು ಶಂಕರಶಾಸ್ತ್ರಿಗಳ ಮಕ್ಕಳು ಎಂಬ ವಿಶೇಷ, ಉಪಾಧ್ಯಾಯರಲ್ಲಿಯೂ ಸಹಪಾಠಿಗಳಲ್ಲಿಯೂ ಬೆಳೆದಿತ್ತು –ಎನ್ನುತ್ತಾರೆ. ಸಂಸ್ಕೃತ ಪದ್ಯಗಳನ್ನು ಓದುವಾಗ ಅವರ ನಯವಾದ ಸವಿಯಾದ ಕಂಠ, ಜೊತೆಗೇ ಬೆಳೆದುಬಂದಿದ್ದ ರಾಗಜ್ಞಾನ, ಬಹುಕೋಮಲವಾಗಿ ವೃತ್ತಗಳನ್ನೂ ಕಂದಗಳನ್ನೂ ಚೂರ್ಣಿಕೆಗಳನ್ನೂ ಹೇಳಲು ನೆರವಾಗಿದ್ದವು. ನಮ್ಮ ಕಾಲದಲ್ಲಿ ಪೂರ್ತಿ ಲುಪ್ತವಾಗಿ ಹೋಗಿರುವ ಗದ್ಯವಾಚನ ಅಥವಾ ದಂಡಕದ ಪಠನ ಅವರ ಬಾಯಲ್ಲಿ ಬಹು ಸುಖವಾಗಿ ಬರುತ್ತಿತ್ತು. ಮನೆಯವರಿಗೆಲ್ಲ ಕನ್ನಡದಲ್ಲಿ ಪ್ರೀತಿ ಇದ್ದರೂ ಕನ್ನಡದ ಮಹಾಕಾವ್ಯಗಳಿನ್ನುವನ್ನೆಲ್ಲ ಅವರೂ ಬಲ್ಲವರಾದ್ದರಿಂದ, ಲೀಲಾಜಾಲವಾಗಿ ಸಂಸ್ಕೃತದಲ್ಲಿ ಹೇಗೊ ಕನ್ನಡದಲ್ಲಿಯೂ ಹಾಗೇ ಪದ್ಯರಚನೆ ಮಾಡಬಲ್ಲವರಾಗಿದ್ದರು. ಸುಬ್ರಹ್ಮಣ್ಯಶಾಸ್ತ್ರಿಗಳು ಮೊದಮೊದಲು ತಮ್ಮ ಕನ್ನಡದ ಬರವಣಿಗೆಯನ್ನು ತಂದೆ, ಚಿಕ್ಕಪ್ಪಂದಿರಿಗೆ ತೋರಿಸದಿದ್ದರೂ ಈತನು ಅದರಲ್ಲಿಯೂ ಪ್ರವೃತ್ತಿ ಉಳ್ಳವನು ಎಂದು ಅವರಿಗೆ ಗೊತ್ತಿತ್ತು. ಒಮ್ಮೆ ತಮ್ಮ ಅಚ್ಚ ಕನ್ನಡದ ಚೌಪದಿ, ಷಟ್ಪದಿಗಳನ್ನು ರಾಮಶೇಷಶಾಸ್ತ್ರಿಗಳಿಗೆ ತೋರಿಸಿದಾಗ 'ಈ ಚಿಲ್ಲರಪನಿಕಿಯಾಲ ಕಾಲಮು ಪಾಡು ಚೇಸ್ತುನ್ನಾವು' ಎಂದೊ ಏನೊ ಮುಖ ಮುರಿಯುವಂತೆ ಎಂದರೆಂದು ಕೇಳಿದ್ದೇನೆ. ಆದುದರಿಂದ ಅವರ ಕನ್ನಡಕೃತಿನಿರ್ಮಾಣ ಹೆಚ್ಚು ಪ್ರಕಾಶಕ್ಕೆ ಬಾರದೆ ಹೋಯಿತು. ತಂದೆಯವರು ತೀರಿಕೊಂಡ ಬಹುಕಾಲದ ಮೇಲೂ ಘೊನ್ನೆ ಮೊನ್ನೆಯ ವರೆಗೂ ಚಿಕ್ಕಪ್ಪಂದಿರಿಗೆ ಭಾಗವತದ ರಾಮಶೇಷಶಾಸ್ತ್ರಿಗಳು ಎಂದೇ ಹೆಸರಿತ್ತು.

ಶಾಸ್ತ್ರಿಗಳು ಇತರ ಹುಡುಗರಂತೆ ಆಟಪಾಟ ವಿನೋದಗಳಲ್ಲಿ, ನಾಟಕಪ್ರದರ್ಶನಗಳನ್ನು ನೋಡುವುದರಲ್ಲಿ, ಸ್ವಲ್ಪಮಟ್ಟಿಗೆ ಕಾಫೀ ಕ್ಲಬ್ಬುಗಳ ವಿಹಾರದಲ್ಲಿ, ಆದರೆ ಸುಸಂಸ್ಕೃತ ವರ್ಗದಲ್ಲಿಯೇ ಇದ್ದು, ದೊಡ್ಡ ಸ್ನೇಹಮಂಡಲವನ್ನು ಕಟ್ಟಿಕೊಂಡಿದ್ದರು. ಪ್ರಾರ್ಥನೆ ಮಾಡಬೇಕು ಶಾಸ್ತ್ರಿಗಳೇ, ಯಾವುದಾದರೂ ಭಾಷಾಂತರ ಮಾಡಬೇಕು ಶಾಸ್ತ್ರಿಗಳೆ, ಈ ಪುರಾಣದ ಕತೆ ಹೇಗಿದೆ ಶಾಸ್ತ್ರಿಗಳೆ? – ಎಂಬಂತೆ ಈ ವಲಯಗಳಲ್ಲಿ ಅವರಿಗೆ ಒಂದು ಗೌರವದ ಸ್ಥಾನ ದೊರಕಿತ್ತು. ಇದರಿಂದ ಧನಪ್ರಾಪ್ತಿ ಏನಾಯಿತೊ ಏನಿಲ್ಲವೊ. ಸಿರಿವಂತಿಕೆ

ಬರಲಿಲ್ಲ. ಸಾಹಿತಿಗೆ ಹೇಗೆ ಶಕ್ತ ? ಅಲ್ಲಿ ಇಲ್ಲಿ ಕೆಲಸಮಾಡಿ ಪುಡಿಕಾಸು ಸಂಪಾದನೆ ಮಾಡಿ ತಮ್ಮಕ್ಕೆಯಲ್ಲಾಮದನ್ನು ತಾಯಿಗೆ ತಂದುಕೊಡುತ್ತಿದ್ದರು. ಇವರದಾಗಿ ಮೋಟಗಾನಹಳ್ಳಿಯಲ್ಲಿ– ಮಾಗಡಿ ಹತ್ತಿರ ಎಂದು ಕೇಳಿದ್ದೇನೆ – ಇವರಿಗೂ ಇವರ ಜ್ಞಾತಿವರ್ಗಗಳವರಿಗೂ ಒಟ್ಟಿಗೆ ಆಸ್ತಿಯಾಗಿ– ಜೋಡಿ ಇನಾಮತಿ ಇದ್ದಿತಂತೆ. ಅದರಿಂದ ಕಾಳುಕಡ್ಡಿ ವಾರ್ಷಿಕ, ವರಮಾನ ಸ್ವಲ್ಪಮಟ್ಟಿಗೆ ಬರುತ್ತಿತ್ತು. ಇಂಥಲ್ಲೆಲ್ಲ ಪ್ರಯೋಜನ ಸಂದಾಗ ಎಲ್ಲರಿಗೂ ಪಾಲು ಕೊಡಬೇಕಿತ್ತೇ ಹೊರತು ಖರ್ಚು ವೆಚ್ಚಗಳಿಗೆ ಅಥವಾ ನಷ್ಟಗಳಿಗೆ – ಕಡೆಗೆ ಕಂದಾಯದ ತೆರಾಣಿಗೆ – ಇತರ ಭಾಗಸ್ಥರಿಂದ ಸುಸೂತ್ರವಾಗಿ ಗೇಣಿ ಪಡೆಯುವುದಕ್ಕೆ ಕಷ್ಟವಾಗುತ್ತಿತ್ತು.

ಇಷ್ಟುಹೊತ್ತಿಗೆ ಸುಮಾರು ೨೫–೩೦ ವಯಸ್ಸಿನ ಮೇಲಾಗಿ ಇವರು ಎ.ಡಿ.ಎ. ಎಂಬ ಕಾಶಿ ವಿಶ್ವೇಶ್ವರ ದೇವಸ್ಥಾನದ ಬಳಿ ಮನೆವಾರ್ತೆಪೇಟೆಯಲ್ಲಿದ್ದ ಒಂದು ಸಂಸ್ಥೆಯಲ್ಲಿ ಸದಸ್ಯರಾಗಿ ಅಲ್ಲಿನ ಸಂಸ್ಕೃತಿ ಚಟುವಟಿಕೆಗಳಲ್ಲಿ ಭಾಗವಹಿಸುತ್ತಿದ್ದರು. ಆ ಸಮಯದಲ್ಲಿಯೇ ಅವರನ್ನು ನಾನು ಮೊದಲ ಸಲ ಹತ್ತಿರದಿಂದ ನೋಡಿದ್ದು. ಬಹುಕಾಲ ಪರಿಚಯವಿರಲಿಲ್ಲ. ಆದರೆ ಅವರು ಪದ್ಯಗಳನ್ನು ಹೇಳುವ ರೀತಿ, ಹೊಸತಾಗಿ ಬರುತ್ತಿದ್ದ ಕನ್ನಡ ಕವಿತೆಗಳನ್ನು ವಾಚನ ಮಾಡುವ ರೀತಿ ನನ್ನ ಮನಸ್ಸಿಗೆ ಹಿಡಿಸಿತ್ತು. ಬಿ. ಶ್ರೀನಿವಾಸ ಅಯ್ಯಂಗಾರ್ ಅಚ್ಚುಕೂಟದಲ್ಲಿ ಈ ಸಂಘದ ಕಾರ್ಯಗಳು ನಡೆಯುತ್ತಿದ್ದವು. ಅಯ್ಯಂಗಾರ್ಯರೇ ಕಾರ್ಯದರ್ಶಿ; ಹಾಗೇ ದೇಣಿ ಹೊರೆ, ತಿಂಡಿತೀರ್ಥ, ವಿನೋದವಿಲಾಸ ಎಲ್ಲಕ್ಕೂ. ಅವರ ಮಕ್ಕಳಲ್ಲಿ ಒಬ್ಬಿಬ್ಬರು ಅವರಿಗೆ ನೆರವಾಗುತ್ತಿದ್ದರಲ್ಲದೆ ಅಚ್ಚುಕೂಟದಲ್ಲೊಬ್ಬರು, ಸಿನೇಮ ರಂಗದಲ್ಲೊಬ್ಬರು ಹೀಗೆ ಕಾಲಕ್ರಮದಲ್ಲಿ ತೊಡಗಿದರು. ದಿನವೂ ಬೆಂಗಳೂರಿನ ಸಾಂಸ್ಕೃತಿಕ ಜೀವನದಲ್ಲಿ ಮೇಲಕ್ಕೆ ಬಂದಿದ್ದ ಜನ ನಾಟಕ, ಸಂಗೀತ, ಸಾಹಿತ್ಯ, ಕಲೆಗಳಲ್ಲಿ ಅಭಿರುಚಿ ಉಳ್ಳವರು ಮತ್ತು ಹೊಸ ಕಾಲದವರು ಎನ್ನಬಹುದಾದ ಪ್ರಗತಿಶೀಲರು ಸೊಗಸುಗಾರರು ಹೆಣ್ಣು, ಗಂಡು ಅಲ್ಲಿ ಸೇರುತ್ತಿದ್ದರು. ಸಭ್ಯರಾಗಿ ಅಲ್ಲಿಗೆ ಬರುತ್ತಿದ್ದ ಜನರೊಡನೆ ಸಂಭಾಷಣೆ, ಕಾಲಯಾಪನೆ, ಚರ್ಚೆ, ಲೋಕಾಚಾರದ ಮಾತು, ಸಾಮಾಜಿಕ ವಿಶೇಷಗಳು ಇತ್ಯಾದಿ ಮಾತನಾಡುವುದು ಒಂದು ನಾಗರಿಕತೆಯ ಲಕ್ಷಣವಾಗಿತ್ತು. ಅವರೆಲ್ಲ ಆಧುನಿಕರಾದ್ದರಿಂದ ಇವರರಿಯದೆಯೆ ನವೀನ ಮಾರ್ಗದ ಜಾಡುಹಿಡಿದು ಎ.ಡಿ.ಎ. ಪರಿಸರದಲ್ಲಿ, ಅಲ್ಲಿನ ಗಣ್ಯರಲ್ಲಿ ಸುಬ್ರಹ್ಮಣ್ಯಶಾಸ್ತ್ರಿಗಳು ಎಲ್ಲರಿಗೂ ಬೇಕಾದವರಾಗಿ ಬೆಳೆದರು. ಒಂದು ಸಮಯದಲ್ಲಿ ಅದು ಪ್ರಕಟಿಸುತ್ತಿದ್ದ 'ರಂಗಭೂಮಿ' ಎಂಬ ಪತ್ರಿಕೆಯ ಪ್ರಕಾಶನದಲ್ಲಿಯೂ ಅವರ ಭಾಗವಿತ್ತು. ಸಂಗೀತದ ಅಭ್ಯಾಸ ಇದ್ದುದರಿಂದ ಪದ್ಯಗಳನ್ನು ರಚಿಸಿ ಹಾಡುವುದು, ಅಂಥವರನ್ನು ತಯಾರುಮಾಡುವುದು ಅವರ ಪಾಲಿಗೆ ಬೀಳುತ್ತಿತ್ತು. ಸಿ. ಕೆ. ವೆಂಕಟ ರಾಮಯ್ಯನವರ ನಾಟಕದಲ್ಲಿಯೂ ಮಾಸ್ತಿಯವರ 'ಯಶೋಧರ'ದಲ್ಲಿಯೂ ಶಾಸ್ತ್ರಿಗಳು ಪಾತ್ರ ವಹಿಸಿದ್ದುಂಟು. ಈಚಿನ ಕಾಲದಲ್ಲಿ 'ಮೃಚ್ಛಕಟಿಕ' ನಾಟಕವನ್ನು ಸಂಸ್ಕೃತದಲ್ಲಿ ಆಡಿದಾಗ ಚಾರುದತ್ತನ ಪಾತ್ರವನ್ನು ಬಹುನಯವಾಗಿ ಅಭಿನಯಿಸಿದರು. ಅವರು ಸಂಸ್ಕೃತ ಕಾಲೇಜಿನಲ್ಲಿ ಓದುತ್ತಿದ್ದಾಗ ಸಂಸ್ಕೃತ ನಾಟಕಗಳನ್ನು ರಂಗಕ್ಕೆ ತಂದು ಅಲ್ಲಿ ದುಷ್ಯಂತನಂಥ ಭೂಮಿಕೆಗಳನ್ನು ಉತ್ತಮವಾಗಿ ನಿರ್ವಹಿಸುತ್ತಿದ್ದರೆಂದು ಕೇಳಿದ್ದೇನೆ. ಇವೆಲ್ಲ ಕೇವಲ ಸಂಸ್ಕೃತ ನಿದ್ವಾಂಸರೊಬ್ಬರ ಸಂಪ್ರದಾಯನಿಷ್ಠೆಯ ಮನೆಯಲ್ಲಿ ಹುಟ್ಟಿ ಬೆಳೆದ ಶಾಸ್ತ್ರಿಗಳಿಗೆ ಹೊಸ

ಕಾಲನ ದೃಷ್ಟಿ ರೀತಿ ಸಂಸ್ಕೃತ ಲೌಕಿಕ ಪರಿಜ್ಞಾನ ತಂದುಕೊಟ್ಟವು; ಮನಸ್ಸು ವಿಸ್ತಾರವಾಯಿತು. ರೀತಿನೀತಿಗಳು ಹೆಚ್ಚು ಧಾರಾಳವಾಗಿ ಸಮಯಕ್ಕೆ ತಕ್ಕ ಹಾಗೆ ಹೊಂದಿಕೊಳ್ಳುವಂತೆಯೂ ವ್ಯಾವಹಾರಿಕ ಪ್ರಪಂಚದಲ್ಲಿ ನಯಗಳನ್ನು ಅರಿಯುವಂತೆಯೂ ಮಾಡಿ ಅವರ ಮನಸ್ಸನ್ನು ವಿಶಾಲಗೊಳಿಸಿದವು.

ಇಷ್ಟು ಹೊತ್ತಿಗೆ ತಂದೆಯವರು ತೀರಿಕೊಂಡಿದ್ದು ಮನೆಯ ಯೋಗಕ್ಷೇಮವನ್ನು ನೋಡಿಕೊಳ್ಳಬೇಕಾದ ಅಗತ್ಯಬಿದ್ದು ಅಲ್ಪಸ್ವಲ್ಪ ಸಂಪಾದನೆಗೆ ಏರ್ಪಾಡು ಮಾಡಿಕೊಳ್ಳಬೇಕಾಗಿತ್ತು. ವಾಜಪೇಯಂ ಗೋವಿಂದಯ್ಯನವರ ಪುಸ್ತಕ ಪ್ರಕಾಶನದ ಮತ್ತು ಮಾರಾಟದ ಅಂಗಡಿಯಲ್ಲಿ ಬಹುಕಾಲ ಅವರು ಬೇರೆ ಗೊತ್ತಾದ ಸಂಬಳದ ಕೆಲಸವಿಲ್ಲದಿದ್ದಾಗ ದುಡಿದು ಅಲ್ಪಸ್ವಲ್ಪ ವರಮಾನವನ್ನು ಸಂಪಾದಿಸಿದ್ದುಂಟು. ವಾಲ್ಮೀಕಿ ರಾಮಾಯಣಕ್ಕೆ ಅದರ ಏಳು ಕಾಂಡಗಳಿಗೂ ಪುಟದ ಮೇಲಿನ ಭಾಗದಲ್ಲಿ ಮೂಲಗ್ರಂಥ, ಎರಡನೆಯ ಭಾಗದಲ್ಲಿ ಪ್ರತಿಪದಾರ್ಥ, ಮೂರನೆಯ ಭಾಗದಲ್ಲಿ ತಾತ್ಪರ್ಯ ಕೊಟ್ಟು ಅಚ್ಚುಮಾಡಿ, ಸಂಸ್ಕೃತ ಅರಿಯದ ಜನರಿಗೆ ರಾಮಾಯಣದ ಒಂದು ಸಂಪುಟವನ್ನು ವಾಜಪೇಯಂ ಅವರು ಅಚ್ಚುಮಾಡಿಸುತ್ತಿದ್ದರು. ಅದರ ಮೊದಲ ಭಾಗವನ್ನು –ಎಂದರೆ ಬಾಲಕಾಂಡವನ್ನು– ಪಟ್ಟಾಭಿರಾಮಾಶಾಸ್ತ್ರಿಗಳು ಎಂಬವರು ಮಾಡಿದ್ದರೆಂದು ನೆನಪು. ಮುಂದಿನ ಭಾಗಗಳನ್ನು ಅವರೂ ಆಮೇಲೆ ಇವರೂ ಮಾಡಿ ಪೇಟೆಯಲ್ಲಿ ಆ ಪುಸ್ತಕಗಳು ಮಾರಾಟಕ್ಕೆ ಬಂದವು. ಹಿಂದಿನ ಕಾಲದಲ್ಲಿ ಅಚ್ಚಾಗುತ್ತಿದ್ದ ಇಂಥ ಪುಸ್ತಕಗಳಿಗೆ ಮುಂಗಡವಾಗಿ ಹಣವನ್ನೂ ಪ್ರಾರ್ಥನೆಯನ್ನೂ ತರಿಸಿಕೊಂಡು, ಅವು ಸಿದ್ಧ ಆದ ಆದ ಹಾಗೆ ಅವನ್ನು ಮಾರುವುದು ಪದ್ಧತಿ. ಆ ಸಂಪುಟವೆಲ್ಲ ಮಾರಿ ಹೋಗಿ ಕಡೆಕಡೆಗೆ ಪೇಟೆಯಲ್ಲಿ ದೊರಕುವುದು ಕಷ್ಟವಾಯಿತು. ಶಾಸ್ತ್ರಿಗಳಿಗೆ ತುಂಬ ಇಷ್ಟವಿತ್ತು: ಆ ಗ್ರಂಥವನ್ನು ಪುನಃ ಈಗಿನ ಕಾಲದ ದೃಷ್ಟಿ ಮತ್ತು ಭಾಷಾಶೈಲಿಗಳ ಒಪ್ಪಕ್ಕೆ ತಕ್ಕಂತೆ ಪರಿಷ್ಕರಿಸಿ ಅಚ್ಚು ಮಾಡಿಸಬೇಕು ಎಂದು. ಅದರಿಂದ ತಮಗೂ ನಾಲ್ಕು ಕಾಸು ಸಂಪಾದನೆಯಾಗುವುದು, ತಾನೇ ಮಾಡಿದ ಕೆಲಸವನ್ನು ಈಗ ಪುನಃ ಕೈಕೊಂಡು ಅಂದಿಗಿಂತ ಇನ್ನಷ್ಟು ಚೊಕ್ಕವಾಗಿ ಹೊಸಕಾಲದ ಪ್ರೀತಿಗೆ ತರಬಹುದು ಎಂದು. ಆದರೆ ಹಿಂದೆ ನಿಂತು ಅದರ ಪ್ರಕಟನೆಯ ನೆರವಿಗೆ ಹಣ ಹಾಕಿ ಉತ್ತೇಜನ ಕೊಡುವ ದಾತರು ಸಿಕ್ಕಲಿಲ್ಲ. ಬಹುವಾಗಿ ಶಾಸ್ತ್ರಿಗಳು ಆ ಬಗೆಗೆ ನೊಂದಿದ್ದರು. ಸ್ಕಾಂದ ಪುರಾಣವನ್ನೇನೊ ಮೈಸೂರು ಅರಮನೆಯಿಂದ ಅಚ್ಚುಮಾಡಿಸಿ ಪ್ರಕಟಿಸಿದರು. ಅದರಿಂದ ಎಷ್ಟು ವರಮಾನ ಬಂದಿತೊ ನಾನರಿಯೆ.

ಈಗ ಪಾಮಡಿ ಮುದ್ದುರಾಮಯ್ಯ ಶೆಟ್ಟಿ ಅಥವಾ 'ಕೈಸರ್–ಇ–ಹಿಂದ್' ಜವಳಿ ಅಂಗಡಿಗೆ ಎದುರಾಗಿ ವಾಜಪೇಯಂ ಗೋವಿಂದಯ್ಯನವರ ಪುಸ್ತಕದ ಅಂಗಡಿ ಇದ್ದದ್ದು. ಅವರು ರಸಿಕರು. ಎತ್ತರದ ಆಳು; ಭರ್ಜರಿ ಮೀಸೆ. ಕೈಗೆ ಚಿನ್ನದ ಸರಿಗೆ. ಪಂಡಿತ ಬರವಣಿಗೆಗಾರರಿಗೆ ಆಶ್ರಯದಾತರು. ಅಲ್ಲಿಗೆ ಊರಿನ ದೊಡ್ಡ ದೊಡ್ಡ ಪಂಡಿತರೆಲ್ಲ ಆಗಮಿಸಿ ಆಗಾಗ ಸ್ವಲ್ಪ ಹೊತ್ತು ಚಾಟೂಕ್ತಿಗಳನ್ನು ಹೇಳಿ, ಒಬ್ಬರನ್ನು ಇನ್ನೊಬ್ಬರು ಅಥವಾ ಎಲ್ಲರನ್ನೂ ಇನ್ನೊಬ್ಬರು ಕೀಟಲೆ ಮಾಡಿ, ಸಂತೋಷದಲ್ಲಿ ಸೇರಿ ಬಾಯಿಚಪಲ ತೀರಿಸುವುದೊ ಸ್ವಲ್ಪ ಕಾಲ ಕುಳಿತಿರುವುದೊ ವಾಡಿಕೆ. ಅಂಗಡಿಯ ಮುಂದೆ ಒಂದು

ಪಕ್ಕದಲ್ಲಿ ಒಂದು ಮೇಜನ್ನು ಇಟ್ಟುಕೊಂಡು ಯಾರಾದರೊಬ್ಬ ಪಂಡಿತರು ಕುಳಿತಿರುತ್ತಿದ್ದರು. ಆ ಅಕ್ಕಪಕ್ಕದಲ್ಲಿ ಎದುರಿಗೆ ಇನ್ನು ಕೆಲವರು ಕುಳಿತಿರುವರು. ಕೆಲವು ಸಮಯದಲ್ಲಿ ಅಲ್ಲಿಗೆ ಡಿ.ವಿ.ಜಿ. ಅಂಥವರು ಕೂಡ ಹೋಗಿ ಸುಖಸಂಕಥಾವಿನೋದಗಳಲ್ಲಿ ಕಾಲ ಕಳೆಯುತ್ತಿದ್ದುದನ್ನು ಕಂಡಿದ್ದೇನೆ. ಕಿತ್ತಿಳಿಹಣ್ಣಿನವರು, ಕಡಲೆಕಾಯವರು ಮಾರುವುದಕ್ಕೆ ಬಂದರೆ ಮಕ್ಕಳಿಗಳನ್ನು ಇಳಿಸಿ ಚೌಕಾಸಿ ಮಾಡಿ, ಕೊಳ್ಳುವುದು, ಮಾರುವುದಕ್ಕೆ ಬಂದವರನ್ನು ತಮಾಷೆಮಾಡುವುದು ಸಂತತವಾಗಿ ನಡೆಯುತ್ತಿದ್ದ ದೃಶ್ಯ. ಸುಬ್ರಹ್ಮಣ್ಯಶಾಸ್ತ್ರಿಗಳು ಗೋವಿಂದಯ್ಯನವರ ಅಂಗಡಿಯಲ್ಲಿ ಕೆಲವು ದಿನ ಯಾವುದೊ ಕೆಲಸಕ್ಕೆ ಒಪ್ಪಿಕೊಂಡು ಇರುತ್ತಿದ್ದರು. ಅಲ್ಲಿನ ವಿಚಾರಗಳೆಲ್ಲ ಅತನ ಕಣ್ಣಮುಂದೆ ನಡೆದು ಕಿವಿಗೆ ಸೇರಿ ಮನಸ್ಸಿಗೆ ಆಹ್ಲಾದವುಂಟುಮಾಡುತ್ತಿದ್ದವು. ವಯಸ್ಸಿನಲ್ಲಿ ಅವರು ಅಲ್ಲಿಗೆ ಬರುತ್ತಿದ್ದ ಅನೇಕರಿಗಿಂತ ಕಿರಿಯರಾದ್ದರಿಂದ, ಹೆಚ್ಚಾಗಿ ನುಗ್ಗಿ ಸ್ವತಂತ್ರ ಧಾರಾಳದಿಂದ ಮಾತನಾಡುವ ಅವಕಾಶವಿಲ್ಲದಿದ್ದರೂ ಅಂಥ ಸನ್ನಿವೇಶ ಯಾರಿಗೂ ಚುರುಕನ್ನು ಜಾಣತನವನ್ನು ಮಾತಿನ ಚಪಲವನ್ನು ತರುವಂಥದಾದುದರಿಂದ, ರಸಿಕತನದ ಕತೆಗಳ ಜೊತೆಗೆ ಜಾಣಾಗಿ ನುಡಿಯಬಲ್ಲ – ಆ ಮೂಲಕ ಇತರರ ಮನಸ್ಸನ್ನು ರಮಿಸಬಲ್ಲ – ಒಂದು ಶಕ್ತಿಯನ್ನು ಪಡೆದುಕೊಂಡಿದ್ದರು. ಆ ಅಂಗಡಿಯ ಎದುರಿಗೆ ಸರಿಸುಮಾರಾಗಿ ಒಂದು ದೇವರಾಯ ಸಮುದ್ರದ ದ್ರಾವಿಡರ ಮಿಠಾಯಿ ಅಂಗಡಿ ಇತ್ತು. ಅಲ್ಲಿನ ಜಿಲೇಬಿ, ಕಾರದವಲಕ್ಕಿ, ಪಕೋಡ, ಮಸಾಲವಡೆ ಪ್ರಖ್ಯಾತವಾದವು. ಅಲ್ಲಿಯೇ ಖೋವಾ ಮಾಡಿ ದೂದ್‌ಪೇಡ ಮಾಡುತ್ತಿದ್ದರು. ಎರಡು ಬಾಣಲೆಯಲ್ಲಿ ಹಾಲು ಕಾಯುತ್ತಲೇ ಇರುತ್ತಿತ್ತು. ಕಾಫೀ ಹೆಚ್ಚಾಗಿ ಕುಡಿಯದಿದ್ದ ಆ ಕಾಲದಲ್ಲಿ ಸಾಧುಗಳು, ಸಜ್ಜನರು, ಸಪ್ಪೆ ಜನರು ಬಂದರೆ ಆ ಅಂಗಡಿಯಿಂದ ಹಾಲು ತೆಗೆದುಕೊಟ್ಟು ಅವರನ್ನು ತೃಪ್ತಿಪಡಿಸುವುದು ಪದ್ಧತಿ. ಇಂಥ ಚಿತ್ರಗಳು, ಇವಕ್ಕೆ ಸಂಬಂಧಿಸಿದ ಚಿಟ್ಟೆಕತೆಗಳು ಶಾಸ್ತ್ರಿಗಳ ನೆನಪಿನಲ್ಲಿ ಸಾವಿರಾರು. ಈಚಿನ ಕಾಲದಲ್ಲಿ ಎಷ್ಟೋ ಜನ ಆಧುನಿಕರೆಂಬ ಸರ್ವಜ್ಞರು ಅವರಲ್ಲಿ ಪ್ರಜ್ಞಾಪೂರ್ವಕವಾದಗಳನ್ನು ತಿಳಿಸಿದಾಗ, ಮೆಲ್ಲಗೆ ಆ ಕಾಲದ ಕತೆಗಳನ್ನು ಎತ್ತಿ ಪ್ರಾಸಂಗಿಕವಾಗಿ ಅಂಟಿಯೂ ಅಂಟದಂತೆ ಇವರು ಪ್ರಯೋಗ ಮಾಡುತ್ತಿದ್ದರು. ದಡ್ಡನ ದಡ್ಡತನ ವೇದ್ಯವಾಗಿ ಅಂಥವರು ಬಾಯಿ ಮುಚ್ಚಿ ಸುಮ್ಮನಾಗುತ್ತಿದ್ದರು. 'ಏನೋ ಅಂದುಕೊಂಡೆನಪ್ಪಾ ಈ ಶಾಸ್ತ್ರಿಗಳನ್ನು, ನಾನಾ ಚಮತ್ಕಾರ ಕಂಡಿದ್ದಾರೆ' ಎಂದುಕೊಳ್ಳುವರು.

ಗೋವಿಂದಯ್ಯನವರ ಅಂಗಡಿಯ ಇನ್ನೊಂದು ವಿಶೇಷ : ಬಗೆಬಗೆಯ ನಸ್ಯ ಹಾಕುತ್ತಿದ್ದವರು ಸೇರುತ್ತಿದ್ದುದು. ಬೆಂಗಳೂರಲ್ಲಿ ಸಿಕ್ಕತಕ್ಕ ಎಲ್ಲ ಬಗೆಯ ನಸ್ಯಗಳ ಪರಿಚಾತವೂ ಅನುಭವವೂ ಅಲ್ಲಿತ್ತು. ಹೊಗೆಸೊಪ್ಪಿನ ಬಳಕೆ ಕೆಲವರಲ್ಲಿ; ಸಿಗರೆಟ್ ಆಮೇಲೆ ಬಂದವು. ಆದರೆ ಹಿಂದೆ ನಸ್ಯ ರಸಿಕರ ಚಟ. ಪುಡಿ ಸಾಧಾರಣರ ಬಳಕೆಯದು. ಯಾವ ಯಾವ ಅಂಗಡಿಯ ಒಳದೇಶ ಹೊರದೇಶಗಳ ತಯಾರಿಯ ನಸ್ಯದ ಯೋಗ್ಯತೆ ಎಷ್ಟು ಎಂದು ಅಳತೆಮಾಡಿ ಬಂಗಾರವನ್ನು ಒರೆಗಲ್ಲಿಂದ ಪರೀಕ್ಷಿಸಿದಂತೆ ನಿಖರವಾಗಿ ಹೇಳುತ್ತಿದ್ದ ವಿದ್ವಾಂಸರೂ ವಿಪಶ್ಚಿತರೂ ದೋಷಜ್ಞರೂ ಗುಣಜ್ಞರೂ ಅಲ್ಲಿ ಸೇರುತ್ತಿದ್ದರು. ಬಹುಬಗೆಯ ಪುಡಿ ನಸ್ಯಗಳ ಜೊತೆಗೆ ಮದ್ದಿ ಅಥವಾ ಉಂಡೆನಸ್ಯಗಳನ್ನು ತರಿಸಿ, ಚೆನ್ನಪಟ್ಟಣದ ಸುಣ್ಣದ ಉಂಡೆಗಳನ್ನು ಬೀಳಿಯದಲ್ಲಿಯೊ ಹಸಿಮುತ್ತುಗದೆಲೆಯಲ್ಲಿಯೊ

ಬೇರೆ ಯಾವ ಎಲೆಯಲ್ಲಿಯೊ ಜೊತೆಯಲ್ಲಿ ತಂದು, ಮಡ್ಡಿನಸ್ಯವನ್ನು ತೀಡುವುದಕ್ಕೆ ತೊಡಗಿತೆಂದರೆ ಹತ್ತಾರು ಕಣ್ಣುಗಳು ಸುತ್ತಲಿಂದ ಕುಳಿತೊ ನಿಂತೊ ಇದನ್ನು ಆಸಕ್ತಿಯಿಂದ ನೋಡುತ್ತಾ ಬಗೆಬಗೆಯಾದ ನುಡಿಗಳನ್ನು ನುಡಿಯುತ್ತ ಇರುವಾಗ, ನಸ್ಯ ತಯಾರಾಗಿ ಅಂಗೈಗೆ ಒಂದು ಚೂರು ಅಂಟಿಕೊಳ್ಳದಂತೆ ತೀಡಿ ಪುಡಿಯಾದ್ದನ್ನು ಅಂಗೈಗೆ ಹಿಡಿದರೆ, ಅಲ್ಲಿ ಕುಳಿತಿರುವವರಲ್ಲಿ ಎಲ್ಲರಿಗಿಂತ ಹಿರಿಯರೊ ಅನುಭವಶಾಲಿಗಳೊ ಅಥವಾ ಯಜಮಾನ್ ಗೋವಿಂದಯ್ಯನವರೊ ಒಂದು ಚಿಟಿಕೆಯಷ್ಟನ್ನು ತೆಗೆದುಕೊಳ್ಳತಕ್ಕದ್ದು; ಆಮೇಲೆ 'ತೀಸುಕೋಂಡ' (ಬಹುಮಟ್ಟಿಗೆ ಅಲ್ಲಿನ ಜನ ತೆಲುಗು ಬಲ್ಲವರು, ಮುಲಕನಾಡು ಬ್ರಾಹ್ಮಣರು) ಎಂದು, ಕಡೆಗೆ ತೀಡಿ ಪುಡಿ ಮಾಡಿದವರಿಗೆ ಒಂದು ಚಿಟಿಕೆ ಎಲ್ಲಿ ಸಿಕ್ಕದೆ ಹೋಗುತ್ತದೆಯೊ ಎನ್ನುವ ಮಟ್ಟಿಗೆ ಅದು ಮುಗಿದು ಹೋಗುತ್ತಿತ್ತು. 'ಅಂತಾ ಪರಿಷ್ಕಾರುಮುಗಾ ಚೇಸಿನ್ನಾರು: ಮೀರೊ ತಾಂತ (ರವಂತ) ತೀಸುಕೋಂಡಿ' ಎಂದಾಗ ಇವರು ಒಂದೊ ಎರಡೊ ಚಿಟಿಕೆ ಹಾಕಿಕೊಂಡು ಕೈ ಕೊಡವಿಕೊಳ್ಳತಕ್ಕದ್ದು. ಈ ದೃಶ್ಯ ಒಂದು ನಾಗರಿಕ – ಏಕೆ ಸಂಸ್ಕಾರಕ್ರಿಯೆ. ಅದು ನಿರಂತರವಾಗಿ ಗೋವಿಂದಯ್ಯನವರ ಅಂಗಡಿಯ ಮುಂದೆ ನಡೆಯುತ್ತಿದ್ದದ್ದು.

ಶಾಸ್ತ್ರಿಗಳು ಉಂಡೆನಸ್ಯವನ್ನು ಅರಿಸುವುದರಲ್ಲಿಯೂ ತೀಡಿ ಪುಡಿಮಾಡುವುದರಲ್ಲಿಯೂ ನಿಷ್ಣಾತರಾದುದು ಅಲ್ಲಿ. ಅವರು ಬೆಂಗಳೂರಿನ ನಗರ್ತಪೇಟೆ ಕಡೆಯಲ್ಲಿ ಎಲ್ಲೊ ಒಂದು ಅಂಗಡಿಯಿಂದ ಉಂಡೆನಸ್ಯ ತರುತ್ತಿದ್ದರು. ಅಥವಾ ಆರ್ಕಾಟ್ ಶ್ರೀನಿವಾಸಾಚಾರ್ಯರ ಬೀದಿಯಿಂದ ಚಿಕ್ಕಪೇಟೆಗೆ ತಿರುಗುವ ಕಡೆ ಈಶ್ವರ ದೇವಸ್ಥಾನಕ್ಕೆ ಈಚೆ ಒಂದರಲ್ಲಿ ಎಡಕ್ಕೆ ತಿರುಗಿದರೆ ಒಂದು ಅಂಗಡಿಯಲ್ಲಿ, ಅಥವಾ ಅಕ್ಕಿಪೇಟೆಯಲ್ಲಿ ಬಿ. ಟಿ. ಕೆಂಪಣ್ಣ, ರಾಮಯ್ಯ ಇವರ ಹಿರಿಯರು ನಡಸುತ್ತಿದ್ದ ನಸ್ಯದಂಗಡಿಯಲ್ಲಿ ವಿಶೇಷವಾಗಿ ಉಂಡೆನಸ್ಯ ತರುತ್ತಿದ್ದರು. ಎಷ್ಟೊ ದಿನ ಆದಮೇಲೆ ಶಾಸ್ತ್ರಿಗಳು ಆ ಅಂಗಡಿಗೆ ಹೋದಾಗ ಅವರಿಗೆ ದೊರೆಯುತ್ತಿದ್ದ ಮರ್ಯಾದೆಯನ್ನು ನೋಡಿದ್ದೇನೆ. ಇವರಿಗೆ ವಿಶೇಷ ಸ್ಥಳವನ್ನು ಕೊಟ್ಟು ಕೂಡಿಸಿಕೊಂಡು ಇವರಿಂದ ನಸ್ಯಮಾಡಿಸಿ ಆ ಅಂಗಡಿಯ ಹಿರಿಯರು ತಾವಷ್ಟು ಸ್ವೀಕಾರಮಾಡಿ, ಇವರು ಕೊಂಡದ್ದರ ಜೊತೆಗೆ ಇನ್ನಷ್ಟನ್ನು ತಮ್ಮ ಕೈಯಿಂದ ಕೊಟ್ಟು, ಗಲ್ಲಾಪೆಟ್ಟಿಗೆಯ ಹತ್ತಿರದಿಂದ ಸ್ವಲ್ಪ ಮೇಲೆದ್ದು ಕೈಮುಗಿದು ನಮಸ್ಕರಿಸಿ ಇವರನ್ನು ಕಳಿಸಿಕೊಡುತ್ತಿದ್ದುದು ಪ್ರಾಚೀನ ಸಂಸ್ಕೃತಿಯ ಒಂದು ಅವಶೇಷ. ಇಲ್ಲವೇ ಮೈಸೂರು ಶ್ರೀರಾಮಪೇಟೆಯಲ್ಲಿ ವಿಠಲರಾಯರ ಅಥವಾ ಬಿಡಾರಂ ಕೃಷ್ಣಪ್ಪನವರ ಮನೆಯ ಸುಮಾರು ಎದುರಿಗಿದ್ದ, ಸಾವಂದೂರು ಅಂಗಡಿಯಿಂದ ಮೈಸೂರಿಗೆ ಹೋದವರಿಗೆಲ್ಲ ಹೇಳಿಕಳಿಸಿ ತರಿಸುವುದೊ ತಾವು ಹೋದಾಗ ಕೊಂಡು ತರುವುದೊ ವಾಡಿಕೆಯಾಗಿತ್ತು. ಅತ ನಾಲ್ಕೈದು ರೀತಿಯ ಸೊಪ್ಪು ತರಿಸಿ, ಬಗೆಬಗೆಯ ಲಾಗವಡುಗಳನ್ನು ಬೆರಸಿ, ಒಳ್ಳೆಯ ಬೆಣ್ಣೆ ಬೆರಸಿ, ಉಂಡೆನಸ್ಯ ತಯಾರು ಮಾಡುತ್ತಾನೆ ಎಂಬುದು ಪ್ರತೀತಿ. ಆ ಯಜಮಾನನು ಬಂದವರನ್ನು ನೋಡಿಕೊಂಡು, ತನ್ನ ಬಹುಕಾಲದ ಗುರುತಿನ ಪುರಸ್ಕೃತರನ್ನು ನೆನಪಿನಲ್ಲಿಟ್ಟುಕೊಂಡು, ಅವರ ಹೆಸರು ಹೇಳಿದರೆ ಅತ್ಯುತ್ತಮವಾದ ಉಂಡೆನಸ್ಯ ಮಾರುತ್ತಿದ್ದರು. ಆ ಅಂಗಡಿಯನ್ನಿಟ್ಟುಕೊಂಡಿದ್ದವರ ಮನೆತನ ಮುಮ್ಮಡಿ ಕೃಷ್ಣರಾಜ ಒಡೆಯರ ಕಾಲದಿಂದ ಆ ತಯಾರಿಯಲ್ಲಿ ಇದ್ದಿತಂತೆ.

ನಸ್ಯ ಸೇರದ ನನ್ನಂಥವರಿಗೂ ಅದರ ಗಮಲು ತಟ್ಟುತ್ತಿರುವಾಗ, ಕುಟ್ಟುತ್ತಿರುವಾಗ 'ಘಂ' ಎನ್ನಿಸುತ್ತ ಇರುತ್ತಿತ್ತು. ಆ ನಸ್ಯ ಕುಟ್ಟುವ ವಿಧಾನ, ಆ ಹಾರೆಯ ಪೆಟ್ಟು, ಉಂಡೆನಸ್ಯ ಕುಟ್ಟಿ ತಯಾರುಮಾಡುವಾಗ ದಾಂಡಿಗರಾದ ಇಬ್ಬರು ಕುಳಿತು ಕೊಂತದಂತಿರುವ ಎರಡು ಹಾರೆಗಳನ್ನು ಹಿಡಿದು ಕುಟ್ಟುವ ದೃಶ್ಯವೂ ಹಾರೆಯ ಪೆಟ್ಟಿನ ವಿಶೇಷ ಶಬ್ದವೂ ಈ ಕಾಲಕ್ಕೆ ಉಳಿದಿಲ್ಲ. ಹಾರೆಯಿಂದ ಅವಲಕ್ಕಿ ಕುಟ್ಟುವ ಪೆಟ್ಟು ಒಂದಾದರೆ ಉಂಡೆನಸ್ಯದ್ದು ಬೇರೊಂದು. ಈ ಹಾರೆಯ ತಳ ಇನ್ನಷ್ಟು ಅಗಲ; ಗಟ್ಟಿ ಹರಡಿನದು. ನಾದ, ನಿನಾದ, ರಾವ, ಆರಾವ ಅಲ್ಲ. ಠನ್ ಠಕ್ ಠನ್ ಠಕ್ ಎಂದು ಬೀಳುವ ನಾದ ವಿಶಿಷ್ಟ. ಆ ಶಬ್ದವೂ ಅವಲಕ್ಕಿ ಕುಟ್ಟುವ ಹಾರೆಗಳ ಶಬ್ದವೂ ಹಿರಣ್ಯಕಶಿಪು ಹಿರಣ್ಯಾಕ್ಷರ ಘಾತಗಳು; ಬೆಂಗಳೂರು ಮೈಸೂರುಗಳ ಕಡೆ ಕಳೆದು ಮರೆತುಹೋದ ಭಾಗ್ಯ. ಒಂದೊಂದು ಬಗೆಗೂ ಒಂದು ಸವಿಭಾಷೆ ಅಥವಾ ಸಂಕೇತ ಇತ್ತು. ಇದರ ವಿವರಗಳು ನೂರಾರು ಬಗೆ. ಶಾಸ್ತ್ರಿಗಳಿಗೆ ಹತ್ತಾರು ಬಗೆಯ ಉಂಡೆ ಪುಡಿ ನಸ್ಯಗಳ ಅನುಭವ. ಅದನ್ನು ತೀಡಿ ಪುಡಿ ಮಾಡುವ ವಿಧಾನ ಆರ್ಷ ಸಂಪ್ರದಾಯದಂತೆ ಅವರು ನಡಸಿಕೊಂಡದ್ದರಿಂದ, ಅವರನ್ನು ಕಂಡಾಗಲೆಲ್ಲ ಹಿರಿಯರಾದ ಡಿ.ವಿ.ಜಿ. ಯಂಥವರೂ ಸಂಪದ್ಗಿರಿರಾಯರೂ–ರಾಳ್ಳಪಲ್ಲಿಯವರು ಕೂಡ–ನಸ್ಯ ಸೇವನೆ ಮಾಡಿ ಸುಖಿಸುತ್ತಿದ್ದರು. ಅದನ್ನು ಒಂದು Culture ಎನ್ನಬೇಕೊ ಒಂದು Cult ಎನ್ನಬೇಕೊ – ಯಾವುದರಲ್ಲಿಯೂ ತೀರ್ಮಾನ, ಪ್ರವೇಶ ಇಲ್ಲದ ನನ್ನಂಥವನ ಮನಸ್ಸಿಗೆ ಹೇಗೆ ಬಗೆಹರಿಯಬೇಕು? ಇದಕ್ಕೆ ವಿಶೇಷವಾಗಿ ರಸಿಕತನ ಬೇಕು, ಸಾವಧಾನ ಬೇಕು, ತದೇಕನಿಷ್ಠೆ ಬೇಕು. ಪ್ರಪಂಚದ ಎಲ್ಲ ಉಳಿದ ಕಾರ್ಯಗಳೂ ತಕ್ಷಣಕ್ಕೆ ನಿಂತು, ಗಡಿಯಾರವೂ ಸೂರ್ಯನೂ ನಡೆಯದೆ ನಿಂತು ಕಾಯುತ್ತಿರಬೇಕು. ಪೂರ್ತಿ ತಮ್ಮ ಕಾಲ ತಮ್ಮದಾಗಿರಬೇಕು. ಆ ಕಾಲ ಈಗಿಲ್ಲ. ನಸ್ಯದ ಕಾಲ ಮುಗಿದು ಸಿಗರೆಟ್ ಕಾಲ ಪ್ರಬಲಿಸಿರುವ ಈ ಕಾಲದಲ್ಲಿ ಅದರ ನೆನಪನ್ನು ಮಾತ್ರ ಒಣ ಮಾತುಗಳಲ್ಲಿ ವರ್ಣಿಸಬಹುದು ಅಷ್ಟೇ. ನಸ್ಯ, ಸಿಗರೆಟ್, ಚುಟ್ಟ, ಪೈಪ್ ಇಂಥ ಬಾಬುಗಳಲ್ಲಿ ಒಂದು ಮರ್ಯಾದೆ ನಡೆದುಕೊಂಡು ಬಂದಿದೆ. ಅವು ಒಬ್ಬೊಬ್ಬರಿಗೆ ಬಳಕೆಗೆ ಬರುವುದಾದರೂ ಸಾಮಾನ್ಯವಾಗಿ ಹೆಚ್ಚು ಮಂದಿ ಒಂದೆಡೆ ಕುಳಿತು ಅವನ್ನು ಸೇವಿಸುವುದು ವಾಡಿಕೆ. ಮೊದಲು ಇನ್ನೊಬ್ಬರಿಗೆ ಕೊಟ್ಟು ಯಜಮಾನನಾದವನು ಆ ಬಳಿಕ ಸೇವಿಸುವುದು ಮರ್ಯಾದೆ. ದಾನ, ಆಮೇಲೆ ಧಾರಣ–ಅದು ಕ್ರಮ. ಆದುದರಿಂದ ಸಮಷ್ಟಿಯಲ್ಲಿ ನಾಲ್ಕು ಜನರ ಸಂಪರ್ಕ ವಿಶ್ವಾಸಗಳ ಬಂಧ ಬೆಳೆಯುತ್ತದೆ. ಪಾನಕಗಳ ವಿತರಣೆಯಲ್ಲಿಯೂ ಹಾಗೇ ಎಂದು ಕೇಳಿದ್ದೇನೆ. ಈ ಕಲ್ಪ–ಆಗಮಗಳಲ್ಲಿ ನನ್ನ ಅನುಭವ ಸೊನ್ನೆ. ಶಾಸ್ತ್ರಿಗಳಿಗೆ ಈ ವರ್ಗ ದೊಡ್ಡದು. ಹೆಚ್ಚು ಮಾತನಾಡದವರು ಅವರಾದರೂ ಆಡಿದ ಒಂದೊ ಎರಡೊ ಮಾತು ಸ್ನೇಹದ್ದು, ರಸಿಕನದು. ಸಾಹಿತ್ಯ ಸಂಸ್ಕಾರಗಳಿಂದ ಬೆಳೆದಿದ್ದ ಒಂದು ರಸಿಕತೆ ಅದನ್ನು ರಂಜಿಸುತ್ತಿತ್ತು. ತಮ್ಮ ಮನೆತನದ ಹಿರಿಯರಾಡಿಕೊಳ್ಳುತ್ತಿದ್ದ ಮಾತು, ತಾವು ಅನೇಕ ಗೋಷ್ಠಿಗಳಲ್ಲಿ ಕೇಳಿದ್ದ ಅರಮನೆ, ಗುರುಮನೆಗಳ ವಿಶೇಷಗಳು ಪುಷ್ಟಿ ಕೊಡುತ್ತಿದ್ದವು. ತಮಗಿಂತ ಹಿರಿಯರಾದವರು ಇದ್ದ ಕಡೆ ತಾವು ನುಗ್ಗಿ ಮುಂದುವರಿದು ಮಾತನಾಡುತ್ತಿರಲಿಲ್ಲವಾದರೂ ತಮಗಿಂತ ಕಡಮೆ ವಯಸ್ಸಿನ ಸಂಘಸಮುದಾಯಗಳಲ್ಲಿ

ಇವರ ಹೊಡೆತ ಬಲವಾದ್ದು. ಆ ಕಾಲದಲ್ಲಿ ಬೆಂಗಳೂರಲ್ಲಿದ್ದ ಸಂಗೀತಗಾರರೆಲ್ಲರ ಪರಿಚಯವೂ ಅವರಿಗಿದ್ದುದರಿಂದ ಆ ಕಲೆಗೆ ಸಂಬಂಧಿಸಿದ ಅನೇಕ ಸೂಕ್ಷ್ಮಗಳೂ ಸ್ವಾರಸ್ಯಗಳೂ ಅವರ ವಶವಾಗಿ ವಿಧೇಯವಾಗಿದ್ದವು.

ಸೆಯಿಂಟ್ ಥೆರೇಸಾ ಹೈಸ್ಕೂಲಲ್ಲಿ ಸಂಸ್ಕೃತದ ಉಪಾಧ್ಯಾಯರಾಗಿ ಅವರು ಬಹುಕಾಲ ದುಡಿದರು. ಅಲ್ಲಿನ ವಿದ್ಯಾನಿರ್ವಾಹಕರಿಗೆ ಅವರನ್ನು ಕಂಡರೆ ಅಚ್ಚುಮೆಚ್ಚು; ಗೌರವ. ಒಂದು ದಿನ ತಮ್ಮ ಕೆಲಸಕ್ಕೆ ತಪ್ಪಿಸಿಕೊಳ್ಳದಂತೆ, ನಡತೆಯಲ್ಲಿ ಜಾಳು, ಜಳ್ಳು ಇಲ್ಲದೆ ಅಲ್ಲಿನ ಹೆಣ್ಣುಮಕ್ಕಳ ವಿದ್ಯಾಶಿಕ್ಷಣದ ನಿರ್ವಹಣೆಯಲ್ಲಿ ಆ ಸಂಸ್ಥೆಯವರಿಗೆ ಇವರು ನೆರವಾಗುತ್ತಿದ್ದ ರೀತಿಯಿಂದ ಸುಸೂತ್ರವಾಗಿ ಅಲ್ಲಿನ ಕೆಲಸವನ್ನು ಅವರು ಉಳಿಸಿಕೊಳ್ಳುವುದು ಶಕ್ಯವಾಯಿತು. ಗಟ್ಟಿಯಾದ ಅಷ್ಟೇನೂ ಹೆಚ್ಚಿನದಲ್ಲದಿದ್ದರೂ ಸಾಮಾನ್ಯವಾದ ಒಂದು ತಿಂಗಳ ವೇತನ ದೊರೆಯುವಂತಾಗಿತ್ತು. ಜೊತೆಗೆ ಭಾಷಾಂತರ ಕಾರ್ಯ–ಸಂಸ್ಕೃತದಿಂದ ಕನ್ನಡಕ್ಕೆ–ನಡೆಯುತ್ತಲೇ ಇತ್ತು. ಅಲ್ಲಿ ಒಂದು ಶ್ಲೋಕಕ್ಕೆ ಇಷ್ಟು ಎಂದು ರುಸುಮು ಕೊಡುತ್ತಿದ್ದರಂತೆ. ಸ್ಕಾಂದಪುರಾಣದ ವಿಷಯವನ್ನು ಆಗಲೆ ಹೇಳಿದ್ದೇನೆ.

ಯಾವುದಾದರೂ ಒಂದು ಕಾವ್ಯವನ್ನು ಅವರು ವಾಚನ ಮಾಡಬೇಕಾದಾಗ ಸಂಗೀತ, ಸಾಹಿತ್ಯ, ಲೋಕಾನುಭವ, ಸಂಪ್ರದಾಯ ಈ ಎಲ್ಲದರ ಸಮ್ಮಿಳಿತ ಸಂಸ್ಕಾರ ಒದಗಿ ಬರುತ್ತಿತ್ತು. ನಾನು ಈವರೆಗೆ ಕೇಳಿರುವುದರಲ್ಲಿ ರಾಳ್ಳಪಲ್ಲಿ ಅನಂತಕೃಷ್ಣಶರ್ಮರು, ಸುಬ್ರಹ್ಮಣ್ಯಶಾಸ್ತ್ರಿಗಳು ಇವರಿಬ್ಬರೇ ಉದಾಹರಣೆಗೆ ರಾಮಾಯಣವನ್ನಾಗಲಿ ಅಥವಾ ಒಂದು ನಾಟಕವನ್ನಾಗಲಿ ಮನಸ್ಸಿಗೆ ಆಪ್ಯಾಯಮಾನವಾಗುವಂತೆ ಹಾರ್ದವಾಗಿ ಓದಬಲ್ಲವರು. ಇವರಲ್ಲಿಯೂ ತಾರತಮ್ಯಗಳುಂಟು. ಇದೇ ಕಾರಣದಿಂದಲೇ ಅವರು ಹೊಸದಾಗಿ ಪದ್ಯಗಳನ್ನು ಬರೆಯುವಾಗ, ಸಂಸ್ಕೃತದಿಂದ ಕನ್ನಡಕ್ಕೆ ಕವಿತೆಯನ್ನೊ ನಾಟಕವನ್ನೊ ಭಾಷಾಂತರ ಮಾಡುವಾಗ ಸೂಕ್ಷ್ಮಗ್ರಹಣ ಶಕ್ಯವಾಗುತ್ತಿತ್ತು. ಮಾತುಗಳ ಆಯ್ಕೆಯಲ್ಲಿಯೂ ಬಂಧದಲ್ಲಿಯೂ ಹೆಚ್ಚು ನಯಜ್ಞಾನವುಳ್ಳವರನ್ನಾಗಿ ಮಾಡುತ್ತಿತ್ತು. ನಾದದ ಸುಖ ಅರಿತವರಿಗಲ್ಲದೆ ಕಾವ್ಯದ / ಕವಿತೆಯ ಭಾಷಾಂತರ ಫಲಿಸದು. ಅವರ 'ಮಾಳವಿಕಾಗ್ನಿಮಿತ್ರ' ಭಾಷಾಂತರದ ಸಮಯದಲ್ಲಿ ಹತ್ತಾರು ದಿವಸ ನಾನು ಜೊತೆಯಲ್ಲಿ ಕುಳಿತು ನೋಡಿದ್ದೇನೆ: ನಾಂದೀ ಪದ್ಯದಿಂದ ಹಿಡಿದು ಕಡೆಯವರೆಗೂ. ನೀಲಕಂಠ ಚಂಪೂ ಭಾಷಾಂತರಗಳನ್ನು ಮಾಡಿದ್ದರು. ಅವರ ಅನ್ಯೋಕ್ತಿಗಳು ಅನೇಕವನ್ನು ಪರಿಶೀಲಿಸುವಾಗಲೂ ಕಾಲಕಳೆದಂತೆಲ್ಲ ಆ ನಯ ಹೆಚ್ಚು ನುಣುಪಾಗುತ್ತಿತ್ತು; ಮೃದುವಾಯಿತು. ಆ ಅನ್ಯೋಕ್ತಿಗಳನ್ನೆಲ್ಲ ಸೇರಿಸಿ ಒಂದು ಕಡೆ ಅಚ್ಚುಮಾಡಿಸಬೇಕೆಂದಿದ್ದರು. ಇಂಥ ಪ್ರಕಟನೆ ಸ್ವಂತ ಹಣದ ಶಕ್ತಿ ಇಲ್ಲದ ಜನಕ್ಕೆ ಸುಲಭವಲ್ಲವಾಗಿ ನೆರವೇರಲಿಲ್ಲ. ಈಗಲೂ ಯಾರಾದರೂ ಅವುಗಳನ್ನು ತರಿಸಿ ಒಂದು ಕಡೆ ಸೇರಿಸಬಹುದು. ಪುಣ್ಯಶಾಲಿಗಳಿಗಲ್ಲದೆ ಇಂಥ ಕವಿತೆಯ ಪ್ರಕಟನೆ ಈ ಕಾಲದಲ್ಲಿಯಂತೂ ಶಕ್ಯವಿಲ್ಲ. ಆಗರ್ಭಸಂಪ್ರೀತಿಯ ಸಂಸ್ಕಾರವಿರಬೇಕು ಅದಕ್ಕೆ; ಉಪಪತ್ತಿ ಬೇಕು. ನಿರ್ಲಕ್ಷ್ಯವೆ, ನಿರಾಸಕ್ತಿಯೆ ಇಂಥವಕ್ಕೆ ಇಂದು.

ಅವರಿಗೆ ಒಂದು ಕಡೆ ನೀಲಕಂಠನ ಸ್ವಾತಂತ್ರ್ಯ, ಉಕ್ತಿ ಧಾರಾಳ, ಸಾಹಸ ತುಂಬಾ ಮೆಚ್ಚಿನವು. ಇನ್ನೊಂದು ಕಡೆ ಪಂಡಿತರಾಜ ಜಗನ್ನಾಥನ ರಸಗಂಗಾಧರವನ್ನೂ ಅವನ

ರೀತಿಯನ್ನೂ ಕಂಡರೆ ಮೆಚ್ಚು. ಅಪ್ಪಯ್ಯ ದೀಕ್ಷಿತನಿಗೂ ಜಗನ್ನಾಥನಿಗೂ ನಡುವೆ ಬೆಳೆದ ಕುಹಕಗಳ ಇತಿಹಾಸವನ್ನು ಬಹು ಸ್ವಾರಸ್ಯವಾಗಿ ಅವರು ವರ್ಣಿಸಬಲ್ಲವರು. ಪುರಾಣದ ಯಾವುದೊ ಒಂದು ಸಣ್ಣ ಕಥೆಯನ್ನು ಹೇಳುವಾಗಲೂ ತಾವು ಬಲ್ಲ ಮಾಗಡಿಯ ಸುತ್ತಮುತ್ತಲಿನ ಪಾಳೆಯಗಾರರ ಮತ್ತು ಐತಿಹಾಸಿಕ ಕತೆಗಳನ್ನು ವರ್ಣನೆ ಮಾಡುವಾಗಲೂ ಅವರ ಹರ್ಷ ತಿಳಿಯಾಗಿ, ಅದರೆ ಹಿಗ್ಗಿ ಬರುತ್ತಿತ್ತು. ಇಂಥ ಅನೇಕ ಕಥೆಗಳನ್ನು ಇವರ ಬಾಯಿಂದ ಕೇಳಿದ್ದೇನೆ. ಅವರ ಕಲ್ಪನಾಶಕ್ತಿ ವಿಶೇಷವಾದ್ದರಿಂದ ಒಂದೇ ಕತೆಯನ್ನು ಹತ್ತು ಸಲ ಹೇಳಿದಾಗಲೂ ಯಾವುದೊ ಒಂದು ಭಾಗ ಹೆಚ್ಚು ರಂಜನೆಗೊಳ್ಳುತ್ತಿತ್ತು, ವಿಸ್ತಾರವಾಗುತ್ತಿತ್ತು. ಆ ಕಥೆಯನ್ನು ನನಗೆ ಹಿಂದೆ ಹೇಳಿದ್ದಾರೆಂಬ ಸಂಗತಿಯನ್ನು ಉತ್ಸಾಹದ ಸಮಯದಲ್ಲಿ ತಿಳಿಸುವುದು ಅನ್ಯಾಯವಾಗುವುದೆಂದು ಸುಳಿವು ಕೊಡದೆ ಕೇಳಿದ್ದೇನೆ. ಅವರು ಅದನ್ನೇ ಪುನಃ ವರ್ಣಿಸುವಾಗ ಈ ಲಕ್ಷಣವನ್ನು ನಾನು ಕಂಡಿದ್ದೇನೆ. ಪ್ರತಿಸಲವೂ ಅದನ್ನು ಹೆಚ್ಚು ಮನೋಹರವಾಗಿ ಮಾಡಿ ಒರೆಯಬಲ್ಲ ಚಾತುರಿ ಅವರದು. ನನ್ನ ನೆನಪೂ ಕೇವಲ ಅನಿಶ್ಚಯವಾದುದರಿಂದ ಅದನ್ನು ಹಿಂದೆ ಕೇಳಿದ್ದೇನೊ ಇಲ್ಲವೊ ಎಂಬ ಸ್ಥಿತಿಯೇ ಯಾವಾಗಲೂ ನನ್ನದು. ಹೀಗಾಗಿ ಪ್ರತಿಸಲವೂ ಅದು ಹೊಸತಾಗಿಯೇ ಕಾಣುತ್ತಿತ್ತು. ಒಳ್ಳೆಯ ಕಥನದ ಕಲೆಗಾರಿಕೆ, ಜೀವಂತಿಕೆ ಅಂಥಲ್ಲಿರುತ್ತದೆ: ಅಲ್ಲದೆಯೊ ಅದನ್ನು ನೀವು ಹೇಳಿದ್ದೀರಿ ಎಂದುಬಿಟ್ಟರೆ ಹೇಳುವವರ ಉತ್ಸಾಹ ಭಂಗವಾಗುತ್ತದೆ. ಅದು ಬರ್ಬರತೆ ಎಂದು ನನ್ನ ಭಾವನೆ.

ಅವರು ನಾಡಿನಲ್ಲಿ ಹೆಚ್ಚಾಗಿ ಸುತ್ತಾಡದಿದ್ದರೂ ಯಾತ್ರೆಗೆಂದೊ ಏನೊ ದಕ್ಷಿಣಕ್ಕೆ ಹೋಗಿದ್ದರೆಂದೂ ರಾಮೇಶ್ವರದವರೆಗೂ ಸಂಚಾರ ಮಾಡಿದ್ದಾರೆಂದೂ ತಿಳಿದುಬಂತು. ಮಧುರೆ, ತಂಜಾವೂರು, ಚಿದಂಬರ, ಕಂಚಿ, ಕಾಳಹಸ್ತಿ, ಪಳನಿ ಮುಂತಾದ ಕಡೆಯ ಅನುಭವಗಳನ್ನು ಆಗಾಗ ಹೇಳುತ್ತಿದ್ದರು. ಅಲ್ಲಿ ದೇವಾಲಯಗಳ ಪ್ರವೇಶ, ದೇವರ ದರ್ಶನಕ್ಕೆ ಹೇಗೆ ಹೋಗಬೇಕೆಂಬ ವಿಚಾರ, ವಸತಿ, ಊಟೋಪಚಾರ, ಈ ಎಲ್ಲವನ್ನೂ ಕುರಿತು ಅನೇಕ ಸಂಗತಿಗಳನ್ನು ಹೇಳಿದ್ದರು. ದಕ್ಷಿಣದ ತಿಂಡಿತೀರ್ಥಗಳ ವಿಷಯ ತಿಂಡಿಪೋತನಾದ ನನಗೆ ಸ್ವಲ್ಪ ವಿಶೇಷವಾಗಿ ಹೇಳಿದ್ದುಂಟು. ಎಲ್ಲಕ್ಕಿಂತ ವಿಶೇಷವಾಗಿ ಬೇರೆ ಬೇರೆ ಕಡೆ ದೊರೆಯುತ್ತಿದ್ದ ಇಡ್ಲಿ, ವಡೆ, ದೋಸೆ, ಕೆಲವು ಕಡೆಯ ಚಟ್ನಿ, ಕೆಲವು ಕಡೆಯ ಮೊಳಗಾಯಿಪುಡಿ, ಒಂದು ಇಡ್ಡಲಿಯನ್ನು ತರ್ಜನಿ ನಡುಬೆರಳಿನ ನಡುವೆ ಎರಡಾಗಿ ಒಡೆದು ಬಾಯಿಗೆ ಹಾಕುವ ತಂತ್ರ, ಸೊಗಸು– ಇವನ್ನು ವರ್ಣಿಸುವಾಗ ಯಾತ್ರೆಗೆ ಸಾಮಾನ್ಯವಾಗಿ ಮುರಿಯದ ನನ್ನ ಮನಸ್ಸು ಆ ದೋಸೆ, ಇಡ್ಡಲಿ, ವಡೆಗಳಿಗೆ ಒಲುತ್ತಿತ್ತು. ಸಹಜವಾಗಿ ಚೆನ್ನಾಗಿ ಇದ್ದುದನ್ನು ಭೋಗಿಗಳೂ ರಸಿಕರೂ ಆದ ಶಾಸ್ತ್ರಿಗಳು ವರ್ಣನೆಮಾಡುವಾಗ, ಅಸಂಯಮಿಗಳೂ ಅವಶಿಗಳೂ ಆದ ನಮ್ಮ ಚಿತ್ತಸ್ವಾಸ್ಥ್ಯ ಕಲಕಿಹೋಗುತ್ತಿದ್ದಿತು. ಕಾಳಹಸ್ತಿಯಲ್ಲಿಯೊ ಪಳನಿಯಲ್ಲಿಯೊ ತುಂಬಾ ಕೋತಿಗಳು ಎಂದು ವರ್ಣನೆಮಾಡಿ, ಅಲ್ಲಿ ದೇವಸ್ಥಾನದ ಮುಂದೆ ಇದ್ದ ಯಾವುದೊ ಒಂದು ಜಗುಲಿಯ ಮೇಲೆಯೊ ಒಂದು ಅಶ್ವತ್ಥಕಟ್ಟೆಯಂಥ ಪ್ರದೇಶದಲ್ಲಿಯೊ ಎರಡು ತಂಡದ ದೊಡ್ಡ ಕೋತಿಗಳು ಒಂದಕ್ಕೊಂದು ಜಿದ್ದು ಬೆಳಸಿ ಬೆಳಗ್ಗೆ ಒಂಬತ್ತು ಗಂಟೆಯಿಂದ ಹಿಡಿದು

ಹನ್ನೊಂದು-ಹನ್ನೆರಡರವರೆಗೂ ವೈರ ಮಸೆದದ್ದು, ಒಂದನ್ನೊಂದು ಕೀಟಲೆ ಮಾಡಿದ್ದು, ಸಾಮೂಹಿಕವಾಗಿ ವ್ಯಕ್ತಿಶವಾಗಿ ಹಲ್ಲುಕಿರಿದಿದ್ದು, ಗುರುಗುಟ್ಟಿದ್ದು, ಪರಚಿದ್ದು, ಕಚ್ಚಾಡಿದ್ದು, ಅಟ್ಟಿಕೊಂಡು ಹೋದದ್ದು, ಕಾವ್ಯಗಳ ಯುದ್ಧಪ್ರಕರಣಗಳಲ್ಲಿ ವರ್ಣಿಸುವಂಥದು. ವ್ಯಕ್ತಿ ಯುದ್ಧ, ತಂಡಗಳ ಸಂಕುಲ ಯುದ್ಧ, ತುಮುಲ ಹೇಗೆ ಹೇಗೆ ನಡೆಯಿತು; ಎಗರಿದ್ದು, ಬಡಿದಾಡಿದ್ದು; ಒಂದನ್ನೊಂದು ಹೇಗೆ ಕೆಳಗೆ ಹಾಕಿಕೊಂಡು ಕಚ್ಚಾಡಿದವು, ಕುಣಿದವು ಇತ್ಯಾದಿ ಸುಮಾರು ಅರ್ಧಗಂಟೆ ವರ್ಣನೆ ಮಾಡಿದರು. ಲಂಕೆಯಲ್ಲಿ ನಡೆದ ವಾನರ-ರಾಕ್ಷಸ ಯುದ್ಧ ಕೃತಕವೆನ್ನಿಸಿತು. ನನಗೆ ಇವರ ವರ್ಣನೆಯೇ ಹೆಚ್ಚು ಸಹಜವಾಗಿರುವಂತೆ ಕಂಡು ಅದನ್ನು ಕೇಳಿದ ನೆನಪುಂಟು. ರಾಮಾಯಣದಲ್ಲಿ ಮಧುವನದಲ್ಲಿ ವಾನರರು ಮಾಡಿದ ಕೋಲಾಹಲ ಸೌಮ್ಯ, ಮಧುರ, ಸಾಧು, – ಇದಕ್ಕೆ ಹೋಲಿಸಿದರೆ. ನಾನೂ ಅವರೂ ಬಗೆಬಗೆಯ ಹುಂಜದ ಕಾಳಗ, ಟಗರು ಕಾಳಗ, ಬಗೆಬಗೆಯ ಮೇಲು ಬೀಳು ಜಾತಿಗಳ ನಾಯಿಗಳ ಕಾಳಗ ವರ್ಣನೆ ಮಾಡಿಕೊಂಡಿದ್ದೇವೆ. ಗೆದ್ದವರು ಅವರೇ! ಆ ವರ್ಣನೆಯಲ್ಲಿ ಉದ್ವೇಗವಿರುತ್ತಿರಲಿಲ್ಲ. ಉತ್ಸಾಹ-ಉರುಬು ಇರುತ್ತಿರಲಿಲ್ಲ. ಯಾವುದನ್ನು 'ಕಾವ್ಯದಲ್ಲಿ distance – ಭಾವದಲ್ಲಿ ಅನಾಸಕ್ತವಾಗಿರುವಂತೆ – ವರ್ಣಿಸುವುದನ್ನು ಬೇರೆ ಮಾಡಿ ಕುಶಲನಾದ ಕತೆ ಹೇಳುವವನು ಅದಕ್ಕೆ ಸಂಬಂಧಿಸಿದಂತೆ ಹೇಳುತ್ತಾನೊ, ಆ ವಸ್ತು ನಿಷ್ಠೆ ಮಾತ್ರ ಇರುತ್ತಿತ್ತು. ಒಂದು 'ದ್ವಿಪ್ರಜ್ಞೆ' (double consciousness) ನಿರಂತರವಾಗಿ ಆ ವರ್ಣನೆಯ ಹಿಂದೆ ಇರುತ್ತಿದ್ದುದು ನನಗೆ ಆಶ್ಚರ್ಯವನ್ನುಂಟುಮಾಡಿತ್ತು. ಅದು ಅವರ ಕತೆಗಾರಿಕೆಯ ಲಕ್ಷಣ. ಕತೆ ಹೇಳುವುದರಲ್ಲಿ ಮಾಸ್ತಿಯವರೊಬ್ಬರು, ಶಾಸ್ತ್ರಿಗಳೊಬ್ಬರು, ರಾವ್‌ಬಹದ್ದೂರ್ ಒಬ್ಬರು ನನಗೆ ಮೆಚ್ಚಿಕೆಯಾದವರು. ಒಂದೊಂದು ಎಷ್ಟೆಷ್ಟು ಬೇರೆಯೊ ಅಷ್ಟು ರಮ್ಯ, ಹೃದ್ಯ, ಗ್ರಾಹ್ಯ.

ನಾವು ಜೊತೆಯಲ್ಲಿ ನಾಲ್ಕಾರು ಕಡೆ ನಾಡಹಬ್ಬ ಸಂಬಂಧದಲ್ಲಿಯೂ ಬೇರೆ ಸ್ಥಳಗಳ ಸಂಸ್ಥೆಗಳ ವಾರ್ಷಿಕೋತ್ಸವ ಮುಂತಾದ ಸಂಬಂಧದಲ್ಲಿಯೂ ತಿರುಗಾಡಿದ್ದೇವೆ. ಮುಖ್ಯವಾಗಿ ಗುಲ್ಬರ್ಗ, ಬಳ್ಳಾರಿ, ಹೊಸಪೇಟೆ, ಕೊಪ್ಪಳ, ಉಡುಪಿ, ಮೈಸೂರು, ಕುಮಟ, ಕಾರವಾರ, ಗೋಕರ್ಣ ಮುಂತಾದ ಕಡೆ. ನಾಲ್ಕಾರು ದಿವಸ ಜೊತೆಯಲ್ಲಿದ್ದಾಗ ಎಷ್ಟು ಗಂಭೀರವಾಗಿ ದೊಡ್ಡದಾಗಿ ಜೊತೆಯಲ್ಲಿ ಇದ್ದವರಿಗಾಗಲಿ ನಮಗೆ ಆತಿಥ್ಯವಿತ್ತ ಜನರಿಗಾಗಲಿ ಯಾವ ಬಗೆಯ ಅನನುಕೂಲವನ್ನೂ ಉಂಟುಮಾಡದೆ, ಎಲ್ಲರ ವಿಶ್ವಾಸಕ್ಕೂ ಗೌರವಕ್ಕೂ ಪಾತ್ರರಾದರು. ಅವರ ನುಡಿ, ಆಚಾರ ಇನ್ನೊಬ್ಬರಿಗೆ ಯಾವ ತೊಂದರೆಯನ್ನೂ ಅಡ್ಡಿಯನ್ನೂ ಉಂಟುಮಾಡುತ್ತಿರಲಿಲ್ಲ. ಹೋಗಿರುತ್ತಿದ್ದ ಕಡೆಗಳ ಪರಿಸ್ಥಿತಿಯನ್ನು ನೋಡಿಕೊಂಡು ತಮ್ಮಮಡಿ ಸಂಧ್ಯಾವಂದನೆಗಳನ್ನು ಹೇಗೊ ಹಾಗೆ ಹೊಂದಿಸಿಕೊಳ್ಳುತ್ತಿದ್ದರು. ಅವಕಾಶವಿಲ್ಲದಲ್ಲಿ ಈ ನಿರ್ಬಂಧವನ್ನು ತಾವು ಇಟ್ಟುಕೊಂಡಿದ್ದೇವೆ ಎಂಬ ಸುಳಿವನ್ನೇ ಕೊಡದೆ, ಮನಸಾ ಮಂತ್ರ ಪುರಶ್ಚರಣೆಯನ್ನೊ ಧ್ಯಾನವನ್ನೊ ಮಾಡಿಕೊಂಡು ಮುಗಿಸುತ್ತಿದ್ದರು. ಗುಪ್ತಭಕ್ತಿಯವರು ಎಂಬವರು ಇದ್ದಾರೆ. 'ವಿನಿರ್ಮಿತಂ ಮೌನಮಪಂಡಿತಾನಾಂ' ಎಂಬ ಮೌನ ಒಂದಿದೆ. ಕ್ರಿಯಾಸಾಧನೆಗಾಗಿಯೊ ಲೌಕಿಕಕ್ಕಾಗಿಯೊ ಮೌನ ಸಾಧಿಸುವುದು

ಇನ್ನೊಂದು. ದಡ್ಡನ ಮೌನಕ್ಕೆ ಬೆಲೆಯಿಲ್ಲ, ಗುಣವಿಲ್ಲ, ನನಗೆ ಯಾಕೆ ಈ ಕೋಟಲೆ ಎಂಬ ಅಥವಾ ಒಣ ಅಥವಾ ಬಣಗು ಉಪೇಕ್ಷೆಯ ಅಥವಾ ಉದಾಸೀನದ ಮೌನವೂ ಇದೆ. ಒಂದು ಸಂಯಮ ಅಥವಾ ನಿಯಮವನ್ನು ಪರಿಪಾಲಿಸುವುದಕ್ಕೋಸ್ಕರ ಕೈಕೊಳ್ಳುವ ಮೌನವಿದೆ. ಲಕ್ಷ್ಯವನ್ನು ಸಾಧಿಸಿದಂಥುದು ಮತ್ತೊಂದಿದೆ. ಆಳವಾದ ಯಾವುದೊ ಒಂದು ಸ್ವಾಸ್ಥ್ಯದ ಅಗತ್ಯದಿಂದ ಬೆಳಸಿಕೊಂಡ ಮೌನ ಇದೆ. ಇದಕ್ಕೆ ಮೇಲ್ಪಟ್ಟದ್ದು ವೇದಾಂತದಲ್ಲಿ ಬ್ರಹ್ಮಸಾಧನೆಗೆ ಸಂಬಂಧಿಸಿದ ಮೌನ. ಅದಕ್ಕೆ ಕಡಮೆಯದು ಶಾಸ್ತ್ರಿಗಳ ಸ್ವಾಸ್ಥ್ಯರಕ್ಷಕವಾದ ಮೌನ ಲೌಕಿಕದಲ್ಲಿ. ವಾದ, ಚರ್ಚೆ ನಡೆಯುತ್ತಿರುವಾಗ ಬಹುಕಾಲ ನೋಡುತ್ತ ಕೇಳುತ್ತ ಸುಮ್ಮನಿದ್ದು, ಕಡೆಗೆ ತಮಗೆ ತೋರಿದ್ದನ್ನು ಅನುದ್ವಿಗ್ನಮನಸ್ಕನಿಂದ ಅವರು ಒಂದೆರಡು ಮಾತಾಡಿದುದನ್ನು ಕೇಳಿದ್ದೇನೆ. ವಿಷಯ ಪರಿಜ್ಞಾನ ಹೆಚ್ಚಿಲ್ಲದೆ ತಮ್ಮ ಮತಿಯನ್ನು ಪ್ರಾಗಲ್ಭ್ಯದಿಂದ ಇಷ್ಟಬಂದಂತೆ ಅಭಿಪ್ರಾಯ ಬೆಳಸುವ ಜನರ ನಡುವೆ ತನ್ನ ವಯಸ್ಸಿನವರು, ಕಿರಿಯರು ಸೇರಿದ ಸಂದರ್ಭಗಳಲ್ಲಿ ಧಾರಾಳವಾಗಿ ಮಾತು ನಡಸಿ ಪ್ರಬಲಿಸಬಲ್ಲವರಾಗಿದ್ದರೂ ಇನ್ನೊಂದು ನೆಲಸಿನಲ್ಲಿ ಈ ಸ್ವಾಸ್ಥ್ಯ, ಸಂಯಮ ಅವರಿಗೆ ಸಿದ್ಧಿಸಿತ್ತು. ಯಾರಿಗೆ ವಿಷಯ ತಿಳಿದಿದೆ, ಯಾರಿಗಿಲ್ಲ, ಯಾರು ಆಲೋಚನೆ ಮಾಡಿ ತೀರ್ಮಾನಕ್ಕೆ ಬಂದಿದ್ದಾರೆ, ಅನುಭವ, ಆಧಾರ ಇಟ್ಟುಕೊಂಡು ಮಾತಾಡುತ್ತಾರೆ ಎಂಬುದನ್ನು ಸುಲಭದಲ್ಲಿ ಗ್ರಹಿಸುತ್ತ, ತಮ್ಮ ಮಾತನ್ನು ಹೊಂದಿಸಿಕೊಳ್ಳುವ ಸ್ವಭಾವ ಅವರದು. 'Where Angels fear to tread fools rush in' ಎಂಬ ವಾಕ್ಯವಿನೋದವನ್ನು ಸ್ಥಾಪಿಸುತ್ತದೆ. ಯಾರು Angels, ಯಾರು fools ಎನ್ನುವ ವಿವೇಕವನ್ನು ಪ್ರತಿಯೊಬ್ಬರೂ ತಮ್ಮ ತಮ್ಮ ನೆಲಸಿನಲ್ಲಿ ಅರ್ಥಮಾಡಿಕೊಂಡು ನಡೆದರೆ ಲೋಕ ಇನ್ನಷ್ಟು ಸುರಕ್ಷಿತವಾದೀತು; ಬದುಕಿನಲ್ಲಿ ಇನ್ನಷ್ಟು ನೆಮ್ಮದಿ ದೊರಕೀತು. 'The beat of her unseen feet, which only the Angels hear' ಎಂಬುದನ್ನು ಕೇಳಿದ್ದೇವಲ್ಲವೆ! ಶಾಸ್ತ್ರಿಗಳ ವಿವೇಕ ಈ ತಿಳಿವಳಿಕೆಯಿಂದ ಬಂದುದು. ತನ್ನ ಮನಸ್ಸನ್ನು ಅರಿತುಕೊಳ್ಳಲು ಯತ್ನಿಸಿ, ಆದ ಮಟ್ಟಿಗೆ ತಮ್ಮ ನಡತೆ, ಮಾತುಗಳನ್ನು ನಿಯಮಿಸಿಕೊಳ್ಳುವ ಯತ್ನ ಅವರಲ್ಲಿ ಸಂತತವಾಗಿತ್ತು. ಇನ್ನೊಬ್ಬರು ಅರಿತುಕೊಳ್ಳಬೇಕೇ ಹೊರತು ಅದನ್ನು ಅವರು ತೋರಿಸಿಕೊಳ್ಳುವವರಲ್ಲ. ಒಮ್ಮೆ ಒಂದು ಮೋಟರಿನಲ್ಲಿ ನಾಲ್ಕು ಜನ ದೊಡ್ಡವರೂ ಒಬ್ಬ ಹುಡುಗ ಹಿಂದಿನ ಸೀಟಿನಲ್ಲಿ, ಮುಂದಿನ ಸೀಟಿನಲ್ಲಿ ನಾವಿಬ್ಬರೂ ಕುಳಿತು ಇಲ್ಲಿಂದ ಕುಮಟಾಗೆ ಪ್ರಯಾಣ ಮಾಡಬೇಕಾಗಿ ಬಂತು. ಕಿಟಕಿಯ ಬಳಿ ಕುಳಿತ ನನಗೂ ಡ್ರೈವರನಿಗೂ ನಡುವೆ ಕುಳಿತೇ ಅವರು ಪ್ರಯಾಣ ಮಾಡಬೇಕಾಗಿ ಬಂದರೂ ನನಗಿಂತ ಹೆಚ್ಚು ನೇರವಾದ, ಎತ್ತರವಾದ ಆಕೃತಿಯುಳ್ಳ ಆತ ಯಾವೊಂದು ಸಲವೂ ತನಗೆ ಇಕ್ಕಟ್ಟೊ ಅನನುಕೂಲವೊ ಆಗಿರಬಹುದೆಂಬುದನ್ನು ತೋರ್ಪಡಿಸದ, ಪ್ರಯಾಣದ ಅಸೌಕರ್ಯವನ್ನೆಣಿಸದ ನೆನಪು ನನಗೆ ಆಶ್ಚರ್ಯಕರವಾಗಿ ಕಾಣುತ್ತದೆ. ಇನ್ನೊಬ್ಬರ ಸೌಕರ್ಯ ಮೊದಲು, ತನ್ನದು ಆಮೇಲೆ. ಅದರಲ್ಲೂ ಗಾಡಿ ನನಗೋಸ್ಕರ ಗೊತ್ತು ಮಾಡಿದ್ದು; ಕುಮಟದಲ್ಲಿ ನನ್ನದು ಉತ್ಸವ; ನನಗೆ ಯಾವ ಅನನುಕೂಲವೂ ಆಗದೆ ಸಂಚಾರ ನಡೆದರೆ ಅಲ್ಲಿನ ಕ್ರಿಯಾ ಕಲಾಪಕ್ಕೆ ಅನುಕೂಲವಾಗುತ್ತದೆ ಎಂಬುದು ಅವರ ಯೋಚನೆ. ಇದಕ್ಕೆ ಕೃತಜ್ಞತೆ ಸಲ್ಲಬೇಕು.

ಮನೆಯಲ್ಲಿ ಅವರನ್ನು ಬಹು ಚೆನ್ನಾಗಿ ನೋಡಿಕೊಳ್ಳುತ್ತಿದ್ದರು. ಹೊಟ್ಟೆಯಲ್ಲಿ ಹುಟ್ಟಿದ ಮಗಳು ಒಬ್ಬಳು ಮಾತ್ರ. ಆಕೆ ಅಷ್ಟೇನೂ ಗಡುಸಲ್ಲ. ಆದರೆ ಮನೆಯಲ್ಲಿದ್ದ, ಮನೆಗೆ ಹೊಸದಾಗಿ ಬಂದ ಗ್ರಂಥಗಳನ್ನೆಲ್ಲ ಮಗಳು ಲಲಿತಮ್ಮ ಓದಿದ್ದರು. ಬಂದ ಕನ್ನಡ ಪುಸ್ತಕಗಳೆಲ್ಲವನ್ನೂ ಓದುತ್ತಿದ್ದರು. ನಾನೊಂದು ಸಲ ಆಮೇಲೆ ಕಂಡಿದ್ದೇನೆ; ಯಾರೊಡನೆಯಾಗಲಿ ಆಕೆ ಸಾಹಿತ್ಯವನ್ನು ಕುರಿತೊ ವಿಮರ್ಶೆಯ ನೆಲೆಬೆಲೆಗಳನ್ನು ಕುರಿತೊ ಗಂಟೆಗಟ್ಟಲೆ ಜಾಣತನದಿಂದ ಶ್ರಮವಿಲ್ಲದೆ ಮಾತನಾಡಿದುದನ್ನು ಬಲ್ಲೆ. ಹೆಂಡತಿ ಇವರಿಗಿಂತ ಹೆಚ್ಚು ಮೌನ. ಮನೆಗೆಲಸದ ಯಾವೊಂದನ್ನೂ ಮಗಳಿಗಾಗಲಿ ಇತರರಿಗಾಗಲಿ ಬಿಡದೆ ತಾವೇ ಸದ್ದುಮಾಡದೆ ನಡಸಿಕೊಂಡು ಹೋಗುತ್ತಿದ್ದ ಅನಸೂಯಮ್ಮನವರು. ಆ ಹೆಸರು ಅಷ್ಟು ಚೆನ್ನಾಗಿ ಒಪ್ಪುತ್ತಿತ್ತು ಆಕೆಗೆ. ಆತನಿಗೆ, ಮನೆಗೆ, ಮಕ್ಕಳಿಗೆ ಬೇಕಾಗಬಹುದಾದುದನ್ನು, ಮನೆಗೆ ಬಂದವರ ಉಪಚಾರಕ್ಕೆ ಅಗತ್ಯವಾದುದನ್ನು ಮುಂದಾಗಿ ಅರಿತು ನಡಸಿಕೊಂಡು ಹೋಗುತ್ತಿದ್ದರು. ಮನೆಗೆ ಬಂದ ಒಬ್ಬ ಅಳಿಯಂದಿರು ಶ್ರೀ ಶ್ರೀನಿವಾಸಮೂರ್ತಿ. ಹೊಟ್ಟೆಯಲ್ಲಿ ಹುಟ್ಟಿದ ಮಗನಿಗಿಂತ ವಿಶೇಷವಾಗಿ ಪ್ರೀತಿಯಿಂದ ಎಲ್ಲರನ್ನೂ ನಡಸಿಕೊಂಡುಹೋಗುತ್ತಿದ್ದರು. ಆತನು ಈ ಕಾಲದ ಲೌಕಿಕರು. ಕಾಫೀ ಬೋರ್ಡಿನಲ್ಲಿದ್ದಾರೆ. ಅವರ ಸ್ನಾನ ಪೂಜೆ ಮಡಿ ಅಚ್ಚ ಆಚಾರವಂತ ಮನೆಯಿಂದ ಬಂದ ಶಾಸ್ತ್ರಿಗಳಿಗಿಂತ ಅತಿಶಯವಾದ್ದು. ಆ ಮನೆಯ ಅಚ್ಚುಕಟ್ಟನ್ನು ನೋಡಿದರೆ ಒಂದು ಸಾಮರಸ್ಯ ಅದರ ಧಾತುವಾಗಿದ್ದಿತೆಂದು ಯಾರೂ ಕಾಣಬಹುದಿತ್ತು. ಎಲ್ಲ ಒಪ್ಪ, ಚೊಕ್ಕಟ, ಅಚ್ಚುಕಟ್ಟು. ಶಾಸ್ತ್ರಿಗಳು ತಲೆ ಕೂದಲನ್ನು ಬಾಚಿಕೊಳ್ಳಬೇಕು. ಷರಟಿನ ಕಫ್ ಗುಂಡಿ ಹಾಕಿ ಹದವಾಗಿ ಇಸ್ತ್ರಿ ಮಾಡಿದ್ದಿರಬೇಕು. ಶಿಸ್ತಿನಲ್ಲಿ ಪಟ್ಟಿಮಾಡಿ ಉಡುವ ಪಂಚೆಯೊಳಗೆ ಅದನ್ನು ಸೇರಿಸಬೇಕು. ಎತ್ತರವಾದ ವ್ಯಕ್ತಿಯಾದುದರಿಂದ ೫೨–೫೪ ಅಂಗುಲ ಅಗಲದ ಪಂಚೆಯನ್ನೇ ಉಡಬೇಕು. ಅದನ್ನು ತೀಡಿ ಹಿಂದೆ ಮುಂದೆ ಪಟ್ಟಿಮಾಡಿ ಕಚ್ಚೆ ಸಿಕ್ಕು ಕಟ್ಟಬೇಕು. ಯಾವ ಪದರವೂ ಜಾಳಾಗಬಾರದು. ಹಲವೇಳೆ ಗುಂಡಿಗಳು ಯಾವುದನ್ನೂ ಹಾಕದೆ ಕೋಟನ್ನು ಧರಿಸಿದಾಗ, ತಲೆಯ ಮೇಲೆ ಹಾಕಿದ ಟೋಪಿಯಿಂದ ಹಿಡಿದು ಹೆಜ್ಜೆ ಹಲಡಿನ ಮೇಲೆ ಮೋಪಾಗಿ ತೂಗುವ ಈ ಧೋತಿ ಸೆರಗಿನವರೆಗೂ ಒಂದು ಚೂರು ಶಿಥಿಲವಲ್ಲದ ಎಡೆಯ ಸಮರ್ಪಕತೆ ಕಾಣಬೇಕು. ಹಣೆಗೆ ಸಾದು. ಇಲ್ಲವಾದರೆ ಹುಬ್ಬುಗಳ ನಡುವೆ ವಿಭೂತಿ. ಇಲ್ಲ ಗಂಧದ್ದೊ ಯಾತರದ್ದೊ ಚುಕ್ಕೆ. ಈ ವೇಷ ಈ ವ್ಯಕ್ತಿಯನ್ನು ಸರ್ವದಾ ರೂಪಿಸುತ್ತಿತ್ತು. ಷರಟಿನಲ್ಲಿಯೇ ಬಂದಾಗ ಒಂದು ಉತ್ತರೀಯವನ್ನು ಹೊದೆದು ಕೈಯಲ್ಲಿ ಕೋಲು, ನಸ್ಯದ ಡಬ್ಬಿ ಅಥವಾ ಒಂದು ಬಣ್ಣದ ನಸ್ಯ ಹಾಕುವವರಿಗಾಗಿಯೇ ನೆಯಿದಂತಿರುವ ಚೌಕಳಿಯ ಕರವಸ್ತ್ರ ಹಿಡಿದು, ಕಾಲಿಗೆ ಕಪ್ಪುಚಕ್ಕಳದ ಸ್ಲಿಪ್ಪರ್ ಹಾಕಿ, ಆತ ಎಷ್ಟೇ ದೂರದಲ್ಲಿ ಹೋಗುತ್ತಿದ್ದರೂ ಇದು ಶಾಸ್ತ್ರಿಗಳು ಎಂದು ಹುರುಡು ಮಾಡಿ ಪಂಥಕಟ್ಟಿ ಹೇಳಬಹುದಿತ್ತು. ಇಂಥ ವ್ಯಕ್ತಿತ್ವವನ್ನು ಸಾಧಿಸುವುದು ಕಷ್ಟ. ಅನೇಕ ಸಂದರ್ಭಗಳಲ್ಲಿ ಸಂಘಸಂಸ್ಥೆಗಳವರು ಉತ್ಸವಾದಿಗಳಿಗೆ ಸ್ವಾಗತ ಪದ್ಯಗಳನ್ನು ಅವರಿಂದ ಬರಸುತ್ತಿದ್ದರು. ಅದಕ್ಕೆ ಸ್ವಲ್ಪ ಪುರಸ್ಕಾರವೂ ಬರುತ್ತಿತ್ತು; ಹೆಚ್ಚಿಲ್ಲ. ನಸ್ಯಕ್ಕಾಗುತ್ತದೆ ಬಿಡಿ, ಎನ್ನುತ್ತಿದ್ದುದು ವಾಡಿಕೆ. ಆದರೆ ಏನು ಬರೆಯಲಿ ಹೊಸತಾಗಿಯೆ ಬರೆಯುವ ಎಚ್ಚರಿಕೆಯೇ.

ಕಂದವೊ ವೃತ್ತವೊ ಹಾಗೆಯೇ ಒಲೆಯಬೇಕಿತ್ತು. ಲಕ್ಷಣ ತಪ್ಪದೆ ಗಂಭೀರವಾಗಿ ಅರ್ಥ. ಸಮಯ ಹೊಂದುವಂತೆ ಬರವಣಿಗೆ. ಇಂದು ಇಂಥದನ್ನು ಕವಿತೆ ಎನ್ನುವುದಿಲ್ಲ. ನಿಜ. ಸಂಪ್ರದಾಯವಾಗಿ ಇಂಥ ಪದ್ಯಗಳನ್ನು ಸಂಸ್ಕೃತದಲ್ಲಿಯೊ ಕನ್ನಡದಲ್ಲಿಯೊ ಬರಸಿ, ಒಂದು ಸಮಯವನ್ನು ನಿರ್ವಹಿಸುವ ಅಭ್ಯಾಸ ಇರುವಾಗ – ಆ ಆ ಕಾಲಕ್ಕೆ ತಕ್ಕ ಸಮಯ ಅದರ ಮರ್ಯಾದೆ – ಹಾಗೆ ಬರೆದು ಓದಿದ ಪದ್ಯಗಳು ಎಷ್ಟು ಚೆನ್ನಾಗಿದ್ದರೆ ಅಷ್ಟೂ ಸೊಗಸುತ್ತವಲ್ಲವೆ? ಹೀಗೆ ಸೊಗಸುವಂತೆ ರಚನೆ ಇರುತ್ತಿತ್ತು. ಸುಮಾರು ೧೯೫೦ರಿಂದ ಹಿಡಿದು ಅವರ ಕಡೆಯ ಕಾಲದವರೆಗೂ ಬರೆದುದನ್ನು ನನಗೆ ತೋರಿಸುತ್ತಿದ್ದರು. ನನ್ನ ಕೀಟಲೆ ಮಾತಿಗೊ ಕಲ್ಪನೆಗೊ ಅಭಿಪ್ರಾಯ ಪ್ರಕಾಶಕ್ಕೊ ನಿರಂತರವಾಗಿ ಅದು ಸಲ್ಲುತ್ತಿತ್ತು. ಮಹಾಪ್ರಾಣಾಕ್ಷರಗಳು, ವಿಜಾತೀಯ ಸಂಯುಕ್ತಾಕ್ಷರಗಳು ಹೆಚ್ಚಾದ ಕಡೆ ನಾನು ಅದನ್ನು ಬೇಕೆಂದು ಸ್ವಲ್ಪ ಒತ್ತಿ ಓದುತ್ತಿದ್ದೆ. ಅಷ್ಟು ಕಠಿಣವಾಗಿ ಆ ಮಾತುಗಳನ್ನು ಯಾಕೆ ಒತ್ತುತ್ತೀರಿ; ಪದ್ಯಕ್ಕೆ ಹೊಂದುತ್ತದೆಯೊ ಇಲ್ಲವೊ ನೋಡಿ ಎಂದು ಅವರು ಅನ್ನುತ್ತಿದ್ದುದುಂಟು. ಶೃಂಗಾರ ಸಂದರೂ ಸ್ತನವನ್ನು ಅಷ್ಟು ಕಠಿಣವಾಗಿ ಒತ್ತಬಾರದು, ಬೇಡವೊ ಎಂದು ಹಿಂದಿನ ಕಾಲದ ಪಂಡಿತರು ಅಂದುದುಂಟು. 'ಸಂಸ್ಕೃತ ಮಹಾಪ್ರಾಣ, ಕನ್ನಡ ಅಲ್ಪಪ್ರಾಣ. ದೀರ್ಘಗಳಿಗೆ ಸಂಸ್ಕೃತದಲ್ಲಿ ಪ್ರಾಶಸ್ತ್ಯ. ವಾಲ್ಮೀಕಿಯೇ ಪ್ರಮಾಣಪುರುಷನಲ್ಲವೆ?' ಎಂದರು. 'ಅದರಲ್ಲಿಯೂ ನಿಮ್ಮ ಕುಚೇಷ್ಟೆ ಇದೆ' ಎನ್ನುತ್ತಿದ್ದರು. ಆದರೆ ಅಂಥ ಮಾತುಗಳಿಗೆ ಕೋಪಿಸಿಕೊಳ್ಳುತ್ತಿರಲಿಲ್ಲ. 'ಇನ್ನು ಯಾವ ಮಾತು ಹಾಕಬಹುದು?' ಎಂದು ಯೋಚಿಸಿ, ಆ ರಾತ್ರಿಯೆಲ್ಲ ಕಳೆದು ಎರಡನೆಯ ದಿವಸ ಹೆಚ್ಚು ನುಣುಪುಳ್ಳ ಪದಗಳನ್ನು ಹಾಕಿ ಆ ಪದ್ಯಗಳನ್ನು ತಂದು ಹೇಳುತ್ತಿದ್ದರು. 'ಈಗ ಓದಬಹುದೆ?' ಎಂದು ಒಂದು ಚಿಟಿಕೆ ನಸ್ಯ ಹಾಕಿಕೊಂಡು ಆದಮೇಲೆ ಕಂಠ ಸಿದ್ಧಮಾಡಿಕೊಂಡು ಓದುವರು. ಆಕ್ಷೇಪ ಬರಬಹುದಾದ ಮಾತಿಗೆ ಅಂಥ ಸಂದರ್ಭಗಳಲ್ಲಿ ಅಕ್ಷರಗಳನ್ನು ಮೃದುವಾಗಿ ನುಡಿಯುವರು. ಇದನ್ನು ಹೇಳುತ್ತಿರುವ ಕಾರಣ, ಹತ್ತಿರದವರು, ಸ್ನೇಹಿತರು ಬರವಣಿಗೆಯನ್ನು ಒಪ್ಪದಾಗ ಹೊರಗಿನವರಿಗೆ ಹೇಗೆ ನಿವೇದಿಸುವುದು ಎಂಬುದು ಅವರ ಮನಸ್ಸು. ವಿಶೇಷವಾಗಿ 'ಮಾಳವಿಕಾಗ್ನಿಮಿತ್ರ' ಭಾಷಾಂತರ ಸಮಯದಲ್ಲಿ ಮೂಲದ ಪಂಕ್ತಿಗಳನ್ನು ಜೊತೆಗೇ ಓದಿದ್ದೇನೆ. ಶಕ್ಯವಾದ ಮಟ್ಟಿಗೂ ಕನ್ನಡಕ್ಕೆ ಮೂಲವನ್ನು ತರುವಾಗ ಎಷ್ಟು ಕ್ಲೇಶವಾಗುತ್ತದೆ ಎಂಬುದನ್ನು ನಾಂದೀ ಶ್ಲೋಕದ 'ಏಕೈಶ್ವರ್ಯಸ್ಥಿತೋಪಿ' ಎಂಬುದರಿಂದ ಹಿಡಿದು ರಾಜನು ಕಡೆಕಡೆಯಲ್ಲಿ ರಾಣಿಗೆ ಹೇಳುವ 'ಚಂಡೀ' ಎಂಬ ಉಕ್ತಿಯವರೆಗೂ ಅವರೊಡನೆ ವಾದ ಮಾಡಿದ್ದೇನೆ. ಎಲ್ಲಕ್ಕಿಂತ ಹೆಚ್ಚಾಗಿ 'ಇವನೆಂಥ ನಾಯಕ! ಧೀರನೂ ಅಲ್ಲ, ಲಲಿತನೂ ಅಲ್ಲ, ಲಫಂಗ' ಎಂದಿದ್ದೇನೆ. ಅವರ ಮುಖ ಕೆಂಪಾಗಿ ಒಳಗೆ ಮನಸ್ಸಿನಲ್ಲಿ ಅವರಿಗೆ ನೋವುಂಟಾಗಿತ್ತು. 'ಒಂದು ದೊಡ್ಡತನದ ಮಾತು, ನಡವಳಿಕೆ ಅವನಲ್ಲಿಯಾಗಲಿ, ನಾಟಕದಲ್ಲಿಯಾಗಲಿ ಇದೆಯೆ ಹೇಳಿ! ರಾಣಿ ಧಾರಿಣಿಯೇ ತನ್ನ ಸ್ಥಾನದ ಹಿರಿಮೆಗೆ ತಕ್ಕಂತೆ ಮದುವೆಯಾದ ಗಂಡ ಎಂದೊ ರಾಜ ಎಂಬ ದಾಕ್ಷಿಣ್ಯದಿಂದಲೊ ದೊಡ್ಡತನದ ಸುಳಿವು ಕಾಣಿಸಿರಬಹುದಾದರೂ ಅವಳಿಗೂ ಗೊತ್ತು: ಕಾಮುಕತೆಯಲ್ಲಿ ಹೊರತು ಕೌಶಲ ಬೇರೆ ಕಡೆ ಸಲ್ಲದೆಂದು. ಅದು ರಾಜಕಾರ್ಯದಲ್ಲಿ ಕಾಣಬಾರದೆ? –ಎಂದವಳು ಆಕೆ.

ಇರಾವತಿಯಂತೂ: ಶಠ, ನ ಏಶ್ವತೋಽಸಿ ಎಂದು ಅರ್ಧಮತ್ತಳಾಗಿ ಬಂದಿದ್ದ ಸ್ಥಿತಿಯಲ್ಲಿ ಒಡ್ಯಾಣವನ್ನು ಸುಲಿದು ಹೊಡೆಯಲು ಹೋದವಳು. ಅವನು ಸ್ವೀಕರಿಸಬೇಕೆಂದಿದ್ದ ನಾಯಕಿಯಿಂದಲೂ ನಿಮ್ಮ ಧೈರ್ಯವನ್ನೂ ಸಾಹಸವನ್ನೂ ರಾಣಿಯ ಮುಂದೆ ಕಂಡಿದ್ದೇನಲ್ಲ ಎನ್ನಿಸಿಕೊಂಡವನು. ಹೆಣ್ಣುಕೊಟ್ಟ ಮಾವನಿಗೆ, ಸ್ವಂತ ತಂದೆಗೆ ಇವನಲ್ಲಿ ನಂಬಿಕೆಯಿಲ್ಲ. ಯವನರ ಮೇಲೆ ಇದಿರು ಹೋಗಿ ದಳದ ನಾಯಕತ್ವದಿಂದ ಜಯಪಡೆದ ವಯಸ್ಸಿನ ಮಗನಿದ್ದಾನೆ. ಅವನ ಜಯಕ್ಕೆ ಕಾರಣ ತಾನು, ಅವನು ತನ್ನ ಮಗನಾದುದು ಎಂದ ಮಹಾನುಭಾವ! ಅರಮನೆಯ ರಾಣಿವಾಸದ ದಾಸಿಯರಿಗೆಲ್ಲ ಅಲಂಕರಣ ವಿದ್ಯೆಯನ್ನೂ ಶೃಂಗಾರ ವಿದ್ಯಗಳನ್ನೂ ಕಲಿಸಿದವನು. ಇಂಥವನನ್ನು ನಾಯಕನನ್ನಾಗಿ ಮಾಡಿ ಜಗತ್ತಿಗೆ ಏನು ಹಿಡಿಯುವುದು? ಇದನ್ನೇನು ಲೋಕಕ್ಕೆ ದೊಡ್ಡ ನಾಟಕವೆಂದು, ಪ್ರಶಂಸೆಮಾಡುವುದು?' – ಎನ್ನುವವರೆಗೂ ನಾನು ಹೋಗಿದ್ದೇನೆ. ಅಂಥ ಸಂದರ್ಭದಲ್ಲಿ 'ಕಾಳಿದಾಸನಂಥವನ ಕೈಯಲ್ಲಿ ಇಂಥವನ ಚಿತ್ರಣ ಸಿಕ್ಕಿದ್ದರಿಂದ ಅಂಥ ಕತೆಯನ್ನು ಸಹ್ಯವಾಗಿ, ಸಭ್ಯವಾಗಿ ಮಾಡಿದ್ದಾನಲ್ಲವೆ? ಅವನ ಕಲೆ ನೋಡಿ, ರಚನಾಕೌಶಲ ನೋಡಿ' ಎಂದು ಅವರು ವಾದಿಸಿದರು. 'ಮೂರು ನಾಟಕಗಳಲ್ಲಿ ರಚನಾದೃಷ್ಟಿಯಿಂದ, ಸಂತತದೃಷ್ಟಿ ಶೃಂಗಾರತಂತ್ರದಿಂದ–ಇಂಥದನ್ನು ಶೃಂಗಾರ ಎನ್ನಬೇಕಾಗಿದೆ–ಪ್ರತಿ ಸಂದರ್ಭದಲ್ಲಿಯೂ ಕುತೂಹಲವನ್ನು ಹೆಚ್ಚಿಸಿ ಕಡೆಯವರೆಗೂ ಕ್ರಿಯಾಸಾಧನವನ್ನು ಮಾಡುವ ದೃಷ್ಟಿಯಿಂದ, ರಂಜಕ ಪ್ರಸಂಗದಿಂದ, ನಾಟ್ಯದಿಂದ ಈ ನಾಟಕ ಮೇಲಟ್ಟದ್ದು, ನಿಜ. ಕ್ರಿಯಾತಂತ್ರ ಮತ್ತು ಕಥಾನಿರ್ವಹಣೆಯ ದೃಷ್ಟಿಯಿಂದ ಇದು 'The best made play" ಎನ್ನಬಹುದು ಎಂದು ಹೇಳಿ, 'ಅಲ್ಲಿನ ವಿದೂಷಕನ ಕ್ರಿಯಾವಿಲಾಸ–ಖಳ ಎಂದರೆ ತುಂಬಾ ಕಟುವಾಗುತ್ತದೆ–ತಂತ್ರವನ್ನೆಲ್ಲ ಮೆಚ್ಚಿಕೊಂಡು ಅವನನ್ನು ನಮ್ಮ ವಿದೂಷಕನ ಪ್ರಪಂಚದಲ್ಲಿ ಹೊಗಳುವ ರೀತಿಯನ್ನೂ ಒಪ್ಪಿ ಅವನಿಗೆ ಪುರಸ್ಕಾರ ಮಾಡಬೇಕೆಂದರೆ ನಮ್ಮ ಮಟ್ಟ ಎಲ್ಲಿಗೆ ಇಳಿಯುತ್ತದೆ?' –ಎನ್ನುವವರೆಗೂ ನಾನು ನುಡಿದಿದ್ದೇನೆ. ಇದು ಸಾಹಿತ್ಯಕ ವಿಮರ್ಶೆ ಅಲ್ಲ, ನಿಜ. ಇದು ಪೂರ್ವಗ್ರಹದಂತೆ ನನ್ನಲ್ಲಿ ಮೊದಲಿನಿಂದಲೂ ಇದೆ. ಅದನ್ನು ಅವರು ಬಲ್ಲವರು. 'ಇದರ ಮೇಲೆ ನಿಮಗೆ ಮೊದಲಿಂದ ಅಪ್ರೀತಿ. ಆದ್ದರೆ ಇಲ್ಲಿನ ರಚನೆಯಲ್ಲಿ ಸಾಧಿತವಾಗಿರುವ ಕಲಾಕುಶಲತೆಗಳಲ್ಲಿ ನೀವು ಹೆಚ್ಚಾಗಿ ಕುಂದೆಣಿಸುವ ಹಾಗಿಲ್ಲ. ಶ್ರೀಹರ್ಷನಿಗೂ ಇದೇ ಸ್ಫೂರ್ತಿಯಾಯಿತಲ್ಲವೆ?' ಎಂದಿದ್ದಾರೆ. 'ಹೌದು, ಅವನ ಎರಡೂ ನಾಟಕಗಳಿಗೆ ಪ್ರಿಯದರ್ಶಿಕಾಕ್ಕೆ, ರತ್ನಾವಳಿಗೆ ಎರಡಕ್ಕೂ ಇದೇ ಸ್ಫೂರ್ತಿ ಕೊಟ್ಟಿದೆ, ನಿಜ. ವತ್ಸರಾಜ ಪ್ರಸಂಗದಲ್ಲಿ ಸ್ವಲ್ಪ ಹೆಚ್ಚು ನಯವಿದೆ ಅಲ್ಲವೆ? ಅವೂ ಇನ್ನೊಂದು ರೀತಿಯಲ್ಲಿ ಬಡವುಗಳೇ ಅಲ್ಲವೆ?' ಎಂದಿದ್ದೇನೆ. 'ನಿಮಗೆ moral bias; ನಮ್ಮ ಸಾಹಿತ್ಯದಲ್ಲಿಯೇ ವಿಶ್ವಾಸವಿಲ್ಲ' ಎಂದಿದ್ದಾರೆ. 'ಹಾಗಿದ್ದಿದ್ದರೆ ಇಷ್ಟು ವಿಶೇಷವಾಗಿ ಅದನ್ನು ಓದುತ್ತಿದ್ದೆನೆ? ಅದನ್ನು ಕುರಿತು ನುಡಿಯುತ್ತಿದ್ದೆನೆ? ಸೌಹಾರ್ದದಿಂದ ಪಾಠ ಹೇಳುತ್ತಿದ್ದೆನೆ?' ಎಂದು ನಾನೆಂದರೆ, 'ಆಕ್ಷೇಪಣೆಗೆ ಅವಕಾಶವಿರಲಿ' ಎಂದು ಅವರೆಂದಿದ್ದಾರೆ! ಆದರೆ ಉದ್ದಕ್ಕೂ ಅವರ ಸೌಹಾರ್ದ, ಮನಸ್ಸಿನ ತಿಳಿ ಎಂದೂ ಕೆಟ್ಟುದಿಲ್ಲ. 'ಇದನ್ನು ನೀವು ಹೇಗೆ ಮಾಡುತ್ತಿದ್ದಿರಿ?' ಎಂದುದುಂಟು ಒಮ್ಮೆ. 'ನಾನು ಇಂಥವನ್ನು ಮಾಡುತ್ತಲೇ ಇರಲಿಲ್ಲ'

ಎಂದರೆ 'ಕೈಯಲ್ಲಿ ಆಗದ್ದರಿಂದ ಅಲ್ಲವೊ?' ಎನ್ನುವರು. ಆಗ ನಾನು 'ನಾವು ಊಟ ಮಾಡುವ ಜನ; ಅಡುಗೆಯವರಲ್ಲ; ಭೋಜನದ ರುಚಿಯನ್ನು ಬಲ್ಲವನು ಬಾಣಸಿಗನಾಗಿ ಪಾಕಕಾರ್ಯದಲ್ಲಿ ದಕ್ಷನಾಗಿರಬೇಕೆಂದಿಲ್ಲ' ಎಂದು ಉತ್ತರಿಸಿದರೆ, 'ಇನ್ನೊಂದು ಕುಚೋದ್ಯ ತೆಗೆದಿರಿ' ಎಂದುಮುಂಟು. 'ವಿಮರ್ಶಕರನ್ನು ಕುರಿತು ಅನೇಕರು ಆಡುವ ಮಾತು ಇದೇ ಅಲ್ಲವೆ?' ಎಂದು ನಾನು ಹೇಳಿದರೆ, ಅವರು 'ಬಂಜೆ ಬೇನೆಯನರಿವಳೆ!' ಎಂದು ಮುಂತಾಗಿ ನುಡಿವರು.

ನಮ್ಮ ಸಾಹಿತ್ಯಸಂವಾದಗಳು ಹೀಗೆ ಬೆಳೆದುದನ್ನು ನೆನಸಿಕೊಂಡಷ್ಟೂ ಜೊತೆಯಲ್ಲಿ ಅಂಥವರಿದ್ದರೆ ಬದುಕು ಎಷ್ಟು ಹಗುರವಾಗುತ್ತದೆ, ಸಂತೋಷ ಕೊಡುತ್ತದೆ ಎನ್ನಿಸಿದೆ. ನನ್ನ ಅನೇಕ ಸ್ನೇಹಗಳು ಹೀಗೆ ಬೆಳೆದಿವೆ; ಉಳಿದಿವೆ. ಪುಣ್ಯ. 'ಇಂಗ್ಲಿಷ್ ಅಥವಾ ಪಾಶ್ಚಿಮಾತ್ಯ ಸಾಹಿತ್ಯ ವಿಸ್ತಾರವಾದ ಪ್ರಪಂಚ. ಒಂದು ಪ್ರೀತಿಯ ವ್ಯಾಸಂಗದಿಂದ ನಮ್ಮ ಸಾಹಿತ್ಯ ಹೋಲಿಕೆ ತೂಲನಗಳು ಒದಗಿದರೆ ಎರಡೂ ಕಡೆ ಮೌಲ್ಯಗಣನೆಗೆ, ವಿವೇಚನೆಗೆ ಹೆಚ್ಚು ಅವಕಾಶಗಳು ದೊರೆತಾವು ಎನ್ನುವ ದೃಷ್ಟಿಯಿಂದ ಮಾತ್ರ ಇಂಥ ಮಾತುಗಳನ್ನಾಡುತ್ತಿದ್ದೇನೆ.' ಎಂದಾಗ 'ಹೌದು; ನನ್ನ ಜೀವಿತಕಾಲವೆಲ್ಲ ನಮ್ಮ ಇತಿಹಾಸ, ಪುರಾಣ, ನಮ್ಮ ಸಾಹಿತ್ಯದ ವ್ಯಾಸಂಗದಲ್ಲಿ ಕಳೆದುಹೋಯಿತು. ಈಗ ಹೊಸತಾಗಿ ಇದನ್ನೆಲ್ಲ ನಾನು ಹೇಗೆ ವಶಪಡಿಸಿಕೊಳ್ಳುವುದು? ನಿಮ್ಮಂಥವರು ಆಕ್ಷೇಪಣೆಗಳನ್ನು ಎತ್ತಿ; ನಮಗೆ ತಿಳಿದ ಮಟ್ಟಿಗೆ ನಾವು ನಮ್ಮ ಕಡೆಯ ಸಮಾಧಾನ ಹೇಳುತ್ತೇವೆ' ಎನ್ನುವ ಓಪ್ಪು ಅವರದು. ಅದು ಅಸಾಧಾರಣವಾದುದು. ಅಸಲು, ಆ ಸಂಪ್ರದಾಯದವರು ಇಂಥ ಮಾತುಗಳಿಗೆ ಅವಕಾಶ ಕೊಡುವುದಿಲ್ಲ. ಅವರಿಗೆ ನಮ್ಮನ್ನು ಕಂಡರೆ ಓರ್ಪಿಲ್ಲ. ನಮ್ಮವರಿಗೆ ಅವರ ಯಾವುದನ್ನು ಕುರಿತೂ ಸಹನೆಯಿಲ್ಲ. ನಿರ್ಭಾಗ್ಯ ಕಾಲ. ನಮ್ಮ ಮೌಲ್ಯಗಳು ಮೌಲ್ಯಗಳೆ ಎನ್ನುವಷ್ಟು ಕೆಲ ವೇಳೆ ಬೇಸರ ತರುತ್ತವೆ.

ಬೆಂಗಳೂರು ಆಕಾಶವಾಣಿಯಲ್ಲಿ ಅವರಿಂದ ಅನೇಕ ಸ್ವತಂತ್ರವಾದ ಕನ್ನಡ–ಸಂಸ್ಕೃತ ಕಾವ್ಯವಾಚನ ಅಥವಾ ಕಾವ್ಯಪರಿಚಯಗಳ ಕಾರ್ಯಕ್ರಮಗಳು ಆಗುತ್ತಿದ್ದವು. ನಾನು ಅಲ್ಲಿ ನಿರ್ಮಾಪಕ–ಉತ್ಪಾದಕ (Producer) ನಾಗಿದ್ದಾಗ ಗಮಕರೂಪಕಗಳಂಥ ಒಂದು ಪ್ರಯೋಗದ ಏರ್ಪಾಡು ಮಾಡಿತ್ತು. ಹಳಗನ್ನಡ ಕಾವ್ಯಗಳನ್ನು ಸಾಮಾನ್ಯವಾಗಿ ಬಿ.ಎ., ಬಿ.ಎಸ್‌ಸಿ. ತರಗತಿಗಳಲ್ಲಿ ಕೂಡ ವ್ಯಾಸಂಗ ಮಾಡುವುದಿಲ್ಲ. ಕನ್ನಡವನ್ನು ಐಚ್ಛಿಕವಾಗಿ ತೆಗೆದುಕೊಂಡವರೊ ಅಥವಾ 'ಆನರ್ಸ್', ಎಂ.ಎ., ತರಗತಿಗಳಲ್ಲಿ ಓದುವವರೊ ಮಾತ್ರ ಕೆಲವು ಚಂಪೂಕಾವ್ಯಗಳನ್ನು ಭಾಗಗಳನ್ನು ಓದಬಹುದು. ಆದರೆ ಚಂಪೂಕಾವ್ಯಗಳ ಪರಿಚಯ ಕನ್ನಡಿಗರಿಗೆ ಮಾಡಿಕೊಡಬೇಕು, ಎಷ್ಟೊ ಜನ ಕಾಲೆಜ್ ವ್ಯಾಸಂಗ ಮಾಡದವರು, ನಮ್ಮ ಕಾವ್ಯಗಳಲ್ಲಿ ಆಸಕ್ತಿ ಉಳ್ಳವರು ದೇಶದ ಮೇಲೆಲ್ಲ ಹರಡಿದ್ದಾರೆ. ಆದುದರಿಂದ ಮುಖ್ಯ ಕವಿಗಳ ಪ್ರಖ್ಯಾತ ಕಾವ್ಯಗಳಿಂದ ಭಾಗಗಳನ್ನು ಆಯ್ದುಕೊಂಡು ಅವನ್ನು ನಾಲ್ಕೈದು ಧ್ವನಿಗಳಿಗೆ ಹಂಚಿ, ನಿವೇದಕನೆಂಬ ಹೆಸರಿನಲ್ಲಿ ಒಬ್ಬರು ಕಥನ ಭಾಗಗಳನ್ನೊ ಅಥವಾ ಸಂಬಂಧಸೂಚಕ ಸೂತ್ರಸಂಬಂಧ ಪದ್ಯಗಳನ್ನೊ ಓದಿ ಹೇಳಿ, ಉಳಿದುದನ್ನು ಇತರ ಕಂಠಗಳ ಮೂಲಕ ವಾಚನ ಮಾಡಿಸುವ ಪ್ರಯತ್ನ ನಡಸಿದೆ.

ವೃತ್ತಗಳನ್ನು ಸುಲಭವಾಗಿ ಬಿಡಿಸಿಕೊಂಡು ಅರ್ಥ ಭಾವ ಸ್ಪಷ್ಟವಾಗುವಂತೆ, ಸನ್ನಿವೇಶ ಸ್ವಾರಸ್ಯವಾಗುವಂತೆ, ಸ್ವಲ್ಪಮಟ್ಟಿಗೆ ಮಾತ್ರ ರಾಗವನ್ನು ಉಪಯೋಗಿಸಿ ಪದ್ಯಗಳನ್ನು ಹೇಳುವ ಜನ ಅಂಥ ಕಾರ್ಯಕ್ರಮಕ್ಕೆ ಬೇಕಿತ್ತು. ಹೆಚ್ಚು ಮಂದಿಗೆ ಇಂಥ ಸಂದರ್ಭಕ್ಕೆ ಹೊಂದಿಕೊಳ್ಳುವ ಸೂಕ್ಷ್ಮತೆ, ಕಾವ್ಯಜ್ಞತೆ ಇರದು. ಕ್ಷಣಕ್ಕೆ ರಾಗದ ಸಾರ, ಭಾವದ ಸಾರ, ಸಾಹಿತ್ಯದ ವಿಚಕ್ಷಣೆ ಮೆರಸಬಲ್ಲ ಶಕ್ತಿ ಧ್ವನಿ ಸೇರಿಸುವವರಿಗೆ ಇರಬೇಕಾಗುತ್ತದೆ. ಗದಾಯುದ್ಧ, ಹರಿಶ್ಚಂದ್ರ ಕಾವ್ಯ ಮುಂತಾದುವಲ್ಲಿ ಭಾವಗಳು ನಾಟಕೀಯತೆ ತುಂಬ ಪ್ರಕಟವಾಗುವುದರಿಂದ ಅಲ್ಲಿನ ಪದ್ಯಗಳನ್ನು ತುಂಬಾ ಎಚ್ಚರಿಕೆಯಿಂದ ನುಡಿಯದಿದ್ದರೆ ಗೊತ್ತಾಗುವುದಿಲ್ಲ. ಪಂಪ ಭಾರತ, ಆದಿಪುರಾಣ, ಪಂಪರಾಮಾಯಣ, ಕಾದಂಬರಿ ಮುಂತಾದಲ್ಲಿ ಕೆಲವು ಭಾಗಗಳನ್ನು ನುಡಿಯಬೇಕಾದರೆ ಮೃದು, ನಯಗಾರಿಕೆ ಬೇಕಾಗುತ್ತದೆ. ಒಂದು ಸಲ ಭರತ–ಬಾಹುಬಲಿಯ ಪ್ರಸಂಗವನ್ನು ಮಾಡುವಾಗ ಭರತನ ಭಾಗವನ್ನೊ ಬಾಹುಬಲಿಯ ಭಾಗವನ್ನೊ ನುಡಿಯಬೇಕಾಯಿತು. ಶಾಸ್ತ್ರಿಗಳ ಪಾಲಿಗೆ ಒಂದು ಬಂತು. ಬಾಹುಬಲಿ ನುಡಿದ ಭಾಗಗಳು ಒಂದು ಸಮಯದಲ್ಲಿ ಹೆಚ್ಚಾಗಿ ಕಂದಗಳಾಗಿ ಬರುತ್ತವೆ. ಮೂರು ಸಲ ಮೂರು ಬಗೆಯ ಯುದ್ಧದಲ್ಲಿಯೂ ಗೆದ್ದ ತಮ್ಮ ರಾಜ್ಯವನ್ನು ನೀನೇ ತೆಗೆದುಕೊ, ನಾನು ತಪಸ್ಸಿಗೆ ಹೋಗುತ್ತೇನೆ ಎಂದು ಷಟ್ಖಂಡ ಧರಾಮಂಡಲವನ್ನು ಅಣ್ಣನಿಗೆ ಒಪ್ಪಿಸಿ ಹೋಗುತ್ತೇನೆಂದಾಗ ಸೋತ ಅಣ್ಣ, ಈವರೆಗೂ ಚಕ್ರವರ್ತಿಯಾಗಿದ್ದವನು, ತಮ್ಮನಲ್ಲಿ ಉಂಟಾದ ಈ ಸನ್ನಿವೇಶ ಪರಿವರ್ತನೆಗೆ ಕರಗಿ ಒಂದು ವೃತ್ತವನ್ನು ಹೇಳುತ್ತಾನೆ; ಅದನ್ನು ಅವರು ನುಡಿಯಬೇಕಾಗಿತ್ತು. ಸಾಲುಸಾಲಿಗೂ ದನಿಯನ್ನೊ ಭಾವಪ್ರಕಾಶನವನ್ನೊ ಮಾರ್ಪಡಿಸಿಕೊಂಡು ಹೊಂದಿಸಿಕೊಂಡು ಹೇಳಬೇಕಾಗಿದ್ದಾಗ, ಯಾವಯಾವುದನ್ನು ಎಲ್ಲೆಲ್ಲಿ ನಿಲ್ಲಿಸಿಕೊಂಡು ಹೇಗೆ ನುಡಿದರೆ ಮೇಲಾದೀತು ಎಂಬುದನ್ನು ನಾನು ಬೇರೆಯಾಗಿ ಬಿಡಿಸಿ ಹೇಳಿದೆ. ಅವರೂ ಸಾಹಿತ್ಯದಲ್ಲಿ ನಿಷ್ಣಾತರಾದವರು. ಅವರನ್ನು ಅಧಿಕಾರಿಯಂತೆ ನುಡಿಯುವ ಹಾಗಿಲ್ಲ. ಅವರ ಮಾನ ಅಭಿಮಾನ ಅಲ್ಲಿದ್ದ ಇತರರೆಲ್ಲರಿಗಿಂತ ದೊಡ್ಡದು. ಆದರೆ ನನ್ನ ಆಗಿನ ಪ್ರಪಂಚ ನನ್ನ ಬಗೆಯ ಹೊಂದಿಕೆಯನ್ನು ಬೇಡುತ್ತಿದ್ದಿತಾಗಿ ಅವರನ್ನು ಕಾಡಬೇಕಾಗಿ ಬಂತು. ಆ ಒಂದು ನಿಮಿಷ ಅವರ ಮುಖ ಕಪ್ಪುಗಟ್ಟಿ ಅವರಿಗೆ ತುಂಬ ನೋವು, ಅಭಿಮಾನ ಚ್ಯುತಿ ಆದಂತೆ ತೋರಿತು. ನಾನು ತಕ್ಷಣದಲ್ಲಿ ಅವರಿಗೆ ಬೇಸರಪಡಬಾರದೆಂದು ಕೇಳಿಕೊಂಡು ಸಮಾಧಾನ ಮಾಡಿದೆ. 'ನೀವು ನಮ್ಮನ್ನು ನಡಸುತ್ತಿರುವ ಅಧಿಕಾರಿಗಳು; ನೀವು ಹೇಳಿದ ಹಾಗೆ ನಡಸಲು ನಾನು ಬಂದಿದ್ದೇನೆ. ಹಾಗೇ ಮಾಡೋಣ' ಎಂಬಂತೆ ಅಷ್ಟು ಮಾತಲ್ಲಿ ಅಲ್ಲದಿದ್ದರೂ ಸೂಕ್ಷ್ಮದಲ್ಲಿ ನುಡಿದರು. ಕಾರ್ಯಕ್ರಮ ನಡೆದ ಮೇಲೆ ಜೊತೆಯಲ್ಲಿಯೇ ಮನೆಗೆ ಬಂದೆವು. ಅವರ ಮನಸ್ಸಿನ ಬೇಗೆ ಆವೊತ್ತೆಲ್ಲ ಅವರನ್ನು ಕಾಡುವಂತೆ ಕಾಣುತ್ತಿತ್ತು. ಪುನಃ ಏನೋ ಸಮಾಧಾನ ಹೇಳಿದಾಗ 'ಆಯಿತಲ್ಲ ಬಿಡಿ' ಎಂದರು. ಮಾರನೆಯ ದಿನ ಬೆಳಗ್ಗೆ ಎಂಟೂವರೆ ಗಂಟೆಯ, ಹೊತ್ತಿಗೆ ಮನೆಗೆ ಬಂದರು. 'ರಾತ್ರಿಯೆಲ್ಲಾ ಯೋಚನೆ ಮಾಡಿದೆ; ನೀವು ಹೇಳಬೇಕಾದ್ದು ಸರಿ, ಹೇಳಿದ್ದೂ ಸರಿ; ಆಗತ್ಯ. ಅಲ್ಲಲ್ಲದೆ ಬೇರೆ ಹೇಳುವ ಸನ್ನಿವೇಶವಿಲ್ಲ. ಆದರೆ 'ಮಾನಕಷಾಯ' ಎಂಬುದು ಒಂದಿದೆಯಲ್ಲ. ನೀವೂ ನಿನ್ನೆ ನನ್ನ ನಡತೆಗೆ ಏನೆಂದುಕೊಂಡಿರೊ'

ಎಂದರು. ಸಂಸ್ಕಾರವಂತನಾದವನು ಸ್ವಂತ ನಡತೆಯನ್ನು ಸಂತತವಾಗಿ ಪರಿಶೀಲಿಸಿ ತನ್ನನ್ನು ತಾನು ನಿಯಾಮಿಸಿಕೊಳ್ಳಬಲ್ಲ ಮನುಷ್ಯನ ಲಕ್ಷಣ ಅದು. ಪುನಃ ಯಥಾಸ್ಥಿತಿ. ಎಂದಿನಂತೆ ಆವೊತ್ತು ಎಲ್ಲಿಗೊ ಜೊತೆಗೆ ಹೊರಗೆ ಹೋಗಿ ಮನೆಗೆ ಬಂದೆವು. ಆತನ ಮನಸ್ಸು ಎಷ್ಟು ಕೋಮಲ ಎಂಬುದನ್ನು ಈ ಸಂಗತಿ ತೋರಿಸೀತು ಎಂದು ಇದನ್ನು ವಿಸ್ತರಿಸಿದ್ದೇನೆ. ಕಾಡುತ್ತಿದ್ದುದು ನಮ್ಮ ಪಂಪನು ನಿರ್ಮಿಸಿದ್ದ ಒಂದು ಭಾವದ, ರಸದ ಪ್ರಸಂಗ. ಅದು ಹಿಡಿದಾಗ ನಾನು ನಾನಲ್ಲ; ಅದಕ್ಕೆ ಮರ್ಯಾದೆ. ಆದ್ದರಿಂದ ಆ ಸಾಧುವಿಗೆ ಕಾಟ ಕೊಡಬೇಕಾಯಿತು. ನಾನು ನುಡಿದುದು ಸರಿಯೊ ಅಲ್ಲವೊ ನಾನು ಹೇಗೆ ಹೇಳಬಲ್ಲೆ?

ಅವರಿಗೆ ಹಲ್ಲಿನ ತೊಂದರೆಯಾಗಿ ಚಿಕಿತ್ಸೆಪಡೆದರು. ಬೇರೆ ಹಲ್ಲು ಕಟ್ಟಿಸಿಕೊಂಡಿದ್ದರು. ಅದು ನನಗೆ ತಿಳಿದಿತ್ತು. ಆದ್ದರಿಂದ ಅವರು ಸೇವಿಸುತ್ತಿದ್ದ ಆಹಾರ ಮೃದುವಾಗಿರಬೇಕಿತ್ತು. ಅಥವಾ ಕಡಿದರೆ ಹದವಾಗಿ, ಹಗುರವಾಗಿ, ನುರಿಯುವಂಥದಾಗಿರಬೇಕಿತ್ತು. ಕರಿದು ಕಟುಕಲಾದ್ದು ಅಥವಾ ಹೆಚ್ಚು ಅಗಿಯುವ ಹಾಗೆ ಮಾಡಿಕೊಟ್ಟದ್ದು ಒಪ್ಪುತ್ತಿರಲಿಲ್ಲ. ಊಟಕ್ಕೆ ಹೋದ ಕಡೆ ಅವರು ಕೆಲವು ಪದಾರ್ಥಗಳನ್ನು ಬಿಡುತ್ತಿದ್ದರು. ಇಂಥ ಸಂದರ್ಭಗಳಲ್ಲಿ ಕೆಲವು ನಾಜೂಕುಗಳು ಪ್ರಕಟವಾಗಿ ನುಡಿಯಲಾರದೆ ಅವರು ಬಹು ನಯವಾಗಿ ಸಮಯಗಳನ್ನು ಸಾಧಿಸಿದ್ದುಂಟು. ಸಾಮಾನ್ಯವಾಗಿ ಧ್ವನಿಯನ್ನು ಎತ್ತಿ ಅವರು ಮಾತಾಡುತ್ತಿದ್ದುದನ್ನು ನಾನು ಕಾಣೆ. ಕರ್ಕಶವಾಗಿಯಂತೂ ಎಂದೂ ನುಡಿದುದಿಲ್ಲ. ನನ್ನಲ್ಲಿಯಂತೂ ತುಂಬಾ ಪ್ರೀತಿಯಿಂದ ನಡೆದುಕೊಳ್ಳುತ್ತಿದ್ದರು.

ಎರಡು ಸಲ ಅವರ ಮನಸ್ಸು ನೊಂದ ಹಾಗೆ ಕಂಡಿತು. ಒಂದು ಸಲ ಪ್ರಕಟವಾಗಿ; ಇನ್ನೊಂದು ಸಲ ತಮ್ಮನ್ನೇ ಅಡಗಿಸಿಕೊಂಡು. ಉದ್ದಕ್ಕೆ ಸಿಟಿ ಇನ್ಸ್‌ಟಿಟ್ಯೂಟಿಂದ ಹಿಡಿದು ಲಾಲ್‌ಬಾಗಿಗೆ ಹೋಗುವ ರಸ್ತೆಯಲ್ಲಿ ಕೆಂಪಯ್ಯ ಸರ್ಕಲ್ ಅನ್ನು ದಾಟಿ ಹೋಗಬೇಕಾಗಿತ್ತು. ಸ್ವಲ್ಪ ಬೇಗ ಹೋದರೆ ವಾಹನಗಳ ಅಬ್ಬರವನ್ನೂ ನೂಕುನುಗ್ಗಲನ್ನೂ ದಾಟಿಕೊಂಡು ಮಾವಳ್ಳಿಯ ಕಡೆಗೆ ಹೋಗಬಹುದಿತ್ತು. 'ಸ್ವಲ್ಪ ಬೇಗ ಬೇಗ ಕಾಲು ಹಾಕಬಾರದೆ?' ಎಂದೆ. 'ನೀವು ನಡೆಯಿರಿ ಮುಂದೆ' ಎಂದು ಅವರು ನಿಂತು ನಿಂತು, ರಸ್ತೆ ವಾಹನಗಳ ಸಂಚಾರದಿಂದ ಬಿಡುಗಡೆಗೊಳ್ಳುವವರೆಗೂ ಕಾದು ಮುಂದೆ ಬಂದರು. ಜೊತೆಯಲ್ಲಿ ಗೆಳೆಯರಾದ ನರಸಿಂಹಸ್ವಾಮಿ ಇದ್ದರು. 'ಏನಪ್ಪ ಇವರು ಹೀಗೆ ಐರಾವತದ ಹಾಗೆ ನಡೆಯುತ್ತಾರೆ' ಎಂದೊ ಏನೊ ಹೇಳಿದೆ. ಅವರೆಂದರು: 'ನಿಮಗೆ ಗೊತ್ತಿಲ್ಲವೆ: ಅವರಿಗೆ ರಕ್ತದ ಒತ್ತಡ ಇದೆ ಎಂದು. ಇವೊತ್ತು ಸ್ವಲ್ಪ ಹೆಚ್ಚಿರುವ ಹಾಗೆ ಕಾಣುತ್ತದೆ. ಆದರೂ ಜೊತೆಗಾಗಿ ಬಂದಿದ್ದಾರೆ' ಎಂದರು. ನಾನು ಎಷ್ಟು ಅಪರಾಧ ಮಾಡುತ್ತಿದ್ದೇನೆ, ಕಟುಕ ಎಂದು ಆಗ ನನಗೆ ಅರ್ಥವಾಯಿತು. ಆ ಸಂಗತಿ ನನಗೆ ತಿಳಿದಿರಲಿಲ್ಲ. ಅವರ ನಡೆಗೆ ಏನೊ ಸಾಧಾರಣವಾಗಿ ಸ್ವಲ್ಪ ನಿಧಾನವೇ. ಕಾರಣ ದೇಹದ ಆ ಅಸೌಕರ್ಯ ಎಂದು ಆಗ ತಿಳಿದೆ. ಮುಂದೆ ಇನ್ನೆಂದೂ ಆ ತಪ್ಪು ಮಾಡಿ ಅವರನ್ನು ಅವಸರಗೊಳಿಸಲಿಲ್ಲ. ದಾರಿಯಲ್ಲಿ ಹೋಗುತ್ತ, ಬಿಡುವಾಗಿ, ಧಾರಾಳವಾಗಿ ಮಾತನಾಡುತ್ತ ಹೋಗುತ್ತಿದ್ದೆ. ಒಮ್ಮೆ ಹಾಗೆ ಹೋಗುತ್ತಿರುವಾಗ ಕೋಳಿ ವಿಚಾರ ಬಂತು. 'ನಿಮಗೆ ಕೋಳಿ ವಿಚಾರ ಏನು ಗೊತ್ತಿದೆ?' ಎಂದರು. ಆ ದಿನ ನುಡಿದೆ; 'ಎಲಾ, ನಾನು ಕೋಳಿ ನೋಡಿಲ್ಲವೆ?

ಅದರೊಡನೆ ವಾಸ ಮಾಡಿದರೆ, ಅದನ್ನು ಹೊಟ್ಟೆಗೆ ಕಳಿಸಿದರೆ ಮಾತ್ರ ತಿಳಿದಂತೆಯೆ? ಹಾಗೆಂದರೆ, ಸೂಳೆಗಾರಿಕೆ ಬಲ್ಲವಳಲ್ಲದೆ, ಬಗೆಬಗೆಯ ಪಾಸಗಳನ್ನು ಕುಡಿದವಳಲ್ಲದೆ, ಕಳ್ಳತನ ಮಾಡಿದವಳಲ್ಲದೆ, ಮನೋವೇದನೆಗಳಿಂದ ನರಳಿದವಳಲ್ಲದೆ ಅವುಗಳನ್ನು ಕುರಿತು ಬರೆಯುವುದಕ್ಕೆ ಆಗುವುದಿಲ್ಲ ಎಂದರ್ಥವೆ?' ಎಂಬಂತೆ ಮಾತನಾಡಿದ್ದೆ. ಎರಡನೆಯ ದಿನ ಮನೆಯಲ್ಲಿ ಮಗನಿಗೆ ಹೇಳಿ ಕೋಳಿಯ ಮೇಲಿನ ನನ್ನ ಲಘುಪ್ರಬಂಧವನ್ನು ಬರೆಸಿ ಸಂಜೆ ಅವರಿಗೆ ಓದಿದೆ. 'ಪರವಾಯಿಲ್ಲಪ್ಪ ನೀವು' ಎಂದು ಶಹಭಾಸ್‌ಗಿರಿ ಕೊಟ್ಟರು. ಅವರು ಬುಚ್ಚಿದುದರಿಂದ ಆ ಪ್ರಬಂಧ ಹುಟ್ಟಿಬಂತು. ನನ್ನ 'ಶ್ರೀಶೈಲಶಿಖರ' ನಾಟಕದ ಮೂಲಕತೆ ಅವರು ಹೇಳಿದ ಕತೆಯ ಒಂದು ಅರ್ಧ ಪದ್ಯದಿಂದ– 'ಶ್ರೀಶೈಲಶಿಖರಂ ದೃಷ್ಟ್ವಾ ಪುನರ್ಜನ್ಮ ನ ವಿದ್ಯತೇ' ಎಂಬುದರಿಂದ ಹುಟ್ಟಿಬಂದುದು ಎಂಬುದನ್ನು ಅಲ್ಲಿಯೇ ಹೇಳಿದ್ದೇನೆ.

ಪ್ರಕಟವಾಗಿ ಇನ್ನೊಂದು ಸಲ ಎಂದೆ: ಅವರ ಕಡೆಯ ದಿನಗಳಿಗೆ ಸಂಬಂಧಿಸಿದುದು ಸಂಗತಿ. ರಕ್ತದ ಒತ್ತಡ ಅತಿಯಾಗಿ ಅವರು ಪೂರ್ತಿ ಹಾಸಿಗೆ ಹಿಡಿದರು. ಒಂದು ದಿನ ನರಳುತ್ತಿದ್ದರು. ಲೋಕಾಭಿರಾಮವಾಗಿ ಇನ್ನೇನು ಹೇಳುವುದಕ್ಕೆ ನನಗೆ ತಿಳಿದೀತು? ಅಷ್ಟು ಹೊತ್ತಿಗಾಗಲೆ ಬೇಕಾದಷ್ಟು ಜನ ಮನೆಯವರೂ ಸೇರಿ ಆ ಮಾತಾಡಿದ್ದರೆಂದು ಕಾಣುತ್ತದೆ. 'ಹೌದು, ನೋವು ಬಲ್ಲೆ. ಸ್ವಲ್ಪ ತಡೆದುಕೊಳ್ಳಬೇಕು' – ಎಂದೊ ಏನೊ ಹೇಳಿದೆ. ನನ್ನ ಕಡೆ ಕಣ್ಣು ಹೊರಳಿಸಿ 'ನನ್ನ ತಲೆ, ಇನ್ನೇನು ಮಾಡುತ್ತಿದ್ದೇನೆ. ಆಗುತ್ತದೆಯೇನು?' ಎಂದು ನುಡಿದರು. ಇಂಥ ಮಾತು ಯಾರೂ ಹೇಳುವುದು ಸುಲಭ. ಎದೆ ಬಡಿದುಕೊಳ್ಳುತ್ತದೆ. ೧೭೦–೧೮೦ ಸಲ. ಇನ್ನೂ ಹೆಚ್ಚಾಗಿ ಅದುರುತ್ತಿರುವಾಗ ಯಾರು ಏನು ಮಾಡಲಾಗುತ್ತದೆ. ತಾಳಿಕೊ, ತಡೆದುಕೊ ಎಂದು ಸುಲಭವಾಗಿ ಹೇಳಬಹುದು. ಎಷ್ಟು ಸಂಯಮದಿಂದಿದ್ದರೂ ತಾಳ್ಮೆ ತಿಳಿವಳಿಕೆ ಇದ್ದರೂ ತಡೆದುಕೊಳ್ಳುವುದು ಅಶಕ್ಯ ಎಂಬುದನ್ನು ಎಲ್ಲರೂ ಬಲ್ಲರು. ಈಚಿನ ಅನುಭವ ಆಗ ಇದ್ದಿದ್ದರೆ ಹಾಗೆ ನುಡಿಯುತ್ತಿರಲಿಲ್ಲ. ಈ ಒಂದೆರಡು ಪ್ರಸಂಗಗಳನ್ನು ಬಿಟ್ಟರೆ ಒಮ್ಮೆ ಒಂದು ಕ್ಷಣ ಮಾತ್ರವೂ ಅವರ ಪ್ರಸನ್ನತೆ, ಗಾಂಭೀರ್ಯ ತಪ್ಪಿದುದಿಲ್ಲ. ಅವರು ಎಷ್ಟೊ ಕಷ್ಟಗಳನ್ನು, ಅನನುಕೂಲಗಳನ್ನು ಅನುಭವಿಸಿ ಮನಸ್ಸಿನ ಧೈರ್ಯವನ್ನೂ ಪ್ರಸಾದ ಗುಣವನ್ನೂ ಸಾಧಿಸಿಕೊಂಡಿದ್ದರು. ಮನೆ ಹೆಸರಾದುದು. ಬಂದು ಹೋಗುವವರು ಅನೇಕ ಮಂದಿ. ಸಂಪ್ರದಾಯ ನಡಸಿಕೊಂಡದ್ದು. ಉಪಚಾರಕ್ಕೆ ಹೆಸರಾದ್ದು. ಇದ್ದ ಒಬ್ಬಳೇ ಮಗಳು ಅಂಥ ಗಟ್ಟಿಗಡಿತವಾದ ದೇಹ ಉಳ್ಳವಳಲ್ಲವಾದರೂ ತುಂಬ ಮೃದು ಸಂಸ್ಕಾರವುಳ್ಳ ಮಗುವಾಗಿ ಬೆಳೆದಳು. ಹುಟ್ಟಿದ ಮೊಮ್ಮಕ್ಕಳು ಹೈಸ್ಕೂಲು ಕಾಲೇಜುಗಳಲ್ಲಿದ್ದರು. ಇನ್ನೊಂದು ಮೂರು–ನಾಲ್ಕು ವರ್ಷ ಅವರು ಇದ್ದಿದ್ದರೆ ಹುಡುಗರು ಓದು ಮುಗಿಸಿ ಕೆಲಸಗಳಿಗೆ ಸೇರಿ ಕೀರ್ತಿವಂತರಾಗಿ ಮನೆಗೆ ಸಾಕಾಗುವಷ್ಟು ಸೌಖ್ಯಸಂಪನ್ನತೆ ತಂದುದನ್ನು ನೋಡುವ ಸಂತೃಪ್ತಿ ಬರುತ್ತಿತ್ತು. ತನಗೆ ಕೊರತೆ ಎಂಬುದನ್ನು ಎಂದೂ ಹೇಳಿದವರಲ್ಲವಾದರೂ ಇದ್ದುದನ್ನು ಅಮಿತವೆಂದು ಕಂಡು ಎಲ್ಲವನ್ನೂ ನಡಸಿಕೊಂಡವರಾದರೂ ತಮ್ಮ ಕುಟುಂಬದ ಒಪ್ಪಕ್ಕೆ ತುಂಬ ತೃಪ್ತರಾಗಿದ್ದವರಾದರೂ ಇಂಥವರ ಬಾಳಿಗೂ ಇನ್ನಷ್ಟು

ವಿಪುಲತೆ, ಸಂಪತ್ತಿ ಲೋಕದಲ್ಲಿ ದೊರಕದಾಗುವುದು ಲೋಕಭರಣದ ವ್ಯವಸ್ಥೆಯಲ್ಲಿ ನಿಯತಿಯಲ್ಲಿ ಮನಸ್ಸಿಗೆ ಹಿತ ಉಂಟಾಗುವುದಿಲ್ಲ. ಯೋಗಿಯಾಗಲಿ, ಪರಮವಿದ್ಯಾವಂತನಾಗಲಿ, ಸಾತ್ವಿಕವರೇಣ್ಯನಾಗಲಿ, ದೊಡ್ಡ ಕತೆಗಾರ ಕವಿ ಆಗಲಿ, ಲೋಕ ಅವನಿಗೆ ಗೌರವ ಕಾಣಿಸಬಹುದೇನೊ – ಅದೃಷ್ಟವಿದ್ದರೆ; ಇಲ್ಲವಾದರೆ, ಇವನು ಕವಿಯೆಂದೊ ವೇದಾಂತಿಯೆಂದೊ ಎರಡೂವರೆ ರೂಪಾಯಿಗೆ ಮಾರುವ ಒಂದು ಕಿಲೊ ಅಕ್ಕಿಯನ್ನು ಒಂದು ರೂಪಾಯಿಗೆ ಮಾರೀತೆ? ಎರಡು ರೂಪಾಯಿಗೆ ಎರಡು ಡಜನ್ ಮಾರುತ್ತಿದ್ದ ಹಣ್ಣನ್ನು ಇಂದು ಒಂದನ್ನು ಅರ್ಧ ರೂಪಾಯಿಗೆ ಕಡಮೆ ಕೊಟ್ಟೀತೆ? ಲೋಕದ ರೀತಿ ಲೋಕಕ್ಕೆ; ಸಂಸ್ಕಾರದ ಜೀವನ ಸಂಸ್ಕಾರಕ್ಕೆ. ಇವೆರಡಕ್ಕೆ ಎಂದಿಗೆ ಹೊಂದಿಕೆಯಾಗುತ್ತದೆಯೊ? ಹೊಂದಿಕೆಯಾಗುವುದೇ ಇಲ್ಲವೊ. ಇಂದು ಜೀವ ಅಗ್ಗ, ಬೆಲೆಯೇ ಇಲ್ಲವೇನೊ; ಜೀವನದ ವೆಚ್ಚ ತುಟ್ಟಿ. ಇಲ್ಲವಾದಲ್ಲಿ ಕಾಳಿದಾಸನಂಥ ಮಹಾಕವಿ ಕೂಡ ತನ್ನ ನಾಟಕಗಳ ಭರತ ವಾಕ್ಯಗಳಲ್ಲಿ ಲಕ್ಷ್ಮಿ–ಸರಸ್ವತಿಯರ, ರಾಜ್ಯಾಧಿಕಾರಿ–ಸಾಹಿತಿಗಳ ಸಂಬಂಧದಲ್ಲಿ ಇನ್ನಷ್ಟು ಔದಾರ್ಯವನ್ನು ಕೋರುತ್ತಿದ್ದನೆ ಎನ್ನಿಸುತ್ತದೆ. ಅವನ ಸ್ಥಿತಿಯೂ ಎಂಥದೊ. ನನಗನ್ನಿಸುತ್ತದೆ, ಕಠಿಣ ಸತ್ಯ ಹೀಗೆ: ಒಬ್ಬ ದೇವತೆಯನ್ನು ಆರಾಧನೆ ಮಾಡಿ ಇನ್ನೊಬ್ಬ ದೇವತೆ ಒಲಿಯಲಿಲ್ಲ ಎಂದು ಆಕ್ರೋಶಪಡುವುದು ಸರಿಯಾದೀತೆ ಎಂದು. ಲಕ್ಷ್ಮೀಪ್ರಸಾದ ಬೇಕಾದರೆ ಅಕೆಯ ಅರ್ಚನೆ ಮಾಡಿ; ಸರಸ್ವತೀಪ್ರಸನ್ನತೆ ಬೇಕಾದರೆ ಅಕೆಯ ಕೈಂಕರ್ಯಮಾಡಿ; ನಿಮ್ಮ ಮೂದಲೆಯೇ ಧರ್ಮವಲ್ಲ ಎನ್ನಿಸುತ್ತದೆ. ಅದು ಹೇಗಾದರಾಗಲಿ, ಶಾಸ್ತ್ರಿಗಳಂಥ ಸನ್ಮಿತ್ರರು ವಿರಳ ಎಂದೇ ಹೇಳಬೇಕು.

ಕೆ. ಎ. ಪುಟ್ಟಪ್ಪ

ತೀರ್ಥಹಳ್ಳಿ ತಾಲೂಕಿನ ಕುಪ್ಪಳಿ ಗ್ರಾಮದ ವೆಂಕಟೇಗೌಡರ ಮಕ್ಕಳು 'ಶ್ರೀ ರಾಮಾಯಣದರ್ಶನ'ದ 'ಕುವೆಂಪು' ಆದುದು, ಪದ್ಮಭೂಷಣ ಡಾ. ಪುಟ್ಟಪ್ಪನವರು ಆದುದು ಒಂದು ಜೀವ ಕ್ರಮವಾಗಿ, ಆದರೆ ಬೇಗ ಬೇಗ ಸುಪಕ್ವಗೊಂಡ ಪ್ರಕಾರವನ್ನೂ ಅದರ ಒಂದು ವಿಧಾನ ಕ್ರಿಯೆಯನ್ನೂ ಕಾಣಿಸುತ್ತದೆ. ವಿದ್ಯಾರ್ಥಿಯಾಗಿ ಅವರು ಮೈಸೂರಿಗೆ ಬಂದಾಗ – ಬಹುಶಃ ಬನುಮಯ್ಯನವರ ಕೊಲಿಜಿಯೇಟ್ ಹೈಸ್ಕೂಲಲ್ಲಿ ಇಂಟರ್‌ಮೀಡಿಯಟ್ ತರಗತಿಗಳಲ್ಲಿ ವ್ಯಾಸಂಗ ಮಾಡುತ್ತಿದ್ದರು – ನಾನು ಅವರನ್ನು ದೂರದಿಂದ ಕಂಡೆ. ಅಲ್ಲಿ ಅವರಿಗೆ ಚರಿತ್ರೆ ಮತ್ತು ಅರ್ಥಶಾಸ್ತ್ರದ ಉಪಾಧ್ಯಾಯರಾಗಿದ್ದ ಶ್ರೀ ನಾ. ಕಸ್ತೂರಿ ಅವರ ಪರಿಚಯವೂ ಸ್ನೇಹವೂ ದೊರೆಯಿತು. ಕಸ್ತೂರಿಯವರಿಗೂ ಮೈಸೂರಿನ ರಾಮಕೃಷ್ಣಾಶ್ರಮದವರಿಗೂ ಬಳಕೆ. ಮೊದಲು ವೀವರ್ಸ್ ಲೈನಲ್ಲಿ, ಆಮೇಲೆ ಮರಿಮಲ್ಲಪ್ಪ ಹೈಸ್ಕೂಲು ಪಕ್ಕದ ರಸ್ತೆಯಲ್ಲಿ ರಾಮಕೃಷ್ಣಾಶ್ರಮದ ಚಟುವಟಿಕೆಗಳ ಕೇಂದ್ರವಿತ್ತು. ಪುಟ್ಟಪ್ಪನವರು ವಿದ್ಯಾರ್ಥಿಯಾಗಿದ್ದಾಗ ಶಿವರಾಮಪೇಟೆಯ ಮನ್ನಾರ್ ಕೃಷ್ಣಶೆಟ್ಟಿ ಚತ್ರದ ಹೊರಗಡೆಯ ಒಂದು ಕೊಠಡಿಯಲ್ಲಿ ಇದ್ದರೆಂದು ನನ್ನ ನೆನಪು. ನಾನು ಶಾರದಾವಿಲಾಸ ಹೈಸ್ಕೂಲಲ್ಲಿ ಎರಡನೆಯ ಬಾರಿಗೆ ಉಪಾಧ್ಯಾಯನಾಗಿದ್ದಾಗಿನ ಕಾಲದ ಮೊದಲ ಭಾಗ ಅದು (೧೯೨೩). ಸಂಜೆಯ ಹೊತ್ತು ಪ್ರತಿದಿವಸ ಕಾರಂಜಿ ಕೆರೆಯ ದಾರಿಯಲ್ಲಿ ಸುತ್ತಾಡಿಕೊಂಡು ಬರುವಾಗ, ಕೆಲವೇಳೆ ಕೆರೆಯ ದಂಡೆಯ ಮೇಲೆ ನಿರ್ಮಿಸಿದ್ದ ಪೀಠಗಳಲ್ಲಿ ನಾನು ಒಂಟಿಯಾಗಿಯೊ ಸ್ನೇಹಿತರೊಡನೆಯೊ ಕುಳಿತಿರುತ್ತಿದ್ದಾಗ, ತಮ್ಮ ಸಂಜೆಯ ವಾಯುಸೇವನೆಯನ್ನು ಮುಗಿಸಿಕೊಂಡು ಏಕಾಂಗಿಯಾಗಿಯೊ ಜೊತೆಯ ಒಬ್ಬರೊಡನೆಯೊ ಒಂದು ಷರ್ಟ್, ಒಂದು ದಟ್ಟಿವಸ್ತ್ರ ಉಟ್ಟು ಊರಿನ ಕಡೆ ಹಿಂದಿರುಗುವ ಇವರ ಚಿತ್ರ ನೆನಪಿಗೆ ಬರುತ್ತದೆ. ನಡೆಯಲ್ಲಿ ಸಾವಕಾಶ ಇಲ್ಲ; ಅವಸರವೂ ಇಲ್ಲ. ದೃಢನಿಶ್ಚಯದ ಹೆಜ್ಜೆ ಇಡುತ್ತಿದ್ದರು. ಮುಖಭಾವ ಗಂಭೀರ. ಯಾವುದೊ ಆಲೋಚನೆಯಲ್ಲಿರುವಂತೆಯೇ ಮೊದಲಿಂದ ಇರುತ್ತಿದ್ದುದು ಸಾಮಾನ್ಯ. ಒಬ್ಬ ವಿದ್ಯಾರ್ಥಿಯ ಮುಖಭಂಗಿಯಲ್ಲಿ ಕಾಣದ ಒಂದು ಆಳ, ಗಂಭೀರ, ವಿಶಿಷ್ಟ ಆಕೃತಿ ಅವರದು, – ಮೊದಲಿಂದ. ನನ್ನ ಆಕೃತಿ ಅತಿಸಾಮಾನ್ಯ, ಸೆಣಕಲು; ಆದ್ದರಿಂದ ಅವರ ಆಕೃತಿಯನ್ನು ವರ್ಣಿಸುವುದು ಲಕ್ಷಣವಲ್ಲ. ಆದರೂ ಅಷ್ಟೇನೂ ಎತ್ತರವಲ್ಲದ, ತುಂಬಾ ಕುಳ್ಳಲ್ಲದ ದೃಢಕಾಯ ಅವರದು. ಮಲೆನಾಡಿನ ಶ್ರೀಮಂತರ ಮನೆಯಲ್ಲಿ ಹುಟ್ಟಿ ಬೆಳೆದವರು. ಸ್ಫುರದ್ರೂಪಿಗಳು. ಮುಖದಲ್ಲಿ ಚಿಂತನದ ಅಚ್ಚು ಕಟ್ಟಿತ್ತು. ಹೆಚ್ಚು ಬಾಚದಿದ್ದರೂ ಬ್ರಷ್ ಮಾಡಿದಂತಿದ್ದ ಕ್ರಾಪಿನವರು; ಹಣೆಯ ಮೇಲೆ ಮುಂಗುರುಳು ಬೀಳುತ್ತಿದ್ದುವು. ಯಾವುದೊ ಒಂದು ವಿಶೇಷ ವ್ಯಕ್ತಿ ಎಂಬುದನ್ನು ಯಾರಿಗೂ ಸ್ಪಷ್ಟವಾಗಿ ಕಾಣಿಸುವ ಚಹರೆ ಅದು. ಮಹಾರಾಜಾ ಕಾಲೇಜಿನ ವಿದ್ಯಾರ್ಥಿಯಾಗಿದ್ದಾಗಲೂ ಸ್ವಲ್ಪಕಾಲ ಅದೇ ರೂಮಲ್ಲಿ ಇದ್ದರೇನೊ. ಆಗೊಂದು

ಸಮಯದಲ್ಲಿ ರಾಮಕೃಷ್ಣಾಶ್ರಮದ ಹತ್ತಿರಕ್ಕೆ ಬಂದಿರಲು ಪುಟ್ಟಪ್ಪನವರು ಅಲ್ಲಿ ಹೆಚ್ಚು ಸಲಿಗೆಯ ವ್ಯಕ್ತಿಯಾದರು. ಅಲ್ಲಿ ಸಿದ್ಧೇಶ್ವರಾನಂದರು (ಗೋಪಾಲಬಾಬು ಎಂದೊ ಏನೊ ಅವರ ಪೂರ್ವಾಶ್ರಮದ ಹೆಸರು) ಇದ್ದರು. ಮಲೆಯಾಳದ ಆತ ಸಂನ್ಯಾಸಿಯಾದರೂ ದೊಡ್ಡ ಮಾನವತೆಯನ್ನೂ ಸೌಜನ್ಯವನ್ನೂ ಸುಸಂಸ್ಕೃತ ನಡೆನುಡಿಯನ್ನೂ ಇಟ್ಟುಕೊಂಡಿದ್ದವರಾದ್ದರಿಂದ ನಮಗೆಲ್ಲರಿಗೂ ಪ್ರಿಯರೂ ಮಾನ್ಯರೂ ಆದರು. ಅವರೊಡನೆ ಮಾತನಾಡುತ್ತಿದ್ದರೆ ಒಂದು ಆಶ್ರಮ, ಒಂದು ಸಂನ್ಯಾಸ ಎಂಬ ಭಾವನೆ ಬರುತ್ತಿರಲಿಲ್ಲ. ಒಳಗೇ ಅವರ ಶಕ್ತಿ ದೊಡ್ಡದಾಗಿ ಬೆಳೆಯುತ್ತಿದ್ದಿತಾದರೂ ಹೊರಗೆ ವ್ಯವಹಾರಗಳಲ್ಲಿ ತುಂಬ ಸರಳವಾಗಿ ಸಹೃದಯರಾಗಿ, ಕಾಲೆಜ್ – ಹೈಸ್ಕೂಲ್ ಜನರ ವಿಶ್ವಾಸಕ್ಕೆ ಗೌರವಕ್ಕೆ ಪಾತ್ರರಾದರು. ಸಂನ್ಯಾಸಿಯಾದರೂ ಒಮ್ಮೊಮ್ಮೆ ನಸ್ಯ ಸೇವಿಸುತ್ತ, ಅದರ ಗುಣ ಪ್ರಶಂಸೆ ಮಾಡತೊಡಗುತ್ತಿದ್ದರೆಂದು ನೆನಪು. ಅವರೂ ನಾನೂ ಕಲೆಯನ್ನು – ಮುಖ್ಯವಾಗಿ ಪಾಶ್ಚಿಮಾತ್ಯ ಸಂಗೀತಗಳನ್ನು, ಮೇಳಗಳನ್ನು, ನಿರ್ದೇಶಕರನ್ನು, ಅವರ ವಿಶೇಷಗಳನ್ನು – ಕುರಿತು ಮಾತನಾಡಿದ್ದೆವು. ಪುಟ್ಟಪ್ಪನವರಿಗೂ ಅವರಿಗೂ ನಿಕಟವಾದ ಆದರ, ವಿಶ್ವಾಸ ಬೆಳೆದವು.

ಈ ಹೊತ್ತಿಗಾಗಲೇ ಪುಟ್ಟಪ್ಪನವರು ಕೆಲವು ಕವನಗಳನ್ನೂ ಕಥೆಗಳನ್ನೂ ಬರೆದಿದ್ದರು. 'ಕರಿಯ ಸಿದ್ದ' ಎಂದೊ ಏನೊ ಹೆಸರಿನ ಕತೆಯನ್ನೂ ಇನ್ನಾವುದೊ ಪದ್ಯವನ್ನೂ ಅವರು ನನಗೆ ಕಳಿಸಿದ ಮಾಸಲು ನೆನಪಿದೆ. ನಾನು ಅವರಿಗೆ ಸುಮಾರು ಒಂದು ಉತ್ಸಾಹವಾಗಿ ಬೆಳೆಯುತ್ತಿದ್ದ ಕನ್ನಡದ ಕೆಲಸದಲ್ಲಿ ಸೇರಿಕೊಂಡಿದ್ದವನು ಎಂಬ ಸಂಗತಿಯಿಂದಲೊ ಏನೊ ಈ ಲಾಭ ನನಗಾಗಿತ್ತು. ಪುಟ್ಟಪ್ಪನವರ ಓದು ಇಂಗ್ಲಿಷ್ ಬರವಣಿಗೆಯಿಂದ ತೊಡಗಿತೆಂದು ಅವರೇ ಹೇಳಿದ್ದಾರೆ; ಕನ್ನಡಕ್ಕೆ ಆಗ ತಿರುಗುತ್ತಿತ್ತು. ಒಂದು ಬಗೆಯ ಇಂಗ್ಲಿಷ್ ಪದ್ಯಸಂಕಲನದಲ್ಲಿ ಕಡೆಗೆ ಹತ್ತಿಪ್ಪತ್ತು ಖಾಲಿ ಹಾಳೆ ಹಾಕಿ ಇಂಗ್ಲಿಷ್ ಪ್ರಕಾಶಕರು ಕಟ್ಟುಹಾಕಿಸುತ್ತಿದ್ದುದು ಉಂಟು. ಅಂಥ ಖಾಲಿ ಪುಟಗಳಲ್ಲಿ ಇವರು ತಮ್ಮ ಇಂಗ್ಲಿಷ್ ಕವನಗಳನ್ನು ಬರೆಯುತ್ತಿದ್ದರು. ಕನ್ನಡನಾಡಿನ ಈ ಮಗು, ಮಲೆನಾಡಿನ ಬೆಳಸು; ಹದಿನಾರಾಣೆ ಉತ್ತಮ ಹೆಗ್ಗಡೆಗಳ ಕುಲದಲ್ಲಿ ಹುಟ್ಟಿದವರು. ನಾನು ಚಿಕ್ಕಮಗಳೂರಲ್ಲಿದ್ದು ಕೊಪ್ಪಕ್ಕೊ ತೀರ್ಥಹಳ್ಳಿಗೋ ಹೋಗಿದ್ದಾಗ, ಅವರ ಮನೆಗೆ ಸುಮಾರು ನನ್ನನ್ನು ೧೯೪೯ರಲ್ಲಿ ಹಾ. ಮಾ. ನಾಯಕರು ಒಯ್ದು, ಅಲ್ಲಿ ಎಳನೀರು ಪಾನಕ ಕುಡಿಸಿದ್ದುಂಟು. ನನಗೆ ಪುಟ್ಟಪ್ಪನವರ ಭಾವ – ಮೈದುನರಾದ ಡಿ. ಆರ್. ಮಾನಪ್ಪನವರ ಪರಿಚಯ ಚೆನ್ನಾಗಿತ್ತು. ಸ್ವಾತಂತ್ರ್ಯ ಸಾಧನೆಯ ಕಾಲದಲ್ಲಿ ಆ ಮನೆ ಅನೇಕ ಕಾರ್ಯಸಾಧಕರಿಗೆ ನೆಲೆಯೂ ನೆರವೂ ಆಗಿತ್ತಂತೆ. ಪುಟ್ಟಪ್ಪನವರು ಬಹುಶಃ ಆ ಮನೆಯ ಶ್ರೀಮಂತಿಕೆಯ ಆವರಣದಲ್ಲಿ ಬೆಳೆದಿರಬೇಕು. ಮುಂದೆ ಇವರ ಮಡದಿಯಾದವರು ಮಾನಪ್ಪನವರ ತಂಗಿ. ಮಲೆನಾಡಿನ ಚಿತ್ರಗಳಲ್ಲಿ ಆಕೆ ವರ್ಣಿತರಾಗಿದ್ದಾರೆ. ಪುಟ್ಟಪ್ಪನವರ ಪ್ರೀತಿ ಕನ್ನಡದ ಬರವಣಿಗೆಗೆ ತಿರುಗಿದಾಗ ಆ ಕಡೆಯ ಕನ್ನಡದ ಯಾಸೆ, ನುಡಿಗಟ್ಟು, ಪದಪ್ರಯೋಗ, ವಿಷಯಗಳ ಆಯ್ಕೆ, ಹೃದ್ಭಾಗ, ಆವರೆಗೂ ಕನ್ನಡದಲ್ಲಿ ಕಾಣದಿದ್ದ ಒಂದು ವಿಶೇಷ ಅಂಶವನ್ನು ಕಾಣಿಸುತ್ತಿತ್ತು. ಸುಮಾರು ೧೯೨೪ರಲ್ಲಿ ಪ್ರಕಟವಾಗತೊಡಗಿದ ಧಾರವಾಡದ

'ಜಯ ಕರ್ನಾಟಕ' ಮಾಸಪತ್ರಿಕೆಯಲ್ಲಿ 'ಕಿಶೋರಚಂದ್ರವಾಣಿ' ಎಂಬ ಹೆಸರಲ್ಲಿ ಅವರ ಪದ್ಯಗಳು ಬರತೊಡಗಿದವು. ಯಾವ ಕಾರಣದಿಂದಲೊ ಏನೊ ಮೈಸೂರಿನ ಕೆಲವು ಯುವಕರು ಮೊದಮೊದಲು 'ಪ್ರಬುದ್ಧ ಕರ್ನಾಟಕ'ಕ್ಕಿಂತ ಹೆಚ್ಚಾಗಿ 'ಜಯಕರ್ನಾಟಕ'ಕ್ಕೆ ತಮ್ಮ ಬರವಣಿಗೆಗಳನ್ನು ಕಳಿಸುತ್ತಿದ್ದರು. 'ಜಯ ಕರ್ನಾಟಕ' ಮಾಸಪತ್ರಿಕೆ ಎಂಬ ಕಾರಣದಿಂದಲೊ, 'ಪ್ರಬುದ್ಧ ಕರ್ನಾಟಕ' ಮೂರು ತಿಂಗಳಿಗೊಮ್ಮೆ ಬರುತ್ತಿದ್ದುದು ಎಂಬ ಕಾರಣದಿಂದಲೊ, ಅಥವಾ ಈ ಪತ್ರಿಕೆ ಯಾವುದೊ ಬಿಗುಮಾನದ್ದು, ಪ್ರಾಚೀನರ ಪಂಥ ಎಂಬ ಕಾರಣದಿಂದಲೊ ಇದ್ದಿರಬೇಕು. ಆ ಜನ ಹೆಚ್ಚು ಕಡಮೆ ತಮಗಿಂತ ಹೆಚ್ಚು ವಯಸ್ಸಿನವರು; ಮುದಿಗಳು ಎನ್ನುವ ಹಾಗಿಲ್ಲ. ಈ ಲಕ್ಷಣ ನಮ್ಮಲ್ಲಿ ನಮ್ಮ ಮೇಧಾವಿ ಯುವಕರು ಕೆಲವರಿಗೆ ಮಂದಟ್ಟಾಗಿತ್ತು. ಅವರು 'ಪ್ರಬುದ್ಧ ಕರ್ನಾಟಕ'ಕ್ಕೆ ಬರೆಯತೊಡಗಿದಮೇಲೆ ಬಹುಮಟ್ಟಿಗೆ ಹೊರಗಿನ ಪತ್ರಿಕೆಗಳಿಗೆ ಲೇಖನಗಳನ್ನು ಕಳಿಸುವುದು ತಪ್ಪಿತು.

ಅವರು ಬಿ.ಎ. ಪಾಸುಮಾಡುವ ಹೊತ್ತಿಗೆ (ಸು. ೧೯೨೭–೨೮) ನಾನು ಮೈಸೂರು ಬಿಟ್ಟು ಬೆಂಗಳೂರು ಇಂಟರ್‌ಮೀಡಿಯಟ್ ಕಾಲೆಜಿಗೆ ಬಂದೆ. ಅಷ್ಟು ಹೊತ್ತಿಗೆ ಪುಟ್ಟಪ್ಪನವರ ಕವಿತೆ ದೃಢವಾದ ವ್ಯಕ್ತಿಮುದ್ರೆಯುಳ್ಳ ಒಂದು ಹೊಸ ಜೀವಶಕ್ತಿ ಪ್ರಕಾಶವನ್ನು ಕಾಣಿಸಿತ್ತು. ಬಗೆಬಗೆಯ ಗದ್ಯಪದ್ಯವನ್ನು ಬರೆದು ಅವರು ಪ್ರಸಿದ್ಧರಾಗಿದ್ದರು. ೧೯೨೭ರ ಕೊನೆಯಲ್ಲಿಯೊ '೨೮ರ ಆರಂಭಕಾಲದಲ್ಲಿಯೊ ಹೊಸಕನ್ನಡ ಕವಿತೆಯನ್ನು ಕುರಿತು ಮಹಾರಾಜಾ ಕಾಲೆಜಿನ ಕನ್ನಡ ಸಂಘದ ಆಶ್ರಯದಲ್ಲಿ – ಆಗ ವೆಂಕಣ್ಣಯ್ಯನವರೂ ನಾನೂ ಜೊತೆಯಲ್ಲಿದ್ದೆವು – 'ಶ್ರೀ'ಯವರ ಅಧ್ಯಕ್ಷತೆಯಲ್ಲಿ ನಾನು ಮಾತಾಡಬೇಕಾಯಿತು. ಅಷ್ಟು ಹೊತ್ತಿಗಾಗಲೇ ಪುಟ್ಟಪ್ಪನವರಿಗೆ ವರ್ಡ್ಸ್‌ವರ್ತ್ ಕವಿಯ 'ಮೈಕಲ್' ಕವಿತೆಯ ಅನುವಾದಕ್ಕಾಗಿ 'ಶ್ರೀ' ಸ್ವರ್ಣಪದಕ ಬಂದಿತ್ತು. ಇನ್ನೇನು ಉಪನ್ಯಾಸ ಆರಂಭವಾಗಬೇಕು ಎನ್ನುವಾಗ 'ಶ್ರೀ'ಯವರು 'ಭಾಷಣದಲ್ಲಿ ನನ್ನ ಹೆಸರೆತ್ತಬೇಡಿ, ನನ್ನ ಪದ್ಯಗಳನ್ನು ಉದಾಹರಿಸಬೇಡಿ' ಎಂದುಬಿಟ್ಟರು. ಆ ಮಾತಿನ ಪೆಟ್ಟು ನನ್ನ ಮೇಲೆ ದೊಡ್ಡ ಆಘಾತವೇ ಆಯಿತು. ಆದರೆ ನನ್ನ ಸತ್ವಪರೀಕ್ಷೆಯಾಗಬೇಕಿತ್ತು ಕೂಡ. ಹೊಸಗನ್ನಡ ಕವಿತೆಯನ್ನು ಕುರಿತು ತನಿಯಾಗಿ ನಡೆದ ಮೊದಲ ಭಾಷಣವೂ ಆದಾದ್ದು ಇನ್ನೊಂದು ವಿಶೇಷ. ಆ ಹೊತ್ತಿಗಾಗಲೇ ಕರ್ನಾಟಕ ಸಂಘದಿಂದ 'ಕಿರಿಯರ ಕಾಣಿಕೆ' ಎಂಬ ಸಂಕಲನ ಪ್ರಕಟವಾಗಿ ಅದರಲ್ಲಿ ಕುವೆಂಪು, ತೀ.ನಂ.ಶ್ರೀ., ಪು. ತಿ. ನರಸಿಂಹಾಚಾರ್ಯ, ಎಲ್. ಗುಂಡಪ್ಪ, ಎ. ಕೆ. ಪುಟ್ಟರಾಮು, ಡಿ. ಎಲ್. ನರಸಿಂಹಾಚಾರ್ ಮುಂತಾದವರ ಕವನಗಳು ಬಂದಿದ್ದವು. ಇತರ ಕವಿಗಳ ಜೊತೆಗೆ ಹೊಸ ಕವಿತೆಯ ವಿಷಯ, ಛಂದಸ್ಸು ಇವುಗಳ ಧಾರಾಳವನ್ನೂ ವೈವಿಧ್ಯವನ್ನೂ ಉದಾಹರಿಸಲು ನಾನು ಪುಟ್ಟಪ್ಪನವರ 'ಹೊನ್ನಿಯ ಹುಳು' ಎಂಬ ಕವನದ ಆರಂಭವನ್ನು ಒಕ್ಕಣೆಸಿದೆ. ಅದರ ಮೊದಲ ಖಂಡ ಕಾಣಿಸುವ –

ಮೇರೆಯೆ ಇಲ್ಲದ ಕತ್ತಲ ಕಡಲಲಿ
ಮಿನುಗಿ, ಮಿನುಗಿ
ಕತ್ತಲೊಳಿಲ್ಲವು ಲಯವಾಗಿ

ಇತರವೆರಡೂ ಒಂದಾಗಿ
ಕುಸುಮಿತ ಮಿಂಚಿನ ಲತೆಯಂತೆ
ಗಡಿಪಾರಾದುಡುಗಣದಳದಂತೆ

– ಇತ್ಯಾದಿ ಸಾಲುಗಳಲ್ಲಿನ ಮಾತಿನ ಜೋಡಣೆ, ಕುಣಿತ, ಪಾದದಿಂದ ಪಾದಕ್ಕೆ ನಿರ್ಲಕ್ಷ್ಯದಿಂದ ಎಳಯೌವನದ ಸಾಹಸದಲ್ಲಿ ನುಗ್ಗುವ ಸಾಲುಗಳ ಬಿಡಗು, ಉಸಿರ ವಿನ್ಯಾಸ, ಲಯವಿನ್ಯಾಸದಲ್ಲಿ ಸ್ವಾತಂತ್ರ್ಯ ಹೇಗೆ ಕಾಣಬಹುದು ನೋಡಿ ಎಂದು ಉದಾಹರಿಸಿದ್ದುಂಟು. ನಡೆಯುತ್ತ ಇದ್ದಕ್ಕಿದ್ದಂತೆ ಪ್ರತಿವಾದಿ ಸಂಚಾರವುಳ್ಳ – 'Counter Point' – 'ಗಡಿಪಾರಾದುಡುಗಣದಳದಂತೆ' ಎಂಬ ಸಾಲಿನ ಘೋಷಣೆ ಅತ್ಯಂತ ವಿಶೇಷ ಶಕ್ತಿಯುಳ್ಳದ್ದು ಎಂದೂ ಸೂಚಿಸಿದೆ. ಇಂಥ ಶಕ್ತಿ ಮುಂದೆ ಬೇಕಾದ್ದನ್ನು ಮಾಡಬಲ್ಲ ಧಾತುವುಳ್ಳದ್ದು ಎಂದು ಹೇಳಿದೆ. ಇಷ್ಟು ಹೊತ್ತಿಗಾಗಲೇ ಇತರ ಅನೇಕ ಹೃದ್ಯವಾದ ಜನಪ್ರೀತಿ ಮನ್ನಣೆಗಳನ್ನು ಪಡೆದ ಕವಿತೆಗಳನ್ನು ಬರೆದ ಪುಟ್ಟಪ್ಪನವರಿಗೆ ಅಖಿಲ ಕರ್ನಾಟಕ ಖ್ಯಾತಿ ಬಂದಿತ್ತು.

ಸೆಂಟ್ರಲ್ ಕಾಲೇಜಿನ ಕರ್ನಾಟಕ ಸಂಘದಲ್ಲಿ ಶಾಸ್ತ್ರಿಗಳು – ಎಂದರೆ ಎ. ಆರ್. ಕೃಷ್ಣಶಾಸ್ತ್ರಿಗಳು – ವಿದ್ಯಾರ್ಥಿ ಕವಿ ಸಮ್ಮೇಳನವನ್ನು ಮೊದಲ ಬಾರಿಗೆ ೧೯೨೯ರಲ್ಲಿ ಬೆಂಗಳೂರಲ್ಲಿ ನಡೆಸಿದರು. ಅದಕ್ಕೆ ಪುಟ್ಟಪ್ಪನವರು ಅಧ್ಯಕ್ಷರು. ಆ ಮುಂಚೆಯೇ ಮಾಸ್ತಿಯವರ ಅಧ್ಯಕ್ಷತೆಯಲ್ಲಿ ನಡೆದ ಬೆಳಗಾಂ ಸಾಹಿತ್ಯ ಪರಿಷತ್ ಸಮ್ಮೇಳನಕ್ಕೆ ಪುಟ್ಟಪ್ಪನವರು ಬಂದಿದ್ದರು. ಅಲ್ಲಿ ವಸತಿ ಊಟ ತಿಂಡಿಗಳ ಏರ್ಪಾಡು ಚೆನ್ನಾಗಿತ್ತು. ಧಾರವಾಡದ ಪ್ರಖ್ಯಾತ ವಕೀಲರಾದ ಎನ್. ಕೆ. ದೀಕ್ಷಿತರೂ ರಂಗಪ್ಪ ಪೋತದಾರರೂ ಬಹು ವಿಚಕ್ಷಣೆಯಿಂದ ಆ ಕೆಲಸ ಮಾಡಿದ್ದರು. ರಂಗಪ್ಪನವರಿಗೆ ನಮ್ಮನ್ನು ಕಂಡರೆ ಮೊದಲಿಂದಲೂ ಆಪ್ತತೆ, ಪ್ರೀತಿ ಇದ್ದುದರಿಂದ ನಮಗೆ ಸ್ವಲ್ಪ ಹೆಚ್ಚಿನ ಪಕ್ಷಪಾತವನ್ನು ತೋರಿಸಿ ಅನುಕೂಲವನ್ನು ಒದಗಿಸಿದ್ದರು. ತುಂಬ ಸಕ್ಕರೆ ಹಾಕಿ ಕಾಫಿ ಕೊಡುವುದರ ಬದಲಾಗಿ ನಮ್ಮಲ್ಲಿ ಕೆಲವರಿಗೆ ತೃಪ್ತಿಯಾಗಲೆಂದು ಸ್ವಲ್ಪ ಕಡಮೆ ಹಾಕಿ ಬೇರೆ ತಟ್ಟೆಯಲ್ಲಿ ಸಕ್ಕರೆಯನ್ನು ತಂದಿಡುವುದೂ ಪದ್ಧತಿಯಾಗಿತ್ತು. ಮುದವೀಡು ಕೃಷ್ಣರಾಯರು ನುಡಿಯುತ್ತಿದ್ದಂತೆ 'ಕಟುಕರೋಹಿಣೀ ಕಷಾಯ'ದಂತೆ ಕಾಫೀ ಬೇಕು ಇವರಿಗೆ ಎನ್ನುತ್ತಿದ್ದುದು ರೂಢಿ. ನಮಗೆ ಮಸಾಲೆ ದೋಸೆ, ಇಡ್ಲಿ ಚಪಲ ಇದ್ದುದೂ ಅವರಿಗೆ ಗೊತ್ತಿತ್ತು. ಪುಟ್ಟಪ್ಪನವರು, ನಾನು – ಮಾನಪ್ಪನವರೂ ಇದ್ದರೆಂದು ಕಾಣುತ್ತದೆ – ನಾವು ನಾಲ್ಕೈದು ಮಂದಿ ಊರ ಒಳಬೀದಿಯಲ್ಲಿದ್ದ ಒಂದು ಉಡುಪಿ ಹೊಟೇಲಿಗೆ ಹೋಗಿ ಹೆಚ್ಚು ಕೊಟ್ಟು ಯಜಮಾನರನ್ನು ಪುಸಲಾಯಿಸಿ ತಕ್ಕಮಟ್ಟಿಗೆ ಚೆನ್ನಾಗಿ ಮಾಡಿಕೊಡುವಂತೆ ಹೇಳಿ ದೋಸೆ ಮಾಡಿಸಿ ತಿಂದುಕೊಂಡು ಬರುತ್ತಿದ್ದೆವು. ಇದು ನಮ್ಮಲ್ಲಿ ಹಿರಿಯರಿಗೆ ಗೊತ್ತಾಗಲು ನಾವು ಪೋಸ್ಟ್ ಆಫೀಸಿಗೆ ಹೋಗಿ ಬರುತ್ತಿದ್ದೇವೆಂದು ಹೇಳಿ ತಪ್ಪಿಸಿಕೊಳ್ಳುತ್ತಿದ್ದೆವು. ನಮ್ಮ ಮುಖ ಕನ್ನಡ – ಸಂಸ್ಕೃತ ದ್ವಿಪ್ರಮಾಣದಲ್ಲಿಯೂ ತಪ್ಪಿಸಿಕೊಳ್ಳುವುದು ಇದರಿಂದ ಸಾಧ್ಯವಾಗುತ್ತಿತ್ತು. ವಿಕ್ಟೋರಿಯಾ ರಾಣಿಯ ಕಾಲದಲ್ಲಿ ರಾಣಿಯನ್ನು ಕಾಣುವ, ಸಲಹೆ ಕೊಡುವ ಅವಕಾಶದಲ್ಲಿ ಎಲ್ಲ ಕ್ಯಾಬಿನೆಟ್ ಮಂತ್ರಿಗಳೂ ಇದ್ದರೂ ಯಾವುದಾದರೂ ಸಂದರ್ಭದಲ್ಲಿ

ಮಂತ್ರಿಮಂಡಲದ ಗುಟ್ಟುಗಳನ್ನು ಬೇರೆ ಬೇರೆ ಮಂತ್ರಿಗಳ ಮೂಲಕವಾಗಿ ತಿಳಿದುಕೊಂಡು ಮುಮಕಿ ಗಲಾಟೆ ಮಾಡಿಯಾರೆಂದು – ಪಾಮರ್ಸ್ಟನ್ನೊ ಡಿಸ್ರೇಲಿಯೊ – ಆ ಕಾಲದ ಮುಖ್ಯರಾದ ಮಂತ್ರಿಗಳ ಸಭೆಯಲ್ಲಿ ಹೇಳಿದ್ದರಂತೆ; ಮಹಾರಾಣಿಗೆ ಯಾವುದೊ ಸಂದರ್ಭದಲ್ಲಿ ನಿಜವನ್ನು ಹೇಳಬೇಕಿಲ್ಲ; ನಾವೆಲ್ಲರೂ ಆಕೆಗೆ ಒಂದೇ ಸುಳ್ಳನ್ನು ಹೇಳುವಂತೆ ನಿಶ್ಚಯಿಸೋಣ ಎಂದು ಗೊತ್ತು ಮಾಡಿಕೊಂಡಿದ್ದರಂತೆ. ನಾವೆಲ್ಲ ಈ ಬಗ್ಗೆ ಇಂಥ ತೀರ್ಮಾನ ಮಾಡಿದ್ದೆವು. ಆದ್ದರಿಂದ ನಮ್ಮಲ್ಲಿ ಯಾರನ್ನು ಕೇಳಿದರೂ ನಾವು ಪೋಸ್ಟ್ ಆಫೀಸಿಗೆ ಹೋಗಿದ್ದೆವೆಂದೇ ಹೇಳಬೇಕೆಂದು ತೀರ್ಮಾನಿಸಿದ್ದೆವು. ಇದಕ್ಕೆ ನಮ್ಮ ದೋಸೆ, ಇಡ್ಲಿ ಪ್ರೀತಿಯೇ ಕಾರಣವಲ್ಲ; ನಮ್ಮ ಕೆಲವು ಹಿರಿಯರ ಮನಸ್ಸಲ್ಲಿ ಈ ಬಗ್ಗೆ ಚಪಲ ಹುಟ್ಟಬಾರದು, ಅಸೂಯೆ ಮೂಡಬಾರದು, ದೊಡ್ಡ ಗುಲ್ಲಿಗೆ ಕಾರಣವಾಗಬಾರದು, ನಾವು ಮೈಸೂರ ಜನ ಎಂದು! ಅಷ್ಟೇ ಚೆನ್ನಾಗಿ ಸರದಾರ್ ಹೈಸ್ಕೂಲಲ್ಲಿ ಏರ್ಪಡಿಸಿದ್ದ ಬೀಡಿನಲ್ಲಿ ನಮ್ಮನ್ನು ನೋಡಿಕೊಳ್ಳುತ್ತಿದ್ದ ಊಟ ವ್ಯವಸ್ಥೆಯ ಅಧಿಕಾರಿಗಳಿಗೂ ಇದರಿಂದ ಅಸಮಾಧಾನ ಆಗದೆ ಇರಬೇಕು ಎಂಬುದೂ ಕಾರಣ.

ಇನ್ನೊಂದು ಸಂಗತಿ – ಗುಲ್ಬರ್ಗ ಸಾಹಿತ್ಯ ಸಮ್ಮೇಳನದ ಕಾಲದಲ್ಲಿ ಪುಟ್ಟಪ್ಪನವರ 'ಯಮನ ಸೋಲು' ನಾಟಕ ಆಡಬೇಕೆಂದು ನಿರ್ಣಯಿಸಿತ್ತು. ಅದನ್ನು 'ಪ್ರಬುದ್ಧ ಕರ್ನಾಟಕ'ದಲ್ಲಿ ಅಚ್ಚುಮಾಡಿತ್ತು. ಅನೇಕ ದೃಷ್ಟಿಗಳಿಂದ ಹೊಸಗನ್ನಡದ ಸರಳರಗಳೆಯ ಛಂದಸ್ಸು ನಾಟಕಕ್ಕೆ ನಮ್ಮ ಕಡೆ ಪ್ರಯುಕ್ತವಾದ ಮೊದಲ ಕೃತಿ ಅದು. ಪೂರ್ವಾರ್ಧದ ಭಾಗದಲ್ಲಿ ಸಾವಿತ್ರಿಯ ಪಾತ್ರಕ್ಕೆ ಒಂದು ಹೊಸ ಮೆರುಗನ್ನೂ ಜೀವಕಾಂತಿಯನ್ನೂ ತಂದುಕೊಟ್ಟಿತ್ತು. ಅದನ್ನು ನಾಲ್ಕಾರು ಬಾರಿ ಮೈಸೂರಲ್ಲಿ ಬೆಂಗಳೂರಲ್ಲಿ ಆಡಿಯಾಗಿತ್ತು. ಕನ್ನಡ ನಾಡಿನ ದೂರ ಪ್ರಾಂತವಾಗಿ ಇನ್ನೂ ಹೈದರಾಬಾದಿನ ಅಂಗವಾಗಿದ್ದ ಆ ಊರಲ್ಲಿ ಸಕಲ ಕರ್ನಾಟಕದ ಸಮೀಕ್ಷೆಗೆ ತರಲು ಈ ನಾಟಕದ ಪ್ರದರ್ಶನ ಮಾಡಬೇಕೆಂದು ನಿರ್ಣಯವಾಗಿತ್ತು. ಸತ್ಯವಾನನ ಪಾತ್ರವನ್ನು ನಿರ್ವಹಿಸಲಿದ್ದ ನಟ ಗುಲ್ಬರ್ಗಕ್ಕೆ ಬರಲಿಲ್ಲವಾದ್ದರಿಂದ ಪುಟ್ಟಪ್ಪನವರೇ ಆ ಪಾತ್ರವನ್ನು ಆ ದಿನ ನಿರ್ವಹಿಸಬೇಕಾಗಿ ಬಂತು. ಪುನಃ ಅವರೆಲ್ಲಿಯಾದರೂ ತಮ್ಮ ನಾಟಕದಲ್ಲಿಯಾಗಲಿ, ಬೇರೆ ನಾಟಕದಲ್ಲಿಯಾಗಲಿ ಪಾತ್ರವಹಿಸಿದ್ದಾರೊ ಇಲ್ಲವೊ ನಾನರಿಯೆ. ಆ ದಿನ ಅವರದೇ ನಾಟಕ; ಅವರೇ ನಿರ್ಮಿಸಿದ ಪಾತ್ರ; ಅವರದೇ ನುಡಿತಕ್ಕೆ ಅವರ ನಿರ್ವಹಣೆ ಒಂದು ಹೆಚ್ಚಿನ ಕಳೆ ತಂದಿತು ಎನ್ನಿಸಿತು: ಕೃತಿಕಾರನದೇ ನಾಯಕ ಪಾತ್ರವಾದ್ದರಿಂದ.

ಸೆಂಟ್ರಲ್ ಕಾಲೆಜಿನ ಕರ್ನಾಟಕ ಸಂಘದವರು ಏರ್ಪಡಿಸಿದ್ದ ಮೊದಲ ವಿದ್ಯಾರ್ಥಿ ಕವಿ ಸಮ್ಮೇಳನದ ಉತ್ಸವಕ್ಕೆ ಪುಟ್ಟಪ್ಪನವರು ಅಧ್ಯಕ್ಷರಾದರೆಂದೆ: ಬಹು ವಿಜೃಂಭಣೆಯಿಂದ ಆ ಉತ್ಸವ ನಡೆಯಿತು. ಸಾರ್ವಜನಿಕ ಜೀವನದಲ್ಲಿ ಕವಿಗೆ ಇಂಥ ಸಮಾರಂಭವನ್ನು ನಡೆಸಿಕೊಡಬೇಕೆಂದು ಕಂಡವರಿಗೆ ಒಂದು ಹೊಸ ಭಾಗ್ಯೋದಯದ ದರ್ಶನವಾಯಿತು. ಆ ಸುಮಾರು ಸಮಯದಲ್ಲಿಯೇ ರಾಜರತ್ನಂ, ಡಿ. ಆರ್. ರಾಮಯ್ಯ ಮುಂತಾದ ಹಲವಾರು ಮಂದಿ ಹೊಸ ಕವಿಗಳ ಕನ್ನಡಸಾಹಿತ್ಯರಚನೆ ಜನರ ಕಣ್ಣಿಗೆ ಬಿದ್ದಿತು. ಪುಟ್ಟಪ್ಪನವರೊಡನೆ ಒಂದು ದೊಡ್ಡ ಫೋಟೋಗ್ರಾಫ್ ಆ ಕಾಲದಲ್ಲಿ ಭೌತಶಾಸ್ತ್ರದ ಹಾಲಿನ

ಪಕ್ಕದಲ್ಲಿ ತೆಗೆದುಕೊಂಡು 'ಪ್ರಬುದ್ಧ ಕರ್ನಾಟಕ'ದಲ್ಲಿ ಅಚ್ಚು ಮಾಡಿದರು. ಪುಟ್ಟಪ್ಪನವರ ಕೀರ್ತಿ ಮುಂದೆ ಒಂದೇ ಸಮನೆ ಬೆಳೆದು, ಗದ್ಯ ಪದ್ಯ ನಾಟಕ ಸಣ್ಣಕತೆ ವಿಮರ್ಶೆ ಮುಂತಾದ ಎಲ್ಲ ಪ್ರಕಾರಗಳಲ್ಲಿಯೂ ಸ್ಥಾನ, ಕೀರ್ತಿ ಪಡೆದವು.

ಸುಮಾರು ೧೯೩೦ರಿಂದ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಕನ್ನಡದ ಉಪನ್ಯಾಸಕರಾಗಿ ಉದ್ಯೋಗವನ್ನು ಕೈಕೊಂಡು ಅವರು ಕ್ರಮವಾಗಿ ಅಸಿಸ್ಟೆಂಟ್ ಪ್ರೊಫೆಸರ್, ಪ್ರೊಫೆಸರ್, ಪ್ರಿನ್ಸಿಪಲ್ ಆಗಿ, ವೈಸ್‌ಛಾನ್ಸೆಲರ್ ಹುದ್ದೆಗೂ ಏರಿ ಕನ್ನಡದ ವ್ಯಾಸಂಗಕ್ಕೂ ಪ್ರಚಾರಕ್ಕೂ ಬಹುದೊಡ್ಡ ಸ್ಫೂರ್ತಿಸ್ಥಾನವಾಗಿ ನಿಂತರು. ವಿಶ್ವವಿದ್ಯಾನಿಲಯದ ಉಪಕುಲಪತಿಗಳಾದ ಮೇಲೆ 'ಮಾನಸ ಗಂಗೋತ್ರಿ' ಎಂಬ ಹೆಸರಲ್ಲಿ ವಿಶ್ವವಿದ್ಯಾನಿಲಯಕ್ಕೆ ವಿಸ್ತಾರವಾದ ಸ್ಥಳಾವಕಾಶ ದೊರೆತು, ಒಂದು ವಿವಿಕ್ತವಾದ ವಿದ್ಯಾಪ್ರಪಂಚ ಅಲ್ಲಿ ಏರ್ಪಡುವಂತಾಯಿತು. ಮೈಸೂರು ವಿಶ್ವವಿದ್ಯಾನಿಲಯ ತೊಡಗುವಾಗ್ಗೇ ಅದು ಛಾತ್ರರ ವಾಸಸ್ಥಾನವುಳ್ಳ ಏಕಕೇಂದ್ರ ವಿಶ್ವವಿದ್ಯಾನಿಲಯವಾಗಬೇಕೆಂದು, ಸರ್ದಾರ್ ಕಾಂತರಾಜೇ ಅರಸರ ಅರಮನೆಗೆ ಸೇರಿದ ಆ ಭಾಗವನ್ನೆಲ್ಲ ಆ ಕಾರ್ಯಕ್ಕಾಗಿ ತೆಗೆದುಕೊಳ್ಳತಕ್ಕದ್ದೆಂದು ನಿರ್ಣಯವಾಗಿತ್ತು. ಅದು ನೆರವೇರದಾಗಲು, ಬೆಂಗಳೂರು – ಮೈಸೂರು ಎರಡು ಕೇಂದ್ರಗಳಲ್ಲಿ ವಿವಿಕ್ತವಾಗಿ, ಐವತ್ತು ವರ್ಷಗಳ ತರುವಾಯ ಮೈಸೂರು ವಿಶ್ವವಿದ್ಯಾನಿಲಯಕ್ಕೆ ಆ ಪ್ರದೇಶ ದೊರೆತು, ಪುಟ್ಟಪ್ಪನವರ ಕಾಲದಲ್ಲಿ ಅದು ವಿಶ್ವವಿದ್ಯಾನಿಲಯದ ನೆಲೆಯಾದುದು ಯಾವುದೊ ಒಂದು ಕಾರಣಸಾಧನವಾಗಿಯೇ ಆಯಿತು. ಯಾರಿಗೂ ಕಣ್ಣು ಮನಸ್ಸು ತುಂಬುವಂತೆ ಅಲ್ಲಿನ ವಿದ್ಯಾಮಂದಿರಗಳು, ಪುಸ್ತಕ ಭಂಡಾರಗಳು, ಸಂಶೋಧನೆ ಕೇಂದ್ರಗಳು, ಸುಸಜ್ಜಿತ ಪ್ರಯೋಗಶಾಲೆಗಳು, ಅತಿಥಿಗೃಹ, ಕ್ರೀಡಾರಂಗ ರಚಿತವಾಗಿವೆ. ಕೇಂದ್ರ ಆಡಳಿತಕ್ಕೆ ಸಂಬಂಧಿಸಿದ ಪ್ರಾದೇಶಿಕ ವಿದ್ಯಾಸಂಸ್ಥೆಗಳೂ ಪ್ರಾಚಾರ್ಯರ ವಸತಿಗೃಹಗಳೂ ಏರ್ಪಟ್ಟಿವೆ. ಆ ಪ್ರದೇಶ ಮೈಸೂರಿಗೇ ಒಂದು ವಿಶಿಷ್ಟವೈಭವವನ್ನು ತಂದಿದೆ. ಕುಕ್ಕನಹಳ್ಳಿ ಕೆರೆಯ ವಿಸ್ತಾರ ಅದರ ಎದುರಿಗೆ ತಿಳಿನೀರಿನ ಸರಸ್ಸನ್ನು ನಿರ್ಮಿಸಿಕೊಟ್ಟು, ಕಟ್ಟೆಯ ಆಚೆ ಕಡೆಗೆ ಊರ ಹರಹು ಬೆಳೆದು, ಊರಿಗೂ ಮಾನಸಗಂಗೋತ್ರಿಗೂ ನಡುವೆ ಜನಸಾಂದ್ರವಾದ ಉತ್ತಮ ಮಂದಿರಗಳು ನಿರ್ಮಾಣವಾಗಲು ಎಡೆಗೊಟ್ಟಿದೆ. ಈ ಎಲ್ಲಕ್ಕಿಂತ ಹೆಚ್ಚಾಗಿ ಕನ್ನಡದ ಮೂಲಕ ಯಾವ ವಿದ್ಯಾಕಾರ್ಯ ಶಕ್ಯವಲ್ಲ? ಕನ್ನಡಿಗರಿಗೆ ಕನ್ನಡದ ಮೂಲಕ ತಾನೇ ಎಲ್ಲಾ ಮಟ್ಟಗಳಲ್ಲಿಯೂ ವಿದ್ಯಾರ್ಜನೆ ನಡೆಯಬೇಕು? ಏಕೆ ನಡೆಯಲಾರದು? – ಎಂಬ ಮನಸ್ಸಿನಿಂದ ಒಂದು ಕಡೆ ಸಂಶೋಧನ ಶಾಖೆ, ಇನ್ನೊಂದು ಕಡೆ ಅದಕ್ಕೆ ತಕ್ಕ ಅಚ್ಚಿನ ಮನೆ, ಪ್ರಕಟನ ಶಾಖೆ ಏರ್ಪಟ್ಟು, ಆ ಮೂಲಕ ನೂರಾರು ಗ್ರಂಥಗಳು ಹೊರಗೆ ಬರುವಂತಾಯಿತು. ಹಿಂದಿನ ಕಾಲದ ಕನ್ನಡ ಪುಸ್ತಕಗಳ ಬಡತನ ಹೋಗಿ ಎಂಥ ದೊಡ್ಡ ಪುಸ್ತಕಭಂಡಾರದಲ್ಲಿ ಕೂಡ ನಿಂತು ಶೋಭಿಸುವಂಥ ಗಾತ್ರದ, ರಂಗಿನ, ಬೆಲೆಯ ಪುಸ್ತಕಗಳು ಸ್ಪರ್ಧಿಸಿ ನಿಲ್ಲುವಂತೆ ಈ ಕಾರ್ಯ ಕೀರ್ತಿಗೊಂಡಿದೆ. ಮುಡಿಯೆಂಬಂತೆ ಕನ್ನಡಕ್ಕೇ ಪ್ರತ್ಯೇಕ ಅಧ್ಯಯನ ಸಂಸ್ಥೆ ಏರ್ಪಟ್ಟಿದೆ. ಬಗೆಬಗೆಯ ಯೋಗ್ಯತಾಸಿದ್ಧಿಗಳನ್ನು ಪಡೆದು, ವಿದ್ವಾಂಸರು ಹುಟ್ಟಿಕೊಂಡು ಒಂದು ಮಹಾಸರಸ್ವತೀಪೀಠವೇ ಮೆರೆಯುವಂತಾಗಿದೆ. ಇದು ಪುಟ್ಟಪ್ಪನವರ ಕನ್ನಡ ತಪಸ್ಸಿಗೆ ದೊಡ್ಡ ಉದ್ಯಾಪನೆ.

ಮೊದಲಿಂದಲೂ ಲೋಕದ ದಿನಚರಿಯ ಜೀವನಕ್ಕೆ ಅಂಟಿದ್ದರೂ ಅಂಟದಂತೆ – ಪದ್ಮ ಪತ್ರಮಿವಾಂಭಸಿ ಎಂಬಂತೆ – ಇರುವವರು ಪುಟ್ಟಪ್ಪನವರು. ಕವಿಜೀವನವನ್ನು, ವಿದ್ಯಾರ್ಥಿ ಜೀವನವನ್ನು, ಅಧಿಕಾರಿ ಜೀವನವನ್ನು ನಡಸಿದವರು. ಹೊರಗಿನ ವೇದಿಕೆಗೆ, ಆಮಂತ್ರಣಗಳಿಗೆ ಗಮನ ಕೊಡದೆ ನಾನು ಬಲ್ಲ ರೀತಿಯಲ್ಲಿ ಕನ್ನಡ ಸೇವೆ ಮಾಡುತ್ತೇನೆ ಎಂದು ಏಕನಿಷ್ಠೆಯಿಂದ ತಮ್ಮ ಸಾಹಿತ್ಯನಿರ್ಮಾಣ ಮಾಡಿದರು. ಆದುದರಿಂದ ಆದಕ್ಕೆ ಒಂದು ಅಖಂಡ ಅವಯವಸಂಪತ್ತಿ ದೊರಕುವಂತಾಯಿತು. ರವೀಂದ್ರನಾಥ ಟಾಗೋರರ ಕೃತಿಗಳು, ಶ್ರೀರಾಮಕೃಷ್ಣ ಪರಮಹಂಸರ, ವಿವೇಕಾನಂದರ ವಾಣಿ, ಜೀವನ, ಆಶ್ರಮ, ಯೋಗಿ ಅರವಿಂದರ ಸಾಧನೆ ಇವು ಅವರಿಗೆ ಆದರ್ಶ ಸ್ಥಾನಗಳಾದವು. ಬಹುಮಟ್ಟಿಗೆ ಇಂಗ್ಲಿಷ್ ಸಾಹಿತ್ಯದಿಂದ ಪಡೆಯಬಹುದಾದ ಸಂಸ್ಕಾರವೆಲ್ಲವನ್ನೂ ನಿರಂತರವಾಗಿ ಪಡೆದುಕೊಂಡು ಭಾರತೀಯ ಸಂಸ್ಕೃತಿಗೆ ಅವರು ಅತೀವವಾಗಿ ಬೆಲೆಕೊಟ್ಟರು. ಇಲ್ಲಿನ ವೇದ, ಉಪನಿಷತ್ತು, ಇತಿಹಾಸ, ಪುರಾಣ ಯಾವ ಪ್ರಭಾವವನ್ನು ಈ ಕಾಲದವರ ಜೀವನದ ಮೇಲೆ ಪರಿಣಾಮ ಉಂಟುಮಾಡಬಹುದೊ ಅವನ್ನು ಅವರ ಕೃತಿಗಳಲ್ಲಿ ಕಾಣಬಹುದು. ವರ್ಣಾಶ್ರಮಧರ್ಮ ಸಂಪ್ರದಾಯ ಜನದಲ್ಲಿ ಉಂಟುಮಾಡಿರುವ ಅಸಮತೆ, ಅನ್ಯಾಯಗಳನ್ನು ಸರಿಮಾಡಿದ ಹೊರತು ಧೀರವಾದ, ಉದಾರವಾದ ಹಿಂದೂಧರ್ಮ ಶಕ್ಯವಾಗುವುದಿಲ್ಲವೆಂದು ಮೊದಲಿಂದ ಕಂಡುಕೊಂಡಿದ್ದ ಅವರು ವಿವೇಕಾನಂದರ ಮೇಲೆ ಬರೆದ ಗ್ರಂಥದಲ್ಲೂ 'ವಿಭೂತಿಪೂಜೆ' ಮುಂತಾದವುಗಳಲ್ಲಿನ ಮಹಾಕಾಂಕ್ಷೆಯಲ್ಲಿಯೂ ಅದಕ್ಕೆ ಉಕ್ತಿ ಕೊಟ್ಟಿದ್ದಾರೆ. ಹಾಗೆಯೇ ರಷ್ಯಾದಲ್ಲಾದ ಮಹಾಕ್ರಾಂತಿಯೂ ಅವರನ್ನು, ಅವರ ಮನಸ್ಸನ್ನು ಒಂದು ರೀತಿ ತಟ್ಟಿತು. ೧೯೩೩ರಲ್ಲಿ ಹುಬ್ಬಳ್ಳಿ ಸಮ್ಮೇಳನಕ್ಕೆ ಅವರು ಬಂದಿದ್ದಾಗ ಆನೆಯ ಮೇಲೆ ಮೆರವಣಿಗೆ ಮಾಡಿ ಊರಿನ ಪೌರಮಂದಿರದಲ್ಲಿ ಸನ್ಮಾನ ಮಾಡಿದರು. ೧೯೩೫ರಲ್ಲಿ ಬೊಂಬಾಯಿಯಲ್ಲಿ ನಡೆದ ಸಾಹಿತ್ಯ ಪರಿಷತ್ತಿನ ಸಮ್ಮೇಳನದ ಅಧ್ಯಕ್ಷರಾಗಿದ್ದ ಎನ್. ಎಸ್. ಸುಬ್ಬರಾಯರು 'ಕ್ರಾಂತಿಕಾಳಿ ಕಠಾರಿಯಿಂ' ಎಂದು ಮೊದಲಾಗುವ ಪುಟ್ಟಪ್ಪನವರ ಒಂದು ಕವನದ ಭಾಗವನ್ನು ಎತ್ತಿ ಹೊಗಳಿದರು. ಈ ಮೂರು ಮಾತುಗಳೂ ಅವರ ಜೀವನದಲ್ಲಿ ಪ್ರಾತಿನಿಧಿಕವೇ. ಆದರೆ ಈ ಕಠಾರಿ ಬರಿಯ ಅಲಗಿನ ಕಠಾರಿಯಲ್ಲ; ಒಂದು ರೂಪಕ. ಕ್ರಿಸ್ತ ನುಡಿದಿದ್ದನಂತೆ – 'I came like a sword among you' – ಎಂದು. ಹೆನ್ರಿಕ್ ಹೈನೆ (Heinrich Heine) ಎಂಬ ಜರ್ಮನ್ ಕವಿ ತನ್ನ ಭಕ್ತರಿಗೆ ಹೇಳಿದ್ದನಂತೆ – 'ನನ್ನ ಗೋರಿಯ ಮೇಲೆ ಹೂವಿನ ಮಾಲೆಯನ್ನೇನೊ ಇಡುವಿರಿ; ಒಂದು ಖಡ್ಗವನ್ನೂ ತಂದಿರಿಸಿ' – ಎಂದು; ಕವಿಯ ಲೇಖನಿ ಹೂವಿನ ಮಾಲೆಯೂ ಹೌದು; ಖಡ್ಗವೂ ಹೌದು ಎಂಬಂತೆ. ಮಲೆನಾಡಿನ ಜೀವನದಲ್ಲಿ ಅವರು ಬಗೆಬಗೆಯ ಅಂಗಸಾಧನೆ ಮಾಡಿ, ಕೋವಿ ಹಿಡಿದು ಬೇಟೆಯನ್ನು ಮಾಡಿದ್ದಿರಬೇಕು. ಅಂಥವರಿಗೆ ಖಡ್ಗ – ಕಠಾರಿ ಬೀಸುವುದು ಶಕ್ಯವಾದರೂ ಯಾವುದೋ ಒಂದು ಕಾರ್ಯಸಾಧನೆಗೆ ಅಂಥ ಒಂದು ಆಯುಧ ತಕ್ಕುದಾದೀತು ಎಂಬ ಭಾವನೆ ಆ ಮನಸ್ಸಿಗೆ ಆ ವಯಸ್ಸಲ್ಲಿ ಹೊಳೆದಿದ್ದರೆ ಅಸ್ವಾಭಾವಿಕವಲ್ಲ. ಕಠಾರಿ ಎಂಥ ಆಯುಧವೇ ಆಗಲಿ, ಕ್ರಿಯಾನಿರೂಪಣೆ ಉದ್ದೇಶ ಅಲ್ಲಿ ಮೂಡುತ್ತದೆ. ಸೌಮ್ಯದ ಮಾತಲ್ಲ;

ಸನ್ನಿವೇಶವಲ್ಲ; ಇಂದಿನ ಕಲಾ ಮತ್ತು ಲೌಕಿಕ ಜೀವನ ಎಂಬಂತೆ. ದೇಶಸ್ವಾತಂತ್ರ್ಯದ ವಿಚಾರದಲ್ಲಿಯೂ ಇದರ ಸತ್ವಸಾಧನೆಯ ಸಂಬಂಧದಲ್ಲಿಯೂ ಒಟ್ಟು ಜನತೆ ಕೀಳುಮೇಲೆನ್ನದೆ ಹೇಗೆ ಉದ್ಧಾರವಾಗಬೇಕು ಎಂಬ ಕನಸನ್ನು ಅವರು ಕಂಡವರು.

ಶೂದ್ರನು ಏಕೆ ತಪಸ್ವಿಯಾಗಲಾರ? ಆಗಬಾರದು? ಜಲಗಾರನು ಹೇಗೆ ಪರಮ ಲಬ್ಧಿ ಪಡೆಯದಿರಲಾರ? – ಎಂಬುದನ್ನು ಅದರಲ್ಲಿಯೂ 'ಶೂದ್ರತಪಸ್ವಿ'ಯಲ್ಲಿಯೂ ತೋರಿಸಿದರು. ಎಲ್ಲಿ ಪ್ರಕೃತಿಯ ಸೌಂದರ್ಯವೂ ಭವ್ಯತೆಯೂ ಕಾಣುತ್ತದೆಯೊ ಅಲ್ಲಿ ಅವರ ಬಗ್ಗೆ ವ್ಯಕ್ತಿ ಕಲ್ಪನಾಶಕ್ತಿ ನುಡಿಯುತ್ತದೆ. ಸೃಷ್ಟಿಸೌಂದರ್ಯವನ್ನು ಅವರು ಉದ್ದಾಮವಾಗಿ ವರ್ಣಿಸಬಲ್ಲರು. ಅತ್ತ ಬೇಂದ್ರೆ, ಇತ್ತ ಕುವೆಂಪು ನಿಸರ್ಗರಮಣೀಯತೆಗೆ ಒಂದು ವಿಶೇಷ ಕಾಂತಿಯನ್ನು ಹೊಮ್ಮಿಸಿದ್ದಾರೆ. ಅವರ ಮೊದಲ ಮೊದಲ ಕವಿತೆಗಳಾದ ಸುಗ್ಗಿ ಬರುತಿದೆ, ಮಾಗಿ ಬರುತಿದೆ, ಡೇರಿಯ ಹೂ ಎಂಬಲ್ಲಿಯೂ ಸಿಂಹಗಡದ ವರ್ಣನೆಯ ಆರಂಭದ ಕತ್ತಲೆಯ ವರ್ಣನೆಯಲ್ಲಿಯೂ ಮಲೆನಾಡಿನ ಚಿತ್ರಗಳು, ಕಾನೂರು ಸುಬ್ಬಮ್ಮ ಹೆಗ್ಗಡಿತಿ, ಮಲೆಗಳಲ್ಲಿ ಮದುಮಗಳು ಗ್ರಂಥಗಳಲ್ಲಿಯೂ 'ನವಿಲು' ಸಂಕಲನದ ಸುಂದರ ಪದ್ಯಗಳಲ್ಲಿಯೂ ಅತಿಶಯ ಕಾಂತಿಯುಳ್ಳ ಪ್ರಕೃತಿವರ್ಣನೆಯಿದೆ. ರಾಮಾಯಣ ದರ್ಶನದಲ್ಲಿ ಬರುವ ಪ್ರಕೃತಿ ಚಿತ್ರಗಳಲ್ಲಿ ಶಾಂತ ಸನ್ನಿವೇಶದಲ್ಲಿ ಛಂದೋಲಯ ಹೇಗೆ ಉಸಿರು ಕಟ್ಟಿಕೊಂಡು ನಡೆವಂತೆ ಹತ್ತಿಪ್ಪತ್ತು ಸಾಲುಗಳ ಲಯದ ನಡೆ ಪ್ರವಹಿಸುತ್ತದೆ ಎಂಬುದನ್ನು ಕಾಣಬಹುದು. ಮೊದಲು ಮೊದಲು ಟಾಗೋರರ ಮಾದರಿಗಳು, ಭಣಿತಿ, ಶಬ್ದಕಲಾಪ ಅವರಿಗೆ ಕೆಲವು ಮಾದರಿಗಳನ್ನು ಕೊಟ್ಟವು. ಯಾವ ಕವಿಯೂ ತನಗೆ ರುಚಿಸಿದ್ದನ್ನು ಅನುಸರಿಸುತ್ತಾನೆ, ಅಳವಡಿಸಿಕೊಳ್ಳುತ್ತಾನೆ, ತನ್ನ ಕಾರ್ಯಕ್ಕೆ ತಿದ್ದಿಕೊಳ್ಳುತ್ತಾನೆ. ಅದೆಲ್ಲ ಅವನ ಅನ್ನ; ಅದನ್ನು ಜೀರ್ಣ ಮಾಡಿಕೊಂಡು, ತನ್ನ ರಕ್ತ ಮಾಂಸ ಎಲು ಮಾಡಿಕೊಂಡು ತನ್ನ ಶಕ್ತಿಯನ್ನು ಬೆಳಸಿಕೊಳ್ಳುತ್ತಾನೆ ಅಲ್ಲವೆ? ಆದರೆ ಎಲ್ಲಿಂದ ಸೂಚನೆ ತೆಗೆದುಕೊಂಡರೂ ಅವನ್ನು ತನ್ನದಾಗಿ ಮಾಡಿಕೊಳ್ಳುವ ಕೃತಿ ಅವರದೇ ವಿಶೇಷ ಶಿಲ್ಪಸೌಧವಾಯಿತು. ಮಹಾಛಂದಸ್ಸು ಎಂದು ಹೆಸರಿಟ್ಟು ಬಳಸಿದ ರಾಮಾಯಣದರ್ಶನದ ಅವರ ಛಂದೋರಚನೆ ವಿಷಯದ ಏರಿಗೂ ಏರಿ ಅಲ್ಲಿನ ಅನೇಕ ಮಟ್ಟಗಳ ಕಾರ್ಯಗಳನ್ನೂ ಸನ್ನಿವೇಶಗಳನ್ನೂ ವಿಸ್ಮಯಕರವಾಗಿ ಸಾಧಿಸುತ್ತದೆ. ಕೆಲವರು ಅವರ ಸಣ್ಣ ಕೃತಿಗಳ ಬೆಡಗಿಗೆ ಹೆಚ್ಚು ಪಕ್ಷಪಾತವುಳ್ಳವರು; ಕೆಲವರು ರಾಮಾಯಣದರ್ಶನದ ಉಚ್ಚಸಾಧನೆಗೆ ತಲೆದೂಗುವವರು. ಇವೆರಡನ್ನೂ ಸಾಧಿಸಿದ ಕಾವ್ಯನಿರ್ಮಾಣಶಕ್ತಿ ಅವರದು. ಈ ಸಂಗತಿ ಅವರ ಕವಿತೆಯನ್ನು ಒಂದು ಮಹೋನ್ನತಿಗೆ ಎತ್ತುತ್ತದೆ. 'ಮಹಾ' ಎಂಬುದನ್ನು Epic ಎನ್ನುವ ಮಾತಿಗೆ ಪರ್ಯಾಯವಾಗಿ ಅವರು ಬಳಸಿದ್ದಾರೆ ಎನ್ನಿಸುತ್ತದೆ. ಈಚಿನ, ಹಿಂದಿನ ಎಷ್ಟೊ ಮಂದಿ ಆ ಛಂದಸ್ಸುಗಳನ್ನು ಬಳಸಿದ್ದರು. ಕನ್ನಡಕ್ಕೆ ರಾಮಾಯಣ ಭಾರತಗಳ ಶ್ಲೋಕ ಒಗ್ಗಲಿಲ್ಲವಾಗಿ ಬಹುಶಃ ನಮ್ಮವರು ಅದನ್ನು ಬಳಸಿಲ್ಲ. ಸರಳರಗಳೆ ಛಂದಸ್ಸಿನಲ್ಲಿಯೂ* ಅನೇಕ

* ಷೇಕ್ಸ್‌ಪಿಯರ್‌ನ ಕಡೆಯ ನಾಲ್ಕು ದುರಂತ ನಾಟಕಗಳಲ್ಲಿನ Blank Verse ಅನ್ನು Iambic Pentameter ಎಂದು ಪೂರ್ತಿ ಸ್ಥಾಪಿಸಿಕೊಟ್ಟರೆ £ 10,000 ಬಹುಮಾನ ಕೊಡುತ್ತೇವೆಂದು '೨೦ನೆ ದಶಕದಲ್ಲಿ ಇಂಗ್ಲಂಡಿನ ಒಂದು ವಿದ್ವದ್ವರ್ಗದವರು ಪ್ರಸಿದ್ಧಪಡಿಸಿದ್ದರು.

ಬಗೆಗಳಿದ್ದರೂ ಒಂದು ಬಗೆಗೆ ಷೇಕ್ಸ್‌ಪಿಯರ್ ವರ್ಡ್ಸ್‌ವರ್ತ್ ಬ್ರೌನಿಂಗ್ ಮುಂತಾದವರೂ ಮಿಲ್ಟನನೂ ಬಳಕೆಯಿತ್ತರು. ಅವರಲ್ಲಿ ಎಷ್ಟೋ ಮಾರ್ಪಾಡುಗಳಾಗಿ Blank Verse ಬೆಳೆದಿದೆ. ಅಲ್ಲಿ ಉಸಿರ್ದಾಣ, ಪದ್ಯದ ಅರ್ಥ – ಖಂಡಗಳ ನಿಲುಗಡೆ, ಬೇರೆ ನೆಲಸನ್ನೇ ಅರ್ಥಮಂಡಲವನ್ನೇ ಸೂಚಿಸುವ parenthesis, ಕಥನಕಾರ್ಯಕ್ಕೆ ಏರಬೇಕೆಂದಾಗ ಬನಿ ತಂದುಕೊಂಡು ಅನೇಕ ಬಗೆಯ ಮಾರ್ಪಾಡುಗಳನ್ನು ಮಾಡಿಕೊಂಡಿದ್ದಾರೆ. ಒಟ್ಟಿಗೆ ಪ್ರಕರಣಗಳನ್ನಾದರೂ ಓದಿದ ಹೊರತು ಅಲ್ಲಿ ಇಲ್ಲಿ ಓದಿ ತೀರ್ಮಾನಕ್ಕೆ ಬರುವಂತಾದರೆ ನಷ್ಟ ನಮ್ಮದು. ಕೆಲವೇಳೆ ಓಟ ನಿಂತಂತೆ ಕಾಣುವಲ್ಲಿಯೂ ಓದುವ ಧಾಟಿ ಭಾವಕ್ಕೆ ಅರ್ಥಕ್ಕೆ ತೂಗುತ್ತದೆ. ಐದು ಮಾತ್ರೆಯ ಗಣವನ್ನು ಅವರು ಒಡೆದು ದುಡಿಸಿಕೊಳ್ಳುವ ರೀತಿಯಂತೂ ವಿಶಿಷ್ಟವಾದ್ದು.

ಒಂದು ಸಂಗತಿ ಅವರ ಮನಸ್ಸನ್ನು ತುಂಬ ಮೃದು ಮಾಡಿದೆ. ಅದು ತಾಯಿಸತ್ವದ ಪ್ರೀತಿ. ಸಣ್ಣವಯಸ್ಸಿನಲ್ಲಿ ತಾಯಿಯನ್ನು ಕಳೆದುಕೊಂಡವರೂ ತಾಯಿ ಲಾಲನೆಯಿಲ್ಲದೆ ಬೆಳೆಯಬೇಕಾದವರೂ ಒಂದು ತಂಡದವರು ಒರಟಾಗುತ್ತಾರೆ; ಅಂಕೆಗೆ ಒಳಪಡದಾಗುತ್ತಾರೆ; ಅಥವಾ ಅತಿವರ್ತನೆಗಳಿಗೆ ಸುಲಭವಾಗಿ ಈಡಾಗುತ್ತಾರೆ; ಅಥವಾ ಹೆಣ್ಣನ್ನು ಕಂಡರೆ ಅಷ್ಟೇನೂ ಗೌರವ ಭಕ್ತಿ ತೋರಿಸಲಾರದ ಬರ್ಬರರಾಗುತ್ತಾರೆ; ಇಲ್ಲವೇ ತುಂಬಾ ಅಕ್ಕರೆ, ಗೌರವ, ಭಕ್ತಿಗಳಿಂದ ಕೂಡಿದ ಹಂಬಲವುಳ್ಳವರಾಗುತ್ತಾರೆ. ತಾಯ ವಾತ್ಸಲ್ಯ ಎಷ್ಟು ದೊಡ್ಡದಾಗಿ ಮಕ್ಕಳನ್ನು ಒಲಿದು ಬೆಳಸಬಹುದು ಎಂಬುದಕ್ಕೆ ಲೋಕಚರಿತ್ರೆಯಲ್ಲಿ ಸಾವಿರಾರು ನಿದರ್ಶನಗಳಿವೆ. ಪುಟ್ಟಪ್ಪನವರ ತಾಯ ಪ್ರೇಮ ನಾಲ್ಕಾರು ಕಡೆ ತುಂಬ ಸ್ನಿಗ್ಧವಾಗಿ ಪ್ರೀತಿಯಿಂದ ಪ್ರಕಾಶಗೊಳ್ಳುತ್ತದೆ. ಎಲ್ಲಕ್ಕಿಂತ ಅತಿಶಯವಾಗಿ ಅವರ 'ಬೆರಳ್ಗೆ ಕೊರಳ್' ನಾಟಕದಲ್ಲಿ ಒಂದು ಅತಿಶಯ ನಯದಲ್ಲಿ ಹಣ್ತನದಲ್ಲಿ ಅದನ್ನು ಅಲ್ಲಿ ಕಾಣಬಹುದು. ಪ್ರಬುದ್ಧ ಕರ್ನಾಟಕವನ್ನು ನಾನು ಸಿದ್ಧಪಡಿಸುತ್ತಿದ್ದ ಕಾಲದಲ್ಲಿ ಅದನ್ನು ಪ್ರಕಟಿಸುವ ಯೋಗ ನನಗೆ ದೊರೆಯಿತು. ಅಲ್ಲಿನ ತಾಯಿ ಪ್ರೀತಿಯನ್ನು ಕಂಡು ನನ್ನ ಮನಸ್ಸಿನ ಮೇಲುಂಟಾದ ಪರಿಣಾಮ ಇನ್ನೂ ಜಾಗೃತವಾಗಿದೆ. ಅವರು ಬರೆದಿರುವ ನಾಟಕಗಳಲ್ಲಿ ಇಷ್ಟು ತುಂಬು ಅಕ್ಕರೆ ಬೇರೆಲ್ಲಿಯೂ ಇರುವಂತಿಲ್ಲ.

ಅವರ ಕವಿತೆಗಳಲ್ಲಿ ಇರುವ ಸೊಗಸನ್ನೊ ರಚನಾವಿಶೇಷಗಳನ್ನೊ ಕುರಿತಾಗಲಿ, ಅವರ ಉದ್ಧೃತಿಯಾದ ರಾಮಾಯಣದರ್ಶನ ಗ್ರಂಥದ ಹಿರಿಮೆ ನಿಲುಕುಗಳನ್ನಾಗಲಿ ಪರಿಚಯ ಮಾಡಿಕೊಡುವ ಅಥವಾ ಬೆಲೆಗಾಣ್ಕೆಯನ್ನು ನಿರೂಪಿಸುವ ಪ್ರಸಂಗ ಇದಲ್ಲ. ಕೆಲವು ಪ್ರಸಂಗಗಳು ಕನ್ನಡಕ್ಕೆ ಒಂದು ಅನನ್ಯಸಾಧಾರಣವಾದ ಶಕ್ತಿಯನ್ನೂ ಹೊಳಪನ್ನೂ ಕೊಟ್ಟಿವೆ. ಪ್ರತಿಮಾಪ್ರತಿಕೃತಿಯನ್ನು ಕನ್ನಡಕ್ಕೆ ಮೊದಲ ಬಾರಿಗೆ ಎಂಬಂತೆ ಬರೆದವರು ಅವರು. ರವೀಂದ್ರನಾಥರ ಮೂಲಕಾಣ್ಕೆ ಅವರಿಗೆ ಅವರ ವೀರ್ಯಾಂಶವಾಗಿರಬಲ್ಲದಾದರೂ ಅವರು ಇಲ್ಲಿ ಬೆಳಸಿರುವ ರೀತಿ ಅವರದೇ. ಯೇಟ್ಸ್ ಕವಿಯೂ ಕಳೆದ ಶತಮಾನದ ಕಡೆ ಕಡೆಯ ದಶಕಗಳಲ್ಲಿ ಇಂಗ್ಲಂಡ್ ಫ್ರಾನ್ಸ್ ದೇಶಗಳಲ್ಲಿ ಬೆಳೆದ Symbolism – ಸಂಕೇತ ಪ್ರಕರಣವೂ ಇದಕ್ಕೆ ಪೋಷಕವಾಗಿ ಬೆಳೆಯಬಲ್ಲುದೆಂಬುದನ್ನು ಅಲ್ಲಿ ಕಾಣಬಹುದು. ವೈಶಂಪಾಯನ ಸರೋವರವನ್ನು ಕುರಿತು ಅವರ 'ಸರೋವರದ

ಏರಿಗನ್ನಡಿಯಲ್ಲಿ' ಪ್ರಬಂಧ ಒಂದು ಆಳವಾದ ಹೃದಂಶದ ಗಂಭೀರತೆಯನ್ನು ಕಾಣಿಸುತ್ತದೆ. 'ರಸೋ ವೈ ಸಃ' ಮುಂತಾದ ಪ್ರಬಂಧಗಳೂ ಶಾಕುಂತಲದ ರಚನೆ ಮತ್ತು ದರ್ಶನದ ಮಹತಿಯನ್ನು ಅವರು ಕಾಣಿಸಿರುವ ರೀತಿಯೂ ಒಂದು ಅಚ್ಚಭಾರತೀಯ ಸಂಪ್ರದಾಯನಿಷ್ಠೆಯನ್ನು ಬೆಳಗಿಸುವಂಥವು.

ಮನಸ್ಸು ಮಾಡಿ ಜೊತೆಗೆ ನಡಸಿಕೊಂಡ ಸ್ನೇಹಿತರ ಜೊತೆಯಲ್ಲಿ ಅವರು ಬಹುಪ್ರೀತಿಯಿಂದ ನಡೆದುಕೊಳ್ಳುತ್ತಾರೆ. ಕೃಷ್ಣಶಾಸ್ತ್ರಿಗಳಿಗೆ ಅವರು ತುಂಬ ಪ್ರಿಯರಾಗಿದ್ದರು. ವೆಂಕಣ್ಣಯ್ಯನವರ ಆಪ್ತವಾದ ಸ್ನೇಹಸೌಹಾರ್ದ ಅವರ ಪರವಾಗಿ ಅನ್ಯೋನ್ಯವಾಗಿ ಇಬ್ಬರಿಗೂ ಎಷ್ಟು ದೊಡ್ಡ ಸಂತೋಷವನ್ನು ಗುಣಮಾನ್ಯತೆಗಳನ್ನು ತಂದಿದ್ದವೆಂಬುದನ್ನು ನಾನು ಬಲ್ಲೆ. ರಾಮಾಯಣದರ್ಶನ ಸಂದರ್ಭದಲ್ಲಿ ಅವರೂ ನಿವೇದಿಸಿದ್ದಾರೆ. ತಮ್ಮ ಮಹಾಕಾವ್ಯ 'ದರ್ಶನ'ವನ್ನು ವೆಂಕಣ್ಣಯ್ಯನವರಿಗೆ ಅರ್ಪಿಸಿದ ಆದರ ಗೌರವವೂ ದೊಡ್ಡದು. ಗಂಟೆಗಟ್ಟಲೆ ಕುಳಿತುಕೊಂಡು ಅವರು ಬರೆಬರೆದಂತೆ ರಾಮಾಯಣದರ್ಶನದ ಭಾಗಗಳನ್ನು ಓದುವುದು, ಇವರು ಅದಕ್ಕೆ ವಿಶ್ವಾಸವನ್ನು ಸೂಚಿಸುವುದು ಒಂದು ದೊಡ್ಡ ಕ್ರಿಯಾಬಂಧ. 'ಇಲ್ಲಿನ ಪದ್ಯಗಳಲ್ಲಿ ಯಾವುದನ್ನಾದರೂ ಹಾಕಿಕೊಳ್ಳಿ' ಎಂದು ಎಂಟು ಹತ್ತು ಸಣ್ಣಸಣ್ಣ ಸ್ಟೂಡೆಂಟ್ ನೋಟ್‌ಬುಕ್ಕಿನಲ್ಲಿ ಬರೆದಿಟ್ಟುಕೊಂಡಿದ್ದ ಪದ್ಯಗಳನ್ನು ವೆಂಕಣ್ಣಯ್ಯನವರಿಗೆ ಕಳಿಸುತ್ತಿದ್ದುದನ್ನು ನಾನು ಅವರ ಜೊತೆಗಿದ್ದಾಗ ನೋಡಿಬಲ್ಲೆ. ಬರಿಯ ಕೊಳಲು ಆಗಿದ್ದ ವಾದ್ಯದ ಗಾನ ಕ್ರಾಂತಿಕಠಾರಿಯಾದದ್ದು, ಮಹಾದರ್ಶನವಾಗಿ ನಿಂತದ್ದು ಅವರ ಬದುಕಿಗೇ ಉನ್ನತಿಯನ್ನೂ ಅತಿಶಯತೆಯನ್ನೂ ತಂದುಕೊಟ್ಟ ಸಂಗತಿ. ಆ ಕೃತಿ ಕವಿಯನ್ನು ಕುವೆಂಪುವಾಗಿ ಮಾಡಿದ ಪವಾಡ ಎಂಥುದು ಎಂಬುದನ್ನು ಅವರೇ ವಿವರಿಸಿದ್ದಾರೆ. ಯೋಗ ಬಗೆಬಗೆಯದೆನ್ನಬಹುದು. ಇವರದು ಕಾವ್ಯಯೋಗ: ಕವಿತೆಯ ಮೂಲಕ ತಮ್ಮ ತಪಸ್ಸಿದ್ಧಿಯನ್ನು ಕಂಡುಕೊಂಡು, ಆ ಮಾರ್ಗದಲ್ಲಿ ಶಾಕುಂತಲದ ಕಡೆದ ಪದ್ಯದ ಕಡೆಯ ಅರ್ಧಭಾಗಗಳ ನಿಲವನ್ನು ಸಾಧಿಸುವುದು ನಿಜವಾಗಿ ಯೋಗ ಸಿದ್ಧಿಯೇ. ಕವಿತೆ, ಆತ್ಮಶಕ್ತಿಗಳ ತೂಕಕ್ಕೂ ಏರಿಗೂ ರಾಜಕೀಯ ಹೇಗೆ ಬಂದೀತು? ನಿಂತೀತು? – ಎಂದು ಒಮ್ಮೆ ದಿಟ್ಟವಾಗಿ ನುಡಿದರು. ಕನ್ನಡಕ್ಕೆ ತನ್ನ ಬದುಕನ್ನು, ಮನಸ್ಸನ್ನು, ಕ್ರಿಯಾಕಲಾಪವನ್ನು ಒಂದು ತಪದಂತೆ, ವ್ರತದಂತೆ ನಡಸಿಕೊಂಡ ಜೀವನ ಅವರದು. ಆ ಸಂಬಂಧದಲ್ಲಿ ತಮ್ಮ ಕುಲದ ಜನ, ಮಂತ್ರಿಗಳನ್ನು ಕೂಡ ಲಕ್ಷಿಸದೆ ಅವರು ಟೀಕೆ ಮಾಡಿದ್ದುಂಟು. ಅವರು ಆ ಕಡೆ ಮನಸ್ಸುಮಾಡಿದ್ದಿದ್ದರೆ ಅಥವಾ ಅಧಿಕಾರದಲ್ಲಿದ್ದವರನ್ನು ಅಪ್ರಿಯಗೊಳಿಸದಿದ್ದರೆ ಸುಲಭವಾಗಿ ವಿದ್ಯಾಮಂತ್ರಿಗಳಾಗಬಹುದಿತ್ತು. ಆ ಓಲು, ಮನಸ್ಸು ಇವರವಲ್ಲ. ಶ್ರೀಮತಿ ರಮಾ ಜೈನ್ ಸ್ಥಾಪಿಸಿ ನಡಸುತ್ತಿರುವ ಜ್ಞಾನಪೀಠ ಸಂಸ್ಥೆಯಿಂದ ಅಖಿಲ ಭಾರತೀಯ ಸನ್ಮಾನವಾಗಿ ಲಕ್ಷ ರೂಪಾಯಿ ಪಾರಿತೋಷಕ ಅವರಿಗೆ, ಗುಜರಾತಿನ ಮಹಾಸಾಹಿತಿ ಆದ ಡಾ|| ಉಮಾಶಂಕರ ಜೋಶಿಯವರಿಗೆ ಬಂದಾಗ ಈ ಕವಿಕೀರ್ತಿ ಸಮಗ್ರಭಾರತದಲ್ಲಿ ಪ್ರಕಾಶನಕ್ಕೆ ಬಂದಿತು. ಭಾರತದಲ್ಲಿ ಎಂದಿಗೇ ಆಗಲಿ ಕೀರ್ತಿ ಸಂದುದು ಋಷಿಸತ್ವಗಳಿಗೆ, ಕಲೆಗೆ, ಸಾಹಿತಿಗಳಿಗೆ; ರಾಜರಿಗಲ್ಲ, ವಿಜೇತೃಗಳಿಗಲ್ಲ. ಇಂದಿನ ಬಾಳೂ ಆ

ಸಂಪ್ರದಾಯವನ್ನು ನಡಸದಾದರೆ ಇದರ ದಾರಿದ್ರ್ಯಕ್ಕೆ ಸಂಕೇತವಾದೀತೇ ಹೊರತು ಸಂಸ್ಕೃತಿ ಕ್ರಿಯೆಗಲ್ಲ. 'ಕೊರತೆಯೆ ರತ್ನಗಳ್ಗಿ ಕುಪರೀಕ್ಷಕರಿಂ ಬಿಲಿಹೀನಮಾದೊಡೇಂ?' *

ಹಿಂದೆ ಸೂಚಿಸಿದ್ದ 'ಹೊನ್ನಿಯ ಹುಳ'ದಂತಹದರ ಲಯಗಾನ, ಚಿತ್ತಶೋಭೆಗಳಿಗೂ 'ತಾನಾಜಿ'ಯ ಆರಂಭದ

ಸದ್ದಿಲಿಗತ್ತಲು, ಕತ್ತಲದೆತ್ತಲು
ಸಿಂಹಗಡದಾ ಕೋಟೆಯ ಸುತ್ತಲು
ಕೃಷ್ಣಪಕ್ಷದ ಕತ್ತಲು! – ಕಗ್ಗತ್ತಲು!

ಮುಂತಾದ ಸಾಲುಗಳಿಗೂ ಇಂದಿಗೂ ನನಗೆ ತುಂಬ ಪ್ರೀತಿ ಇದೆ. ಎಳತನದ ಒಂದು ಚಿಗರಿನಡಿಗೆಯ 'ನೀನಂದು ಕನಕ ರಥವನು ತಂದು ಬಾ ಎಂದು ಕರೆದಂದು ನಾನು ದೂಳಾಡುತಿದ್ದೆ' ಇತ್ಯಾದಿ ಬರೆದ ಚೆಲುವಿಗೆ ಕಿವಿ ಮನಸ್ಸು ಸೋಲುತ್ತದೆ. 'ಸುಗ್ಗಿ ಬರುತಿದೆ' ಎಂಬ ಪದ್ಯದ ಸಂಪನ್ನತೆಯಾಗಲಿ, 'ನವಿಲಿ'ನ 'ಕಲ್ಪನಾಸುಂದರಿ' ಮುಂತಾದ ನಾಲ್ಕಾರು ಪದ್ಯಗಳ ರಚನಾವೈಭವವಾಗಲಿ ಕವಿತೆಯಾಗಿ ನನ್ನ ಮನಸ್ಸಿನಲ್ಲಿ ಹೊಳಲು ಕೊಡುತ್ತದೆ.

ನಭದಲಿ ನೀ ನೀಲಿಮಾ, ನಿಶೆಯಲಿ ನೀ ಕಾಲಿಮಾ,
ಹೇ ಅಂತರ್ಯಾಮಿನಿ!
ದಿವಾ ನೀನೆವೆ ಬಿಚ್ಚಲು, ನಿಶಾ ನೀನೆವೆ ಮುಚ್ಚಲು
ಚಿರ ಚಂಚಲ ಭಾಮಿನಿ!

ಎಂದು ಹೇಳಿ, ಎರಡನೆ ಹಂತದ –

ರವಿಯ ಮುಂದೆ ನೀ ಬರೆ ಉಷೆ,
ಸಂಜೆಯ ಹಿಂದೈತರೆ ನಿಶೆ,
ಹೇ ಅಮರ ಮಧುರ ಅನಿಮಿಶೆ,
ಅಮಿತ ವೇಷಧಾರಿಣಿ!
ಕಲೆಗೆ ತವರು, ಸಿರಿಗೆ ಬಿತ್ತು
ಸೊಬಗಿಗೆ ನೆಲೆ ನಿನ್ನ ಮುತ್ತು
ಸೊನ್ನೆಯಿಂದ ಜಗವ ತಂದೆ,
ಹೇ ಋತ ಅಧಿಕಾರಿಣಿ'!

–ಎಂಬ ವಾಸ್ತುರಚನೆಯನ್ನು ಟಾಗೋರರಲ್ಲಿ ಮಾತ್ರ ಕಂಡಿದ್ದೆ. ಅವು ಕನ್ನಡಕ್ಕೆಲ್ಲಿ ಬರಬೇಕಿತ್ತು ಪುಟ್ಟಪ್ಪನವರು ತರುವ ಮುಂಚೆ? ಅವರ ಮನಸ್ಸು ಎಲ್ಲ ಕರೆಗಳನ್ನೂ ಕೇಳಿತು; ಎಲ್ಲ ಛಂದೋಲಯಗಳನ್ನೂ ಚಿತ್ರಚಮತ್ಕೃತಿಗಳನ್ನೂ ಸ್ವೀಕರಿಸಿತು; ಶಬ್ದಚಮತ್ಕೃತಿಗಳನ್ನು

---

* ಭರ್ತೃಹರಿಯ 'ಶಾಸ್ತ್ರೋಪಸ್ಕೃತ ಶಬ್ದಸುಂದರ ಗಿರಃ ಶಿಷ್ಯಪ್ರದೇಯಾಗಮಾಃ' ಎಂದು ತೊಡಗುವ ಪದ್ಯದ ಕಡೆಯ ಸಾಲಿನ ಬಸವಪ್ಪಶಾಸ್ತ್ರಿಗಳ ಅನುವಾದವಾಗಿ ಈ ಅರ್ಥಾಂತರನ್ಯಾಸ ಬರುತ್ತದೆ.

ಕಂಡು ದುಡಿಸಿಕೊಂಡಿತು; ವೇದದ ಮಾತೊ ಉಪನಿಷತ್ತುಗಳದೊ ರಾಮಾಯಣದ್ದೊ ಪುರಾಣಗಳದೊ ಪಂಪನದೊ ರನ್ನನದೊ ನಾರಣಪ್ಪನದೊ – ಅವರ ರಕ್ತವನ್ನು ಕುದಿಸಿತು; ವಿವೇಕಾನಂದರಿಂದ ಸ್ಫೂರ್ತಿಗೊಂಡಿತು; ಅರವಿಂದರ ಭಾವದಲ್ಲಿ ಮಿಂದಿತು; ಟಾಗೋರರ ಸೌಂದರ್ಯವಿವೇಚನೆಯಿಂದ ಪ್ರಭಾವಪಡೆಯಿತು; ಈಚಿನ ಕಾಲದ ಕವಿಗಳ ಸಾಧನೆಗಳನ್ನೂ ಅಳವಡಿಸಿಕೊಂಡಿತು; ಎಲ್ಲವನ್ನೂ ತನ್ನದನ್ನಾಗಿ ಮಾಡಿಕೊಂಡು ತನ್ನದೇ ವಿಶಿಷ್ಟ ಮುದ್ರೆಯೊತ್ತಿ ಒಂದು ಹೊಸ ನಿರ್ಮಾಣವನ್ನಾಗಿ ಮಾಡಿ ಕನ್ನಡದ ಸುನಾಣ್ಯವಾಯಿತು.

ಒಮ್ಮೆ ಸೆಂಟ್ರಲ್ ಕಾಲೆಜಿನ ಗಣಿತಶಾಸ್ತ್ರದ ಹಾಲಲ್ಲಿ ಯಾವುದೊ ಉಪನ್ಯಾಸ – ವಾಸುದೇವಾಚಾರ್ಯರದೊ ಗುಂಡಪ್ಪನವರದೊ ನೆನಪಿಲ್ಲ. ಅದನ್ನು ಕೇಳಲು ನಾವಿಬ್ಬರೂ ಜೊತೆಗೆ ಕುಳಿತಿದ್ದೆವು. ಅಷ್ಟು ಹೊತ್ತಿಗೆ ನಾನು 'ಕರ್ಣಾಟಕ ಕಾದಂಬರಿ'ಯನ್ನು ಕುರಿತು ಮೈಸೂರು ವಿಶ್ವವಿದ್ಯಾನಿಲಯಕ್ಕೆ ಸಣ್ಣ ಕೈಹೊತ್ತಗೆ ಬರೆದಿದ್ದೆ. ಅದರಲ್ಲಿ ಒಂದು ಸಣ್ಣ ಅಂಶವನ್ನು ಎಂಟು – ಹತ್ತು ಸಾಲುಗಳ ಒಂದು ಅಡಿಟಿಪ್ಪಣಿಯಾಗಿ ಕಾಣಿಸಿದ್ದೆ. ಆ ಕಾವ್ಯದ ತುಂಬ ಬಿಳುಪು ಶುಭ್ರವಾಗಿ ಕಾಣುತ್ತದೆ; ಅಲ್ಲಿನ ಒಂದು ಶುದ್ಧಿಯನ್ನು ವರ್ಣಿಸುತ್ತದೆ ಎಂದಿದ್ದೆ. ಪುಟ್ಟಪ್ಪನವರು ಹೇಳಿದರು. 'ಆ ಅಡಿಟಿಪ್ಪಣಿ ಚೆನ್ನಾಗಿದೆ. ಬಹುದಿನದಿಂದ ನಾನೇ ಅದನ್ನು ಕುರಿತು ಬರೆಯಬೇಕೆಂದಿತ್ತು. ನಾನು ಅದನ್ನು ಕುರಿತು ವಿಸ್ತಾರವಾದ ಒಂದು ಲೇಖನವನ್ನು ಬರೆಯಬೇಕೆಂದಿದ್ದೇನೆ. ನಿಮ್ಮ ಮನಸ್ಸಿಗೆ ಬೇಸರವಾಗುವುದಿಲ್ಲತಾನೆ?' ಎಂದರು. ಅವರದು ಅಂಥ ದೊಡ್ಡತನ. ಪುಟ್ಟಪ್ಪನವರಂಥವರು ಅಂಥ ವಿಷಯಗಳನ್ನು ಎತ್ತಿಕೊಂಡು ಬರೆದರೆ ಕಾದಂಬರಿಯ ಕೀರ್ತಿ ಇಂದಿಗೂ ಉಳಿದಿದೆ, ಬೆಳೆದಿದೆ, ಸ್ಮರಣೀಯವಾಗಿದೆ ಎಂಬ ಅಂಶವನ್ನು ತಾನೇ ದ್ಯೋತಿಸುತ್ತದೆ, – ಆ ಕೃತಿಯ ಅಮರತ್ವಕ್ಕೆ ಬಿಹ್ನೆಯಾಗಿ. 'ಸಂತೋಷವಾಗಿ ಮಾಡಿ. ನಿಮ್ಮ ಕಲ್ಪನಾವೈಭವ ಅದನ್ನು ತುಂಬ ಉಜ್ವಲವಾಗಿ ಮಾಡೀತು. ನಾನು ಏತಕ್ಕೊ ನಿದರ್ಶನವಾಗಿ ಅದನ್ನು ಬರೆದೆ. ನನಗೇಕೆ ಬೇಸರವಾಗಬೇಕು? ನನಗೂ ಸಂತೋಷವೇ' ಎಂದೆ. ನಾಲ್ಕಾರು ತಿಂಗಳಲ್ಲಿ 'ಮಹಾಶ್ವೇತೆಯ ಮಹಾಶ್ವೇತಾವರಣ' ಎಂಬ ಒಂದು ಭವ್ಯವಾದ ಅವರ ಪ್ರಬಂಧ ಬಂದಿತು. ಆ ಸಂತೋಷವನ್ನು ನಾನೂ ಅನುಭವಿಸಿದ್ದೇನೆ.

ಇನ್ನೊಂದೆರಡು ಸಂದರ್ಭಗಳನ್ನು ಹೇಳಿ ಆತ್ಮನಿವೇದನ ಮಾಡಿಕೊಳ್ಳಲು ಇಚ್ಛೆಯಾಗುತ್ತಿದೆ. ನಾನು 'ಹಿಂದೂ' ಪತ್ರಿಕೆಗೆ ಕನ್ನಡ ಪುಸ್ತಕಗಳನ್ನು ಕುರಿತ ಕಾವ್ಯಾವಲೋಕನ ಮಾಡುತ್ತಿದ್ದೆ. ಇತರ ವಿಷಯಗಳನ್ನು ಕುರಿತು ಮಾಡಿದ ವಿಮರ್ಶೆಗಳಿಗೆ ಬೇರೆ ಬೇರೆ ಬಗೆಯ ಟೀಕೆಗಳು ಬಂದುವು. ಕನ್ನಡದ ಒಬ್ಬ ಸಾಮಾನ್ಯ ಉಪಾಧ್ಯಾಯ ಭಾರತ ತತ್ತ್ವಶಾಸ್ತ್ರವನ್ನು ಅಥವಾ ಯಾವುದೊ ಅರ್ಥಶಾಸ್ತ್ರ, ರಾಜ್ಯಶಾಸ್ತ್ರಗಳಿಗೆ ಸಂಬಂಧಿಸಿದ ವಿಷಯಗಳನ್ನು ಕುರಿತು ಬರೆದು ಏಕೆ ಪ್ರತಿಷ್ಠೆ ತೋರಿಸಬೇಕು ಎಂಬುದು ಒಂದು ಕಡೆ; ಆ ಶಾಸ್ತ್ರಗಳಲ್ಲಿ ಡಿಗ್ರಿ ಪಡೆಯದ ಮುಕ್ಕ ಕನ್ನಡಕ್ಕೆ ಬಂದು ಸೇರಿಕೊಂಡು ಮೆರೆಯುತ್ತಿದ್ದಾನೆಂದು ಇನ್ನೊಂದು ಕಡೆ. 'ಇತೋ ಭ್ರಷ್ಟಃ ತತೋ ಭ್ರಷ್ಟಃ' ಎಂಬಂತೆ ನುಡಿಯುತ್ತಿದ್ದರು. ಸಂದರ್ಭ ಇದು: ಇಷ್ಟು ಜನರ ಗ್ರಂಥಗಳನ್ನು ಅವಲೋಕನ ಮಾಡಿದವನು ಪುಟ್ಟಪ್ಪನವರ ಒಂದು ಪುಸ್ತಕವನ್ನೂ ಮಾಡಲಿಲ್ಲ ಎಂಬುದು. ಬ್ರಾಹ್ಮಣನು

ಯಾವನಾದರೂ ಬರೆದಿದ್ದರೆ ಬೇಕಾದ ಹಾಗೆ ಪ್ರಶಂಸೆಮಾಡುತ್ತಿದ್ದ ಜನ, ಇಷ್ಟು ಉತ್ತಮ ಸೇವೆಯನ್ನು ಮಾಡಿದವರ ಗ್ರಂಥಗಳನ್ನು ಕುರಿತು ಒಂದು ಪ್ರಶಂಸೆಯ ಮಾತನ್ನೂ ಆಡಲಿಲ್ಲ ಎಂದು. ಇದು ಬ್ರಾಹ್ಮಣ-ಅಬ್ರಾಹ್ಮಣದ ಮಾತಲ್ಲ. ಆ ಕಾರ್ಪಣ್ಯ ಸಂಕೋಚ ಎಂದಿಗೂ ನನ್ನಲ್ಲಿ ಸುಳಿದಿಲ್ಲ. ಕುವೆಂಪು ಅದನ್ನು ಬಲ್ಲರು. ಅವರ 'ಕೊಳಲು' ಕಾವ್ಯ ಸಂಗ್ರಹವಾಗುವ ಬಹುಮುಂಚಿನಿಂದ ನಾನು ಅವರ ಕವಿತೆಗೆ ಒಲಿದವನು. ಲೋಪದೋಷ ಯಾರಲ್ಲಿಲ್ಲ? ಷೇಕ್ಸ್‌ಪಿಯರಲ್ಲಿಲ್ಲವೆ? ಕಾಳಿದಾಸನಲ್ಲಿ, ವಾಲ್ಮೀಕಿಯಲ್ಲಿ, ಮಿಲ್ಟನ್, ವರ್ಡ್ಸ್‌ವರ್ತ್‌ನಲ್ಲಿ, ಗ್ರೇತೆಯಲ್ಲಿ ಇಲ್ಲವೆ? 'ಹೋಮರ್ ನಾಡ್ಸ್' ಎಂದಿದೆ. 'ದೋಷೈಕ ದೃಕ್' ಆಗಿರುವವನಿಗೆ ಏನೊ ಶಾಪವಿದೆ. 'ವಿದ್ವಾನ್ ವಿಪಶ್ಚಿತ್ ದೋಷಜ್ಞಃ' ಎಂದು ವಿದ್ವಾಂಸನನ್ನು ದೋಷಜ್ಞನೆಂದು ಕರೆದಾಗಲೂ ಅತ್ಯುತ್ತಮ ಕೃತಿಯ ರಸಚರ್ವಣದಲ್ಲಿ ರಸಿಕನೂ ಸಹೃದಯನೂ ಆಗಿರುವವರೆಗೂ ಏನೊ ಒಂದು ಸಣ್ಣ ಸಂಗತಿ – ಅಕ್ಷರವೊ ಶಬ್ದವೊ ಸಾಲೊ – ಇಲ್ಲದಿದ್ದಿದ್ದರೆ, ಬೇರೆಯಾಗಿದ್ದರೆ ಇದು ಪರಿಪೂರ್ಣವಾಗಿರುತ್ತಿತ್ತಲ್ಲ ಎಂಬ ರಸಸೂಕ್ಷ್ಮಜ್ಞತೆಯುಳ್ಳವನು ಎಂದು ಅರ್ಥ ಮಾಡಬೇಕೆ ಹೊರತು ದೋಷವನ್ನೇ ಎತ್ತಾಡಿ ಕುಕ್ಕಿ ಮಾತಾಡುವವನು ಎನ್ನಬಾರದು. ನಾರಣಪ್ಪನನ್ನು ಎಷ್ಟು ಜನ ಬೈದಿಲ್ಲ? ನರಯಣನು, ನಾರಯಣ ಎಂದು ಬರೆದು ಬರೆದು ಕನ್ನಡವನ್ನು ಹಾಳುಮಾಡಿಲ್ಲವೆ? – ಎಂದರು. 'ಕೆರದಲ್ಲಿ ಕುಯ್ಯುವೆನು ನಾಲಗೆಯ' ಎಂದು ಬರೆದು ಶಾನುಭೋಗನ ಕೋಪವನ್ನು ಭಾರತದಂತಹ ಕತೆಯ ಆವರಣಕ್ಕೆ ಹರಿಸಿದ ಕೀಳುಸುಳಿ ಎಂದುದುಂಟು. ಪಂಪನ ಒಂದೆರಡು ಸನ್ನಿವೇಶಗಳನ್ನು ಎತ್ತಾಡಿ ಅವನೇ 'ಗೂಡಾರದ ಕವಿ' ಎಂಬಂತೆ ರನ್ನನು ವರ್ಣಿಸಿದ್ದು ಎಂದು ಹೇಳಿದವರೂ ಉಂಟು. ನಿಜವಾದ ಮನಃಶುದ್ಧಿಯುಳ್ಳ ಸಹೃದಯನಾಗಬೇಕೆಂದು ಬಯಸುವ ಯಾವ ಕವಿಗೂ ಗುಣಪ್ರಕಾಶಕ್ಕೆ ನಲಿವು ಬರುತ್ತದೆ; ದೋಷದ ಕಡೆಗೇ ಪ್ರಥಮತಃ ಕಣ್ಣು ಹೋಗುವುದಿಲ್ಲ. 'ಕುಮಾರವ್ಯಾಸನು ಹಾಡಿದನೆಂದರೆ ಕಲಿಯುಗ ದ್ವಾಪರವಾಗುವುದು' ಎಂಬ, ಮಕ್ಕಳ ಮನಸ್ಸನ್ನು ಸೆಳೆಯಬಲ್ಲ 'ಕಿಂದರಿ ಜೋಗಿ'ಯಂತಹ ಪದ್ಯವನ್ನು ರಚಿಸಿದ ಉತ್ತಮ ಕವಿಯೂ ಎಷ್ಟೋ ಬಗೆಯ ಕೃತಿಸೇವೆಯನ್ನು ಮಾಡಿದ್ದಾರೆಂದು ನಾನು ಬಲ್ಲೆ. ಕಷ್ಟ ಹೀಗಿತ್ತು: ಬರವಣಿಗೆಯ ಪ್ರವಾಹದಲ್ಲಿ ಯಾವುದಾದರೂ ಒಂದು ಮಾತನ್ನು ಅಪಾರ್ಥ ಮಾಡಿಕೊಂಡು ನಮ್ಮನಮ್ಮಲ್ಲಿ ವೈಮನಸ್ಯವನ್ನು ತರಬಲ್ಲ ಒಂದು ಆವರಣವಿತ್ತು ಆಗ. ಯಾವ ಕರ್ಮಬಂಧದಿಂದಲೊ ನಾನು ಒಂದು ಜಾತಿಯಲ್ಲಿ ಹುಟ್ಟಿದೆ. ಅವರು ಒಂದರಲ್ಲಿ ಹುಟ್ಟಿದರು. ಈ ವಿರಸಗಳು ಹೇಗೆ ಹುಟ್ಟಿದವೂ ಬೆಳೆದವೊ ನಾನು ಬಲ್ಲೆ. ಜಾತಿಗೆ ಸಂಬಂಧಿಸಿದ ಮಾತು ಬಹಳ ಹಳತಾದರೂ ಬಹುಕಾಲ ಅಡಗಿ ಕುಳಿತಿತ್ತು. 'ಕುಲಮನೆ ಮುನ್ನ ಮುಗ್ಗಡಿಪಿರೇಂಗಳ-' (X–21) ಎಂಬ ಪಂಪನ ಪದ್ಯ ಒಂದು ಸಾವಿರ ವರ್ಷಗಳಿಗೆ ಮುಂಚಿನದೇ ಅಲ್ಲವೆ? ಆ ಹೊತ್ತಿಗೆ ಕರ್ಣನಿಗೆ ತಾನು ಕೌಂತೇಯನೆಂಬ ಸಂಗತಿ ತಿಳಿದಿದ್ದರೂ ಅವನ ಮಾತಿನಲ್ಲಿ ನೋವಿದೆ, ಮುದುಗಣ್ಣಗಳ ಪ್ರಶಂಸೆಯಿದೆ; ಸ್ವಾಭಿಮಾನದ ಹಿರಿಮೆಯಿದೆ. ಕೆಲವು ಜನ ಪಕ್ಷಗಳನ್ನು ಕಟ್ಟಿ ವಿಷವೃಕ್ಷದ ಬಿತ್ತವನ್ನು ಮದರಾಸಿಂದ ತಂದು ಮೈಸೂರಲ್ಲಿ ಬಿತ್ತಿದರು. ಇದು ವೃಕ್ಷವಾಯಿತು; ಜನರ ಮನಸ್ಸನ್ನು ಕಲುಷಿತಗೊಳಿಸಿತು.

ಸರ್ವಥಾ ನನ್ನ ಸಾಹಿತ್ಯದೃಷ್ಟಿಗೆ ಜಾತಿವೈಮನಸ್ಯ ಬರಲಾರದಾದರೂ ಇದು ಬ್ರಾಹ್ಮಣ ಮಾಡಿದ ಟೀಕೆ ವಿಮರ್ಶೆ ಎಂದಾಡಿದರೆ ಇದು ಒಬ್ಬರಿಗೆ ಮಾಡಿದ ಅನ್ಯಾಯವಾಗುತ್ತಿತ್ತು. ಎರಡನೆಯದು ನಾವಿಬ್ಬರೂ ಒಂದೇ ವಿಶ್ವವಿದ್ಯಾಸಲಯದಲ್ಲಿ ಉಪಾಧ್ಯಾಯರಾಗಿದ್ದವರು. ಒಂದು ವಿಚಿತ್ರ ಸನ್ನಿವೇಶದಲ್ಲಿ ನಮ್ಮಲ್ಲಿ ಮೂವರಿಗೆ ಸ್ಪರ್ಧೆ ಉಂಟುಮಾಡಿ ತಾರತಮ್ಯಗಳನ್ನು ಪದವಿಯ ವ್ಯತ್ಯಾಸಗಳನ್ನು ಮಾಡಿದ ಕಥೆಯಿತ್ತು. ಅದೆಲ್ಲ ಹಾಳಾಗಲಿ; ಸ್ನೇಹಿತರಾಗಿದ್ದ ನಮ್ಮ ವಿಶ್ವಾಸ ಕೆಡಿಸಿ, ಅದರಲ್ಲಿಯೂ ರಾಮಾಯಣದರ್ಶನಕ್ಕೆ ಪ್ರಶಸ್ತಿ ಕೊಡುವ ಸಂದರ್ಭದಲ್ಲಿ, ಇತರ ಸಂಬಂಧಗಳಲ್ಲಿ 'ಕಟುಟೀಕೆ ಮಾಡಿದರೆ ರಕ್ತದ ಕೋಡಿಗಳು ಹರಿದಾವು' ಎಂದು ಬಳ್ಳಾರಿಯಿಂದ ಒಬ್ಬರು ಬರೆದುದುಂಟು. ಬೇರೆ ಯಾರಾದರೂ ಅವರ ಕೃತಿಗಳನ್ನು ಕುರಿತು ಬರೆಯಲಿ ಎಂದು ನಾನು ಮಾಡಲಿಲ್ಲ. ಅವರು ಅದನ್ನು ಮನಸ್ಸಿಗೆ ತಂದುಕೊಳ್ಳಲಾರರು, ತಂದುಕೊಳ್ಳಲಿಲ್ಲ ಎಂದುಕೊಂಡಿದ್ದೇನೆ. ಹಲವೇಳೆ ಅಸಲು ಕುಳಕ್ಕಿಲ್ಲದ ಚಿತ್ತವೃತ್ತಿ ಪಾಕ್ಷಿಕರಿಗೆ ಅಧಿಕವಾಗಿರುತ್ತದೆ. ಇದರಲ್ಲಿ ಲೌಕಿಕ ಸಂಗತಿಗಳಿವೆಯಾಗಿ ನನ್ನ ಕೈ ಮನಸ್ಸು ಹಿಮ್ಮೆಟ್ಟಿತು. ಜೊತೆಗೆ ಒಂದೇ ಇಲಾಖೆಯಲ್ಲಿ ಕೆಲಸ ಮಾಡುವವರು ನಾವು. ನನಗೆ ಆಗ ಮೇಲ್ಪಟ್ಟ ಸ್ಥಾನದಲ್ಲಿರುವವರ ಕೃತಿಯನ್ನು ಕುರಿತು ಟೀಕೆ ಬಳಸಬಾರದು. ಸ್ವಲ್ಪ ಲೋಪದ ನೆಳಲು ಕಾಣಿಸುವ ವಾಕ್ಯ ಕಂಡರೂ ಅಸೂಯೆ, ಅಸಹನೆ ಎನ್ನಬಹುದಾಗುತ್ತದೆ. ಒಂದು ಕಾಲದಲ್ಲಿ ಡಾ. ವೆಂಕಟಸುಬ್ಬಯ್ಯನವರಿಗೂ ಆರ್. ನರಸಿಂಹಾಚಾರ್ಯರಿಗೂ ಬೆಳೆದ ವಿಷಮತೆ ಹೀಗೆ ಉಗ್ರವಾಯಿತು. ವೆಂಕಟಸುಬ್ಬಯ್ಯನವರು ಕೆಲಸ ಬಿಡಬೇಕಾಯಿತು; ನನಗೆ ಕೆಲಸ ಹೋಗುವ ಸಂದರ್ಭವಿಲ್ಲ. ವೈಮನಸ್ಯ ಬೆಳೆದು ಉಳಿಯುವ ಸಂದರ್ಭವಿತ್ತು. ಚಿದಂಬರದಲ್ಲಿ ನಡೆದ ಇಂಡಿಯನ್ 'ಪಿ.ಈ.ಎನ್.' ಸಮ್ಮೇಳನದಲ್ಲಿ 'ಕನ್ನಡ ರಾಮಾಯಣಗಳು' ಎಂಬ ವಿಷಯದಲ್ಲಿ ನಾನು ಲೇಖನ ಬರೆದು ಮಾತಾಡಿದ ಸಂದರ್ಭದಲ್ಲಿ ನಾನು 'ದರ್ಶನ'ದಂಥ ಕೃತಿಯ ಮಾತನ್ನೇ ಎತ್ತಲಿಲ್ಲ ಎಂದು– ನಾನೇ ಒಮ್ಮೆ ಸಂಪಾದಕನಾಗಿದ್ದ, ಮೊದಲಿಂದಲೂ 'ಪ್ರಬುದ್ಧ ಕರ್ಣಾಟಕ'ದ ಸಂಬಂಧ ಸ್ನೇಹವುಳ್ಳವನಾಗಿರುವಾಗ – ಪ್ರಬುದ್ಧ ಕರ್ಣಾಟಕದಲ್ಲಿ ಪ್ರಕಟಿಸಿ, ನನ್ನ ಉತ್ತರದ ಅತ್ಯಲ್ಪಭಾಗವನ್ನು ಮಾತ್ರ ಪ್ರಕಟಿಸಲಾಯಿತು. ಇನ್ನೊಂದು ವಿಚಿತ್ರ ಸನ್ನಿವೇಶ ಬೆಳೆದು ಅವರಿಗೆ ಅತೃಪ್ತಿಯೂ ಅನ್ಯಾಯವೂ ಆಗಬಹುದೆಂದು ಅವರಿಗೇ ತಿಳಿಸಿ, ಅದು ನಮ್ಮಲ್ಲಿ ವಿರಸ ಕಾರಣವಾಗದಂತೆ ನಾನು ನಡೆದುಕೊಳ್ಳಬೇಕಾಗಿ ಬಂತು. ಅದನ್ನವರು ಬಲ್ಲರು. ಕಾಲೇಜ್ ಕರ್ಣಾಟಕ ಸಂಘದ ಯಾವುದೊ ಚುನಾವಣೆಯ ಸಂಬಂಧದ ಮಾತು ಅದು. ಅವರು ದೊಡ್ಡ ಮನಸ್ಸು ಮಾಡಿ ವಿವರವಾಗಿ ಪ್ರಕರಣವನ್ನು ತಿಳಿಸಿದಾಗ ನನ್ನ ಮಾತನ್ನು ಒಪ್ಪಿಕೊಂಡರು.

ಕಾಲೇಜುಗಳಲ್ಲಿ ನಾವು ಜೊತೆಯಲ್ಲಿ ಕೆಲಸ ಮಾಡುವಾಗಲೂ ಅವರು ತುಂಬಾ ಸೌಮನಸ್ಯದಿಂದ ಪ್ರಾಚಾರ್ಯರಾಗಿ ನನ್ನನ್ನು ನಡಸಿಕೊಂಡಿದ್ದಾರೆ. ಯಾರೊ ಕೆಲವರು ಕ್ಲಾಸುಗಳನ್ನು ತೆಗೆದುಕೊಳ್ಳದೆ ರಜೆ ತೆಗೆದುಕೊಳ್ಳದೆ ಪಾಠಗಳಿಗೆ ತಪ್ಪಿಸಿಕೊಳ್ಳುತ್ತಿದ್ದಾರೆ ಎಂಬುದನ್ನು ನಿವಾರಿಸುವುದಕ್ಕಾಗಿ, ಪ್ರತಿಯೊಬ್ಬ ಉಪಾಧ್ಯಾಯನೂ ತನ್ನ ಪ್ರೊಫೆಸರ್

ರೂಮಿಗೆ ಹೋಗಿ ತನ್ನ ಹಾಜರಿ ರುಜು ಮಾಡಬೇಕೆಂದು ಕಾಲೆಜ್ ಕೌನ್ಸಿಲ್ ತೀರ್ಮಾನ ಮಾಡಿತು. ಇದನ್ನು ಕೇಳಿದ ಕೂಡಲೆ ನಾನು ಕುಳಿತಲ್ಲಿಂದಲೆ ಪ್ರತಿಭಟಿಸಿದೆ. 'ವಿದ್ಯಾರ್ಥಿಗಳಿರುವಲ್ಲಿಗೆ ರಿಜಿಸ್ಟರ್ ತೆಗೆದುಕೊಂಡುಹೋಗಿ ಹಾಜರಿ ಹಾಕಿಸುತ್ತೀರಿ; ಈವರೆಗೂ ಉಪನ್ಯಾಸಕರ ಸಾಮಾನ್ಯ ರೂಮಲ್ಲಿ ಅವರ ರುಜು ತೆಗೆದುಕೊಳ್ಳುತ್ತಿದ್ದಿರಿ; ಈಗ ಪ್ರತಿಯೊಬ್ಬರೂ ಅವರವರ ಪ್ರೊಫೆಸರ್ ರೂಮಿಗೆ ಹೋಗಿ ರುಜು ಹಾಕಿ ಬಂದಿದ್ದೇವೆ ಎಂದು ತೋರಿಸಬೇಕಾಗುವುದು ಅನ್ಯಾಯ. ರುಜು ಹಾಕಿ ಬಂದಮೇಲೂ ಅವರು ಪಾಠಗಳನ್ನು ತೆಗೆದುಕೊಂಡರು ಎಂದು ನಿರ್ಣಯಿಸುವುದು ಹೇಗೆ? ಅಂಥವರನ್ನು ಕರೆಸಿ ಪ್ರಿನ್ಸಿಪಲ್ ಎಚ್ಚರ ಕೊಡುವುದು ಮೇಲಲ್ಲವೆ?' – ಎಂದೆ. ಅಥವಾ ಕಾಲೆಜಿನ ಎಲ್ಲ ಉಪಾಧ್ಯಾಯರೂ ಪ್ರಿನ್ಸಿಪಲ್ ರೂಮಲ್ಲಿ ರುಜು ಹಾಕಿ ಬರುವಂತೆ ಮಾಡಿ. ಅದಾದರೂ ಒಂದು ತೀರು. ಪ್ರೊಫೆಸರ್ ರೂಮಲ್ಲಿ ಇಲ್ಲದಿದ್ದರೊ? ಇದ್ದರೂ ಬೇರೆ ಕ್ಲಾಸಲ್ಲಿಯೊ ಕೆಲಸದಲ್ಲಿಯೊ ಇದ್ದರೊ? ಇದು ಹೀನಾಯ ಉಂಟುಮಾಡುತ್ತದೆ. ಪ್ರತಿಯೊಬ್ಬ ಪ್ರೊಫೆಸರಿಗೂ ಅಟೆಂಡರ್ ಇರುತ್ತಾನೆ. ಅವನ ಕೈಲಿ ಕಳಿಸಿ ರುಜು ಮಾಡಿಸಿಕೊಳ್ಳಬಹುದು ಎಂದು ನಾನು ಹೇಳಿದೆ. ಈ ರೂಲನ್ನು ಬದಲಾಯಿಸದಿದ್ದರೆ ಬೇರೆ ಊರಿಗೆ ನನ್ನನ್ನು ವರ್ಗಾಯಿಸಿ ಎಂದು ಕೂಡ ಹೇಳಿದೆ. ಆ ಬಗೆಗೆ ನಮ್ಮಿಬ್ಬರ ನಡುವೆ ನಡೆದ ಒಂದು ಮಾತು ನಾನು ಹೇಗಾಡಿದೆನೊ ಏನೊ. ಕಿಟಕಿಯ ಹೊರಗಡೆ ನಿಂತು ಪ್ರೊಫೆಸರ್ ಮಾತಾಡುತ್ತಿದ್ದರು. ನಾನು ನನ್ನ ಕೊಠಡಿಯ ಒಳಗಿದ್ದೆ. 'ಉಪಾಧ್ಯಾಯರಿಗೆ ಅವಮಾನ ಮಾಡಬೇಕೆಂದು ನಮ್ಮಲ್ಲಿ ಯಾರಿಗೂ ಯೋಚನೆ ಇರಲಿಲ್ಲ' – ಎಂಬಂತೆ ಮಾತ್ರ ಮಾತು ನಡೆಯಿತು. ಇದು ಅವರಿಗೆ ಒಪ್ಪಿತೊ ಇಲ್ಲವೊ ತಿಳಿಯಲಿಲ್ಲ. ಆದರೆ ಅವರು ಒಂದು ಮಾತೂ ಆಡಲಿಲ್ಲ. ಆ ಬಗೆಗೆ ಅವರಲ್ಲಿ ಯಾವ ವಿರೋಧಪ್ರತಿಕ್ರಿಯೆಯೂ ಉಂಟಾಯಿತೆಂದು ನನಗೆ ಈವರೆಗೆ ತಿಳಿದುಬಂದಿಲ್ಲ. ಅವರಿಗೆ ಅರ್ಥವಾಯಿತು. ಆ ಸಂದರ್ಭವನ್ನು ನೆನಸಿಕೊಂಡು ಮೂವತ್ತು ವರ್ಷಗಳ ತರುವಾಯ ಇದನ್ನು ಬರೆಯುತ್ತಿರುವ ನನಗೆ ಅವರಿಗೆ ನೋವಾಗುವ ಮಾತನ್ನೇನಾದರೂ ಆಡಿದೆನೇನೊ ಎಂಬ ಶಂಕೆಯಿದೆ. ಅದಕ್ಕಾಗಿ ಇದು ಸಮಾಧಾನ ವಾಕ್ಯವಾಗಲಿ ಎಂದು ಬರೆದಿದ್ದೇನೆ.

ಅವರ ವಿವಾಹಸಮಯದಲ್ಲಿ ನನಗೆ ವಿಶ್ವಾಸದಿಂದ ಲಗ್ನಪತ್ರಿಕೆ ಕಳಿಸಿದ್ದರು. ನನ್ನ ಹರುಕುಮುರುಕು ರಚನೆಯ ಒಂದು ಕವನವನ್ನು ನನ್ನ ಕಾಣ್ಕೆಯಾಗಿ ಕಳಿಸಿಕೊಟ್ಟಿದ್ದೆ. ಅದು 'ಸಪ್ತಪದಿ' ಎಂಬ ಹೆಸರಲ್ಲಿ 'ನೆಳಲು–ಬೆಳಕ'ಲ್ಲಿ ಅಚ್ಚಾಗಿದೆ....ಧಾರವಾಡದಲ್ಲಿ ನಡೆದ ಒಂದು ಕಮಿಟಿಯಲ್ಲಿ ಗೋಕಾಕರು, ಮಾಳವಾಡರು, ನಾನು ಜ್ಞಾನಪೀಠದ ಬಹುಮಾನ ಸಂದರ್ಭದಲ್ಲಿ ಕುವೆಂಪುರವರಿಗೆ ಅದು ಸಲ್ಲಬೇಕೆಂದು ಒಮ್ಮತದಿಂದ ತೀರ್ಮಾನಿಸಿ ಸಿಫಾರಸು ಮಾಡಿದೆವು. ಅವರಿಗೆ ಬಹುಮಾನ ಸಲ್ಲುವ ಸಂದರ್ಭದಲ್ಲಿ ದೆಹಲಿಗೆ ಹೋಗಿ ಆ ಸಮಾರಂಭವನ್ನು ವೀಕ್ಷಿಸಿದೆ. ಆ ಮುಂಚೆ ಪ್ರಶಸ್ತಿ ಪ್ರಕಟವಾದ ಸಂದರ್ಭದಲ್ಲಿ ನನ್ನ ಅಭಿನಂದನೆಯ ಕಾಗದಕ್ಕೆ ಕೂಡಲೇ ಬರೆದ ಉತ್ತರವೂ ತುಂಬ ಹಾರ್ದವಾದ್ದು. ಮಾರನೆಯ ಬೆಳಗ್ಗೆ ವಿದ್ವತ್‌ಸಭೆಯೊಂದರಲ್ಲಿ ಅವರು ಇಂಗ್ಲಿಷಲ್ಲಿ ಮಾಡಿದ ಭಾಷಣವನ್ನೂ ನಾನು ಕೇಳಿದೆ. ಬೆಂಗಳೂರು ಟೌನ್‌ಹಾಲಲ್ಲಿ ಅವರಿಗೂ ಉಮಾಶಂಕರ ಜೋಶಿ

ಅವರಿಗೂ ಸನ್ಮಾನಸಮಾರಂಭ ಏರ್ಪಡಿಸಿದ್ದಾಗಲೂ ಹೋಗಿದ್ದೆ. 'ಎಲ್ಲ ಕಡೆಯೂ ನೀವಿದ್ದೀರಿ' ಎಂಬಂತೆ ನನಗೆ ಕುವೆಂಪು ನುಡಿದರು. ನಾನೆಂದೆ: 'ಕನ್ನಡ ಕವಿಗೆ ಅಖಿಲ ಭಾರತ ಮರ್ಯಾದೆ ದೊರೆತು ಡೆಲ್ಲಿಯಲ್ಲಿ, ನನ್ನೂರಿನ ಪುರಭವನದಲ್ಲಿ ನಿಮ್ಮಿಬ್ಬರಿಗೂ ಸನ್ಮಾನ ಮಾಡುವಾಗ ಈ ಊರಿನವನಾದ ನಾನು ಇರಬೇಡವೆ?' ಎಂದು. ಯಾವ ಅತಿಶಯತೆಯಿಂದಲೂ ಇದನ್ನು ಮಾತನಾಡುತ್ತಿಲ್ಲ. ಅವರ ಕೀರ್ತಿ ಮೊಳೆದ ಕಾಲದಿಂದಲೂ ಅದು ಹೆಮ್ಮರವಾಗಿ ಧಾರಾಳವಾಗಿ ಹೂ ಹಣ್ಣು ಬಿಡುವ ಕಾಲದವರೆಗೂ ಒಂದು ಸ್ನೇಹ ಬಾಂಧವ್ಯವೇ ನಮ್ಮ ನಡುವೆ ಬೆಳೆದುಬಂದಿರುವಾಗ ಇತರ ಯಾವ ಕ್ಷುದ್ರಕಲ್ಪನೆಗಳಿಗೂ ಅವಕಾಶವಿಲ್ಲವೆಂದು ತಿಳಿಸಲು ಮಾತ್ರ ಬರೆದಿದ್ದೇನೆ. ಇನ್ನೊಂದು ಸಂಗತಿಯನ್ನು ನಿವೇದಿಸಿಕೊಳ್ಳಬಹುದೇನೊ. ಅವರ ಎರಡು ನಾಟಕಗಳು, ಮೂರು ನಾಟಕಗಳು, ರಕ್ತಾಕ್ಷಿ ಇವನ್ನು ಅಚ್ಚಿನ ಮನೆಯಲ್ಲಿ, ಪ್ರಕಟನೆಯ ಕಾರ್ಯದಲ್ಲಿ ರಾಮಮೋಹನ ಕಂಪನಿಗಾಗಿ ದುಡಿದವನು ನಾನು. 'ನವಿಲ'ನ್ನು ಅಚ್ಚು ಮಾಡಿಸಿದವನೂ ನಾನು.

ಈ ನಾಡಿನಲ್ಲಿ ಸ್ನೇಹಗಳು ಬೆಳೆದರೆ ಒಂದು ಕಷ್ಟ; ಬೆಳೆಯದಿದ್ದರೆ ಇನ್ನೊಂದು ಕಷ್ಟ. ಜಾತಿಪಂಥಗಳ ವಿಷಚಕ್ರ ಎಂದಿಗಾದರೂ ಇಲ್ಲಿ ಮುರಿದೀತೊ ಇಲ್ಲವೊ. ಇನ್ನೇನು ಹಿಂಸೆ ಕ್ರೌರ್ಯಗಳನ್ನು ತಂದಾವೊ ಎಂಬ ಭೀತಿಶಂಕೆಗಳು ನಾಡಜೀವನವನ್ನು ಗಾಸಿಗೊಳಿಸುತ್ತಿರುವಾಗ ಕೆಳೆ, ಸಹಾನುಭೂತಿಗಳ ಸೌಮನಸ್ಯ ಮಾತ್ರ ಬೆಳೆದರಾದೀತು. ಇರಬಹುದಾದ ಕಾರ್ಪಣ್ಯಗಳು ಮಾಯವಾಗಲಿ, ಇಂದಿನ ಬದುಕೂ ನಾಳಿನ ಬದುಕೂ ಹೊಂದಿ ಸಮರಸದಲ್ಲಿ ಬೆಳೆಯಲಿ, ಸ್ನೇಹಕೃತ್ಯಗಳಲ್ಲಿ ಭಾರತದ ಎಲ್ಲ ವರ್ಗಗಳವರೂ ಸೇರಿ ದುಡಿವಂತಾಗಲಿ ಎಂಬ ಆಸೆ – ಆಕಾಂಕ್ಷೆಗಳಿಗೆ ಜನ ಒಲಿದು ಸೇರಬೇಕು. ಸ್ನೇಹಿತರಾದವರ ನಡುವೆ ವಿಷವೃತ್ತದ ಪ್ರಭಾವಗಳು ಪ್ರಬಲಿಸಿದರೆ ನಾಳಿನ ಕಲ್ಯಾಣ ರೂಪಿತವಾಗಲಾರದೆಂಬ ಮನೋವೃತ್ತಿ ನನಗೆ ಹಿರಿಯರೂ ಗುರುಗಳೂ ಕಲಿಸಿರುವ ಮಾರ್ಗ. ಕುವೆಂಪು ಅವರ ಸಾಧನೆ, ಗುಣಶೀಲ ಇನ್ನೊಬ್ಬರ ಪ್ರಶಂಸೆಗೆ ಸಿಫಾರಸಿಗೆ ಕಾದಿಲ್ಲ. ಸ್ವಶಕ್ತಿ ಬಲದಿಂದ ನಟ್ಟುನಿಂತಿದೆ.

'ಕಿಶೋರಚಂದ್ರವಾಣಿ'ಯಾಗಿದ್ದು, ಕೆ. ವಿ. ಪುಟ್ಟಪ್ಪನವರ ವಾಣಿಯಾಗಿ, ಕುವೆಂಪುವಾಗಿ ಒಂದು ಬೆಳ್ಳರಿಯ ಕಾಂತಿಸ್ತಂಭದಂತೆ, ಪ್ರಭಾವದಂತೆ, ತನ್ನ ನಿಷ್ಠೆಯಲ್ಲಿ ಬೆಳೆದು ನಿಂತವರು ಅವರು. ಜೀವನದ ನೋವನ್ನು ನಷ್ಟವನ್ನು ಅತಿಹತ್ತಿರದಲ್ಲಿ ಕಂಡು ಕೊರಗಿದ, ಬಳಲಿದ ವ್ಯಥೆಪಡುವ ಸಂದರ್ಭಗಳು ಅವರಿಗೆ ಹೆಚ್ಚಾಗಿ ಬಾರದಿದ್ದುದು, ಅವರ ಕಾವ್ಯದಲ್ಲಿ ಗಸಿಯಾಗಿ, ಗಾಸಿಯಾಗಿ ಆಗದುದು ನಮ್ಮ ಕವಿತೆಯ ಪುಣ್ಯಗಳಲ್ಲಿ, ಸಂತೋಷಗಳಲ್ಲಿ ಒಂದು; ಕನ್ನಡ ಸಾಹಿತ್ಯದ ಒಂದು ಅದೃಷ್ಟ. ಅಲ್ಲಿ ಎಲ್ಲಿಯಾಗಲಿ ನೋವು, ಸೊರಗು, ದೈನ್ಯ, ತಬ್ಬಲಿತನಗಳ ಸಂಚಾರವಿಲ್ಲ. ಯಾವ ಭಂಗವೂ ಅವರನ್ನು ಕಾಡಿಲ್ಲ, ಪೀಡಿಸಿಲ್ಲ. ನೋವರಿಯದ ಒಂದು ಕವಿತಾವಿಲಾಸ ಅವರ ಬದುಕನ್ನು, ಬಾಳಮೌಲ್ಯಗಳನ್ನು ರೂಪಿಸಿದೆ. ಈ ಜೀವನಸಂತೋಷ ಪರಮಾವಧಿ ಕಾಲ ಹಾಗೆಯೇ ಇದ್ದು ಇತೋಪಿ ಅತಿಶಯವಾದ ಸತ್ಫಲಗಳು ಅವರ ಬದುಕಿಗೂ ನಾಡಿಗೂ ದೊರಕುತ್ತಿರಲಿ.

ನಿಟ್ಟೂರು ಶ್ರೀನಿವಾಸರಾವ್

೧೯೨೩ರ ಫೆಬ್ರುವರಿ-ಮಾರ್ಚ್ ತಿಂಗಳ ಸುಮಾರಲ್ಲಿ ಸೆಂಟ್ರಲ್ ಕಾಲೇಜ್ ಕರ್ನಾಟಕ ಸಂಘದ ವಾರ್ಷಿಕ ಅಧಿವೇಶನ ನಡೆಯಿತು. ವೆಂಕಣ್ಣಯ್ಯನವರು ಸಂಘದ ಮುಖ್ಯ ಕಾರ್ಯಕರ್ತರಾಗಿದ್ದುದರಿಂದ ಆ ಸಂಬಂಧದ ತಿಂಡಿತೀರ್ಥ ಉಪಚಾರಗಳೆಲ್ಲ ಒಂದು ವಿಶೇಷ ವಿಚಕ್ಷಣೆಯಿಂದ ನಡೆಯಿತು. ಈಗ ಸೆಂಟ್ರಲ್ ಕಾಲೇಜ್ ಲೌಂಜ್ ಭಾಗ ಹಿಂದೆ ಲೈಬ್ರರಿ ಆಗಿತ್ತು. ಹೊರಪಡಸಾಲೆ ದಾಟಿ ಒಳಕ್ಕೆ ಹೋಗುವ ಮುಂಚೆ ಎಡಕ್ಕಿರುವ ಕೊಠಡಿ ಹಿಂದೆ ಬಾಟನಿ ಪ್ರೊಫೆಸರ್ ಕೊಠಡಿ ಆಗಿತ್ತು. ಆ ಸಲ ಅಲ್ಲಿ ಕೇವಲ ಫಲಾಹಾರ ಒಂದನ್ನು ಏರ್ಪಡಿಸಿದ್ದರು. ಕಾರ್ಯನಿರ್ವಾಹಕ ಮಂಡಲಿಯ ಹೊರಗಿಂದ ಆಹೂತರಾಗಿದ್ದ ಕೆಲವೇ ಮಂದಿಯಲ್ಲಿ ನನಗೆ ಕರೆಯಿತ್ತು. ಈಗಿನ ವಿಶ್ವೇಶ್ವರಪುರವೆಲ್ಲ ೧೯೧೪-೧೫ಕ್ಕೆ ಹಿಂದೆ ಸೇಬು, ದ್ರಾಕ್ಷಿ, ಅಂಜೂರದ ತೋಟವಾಗಿತ್ತು. ಮನುಷ್ಯರ ಪ್ರವೇಶವಾದ ಮೇಲೆ, ಅವರು ಮನೆಮಠ ಕಟ್ಟಿಕೊಳ್ಳುತ್ತೇನೆಂದು ನಿರ್ಣಯಿಸಿದ ಮೇಲೆ ಹಣ್ಣೆಲ್ಲಿ, ಹಾಲೆಲ್ಲಿ? ಮನೆ, ಜನ, ವ್ಯಾಪಾರ, ಲಾಭ, ಲೋಭ ಮಾತ್ರ ಬೆಳೆದಿವೆ. ಆಗ ಸೇಬು ಈಗಿನಷ್ಟು ಪುಷ್ಕಳವಾಗಿರಲಿಲ್ಲ. ಹೊರಗಿನಿಂದ ಆಮದಾಗಿರಲಿಲ್ಲ. ಇನ್ನೂ ಬೆಂಗಳೂರು ಸೇಬೇ ಇರುತ್ತಿತ್ತು. ನಮ್ಮ ಸೇಬಿನ ಗಿಡಗಳು ಎತ್ತರದಲ್ಲಿ ಚಿಕ್ಕವು. ಉತ್ತರದಲ್ಲಿ, ವಿದೇಶಗಳಲ್ಲಿನಂತೆ ಸಾವಿರಾರು ಬಿಡುವ ಮರಗಳಲ್ಲ. ಮಾರ್ಕೆಟ್ಟಿನಲ್ಲಿ ಅಂಗಡಿಗಳಲ್ಲಿ ಪೇರಿಸುತ್ತಿದ್ದ ಹಾಗೆ, ಮೇಜಿನ ಮೇಲೆ ಸದ್ಯ ಮಧ್ಯಕ್ಕೆ ದೊಡ್ಡ ಸೈಜಿನ ಕೊಡಗಿನ ಕಿತ್ತಳೆ-ನಾಗಪುರದ 'ಸಂತ್ರ'ವಾಗಲಿ, ಬಹುಕಾಲ ಕಾಪಾಡಿಟ್ಟು ಬೆಂಡು ತೇಲಿದ ಕಿತ್ತಳೆಯಾಗಲಿ, ವಿದೇಶಿ ಆಮದಾಗಲಿ ಅಲ್ಲ. ಮೇಜಿನ ಎರಡೂ ಕಡೆ ಕುಳಿತು ಅತಿಥಿಗಳು ತಮಗೆ ಬೇಕಾದಷ್ಟು ಹಣ್ಣು ತಿನ್ನಬಹುದಿತ್ತು. ಆಮೇಲೆ ಹದವಾಗಿ ಮಾಡಿದ್ದ ಬಿಸಿ ಬಾದಾಮಿಹಾಲು ಕೊಟ್ಟರು. ಬೇಕೆಂದವರಿಗೆ ಕಾಫಿ ದೊರಕಿಸಿದರು. ಆ ನೆನಪಿನ ಜೊತೆಗೆ ಮೂವರು ನಾಲ್ವರು ಹೊಸಬರ ನೆನಪು ನನಗೆ ಬರುತ್ತದೆ. ನಿಟ್ಟೂರು ಶ್ರೀನಿವಾಸರಾಯರು, ಎಸ್. ಡಿ. ಗಣೇಶರಾಯರು, ಕಪಿನೀಪತಿಭಟ್ಟರು, ಎನ್. ಎಸ್. ಶಂಕರಯ್ಯ, ಶ್ರೀನಿವಾಸಯ್ಯ ಮುಂತಾದವರು. ಬಹುಶಃ ಶ್ರೀ ವಿಶ್ವೇಶ್ವರಯ್ಯ, ಗಂಗಾಧರಯ್ಯ ಎಂಬ ಇಬ್ಬರು ವಿದ್ಯಾರ್ಥಿಗಳೂ ಇದ್ದರೆಂದು ನೆನಪು. ಅವರು ಸಂಘದ ಪ್ರಾರ್ಥನಾಗೀತವನ್ನು-ಎಂದರೆ, ಡಿ.ವಿ.ಜಿ. ಅವರ 'ವನಸುಮದೊಲೆನ್ನ' ಎಂಬ ಗೀತೆಯನ್ನು - ಗುಂಡಪ್ಪನವರು ಹಾಕಿರುವ ಆಠಾಣ ರಾಗದಲ್ಲಿ ಅಲ್ಲ, ಬಹುಶಃ ಮಧ್ಯಮಾವತಿಯಲ್ಲಿಯೊ ಏನೊ? - ಹಾಡುತ್ತಿದ್ದರು. ಇಬ್ಬರೂ ಆಮೇಲಿನ ಕಾಲದಲ್ಲಿ ದೊಡ್ಡ ದೊಡ್ಡ ಹುದ್ದೆಗಳಲ್ಲಿ ಭಾರತದ ಬೇರೆಬೇರೆ ಪ್ರಾಂತಗಳಲ್ಲಿ ಸೇವೆಸಲ್ಲಿಸಿದರು. ಮೊದಲು ಹೇಳಿದ ನಿಟ್ಟೂರರು ಅಲ್ಪಕಾಲ ನ್ಯಾಷನಲ್ ಹೈಸ್ಕೂಲಲ್ಲಿ ಮೇಷ್ಟರಾಗಿ, ಮದರಾಸಲ್ಲಿ ಬಿ.ಎಲ್. ಆದುದರಿಂದ ಲಾಯರಾಗಿ, ನಮ್ಮ ಹೈಕೋರ್ಟಿನ ಮುಖ್ಯ ನ್ಯಾಯಾಧೀಶರಾಗಿ, ಸ್ವಲ್ಪ ಕಾಲ ಹಂಗಾಮಿ ರಾಜ್ಯಪಾಲರಾಗಿ,

ಅಖಿಲಭಾರತದ ವಿಜಿಲೆನ್ಸ್ ಕಮೀಷನರ್ ಆಗಿ ಈಗ ವಿಶ್ರಾಂತರಾಗಿದ್ದಾರೆ. ಶ್ರೀ ಗಣೇಶರಾಯರು ಲಾಯರಾಗಿ ಹೆಸರು ಪಡೆದು, ಬೆಂಗಳೂರು ಬಳಿಯ ಸೊಂಟಿಕೊಪ್ಪದಲ್ಲಿ ದೇವಸ್ಥಾನ ಚತ್ರ ಮುಂತಾದ ಕಾರ್ಯಗಳನ್ನು ನಿರ್ವಹಿಸಿದರು. ಶ್ರೀ ಕಪಿನೀಪತಿಭಟ್ಟರು ಸೂಪರಿಂಟೆಂಡೆಂಟ್ ಎಂಜಿನೀಯರ್ ಆಗಿ ಅಕಸ್ಮಿಕಕ್ಕೆ ಸಿಕ್ಕಿ ಕಾಲು ಊನಗೊಂಡು ಎಂಜಿನೀಯರ್ ಪದವಿಯಿಂದ ನಿವೃತ್ತರಾದರೂ ಕೃಷ್ಣರಾಜೇಂದ್ರ ಟೆಕ್ನಲಾಜಿಕಲ್ ಇನ್‌ಸ್ಟಿಟ್ಯೂಟಿನ ಪ್ರಿನ್ಸಿಪಲ್ ಆಗಿ ನಿವೃತ್ತಿಪಡೆವವರೆಗೂ ಏರಿದರು. ವೇದೋಪನಿಷತ್ತುಗಳು ಅವರಿಗೆ ಮುಖಸ್ಥವಾಗಿದ್ದವು. ಮೈಸೂರು ವಿಶ್ವವಿದ್ಯಾನಿಲಯಕ್ಕೆ ಯಂತ್ರ, ತಂತ್ರ, ಶಿಲ್ಪವನ್ನು ಕುರಿತು ಒಂದು ಉತ್ತಮವಾದ ಗ್ರಂಥವನ್ನು ಬರೆದು ಕೊಟ್ಟರು. ಸ್ವಲ್ಪ ಹೆಚ್ಚು ಕಡಮೆ ಆಗ ಆ ಸಭೆಯಲ್ಲಿದ್ದ ಹಲವರು ಹೆಸರಾಂತ ಗಣ್ಯವ್ಯಕ್ತಿಗಳಾಗಿ, ಅಧಿಕಾರಿಗಳಾಗಿ ರಾಜ್ಯದ ಸಾರ್ವಜನಿಕ ಜೀವನದಲ್ಲಿ ಮಾನ್ಯರಾಗಿ ಮುಂದಿನ ಕಾಲದಲ್ಲಿ ಲೋಕಪ್ರಿಯರಾದರು.

ನಿಟ್ಟೂರರ ಸ್ನೇಹವಿಶ್ವಾಸ ಅಂದಿನಿಂದ ನನಗೆ ಹೆಚ್ಚಾಗಿ ದೊರೆಯತೊಡಗಿತು. ವೆಂಕಣ್ಣಯ್ಯನವರಿಗೂ ಅವರಿಗೂ ಒಂದೇ ಡಿಸ್ಟ್ರಿಕ್ಟ್‌ನಿಂದ ಬಂದವರೆಂಬ ಇನ್ನೊಂದು ಹತ್ತಿರದ ಸಂಬಂಧವಿತ್ತು. ಅದರ ಜೊತೆಗೆ ಸ್ಮಾರ್ತ ಬ್ರಾಹ್ಮಣರ ಒಂದು ಉಪಜಾತಿಯಾದ ಉಲುಚುಕಮ್ಮೆ ಪಂಗಡಕ್ಕೆ ನಾನೂ ಸೇರಿದವನೆಂಬ ಸಂಗತಿ ಅವರಿಗೆ ಹೇಗೊ ಗೊತ್ತಾಗಿ ಅವರ ಅಭಿಮಾನಕ್ಕೂ ಪಕ್ಷಪಾತಕ್ಕೂ ನಾನು ಇನ್ನಷ್ಟು ಪಾತ್ರನಾದೆ. ಅಂತೂ ಆಗಿನಿಂದ ತೊಡಗಿದ ಸ್ನೇಹಾನುಬಂಧ ಈವರೆಗೂ ನಡೆದಿದೆ. ನಡುವೆ ಅವರಿಗೆ ಪ್ರಿಯರಾಗಿದ್ದ 'ಹೊಯ್ಸಳ' ಎಂಬ ಹೆಸರಿನ ಅಜ್ಜಂಪುರ ಲಕ್ಷ್ಮಣರಾಯರ 'ತಿರುಗಮುರುಗ' ಎಂಬ ಒಂದು ಪುಸ್ತಕವನ್ನು ನಾನು ಪ್ರಬುದ್ಧ ಕರ್ನಾಟಕದಲ್ಲಿ ಅವಲೋಕನ ಮಾಡಿದೆ. ಆ ಸಣ್ಣ ಕವನಗಳಲ್ಲಿ ರವೀಂದ್ರನಾಥ ಟಾಗೋರರ ಕವಿತೆಯ ಭಾಷಾಂತರವಾದ 'ಅಭಿಸಾರ' ಎಂಬುದು ನನ್ನ ವಿಶೇಷ ಮೆಚ್ಚಿಕೆಗೆ ಪಾತ್ರವಾಗಿತ್ತು. ಅಲ್ಲಿ ಬರುವ ಒಂದು ಪಾದ 'ನಡುರಾತ್ರಿಯಲಿ ಗೆಜ್ಜೆಕಾಲಿನ ಏಟು' ಎಂಬುದು ಆ ಹಿಂದೆ ನಾನು ಕನ್ನಡದಲ್ಲಿ ಕೇಳದ ಸೊಗಸಿನ ರಂಜನೆಯ ಓಟದ್ದು; ಒನಪು, ನಾದ ಲಯ ಉಳ್ಳದ್ದು. ಹೊಸ ಕಾಲದ ಕವಿತೆಯ ಒಂದು ಜೀವಾಂಶದಲ್ಲಿ ನನ್ನ ಕಿವಿಯಲ್ಲಿ ಮೊಳಗಿ, ಅವರ ಸ್ನೇಹದಂತೆಯೇ ಅದೂ ಈವರೆಗೆ ಉಳಿದುಕೊಂಡು ಬಂದಿದೆ. ಹೊಯ್ಸಳರಿಗೂ ನಿಟ್ಟೂರರಿಗೂ ಅಜ್ಜಂಪುರದ ಇತರ ಕೆಲವು ಮಾನ್ಯ ಸ್ನೇಹಿತರಿಗೂ ಬಹುದೊಡ್ಡ ಸ್ನೇಹಾನುಬಂಧ. ಎ. ಸೀತಾರಾಂ (ಆನಂದ) ಅವರೂ ಅಜ್ಜಂಪುರದವರು. ಸೆಂಟ್ರಲ್ ಕಾಲೆಜಿನ ಪ್ರೊಫೆಸರ್ ಆಗಿದ್ದ ಡಾ. ಎ. ಸುಬ್ಬರಾಯರೂ ಅಲ್ಲಿಯವರೇ. ವ್ಯಕ್ತಿಶವಾಗಿಯೂ ಇತರ ಲೌಕಿಕ ಬಾಂಧವ್ಯಗಳಲ್ಲಿಯೂ ಈ ಗುಂಪೆಲ್ಲ ಬಹುಮಟ್ಟಿಗೆ ಕನ್ನಡಕ್ಕೆ ಸುಮುಖವಾಗಿದ್ದು, ನೆರವು ಪ್ರೋತ್ಸಾಹ ಕೊಟ್ಟು, ಕರ್ನಾಟಕ ಸಂಘದ ಸುತ್ತಮುತ್ತ ಸೇರಿಕೊಂಡು ಹೊಸಕನ್ನಡಕ್ಕೆ ಸ್ನೇಹ ಸೌಹಾರ್ದ ಗಳಿಸಿಕೊಟ್ಟ ಜನ. ವೆಂಕಣ್ಣಯ್ಯನವರು ಇತರ ವಿದ್ವಾಂಸರನ್ನು, ಸಾಹಿತ್ಯ ನಿರ್ಮಾಣಶಕ್ತಿ ಉಳ್ಳ ಜನರನ್ನು ಹೇಗೆ ಕನ್ನಡಕೃತಿರಚನೆಗೆ ಎಳೆದರೊ ಹಾಗೇ ಇಂಥವರನ್ನೂ ಕನ್ನಡದ ಕಡೆಗೆ ತಿರುಗಿಸಿ, ಒಂದು ವಿಶ್ವಾಸ ಪ್ರಪಂಚವನ್ನು ಕಟ್ಟಿದರು. ಇದಕ್ಕೆ ಗುಂಡಪ್ಪನವರು ಸೇರಿದ್ದುದರಿಂದ ವಿಶಾಲವಾದ ಒಂದು ಬಗೆಯ ಪ್ರತಿಷ್ಠಾವಂತ ವರ್ಗ ಕೂಡಿತು.

ಡಾ. ಬಿ. ಕೆ. ನಾರಾಯಣರಾಯರು, ಎಂ. ಎಸ್. ರಾಮಚಂದ್ರರಾವ್, ಸಂಪತ್ ಅಯ್ಯಂಗಾರ್, ಎಂ. ಸಂಪತ್ಕುಮಾರನ್, ಎಸ್. ಜಿ. ಶಾಸ್ತ್ರಿ, ಬಿ. ವಿ. ರಾಮಯ್ಯಂಗಾರ್, ಬಿ. ಪುಟ್ಟಯ್ಯ ಮುಂತಾದವರು ಒಳಹೊರವಲಯಗಳಲ್ಲಿ ನಿಂತರು. ಶ್ರೀ ಮಾಸ್ತಿಯವರ ವಿಶ್ವಾಸದಿಂದ ಸರ್ಕಾರದ ಸೆಕ್ರೆಟರಿಯಟ್ ವರ್ಗದ ಕೆಲವರು– ಡಾ. ಸಿ. ಬಿ. ರಾಮರಾವ್, ಪಿ. ಎಚ್. ಕೃಷ್ಣರಾಯರು ಮುಂತಾದವರು – ಇನ್ನೊಂದು ಕಡೆಯಿಂದ ಸೇರಿಕೊಂಡರು. ನಿಜವಾಗಿ ಇದು ಕನ್ನಡದ ಭಾಗ್ಯಕ್ಕೆ ದೊರೆತ ಒಂದು ಚೈತನ್ಯ ಲೋಕ. ಪರಿಷತ್ತಿನಲ್ಲಂತೂ ವೆಂಕಟನಾರಾಯಣಪ್ಪನವರು, ನಂಗಪುರಂ ವೆಂಕಟೇಶ ಅಯ್ಯಂಗಾರ್ಯರು, ಕರ್ಪೂರ ಶ್ರೀನಿವಾಸರಾಯರು ಮುಂತಾದವರಿದ್ದರು. ಈ ಎಲ್ಲರ ಗುಂಪಿಗೆ ಹಿರಿಯ ತಲೆಮಾರಿನ ಚ. ವಾಸುದೇವಯ್ಯನವರು, ಆರ್. ನರಸಿಂಹಾಚಾರ್ಯರು, ಬೆನೆಗಲ್ ರಾಮರಾಯರು, ಎಂ. ಎಸ್. ಪುಟ್ಟಣ್ಣನವರು, ಎಂ. ರಾಮರಾಯರು ಇರುತ್ತಿದ್ದರು. ಸಮಯಸಂದರ್ಭ ಒದಗಿದಾಗ ಈ ಎಲ್ಲರ ಸಹಕಾರ ಕನ್ನಡಕ್ಕೆ ದೊರೆಯುವಂತಾಯಿತು. ವೆಂಕಟನಾರಾಯಣಪ್ಪನವರು ಸಂಘದ ಅಧ್ಯಕ್ಷರು.

ನನಗಿಂತ ಎರಡು ಮೂರು ಮಂದಿ ಹಿರಿಯರು ಗರುವರಾದವರ ಪಂಕ್ತಿಯಲ್ಲಿರುತ್ತಿದ್ದೆನಾದ ಕಾರಣ, ನಿಟ್ಟೂರು ಶ್ರೀನಿವಾಸರಾಯರ – ನನ್ನ ಸಂಬಂಧ ಮೊದಮೊದಲು ಮಡಿಮಡಿಯೇ ಆಗಿತ್ತು. ಆದರೂ ಒಂದೆರಡು ಸಂಬಂಧಗಳು ನಿಟ್ಟೂರವರನ್ನು ನನ್ನನ್ನು ಹೊಂದಿಸಿದವು. ಒಂದು 'ಪ್ರಬುದ್ಧ ಕರ್ಣಾಟಕ' ಗುಂಪಿಗೆ ಸೇರಿದ ಎಂ. ಆರ್. ಶ್ರೀನಿವಾಸಮೂರ್ತಿ ನಿಟ್ಟೂರವರಿಗೆ ಶಿವಮೊಗ್ಗದಲ್ಲಿಯೊ ಚಿತ್ರದುರ್ಗದಲ್ಲಿಯೊ ಉಪಾಧ್ಯಾಯರಾಗಿದ್ದರಂತೆ. ಅವರು ಖಾಸಾ 'ಪ್ರಬುದ್ಧ ಕರ್ಣಾಟಕ'ದ ಹೃದ್ಭಾಗದಲ್ಲಿದ್ದವರು. ಮೂರ್ತಿಯವರನ್ನು ಕಂಡರೆ ವೆಂಕಣ್ಣಯ್ಯನವರನ್ನು ಕಂಡಷ್ಟೇ ಗೌರವ, ವಿಶ್ವಾಸ, ಭಕ್ತಿ. ಕೆಲವು ಕಾಲ ನಿಟ್ಟೂರ್ ನ್ಯಾಷನಲ್ ಹೈಸ್ಕೂಲಲ್ಲಿ ಉಪಾಧ್ಯಾಯರಾಗಿ ಕೆಲಸಮಾಡಿದ್ದರಂತೆ. ಆ ಕಾರಣದಿಂದಲೂ ಮತ್ತೆ ಆ ಪಾಠಶಾಲೆಯಲ್ಲಿ' ಪ್ರಮುಖ ಉಪಾಧ್ಯಾಯರಲ್ಲಿ ಹೊಸರಸವಾಗಿ ಹೊಮ್ಮಿದ್ದ ರಾಷ್ಟ್ರೀಯತೆ, ಖಾದಿ ಮುಂತಾದವುಗಳ ವಿಶ್ವಾಸ ಉಳ್ಳವರಾದ್ದರಿಂದಲೂ ಅಲ್ಲಿ ಸಂಪದ್ಗಿರಿರಾವ್, ಕೃಷ್ಣ ಅಯ್ಯರ್ ಹಾಗೂ ಸರ್ದಾರ್ ವೆಂಕಟರಾಮಯ್ಯ ಮುಂತಾದವರ ಸಾಹಚರ್ಯ ಅವರಿಗೆ ದೊರೆಯಿತು. ಅದರೊಡನೆಯೆ ಬೆಳೆದು ಬಂದುದು ವೃತ್ತಪತ್ರಿಕಾ ಪ್ರಪಂಚದಲ್ಲಿ ಕೀರ್ತಿ ಪಡೆದು ಕನ್ನಡ ಕಾರ್ಯಗಳಲ್ಲಿ ಮುಂದಾಳಾದ ತಿ. ತಾ. ಶರ್ಮರದು. ಜೊತೆಗೆ ಲಾಲಾ ಲಜಪತರಾಯ್ ಅವರು ಭರತಖಂಡಕ್ಕೆ ಹಿಂದಿರುಗಿದ ಮೇಲೆ ಅವರ ಜೊತೆಯಲ್ಲಿ ಕೆಲಸ ಮಾಡಿದ್ದ ಡಾ. ಎನ್. ಎಸ್. ಹರ್ಡೀಕರ್ ಅವರು ರಾಷ್ಟ್ರೀಯ ಸೇವಾದಳ ಎಂಬ ಒಂದು ಸ್ವಯಂಸೇವಕ ದಳವನ್ನು ಉತ್ತರ ಕರ್ನಾಟಕದಲ್ಲಿ ಸ್ಥಾಪಿಸಿ ಅದರ ನಿರ್ದೇಶಕರೂ ನಾಯಕರೂ ಆಗಿದ್ದರು. ಅದಕ್ಕೆ ಸಂಪದ್ಗಿರಿರಾಯರು, ಕಾನಕಾನಹಳ್ಳಿ ವೆಂಕಟರಾಮಯ್ಯನವರು ಶಕ್ತ ಪ್ರತಿನಿಧಿಗಳಾಗಿ ದೀಕ್ಷೆವಹಿಸಿದಂತೆ ಇಲ್ಲೊಂದು ಸ್ವಯಂಸೇವಕದಳವನ್ನು ನಡಸಿ, ಶಾಲೆಯಲ್ಲೇ ಮಟ್ಟಿಕಣಗಳನ್ನೇರ್ಪಡಿಸಿ ವ್ಯಾಯಾಮದ ತರಪೇತು ಕೊಡುತ್ತಿದ್ದರು. ಇದು ಅಖಿಲ ಭರತಖಂಡದಲ್ಲಿ ನಡೆಯುತ್ತಿದ್ದ ಒಂದು ರಾಜಕೀಯ, ಸಾಮಾಜಿಕ ಚಳವಳಿಯ ಕಿರಿಯಲೆ.

ಇವೆಲ್ಲ ನ್ಯಾಷನಲ್ ಹೈಸ್ಕೂಲಿನ ಪ್ರಪಂಚವನ್ನು ಒಂದು ಕ್ರಿಯಾಮಂಡಲವನ್ನಾಗಿಸಿದವು. ಲಜೀಂ, ಕವಾಯಿತು, ಸ್ವಯಂಸೇವಕ ತಂಡ, ರಾಷ್ಟ್ರೀಯ ಚಳವಳಿಯ ಸಭೆ ಸಮಾವೇಶ, ಅಖಿಲ ಭಾರತೀಯ ಮುಖಂಡರ, ಮೈಸೂರು ಮತ್ತು ಉತ್ತರ ಕರ್ನಾಟಕದ ಕ್ರಿಯಾಸಾಧಕರ ತಂಡದ ಒಂದು ಭಾಗವಾಯಿತು. ಇದರಿಂದಲೇ ಅಲ್ಲಿನ ಹರ್ಡೀಕರ್, ಡಾ. ಕಬ್ಬೂರ್, ದಿವಾಕರ್, ದಾತಾರ್ ಮುಂತಾದವರ ಸಂಪರ್ಕ ಮೈಸೂರಿನ ಈ ಜನಕ್ಕೆ ಮೊದಮೊದಲಲ್ಲಿ ಉಂಟಾದ್ದು. ಬಹುಶಃ ಅಲ್ಲಿನ ಸಂಬಂಧಗಳಿಂದಲೇ ಇತರ ಪ್ರಭಾವಗಳೊಡನೆ ಸೇರಿ ನಿಟ್ಟೂರರಿಗೆ ಈಚಿನ ಕಾಲದಲ್ಲಿ ಡಾ. ಗಜೇಂದ್ರಗಡ್ಕರ್ ಮುಂತಾದವರ ಸ್ನೇಹ ದೊರೆತಿತೊ ಏನೊ. ಹೀಗೆ ಕರ್ನಾಟಕ ಸಂಘ, ಹೊಸ ಕನ್ನಡ ಚಳವಳಿ ಒಂದು ಕಡೆಗಾದರೆ, ಭಾರತ ಸ್ವಾತಂತ್ರ್ಯದ ಚಳವಳಿಗೆ ಸಂಬಂಧ, ವಿಸ್ತಾರವಾದ ಸ್ನೇಹವರ್ಗ ನಿಟ್ಟೂರರಿಗೆ ದೊರಕುವಂತಾಯಿತು. ಇದು ಸಾಮಾನ್ಯ ಆವರಣ, ಅವಕಾಶ ಅಲ್ಲ, –ಬುದ್ಧಿವಂತನಾದ ಯಾವನಿಗೇ ಆಗಲಿ. ನಿಟ್ಟೂರರು ಬುದ್ಧಿವಂತರು. ಹೆಚ್ಚು ಮಾತಿನವರಲ್ಲ. ಎಲ್ಲ ಕಡೆಯೂ ಕಣ್ಣಿಟ್ಟು ಎಲ್ಲ ಪ್ರಭಾವಗಳ ಬಲಾಬಲಗಳನ್ನು ಅರಿತು ತಮ್ಮ ವ್ಯಕ್ತಿತ್ವವನ್ನೂ ಮೂರ್ತಿತ್ವವನ್ನೂ ಬೆಳಸಿಕೊಂಡವರು. ಯಾವಾಗ ಅಖಿಲ ಭಾರತೀಯ ಪ್ರಭಾವ ಒಂದು ಸಂಪರ್ಕವಾಯಿತೊ ಆಗ ಖಾದಿ, ಹಿಂದಿ, ಕಾಂಗ್ರೆಸ್ ಈ ಮೂರು ಶಕ್ತ ಪ್ರಭಾವಗಳಿಗೂ ಅವರ ಮನಸ್ಸು ಸೇರಿಕೊಂಡಿತು.

ಇತ್ತ ಇವರ ಮನೆತನವೂ ಗಣ್ಯವಾದುದು. ಇವರ ತಂದೆಯವರು ಉಪಾಧ್ಯಾಯರಾಗಿದ್ದರೆಂದು ಕೇಳಿದ್ದೇನೆ. ಸೋದರಮಾವಂದಿರು ವಿದ್ಯೆಯಲ್ಲಿ ಶೀಲದಲ್ಲಿ ಗಳಿಸಿದ ಸ್ಥಾನ ಗೌರವಗಳಲ್ಲಿ ಹಿಂದೆ ಮೈಸೂರಿನ ಮಾನ್ಯರಲ್ಲಿ ಹಿರಿಯರಾದವರಲ್ಲಿ ಅವರು ಮೂವರು ಮಂದಿ ದೊಡ್ಡವರು. ಸಂಸ್ಕೃತಿ, ವಿದ್ಯೆ, ದರ್ಶನಗಳಲ್ಲಿ, ಕಾವ್ಯಮೀಮಾಂಸೆಗಳಲ್ಲಿ ಅದ್ವಿತೀಯ ಪಾಂಡಿತ್ಯಕ್ಕೆ ನಿಷ್ಕೃಷ್ಟ ತಿಳಿವಳಿಕೆಗೆ ಹೆಸರುಪಡೆದು, ಮೈಸೂರು ವಿಶ್ವವಿದ್ಯಾನಿಲಯದಲ್ಲಿ 'ಭಾರತದರ್ಶನ' ವಿಭಾಗದ ನನ್ನ ಗುರುಗಳೂ ಆಗಿದ್ದ ಪ್ರೊ. ಎಂ. ಹಿರಿಯಣ್ಣನವರು. ಎರಡನೆಯವರು ಹಿಂದಿನ ಮೈಸೂರು ಸರ್ಕಾರದಲ್ಲಿ ಸರ್ಕಾರದ ಕಂಟ್ರೋಲರ್ ಆಗಿ, ಫೈನಾನ್ಸ್ ಸೆಕ್ರೆಟರಿ ಆಗಿ, ದಿವಾನ್ ಪದವಿಯಲ್ಲಿ ಕೆಲವು ಕಾಲ ಇದ್ದು ನಿಃಸ್ಪೃಹ ದಕ್ಷ ಅಧಿಕಾರಿಗಳೆಂದು ಗಣ್ಯರಾದ ಸರ್. ಎಂ. ಎನ್. ಕೃಷ್ಣರಾಯರು. ಸಂಸ್ಕೃತದಲ್ಲಿಯೂ ಧನಶಾಸ್ತ್ರ ಸಂಬಂಧದಲ್ಲಿಯೂ ನಾಡಿನ ಆರ್ಥಿಕ ಜೀವನದಲ್ಲಿ ಸುಸ್ಥಿರವಾದ ಅಭಿವೃದ್ಧಿಯನ್ನು ಸಾಧಿಸಲು ಎಲ್ಲ ರೀತಿಯಲ್ಲಿಯೂ ದುಡಿದವರು. ಈ ಅಣ್ಣತಮ್ಮಂದಿರ ಜೊತೆಗೆ ಸರ್ಕಾರದ ಸೆಕ್ರೆಟರಿಯಾಗಿ ನಿವೃತ್ತರಾದ ಇನ್ನೊಬ್ಬ ತಮ್ಮಂದಿರು ಎಂ. ಎನ್. ಸೀತಾರಾಮಯ್ಯನವರು. ಎಂದರೆ, ಈ ಮನೆಯಲ್ಲಿ ವಿದ್ಯೆಗೂ ಸಂಸ್ಕೃತಿಗೂ ತುಂಬಾ ಉಚ್ಚ ಸ್ಥಾನವಿತ್ತು. ನಿಷ್ಠೆ ಶ್ರದ್ಧೆಗಳಿಗೆ ಹೆಸರಾದ ಹಿರಿಯರು ಮೇಲ್ಪಂಕ್ತಿಯಾಗಿದ್ದರು. ಕೃಷ್ಣರಾಯರ ಮಕ್ಕಳು ಎಂ. ಎನ್. ರಾಮಸ್ವಾಮಿ; ನಮ್ಮ ರಾಜ್ಯಾಂಗಶಾಸನದ ಬಗೆಗೂ ಶಾಸನಶಾಸ್ತ್ರಗಳ ಪಾಂಡಿತ್ಯಕ್ಕೂ ಹೆಸರಾಗಿ, ಅಮೆರಿಕದ ನ್ಯಾಯಪದ್ಧತಿಗೂ ನಮ್ಮ ರಾಜ್ಯಾಂಗಶಾಸನಕ್ಕೂ ಸಂಬಂಧಿಸಿದಂತೆ ಉದ್ಗ್ರಂಥಗಳನ್ನು ಬರೆದಿದ್ದಾರೆ. ಸ್ವಂತವಾಗಿ ನಿಟ್ಟೂರರ ಪಡ್ಡಕರಲ್ಲಿ ಒಬ್ಬರು ಡಾ. ವಿ. ಎನ್. ರಾಮಸ್ವಾಮಿ. ಅವರು ಅರ್ಥಶಾಸ್ತ್ರವೇತ್ತರಾಗಿ ಕಾಶಿಯ ಹಿಂದೂ

ವಿಶ್ವವಿದ್ಯಾನಿಲಯದಲ್ಲಿ ಮತ್ತು ಇಂಡಿಯಾ ಸರ್ಕಾರದ ಸಂಸ್ಥೆಯಾದ ಸಿಮ್ಲಾ ಅಧ್ಯಾಪನ ಸಂಸ್ಥೆಗಳಲ್ಲಿ ಹೆಸರು ಪಡೆದವರು. ಆದುದರಿಂದ ಮನೆಯ ಸಂಬಂಧಿಗಳ ಕಡೆಯಲ್ಲಿಯೂ ಒಂದು ವಿದ್ಯೆಯ ಆವರಣ ರಾಯರನ್ನು ಪ್ರಚೋದನೆಗೊಳಿಸಿತ್ತು. ಇದೆಲ್ಲ ಎಷ್ಟಾದರೂ ಹೊರಗಿನ ಆವರಣ.

ಸ್ವಂತವಾಗಿ ಸೆಂಟ್ರಲ್ ಕಾಲೇಜಿಂದ ಬಿ.ಎಸ್‌ಸಿ. ಮಾಡಿ, ಮದರಾಸಿನ ಲಾ ಕಾಲೇಜಲ್ಲಿ ಬಿ.ಎಲ್. ಪದವೀಧರರಾಗಿ, ನ್ಯಾಯವಾದಿ ಉದ್ಯೋಗದಲ್ಲಿ ನಿಂತು ಹೆಸರು ಗಳಿಸಿದರು. ದೊಡ್ಡ ಆಫೀಸಲ್ಲಿ ಇವರ ಜೊತೆಗೆ ಮೂರು ನಾಲ್ಕು ಮಂದಿ ಸಹೋದ್ಯೋಗಿಗಳಿದ್ದರು. ಅವರಲ್ಲಿ ಮೈಸೂರಿನ ಈಚಿನ ನ್ಯಾಯಮೂರ್ತಿಗಳಾಗಿ ವಿಶ್ರಾಂತರಾದ ಗೋಪೀವಲ್ಲಭ ಅಯ್ಯಂಗಾರ್ಯರು ಒಬ್ಬರು. ನ್ಯಾಯವಾದಿ ಆಗಿದ್ದ ಕಾಲದಲ್ಲಿ ಇವರ ವಾದಮಾರ್ಗ, ಸ್ನೇಹಮಂಡಲ, ಕಾರ್ಯಪ್ರಪಂಚ ಮೂರೂ ಇನ್ನೂ ದೊಡ್ಡವಾದವು. ಅನೇಕ ನ್ಯಾಯವಾದಿಗಳ ಸಮ್ಮೇಳನಗಳಲ್ಲಿ, ಸಂಸ್ಥಾನದ ಒಳಗೆ ಹೊರಗೆ, ರಾಜಕೀಯ ವಿಚಾರಮಂಡಲಗಳಲ್ಲಿ ಗಣ್ಯವಾದ, ನ್ಯಾಯವಾದ ಕಾರ್ಯಗಳನ್ನು ಮಾಡಿದರು. ಕಾಂಗ್ರೆಸ್ ಬಳವಳಿಯ ಕಾಲದಲ್ಲಿ ಅದರ ಒಂದು ಕ್ರಿಯಾಶಕ್ತಿಯಾಗಿ ಪ್ರಕಟವಾಗಿಯೂ ಪರೋಕ್ಷವಾಗಿಯೂ ದುಡಿದರು. ಸತ್ಯಾಗ್ರಹಕಾಲದಲ್ಲಿ ಗುಪ್ತವಾಗಿ ಕೆಲಸ ಮಾಡುತ್ತಿದ್ದ ಅನೇಕ ಮಂದಿಗೆ ನೆರವನ್ನು ಸಂಗ್ರಹಿಸುವ ಕಾರ್ಯಗಳಲ್ಲಿ ಅವರ ಪಾತ್ರ ಸಾಮಾನ್ಯವಾದ್ದಲ್ಲ. ರಾಜ್ಯಸಭೆಯಲ್ಲಿ ಲೋಕಸಭೆಯಲ್ಲಿ ಡೆಪ್ಯುಟಿ ಸ್ಪೀಕರ್ ಆಗಿ ಕೆಲಸ ಮಾಡಿದ ಎಸ್. ವಿ. ಕೃಷ್ಣಮೂರ್ತಿರಾಯರೂ ಅವರೂ ಆಪ್ತಸ್ನೇಹಿತರು. ಅನೇಕ ಮಂದಿ ವಾಣಿಜ್ಯ ಕೈಗಾರಿಕೆಗಳ ನಿರ್ದೇಶಕರೂ ತಲೆಯಾಳುಗಳೂ ಇವರಿಗೆ ಮಿತ್ರರು. ಆದ್ದರಿಂದ ಅವರ ಸಾಧನೆ, ಕೀರ್ತಿ ಬೆಳೆದವು.

ಸ್ವಂತವಾಗಿ ಅವರ ಬರವಣಿಗೆ ಹೆಚ್ಚಾಗಿಲ್ಲವಾದರೂ ಅವರೂ ಅವರ ಧರ್ಮಪತ್ನಿಯವರಾದ ಶ್ರೀಮತಿ ಪದ್ಮಾವತಮ್ಮನವರೂ ಗಾಂಧೀಜಿಯ ಆತ್ಮಕಥೆಯಾದ 'ಸತ್ಯಶೋಧನೆ' ಎಂಬ ಗ್ರಂಥವನ್ನು ಹಿಂದಿಯ ಮೂಲದಿಂದ ಕನ್ನಡಿಸಿ, ಗಾಂಧೀಜಿ ಅವರ ಗುಣಚಾರಿತ್ರ್ಯಗಳ ರೂಪಣವಾದ ಆ ಗ್ರಂಥವನ್ನು ಕನ್ನಡಿಗರಿಗೆ ದೊರಕಿಸಿದ್ದಾರೆ. ಇತರರು ಬರೆದ ಅನೇಕ ಪುಸ್ತಕಗಳ ಪರಿಷ್ಕರಣದಲ್ಲಿ, ಸಲಹೆಸೂಚನೆಗಳ ರೂಪಣದಲ್ಲಿ ರಾಯರು ನೆರವು ಕೊಟ್ಟಿದ್ದಾರೆ. ಪರಿಷತ್ತಿನ ಕಾರ್ಯಕಲಾಪಗಳಲ್ಲಿ ಕಾರ್ಯಕಾರಿ ಮಂಡಲಿಗಳಲ್ಲಿ ಸದಸ್ಯರಾಗಿ ಬಹುಕಾಲ ದುಡಿದು, ಅವಕಾಶ ದೊರೆತ ವೇಳೆಯಲ್ಲಿ ಧಾರವಾಡ, ಮಂಗಳೂರು, ಬಳ್ಳಾರಿ ಪ್ರಾಂತಗಳಲ್ಲಿ ಸುತ್ತಾಡಿ, ಪ್ರಚಾರಕಾರ್ಯವನ್ನೂ ಪ್ರೋತ್ಸಾಹಕಾರ್ಯವನ್ನೂ ಕೈಕೊಂಡು ಮಿತ್ರವರ್ಗವನ್ನು ಬೆಳಸಿದ್ದಾರೆ. ಸುಮಾರು ಸಾಹಿತ್ಯ ಪರಿಷತ್ತಿನ ಎಲ್ಲ ಸಮ್ಮೇಳನಗಳಿಗೂ ಬಂದು, ಸಮ್ಮೇಳನದ ಕಾರ್ಯಗಳ ಜೊತೆಗೆ ಸಂಸ್ಥೆಯ ಅಂಗರಚನೆ ಮುಂತಾದ ಕಾರ್ಯನಿರ್ವಹಣದಲ್ಲಿ, ನಿರ್ಣಯಗಳನ್ನು ರೂಪಿಸುವ ಕಾರ್ಯದಲ್ಲಿ ವಿವೇಚನಾತ್ಮಕ, ಕ್ರಿಯಾತ್ಮಕ ಪಾತ್ರವನ್ನು ವಹಿಸಿದ್ದಾರೆ. ಪರಿಷತ್ತಿನ ಹಿರಿಯರಲ್ಲಿ ಒಬ್ಬರಾದ ನಂಗಪುರಂ ವೆಂಕಟೇಶ ಅಯ್ಯಂಗಾರ್ಯರು ಕನ್ನಡದಲ್ಲಿ ಬರೆದ ಖಗೋಳಶಾಸ್ತ್ರ ಗ್ರಂಥದ ರಚನೆಯಲ್ಲಿ ಅವರ ಸಮಕ್ಕೂ ದುಡಿದರು. ಎಲ್ಲ ಮಟ್ಟಿಗೆ ಮತ್ತು ಯಥಾಶಕ್ತಿ ಕನ್ನಡದ ಪ್ರಚಾರ, ಹಿಂದಿ ಪ್ರಚಾರ ಎರಡಕ್ಕೂ ಹಣವನ್ನೂ ಇತರ ಬಗೆಯ ನೆರವನ್ನೂ ಸಂಗ್ರಹಿಸಿ, ಸ್ವಂತವಾಗಿ ಕೊಟ್ಟು ಎಷ್ಟೊ ಮಂದಿ ಲೇಖಕರಿಗೆ ನೆರವಾಗಿದ್ದಾರೆ.

ಈ ಸಂಬಂಧದಲ್ಲಿ ಅವರು ಸ್ಥಾಪಿಸಿ ನಡೆಸಿದ 'ಗತ್ಯನೋದಾ ಪ್ರಕಟಾಲಯ'ವನ್ನು ನೆನೆಯಬೇಕು. ಮೇಲ್ನೋಟಕ್ಕೆ ಅವರದಾಗಿದ್ದರೂ ಅಲ್ಲಿನ ಲೆಕ್ಕಾಗಳನ್ನು ನೋಡಿಕೊಳ್ಳಲು ಇತರ ಮ್ಯಾನೇಜರುಗಳನ್ನು ನಿಯಮಿಸಿಕೊಂಡು, ಪ್ರಕಟಣೆಯ ಕಾರ್ಯವನ್ನು ರಾಯರು ಸುಮಾರು ಇಪ್ಪತ್ತು-ಮೂವತ್ತು ವರ್ಷಗಳ ಕಾಲ ಬಹಳ ಪಟಿಕ್ಷಣೆಯಿಂದ ಮಾಡಿದರು. ಮ್ಯಾನೇಜರುಗಳು ಬುದ್ಧಿವಂತರೂ ಶಕ್ತರೂ ಆಗಿದ್ದರೂ ಅಲ್ಲಿ ಮೊದಲಿನಿಂದಲೂ ಕೆಲಸ ಮಾಡಿದ ನೌಕರ ಗಫೂರ್ ಎಂಬಾತ. ಬಹುಶಃ ಅವನ ನಿಷ್ಠೆಶ್ರದ್ಧೆಗಳ ಚರಿತ್ರೆಯನ್ನು ಯಾರೂ ಮೆಚ್ಚಬಹುದು. ಹೆಚ್ಚಿಗೆ ಮಾತಾಡದೆ ಎಲ್ಲರಿಗೂ ನೆರವಾಗಿ ಸಮಸ್ತರ ವಿಶ್ವಾಸಕ್ಕೂ ಪಾತ್ರನಾಗಿ ದುಡಿದವನು ಆತ. ಯಾವ ಪುಸ್ತಕ ಎಲ್ಲಿದೆ, ಅದರ ಸ್ಟಾಕ್ (stock) ಎಲ್ಲಿದೆ, ಎಷ್ಟಿದೆ; ಅಚ್ಚಿನಲ್ಲಿ, ಬೈಂಡಿಂಗ್‌ನಲ್ಲಿ ಯಾವಯಾವವು ಇವೆ ಮುಂತಾದ ಸಂಗತಿಗಳು ಅವನಿಗೆ ಗೊತ್ತಿದ್ದಷ್ಟು ಚೆನ್ನಾಗಿ ಬೇರೆಯವರಿಗೆ – ಬಹುಶಃ ರಾಯರಿಗೇ – ತಿಳಿದಿರುತ್ತಿರಲಿಲ್ಲವೆನ್ನಬಹುದು. ಅಲ್ಲಿದ್ದ ಎಲ್ಲವನ್ನೂ ಸುಮಾರು ಅವನು ಓದಿದ್ದ. ಕೊಳ್ಳಲು ಬರುವವರ ಕೆಲಸ ಇಲ್ಲದಿರುವಾಗ ಅಲಸನಾಗದೆ ಆ ಅಂಗಡಿಯಲ್ಲಿ ಮಾರಾಟಕ್ಕೆ ಇದ್ದ ಸುಮಾರು ಎಲ್ಲ ಪುಸ್ತಕಗಳನ್ನೂ ಓದಿದ್ದ. ಒಂದು ದಿನ ಗಟ್ಟಿಯಾಗಿ ಮಾತಾಡಿದವನಲ್ಲ. ನಿಟ್ಟೂರರ ಬದುಕಿನಲ್ಲಿ ಅಂಥ ಸೇವೆಸಲ್ಲಿಸಿದವನು ಬಹುಶಃ ಇನ್ನೊಬ್ಬನಿಲ್ಲವೆಂದು ಹೊರಗಿನ ನಮಗೆ ಕಾಣುತ್ತಿತ್ತು.

ಸಾಧಾರಣವಾಗಿ ಅಚ್ಚಿಗೆ ಬರುತ್ತಿದ್ದ ಕೆಲವು ಪುಸ್ತಕಗಳನ್ನು, ಸ್ನೇಹಿತರು ಬರೆದ ಇನ್ನು ಕೆಲವುಗಳ ಪ್ರಕಾಶನ ಕಾರ್ಯವನ್ನು ಅವರು ವಹಿಸಿಕೊಳ್ಳುತ್ತಿದ್ದರು. ನನ್ನ ಅನುಭವ ಹೀಗೆ: ನನ್ನ ಅದೃಷ್ಟದ ಚರಿತ್ರೆಯಲ್ಲಿ ಒಳಿತು ಏನು ಬರೆದಿನೊ ಬರೆಯಲಿಲ್ಲವೊ; ಬಹುಮಟ್ಟಿಗೆ ಪ್ರಕಟನೆ ಕಷ್ಟವಾಗುವುದನ್ನು ಕಂಡಿದ್ದೇನೆ. ಪ್ರಕಾಶಕರನ್ನು ಒಪ್ಪಿಸಿ ಪದ್ಯವನ್ನೊ, ನಾಟಕವನ್ನೊ, ವಿಮರ್ಶೆಯನ್ನೊ ಪ್ರಕಟಿಸಿರೆಂದು ಮೊದಮೊದಲು ಪ್ರಸ್ತಾಪ ಮಾಡಿ, ಅವರಿಗೆ ಮನಸ್ಸಿಗೆ ಬಾರದಿರುವುದನ್ನು ಕಂಡಾಗ ಮನಸ್ಸಿನ ಉತ್ಸಾಹ ಕುಸಿಯುತ್ತದೆ. ಬರೆದರೆ ತಾನೇ ಈ ಕಷ್ಟ? ಬರೆಯುವುದೇ ಬೇಡ! ಯಾರಿಗೆ ಬೇಕು? ನಷ್ಟವೇನು ಲೋಕಕ್ಕೆ? –ಎಂದು ಇಂದಿಗಿಂತ ಸಣ್ಣ ವಯಸ್ಸಲ್ಲಿ ನಿರುತ್ಸಾಹಗೊಂಡುದುಂಟು. ಹಲವು ಬಾರಿ ಒಂದೊಂದು ಪುಸ್ತಕಕ್ಕೆ – ಅದು ಗಾತ್ರದಲ್ಲಿ ಸಣ್ಣದಾದರೂ – ಧಾರಾಳವಾದ ಪ್ರಕಾಶನ ದೊರೆಯದೆ ಎಂಟು–ಹತ್ತು ವರ್ಷ ಕಾಯಬೇಕಾಗಿ ಬಂದುದುಂಟು. ಕನ್ನಡದಲ್ಲಿ ಬರುವ ಪುಸ್ತಕಗಳ ಅಚ್ಚುಕಟ್ಟು, ಮುದ್ರಣ ಪುಸ್ತಕಗಳ ಹೊರ ಆಕರ್ಷಣೆ ಚೆನ್ನಾಗಬೇಕು; ಕನ್ನಡದ ಪುಸ್ತಕಗಳು ಜನವನ್ನು ಆಕರ್ಷಿಸುವಂತಾಗಬೇಕು; ಅವನ್ನು ಕೈಯಲ್ಲಿ ಹಿಡಿಯುವುದು ಒಂದು ಸಂತೋಷವಾಗಬೇಕು; ಇತರ ವಿದೇಶಿ ಪುಸ್ತಕಗಳ ಜೊತೆಗೆ ಖಾಸಗಿ ಮನೆಗಳಲ್ಲಿ, ಪುಸ್ತಕ ಭಂಡಾರಗಳಲ್ಲಿ ಅವುಗಳ ಸಮಕ್ಕೆ ದಿಟ್ಟವಾಗಿ ನಿಲ್ಲಲು ಯೋಗ್ಯವಾಗುವಂತೆ ರಟ್ಟು, ರಕ್ಷಾಕವಚ ಹಾಕಿ ಪ್ರಕಟನಕಾರ್ಯವಾಗಬೇಕು ಎಂಬುದು ನನಗೆ ಮೊದಲಿನಿಂದಲೂ ಒಂದು ಗೀಳು. ಆ ಸಂಬಂಧದಲ್ಲಿ ನನ್ನ ಮೊದಲ ಗೀತಗಳ ಪುಸ್ತಕವನ್ನು ಅವರು ಪ್ರಕಟಿಸಲು ಒಪ್ಪಿದರು. 'ನೀವು ಬೇಕಾದ ಹಾಗೆ ಅಚ್ಚು ಮಾಡಿಸಿ' ಎಂದರು. ಪ್ರಕಟನೆಯ ಕೆಲಸವೇ ಕಷ್ಟ. ಅದರಲ್ಲಿ ಕವಿತೆಗಳ ಪ್ರಕಾಶನ ಇನ್ನಷ್ಟು ಕಷ್ಟದ್ದು, ನಷ್ಟದ್ದು. ಕೊಳ್ಳುವವರು

ಕೊಳ್ಳುತ್ತಾರೆಂಬ ನಂಬಿಕೆ ಇದ್ದರೆ ತಾನೇ ಪ್ರಕಾಶಕರು ಆ ಕಾರ್ಯ ಕೈಗೊಳ್ಳುವುದು? ಅದರಲ್ಲಿಯೂ ನಾನು ಕವನಗಳೆಂದುಕೊಂಡು ಬರೆದದ್ದು ಜನಕ್ಕೆ ಕವಿತೆಯೆಂದೇ ಈವರೆಗೂ ಒಪ್ಪಿಕೆಯಾಗಿಲ್ಲವೆಂಬ ಸಂಶಯ ಉಳಿದಿರುವ ನನ್ನ ಗೀತಗಳನ್ನು ನನಗೆ ಬೇಕಾದಂತೆ ಅಚ್ಚುಮಾಡಿಸಿಕೊಳ್ಳಿ ಎಂದು ಹೇಳಿ, ಬೆಂಗಳೂರು ಪ್ರೆಸ್ಸಲ್ಲಿ ಅದಕ್ಕೆ ಬೇಕಾದ ಸಮಸ್ತ ನೆರವು ಸಿಕ್ಕುವಂತೆ ಮಾಡಿದರು. ಕಡೆಯ ಹಣ ಕೊಡುವವನು ನಾನು ಎಂದು ಅಲ್ಲಿನ ಸೂಪರಿಂಟೆಂಡೆಂಟರು ಸುಬ್ರಹ್ಮಣ್ಯ ಅಯ್ಯರಿಗೆ ಹೇಳಿ ಧಾರಾಳ ಕೊಟ್ಟರು.

ಸುಬ್ರಹ್ಮಣ್ಯ ಅಯ್ಯರು ತುಂಬಾ ಬುದ್ಧಿವಂತರು. ಚುರುಕುಬುದ್ಧಿಯವರು. ಮಾತೂ ಅಷ್ಟೇ ಜಾಣ. ಬಹಳ ನಗೆಯಿಂದ ಮಾತನಾಡುತ್ತಾ ತಮಗೆ ಯಾವ ನಷ್ಟವೂ ಆಗದಂತೆ ಕುಳಗಳ ಕೆಲಸ ಚೆನ್ನಾಗಿ ಆಗುವಂತೆ ಕೆಲಸ ಮಾಡಿಸಿಕೊಳ್ಳಬಲ್ಲವರು. ಹಿಂದೆ ಅರಳಿಪೇಟೆಯ ಒಕ್ಕಲಿಗರ ಪ್ರೆಸ್ಸಿನಲ್ಲಿ ಕೆಲಸ ಮಾಡುತ್ತಿದ್ದು, ಬೆಂಗಳೂರು ಪ್ರೆಸ್ ಆರಂಭ ಆಗುತ್ತಲೇ ಅಲ್ಲಿ ಬಂದಿದ್ದವರು. ಆ ಪ್ರೆಸ್ ಕಂಪನಿಯ ಸೆಕ್ರೆಟರಿ ಹಯವದನರಾಯರು. ಆಫೀಸಿನ ಮ್ಯಾನೇಜರು ಮೊದಲು ನಾನು ಕಂಡವರು ಡೇನಿಯಲ್. ಹಯವದನರಾಯರು ಅನೇಕ ರಾಜಕೀಯ, ಸಾಮಾಜಿಕ, ಔದ್ಯೋಗಿಕ ಸಂಸ್ಥೆಗಳಲ್ಲಿ ಕೆಲಸ ಮಾಡಿದ್ದವರು. ವೃತ್ತಪತ್ರಿಕಾಪ್ರಪಂಚದಲ್ಲಿ ಹೆಸರಾದವರು. ಮೈಸೂರು ಗೆಜೆಟ್ಟಿಯರನ್ನು ಪರಿಷ್ಕರಿಸಿ ಒಂದಕ್ಕೆ ನಾಲ್ಕರಷ್ಟು ದೊಡ್ಡದು ಮಾಡಿ ಕೀರ್ತಿಪಡೆದವರು. 'ಮಿಥಿಕ್ ಸೊಸೈಟಿ'ಗೂ ಸಂಬಂಧಿಸಿದವರು. ಅವರದು ತಂಜಾವೂರು–ಕೊಯಮತ್ತೂರು ಬುದ್ಧಿ. ನಯವಾಗಿ ನುಣುಪಾಗಿ ಮಾತನಾಡಿ, ಯಾವುದಕ್ಕೂ ಸಿಕ್ಕಿಹಾಕಿಕೊಳ್ಳದೆ ಕೆಲಸ ಸುಸೂತ್ರವಾಗಿ ನಡೆದುಕೊಂಡು ಹೋಗುವುದಕ್ಕೆ ಎಷ್ಟು ಬೇಕೊ ಅಷ್ಟು ಮಾಡುವವರು. ವ್ಯಾಸಲೀನ್ ಇದ್ದ ಹಾಗೆ; ಅಂಟಲ್ಲ, ನೀರಲ್ಲ. ಡೇನಿಯಲ್ ಆಫೀಸ್ ಕೆಲಸವನ್ನು ದರ್ಪದಿಂದ ಮಾಡಬಲ್ಲ ಅಧಿಕಾರಿ. ಪ್ರೆಸ್ಸಿಗೆ ಬಂದ ಕುಳಗಳನ್ನು ಕುರಿತು ಅವರಲ್ಲಿ ಮರ್ಯಾದೆ, ನಯವಾದ ಮಾತು ಇತ್ತು. ಒಂದು ಮಾತು ಹೆಚ್ಚಿಲ್ಲ; ಒಂದು ಕಡಮೆಯಿಲ್ಲ. ಒಳಗಿನ ಎಲ್ಲ ವಸ್ತು ಸಾಮಗ್ರಿ ಏನಿದ್ದವು, ಏನಿಲ್ಲ; ಕೆಲಸಗಾರರ, ಗುಮಾಸ್ತರ ಯಾರ ಯಾರ ರೀತಿ ನಡವಳಿಕೆ ಹೇಗೆ, ಯೋಗ್ಯತೆ ಹೇಗೆ ಎಂಬುದನ್ನು ಚೆನ್ನಾಗಿ ಅರಿತು, ಅವರಿಂದ ಕೆಲಸ ತೆಗೆಯಬಲ್ಲವರು. ಇಬ್ಬರು ಪರಸ್ಪರ ಭಿನ್ನ ರೀತಿಯ ಜಾಣ, ದಕ್ಷರನ್ನು ಒಲಿಸಿ ನಂಬಿಸಿ, ಕೆಲಸ ಮಾಡಿಸುವ ಪ್ರಯಾಸ ಬಲ್ಲವರು. ಡೇನಿಯಲ್, ಅಯ್ಯರ್ ಸಂಬಂಧ ಬಹು ಮೋಜಿನದು. ಇವರನ್ನು ಒಲಿಸಿ ನನ್ನ ಗೀತಗಳ ಮುದ್ರಣ ಚೆನ್ನಾಗುವುದಕ್ಕೆ ಯತ್ನ ಮಾಡುವುದು ನನಗೂ ಪ್ರಯಾಸವೇ ಆಯಿತು. ಅದರ ಕಾಗದ, ಅಚ್ಚಿನ ವಿಧಾನ, ಬೈಂಡಿನ ಕಾಗದ, ಚಿತ್ರಗಳು ಮುಂತಾದ ವ್ಯವಸ್ಥೆಗೆ ಸಾಮಾನ್ಯವಾಗಿ ಅವರ ದರಗಳಿಗಿಂತ ಎರಡರಷ್ಟಾಗುವುದೆಂದು ಗೊತ್ತಾಯಿತು. ಇಲ್ಲಿ ಬೆಂಗಳೂರು ಪ್ರೆಸ್ಸಲ್ಲಿ, ಮೈಸೂರಲ್ಲಿ ವೆಸ್ಲಿ ಪ್ರೆಸ್ಸಲ್ಲಿ ಅಚ್ಚಿನ ವೆಚ್ಚ ಉಳಿದೆಲ್ಲ ಕಡೆಗಿಂತಲೂ ಆಗ ಹೆಚ್ಚು. ಎಲ್ಲ ದರಗಳೂ ಅತೀವವಾಗಿ ಹೆಚ್ಚಿರುವ ಈಗಲೂ ಇವಕ್ಕೆ ಎರಡರಷ್ಟು ಮೂರರಷ್ಟು ದುಬಾರಿ ದರ ಹಾಕುವ ಅಚ್ಚುಮನೆಗಳಿವೆಯಾಗಿ ಈ ಸ್ಪರ್ಧೆಯ ಚುರುಕು ಇನ್ನೂ ಬಲವಾಗಿದೆ. ಆದರೆ ಕೆಲಸ ನಾಜೂಕಾಗುತ್ತದೆ ಎಂಬುದು ಆ ಕಾಲದಲ್ಲಿ ಎಲ್ಲರಿಗೂ ಮಂದಟ್ಟಾದ ಸಂಗತಿ. ಇದಕ್ಕೆ ಕೆ. ಪುಟ್ಟಣ್ಣಶೆಟ್ಟರು ಪ್ರೆಸಿಡೆಂಟರು. ವೆಸ್ಲಿ ಪ್ರೆಸ್ ಮಿಷನರಿ ಸಂಸ್ಥೆ. ಆಫೀಸಿನ

ಒಳಗೆ ಅಚ್ಚಿನ ಯಂತ್ರಗಳ ಇತರ ಕೆಲಸಗಳು ನಡೆಯುತ್ತಿದ್ದುದರಿಂದ ಬಾಗಿಲು ತೆರೆದು ಮುಚ್ಚಿ ಹತ್ತು ನಿಮಿಷಕ್ಕೆ ಆರು ಸಲ ಜನ ಬಂದುಹೊಗುತ್ತಿದ್ದುದರಿಂದ ಒಳಗಿನ ಕೆಲಸದ ಗದ್ದಲ ಚಟುವಟಿಕೆ ಕೇಳುತ್ತಿತ್ತು, ಕಾಣುತ್ತಿತ್ತು. ನನಗೆ ಒಪ್ಪಿಕೆಯಾಗುವಂತೆ ಕೆಲಸ ಮಾಡಬೇಕಾದರೆ ಮೊಳೆ ಜೋಡಿಸುವವರು, ಮುದ್ರಣಕಾರರು, ಮಸಿ ಬಣ್ಣಗಳನ್ನು ಗೊತ್ತುಮಾಡುವವರು ಎರಡು ಮೂರು ಪುಟ ಜೊಡಣೆ ಕ್ರಮ ತೀರ್ಮಾನವಾಗಬೇಕಾಗುತ್ತಿತ್ತಾಗಿ, ಅಲ್ಲಿನ ಕೆಲಸಗಾರರೊಡನೆ ಹೆಚ್ಚು ಹತ್ತಿರ ಸಂಪರ್ಕ ಬೆಳೆಯುವಂತಾಯಿತು. ಇದಕ್ಕೆ ಅವಕಾಶ ಕೊಟ್ಟದ್ದು ಡೇನಿಯಲ್ ಸಜ್ಜನಿಕೆ. ಬಿಲ್ ಬಂದಾಗ, ತಮಾಷೆಗೆ ನಾನು ಅಯ್ಯರಿಗೆ – 'ಪುಸ್ತಕ ಚೆನ್ನಾಗಿ ಬಂದಿದೆ, ನಿಮ್ಮ ಪ್ರೆಸ್ಸಿಗೆ ಒಳ್ಳೆಯ ಹೆಸರು, ಪ್ರಕಟನಕಾರರಿಗೂ ಹೆಸರು, ನಿಮಗೆ ಒಳ್ಳೆಯ ಅಡ್ವರ್‌ಟೈಸ್‌ಮೆಂಟ್ ಆಗುತ್ತದೆ. ಬಿಲ್ಲಿನಲ್ಲಿ ಸ್ವಲ್ಪ ಸೋಡಿ ಕೊಡಬಹುದಲ್ಲವೆ?' ಎಂದೆ. ಡೇನಿಯಲ್, ಅಯ್ಯರ್ ಮುಖ ನೋಡಿಕೊಂಡರು. ಕಡೆಗೆ ಅಯ್ಯರ್ 'ನೀವು ನಮ್ಮ ಒಬ್ಬೊಬ್ಬ ಪ್ರಿಂಟರನ, ಮೊಳೆ ಜೋಡಿಸುವವರ ಕಾಲವನ್ನು ಒಂದಕ್ಕೆ ಹತ್ತು ತೆಗೆದುಕೊಂಡಿದ್ದೀರಿ. ಅದಕ್ಕೆ ನಾವು charge ಮಾಡಿಲ್ಲ' ಎಂದರು. ಪುಟವನ್ನು ಎರಡು ರಂಗಿನ ಬಣ್ಣದಲ್ಲಿ ಅಚ್ಚುಮಾಡಿಸಿತ್ತು. ಒಂದು ಬಹು ಒಳ್ಳೆಯ ಸಾಮಾನ್ಯ ಪೇಪರ್ ಮೇಲೆ – ಆಗ ಒಂದು ಪೌಂಡ್ ಪೇಪರಿಗೆ ನಾಲ್ಕು–ನಾಲ್ಕುವರೆ ಆಣೆ ಬೆಲೆ ಇತ್ತು. ಗರಿತೂಕದ ಕಾಗದ ಪೌಂಡಿಗೆ ಆರಾಣೆ ಇತ್ತು. ಒಳ್ಳೆಯ ಗಾತ್ರದ ಹೊಳಪಿನ ಕಾಗದದಲ್ಲಿ – ಕಪ್ಪು ಮಿಶ್ರವಾದ ಕಂದಿಗೆ ಅಥವಾ ಸಿಪಿಯಾಕ್ಕೆ ಮಸಿಯನ್ನು ಕೂಡಿಸಿಕೊಂಡು ಪುಸ್ತಕವನ್ನು ಅಚ್ಚು ಮಾಡಿಸುವುದೆಂದಾಗಿತ್ತು. ಕಲ್ಕತ್ತದ ಚಾರುಚಂದ್ರ ರಾಯ್ ಎಂಬವರ ಅಪ್ಪಣೆ ಪಡೆದು ಅವರ 'The Call of the Woods' ಎಂಬ ಹಳೆಯ ಚಿತ್ರವನ್ನು ಸಂಗ್ರಹಿಸಿ, ಅದನ್ನು ಹಿತ್ತಾಳೆಯ ಹೈಟೋನ್ ಬ್ಲಾಕ್ ಮದರಾಸಿನ ಸಿಂಪ್ಸನ್ ಕಂಪನಿಯಿಂದಲೊ ಪಿ. ಆರ್. ಅಂಡ್ ಸನ್ಸ್ ಕಂಪನಿಯಿಂದಲೊ ಮಾಡಿಸಿ ತರಿಸಿತ್ತು. ರಟ್ಟಿನ ಮೇಲೆ ಒತ್ತಿ ಮುದ್ರೆ ಬೀಳುವಂತೆಯೂ ಕ್ಯಾಲಿಕೊ ಬೈಂಡಾದ ಪುಸ್ತಕಗಳ ಮೇಲೆ ಚಿನ್ನದ ರೇಕುಗಳ ಮೇಲೆ ಅಕ್ಷರ ಚಿತ್ರ ಬರುವಂತೆಯೂ ಅಚ್ಚುಮಾಡಲು ಎರಡಕ್ಕೂ ಒದಗುವಂತೆ ಮಾಡಿಸಿತ್ತು. ಒಂದು ಚಿತ್ರದ ವಿಚಾರ ಆರು ತಿಂಗಳ ಕಾಲ ಹಿಡಿಯಿತು. ನನ್ನ ಕಲೆಗಾರ ಮಿತ್ರರಾದ ಕೆ. ವೆಂಕಟಪ್ಪನವರ 'ಅರ್ಧನಾರೀಶ್ವರ'ವನ್ನು ಬೇಡಿ ಫೋಟೊಗ್ರಾಫನ್ನು ಅವರಿಂದ ತೆಗೆದುಕೊಂಡಿದ್ದೆ. ಮೂಲ ಚಿತ್ರವನ್ನು ಯಾರೊ ಕಳವು ಮಾಡಿದ್ದರು. ಅದನ್ನು ಮುಖ ಚಿತ್ರವನ್ನಾಗಿ ಬಳಸಬೇಕೆಂದು ನನ್ನ ಹಂಬಲ. ಬೆಂಗಳೂರು ಪ್ರೆಸ್, ವೆಸ್ಲಿ ಪ್ರೆಸ್, ಟೈಮ್ಸ್ ಆಫ್ ಇಂಡಿಯಾ ಪ್ರೆಸ್, ಅಲಹಾಬಾದಿನ ಯಾವುದೊ ಫೋಟೊ ಎನ್‌ಗ್ರೇವಿಂಗ್ ಪ್ರೆಸ್ – ಯಾವುದೂ ನಮಗೆ ಸರಿಯಾದ ಬ್ಲಾಕ್ ಮಾಡಿಕೊಡಲಿಲ್ಲ (ಅದು ಸುಮಾರು ೧೯೩೦ರ ಕಾಲ). ಯೂರೋಪಿಗೆ ಕಳಿಸಿ ಮಾಡಿಸಿ; ನಿಮಗೆ ವೆಚ್ಚ ಹೆಚ್ಚಾದರೆ ನಾನು ಕೊಡುತ್ತೇನೆ ಎಂದರು, ವೆಂಕಟಪ್ಪನವರು. ಈ ಸಂಗತಿಯನ್ನು ನಿಟ್ಟೂರರಿಗೆ ತಿಳಿಸಲು – 'ಸರ್ವಸ್ವಾತಂತ್ರ್ಯ ನಿಮ್ಮದು; ಹೇಗೆ ಬೇಕಾದರೂ ಮಾಡಿಸಿ. ವೆಂಕಟಪ್ಪನವರು ಹೇಳಿದ ಹಾಗೆ ಮಾಡೋಣ' ಎಂದರು. 'ಹಣ ಹೆಚ್ಚಾಗುತ್ತದಲ್ಲವೆ? ಇನ್ನಷ್ಟು ತಡ ಆಗುವುದಲ್ಲವೆ?' ಎಂದೆ. 'ಆದರಾಯಿತು' ಎಂದರು.

ಅಚ್ಚಾದ ಪುಸ್ತಕ ಬೈಂಡಾಗಲು ಅವರ ಕಾರಣದಿಂದಲ್ಲದೆ ತಡವಾಗುವುದಕ್ಕೆ ಪ್ರೆಸ್‌ಗಳವರು ಅಧಿಕ ಚಾರ್ಜ್ ಮಾಡುತ್ತಾರೆ. ಅದರ ವೆಚ್ಚವೂ ಬಿತ್ತು. ಕಡೆಗೆ ಆಗ ಲಂಡನ್ನಲ್ಲಿ Studio ಪತ್ರಿಕೆಯ ಸಂಪಾದಕರಾಗಿದ್ದ ಸರ್ ಚಾರ್ಲ್ಸ್ ಹೋಮ್ಸ್ ಅವರಿಗೆ ಬರೆದು, ಅಲ್ಲಿನ ಯಾವುದಾದರೂ ಕಂಪನಿಯ ಮೂಲಕವಾಗಿ ಈ ಫೋಟೊಗ್ರಾಫನ್ನು ಕಾಲೊಟೈಪ್ ಬ್ಲಾಕ್ ಮಾಡಿಸಿ ೧,೨೦೦ ಪ್ರತಿಗಳನ್ನು ಕಳಿಸಿಕೊಟ್ಟರೆ ದೊಡ್ಡ ಉಪಕಾರವಾಗುತ್ತದೆ ಎಂದು ಪ್ರಾರ್ಥನೆ ಮಾಡಿದೆ. ಗುರುತಿಲ್ಲ, ಪರಿಚಯವಿಲ್ಲ; ಅವರು ಒಪ್ಪಿಕೊಂಡು, ಯಾವುದೊ ಅಲೆಕ್ಸಾಂಡರ್ ಅಂಡ್ ಕಂಪನಿ ಎಂಬುದರ ಮೂಲಕ, ಒಂದು ಸಾವಿರ ಪ್ರತಿ ಕ್ರೌನ್ ಗಾತ್ರಕ್ಕೆ ಇನ್ನೂರು ಪ್ರತಿ ಕ್ವಾರ್ಟೋ ಗಾತ್ರಕ್ಕೆ ಅಚ್ಚುಮಾಡಿಸಿ ಕಳಿಸಿಕೊಟ್ಟರು. ಚಿತ್ರ ಚೆನ್ನಾಗಿ ಬಂದಿತ್ತು. ಕೆ. ವೆಂಕಟಪ್ಪ ಎಂಬ ಅಕ್ಷರ ಕೂಡ ಅಚ್ಚಿನಲ್ಲಿ ಸ್ಪಷ್ಟವಾಗಿ ಕಾಣುತ್ತಿತ್ತು. ಅದಕ್ಕೆ ಹಾಕಿದ್ದ ಕಾಗದ ಆಗ ಸಾಧಾರಣವಾಗಿ ನಮ್ಮಲ್ಲಿ ದೊರೆಯುತ್ತಿರಲಿಲ್ಲ. ವೆಂಕಟಪ್ಪನವರಿಗೆ ಮೆಚ್ಚಿಕೆಯಾಯಿತು. ಅದಕ್ಕೆ ನಮಗೆ ಬಿದ್ದ ವೆಚ್ಚ ಇವೊತ್ತಿನ ಲೆಕ್ಕದಲ್ಲಿ ನೋಡಿದರೆ ಅತ್ಯಲ್ಪ. ಹನ್ನೆರಡು ಪೌಂಡೊ ಹದಿನೈದು ಪೌಂಡೊ ಆಯಿತು. ಆಗ ಪೌಂಡಿಗೆ ಹದಿನೈದು ರೂಪಾಯಿ ಬೆಲೆ. ೧,೨೦೦ ಪ್ರತಿಗಳಿಗೆ ಹಂಚಿದರೆ ಅದೇನು ತಲೆ ಮೀರುವಂತಹದಲ್ಲ. ಪುಸ್ತಕ ಚೆನ್ನಾಗಿ ಅಚ್ಚಾಯಿತು. ಬಿಲ್ ೧,೫೦೦ ರೂಪಾಯಿಯೊ ಏನೊ ಬಂತು. ಸಾಮಾನ್ಯ ಪ್ರತಿಗೆ ರೂಪಾಯಿ ಎರಡರಂತೆ ಮಾರಿದೆವು. ರಾಯರಿಗೆ ಅದರಿಂದ ಯಾವ ಲಾಭವೂ ಬರಲಿಲ್ಲ. ನನಗೆ ಅಚ್ಚಿನ ಮನೆಯ ಅನುಭವ ಆಯಿತು. ಪ್ರೆಸ್ಸಿನವರೇ ಸಂತೋಷಪಟ್ಟುಕೊಂಡ ಒಂದು ಪುಸ್ತಕವನ್ನು ಅವರು ಹೊರತರುವಂತಾಯಿತು. ಅದಕ್ಕಾಗಿ ನಾವು ಐದಾರು ಬಗೆಯ ರಕ್ಷಾಪತ್ರ ತರಿಸಿ ಆ ಎಲ್ಲದರಲ್ಲಿಯೂ ೨೦೦–೩೦೦ ಪ್ರತಿಗಳಂತೆ ಬೈಂಡ್ ಮಾಡಿಸಿದೆವು. ಯಾವ ಮಾತನ್ನೂ ಆಡದೆ ರಾಯರು ಬಿಲ್ ತೆತ್ತರು. ಇನ್ನಾವುದೊ ಸಂದರ್ಭದಲ್ಲಿ ನಾನು ತಮಾಷೆಗೆ ಬೈಬಲಿನ 'Prodigal Son' ಕತೆ ಹೇಳಿದೆ. ಈ ಸಂಬಂಧದಲ್ಲಿ ರಾಯರ ದೊಡ್ಡತನ ಎಷ್ಟು ಸಂಯಮದ್ದು, ಧೋರಣೆ ಎಷ್ಟು ಗಂಭೀರವಾದ್ದು, ಸರಳತೆ ವಿಶ್ವಾಸ ಎಷ್ಟು ಪ್ರಿಯವಾಗಿ ತೋರಬಲ್ಲದು ಎಂಬುದನ್ನು ಅರಿಯಲಾಯಿತು. ಇದೇ ಕಥೆ ಮೈಸೂರಿನ ವೆಸ್ಲಿ ಪ್ರೆಸ್ಸಲ್ಲಿ ನನ್ನ 'ದ್ರಾಕ್ಷಿ–ದಾಳಿಂಬೆ' ಅಚ್ಚಾದಾಗಲೂ ಮುಂದುವರಿಯಿತು. ಎರಡೂ ಸಮಯಗಳಲ್ಲಿ ಕವಿತೆಗಳನ್ನು ಎರಡು ಬಣ್ಣದ ಮಸಿ ಬಳಸಿ ಪ್ರಕಟಿಸುವುದಕ್ಕೂ ಉತ್ತಮ ತೆರದ ಕೆಲವು ಪ್ರತಿಗಳನ್ನು ಅಚ್ಚು ಮಾಡುವುದಕ್ಕೂ 'ದ್ರಾಕ್ಷಿ–ದಾಳಿಂಬೆ'ಯ ಒಳ್ಳೆಯ ಕೆಲವು ಪ್ರತಿಗಳನ್ನು ವಾಟ್‌ಮನ್ ಡ್ರಾಯಿಂಗ್ ಪೇಪರಲ್ಲಿ ಅಚ್ಚುಮಾಡಿ, ಮೊರಾಕ್ಕೊ ಬೈಂಡ್ ಮಾಡಿಸುವುದಕ್ಕೂ ಗಿಲ್ಡ್ ಮಾಡಿಸುವುದಕ್ಕೂ ರಾಯರು ಒಪ್ಪಿಕೊಂಡರು. ಇವು ಪೂರ್ತಿ ನನ್ನ ಖಿಯಾಲಿಯಿಂದ ನಡೆದ ಕಾರ್ಯಗಳು. ಇದನ್ನು ಅರಿತಿದ್ದ ಅವರು ಪ್ರತಿಯಾಗಿ ಒಂದು ಮಾತಾಡದೆ ನಡಸಿಕೊಟ್ಟದ್ದು ನಿಜವಾಗಿ ದೊಡ್ಡತನ.

ಎಷ್ಟೋ ಸಲ ಸಾಹಿತ್ಯ ಸಮ್ಮೇಳನಗಳಲ್ಲಿ, ಸಂಘ – ಸಮಾರಂಭಗಳಲ್ಲಿ, ಗೆಳೆಯರ ಕೂಟಗಳಲ್ಲಿ ಒಂದೇ ಮಮತೆಯಿಂದ ನಡಸಿಕೊಂಡಿದ್ದಾರೆ. ಬಹುಶಃ ಮೂರ್ತಿರಾಯರೂ ಇವರೂ ಸೇರಿ ನನ್ನನ್ನು ಕುಮಟಾ ಸಾಹಿತ್ಯ ಸಮ್ಮೇಳನಕ್ಕೆ ಅಧ್ಯಕ್ಷನನ್ನಾಗಿ ಮಾಡಿ, ಆ ಗೌರವವನ್ನು ನನಗೆ ತಂದುಕೊಟ್ಟರೆಂದು ಬಲ್ಲೆ. ನನ್ನ ಸಂಕೋಚವನ್ನು ಆಗ ಅಧ್ಯಕ್ಷರಾಗಿದ್ದ

ಮೂರ್ತಿರಾಯರಿಗೆ ತಿಳಿಸಲು ಅವರೂ ಇಷ್ಟರಲ್ಲಿಯೇ ತಾವೂ ರಾಯರೂ ನನ್ನಲ್ಲಿಗೆ ಬಂದು 'third - degree methods' ಬಳಸಬೇಕಾಗುತ್ತದೆಂದು ನಿರ್ಣಯಿಸಿದ್ದೇವೆಂದು ಬರೆದರು!

ಸಾರ್ವಜನಿಕ ದೃಷ್ಟಿಯಿಂದ ಕನ್ನಡ ಸಾಹಿತ್ಯ ಪರಿಷತ್ತು ತನ್ನ ನಿಲವನ್ನು ಧೋರಣೆಯನ್ನು ನಡಸಬೇಕೆಂದು ಪ್ರಶ್ನೆಗಳಿದ್ದಾಗ, ಕೆಲವು ವೇಳೆ ನಾವು ಬೇರೆ ಬೇರೆ ಪಕ್ಷಗಳಲ್ಲಿ ನಿಲ್ಲಬೇಕಾಗಿ ಬಂದಿತು. ಅಧಿಕಾರ ನಡಸುವವರಿಗೆ ಅವರು ಪೂರ್ತಿಯಾಗಿ ಅನುಕೂಲವಲ್ಲವೆಂಬ ಸಂಶಯ ಬಂದಾಗಲೆಲ್ಲ ನಾನು ಆ ವರ್ಗಕ್ಕೆ ಅನುಕೂಲ ಎಂಬ ಕಾರಣ ಅವರಲ್ಲಿ ಯಾವ ಬಗೆಯ ಅಸಮಾಧಾನವನ್ನೂ ಉಂಟುಮಾಡಲಿಲ್ಲ. ಅದು ಸಾರ್ವಜನಿಕ ವ್ಯವಹಾರ; ಸ್ನೇಹಗಳಿಗೆ ಅಡ್ಡಿ ಏನು ಬಂತು? – ಎಂದು ಅವರು ನಡೆದುಕೊಂಡರು. ಲೌಕಿಕವಾದ ಕೆಲವು ಸನ್ನಿವೇಶಗಳಲ್ಲಿ ನನಗೆ ಹಿರಿಯರೂ ಗರುವರೂ ಆಗಿ ಪರಿಷತ್ತಿನ ಇತರರ ದೃಷ್ಟಿಯಲ್ಲಿ ನನ್ನ ಇತರ ಕೆಳೆ ನಡವಳಿಕೆಗೆ ಹದಿನಾರಾಣೆ ಭಾಗ – ಆಗ ಆಣೆಗಳ ಕಾಲ – ವಿಶ್ವಾಸ ದೊರಕದ ಸಂದರ್ಭಗಳುಂಟು. ಧಾರವಾಡದಲ್ಲಿ ನಡೆದ ಒಂದು ವಾರ್ಷಿಕ ಸಭೆಯಲ್ಲಿ ಹೀಗಾದುದು ನನ್ನ ನೆನಪಿನಲ್ಲಿದೆ. ಇನ್ನೊಂದು ಸಲ ಮಾಸ್ತಿಯವರ ಮನೆಯಲ್ಲಿ ಹತ್ತು ಮಂದಿ ಸ್ನೇಹಿತರಿಗೆ ಭೋಜನ ಕೂಟವನ್ನು ಏರ್ಪಡಿಸಿದ್ದರು. ಅತಿಥಿಗಳಲ್ಲಿ ಪಂಜೆಯವರೂ 'ಶ್ರೀ'ಯವರೂ 'ತ್ರಿವೇಣಿ'ಯ ಸಂಪಾದಕರಾದ ರಾಮಕೋಟೀಶ್ವರರಾಯರೂ ಇದ್ದರು. ಊಟಕ್ಕೆ ಮುಂಚೆ ಅದೂ ಇದೂ ಮಾತು ನಡೆಯುತ್ತಿತ್ತು. ರಾಮಕೋಟಿ ನನ್ನ ಹೆಸರೆತ್ತಿ 'ಒಕ ಮಾಟಾಡಕ ಊರಕ ಕೂಚೋ ಉನ್ನಾರೆ. ಅಂತ ಪೊದ್ದಟಿನುಂಡಿ ಚೂಸ್ತುನ್ನಾನು' ಎಂದರು. ಮೇಲೆ ಹೇಳಿದವರೆಲ್ಲ ನನಗೆ ಹಿರಿಯರೆ. ಅವರು ಏನೇನನ್ನೊ ಮಾತಾಡುತ್ತಿರುವಾಗ ನುಗ್ಗಿ ಬಾಯಿ ಹಾಕುವುದು ನನ್ನ ರೂಢಿ, ನಡತೆಯಲ್ಲವಾಗಿತ್ತು. ಆ ಸಂಗತಿಯನ್ನು ನಿವೇದಿಸಿದೆ. ಮಾಸ್ತಿಯವರು 'Don't you know, Ramkoti, he is known as our Great Silence' ಎಂದರು. ಪಂಜೆಯವರು ಮುಗುಳ್ನಗೆ ನಕ್ಕರು. 'ಶ್ರೀ'ಯವರು 'I should add Mysterious' ಎಂದರು. ಈ ನಾಲ್ವರ ಎಣಿಕೆಯಲ್ಲಿ 'Great', `Mysterious' ಎಂಬ ಮಹಾಗುಣವಾಚಿಯಾದ ಬಿರುದು ಬಂತು. ನಾನು ಯಾವುದಕ್ಕೂ ಉತ್ತರ ಕೊಡಲಾಗಲಿಲ್ಲ. 'ಗೊಪ್ಪವಾಂಡ್ಲು, ಮಾಟಲಾಡು ತಪ್ಪುಡು ನೇನೇಮಿ ಚೆಪ್ಪುನಟ್ಲುನ್ನಾನು' ಎಂದೆ ಮಾತ್ರ. ನಿಟ್ಟೂರರು 'ಹೋಗಲಿ ಬಿಡಿ, ಸ್ವಸ್ವರೂಪದ ಜ್ಞಾನವಾಯಿತಲ್ಲ' ಎಂದೇನೊ ಅಂದರು. ಅದಕ್ಕೆ ಗುಣವಾಗಿಯೇ ಈ ಬಿರುದು ಬಂದದ್ದು ಎಂದು ನುಂಗಿ ಸಮಾಧಾನ ಮಾಡಿಕೊಳ್ಳಬೇಕಾಯಿತು. ಇನ್ನೊಂದು ಸಲ ಶ್ರೀನಿವಾಸಪುರಕ್ಕೆ ಏತಕ್ಕೊ ಹೋಗಿ ಅಲ್ಲಿಂದ ಬರುತ್ತ ಕೋಲಾರದ ಪ್ರವಾಸಿಮಂದಿರದಲ್ಲಿ ರಾತ್ರಿ ಊಟಕ್ಕೆ ಮುಂಚೆಯೊ ಆಮೇಲೊ ನಾಲ್ವರು ಮಾತಾಡುತ್ತಿದ್ದೆವು. ಆವರೆಗೆ ನಡೆದ ಒಂದು ವಾದದಲ್ಲಿ ನನ್ನ ಅಭಿಪ್ರಾಯ ಪೂರ್ತಿ ಆವರೆಗೆ ಅವರೆಂದಿದ್ದುದಕ್ಕೆ ಪ್ರತಿ ಎಂದು ಕಾಣುತ್ತದೆ. ಚರ್ಚೆ ಮೂವರು ನಾಲ್ವರಲ್ಲಿ ಒಂದು ಕಾವಿಗೆ ಏರುವಷ್ಟು ಬಿಸಿ ಏರಿತ್ತು. ಯಾವ ಅಸಮಾಧಾನಗಳ, ಅಮೈತ್ರಿಗಳ ಪ್ರಸಂಗವೊ. ಅದನ್ನು ಕುರಿತು ತೀವ್ರ ಚರ್ಚೆ. ಆಗ ನನ್ನ ಅಭಿಪ್ರಾಯವನ್ನು ಕುಕ್ಕುವಂತೆ ರಾಯರೇನೊ

ಅಂದಹಾಗೆ ಕಾಣುತ್ತದೆ. ಅವರೆಗೂ ನನ್ನನ್ನು ಬಿಗಿದ ಕಟ್ಟು ಸಡಿಲಿ, ಆಡಿದ ಒಂದುಮಾತು ಮಿತಿಯನ್ನು ಮೀರಿದಂತೆ ನನಗೆ ನೆನಪು. ಮಿತಿ ಎಂಬುದೇ ಮರ್ಯಾದೆಯ ಮೂಲಾರ್ಥ ಅಲ್ಲವೆ? ಆ ನುಡಿತಕ್ಕೆ ನನಗೇ ಬೇಸರ. ರಾಯರು 'ಹೋಗಲಿ; ಅವರು ಕೋಪಿಸಿಕೊಳ್ಳುವ ಹಾಗಿದೆ; ಬೇರೆ ವಿಷಯಕ್ಕೆ ಹೋಗೋಣ' ಎಂದರು. ಮಾತು ತಿರುಗಿತು. ರಾಯರೂ ಅದನ್ನು ಮನಸ್ಸಿನಲ್ಲಿಟ್ಟುಕೊಳ್ಳಲಿಲ್ಲ. ಏಕೆ ಹೇಗೆ ಹಿರಿಯರು ಮಾತನಾಡುತ್ತಿದ್ದ ಧೋರಣೆಗೆ ಆ ಮುಂಚಿತವಾಗಿ ನಾನು ವಿರೋಧವನ್ನು ವ್ಯಕ್ತಪಡಿಸಲಿಲ್ಲ ಎಂಬುದನ್ನು ಇವರು ಅರಿತುಕೊಂಡರಾಗಿ, ನನ್ನ ಸಂಯಮ ಕಡಿದುದಕ್ಕೆ ಕಾರಣವನ್ನು ತಿಳಿದುಕೊಂಡರು. ಅವರ ತಾಳ್ಮೆಗೆ ನಾನು ಋಣಿ. ಆ ನೆನಪು ನನ್ನನ್ನು ಬಹುವೇಳೆ ಕಾಪಾಡಿದೆ. ನನ್ನ ಅವಿವೇಕಗಳಲ್ಲಿ ಅದೂ ಒಂದು.

ನಿಟ್ಟೂರರು ತುಂಬ ಸೌಮ್ಯರು. ನಡವಳಿಕೆಯಲ್ಲಿ ಸರಳರು. Gentle, mild ಎಂಬ ಸ್ವಭಾವ, ನಡತೆ, ಅವರದ್ದು. ನೇರವಾಗಿ ಇದು ಆಗುತ್ತದೆ, ಇದು ಆಗುವುದಿಲ್ಲ; ಅಥವಾ ಇನ್ನಷ್ಟು ಯೋಚಿಸೋಣ ಎನ್ನುವವರು. ಈ ವಿಧಾನ ಅವರ ವೃತ್ತಿಯಲ್ಲಿಯೂ – ಅದರ ಪೈಕಿ ಅತ್ಯುನ್ನತ ನ್ಯಾಯಾಧಿಪತ್ಯದ ನಿರ್ವಹಣೆಯಲ್ಲಿಯೂ – ಅವರಿಗೆ ಒಳ್ಳೆಯ ಮತ್ತು ಕೆಟ್ಟ ಎರಡು ಹೆಸರುಗಳನ್ನೂ ತಂದಿತು. ರಭಸದಲ್ಲಿ ಯಾವುದನ್ನೂ ನಿರ್ಣಯಿಸಿ ಮುಗಿಸಿಬಿಡುವ ಸ್ವಭಾವದವರಲ್ಲ. ಆದ್ದರಿಂದ ತೀರ್ಮಾನಗಳು ಸಾವಕಾಶವಾದ ಸಂದರ್ಭಗಳಿದ್ದುವಂತೆ. ಅವೇನೊ ನನಗೆ ತಿಳಿಯದ ಸಂಗತಿ. ಆಲೋಚನಾಪರರಲ್ಲಿ ಈ ಸಾವಕಾಶವಾಗುತ್ತದೆಂದು ಮಾತ್ರ ಬಲ್ಲೆ. Executive ಇಲಾಖೆಯಲ್ಲಿ ಇದು ದೋಷವಾದೀತಾದರೂ ಕಡೆಯ ನ್ಯಾಯನಿರ್ಣಯದಲ್ಲಿ ಇದು ತಪ್ಪಾಗಬಾರದೇನೊ. ಆದರೆ ಈ ಲಕ್ಷಣ ಬುದ್ಧಿಯ ಅಥವಾ ಮನೋದೌರ್ಬಲ್ಯದಿಂದ ಬಂದುದಲ್ಲ. ತಿಳಿವಳಿಕೆ ಅಪೂರ್ಣ, ಅಖಂಡಿತ ಎಂಬ ಕಾರಣದಿಂದಲೂ ಅಲ್ಲ. ಪರಿಸ್ಥಿತಿಯನ್ನು ಕುರಿತ, ಆ ಜನರ ಸ್ವಭಾವವನ್ನು ಅರಿತ, ಯಾವ ಯಾವುದೊ ಸಂಗತಿಗಳು ಅವರೆಣಿಕೆಗೆ ಬರುತ್ತಿದ್ದವಾದ್ದರಿಂದ ಧುಡುಂ ಪ್ರವೇಶ ಮಾಡಲು ಅವರಿಷ್ಟಪಡುತ್ತಿರಲಿಲ್ಲ. ಇಷ್ಟಪಡುವಾಗ ಒಂದು ಚೇಷ್ಟೆಯ ಮಾತನ್ನು ಆಡುವ ರೀತಿ, ಆಡಿ ಅದಕ್ಕೆ ಪ್ರತಿಕ್ರಿಯೆ ಹೇಗೆ ಇರುವುದೋ ನೋಡಿ ಮಾತನ್ನೂ ವಾದವನ್ನೂ ಮುಂದುವರಿಸುವವರು. ದನಿಯೆತ್ತಿ ನುಡಿವ ಸ್ವಭಾವ, ರೀತಿ ಅವರದಲ್ಲ. ಒಂದು ಸಂದರ್ಭ ಹೀಗಿದೆ: ಎರಡನೆಯ ಯುದ್ಧ ಮುಗಿಯಿತು. ಯುದ್ಧದಲ್ಲಿ ಬ್ರಿಟಿಷರಿಗೆ ಜಯವನ್ನು ತಂದುಕೊಟ್ಟ ವಿನ್‌ಸ್ಟನ್ ಚರ್ಚಿಲ್ ಚುನಾವಣೆಯಲ್ಲಿ ಪರಾಜಿತರಾದರು. ಮೇಜರ್ ಅಟ್ಲಿ ಪ್ರಧಾನಿಯಾದರು. ಆ ಸಂಜೆ ಬೆಂಗಳೂರು ಸಿಟಿ ಇನ್‌ಸ್ಟಿಟ್ಯೂಟಿನಲ್ಲಿ ಹೊರ ಅಂಗಳದಲ್ಲಿ ಕುರ್ಚಿಗಳ ಮೇಲೆ ಕುಳಿತು ದೋಸೆಗಳನ್ನು ತಿನ್ನುತ್ತ ಬ್ರಿಟಿಷ್ ರಾಜಕೀಯ ಕುರಿತು ಮಾತುಕತೆ ನಡೆದಿತ್ತು. ನಾಲ್ಕೈದು ಜನರಿಗೆ ಒಬ್ಬೊಬ್ಬರ ಅಭಿಪ್ರಾಯವೂ ಅವರಿಗೆ ವಿರುದ್ಧವಾದುದು. ಕಾರಣ ಚರ್ಚಿಲ್ ಭಾರತವಿರೋಧಿ ಅಲ್ಲವೆ? 'I shall not like to preside over the funeral of the British Empire' ಎಂದಿದ್ದರು. ನನಗೂ ಆತನಲ್ಲಿ ಪ್ರೀತಿ ಪಕ್ಷಪಾತವಿಲ್ಲ. ಆದರೆ ಆಗ ತಾನೇ ಚುನಾವಣೆಯಲ್ಲಿ ಸೋತಿದ್ದ. ಮಹಾಮೇಧಾವಿಯಾದ ಆತನ ಮನಸ್ಸು ಭಾರತ ಪರವಾಗಿ

ಎಂಥದೇ ಆಗಿರಲಿ, ಮಾನವವಾಗಿ ಯಾವ ಕರುಣಾರ್ದ್ರವಾದ ಸ್ಥಿತಿಯಲ್ಲಿ ಈ ಕ್ಷಣ ಇರಬಹುದು ಎಂದೊ ಏನೊ – ಇಂದು ಅವರ ಮನಸ್ಸು ಎಷ್ಟು ಕೋಮಲ ವ್ಯಸ್ತ, – tender and sad – ಎಂಬಂತೆ ನಾನು ನುಡಿದೆ. ಜೊತೆಯಲ್ಲಿದ್ದವರೊಬ್ಬರು ನನ್ನ ಸಹಾನುಭೂತಿಗೆ, ಔದಾರ್ಯಕ್ಕೆ ಕಟಕಿಯಾಗಿ ಏನೊ ನುಡಿದರು. 'The Spirit of the Pities, always ready, always ineffective' ಎಂಬಂಥ ಮಾತು. ಈ Spirit of the Pities – ಥಾಮಸ್ ಹಾರ್ಡಿ ಬರೆದ 'ಡೈನಾಸ್ಟ್ಸ್' ನಾಟಕದಲ್ಲಿ ನುಡಿವ ಅತಿಮಾನವ ವಾಣಿಗಳು. ಶ್ರೀನಿವಾಸರಾಯರು ಇನ್ಸ್‌ಟಿಟ್ಯೂಟ್‌ಗೆ ಕರೆದುಕೊಂಡು ಹೋಗಿ ದೋಸೆಗಳನ್ನು ಕೊಡಿಸಿದ್ದರು. ಆ ಒಂದು ಸಮಯದಲ್ಲಿಯೂ ಮೆಲ್ಲಗೆ ಒಂದು ಮೃದು ಹಾಸ್ಯದ ಮಾತನ್ನಾಡಿ ಸನ್ನಿವೇಶದ ವಿರಸವನ್ನು ಪಾರುಮಾಡಿಸಿ ಮಾತನ್ನು ಬೇರೆ ಕಡೆಗೆ ತಿರುಗಿಸಿದರು.

ಅವರು ವ್ಯವಹರಿಸುತ್ತಿದ್ದುದು ಅನೇಕ ಬಗೆಯಲ್ಲಿ, ಮಂಡಳಗಳಲ್ಲಿ ಎಂದು ಹೇಳಿದೆ. ಪುಸ್ತಕ ಪ್ರಕಟನ ಕಾರ್ಯದಲ್ಲಿ ಅವರು ಎಷ್ಟೊ ಮಂದಿ ಬರಹಗಾರರಿಗೆ ಪರೋಕ್ಷವಾಗಿ, ನೇರವಾಗಿ ಪ್ರಕಟನೆಗೆ ಪುಸ್ತಕಗಳನ್ನು ತೆಗೆದುಕೊಳ್ಳುತ್ತಿದ್ದರು. ಅಥವಾ ಹಣದ ನೆರವನ್ನು ಕೊಡುತ್ತಿದ್ದುದುಂಟು. ಗಾಲ್ಸ್‌ವರ್ದಿಯ 'ಫಾರ್‌ಸೈಟ್ ಸ್ಯಾಗ'ದಲ್ಲಿ ಹಲವು ಕಡೆ ಲೇಮ್‌ಡಕ್ಸ್ (Lame Ducks) ಎಂಬ ಮಾತು ಬರುತ್ತದೆ. ಈ ಬಾತುಗಳು ಕಾಲು ಮುರಿದಿದ್ದುದರಿಂದ ನೇರವಾಗಿ ತಮ್ಮ ಆಹಾರವನ್ನು ತಾವು ಒದಗಿಸಿಕೊಳ್ಳಲಾರವಾದ್ದರಿಂದ ಬೇರೆಯವರ ನೆರವು ಬೇಕಿರುತ್ತಿತ್ತು. ಅಂಥ ಪ್ರಾಣಿಗಳಲ್ಲಿ ನಾನೊಬ್ಬನಾದ್ದರಿಂದಲೊ ಏನೊ ನನಗೆ ಅವರ ನೆರವು ಎಲ್ಲ ಕಾರ್ಯಗಳಲ್ಲಿಯೂ ದೊರೆಯುತ್ತಿತ್ತು.

ಪ್ರಕಟನ ಕಾರ್ಯದಲ್ಲಿ ಅವರು ಕೈಕೊಂಡ ಒಂದು ಸಾಹಸದ ಕೃತಿ ಕಾರಂತರ 'ಬಾಲ ಪ್ರಪಂಚ'ದ ಪ್ರಕಾಶನ. ಮಿಡಲ್ ಸ್ಕೂಲ್ ದಾಟಿ ಹೈಸ್ಕೂಲ್ ಶಿಕ್ಷಣದ ಸುಮಾರು ತಿಳಿವಳಿಕೆಯುಳ್ಳ ವಿದ್ಯಾರ್ಥಿಗಳಿಗೂ ವಯಸ್ಕರಾದ ಸಾಮಾನ್ಯ ಜನಕ್ಕೂ ಲೋಕಪರಿಜ್ಞಾನ ಉಂಟಾಗುವಂತೆ ಆ ಮಾಲೆ ಪ್ರಕಟವಾಯಿತು. ಯಾವೊಬ್ಬ ಲೇಖಕನೂ ಅಷ್ಟು ದೊಡ್ಡ ಕೆಲಸವನ್ನು ಆ ಮುಂಚೆ ಮಾಡಿದ್ದುದಿಲ್ಲ. ವಿಷಯಸಂಗ್ರಹಣದಲ್ಲಿ ಬರವಣಿಗೆಯ ಭಾಗವೊಂದು, ಅದಕ್ಕೆ ಬೇಕಾದ ಚಿತ್ರಗಳನ್ನು ಬರೆದು–ಬರೆಯಿಸಿ ಪಡಿಯಚ್ಚುಗಳನ್ನು ಮಾಡಿಸುವುದು ಇನ್ನೊಂದು. ಮಂಗಳೂರಿನ ಯಾವುದೊ ಪ್ರೆಸ್ಸಲ್ಲಿ ಅದು ಅಚ್ಚಾಗಬೇಕಿತ್ತು. ಅದನ್ನು ತಯಾರು ಮಾಡುವ ಕೆಲಸವನ್ನೆಲ್ಲ ಮೊದಲಿಂದ ಕಡೆಯವರೆಗೂ ಕಾರಂತರು ಒದಗಿಸಿದ್ದು ಅವರೊಬ್ಬರ ಸಾಹಸಕ್ಕೆ ಮಾತ್ರ ಅಳವಡುವ ಕಾರ್ಯ. ಕನ್ನಡ ನಾಡಿನಲ್ಲಿ ಅದಕ್ಕೆ ಬೀಳುವ ೨೫–೩೦ ಸಾವಿರ ರೂಪಾಯಿಗಳ ಒಟ್ಟು ವೆಚ್ಚವನ್ನು ದೊರಕಿಸಲು ಆ ಕಾರ್ಯಕ್ಕೆ ಸಹಭಾಗಿಗಳಾಗಿ ಒಪ್ಪಿಕೊಂಡುದು ನಿಟ್ಟೂರರ ಪ್ರಕಟನಸಾಹಸ. ನಡುವೆ ಎಷ್ಟೋ ಅಡ್ಡಿ ಆತಂಕಗಳು ಬಂದರೂ ಈ ವಿದ್ಯಾಪ್ರಚಾರಕಾರ್ಯದಲ್ಲಿ ಕೃತಿಕಾರರಾಗಿ ಕಾರಂತರು, ಪ್ರಕಾಶಕರಾಗಿ ನಿಟ್ಟೂರರು ದುಡಿದು ಅದನ್ನು ನಿರ್ವಹಿಸಿದುದು ಕನ್ನಡ ಪ್ರಕಾಶನ ಪ್ರಪಂಚದಲ್ಲಿಯೇ ಒಂದು ಸ್ಮರಣೀಯವಾದ ಸಂದರ್ಭ. ಯಾವಯಾವುವೋ ಕಾರಣಗಳಿಂದ ವೈಮನಸ್ಸು ಬೆಳೆಯದಂತೆ ಆ ಸಂಬಂಧದಲ್ಲಿ ಕಾರ್ಯ ನಡೆದುದನ್ನು ನಾನು

ಬಲ್ಲೆ. ಈ ಇಬ್ಬರು ಸಾಹಸಿಗಳು ಕಷ್ಟವೊ ನಿಷ್ಠುರವೊ ಸಹಿಸಿಕೊಂಡ ಚರಿತ್ರೆ ಬಹು ದೊಡ್ಡದು. ಇದೊಂದು ಚರಿತ್ರಾರ್ಹವಾದ ಕಾರ್ಯವಾಯಿತು.

ಶ್ರೀನಿವಾಸರಾಯರ ತಿಳಿವಳಿಕೆ ಬಹು ಖಚಿತವಾದುದು. ಅವರ ನೆನಪು ಆಶ್ಚರ್ಯವುಂಟು ಮಾಡುವಂಥದು. ಮೊದಮೊದಲಿಗೆ breakdown ಎಂಬ ಮಾತಿನ ಅರ್ಥ ಏನು ಎಂಬ ಒಂದು ಪ್ರಸಂಗ ಬಂತು. ಇದೇ ಸರಿ ಎಂದು ಗೊತ್ತಿಲ್ಲದ ನಾನು ಹೀಗಿರಬಹುದೊ ಏನೋ ಎಂದು ಹೇಳಿದ್ದೆ. ಕಡೆಯಲ್ಲಿನ ಸಮಾಧಾನ ಮಾಡಿ ಅದು ಹೀಗೆ ಎಂದು ರಾಯರು ತಿಳಿಸಿದರು. D–Day, D–Date ಎಂಬ ಮಾತು ಹೊಸದಾಗಿ ಬಂದಾಗಲೂ ಹಾಗೇ ಆಯಿತು. ಅದನ್ನು ಪೂರ್ತಿಯಾಗಿ ವಿವರಿಸಿದರು. ಅವರು ಯಾವ ಮಾತಿಗೂ ಮೇಲೆ ಬಿದ್ದು ಬರುವವರಲ್ಲ ಎಂಬುದಕ್ಕಾಗಿ ಈ ಸಂಗತಿಯನ್ನು ವಿಸ್ತರಿಸುತ್ತಿದ್ದೇನೆ. ಇನ್ನೊಬ್ಬರನ್ನು ಒತ್ತಿ ಮೆಟ್ಟುವಂತೆ ಯಾವುದನ್ನೂ ಹೇಳುವುದಿಲ್ಲ. ಅವರು ಧ್ವನಿಯನ್ನೆತ್ತಿ ಹೆಚ್ಚಾಗಿ ಮಾತಾಡುವ ಸ್ವಭಾವದವರೂ ಅಭ್ಯಾಸದವರೂ ಅಲ್ಲ ಎಂದಿದ್ದೇನೆ. ಎಂದೂ ಅವರ ನಡೆ, ನುಡಿ, ಸರಳ. ಹೈಕೋರ್ಟ್ ನ್ಯಾಯಾಧೀಶರಾದಾಗಲೂ ರಾಜಪ್ರಮುಖರಾದಾಗಲೂ ಅವರು ಧರಿಸುತ್ತಿದ್ದ ಉಡುಪು ತುಂಬ ಸರಳ. ನನ್ನ ಮನಸ್ಸಿಗೆ ಒಂದು ಬಗೆಯ ರಂಗು, ಒಪ್ಪ ಜನಕ್ಕೆ, ಪದವಿಗಳಿಗೆ ತಕ್ಕಂತೆ ಉಳಿಸಬೇಕು, ನಡಸಬೇಕು ಎಂಬುದು. ಯಾವಾಗಲೂ ರಾಯರು – ಸುಮಾರು ನಾನು ಕಂಡ ಕಾಲದಿಂದಲೂ – ಖಾದಿ ಭಕ್ತರು. ಜರತಾರಿ ರುಮಾಲು ಹಾಕಿದರೂ ಖಾದಿಯ ಭಾರವನ್ನೇ ಹೊತ್ತಾರು. ಆಮೇಲೆಯೂ ವಿದೇಶಿ ಅಥವಾ ಸ್ವದೇಶಿ ವೇಷದ ಬೆಡಗು ಸುತರಾಂ ಅವರಿಗೆ ಒಪ್ಪಲಿಲ್ಲ. ನನ್ನ ಮನಸ್ಸಲ್ಲಿ ಒಂದೊಂದು ಸಲ ಪಿಚ್ಚೆನ್ನಿಸುತ್ತಿತ್ತು. ಅವರಾಗಲಿ, ನನಗೆ ಹಿರಿಯರಾದ 'ಶ್ರೀ'ಯವರು, ಗುಂಡಪ್ಪನವರು, ಮಾಸ್ತಿಯವರು ರುಮಾಲು ಹಾಕುವುದು ನಿಲ್ಲಿಸಿದಾಗ ಹೀಗೆಯೇ ಪಿಚ್ ಎನ್ನಿಸಿತು. ಎಲ್ಲರೂ ಸರ್ವತಂತ್ರಸ್ವತಂತ್ರ ವರ್ಗದವರು; ಆದರೆ ನಾನ್ಯಾರು ಇದನ್ನು ಸೂಚಿಸುವುದಕ್ಕೆ? ಸ್ವತಂತ್ರವಾಗಿ ಎಲ್ಲವನ್ನೂ ಯೋಚನೆ ಮಾಡುವವರಿಗೆ ಬಿಡುವವರಿಗೆ ನನ್ನ ಒಪ್ಪಿಕೆ ಏಕೆ? – ಎಂಬ ವಿಷಯದಲ್ಲಿ ನನಗೆ ಸಂದೇಹ ಇಲ್ಲ. ಅವರು ದೆಹಲಿಯಲ್ಲಿ ವಿಜಿಲೆನ್ಸ್ ಕಮಿಷನರ್ ಆಗಿ ಅದಕ್ಕಾಗಿ ಸಂಚಾರಮಾಡುತ್ತಿದ್ದಾಗ ಕೂಡ ಹೀಗೇ ಇದ್ದರು. ಹತ್ತಿಗೆ ಬದಲು ಉಣ್ಣೆಯ ಬಟ್ಟೆ ಹಾಕಿಕೊಳ್ಳಬಹುದು ಹೊರತು ಉಡುಗೆತೊಡುಗೆ ಬೇರೆಯಾಗಲಿಲ್ಲ. ಈಗಂತೂ ಕೇವಲ ಖಾದಿ ಷರ್ಟ್ ಬನಿಯನ್ನಿಗೆ ಉಡುಗೆ ನಿಲ್ಲಿಸಿಕೊಂಡಿದ್ದಾರೆ.

ಇಂಥ ಕೆಲವು ಜನಕ್ಕೆ ಯಾವುದೋ ಒಂದು ವಿಶೇಷ ಅದೃಷ್ಟಬಲದಿಂದ ಒಂದು ನಿಶ್ಚಿತತೆ ಇರುತ್ತದೆ. ಇತರ ಹಿರಿಯರ ಮಾತು ಹೋಗಲಿ, ಒಬ್ಬರನ್ನು ಮಾತ್ರ ಸದ್ಯಃ ಹೆಸರಿಸುತ್ತೇನೆ: ಅವರು ಕೃಷ್ಣಶಾಸ್ತ್ರಿಗಳು. ನನಗೆ ಸ್ವಲ್ಪ ಕಿರಿಯವರಾದವರಲ್ಲಿ ನಿಟ್ಟೂರ್, ಕೆ. ವಿ. ರಾಘವಾಚಾರ್ ಇವರ ನೆನಪೂ ತಪ್ಪದೆ ಬರುತ್ತದೆ. ಇವರು ಸರ್ವದಾ ಖಚಿತ. ಇವರ ಗಡಿಯಾರಗಳಿಗೆ ತಕ್ಕಂತೆ ಕಾಲ – ೨.೨೭, ೬.೪೩ ಎಂದು ತಪ್ಪದೆ ನಡೆಯುತ್ತದೆ. ರೈಲುಗಳು ಇವರು ಹೇಳಿದ ಹೊತ್ತಿಗೆ ಟೈಂಟೇಬಲುಗಳಲ್ಲಿ ಸಿದ್ಧವಾಗಿರುತ್ತದೆ; ನಡೆಯುತ್ತದೆ. ಒಂದು ಪದದ ನಿಘಂಟಿನ ಅರ್ಥ ಅಥವಾ ಒಂದು ಶಬ್ದದ ಉಚ್ಚಾರ ಇವರು ನುಡಿದುದೇ

ಆಗುತ್ತದೆ. ಒಂದೂರಿಂದ ಇನ್ನೊಂದೂರಿಗೆ ದೂರ ಇವರು ಹೇಳಿದುದು ಮಾತ್ರ ನಿಜವಾಗುತ್ತದೆ. ಹೀಗಾಗಿ ನನ್ನಂಥವನಿಗೆ ಇದು ಆಕ್ರೋಶ ಕಾರಣ; ಇವರಲ್ಲಿ ಕ್ರೋಧವಷ್ಟೇ ಉಂಟುಮಾಡುವಷ್ಟು ಅಭಿಮಾನಭಂಗ ಆಗಿರುವುದುಂಟು. Louis, Louise, Lewis, Lewes, Lowes – ಇವುಗಳ ಉಚ್ಚಾರಣೆ ಹೇಗೆ? – ಎಂದಾಗ ಇವರ ತೀರ್ಮಾನವನ್ನು Oxford Dictionaryಯೊ ಆ ಭಾಷೆಯನ್ನಾಡುವ ಜನರೊ ಅನುಮೋದಿಸುತ್ತಾರಾಗಿ, ಈ ಭಂಗ ನನ್ನ ಆತ್ಮವಿಶ್ವಾಸವನ್ನೂ ಶಾಂತಿಯನ್ನೂ ಕೆಡಿಸಿವೆ. ತಮಗೆ ಸಂಬಂಧಪಡದ ಎಷ್ಟೋ ಸಂಗತಿಗಳನ್ನು ಕುರಿತು ಅವರು ಓದಿರುತ್ತಾರೆ. ಅನಿರೀಕ್ಷಿತವಾಗಿ ಒಂದು ಸಲ ಜಿ. ಕೆ. ಚೆಸ್ಟರ್‌ಟನ್ ಬರೆದ ಒಂದು ಪುಸ್ತಕದ ಹೆಸರನ್ನು ಹೇಳಿದರು. ಅನೇಕ ಗ್ರಂಥಗಳು – ರಾಜಕೀಯವಾಗಿಯೊ ಚಾಟುವಾಗಿಯೊ ಲೋಕಾಭಿರಾಮವಾಗಿ ಬರೆದ ಅಲಾಲುಟೊಪ್ಪಿಯೊ ಇತರ ಗ್ರಂಥಗಳನ್ನೊ – ಕುರಿತು ಅವರು ಅಧಿಕಾರಿಕವಾಗಿ ಮಾತನಾಡಬಲ್ಲ ಜನ. ಮನಸ್ಸಿನಲ್ಲಿ ಕೋಮಲವಾಗಿ ಯಾರು ಎಲ್ಲಿ ಕರೆದರೂ ಬಿಗುಮಾನವಿಲ್ಲದೆ ಹೋಗಿ ಸಾಮಾನ್ಯರ ಜೊತೆಯಲ್ಲಿ ಸಾಮಾನ್ಯರಂತೆ ನಡೆದುಕೊಳ್ಳುತ್ತಾರೆ. ಹಿಂದೆ ಅವರ ಹಿರಿಯ ಗೆಳೆಯರಾದ ಡಾ. ಸಿ. ಬಿ. ರಾಮರಾಯರೆಂಬ ಸರಳರು, ಡಾ. ಪಿ. ಕೋದಂಡರಾಯರು, ನಮ್ಮ ಡಿ. ಸಿ. ಸುಬ್ಬರಾಯಪ್ಪನವರು ಈ ಸಂಪ್ರದಾಯವನ್ನು ಉಳಿಸಿಕೊಂಡು ಬಂದ ಇತರ ಮಾನ್ಯರು; ಇಂಥವರಿಂದ ಭಾರತದ ಗೌರವ ಉಳಿದಿದೆ. ಹಿರಿಮೆ ಗರಿಮೆಗಳಿಲ್ಲದೆ, ಅಬ್ಬರ ವಿಜೃಂಭಣೆಗಳಿಲ್ಲದೆ ನಡೆಯುವುದು ಅವರ ಸ್ವಭಾವಲಕ್ಷಣ. ದಿನ ಒಂದಕ್ಕೆ ನಾಲ್ಕಾರುಕಡೆ ಬರುತ್ತೇನೆಂದು ಹೇಳಿ ಈ ಸ್ಥಳಗಳಿಗೆಲ್ಲ ತಪ್ಪದೆ ಹೋಗಿ ಬರುವುದುಂಟು. ಇಂಥ ಸಭೆಗೆ ಇವರೇಕೆ ಬಂದಾರು ಎಂದುಕೊಂಡಿದ್ದವರಿಗೆ ಅವರನ್ನು ಅಲ್ಲಿಯೂ ಕಾಣುವುದು ನನಗಂತೂ ಸಾಮಾನ್ಯ ಅನುಭವ. ಇಷ್ಟಾದರೂ ಅವರು ಮೈಸೂರಿನ ಶ್ರೇಷ್ಠ ನ್ಯಾಯಾಧಿಪತಿಗಳಾದಾಗ ಕೂಡ ಹೋಗುತ್ತಿದ್ದ ಕಡೆಗೆಲ್ಲ ಸುಮಾರು ತಪ್ಪದೆ ಹೋಗುತ್ತಿದ್ದರು. ಆಪ್ತರೆಂದುಕೊಂಡ ಜನರನ್ನು ಸಂಸ್ಥೆಗಳನ್ನು ಭೇಟಿಮಾಡಿದಾಗ ಮಾತು ಎಷ್ಟೋ ಅಷ್ಟೆ; ಅದು ವ್ರತ. ಆಗ ಖಾಸಗಿಯಿಂದ ಲೌಕಿಕ ಸಂಬಂಧದ ಮಾತನ್ನು, ವ್ಯವಹಾರದ್ದನ್ನು ಸರ್ವಥಾ ಆಡುತ್ತಿರಲಿಲ್ಲ. ರಾಜಕೀಯಕ್ಕೆ, ನ್ಯಾಯವಿಧಾನಕ್ಕೆ ಸಂಬಂಧಿಸಿದ ಯಾವೊಂದು ಮಾತನ್ನು ಯಾರೆತ್ತಲೂ ಅವಕಾಶ ಕೊಡುತ್ತಿರಲಿಲ್ಲ. ತಮ್ಮ ಮಗ ಚಂದ್ರಶೇಖರ್ ಹೆಸರು ಹೇಳಿ 'ಏನು ಬೇಕೊ ಹೇಳಿ, ಅವನು ಮಾಡಿಕೊಡುತ್ತಾನೆ' ಎಂದು ಒಮ್ಮೆ ಒಬ್ಬರಿಗೆ ಹೇಳಿದ ನೆನಪುಂಟು. ಇಂಥದಕ್ಕೆ ಸಾಕ್ಷಿಯಾದ ನಾನು ಅವರ ನಿಯಮ ಪಾಲನೆಗೆ ಪ್ರಮಾಣವಾಗಬಲ್ಲವನಾಗಿದ್ದೇನೆ.

ಯಾರಾದರೂ ಹೊರಗಿಂದ ಬಂದರೆ ನನ್ನ ಜೊತೆಗೆ ಕರೆಯುವ ಇಬ್ಬರು ಮೂವರು ಮಂದಿಯಲ್ಲಿ ನನಗೆ ಸುಲಭವಾಗಿ ದೊರೆಯುವ, ನಾನು ಮೆಚ್ಚುವ ಸ್ನೇಹಿತರಲ್ಲಿ ರಾಯರು ಒಬ್ಬರು. ಅಂಥ ಸಂದರ್ಭದಲ್ಲಿ ಅವರು ಎಂದೂ ತಪ್ಪಿಸಿಕೊಂಡವರಲ್ಲ. ಬಂದಾಗ ಅತಿ ಮಾತಾಡಿಯೊ ಅಥವಾ ಕೊಲ್ಲುವ ಮೌನದಿಂದ ಅಥವಾ ಸಂಕೋಚಗಳಿಂದಲೊ ಗೋಷ್ಠಿಯನ್ನು ಕೆಡಿಸುವವರೂ ಅಲ್ಲ. ಸಮಯಕ್ಕೆ, ಜನಕ್ಕೆ ಹಿತವಾಗುವ, ಪ್ರಿಯವಾಗುವ ಮಾತನ್ನು ಆಡಿಯಾರು: ನನಗಿಂತ ಹೆಚ್ಚಾಗಿ ಅತಿಥಿಗೆ ಪ್ರಿಯವಾಗುವಂತೆ. ಒಮ್ಮೆ ನಾನು

ಆಕಾಶವಾಣಿಯಲ್ಲಿದ್ದಾಗ, ಅರು ತಿಂಗಳ ಕಾಲ ಮಾತ್ರ ಇಲ್ಲಿ ಇದ್ದು ಹೋದ ಸೆನ್‌ಗುಪ್ತ ಅವರನ್ನೂ ಶ್ರೀಮತಿ ಸೆನ್‌ಗುಪ್ತ ಅವರನ್ನೂ ಕಾಫಿಗೆ ಉಪಾಹಾರಕ್ಕೆ ಕರೆದಿದ್ದೆ. ಆತ ಚಿತ್ರಗಾರ; ಆಕೆ ಸಣ್ಣಕತೆ ಬರೆಯುವಾಕೆ. ಇಬ್ಬರೂ ಸಜ್ಜನರು, ಸುಲಭರು. ಆವೊತ್ತು ಬಹುಶಃ ಹಸಿ ಅವರೆಯ ಕಾಲವಾಗಿದ್ದರಿಂದ ಉಳಿದ ಒಂದೆರಡು ತಿನ್ನುವ ಸಾಮಾನುಗಳ ಜೊತೆಗೆ ಉಸಳಿ ಮಾಡಿದ್ದರು. ಬಂಗಾಳ ಅಸ್ಸಾಂ ಕಡೆಯ ಜನ ಅವರು. ಅವರರಿಯದ ಪದಾರ್ಥ. ಅದನ್ನು ಕುರಿತು ಅವರು ಮೆಚ್ಚಿಕೆಯ ಮಾತಾಡಿದ ನೆನಪು. ನನಗೆ ಮುಂಚೆ ರಾಯರು 'The Season's Compliments' ಎಂದರು. ಆ ಪೀಠಿಕೆ ಹಾಕಿ, ಅದು ನಮ್ಮ ಮೈಸೂರು ದೇಶಕ್ಕೆ ಹೇಗೆ ವಿಶಿಷ್ಟವಾದ್ದು ಎಂಬುದನ್ನು ಬಹು ರುಚಿಕರವಾಗಿ ಹೇಳಿದ್ದರು. ಅವರು ಈ ದೇಶ ಬಿಟ್ಟುಹೋದ ಮೇಲೂ ಇವರನ್ನು ನೆನಸಿಕೊಂಡು ತಮ್ಮ ನಲ್ವರಕೆಯನ್ನು ಅವರಿಗೆ ತಿಳಿಸಬೇಕೆಂದು ನನಗೆ ಬರೆದಿದ್ದರು. ಇನ್ನೊಮ್ಮೆ ಹಿಂದಿ ಕಮಿಷನ್ ಒಂದು ಬೆಂಗಳೂರಿಗೆ ಭೇಟಿ ಕೊಟ್ಟಿತ್ತು. ನಿಟ್ಟೂರ್ ಹಿಂದಿಗೆ ಸಂಬಂಧಿಸಿದವರು. ಜೊತೆಗೆ ಇಂಥ ಸಂದರ್ಭದಲ್ಲಿ, ನಾನು ಇನ್ನಾರಿಗೊ ಚೇಷ್ಟೆಗೆ ಹೇಳಿದ ಹಾಗೆ, ಒಂದೇ ಕಡೆಗೆ ಒಬ್ಬನೇ ಹೋಗುವುದಕ್ಕೆ moral courage ಇಲ್ಲದೆ ಹೋಗಬಹುದು; ಜೊತೆಗೆ ಇನ್ನೊಬ್ಬರಿದ್ದರೆ immoral courage(?) ಬರುತ್ತದೆ – ಎಂಬುದನ್ನು ನೆನಸಿಕೊಂಡು, ಆ ಸಮಿತಿಯವರಲ್ಲಿ ಕೆಲವರು ನನಗೆ ದಯಮಾಡಿ ಭೇಟಿಕೊಟ್ಟಾಗ ಇವರನ್ನೂ ಬಹುಶಃ ಜೊತೆಗೆ ಮೂರ್ತಿರಾಯರನ್ನೂ ಕರೆದಿದ್ದೆ. ನಮ್ಮ ಯೂನಿವರ್ಸಿಟಿಯ ನಾಗಪ್ಪನವರೂ ದಯಮಾಡಿಸಿದ್ದರು. ನಾನೂ ಮೂರ್ತಿರಾಯರೂ ಹಿಂದಿಯ ಸ್ಥಾನಮಾನಗಳ ವಿಚಾರದಲ್ಲಿ ಸ್ವಲ್ಪಮಟ್ಟಿಗೆ ಅಲಿಪ್ತರು. ಮೂರ್ತಿರಾಯರ ವಿಷಯ ಪೂರ್ತಿ ಹೇಗೊ ಕಾಣೆ. ನಾನಂತೂ ಹಾಗೆ. ಆದರೆ ಡಾ. ಹಜಾರಿ ಪ್ರಸಾದ್ ದ್ವಿವೇದಿ ನನಗೆ ಕಾಶಿಯಲ್ಲಿ ಪರಿಚಯವಿದ್ದವರು. ಅವರನ್ನು ಮನೆಗೆ ದಯಮಾಡಿಸಬೇಕೆಂದು ಕರೆದಿದ್ದೆ. ಅವರ ಜೊತೆಗೆ ಕವಿ ಬಾಲಕೃಷ್ಣ ಶರ್ಮ 'ನವೀನ್' ಅವರೂ ಅಲಹಾಬಾದಿನ ಸಕ್ಸೇನಾ ಅವರೂ ದಯಮಾಡಿಸಿದ್ದರು. ಅವರ ಜೊತೆಯಲ್ಲಿ ಮೈಸೂರು ಹಿಂದಿ ರಿಯಾಸತ್ ಪಂಚಾಯತ್ ಸಭಾಮಂದಿರದಲ್ಲಿ ನಾನು ಅವರನ್ನು ಕರೆಯುವಾಗ ಕಾಶ್ಮೀರದ ಪುಷ್ಪ್ ಇದ್ದರು. ಅವರನ್ನು ಹಿಂದೆ ಪಿ.ಈ.ಎನ್. ಸಮ್ಮೇಳನಗಳಲ್ಲಿ ನೋಡಿದ್ದೆ. ತಮ್ಮದೊಡ್ಡತನದಲ್ಲಿ ಅವರು ನಾನೂ ಬರಬಹುದೇ ಎಂದರು. ನನ್ನ ಪ್ರೀತಿಯ ಆಹ್ವಾನ ಎಂದು ಕರೆದೆ. ಹಿಂದಿನ ದಿನ ಸಭೆಯಲ್ಲಿ ಹಿಂದಿಯ ಪ್ರಖ್ಯಾತ ಕವಿಯಾದ ರಾಮಧಾರಿ ಸಿಂಹ 'ದಿನಕರ್' ಇರಲಿಲ್ಲ. ಅವರೂ ಆಯೋಗದ ಸದಸ್ಯರು. ಅವರಿಗೆ ಅನಿವಾರ್ಯದ ಕೆಲಸವಿಲ್ಲದಿದ್ದರೆ ಅವರನ್ನೂ ಜೊತೆಗೆ ಕರೆತರಬೇಕೆಂದು ಹೇಳಿದ್ದೆ. ಎಲ್ಲರೂ ಬೆಳಗ್ಗೆ ದಯಮಾಡಿಸಿದ್ದರು. ನನ್ನ ಜೊತೆಗೆ ಕೆ. ಎಸ್. ನರಸಿಂಹಸ್ವಾಮಿ ಇದ್ದರು. ಅಲ್ಪೋಪಹಾರ ನಡೆದಮೇಲೆ, ಅದೂ ಇದೂ ಮಾತನಾಡಿದಮೇಲೆ ಕನ್ನಡ ಕವಿತೆಯ ಪರಿಚಯವನ್ನು ನಾವು ಮಾಡಿಕೊಟ್ಟೆವು. ದಿನಕರ್, ಪುಷ್ಪ್, ನವೀನ್ ಅವರು ಹಿಂದಿಯ ಒಂದೊಂದು ಕವಿತೆಯನ್ನು ಪಠನ ಮಾಡಿದರು. ನಡುವೆ ಆ ದಿನ ನಮಗೆ ನಿಟ್ಟೂರರು ಮಾಡಿದ rapport ಅಂಥ ನೆರವು ತುಂಬ ನಯವಾದದ್ದು; ಉತ್ತಮ ಸ್ನೇಹ ಬಂಧವನ್ನು ಕಲ್ಪಿಸಿತು. ಅದನ್ನು ಅತಿಥಿಗಳು ಆಮೇಲೂ ಸ್ವಲ್ಪಕಾಲ ಜ್ಞಾಪಿಸಿಕೊಂಡದ್ದುಂಟು. ನನಗೆ

ತುಂಬಾ ಪ್ರೀತಿಯ ಸನ್ನಿವೇಶವನ್ನು ಕಲ್ಪಿಸಿಕೊಟ್ಟದ್ದು ಆ ದಿನದ ಎರಡು ಮೂರು ಗಂಟೆಗಳ ಕಾಲದ ಆ ಗೋಷ್ಠಿ. ಉತ್ತರ-ದಕ್ಷಿಣ ಭಾಗಗಳವರ ಈ ಕೆಳಿತನದ ಬೆಸುಗೆಯನ್ನು ಪ್ರಿಯವಾಗಿ ಸಾಧಿಸಿಕೊಡುವುದರಲ್ಲಿ ರಾಯರು 'ಅನ್ಯೋನ್ಯಕೃತ್ಯ' - ಎಂದರೆ ಇಂಥ 'ಬಂಧುಕೃತ್ಯ' - ದಲ್ಲಿ ನಿಸ್ಸೀಮರಾಗಿದ್ದಾರೆ.

ಅವರ ಮಾರ್ಗ ಮೃದು ಎಂದೆ; gentle ಎಂಬ ಮಾತನ್ನು ಹೇಳಿದೆ. 'ವಜ್ರಾದಪಿ ಕಠೋರಾಣಿ ಮೃದೂನಿ ಕುಸುಮಾದಪಿ' ಎಂಬ ಲಕ್ಷಣ ಇದೆಯಲ್ಲವೆ? ಆ ಮಾತು ಹೇಳಿಸಿಕೊಳ್ಳದೆ ಅಂಥಲ್ಲಿ ಪ್ರತಿಫಲಿತವಾಗಿರುತ್ತದೆ. ರಾಯರ ಜೀವನದಲ್ಲಿ 'ಲೋಕೋತ್ತರಾಣಿ ಚೇತಾಂಸಿ' ಎಂಬ ಮಾತನ್ನು ಅವರು ಕಿವಿಯಿಂದ ಕೇಳಿದ್ದಾರೆ. ಆ ಮಾತು ಅವರ ಬಗೆಗೆ loud; ಅನಾವಶ್ಯಕ. ಯಾವುದೋ ಸಂದರ್ಭ: ಮನೆಯಲ್ಲಿ ನಾಲ್ವರೈವರು ಸ್ನೇಹಿತರು ಊಟ ಮಾಡಿ ಕುಳಿತಿದ್ದೆವು. ಕೃಷ್ಣಶಾಸ್ತ್ರಿಗಳೂ ಶ್ರೀನಿವಾಸಮೂರ್ತಿಗಳೂ ಇದ್ದರು. ನಾನು ಈಚೆಗೆ ಬರೆದದ್ದು ಏನಾದರೂ ಇದ್ದರೆ ಓದೆಂದು ವೆಂಕಣ್ಣಯ್ಯನವರು ಅಪ್ಪಣೆ ಮಾಡಿದರು. ಸುಮಾರು ೧೯೩೪-೩೫ರ ಕಾಲ ಅದು. ರಾಯರು ಯಾವುದೊ ತೊಳಲಲ್ಲಿ ಇದ್ದಿರಬೇಕು. ನಾನು ನನ್ನ ಯಾವುದೊ ಪದ್ಯ ಓದಿದ ನೆನಪು. ಅದರಲ್ಲಿ ಕವಿತೆಯ ಗುಣ ಏನಿತ್ತೊ ಇಲ್ಲವೊ. ನನ್ನ ಕಷ್ಟನಿಷ್ಠುರಗಳಲ್ಲಿ ನನಗೆ ನಾನೇ ಆಡಿಕೊಂಡ ಮಾತದು. ತೊಡಗಿಂದ ಕಡೆಯವರೆಗೂ ಬಾಳಲ್ಲಿ ಮನುಷ್ಯನಿಗೆ ಏನು ಕಷ್ಟ ಬಂದೀತು, ಅದರಲ್ಲಿ ಮನಸ್ಸು ಹೇಗೆ ನಿಂತರೆ ಮೇಲಾದೀತು ಎಂಬ ಮಾತೂ ಅಂಥ ಸಂದರ್ಭಗಳಲ್ಲಿ ಏಕಾಕಿಯಾಗಿ ದೃಢದಲ್ಲಿ ನಿಲ್ಲಬೇಕಾಗುತ್ತದೆ ಎಂಬ ಮಾತೂ ಬರುತ್ತದೆ. ಅಷ್ಟು ಹೊತ್ತಿನವರೆಗೂ ಸುಮಾರು ಎರಡು ಗಂಟೆಗಳ ಕಾಲ ಸಂತೋಷವಾಗಿದ್ದೆವು. ಕಡೆಕಡೆಯ ಎಂಟು-ಹತ್ತು ಸಾಲು ಬಂದಾಗ ರಾಯರ ಮುಖ ಗಂಭೀರವಾಯಿತು. ನಾನು ಮುಗಿಸಿದ ಕೂಡಲೆ ಒಂದೆರಡು ನಿಮಿಷಗಳಲ್ಲಿ ಬರುತ್ತೇನೆಂದು ಹೇಳಿ ಹೊರಟುಹೋದರು. ಅವರ ಮನಸ್ಸಿನ ಉದ್ವೇಗ ರೂಪಗೊಂಡದ್ದು ಹಾಗೆ. ಅದನ್ನು ಕಾಣಗೊಡಿಸಲಿಲ್ಲ. ಇದನ್ನು ಕುರಿತು ನಾನು ಇನ್ನಾರಿಗೂ ಈವರೆಗೂ ನುಡಿದಿಲ್ಲ. ಅಂದು ಜೊತೆಯಲ್ಲಿದ್ದವರು ಇಂದು ಇಲ್ಲವಾಗಿದ್ದಾರೆ. ಅಲ್ಲಿಂದ ಮುಂದೆ ಅವರು ಹೊರಟುಹೋದಮೇಲೆ ಈ ಮಾತನ್ನು ಜೊತೆಯವರ್ಯಾರೂ ಎತ್ತಲಿಲ್ಲ. ನಾನೂ ನನ್ನ ಬರವಣಿಗೆಯ ಪುಸ್ತಕವನ್ನು ಮುಚ್ಚಿದೆ. ಮುಂದೆ ಇನ್ನಾವುದನ್ನೂ ಓದೆಂದು ಯಾರೂ ಕೇಳಲಿಲ್ಲ; ನಾನು ಓದಲಿಲ್ಲ. 'ಏನು ಬೇಕೂಫ ಕೆಲಸ ಮಾಡಿದೆ' ಎಂದು ಅನ್ನಿಸಿತು. ನನಗಾಗಿ ಆಡಿಕೊಂಡ ಮಾತುಗಳು ನಾಲ್ವರ ಮೇಲೆ ಒಂದು ಸಂತೋಷ ಸಮಯದಲ್ಲಿ ಏನು ಪರಿಣಾಮ ಉಂಟುಮಾಡಬಲ್ಲದು ಎಂಬುದರ ಅನುಭವ ನನಗೆ ಅಂದಾಯಿತು. ಇದನ್ನು ಬರೆಯಬಹುದೊ ಇಲ್ಲವೊ. ರಾಯರು ಅದನ್ನು ನನ್ನೆದುರು ಎಂದೂ ಪುನಃ ನೆನಸಿಕೊಂಡಿಲ್ಲ. ನನ್ನ ಪರವಾಗಿ ಅವರ ಪ್ರೀತಿವಿಶ್ವಾಸ ರವೆಯಷ್ಟು ಕಡಮೆಯಾಗಿಲ್ಲ.

ಒಂದು ಸಮಧಾತುವಿನಲ್ಲಿ ಅವರ ಬಾಳು ನಡೆದಿದೆ. 'ಹುಟ್ಟಿದವನು ಹುಟ್ಟಿದ ಹಾಗಿದ್ದಾನೆ' ಎಂಬ ಒಂದು ಮಾತನ್ನು ನಮ್ಮ ದೇಶದಲ್ಲಿ ಒಂದು ಗುಣವಾಗಿ ಆಡುವುದುಂಟು. ಅಲ್ಲಿ ಬೆಳವಣಿಗೆ ಇಲ್ಲ ಎಂಬ ಅಪಾರ್ಥ ಮಾಡಬಹುದು. ಯಾವ

ಏಳಿಗೆ ಬರಲಿ, ಪರಿಣತಿ ಬರಲಿ, ಕಷ್ಟಕಾರ್ಪಣ್ಯ ಬರಲಿ, ಸಿರಿಯಲ್ಲಿ ವೈಭವದಲ್ಲಿ ಯಾವ ಮೇಲ್ಮೆಗೆ ಹೋಗಲಿ, ಒಂದು ಹದವನ್ನು, ಗುಣದ ಧಾತುವನ್ನು ಒಂದೇ ಸಮನಾಗಿ ನೆಲೆಗೊಳಿಸಿಕೊಂಡಿರುವುದು ಇದರ ಪರಮಲಕ್ಷಣ. The Law of Identity ಎಂಬುದೂ Definition is the beginning and end of all knowledge – ಎಂಬ ಅರಿಸ್ಟಾಟಲ್ ಹೇಳಿದ ಮಾತೂ ಎರಡೂ ಇದೇ ಸತ್ವದ, ಸಾರದ ಎರಡು ಮುಖಗಳು. ನಿರ್ವಿಕಾರದಂತೆ ಕಾಣುವ, ಆದರೆ ಎಲ್ಲವನ್ನೂ ಒಳಗೆ ಅನುಭವಿಸಿ ಹೊರಗೆ ಪ್ರಶಾಂತವಾಗಿ ಕಾಣುವ, ಎಂಥ ಸಂದರ್ಭದಲ್ಲಿಯೂ ಸಂಯಮವನ್ನು ಕಳೆದುಕೊಳ್ಳದ ಮನೋವೃತ್ತಿ ರಾಯರದು. ಸ್ವರೂಪಲಕ್ಷಣ ಸ್ಥೂಲವಾಗಿ ಹೇಳಿಬಿಟ್ಟರಾಗಲಿಲ್ಲ; ಅದಕ್ಕೆ ರಕ್ತಮಾಂಸ ಲೋಕಾನುಭವ ತುಂಬಿಕೊಂಡು ಅರ್ಥವಿಸ್ತಾರ ಹೇಗಾಗುವುದೆಂಬುದು ಆ ಸೂತ್ರದ ಪರಿಷ್ಕಾರ ಆಕಾಂಕ್ಷೆಯುಳ್ಳದ್ದು. ಆ ಗುಣ ನಾನು ಬಹುಜನರಲ್ಲಿ ಕಂಡದ್ದಲ್ಲ.* ರಾಯರ ಬದುಕು ನೂರುಕಾಲ ಹೀಗೇ ಹೊಮ್ಮಿ ಪರಿಮಳಿಸಲಿ ಎಂದು ಮಾತ್ರ ಬರೆಯಬಲ್ಲೆ.

---

* ಮೊದಲ ಮಗಳ ಮದುವೆಗೆ ತಿರುಪತಿಗೆ ಹೋಗುವಾಗ ನಾನು, ಅವರು, ಜೊತೆಗೆ ಹೆಂಡತಿ ಪದ್ಮಾವತಮ್ಮನವರು ಮೂವರೇ ಕಾರಲ್ಲಿ ಹೋದುದುಂಟು.

ಎಸ್. ಎನ್. ಮೂಡಬಿದ್ರಿ

ಶ್ರೀ ಶಿವರಾಮ ಕಾರಂತರ ಸ್ನೇಹ ಸ್ವಂತವಾಗಿ ೪೦–೪೫ ವರ್ಷಗಳಿಂದ ನನಗೆ ನಿಧಿಯಂತಿದೆ. ಅವರ ಜೊತೆಗೆ ಅವರ ಮೂಲಕ ನನಗೆ ಹಲವಾರು ಮಂದಿ ಸ್ನೇಹಿತರು ದೊರೆತಿದ್ದಾರೆ. ಪುತ್ತೂರಲ್ಲಿ ತಾಲ್ಲೂಕ್ ಬೋರ್ಡ್ ಪ್ರೆಸಿಡೆಂಟರಾಗಿದ್ದ ಮೊಳಹಳ್ಳಿ ಶಿವರಾಯರನ್ನು ಕುರಿತು ಈಗಾಗಲೇ ಬರೆದಿದ್ದೇನೆ. ಇನ್ನೆಷ್ಟೊ ಮಂದಿ ನನಗಿಂತ ವಯಸ್ಸಿನಲ್ಲಿ ಕಿರಿಯರು ತಮ್ಮ ವಿಶ್ವಾಸವನ್ನು ನನಗೆ ದಾನ ಮಾಡಿದ್ದಾರೆ. ಅವರಲ್ಲಿ ಮುಂಬಯಿಯ ಶ್ರೀ ಸಂಜೀವರಾವ್ ಎನ್. ಮೂಡಬಿದ್ರಿ; ಉಡುಪಿಯಲ್ಲಿ ಶ್ರೀ ಹರಿದಾಸಭಟ್ಟರು; ಕುಂದಾಪುರದಲ್ಲಿ ಕಾರಂತರ ಅಣ್ಣಂದಿರೇ ಆದ ಶ್ರೀ ಲಕ್ಷ್ಮೀನಾರಾಯಣ ಕಾರಂತರು; ಬೆಂಗಳೂರಲ್ಲಿ ಈಗ ಎಂಟು–ಹತ್ತು ವರ್ಷಗಳಿಂದ ತುಂಬ ಬೇಕಾದವರಾಗಿ ಇರುವ ಶ್ರೀ ಗುಂಡ್ಮಿ ರಾಮಕೃಷ್ಣ ಐತಾಳರು–ಇವರನ್ನು ಕುರಿತು ಮುಂದೆ ಅದೃಷ್ಟವಿದ್ದರೆ – ಎಲ್ಲಕ್ಕೂ ಕಾಲ ಒದಗಿಬರಬೇಕೆನ್ನುತ್ತಾರಲ್ಲವೆ!? – ಒಂದೊಂದು ಸಾಲು ಬರೆದೇನು. ಸದ್ಯಃ ಸಂಜೀವರಾಯರನ್ನು ಕುರಿತು ನಾಲ್ಕುಮಾತು ಹೇಳುತ್ತಿದ್ದೇನೆ. ಅವರು ಸುಮಾರು ೭೦–೭೧ರ ವಯಸ್ಸಿನವರು. ೧೯೬೯ರಲ್ಲಿ ಷಷ್ಠ್ಯಬ್ದಿಯನ್ನು ನೆರವೇರಿಸಿದರೆಂದು ಬಲ್ಲೆ. ಸಂಜೀವರಾಯರು ಯಾವ ಊರಿನವರಾಗಿ ತಮ್ಮ ಹೆಸರಿನಲ್ಲಿಯೆ ಅದನ್ನು ಕೂಡಿಸಿಕೊಂಡು ಪ್ರಖ್ಯಾತಿಗೆ ಬಂದಿದ್ದಾರೆಯೊ ಆ ಊರಿನಲ್ಲಿಯೇ ಅವರ ಅರವತ್ತರ ಉತ್ಸವವೂ ಏರ್ಪಟ್ಟಿತ್ತು. ದಕ್ಷಿಣ ಕನ್ನಡದ ಮತ್ತು ಹೊರಗಿನ ಅನೇಕರು ಆ ಉತ್ಸವದಲ್ಲಿ ಭಾಗಿಗಳಾಗಿದ್ದರು. ಆಗ ಯಾವ ಯಾವುವೊ ಜಂಜಡಗಳಿಗೆ ಸಿಕ್ಕಿ ಆ ಉತ್ಸವಕ್ಕೆ ನಾನು ಹೋಗಲಾಗಲಿಲ್ಲ. ಆ ಸಂಬಂಧದಲ್ಲಿ ಒಂದು ಲೇಖನ ಕೂಡ ಕಳಿಸದೆ ಕ್ರಿಯಾಚ್ಯುತನಾಗಿದ್ದೆ. ಮನುಷ್ಯನ ಜೀವನದಲ್ಲಿ ಯಾವ ಕಷ್ಟ ಕಾರ್ಪಣ್ಯಗಳು ಹೇಗೆ ಬಂದು ಕವಿಯುವವೊ ಎಂಥೆಂಥ ಅಡ್ಡಿ ಆತಂಕಗಳನ್ನು, ದೌರ್ಬಲ್ಯಗಳನ್ನು ತರುವವೊ– ಅವನ್ನು ಕುರಿತು ಇದು ಹೀಗೇ ಎಂದು ಹೇಳಲಾಗುವುದಿಲ್ಲ. ಅಷ್ಟೂ ಆ ಉತ್ಸವದಲ್ಲಿ ಬೆರೆಯುವ ಸಂತೋಷ ನನ್ನ ಪಾಲಿನದಾಗದಾಯಿತು.

ರಾಯರು ಬೊಂಬಾಯಿ ಪಟ್ಟಣದಲ್ಲಿ, ಕನ್ನಡಿಗರಲ್ಲಿ ಬಹುದಿವಸಗಳಿಂದ ಹೆಸರಾದವರು. ನನಗೆ ವಿಶೇಷವಾಗಿ ಅವರ ಹೆಸರು ಬಳಕೆಯಾದದ್ದು ಕಾರಂತರ ಯಕ್ಷಗಾನ ಪ್ರಸಂಗ ಒಂದಕ್ಕೆ ಅವರು ಅಲ್ಲಿ ಪೂರ್ವಸಿದ್ಧತೆಗಳನ್ನು ಮಾಡುತ್ತಿದ್ದಾರೆಂದು ತಿಳಿದಾಗ. ಕನ್ನಡ ಜಿಲ್ಲೆಗಳಿಗೂ ಯಕ್ಷಗಾನಕ್ಕೂ ದೇಹಾತ್ಮ ಸಂಬಂಧ ನಿಜವಾದರೂ ರಾಯರಿಗೆ ಆ ಬಗೆಗೆ ಎಂಥ ವಿಶ್ವಾಸವೊ ನನಗೆ ಅರಿಯದಿದ್ದ ಸಂಗತಿ. ಕಾರಂತರ ಸ್ನೇಹವರ್ಗ ಅನೇಕ ಬಗೆಯವು. ಬಹುಶಃ ಅವರಷ್ಟು ಮಂದಿ ಸ್ನೇಹವರ್ಗ, ಆ ಮಟ್ಟಗಳು ವೈವಿಧ್ಯ ಕನ್ನಡಿಗರಿತರರಾರಿಗೂ ಇರಲಾರದೆಂಬ ಭಾವನೆ ನನ್ನದು. ಧಾರವಾಡಕ್ಕೆ ಯಾವುದೊ ಒಂದು ಸಭೆಸಮಾರಂಭಕ್ಕೆ ಕರೆ ಬಂತು. ನಾನೂ ಹೋಗಿದ್ದೆ; ಕಾರಂತರೂ

ದಯಮಾಡಿಸಿದ್ದರು. ಶ್ರೀ ಶೇಷಗಿರಿರಾಯರ, ಗೀತಾ ಕುಲಕರ್ಣಿಯವರ ಮನೆಯಲ್ಲಿ ಹರಟೆ ಹೊಡೆಯುತ್ತ ತಿಂಡಿ ತೀರ್ಥ ಸಮಾರಾಧನೆಗಳಲ್ಲಿದ್ದವರ ಕಿವಿಗೆ ಬೊಂಬಾಯಿಂದ ಯಾರೊ ಒಬ್ಬರು ಬಂದಿದ್ದಾರೆ, ಒಡನೆಯೆ ಕಾಣಬೇಕಂತೆ ಎಂಬ ಸುದ್ದಿ ಬರಲು ಅವರು ಹೊರಗೆ ಹೋದರು. ಇಪ್ಪತ್ತು ನಿಮಿಷ ಅರ್ಧಗಂಟೆಯಲ್ಲಿ ಬಂದಿದ್ದವರು ಹೊರಟುಹೋದರು. ಕಾರಂತರು ಮತ್ತೆ ನಮ್ಮನ್ನು ಕೂಡಿಕೊಂಡರು. ಆಗ ನನಗೆ ತಿಳಿದದ್ದು ಬಂದಿದ್ದವರು ಸಂಜೀವರಾಯರೆಂದು. ಸಾಮಾನ್ಯವಾಗಿ ಅಂಥ ಚಪಲ ನನ್ನಲ್ಲಿಲ್ಲವಾದರೂ ರಾಯರಂಥ ಮಾನ್ಯರು ನಾನಿದ್ದಲ್ಲಿಗೆ ಬಂದಿದ್ದರೂ ಅವರ ಪರಿಚಯವಾಗಲಿಲ್ಲವೆಂದಾಗಿತ್ತು. ಇನ್ನೊಬ್ಬರು ಮಾಡಿಸಿದರೆ ತಾನೆ ಪರಿಚಯ? ಈ ಸಂಗತಿ ಮನಸ್ಸಿನಲ್ಲಿ ಚುಚ್ಚುತ್ತಿತ್ತು. ಕಾರಂತರಿಗೆ ಅರವತ್ತು ವರ್ಷದ ಸತ್ಕಾರೋತ್ಸವವನ್ನು ನಾಡಿನಲ್ಲಿ ಹಲವು ಕಡೆ ನೆರವೇರಿಸಿದರು. ಬೊಂಬಾಯಿಯ ಜೆಹಂಗೀರ್ ಪೆಟಿಟ್ ಹಾಲಲ್ಲಿ ನಡೆದ ಮಹೋತ್ಸವಕ್ಕೆ ನನ್ನನ್ನು ಕರೆದಿದ್ದರು. ನಾನು ಆ ಸಭಾಮಂದಿರವನ್ನು ಹಿಂದೆ ಕಂಡಿದ್ದೆ. ೧೯೩೫ರಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಸಮ್ಮೇಳನದ ಉತ್ಸವದಲ್ಲಿ ಶ್ರೀರಂಗರ 'ನರಕದಲ್ಲಿ ನರಸಿಂಹ' ನಾಟಕವಾಡಿದಾಗ ಅಲ್ಲಿಗೆ ಹೋಗಿದ್ದ ನೆನಪು. ಬೊಂಬಾಯಲ್ಲಿ ನಾನು ಇದ್ದೆ –೧೯೨೨ರಲ್ಲಿ. ಅಲ್ಲಿ ಪ್ರವೇಶ ನನಗೆ ಇರಲಿಲ್ಲ. ಪೆಟಿಟ್ ಪುಸ್ತಕ ಭಾಂಡಾಗಾರಕ್ಕೆ ಹೋಗುತ್ತ ಬರುತ್ತ ಇದ್ದಾಗಲೂ ಆ ವೇದಿಕೆಯ ಮೇಲೆ ಕುಳಿತು ಯಾವ ಕಾರ್ಯವನ್ನೂ ಕೈಕೊಂಡ ನೆನಪು ಅನುಭವ ಇರಲಿಲ್ಲ. ಆ ದಿನ ನಾನು ರಾಯರ ಆತಿಥ್ಯವನ್ನು ಪಡೆದಿದ್ದೆ. ಇತರ ಎಷ್ಟೋ ಮಂದಿ ಆ ಸಮಾರಂಭದಲ್ಲಿ ಓಡಾಡಿದರೂ ಹಿಂದೆ ನಿಂತು ಎಲ್ಲವನ್ನೂ ನೋಡಿಕೊಳ್ಳುತ್ತಿದ್ದ ವ್ಯಕ್ತಿ, ಶಕ್ತಿ ರಾಯರು. ಅಂದೇ ವೇದಿಕೆಯ ಮೇಲೆ ಭಟಕಳದ ನವಾಯತ್ ಕುಲದವರಾಗಿ ಬೊಂಬಾಯಿ ಕಾರ್ಪೊರೇಷನ್ ಮೇಯರೊ ಏನೊ ಆಗಿದ್ದ ಕಾಜಿಲ್ಕ ಅವರು ಗಣ್ಯಸ್ಥಾನವನ್ನು ವಹಿಸಿದ್ದರು. ಕಾರಂತರಿಗೆ ಹಾಕಿದ್ದ ಮಾಲೆಗಳು ಒಂದು ಬೆಟ್ಟದಷ್ಟು ಮೇಜಿನ ಮೇಲೆ ರಾಶಿಯಾಗಿದ್ದು, * ಎಷ್ಟೋ ಬಣ್ಣ, ಗಂಧ, ರಚನೆ, ಚೆಲುವು, ರಂಜನೆ ಉಳ್ಳವು. ತುಂಬ ಪ್ರೀತಿಯಿಂದ ನೆರವೇರಿದ ಉತ್ಸವ ಅದು. ನನ್ನನ್ನು ವಿಮಾನದಲ್ಲಿ ಕರಸಿಕೊಂಡು ಪುನಃ ವಿಮಾನದಲ್ಲಿಯೇ ಕಳಿಸಿಕೊಟ್ಟರು. ಆಗ ಬಂದುಹೋಗುವುದಕ್ಕೆ

---

* ಇಂಥ ಸಮಾರಂಭಗಳಲ್ಲಿ ಇಷ್ಟು ಮಂದಿ ಒಳ್ಳೆಯ ಹೂಗಳನ್ನು ಹೀಗೆ ಪೋಲು ಮಾಡುತ್ತಾರಲ್ಲ ಎಂದು ನೋವು ನನಗೆ. ಅತಿಥಿ ಅದನ್ನು ಅರೆನಿಮಿಷ ಹಾಕಿಕೊಳ್ಳುವುದಿಲ್ಲ. ನಮ್ಮಲ್ಲಂತು ಹೆಂಡತಿಯೊ ಹೆಣ್ಣುಮಕ್ಕಳೊ ಅದನ್ನು ಮುಡಿದಾರೇ ಹೊರತು ಉಳಿದವರಿಗೆ ಅದು ಕಸ. ಅದನ್ನು ಹಾಕುವಷ್ಟು ಕಾಲ ಸಭೆ ಸ್ತಬ್ಧ; ಕಾರ್ಯ ನಿಂತದ್ದು. ಬೆಳ್ಳಿಯದೊ ಚಿನ್ನದ್ದೊ ಇನ್ನಾವುದೊ ಅಮೂಲ್ಯವಾದ ಬೆಲೆಯುಳ್ಳ ಕೆತ್ತನೆ ಕೆಲಸದ್ದೊ ಒಂದು ತಟ್ಟೆ ಮಾಡಿಸಿ, ಅದರಲ್ಲಿ ಎಲ್ಲರ ಹೆಸರನ್ನು ಕೆತ್ತಿಸಿ ಸ್ಮರಣೆಗಾಗಿ ಕೊಡಬಾರದೆ? ಅಂಥದು ವಂಶಪಾರಂಪರ್ಯವಾಗಿ ಮನೆಯಲ್ಲಿರುತ್ತದೆ. ಈ ಎಲ್ಲರೂ ವೇದಿಕೆಯ ಮೇಲೆ ಅತಿಥಿಯ ಕೈಕುಲುಕಿ, ಬೇಕಾದರೆ ಸುತ್ತ ನಿಂತು ತಮ್ಮ ಆ ಸ್ವರೂಪದರ್ಶನ ಮಾಡಿಸಿಕೊಳ್ಳಬಹುದು. ಒಂದು ಉತ್ತಮವಾದ ಹಾರ ಸಾಕು, ಹತ್ತು ನಿಮಿಷ ಇರಲಿ ಅತಿಥಿಯ ಕೊರಲಲ್ಲಿ.

ವಿಮಾನಪ್ರಯಾಣದ ಖರ್ಚು ಇನ್ನೂ ಹೋಗು-ಬರ ಐದುನೂರರಷ್ಟಿರಲಿಲ್ಲ. ನಾನು ಅದನ್ನು ಕುರಿತಲ್ಲ ಹೇಳುತ್ತಿರುವುದು; ಅದಕ್ಕೆ ಸಂಬಂಧಿಸಿದ ಒಂದು ಸಂಗತಿಯನ್ನು. ರಾಯರ ಮನೆಯಲ್ಲಿ ಬಹು ನಾಜೂಕಾಗಿ ನನ್ನನ್ನು ನೋಡಿಕೊಂಡರು. ಆ ಬಗ್ಗೆ ಇನ್ನೆರಡು ಮಾತುಗಳನ್ನು ಆಮೇಲೆ ಹೇಳುತ್ತೇನೆ. ಆ ಬೆಳಗ್ಗೆ ಹಾಸಿಗೆಯಿಂದ ಎದ್ದಾಗಿನಿಂದ ಮಧ್ಯಾಹ್ನದ ಊಟದವರೆಗೆ ಗಂಟೆಗಂಟೆಗೂ ನನಗೆ ಹೊಸದಾಗಿ ಕಾಫಿ ತಂದುಕೊಡುತ್ತಿದ್ದರು. 'ಇಷ್ಟು ಸಲ ಏಕೆ? ಬೇಡ' ಎಂದೆ. 'ವಿ. ಸೀ. ಸ್ವಲ್ಪ ಹೆಚ್ಚು ಸಲ ಕಾಫಿ ಕುಡಿಯುತ್ತಾರೆ' ಎಂದಿದ್ದರಂತೆ ಕಾರಂತರು. ಅತಿಥಿಯಾಗಿ ನಾನು ರಾಯರ ಮನೆಗೆ ಹೋಗಿದ್ದಾಗ ಈ ಕಾಫಿ ಸೇವೆ ಹಾಗೆ ಮಾಡಿದರು. ಆ ಸಂಗತಿಯನ್ನು ನೆನಪಿನಲ್ಲಿ ಇಟ್ಟುಕೊಂಡು ಈ ಏರ್ಪಾಡು ಎಂದೂ ಗೊತ್ತಾಯಿತು. ನನ್ನ ವಿಶೇಷ ದೌರ್ಬಲ್ಯವನ್ನು ಕಾರಂತರು ಅವರಿಗೆ ಹೇಳಿದ್ದುದು, ಅದನ್ನು ನೆನಸಿಕೊಂಡು ಇವರು ಆತಿಥ್ಯಕ್ಕೆ ಕೊರತೆ ಬಾರದಂತೆ ನೋಡಿಕೊಂಡದ್ದು ರಾಯರ ವಿಶೇಷ ಗುಣ.*

ಹಾಗೆಯೆ ವಿಮಾನ ನಿಲ್ದಾಣದಲ್ಲಿ ಇಪ್ಪತ್ತು ನಿಮಿಷಗಳಲ್ಲಿ ನಾನು ಅಲ್ಲಿಂದ ಹೊರಡುತ್ತೇನೆಂದಾಗ ಒಂದು ಪ್ಲಾಸ್ಟಿಕ್ ಚೀಲದಲ್ಲಿ ಒಂದು ಜೊತೆ ಒಂಬತ್ತು ಗಜದ ಅತ್ಯುತ್ತಮ ನೇಯ್ಗೆಯ ಫಿನ್ಲೆಪಂಚೆ, ವೀಳೆಯದೆಲೆ, ಹಣ್ಣು, ಜೊತೆಗೆ ಒಂದು ಸಣ್ಣ ಲಕೋಟೆ ಇಟ್ಟು ಇದನ್ನು ತೆಗೆದುಕೊಳ್ಳಬೇಕೆಂದರು. ಇದಕ್ಕೆ ನಾನು ಸಿದ್ಧನಿರಲಿಲ್ಲ. 'ಇದೇನು? ಇದೇಕೆ? ಬೇಡ' ಎಂದೆ. 'ಇದು ನಮ್ಮೆಲ್ಲರ ಮರ್ಯಾದೆ. ತೆಗೆದುಕೊಳ್ಳಬೇಕು' ಎಂದರು. 'ಅದು ಸರಿ, ಈ ಕವರ್ ಏನು?' ಎಂದೆ. 'ನಿಮ್ಮ ವೆಚ್ಚಕ್ಕೆಂದು ಒಂದು ಸಾವಿರ ರೂಪಾಯಿ ಗೊತ್ತು ಮಾಡಿದ್ದೆವು. ಟಿಕೆಟ್ ವೆಚ್ಚ ಕಳೆದು ಉಳಿದ ಐದುನೂರು' ರೂಪಾಯಿ ಅದರಲ್ಲಿಟ್ಟಿದೆ. ಇದನ್ನು ದಯವಿಟ್ಟು ತೆಗೆದುಕೊಳ್ಳಬೇಕು' ಎಂದರು. ಇಂಥ ಉಪಚಾರವನ್ನು ಸದ್ದಿಲ್ಲದೆ ಮಾಡಿದರು. ಸಂಪ್ರದಾಯದ ಹಣ್ಣು, ವಸ್ತ್ರ ಬೊಂಬಾಯಿನ ಗೌರವಕ್ಕೆ, ಹಿರಿಮೆಗೆ. ಇವು ಮೂರ್ತಿಮತ್ತಾಗಿ ರಾಯರಲ್ಲಿ ನೆಲಸಿದ್ದವು. ನಾನು ಆ ಊರಿಗೆ ಹೋದಾಗಿನಿಂದ ಪುನಃ ಊರು ಬಿಟ್ಟು ಹೊರಡುವವರೆಗೆ ನನಗೆ ತಮ್ಮ ಕಾರಿನಲ್ಲಿ ವ್ಯವಸ್ಥೆ ಮಾಡಿದ್ದರು,

---

* ಇಂಥದೇ ಇನ್ನೊಂದು ಸಂದರ್ಭ ನೆನಪಿಗೆ ಬರುತ್ತದೆ. ನಾನು ೧೯೩೫ರಲ್ಲಿ ಧಾರವಾಡ ಕರ್ನಾಟಕ ಕಾಲೆಜ್ ಕನ್ನಡ ಸಂಘದ 'ಸೋಷಿಯಲ್ ಗ್ಯಾದರಿಂಗ್'ಗೆ ಹೋಗಿದ್ದಾಗ ಪ್ರೊ. ಎ. ಟಿ. ಸಾಸನೂರರು ಅಧ್ಯಕ್ಷರು. ನಾಡಿಗ ರಾಘವೇಂದ್ರರಾಯರು ಕಾರ್ಯದರ್ಶಿಯಾಗಿದ್ದರಂತೆ. ಆ ರಾತ್ರಿಯ ಭೋಜನದ ಏರ್ಪಾಡು ಸ್ಮರಣೀಯವಾಗಿದೆ. 'ಳಿಜಿರ ತರುವಾಯ ಸಮಾರಂಭಕ್ಕೆ ನನ್ನನ್ನು ನಾಡಿಗರು ತಮ್ಮ ಅತಿಥಿಯಾಗಿ ಕರೆದಿದ್ದರು. ನನಗೆ ಯಾವ ಸೌಕರ್ಯವನ್ನು ಕಲ್ಪಿಸಬೇಕಾದೀತು ಎಂದು ನಾಡಿಗರು ಇಬ್ಬರಿಗೂ ಗೆಳೆಯರಾದ ನೆಗಳೂರರನ್ನು ಕೇಳಿದರಂತೆ. ಇದು ಆ ಕಡೆಯ ಮರ್ಯಾದೆ. ಇವರಾದರೊ – 'ಸೌಕರ್ಯ ಏನು ಬಂತು? ಒಂದು ಮಂದಲಿಗೆ, ಒಂದು ಲೋಡು, ಒಂದು ತಂಬಿಗೆ ನೀರು, ಒಂದು ಲೋಟ' ಎಂದರಂತೆ. ಈ ಸಂಗತಿ ತಿಳಿದಾಗ ನಾನು ಹೇಳಿದೆ– 'ಸದ್ಯ ಒಂದು ಕೆಂಪು ಸೀರೆ, ಒಂದು ಮಡಿಪೆಟ್ಟಿಗೆ ಸೇರಿಸಿರಲಿಲ್ಲವಲ್ಲ– ಅದೇ ಪುಣ್ಯ!' ಅದನ್ನು ನಾಡಿಗರ ತಂದೆ – ಡಿಸ್ಟ್ರಿಕ್ಟ್ ಜಡ್ಜ್ ಆಗಿ ವಿಶ್ರಾಂತರಾದವರು – ಕೇಳಿ ಹೊಟ್ಟೆ ತುಂಬ ನಕ್ಕಿದ್ದರಂತೆ.

ನೆಲದ ಮೇಲೆ ನಡೆಯಲು ಅಗತ್ಯವಿಲ್ಲದಂತೆ. ತಾಯೊ ಮಗನೊ ಇನ್ನಾರಾದರೊ ಇದ್ದು ನಡಸಿಕೊಂಡರು. ವಿಶ್ವಾಸದ ಬಂಧ ಎಷ್ಟು ಆಪ್ತವಾಗಿ ನಿರಂತರವಾಗಿ ನಮ್ಮನ್ನು ಬೆಂಬಿಡದೆ ಕಾಪಾಡುತ್ತದೆ ಎಂಬುದನ್ನು ಗ್ರಂಥಗಳಲ್ಲಿ ಮಾತ್ರ ನಾವು ಕಂಡಿದ್ದ ಸಂಗತಿ. ಕೇವಲ ವ್ಯಕ್ತಿಶವಾಗಿ ಈ ಮಾತಿನಿಂದ ಈ ಲೇಖನವನ್ನಾರಂಭಿಸಿದ್ದೇನೆ. ಒಂದು ಸಂದರ್ಭದಲ್ಲಿಯೂ ಅವರು ಹೆಚ್ಚಾಗಿ ಮಾತಾಡಿದುದನ್ನಾಗಲಿ, ನುಗ್ಗಿ ನಡೆದುದಾಗಲಿ, ಗಟ್ಟಿಯಾಗಿ ಅಥವಾ ಉದ್ವೇಗದಲ್ಲಿ ಯಾವುದನ್ನಾದರೂ ನುಡಿದುದನ್ನಾಗಲಿ ನಾನು ಕಂಡಿರಲಿಲ್ಲ. ಇಂಥ ಗುಣಗಳಿಂದಲೇ ಅವರು ಕಾರಂತರಿಗೆ ಮೆಚ್ಚಿಕೆಯಾಗಿದ್ದುದು; ಜನಪ್ರಿಯರಾಗಿರುವುದು; ನನ್ನ ಮನಸ್ಸಿನಲ್ಲಿ ನಸುಗಾಪಿನ ಪ್ರೀತಿಯಾಗಿ ನೆಲೆಗೊಂಡಿರುವುದು.

ಅವರು ಮೂಡಬಿದರೆಯ ಒಂದು ಬಡಕುಟುಂಬದಲ್ಲಿ ಹುಟ್ಟಿ ಹೈಸ್ಕೂಲುವರೆಗೆ ಹುಟ್ಟೂರಲ್ಲಿ ಓದಿ, ಹೈಸ್ಕೂಲು ವಿದ್ಯಾಭ್ಯಾಸಕ್ಕಾಗಿ ಹತ್ತು-ಹನ್ನೆರಡು ಮೈಲಿ ದೂರದಲ್ಲಿರುವ ಕಾರ್ಕಳಕ್ಕೆ ಪ್ರತಿದಿನ ನಡೆದುಕೊಂಡು ಹೋಗಿ ವ್ಯಾಸಂಗ ಮಾಡಿದ್ದರಂತೆ. ಹೆಚ್ಚಿನ ಪದವಿಗಳನ್ನು ಪಡೆಯಲಾಗದೆ ತಮ್ಮ ಪದವಿಯನ್ನು ರೂಪಿಸಿಕೊಳ್ಳುವುದಕ್ಕಾಗಿ ಸಣ್ಣವಯಸ್ಸಲ್ಲಿಯೇ ಬೊಂಬಾಯಿ ಸೇರಿದರಂತೆ. ಆಗ್ಗೆ ಸ್ವಲ್ಪ ಮುಂಚಿತವಾಗಿ ಅವರ ಅಣ್ಣಂದಿರಾದ ಅಣ್ಣಪ್ಪಯ್ಯ ಅಥವಾ ದೊಡ್ಡಪ್ಪ ಎಂಬ ಹೆಸರವರು ಬೊಂಬಾಯಲ್ಲಿ ನೆಲಸಿದ್ದರು. ಒಂದು ಸಣ್ಣ ಕೆಲಸಕ್ಕೆ ೮೦-೯೦ ರೂಪಾಯಿಗೆ ಸೇರಿಕೊಂಡು ಬುದ್ಧಿಮತ್ತೆಯಿಂದಲೂ ಪ್ರಾಮಾಣಿಕತೆ, ಚಟುವಟಿಕೆಯಿಂದಲೂ ಕೈಕೊಂಡ ಕಾರ್ಯದಲ್ಲಿ ವಿಚಕ್ಷಣೆಯಿಂದ ಬೇಗ ಬೇಗ ಜನರಲ್ಲಿಯೂ ಕಾರ್ಯಪ್ರಪಂಚದಲ್ಲಿಯೂ ಮೇಲಕ್ಕೆ ಬಂದರು. ಮೋಟರ್ ಸಲಕರಣೆಗಳ ವ್ಯಾಪಾರದಲ್ಲಿ ದಕ್ಷಿಣದೇಶದಲ್ಲೆಲ್ಲಾ ಸಂಬಂಧಗಳನ್ನೂ ಪರಿಚಯವನ್ನೂ ಕಲ್ಪಿಸಿಕೊಂಡು ಆ ಪ್ರಪಂಚದಲ್ಲಿ ನಿಷ್ಣಾತರಾಗಿ, ತಮ್ಮದೇ ಮೋಟರ್ ಬಿಡಿಭಾಗಗಳ ಒಂದು ಸಂಸ್ಥೆಯನ್ನು ರಚಿಸಿಕೊಂಡು ನೇರವಾಗಿಯೊ ಭಾಗಸ್ಥರೊಡನೆಯೊ ಬಗೆಬಗೆಯ ಕಾರ್ಯಕಲಾಪಗಳನ್ನು ನಿರ್ವಹಿಸುತ್ತ, ಲಕ್ಷಾಂತರ ರೂಪಾಯಿಗಳ ವ್ಯಾಪಾರವನ್ನು ಸಾಧಿಸಿದ್ದಾರೆ. ಬಹುಬೇಗ ಅಲ್ಲಿನ ವರ್ತಕ ವರ್ಗದಲ್ಲಿಯೂ ಕನ್ನಡಿಗರಲ್ಲಿಯೂ ಇತರ ಊರ ಸಮ್ಮಾನಿತರಲ್ಲಿಯೂ ಗೌರವವನ್ನೂ ವಿಶ್ವಾಸವನ್ನೂ ಸಂಪಾದಿಸಿಕೊಂಡು, ಇಂದು ಮೂಡಬಿದ್ರಿಯವರೆಂದರೆ ಯಾವ ಸಂಸ್ಥೆಗೂ ಸಮಾರಂಭಕ್ಕೂ ನೆಚ್ಚಬಲ್ಲ ಕುಳವಾಗಿದ್ದಾರೆ.

ಬೊಂಬಾಯಲ್ಲಿ ಕನ್ನಡಿಗರಿಗೆ ಸಂಬಂಧಿಸಿದಂತೆ ನಡೆವ ಸಮಾರಂಭಗಳಿಗೆಲ್ಲ ಅವರ ಪ್ರೋತ್ಸಾಹವನ್ನು ನೆರವನ್ನು ನೆಚ್ಚಬಹುದು. ಅವರ ಒಂದು ಮಾತಿನಿಂದ ಅನೇಕರು ಕೆಲಸ ಕಾರ್ಯಗಳಿಗೆ ಸೇರಿಕೊಂಡು ಪ್ರವೃದ್ಧಮಾನರಾಗಿದ್ದಾರೆ. ದಕ್ಷಿಣಕನ್ನಡ ಜಿಲ್ಲೆಯ ಯಾವ ವಿದ್ಯಾಸಂಸ್ಥೆ, ಧಾರ್ಮಿಕ ಸಂಸ್ಥೆ ತಮಗೆ ನೆರವು ಬೇಕೆಂದು ಬರೆದರೂ ಧನಸಂಗ್ರಹ ಕಾರ್ಯಗಳಲ್ಲಿ ನೇರವಾಗಿಯೊ ಪರೋಕ್ಷವಾಗಿಯೊ ಕಾರ್ಯಮುಖವಾಗಿದ್ದಾರೆ.* ಎಲ್ಲಕ್ಕಿಂತ ಹೆಚ್ಚಾಗಿ ತಮ್ಮ ಹೆಸರಿಗೆ ತಕ್ಕಂತೆ ಮೂಡಬಿದರೆಯಲ್ಲಿ ಅನೇಕ ವರ್ಷಗಳಿಂದ

---

* ಸಿಕ್ಕಿಸಿಕ್ಕಿದಂತೆ ಅದಕ್ಕೆ ಇದಕ್ಕೆ ಎಂದು ನಿರಂತರವಾಗಿ ಅವರನ್ನು ಕಾಡಿ ಪೀಡಿಸುವಂತಾಗಬಾರದೆಂದು ಮಾತ್ರ ನನ್ನ ಮನವಿ.

ನಡೆಮಕೊಂಡು ಬಂದಿರುವ ಜನಹಿತಕಾರ್ಯಗಳಿಗೆ ಅವರು ಜೀವಸ್ವರೂಪರು. ಬಡತನದಲ್ಲಿ ವಿದ್ಯಾವ್ಯಾಸಂಗ ಮಾಡಿದ ತಾವು ಹುಟ್ಟೂರಲ್ಲಿ ಒಂದು ಸಣ್ಣ ವಾಚನಾಲಯವನ್ನು ಸ್ಥಾಪಿಸಿದ ಕಾಲದಿಂದಲೂ ಅವರಿಗೆ ಊರ ಜನರಿಗೆ ಪ್ರಯೋಜನವಾಗುವ ಕಾರ್ಯಗಳಲ್ಲಿ ಆಸಕ್ತಿ. ಮುಖ್ಯವಾಗಿ ಕೆಲವರು ಸ್ನೇಹಿತರೊಡನೆ ಬೆರೆತು ಅಲ್ಲಿ ಸಮಾಜ ಮಂದಿರ ಎಂಬ ಸಂಸ್ಥೆಯನ್ನು ಕಟ್ಟಿ ಬೆಳಸಿದರು. ಸಭಿಸಮಾರಂಭಗಳಿಗೂ ಮದುವೆ, ಮಂಗಳ ಕಾರ್ಯಗಳ ಏರ್ಪಾಡಿಗೂ ಒದಗುವಂತೆ ಅಷ್ಟು ಭಾಗ ಉಪನ್ಯಾಸ ಮಂದಿರ, ನಾಟಕದ ಒಂದು ರಂಗಮಂಟಪ ರಚಿಸಲು ನೆರವಾದರು. ನೂರಾರು ಮಂದಿ ಊಟ ಉಪಚಾರಗಳಿಗೆ ಸೇರುವ ಸಂದರ್ಭಗಳಿಗೆ ಒದಗುವಂತೆ ಪಾತ್ರೆ, ಪದಾರ್ಥಗಳನ್ನೂ ಉಗ್ರಾಣವನ್ನೂ ಕಟ್ಟಲು ನೆರವಾದರು. ಊರ ವಿದ್ಯಾಭಿವೃದ್ಧಿಯೂ ಸಮಾಜಹಿತಕಾರ್ಯಗಳೂ ಬೆಳೆದಂತೆಲ್ಲ ಈ ಸಮಾಜ ಮಂದಿರದ ಕಾರ್ಯಕರ್ತರಾದ ಇವರಿಗೆ ಮೂಡಬಿದರೆಯ ಸಾರ್ವಜನಿಕ ಜೀವನ ಸಂಪನ್ನವಾಯಿತು ಎನಿಸಿರಬೇಕು. ಆ ಊರಲ್ಲಿ ಹೊಸದಾಗಿ ಸಣ್ಣ ವಯಸ್ಸಿನ ಮಕ್ಕಳಿಗೂ ಹೈಸ್ಕೂಲು ಮಟ್ಟದ ವಿದ್ಯಾರ್ಥಿಗಳಿಗೂ ಶಿಕ್ಷಣ ಸೌಕರ್ಯ ಒದಗುವಂತೆ ಬಗೆಬಗೆಯ ಹಣದ ಸೌಲಭ್ಯ ಒದಗಿಸಿದ್ದಲ್ಲದೆ, ಒಂದು ದೊಡ್ಡ ವಿದ್ಯಾ ಮಂದಿರವನ್ನೂ ಪುಸ್ತಕ ಭಂಡಾರವನ್ನೂ ನಡಸಿಕೊಟ್ಟು ವೈಜ್ಞಾನಿಕ ಸಲಕರಣೆ ದೊರಕುವಂತೆ ಮಾಡಿದರು. ಆ ಊರಿನಲ್ಲಿ ಹುಟ್ಟಿದ ಮಕ್ಕಳು ವಿಶ್ವವಿದ್ಯಾನಿಲಯ ಮಟ್ಟದ ಶಿಕ್ಷಣವನ್ನು ಪಡೆಯಲು ಅನುಕೂಲಿಸುವಂತೆ, ಬೇರೊಂದು ಊರಿಗೆ ಕಾಯಬೇಕಾದ ಅಗತ್ಯವಿಲ್ಲದಂತೆ ಒಂದು ದೊಡ್ಡ ಕಾಲೆಜ್ ಸ್ಥಾಪಿಸಿದರು. ಊರವರೆಲ್ಲರ ಸಹಕಾರವನ್ನು ಪಡೆದು, ಆ ಮಂದಿರದ ರಚನೆಗೆ ಬೇಕಾದ ಭೂಪ್ರದೇಶವನ್ನೂ ತಾವೇ ಕೊಟ್ಟು, ಇತರ ಬಗೆಯ ಧನಸಹಾಯವನ್ನೂ ಮಾಡಿ, ಸ್ವಂತ ಪ್ರಯತ್ನಕ್ಕಿಂತ ಹೆಚ್ಚಾಗಿ ಅನುಭವಸ್ಥರೂ ಇಂಥ ಕಾರ್ಯಗಳಲ್ಲಿ ಸಿದ್ಧಹಸ್ತರೂ ಆದ ಮಣಿಪಾಲದ ಡಾ. ಟಿ. ಎಂ. ಎ. ಪೈ ಆರಂಭಿಸಿ ಅಮೋಘವಾಗಿ ಬೆಳಸಿರುವ ವಿದ್ಯಾಭಿವೃದ್ಧಿ ಸಂಸ್ಥೆಯ ವಶಕ್ಕೂ ಆಡಳಿತಕ್ಕೂ ಅದನ್ನು ಒಪ್ಪಿಸಿದರು. ಅಲ್ಲಿನ ಅಭ್ಯಾಸಗಳಿಗೆ ತಕ್ಕ ಅಧ್ಯಾಪಕರನ್ನು ನಿಯಮಿಸುವುದರಲ್ಲಿಯೂ ಅವರಿಗೆ ಅಗತ್ಯವಾಗುವ ವಸತಿಸೌಕರ್ಯ ದೊರೆಯುವಂತೆಯೂ ಅನುಕೂಲವಾದ ವಸತಿಗಳನ್ನು ಕಟ್ಟಿಕೊಟ್ಟು, ಅವರ ಮನೆಯ ಮುಂದೆ ಬಾವಿಗಳನ್ನು ತೋಡಿಸಿ, ತಮ್ಮವೇ ಹೂಗಿಡಗಳನ್ನು ಬೆಳಸಿಕೊಳ್ಳುವುದಕ್ಕೂ ಬೇಕೆನ್ನಿಸಿದ ಕಾಯಿಪಲ್ಲೆ ಬೆಳಸಿಕೊಳ್ಳುವುದಕ್ಕೂ ಅಣಿಮಾಡಿಕೊಟ್ಟರು. ಬಹುಶಃ ಒಬ್ಬೊಬ್ಬರಿಗೂ ಒಂದು ಹಸು ಕೊಟ್ಟರೊ ಅಥವಾ ಅವರೆಲ್ಲರಿಗೂ ಶುಚಿಯಾದ ಅಪ್ಪಟ ಹಾಲು ದೊರೆಯುವಂತೆಯೊ ವ್ಯವಸ್ಥೆ ಮಾಡಿದರು. ಮೂಡಬಿದರೆಯ ಈ ಸಮಾಜ ಮಂದಿರದ ಸ್ಥಾಪನೆಯ ಜೊತೆಗೆ ಅಲ್ಲಿಯ ಶ್ರೀ ಮಹಾವೀರ ಕಾಲೆಜು, ಬಾಬು ರಾಜೇಂದ್ರ ಪ್ರಸಾದ್ ಹೈಸ್ಕೂಲ್, ಮುಲ್ಕಿಯ ವಿಜಯ ಕಾಲೆಜ್, ಪುತ್ತೂರಿನ ವಿವೇಕಾನಂದ ಕಾಲೆಜ್, ಶಿರ್ವಾಡಿಯಲ್ಲಿನ ಜವಾಹರಲಾಲ ನೆಹರು ಹೈಸ್ಕೂಲ್, ಕಲ್ಲಮುಂಡ್ಕೂರಿನ ಸರ್ವೋದಯ ಹೈಸ್ಕೂಲ್, ಮುಂಬಯಿಯ ಕರ್ನಾಟಕ ಸಂಘದ ವಿಶ್ವೇಶ್ವರಯ್ಯ ಮೆಮೋರಿಯಲ್ ಹಾಲ್, ಈ ಎಲ್ಲ ಪ್ರದೇಶಗಳಲ್ಲಿ ಇನ್ನೆಷ್ಟೊ ಸಂಸ್ಥೆಗಳು–ಇವೆಲ್ಲವೂ ಅವರ ಶ್ರದ್ಧೆಯ, ಸಾಹಸದ, ಸೇವೆಯ ಪ್ರತೀಕಗಳು. ಈಚೆಗೆ–ಎಂದರೆ ೧೯೬೯ರಲ್ಲಿ ಅರವತ್ತನೆ ವರ್ಷದ ಹುಟ್ಟುಹಬ್ಬವನ್ನು

ಮೂಡಬಿದರೆ ನಗರ ನೆರವೇರಿಸಿತೆಂದಿದ್ದೇನೆ: ಧನವನ್ನು ಸಂಗ್ರಹಿಸಿ ಅವರಿಗೆ ಅಂದು ಅಲ್ಲಿ ಸನ್ಮಾನ ಮಾಡಲಾಯಿತು. ಕನ್ನಡ ನಾಡಿನ ಅನೇಕ ಮಂದಿ ಹಿರಿಯರನ್ನೂ ಗೆಳೆಯರನ್ನೂ ಆಹ್ವಾನಿಸಿ ಆ ಉತ್ಸವ ನಡಸುತ್ತಿರುವಾಗ ಬೊಂಬಾಯಿ, ಮಂಗಳೂರು, ಬೆಳಗಾಂ, ಉಡುಪಿಯಿಂದಲೂ ಅನೇಕರು ಹೋಗಿ ಉತ್ಸವಗಳಲ್ಲಿ ಪಾಲುಗೊಂಡರು. ಆಗ ಮೊರೆತ ಲಕ್ಷ ರೂಪಾಯಿಯನ್ನು ಮೂಡಬಿದರೆಯ ಇಂಥಿಂಥ ಸಂಸ್ಥೆಯ ಪ್ರಯೋಜನಕ್ಕಾಗಿ ಹೀಗೆ ವಿನಿಯೋಗ ಮಾಡಬೇಕೆಂದು ತಿಳಿಸಿದಂತೆ ಅದನ್ನು ವಿತರಣೆಮಾಡಿಸಿ, ಗೆಳೆಯರೂ ಅಭಿಮಾನಿಗಳೂ ಸಂಗ್ರಹಿಸಿದ ಚಂದಾಹಣ ಅದಾದರೂ ತಾವೇ ಒಂದು ಸಂಸ್ಥೆಗೆ ಮೂರು ಸಾವಿರ, ಇನ್ನೊಂದಕ್ಕೆ ಹತ್ತು ಸಾವಿರ ರೂಪಾಯಿ ಹಣ ಕೊಟ್ಟು, ಆ ಜನ್ಮೋತ್ಸವಕ್ಕೆ ತಮ್ಮ ಕೃತಜ್ಞತೆಯನ್ನು ಅರ್ಪಿಸಿದರು. ಇದು ತಮ್ಮ ಹುಟ್ಟೂರಿಗೆ ಮಾಡಿದ ಸೇವೆ. ಒಮ್ಮೆ ಮೂಡಬಿದರೆಯ ಯಾವುದೊ ಪ್ರಯೋಜನಕ್ಕಾಗಿ ಸಹಾಯದ್ರವ್ಯವನ್ನು ಸಂಗ್ರಹಿಸಲು ಬೊಂಬಾಯಲ್ಲಿ ಒಂದು ಸಮಾರಂಭವನ್ನು ಮಾಡಿದ್ದರು. ಶ್ರೀ ಟಿ. ಎ. ಪೈ ದಯಮಾಡಿಸಿ ಅದಕ್ಕೆ ಮಾನ್ಯ ಮಾಡಿದ್ದರು. ಇವೆಲ್ಲ ಒಂದೇ ಗುಣಶೀಲದ ಕ್ರಿಯಾವ್ಯಾಪಾರಗಳು, ಒಂದೇ ಮನಸ್ಸು ಕಾರ್ಯಪ್ರವೃತ್ತವಾಗುವ ಪ್ರಕಾರಗಳು. ಅವರು ಯಾವುದನ್ನು ಮಾಡಲಿ ಮಾತು ಕಡಮೆ, ಕೆಲಸ ಮುಖ್ಯ. ಕಡೆಗೆ ವೇದಿಕೆಯ ಮೇಲೆ ನಿಂತು ಛಾಯಾಚಿತ್ರಗಳನ್ನು ತೆಗೆಸಿಕೊಳ್ಳುವುದಕ್ಕೆ ಅವರು ಸಮ್ಮತಿಸುವುದಿಲ್ಲ. ಭಾಷಣಗಳನ್ನು ಮಾಡುವುದಂತೂ ಕಡಮೆ. ತಾವು ಹೋದಾಗ ಇರುವುದಕ್ಕಾಗಿ ಮೂಡಬಿದರೆಯಲ್ಲಿ ಒಂದು ಸಣ್ಣ ಮನೆಯನ್ನು ಇಟ್ಟುಕೊಂಡಿದ್ದಾರೆ. ಅದರಲ್ಲಿ ಶ್ರೀಮಂತ ಸೌಕರ್ಯಗಳಿಲ್ಲವಾದರೂ ಆಡಂಬರವಿಲ್ಲವಾದರೂ ಅಚ್ಚುಕಟ್ಟಾಗಿ ನಾಲ್ಕು ದಿವಸ ಮನೆಯವರೂ ಇತರರೂ ಇರುವುದಕ್ಕೆ ಬೇಕಾದ ಸಜ್ಜು ನಿರ್ಮಿತವಾಗಿದೆ.

ಅವರು ಮೊದಲಿನಿಂದಲೂ ಗಾಂಧೀಜಿಯವರ ಭಕ್ತರು. ಆ ಹೆಸರು ಹೇಳಿಕೊಂಡು ಖಾದಿಯನ್ನು ಧರಿಸಿ ಅಷ್ಟರಿಂದಲೇ ಭಕ್ತರು, ಹಿಂಬಾಲಕರು ಎನ್ನುವುದಕ್ಕಿಂತ ಒಂದು ವ್ರತದಂತೆ ಗಾಂಧೀತತ್ತ್ವವನ್ನು ಅನುಸರಿಸುವ ನಿಷ್ಠೆ ಅವರದು. ಖಾದಿ ಕುರ್ತ, ಪಂಚೆ, ಟೋಪಿ ಇಷ್ಟೇ ಅವರ ಉಡುಪು. ಸ್ವಚ್ಛವಾಗಿ ಅವನ್ನು ಧರಿಸಿ ಮೊದಲಿಂದಲೂ ಖಾಸಗಿ ವ್ಯವಹಾರದಲ್ಲಿಯಾಗಲಿ, ಸಾರ್ವಜನಿಕ ಕಾರ್ಯಗಳಲ್ಲಿಯಾಗಲಿ ಕಾಣಿಸುವವರು. ಅವರದು constructive programme. ಅವರ ಮನಸ್ಸಿಗೆ ಒಪ್ಪಿದುದನ್ನು ಸರ್ವಥಾ ಯತ್ನಿಸಿ ನಡಸಿಕೊಡುವ ಮನೋಭಾವ, ಮನೋವೃತ್ತಿ, ಜೀವನ ಅವರದು. ಜನತೆಯಲ್ಲಿ ಪ್ರೀತಿ; ಅವರಿಗೆ ನೆರವು ಕೊಡುವ ಸೌಜನ್ಯ, ಸಮದೃಷ್ಟಿ; ಸ್ವಾರ್ಥಕ್ಕಿಂತ ಪರಾರ್ಥವನ್ನು ಸಾಧಿಸುವ ಓಲು, ರೀತಿ; ಅಹಿಂಸೆ; ಇವು ಅವರಲ್ಲಿ ಫಲಿಸಿರುವ ಗುಣಗಳು. ವಿಷಯಗಳನ್ನು ಕುರಿತು ಆಲೋಚನೆ ಮಾಡುವಾಗಲೂ ವಾದಗಳೆದ್ದಾಗ ಪೂರ್ತಿ ಸನ್ನಿವೇಶವನ್ನು, ಸಂಗತಿಯನ್ನು ತಿಳಿದುಕೊಂಡ ಹೊರತು ಮಾತನಾಡದ ಕಾರ್ಯಪ್ರವರ್ತಕರು. ತಕ್ಷಣದ ಸಾರ್ವಜನಿಕ ರಾಜಕೀಯ ಉದ್ರೇಕಗಳಿಗೂ ಪಕ್ಷಪಾತದ ಘೋಷಣೆಗಳಿಗೂ ಉದ್ವೇಗಗೊಳ್ಳದೆ ತನಗೆ ಸೂಕ್ತ ತೋರಿದಂತೆ ನಡೆಯುವವರು. ಪತ್ರಿಕೆಗಳು ಏನೇ ಬರೆಯಲಿ, ಭಾಷಣಕಾರರು ಏನೇ ಹೇಳಲಿ, ತಾನು ನೋಡಿ ಅಳೆದು ಸುರಿದು ಮಾಡಿದ ತೀರ್ಮಾನ ಎಂದಿಗೂ ಅವರದು.

ಹೊರಗಿನ ತೋರಿಕೆ, ಬೆಡಗಿನ ಮಾತು ಅವರಿಗೆ ಎಂದೂ ಒಪ್ಪುವುದಿಲ್ಲ. ಮಾಡುತ್ತೇನೆಂದು ಒಪ್ಪಿಕೊಂಡ ಕೆಲಸಕ್ಕೆ ಅಲಸದೆ ತಮ್ಮ ಎಲ್ಲ ಶಕ್ತಿಯನ್ನೂ ಬಳಸಲು ಸಿದ್ಧರು. ಸಂಘಸಂಸ್ಥೆಗಳಿಗೆ ಕಾರ್ಯಕಾರಿವರ್ಗಕ್ಕೆ ಸಂಬಂಧಪಟ್ಟಾಗಲೂ ಹಾಗೆ. ಬರುತ್ತೇನೆಂದು ಒಪ್ಪಿಕೊಂಡಾಗ ಯಥಾಕಾಲಕ್ಕೆ ತಪ್ಪದೆ ಹೋಗಿ ಕಾರ್ಯಮಗ್ನರಾಗುವರು. ಕೆಲಸವನ್ನು ನಿರ್ವಹಿಸುವಾಗ ಅಗತ್ಯಗಳನ್ನು ಮುಂಚಿತವಾಗಿ ತಿಳಿದು ಅದಕ್ಕೆ ಬೇಕಾದ ಸಿದ್ಧತೆ ಸಲಕರಣೆ ಮಾಡಿಕೊಡುವರು. ಅವರಿರುವ ಕಡೆ ಅನ್ಯಾಯವಾಗುವುದು, ಪೋಲಾಗುವುದು, ಕಡೆಗೆ ಸೋಲಾಗುವುದು ಎಂಬ ಚಿಂತೆ ಇಲ್ಲ. ಒಂದು ಬದುಕು ತನ್ನನ್ನು ತಾನು ಮುಡಿಪು ಮಾಡಿಕೊಂಡಾಗ ಬದುಕನ್ನು ಸಾರ್ಥಕಮಾಡಿಕೊಳ್ಳುತ್ತದೆ. ಮೊದಲಿನಿಂದಲೂ ಗಾಂಧೀಜಿಯವರ ಪಕ್ಷವಾದ ಕಾಂಗ್ರೆಸ್ ಪಕ್ಷವೇ ಅವರದು. ಉಳಿದವರು ಏನೇ ಮಾಡಲಿ, ಬಿಡಲಿ, ತನ್ನ ಭಾಗದ ಕಾರ್ಯವನ್ನು ತಪ್ಪದೆ ಕ್ಲುಪ್ತವಾಗಿ ಮಾಡುತ್ತಾರೆ. ಬೊಂಬಾಯಿ ಸರ್ಕಾರದಲ್ಲಿ ನಗರಜೀವನ ವ್ಯವಸ್ಥೆಯಲ್ಲಿ ನಡೆವ ಕ್ರಮ, ಅಕ್ರಮ ಸ್ವಂತವಾಗಿ ಪರ್ಯಾಲೋಚಿಸಿ ತಮ್ಮ ಅಭಿಪ್ರಾಯವನ್ನು ರೂಪಿಸಿಕೊಳ್ಳುವುದು ಅವರ ಪದ್ಧತಿ. ದಕ್ಷಿಣದವರು ಬೊಂಬಾಯಲ್ಲಿ ಅನನುಕೂಲಗಳಿಗೆ ಸಿಕ್ಕಿದ ಸಂದರ್ಭದಲ್ಲಿಯೂ ಪರಿಸ್ಥಿತಿಯನ್ನು ಪೂರ್ತಿಯಾಗಿ ತಿಳಿದಲ್ಲದೆ ಯಾವ ಪಾಕ್ಷಿಕ ಮಾತನ್ನೂ ಆಡದೆ ಲೋಪದೋಷಗಳನ್ನು ಅರಿತು, ಈ ಮಾತು ಎಷ್ಟು ಸರಿ, ಯಾವ ನಡತೆಯ ಗುಣದೋಷ ಹೇಗೆ, ಇಲ್ಲಿ ಹೇಗೆ ನಡೆಯಿತು, ಬೇರೆ ಹೇಗಾಗಬಲ್ಲದು ಎಂದು ನಿಷ್ಪಕ್ಷಪಾತದಲ್ಲಿ ನುಡಿಯುವ ಧಾರಾಳ, ಮನಸ್ಸು ಧೈರ್ಯ ಸಾಧಾರಣರಿಗೆ ಇರಲಾರದು. Democracy ಎಂಬ ರಾಜಕೀಯ ತತ್ತ್ವದಲ್ಲಿ ಬಹು ಮುಖ್ಯವಾದ ಅಂಶ ಈ ವಿಮರ್ಶಕ ರೀತಿ. ಪ್ರತಿಯೊಬ್ಬ ರಾಷ್ಟ್ರಕನಿಗೂ ಸಮಾನವಾದ ಅವಕಾಶ ದೊರಕಬೇಕು. ಸರಿಯಾದ ಶಿಕ್ಷಣ ದೊರೆಯಬೇಕು. ಪ್ರತಿಯೊಬ್ಬನಿಗೂ ರಾಜ್ಯದ ಆಗುಹೋಗುಗಳನ್ನು ಕುರಿತು ಆಲೋಚಿಸಿ ಸಮಸ್ತ ರಾಜಕೀಯ ಆರ್ಥಿಕ ಸಂಬಂಧಗಳಲ್ಲಿ ಸ್ವತಂತ್ರವಾಗಿ ಆಲೋಚನೆ ಮಾಡಿ ನಿರ್ವಿಕಾರದಿಂದ ವಿಷಯವನ್ನು ಪರ್ಯಾಲೋಚಿಸಬೇಕು. ಸ್ವಾತಂತ್ರ್ಯ (Liberty) ಎಂಬುದು ಹಕ್ಕಿನ ಪಾತ್ರ ಮಾತ್ರವೇ ಅಲ್ಲ, ಹೊಣೆಗಾರಿಕೆಯದು ಎಂಬುದು ಸಾಮಾನ್ಯರ ಎಣಿಕೆಗೆ ಬರುವುದಿಲ್ಲ. ಅವಕಾಶವಿಷ್ಟು, ಮಿತಿಯಿಷ್ಟು; ದಾರಿ ಇದು ಸರಿ, ಇದು ಸರಿಯಲ್ಲ; ವಿರುದ್ಧ ಮತಕ್ಕೆ ಕೇವಲ ಧಿಕ್ಕಾರ ಸಲ್ಲದು; ತಮ್ಮ ಪಕ್ಷಕ್ಕೆ ಮತಸ್ವಾತಂತ್ರ್ಯ ಹೇಗೆ ಅಗತ್ಯವೊ ಅದಕ್ಕೆ ಅದರ ಸ್ವಾತಂತ್ರ್ಯ ಹಾಗೇ; ಅದಕ್ಕೆ ಮಾನ್ಯತೆ ಕೊಡಬೇಕು; ಎಲ್ಲವನ್ನೂ ಹೊಂದಿಸಿಕೊಂಡು ಕೂಡುಬಾಳು ಬಾಳಬೇಕು ಎಂಬ ಅರಿವು ಈ ತತ್ತ್ವದ ಮೂಲಾಂಶ ಎಂಬುದನ್ನು ಅವರು ಬಲ್ಲರು. ತಮ್ಮ ವಿಮರ್ಶನವನ್ನು ಜೀವನದ ಸಮಸ್ತ ವ್ಯಾಪಾರಗಳಲ್ಲಿಯೂ ಧೈರ್ಯದಿಂದ ನುಡಿವಂತಾಗಬೇಕು, ಪರಿಣಾಮ ಹೇಗೇ ಆಗಲಿ; ಅದೇ ರಾಷ್ಟ್ರಾಭಿಮಾನ; ವ್ಯಕ್ತಿ ವಿವೇಕ; ಪಕ್ಷಪಾತ ಅಂಥದಾಗಬೇಕು ಎಂಬ ಸಾಧನೆ, ಶೀಲ ರೂಪಗೊಳ್ಳಬೇಕು ಎಂಬುದು ಅವರ ಮನಸ್ಸಿಗೆ ಶ್ರದ್ಧೆಯನ್ನೂ ಶಕ್ತಿಯನ್ನು ಬೆಳಕನ್ನೂ ಕೊಟ್ಟಿದೆ.

ಅತಿಥಿಯಾಗಿ ಬಂದವರನ್ನು ತುಂಬಾ ಪ್ರೀತ್ಯಾದರಗಳಿಂದ ಅವರೂ ಅವರ ಕುಟುಂಬದವರೂ ನೋಡಿಕೊಳ್ಳುತ್ತಾರೆ. ಯಾವುದರಲ್ಲಿಯೂ ಅತಿಸಡಗರವಿಲ್ಲ, ಅಬ್ಬರವಿಲ್ಲ.

ಇವರ ಭಾರ್ಯೆ ಶ್ರೀಮತಿ ಕೃಷ್ಣಾಬಾಯಿಯವರು, ಭಾಸ್ಕರ್ ಮುಂತಾದ ಇವರ ಮಕ್ಕಳು ಬಂದವರನ್ನು ಅತಿಶಯ ಪ್ರೀತಿಯಿಂದ ನೋಡಿಕೊಳ್ಳುತ್ತಾರೆ. ಅತಿಥಿಗಳ ಕಾಲವನ್ನೆಲ್ಲಾ ತಾವೇ ತೆಗೆದುಕೊಂಡು ಅವರಿಗೆ ವಿಶ್ರಾಂತಿ ಇಲ್ಲದಂತೆ ಎಂದೂ ಮಾಡುವುದಿಲ್ಲ. ಅವರ ಕಾರ್ಯವೇನು? ಬಂದವರು ಎಲ್ಲೆಲ್ಲಿಗೆ ಹೋಗಬೇಕಾಗಿದೆ? ಮಾಡಬೇಕಾದ್ದೇನು? – ಎಂಬುದನ್ನು ಅರಿತು ಅದಕ್ಕೆ ತಕ್ಕ ಏರ್ಪಾಡನ್ನು ಮಾಡುವರು. ಬೊಂಬಾಯಿ ಬಹು ದೊಡ್ಡ ಪಟ್ಟಣ. ಅನೇಕ ಸ್ಥಳಗಳು ದೂರದೂರ ಪ್ರದೇಶಗಳಲ್ಲಿವೆ. ಅದಕ್ಕಾಗಿ ಸಂಚಾರ ಸೌಲಭ್ಯ ದೊರೆಯುವಂತೆ ಮಗನೊ ಅಥವಾ ಸಾರಥಿಯೊ ಅವರನ್ನು ಆಯಾ ಸ್ಥಳಗಳಿಗೆ ಕರೆದುಕೊಂಡು ಹೋಗುವ ಏರ್ಪಾಡು ಮಾಡುತ್ತಾರೆ. ಸಕಾಲಕ್ಕೆ ಆ ಸ್ಥಳವನ್ನು ಸೇರುವಂತೆಯೂ ಅಲ್ಲಿಂದ ಹಿಂದಿರುಗುವಂತೆಯೂ ನೋಡಿಕೊಳ್ಳುತ್ತಾರೆ. ನನಗಂತೂ ಹೇಳಿಕೊಳ್ಳಲು ಸಂಕೋಚವಾಗುತ್ತದೆ; ನಾಲ್ಕಾರು ಬಾರಿ ನಾನು ಅವರಲ್ಲಿಗೆ ಹೋದಾಗ ನನ್ನನ್ನು ನೆಲದ ಮೇಲೆ ನಡೆಯಗೊಡದೆ ತಮ್ಮ ಕಾರಿನ ನೆರವನ್ನು ಕೊಟ್ಟು ಊರಿನ ನಾನಾ ಭಾಗಗಳಲ್ಲಿ ಚಿದರಿರುವ ಸ್ಥಳಗಳಿಗೆ, ಜನರ ಬಳಿಗೆ ಒಯ್ಯುವ ಅನುಕೂಲ ಮಾಡಿದ್ದಾರೆ. ವಿಮಾನ ನಿಲ್ದಾಣಕ್ಕೊ ರೈಲ್ವೆ ನಿಲ್ದಾಣಕ್ಕೊ ತಾವೇ ಬಂದು ಅತಿಥಿಯನ್ನು ಕರೆದೊಯ್ಯಬೇಕು, ಕಳಿಸಬೇಕು. ಪೆಟ್ರೋಲಿನ ತೊಂದರೆ ಇರುವ ಕಾಲವೂ ಇದಕ್ಕೆ ಹೊರತಲ್ಲ. 'He speaks in deed whenever he speaks indeed' – ಎಂಬ ಷೇಕ್ಸ್‌ಪಿಯರಿನ ವಾಕ್ಯ ಇಂಥಲ್ಲಿ ಯಥಾರ್ಥವಾಗುತ್ತದೆ.

ಒಂದು ಸಲ ದೆಹಲಿಯಿಂದ ಬೊಂಬಾಯಿಗೆ ಬಂದೆ. ಒಂದು ದಿನ ಅಲ್ಲಿದ್ದು ಎರಡನೆಯ ದಿನ ಬೆಂಗಳೂರಿಗೊ ಹೊನ್ನಾವರಕ್ಕೊ ಹೋಗಬೇಕಿತ್ತು. ಬೇರೆ ಬೇರೆ ದಿಕ್ಕುಗಳಲ್ಲಿದ್ದ ಪ್ರದೇಶದಲ್ಲಿ ಆ ಈ ಕೆಲಸ ಮಾಡಬೇಕಿತ್ತು. ಬಾಯಿತಪ್ಪಿ ಒಂದು ಮಾತಾಡಿದ್ದೆ: ವಿಮಾನ ನಿಲ್ದಾಣದಲ್ಲಿಯೊ, ರೈಲ್ವೆಸ್ಟೇಷನ್ನಲ್ಲಿಯೊ ಉತ್ತಮವಾದ ಚಕ್ಕಳದ ಸೂಟ್‌ಕೇಸ್ ಸಾಮಾನು, ಸಜ್ಜು ಇರುವವರಿಗೆ ಕೂಲಿಕಾರ ಜನ ಮೊದಲು ಕೆಲಸಮಾಡಿಕೊಡುತ್ತಾರೆ; ಒಳ್ಳೆಯ ಚಕ್ಕಳದ ಪೆಟ್ಟಿಗೆಯಿಲ್ಲದ ಅಥವಾ 'ಹೋಲ್ಡಾಲ್' ಇಲ್ಲದ, ಅಥವಾ ಬಹು ಕಡಮೆ ಸಾಮಾನಿರುವವರ ಸೇವೆಗೆ ಮೊದಲ ನೆರವು ಕೊಡುವುದಿಲ್ಲ; ಒಂದು ಒಳ್ಳೆಯ ಚರ್ಮದ ಪೆಟ್ಟಿಗೆಯನ್ನು ಕೊಂಡುಹೋದರೆ ಅಂಥವರ ಕೆಲಸ ಮುಂಚಿತವಾಗಿ ಆಗುತ್ತದೆ; ಮೊದಲೇ ನಮ್ಮಂಥವರ ಮುಖಪುಣ್ಯ ಕಡಮೆ. ನೌಕರರ ಚಾಕರರ ಕಣ್ಣಿಗೆ ಇಂಥಿಂಥ ಕುಳದ ಯೋಗ್ಯತೆ ಬಂಡವಾಳ ಇಷ್ಟು ಎಂದು ಗೊತ್ತಾಗುತ್ತದೆ; ಅವರು ವಾಸನೆ ಹಿಡಿಯುವ ರೀತಿಯೂ ಬೇರೆ - ಬಹುಸೂಕ್ಷ್ಮವಾದ್ದು ಎಂಬಂತೆ, ಆದರೆ ಅಷ್ಟು ಮಾತುಗಳಲ್ಲಲ್ಲ - ಹೇಳಿದ್ದೆ. ಆಗ ಲೋಕಾಭಿರಾಮವಾಗಿ ಚರ್ಮದ ಪೆಟ್ಟಿಗೆಗೆ ಸ್ವಲ್ಪ ಹಣ ಹಿಡಿಯುತ್ತದೆ; ಮತ್ತೊಮ್ಮೆ ದೆಹಲಿಗೊ ಮುಂಬಯಿಗೊ ಹೋಗಬೇಕಾದಾಗ ಇಂಥ ಅಣಿ ಮಾಡಿಕೊಳ್ಳಬೇಕಾದೀತು ಎಂದಿದ್ದೆ. ಹಾಗೇ ಆದಾಗ ಕೊಳ್ಳಲು ಹೋಗೋಣವೆಂದು ಅವರ ಮಗನಿಗೆ ಹೇಳಿದ್ದೆ. ಮರೆಯದೆ ಒಂದಿಷ್ಟು ಸಕ್ಕರೆಯ ತುಂಡುಗಳನ್ನು ಈ ಸಲ ಕೊಂಡು ಊರಿಗೆ ಹೋಗಬೇಕು ಎಂದಿದ್ದೆ. ನನ್ನನ್ನು ಊರೊಳಕ್ಕೊ ಅಥವಾ ಊರ ಈಚೆ ಬದಿಯ ಗೆಳೆಯರ ಮನೆಗೊ ಕಳಿಸಿ ಅಲ್ಲಿಂದ ಬರಲು ಹೊತ್ತಾದೀತು ಎಂದು ತಿಳಿಸಿ,

ಬೇರೆ ಇನ್ನಾವುದಕ್ಕೂ ನನ್ನನ್ನು ಕರೆದುಕೊಂಡು ಹೋದರು. ಎರಡನೆಯ ದಿನ ನಾನು ಊರಿಗೆ ಹೋಗುವ ಮುಂಚಿತವಾಗಿ ಒಂದು ಒಳ್ಳೆಯ ಸೂಟ್‌ಕೇಸ್ ಮನೆಗೆ ಬಂದಿತ್ತು. ಅದರೊಳಗೆ ಎರಡು ಸಕ್ಕರೆಯ ತುಂಡಿನ ಗ್ರಾಸ್‌ಪೊಟ್ಟಣಗಳು ಸಂಗ್ರಹೀತವಾಗಿದ್ದವು. ನಾನು ತುಂಬ ಸಂಕೋಚಪಟ್ಟುಕೊಂಡು ಅವರು ಆ ತೊಂದರೆಯನ್ನು ತೆಗೆದುಕೊಳ್ಳ ಬೇಕಾದ್ದಿಲ್ಲವೆಂದು ಹೇಳಿದೆ. ಅದರ ಬೆಲೆಯನ್ನು ಅವರು ಸ್ವೀಕರಿಸಲಿಲ್ಲ.

ಇನ್ನೊಂದು ಸಲ ಬಡೇ ಗುಲಾಂ ಅಲಿಖಾನ್ ಅವರ ಸಂಗೀತ ಷಣ್ಮುಗಾನಂದ ಸಭಾಮಂದಿರದಲ್ಲಿ ಏರ್ಪಾಟಾಗಿದೆ ಎಂದು ಸುದ್ದಿ ಬಂದಿತ್ತು. ರಾಯರು ಇಂಥದಕ್ಕೆಲ್ಲ ಹೋಗುತ್ತಾರೊ ಇಲ್ಲವೊ ಕಾಣೆ. ಇವರ ಅಣ್ಣಂದಿರು ಎಲ್ಲಿಯೂ ಹೆಚ್ಚಾಗಿ ಕಾಣಿಸದೆ ಎಲ್ಲದರಲ್ಲೂ ನೆರವಾಗುವಂಥವರು. 'ನಾನು ಬರುತ್ತೇನೆ ಬನ್ನಿ' ಎಂದು ನನ್ನ ಜೊತೆಗೆ ನುಡಿಯದೆ ಹೊರಟರು. ನಮ್ಮ ಜೊತೆಯಲ್ಲಿಯೇ ಆ ದಿನ ಇದ್ದ ಕಾರಂತರೂ ಹೆಬ್ಬಾರರೂ ಯಾವುದೊ ನೃತ್ಯಪ್ರದರ್ಶನಕ್ಕೆ ಹೋದರು. ಎರಡೂ ಎರಡು ಬಗೆಯ ಕಲೆಗಳು, ಕಲಾ ಪ್ರಸಾರಗಳು. ನೃತ್ಯದಲ್ಲಿ ಪಕ್ಷಪಾತ ನನಗಿಲ್ಲವೆಂದಲ್ಲ. ಆದರೆ ಎರಡಕ್ಕೂ ಒಂದೇ ಸಲ ಹೋಗುವುದು ಶಕ್ಯವಲ್ಲ. ಅವರಿಬ್ಬರೂ ನೃತ್ಯಕ್ಕೆ ಹೋದರು; ನಾನು ಉಸ್ತಾದರ ಸಂಗೀತಕ್ಕೆ ಹೋದೆ. ಅಷ್ಟು ದೊಡ್ಡ ಸಭಾಮಂದಿರವನ್ನು ದಕ್ಷಿಣಾದಿಗಳು ಬೊಂಬಾಯಲ್ಲಿ ಉಪಯೋಗಿಸುವುದನ್ನು ನಾನು ಕಂಡಿರಲಿಲ್ಲ. ಅದರ ಸದಸ್ಯವರ್ಗವೇ ಮೂರುಸಾವಿರಕ್ಕೆ ಏರಿದೆ ಎಂದು ತಿಳಿಯಿತು. ದೊಡ್ಡಪ್ಪನವರು ಇಪ್ಪತ್ತೈದು ರೂಪಾಯಿನ ಒಂದು ಟಿಕೆಟ್ (ಅದೇ ಅಂದು ಅತಿಹೆಚ್ಚಿನದು) ತೆಗೆದುಕೊಂಡು, ವೇದಿಕೆಯ ಮೇಲೆ ಎರಡನೆ ಪಕ್ಕ ಸಾಲಿನಲ್ಲಿ ಬೇಡಬೇಡವೆಂದರೂ ಒಯ್ದು ಕೂಡಿಸಿದರು. ಎದುರಿಗಿದ್ದರೆ ಚೆನ್ನಾಗಿತ್ತು. ನನಗೆ ಗೊತ್ತಾದವರು ಬೇರೆ ಟಿಕೆಟ್ಟಿನ ಕೆಳಗೆ ೧೦, ೧೫, ೨೦ರ ಟಿಕೆಟ್ಟನ್ನು ಕೊಂಡು ಕುಳಿತಿದ್ದರು. ಇವರು ನಮ್ಮ ಜೊತೆಯಲ್ಲಿ ಕೂರಲಿಲ್ಲ. ಬೇರೆ ಇನ್ನೆಲ್ಲಿಗೊ ಹೋದರು. ಕೇವಲ ಒಂಟಿಧಾರಾಳದಲ್ಲಿ ಸ್ಥಳಮರ್ಯಾದೆಯನ್ನು ಅರಿತವನಲ್ಲವಾಗಿ ಅಲ್ಲಿಯೇ ಕುಳಿತುಕೊಳ್ಳಬೇಕಾಯಿತು. ತುಂಬ ಕಾಯಿಲೆ ಬಿದ್ದಿದ್ದು ಆಗತಾನೆ ಚೇತರಿಸಿಕೊಂಡಿದ್ದ ಉಸ್ತಾದರು ಅದೇ ಮೊದಲ ಬಾರಿ ಹಾಡುತ್ತಿದ್ದರಾದ್ದರಿಂದ ಆ ಅವಕಾಶ ತುಂಬ ದೊಡ್ಡ ಅವಕಾಶವಾಯಿತು. ದರ್ಬಾರಿ, ಮಾಲ್‌ಕೌಂಸ್ ಮುಂತಾದ ರಾಗಗಳ ಹಾಡುಗಾರಿಕೆಗೆ ಅವರದು ತುಂಬ ಪ್ರಸಿದ್ಧಿ. ಜೊತೆಗೆ ಅವರ ಮಗ ಹಾಡುತ್ತಿದ್ದರು. ಅವೊತ್ತಿನ ಸಂತೋಷ ಅತಿಶಯವಾದ್ದು. ದೊಡ್ಡಪ್ಪನವರಿಗೆ ಮತ್ತೆ ನನ್ನ ಆಕ್ಷೇಪಣೆಯನ್ನು ಹೇಳಿದರೆ ಅವರದನ್ನು ಕಿವಿಯ ಮೇಲೆ ಹಾಕಿಕೊಳ್ಳಲಿಲ್ಲ. ದೊಡ್ಡವರ ಸಂಗೀತವನ್ನು ಹತ್ತಿರದಿಂದ ಕೇಳಬೇಕು; ಅನಾಯಾಸವಾಗಿ ಬಂದಿದ್ದೀರಿ; ಹತ್ತಿರದಿಂದ ಕುಳಿತು ಕೇಳಿ; ಗಾಯಕರ ಮೃದು ಶ್ರುತಿ ಮೂರ್ಛನಾಂಶಗಳನ್ನು ಪಕ್ಕದಿಂದ ಅದೇ ಮಟ್ಟದಲ್ಲಿ ಹತ್ತಿರದಿಂದ ಕೇಳಿದರೆ ಮೇಲಲ್ಲವೆ? - ಎಂದೋ ಏನೊ ಹೇಳಿದರು. ತಾವು ಎಷ್ಟೊ ವೇಳೆ ಕೇಳಿದ್ದೇನೆ; ಇನ್ನೆಷ್ಟೊ ಸಲ ಕೇಳಬಹುದು ಈ ಊರಲ್ಲಿ ಎಂದರು, – ಮುಂದಿನ ಮಾತಿಗೆ ಅವಕಾಶವಿಲ್ಲದಂತೆ.

ಈಚೆಗೆ ನಾನು ಲಂಡನ್ನಿಗೆ ಹೋಗುವ ಸಾಹಸ ಮಾಡಿದೆ. ಬೆಂಗಳೂರಲ್ಲಿ ಕೆಲವು ವಸ್ತುಗಳನ್ನು ಕೊಂಡುಹೋಗುವುದಕ್ಕೆ ಕಾಲಾವಕಾಶವಿರಲಿಲ್ಲ. ಬೊಂಬಾಯಲ್ಲಿ ಆ ದಿನ

ವಾಹನಗಳ ಸಂಪು. ವಾಹನಸಂಚಾರ, ಸೌಕರ್ಯಗಳ ಬಂದ್ ನಡೆದಿತ್ತು. ನನಗೆ ಬೇಕಾದ ಎರಡು ಮೂರು ಪದಾರ್ಥವನ್ನು ದೊರಕಿಸಿಕೊಳ್ಳಲು ಆಗದೆ 'ಹ್ಯಾಪ್ ಮುಖ' ಹಾಕಿಕೊಂಡು ಹಿಂದಕ್ಕೆ ಬಂದೆ. ರಾಯರ ಕಾರಿದ್ದಿದ್ದರಿಂದ ಬ್ರಿಟಿಷ್ ವೀಸಾ ದೊರೆಯುವ ಕಚೇರಿಗೆ ಹೋಗುವುದು ಶಕ್ಯವಾಯಿತು. ವೀಸಾ 'Necesary; not obligatory; ನೀವು ಹೋಗಿ; ನಿಮ್ಮನ್ನು ತಡೆಯುವುದಿಲ್ಲ' ಎಂದುಬಿಟ್ಟರು ಆ ಕಚೇರಿಯ ಮಹಿಳಾ ಅಧಿಕಾರಿ. ಇಲ್ಲಿಂದ ಈ ಸಾಮಾನನ್ನು ತೆಗೆದುಕೊಂಡು ಹೋಗಿ ಎಂದು ರಾಯರು ಒಂದು ಅಂದದ ಬುಟ್ಟಿಯಲ್ಲಿ ನಮ್ಮಲ್ಲಿ ಬಾದಾಮಿ ಎಂದು ಕರೆಯುವ ಅಲ್ಲಿನ ಉತ್ತಮ 'ಆಪ್ರೂಸ್' ಮಾವನ್ನು ಅರಿಸಿ ಇಟ್ಟಿದ್ದರು. 'ಇದು ಅವರಿಗೆ ಈಗ ದೊರಕುತ್ತದೆಯೊ ಇಲ್ಲವೊ; ಇದನ್ನು ತೆಗೆದುಕೊಂಡು ಹೋದರೆ ಅಲ್ಲಿನವರಿಗೆ ಸಂತೋಷವಾಗುತ್ತದೆ; ಬೇಡ ಎನ್ನದೆ ತೆಗೆದುಕೊಂಡು ಹೋಗಬೇಕು' – ಎಂದು ಜೊತೆಯಲ್ಲಿ ಕಳಿಸಿದರು.

ನಾನು ಹಿಂದಕ್ಕೆ ಬರುವಾಗ ತಾವು ಅನಿವಾರ್ಯವಾಗಿ ತಮ್ಮ ಊರಿನ ಕಡೆ ಹೊರಟಿದ್ದರಿಂದ ಮಗನಿಗೆ, ಅಣ್ಣಂದಿರಿಗೆ ಹೇಳಿ ನಾನು ರುಗ್ಣಸ್ಥಿತಿಯಲ್ಲಿರುವುದನ್ನು ತಿಳಿದಿದ್ದವರಾಗಿ ವಿಮಾನ ನಿಲ್ದಾಣದಲ್ಲಿ ಬೇಕಾಗುವ ಸೌಕರ್ಯಗಳನ್ನೆಲ್ಲ ಏರ್ಪಡಿಸಿ ಹೋಗಿದ್ದರು. ಅಷ್ಟೇ ಅಲ್ಲ, ನನ್ನ ಆರೋಗ್ಯವನ್ನು ಕುರಿತು ಒಡನೆಯೇ ತಮಗೆ ತಿಳಿಸಬೇಕೆಂದು ಅವರಿಗೆ ಹೇಳಿಹೋಗಿದ್ದರು. ಇಂಥದು ಎಷ್ಟೋ ಅವರ ದಿನಚರಿಯಲ್ಲಿ. ಕೆಳೆಯ ವರ್ಗದಲ್ಲಿಯಾಗಲಿ, ಸಾರ್ವಜನಿಕ ಸಮಾರಂಭಗಳಲ್ಲಿಯಾಗಲಿ, ಖಾಸಗಿ ನಡವಳಿಕೆಯಲ್ಲಿಯಾಗಲಿ ಒಂದೇ ನಾಜೂಕು. ಇನ್ನೊಬ್ಬರ ಪರವಾದ ಚಿಂತನ ಯಾವ ಸೂಕ್ಷ್ಮದ್ದು, ನಯದ್ದು ಎಂದು ಇವು ತಿಳಿಸೀತೆಂದು ಹೇಳಿದ್ದೇನೆ. ರಾಮನ ಪ್ರಶಂಸೆ ಮಾಡುವ ಭರತನ ಮಾತು ಈ ಗುಣವನ್ನು ಎತ್ತಿ ತಿಳಿಸುತ್ತದೆ. 'ಸ್ವ-ಪರ' ಎಂಬ ಎರಡು ಮಾತುಂಟು. ತಮ್ಮ ಸುಖಸೌಕರ್ಯ, ಲಾಭ, ಪ್ರಯೋಜನ ಇವುಗಳ ಚಿಂತನೆಯನ್ನು ಪ್ರಧಾನವಾಗಿ ಮಾಡಿಕೊಳ್ಳದೆ ಇನ್ನೊಬ್ಬರಿಗೆ ತೊಂದರೆಯಾಗಬಾರದು, ಮನಸ್ಸಿಗೆ ಬೇಸರವಾಗಬಾರದು, ಅನನುಕೂಲಸಂಭವ ಬರಬಾರದು ಎಂದು ಆ ಕಡೆ ಯೋಚನೆ ಮಾಡುವುದಾದರೆ, ಆಗ ಸಂಸ್ಕಾರಕರ್ಮ ಆರಂಭವಾಗುತ್ತದೆ. ತನ್ನ ಹೊರಗಿನದಕ್ಕೆ ಅಗತ್ಯಕ್ಕೇ ಆಗಲಿ, ಅನ್ಯಕ್ಕೆ ಸ್ವ-ಪರ ಚಿಂತನ ಹಬ್ಬಿದಾಗ ಅದು ಒಂದು ಹೆಜ್ಜೆ ಮುಂದೆ ಇಟ್ಟಂತೆ. ಇದು ವಿಸ್ತಾರಗೊಂಡು ಇದರ ವಿವಕ್ಷೆ - ವಿಚಕ್ಷಣೆ ಲೋಕಸಮಸ್ತಕ್ಕೆ ಹರಡುವುದಾದರೆ ಸ್ವ-ಪರ-ಅನ್ಯ ಎಂಬ ಭಾಗಗಳಿಗೆ ಹೆಚ್ಚು ವಿಶಾಲ ವ್ಯಾಪ್ತಿ ಬರುತ್ತದೆ. ತಮ್ಮಿಂದ ಹೆಂಡತಿ, ಮಕ್ಕಳು, ಮನೆ, ಊರು, ದೇಶ, ಲೋಕಸಮಸ್ತ, ಇನ್ನೂ ಅನೇಕ ಮೇಲ್ಪಟ್ಟ ಅರ್ಥದಲ್ಲಿ ಪರ, - ಇವುಗಳ ಸಾಧನೆ ಬಹುದೊಡ್ಡ ಸಂಸ್ಕೃತಿ ವಿಲಾಸಕ್ಕೆ ಸಂಬಂಧಿಸಿದ ವಿಶೇಷ. ಪರರ ಹಿತಕ್ಕೆ ಸ್ವಾರ್ಥವನ್ನು ಹೊಂದಿಸಿ ಅದನ್ನು ಸಾಧಿಸುವ ವೃತ್ತಿ ನಿಜವಾಗಿ ಮಾನವನ ಬಾಳಿನಲ್ಲಿ ಬಹುದೊಡ್ಡ ಸಾಧನೆ. ಅದು ಸಂಜೀವರಾಯರದು. ಅವರು ನೀತಿಯನ್ನು ಧರ್ಮವನ್ನು ಕುರಿತು ಮಾತಾಡುವವರಲ್ಲ; ಆ ಬದುಕನ್ನು ಬದುಕುತ್ತಾರೆ. ಒಂದು ದಿನ ಕೊರಲೆತ್ತಿ ಕೂಗುವವರಲ್ಲ. ಯಾವುದರ ಯೋಗ್ಯತೆ ಇಷ್ಟೇ ಎಂದು ಸುಲಭವಾಗಿ ಅರಿಯಬಲ್ಲವರು. ತಾವೇನು ಮಾಡಬಹುದು ಎಂದು ಬಲ್ಲರೊ ಅದನ್ನು ಹೇಳಿಸಿಕೊಳ್ಳದೆಯೆ, ಮುಂಚೆಯೇ

ಮಾಡುವರು. ಅಂಥವರ ಚರಿತ ಉದಾರಚರಿತ. ಅಂಥವರ ಬಾಳು ಸಾರ್ಥಕವಾದ್ದು. ಅಂಥ ಸತ್ವ ನಿರಂತರ ಸುಖಸೌಕರ್ಯಗಳಿಂದಲೂ ಇದೇ ಬಗೆಯ ಶಾಂತಿಯಿಂದಲೂ ನಡೆದು, ತಮಗೂ ತಮ್ಮ ಮನೆಯವರಿಗೂ ತಮ್ಮ ಬದುಕಿನ ವ್ಯಾಪ್ತಿಯಲ್ಲಿ ಬಂದ ಎಲ್ಲಕ್ಕೂ ಸಂತೋಷವನ್ನು ಕೊಡುತ್ತಿರಲಿ ಹೀಗೆ ಬದುಕು ಹಣ್ಣಾದ ಬಗೆಯನ್ನು ನಾನು ಅವರಲ್ಲಿ ಕಂಡು ಉಂಡಿದ್ದೇನೆ.

'ತೇಭ್ಯಂ ನಮಃ ಕುರ್ಮಹೇ'

ಆರ್. ಎಸ್. ಹೆಗಡೆ

ಇಬ್ಬರು ಸ್ನೇಹಿತರು – ಸಿರಸಿಯ ವಾಲಗಳ್ಳಿ, ಕಾರವಾರದ ಮಾಂಜರೇಕರ್ – ನನ್ನನ್ನು ಉತ್ತರ ಕನ್ನಡ ಜಿಲ್ಲೆಯಿಂದ ಆಹ್ವಾನ ಬಂದರೆ ಅಲ್ಲಿಗೆ ಹೋಗಲು 'ಒಲ್ಲೆ ಎನ್ನಬೇಡಿ' ಎಂದಿದ್ದರು. ಸಿರಸಿಯ ಕಾಲೆಜಿಗೆ ಆಹ್ವಾನದಂತೆ ಒಂದು ದಿನ ಒಂದು ತಂತಿ ಬಂತು: 'ಕಾಲೆಜಿಗೆ ಪ್ರಿನ್ಸಿಪಲರನ್ನು ಆಯುವ ಮೀಟಿಂಗ್ ಇಂಥ ದಿನ ನಡೆಯುತ್ತದೆ. ನಿಮಗೆ ಇಷ್ಟವಿದ್ದರೆ ಬರುವುದು' ಎಂದು. ತಂತಿ ವಿಚಿತ್ರವಾಗಿತ್ತು. ನನಗೆ ಆವರೆಗೆ ಸರ್ಕಾರಿ ಕೆಲಸದಿಂದ ರಿಟೈರ್ ಆಗಿ ಸುಮಾರು ಹತ್ತು ಹನ್ನೊಂದು ವರ್ಷವಾಗಿತ್ತು. ಆಮೇಲೆ ಎರಡೂವರೆ ವರ್ಷ ಆಕಾಶವಾಣಿಯಲ್ಲಿ ಕೆಲಸ ಮಾಡಿ ಆಗಿತ್ತು. ಬೊಂಬಾಯಿನ ಯಾವುದೊ ಕಾಲೆಜಿಗೆ ಆ ಮುಂಚೆ ಕರೆದಿದ್ದರು. ಅವರ ಸಮಯಗಳಿಗೆ ಹೊಂದುವುದು ಕಷ್ಟವಾಗಿತ್ತು. ಆದ್ದರಿಂದ ಈ ಸಂಪರ್ಕಗಳು ಬೇಡವೆಂದಿದ್ದೆ. 'ಎದುರಿಗೆ ಬಂದು ಪರೀಕ್ಷೆ ಕೊಡುವ ಅಗತ್ಯವಿಲ್ಲದೆ ನೀವೇ ನನ್ನನ್ನು ಆಯ್ದುಕೊಳ್ಳುವುದಾದರೆ ಒಂದೆರಡು ವರ್ಷ ಕೆಲಸ ಮಾಡಲು ಆಗುತ್ತದೆ' ಎಂದು ತಂತಿಗೆ ಉತ್ತರವಿತ್ತೆ. ನಾಲ್ಕಾರು ಜನ ಸ್ಪರ್ಧಿಗಳ ಮಂಡಲಿಯಲ್ಲಿ ಒಬ್ಬನಾಗಿ ಹೋಗಿ ನಿಲ್ಲುವ ಕಾಲ ಆಗ್ಗೆ ನನಗೆ ಮುಗಿದು ಹೋಗಿತ್ತು ಎಂದು ಮನಸ್ಸು. ನನ್ನ ಗೆಳೆಯರೇ ಆದ ಶ್ರೀ ಶರ್ಮರು ಆ ಕಾಲೆಜಲ್ಲಿ ನಿಯಮಿತರಾಗಿ ಈಗ ಚೆನ್ನಾಗಿ ದುಡಿಯುತ್ತಿದ್ದಾರೆ. ಸಿರಸಿ ಉತ್ತರ ಕನ್ನಡ ಜಿಲ್ಲೆಯಲ್ಲಿ ದೊಡ್ಡ ಊರು; ಆ ಜಿಲ್ಲೆಗೆ ನಡುಗಡ್ಡೆಯ ಪ್ರದೇಶ. ವ್ಯಾಪಾರಕ್ಕೆ ಹೆಸರಾದುದು. ಹಿಂದೆ ನಾಲ್ಕಾರುಸಲ ಭಾಷಣಕ್ಕೆ, ಅದಕ್ಕೆ, ಇದಕ್ಕೆ ಎಂದು ಅಲ್ಲಿಗೆ ಹೋಗಿದ್ದುದುಂಟು. ಹೊಸತಾಗಿ ಕಾಲೆಜು ತೆರೆಯುವಾಗ ಅದಕ್ಕೆ ಬಾರೆಂದರೆ ಹೋಗಬಹುದಿತ್ತೇನೊ. ಆದರೆ ಕರೆ ಹೀಗೆ ಬಂದುದು ಮನಸ್ಸಿಗೆ ಒಪ್ಪಲಿಲ್ಲ. ಇನ್ನಷ್ಟು ಕಾಲ ಕಳೆದ ಮೇಲೆ ಹೊನ್ನಾವರದಿಂದ ಒಂದು ತಂತಿ ಬಂತು: 'ಹೊಸ ಕಾಲೆಜ್ ಒಂದನ್ನು ತೆರೆಯಬೇಕೆಂದಿದೆ. ಅಲ್ಲಿಗೆ ಪ್ರಿನ್ಸಿಪಲ್ ಆಗಿ ಬರುತ್ತೀರ? ಯು.ಜಿ.ಸಿ. ನಿಯಮಗಳಿಗೆ ತಕ್ಕಂತೆ ಸಂಬಳಸಾರಿಗೆ ಕೊಡುತ್ತೇವೆ' ಎಂದು. ಕಾಗದ ಬರೆದಿದ್ದಿದ್ದರೆ ಹೆಚ್ಚು ವಿಶದವಾಗುತ್ತಿತ್ತು. ಯು.ಜಿ.ಸಿ. ನಿಯಮಗಳು ಯಾವುವೊ? ಅದರಲ್ಲಿ ಎರಡು ದರ್ಜೆಗಳಿವೆ ಎಂದು ಕೇಳಿದ್ದೆ. ಯಾವುದನ್ನು ಅವರು ಮನಸ್ಸಿನಲ್ಲಿಟ್ಟುಕೊಂಡಿದ್ದರೊ – ತಿಳಿಯಲಿಲ್ಲ. ಅದು ಇನ್ನೂ ಇಂಟರ್‌ಮೀಡಿಯೆಟ್ ಕಾಲೆಜ್: ಮೊದಲನೆಯ ವರ್ಷ ತೆರೆಯಬೇಕೆಂಬ ಇಷ್ಟದ್ದು. ಅಷ್ಟು ಮಾತ್ರ ಇದ್ದರೆ ಆ ಪುಡಿಕಾಸಿಗೆ ಅಲ್ಲಿಗೆ ಹೋಗುವುದು ಅಷ್ಟೇನೂ ಉತ್ಸಾಹ ತರುವಂಥದಾಗಿರಲಿಲ್ಲ. ಇನ್ನೊಂದು ತಂತಿ ಬಂದಮೇಲೆ ತಿಂಗಳಿಗೆ ಆರುನೂರಾದರೂ ಕೊಟ್ಟು, ಒಂದು ಮನೆ ವಸತಿ ಕೊಡಬಹುದಾದರೆ ಒಪ್ಪಿಕೊಳ್ಳುತ್ತೇನೆಂದೆ. ಆಮೇಲೆ ಅಲ್ಲಿಂದ M.P.E.S. ಅಧ್ಯಕ್ಷರು 'ನೀವು ಕೇಳಿದ್ದರೆ ಇನ್ನಷ್ಟು ಕೊಡುವುದಕ್ಕೆ ಸಿದ್ಧರಿದ್ದೆವು' ಎಂದು ಹೇಳಿದರು. ಮನಸ್ಸಿತ್ತು; ಆದರೆ ಕಾಲೆಜಿಗೆ ಉತ್ಪನ್ನ ಇತ್ತೊ ಇಲ್ಲವೊ

ಕಾಗೆ. ಆದರೆ ಹಾಗೆ ಅಡಿದ ಅಧ್ಯಕ್ಷರು ಆರ್. ಎಸ್. ಹೆಗಡೆ ಪ್ರಾಮಾಣಿಕರಾದ್ದರಿಂದ ಅವರು ಅದನ್ನು ನಡೆಸಿಕೊಡುತ್ತಿದ್ದರೆಂಬ ನಂಬಿಕೆ ನನಗೆ ಇದೆ.

ಆ ಮುಂಚೆ ಆರ್. ಎಸ್. ಹೆಗಡೆ ಹೆಸರು ನಾನು ಕೇಳಿದ್ದಲ್ಲ. ಒಬ್ಬರನ್ನು ಕೇಳಿದಾಗ ಅಡಕೆಯ ತೋಟದ ಯಾರೊ ಯಜಮಾನರಿರಬೇಕು ಎಂದರು. ತೋಟಗಾರರ ಅಥವಾ ವ್ಯಾಪಾರಿಗಳ ಕೈಗೆ ಸಿಕ್ಕಿಹಾಕಿಕೊಳ್ಳುವುದು ಸುಖವೊ ದುಃಖವೊ: ಆ ಯೋಚನೆ ಬೇಕಿಲ್ಲ. ಅರುವತ್ತು ನಾಲ್ಕರ ವಯಸ್ಸಿಗೆ ಮುಟ್ಟಿದ್ದ ನನಗೆ ಕೈಯಲ್ಲಿ ಕೆಲಸವಿಲ್ಲದೆ ಅಲಸಿಗನಾಗಿ ಮನೆಯಲ್ಲಿ ಕುಳಿತಿರುವುದಾಗಿತ್ತು. ಮಕ್ಕಳು ಯಾರಿಗೂ ಕೆಲಸವಿಲ್ಲ, ನಾಲ್ಕು ಕಾಸು ಕೈಗೆ ಬಂದರೆ ಆದೀತು ಎಂಬ ಯೋಚನೆ ಇತ್ತು. ಇಪ್ಪತ್ತಾರು ವರ್ಷ ಕೆಲಸ ಮಾಡಿ, ಅರಿಯದ ಹೊಸ ವಿಧಾನದ ಒಂದು ತೆರನ ಕಟ್ಟುಪಾಡಿಗೆ ಸಿಕ್ಕಿಕೊಂಡು, ತಿಂಗಳಿಗೆ ರೂ. ೧೨೯ ವಿಶ್ರಾಂತಿವೇತನ ಪಡೆದು ಗಾಸಿಪಡುತ್ತಿದ್ದವನಿಗೆ ನೆಮ್ಮದಿಯಾಗಿ ಎರಡೂಟ ನಡೆದೀತು – ಹೋದರೆ – ಎನ್ನಿಸಿಯೇನೊ ಇತ್ತು. ಆದರೆ ನನ್ನ ಪೆನ್ಷನ್ ಅತ್ಯಲ್ಪ ಎಂಬುದು ಹೊರಗಿನವರಿಗೆ ಗೊತ್ತಾಗುವುದು ಬೇಡ ಎಂಬ ಸತ್ಯಸ್ಥಿತಿಯ ಹೀನಾಯ ಒಳಗಿತ್ತು. ಅಲ್ಲೊಂದು ಸಂಸಾರ, ಇಲ್ಲೊಂದು – ಎರಡಕ್ಕೂ ಒದಗುವಂತಹ ಪ್ರಯೋಜನ ಅಷ್ಟೇನೂ ಆಕರ್ಷಕವಾಗಿರಲಿಲ್ಲ. ಎಲ್ಲಕ್ಕಿಂತ ದೊಡ್ಡದಾಗಿ ನಾನರಿಯದ ಯಾರೊ ಒಬ್ಬರು ನನ್ನನ್ನು ಆಯ್ದು ಬನ್ನಿ ಎಂದು ಕರೆಯುತ್ತಿದ್ದಾರೆ. ಊರಲ್ಲಿ ಯಾರೂ ಪರಿಚಿತರಿಲ್ಲ. ಹಿಂದೆ ಎರಡು ಸಲ ಆ ಊರಿಗೆ ಹೋದಾಗ ಜರುಗಿದ ಪ್ರಸಂಗ ಆ ಊರಿನ ವಿಷಯದಲ್ಲಿ ಅಷ್ಟು ಪ್ರಿಯಕರವಾದವಲ್ಲ. ಎರಡು ಸಲವೂ ಸ್ನೇಹಿತರ ಜೊತೆಗೆ ಹೋಗಿದ್ದೆ. ಒಬ್ಬರು ನನ್ನ ಜೊತೆಯ ಉಪಾಧ್ಯಾಯರಾಗಿದ್ದ ಎಸ್. ಮಂಜನಾಥ ಅವರು. ರಾತ್ರಿ ಭಟ್ಕಳಕ್ಕೆ ಮುಟ್ಟುವ ದಾರಿಯಲ್ಲಿ ಶರಾವತಿಯ ಆಚೆ ದಡ ಮುಟ್ಟಿಸುವ ದೋಣಿ ತಪ್ಪಿಹೋಗಿ ಆ ರಾತ್ರಿ ಈಚೆಯೇ ಉಳಿಯಬೇಕಾದಾಗ ನೆಚ್ಚಬಹುದೆಂದುಕೊಂಡಿದ್ದ ಒಬ್ಬಾತ ಗುರುತು ಕೂಡ ಹಿಡಿಯದವರಂತೆ ನಡೆದುಕೊಂಡಿದ್ದು, ಅಲ್ಲಿನ ಪ್ರವಾಸಿ ಬಂಗಲೆಯಲ್ಲಿ ರೂಮುಗಳಿದ್ದರೂ ಎಂಜಿನಿಯರ್ ಅಪ್ಪಣೆ ಇಲ್ಲದೆ ರಾತ್ರಿ ತಂಗಲು ಅವಕಾಶವಿಲ್ಲವೆಂದದ್ದು, ಕೊನೆಗೆ ಅಲ್ಲಿನ ಮಾಲಿಗೆ ಒಂದು ರೂಪಾಯಿ ದಕ್ಷಿಣೆ ತೆತ್ತು ಹೊರಜಗುಲಿಯ ಮೇಲೆ ಇಡಿಯ ರಾತ್ರಿ ಕಳೆದು ಬೆಳಗ್ಗೆ ಹೋದದ್ದು, ಒಂದು ಪಪಾಯ್ ಹಣ್ಣು ತಿಂದು ಸ್ವಲ್ಪ ಹಾಲಿಗೆ ಎರಡು ರೂಪಾಯಿ ಕೊಟ್ಟು ಆ ರಾತ್ರಿ ಅಲ್ಲಿ ಇರಬೇಕಾಗಿ ಬಂದದ್ದು – ಎಲ್ಲವೂ ಇದೇನು ಊರು, ಇದೆಂಥ ಜನ ಎನ್ನಿಸಿತ್ತು. ಎಲ್ಲ ಊರುಗಳಲ್ಲಿ ಸುಮಾರು ಹೀಗೇ; ಬಹುಶಃ ನಮ್ಮ ಮನಸ್ಸಿನ ಕಲ್ಪನೆಗಳು ಹೆಮ್ಮೆಯವಾಗದಿದ್ದರೆ ಭಂಗಭಾವನೆ ದೊಡ್ಡದಾಗುತ್ತದೆ, ಅಷ್ಟೇ. ಗುರುತು, ಪ್ರಭಾವ ಇಲ್ಲದ ಜನರಿಗೆ ಬದುಕು ಇನ್ನೆಷ್ಟು ಸುಖಕರವಾದೀತು? ಇನ್ನೊಂದು ಸಲ ಇನ್ನೊಬ್ಬ ಸ್ನೇಹಿತರ ಜೊತೆಯಲ್ಲಿ ಹೋಗಿದ್ದೆ. ಅವರು ಯಾರನ್ನೊ ನೋಡಬೇಕಾಗಿತ್ತು; ಅವರ ಮನೆಗೆ ಹೋದರು. ಜೊತೆಗೆ ಹೋಗಿದ್ದೆ. ನನ್ನ ಸ್ನೇಹಿತರ ಔದಾರ್ಯದಿಂದ ಆ ಮನೆಯ ಸಂಸಾರ ಸಂಘಟಿತವಾಗಿತ್ತು. ಆದ್ದರಿಂದ ಅಲ್ಲಿ ತಕ್ಕಮಟ್ಟಿನ ಉಪಚಾರ ದೊರೆಯಿತು. ಆದರೆ ಸಂತೋಷವಿಲ್ಲ. ಇಂಥ ಕಡೆಗೆ ಏನು ಹೋಗುವುದು ಎಂದಿದ್ದರೂ

ಹಿಂದೆ ಉತ್ತರ ಕನ್ನಡ ಜಿಲ್ಲೆಗೆ ಸಿಫಾರಸು ಮಾಡಿದ್ದ ಸ್ನೇಹಿತರು ನನಗೆ ತುಂಬಾ ಪ್ರಿಯರು, ಮಾನ್ಯರು; ಅವರ ಮಾತನ್ನು ಯಾಕೆ ತೆಗೆದುಹಾಕಬೇಕು ಎನ್ನಿಸಿತು. ಆ ವಯಸ್ಸಿನಲ್ಲಿ ಪ್ರಿಯವಲ್ಲದ ಒಂದು ಊರು, ಯಾರ ಪರಿಚಯವೂ ಇಲ್ಲದ ಸ್ಥಳ, ಆದರೆ ಕಡಲಕರೆಯ ಪಟ್ಟಣ, ಎರಡು ಸಲ ನನಗೆ ಮರ್ಯಾದೆ ಮಾಡಿದ್ದ ಜಿಲ್ಲೆ, ತಂಡುಲಸಂಗ್ರಹದ ಪೀಡೆ ಇಲ್ಲಿ ಕೆಲಸಕ್ಕೆ ಕರೆವಾಗ ಒಪ್ಪಿಕೊಳ್ಳೋಣವೆಂಬ ಪ್ರಚೋದನೆಯಾಯಿತು.

ಕಡಲಕರೆಯ ಒಂದು ಪ್ರದೇಶದಲ್ಲಿ ಕೆಲಕಾಲ ಇದ್ದರಾದೀತು ಎಂಬ ಆಸೆ ಬಹುಕಾಲ ನನಗೆ. ಭಟ್ಕಳ ಹತ್ತಿರವೊ ಮಂಜೇಶ್ವರದ ಹತ್ತಿರವೊ ಕುಂದಾಪುರದ ಹೊಳೆಯಾಚೆಯ ಒಳನೆರವಿಗೊ ಸ್ವಲ್ಪ ಭೂಮಿಯನ್ನು ಗೇಣಿಗೆ ತೆಗೆದುಕೊಂಡು ವರ್ಷಕ್ಕೆ ಒಮ್ಮೆಯಾದರೂ ಒಂದೆರಡು ತಿಂಗಳಿದ್ದರೆ ಚೆನ್ನಲ್ಲವೆ ಎಂದು ಬಹುಕಾಲ ಅನ್ನಿಸಿತ್ತು. ತಾನಾಗಿ ತಾನು ಈ ಕರೆಯೂರಿಗೆ ಕರೆ ಬಂದಾಗ ಪರ್ಯಾಯವಾಗಿ ಇಷ್ಟಾರ್ಥ ನೆರವೇರಿತು ಎಂದುಕೊಂಡೆ. ಅದು ಪೂರ್ತಿ ಕರೆಯೂರಲ್ಲ. ಶರಾವತಿ ಉದ್ದಕ್ಕೂ ಅದರ ಪಕ್ಕದಲ್ಲಿ ಹರಿದು ಅಲ್ಲಿ ಸಮುದ್ರಕ್ಕೆ ಸೇರುತ್ತದೆ. ಆ ಸಂಗಮಕ್ಕೆ ಹೋಗಬೇಕಾದರೆ ಸ್ವಲ್ಪ ಕಾಲುನಡಿಗೆ ಇದೆ. ಊರ ಹೊರಭಾಗಕ್ಕೂ ಕಡಲಿಗೂ ಸೇರಿ ನದೀಮುಖವನ್ನು ಕಾಣಬೇಕು. ನಡುವೆ ಇನ್ನಷ್ಟು ಭೂಪ್ರದೇಶ ಇದೆ. ಆದರೇನು? ಕಣ್ಣೆದುರಿಗೆ ಕಡಲು, ಕಿವಿಗೆ ಅದರ ಮೊರೆತ, ಬೇಕೆನ್ನಿಸಿದಾಗ ಅಲ್ಲಿಗೆ ಹೋಗಿ ಬೇಕೆನ್ನಿಸಿದಷ್ಟು ಕಾಲ ಇರಬಹುದಲ್ಲವೆ ಎಂಬ ಯೋಚನೆ. ಆ ಉದ್ದಕ್ಕೂ ಕನ್ನಡದ ಕರೆನಾಡು. ಸಂದರ್ಭ ಮನಸ್ಸಿಗೆ ರುಚಿಸಿತು. ಒಮ್ಮೆ ಶ್ರೀ ಕಾರಂತರೂ ನಾನೂ ಆ ಊರಿಗೆ ಹೋಗಿ ಅವರು ನಿಲ್ಲಿಸಿದ್ದ ಒಂದು ಮನೆಯಲ್ಲಿ ಸ್ವಲ್ಪ ಹೊತ್ತು ಇದ್ದೆವು. ಅಷ್ಟೇ ಹೊರತು ಊರಿನ ಇನ್ನಾವ ಲಕ್ಷಣವೂ ಮನಸ್ಸಿಗೆ ಉತ್ಸಾಹ ಕೊಟ್ಟಿರಲಿಲ್ಲ. ಉತ್ತರವಯಸ್ಸಿನಲ್ಲಿ ಒಂದು ಪ್ರಯೋಗಪರೀಕ್ಷೆ ಮಾಡೋಣವೆಂಬುದೇ ಗೆಲವು ತಂದು ಅಲ್ಲಿಗೆ ಹೋಗಲು ಒಪ್ಪಿಕೊಂಡೆ. ಸ್ಥಿತಿಗತಿ ಒಪ್ಪದಿದ್ದರೆ ಒಂದು ವರ್ಷ ಇದ್ದು ಹಿಂದಕ್ಕೆ ಬಂದು ಬಿಡುವುದು; ಇಷ್ಟ ಇಲ್ಲದಿರುವವರನ್ನು ನಿಲ್ಲಿಸಿಕೊಳ್ಳುವವರು ಯಾರು ಎಂದುಕೊಂಡು, 'ಜೈ ಪರಮೇಶ್ವರ' ಎಂದು ಹೊರಟೆ.

'ಜುಲೈ ಹತ್ತರಂದು ಒಂದು ಮೀಟಿಂಗ್ ಇದೆ; ಅಲ್ಲಿ ಕಾಲೆಜಿಗೆ ಕೆಲಸ ಮಾಡುವ ಉಪಾಧ್ಯಾಯರನ್ನು ಆಯಲು ಸಂದರ್ಶನಕ್ಕೆ ಕರೆದಿದೆ. ಆ ಸಮಯದಲ್ಲಿ ನೀವಿರುವುದು ಮೇಲು' ಎಂದು ಇನ್ನೊಂದು ತಂತಿ ಬಂತು. ಮೇಲೇನು ಬಂತು: ಅವಶ್ಯ, ಕರ್ತವ್ಯ; ಕರ್ತವ್ಯಕ್ಕಿಂತ ಮೇಲ್ಪಟ್ಟದ್ದು. ಯಾರೊಡನೆ ನಾನು ಕೆಲಸ ಮಾಡಬೇಕಾಗುತ್ತಿತ್ತೊ ಅವರನ್ನು ನಾನು ನೋಡಬೇಡವೆ? ಜೊತೆಗೆ ಇಂಥ ಸಂದರ್ಭದಲ್ಲಿ ಇನ್ನೊಂದು ಪ್ರಾಜಾಪತ್ಯವೂ ದೊರಕುತ್ತದೆ: ಆಯ್ಕೆ ಮಾಡುವ ಸಭೆಯಲ್ಲಿ ಕುಳಿತು ಕೆಲಸವನ್ನು ಬಯಸಿ ಬಂದಿರುವ ಜನರನ್ನು ಅಧಿಕಾರಿಕವಾಗಿ ನುಡಿಸುವ, ಪ್ರಶ್ನೆ ಕೇಳುವ, ಆಳವನ್ನು ಅರಿಯುವ ಅವಕಾಶ ದೊರೆಯುತ್ತದೆ. ನಾಳೆ ಅವರಿಗೆ ನನ್ನಲ್ಲಿ ಗೌರವ ಬೇಡವೆ! ಇಂತಹ ಇನ್ನೊಂದು ಅಹಂ-ಕಾರ ಒಳಗೇ ಇದ್ದಿದ್ದರೆ ಆಶ್ಚರ್ಯವಲ್ಲ. ಆಯ್ಕೆಗಾರರಾಗಿ ಕುಳಿತಿದ್ದ ಊರಿನ

ಸಮಿತಿಯ ಮಹನೀಯರ ಮುಂದೆ ಅವರು ನನ್ನ ಒಡೆಯ ವರ್ಗವೂ ಆಗಿರುವುದರಿಂದ ನನ್ನ ಪರೀಕ್ಷಣೆಯನ್ನು ಹೇಗೆ ನಿರಮೇರಿಸುವುದೊ ಅವರೂ ಅರಿಯಬೇಡವೆ ಎಂಬುದು. ಆದುದರಿಂದ ಬಹುಶಃ ಒಂಬತ್ತರ ಸಂಜೆಗೇ ಅಲ್ಲಿಗೆ ಹೋಗಿ ಸೇರಿದೆ. ನನಗೆ ಒಂದು ಮನೆ ಗೊತ್ತು ಮಾಡಿದ್ದರು. ಒಬ್ಬ ಮುಸಲ್ಮಾನ್ ಗುಮಾಸ್ತೆ, ಇಬ್ಬರು ಜವಾನರನ್ನು ಆ ಮನೆಯಲ್ಲಿ ನೇಮಿಸಿದ್ದರು. ಮನೆ ಸ್ವಲ್ಪ ಹಿಂದಕ್ಕಿದ್ದರೂ ಚೆಕ್ಕದಾಗಿ ಹಾಳತವಾಗಿತ್ತು, ಶುಚಿಯಾಗಿತ್ತು. ಅದುದರಿಂದ ಹಿಂದೆ ಮೂಲೆಗೆ ಬಿದ್ದಂತೆ ಮೊದಲು ಒಂದು ನಿಮಿಷ ನಿರುತ್ತೇಜಕವಾದರೂ ಇನ್ನಾವುದೊ ಲಕ್ಷಣ ಒಪ್ಪಿತ್ತು. ಹೊರಸಂಪರ್ಕ ಇಲ್ಲ. ಪಕ್ಕದ ಮನೆಗಳಿಗೂ ಇದಕ್ಕೂ ಬೆರಕೆ ಇಲ್ಲ, ಹೊರಚ್ಚಾಗಿರಬಹುದು. ಮನೆಯವರು ಬಂದರೆ ಹೇಗೋ ಏನೊ: ಸದ್ಯಕ್ಕೆ ಒಪ್ಪಲಿ ಎಂದು ಅಲ್ಲಿ ಸ್ಥಾಪಿತನಾದೆ. ಸ್ವಲ್ಪ ಹೊತ್ತಾದ ಮೇಲೆ ಪ್ರೆಸಿಡೆಂಟರು ಯಾರ ಕೈಲೊ ಹೇಳಿಕಳಿಸಿದ್ದರು: ತಮಗೆ ಆ ದಿನ ಮತ್ತೆಲ್ಲಿಗೊ ಹೋಗಬೇಕಿರುವುದರಿಂದ ತಾವು ಬಾರದಿದ್ದುದಕ್ಕೆ ಬೇಸರಪಡಬಾರದೆಂದು. ಆ ರಾತ್ರಿಯೊ ಮುಂದಿನ ಬೆಳಗ್ಗೆಯೊ ನನ್ನನ್ನು ಕಾಣುವರೆಂದೂ ಹೇಳಿಕಳಿಸಿದ್ದರು. ಅಧ್ಯಕ್ಷರನ್ನು ನಾನು ಹೋಗಿ ಕಾಣುವುದೇ ಮರ್ಯಾದೆ. ಅವರಲ್ಲವೆ ನನ್ನ ಒಡೆಯ ವರ್ಗದ ಮುಖ್ಯರು? ಅನೇಕ ಕಡೆ ಒಡೆಯರ ನಿರೀಕ್ಷಣೆ ಹಾಗಿರುತ್ತದೆ. ಹಾಗೆ ಇಲ್ಲಿ ನಡೆಯದಿದ್ದರೂ ಸ್ವಲ್ಪ ವಿಶ್ರಾಂತಿ ಪಡೆದ ಕೂಡಲೆ ಯಾರನ್ನೊ ನನ್ನ ಬಳಿಗೆ ಕರೆಕಳಿಸಿದ್ದುದು ನಿಜವಾಗಿ ಸೌಜನ್ಯ; – ಸಂಸ್ಕಾರವಂತರ ಲಕ್ಷಣ. ಮನಸ್ಸಿಗೆ ಹಿತವಾಯಿತು. ಆ ರಾತ್ರಿ ಒಂಬತ್ತು ಗಂಟೆಯ ಹೊತ್ತಿಗೆ ಹೆಗಡೆಯವರು ನಾನಿದ್ದಲ್ಲಿಗೆ ದಯಮಾಡಿಸಿದರು. ಆತನ ಉಡುಪು, ಆಕೃತಿ, ನಡೆ, ಮಾತು ಎಲ್ಲ ತುಂಬಾ ದೊಡ್ಡ ತೆರದವು. ಆಕೃತಿ ತುಂಬಾ ಎತ್ತರವಲ್ಲ. ಬಣ್ಣ ಸಾಧಾರಣ. ನನ್ನಂಥದೇ. ಆದರೆ ಮುಖದ ಧೀರತೆ, ದವಡೆಯ ಅಗಲ, ತುಂಬು ಸ್ಥಿರ ನೆಲಸಿನದು. ಆತ್ಮವಿಶ್ವಾಸ, ಮೇಲಾಯದ ಸ್ಥಿರ ಮೈಕಟ್ಟು, ಹಿತಮಿತವಾದ ಆದರದ್ಯೋತಕವಾದ, ಧಾರಾಳವಾಗಿ ಆಡಿದ ನಾಲ್ಕು ಮಾತು ಆತನಲ್ಲಿ ನನಗೆ ವಿಶ್ವಾಸ ಉಂಟುಮಾಡಿದವು. ನನಗೆ ಆವರೆಗೆ ತಿಳಿದಿತ್ತು: ಅವರು ಆ ಊರಿನ ಪ್ರಧಾನ ಲಾಯರು, ಹಾಗೆಯೇ ತಾಲ್ಲೂಕು ಬೋರ್ಡಿನ ಪ್ರೆಸಿಡೆಂಟರು ಎಂದು. ಯಾವುದೊ ಒಂದು ಸಹಕಾರ ಸಂಘವನ್ನು ಸ್ಥಾಪಿಸಿ ಅದರ ಅಧ್ಯಕ್ಷರಾಗಿದ್ದರು. ವರ್ತಕರೊ ತೋಟದ ಒಡೆಯರೊ ಅಲ್ಲ. ಧಾರವಾಡ ಕರ್ನಾಟಕ ಕಾಲೆಜಲ್ಲಿ ವಿದ್ಯಾಭ್ಯಾಸ ಮಾಡಿ, ಬೊಂಬಾಯಲ್ಲಿ ಲಾ ಪರೀಕ್ಷೆ ಕೊಟ್ಟು, ಬೊಂಬಾಯಲ್ಲೇ ಎಲ್ಲೊ ಸ್ವಲ್ಪ ಕಾಲ ಉಪಾಧ್ಯಾಯರಾಗಿ ಕೆಲಸ ಮಾಡಿ, ಹೊನ್ನಾವರಕ್ಕೆ ಹಿಂದಿರುಗಿ ಬಂದು ತಮ್ಮ ಊರು ಕರ್ಕಿಯ ಬಳಿಯಲ್ಲಿ ನೆಲಸಿ, ಸ್ವಲ್ಪವೇ ಕಾಲದಲ್ಲಿ ಕೀರ್ತಿಯನ್ನೂ ಪ್ರಾಬಲ್ಯವನ್ನೂ ಪಡೆದುಕೊಂಡಿದ್ದರೆಂಬುದನ್ನು ನನ್ನನ್ನು ಮಾತನಾಡಿಸಿದ್ದ ಒಬ್ಬಿಬ್ಬರಿಂದ ತಿಳಿದುಕೊಂಡೆ.

ಹತ್ತರಂದು ಉಪಾಧ್ಯಾಯರ ಆಯ್ಕೆಯ ಮೀಟಿಂಗ್ ಅಪರಾಹ್ನ ಆರಂಭವಾಯಿತು. ಐದು ನಿಮಿಷ ಮುಂಚಿತವಾಗಿ ನಾನು ಕಾಲೆಜ್ ಕಟ್ಟಡಕ್ಕೆ ಹೋಗಿದ್ದೆ. ಕಾಲುಗಂಟೆಯ ಕಾಲುನಡಿಗೆ ಮನೆಯಿಂದ ಕಾಲೆಜಿಗೆ. ದಿನ್ನೆ ಹತ್ತಿ ಹೋಗಬೇಕಿತ್ತು. ನೋಡುವುದಕ್ಕೆ

ಅಷ್ಟೇನೂ ಆಕರ್ಷಕವಲ್ಲ. ಕಟ್ಟಡ ಅಲ್ಲಿನ ಹಲವು ಹೈಸ್ಕೂಲ್ ಹಾಗೆ ರಚಿತವಾದದ್ದು. ರಸ್ತೆಯಿಂದ ಇಳಿಯುತ್ತಲೆ ಕಾಲೇಜಿನ ಹೆಸರು ಬರೆದ ದೊಡ್ಡ ಬೋರ್ಡನ್ನು ಗೇಟಿನ ಮೇಲೆ ಸ್ಥಾಪಿಸಲಾಗಿತ್ತು. ಅಲ್ಲಿಗೆ ಹೋದ ಸ್ವಲ್ಪ ಸಮಯದಲ್ಲಿಯೇ ಆ ಕಾಲೇಜಿನ ಗೌವರ್ನಿಂಗ್ ಕೌನ್ಸಿಲ್ ಸದಸ್ಯರನ್ನೆಲ್ಲ ಪರಿಚಯ ಮಾಡಿಕೊಂಡೆ. ಈಚೆ ಕೈಸಾಲೆಯಲ್ಲಿ ಇಪ್ಪತ್ತು-ಮೂವತ್ತು ಮಂದಿ ಯುವಕರು ಕೆಲಸಕ್ಕೆ ಅಭ್ಯರ್ಥಿಗಳಾಗಿ ಬಂದಿದ್ದರು. ಅಂಥವರು ಸಾಮಾನ್ಯವಾಗಿ ಒಳಗೆ ಹೋಗುವ ಮೆಂಬರುಗಳಿಗೆಲ್ಲ ಗೌರವ ತೋರಿಸುವುದು ಪದ್ಧತಿ. ನಾನು ಅಲ್ಲಿಗೆ ಪ್ರಿನ್ಸಿಪಲ್ ಆಗಿ ಬರಲಿದ್ದೇನೆಂಬ ಸಂಗತಿ ತಿಳಿದಿದ್ದರೂ ನಾನು ಹಿಂದೆ ಕಂಡವರಾಗಲಿ ಹಿಂದೆ ನನ್ನನ್ನು ಕಂಡವರಾಗಲಿ ಅಲ್ಲಿ ಇರದಿದ್ದರೂ ಹಳೆಯ ಮೈಸೂರು ನಿಶಾನೆಯಾದ ರುಮಾಲು ನನ್ನ ತಲೆಯ ಮೇಲೆ ಇದ್ದುದರಿಂದ ಇವನೇ ಪ್ರಿನ್ಸಿಪಲ್ ಇರಬಹುದು ಎಂದುಕೊಂಡು ಅವರಲ್ಲಿ ಕೆಲಮಂದಿ ಹತ್ತಿರವಿದ್ದವರು ಎದ್ದು ಕೈಮುಗಿದರು. ಇಂಥದನ್ನು ಸ್ವೀಕರಿಸುವುದು ಕಷ್ಟ. ಅವರೇಕೆ ಏಳಬೇಕು? ಕೈಮುಗಿಯಬೇಕು? ಅವರಲ್ಲಿ ಯಾರಿಗೆ ಅಯ್ಯೋಯಾಗುವುದೊ ಇಲ್ಲವೊ. ನನ್ನ ಮುಖದಲ್ಲಿ ಉಲ್ಲಾಸ ತೋರಿಸುವುದೆ, ದರ್ಪ ತೋರಿಸುವುದೆ, ನಗೆ ತೋರುವುದೆ? – ಯಾವುದೂ ನಿರ್ಣಯ ಮಾಡುವ ಹಾಗಿರಲಿಲ್ಲ. ಮೊದಲೆ ನೆತ್ತರು ಚಿಮ್ಮವ, ತಿದಿಯ ಹಾಗಿರುವ ಬಡಕಲು ಮುಖಲಕ್ಷಣ ನನ್ನದು. ಒಳಗೆ ಹರ್ಷವಿದ್ದರೂ ನಗೆ ಬಂದರೂ ಅದು ಅಲ್ಲಿಯೆ ಅಡಗಿ ಹೋಗುವ ಚರ್ಯೆ ಅದರದು. ೪೦-೫೦ ವರ್ಷಗಳ ಹಿಂದೆ ನನ್ನ ಅತಿಹತ್ತಿರದ ತಂಗಿ 'ನೀನು ನಗಬೇಡಪ್ಪ; ನಕ್ಕರೆ ಚೆನ್ನಾಗಿರುವುದಿಲ್ಲ!' ಎಂದುದುಂಟು. ಏನೊ ಹೇಗೊ ಇದ್ದ ತಕ್ಕಮಟ್ಟಿನ ಸ್ವಾಸ್ಥ್ಯದಿಂದ ಮರ್ಯಾದೆಯಿಂದ ಎಲ್ಲರಿಗೂ ಪ್ರತಿವಂದಿಸಿ ಒಳಹೊರಟೆ. ಇನ್ನು ಎರಡು ನಿಮಿಷದಲ್ಲಿಯೇ ಅವರಲ್ಲಿ ಒಬ್ಬೊಬ್ಬರನ್ನಾಗಿ ಕರೆದು ಅವರ ಪರೀಕ್ಷಣ ನಡೆಯಿತು. ಅಧ್ಯಕ್ಷರು ಆರ್. ಎಸ್. ಹೆಗ್ಡೆ, ಹಿಂದೆ ಡಿಸ್ಟ್ರಿಕ್ಟ್ ಮತ್ತು ಸೆಷನ್ಸ್ ಜಡ್ಜರಾಗಿಯೂ ಮೈಸೂರು ಹೈಕೋರ್ಟಿನ ನಿವೃತ್ತ ರಿಜಿಸ್ಟ್ರಾರರೂ ಆಗಿದ್ದ ಉಪಾಧ್ಯಕ್ಷ ಎಂ. ಎಸ್. ಹೆಗ್ಗಡೆ, ಕೋಶಾಧಿಕಾರಿ ಡಾ. ವಿ. ಕೆ. ಬಳ್ಳೂರ್, ಕಾರ್ಯದರ್ಶಿ ಕೈಕಟಗೇರಿ, ಉಳಿದ ಇತರ ಮಾನ್ಯ ಲಾಯರುಗಳು, ವರ್ತಕರು, ಡಾಕ್ಟರು. ಏನು ಪ್ರಶ್ನೆ ಕೇಳುವುದು? – ಏನು ಪಾಸು ಮಾಡಿದ್ದಾರೆ? ಎಲ್ಲಿ? ಹೈಸ್ಕೂಲಲ್ಲಿ ಯಾವ ಕ್ಲಾಸ್ ಬಂತು? – ಇತ್ಯಾದಿ ಮಾತ್ರ ತಾನೆ? ಇವನ್ನೆಲ್ಲ ಅವರು ಅಪ್ಲಿಕೇಷನ್ನಲ್ಲಿಯೇ ತಿಳಿಸಿದ್ದರು. ಆದರೆ ಆಯಾ ಕೆಲಸಗಳಿಗೆ ಸಂಬಂಧಿಸಿದಂತೆ ಅವರ ಯೋಗ್ಯತೆ ಏನು? ಅವರ ವಾಚಾಳತೆ ಏನು? ಮನಸ್ಸಿನ ವಿಲಾಸ, ಮಿಡುಕು ಹೇಗೆ? ಸ್ವಭಾವ ಹೇಗೆ? – ಎಂಬುದನ್ನು ತಿಳಿಯುವುದು ಸ್ವಲ್ಪ ಅಗತ್ಯ ಇಂಥಲ್ಲಿ ಎಂದು ನನಗೆ ಬೋಧೆಯಾಯಿತು. ಆದ್ದರಿಂದ ಅಭ್ಯರ್ಥಿಗಳ ವಿಷಯಜ್ಞತೆಯನ್ನು ಕುರಿತು ಒಂದೊ ಎರಡೊ ಪ್ರಶ್ನೆ ಕೇಳಿ ಅರಿಯಬೇಕಾದ ಅಗತ್ಯ ನನ್ನ ಪಾಲಿಗೆ ಬಂದಿತು. ಕನ್ನಡನಾಡಿನ ಬೇರೆ ಬೇರೆ ಕಡೆಗಳಿಂದ ಅವರು ಬಂದಿದ್ದರು. ಬಂದಿದ್ದವರಲ್ಲಿ ಎಲ್ಲರಿಗೂ ಕನ್ನಡದ ಪರಿಚಯ ಇದ್ದಿತೆ, ಇಲ್ಲವೆ ಎಂಬುದನ್ನು ಕೂಡ ಕೇಳಬೇಕಾಗಿತ್ತು. ಇವ್ಹೊತ್ತಿನ ವಿಶೇಷ ಅವಶ್ಯಕತೆಯಲ್ಲಿ ಅವರು ವಿಜ್ಞಾನ ವಿಷಯಗಳನ್ನು ಕನ್ನಡದಲ್ಲಿ ವಿವರಿಸಬಲ್ಲರೆ ಎಂಬುದನ್ನು ಕೇಳಿ ತಿಳಿದುಕೊಳ್ಳಬೇಕಾಯಿತು.

ಸುಮಾರು ಐದೂವರೆ-ಆರು ಗಂಟೆವರೆಗೆ ಈ ಪರಿಶೀಲನ ನಡೆಯಿತು. ಮಾರನೆಯ ದಿನ ಯಾರನ್ನು ಆಯ್ದುಕೊಳ್ಳಲಾಗಿದೆ ಎಂಬ ತಿಳಿವಳಿಕೆಯನ್ನು ಪಟ್ಟಿ ಮಾಡಿ ಕಾಲೇಜ್ ತೋರಿಸಿತು. ಇಂಥ ತಾರೀಖಿನ ದಿನ ಕಾಲೇಜಿನ ಕೆಲಸ ತೊಡಗುತ್ತದೆ; ಆಯ್ದವರು ಆ ಹೊತ್ತಿಗೆ ಹಾಜರಾಗಬೇಕೆಂದು ತಿಳಿಸಲಾಯಿತು.

ಇದಾದ ಒಂದೆರಡು ದಿವಸದಲ್ಲಿ ಕಾಲೇಜ್ ತೆರೆಯುವ ಆರಂಭೋತ್ಸವವನ್ನು ನೆರವೇರಿಸಿದರು. ಊರಿನ ಮಾನ್ಯರೆಲ್ಲರನ್ನೂ ಆಹ್ವಾನಿಸಲಾಗಿತ್ತು. ಆ ಊರವರಿಗೆ ಅದು ಹೊಸ ಸಂದರ್ಭ. ಯಾವ 'ಥರ'ದ 'ಪ್ರಾಣಿ' ಪ್ರಿನ್ಸಿಪಲ್ ಆಗಿ ಬಂದಿದ್ದಾನೊ ನೋಡಬೇಕೆಂದು ಕೂಡ ಅನೇಕರಿಗೆ ಚಪಲವಿದ್ದೀತು. ಊರಿನ ಮೇಧಾವಿ, ಹಿರಿಯರಾಗಿದ್ದ ಮತ್ತು ಕಾಲೇಜಿನ ಕಾರ್ಯಸಮಿತಿಯ ಉಪಾಧ್ಯಕ್ಷರಾದ ಶ್ರೀ ಎಂ. ಎಸ್. ಹೆಗ್ಗಡೆ, ಎಂ. ಎ., ಎಲ್. ಎಲ್. ಬಿ., ಅವರು ಬೊಂಬಾಯಿ ಪ್ರಾಂತದ ವಿಶ್ವವಿದ್ಯಾನಿಲಯದಲ್ಲಿ 'ದಕ್ಷಿಣ ಫೆಲೊ' ಎಂಬ ಮಾನ್ಯ ವಿದ್ಯಾರ್ಥಿವೇತನವನ್ನು ಪಡೆದು ಪಾಸು ಮಾಡಿ, ಸಂಸ್ಕೃತವ್ಯಾಕರಣದಲ್ಲಿ ತುಂಬಾ ಗಟ್ಟಿಗರು ಎಂಬ ಕೀರ್ತಿಪಡೆದವರು. ವ್ಯಾಕರಣ ನನಗೆ ತುಂಬಾ ಗೌರವಾನ್ವಿತ. ಅದನ್ನು ತಿಳಿದವರು 'ಪರಮಾಚಾರ್ಯಾ' ಎಂದು ಆನಂದವರ್ಧನನೇ ಹೇಳಿಲ್ಲವೆ? ಆ ದಿನ ಕಾಲೇಜಿನ ಉದ್ದೇಶ, ಅದರ ಸ್ಥಾಪನೆಯ ಸಂದರ್ಭ ಎಲ್ಲವನ್ನೂ ತಿಳಿಸಿ ಕಾರ್ಯದರ್ಶಿ ವರದಿಯನ್ನು ಓದಿದರು. ಕಾಲೇಜಿಗಾಗಿ ಕರಸಿದ್ದ ಪ್ರಿನ್ಸಿಪಲರ ಪರಿಚಯ ಮಾಡಿದರು. ಉತ್ತರ ಕೊಡುವ ಅಗತ್ಯ ನನಗೆ ಬಿತ್ತು. ಇದು ಪ್ರಿನ್ಸಿಪಲರ ಅಡಿ ಆಳ ಒಳ ಅಳೆಯುವ ಪ್ರಸಂಗ. ಇನ್ನೊಂದು ಬಗೆಯಲ್ಲಿ ನನ್ನ ಪ್ರದರ್ಶನ, ಪ್ರಕಟನ. ಪ್ರಾಜ್ಞತೆಯ ಬೆರಗನ್ನು ತೋರಿಸುವ ಅಗತ್ಯವಿರಲಿಲ್ಲ. ಆದರೂ ನನ್ನ ಬಗೆಯಲ್ಲಿ ಕಾಲೇಜ್ ವ್ಯಾಸಂಗ ಯಾವ ರೀತಿಯದಾಗಬೇಕು; ಅದಕ್ಕೆಲ್ಲ ಅವಕಾಶ ಕಲ್ಪಿಸಿಕೊಡಲು ಹೊಸದಾಗಿ ತೆರೆದ ಈ ಕಾಲೇಜಲ್ಲಿ ಅನುಕೂಲಗಳೆಲ್ಲ ದೊರೆತಾವು; ಊರಿನ ಶ್ರದ್ಧಾವಂತರಾದ ಇಷ್ಟು ಮಂದಿ ಇದಕ್ಕೆ ಖಂಡಿತವಾಗಿ ನೆರವು ಕೊಡುತ್ತಾರೆ ಎಂದು ನಂಬಿದ್ದೇನೆ ಇತ್ಯಾದಿ ಉಪಚಾರದ ಮಾತನ್ನಾಡಿ, ಪೂರ್ತಿ ಅಪರಿಚಿತನಾದ ನನ್ನನ್ನು ಅಲ್ಲಿಗೆ ಕರಸಿಕೊಂಡದ್ದಕ್ಕೆ ಕೃತಜ್ಞತೆ ಸಲ್ಲಿಸಿ ಅರ್ಧಗಂಟೆ – ನಲವತ್ತು ನಿಮಿಷ ಮಾತನಾಡಿ ನಿಲ್ಲಿಸಿದೆ. ನನ್ನ ಪ್ರದರ್ಶನ ಸುಮಾರು ತೃಪ್ತಿಕರವಾಯಿತು ಎಂದು ಭಾಸವಾಯಿತು. ಆವೊತ್ತಿನ ಕಾರ್ಯ ಮುಗಿವ ಹೊತ್ತಿಗೆ ಅಲ್ಲಿಗೆ ಕಾರವಾರದಿಂದ ಬಂದಿದ್ದ ಸ್ನೇಹಿತ ಲಾಯರ್ ಜಿ. ಎನ್. ಸಭಾಹಿತರಿಗೆ ನನ್ನನ್ನು ಅಧ್ಯಕ್ಷರು ಪರಿಚಯ ಮಾಡಿಕೊಟ್ಟರು. ಹೆಗಡೆ ಅವರೂ ಸಭಾಹಿತರೂ ದೊಡ್ಡ ಗೆಳೆಯರು. ಅವರು ಮುಂದಿನ ತಿಂಗಳ ಮೊದಲ ದಿನ ಕಾರವಾರದ ರೋಟರಿ ಕ್ಲಬ್ಬಿನಲ್ಲಿ ನಾನು ಭಾಷಣಮಾಡಬೇಕೆಂದು ಕರೆದರು. ಆದುದರಿಂದ ತಕ್ಕಮಟ್ಟಿಗೆ ಅವರಿಗೂ ನನ್ನ ಭಾಷಣದ ನಿಲವು, ನುಡಿತದ ರೀತಿ ಒಪ್ಪಿರಬಲ್ಲವೆಂದು ಮನವರಿಕೆಯಾಯಿತು.

ಅಲ್ಲಿಂದ ಮುಂದಕ್ಕೆ ಎಲ್ಲವೂ ಸುಸೂತ್ರವಾಗಿ ನಡೆದು, ಯುಕ್ತವಾಗಿರುವಂತೆ ಅಧ್ಯಕ್ಷರು ಎಲ್ಲ ವ್ಯವಸ್ಥೆಯನ್ನೂ ಮಾಡಿಕೊಟ್ಟರು. ಎಲ್ಲಕ್ಕಿಂತ ವಿಶೇಷವಾಗಿ ಆತನ ನಯದ ನಡೆ, ನುಡಿ, ಮಾತಿನ ಹಿತ, ಸೌಹಾರ್ದ, ನನ್ನಲ್ಲಿ ತೋರಿಸಿದ ವಿಶ್ವಾಸ ಎದ್ದುಕಾಣುತ್ತಿತ್ತು.

ಬಹುತರ ನಾನು ಅಲ್ಲಿನ್ನ ಎಲ್ಲರಿಗೂ ವಯಸ್ಸಿನಲ್ಲಿ ಕೂಡ ಹಿರಿಯ. ಇಂಥ ಮುದುಕನನ್ನು ಅಲ್ಲಿಗೆ ಏಕೆ ಕರೆದರೊ ನನಗೆ ತಿಳಿಯದಾಗಿತ್ತು. ಅದನ್ನು ಪ್ರಶ್ನಿಸುವುದೇಕೆ? ನಾನೇ ಅಲ್ಲಿಗೆ ಬರುವಂತೆ ಮಾಡಲು ಏನೇನೊ ಪ್ರಯತ್ನಗಳನ್ನು ಮಾಡಿದ್ದರೆಂದೂ ಬಂದದ್ದು ಅವರಿಗೆ ಸಮಾಧಾನವಾಯಿತೆಂದೂ ತಿಳಿಸಿದರು. ಅವರಲ್ಲಿ ಕೆಲವರು ಕುಮಟಾ ಸಾಹಿತ್ಯ ಸಮ್ಮೇಳನದಲ್ಲಿ ನನ್ನನ್ನು ಕಂಡವರಂತೆ; ಇನ್ನು ಕೆಲವರು ಹೆಸರು ಕೇಳಿದ್ದವರು. ಇದು ಪೂರ್ವಪೀಠಿಕೆ – ವಿಶ್ವಾಸಕ್ಕೆ. ಈ ಮುಂಬೆ ಇಲ್ಲಿ ಮಣಿಪಾಲದ ವಿದ್ಯಾಸಂಸ್ಥೆಯ ಜೀವಾಧಾರವಾದ ಡಾ. ಟಿ.ಎಂ.ಎ.ಪೈ ಕಾಲೆಜ್ ತೆರೆಯಲು ಬಂದಿದ್ದರಂತೆ. ಅವರ ಮನೆಯವರು ನದಿಯ ಆಚೆಯ ಒಂದು ಊರವರು ಎಂಬ ಸಂಗತಿ ಕೂಡ ಅವರನ್ನು ಒಲಿಸಿತ್ತು. ಅವರು ಸ್ಥಾಪಿಸುವ ಕಾಲೆಜುಗಳಲ್ಲಿ ಉತ್ತಮ ಕಟ್ಟಡ, ಪುಸ್ತಕ ಭಂಡಾರ, ವೈಜ್ಞಾನಿಕ ಸೌಕರ್ಯಗಳು ಇತ್ಯಾದಿಗಳ ಒದಗಣೆಯನ್ನು ಸಲ್ಲಿಸಿ, ದಕ್ಷಿಣ ಕನ್ನಡ ಪ್ರಾಂತ ಶೋಭಿಸುವಂತೆ ಮಾಡಿದ್ದಾರೆ. ಆದರೆ ಅವರ ಸಲಹೆಗಳಿಗೂ ಈ ಊರಿನ ಕಾಲೆಜ್ ಸಂಸ್ಥಾಪಕರ ನಿಲವಿಗೂ ಯಾವುದೊ ವಿಷಯದಲ್ಲಿ ಭಿನ್ನಾಭಿಪ್ರಾಯ ಉಂಟಾಗಿ ಇಲ್ಲಿನವರೇ ಅದನ್ನು ತೆರೆಯುವ, ಅದಕ್ಕೆ ಹಣ ಸಜ್ಜು ಒದಗಿಸುವ ಹೊಣೆಗಾರಿಕೆಯನ್ನು ಕೈಕೊಂಡರಂತೆ. ಕಾಲೆಜಿನ ಸಂಸ್ಥಾಪನೆಗೆ ಇಷ್ಟು ಹಣ ಬ್ಯಾಂಕಿನಲ್ಲಿ ಠೇವಣಿ ಆಗಿ ಇಡಬೇಕು; ಇಂಥಿಂಥ ಪುಸ್ತಕ ಭಂಡಾರ, ವಿಜ್ಞಾನ ಪ್ರಯೋಗಶಾಲೆ, ಉಪಾಧ್ಯಾಯರ ನೇಮಕ ಆಗಬೇಕು ಎಂಬ ಧಾರವಾಡದ ಕರ್ನಾಟಕ ವಿಶ್ವವಿದ್ಯಾನಿಲಯದವರು ಹಾಕಿದ್ದ ನೇಮವನ್ನು ಒಪ್ಪಿಕೊಂಡು, ಅದರಲ್ಲಿ ಇಷ್ಟಿಷ್ಟು ಎಂದು ತುಂಬಿಕೊಟ್ಟು ಕಾಲೆಜ್ ತೆರೆಯಲು ಅನುಮತಿ ಪಡೆದುಕೊಂಡಿದ್ದರು. ಐರುವತ್ತರ ವಯಸ್ಸಿಗೆ ಮೇಲ್ಪಟ್ಟು ಅಧ್ಯಾಪಕರನ್ನೊ ಪ್ರಿನ್ಸಿಪಲರನ್ನೊ ನೇಮಿಸಿಕೊಳ್ಳುವುದು ತಕರಾರಿನ ಕೆಲಸವೇ. ಆದರೂ ಧಾರವಾಡದ ವಿಶ್ವವಿದ್ಯಾನಿಲಯದ ಅಧಿಕಾರಿಗಳಿಗೆ ನನ್ನ ಹೆಸರಿನ ಪರಿಚಯ ಮಾಡಿಕೊಟ್ಟು ಅನುಮತಿ ಪಡೆದುಕೊಂಡಿದ್ದರು. ಅದಕ್ಕೆ ತಕ್ಕಂತೆ ನಾನು ಅಲ್ಲಿ ಕೆಲಸ ನೆರವೇರಿಸಬೇಕಿತ್ತು. ಆ ನಂಬಿಕೆಗೆ ಚ್ಯುತಿ ಬಾರದಂತೆ, ಇಲ್ಲಿನ ಕಾಲೆಜ್ ಅಧಿಕಾರಿಗಳ ಎಣಿಕೆಗೆ ಕಡಮೆಯಾಗದಂತೆ ಉಳಿದುದೆಲ್ಲ ಕಾಲೆಜಿನ ಒಳಾಡಳಿತ ನಡೆಯಬೇಕಾಗಿತ್ತು.

ಕಾಲೆಜ್ ತೆರೆಯಿತು. ಅಧ್ಯಕ್ಷರು ಬಂದು ಹೊಸದಾಗಿ ಬಂದ ಅಧ್ಯಾಪಕರನ್ನೆಲ್ಲ ಸಂಬೋಧಿಸಿ ತುಂಬಾ ಪ್ರೀತಿಯ ಸ್ವಾಗತವಿತ್ತರು. ಶಕ್ಯವಾದ ಮಟ್ಟಿಗೂ ಕೈಯಲ್ಲಾದ ನೆರವನ್ನೂ ಮರ್ಯಾದೆಗಳನ್ನೂ ಕಾಲೆಜ್ ನಡಸಿಕೊಡಲು ಸಿದ್ಧವಾಗಿದೆ ಎಂದು ಹೇಳಿ, ನನ್ನನ್ನು ಅಧ್ಯಾಪಕ ವರ್ಗದವರಿಗೂ ಅಧ್ಯಾಪಕರನ್ನು ನನಗೂ ಒಪ್ಪಿಸಿಕೊಟ್ಟರು. ಅವರ ಗಂಭೀರ ಧಾರಾಳದ ನಗೆಮುಖ ಕಾಣಿಸಿದ ಆಂತಃಕರಣ ದೊಡ್ಡದು. ತಾನು ಎಲ್.ಎಲ್. ಬಿ. ಪಾಸುಮಾಡಿದ ಕೂಡಲೆ ಉಪಾಧ್ಯಾಯ ವೃತ್ತಿಯಲ್ಲಿದ್ದೆ; ಅದರ ಕಷ್ಟ ಸುಖ ಅರಿತವನು; ಯಾವ ತೊಂದರೆಯುಂಟಾದರೂ ಧಾರಾಳವಾಗಿ ನನ್ನಲ್ಲಿ ತಿಳಿಸಬಹುದು ಎಂದರು. ಅವರು ಇರುವಷ್ಟು ಕಾಲವೂ ಅದೇ ಪ್ರೀತಿ ಸ್ನೇಹಸೌಹಾರ್ದಗಳಿಂದ ಎಲ್ಲರನ್ನೂ ನಡಸಿಕೊಂಡರು. ಮೂರು ತಿಂಗಳಿಗೆ ಒಂದು ಸಲವಾದರೂ ಉಪಾಧ್ಯಾಯ ವರ್ಗವನ್ನು

ಭೇಟಿಮಾಡಲು ಬರುತ್ತಿದ್ದರು. ಬೀದಿಯಲ್ಲಿ ಯಾರನ್ನು ಕಂಡರೂ ಅಕ್ಕರೆಯಿಂದ ಮಾತನಾಡುವರು. ಅಂಥ ಊರಲ್ಲಿ – ಅದು ತಾಲೂಕು – ನಗರ ಕೂಡ ಅಲ್ಲ – ಕಾಲೆಜೆಂದರೆ ಊರಿನ ಅತಿಪ್ರೌಢ ವಿದ್ಯಾಸಂಸ್ಥೆ; ಅಲ್ಲಿನ ಉಪಾಧ್ಯಾಯರೆಂದರೆ ಉಳಿದ ಎಲ್ಲ ಮಟ್ಟಗಳ ಶಿಕ್ಷಣವರ್ಗಕ್ಕಿಂತ ಮೇಲ್ಪಟ್ಟ ಮೇಧಾವಿಗಳು; ಅವರಿಗೆ ತಕ್ಕಂತಹ ಮಾನ್ಯತೆಯನ್ನು ಎಲ್ಲರೂ ಕೊಡಬೇಕು ಎಂಬಂತೆ ಊರಲ್ಲೆಲ್ಲ ನುಡಿದರು. ಇದರಿಂದ ನಮಗೆ ಪ್ರಶಸ್ತಿ ಬಂದಿತು, ನಿಜ; ಆ ಊರಿನಲ್ಲಿದ್ದ ಎರಡು ಹೈಸ್ಕೂಲುಗಳ ಪ್ರಿನ್ಸಿಪಲರಿಗೆ ಅಧ್ಯಾಪಕರಿಗೆ ಯಾವ ಭಾವನೆ ಉಂಟಾಯಿತೊ – ನಾನು ಹೇಗೆ ಬಲ್ಲೆ?

ಹೊನ್ನಾವರದ ಹತ್ತಿರವೇ ಕರ್ಕಿ – ಶಾಸನಗಳಲ್ಲಿ ಕರಿಕೆ – ಊರಿದೆ. ಅಲ್ಲಿನ ಬ್ರಾಹ್ಮಣ್ಯ ದೊಡ್ಡದು. ಬಹುಮಟ್ಟಿಗೆ ಅಲ್ಲಿನ ವಿದ್ಯಾರ್ಥಿಗಳು ಓದಿ ಪ್ಯಾಸು ಮಾಡಿ ಎಷ್ಟೋ ಹಿಂದಿನ ಕಾಲದಿಂದ ಆ ಜಿಲ್ಲೆಯಲ್ಲಿ, ಹೊರಗೆ ದೊಡ್ಡ ದೊಡ್ಡ ಪದವಿಗಳಿಗೆ ಹೋದವರು. ಬಹುಮಟ್ಟಿನ ಜನ ಹವ್ಯಕರು. ನಮ್ಮ ಅಧ್ಯಕ್ಷ ಹೆಗಡೆಯವರು ಅಲ್ಲಿಯವರೇ ಎಂದಿದ್ದೇನೆ. ಅವರ ತಂದೆತಾಯಿ ಇದ್ದ ಊರು ಅದು. ಹೆಚ್ಚು ಉತ್ಸವ ತಮ್ಮ ಮನೆಯಲ್ಲಿ ನಡೆಯಬೇಕಾದರೆ ಅವನ್ನು ಅವರು ಕರ್ಕಿಯಲ್ಲಿ ತಾಯ ಬಳಿ ನಡಸುತ್ತಿದ್ದರು. ಆ ವರ್ಷ ನಾನು ಹೋದಕೂಡಲೆ ಮೊದಲು ಬಂದ ಹಬ್ಬ ಗಣಪತಿಪೂಜೆ. ನನ್ನ ಮನೆಯವರಿನ್ನೂ ಹೊನ್ನಾವರಕ್ಕೆ ಬಂದಿರಲಿಲ್ಲವಾಗಿ ನಾನಿದ್ದ ಮನೆಯ ಮಾಲಕರಾದ ಅಲ್ಲಿನ ಪ್ರಖ್ಯಾತ ಲಾಯರ್ ಎಲ್. ಎಚ್. ಪ್ರಭು ನನ್ನನ್ನು ತಮ್ಮ ಮನೆಗೆ ಕರೆದಿದ್ದರು. ಆಮೇಲೆ ನಮ್ಮ ಅಧ್ಯಕ್ಷರು ತಮ್ಮೂರಿಗೆ ನನ್ನನ್ನು ಕರೆದುಕೊಂಡು ಹೋದರು. ತಾಯಿಗೆ ಪರಿಚಯ ಮಾಡಿಕೊಟ್ಟು, ಆ ದಿನ ಗಣಪತಿ ಹೋಮ ಮಾಡಿ, ತಾವೂ ಶ್ರೀಮತಿಯವರೂ ನನ್ನನ್ನು ಪೀಠದಲ್ಲಿ ಕುಳ್ಳಿರಿಸಿ ಮಣೆದು ಹರಕೆ ಬೇಡಿದರು. ಎರಡನೆಯ ದಿನ ಅವರನ್ನು ಕಂಡಾಗ ಹೇಳಿದೆ: 'ಸ್ವಾಮಿ, ಹೀಗೆ ಮಾಡಬೇಡಿ; ನನ್ನ ವಯಸ್ಸಿಗೆ ನೀವು ಮರ್ಯಾದೆ ಮಾಡಬಹುದು. ಮನೆಗೆ ಕರೆದು ಬೇಕಾದರೆ ಊಟ ಉಪಚಾರ ಮಾಡಿ; ಕಾಲೆಜ್ ಸಮಿತಿಯ ಅಧ್ಯಕ್ಷರು ತಾವು: ಈ ಅಗ್ರಪೂಜೆ ನಿಮ್ಮ ಮನೆಯಲ್ಲಿ ನೀವು ಮಾಡಿದಿರೆಂಬ ಸುದ್ದಿ ಕೂಡ ಲೌಕಿಕವಾಗಿ ಕೆಲವರಿಗೆ ಸರಿಯಾಗಿ ತೋರದಿರಬಹುದು; ತಮ್ಮಲ್ಲಿ ಬಿನ್ನವಿಸಿಕೊಳ್ಳುತ್ತೇನೆ' ಎಂದೆ. ಆಗ ಅವರಾಡಿದ ಮಾತು ತುಂಬಾ ಹಾರ್ದವಾದುದು. 'ನಮ್ಮೂರಿಗೆ ನಿಮ್ಮಂಥವರು ಬಂದುದೇ ಊರಿಗೆಲ್ಲ ಗೌರವ. ನೀವು ಏನು ಕೇಳಿದ್ದರೂ ಧಾರಾಳವಾಗಿ ಕೊಡುತ್ತಿದ್ದೆವು. ನಾವು ವಯಸ್ಸಿನಲ್ಲಿ ಮಾತ್ರವಲ್ಲ, ಇತರವಾಗಿಯೂ ಚಿಕ್ಕವರು. ನಮ್ಮನ್ನು ನಡಸಿಕೊಳ್ಳುವ ಭಾರ ನಿಮ್ಮದು. ನಮ್ಮ ಬಡತನವೊ ಸಿರಿತನವೊ ಹೇಗೊ ನಿಮ್ಮ ಬೇಡಿಕೆಗೆ ಸಿದ್ಧವಾಗಿದ್ದೆವು. ನೀವೇ ಆರುನೂರು ರೂಪಾಯಿ ಎಂದು ಹೇಳಿಬಿಟ್ಟಿರಿ. ನೀವು ಬಂದಮೇಲೆ ನಮಗೆಲ್ಲರಿಗೂ ಮನಸ್ತೃಪ್ತಿಯಾಗಿದೆ. ಊರಲ್ಲಿ ಯಾರೂ ಇದನ್ನು ಅಪಾರ್ಥ ಮಾಡಿಕೊಳ್ಳುವುದಿಲ್ಲ' ಎಂದರು. ಆದರೂ ನಾನದಕ್ಕೆ ಒಪ್ಪುವುದು ತರವಾಗಬಾರದು ಎಂದು ನಿವೇದಿಸಿದೆ. ನೆತ್ತರು ಕುಲಗುಣಗಳನ್ನು ಕಾಣಿಸುತ್ತದೆ. ಇದು ನನಗೆ ಇಚ್ಛೆಗೆ ಪ್ರಯೋಜನ· ತಂದಿತು.

ಊರಲ್ಲಿ ವರ್ತಕತನ ಅನೇಕರ ಪ್ರಧಾನ ಉದ್ಯೋಗ. ದೊಡ್ಡ ಪ್ರಮಾಣದ ವ್ಯಾಪಾರವೆಲ್ಲ ಕೊಂಕಣಿ ಸಾಹುಕಾರರ ಕೈಯಲ್ಲಿದೆ. ಸಾಧಾರಣ ಕಿರಾಣಿ ಅಂಗಡಿಯಿಂದ ಹಿಡಿದು ಔಷಧಿ ವ್ಯಾಪಾರಿಗಳು, ವಸ್ತ್ರಗಳ ಮಾರಾಟಗಾರರು, ದೊಡ್ಡ ವಹಿವಾಟುಗಳು (ಗಡಂಗ್ ಮತ್ತು ಮಂಡಿವರ್ತಕರು), ಕಂಟ್ರಾಕ್ಟರು, ಲೇವಾದೇವಿ, ಒಡವೆ ವಜ್ರ, ಬ್ಯಾಂಕ್ ವ್ಯವಹಾರ ನಡೆಸುವ ಎಲ್ಲರೂ ಅವರೇ. ಅವರಲ್ಲಿ ಸಾಲ್ವರ್ಧಿವರ ಮಾತು ಅಲ್ಲಿ ಉಳಿದವರನ್ನು ನಡೆಸುತ್ತದೆ. ಬ್ರಾಹ್ಮಣವರ್ಗ ವ್ಯವಸಾಯಕ್ಕೂ ವಿದ್ಯಾಮಂದಿರಗಳಲ್ಲಿಯೂ ದುಡಿಯುವವರು. ಅವರಲ್ಲಿಯೂ ಐದಾರು ಮನೆಗಳು ಹೆಸರಾದವು. ತಕ್ಕಮಟ್ಟಿಗೆ ಮಾನ್ಯತೆ ಪಡೆದವರು ಎಂ. ಎಸ್. ಹೆಗಡೆ, ನಮ್ಮ ಡಾ. ಕರ್ಕಿ ಹತ್ತಿರದ ಬಂಧುಗಳು; ಅವರ ತಂದೆ ಹಿಂದೆ ಆ ಊರಿನಲ್ಲಿ ಪ್ರಧಾನ ವ್ಯಕ್ತಿಯಾಗಿ ಮುನಿಸಿಪಲ್ ಪ್ರೆಸಿಡೆಂಟ್ ಆಗಿದ್ದವರಂತೆ. ನಾನು ಅಲ್ಲಿಗೆ ಹೋದಂದಿನಿಂದ ನಾಲ್ಕು ವರ್ಷಗಳ ಕಾಲ ಅವರು ನಮ್ಮ ಕಾಲೇಜಲ್ಲಿ ಕೋಶಾಧಿಕಾರಿಗಳೂ ಕಾರ್ಯದರ್ಶಿಗಳೂ ಆಗಿದ್ದರು. ಅರ್ಬನ್ ಬ್ಯಾಂಕಲ್ಲಿಯ ಒಬ್ಬ ಡೈರೆಕ್ಟರ್. ಊರಿನ ಖ್ಯಾತ ಡಾಕ್ಟರ್ ಬಳ್ಳೂರ್ ಮುನಿಸಿಪಲ್ ಪ್ರೆಸಿಡೆಂಟರು; ಪ್ರಾಮಾಣಿಕರು, ಕಟ್ಟುನಿಟ್ಟಿನವರು. ಅವರಿಗೂ ನಮ್ಮ ಪ್ರೆಸಿಡೆಂಟರಿಗೂ ತುಂಬಾ ಪ್ರೀತಿ ವಿಶ್ವಾಸ. ಇನ್ನೆರಡು ದೊಡ್ಡ ಪಂಗಡಗಳವರು ಒಂದು ಶೇರುದಾರರೆಂಬುವರು ಮತ್ತು ಕ್ರಿಸ್ಟಿಯನ್ ಪಂಥದವರು. ಅವರಲ್ಲಿ ಪ್ರೊಟೆಸ್ಟಾಂಟ್ ಪಂಗಡದ ಒಂದು ದೇವಮಂದಿರ ನಾನಿದ್ದ ಮನೆಯ ಎದುರು ಸಾಲಲ್ಲೇ ಇತ್ತು. ಅಲ್ಲಿನ ಕುಟುಂಬಕ್ಕೆ ಸೇರಿದ ಇಬ್ಬರು ಗಂಡುಮಕ್ಕಳು ಸೆಂಟ್ ಥಾಮಸ್ ಹೈಸ್ಕೂಲಲ್ಲಿ ಉಪಾಧ್ಯಾಯರು. ಆ ಮನೆಯ ಒಬ್ಬ ಸೊಸೆ ನಮ್ಮ ಕಾಲೇಜಲ್ಲಿ ಭೌತಶಾಸ್ತ್ರದ ಉಪಾಧ್ಯಾಯಿನಿ. ಪ್ರೊಟೆಸ್ಟಾಂಟ್ ಚರ್ಚ್ ಒಂದು ಭಾಗವಾದರೆ ಪ್ರಬಲವಾದ ಕ್ರಿಸ್ಟಿಯನ್ ಪಂಥ ಅಲ್ಲಿನ ರೋಮನ್ ಕ್ಯಾಥೊಲಿಕ್ ಚರ್ಚು. ಅವರಲ್ಲಿಯೂ ಎರಡು ಶಾಖೆಗಳು. ಆದುದರಿಂದ ಜನದ ಮನಸ್ಸನ್ನು ಕಾಲೆಜ್ ಕಡೆ ಒಲಿಸಿಕೊಂಡು ಅದಕ್ಕೆ ಹಣ, ಸಜ್ಜು ಒದಗಿಸಬೇಕಾದ ವ್ಯಕ್ತಿ ಶಕ್ತನಾಗಿ, ಪ್ರಾತಿನಿಧಿಕವಾಗಿ ಎಲ್ಲರಿಗೂ ಬೇಕಾದವನಾಗಬೇಕಿತ್ತು. ತಕ್ಕಮಟ್ಟಿನ ಉಪಪತ್ತಿ, ರಾಜಕೀಯ ಪ್ರಭಾವ ಉಳ್ಳವರೂ ಆಗಿರಬೇಕಿತ್ತು. ಎಲ್ಲರಲ್ಲಿಯೂ ಒಂದೇ ಸಹೃದಯ ಭಾವದಿಂದ ನಡೆದುಕೊಂಡು ಸಮಯದಲ್ಲಿ ನೆರವಾಗುವ ಸ್ವಭಾವದವರಿರಬೇಕಿತ್ತು. ಆ ಲಕ್ಷಣಗಳಿಲ್ಲ ಆರ್. ಎಸ್. ಹೆಗಡೆಯವರ ಶೀಲ ಸ್ವಭಾವ, ನಡೆನುಡಿಗಳಲ್ಲಿ ಇದ್ದವು.

ಇನ್ನೊಂದು ಸಂಗತಿ ಕೇವಲ ರಾಜಕೀಯದ್ದು. ಹೆಗಡೆಯವರು ಕಾಂಗ್ರೆಸ್ ಪ್ರತಿನಿಧಿಯಾಗಿ ಕರ್ನಾಟಕ ಶಾಸನಸಭೆಗೆ ಉಮೇದುವಾರರಾಗಿ ನಿಂತು ಗೆದ್ದಿದ್ದರು. ಅದನ್ನು ಕಂಡು ಒಂದು ಪಂಗಡದವರಿಗೆ ಆಕ್ರೋಶ; ಇನ್ನೊಂದು ಪಂಗಡದವರಿಗೆ, ಅಸೂಯೆ. ಮೇಲಿನ ಎರಡು ತಾಲೂಕ್ ಎಂದರೆ ಕುಮಟ, ಭಟ್ಕಳ. ಭಟ್ಕಳದ ಜನಸಂಖ್ಯೆಯಲ್ಲಿ 'ನವಾಯತ್' ಎಂಬ ಮುಸ್ಲಿಂ ವ್ಯಾಪಾರಿ ಸಮಾಜ ಪ್ರಬಲವಾದ್ದು; ಧನಿಕ ವರ್ಗ. ಅವರು ಎಲ್ಲೆಲ್ಲಿಯೊ ವ್ಯಾಪಾರೋದ್ಯೋಗಗಳಿಗೆ ಹೋಗಿ ಬೇಕಾದಷ್ಟು ಹಣ ಸಂಪಾದಿಸಿ ತಂದು ತಮ್ಮೂರಲ್ಲಿ ಸುರಿದು ಆ ಸ್ಥಳದ ಜೀವನವನ್ನು ಪ್ರಭಾವಗೊಳಿಸಿರುವವರು. ಅವರನ್ನೂ

ಅಲ್ಲಿನ ಕೊಂಕಣಿಯವರನ್ನೂ ಇಬ್ಬರನ್ನೂ ಒಲಿಸಿಕೊಂಡು ಕಾಲೆಜ್ ನಡಸಬೇಕಾದ ಬಾತುರಿ ಹೆಗಡೆಯವರ ಪಾಲಿಗೆ ಬೀಳುತ್ತಿತ್ತು. ಹಿಂದಿನ ಚುನಾವಣೆಯಲ್ಲಿ ಅಲ್ಲಿಂದ ಆಯ್ಕೆಯಾಗಿದ್ದ ಶ್ರೀ ಷಂಸುದ್ದೀನ್ ಅವರು ಕರ್ನಾಟಕ ಮಂತ್ರಿಮಂಡಲದಲ್ಲಿ ಒಂದು ಸ್ಥಾನವನ್ನು ಪಡೆಯುವಷ್ಟು ಪ್ರಭಾವಶಾಲಿಗಳಾಗಿದ್ದರು. ಅವರೂ ಹೆಗಡೆಯವರೂ ತುಂಬ ಸ್ನೇಹಿತರು. ಹಾಗೆಯೇ ಬೊಂಬಾಯಲ್ಲಿ ಮುನಿಸಿಪಲ್ ಕಾರ್ಪೊರೇಷನ್ ಪ್ರೆಸಿಡೆಂಟ್ ಆಗಿದ್ದ ಭಟ್ಕಳದ ನವಾಯತ ಕಾಜಿಲ್ಕ ಎಂದೊ ಏನೊ ಹೆಸರಿನ ಸಾಹೇಬರೊಬ್ಬರು ಹೊನ್ನಾವರದ ಈ ವಿದ್ಯಾಪ್ರಯತ್ನಕ್ಕೆ ಸಹಾಯಕರಾಗುವಂತೆ ಅವರ ಮನಸ್ಸನ್ನು ಒಲಿಸಿಕೊಳ್ಳಲು ಹೆಗಡೆಯವರು ಪ್ರಯತ್ನಪಟ್ಟಿದ್ದರು. ಉತ್ತರ ಕನ್ನಡ ಜಿಲ್ಲೆಯ ಬಹುಮಂದಿ ಜನ ಬೊಂಬಾಯಲ್ಲಿ ವ್ಯಾಪಾರಕ್ಕೆ ಉದ್ಯೋಗಕ್ಕೆ ಹೋಗಿ ನೆಲಸಿದ್ದರು. ಅವರ ಸ್ನೇಹ ಪ್ರೋತ್ಸಾಹ ದೊರೆತರೆ ಪ್ರಯೋಜನ ಅಧಿಕವಾಗುವ ಸಂಭವ ಎಂದಿಗೂ ಉಂಟೇ. ಭಟ್ಕಳದಲ್ಲಿ ಪ್ರತ್ಯೇಕ ಕಾಲೆಜು ತೆರೆಯುವ ವರೆಗಾದರೂ ಅಲ್ಲಿನ ವಿದ್ಯಾರ್ಥಿಗಳು ಹೊನ್ನಾವರಕ್ಕೆ ಬರುವಂತೆ ಮಾಡಬೇಕೆಂದು ಹೆಗಡೆ ಯತ್ನಿಸಿದರು. ಆದರೆ ಹೆಚ್ಚು ಮಂದಿ ಮುಸ್ಲಿಂ ವಿದ್ಯಾರ್ಥಿಗಳು ಇಲ್ಲಿಗೆ ಬಾರದಿದ್ದುದರಿಂದ ಉರ್ದು ಭಾಷೆ ಕಲಿಸಲು ಇಲ್ಲಿ ಅವಕಾಶವಾಗಲಿಲ್ಲ. ಊರಲ್ಲಿನ ಕೊಂಕಣಿ ಹವ್ಯಕ ಬಂಧುಗಳು ಇವರಿಗೆ ವ್ಯಕ್ತಿಶವಾಗಿ ಸ್ನೇಹಿತರಾಗಿದ್ದುದರಿಂದ, ಈ ಸನ್ನಿವೇಶದ ಫಲವಾಗಿ ನಮ್ಮ ಕಾಲೆಜಿನ ಆಡಳಿತ ವ್ಯವಹಾರ ಸಾಮಾನ್ಯ ನಡವಳಿಕೆಗಳಲ್ಲಿ ಕಲುಷಿತವಾಗಲಿಲ್ಲ. ಕಾಲೆಜನ್ನು ಊರ ಸಮಸ್ತರ ಮತ್ತು ಸುತ್ತಲವರ ಪ್ರೋತ್ಸಾಹಕ್ಕೆ ಒಲಿಸಿಕೊಳ್ಳಲು ನಮ್ಮ ಸಲಹಾಮಂಡಲಿಯ ಮತ್ತು ಕಾರ್ಯಕಾರಿ ಮಂಡಲಿಯ ಎಲ್ಲರೂ ಒಂದೇ ಮನಸ್ಸಿನಿಂದ ದುಡಿಯುತ್ತಿದ್ದರು.

ಕಾಲೆಜ್ ವಿಷಯ ಮಾತ್ರ ಊರ ಪಕ್ಷಗಳವರೆಲ್ಲ ಒಂದು. ಈ ಸಂದರ್ಭ ನನ್ನ ಕೆಲಸಕ್ಕೆ ತುಂಬಾ ನೆರವಾಯಿತು. ಉಳಿದುದನ್ನು ಹೇಗಾದರೂ ಏನಾದರೂ ಮಾಡಿಕೊಳ್ಳಲಿ; ಒಳ ಆಡಳಿತ ಪ್ರಿನ್ಸಿಪಲರದಾಗಿರಲಿ. ಕೆಲಸಕ್ಕೆ ನೇಮಿಸುವುದು ನಿಮ್ಮ ಕೆಲಸ; ಕ್ರಿಯಾತಂತ್ರ ಧೋರಣೆ ಹೀಗೆ ನಡೆಯಬೇಕೆಂದು ತಿಳಿಸುವುದು ನಿಮ್ಮ ಕೆಲಸ; ಒಮ್ಮೆ ಅಧ್ಯಾಪಕರನ್ನಾಗಲಿ, ಇತರ ಕೆಲಸದವರನ್ನಾಗಲಿ ಕಾಲೆಜಿಗೆ ನೇಮಿಸಿಯಾದ ಮೇಲೆ ಅವರಿಗೆ ಸಂಬಂಧಿಸಿದ ಸಮಸ್ತವನ್ನೂ ಪ್ರಿನ್ಸಿಪಲರಿಗೆ ಬಿಟ್ಟುಕೊಡಿ; ನೇರವಾಗಿ ವಿದ್ಯಾರ್ಥಿಗಳ, ಹೊರಗಿನವರ ಮೊರೆ ಕೇಳಬೇಡಿ. ನಾನು ಕಾಲೆಜಲ್ಲಿರುತ್ತೇನಲ್ಲವೆ! – ಎಂದೆ. ಅವರಿಗೆ ತಿಳಿಸದೆ ಇನ್ನೊಬ್ಬರಿಗೆ ಕಾರ್ಯಕಾರಿ ಮಂಡಲಿಯ ಬೇರೆ ಎಲ್ಲಿಯಾಗಲಿ ನೇರ ಅವಕಾಶ ದೊರೆಯುವುದಾದರೆ ಒಳವ್ಯವಸ್ಥೆ ಹದಕೆಡುತ್ತದೆ; ಶಿಕ್ಷೆ ರಕ್ಷೆ ಎರಡನ್ನೂ ದಯವಿಟ್ಟು ಪ್ರಿನ್ಸಿಪಲರ ಮೂಲಕ ನಡಸಬೇಕು ಎಂದು ನಾನು ಸಮಿತಿಯನ್ನು ಕೇಳಿಕೊಂಡು ಅವರನ್ನು ಒಪ್ಪಿಸಿದೆ. ಒಂದೆರಡು ಸಣ್ಣ ಸಂದರ್ಭಗಳಲ್ಲಿ ಹೊರತು ಉಳಿವ ಸಂದರ್ಭಗಳಲ್ಲಿ ಅಸಮಾಧಾನಕ್ಕೆ ಅವಕಾಶವುಂಟಾಗಲಿಲ್ಲ. ಪ್ರಕಟವಾಗಿ ಆತಂಕವಂತೂ ಒಡ್ಡಲಿಲ್ಲ. ಆ ಒಂದೆರಡು ಸಂದರ್ಭಗಳಲ್ಲಿಯೂ ಒಂದು ಬಗೆಯ ರಾಜಿಯಿಂದ ಕೆಲಸ ವ್ಯವಸ್ಥಿತವಾಯಿತು. ಈ ಔದಾರ್ಯವನ್ನು ಸಾಧಾರಣವಾಗಿ ಖಾಸಗಿ ವಿದ್ಯಾಸಂಸ್ಥೆಗಳು ನಡಸಿಕೊಡುವುದಿಲ್ಲ.

ಒಬ್ಬಬ್ಬರು ನೇರವಾಗಿ ಪರೋಕ್ಷವಾಗಿ ಧೋರಣೆಗೆ ಸಂಬಂಧಿಸಿದಂತೆ ಪ್ರಭಾವಗೊಳಿಸಲು ಪ್ರಯತ್ನಿಸಿದರು. ಅಧ್ಯಕ್ಷರು 'ಅಂಥದನ್ನು ನಾನು ನೋಡಿಕೊಳ್ಳುತ್ತೇನೆ, ನಿಮಗೆ ಸರಿತೋರಿದಂತೆ ನೀವು ಮಾಡಿಬಿಡಿ' ಎಂದು ನನಗೆ ಭರವಸೆ ಇತ್ತಿದ್ದರು. 'ಈ ಜಿಲ್ಲೆಯ ನದಿಯ ದಂಡೆ ಮತ್ತು ಹೊರಗಿನ ಪ್ರದೇಶಗಳಿಗೆ ನಾನು ಕರೆದಾಗ ನನ್ನ ಜೊತೆಗೆ ಬನ್ನಿ ಸಾಕು' – ಎಂದರು. ಅವರು ಅಲ್ಲಿ ಕಾಲೆಜಿಗೆ ಚಂದಾ ಎತ್ತುವುದಕ್ಕೆ ಹೋದಾಗ ನಾನೂ ಒಂದೆರಡು ಸಲ ಹೋಗಿದ್ದೆ. ಅಲ್ಲಿ ಅವರನ್ನು ನೋಡಿಕೊಳ್ಳುತ್ತಿದ್ದ ರೀತಿ ಯಾರಿಗೂ ಉತ್ಸಾಹ ತರುವಂಥದು. ಭೂಸಾರ ಪೋಷಕ ದ್ರವ್ಯಗಳನ್ನೊ ಸೀಮೆಂಟನ್ನೊ ಪಂಪುಗಳನ್ನೊ ದೊರಕಿಸಿಕೊಳ್ಳಲು ಆ ಸುತ್ತಮುತ್ತಲವರಿಗೆಲ್ಲ ಇವರ ಮೂಲಕ ಅನುಕೂಲವಿತ್ತು. ಹೋದ ಕಡೆಗಳಲ್ಲೆಲ್ಲ ಇಂಥದನ್ನು ಅನೇಕ ಜನ ಬಂದು ಇವರನ್ನು ಕೇಳಿಕೊಳ್ಳುವರು. ಇವರು ಇಂಥದನ್ನು ಹೀಗೆ ಮಾಡಿ, ಆಗಲಿ ಎನ್ನುತ್ತಿದ್ದರು. ಒಬ್ಬರು ತುಂಬಾ ಒಂದು ಪಂಪಿನ ವಿಚಾರ ಮಾತನಾಡಿದರು. ಆಗ ಈತ ಮಾತನಾಡಿದರು: 'ಆಗಲೊ,* ತಕ್ಷಣ ಏಳುನೂರು ರೂಪಾಯಿ ಕೊಡುತ್ತೀಯ? ಸೊಸೈಟಿಯಲ್ಲಿರುವ ಒಂದನ್ನು ನಿನಗೆ ಕೊಡುತ್ತೇನೆ. ಉಳಿದುದನ್ನು ತಿಂಗಳಿಗೆ ಒಂದು ಕಂತಿನಂತೆ ಆರು ತಿಂಗಳಲ್ಲಿ ಕೊಡಬೇಕು....' ಆತನು ಅದಕ್ಕೆ ಸಿದ್ಧನಿರಲಿಲ್ಲ. ಬೇರೆ ಹೇಗೊ ಹೆಚ್ಚು ಅನುಕೂಲವನ್ನು ಪಡೆಯಬೇಕೆಂಬುದು ಆತನ ಆಸೆ. ಅದನ್ನು ಅರಿತವರಾಗಿ ಆತನಿಗೆ ಹೀಗೆ ಹೇಳಿದರು: 'ಈ ಜನವೇ ಹೀಗೆ. ಅಕ್ಷೇಪಣೆಗೆ ಬಾಯಿ ದೊಡ್ಡದು. ಕೆಲಸಕ್ಕೆ ದಾರಿ ತೋರಿಸಿದಾಗ ಹಿಂದೇಟು.'

ಹಲವೇಳೆ ಕಮಿಟಿಯ ಐದಾರು ಮಂದಿ ಒಟ್ಟಿಗೆ ಸೇರಿ ಊರಿನ ಗಣ್ಯರೆಲ್ಲ ಊರ ಹೊರಗೆ ಕಾಲೆಜಿಗೆ ಚಂದಾ ಕೇಳಲು ಹೋಗುತ್ತಿದ್ದರು. ಮೊದಲು ಆರಂಭವಾಗುವುದಕ್ಕೆ ಹಣ ಕೊಟ್ಟಿದ್ದರು. ಪುನಃ ಅವರಿಂದ ಏನೂ ಸಿಕ್ಕುವ ಹಾಗಿರಲಿಲ್ಲ. ಇನ್ನು ಕೆಲವರು ಹೇಗಿದ್ದರೂ ಕಾಲೆಜ್ ಆರಂಭವಾಗಿದೆ. ವಿದ್ಯಾರ್ಥಿಗಳಿಂದ, ಸರ್ಕಾರ ಕೊಡುವ ಸಹಾಯ ದ್ರವ್ಯಗಳಿಂದ ಅದು ನಡೆಯಬಲ್ಲುದು ಎಂದುಕೊಂಡು, ವಾಗ್ದಾನ ಮಾಡದವರೂ ವಾಗ್ದಾನ ಮಾಡಿ ನಡಸದವರೂ ಹೆಚ್ಚುಮಂದಿ ಆದರು. ಇತ್ತ ವಿದ್ಯಾರ್ಥಿಗಳಿಂದ ಸಂಗ್ರಹವಾದ ತಿಂಗಳ 'ಫೀ' ಎರಡು ಟರ್ಮಿಗೆ ಸೇರಿ ಪೂರ್ತಿ ಬಂದರೆ ಒಟ್ಟು ನಾಲ್ಕು ತಿಂಗಳ ಸಂಬಳಕ್ಕೆ ಆಗುತ್ತಿತ್ತು. ಅದು ದೊಡ್ಡದಾಗಿ ಖಚಿತವಾಗಿ ಮೊತ್ತವಾಗಿ ಬರುವ ನಂಬಿಕೆ ಇರಲಿಲ್ಲ. ಇನ್ನು ಕೆಲವು ವಿದ್ಯಾರ್ಥಿಗಳ 'free, half-free' ವಿದ್ಯಾರ್ಥಿವೇತನಗಳ ಪಟ್ಟಿಯನ್ನು ನಾವು ಕಳಿಸಿಕೊಟ್ಟಿದ್ದೆವು. ಇವೆಲ್ಲ ಬೆಂಗಳೂರು ಕಾಲೆಜ್ ವಿದ್ಯಾಶಾಖೆಯ ಹಣಕಾಸಿನ ಲೆಕ್ಕಾಚಾರ ಇಲಾಖೆಯವರಿಂದ ಒಪ್ಪಿಗೆ ಪಡೆದು ತರುವಾಯ ಬರಬೇಕಿತ್ತು. ವಿದ್ಯಾರ್ಥಿವೇತನಗಳು ಎಂದು ಬರುವುದೊ ನಿಶ್ಚಯವಿಲ್ಲ. 'On A/c Grant' ಎಂದು ಒಂದು ಸ್ವಲ್ಪವನ್ನು

---

* ಏಕವಚನದ ಬಳಕೆ ಅವರಲ್ಲಿ ಗಂಡಸರಿಗೂ ಹೆಂಗಸರಿಗೂ ಸಾಮಾನ್ಯ. ನಮ್ಮ ಕಡೆಯವರಿಗೆ ಮೊದಲು ಸ್ವಲ್ಪ ವಿಚಿತ್ರವಾಗಿ ಕಾಣುತ್ತದೆ. ತಂದೆಯನ್ನು ಕುರಿತು ಕೂಡ, ಬೇರೆ ಹೆಣ್ಣು ಮಕ್ಕಳನ್ನು ಮಾತನಾಡಿಸುವಾಗಲೂ ಸಾಧಾರಣವಾಗಿ ಹೀಗೇ. ಏನೋ, ಏನೇ – ಎಂದೇ ನಿರ್ದೇಶನ.

ಇಲಾಖೆ ಕಳಿಸುತ್ತಿದ್ದುದುಂಟು. ವರ್ಷದ ಕೊನೆಯಲ್ಲಿ ಬಿಲ್ಲುಗಳಲ್ಲಿ ಪೂರ್ತಿ ಸಲ್ಲಬೇಕಾದ ಹಣ ಸಲ್ಲುವ ಸಮಯಕ್ಕೆ ಉಳಿತಾಯವಾಗಿ ಬಾಕಿ ಬರುತ್ತಿತ್ತು. ಈ ನಡುವೆ ಸೆಪ್ಟೆಂಬರ್ – ಅಕ್ಟೋಬರ್‌ಗಳಲ್ಲಿ, ಡಿಸೆಂಬರ್ – ಫೆಬ್ರವರಿ ಪೂರ್ತಿ ಸಂಬಳದಾರಿಗೆಗಳನ್ನು ಕೊಡುವುದಕ್ಕೆ ಮುಗ್ಗಟ್ಟು. ಸರ್ಕಾರದ ಗ್ರಾಂಟು ಬರುವುದೆಂದರೆ ಆ ಲೆಕ್ಕದ ಆಫೀಸರನ್ನು ಒಲಿಸಿ, ಒಪ್ಪಿಸಿ ಆತನ ಮೇಜಿನ ಮುಂದೆ ಹತ್ತಾರು ಮಂದಿ ಪ್ರಿನ್ಸಿಪಲರು, ಕಾಲೇಜು ಕಮಿಟಿಯ ಅಧ್ಯಕ್ಷರು ಎರಡು ಮೂರು ದಿವಸ ಮರ್ಜಿ ಕಾದು ತರಬೇಕಾದ್ದು. ಮಾರ್ಚ್ ೩೧ರೊಳಗಾಗಿ ಆ ಹಣ ಕೈಗೆ ಬಾರದ್ದಾದರೆ ಹೊಸ ವರ್ಷದ ಲೆಕ್ಕಕ್ಕೆ ಕಾಯಬೇಕಾಗಿತ್ತು. ಮಾರ್ಚ್ ಕಡೆಯ ವಾರಗಳಲ್ಲಿ ಕಡೆಯ ದಿನಗಳಲ್ಲಿ ಆ ಹಣಕಾಸಿನ ಅಧಿಕಾರಿಯ ದರ್ಬಾರ್ ನೋಡುವಂಥದು. ಕಡೆಯಾಗಿ ಗೊತ್ತಾದ ಹಣವನ್ನು ತೆಗೆದುಕೊಂಡು ರಾತ್ರೋರಾತ್ರಿ ದೂರದ ಹೊನ್ನಾವರಕ್ಕೆ ಪ್ರಯಾಣ ಮಾಡಿ ಸರ್ಕಾರದ ಟ್ರಿಜರಿಗಳಲ್ಲಿ ಅದನ್ನು ನಗದು ಮಾಡಿಸಿಕೊಳ್ಳಬೇಕು. ಮಾಡಿಸಿ ಕಾಲೇಜ್ ಸಾಲಗಾರರಿಗೆಲ್ಲ ಹಂಚಬೇಕಿತ್ತು. ಸಂಬಳಸಾರಿಗೆಗಳನ್ನು ಸರಿಯಾಗಿ ಕೊಡದ ಖಾಸಗಿ ಕಾಲೇಜುಗಳನ್ನು ಏಕೆ ತೆರೆಯಬೇಕು ಎಂಬುದು ನ್ಯಾಯವಾದ ಪ್ರಶ್ನೆ. ತೆರೆವ ಮುಂಚೆ ಊರವರೂ ಇತರರೂ ಉತ್ಸಾಹಶಾಲಿಗಳಾಗಿ ಎರಡು ಮೂರು ಲಕ್ಷ ಹಣ ಒದಗಿಸುತ್ತಾರೆ. ಆ ನಂಬಿಕೆಯ ಮೇಲೆ ಅವು ಸ್ಥಾಪಿತವಾಗುತ್ತವೆ. ಅನಂತರ ಎಲ್ಲರಿಗೂ ಹಿಡಿತ, ಉದಾಸೀನ ಬರುತ್ತದೆ. ಊರಿನ ವರ್ತಕರು ವರ್ಷಕ್ಕೆ ಒಂದು ದಿನದ ಲಾಭವನ್ನು ಕಾಲೆಜಿಗೆ ಕೊಟ್ಟರೆ ವೆಚ್ಚ ಎರಡು ಮೂರು ತಿಂಗಳಿಗೆ ಸಾಕು. ಬೇರೆ ವಸೂಲು ಮಾಡಬೇಕಿಲ್ಲ. ಅಷ್ಟಕ್ಕೆ ಸಾರ್ವಜನಿಕ ಹಿತಚಿಂತನೆ ಬೇಕು; ವಿಶ್ವಾಸವುಳ್ಳವರು ಅದನ್ನು ಕ್ಲುಪ್ತವಾಗಿ ಸಂಗ್ರಹಿಸಬೇಕು ಮಾತ್ರ.

ಇತ್ತ ಅಧ್ಯಕ್ಷರೊ ಕಮಿಟಿಯವರೊ ಸರ್ಕಾರದಲ್ಲಿ ಪ್ರಬಲವಾದ ಪ್ರಭಾವವುಳ್ಳವರು ಆ ಕೆಲಸ ಮಾಡಬಹುದು. ಎಲ್ಲ ಕಡೆಯೂ ಪ್ರಿನ್ಸಿಪಲರನ್ನೇ ತಳ್ಳಿ ಅವರ ಮೂಲಕ ಈ ಕೆಲಸ ಮಾಡಿಸುತ್ತಾರೆ. ಈ ನಡುವೆ ವಿಶ್ವವಿದ್ಯಾನಿಲಯದವರು ಇವರು ಮಾತು ಕೊಟ್ಟಂತೆ ಕಟ್ಟಡ ಕಟ್ಟಲಿಲ್ಲ, ಈ ಸಜ್ಜು ಸೌಕರ್ಯ ಒದಗಿಸಲಿಲ್ಲ, ಪ್ರಯೋಗಶಾಲೆಗಳು ಇಷ್ಟಿಷ್ಟು ಸಂಪನ್ನತೆ ಒದಗಿಸಿಕೊಳ್ಳಲಿಲ್ಲ, ಆದುದರಿಂದ ನಿಮ್ಮ 'ರೆಕಗ್ನಿಷನ್' ಮುಂದುವರಿಸುವುದಿಲ್ಲ ಎಂದು ಹಗಲುರಾತ್ರಿ ಕಾಡುತ್ತಾರೆ. ಅವರಲ್ಲಿ ಹೇಳಿಕೊಳ್ಳಹೋದರೆ 'ನಿಮಗೇಕೆ ಈ ಪೀಕಲಾಟ? ನಿಮ್ಮ ಕಮಿಟಿಯವರನ್ನು ಕೇಳಿ' ಎನ್ನುತ್ತಾರೆ. ಹಿಂದಿನ ಸಾಲ ಪೂರ್ತಿ ತೀರಿಸದೆ ಹೊಸದಾಗಿ ಪುಸ್ತಕಗಳನ್ನು, ರಾಸಾಯನಿಕ ದ್ರವ್ಯೋಪಕರಣಗಳನ್ನು ಒದಗಿಸಿಕೊಳ್ಳುವುದು ಅಶಕ್ಯ. ಅದನ್ನು ಕೊಂಡು ಅವಕ್ಕೆ ಪೂರ್ತಿ ಹಣ ಸಲ್ಲಿಸಿದೆ ಎಂದು ರಸೀತಿ ತೋರಿಸಿದ ಹೊರತು ಅದಕ್ಕಾಗಿ ಮಾಡಿದ ವೆಚ್ಚದ ಬಿಲ್ಲುಗಳನ್ನು ಕಾಲೆಜು ವಿದ್ಯಾ ಇಲಾಖೆಯ ಹಣದ ಅಧಿಕಾರಿಗಳು ಒಪ್ಪುವ ಹಾಗಿಲ್ಲ. ಸರ್ಕಾರದವರು ಎಷ್ಟು ಕೊಡುತ್ತಾರೊ ಎಂಬ ಚಿಂತೆ, ಅದೆಂದು ಬರುತ್ತದೆಯೊ ಎಂಬ ಶಂಕೆ, ಸಂಬಳ ಸರಿಯಾಗಿ ಕೈಗೆ ಬಾರದೆ ಕಂಗಾಲಾದ ಉಪಾಧ್ಯಾಯರ ಕಷ್ಟ – ಇಂಥವೆಲ್ಲ ಸೇರಿ ಖಾಸಗಿ ಕಾಲೆಜುಗಳ ವ್ಯವಹಾರ ಮುಳ್ಳಮೇಲೆ ಹರವಿದ ಬಟ್ಟೆ. ಹೆಗಡೆಯವರಿಗೆ ನಿರಂತರವಾಗಿ ಕಾಲೆಜಿನದೇ ಚಿಂತೆ. ಬರಿಗೈಯಲ್ಲಿ ಅವರು

ಕಾನೆ ಏನು ಮಾಡಿಟ್ಟಿದ್ದರು? ಅವರಿಗೆ ಹೃದಯ ದುರ್ಬಲತೆಯ ಕಾಯಿಲೆ ಇತ್ತು. ಹೆಚ್ಚಾಗಿ ಇದಕ್ಕೆ ಕಾರಣ ಪತ್ತುಹಿಡಿಯಬೇಡಿರೆಂದು ಅವರಿಗೆ ನಾನು ಆದಾ ಹೇಳುತ್ತಿದ್ದೆ. ಇದರ ಜೊತೆಗೆ ಪುನಃ ಎಲೆಕ್ಷನ್ ಬಂದು, ಇವರು ಕಾಂಗ್ರೆಸ್ ಕಡೆ, ಉಳಿದ ಪ್ರಬಲರು ತದ್ವಿರುದ್ಧ ನಿಂತು ಕಾರುಬಾರುಗಳನ್ನು ನಡೆಸುವಾಗ ಹೊಡೆಯವರ ಕೈ ಇನ್ನಷ್ಟು ತಡೆಯುತ್ತಿತ್ತು. ಕಾಲೇಜು ಕಾಂಗ್ರೆಸ್ಸಿನ ಕಡೆಗೆ, ಹೊಡೆಯವರ ಕಡೆಗೆ ಎಂಬ ಅಂತರ್ಧ್ವನಿ. ಕಾಲೇಜಿನ ಸ್ಥಿತಿ ಸುಧಾರಿಸಲಿಲ್ಲ. ಆ ಮುಂಚೆ ತುಂಬ ಶ್ರಮ ಪಟ್ಟು ಸರ್ಕಾರವನ್ನು ಬೇಡಿಕೊಂಡು ಶಾಸನಸಭೆಯ ಸದಸ್ಯರಾಗಿದ್ದ ಹೊಡೆಯವರು ಸುಮಾರು ಮಾರ್ಚ್ ೨೭ರ ಹೊತ್ತಿಗೆ ಒಂದು ಲಕ್ಷ ರೂಪಾಯಿನ ಸಹಾಯದ್ರವ್ಯದ ವಾಗ್ದಾನ ಪಡೆದು ಬಂದರು. ರಾಜ್ಯದ ಹಣಕಾಸಿನ ಮಂತ್ರಿಗಳೇ ಸುಸ್ತಾಗಿ ಬೇಜಾರು ಪಡುವಷ್ಟು ಕಷ್ಟವಾಯಿತಂತೆ ಆ ಸಂದರ್ಭದಲ್ಲಿ. ಸದ್ಯದ ಕಷ್ಟದ ಪರಿಸ್ಥಿತಿಯನ್ನು ದಾಟುವುದಕ್ಕಾಗಿ ಎಂದು ಅದು ಮಂಜೂರಾಯಿತು. ಬೆಂಗಳೂರಿಗೆ ಬಂದು ತಕ್ಷಣ ಅದನ್ನು ತೆಗೆದುಕೊಂಡು ಹೋಗಬೇಕೆಂದು ತಂತಿ ಬಂತು. ವಿದ್ಯಾ ಇಲಾಖೆಯವರಿಗೆ ಸರ್ಕಾರದಿಂದ ಇನ್ನೂ ಆರ್ಡರು ಬಂದಿರಲಿಲ್ಲ. ೨೯ರಂದು ಸರ್ಕಾರ ಕಳಿಸಿದ ತಂತಿಯ ಆಧಾರದ ಮೇಲೆ ನಾನು ಬೆಂಗಳೂರಿಗೆ ಬಂದೆ. ಸರ್ಕಾರದ ಕಾರ್ಯದರ್ಶಿ ಇಲಾಖೆಯವರಿಗೆ ಇನ್ನೂ ತಿಳಿಸಿರಲಿಲ್ಲ. ಅವರು ಕೊಡರು, ನಾನು ಬಿಡೆ. ಸೆಕ್ರೆಟರಿ ತೆಗೆದುಕೊಂಡು ಹೋಗುವುದೆಂದು ಬರೆದರು. ನನ್ನನ್ನು ಅಧ್ಯಕ್ಷರು ತರಲು ಕಳಿಸಿದ್ದಾರೆ ಎಂದೆ. ಹಣದ ಶಾಖೆಯ ಅಧಿಕಾರಿ ನನ್ನನ್ನು ಡೈರೆಕ್ಟರ್ ಬಳಿಗೆ ಕಳಿಸಿದರು. ಅವರಿಗೆ ಅಪ್ಪಣೆ ಇನ್ನೂ ಬರಲಿಲ್ಲ. ತೆಗೆದುಕೊಂಡು ಹೋಗಿ ಎಂದರು. ಕೊಡಿ, ನೀವು ಕೊಟ್ಟರೆ ತಾನೆ? – ಎಂದೆ. ಅವರೂ ಅವರ ಹಣದ ಅಧಿಕಾರಿ ರಾಮಯ್ಯನವರೂ ಏನೇನೊ ಸರ್ಕಾರದೊಡನೆ ದೂರವಾಣಿಯಲ್ಲಿ ಮಾತಾಡಿ ಕಡೆಗೆ ಒಂದು ಚೆಕ್ ಕೊಟ್ಟರು. ಆ ರಾತ್ರಿಯೇ ಹೊರಟು ಶಿವಮೊಗ್ಗದ ಹೊಟೇಲಲ್ಲಿದ್ದು ೩೦ಕ್ಕೆ ಹೊನ್ನಾವರಕ್ಕೆ ಹೋದೆ. ಇಂಥ ಗೋಜು ಹೊರಗಿದ್ದ ಎಲ್ಲ ಖಾಸಗಿ ಕಾಲೇಜಿನ ಪ್ರಿನ್ಸಿಪಲರಿಗೂ ಇತ್ತು. ಮಾರ್ಚ್ ಕಡೆಯ ದಿನದವರೆಗೂ ಯಾವುದೂ ಕೈಗೆ ಬರುತ್ತಿರಲಿಲ್ಲ. ಹೀಗೆ ಕಷ್ಟಪಟ್ಟು ಚೆಕ್ಕನ್ನು ತೆಗೆದುಕೊಂಡು ರಾತ್ರೋರಾತ್ರಿ ತಂದು ಮಾರನೆಯ ದಿನ ನಗದು ಮಾಡಿಸಿ ಸಂಬಳವನ್ನು ಮೊದಲು ಬಟವಾಡೆ ಮಾಡಿದೆ. ಬಟವಾಡೆ ಮಾಡುವಾಗ ಕಾಲೇಜ್ ವಿದ್ಯಾ ಶಾಖೆಯ ಹಣಕಾಸಿನ ಶಾಖೆಯಿಂದ ಈ ಹಣವನ್ನು 'Building Grant' ಲೆಕ್ಕಕ್ಕೆ ಉಪಯೋಗಿಸಬೇಕು ಎಂಬುದಾಗಿ ತಿಳಿಸಿದ್ದರು. ಕೊಟ್ಟದ್ದು ಒಂದು ಕಾರಣಕ್ಕೆ, ವಿನಿಯೋಗಿಸಬೇಕೆಂದು ಒತ್ತಾಯ ಮಾಡಿ ತಿಳಿಸಿದ್ದು ಇನ್ನೊಂದಕ್ಕೆ. ಹೀಗಾಗಿ, ಏಕಾದರೂ ಈ ಗ್ರಾಂಟ್ ತೆಗೆದುಕೊಂಡಿತೊ ಎಂಬ ಕಷ್ಟ ಮುಂದಿನ ವರ್ಷವೆಲ್ಲಾ ತಲೆಯ ಮೇಲೆ ಕತ್ತಿ ಹಿಡಿದು ನೆಗಹಿದಂತೆ ಭಯಗೊಳಿಸುತ್ತಿತ್ತು. ಬಿಲ್ಡಿಂಗಿಗೆ ನಾಲ್ಕರಿಂದ ಒಂಬತ್ತು ಲಕ್ಷದವರೆಗೆ ಲೆಕ್ಕ ಹಾಕಿ ಅದಾಗದೇ ಇರುವಾಗ, ತಿಂದು ಮುಗಿದಿದ್ದ ಈ ಹಣವನ್ನು ಆ ಲೆಕ್ಕಕ್ಕೆ ತೋರಿಸಲಾಗದೇ ಇದ್ದಾಗ, ಈ ಹಣವನ್ನು ಕಾಲೇಜಿಗೆ ಸೇರಬೇಕಾದ ಇತರ ಸರ್ಕಾರಿ ಗ್ರಾಂಟುಗಳಿಂದ ಖೋತ ಮಾಡುತ್ತ ಬಂದರು. ಕಾಲೇಜಿನ ವರಮಾನ ಉತ್ತಮಗೊಳ್ಳಲಿಲ್ಲ.

ಸ್ಥಿತಿ ಕಷ್ಟವಾಯಿತೆಂದು ಹೇಳಬೇಕಿಲ್ಲ. ಲಕ್ಷ ರೂಪಾಯಿ ಬಂತೆಂದು ಹಿಗ್ಗಿ ಹೆಗಡೆಯವರನ್ನು ಶ್ಲಾಘಿಸಿದವರೇ 'ಅದನ್ನೇಕೆ ಕೇಳಬೇಕಿತ್ತು? ತರಬೇಕಿತ್ತು?' ಎಂದು ಆಕ್ಷೇಪಣೆ ಮಾಡುವವರೆಗೂ ಬೆಳೆಯಿತು. ಅದನ್ನು ಸಹಿಸುವುದು ಅವರಿಗೆ ಸ್ವಲ್ಪ ಕಷ್ಟವೇ ಆಯಿತು. ಮುಂದಿನ ಚುನಾವಣೆಯಲ್ಲಿ ತನಗೇ ಖಂಡಿತವಾಗಿ ವೋಟು ಬರುತ್ತಿತ್ತು ಎಂದು ತಿಳಿದಿದ್ದವರಿಗೆ ರಾತ್ರೋರಾತ್ರಿ ಎಲ್ಲೋ ಹೇಗೊ ಕೈವಾಡಗಳು ನಡೆದು, ಎಷ್ಟು ವೋಟು ತನ್ನ ಕಡೆಗೆ ಬರುತ್ತಿತ್ತೆಂದು ಎಣಿಸಿದ್ದರೊ ಅಷ್ಟು ವೋಟಿಂದ ಅಪಜಯ ಬಂದಿತು. ತನ್ನ ಜನರೇ ತನಗೆ ವಿರುದ್ಧ ವೋಟು ಮಾಡಿದ್ದರು ಎಂಬುದು ವಿದಿತವಾಯಿತು. ಈ ಪೆಟ್ಟು ಬಲವಾದ್ದು. ಆ ಸಲ ಅವರು ಗೆದ್ದಿದ್ದರೆ ಮಂತ್ರಿಮಂಡಲದಲ್ಲಿ ಅವರ ಪ್ರಭಾವ ಬೆಳೆಯುವ ಅವಕಾಶವಿತ್ತೆನ್ನುತ್ತಾರೆ. ಹೆಗಡೆಯವರಿಗೆ ಸೋತದ್ದು ಸಿಡಿಲ ಪೆಟ್ಟಾಯಿತು. ಹೃದಯದ ಬೇನೆ ಇದ್ದವರಿಗೆ ಒಳಗೇ ಪೀಡೆ ಬಲವಾಯಿತು.

ರಾಜಕೀಯ ಕಟ್ಟಿಕೊಂಡವನಿಗೆ ತನ್ನ ವೃತ್ತಿಯ ಸಂಪಾದನೆ ಕಡೆ ಗಮನ ಕಮ್ಮಿಯಾಗುತ್ತದೆ. ಜೀವನವೆಚ್ಚ ಹೆಚ್ಚಾಗುತ್ತದೆ. ಇಂಥ ನಷ್ಟ ಬಂದಾಗ ಅದರ ಪರಿಣಾಮ ದೊಡ್ಡ ಉಪಪತ್ತಿ ಇಲ್ಲದವರಿಗೆ ದುರ್ಭರವಾಗುತ್ತದೆ. ಹೆಗಡೆಯವರು ಎದೆಗೆಟ್ಟಿರಲಿಲ್ಲ. ಐದಾರು ತಿಂಗಳ ಕಾಲ ಕಾಲೆಜಿನ ಕೆಲಸಗಳಿಗಾಗಿ ಪುನಃ ತಿರುಗಾಡಿದರು. ಆದರೆ ತಮ್ಮ ರೋಗದ ಕಾರಣದಿಂದಾಗಿ ಅವರು ತೀರಿಕೊಂಡರು. 'ನನ್ನ ಜೊತೆಯಲ್ಲಿ ಹದಿನೈದು ದಿವಸ ಬೊಂಬಾಯಿಗೆ ಬನ್ನಿ. ಲಕ್ಷವಲ್ಲ, ಎರಡು ಲಕ್ಷ ತರೋಣ. ನೀವು ಪೇಚಾಡಬೇಡಿ' ಎಂಬುದು ಅವರ ಮಾತು. ಕಾಯಿಲೆ ಮಲಗಿದ್ದಾಗಲೆಲ್ಲ ಕಾಲೆಜಿನದೇ ಚಿಂತೆ. ಮೊದಮೊದಲಿಗೆ ಒಮ್ಮೆ 'ಈ ಸರ್ಕಾರದ ರೀತಿಯ ವೇತನಗಳನ್ನು ಕೊಡುವುದರಿಂದ ಉಪಾಧ್ಯಾಯರ ಸಂಬಳ ಕಡಮೆಯಾಗುತ್ತದೆ. ಯು.ಜಿ.ಸಿ. ಸ್ಕೇಲ್ ಪ್ರಕಾರ ಹೆಚ್ಚಾಗುತ್ತದೆ. ಬಯಲುಸೀಮೆಯಿಂದ ಇಲ್ಲಿಗೆ ಬರುವ ಜನ ಇನ್ನಾವ ದಾರಿಯೂ ಇಲ್ಲದೆ ರೈಲ್ವೆ ಸಂಪರ್ಕಕ್ಕೆ ಕೂಡ ಎಡೆಯಿಲ್ಲದ ಕಡೆ ಬರಬೇಕು. ಯು.ಜಿ.ಸಿ. ಸ್ಕೇಲ್ ಕೊಡುವ ಕಾಲೆಜಿಗೆ ಅವರು ಹೊರಟುಹೋಗಬಯಸಿದರೆ ನಮಗೆ ಅಗಚಾಟಲಾಗುತ್ತದೆ' ಎಂದೆ. (ಆಗ) ನಾವಿಬ್ಬರೂ ಬೆಂಗಳೂರಿಗೆ ಜೊತೆ ಪ್ರಯಾಣ ಮಾಡುತ್ತಿದ್ದೆವು. 'ಯು.ಜಿ.ಸಿ. ಸ್ಕೇಲ್‌ಗೆ ತಕ್ಕಂತೆಯೇ ಕೊಡೋಣ' ಎಂದರು. ನಾಲ್ಕು ದಿವಸಗಳಲ್ಲಿಯೇ ಒಂದು ಮೀಟಿಂಗ್ ಕರೆದು ಹಾಗೆ ಮಾಡಿಸಿಕೊಟ್ಟರು. ತೃಪ್ತರಾದ ಉಪಾಧ್ಯಾಯರು ಯಾವ ವಿದ್ಯಾಸಂಸ್ಥೆಯಲ್ಲಿ ಇರುವುದಿಲ್ಲವೊ ಅಲ್ಲಿ ವಿದ್ಯಾಸಾಧನೆ ಕುಂಟುತ್ತದೆ ಎಂಬುದು ಅವರ ದೃಢವಾದ ನಂಬಿಕೆ. ಅಲ್ಲಿನ ಇನ್ನು ಇಬ್ಬರು – ಮೂವರಿಗೆ ಇದು ಅರ್ಥವಾಗುತ್ತಿತ್ತಾದರೂ – ಅವರಲ್ಲಿ ಒಬ್ಬರನ್ನಂತೂ ಅವರು ಖಂಡಿತವಾಗಿ ನಂಬಿ ನಡೆಯುತ್ತಿದ್ದರು – ಎಲ್ಲ ಮನಸ್ಸು ಅಷ್ಟು ತೀವ್ರವಾಗಿ ಕಾಲೆಜಿನ ಹಣಕಾಸಿನ ಪರಿಸ್ಥಿತಿಯ ಉತ್ತಮಿಕೆಗೆ ಒದಗುತ್ತಿತ್ತೊ ಇಲ್ಲವೊ ಹೇಳಲಾರೆ.

ರಾಜಕೀಯ ಪಕ್ಷಗಳ ವಿಚಾರದಲ್ಲಿ ವಿರಸವಿದ್ದರೂ ಕಾಲೆಜ್ ಸಂಬಂಧದಲ್ಲಿ ಒಟ್ಟು ಸಹಾನುಭೂತಿಯಿಂದ ನಡೆದಿದ್ದರೂ ಇದು ಒಕ್ಕೈ ಕೆಲಸ ಮಾಡುವ ಸ್ಥಿತಿಗೆ ಬಂದಿತು. ನಾನು ಕಾಣಿಸಿದ ಕೂಡಲೆ ಕಾಲೆಜಿನ ಚಿಂತೆ ಹೆಚ್ಚಿ ಬಂದು ಅವರು ಆ ಬಗ್ಗೆ

ಉದ್ವೇಗಗೊಳ್ಳುವಂತೆ ಆಗುತ್ತಿದ್ದುದರಿಂದ ನಾನು ಹೆಚ್ಚು ಸಲ ಅವರ ಬಳಿಗೆ ಬರುವುದಿಲ್ಲ ಎಂದಿದ್ದೆ. ಅಲ್ಲಿಗೂ ತಿಳಿಸುತ್ತಿದ್ದರು – ನನಗೆ ಧೈರ್ಯ ಹೇಳಲು. ಚುನಾವಣೆಯಲ್ಲಿ ಸೋತವರು ಆ ಊರನ್ನೇ ಬಿಟ್ಟು ಕಾರವಾರಕ್ಕೊ ಬೆಂಗಳೂರಿಗೊ ತಮ್ಮ ವೃತ್ತಿಯ ಮುಂದುವರಿಕೆಗೆ ಬಂದಿದ್ದರೆ, ಅವರ ವರಮಾನಕ್ಕಾಗಲಿ ಪ್ರಭಾವಕ್ಕಾಗಲಿ ಯಾವ ತೊಂದರೆಯೂ ಆಗುತ್ತಿರಲಿಲ್ಲ. ಆದರೆ ಅವರು 'ಇದು ನನ್ನ ಊರು, ನನ್ನ ಜನವರ್ಗ, ಇದಕ್ಕಾಗಿ ಹತ್ತು ವರ್ಷ ದುಡಿದಿದ್ದೇನೆ. ದುಡಿಯುತ್ತೇನೆ ಎಂದು ಈ ಕೆಲಸ ಕೈಗೊಂಡಿದ್ದೇನೆ. ಮಾಡೋಣ ಬಿಡಿ' ಎಂದರು. ಒಂದು ದಿನವೂ ಅವರ ಬಾಯಿಂದ ಅಧೈರ್ಯದ ಮಾತು, ಸಂಕೋಚದ ಮಾತು, ಕಾರ್ಪಣ್ಯದ ಮಾತು, ಅನುದಾರಚಿತ್ತ ನಾನು ಕಂಡುದಿಲ್ಲ, ಕೇಳಿದುದಿಲ್ಲ. ಕೆಲವರಿಗೆ ಆತ ಹೆಚ್ಚು ಖರ್ಚು ಮಾಡಿಬಿಡುತ್ತಾನೆ, ಮಾಡಿಸುತ್ತಾನೆ ಎಂದಿತ್ತು. 'ಕಾಲೆಜ್ ಕಟ್ಟಿಕೊಳ್ಳುವುದು ಆನೆ ಕಟ್ಟಿಕೊಂಡಂತೆ. ಅದಕ್ಕೆ ಗ್ರಾಸ ತಕ್ಕಂತೆ ಹಾಕಿ ನೋಡಿಕೊಳ್ಳಬೇಕು. ಅಲಸಬಾರದು. ಚಂದಾವಸೂಲು ಮಾಡಲು ನಾವು ಇನ್ನಷ್ಟು ಶ್ರಮ ಪಡಬೇಕು' ಎಂಬುದು ಅವರ ವಾದ. ಯೂನಿವರ್ಸಿಟಿಯವರೂ ಸರ್ಕಾರದವರೂ Senior Lecturers ಪ್ರತಿಯೊಂದು ಇಲಾಖೆಗೂ ಇರತಕ್ಕುದು ಎಂದರು; ಲೈಬ್ರರಿ ಪರೀಕ್ಷೆ ಪಾಸು ಮಾಡಿದವರು ಮಾತ್ರವೇ Librarians ಆಗಬೇಕು ಎಂದರು. Senior Lecturersರನ್ನು ಹೊಸದಾಗಿ ತರಬೇಕಾದರೆ ಬೇರೆ ಕಡೆಯಿಂದ ತಂದು ಇಲ್ಲಿ ಕೆಲಸ ಮಾಡುತ್ತಿರುವವರ ತಲೆಯ ಮೇಲೆ ಕೂರಿಸಬೇಕಿತ್ತು. ಅದರ ಜೊತೆಗೆ ಹೆಚ್ಚಾಗಿ ಸಂಬಳ ಕೊಡಬೇಕಿತ್ತು. ಅಂಥ ಯಾವುದೊ ಒಂದು ಸಂದರ್ಭದಲ್ಲಿ 'We can't afford it' – ಎಂದಿದ್ದರು ಗಣ್ಯರಾದ ಒಬ್ಬರು. ಅದಕ್ಕೆ ಅಧ್ಯಕ್ಷರು – 'That way we cannot afford the College. We shall try to get the money, we shall plead with the Government and the University to give us a year or two's time' ಎಂದರು. ಎಲ್ಲಕ್ಕಿಂತ ಹೆಚ್ಚಾಗಿ ಅವರಿಗೆ ಕಾಲೆಜಿನ ಹೆಸರಿನ ಚಿಂತೆ, ಉಪಾಧ್ಯಾಯರ ಚಿಂತೆ, ಹುಡುಗರ ವಿದ್ಯಾಭ್ಯಾಸದ ಚಿಂತೆ. ಇತರ ಕೆಲವು ಕಮಿಟಿ ಸದಸ್ಯರು ಸ್ವತಃ ಶ್ರೀಮಂತರೇ ಆದ್ದರಿಂದ ತಮ್ಮ ಮಕ್ಕಳನ್ನು ಕುಮಟಾ, ಉಡುಪಿ, ಧಾರವಾಡಗಳಿಗೆ ಕಳಿಸಬಲ್ಲವರಾಗಿದ್ದರು. ಇಲ್ಲಿ ಕಾಲೆಜ್ ತೆರೆಯದಿದ್ದುದರಿಂದ ನೂರಾರು ಮಂದಿ ಎಸ್.ಎಸ್.ಎಲ್.ಸಿ. ಮಟ್ಟಕ್ಕಿಂತ ಮೇಲ್ಪಟ್ಟ ಓದು ದೊರಕದೆ ಪ್ರತಿದಿನವೂ ಎಂಟು–ಹತ್ತು ಮೈಲಿ ದೂರದ ಕುಮಟಾಕ್ಕೆ ಹೋಗಿ ಓದುತ್ತಿದ್ದರು. ಅನೇಕ ಹೆಣ್ಣುಮಕ್ಕಳಿಗಂತೂ ಮುಂದುವರಿದ ವಿದ್ಯಾಭ್ಯಾಸ ದೊರೆಯದಾಗಿತ್ತು. ಬುದ್ಧಿವಂತಿಕೆಯಲ್ಲಾಗಲಿ ಓದುವ ಉಮೇದಿನಲ್ಲಾಗಲಿ ಅಲ್ಲಿನ ಹುಡುಗರು, ಆ ಜಿಲ್ಲೆಯವರು ಉಳಿದ ಅನೇಕ ಜಿಲ್ಲೆಯವರಿಗಿಂತ ಬುದ್ಧಿವಂತರೆಂದು ಪ್ರಖ್ಯಾತರು, ಯಾರಿಗೂ ಕಡಮೆಯಲ್ಲ. ಈ ಕಾಲೆಜ್ ತೆರೆದು ಹಿಂದೆ ಇಲ್ಲದಿದ್ದ ಅವಕಾಶವನ್ನು ಊರಿನವರಿಗೆ ಸಾಧಿಸಿಕೊಡಬೇಕು ಎಂಬುದೊಂದೇ ಹೆಗಡೆ ಮತ್ತು ಇನ್ನಿಬ್ಬರು ಮೂವರ ಮನಸ್ಸಿನಲ್ಲಿದ್ದದ್ದು. ಆದರೆ ಇಬ್ಬರೂ ಡಾಕ್ಟರುಗಳು. ಊರು ಬಿಟ್ಟು ಹೊರಕ್ಕೆ ಹೋಗುವ ಹಾಗಿರಲಿಲ್ಲ. ಮುಖ್ಯವಾಗಿ ವ್ಯಾಪಾರಸ್ಥ

ಲೇವಾದೇವಿ ಸಂಪರ್ಕ ಇಟ್ಟುಕೊಂಡ ಜನ ಬಿಚ್ಚುಗೈಯಿಂದ ಹಣ ಕೊಡರು. ಕಾಲೆಜಿಗೆ ಒಂದು ಸಲ ಸಾಲ ಕೊಟ್ಟರೆ ಅದನ್ನು ತೀರಿಸುವ ದಾರಿ ಕಾಲೆಜಿಗಿಲ್ಲ. ಸರ್ಕಾರದಿಂದ ಕೈಗೆ ಬಂದ ಹಣದಲ್ಲಿ ಅವರಿಗೆ ಆ ಬಗ್ಗೆ ಸಾಲವನ್ನು ಖಾಸಗಿಯಾಗಿ ತೀರಿಸುವ ಅಪ್ಪಣೆ ಇರಲಿಲ್ಲ. ಲೆಕ್ಕ ಹಾಗೆ ಕಾಣಿಸಬಾರದು. ಒಂದು ಸಲ ಅಷ್ಟು ಇಷ್ಟು ಹಣದ ನೆರವು, ಸಾಲ ಕೊಟ್ಟವರು ಕಿವಿ ಕಣ್ಣು ಎದೆ (ಎಷ್ಟು ಸಲ ಹೀಗೆ ಸಾಲ ಕೊಟ್ಟಾರು!) ಮುಚ್ಚಿಕೊಂಡರು. ಏನಾದರೂ ಮಾಡಿ ಈ ಪರಿಸ್ಥಿತಿಯನ್ನು ಎದುರಿಸಬೇಕೆಂದು ಕಂಡು ಶ್ರಮಿಸಿದವರು ಹೆಗಡೆ. ಊರಿನ ಮತ್ತು ತಾಲ್ಲೂಕಿನ ಸಂಸ್ಥೆಗಳಲ್ಲಿ, ಸಹಕಾರ ಸಂಘಗಳಲ್ಲಿ ಜನರಿಗೆ ನೆರವು ಕೊಡಿಸಿ ಉಪಕಾರಿಗಳಾಗಿದ್ದ ಅವರು ಉದಾರಿಗಳೂ ಸ್ನೇಹಪರರೂ ಆಗಿದ್ದುದರಿಂದ, ಇದನ್ನೇ ದೌರ್ಬಲ್ಯವೆಂದೆಣಿಸಿ ಕೆಲವರು ದುಡಿಸಿಕೊಂಡರು. ಅವರ ತಲೆಯ ಮೇಲೆ ಯಾವುದೊ ಲೆಕ್ಕಾಚಾರದ ಹೊರೆ ಬೀಳುವಂತಾಗಿತ್ತು. ಪ್ರಯೋಜನ ಪಡೆದವರು ಯಾರೊ? ಅಪಕೀರ್ತಿ ಹೊತ್ತವರು ಇವರು. ಅಲ್ಲದೇ, ಎಲ್ಲರನ್ನೂ ನಂಬಿ ಎಲ್ಲವನ್ನು ನುಡಿದುಬಿಡುತ್ತಿದ್ದರು. ಇದರಿಂದ ಅನೇಕರು ಪ್ರಯೋಜನ ಪಡೆದುಕೊಂಡರು. ಅನೇಕರ ಅಸಮಾಧಾನಕ್ಕೆ ಈಡಾದರು. 'ನಾನು ಸಾರ್ವಜನಿಕ ಸೇವಕ. ನನ್ನ ಮನಸ್ಸು ಎಲ್ಲರಿಗೂ ತಿಳಿಯಬೇಕು. ಅವರಿಗೆ ತಿಳಿಸುತ್ತೇನೆ' ಎಂಬ ಜಾಡು ಅವರದು. ಖಾಸಗಿಯಾಗಿ ಮನೆಯ ಇನ್ನಾವುದೊ ಕಷ್ಟ ಅವರನ್ನು ಪೀಡಿಸಿ ದುರ್ಬಲಗೊಳಿಸುತ್ತಿತ್ತು. ರಾತ್ರಿ ಎಂಟು ಗಂಟೆಗೆ – ನವೆಂಬರ್ ೧೯೬೭ ಎಂದು ಕಾಣಿಸುತ್ತದೆ – ಅವರ ಸ್ಥಿತಿ ವಿಷಮಿಸಿತು ಎಂದು ತಿಳಿದಾಗ ಅಲ್ಲಿಗೆ ಹೋಗಿ ಅವರ ಕಡೆಯ ಕಣ್ ನೋಟವನ್ನು ನೋಡುವ ಕಷ್ಟ – ಆದರೂ ಸಂತೋಷ – ನನಗೆ ದೊರಕಿತು. ಕಷ್ಟ: ಇಂಥ ದೀಪ ಆರಿಹೋಗುತ್ತಿದೆ ಎಂಬುದನ್ನು ನೋಡಲು; ಸಂತೋಷ: ಆ ಕಣ್ಣಿನ ತುಂಬ ಇದ್ದ ನೋವನ್ನು ಮರೆತು ಸ್ನಿಗ್ಧತೆ, ಪ್ರೀತಿ ಅಂತಃಕರಣಗಳಿಂದ ನನ್ನ ಕಡೆ ನೋಡಿ ಕೈಮುಗಿಯುವಂತಿದ್ದ ಚಿತ್ರ. ಇನ್ನು ಕೆಲವು ವರ್ಷ ಆತನು ಬದುಕಿದ್ದಿದ್ದರೆ ಕಾಲೆಜ್ ತುಂಬ ಅಭಿವೃದ್ಧಿಗೆ, ಉನ್ನತಿಗೆ ಬರುತ್ತಿತ್ತು. ಕಾಲೆಜ್ ಹೋಗಲಿ, ಆ ಊರಿನ ಅನೇಕ ರಾಜಕೀಯ ಮತ್ತು ಲೌಕಿಕ ಪ್ರಯೋಜನಗಳು ಸಾಧಿತವಾಗುತ್ತಿದ್ದವು. ಇವರಿಂದ ಆ ಊರ ಕಾಂಗ್ರೆಸ್ ಪಾರ್ಟಿಗೆ ಸೋಲಾಯಿತು. ಆದರೆ ಸರ್ಕಾರದ ಆಡಳಿತದಲ್ಲಿ ಕಾಂಗ್ರೆಸ್ ಪಕ್ಷವೇ ಗೆದ್ದಿತು. ಸೋತ ಪ್ರತಿನಿಧಿಗಳಿಗೆ ಸರ್ಕಾರದ ದಾಕ್ಷಿಣ್ಯ ತೋರುವುದು ಕಷ್ಟ. ಅವರೇ ಇದ್ದಿದ್ದರೆ ಸರ್ಕಾರದ ಔದಾರ್ಯ ಈ ಕಡೆಗೆ ಸಹಜವಾಗಿ ಹರಿಯುತ್ತಿತ್ತು. ಅವು ರಾಜಕೀಯ ವಿಷಯ. ಹೆಗಡೆ ತೀರಿಕೊಂಡುದು ಉತ್ತರ ಕನ್ನಡ ಜಿಲ್ಲೆಯಲ್ಲಿ ಕಾಂಗ್ರೆಸ್ಸಿನ ಕೈ ದುರ್ಬಲವಾಗುವಂತೆ ಆಯಿತು. ಅಲ್ಲಿ ಗೆದ್ದವರೆಂದರೆ ಒಬ್ಬರೇ, ಶ್ರೀ ರಾಮಕೃಷ್ಣ ಹೆಗಡೆ. ಬುದ್ಧಿವಂತರಾಗಿ ಸಾಹಸಿಗಳಾಗಿ ಇದ್ದವರಿಗೆ ತಮ್ಮೂರಿನ ಕ್ಷೇತ್ರದಲ್ಲಿ ಆಯ್ಕೆ ದೊರಕದಂತೆ ಮಾಡಿದ್ದರು. ಸಿರ್ಸಿ ಸ್ಥಾನ ಷೆಡ್ಯೂಲ್ ಪಂಗಡದವರಿಗೆ ಹೋಗತಕ್ಕದ್ದೆಂದು ಅಲ್ಲಿಂದ ಇವರನ್ನು ಹೊರಗೆ ಹಾಕಿದರು. ಅವರು ನೆರೆಯ ಮುಂಡುಗೋಡು ಕ್ಷೇತ್ರದಲ್ಲಿ ನಿಂತು ಪ್ರಯಾಸದಿಂದ ಗೆಲ್ಲಬೇಕಾಯಿತು. ಇತ್ತ ಹೊನ್ನಾವರ, ಭಟ್ಕಳ ಪ್ರದೇಶದಲ್ಲಿ ಉದಾರವಾಗಿ ಬೆಳೆಯಬಹುದಾಗಿದ್ದ ಸಾರ್ವಜನಿಕ ಜೀವನ ಲಕ್ಷಣ

ಕಂದಿ ಕಂಗೆಟ್ಟಿತು. ಹೆಗಡೆ ತಾಯಿ ಅಂದು ಅಡಿದ ಮಾತು ಯಾವ ತಾಯಿಯೂ ಅನುಮಂಥವ್ಯಾದರೂ ಕೈಗೆ ಬಂದು ಪರಿಸ್ಫುಟವಾಗುವ ಹೊತ್ತಿಗೆ ಸಾವು ಜೀವವನ್ನು ಅಪಹರಿಸಿತು ಎಂಬಂಥ ಎರಕ ಕಾಣಿಸುತ್ತಿತ್ತು.

ಯಾರಿರಲಿ, ಯಾರು ಹೋಗಲಿ, ಊರು ನಡೆಯುತ್ತದೆ; ಜೀವನ ನಡೆಯುತ್ತದೆ; ಸ್ವಲ್ಪ ಮೇಲಾಗಿ, ಸ್ವಲ್ಪ ಕೀಳಾಗಿ. ಆದರೆ ಯಾವುದಿದ್ದರೆ ಕಳೆಯೊ ಕ್ಷೇಮವೊ ಹಿತವೊ ಬೆಲೆಯೊ ಗುಣವೊ ಒಟ್ಟಿನಲ್ಲಿ ಲಾಭವೊ ಅದು ಮಾಯವಾದಾಗ ಇದೆಂಥ ನಷ್ಟ, ಎಂಥ ಪೆಟ್ಟು ಎನ್ನಿಸುತ್ತದೆ. ಹಲವರಿಗೆ ಗೊತ್ತಿದೆ – ಆ ಊರಲ್ಲಿ ಅವರಿದ್ದು ಕೆಲಸ ಮಾಡಿದ್ದುದೇ ಆದರೆ ಊರಿನ ಸಾರ್ವಜನಿಕ ಜೀವನ ಖಂಡಿತವಾಗಿ ಉತ್ತಮಪಡುತ್ತಿತ್ತು ಎಂದು. ಗೆದ್ದವರು ಇನ್ನೆರಡು ವರ್ಗದವರು. ಶ್ರೀಮಂತರು ಇದರಿಂದ ಕ್ಲೇಶಪಡುವವರಲ್ಲ, ಅವರಿಗೆ ವೃತ್ತಿ ಇದೆ. ಉದ್ಯೋಗವಿದೆ. ಹಣವಿದೆ. ಪ್ರಭಾವವಿದೆ. ಈ ನಷ್ಟ ಬಾಯಿಲ್ಲದ್ದು. ಇದು ಮೂಕಬೇನೆ. 'ನಾತಿಪರಿಸ್ಫುಟಶರೀರಲಾವಣ್ಯಂ' ಎಂದು ಶಕುಂತಲೆಯ ಸೌಂದರ್ಯವನ್ನು ಕಾಳಿದಾಸ ಬರೆಯುತ್ತಾನೆ. ಅತಿಪರಿಸ್ಫುಟವಲ್ಲದಿದ್ದರೂ ಪರಿಸ್ಫುಟವಾಗಿ ಹೂ ಬೆನ್ನಾಗಿ ಅರಳುವುದೆಂಬ ಕಾಲ. ಅರಳಿ ಎಲ್ಲರ ಗಮನಕ್ಕೂ ಬಂದು ಅದರ ಸಂತೋಷವನ್ನು ಲೋಕಕ್ಕೆ ತೆರೆಯುವಂತಿದ್ದ ಒಂದು ಜೀವ 'ಛಿನತ್ತಿ ಯಮತಕ್ಷಕಃ' ಎಂಬಂತಾಯಿತು. ಹೆಗಡೆಯವರ ಜೀವನದ ರೀತಿ ಎಷ್ಟಾಗಬಹುದಿತ್ತು! ಕಡೆಗೆ ತನ್ನ ಸಾಕಣೆಗೆ, ಹೆಂಡತಿ ಮಕ್ಕಳ ಪೋಷಣೆಗಾಗಿ ವಿಮೆ ಕೂಡ ಮಾಡಿದ್ದಿಲ್ಲ. ಇಷ್ಟು ಬೇಗ ಬದುಕಿಂದ ನಿರ್ಗಮಿಸುತ್ತೇನೆಂದು ಹೇಗೆಂದುಕೊಂಡಾರು? ತನ್ನ ಜನವೇ ಕಡೆಯ ಗಳಿಗೆಯಲ್ಲಿ ಅವರಿಗೆ ಕೈಕೊಟ್ಟರು. ಊರವರು ದುಡಿದವರನ್ನು ಕಡೆಯ ಯಾತ್ರೆಗೆ ಗೌರವ ಸಲ್ಲಿಸಿ ಕಳಿಸದಿದ್ದುದೂ ತುಂಬ ವ್ಯಥೆ ತರುವ ಸಂಗತಿ. ನಾಡ ಸೇವಕರಿಗೆ ಗೌರವ ಸಲ್ಲಿಸದ ಜನತೆ ಏತಕ್ಕೆ ಯೋಗ್ಯರಾದಾರು? ಆ ರಾತ್ರಿಯೇ ಅವರು ತೀರಿಕೊಂಡುದರಿಂದ ಸ್ವಲ್ಪ ಕಾಲ ನಡೆದರೂ ಒಳಬಗೆ ಕಂಗೆಟ್ಟಿತು; ಆ ವರ್ಷದ ಕೊನೆ ಒಂದು ಬಿ.ಎ., ಬಿ.ಎಸ್.ಸಿ. ಪರೀಕ್ಷೆಗೆ ವಿದ್ಯಾರ್ಥಿಗಳನ್ನು ಸಲ್ಲಿಸಿ ನಾನೂ ಹೊರಟು ಬಂದೆ.

ಆ ಊರಲ್ಲಿರುವವರೆಗೂ ಕಾಲೆಜ್ ತಿಟ್ಟಿನಿಂದ ಕಡಲು ಕಾಣುತ್ತಿತ್ತು. ಹಗಲ ನೆರಳು ಬಿಸಿಲು ಬಿದ್ದಹಾಗೆಲ್ಲ ಅದರ ನೆಲಸು ರಂಗು ಕಾಣುತ್ತಿತ್ತು. ಪಕ್ಕದಲ್ಲಿ ಹರಿವ ಶರಾವತಿ ನದೀಮುಖದಲ್ಲಿ ಒಡೆದು ಸಾಗರವನ್ನು ಸೇರಿಕೊಳ್ಳುತ್ತಿತ್ತು. ಅಕ್ಕಪಕ್ಕದ ಧಾರೇಶ್ವರದ ತಡಿಗೆ ತಿಂಗಳಿಗೊಮ್ಮೆಯಾದರೂ ಹೋಗಿ ಅಲ್ಲಿ ಸೂರ್ಯಾಸ್ತ ನೋಡುವ ಸೌಭಾಗ್ಯ ದೊರೆತಿತ್ತು. ಮುರುಡೇಶ್ವರಕ್ಕೆ ಹೋಗಿ ಬರತ ಬಂದಾಗ, ಹಿಮೆಟ್ಟಿದಾಗ ಕುಳಿತು, ತೆರೆದ ಅರಬ್ಬೀ ಸಮುದ್ರ ಗಾಂಭೀರ್ಯವನ್ನು ಕಾಣಿಸಿತ್ತು. ಊರ ನೂರಾರು ಮಂದಿಯ ಪ್ರೀತಿ ವಿಶ್ವಾಸ ಗೌರವ ಕೊಂಡು ನನ್ನ ಅಲ್ಲಿನ ವಾಸ ಮುಗಿಸಿಕೊಂಡು ಬೆಂಗಳೂರಿಗೆ ಹಿಂದಿರುಗಿದೆ. 'ಒಳಕ್ಕೆ ನನ್ನನ್ನು ಕರಸಿಕೊಂಡು 'ಒ'ರವರೆಗೂ ನಾನಲ್ಲೇ ಉಳಿಯಲು ಅವಕಾಶ ಮಾಡಿಕೊಟ್ಟ ಹೆಗಡೆ ಉಭಯರು, ಕಾಲೆಜಿನ ಕಾರ್ಯದರ್ಶಿ, ಕೋಶಾಧಿಕಾರಿಗಳು, ಧಾರವಾಡದ ವಿಶ್ವವಿದ್ಯಾನಿಲಯದ ಕುಲಪತಿ ಡಾ. ಪಾವಟೆ, ರಿಜಿಸ್ಟ್ರಾರ್ ಒಡೆಯರ್ ಅವರೂ ಇತರ

ಕನ್ನಡದ ಮತ್ತು ಇತರ ಶಾಸ್ತ್ರಗಳ ಗೇಯರೂ ಪುಸ್ತಕ ಭಂಡಾರದ ಅಧಿಕಾರಿ ಶ್ರೀ ದೇಶಪಾಂಡೆಯವರೂ ತೋರಿಸಿದ ಆದರಕ್ಕೆ ಕೈಮುಗಿದು, ಆ ಮಟ್ಟಿಗಾದರೂ ಕೃತಾರ್ಥನಾದ್ದಕ್ಕೆ ನಮನ ಮಾಡುವಂತಾಗಿದೆ. ಯಥಾಶಕ್ತಿಯಂತೆ. 'ಯಥಾ' ಜೊತೆಯ ಹಲವು ಪ್ರಯೋಗಗಳು ನಮ್ಮಲ್ಲಿ ಬಳಕೆಯಿವೆ; ಎಷ್ಟು ಶಕ್ಯವಾದರೆ ಅಷ್ಟು ನಿರ್ವಂಚನೆಯಿಂದ ನಾವು ನಡೆಮಕೊಂಡರಾಯಿತು ಎಂಬ ಭಾವವನ್ನು ನಮ್ಮಲ್ಲಿ ಬೆಳಸಲು ಹೆಗ್ಗಡೆಯವರ ಹಿತಕಾರ್ಯ ನನಗೆ ಲಭಿಸಿತು. ಆತನ ಬುದ್ಧಿಗೆ, ಚುರುಕಿಗೆ, ಲೋಕಹಿತಾಸಕ್ತಿಗೆ ಕೈಮುಗಿದು, ಅಂಥವರ ಸಂಖ್ಯೆ ನಾಡಿನಲ್ಲಿ ಬೆಳೆದರೆ ನಾಡಲ್ಲಿ ಹೊನ್ನು ಬೆಳೆಯುತ್ತದೆ ಎಂದೇನು. ನಾನು ಕಂಡಿರುವ ಹತ್ತು ಮಂದಿ ಗಣ್ಯರಲ್ಲಿ ಅವರ ಗಣ್ಯತೆ ಸಮತೂಕದ್ದು.